(B) 025246-1 SRS

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ಹದಿಮೂರನೇ ವಿಧಾನಸಭೆಯ ಆರನೇ ಅಧಿವೇಶನ

SIXTH SESSION OF THE THIRTEENTH LEGISLATIVE ASSEMBLY

ಸಂಪುಟ – ೩ (ಕ್ರಮಾಂಕ – ೧ ಮತ್ತು ೨)

Volume - 3 (No. 1 and 2)

(೧೨ನೇ ಮಾರ್ಚ್ ಮತ್ತು ೧೭ನೇ ಮಾರ್ಚ್ ೨೦೧೦)

(12th March and 17th March 2010)

ಭಾಗ – ೧

PART – I

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹದಿಮೂರನೇ ವಿಧಾನಸಭೆಯ ಆರನೇ ಅಧಿವೇಶನ

SIXTH SESSION OF THE THIRTEENTH LEGISLATIVE ASSEMBLY

ಸಂಪುಟ – ೩ (ಕ್ರಮಾಂಕ – ೧ ಮತ್ತು ೨)

Volume - 3 (No. 1 and 2)

(೧೨ನೇ ಮಾರ್ಚ್ ಮತ್ತು ೧೭ನೇ ಮಾರ್ಚ್ ೨೦೧೦)

(12th March and 17th March 2010)

ಭಾಗ – ೧

PART – I

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನ ಸಭೆ
ವಿಷಯಾನುಕ್ರಮಣಿಕೆ

ಶುಕ್ರವಾರ, ದಿನಾಂಕ: 12–03–2010

ಪುಟ ಸಂಖ್ಯೆ

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು : 1–72

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು : ಅನುಬಂಧ – I 73-73

. ಚುನಾವಣಾ ಪ್ರಸ್ತಾವ : 73–74

"ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ವಿಶ್ವವಿದ್ಯಾನಿಲಯಗಳ ಸಿಂಡಿಕೇಟ್ ಒಬ್ಬರು ವಿಧಾನ ಸಭಾ ಸದಸ್ಯರನ್ನು ನಾಮ ನಿರ್ದೇಶನ ಮಾಡುವ ಬಗ್ಗೆ".

(ಮಂಡಿಸಲಾಯಿತು)

4. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ತರಲು ರಚಿತವಾದ ಕರ್ನಾಟಕ ವಿಧಾನ ಸಭೆಯ ನಿಯಮಗಳ ಸಮಿತಿ ವರದಿ ಅಂಗೀಕಾರ : 74–77

–(ಅಂಗೀಕರಿಸಲಾಯಿತು)

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು : 77–82

(ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಪುರಸಭೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ.

– ಶ್ರೀ ಬಿ. ರಮಾನಾಥ್ ರೈ

ಪುಟ ಸಂ[redacted]

(ಆ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿರುವ ಸರ್ಕಾರಿ ಮುದ್ರಣಾಲಯವನ್ನು ಸ್ಥಳಾಂತರಿಸುವ ಬಗ್ಗೆ.

– ಶ್ರೀ ಬಿ. ರಮಾನಾಥ್ ರೈ

(ಇ) ಬಂಡೀಪುರ ಹುಲಿ ಯೋಜನೆ ವ್ಯಾಪ್ತಿಯ ಓಂಕಾರ ವಲಯದ ಬೋಳೇಗೌಡನ ಕಟ್ಟೆ ಟೈಗರ್ ಪ್ರಸರ್ವ್ ಪ್ರದೇಶದಲ್ಲಿ ಗಣಿಗಾರಿಕೆ ಅನುಮತಿ ನೀಡಲು ಸರ್ಕಾರ ತೀರ್ಮಾನಿಸಿರುವ ಕುರಿತು.

– ಶ್ರೀ ಹೆಚ್.ಎಸ್. ಮಹದೇವಪ್ರಸಾದ್

(ಈ) ಜಮಖಂಡಿ ತಾಲ್ಲೂಕು ಖಜಾನೆ ಕಛೇರಿಯಲ್ಲಿ ಕಂಪ್ಯೂಟರ್ ಕೆಟ್ಟಿರುವ ಬಗ್ಗೆ.

– ಶ್ರೀ ಶ್ರೀಕಾಂತ ಕುಲಕರ್ಣಿ

6. ವಿತ್ತೀಯ ಕಾರ್ಯಕಲಾಪಗಳು : 82–115

2010–11ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ.

– ಶ್ರೀ ವಿ. ಶ್ರೀನಿವಾಸ ಪ್ರಸಾದ್
– ಶ್ರೀ ಕೆ. ರಾಜು

7. ಶಾಸನ ರಚನೆ : 115–191

(ಅ) ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

(I) ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ವಿಧೇಯಕ 2010

ಪುಟ ಸಂಖ್ಯೆ

– ಶ್ರೀ ಅರವಿಂದ ಲಿಂಬಾವಳಿ
(ಉನ್ನತ ಶಿಕ್ಷಣ ಸಚಿವರು)
– ಶ್ರೀ ಸಿದ್ದರಾಮಯ್ಯ
(ವಿರೋಧ ಪಕ್ಷದ ನಾಯಕರು)
– ಡಾ: ಹೆಚ್.ಸಿ. ಮಹದೇವಪ್ಪ
– ಶ್ರೀ ಟಿ.ಬಿ. ಜಯಚಂದ್ರ
– ಡಾ: ಜಿ. ಪರಮೇಶ್ವರ
– ಡಾ: ಶರಣ ಪ್ರಕಾಶ್ ಪಾಟೀಲ್
– ಶ್ರೀ ವೆಂಕಟರಾವ್ ನಾಡಗೌಡ
– ಶ್ರೀ ಕೆ. ಲಕ್ಷ್ಮಿನಾರಾಯಣ
– ಡಾ: ಬಗಲಿ ಸಾರ್ವಭೌಮ ಸಾಕಗೌಡ
– ಶ್ರೀ ಹೆಚ್.ಡಿ.ರೇವಣ್ಣ
– ಶ್ರೀ ಬಿ.ಎಸ್. ಯಡಿಯೂರಪ್ಪ
(ಮುಖ್ಯಮಂತ್ರಿಗಳು)
– (ಅಂಗೀಕರಿಸಲಾಯಿತು)

8. ಪ್ರಕಟಣೆ : 191–192

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ 2009ನೇ ಸಾಲಿನ ದಂಡ ಪ್ರಕ್ರಿಯೆ ಸಂಹಿತೆ ಕರ್ನಾಟಕ (ತಿದ್ದುಪಡಿ) ವಿಧೇಯಕವನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿದರು.

9. ಶಾಸನ ರಚನೆ : 192–196

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಅಲಿಯನ್ಸ್ ವಿಶ್ವವಿದ್ಯಾಲಯ ವಿಧೇಯಕ 2010

ಪುಟ ಸಂಖ್ಯೆ

– ಶ್ರೀ ಅರವಿಂದ ಲಿಂಬಾವಳಿ
(ಉನ್ನತ ಶಿಕ್ಷಣ ಸಚಿವರು)
– (ಅಂಗೀಕರಿಸಲಾಯಿತು)

10. ಅನುಬಂಧ – I 196-434

ಬುಧವಾರ, ದಿನಾಂಕ: 17, ಮಾರ್ಚ್ 2010

ವಿಷಯಾನುಕ್ರಮಣಿಕೆ

1. ವಿಷಯ : ವಿಧಾನ ಸಭೆಯಲ್ಲಿ ಅಲಿಯನ್ಸ್ ವಿಶ್ವವಿದ್ಯಾಲಯ ಮಸೂದೆ ಅಂಗೀಕಾರವಾದ ಬಗ್ಗೆ. 435-449

(ವಿರೋಧಪಕ್ಷದ ಸದಸ್ಯರಿಂದ ಮುಂದುವರೆದ ಧರಣಿ)

– ಶ್ರೀ ಡಿ.ಕೆ.ಶಿವಕುಮರ್
– ಶ್ರೀ ಸಿದ್ದರಾಮಯ್ಯ
(ವಿರೋಧ ಪಕ್ಷದ ನಾಯಕರು)
– ಶ್ರೀ ಬಂಡೆಪ್ಪ ಕಾಶೆಂಪೂರ್
– ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ
(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)
– ಶ್ರೀ ಬಿ.ಎಸ್. ಯಡಿಯೂರಪ್ಪ
(ಮುಖ್ಯಮಂತ್ರಿಗಳು)
– ಶ್ರೀ ಅರವಿಂದ ಲಿಂಬಾವಳಿ
(ಉನ್ನತ ಶಿಕ್ಷಣ ಸಚಿವರು)
(ವಿರೋಧಪಕ್ಷದ ನಾಯಕರು ಧರಣಿಯನ್ನು ಹಿಂತೆಗೆದುಕೊಂಡರು)

ಪುಟ ಸಂಖ್ಯೆ

2. ಪ್ರಶ್ನೋತ್ತರ : 450-486

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು –

ಇ) ದಿನಾಂಕ: 15.3.2010ರ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು – (ಅನುಬಂಧ – I ಮತ್ತು II)

ಈ) ದಿನಾಂಕ: 15.3.2010 ರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೋತ್ತರಗಳು – (ಅನುಬಂಧ – III)

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು : 486-490

ಅ) 3ನೇ ಮತ್ತು 4ನೇ ಪಟ್ಟಿ

ಆ) ಕಾರ್ಯದರ್ಶಿಯವರ ವರದಿ

ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ (ಪ್ರಾದೇಶಿಕ ಕಾನೂನುಗಳ) ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ, 2009 (ಅನುಬಂಧ – IV)

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು : 491-501

ಅ) ಅಡಿಕೆಗೆ ಬೆಂಬಲ ಬೆಲೆಯನ್ನು ಹೆಚ್ಚಿಸುವ ಬಗ್ಗೆ.

– ಶ್ರೀ ಕೆ. ಅಭಯಚಂದ್ರ ಜೈನ್
– ಶ್ರೀ ಶಿವರಾಜ್ ತಂಗಡಗಿ
(ಕೃಷಿ ಮಾರುಕಟ್ಟೆ ಸಚಿವರು)

ಆ) ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರ ನಿಗದಿಪಡಿಸುವ ಬಗ್ಗೆ.

ಪುಟ ಸಂಖ್ಯೆ

– ಶ್ರೀ ಪಿ.ಎಂ. ಅಶೋಕ್
– ಶ್ರೀ ಎಸ್. ಸುರೇಶ್ ಕುಮಾರ್
(ಕಾನೂನು ಮತ್ತು ಸಂಸದೀಯ
ವ್ಯವಹಾರಗಳ ಸಚಿವರು)

ಇ) ಬ್ಯಾಲಾಳು ಐ.ಡಿ.ಎಸ್.ಎನ್. ಬಳಿ
ದಿನಾಂಕ: 16–03–2010ರ ಬೆಳಗಿನ
ಜಾವ ನಡೆದ ಘಟನೆ ಬಗ್ಗೆ.
– ಶ್ರೀ ಸಿದ್ದರಾಮಯ್ಯ
(ವಿರೋಧ ಪಕ್ಷದ ನಾಯಕರು)
– ಶ್ರೀ ಬಿ.ಎಸ್.ಯಡಿಯೂರಪ್ಪ
(ಮುಖ್ಯ ಮಂತ್ರಿಗಳು)

ಈ) ಪ್ರಥಮ ದರ್ಜೆ ಕಾಲೇಜು ಕಟ್ಟಡದ ಬಗ್ಗೆ.

– ಶ್ರೀ ಹೆಚ್.ಕೆ.ಕುಮಾರಸ್ವಾಮಿ
– ಶ್ರೀ ಎಸ್. ಸುರೇಶ್ ಕುಮಾರ್
(ಕಾನೂನು ಮತ್ತು ಸಂಸದೀಯ
ವ್ಯವಹಾರಗಳ ಸಚಿವರು)

5. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ
ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ: 501-531

ವಿಷಯ : ಪ್ರಸ್ತುತ ಬೇಸಿಗೆ ಕಾಲ ಪ್ರಾರಂಭವಾಗಿದ್ದು
ರಾಜ್ಯಾದಂತ ಭೀಕರವಾಗಿರುವ ಕುಡಿಯುವ
ನೀರಿನ ಸಮಸ್ಯೆಯ ಬಗ್ಗೆ.

– ಡಾ|| ಎಂ.ಸಿ. ಸುಧಾಕರ್
– ಶ್ರೀ ಕೆ.ಎಂ. ಶಿವಲಿಂಗೇಗೌಡ

ಪುಟ ಸಂಖ್ಯೆ

7. ವಿತ್ತೀಯ ಕಾರ್ಯಕಲಾಪಗಳು : 532-575
2010–11ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ.
– ಶ್ರೀ ಟಿ.ಬಿ. ಜಯಚಂದ್ರ

8. ಪ್ರಕಟಣೆ : 575
ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಗಿನ ವಿಧೇಯಕಗಳು ಅಂಗೀಕಾರವಾಗಿರುವ ಬಗ್ಗೆ ಸಂದೇಶ.
1. ಕರ್ನಾಟಕ ಧನ ವಿನಿಯೋಗ ವಿಧೇಯಕ, 2010
2. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 2009
3. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 2009

9. ವಿತ್ತೀಯ ಕಾರ್ಯಕಲಾಪಗಳು : 575-666
2010–11ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದದ್ದು) ಸಾಮಾನ್ಯ ಚರ್ಚೆ.
– ಶ್ರೀ ಎನ್. ಯೋಗೀಶ್ ಭಟ್
– ಶ್ರೀ ಕೆ.ಎಂ.ಶಿವಲಿಂಗೇಗೌಡ
– ಶ್ರೀ ವಿ.ಮುನಿಯಪ್ಪ
– ಶ್ರೀ ಸಿದ್ದು ಸವದಿ
– ಶ್ರೀ ಪಿ.ಎಂ. ಅಶೋಕ್
– ಶ್ರೀ ಕರಡಿ ಸಂಗಣ್ಣ ಅಮರಪ್ಪ
– ಶ್ರೀ ಕಾಕಾ ಸಾಹೇಬ ಪಾಟೀಲ್
– ಶ್ರೀ ಕಿಮ್ಮನೆ ರತ್ನಾಕರ್
– ಶ್ರೀ ಸೈಯದ್ ಯಾಸಿನ್

10. ಅನುಬಂಧ – I, II, III, IV. 666-1182

ಪುಟ ಸಂಖ್ಯೆ

– ಶ್ರೀ ವಿ. ಮುನಿಯಪ್ಪ
– ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್
– ಶ್ರೀ ಸಾ:ರಾ. ಮಹೇಶ್
– ಶ್ರೀ ಜೆ.ಡಿ. ನಾಯಕ್
– ಶ್ರೀ ಬಂಡೆಪ್ಪ ಕಾಶೆಂಪೂರ್
– ಶ್ರೀ ಅಮರೇಶ್
– ಶ್ರೀ ವೆಂಕಟರಾವ್ ನಾಡಗೌಡ
– ಶ್ರೀ ಆರ್. ನರೇಂದ್ರ
– ಶ್ರೀ ಕರಡಿ ಸಂಗಣ್ಣ ಅಮರಪ್ಪ
– ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ)
– ಶ್ರೀ ಕೆ. ಸುರೇಶ್ ಗೌಡ
– ಶ್ರೀ ಪ್ರಕಾಶ್ ಹುಕ್ಕೇರಿ
– ಶ್ರೀ ಹೆಚ್.ಡಿ. ರೇವಣ್ಣ
– ಶ್ರೀ ಜಗದೀಶ್ ಶೆಟ್ಟರ್
(ಗ್ರಾಮೀಣಾಭಿವೃದ್ಧಿಯ ಮತ್ತು ಪಂಚಾಯತ್ ರಾಜ್ ಸಚಿವರು)

6. ಅಧಿಕೃತ ನಿರ್ಣಯ : 532

ಸಂವಿಧಾನದ 371 (ಡಿ) ಅನುಚ್ಛೇಧದ ಅಡಿಯಲ್ಲಿ ಆಂಧ್ರ ಪ್ರದೇಶದ ಕೆಲವು ಭಾಗಗಳಿಗೆ ವಿಶೇಷ ಸ್ಥಾನಮಾನ ನೀಡಿರುವಂತೆಯೇ ಕರ್ನಾಟಕ ರಾಜ್ಯದ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನ ಮಾನಗಳನ್ನು ನೀಡುವುದಕ್ಕಾಗಿ ಭಾರತ ಸಂವಿಧಾನಕ್ಕೆ ತಿದ್ದುಪಡಿ ತರುವ ಬಗ್ಗೆ.

(ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಯಿತು)

ಕರ್ನಾಟಕ ವಿಧಾನ ಸಭೆ

ಶುಕ್ರವಾರ 12ನೇ ಮಾರ್ಚ್ 2010 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.30 ಗಂಟೆಗೆ ಸಮಾವೇಶಗೊಂಡಿತ್ತು.

ಅಧ್ಯಕ್ಷರು ಶ್ರೀ ಕೆ.ಜಿ.ಬೋಪಯ್ಯರವರು ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರ :

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು :

ಅಧ್ಯಕ್ಷರು : ಪ್ರಶ್ನೋತ್ತರ, ವೆಂಕಟಸ್ವಾಮಿಯವರು ಇಲ್ಲ, ಅಭಯ ಚಂದ್ರ ಜೈನ್ ಕೆ.ರವರು ಇಲ್ಲ. ಬಗಲಿ ಸಾರ್ವಭೌಮ ಸಾತಗೌಡ ರವರು ತಾವು ಪ್ರಶ್ನೆ ಕೇಳಿ.

ಇಂಡಿ ತಾಲ್ಲೂಕಿಗೆ ಪ್ರತ್ಯೇಕವಾಗಿ ಎ.ಪಿ.ಎಂ.ಸಿ. ಕೃಷಿ ಮಾರುಕಟ್ಟೆ ಮಂಜೂರು

63 (1005) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ತಾಲ್ಲೂಕಿಗೆ ಪ್ರತ್ಯೇಕವಾಗಿ ಎ.ಪಿ.ಎಂ.ಸಿ. ಕೃಷಿ ಮಾರುಕಟ್ಟೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರತ್ಯೇಕ ಎ.ಪಿ.ಎಂ.ಸಿ. ಕೃಷಿ ಮಾರುಕಟ್ಟೆಯನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ಸಿಂಧಗಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ವಿಭಜಿಸಿ ಇಂಡಿಯಲ್ಲಿ ಸ್ವತಂತ್ರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ಸ್ಥಾಪಿಸುವ ಬಗ್ಗೆ ಕ್ರಮ ಕೈಗೊಳ್ಳಲು ಮನವಿ ಬಂದಿರುತ್ತದೆ. ಸ್ವತಂತ್ರ ಮಾರುಕಟ್ಟೆ ಸ್ಥಾಪನೆ ಸಾಧ್ಯತೆ ಬಗ್ಗೆ ಸಮೀಕ್ಷಾ ವರದಿ ಸಲ್ಲಿಸಲು ಉಪ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬಿಜಾಪುರ ಇವರಿಗೆ ಇತ್ತೀಚೆಗೆ ಈ ಬಗ್ಗೆ ವರದಿಯು ಬಂದ ನಂತರ ಸರ್ಕಾರವು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುತ್ತದೆ.

ಆ) ಸಮೀಕ್ಷಾ ವರದಿ ನಂತರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಡಾ: ಬಗಲಿ ಸಾರ್ವಭೌಮ ಸಾತಗೌಡ : ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ಈಗಾಗಲೇ ಅವರು ಸ್ವತಂತ್ರ ಕೃಷಿ ಮಾರುಕಟ್ಟೆ ಸ್ಥಾಪಿಸಲು

ವರದಿ ತರಿಸಲು ನಿರ್ದೇಶಕರಿಗೆ ತಿಳಿಸಿದ್ದಾರೆ. ಇದಕ್ಕಾಗಿ ಅವರಿಗೆ ಧನ್ಯವಾದಗಳು. ಆದಷ್ಟು ಬೇಗನೆ ನಿರ್ದೇಶಕರಿಂದ ವರದಿ ತರಿಸಿ ಇಂಡಿಯಲ್ಲಿ ಒಂದು ಸ್ವತಂತ್ರ ಕೃಷಿ ಮಾರುಕಟ್ಟೆ ಸ್ಥಾಪಿಸಲು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು.

ಚಾಮರಾಜನಗರದಲ್ಲಿರುವ ಎ.ಪಿ.ಎಂ.ಸಿ. ಯಲ್ಲಿ ಅರಿಶಿನ ಮಾರುಕಟ್ಟೆ ಪ್ರಾರಂಭಿಸುವುದು

64 (753) ಶ್ರೀ ಪುಟ್ಟರಂಗಶೆಟ್ಟಿ (ಚಾಮರಾಜನಗರ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರದಲ್ಲಿ ಇರುವ ಎ.ಪಿ.ಎಂ.ಸಿ. ಯಲ್ಲಿ ಅರಿಶಿನ ಮಾರುಕಟ್ಟೆ ಪ್ರಾರಂಭಿಸಲು ಕಳೆದ 2009–2010ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿದ್ದ ಹಣ ಎಷ್ಟು; ಅದರಲ್ಲಿ ಎಷ್ಟು ಬಿಡುಗಡೆಯಾಗಿದೆ, ಬಿಡುಗಡೆಯಾಗದಿದ್ದರೆ ಕಾರಣವೇನು?

ಶ್ರೀ ಶಿವರಾಜ್ ಎಸ್ ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) 2009–10ನೇ ಸಾಲಿನ ಆರ್.ಕೆ.ವಿ.ವೈ ಯೋಜನೆಯಡಿ ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಅರಸಿನ ಮಾರುಕಟ್ಟೆ ಪ್ರಾರಂಭಿಸುವ ಸಲುವಾಗಿ ರೂ.100.00 ಲಕ್ಷಗಳ ಯೋಜನೆಗೆ ಸರ್ಕಾರವು ಅನುಮೋದನೆ ನೀಡಿದೆ ಹಾಗೂ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಶ್ರೀ ಪುಟ್ಟರಂಗಶೆಟ್ಟಿ : ಕಳೆದ ಆಯವ್ಯಯದಲ್ಲಿ ಸುಮಾರು 100 ಕೋಟಿ ವೆಚ್ಚದಲ್ಲಿ ಚಾಮರಾಜನಗರ ಎಪಿಎಂಸಿ ಯಲ್ಲಿ ಅರಿಶಿನ ಮಾರುಕಟ್ಟೆ ಮತ್ತು ಶೈತ್ಯಗಾರ ಪ್ರಾರಂಭಿಸಲಿಕ್ಕೆ ಇಟ್ಟಿತ್ತು. ಆದರೆ ಅನುದಾನ ಬಿಡುಗಡೆ ಮಾಡಿಲ್ಲ ಎಂದು ನನ್ನ ಗಮನಕ್ಕೆ ಬಂದಿದೆ. ಅಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಈಗ ಕೃಷಿ ಮಾರುಕಟ್ಟೆಯ ಕಾಮಗಾರಿ ನಡೆಯುತ್ತಿದ್ದು ಬಜೆಟ್‌ನಲ್ಲಿ

ಇಟ್ಟಿರುವ ಅನುದಾನ ಬಿಡುಗಡೆಯಾಗಿಲ್ಲ. ಆದರೆ ಉತ್ತರದಲ್ಲಿ ಬಿಡುಗಡೆ ಯಾಗಿದೆ ಎಂದು ತಿಳಿಸಿದ್ದಾರೆ.

ಶ್ರೀ ಶಿವರಾಜ್ ಎಸ್. ತಂಗಡಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ಅರಿಶಿನ ಮಾರುಕಟ್ಟೆ ಮಾಡಬೇಕೆಂದು 10 ಕೋಟಿ ರೂಪಾಯಿಯನ್ನು ಮೀಸಲಿಟ್ಟಿತ್ತು. 100 ಕೋಟಿ ರೂಪಾಯಿ ಅಲ್ಲ. ಈಗ ಒಂದು ಕೋಟಿ ರೂಪಾಯಿಯನ್ನು ಬಿಡುಗಡೆಗೊಳಿಸಿ ಕಾಮಗಾರಿ ಪ್ರಾರಂಭಿಸಿದ್ದೇವೆ. ಅದು RKVY ಇರಬಹುದು, NHM ಇರಬಹುದು, ಒಟ್ಟು ಸರ್ಕಾರ ಯೋಜನೆಗೆ ದುಡ್ಡನ್ನು ಬಿಡುಗಡೆ ಮಾಡಿದ್ದು ಹಂತ ಹಂತವಾಗಿ ಉಳಿದ 9 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಚಾಮರಾಜ ನಗರದಲ್ಲಿ ಅರಿಶಿನ ಮಾರುಕಟ್ಟೆ ಮತ್ತು ಹಳೆಯ ಮಾರುಕಟ್ಟೆ ಮಾಡಬೇಕೆನ್ನುವ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಇದನ್ನು ಹಂತ ಹಂತವಾಗಿ ಮಾಡಿ ಆ ಮಾರುಕಟ್ಟೆ ಅಭಿವೃದ್ಧಿ ಮಾಡುವಂತ ಕೆಲಸ ಮಾಡುತ್ತೇವೆಂದು ತಿಳಿಸಲಿಚ್ಛಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : 10 ಕೋಟಿ ನಿಗದಿಗೊಳಿಸಿ 1 ಕೋಟಿ ಬಿಡುಗಡೆ ಮಾಡಿದ್ದೇವೆಂದರೆ ಅದರ ಅರ್ಥ ಏನು ನೀವೇ ಹೇಳಿ. ನಿಮ್ಮ performance budget ನಲ್ಲಿ after ATR ನಲ್ಲಿ ನೀವು ಕೊಟ್ಟಿದ್ದೀರಿ. 1 ಕೋಟಿ ಬಿಡುಗಡೆ ಮಾಡಿದಿರಿ. ಇದ್ಯಾಕೆ ಹೀಗೆ ಮಾಡುತ್ತೀರಿ? ಇದು ನನಗೆ ಅರ್ಥವಾಗುತ್ತಿಲ್ಲ. ಬಜೆಟ್‌ನಲ್ಲಿ ಮಾತ್ರ 10–10 ಕೋಟಿ ಎಂದು ಹೇಳಿ ಏನು ಚಪ್ಪಾಳೆ ಹೊಡೆಸಿಕೊಂಡಿದ್ದೇ ಹೊಡಿಸಿಕೊಂಡಿದ್ದು. ಬಿಡುಗಡೆ ಮಾಡುವಾಗ ಈ ತರಹ ಮಾಡುತ್ತೀರಿ. ಈ ರೀತಿ ಮಾಡುವುದರಿಂದ ಜನಗಳಿಗೆ ಆಯವ್ಯಯದ ಮೇಲೆ ನಂಬಿಕೆ ಹೋಗಿದೆ ಎಂದಿಟ್ಟುಕೊಳ್ಳಿ, ನಂಬಿಕೆ ಹೋಗುತ್ತದೆ ಇನ್ನೂ ಹೋಗುತ್ತದೆ. ತೀರಾ ಹಾಳು ಮಾಡುವುದು ಬೇಡ. ನೀವು ಕೊನೆ ಪಕ್ಷ 50 to 60% ಬಿಡುಗಡೆ ಮಾಡಲಿಲ್ಲ ಎಂದರೆ ಏನು ಪ್ರಯೋಜನ? ಅರಿಶಿನ ಮಾರುಕಟ್ಟೆ ಎನ್ನುವುದು ವಿಶೇಷ. ರಾಜ್ಯದಲ್ಲಿ ವಿಶಿಷ್ಟವಾಗಿರತಕ್ಕಂಥದ್ದು. ಅದು ಮಾರುಕಟ್ಟೆ ಎಂದಲ್ಲ ಅಂತರಾಷ್ಟ್ರೀಯ ಮಾರುಕಟ್ಟೆಯನ್ನು ಆಕರ್ಷಿಸುವಂಥ ಅರಿಸಿನ ಮಾರುಕಟ್ಟೆ ಇದೆ. ಅದರ ಇತಿಹಾಸ ದೊಡ್ಡದಿದೆ. ಅಂಥದ್ದಕ್ಕೂ ಬರಿ 1 ಕೋಟಿ ಬಿಡುಗಡೆ ಮಾಡಿದ್ದೇವೆಂದರೆ, ಮಾರ್ಚ್‌ನೊಳಗೆ ಏನು ಮಾಡುತ್ತಾರೋ ದೇವರಿಗೆ ಗೊತ್ತು. ಒಂದು ಕೋಟಿಯಲ್ಲಿ 50 ಲಕ್ಷ ಬಿಡುಗಡೆ ಆಗಿದೆ. State level clearance

committee ನಲ್ಲಿ ಒಂದು ಕೋಟಿ ಮಾರುಕಟ್ಟೆಗೆ ಮಂಜೂರಾಗಿದ್ದು 50 ಲಕ್ಷ ಬಿಡುಗಡೆ ಮಾಡಿದಿರಿ. ನೀವು ಕೊಟ್ಟಿರುವ ವರದಿಯಲ್ಲಿ 50 ಲಕ್ಷ ಬಿಡುಗಡೆ ಮಾಡಿದಿರಿ.

ಶ್ರೀ ಶಿವರಾಜ್ ಎಸ್. ತಂಗಡಗಿ : ನಾವು ಇಲ್ಲಿ ದುಡ್ಡು ಬಿಡುಗಡೆ ಮಾಡಿದ್ದೇವೆ. ಒಂದು ಕೋಟಿ ರೂಪಾಯಿ ಕಾಮಗಾರಿ ನಡೆಯುತ್ತಿದೆ.

ಶ್ರೀ ಟಿ.ಬಿ.ಜಯಚಂದ್ರ : ಹೋಗಲಿ ಎಷ್ಟು ಖರ್ಚು ಆಗಿದೆ ಹೇಳಿ ಬಿಡಿ. ಖರ್ಚು ಸೊನ್ನೆ ಅಲ್ಲವೆ?

ಶ್ರೀ ಶಿವರಾಜ್ ಎಸ್. ತಂಗಡಗಿ : ಕಾಮಗಾರಿ ಪ್ರಾರಂಭವಾಗಿದೆ, ಕಾಮಗಾರಿ ಮುಗಿದ ಮೇಲೆ ದುಡ್ಡು ಬಿಡುಗಡೆ ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಕಾಮಗಾರಿ ಪ್ರಾರಂಭವಾಗಿದೆ ಎನ್ನುವುದನ್ನು ಒಪ್ಪುತ್ತೇನೆ. ಖರ್ಚು ಎಷ್ಟು ಆಗಿದೆ ಹೇಳಿ.

ಶ್ರೀ ಶಿವರಾಜ್ ಎಸ್. ತಂಗಡಗಿ : ಒಂದು ಕೋಟಿ ರೂಪಾಯಿ ಕಾಮಗಾರಿ ಪ್ರಾರಂಭಿಸಿದ್ದೇವೆ. ಉಳಿದ 9 ಕೋಟಿ ರೂಪಾಯಿಯ ಕಾಮಗಾರಿಯ ಕೆಲಸ ಏನೇನು ಮಾಡಬೇಕೆನ್ನುವ ವರದಿ ತರಿಸಿಕೊಂಡು ಟೆಂಡರ್ ಕರೆಯುವ ಮೂಲಕ ಮಾಡಿಸುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಆಯವ್ಯಯ ಎಂದರೆ ಹಣ ಮಂಜೂರಾತಿಯಾಗಬೇಕು ಮತ್ತು ಖರ್ಚಾಗಬೇಕು ಎನ್ನುವುದು ಅದರ ಉದ್ದೇಶ.

ಶ್ರೀ ಶಿವರಾಜ್ ಎಸ್. ತಂಗಡಗಿ : ಬಜೆಟ್‌ನಲ್ಲಿ ಆದ ಮೇಲೆ ನಮ್ಮ ಇಲಾಖೆಗೆ ಹೋಗಬೇಕೋ ತೋಟಗಾರಿಕೆ ಇಲಾಖೆಗೆ ಹೋಗಬೇಕು ಎನ್ನುವ confusion ಆಗಿದ್ದರಿಂದ ಟೆಂಡರ್ ಕರೆಯುವ ಪ್ರಕ್ರಿಯೆ ತಡವಾಯಿತು. ನಮ್ಮ ಇಲಾಖೆಗೆ ಬಂದ ಮೇಲೆ ನಾವು ತಕ್ಷಣ ಟೆಂಡರ್ ಕರೆಯುವಂಥ ಕೆಲಸ ಮಾಡಿದ್ದೇವೆ. ಹೀಗಾಗಿ ಉಳಿದ 9 ಕೋಟಿ ರೂಪಾಯಿಗೂ ಟೆಂಡರ್ ಕರೆದು ಕಾಮಗಾರಿಯನ್ನು ಮಾಡಿಸುತ್ತೇವೆ.

ಅಧ್ಯಕ್ಷರು : ಸುನೀಲ್ ಹೆಗಡೆಯವರು ಇಲ್ಲ. ಎ.ಎಸ್. ಪಾಟೀಲ್ ರವರೆ ತಮ್ಮ ಪ್ರಶ್ನೆಗೆ ಸಮಯ ಕೇಳಿದ್ದಾರೆ, ಹೀಗಾಗಿ ಮುಂದಿನ ವಾರ ತೆಗೆದುಕೊಳ್ಳೋಣ. ಮುಂದಿನ ವಾರ ಕೊಡಿಸುತ್ತೇವೆ. ದಿನಕರ್ ಶೆಟ್ಟಿಯವರು..

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಅಲ್ಲಿರುವಂಥ ಕಾರ್ಮಿಕರು ಆಸ್ಪತ್ರೆಯಲ್ಲಿದ್ದಾರೆ. ನೀವು ಎರಡು ವಾರ ಅಂದರೆ ಅಲ್ಲಿ ಕಷ್ಟವಾಗುತ್ತದೆ.

ಅಧ್ಯಕ್ಷರು : ಎರಡು ವಾರ ಅಲ್ಲ ಮುಂದಿನ ವಾರ ಕೊಡಿಸುತೇನೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : 19 ನೇ ತಾರೀಕಿನೊಳಗೆ ಉತ್ತರ ಕೊಡಿಸಿ.

ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ಮುಕ್ತ ಮಾರುಕಟ್ಟೆ ಸರಬರಾಜು ಯೋಜನೆ ಕುರಿತು

68 (1004) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಜಾರಿಗೊಳಿಸಿದ ಕಡಿಮೆ ಬೆಲೆಯಲ್ಲಿ ಅಕ್ಕಿ ಗೋಧಿ ವಿತರಣೆ ಯೋಜನೆಯ ವಿವರಗಳೇನು;

ಆ) ಯೋಜನೆಯ ಅನುಷ್ಠಾನದ ನಂತರ ಎಷ್ಟು ಪ್ರಮಾಣದ ಅಕ್ಕಿ ಮತ್ತು ಗೋಧಿಯನ್ನು ಬಳಕೆದಾರರಿಗೆ ವಿತರಿಸಲಾಗಿದೆ;

ಇ) ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಎಪಿಎಲ್ ಕಾರ್ಡುದಾರರು ಸೇರಿದಂತ ಎಲ್ಲಾ ಬಳಕೆದಾರರಿಗೂ ಹಂಚಿಕೆ ಮಾಡುವ ಸರ್ಕಾರದ ಯೋಜನೆಯ ವಿವರಗಳೇನು?

ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ರಿಯಾಯಿತಿ ದರದಲ್ಲಿ ಪಡಿತರವನ್ನು ನೀಡಲು ಎರಡು ಯೋಜನೆಗಳಿದ್ದು ಅತ್ಯಂತ ಕಡು ಬಡವರಿಗೆ ಕೇಂದ್ರ ಸರ್ಕಾರದ ಅಂತ್ಯೋದಯ ಅನ್ನ ಯೋಜನೆಯಡಿಯಲ್ಲಿ ಪ್ರತಿ ಕುಟುಂಬಕ್ಕೆ ರೂ. 3.00 ಪ್ರತಿ ಕೆಜಿ ಯಂತೆ 29 ಕೆಜಿ ಅಕ್ಕಿ ಹಾಗೂ ರೂ.2.00 ಪ್ರತಿ ಕೆಜಿ ಯಂತೆ 6 ಕೆಜಿ ಗೋಧಿಯನ್ನು ವಿತರಿಸಲಾಗುತ್ತಿದೆ. ಬಿ.ಪಿ.ಎಲ್. ಕುಟುಂಬಗಳಿಗೆ ಯುನಿಟ್ ಪದ್ಧತಿಯಡಿಯಲ್ಲಿ ಪ್ರತಿ ಯುನಿಟ್‌ಗೆ ತಲಾ 4 ಕೆಜಿ ಅಕ್ಕಿ ಹಾಗೂ 1 ಕೆಜಿ ಗೋಧಿಯಂತೆ ಗರಿಷ್ಟ ಒಂದು ಕುಟುಂಬಕ್ಕೆ ರೂ.3.00 ಪ್ರತಿ ಕೆಜಿ ಯಂತೆ 20 ಕೆಜಿ ಅಕ್ಕಿ ಹಾಗೂ ರೂ.3.00 ಪ್ರತಿ ಕೆಜಿ ಯಂತೆ 3 ಕೆಜಿ ಗೋಧಿಯನ್ನು ವಿತರಿಸಲಾಗುತ್ತಿದೆ.

ಹಾಗೆಯೇ ಬೆಲೆ ಏರಿಕೆಯನ್ನು ನಿಯಂತ್ರಣದಲ್ಲಿಡಲು ಎ.ಪಿ.ಎಲ್ ಪಡಿತರ ಚೀಟಿದಾರರಿಗೂ ಸಹಾ ಪ್ರತಿ ಕುಟುಂಬಕ್ಕೆ ತಲಾ 10 ಕೆಜಿ ಅಕ್ಕಿ

ಹಾಗೂ 5 ಕೆಜಿ ಗೋಧಿಯನ್ನು ವಿತರಿಸಲು ಯೋಜಿಸಲಾಗಿದೆ, ದರ ಜಿಲ್ಲೆಯಿಂದ ಜಿಲ್ಲೆಗೆ ಪ್ರತಿ ಕೆ.ಜಿ. ಅಕ್ಕಿಗೆ ಕನಿಷ್ಟ ರೂ. 16.15 ರಿಂದ ಗರಿಷ್ಠ ರೂ. 16.40 ರವರೆಗೆ ಹಾಗೂ ಪ್ರತಿ ಕೆ.ಜಿ. ಗೋಧಿಗೆ ಕನಿಷ್ಟ ರೂ. 11.45 ರಿಂದ ಗರಿಷ್ಠ ರೂ.11.70 ರವರೆಗೆ ನಿಗದಿಗೊಳಿಸಲಾಗಿದೆ. ಪ್ರಥಮ ಹಂತದಲ್ಲಿ ರಾಜ್ಯದಲ್ಲಿ ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಪಡಿತರ ಚೀಟಿಗಳನ್ನು ಆಧರಿಸಿ ಅಗತ್ಯ ಪ್ರಮಾಣದ ಅಕ್ಕಿಯನ್ನು ಬಿಡುಗಡೆ ಮಾಡಲಾಗಿದೆ.

ಇವುಗಳನ್ನು ಹೊರತುಪಡಿಸಿ, ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ಅಕ್ಕಿ ವಿತರಿಸುವ ಉದ್ದೇಶದಿಂದ ಅಕ್ಕಿಸಂತೆಯ್ನು ಆಯೋಜಿಸಲಾಯಿತು. ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಕರ್ನಾಟಕ ರಾಜ್ಯ ಗ್ರಾಹಕರ ಸಹಕಾರಿ ಮಹಾ ಮಂಡಳಿ ನಿಯಮಿತ ಹಾಗೂ ಅಕ್ಕಿ ಗಿರಣಿ ಮಾಲೀಕರ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಳಲಾ ಗಿರುತ್ತದೆ. ಅಕ್ಕಿ ಗಿರಣಿ ಮಾಲೀಕರು ನೇರವಾಗಿ ಜನತಾ ಬಜಾರ್‌ಗಳಿಗೆ ಸರಬರಾಜು ಮಾಡಿ ಮಧ್ಯವರ್ತಿಗಳ ಹಾವಳಿ ಇಲ್ಲದೇ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಮಾರಾಟ ಮಾಡುವ ಪ್ರಯತ್ನ ಮಾಡಲಾಗಿದೆ.

ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ಮುಕ್ತ ಮಾರುಕಟ್ಟೆ ಸರಬರಾಜು ಯೋಜನೆ (OMSS) ಅಡಿಯಲ್ಲಿ ಸಾರ್ವಜನಿಕರಿಗೆ ಅಕ್ಕಿಯನ್ನು ಪ್ರತಿ ಕೆ.ಜಿ.ಗೆ ರೂ. 17/–ರಂತೆ ಹಾಗೂ ಗೋಧಿಯನ್ನು ಪ್ರತಿ ಕೆ.ಜಿ.ಗೆ ರೂ.14.65 ರಂತೆ ವಿತರಿಸಲು ಯೋಜನೆ ಹಮ್ಮಿಕೊಳ್ಳಲಾಗಿದೆ. ಭಾರತ ಆಹಾರ ನಿಗಮದಿಂದ ಎತ್ತುವಳಿ ಮಾಡಿ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ವತಿಯಿಂದ ಜಿಲ್ಲೆಗಳಲ್ಲಿರುವ ಚಿಲ್ಲರೆ ಅಂಗಡಿಗಳ ಮುಖಾಂತರ ಜನತಾ ಬಜಾರ್ ಹಾಗೂ ಇತರೆ ಸಂಘಗಳ ಮುಖಾಂತರ, ಮೇಲ್ಕಂಡ ದರದಲ್ಲಿ ವಿತರಣೆ ಮಾಡಲು ಯೋಜನೆ ಹಮ್ಮಿಕೊಳ್ಳಲಾಗಿದೆ. ಗ್ರಾಹಕರು ಅಕ್ಕಿ ಮತ್ತು ಗೋಧಿಯನ್ನು ಪಡೆಯಬೇಕಾಗಿದ್ದಲ್ಲಿ ಯಾವುದಾದರೂ ಅಧಿಕೃತ ಗುರುತಿನ ಚೀಟಿಯನ್ನು ತೋರಿಸಿ ತಲಾ 25. ಕೆ.ಜಿ ಅಕ್ಕಿ ಮತ್ತು 25 ಕೆ.ಜಿ. ಗೋಧಿ ಪಡೆಯಬಹುದಾಗಿರುತ್ತದೆ. ಇಲ್ಲಿಯವರೆಗೆ ಸಾರ್ವಜನಿಕರಿಂದ ಉತ್ತೇಜನಕ ಪ್ರತಿಕ್ರಿಯೆ ಬಂದಿರುವುದಿಲ್ಲ.

ಆ) ಸಾರ್ವಜನಿಕ ವಿತರಣಾ ಪದ್ಧತಿಯನ್ನು ಹೊರತುಪಡಿಸಿ ಅಕ್ಕಿ ಸಂತೆ ಯೋಜನೆಯಲ್ಲಿ 35.96 ಮೆ ಟನ್ ಅಕ್ಕಿಯನ್ನು ವಿತರಿಸಲಾಗಿದೆ. ಈ ಯೋಜನೆಯನ್ನು ಅಕ್ಕಿ ಗಿರಣಿಯವರ ಸಹಕಾರದಿಂದ ಕಾರ್ಯಾನ್ವಯ

ಗೊಳಿಸಿದ್ದು, 3 ವಿಧವಾದ ಸೋನಾ ಮಸೂರಿ ಅಕ್ಕಿಯನ್ನು ಮಾರಾಟ ಮಾಡಲಾಗಿರುತ್ತದೆ.

ಮುಕ್ತ ಮಾರುಕಟ್ಟೆ ಸರಬರಾಜು ಯೋಜನೆಯಡಿಯಲ್ಲಿ 40.261 ಮೆ ಟನ್ ಅಕ್ಕಿ ಮತ್ತು 16 ಮೆ ಟನ್ ಗೋಧಿಯನ್ನು ಹಂಚಿಕೆ ನೀಡಲಾಗಿದೆ.

ಇ) ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ಮುಕ್ತ ಮಾರುಕಟ್ಟೆ ಸರಬರಾಜು ಯೋಜನೆ (OMSS) ಅಡಿಯಲ್ಲಿ ಸಾರ್ವಜನಿಕರಿಗೆ ಅಕ್ಕಿಯನ್ನು ಪ್ರತಿ ಕೆ.ಜಿ. ಗೆ ರೂ.17/- ರಂತೆ ಹಾಗೂ ಗೋಧಿಯನ್ನು ಪ್ರತಿ ಕೆ.ಜಿ.ಗೆ ರೂ.14.65 ರಂತೆ ವಿತರಿಸಲು ಯೋಜನೆ ಹಮ್ಮಿಕೊಳ್ಳಲಾಗಿದೆ. ಭಾರತ ಆಹಾರ ನಿಗಮದಿಂದ ಎತ್ತುವಳಿ ಮಾಡಿ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ವತಿಯಿಂದ ಜಿಲ್ಲೆಗಳಲ್ಲಿರುವ ಚಿಲ್ಲರೆ ಅಂಗಡಿಗಳ ಮುಖಾಂತರ ಜನತಾ ಬಜಾರ್ ಹಾಗೂ ಇತರೆ ಸಂಘಗಳ ಮುಖಾಂತರ ಮೇಲ್ಕಂಡ ದರದಲ್ಲಿ ವಿತರಣೆ ಮಾಡಲು ಯೋಜನೆ ಹಮ್ಮಿಕೊಳ್ಳಲಾಗಿದೆ. ಗ್ರಾಹಕರು ಅಕ್ಕಿ ಮತ್ತು ಗೋಧಿಯನ್ನು ಪಡೆಯಬೇಕಾಗಿದ್ದಲ್ಲಿ ಯಾವುದಾದರೂ ಅಧಿಕೃತ ಗುರುತಿನ ಚೀಟಿಯನ್ನು ತೋರಿಸಿ ತಲಾ 25 ಕೆ.ಜಿ. ಅಕ್ಕಿ ಮತ್ತು 25 ಕೆ.ಜಿ. ಗೋಧಿ ಪಡೆಯಬಹುದಾಗಿರುತ್ತದೆ.

ಶ್ರೀ ಎನ್.ಎ.ಹ್ಯಾರೀಸ್ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಅಕ್ಕಿ ಮತ್ತು ಗೋಧಿ ಕೊಡುವುದರ ಬಗ್ಗೆ ಹೇಳಿದ್ದಾರೆ. ಮತ್ತೊಂದು ಕಡೆ, ಕೇಂದ್ರ ಸರ್ಕಾರದ OMSS ಸ್ಕೀಂನಲ್ಲಿ ವಿತರಿಸಲು ಯೋಚಿಸಿದ್ದೇವೆಂದು ಹೇಳುತ್ತಾರೆ. ಇವತ್ತು ಜನರಿಗೆ ತುಂಬಾ ಕಷ್ಟವಾಗುತ್ತಿದೆ. ಅಕ್ಕಿ ಬೆಲೆ ಗಗನಕ್ಕೆ ಏರಿದೆ. ಬಡವರಿಗೆ ತುಂಬಾ ಕಷ್ಟ. ಬಿಪಿಎಲ್ ಕಾರ್ಡುನವರಿಗೆ ಅಲ್ಪ ಸ್ವಲ್ಪ ಅಕ್ಕಿ, ಗೋಧಿ, ಸೀಮೆಎಣ್ಣೆ ಸಿಗುತ್ತದೆ. ಆದರೆ ಎಪಿಎಲ್ ಕಾರ್ಡಿನವರಿಗೆ ಏನೇನು ಸಿಗುತ್ತಿಲ್ಲ. ಬಿಪಿಎಲ್‌ನವರು ಒಂದು ಕಡೆಯಾದರೆ, ಮಧ್ಯಮವರ್ಗದವರು ಪಾಪ ಅವರು ಭಿಕ್ಷೆ ಬೇಡುವಂಗೂ ಇಲ್ಲ. ಗೌರವದಿಂದ ಬದುಕುವುದಕ್ಕೂ ಆಗುವುದಿಲ್ಲ. ಅವರ ಪರಿಸ್ಥಿತಿಯನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. ಸುಮಾರು ಜನ ಕೆಲಸಕ್ಕೆ ಹೋಗುವವರು, ಅದರಲ್ಲೂ ಬೆಂಗಳೂರು ನಗರದಲ್ಲಿ ಬೇಕಾದಷ್ಟು ಜನರಿಗೆ ಬಿಪಿಎಲ್ ಕಾರ್ಡು ಕೊಡುವಲ್ಲಿ ಎಪಿಎಲ್ ಕಾರ್ಡು ಕೊಟ್ಟಿದ್ದಾರೆ. ಎಪಿಎಲ್ ಕಾರ್ಡುನವರಿಗೆ ಏನೂ ಇಲ್ಲ ಬರಿ ಕಾರ್ಡು ಮಾತ್ರ, ಆದ್ದರಿಂದ

ಸಾರ್ವಜನಿಕರಿಗಾಗಿ ನಾವು ಏನಾದರೊಂದು ಒಳ್ಳೆಯ ಕಾರ್ಯಕ್ರಮ ಮಾಡಲಿಲ್ಲವೆಂದರೆ ಪ್ರಯೋಜನವಾಗುವುದಿಲ್ಲ. ಸರ್ಕಾರ ಎಷ್ಟು ದಿವಸ ಇರುತ್ತದೆ, ಸರ್ಕಾರದಲ್ಲಿ ಯಾರು ಇರುತ್ತಾರೆ, ಎಂಬುದು ಮುಖ್ಯವಲ್ಲ. ಇರುವಂಥವರು ಜನರಿಗೆ ಯಾವ ರೀತಿಯ ಕಾರ್ಯಕ್ರಮ ಹಮ್ಮಿಕೊಂಡಿದ್ದೀರಿ ಎಂಬುದನ್ನು ದಯವಿಟ್ಟು ತಾವು ಹೇಳಬೇಕು. ಇದರಲ್ಲಿ ಇನ್ನು ಮಾಡುತ್ತೇವೆಂದು ಹೇಳಿದ್ದೀರಿ. ಈಗಾಗಲೇ ಮಾಡಬೇಕಾಗಿರುವ ಸಮಯ ಕಳೆದು ಹೋಗಿದೆ. ದಯವಿಟ್ಟು ಯಾವಾಗ ಮಾಡುತ್ತೀರಿ? Budget speech ನಲ್ಲಿ permanent card ಫೆಬ್ರವರಿ 10 ರೊಳಗೆ ಮುಗಿಸುತ್ತೇವೆಂದು ಹೇಳಿದ್ದೀರಿ.

ಈಗ ಫೆಬ್ರವರಿ ಆಯಿತು ಮಾರ್ಚ್ ಆಯಿತು ಅದನ್ನು ಇನ್ನೂ ಮಾಡಿಲ್ಲ. ದಯವಿಟ್ಟು ಈ ಬಗ್ಗೆ ತಾವು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಕೆ.ಗೋಪಾಲ ಭಂಡಾರಿ : ಅನೇಕ ಬಾರಿ ಈ ವಿಚಾರ ಸದನದಲ್ಲಿ ಪ್ರಸ್ತಾಪವಾಗಿದೆ. ಬೆಳಗಾವಿ ಮತ್ತು ಇಲ್ಲಿಯೂ ಕೂಡ ಪ್ರಸ್ತಾಪವಾಗಿದೆ. ನಮ್ಮಲ್ಲಿ ಏನಾಗಿದೆ ಎಂದರೆ, ಮಾನ್ಯ ಹ್ಯಾರೀಸ್‌ರವರು ಹೇಳಿದ ಹಾಗೆ, ಮಧ್ಯಮವರ್ಗದವರಿಗೆ ಏನೂ ಇಲ್ಲದಿರುವ ಪರಿಸ್ಥಿತಿಯಾದರೆ, ಮತ್ತೊಂದು ಸಮಸ್ಯೆ ಏನೆಂದರೆ, ಎಪಿಎಲ್ ಕಾರ್ಡುಗೆ ಅರ್ಜಿ ಕೊಟ್ಟರು ಕೂಡ ಕೊಡುವುದಿಲ್ಲ. ಬಿಪಿಎಲ್ ಕಾರ್ಡಿಗೆ ಅರ್ಜಿ ಕೊಟ್ಟರೆ ಅದು ಹೇಗೋ ಸಿಗುತ್ತಿಲ್ಲ. ಎಪಿಎಲ್ ಆದವರಿಗೆ ಬಿಪಿಎಲ್ ಎಂದು ಬದಲಾವಣೆ ಮಾಡುವುದಕ್ಕೆ ಸಿಗುತ್ತಿಲ್ಲ. ಕಾರ್ಡು ಇಲ್ಲದಿರುವ ಜನ ಇವತ್ತು ನಮಗೆ ಯಾವುದಾದರೊಂದು ಕಾರ್ಡು ಕೊಡಿ ಎಂದು ನೆಮ್ಮದಿ ಕೇಂದ್ರದಲ್ಲಿ ಕೇಳಿದರೆ, ಅಲ್ಲಿ ಅವರು ಅರ್ಜಿ ತೆಗೆದುಕೊಳ್ಳುತ್ತಿಲ್ಲ. ಹಿಂದೆ ತಾಲ್ಲೂಕು ಆಫೀಸ್‌ನಲ್ಲಿ ಅರ್ಜಿಯನ್ನು ಯಾವಾಗಲೂ ತೆಗೆದುಕೊಳ್ಳುತ್ತಿದ್ದರು. ಅಲ್ಲಿ ಈಗ ಅರ್ಜಿ ತೆಗೆದುಕೊಳುತ್ತಿಲ್ಲ. ತಾಲ್ಲೂಕು ಆಫೀಸ್‌ನಲ್ಲಿರುವ ಫುಡ್ ಸೆಕ್ಷನ್‌ನಲ್ಲಿ ಏಕೆ ಅರ್ಜಿ ತೆಗೆದುಕೊಳ್ಳುತ್ತಿಲ್ಲವೆಂದು ಕೇಳಿದರೆ ನೆಮ್ಮದಿ ಕೇಂದ್ರಕ್ಕೆ ಹೋಗಿ ಎಂದು ಹೇಳುತ್ತಾರೆ. ನೆಮ್ಮದಿ ಕೇಂದ್ರಕ್ಕೆ ಹೋಗಿ ಕೇಳಿದರೆ ನಮಗೆ ಸರ್ಕಾರದಿಂದ ನಿರ್ದೇಶನ ಬಂದಿಲ್ಲ ಎಂದು ಹೇಳುತ್ತಾರೆ. ಕಾರ್ಡು ಬೇಕೆಂದು ಅರ್ಜಿ ಕೊಡುವುದಕ್ಕೂ ಒಂದು ಸರ್ಕಾರದ ನಿರ್ದೇಶನ ಕೊಡುವುದಾದರೆ ಇದು ಬಹಳ ಕಷ್ಟದ ಪರಿಸ್ಥಿತಿ. ಕಾರ್ಡು ಇಲ್ಲದವರಿಗೆ ಕಾರ್ಡು ಕೊಡುವುದರಿಂದ ಬಹಳ ಗೊಂದಲವಾಗುತ್ತದೆ. ನಿನ್ನೆ ಕೂಡ ಈ ನೆಮ್ಮದಿ ಕೇಂದ್ರದ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ಅದನ್ನು ಮುಕ್ತಾಯ

ಮಾಡಿ ತಾಲ್ಲೂಕು ಆಫೀಸ್‌ನಲ್ಲಿ ಅರ್ಜಿ ತೆಗೆದುಕೊಳ್ಳುವ ವ್ಯವಸ್ಥೆ ಮಾಡಿದರೆ ಎಲ್ಲವೂ ಸರಿಯಾಗುತ್ತದೆ. ಆ ನೆಮ್ಮದಿ ಕೇಂದ್ರಕ್ಕೊಂದು ಬಾಗಿಲು ಹಾಕಿಬಿಡಿ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಕಾರ್ಡುಗಳ ವಿಚಾರದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ತೊಂದರೆಯಾಗಿದೆ. ಬಿಪಿಎಲ್ ಬರುವವನಿಗೆ ಎಪಿಎಲ್ ಬಂದಿದೆ, ಎಪಿಎಲ್ ಬರುವವನಿಗೆ ಬಿಪಿಎಲ್ ಬಂದಿದೆ. ಅನಿಲ ಇದ್ದವನಿಗೆ ಅನಿಲ ರಹಿತ ಎಂದು ಬಂದಿದೆ, ಅನಿಲ ಇಲ್ಲದವನಿಗೆ ಅನಿಲ ಎಂದು ಬಂದಿದೆ. ಇದನ್ನು ಯಾವಾಗ ಸರಿಪಡಿಸುತ್ತೀರಿ ನಿಖರವಾಗಿ ಹೇಳಿ. ಯಾವ ತಿಂಗಳಲ್ಲಿ ಸರಿಪಡಿಸುತ್ತೀರಿ, ಸನ್ಮಾನ್ಯ ಮಂತ್ರಿಗಳು ಇದಕ್ಕೆ ನಿಖರವಾಗಿ ಉತ್ತರ ಕೊಡಬೇಕು. ಏಕೆಂದರೆ, ಸುಮಾರು ಸಮಯದಿಂದ ಈ ಕಾರ್ಡುಗಳ ಗಲಾಟೆ ನಡೆಯುತ್ತಿದೆ. ಆದ್ದರಿಂದ, ಸನ್ಮಾನ್ಯ ಮಂತ್ರಿಗಳು ಇದಕ್ಕೆ ನಿಖರವಾಗಿ ಉತ್ತರ ಕೊಡಬೇಕೆಂದು ವಿನಂತಿಸುತ್ತೇನೆ. ಸರ್ವೇ ಮಾಡಬೇಕಾದರೆ ಯಾರು ಮಾಡುತ್ತಾರೆ?

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ ಕಳ್ಳರ ಕೈಗೆ ಬೀಗ ಕೊಡೋದು ಎಂದು ಒಂದು ಗಾದೆ ಮಾತಿದೆ. ಇದು ಕೂಡ ಅದೇ ರೀತಿ ಆಯಿತು. ಎಪಿಎಲ್ ಅಥವಾ ಬಿಪಿಎಲ್‌ಗೆ ಈತ ಸೇರುತ್ತಾನೆಯೇ ಎಂಬುದನ್ನು ಪರಿಶೀಲನೆ ಮಾಡಿ ಕೊಡಿ ಎಂದು ನ್ಯಾಯಬೆಲೆ ಅಂಗಡಿಯಲ್ಲಿರುವವನಿಗೆ ಇವರು ಕೊಟ್ಟಿದ್ದಾರೆ. ಆತ ಏನು ಮಾಡುತ್ತಾನೆಂದರೆ, ಯಾರು ಬಡವರಿದ್ದಾರೆ ಅವರ ಹೆಸರನ್ನು ಒಡೆದು ಹಾಕಿ ಕಳ್ಳಕಾರ್ಡ್ ಮೇಲೆ ಬಡವರ ಹೆಸರನ್ನು ಸೇರಿಸಿ ಇವೆಲ್ಲವನ್ನು ರೆಗ್ಯುಲರೈಸ್ ಮಾಡಿಕೊಂಡಿದ್ದಾರೆ. ಸಮರ್ಪಕವಾಗಿ ಕಾರ್ಡ್ ಕೊಡುವುದಕ್ಕೂ ಕೂಡ ಒಂದು ಸರ್ಕಾರದ ವ್ಯವಸ್ಥೆಗೆ ಕಷ್ಟ ಇದೆಯೇ? ಅಥವಾ ಅಷ್ಟೊಂದು ಅಸಹಾಯಕತೆ ಇದೆಯೇ ಕಾರ್ಡಿನ ಗೊಂದಲಕ್ಕೆ ಸಂಬಂಧಪಟ್ಟಂತೆ ಎಷ್ಟೋ ವರ್ಷಗಳಿಂದ ಉತ್ತರ ಹೇಳಿಕೊಂಡು ಕುಳಿತುಕೊಳ್ಳತಕ್ಕಂಥ ಸ್ಥಿತಿ ಬಂದಿದೆ. ಈಗ ಗ್ರಾಮ ಪಂಚಾಯಿತಿ ಚುನಾವಣೆ ಬರುತ್ತಿದೆ. ನಾವು ಹಳ್ಳಿಗಳಿಗೆ ಹೋಗಿ ಜನರ ಪರವಾಗಿ ವೋಟ್ ಕೇಳಬೇಕೆ ಅಥವಾ ಬೇಡವೆ? ಕಾರ್ಡ್ ಕೊಡಿಸಿ ಎಂದು ಹಿಡಿದುಕೊಂಡು ಕುಳಿತರೆ ನಾವು ಏನು ತೆಗೆದುಕೊಂಡು ಸಾಯಬೇಕು?

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾವು ಹೇಳಬೇಕಾದದ್ದನ್ನು ಮಾನ್ಯ ಸಿ.ಟಿ.ರವಿರವರೆ ಹೇಳಿದ್ದಾರೆ. ಆದ್ದರಿಂದ, ಅವರಿಗೆ ನಾವು ಅಭಿನಂದನೆ ಸಲ್ಲಿಸಬೇಕಾಗಿದೆ. ಇವತ್ತಿನ ದಿವಸ ಹಸಿರು ಕಾರ್ಡ್‌ನ ಪರಿಸ್ಥಿತಿ ಏನಾಗಿದೆ ಎಂದು ಇಲ್ಲಿರತಕ್ಕಂಥ ಎಲ್ಲರಿಗೂ ಸಹ ಗೊತ್ತಿದೆ. ನಮ್ಮಲ್ಲಿ ಹಸಿರು

ಕಾರ್ಡ್‌ನ್ನು ಉಳ್ಳವರಿಗೆ ಕೊಟ್ಟಿದ್ದಾರೆ. ಮಾನ್ಯ ರವಿಯವರು ಒಳ್ಳೆಯ ವಿಚಾರ ವನ್ನು ಹೇಳಿರುವುದರಿಂದ ಅವರಿಗೆ ನಾವು ಅಭಿನಂದನೆ ಸಲ್ಲಿಸುತ್ತೇವೆ.

ಶ್ರೀ ಕೆ. ರಘುಪತಿ ಭಟ್ : ಇಡೀ ರಾಜ್ಯದಲ್ಲಿಯೇ ನಮ್ಮ ಉಡುಪಿ ಜಿಲ್ಲೆಯಲ್ಲಿ ಅತ್ಯಂತ ಕಡಿಮೆ ಅಂದರೆ 48% ಇದೆ. ನಮ್ಮಲ್ಲಿ ಒಟ್ಟು 18 ಸಾವಿರ ಜನ ಅರ್ಜಿ ಕೊಟ್ಟಿದ್ದಾರೆ. ಅದರಲ್ಲಿ 11,000 ಅರ್ಜಿಗಳನ್ನು ಪಾಸ್ ಮಾಡಿ 7,000 ಅರ್ಜಿಗಳನ್ನು ರಿಜೆಕ್ಟ್ ಮಾಡಿದ್ದಾರೆ. ನನ್ನ ಪ್ರಶ್ನೆ ಎಂದರೆ, ಸಂಬಂಧಪಟ್ಟ ಫಲಾನುಭವಿ ಸುಳ್ಳು ಅಫಿಡೆವಿಟ್ ಕೊಟ್ಟರೆ ಆತನ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ತಾವು ಹೇಳಿದ್ದೀರಿ. ಅಫಿಡೆವಿಟ್ ತೆಗೆದುಕೊಂಡು ಆತ ಬೆಳಿಗ್ಗೆಯಿಂದ ಸಂಜೆಯವರೆಗೆ ನೆಮ್ಮದಿ ಕೇಂದ್ರದಲ್ಲಿ ಕಾಯುತ್ತಾ ಕುಳಿತುಕೊಂಡು ಅರ್ಜಿ ಕೊಡುತ್ತಾನೆ. ಆದರೆ, ಅಫಿಡೆವಿಟ್ ತಂದಂಥವರ ಅರ್ಜಿಯನ್ನು ಸಹ ಇವತ್ತಿನ ದಿವಸ ರಿಜೆಕ್ಟ್ ಮಾಡಿದ್ದೀರಿ. ಅಫಿಡೆವಿಟ್ ಕೊಟ್ಟಂಥವರು ನಿಜವಾಗಿಯೂ ಕೂಡ ಬಡವರಾಗಿದ್ದಾರೆ. ಆದ್ದರಿಂದ, ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ನೆಮ್ಮದಿ ಕೇಂದ್ರದಲ್ಲಿ ಅಫಿಡೆವಿಟ್ ತಂದಿರುವವರಿಗೆ ಕೊಡಬೇಕು. ಒಂದು ವೇಳೆ ಬಡವನಲ್ಲದೆ ಇರುವವನು ಏನಾದರು ಅಫಿಡೆವಿಟ್ ಕೊಟ್ಟಿದ್ದರೆ ಆತನ ಮೇಲೆ ನೀವು ಕ್ರಿಮಿನಲ್ ಕೇಸ್ ಹಾಕಿ ನಮ್ಮದೇನು ಅಭ್ಯಂತರ ಇಲ್ಲ. ಆದರೆ, ಬೆಳಿಗ್ಗೆ 5 ಗಂಟೆಗೆ ಹೋಗಿ ಸಂಜೆಯವರಿಗೆ ಅಲ್ಲಿ ಕುಳಿತುಕೊಂಡು ಅಫಿಡೆವಿಟ್ ಜೊತೆಗೆ ಅರ್ಜಿ ಕೊಟ್ಟಿರುವಂಥವರದು ಕೂಡ ಇವತ್ತಿನ ದಿವಸ ರಿಜೆಕ್ಟ್ ಆಗಿದೆ. ನೆಮ್ಮದಿ ಕೇಂದ್ರದಲ್ಲಿ ಅರ್ಜಿ ತೆಗೆದು ಕೊಂಡಿರುವಂಥವರಿಗಾದರೂ ಕೊನೇಪಕ್ಷ ಕೊಡಿ.

ಶ್ರೀ ಕೆ. ಅಭಯಚಂದ್ರ ಜೈನ್ : ಮಾನ್ಯ ಅಧ್ಯಕ್ಷರೆ, ಅಫಿಡೆವಿಟ್ ತೆಗೆದುಕೊಂಡು ಕೊಡಬಹುದೆಂದು ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಹೇಳಿದ್ದಾರೆ. ಆದರೆ, ಅಫಿಡೆವಿಟ್ ಕೊಟ್ಟಂಥವರ ಅರ್ಜಿಯನ್ನು ರಿಜೆಕ್ಟ್ ಮಾಡುತ್ತಿದ್ದಾರೆ. ನಮ್ಮ ಅಧಿಕಾರಿಗಳ ಉದ್ಧಟತನ ಎಷ್ಟರಮಟ್ಟಿಗೆ ಇದೆ ಎಂಬುದನ್ನು ನೋಡಿ. ಆದ್ದರಿಂದ, ಮಾನ್ಯ ಆಹಾರ ಸಚಿವರ ಇದರ ಬಗ್ಗೆ ಒಂದು ನಿರ್ಧಿಷ್ಟವಾದ ನಿರ್ಣಯವನ್ನು ತೆಗೆದುಕೊಳ್ಳಬೇಕು. ಅಫಿಡೆವಿಟ್ ಒದಗಿಸಿಕೊಟ್ಟಂಥವರಿಗೆ ನ್ಯಾಯ ಒದಗಿಸುವಂಥ ಕೆಲಸ ತಮ್ಮ ಕಡೆಯಿಂದ ಆಗಬೇಕು.

ಶ್ರೀ ಯು.ಟಿ.ಖಾದರ್ : ನಮ್ಮ ಜಿಲ್ಲೆಯಲ್ಲಿ ಅಫಿಡೆವಿಟ್ ಕೊಟ್ಟು ಕಾರ್ಡ್ ತೆಗೆದುಕೊಂಡಿರುವವರಿಗೆ ಇದುವರೆಗೂ ಆಹಾರ ಧಾನ್ಯವನ್ನು

ಕೊಟ್ಟಿಲ್ಲ. ಈಗ ಕೇಳಿದರೆ ಏನು ಹೇಳುತ್ತಾರೆಂದರೆ, ನಮ್ಮ ಜಿಲ್ಲೆಯಿಂದ ಎಷ್ಟಾಗುತ್ತದೆಂಬುದರ ಬಗ್ಗೆ ಆ ಸಂದರ್ಭದಲ್ಲಿ ನಾವು ಲೆಕ್ಕ ಕೊಟ್ಟಿಲ್ಲ. ಲೆಕ್ಕದ ಪ್ರಕಾರ ಈಗ ಆಹಾರಧಾನ್ಯ ಬರುತ್ತಿದೆ. ಆದ್ದರಿಂದ ಹೊಸದಾಗಿ ಕಾರ್ಡ್ ಕೊಟ್ಟಿರುವವರಿಗೆ ಆಹಾರಧಾನ್ಯ ಸಿಗುತ್ತಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಸಚಿವರು ಗಮನಕ್ಕೆ ತರುವುದೇನೆಂದರೆ, ಈಗ ಯಾರ್ಯಾರಿಗೆ ಕಾರ್ಡ್ ಕೊಡಲಾಗಿದೆಯೋ ಅಂಥವರಿಗೆ ಆಹಾರಧಾನ್ಯಗಳನ್ನು ಕೊಡಿ. ಮತ್ತೆ ಇನ್ನು ಯಾರ್ಯಾರಿಗೆ ಕಾರ್ಡ್ ಕೊಟ್ಟಿಲ್ಲವೋ ಅಂಥವರಿಗೆ ಏನಾದರೂ ಒಂದು ವ್ಯವಸ್ಥೆ ಮಾಡಿ ಆಹಾರಧಾನ್ಯವನ್ನು ಕೊಡುವಂಥ ವ್ಯವಸ್ಥೆಯ ಜವಾಬ್ದಾರಿ ಯನ್ನು ತಾವು ಹೊತ್ತುಕೊಳ್ಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಡಿ.ನಾಯಕ್ : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಒಂದು ವಿನಂತಿಯನ್ನು ಮಾನ್ಯ ಸಚಿವರಲ್ಲಿ ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ. ಇವತ್ತಿಗೂ ಕೂಡ ಇನ್ನು 30 ರಿಂದ 40% ಜನರಿಗೆ ಬಿಪಿಎಲ್ ಕಾರ್ಡ್ ತಪ್ಪಿಹೋಗಿದೆ. ಆದ್ದರಿಂದ, ಇದನ್ನು ಜಿಲ್ಲಾಧಿಕಾರಿ ಮೂಲಕ ಮಾಡುವಂಥ ವ್ಯವಸ್ಥೆಯನ್ನು ದಯಮಾಡಿ ತಾವು ಮಾಡಬೇಕು. ಈಗ ಇರುವ ನೆಮ್ಮದಿ ಕೇಂದ್ರವನ್ನು ತಪ್ಪಿಸಿ ಜಿಲ್ಲಾಧಿಕಾರಿಯವರಿಗೆ ಅಧಿಕಾರ ಕೊಟ್ಟು ತಾಲ್ಲೂಕು ಮಟ್ಟದಲ್ಲಿ ಕಂಪ್ಯೂಟರ್ ಕೊಡುವಂಥ ವ್ಯವಸ್ಥೆ ಮಾಡಿದರೆ ಎಲ್ಲರಿಗೂ ಕಾರ್ಡ್ ಕೊಡುವಂಥ ಕೆಲಸ ಸುಲಭವಾಗುತ್ತದೆ. ನೆಮ್ಮದಿ ಕೇಂದ್ರಗಳನ್ನು ಈಗ ಹೊಸದಾಗಿ ಮಾಡಿರುವ ವ್ಯವಸ್ಥೆಯಿಂದ ನಿಜವಾಗಿಯೂ ಕೂಡ ಬಡವರಿಗೆ ಏನು ಉಪಯೋಗವಾಗುತ್ತಿಲ್ಲ. ಕಾರ್ಡ್ ಪಡೆದುಕೊಳ್ಳದೆ ಇರತಕ್ಕಂಥವರನ್ನು ಗುರುತಿಸತಕ್ಕಂಥ ಕೆಲಸ ಮಾಡಿದರೆ ಅನುಕೂಲ ವಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ ಎಂದರೆ, ಈ ಕೆಲಸ ವಹಿಸಿಕೊಟ್ಟಿರುವ ಕೊಮ್ಯಾಟ್ ಸಂಸ್ಥೆಯವರು ಈ ಎಲ್ಲಾ ಅವ್ಯವಹಾರಕ್ಕೆ ಮುಖ್ಯ ಕಾರಣವಾಗಿದ್ದಾರೆ. ಕೊಮ್ಯಾಟ್ ಎಂಬುವರು ಯಾರು ಆತನ ಇತಿಹಾಸ ಏನು ಎಂಬುದರ ಬಗ್ಗೆ ಯಾರೂ ಕೂಡ ಮಾತನಾಡುವುದಿಲ್ಲ. ಇದರ ಬಗ್ಗೆ ಕೇವಲ ಶಾಸಕರು ದೂರು ಮಾಡುತ್ತಿಲ್ಲ. ಎಲ್ಲಾ ಡೆಪ್ಯುಟಿ ಕಮಿಷನರ್ ಮತ್ತು ತಹಶೀಲ್ದಾರ್‌ಗಳು ಇವರ ಬಗ್ಗೆ ದೂರು ಮಾಡಿ ಈ ವ್ಯವಸ್ಥೆಯೇ ಬೇಡ. ನಾವೇ ಮಾಡಿಕೊಳ್ಳುತ್ತೇವೆಂದು ಸಹ ಹೇಳಿದ್ದಾರೆ. ಆದರೂ ಕೂಡ ಒಪ್ಪಿಲ್ಲ. ಆತ ಯಾರು? ಆತನ ಮೇಲೆ ನೀವು ಏಕೆ ಕೇಸ್ ಹಾಕಬಾರದು? ಅವರು ಕಾರ್ಡ್‌ನಲ್ಲಿ ಗಂಡನ್ನು ತೆಗೆದುಕೊಂಡು

ಹೋಗಿ ಹೆಂಡತಿ ಮಾಡಿದ್ದಾರೆ. ಹೆಂಡತಿಯನ್ನು ತೆಗೆದುಕೊಂಡು ಹೋಗಿ ಮಗಳನ್ನಾಗಿ ಮಾಡಿದ್ದಾರೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಆತ ಸರ್ಕಾರಕ್ಕಿಂತ ಪ್ರಭಾವ ವ್ಯಕ್ತಿ ಆಗಿದ್ದಾನೆಯೇ? ಸರ್ಕಾರಕ್ಕಿಂತ ಪ್ರಭಾವ ಇಲ್ಲವೆಂಬುದು ನನ್ನ ಭಾವನೆ. ಮಾನ್ಯ ಸಚಿವರ ಕುರ್ಚಿಯನ್ನು ಅಲಗಾಡಿಸುವಷ್ಟು ಆತ ಪ್ರಭಾವ ಏನಾದರು ಇದ್ದಾನೆಯೇ? ನಿಮ್ಮ ಕುರ್ಚಿಯನ್ನು ಅಲಗಾಡಿಸುವಷ್ಟು ಪ್ರಭಾವ ಇದ್ದರೆ ಹೇಳಿ, ನಾವೆಲ್ಲ ನಿಮ್ಮ ನೆರವಿಗೆ ಬರುತ್ತೇವೆ.

ಅಧ್ಯಕ್ಷರು : ಅವರು ಉತ್ತರ ಹೇಳಲಿ, ಆನಂತರ ತಾವು ಕೇಳಿ.

ಶ್ರೀ ಹೆಚ್.ಹಾಲಪ್ಪ (ಆಹಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಎಪಿಎಲ್ ಕಾರ್ಡ್‌ದಾರರಿಗೂ ಸಹ ರೇಷನ್ ಕೊಡಬೇಕೆಂದು ಸದಸ್ಯರಾದ ಮಾನ್ಯ ಹ್ಯಾರೀಶ್‌ನವರು ಪ್ರಶ್ನೆ ಕೇಳಿದ್ದಾರೆ. ಇದನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಎಲ್ಲಾ ನಗರ ಪ್ರದೇಶದಲ್ಲಿ ಈಗಾಗಲೇ ಅಕ್ಕಿಯನ್ನು ಬಿಡುಗಡೆ ಮಾಡಿದ್ದೇವೆ. ಒಂದು ಕೆ.ಜಿ.ಗೆ 16.15 ಪೈಸೆಯಿಂದ 16.50 ಪೈಸೆಯವರೆಗೆ ಆಗುತ್ತದೆ. ಅಂದರೆ ಇದು ಬೇರೆ ಬೇರೆ ಪ್ರದೇಶಗಳಿಗೆ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತದೆ. ಈ ದರದಲ್ಲಿ ಈಗಾಗಲೇ ಅಕ್ಕಿಯನ್ನು ಬಿಡುಗಡೆ ಮಾಡಿದ್ದೇವೆ. ಎಪಿಎಲ್ ಕಾರ್ಡ್ ಇರುವವರು ಯಾರು ಬಂದು ಕೇಳಿದರು 10 ಕೆ.ಜಿ. ಅಕ್ಕಿ, 5 ಕೆ.ಜಿ. ಗೋಧಿ ಕೊಡುವಂಥ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ನಾವು ಬಿಡುಗಡೆ ಮಾಡಿ ಎರಡು ತಿಂಗಳಾಗಿದೆ. ಆದರೆ, ಹೆಚ್ಚಿನ response ಬಂದಿಲ್ಲ. ಮತ್ತೆ ಹೆಚ್ಚು ಜನ ಬಂದು ತೆಗೆದುಕೊಂಡು ಹೋಗುತ್ತಿಲ್ಲ. ಮತ್ತೊಂದು ವಿಷಯ ಏನೆಂದರೆ, ಕಾರ್ಡ್ ಇಲ್ಲದೆ ಇರುವಂಥವರು ಯಾವುದೇ ಒಂದು ಗುರುತಿನ ಚೀಟಿಯನ್ನು ತೋರಿಸಿದರೆ 17.00 ರೂಪಾಯಿ ದರದಲ್ಲಿ 25 ಕೆ.ಜಿ. ಅಕ್ಕಿ ಮತ್ತು 14.5 ರೂಪಾಯಿ ದರದಲ್ಲಿ 25 ಕೆ.ಜಿ. ಗೋಧಿಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಇದಕ್ಕೂ ಕೂಡ ಹೆಚ್ಚಿನ response ಬಂದಿಲ್ಲ. ಸ್ವಲ್ಪ ಮಟ್ಟಿಗೆ ವ್ಯಾಪಾರ ಆಗಿದೆ. ಯಾರಾದರೂ ಬಂದರೆ ಎಷ್ಟಾದರು ಕೊಡುವುದಕ್ಕೆ ಈ ತಿಂಗಳ 31ರ ವರೆಗೆ ಅವಕಾಶ ಮಾಡಿಕೊಂಡಿದ್ದೇವೆ. ಎಪಿಎಲ್ ಕಾರ್ಡ್ ಕೊಡುವುದಕ್ಕೆ ತೊಂದರೆ ಏನು ಎಂಬುದರ ಬಗ್ಗೆ ಮಾನ್ಯ ಗೋಪಾಲ ಭಂಡಾರಿಯವರು ಕೇಳಿದ್ದಾರೆ. ಎಲ್ಲಾ ಕಡೆ ಎಪಿಎಲ್ ಕಾರ್ಡ್ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಕೆ. ಗೋಪಾಲ ಭಂಡಾರಿ : ಮಾನ್ಯ ಅಧ್ಯಕ್ಷರೆ, ಎಪಿಎಲ್ ಕಾರ್ಡ್ ಕೊಡುವುದಕ್ಕೆ ನೆಮ್ಮದಿ ಕೇಂದ್ರದಲ್ಲಿ ಅರ್ಜಿಯನ್ನೆ ತೆಗೆದುಕೊಳ್ಳುತ್ತಿಲ್ಲ.

ಶ್ರೀ ಹೆಚ್.ಹಾಲಪ್ಪ : ಮಾನ್ಯ ಅದ್ಯಕ್ಷರೆ, ಎಪಿಎಲ್‌ಗೆ ಅರ್ಜಿ ತೆಗೆದುಕೊಂಡು ಕಾರ್ಡ್‌ಗಳನ್ನು ಕೊಡುವುದಕ್ಕೆ ವ್ಯವಸ್ಥೆಯನ್ನು ಕೂಡಲೇ ಮಾಡಿಸುತ್ತೇವೆ. ಈಗಾಗಲೇ ಈ ವ್ಯವಸ್ಥೆ ಇದೆ. ಆದರೆ, ಎಲ್ಲೆಲ್ಲಿ ತೊಂದರೆ ಇದೆಯೋ ಅಂಥ ಕಡೆ ಕೂಡಲೇ ಸರಿಪಡಿಸುತ್ತೇವೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಮಾನ್ಯ ಅಧ್ಯಕ್ಷರೆ, ಕಾರ್ಡ್ ಕೊಡತಕ್ಕಂಥದ್ದರಲ್ಲಿ ಬಹಳಷ್ಟು ಜಾಗದಲ್ಲಿ ತೊಂದರೆಗಳಿವೆ. ಆದ್ದರಿಂದ, ಮಾನ್ಯ ಅಧ್ಯಕ್ಷರೆ ಮಧ್ಯ ಪ್ರವೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಇದು ಮುಗಿಯದ ಕತೆ ಇದು ವ್ಯಥೆಯಾಗಿಯೇ ಉಳಿದುಕೊಂಡಿದೆ. ದಯವಿಟ್ಟು ಇಂಥ ದಿವಸ ಮುಗಿಸುತ್ತೇವೆಂದು ಇದಕ್ಕೊಂದು ಡೆಡ್‌ಲೈನ್ ಕೊಡಿ. ಮತ್ತೆ ಏನು ತಪ್ಪುಗಳಿವೆ ಅವುಗಳನ್ನು ಸರಿಪಡಿತಕ್ಕಂಥ ಕೆಲಸ ಮಾಡಿ. ಇದನ್ನು ಗುತ್ತಿಗೆ ತೆಗೆದುಕೊಂಡಿರುವ ಐಎಎಸ್ ಅಧಿಕಾರಿ ಯಾರು ಇದ್ದಾರೆ ಅವರ ಹೆಸರನ್ನು ಸ್ವಲ್ಪ ಹೇಳುವುದು ಒಳ್ಳೆಯದು. ನಾವು ಯಾರಿಗೆ ಫೋನ್ ಮಾಡಿ ಕೇಳಿದರೂ ಸರಿಯಾದ ಉತ್ತರ ನಮಗೆ ಬರುತ್ತಿಲ್ಲ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಜಿಲ್ಲಾ ಮಟ್ಟದಲ್ಲಿನ ಅಧಿಕಾರಿಗಳಿಗೂ ಕೂಡ ಇದರ ಬಗ್ಗೆ ಕಾಳಜಿ ಇಲ್ಲ. ಪ್ರತಿ ಜನಸ್ಪಂದ ಕಾರ್ಯಕ್ರಮದಲ್ಲಿ ಇದು ಮುಖ್ಯವಾದ ವಿಷಯವಾಗಿದೆ. ಇದು ಜನರಿಗೆ ನೋವು ಕೊಡತಕ್ಕಂಥದ್ದಾಗಿದೆ. ಮತ್ತೆ ನೆಮ್ಮದಿ ಕೇಂದ್ರ ನೆಮ್ಮದಿಯನ್ನು ಹಾಳು ಮಾಡತಕ್ಕಂಥ ಕೇಂದ್ರವಾಗಿದೆ. ದಯವಿಟ್ಟು ಅದನ್ನು ತೆಗೆದರೆ ಒಳ್ಳೆಯದೆಂದು ನಮ್ಮ ಅಭಿಪ್ರಾಯವಾಗಿದೆ.

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರ ಕೊಡಲಿ. ಆನಂತರ ತಾವೆಲ್ಲಾ ಪ್ರಶ್ನೆ ಕೇಳಿ.

ಶ್ರೀ ಹೆಚ್.ಹಾಲಪ್ಪ : ಈಗಾಗಲೇ ಆಗಿರುವಂಥ ತಪ್ಪುಗಳನ್ನು ಸರಿಪಡಿಸುವುದಕ್ಕೆ ಕ್ರಮ ಕೈಗೊಂಡಿದ್ದೇವೆ. 123 ತಾಲ್ಲೂಕಿನಲ್ಲಿ ಒಂದು Back office ಎಂದು ಹೇಳಿ ಅಲ್ಲಿ ಖಾಯಂ ಆಗಿ ಒಂದು ಫೋಟೋಗ್ರಾಫಿ ಮತ್ತು ಕಂಪ್ಯೂಟರ್ ಅನ್ನು ಇಟ್ಟಿದ್ದೇವೆ. ವಯಸ್ಸು ಅಥವಾ ಫೊಟೋ ಅಥವಾ ಹೆಸರು ಹೆಚ್ಚು ಕಡಿಮೆಯಾಗಿದ್ದರೆ ಅಲ್ಲಿಗೆ ಹೋಗಿ ಸರಿಪಡಿಸಕೊಳ್ಳಬಹುದು. ಬಹಳಷ್ಟು ಬದಲಾವಣೆ ಆಗಿದೆ. ಉದಾಹರಣೆಗೆ ನನ್ನದೆ ಹೇಳುವುದಾದರೆ

ಹಾಲಪ್ಪ S/o ಆಮದ್ ಆಲಿಖಾನ್ ಮತ್ತೆ ಆಮದ್ ಆಲಿಖಾನ್ S/o ಕ್ರಿಸ್ಟೋಫರ್ ಜೋಸೆಫ್, ಕ್ರಿಸ್ಟೋಫರ್ ಜೋಸೆಫ್ S/o ವಿನಾಯಕ್ ಭಟ್, ವಿನಾಯಕ್ ಭಟ್ S/o ದೇವೇಗೌಡ ಎಂದು ಈ ರೀತಿಯಾಗಿವೆ.

ಶ್ರೀ ಕೆ. ಗೋಪಾಲ ಭಂಡಾರಿ : ಈ ರೀತಿಯಾದರೆ ತೊಂದರೆ ಇಲ್ಲ.

ಅಧ್ಯಕ್ಷರು : ಮಾನ್ಯ ಗೋಪಾಲ ಭಂಡಾರಿಯವರೆ, ಮಾನ್ಯ ಸಚಿವರು ಉತ್ತರ ಹೇಳುವುದಕ್ಕೆ ತಾವು ಬಿಡದಿದ್ದರೆ ಹೇಗೆ? ದಯವಿಟ್ಟು ಕುಳಿತುಕೊಳ್ಳಿ. ಸಮಸ್ಯೆ ಗಂಭೀರವಾಗಿದೆ, ಇದರ ಬಗ್ಗೆ ಉತ್ತರ ಹೇಳುತ್ತಿದ್ದಾರೆ. ಅವರು ಉತ್ತರ ಹೇಳಿದ ನಂತರ ತಾವು ಕೇಳಿ.

ಶ್ರೀ ಹೆಚ್.ಹಾಲಪ್ಪ : ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ಅಂಶವನ್ನು ಗಮನಿಸಿಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ಕೋಟಿ ಕುಟುಂಬಗಳ 3 ಕೋಟಿ 62 ಲಕ್ಷ ಜನರ ಫೋಟೋಗಳನ್ನು ಹಿಡಿಯಲಾಗಿದೆ. ಇಲ್ಲಿ 1% ತಪ್ಪಾದರೆ 3,62,000 ಜನರ ಫೋಟೋಗಳು ತಪ್ಪಾಗುತ್ತವೆ. 2% ಆದರೆ, ಸುಮಾರು 7 ಲಕ್ಷ ಜನರದು ಆಗುತ್ತದೆ. 7 ಲಕ್ಷ ಜನರದು ತಪ್ಪಾಗಿದ್ದರೆ ಇವರೆಲ್ಲರ ಕೂಗು ಸಹಜವಾಗಿ ದೊಡ್ಡ ಕೂಗಾಗಿ ಕೇಳಲ್ಪಡುತ್ತದೆ. ಇದು ನಿಜವಾಗಿದೆ. ಆದ್ದರಿಂದ, ಇಂಥ ತಪ್ಪುಗಳನ್ನು ಸರಿಪಡಿಸುವುದಕ್ಕೆ back office ಪ್ರಾರಂಭ ಮಾಡಿ ಮೊದಲನೇ ಹಂತದಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. ಅಲ್ಲಿ ಖಾಯಂ ಆಗಿ ಒಂದು ಕ್ಯಾಮರಾ ಮತ್ತು ಕಂಪ್ಯೂಟರ್ ಅನ್ನು ಅಳವಡಿಸಿದ್ದೇವೆ. ಈ ತಪ್ಪುಗಳನ್ನು ಸರಿಪಡಿಸಿದ ನಂತರ ತಹಶೀಲ್ದಾರ್ ವರಿಗೆ ಅಧಿಕಾರ ಕೊಟ್ಟು ಅವರ ಮೂಲಕ Verification ಮಾಡಿಸುವುದರ ಬಗ್ಗೆ ಮುಂದಿನ ತಿಂಗಳಿಂದ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡಿದೆ. 1,06,68,594 ಇತ್ತು. ಈಗ ಇದನ್ನು ಸ್ವಲ್ಪ ಕಡಿಮೆ ಮಾಡಿದ್ದೇವೆ. ಇಷ್ಟು ಕುಟುಂಬಗಳಿಗೆ ಕಾರ್ಡ್ ಕೊಟ್ಟರೂ ಕೂಡ ಇನ್ನು ಕೆಲವು ಕಡೆ ಸ್ವಲ್ಪ ಮಟ್ಟಿಗೆ ಬಿಟ್ಟು ಹೋಗಿದೆ. ಗ್ರಾಮ ಸಭೆಗೆ ಹೋದಾಗ ಕಾರ್ಡ್ ಕೊಟ್ಟಿಲ್ಲವೆಂದು ಐದಾರು ಜನ ಕೇಳುತ್ತಾರೆ. ನಾನು ಸಹ ಗ್ರಾಮ ಸಭೆಗೆ ಹೋಗಿದ್ದೇನೆ. ಅಲ್ಲಿ ಐದಾರು ಜನ ಕೇಳತಕ್ಕಂಥದ್ದು ದೊಡ್ಡ ಸುದ್ದಿಯಾಗುತ್ತದೆ. ಐದು ಜನರದು ಸಹ ಬಿಟ್ಟು ಹೋಗಬಾರದು. ಬಿಟ್ಟು ಹೋದಂಥವರಿಗೆ ಕೊಡುವುದಕ್ಕೆ ಮುಂದಿನ ತಿಂಗಳಿಂದ ಡಿ.ಸಿ.ಯವರಿಗೆ ಅಧಿಕಾರ ಕೊಟ್ಟರೆ ಸರಿಯಾಗ ಬಹುದೆಂಬ ಯೋಚನೆ ಸರ್ಕಾರಕ್ಕೆ ಇದೆ. ಮತ್ತೆ ಈ ರೀತಿಯಾಗಿ ತಪ್ಪುಗಳಾಗಿ ರುವುದು ಮತ್ತು ಬಿಟ್ಟು ಹೋಗಿರುವಂಥದ್ದು ಗಮನಕ್ಕೆ ಬಂದಿದೆ. ಮತ್ತೆ

ಅನೇಕ ಜನ ಅನುಕೂಲಸ್ಥರು ಸಹ ಕಾರ್ಡ್ ತೆಗೆದುಕೊಂಡಿರುವಂಥದ್ದು ಕೂಡ ಗಮನಕ್ಕೆ ಬಂದಿದೆ. ಇವರ ಹೆಸರುಗಳನ್ನು ತೆಗೆಯುವುದಕ್ಕೆ ಡಿ.ಸಿ.ಯವರು ಕ್ರಮ ತೆಗೆದುಕೊಳ್ಳುತ್ತಾರೆ. ಮತ್ತೆ ಬಿಟ್ಟು ಹೋಗಿರುವಂಥ ಬಡವರಿಗೆ ಕಾರ್ಡ್ ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಡಿ.ಸಿ.ಯವರಿಗೆ ಅಧಿಕಾರ ಕೊಟ್ಟರೆ ಎಂದು ಹೇಳಿದರು.

ಅಧ್ಯಕ್ಷರು : ಮಾನ್ಯ ಸಚಿವರು ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಕೊಡುತ್ತೇವೆಂದು ಹೇಳಿಲ್ಲ.

ಅಧ್ಯಕ್ಷರು : ಅವರು ಕೊಡುತ್ತೇವೆಂದು ಹೇಳಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ತಹಶೀಲ್ದಾರ್‌ಗಳಿಗೆ powers ಕೊಟ್ಟರೆ ಸಮಸ್ಯೆ ಪರಿಹಾರವಾಗುತ್ತದೆ.

(ಗೊಂದಲ)

ಶ್ರೀ ರಘುಪತಿಭಟ್ : ಇಲ್ಲದಿದ್ದವರಿಗೆ ಕೊಟ್ಟಿರುವುದು ಏನಾಗಿದೆ? Affidavit ಕೊಟ್ಟಿರುವವರದು ಏನಾಗಿದೆ? Affidavit ಕೊಟ್ಟಿರುವವರದನ್ನು reject ಮಾಡಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಇದರಿಂದ ಸಾಕಷ್ಟು ಅನುಭವವಾಗಿದೆ. ನಿಮ್ಮ concept ಒಳ್ಳೆಯದೆ. ನೀವು agency ಯನ್ನು ಮಾಡಿರುವುದು ತಪ್ಪು. Agency ಯ ಮೇಲೆ ತಾವು action ತೆಗೆದುಕೊಳ್ಳುವುದಕ್ಕೆ ನಿಮಗೆ ಏಕೆ ಧೈರ್ಯ ಬರುತ್ತಿಲ್ಲ. ಏನು ಎಂದು ಅರ್ಥವಾಗುತ್ತಿಲ್ಲ. ಮಾನ್ಯ ಮಂತ್ರಿಗಳಾದ ಸುರೇಶ್‌ಕುಮಾರ್‌ರವರಿಗೂ ಗೊತ್ತು, ಅಧಿಕಾರಿಗಳಿಗೂ ಗೊತ್ತು, ಮೊಳಕಾಲ್ಮೂರಿನಲ್ಲಿ ಯಾರೋ ಹೆಣ್ಣುಮಗಳನ್ನು ತೆಗೆದುಕೊಂಡು ಹೋಗಿ ಯಾರೋ ಹೆಂಡತಿಯೆಂದು ಮಾಡಿ ಇದರಿಂದ ಅವಾಂತರಗಳು ಆಗಿ ಹೋಗಿದೆ. ಆ ಕಾರ್ಡ್‌ನ್ನು ನೋಡಿಕೊಂಡು ನಮ್ಮ ಹೆಂಡತಿ ಇವರೆನಾ ಎಂದು ನಾವು ಹುಡುಕಿಕೊಳ್ಳಬೇಕು. ಆ ಮಟ್ಟಕ್ಕೆ ಆಗಿದೆ. Bio-Metric Card ಅದನ್ನಾದರೂ ಯಾವಾಗ ಕೊಡುತ್ತೀರಿ ಹೇಳಿ. ಇದನ್ನು ಯಾವತ್ತಿನಿಂದ Start ಮಾಡುತ್ತೀರಿ. ಈ ಗೊಂದಲವು ನಾನು ಹಾಗೂ ನೀವು ಇದ್ದಾಗಲೂ

ಕೂಡ ಇತ್ತು. ನಾನು ಇಲ್ಲದೆ ಇದ್ದಾಗಲೂ ಕೂಡ ಇದೆ. ಇದಕ್ಕೆ ತಾವು ಅಂತಿಮ ಹಾಡಬೇಕೆಂದರೆ, permanent cards ಅನ್ನು ಮೊದಲು verify ಮಾಡಿಕೊಡಿ. ಇದನ್ನು ಕೊಡುವುದಕ್ಕೆ ಹೋದ ತಿಂಗಳು ಶುರು ಮಾಡಿದರು, ಅಲ್ಲಿ ನೋಡೋಣವೆಂದು ಹೋದರೆ ಅದು ಇದಕ್ಕಿಂತಲೂ ಹೊಲಸು. ಅಲ್ಲಿ ಯಾರ ಹೆಂಡತಿಯನ್ನು ಯಾರಿಗೋ ಮಾಡಿದ್ದಾರೆಂಬುದನ್ನು ನಾವು ನೋಡುತ್ತಿದ್ದೇವೆ. ದಯಮಾಡಿ ಇದಕ್ಕೆ ಒಂದು higher level ನಲ್ಲಿ ಯೋಚನೆ ಮಾಡಿ ತೀರ್ಮಾನವನ್ನು ಮಾಡಬೇಕಾಗುತ್ತದೆ. ದಯಮಾಡಿ ಆ Comat ನವರನ್ನು ಜೈಲಿಗೆ ಕಳುಹಿಸಿ.

ಅಧ್ಯಕ್ಷರು : ಈಗ ತಪ್ಪಿರುವುದು ಎಲ್ಲರಿಗೂ ಗೊತ್ತಿದೆ. ಅದನ್ನು ಸರಿಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತಾರೆ. ಇದನ್ನು ಎಲ್ಲರೂ ಕೇಳಿದ್ದಾರೆ ಮತ್ತೆ ಮತ್ತೇ ಕೇಳುವುದು ಬೇಡ ಅದು ಎಲ್ಲರಿಗೂ ಗೊತ್ತಿದೆ. ಅದರಲ್ಲಿ ಸಾಕಷ್ಟು ತಪ್ಪುಗಳಿದೆ ಅದನ್ನು ಸರಿಮಾಡುತ್ತೇನೆಂದು ಹೇಳಿದ್ದಾರೆ. Please, ಇದನ್ನು ಮುಕ್ತಾಯ ಮಾಡೋಣ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಒಂದು ಕಾರ್ಡ್‌ನ್ನು ಮಾಡುವುದಕ್ಕೆ 60.00 ರೂಪಾಯಿಗಳು ತಗಲುತ್ತದೆ. ಹಿಂದೆ ಇದು ಪ್ರಾರಂಭವಾಗಿ 5 ವರ್ಷಗಳು ಆಯಿತು. ಹಿಂದೆ ಅಂದರೆ ಶ್ರೀ ಮಹದೇವಪ್ಪ ನವರು Food Minister ಆದ ದಿವಸದಿಂದ, ನಂತರ ಕಾರಜೋಳರವರದು ಆಯಿತು. ಈಗ ಹಾಲಪ್ಪನವರ ಸರದಿ ಆಯಿತು. ಇದನ್ನು ಮಾಡುವುದಕ್ಕೆ 5 ವರ್ಷ ಬೇಕೆ ಸ್ವಾಮಿ? ಹಿಂದೆ ಮಾಹಾತ್ಮಾಗಾಂಧಿ ಕಾರ್ಡ್‌ನ್ನು ಅವರ ಫೋಟೋವನ್ನು ಹಾಕಿ ತಹಶೀಲ್ದಾರ್ ಹಾಗೂ ಡಿ.ಸಿ.ಯವರಿಗೆ ಅಧಿಕಾರವನ್ನು ಕೊಟ್ಟು 0.50 ಪೈಸೆಯಲ್ಲಿ ಕಾರ್ಡುನ್ನು ಕೊಡುತ್ತಿದ್ದನ್ನು ಇದನ್ನು 60.00 ರೂಪಾಯಿ ಮಾಡಿದ್ದಾರೆ. ಇದರಲ್ಲಿ ಎಷ್ಟು ಕೋಟಿ ಅವ್ಯವಹಾರಗಳು ಆಗಿದೆ ಎಂಬುದರ ಬಗ್ಗೆ ದಯಮಾಡಿ ತನಿಖೆಯನ್ನು ಮಾಡಿಸಬೇಕು. ಏಕೆಂದರೆ, ಮಹಾತ್ಮಗಾಂಧಿ ಕಾರ್ಡ್‌ನ್ನು ...

ಶ್ರೀ ಹಾಲಪ್ಪ : ಇದರಲ್ಲಿ ಅವ್ಯವಹಾರಗಳು ಆಗಿರುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಹಾಲಪ್ಪನವರೆ, ಹಿಂದೆ ಮಾಡಿರುವ ಕಳ್ಳತನಕ್ಕೆ ನೀವು ಏಕೆ ಭಾಗಿಯಾಗುತ್ತೀರಿ? ಏಕೆ ಮಾತನಾಡುತ್ತೀರಿ. ಇದರ ಬಗ್ಗೆ enquiry ಮಾಡುತ್ತೇವೆಂದು ಹೇಳಿ. ಒಂದು ಕಾರ್ಡ್‌ನ್ನು ಮಾಡುವುದಕ್ಕೆ

60.00 ರೂಪಾಯಿಗಳು ಬೇಕೇ? ತಹಶೀಲ್ದಾರ್ ಹಾಗೂ ಡಿ.ಸಿ. ಯವರಿಗೆ ಅಧಿಕಾರವನ್ನು ಕೊಡಿ ಅವರು 15 ದಿವಸಗಳಲ್ಲಿ ಮಾಡುತ್ತಾರೆ.

ಅಧ್ಯಕ್ಷರು : ಆಯಿತು. ಮಾನ್ಯ ಸಚಿವರೆ, ಸಾಕಷ್ಟು ಎಲ್ಲರೂ ಕೇಳಿದ್ದಾರೆ. ತಾವು ಉತ್ತರವನ್ನು ಹೇಳಿ.

ಶ್ರೀ ಎನ್.ಎ.ಹ್ಯಾರೀಸ್ : ಮಾನ್ಯ ಅಧ್ಯಕ್ಷರೆ, ಚುನಾವಣೆಯನ್ನು ಮುಂದಿಟ್ಟುಕೊಂಡು ತಾವು ಈ ತಿಂಗಳು start ಮಾಡಿದ್ದೀರಾ ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಜಿಲ್ಲಾ ಪಂಚಾಯಿತಿಯ ಚುನಾವಣೆ ಇದೆ, Corporation Election ಇದೆ. ಗ್ರಾಮಪಂಚಾಯಿತಿ ಮತ್ತು Bangalore Corporation Election ಇದನ್ನು ತಾವು ಮುಂದಿಟ್ಟುಕೊಂಡು ಕೇವಲ ಒಂದೇ ತಿಂಗಳಿಗೆ ನೀವು ಅಕ್ಕಿಯನ್ನು ಕೊಡುತ್ತೀರಾ? ಇಲ್ಲ ಈ scheme permanent ಆಗಿ ಅಕ್ಕಿಕೊಡುವಂತಹ scheme? ಇದಕ್ಕಿಂತಲೂ ತಾವು ಮೊದಲು ಅಕ್ಕಿಸಂತೆಯೆಂದು ಮಾಡಿದ್ದೀರಿ. ಅದರ ಬಗ್ಗೆ ಮಾಹಿತಿ ಯಾರಿಗೂ ಸಿಕ್ಕಿಲ್ಲ. ಇವತ್ತು ಅಕ್ಕಿಯು 17.00 ರೂಪಾಯಿಗಳಿಗೆ ಸಿಗುತ್ತಿದೆ, ಜನರು ಒಳ್ಳೆಯ ಅಕ್ಕಿಯಿದ್ದರೆ ಅದನ್ನು ತೆಗೆದುಕೊಳ್ಳುತ್ತಾರೆ. ನೀವು ಯಾವ ತರಹ ಹೋದ Parliament ಚುನಾವಣೆಯಲ್ಲಿ ಒಂದು temporary card ನ್ನು ತಾವು release ಮಾಡಿದ್ದೀರಿ. ಅದೇ ರೀತಿಯಾಗಿ ತಾವು ಚುನಾವಣೆಯನ್ನು ಮುಂದಿಟ್ಟುಕೊಂಡು ಮಾಡುತ್ತಿದ್ದೀರಾ? ಇಲ್ಲ ಇದು ಮುಂದೆ continue ಮಾಡಿ ಕೊಡುತ್ತೀರಾ ಎಂದು ತಾವು ದಯವಿಟ್ಟು ಹೇಳಬೇಕು.

ಅಧ್ಯಕ್ಷರು : ಆಯಿತು.

ಶ್ರೀ ಹಾಲಪ್ಪ : ಈ ಅಕ್ಕಿಯನ್ನು ಕೊಡುವಂತಹದ್ದು 16.00 ರೂಪಾಯಿ ಮತ್ತು 16.50 ರೂಪಾಯಿಗೆ ಕೊಡುವಂತಹದ್ದು OMSS ಎಂದು Open Market Sales Scheme ಎಂದು ಇದರಲ್ಲಿ ಕೇಂದ್ರ ಸರ್ಕಾರವು ಸ್ವಲ್ಪ ಅಕ್ಕಿಯನ್ನು ಕೊಡುತ್ತದೆ. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಅಕ್ಕಿ ದರಗಳು ಬಹಳಷ್ಟು ಹೆಚ್ಚಿದ್ದರಿಂದ ಇಡೀ ದೇಶಾದ್ಯಂತ ಅದನ್ನು ಬಿಡುಗಡೆ ಮಾಡಿದರು. ನಮ್ಮ ರಾಜ್ಯದಲ್ಲೂ ಕೂಡ ಅಕ್ಕಿಯ ಬೆಲೆಯು ಜಾಸ್ತಿಯಾಗಿದೆ. ಆ ಸಂದರ್ಭದಲ್ಲಿ ನಮ್ಮ ರಾಜ್ಯಕ್ಕೂ ಬಂತು, ನಾವು ಕೂಡ ನಮ್ಮ ರಾಜ್ಯಕ್ಕೆ ಕೊಡಿ ಎಂದು ಒತ್ತಾಯವನ್ನು ಸಹ ಮಾಡಿದೆವು. ಆ ಸಂದರ್ಭದಲ್ಲಿ ಅಕ್ಕಿಯನ್ನು

ತರಿಸಿಕೊಂಡು ಬಿಡುಗಡೆ ಮಾಡಿದೆವು. ಯಾವಾಗ ಮಾರ್ಕೆಟ್‌ನಲ್ಲಿ ಅಕ್ಕಿಯ ರೇಟ್ ಜಾಸ್ತಿಯಾಗುತ್ತದೆ ಅಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರವು open market ಗದೆ ಬಂದು ಅಕ್ಕಿಯನ್ನು ಹೆಚ್ಚು ಬಿಡುಗಡೆ ಮಾಡಿ ಧಾರಣೆಗಳನ್ನು ಕಡಿಮೆ ಮಾಡುವಂತಹದ್ದು. ಇದು ಏಕಾಯಿತು ಎಂದರೆ, ಬಡವರು ಊಟ ಮಾಡುವಂತಹ ಅಕ್ಕಿಯ ರೇಟ್ 21.00 ರಿಂದ 22.00 ರೂಪಾಯಿಗಳಿಗೆ ಏರಿತ್ತು. ಆಗ ನಾವು ಅಕ್ಕಿಯ ಸಂತೆಯನ್ನು 22.00 ರೂಪಾಯಿಗಳಿಗೆ ಪ್ರಾರಂಭ ಮಾಡಿದೆವು. ಆಗ ಸ್ವಲ್ಪ ಕಡಿಮೆ ರೇಟ್‌ಗೆ ಬಂತು, ಅಕ್ಕಿ ಸಂತೆಯನ್ನು ಮಾಡುವುದರಲ್ಲಿ ಸರ್ಕಾರಕ್ಕೆ ಯಾವುದೇ ಖರ್ಚು ವೆಚ್ಚ ಇರುವುದಿಲ್ಲ. ಉತ್ಪಾದಕರಿಂದ ಗ್ರಾಹಕರಿಗೆ ಎಂದು ಹೇಳಿ ನಾವು co-ordinate ಮಾಡುವುದು ಅಷ್ಟೆ. ಅದಾದ ಮೇಲೂ ಕೂಡ open market ನಲ್ಲಿ ಎರಡು–ಮೂರು ರೂಪಾಯಿಗಳು ಕಡಿಮೆಯಾಯಿತು ಎಂದು ಒಂದು ಅಂದಾಜು. ಅದು ಆದ ಮೇಲೆ 17.00 ರೂಪಾಯಿಗಳಿಗೆ ಅಕ್ಕಿಯನ್ನು ಕೊಡುತ್ತೇವೆಂದಾಗ 16.50 ರೂಗಳಿಗೆ ಮೈಸೂರಿನಲ್ಲಿ ಕೊಡುತ್ತೇವೆಂದು ಅಲ್ಲಿ ಒಂದು ಸೊಸೈಟಿಯವರು ಮತ್ತು ವ್ಯಾಪಾರಸ್ಥರೆಲ್ಲರೂ ಸೇರಿ announce ಮಾಡಿದರು. ಆಮೇಲೆ ನಾವು 16.50 ರೂಪಾಯಿಗಳಿಗೆ ಕೊಡುತ್ತೇವೆಂದಾಗ ನಾವು 14.50 ರೂಪಾಯಿಗಳಿಗೆ ಅಕ್ಕಿಯನ್ನು ಕೊಡುತ್ತೇವೆಂದು ಮೈಸೂರಿನಲ್ಲಿ ಪ್ರಾರಂಭ ಮಾಡಿದರು. ಹೀಗೆ ಮಾರ್ಕೆಟ್‌ನಲ್ಲಿ ನಮಗೆ ವ್ಯಾಪಾರ ಮಾಡುವುದು ನಮ್ಮ ಉದ್ದೇಶವಲ್ಲ. ಇದರಲ್ಲಿ ನಾವು ಯಾವುದೇ ಸಬ್ಸಿಡಿಯನ್ನು ಕೊಡುವುದಿಲ್ಲ ಲಾಭವನ್ನು ಸಹ ಮಾಡಿಕೊಳ್ಳುವುದಿಲ್ಲ. ಬೆಲೆಯನ್ನು ಕಡಿಮೆ ಮಾಡುವುದು. ಅಕ್ಕಿಯು ಮಾರ್ಕೆಟ್‌ನಲ್ಲಿ ಜಾಸ್ತಿ ಬಿಡುಗಡೆಯಾದಾಗ ರೇಟ್ ಕಡಿಮೆಯಾಗಲಿ ಎನ್ನುವ ಉದ್ದೇಶದಿಂದ ಮಾಡುವುದು. ಇದನ್ನು ನಾವು ಮುಂದುವರೆಸುತ್ತೇವೆ ಕೇಂದ್ರ ಸರ್ಕಾರದ ಸಹಕಾರದೊಂದಿಗೆ ಅವರು ನಮಗೆ ಎಷ್ಟು ಸಹಕಾರವನ್ನು ಕೊಡುತ್ತಾರೋ ಅದರ ಮೇಲೆ ನಾವು ಇದನ್ನು ಮುಂದುವರೆಸುತ್ತೇವೆ. ಇದಕ್ಕೂ ಚುನಾವಣೆಗೂ ಯಾವುದೇ ಸಂಬಂಧವಿರುವುದಿಲ್ಲ. ಬಡವರು ಊಟ ಮಾಡುವ ಅಕ್ಕಿಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ.

ಅಧ್ಯಕ್ಷರು : ಮಾನ್ಯ ಯು.ಟಿ.ಖಾದರ್‌ರವರೆ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಎನ್.ಎ.ಹ್ಯಾರೀಶ್ : OM ನಲ್ಲಿ ಎಷ್ಟು quantity ಅಕ್ಕಿ ಬಂದಿದೆ ಎಂದು ಹೇಳಿರಿ?

ಶ್ರೀಮತಿ ಮಲ್ಲಿಕಾ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿಯೂ ಸಹ ಇದೇ ಸಮಸ್ಯೆಯನ್ನು ನಾವು ಸುಮಾರು ಒಂದೂವರೆ ವರ್ಷದಿಂದ ನೋಡುತ್ತಿದ್ದೇವೆ. ಎಪಿಎಲ್ ಮತ್ತು ಬಿಪಿಎಲ್ ಕಾರ್ಡಿನ ಗೊಂದಲದ ನಡುವೆ ಇದರಲ್ಲಿ ಕೆಲವರು ಕಾರ್ಡುಗಳು ಇರುವುದಿಲ್ಲ. ಕೆಲವರಿಗೆ ಸೀಮೆಎಣ್ಣೆಯೂ ಸಿಗುತ್ತಿಲ್ಲ. ಅವರುಗಳು ದಿನಾ ಬಂದು ನಮ್ಮ ಆಫೀಸಿನಲ್ಲಿ ಗಲಾಟೆಯನ್ನು ಮಾಡುತ್ತಿದ್ದಾರೆ. ಇದನ್ನು ಆದಷ್ಟು ಬೇಗ ಸನ್ಮಾನ್ಯ ಅಧ್ಯಕ್ಷರು ಮಧ್ಯ ಪ್ರವೇಶ ಮಾಡಿ ಇದನ್ನು ಸರಿ ಮಾಡಿಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ.ರಾಜು : ಇವರು ಬಿಪಿಎಲ್ ಕಾರ್ಡ್‌ನ್ನು ಕೊಡುವುದಿಲ್ಲವೆಂದು ಹೇಳುತ್ತಾರೆ. ಹಳ್ಳಿಗಳಲ್ಲಿ ಯಾರಾದರೂ ಒಂದು ಆರ್‌ಸಿಸಿ ಚದರ ಮನೆಯು ಇದ್ದರೂ ಕೂಡ ಅವರಿಗೆ ಕೊಡಬಾರದು ಎಂದು policy ಮಾಡಿದ್ದಾರೆ. ದಯಮಾಡಿ ಅದನ್ನು ಸಡಿಲಗೊಳಿಸಬೇಕು. ಇದರ ಜೊತೆಗೆ ಯಾವುದೋ ಒಂದು ಎರಡು ಚಕ್ರದ ಗಾಡಿ 5000.00 ರೂಪಾಯಿನದು ಅದು ಇದ್ದರೂ ಕೂಡ ಅವರಿಗೆ ಬಿಪಿಎಲ್ ಕಾರ್ಡ್ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ದಯಮಾಡಿ ಈ ಮಾನದಂಡವನ್ನು ಬದಲಾಯಿಸಬೇಕೆಂದು ನಾನು ತಮ್ಮಲ್ಲಿ ಕೇಳುತ್ತೇನೆ.

ಶ್ರೀ ಎ.ಎಸ್.ಪಾಟೀಲ್ ನಡಹಳ್ಳಿ : ತಹಶೀಲ್ದಾರ್‌ರವರಿಗೆ ತಕ್ಷಣ ಆರ್ಡರ್ಸ್‌ನ್ನು ಕೊಡುವುದಕ್ಕೆ ಹೇಳಿ. ತಹಶಿಲ್ದಾರ್‌ರವರಿಗೆ ಈಗ ಪವರ್ಸ್ ಇರುವುದಿಲ್ಲ. ಎಲ್ಲೆಲ್ಲಿ ಅನ್ಯಾಯವಾಗಿದೆ ಅದನ್ನು ಸರಿಪಡಿಸಿಕೊಡುವಂತೆ ತಹಶೀಲ್ದಾರ್‌ರವರಿಗೆ ತಾವು ಆದೇಶವನ್ನು ಮಾಡಿ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

ಶ್ರೀಮತಿ ಸೀಮಾ ಅಶೋಕ ಮಸೂತಿ : ಮಾನ್ಯ ಅಧ್ಯಕ್ಷರೆ, ಅವರು ತಕ್ಷಣ ನೆಮ್ಮದಿ ಕೇಂದ್ರಕ್ಕೆ ಹೋಗಿ ನಿಮ್ಮ ಕಾರ್ಡುಗಳನ್ನು ತೆಗೆದುಕೊಳ್ಳಿ ಎಂದು ಹೇಳಿದಾಗ ಅವರು ಅಲ್ಲಿಹೋಗಿ ತೆಗೆದುಕೊಂಡರು. ಮೊನ್ನೆ ಎಲ್ಲರೂ ಕೂಡ ಯಾರಿಗೆ ಕಾರ್ಡುಗಳು ಇಲ್ಲ ಎಲ್ಲರೂ ಕೂಡ ಕಾರ್ಡುಗಳನ್ನು ತೆಗೆದುಕೊಳ್ಳಬಹುದು ಎಂದು ಹೇಳಿದಾಗ, ಅಲ್ಲಿ ರಾತ್ರಿ–ಹಗಲು ಕ್ಯೂ ಹಚ್ಚಿ ಕಾರ್ಡುಗಳನ್ನು ತೆಗೆದುಕೊಂಡಿದ್ದಾರೆ. ನಿಜವಾದ ಬಡವರಿಗೆ ಆ ಕಾರ್ಡುಗಳು

ಹೋಗಿ ಮುಟ್ಟಿರುವುದಿಲ್ಲ. ಏಕೆಂದರೆ, ಅದನ್ನು ನೆಮ್ಮದಿ ಕೇಂದ್ರದಿಂದ ಕಾರ್ಡ್‌ನ್ನು ತೆಗೆದುಕೊಂಡಿದ್ದಾರೆ ಮೇಡಂ, ಹಿಂದೆ ಅವರಿಗೆ ಕಾರ್ಡು ಇತ್ತು, ನೆಮ್ಮದಿ ಕೇಂದ್ರದಿಂದ ತೆಗೆದುಕೊಂಡಿದ್ದಾರೆ, ಮೊನ್ನೆಯು ಕೂಡ ತೆಗೆದುಕೊಂಡಿದ್ದಾರೆ. ಅವರಿಗೆ ಮೂರು ಕಾರ್ಡುಗಳಾಗಿರುವುದರಿಂದ ಅದನ್ನು ಕ್ಯಾನ್ಸಲ್ ಮಾಡಿದ್ದಾರೆ. ಈ ಕಾರ್ಡು ನಿಜವಾದ ಬಡವರದು ಕ್ಯಾನ್ಸಲ್ ಆಗಿದೆ. ಈ permanent card ಏನು ಕೊಡುತ್ತಿದ್ದಾರೆ. ಇದು ನಿಜವಾಗಿಯೂ ಬಡವರಿಗೆ ಹೋಗುತ್ತಿಲ್ಲ. ಅದನ್ನು ಪೂರ್ಣವಾಗಿ ಕೊಡಲಿ ಅದನ್ನು ನಾನು ಬೇಡವೆಂದು ಹೇಳುವುದಿಲ್ಲ. permanent card ನ್ನು ಕೊಟ್ಟಮೇಲೆ ಸಾಕಷ್ಟು ಜನ ಬಡವರು ಇದ್ದಾರೆ. ಅದು ಅವರಿಗೆ ಮುಟ್ಟುವಂತಹ ಕೆಲಸಗಳು ಆಗಬೇಕು. ಸಾಮಾನ್ಯವಾಗಿ ಇದು ಮಹಿಳೆಯರಿಗೆ ಮತ್ತು ಅಡಿಗೆ ಮನೆಗೆ ಇದರಿಂದ ಇಕ್ಕಟ್ಟಾಗುವಂತಹ ಪರಿಸ್ಥಿತಿ ಇದೆ. ಕಾರ್ಡುನಿಂದ ರೇಷನ್‌ನಿಂದ ಅಲ್ಲಿ ಕಲಿಯುವಂತಹ ಮಕ್ಕಳಿಗೆ ಆಗುವಂತಹ ನೇರವಾಗಿ ಮಹಿಳೆಯರಿಗೆ ತಟ್ಟುವಂತಹ ಓಂದು ನೋವಾಗಿದೆ. ಅದಕ್ಕಾಗಿ ಇದನ್ನು ಆದಷ್ಟು ಬೇಗನೆ ಸರಳೀಕರಣಗೊಳಿಸಿ ನಮ್ಮ ಈ ಸದನದ ಒಂದು ಎಲ್ಲಾ ಸದಸ್ಯರ ಒಂದು ಅಭಿಪ್ರಾಯದ ಮೇರೆಗೆ ಇನ್ನು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟರು ಅದು ಕಡಿಮೆ ಇಲ್ಲ. ಮಾನ್ಯ ಅಧ್ಯಕ್ಷರು ತಾವು ಮಧ್ಯ ಪ್ರವೇಶ ಮಾಡಿ ಆದಷ್ಟು ಸರಳೀಕರಣಗೊಳಿಸಿ ಎಲ್ಲಾ ಬಡವರಿಗೂ ಸಹಿತ ಬಿಪಿಎಲ್ ಕಾರ್ಡು ಸಿಗುವಂತಹ ವ್ಯವಸ್ಥೆಯನ್ನು ಮಾಡಬೇಕೆಂಬ ಮನವಿ ನನ್ನದಾಗಿದೆ.

ಅಧ್ಯಕ್ಷರು : ಈ ಸಮಸ್ಯೆಯು ಬಹಳ ಗಂಭೀರವಾಗಿ ಮಾನ್ಯ ಸಚಿವರು ಉತ್ತರವನ್ನು ಹೇಳಿ.

(ಗೊಂದಲ)

ಶ್ರೀ ಹೆಚ್. ಹಾಲಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ರಾಜುರವರು ಈ ಬಗ್ಗೆ ಹೇಳಿದರು. ಈ Criteria, ಯಾರ ಅರ್ಹರೆಂದು ಈ norms ನ್ನು fix ಮಾಡುವುದು. ಈ ಅರ್ಹತೆಯನ್ನು fix ಮಾಡುವಂತಹದ್ದು, ಕೇಂದ್ರ ಸರ್ಕಾರದವರು ಆದರೆ ಅವರ ಪ್ರಕಾರ ಅದನ್ನು ಮಾಡುವುದಕ್ಕೆ ಬರುವುದಿಲ್ಲ. ಹಳ್ಳಿಗಾಡಿನಲ್ಲಿ 12,000 ರೂಪಾಯಿಗಳು ಯಾರಿಗೆ ಆದಾಯವಿದೆ. ಅದಕ್ಕಿಂತ ಕಡಿಮೆ ಇದ್ದವರಿಗೆ ಕೊಡಬೇಕೆಂದು ಇದೆ. ಕೇಂದ್ರ ಸರ್ಕಾರದವರು ಮತ್ತು ಯೋಜನಾ ಆಯೋಗದವರು fix

ಮಾಡಿರುವುದು ಈ ರಾಜ್ಯದಲ್ಲಿ 31,29,000 ಜನರಿಗೆ ಮಾತ್ರ. ನಾವು 1 ಕೋಟಿ ಜನರಿಗೆ ಕೊಟ್ಟಿದ್ದೇವೆ. ಅದರಲ್ಲಿಯೂ ಕೆಲವರದು ಬಿಟ್ಟುಹೋಗಿದೆ ಎಂದರೆ ಮುಂದಿನ ತಿಂಗಳಿನಿಂದ ಡಿ.ಸಿ.ಗಳಿಗೆ ಅಧಿಕಾರವನ್ನು ಕೊಡುತ್ತೇವೆ. ಅದನ್ನು ಸರಿಪಡಿಸುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸಹೋದರಿಯರು ಕೇಳಿದ್ದಾರೆ. ಅವರು ಕಾರ್ಡುಗಳು ಬಿಟ್ಟುಹೋಗಿದೆ ಎಂದು ಪದೆ ಪದೆ ಅದನ್ನೆ ಕೇಳುತ್ತಿದ್ದಾರೆ. ಡಿ.ಸಿ.ಯವರಿಗೆ ಅಧಿಕಾರವನ್ನು ಕೊಡುವುದರ ಮೂಲಕ ತಹಶೀಲ್ದಾರ್‌ರವರು ಅದನ್ನು verification ಮಾಡಿ ಮುಂದಿನ ದಿನಗಳಲ್ಲಿ ಬಿಟ್ಟುಹೋದವರಿಗೆ ಕಾರ್ಡನ್ನು ಕೊಡುತ್ತೇವೆ.

(11- AM)

ಅಧ್ಯಕ್ಷರು : ಮಾನ್ಯ ಯು.ಟಿ. ಖಾದರ್‌ರವರೆ ಪ್ರಶ್ನೆಯನ್ನು ಕೇಳಿ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ : ಇದು ಕೇವಲ ನಗರಕ್ಕೆ ಮಾತ್ರ ಸೀಮಿತವಲ್ಲ.

ಅಧ್ಯಕ್ಷರು : ಆಯಿತು.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ, ಶ್ರೀ ಎನ್.ಎ.ಹ್ಯಾರೀಶ್, ಕಿಮ್ಮನೆ ರತ್ನಾಕರ್‌ರವರು ಸದನದ ಬಾವಿಗೆ ಬಂದು ಮಾತನಾಡುತ್ತಿದ್ದರು)

ಅಧ್ಯಕ್ಷರು : ತಾವುಗಳು ತಮ್ಮ ಸೀಟಿಗೆ ಹೋಗದೆ ಈ ರೀತಿ ತಾವುಗಳು ಮಾಡಿದರೆ ನಿಮ್ಮ ಹೆಸರುಗಳನ್ನು ನಾನು ಹೇಳಬೇಕಾಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಸನ್ಮಾನ್ಯ ಅಧ್ಯಕ್ಷರೆ, ಇದು ಬಹಳ ಅತಿಯಾಯಿತು. Starred question ನಲ್ಲಿ.....

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು)

ಅಧ್ಯಕ್ಷರು : ತಾವು ಅಲ್ಲಿ ನಿಂತುಕೊಂಡು ಮಾತನಾಡಬೇಡಿ. don't talk. . . ಇದು ಬಹಳ ಅತಿಯಾಯಿತು. I will name both of them.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, question hour ನಲ್ಲಿ ಈ ರೀತಿಯಾಗಿ ವೆಲ್‌ಗೆ ಬರುವುದು ಸಂಪ್ರದಾಯವೇ?

ಅಧ್ಯಕ್ಷರು : ತಾವು ಮೂವ್ ಮಾಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಸಮಸ್ಯೆ ಏನು ಇದೆ ಅವರ ಬಗ್ಗೆ ಕೇಳಿದ್ದೀರಿ, ಅದಕ್ಕೆ ಉತ್ತರವನ್ನು ಕೊಡಬೇಕು. ಇದು ಒಳ್ಳೆಯ ಸಂಪ್ರದಾಯವಲ್ಲ.

ಅಧ್ಯಕ್ಷರು : ಅವರ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ವೆಲ್‌ನಲ್ಲಿ ನಿಂತುಕೊಂಡು ಏಕೆ ಮಾತನಾಡುತ್ತೀರಿ? ನೀವು ಹೇಳಿದ ಹಾಗೆ ಉತ್ತರದಲ್ಲಿ ಕೊಡಬೇಕೆಂದು ಏನು ಇಲ್ಲ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಪಾಟೀಲ್‌ರವರೆ, ಬಾವಿಯಲ್ಲಿ ನಿಂತುಕೊಂಡು ಮಾತನಾಡುವುದಕ್ಕೆ ಬರುವುದಿಲ್ಲ.

(ಈ ಹಂತದಲ್ಲಿ ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಅಧ್ಯಕ್ಷರು : ಏನು ಅಲ್ಲಿಂದ ಮಾತನಾಡುತ್ತೀರಿ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಒಂದು ಕೆಲಸವನ್ನು ಮಾಡೋಣ. ಈ ಒಂದು ಪ್ರಶ್ನೆಯ ಬಗ್ಗೆ ಸಾಕಷ್ಟು ಜನರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಏನು ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅದು ಇನ್ನು ಕೂಡ ವಿಸ್ತಾರವಾಗಿ ಬೇಕೆಂದರೆ, ದಯವಿಟ್ಟು ಅರ್ಧಗಂಟೆಗಳ ಕಾಲ ಚರ್ಚೆಮಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು : ಆಯಿತು..

ಶ್ರೀ ಟಿ.ಬಿ. ಜಯಚಂದ್ರ : ದಿನವಿಡಿ ಎಂದು ಮಾಡಿದರೂ ಕೂಡ ಅದು ಒಳ್ಳೆಯದು.

ಅಧ್ಯಕ್ಷರು : ಬಾವಿಯೊಳಗಡೆ ನಿಂತುಕೊಂಡು ಮಾತನಾಡಬೇಡಿ. This is not fare. ಸ್ವಲ್ಪ decency ಕಲಿತುಕೊಳ್ಳಿ. ಬಾವಿಯೊಳಗಡೆ ಏನು ಬೇಕಾದರೂ ಮಾತನಾಡಬಹುದು ಅಂತ ಅಲ್ಲ. ತಾವು ಒಬ್ಬರು ಸದಸ್ಯರು ಇದ್ದೀರಿ. please ಕುಳಿತುಕೊಳ್ಳಿ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಸದಸ್ಯರಗಳು ತಮ್ಮ ಸ್ಥಾನಗಳಿಗೆ ತೆರಳಿದರು)

ಮಂಗಳೂರು ಬಂದರಿನಲ್ಲಿ ಹೂಳನ್ನು ತೆಗೆಯುವುದು

69 (992) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಬಂದರಿನಲ್ಲಿ ಹೂಳು ತುಂಬಿರುವುದರಿಂದ ಹಡಗುಗಳ ಸಂಚಾರಕ್ಕೆ ಮತ್ತು ಮೀನುಗಾರರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೂಳನ್ನು ತೆಗೆಯಲು ಯಾವ ಕ್ರಮ ಕೈಗೊಳ್ಳಲಾಗಿದೆ. ಇದಕ್ಕಾಗಿ ಈ ಸಾಲಿನಲ್ಲಿ ಹಣವನ್ನು ಮೀಸಲಿರಿಸ ಲಾಗಿದೆಯೇ?

ಶ್ರೀ ಜೆ. ಕೃಷ್ಣ ಪಾಲೇಮಾರ್ (ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು) :

ಅ) ಹೌದು.

ಆ) ಮಂಗಳೂರು ಬಂದರಿನ ನಾರ್ತ್ ವಾರ್ಫ್, ಸೆಂಟರ್ ವಾರ್ಫ್, ಸೌತ್ ವಾರ್ಫ್, ಫಿಶರೀಸ್ ವಾರ್ಫ್ ಮತ್ತು ಚಾನಲ್ ಹಾಗೂ ಹ್ಯೊಗೆ ಬಜಾರ್ ಕ್ರೀಕ್ ಪ್ರದೇಶದಲ್ಲಿ ಸುಮಾರು 5,61,832.00 ಘ.ಮೀ.ನಷ್ಟು ಹೂಳೆತ್ತುವ ಬಗ್ಗೆ ರೂ. 1098.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಆದರೆ ಅನುದಾನದ ಅಭಾವದಿಂದಾಗಿ ಅತ್ಯಗತ್ಯವಾಗಿ ಮೀನುಗಾರಿಕೆ ಜೆಟ್ಟಿ ಮುಂಭಾಗದ ಪ್ರದೇಶದಲ್ಲಿ ಮಾತ್ರ ಹೂಳೆತ್ತಲು ರೂ. 185.00 ಲಕ್ಷಗಳ ಅಂದಾಜುಪಟ್ಟಿಗೆ ದಿನಾಂಕ: 13.8.2007 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು. ಅದರಂತೆ ಸದರಿ ಕಾಮಗಾರಿಯನ್ನು ದಿನಾಂಕ: 15.5.2009 ರಂದು ಪೂರ್ಣಗೊಳಿಸಿದೆ.

ಈ ಸಾಲಿನಲ್ಲಿ ಹೂಳೆತ್ತುವ ಕಾಮಗಾರಿಗೆ ಹಣವನ್ನು ಮೀಸಲಿರಿಸಲಾಗಿಲ್ಲ.

ಶ್ರೀ ಯು.ಟಿ.ಖಾದರ್ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ನೋಡಿದ ತಕ್ಷಣ ದಕ್ಷಿಣ ಕನ್ನಡ ಜಿಲ್ಲೆಯವರು ಏತನೀರಾವರಿಯನ್ನು ಕೊಡಿ, ಬ್ಯಾರೇಜನ್ನು ಕೊಡಿ, ಇನ್ನಿತರ ಸಾವಿರಾರು ಕೋಟಿ ರೂಪಾಯಿಗಳ ಅನುದಾನವನ್ನು ಕೇಳುವುದಿಲ್ಲ. ಬಹುಶಃ ನಮ್ಮ ಜಿಲ್ಲೆಯವರು ಮೀನುಗಾರಿಕೆಯಿಂದ ಅಥವಾ ಬೀಡಿ ಕಟ್ಟುವಿಕೆಯಿಂದ

ಇನ್ನಿತರ ಶ್ರಮದ ಮೂಲಕ ಜಿಲ್ಲೆಯಲ್ಲಿ ರಾಷ್ಟ್ರಮಟ್ಟದಲ್ಲಿ ಹೆಸರು ಗಳಿಸುವಂತಹ ಕೆಲಸಗಳು ಆಗಿದೆ. ಬಹುಶಃ ಮೀನುಗಾರಿಕೆ ಜನರಿಗೆ ಬಹಳಷ್ಟು ತೊಂದರೆ ಇದೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಅಲ್ಲಿ ಹೂಳು ಎತ್ತುವ ಮೂಲಕ ಆ ಪ್ರದೇಶದಲ್ಲಿ ಮೀನುಗಾರಿಕೆ ತೊಂದರೆಯಾಗು ವಂತಹದ್ದನ್ನು ಮನಗಂಡು ಕಳೆದ ವರ್ಷವು ಕೂಡ ಆಗಿದೆ. ಅದಕ್ಕೆ ಅಂದಾಜನ್ನು ಬಹುಶಃ 1098 ಲಕ್ಷ ರೂಪಾಯಿಗಳೆಂದು ಅಂದಾಜು ಪಟ್ಟಿಯನ್ನು ಮಾಡಿದ್ದೇವೆ. ಇಲ್ಲಿ ಬೇಸರದ ಸಂಗತಿ ಎಂದರೆ, ಅಲ್ಲಿ ಅನುದಾನವನ್ನು ಇಟ್ಟಿದ್ದು 185 ಲಕ್ಷ ರೂಪಾಯಿಗಳು ಮಾತ್ರ. ಬಹುಶಃ 10% ಕೂಡ ಅಲ್ಲಿ ಯಾವುದೇ ಹಣವು ಮೀಸಲಾಗಿಲ್ಲವೆನ್ನುವಂತಹ ಮಾತನ್ನು ಅವರು ಹೇಳಿದ್ದಾರೆ. ಇವತ್ತು ಬಹುಶಃ ನಮ್ಮ ಸಚಿವರಿಗೆ ಪೂರಕವಾಗಿ ಸಹಾಯ ನೀಡುವಂತೆ ಈ ರಾಜ್ಯದ Finance ನ್ನು ಯಾರು ವಹಿಸಿ ಕೊಂಡಿದ್ದಾರೆ, ವಿಶೇಷವಾದ ಅನುದಾನವನ್ನು ಕೊಡುವಂತಹ ವ್ಯವಸ್ಥೆ ಇವತ್ತು ಮಾಡಬೇಕೆಂದು ನಾನು ಕೇಳುತ್ತೇನೆ. ಇದರ ಜೊತೆಯಲ್ಲಿ ಅಳಿವೆ ಬಾಗಿಲಿನಲ್ಲಿ ಅಲ್ಲಿ ಬೋಟ್ ಹೋಗದೆ ಅಲ್ಲಿ ಎರಡು-ಮೂರು ಜನರು ತೀರಿಹೋದ ಹಿಂದಿನ ಉದಾಹರಣೆಗಳು ಇವೆ. ಇದು ನಮ್ಮ ಬಂದರಿನ ಪ್ರದೇಶವಾದರೆ ಇನ್ನು ನೇತ್ರಾವತಿ ಮತ್ತು ಗುರುಪುರ ಆ ಒಂದು ನದಿಯಲ್ಲಿಯೂ ಕೂಡ ಮೀನುಗಾರಿಕೆಗೆ ಈ ಒಂದು ಸಮಸ್ಯೆಯಿಂದ ಆಗುತ್ತಿಲ್ಲ. ಆಕಾರಣ ದಕ್ಷಿಣಕ್ಕನಡ ಜಿಲ್ಲೆಯ ಆರ್ಥಿಕ ಸಂಪನ್ಮೂಲದ ಮೂಲಕಸುಬಾದ ಮೀನುಗಾರಿಕೆಗೆ ...ಏಕೆಂದರೆ, ಕೆಲವರು ಮೀನನ್ನು ಹಿಡಿಯುತ್ತಾರೆ, ಕೆಲವರು ಮಾರುತ್ತಾರೆ. ಇದು ಸೈಕಲ್ ತರಹ ಆಗುತ್ತದೆ. ಇದಕ್ಕೆಲ್ಲಾ ಒಂದು ಅಂದಾಜನ್ನು ಇಟ್ಟುಕೊಂಡು ಸಮರ್ಪಕವಾದ ಆ ಒಂದು ಕಾಮಗಾರಿಯನ್ನು ಮಾಡಿ ದೀರ್ಘ ಕಾಲದ ಒಂದು ಪ್ರಯೋಜನ ವಾಗುವಂತಹ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೃಷ್ಣ ಪಾಲೇಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಯಾವುದೇ ಜೀವಹಾನಿಯಾಗಿರುವುದಿಲ್ಲ. ಆ ಅಳಿವೆ ಬಾಗಿಲಿನಲ್ಲಿ 12 ಅಪಘಾತಗಳು ಆಗಿವೆ, ಅದು ಸರ್ಕಾರದ ಗಮನಕ್ಕೆ ಬಂದಿದೆ. ಅದರ ಬಗ್ಗೆ ಸರ್ಕಾರ ಹೆಚ್ಚು ಗಮನವನ್ನು ಹರಿಸಿದೆ. ನಾನು ಆಗಸ್ಟ್ ತಿಂಗಳಿನಲ್ಲಿ ಈ ಬಗ್ಗೆ ಒಂದು ಸಭೆಯನ್ನು ಕರೆದು ಮೀನುಗಾರರಿಗೆ ತೊಂದರೆಯಾಗದ ರೀತಿಯಲ್ಲಿ ಅಲ್ಲಿ ಹೂತುಹೋದಂತಹ ಬೋಟ್ ಅದರ ಹೆಸರು ಸಮೀನಾ, ಅದು ಹೂತು ಹೋಗಿದೆ. ಅದನ್ನು ತೆಗೆಯುವುದಕ್ಕೆ

ಈಗಾಗಲೇ 20 ಲಕ್ಷದ ಮೇಲ್ಪಟ್ಟು ಅನುದಾನವನ್ನು ಬಿಡುಗಡೆ ಮಾಡುವುದಕ್ಕೆ ಈಗಾಗಲೇ ಸರ್ಕಾರದಿಂದ ಅನುಮೋದನೆಯನ್ನು ಕೊಟ್ಟಿದೆ. ಅದನ್ನು ತೆಗೆಯುತ್ತೇವೆ. ನಮ್ಮ ಗೌರವಾನ್ವಿತ ಸದಸ್ಯರು ಹೇಳಿದ ಹಾಗೆ ಅಲ್ಲಿ ಹೂಳೆತ್ತುವುದಕ್ಕೆ ಈಗಾಗಲೇ ನಾವು fisheries ಇಲಾಖೆಗೆ 10,98,000 ಆಡಳಿತ ಅನುಮೋದನೆಗೆ ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದೇವೆ. ಆದರೆ ಇನ್ನು ಆಡಳಿತ ಅನುಮೋದನೆಯು ಸಿಗಲಿಲ್ಲ. ಈಗಾಗಲೇ 1,85,000 ಕೋಟಿ ರೂಪಾಯಿಗಳ ಕೆಲಸವು ಸಂಪೂರ್ಣವಾಗಿ ಆಗಿದೆ. ಆದರೆ ಮುಂದಿನ ದಿನಗಳಲ್ಲಿ ಅದನ್ನು ಇವತ್ತು ಮೀನುಗಾರಿಕೆ ಇಲಾಖೆಯವರು ಕೊಡದೆ ಇದ್ದರೂ ಕೂಡ ನಮ್ಮ ಇಲಾಖೆಯು ಅದನ್ನು ಸಂಪೂರ್ಣವಾಗಿ ಹೂಳೆತ್ತುವಂತಹ ಕೆಲಸವನ್ನು 2010-11ರ ಸಾಲಿನಲ್ಲಿ ಅನುದಾನವನ್ನು ಒದಗಿಸುವುದಕ್ಕೆ ಸರ್ಕಾರವು ಕ್ರಮ ಕೈಗೊಳ್ಳುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಯು.ಟಿ.ಖಾದರ್ : ಬಹುಶಃ ಇವತ್ತು ಮೀನುಗಾರಿಕೆ ಇಲಾಖೆಯವರು ಕೊಡದೆ ಇದ್ದರೂ ಕೂಡ ಬಂದರು ಇಲಾಖೆಯ ಮುಖಾಂತರ ಮಾಡುವುದರ ಬಗ್ಗೆ ಒಂದು ಆಶ್ವಾಸನೆಯನ್ನು ನಮ್ಮ ಜಿಲ್ಲೆಯ ಜನತೆಗೆ ಕೊಟ್ಟಿದ್ದಾರೆ. ಬಹುಶಃ ಅದಕ್ಕೆ ಎಷ್ಟು ಅನುದಾನವನ್ನು ಮೀಸಲು ಇಡಬಹುದು ಎಂದು ಮಾನ್ಯ ಸಚಿವರು ಹೇಳಿದರೆ ಉತ್ತಮ. ಇನ್ನು ಎರಡನೆಯದಾಗಿ ಹೇಳುವುದಾದರೆ, ಮೀನುಗಾರಿಕೆ ಮತ್ತು ಬಂದರ್ ಎರಡು ಇದು ಜೊತೆ ಜೊತೆಯಲ್ಲಿ ಇದ್ದರೆ ಮಾತ್ರ ಸಮರ್ಥವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಅದನ್ನು ಬೇರೆ ಬೇರೆ ಮಾಡಿದರೆ ಮತ್ತಷ್ಟು ಕೆಲಸವನ್ನು ಮಾಡುವುದಕ್ಕೆ ಕಷ್ಟವಾಗುವಂತಹ ಪರಿಸ್ಥಿತಿಯಾಗಿದೆ. ಇದರ ಬಗ್ಗೆಯೂ ಕೂಡ ಸರ್ಕಾರವು ಆಲೋಚನೆಯನ್ನು ಮಾಡಬೇಕು.

ಶ್ರೀ ಕೆ. ಅಭಯಚಂದ್ರ ಜೈನ್ : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಳಿವೆ ಬಾಗಿಲುಗಳಲ್ಲಿ ಹೂಳುಗಳು ಇದ್ದು, ಅದನ್ನು ತೆಗೆಯುವಂತಹ ಕೆಲಸವು ತುಂಬಾ ವರ್ಷದಿಂದ ಆಗಿರುವುದಿಲ್ಲ. ಈಗ ಅದನ್ನು ಸಮಗ್ರವಾಗಿ ಮಾಡಬೇಕು. ಬರೀ ಮಂಗಳೂರು ಮಾತ್ರವಲ್ಲ,

ಅಧ್ಯಕ್ಷರು : ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲರೂ ಕೂಡ ಮಾತನಾಡಬಹುದು.

ಶ್ರೀ ಕೆ. ಅಭಯಚಂದ್ರ ಜೈನ್ : ಎಲ್ಲಾ ಕರಾವಳಿಯ ಸಮುದ್ರ ಸೇರುವಂತಹ ಪ್ರದೇಶಗಳಲ್ಲಿ ಅಳಿವೆ ಬಾಗಿಲಿನಲ್ಲಿ ಎಲ್ಲಾ ಕಡೆಯಲ್ಲಿ ಹೂಳು

ತೆಗೆಯುವಂತಹ ಕೆಲಸಗಳು ಆಗಬೇಕು. ಇಲ್ಲದೆ ಹೋದರೆ ಮೀನುಗಾರರಿಗೆ ಬಹಳ ತೊಂದರೆಯಾಗುತ್ತದೆ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಅಧ್ಯಕ್ಷರೆ, ಅಲ್ಲಿ ಬಹಳ ವರ್ಷಗಳಿಂದ ಹೂಳು ತುಂಬಿಕೊಂಡಿತ್ತು. ಕಳೆದ ವರ್ಷದ ಬಜೆಟ್‌ನಲ್ಲಿ ವಿಶೇಷವಾಗಿ ಅನುದಾನವನ್ನು ಕೊಟ್ಟಿದ್ದಾರೆ. ನಮ್ಮ ಮಲ್ಪೆ ಬಂದರು, ಕಾರವಾರ ಬಂದರು ಇರಬಹುದು. ಎಲ್ಲಾ ಕಡೆಯಲ್ಲಿ ಒಂದು ಹಂತದ ಹೂಳು ತೆಗೆಯುವ ಕೆಲಸವು ನಡೆದಿದೆ. ಅಲ್ಲಿ contract ತೆಗೆದುಕೊಂಡವರು ಬರಲಿಲ್ಲ. ಒಂದು ಹಂತದ ಕೆಲಸವು ನಡೆದಿದೆ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ನನ್ನ ಒಂದು ಸಲಹೆ ಏನೆಂದರೆ, ಈ ಹೂಳೆತ್ತುವಂತಹ ಕಾಮಗಾರಿಯನ್ನು contract ಕೊಟ್ಟು ಮಾಡಿದರೆ ಬಹಳ expensive. ಕಾರವಾರ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಈ ಮೂರು ಜಿಲ್ಲೆಗಳಿಗೆ ಆಗುವ ಹಾಗೆ ಸರ್ಕಾರವೆ ಒಂದು dredger ಅನ್ನು ಖರೀದಿಸಿ ಇಟ್ಟುಕೊಂಡರೆ ಒಳ್ಳೆಯದು. ಅದನ್ನು KFDC ಮೂಲಕ Fisheries Development Corporation ಮೂಲಕ dredger ಖರೀದಿಸಿದರೆ ಸುಮಾರು 10 ಕೋಟಿ ರೂಪಾಯಿಗಳಲ್ಲಿ ಅದು ಸಿಗುತ್ತದೆ. ಆಗ ನಮ್ಮ ಮೂರು ಜಿಲ್ಲೆಗಳಲ್ಲಿ dredger ಮಾಡುವುದಕ್ಕೆ ಅನುಕೂಲವಾಗುತ್ತದೆ. ಹಾಗಾಗಿ ಸರ್ಕಾರವೆ dredger ಅನ್ನು ಖರೀದಿಸಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಕೃಷ್ಣಪಾಲೇಮಾರ್ : ಮಾನ್ಯ ಸದಸ್ಯರು ಹೇಳುವಂತಹ ಸಮಸ್ಯೆಗಳು ಬಹಳ ಇದೆ. ನಿಜವಾದಂತಹ ಸಮಸ್ಯೆ ನಮ್ಮ ಅಭಯಚಂದ್ರ ಜೈನ್‌ರವರು, ರಘುಪತಿ ಭಟ್‌ರವರು ಹೇಳಿರುವಂತಹ ಸಮಸ್ಯೆಗಳು ಅದು ನಿಜವಾದ ಸಮಸ್ಯೆಯಾಗಿರುತ್ತದೆ. ಮುಂದಿನ ದಿನಗಳಲ್ಲಿ ನಾವು ಹಂತ ಹಂತವಾಗಿ ಎಲ್ಲಾ ಬಂದರುಗಳಲ್ಲಿ ಹೂಳು ಎತ್ತುವಂತಹ ಕೆಲಸವನ್ನು ಮಾಡುತ್ತೇವೆ. ಅಲ್ಲಿರುವಂತಹ ಮೀನುಗಾರರಿಗೆ ಯಾವುದೇ ರೀತಿಯಿಂದಲೂ ತೊಂದರೆಯಾಗದಂತೆ ಸರ್ಕಾರವು ನೋಡಿಕೊಳ್ಳುತ್ತದೆ. ಹೊಸ dredger ಅನ್ನು purches ಮಾಡಬೇಕೆಂದು ಹೇಳಿ ರಘುಪತಿ ಭಟ್‌ರವರು ಕೇಳಿದ ಹಾಗೆ ಅದನ್ನು ನಾವು ಮುಂದಿನ ದಿನಗಳಲ್ಲಿ ಈ ಬಗ್ಗೆ ಮಾನ್ಯ

ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಸರ್ಕಾರವು ಮಾಡುತ್ತದೆ.

ಶ್ರೀ ಕೆ. ಗೋಪಾಲ ಭಂಡಾರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಅದನ್ನು ಮಾಡುತ್ತೇವೆಂದು ಹೇಳಿದರು. ಈ ಪ್ರಶ್ನೆಯ ಕೊನೆಗೆ ಅನುದಾನವನ್ನು ಮೀಸಲಿಡಲಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಅನುದಾನ ಇಡದೆ ಏನಾದರೂ ಕೆಲಸವನ್ನು ಮಾಡುವುದಕ್ಕೆ ಆಗುತ್ತದೆಯೇ? ಅಥವಾ ವಿಶೇಷವಾಗಿ ಏನಾದರೂ ಅನುದಾನವನ್ನು ತಾವು ತೆಗೆದುಕೊಳ್ಳುತ್ತೀರಾ? ಎನ್ನುವ ಬಗ್ಗೆ ತಾವು ಉತ್ತರವನ್ನು ಕೊಡಬೇಕು.

ಶ್ರೀ ಕೃಷ್ಣಪಾಲೇಮಾರ್ : ವಿಶೇಷವಾಗಿ ಅನುದಾನವನ್ನು ತೆಗೆದು ಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು. ನಮಗೆ ಅನುದಾನವನ್ನು ಕೊಟ್ಟಿಲ್ಲ ವೆಂದು ನಾನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ.

ಶ್ರೀ ಬಿ. ರಮಾನಾಥ ರೈ : ಎಲ್ಲಾ ಕಡೆಯಲ್ಲಿ ಹೂಳು ತುಂಬಿಕೊಂಡು ಕೆಲವು ಕಡೆಗಳಲ್ಲಿ accident ಆಗಿ ಸತ್ತಿರುವಂತಹದ್ದು ಇದೆ. ಅದಕ್ಕಾಗಿ ತಾವು ಡ್ರಗ್‌ಜಿಂಗ್ machine ತೆಗೆದುಕೊಂಡರೆ, ಅದು ಶಾಶ್ವತವಾಗಿ ಇರುತ್ತದೆ. ಕಾಲಕಾಲಕ್ಕೆ ಅದನ್ನು ಸರಿಪಡಿಸುತ್ತಾ ಇರಬಹುದು. ಏಕೆಂದರೆ contract ಕೊಟ್ಟರೆ ಅದು ಇನ್ನು costly ಆಗುತ್ತದೆ. ಅದಕ್ಕೆ ಇನ್ನಾದರೂ permanent solution ಮಾಡಬೇಕು. ಏಕೆಂದರೆ, ಈ ಮಾತನ್ನು ಹೇಳುತ್ತಾ ಬಹಳ ವರ್ಷದಿಂದ ಕೇಳುತ್ತಾ ಇರುವುದು ಅದಕ್ಕೆ ನೀವು ಉತ್ತರವನ್ನು ಕೊಡುತ್ತಾ ಇರುವುದು ಇದು ಆಗಬಾರದು. ಅದು ಇದಕ್ಕೆ ಸೀಮಿತವಾಗಿರಬೇಕು..

ಅಧ್ಯಕ್ಷರು : ಆಯಿತು.

ಶ್ರೀ ಬಿ. ರಮಾನಾಥ ರೈ : ಮಳೆಗಾಲದಲ್ಲಿ ನಮ್ಮ ಮಂತ್ರಿಗಳು ಒಂದು dredging machine ನ್ನು ತೆಗೆದುಕೊಳ್ಳಬೇಕಾಗಿತ್ತು.

ಅಧ್ಯಕ್ಷರು : ಆಯಿತು. ಮತ್ತು ಮಾತು ಕೆಡಿಸುವುದು ಬೇಡ.

ಮಲಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯ ಮಂಡಳಿಯ ಅಧಿಕಾರ ಅವಧಿ

70 (632) ಶ್ರೀ ಸುಭಾಷ್ ಆರ್. ಗುತ್ತಿಗೆದಾರ್ (ಆಳಂದ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯ ಅಧಿಕಾರ ಅವಧಿ ಎಂದು ಮುಗಿಯುವುದು;

ಆ) ಈ ಕಾರ್ಖಾನೆಯಲ್ಲಿ ವ್ಯವಸ್ಥಾಪಕ ನಿರ್ದೇಶಕ ಅಧಿಕಾರವನ್ನು ಉಪಾಧ್ಯಕ್ಷರು ಚಲಾಯಿಸಲು ಅವಕಾಶ ಮಾಡಲಾಗಿರುವುದೇ;

ಇ) ಹಾಗಿದ್ದಲ್ಲಿ, ವ್ಯವಸ್ಥಾಪಕ ನಿರ್ದೇಶಕರ ಅಧಿಕಾರಗಳನ್ನು ಉಪಾಧ್ಯಕ್ಷರು ಚಲಾಯಿಸಲು ಯಾವ ಕಾನೂನಿನಲ್ಲಿ ಅವಕಾಶ ಇದೆ;

ಈ) ಕಾನೂನುಬಾಹಿರವಾಗಿ ಅಧಿಕಾರ ಚಲಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ದಿನಾಂಕ: 31-03-2010ಕ್ಕೆ ಮುಕ್ತಾಯವಾಗುತ್ತದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ಹೌದು ಬಂದಿರುತ್ತದೆ. ಸದರಿ ಕಾರ್ಖಾನೆಯ ಉಪಾಧ್ಯಕ್ಷರಿಗೆ ಈ ಕಛೇರಿಯಿಂದ ದಿನಾಂಕ: 01-02-2010 ರಂದು ಕಾರಣ ಕೇಳುವ ನೋಟಿಸ್‌ನ್ನು ಜಾರಿ ಮಾಡಲಾಗಿದೆ. ಉಪಾಧ್ಯಕ್ಷರು ಸದರಿ ನೋಟಿಸಿಗೆ ಲಿಖಿತ ಸಮಜಾಯಿಸಿಯನ್ನು ದಿನಾಂಕ: 16-02-2010ರ ಪತ್ರದಂತೆ ಕಛೇರಿಗೆ ಸಲ್ಲಿಸಿರುತ್ತಾರೆ. ಇವರ ಉತ್ತರವನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಡಿ.ರೇವಣ್ಣ (ಮಾನ್ಯ ಸುಭಾಷ್ ಆರ್ ಗುತ್ತೇದಾರ್‌ರವರ ಪರವಾಗಿ) : ಮಾನ್ಯಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮಲಪ್ರಭಾ ಸಕ್ಕರೆ ಕಾರ್ಖಾನೆಯ ಆಡಳಿತ ಅವಧಿ 31.3.2010ಕ್ಕೆ ಮುಕ್ತಾಯ ವಾಗುತ್ತದೆ ಎಂದು ಹೇಳಿದ್ದಾರೆ. ಇನ್ನೊಂದು ವ್ಯವಸ್ಥಾಪಕ ನಿರ್ದೇಶಕರ ಅಧಿಕಾರವನ್ನು ಉಪಾಧ್ಯಕ್ಷರು ಚಲಾಯಿಸಲು ಅವಕಾಶ ಮಾಡಲಾಗುವುದೇ ಇಲ್ಲವೆಂದು ಹೇಳಿದ್ದಾರೆ. ಇದರಲ್ಲಿ ಏನಾಗಿದೆ ಎಂದರೆ ಸಹಕಾರಿ ಕಾಯಿದೆ ಕಲಂ: 29(ಜಿ)ಯಲ್ಲಿ ವ್ಯವಸ್ಥಾಪಕ ನಿರ್ದೇಶಕರಿಗೆ ಏನು ಅಧಿಕಾರ ಇದೆ ಎನ್ನುವುದನ್ನು ಇದೆ. ಏಕೆಂದರೆ, ಮಾರುಕಟ್ಟೆ ಸಚಿವರು ಒಂದು ಕಡೆ ಇದ್ದಾರೆ, ನಮ್ಮ ಸಹಕಾರಿ ಸಚಿವರು ಇಲ್ಲಿಯೇ ಇದ್ದಾರೆ. ವ್ಯವಸ್ಥಾಪಕ ನಿರ್ದೇಶಕರ ಅಧಿಕಾರವನ್ನು ಉಪಾಧ್ಯಕ್ಷರು ಮಾಡುವುದಕ್ಕೆ ಅವಕಾಶವಿದೆಯೇ? ಅಲ್ಲಿ 25 ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿರುವುದು ತಿಳಿದು ಬಂದಿದೆ.

ಇದೆಯೋ ಇಲ್ಲವೋ ಎಂಬುದರ ಬಗ್ಗೆ ದಯಮಾಡಿ ತಿಳಿಸಿ. ವ್ಯವಸ್ಥಾಪಕ ನಿರ್ದೇಶಕರು, ಸಕ್ಕರೆ ಆಯುಕ್ತರಿಗೆ letter ಗಳನ್ನು ಬರೆದು ಈ ರೀತಿ 25.00 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆಯೆಂದು ತಿಳಿಸಿದ್ದಾರೆ, ಆದರೂ ಇಲ್ಲಿಯವರೆಗೆ ಏನು ಕ್ರಮಕೈಗೊಂಡಿಲ್ಲ. ಕ್ರಮ ತೆಗೆದುಕೊಳ್ಳುತ್ತಿದ್ದೇವೆಂದು ತಾವು ಸುಮ್ಮನೆ ಒಂದು ನೋಟಿಸ್ ಕೊಟ್ಟಿದ್ದೇವೆ. ಒಬ್ಬ ಉಪಾಧ್ಯಕ್ಷರು 25.00 ಕೋಟಿ ರೂಪಾಯಿಗಳ ವ್ಯವಹಾರದಲ್ಲಿ ವ್ಯವಸ್ಥಾಪಕ ನಿರ್ದೇಶಕರ ಅಧಿಕಾರವನ್ನು ಚಲಾಯಿಸುತ್ತಾರೆಂದರೆ ಅದರ ಅರ್ಥ ಏನು? ಅಂದರೆ ಸಕ್ಕರೆ ಆಯುಕ್ತರು, ಮಂತ್ರಿಗಳು ಜೀವಂತವಾಗಿ ಇದ್ದಾರೆಯೇ ಎಂಬುದು ಗೊತ್ತಿಲ್ಲ, ಅದಲ್ಲದೆ 2.00 ಲಕ್ಷ ರೂಪಾಯಿಗಳ ಲೆಕ್ಕವನ್ನು ಪುಸ್ತಕದಲ್ಲಿ ತಿದ್ದಿ ಹಾಕಿದ್ದಾರೆ. ಅದಕ್ಕೆ ದಯಮಾಡಿ ಅವರು ಉತ್ತರ ಕೊಡಬೇಕು.

ಅಧ್ಯಕ್ಷರು : ಈಗ ಪ್ರಶ್ನೆ ಏನಿದೆ, ಉಪಾಧ್ಯಕ್ಷರು ಅಧಿಕಾರ ಚಲಾಯಿಸಿದ್ದಕ್ಕೆ ಏನು ಕ್ರಮ ಕೈಗೊಂಡಿದ್ದಾರೆ ಎಂದು ಅದಕ್ಕೆ ಉತ್ತರ ಹೇಳಿ.

ಶ್ರೀ ಎಸ್. ಶಿವರಾಜ್ ಎಸ್. ತಂಗಡಗಿ (ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು): ಮಲಪ್ರಭಾ ಸಕ್ಕರೆ ಕಾರ್ಖಾನೆಯ ಸಾಮಾನ್ಯ ಸಭೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರ ಅಧಿಕಾರವನ್ನು ಅಗತ್ಯ ಬಿದ್ದಾಗ ಅಧ್ಯಕ್ಷರು, ಉಪಾಧ್ಯಕ್ಷರು ಅನುಷ್ಠಾನ ಮಾಡಬಹುದು ಎಂದು ಅವರು ಸಾಮಾನ್ಯ ಸಭೆಯಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ ಅದು ನಮ್ಮ ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಆ ರೀತಿ ಅಧಿಕಾರವನ್ನು ಉಪಯೋಗ ಮಾಡಿಕೊಳ್ಳಲು ಬರುವುದಿಲ್ಲವೆಂಬ ವಿಷಯ ನಮ್ಮ ಗಮನಕ್ಕೂ ಬಂದಿದೆ. ಅವರೇನು ಅವ್ಯವಹಾರವಾಗಿದೆಯೆಂಬ ಮಾತನ್ನು ಹೇಳಿದರು, ಅದೂ ನಮ್ಮ ಗಮನಕ್ಕೆ ಬಂದಿದೆ. ಇದರೊಂದಿಗೆ ಆ ಸಕ್ಕರೆ ಕಾರ್ಖಾನೆಯಲ್ಲಿ ಅಕ್ರಮ ನೇಮಕಾತಿಯನ್ನು ಮಾಡಿದ್ದೂ ನಮ್ಮ ಗಮನಕ್ಕೆ ಬಂದಿದೆ. ಈಗಾಗಲೇ ನಾವು ನಮ್ಮ ಇಲಾಖೆಯಿಂದ Additional Registrar of Co-operative ಶ್ರೀ ದೀಪಕ್ ರಾಜ್ ಎನ್ನುವವರ ನೇತೃತ್ವದಲ್ಲಿ ತನಿಖೆಯನ್ನು ಮಾಡಬೇಕೆಂದು ಸೂಚಿಸಿದ್ದೆವು. ಅದರಂತೆ ತನಿಖಾ ವರದಿ ನಮ್ಮ ಸಕ್ಕರೆ ನಿರ್ದೇಶನಾಲಯಕ್ಕೆ ಬಂದಿದೆ ಮತ್ತು ಈ ಆಧಾರದ ಮೇಲೆ ನಾವು ಕ್ರಮ ಕೈಗೊಳ್ಳುತ್ತೇವೆ ಇದರ ಜೊತೆಗೆ ಇನ್ನೂ ನಾವು ಅದನ್ನು ಪರಿಶೀಲನೆ ಮಾಡಬೇಕೆಂದರೆ ಸಹಕಾರ ಸಂಘ ಅಧಿನಿಯಮ 64 ರಡಿಯಲ್ಲಿ ಕೂಡ ತನಿಖೆ ಮಾಡಿಸಲಿಕ್ಕೆ ಸರ್ಕಾರ ಸಿದ್ಧವಿದೆ ಅದಕ್ಕೆ ಅಲ್ಲಿ ಅವ್ಯವಹಾರವಾಗಿತ್ತು

O.30 F-6

ಎಂದು ಕಂಡು ಬಂದರೆ ಸಹಕಾರ ಸಂಘ ಅಧಿನಿಯಮ 64 ರಡಿಯಲ್ಲಿ ಅದನ್ನು ಸರ್ಕಾರ ತನಿಖೆ ಮಾಡಿಸಿ ಅವ್ಯವಹಾರ ಮತ್ತು ಈ ಅಕ್ರಮದ ಬಗ್ಗೆ ಹಾಗೂ ವ್ಯವಸ್ಥಾಪಕ ನಿರ್ದೇಶಕರ ಅಧಿಕಾರವನ್ನು ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಉಪಯೋಗ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ಆ ರೀತಿ ಮಾಡಿದ್ದಾರೆಂದು ನಮ್ಮ ವರದಿಯಲ್ಲಿ ಬಂದರೆ ನಾವು ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಚಿವುರು ಈಗ General Body ಯಲ್ಲಿ ತೀರ್ಮಾನ ಮಾಡಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ವ್ಯವಸ್ಥಾಪಕ ನಿರ್ದೇಶಕರ ಅಧಿಕಾರ ತೆಗೆದುಕೊಂಡಿದ್ದಾರೆಂದು ಸಭೆ ಮುಂದೆ ಹೇಳಿ ಮತ್ತೆ ಈಗ ನಮಗೆ ಅದು ತಿಳಿದು ಬಂದಿಲ್ಲವೆಂದು ಹೇಳಿದರೆ, ಈಗ ಸಹಕಾರ ಸಚಿವರು ಇಲ್ಲೆ ಇದ್ದಾರೆ. 29 ಜಿ ಪ್ರಕಾರ ವ್ಯವಸ್ಥಾಪಕ ನಿರ್ದೇಶಕರ ಅಧಿಕಾರ ಬಳಕೆ ಮಾಡಲಿಕ್ಕೆ ಉಪಾಧ್ಯಕ್ಷರಿಗೆ ಅಧಿಕಾರ ಇದೆಯೇ? ಇಲ್ಲವೆಂದರೆ ಹೇಳಲಿ, ಅಧಿನಿಯಮ 64 ರಡಿಯಲ್ಲಿ ತನಿಖೆ ಮಾಡಿದಂತೆ ಇವತ್ತು ಆ ರೈತರ ಭಾಗದ 25.00 ಕೋಟಿ ರೂಪಾಯಿಗಳ ವಿಷಯ ನಾವು ಎತ್ತಬೇಕಾಗುತ್ತದೆ. ಈಗ ಈ ಬಗ್ಗೆ ತನಿಖೆ ಮಾಡಲಿಕ್ಕೆ ಎಷ್ಟು ದಿವಸಗಳು ಬೇಕಾಗುತ್ತದೆ? ಎಷ್ಟು ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ದಯಮಾಡಿ ಸದನಕ್ಕೆ ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇವೆ.

ಶ್ರೀ ನಾಡಗೌಡ ವೆಂಕಟರಾವ್ : ತಮ್ಮ ಗಮನಕ್ಕೆ ಬಂದಿದೆ. ಎಲ್ಲರೂ ಅಲ್ಲಿ ಲೂಟಿ ಮಾಡುತ್ತಿದ್ದಾರೆ. ಇದು ತಮ್ಮ ಗಮನಕ್ಕೆ ಬಂದ ನಂತರ ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ : ಅಧ್ಯಕ್ಷರೆ, ಮಲಪ್ರಭಾ ಸಕ್ಕರೆ ಕಾರ್ಖಾನೆಯ ಚುನಾವಣೆ ಮುಗಿಯಿತು. ಹೋದ ಸಾರಿ ಯಾವ ಆಡಳಿತ ಮಂಡಳಿ ಇತ್ತು, ಅದೇ ಮಂಡಳಿ ಪುನಃ ಆಯ್ಕೆಯಾಗಿ ಬಂದಿದೆ. ಅವರು ಸುಮಾರು 20–25 ಕೋಟಿ ರೂಪಾಯಿಗಳ ಲಾಭ ಮಾಡಿದ್ದೇವೆಂದು ರೈತರ ಮುಂದೆ ಹೇಳಿ ಪುನಃ ಚುನಾವಣೆಯಲ್ಲಿ ಬಹುಮತದಿಂದ ಗೆದ್ದು ಬಂದಿದ್ದಾರೆ. ದಯವಿಟ್ಟು ಆ 25.00 ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆಯೋ ಇಲ್ಲವೋ ಅದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ಸನ್ಮಾನ್ಯ ಮಂತ್ರಿಗಳು ನಮಗೆ ತಿಳಿಸಬೇಕು. ಅಲ್ಲಿ ಅವ್ಯವಹಾರ ಆಗಿದೆಯೆ ಇಲ್ಲವೇ ಹೇಳಬೇಕು, ಅದರ ಬಗ್ಗೆ ನಿರ್ದಿಷ್ಟವಾದ ದಾಖಲೆಗಳನ್ನು ಕೊಡಬೇಕು. ಆ ಸಕ್ಕರೆ ಕಾರ್ಖಾನೆ ಮುಚ್ಚುವಂಥ ಪರಿಸ್ಥಿತಿಯಲ್ಲಿತ್ತು. ನಷ್ಟದಲ್ಲಿ ನಡೆಯುತ್ತಿದ್ದ

ಸಕ್ಕರೆ ಕಾರ್ಖಾನೆಯನ್ನು ಲಾಭದಲ್ಲಿ ತರಲಿಕ್ಕೆ ಪ್ರಯತ್ನ ನಡೆದಿದೆ, ಈಗ ಆರೋಪ ಇದೆ. ಏಕೆಂದರೆ ಅದು ನಮ್ಮ ಜಿಲ್ಲೆಗೆ ಬರುತ್ತದೆ.

ಅಧ್ಯಕ್ಷರು : ಪ್ರಶ್ನೆ ಏನಿದೆ, ಅದಕ್ಕೆ ಉತ್ತರವನ್ನು ಕೊಡಬಹುದೇ ಹೊರತು ಇಲ್ಲದ್ದನ್ನು ಕೇಳಿದರೆ ಹೇಗೆ?

ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ : ಅಧ್ಯಕ್ಷರೆ, ನಿಮ್ಮ ಮಾತಿಗೆ ಬೆಲೆ ಕೊಟ್ಟು ನಿಮ್ಮ ಮಾತನ್ನು ಒಪ್ಪುತ್ತೇನೆ. ನಿಮ್ಮ ವಿರುದ್ಧವಾಗಿ ನಾವೇನು ಮಾತನಾಡುವುದಿಲ್ಲ. ಆದರೂ ಕೂಡ ಅದು ನಮ್ಮ ಜಿಲ್ಲೆಯಲ್ಲಿ ಬರುವುದರಿಂದ ಅಲ್ಲಿ ಒಳ್ಳೆಯ ಆಡಳಿತ ಮಂಡಳಿಯ ಸದಸ್ಯರು ಆಯ್ಕೆ ಯಾಗಿದ್ದಾರೆ. ಸಕ್ಕರೆ ಕಾರ್ಖಾನೆ ಚೆನ್ನಾಗಿ ನಡೆದಿದೆ. ದಯವಿಟ್ಟು ಅಲ್ಲಿ ಆಗಿರುವ ಆರೋಪವನ್ನು ನಿರ್ದಿಷ್ಟವಾದ ದಾಖಲೆಗಳ ಸಮೇತ ನಮ್ಮ ಮಾಜಿ ಸಚಿವರು ಅದರ ಬಗ್ಗೆ ಮಾಹಿತಿ ಕೊಡಬೇಕು. ನೀವು ತನಿಖೆ ಮಾಡುತ್ತೇವೆಂದು ಹೇಳಿದಿರಿ, ಇದು ಚುನಾವಣೆಗಿಂತ ಮೊದಲು ನಡೆದಿರುವುದು. ಆಗಲೇ ಈ ಪ್ರಶ್ನೆಯನ್ನು ಕೇಳಿದ್ದರು. ಇದು ನಮ್ಮ ಜಿಲ್ಲೆಗೆ ಸಂಬಂಧಿಸಿರುವುದರಿಂದ ದಯವಿಟ್ಟು ಸಚಿವರು ಸರಿಯಾದ ಉತ್ತರವನ್ನು ಕೊಡಬೇಕು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಸಹಕಾರ ಸಚಿವರು) : ಪ್ರಕಾಶ್ ಹುಕ್ಕೇರಿಯವರು ನನ್ನ ಜಿಲ್ಲೆಯ ಕಾರ್ಖಾನೆಯದು, ಬಹಳ ಚೆನ್ನಾಗಿದೆ ಎಂದು ಹೇಳುತ್ತಿದ್ದಾರೆ. ಬಹುಶಃ ಆ ಸಕ್ಕರೆ ಕಾರ್ಖಾನೆಯ ಯಾವುದೇ ಹಿನ್ನೆಲೆ, ಮುನ್ನೆಲೆ ಗೊತ್ತಿಲ್ಲದೇ ಮಾತನಾಡುತ್ತಿದ್ದಾರೆ. ಆ ಸಕ್ಕರೆ ಕಾರ್ಖಾನೆ ಈಗಾಗಲೇ ತನಿಖೆಯಾಗಿದೆ. ಅದರ ಬಗ್ಗೆ ತನಿಖೆ ವರದಿ ಬಂದಿದೆ. ಅದರಲ್ಲಿರುವ ಸತ್ಯಾಂಶವನ್ನು ಕೆಲವೇ ದಿನಗಳಲ್ಲಿ ಸಕ್ಕರೆ ಸಚಿವರು ನಿಮ್ಮ ಮುಂದೆ ಬಹಿರಂಗಪಡಿಸುತ್ತಾರೆ, ಆಗ ನಿಜವಾದ ಬಣ್ಣ ಬಹುಶಃ ಎಲ್ಲರಿಗೂ ಗೊತ್ತಾಗುತ್ತದೆ. ಆ ಸಕ್ಕರೆ ಕಾರ್ಖಾನೆಯಲ್ಲಿರತಕ್ಕಂಥ ವ್ಯವಸ್ಥಾಪಕ ನಿರ್ದೇಶಕರು ಅಧಿಕಾರವನ್ನು ಉಪಾಧ್ಯಕ್ಷರು ಚಲಾಯಿಸಿರುವುದು ಸತ್ಯ, ಆ ರೀತಿ ಮಾಡಲಿಕ್ಕೆ ಬರುವುದಿಲ್ಲ. ಕಾನೂನಿಗೆ ವಿರೋಧವಾಗಿರುವಂಥ ಅನೇಕ ಹೆಜ್ಜೆಗಳನ್ನು ಅವರು ಇಟ್ಟಿದ್ದಾರೆ. ಅದಕ್ಕೋಸ್ಕರ ಅಲ್ಲಿ ಲಾಭವಾಗಿರುವುದು ಸಹ ಸತ್ಯಕ್ಕೆ ದೂರವಾದ ಸಂಗತಿ. ಎಲ್ಲಾ ಸಕ್ಕರೆ ಕಾರ್ಖಾನೆಗಳ ರೈತರಿಗೂ 2000 ರೂಪಾಯಿಗಳ ಮುಂಗಡ ಹಣವನ್ನು ಕೊಡುತ್ತಿದ್ದೇವೆ. ನಮ್ಮ ಬೆಳಗಾವಿ ಜಿಲ್ಲೆಯಲ್ಲಿರುವಂಥ ಅನೇಕ ಸಕ್ಕರೆ ಕಾರ್ಖಾನೆಗಳು ಪ್ರತಿ ಸಾರಿ ಮುಂಗಡ ಹಣವಾಗಿ 2000 ರೂಪಾಯಿಗಳನ್ನು ಕೊಡುತ್ತಿದ್ದೇವೆ. ಈ ಸಕ್ಕರೆ

ಕಾರ್ಖಾನೆಯಲ್ಲಿ 25 ಕೋಟಿ ರೂಪಾಯಿಗಳ ಲಾಭವಾಗಿದ್ದರೆ ಕಬ್ಬು ಬೆಳೆಗಾರರಿಗೆ 2000 ರೂಪಾಯಿಗಳ ಬೆಲೆಯನ್ನು ಏಕೆ ಕೊಡಲಿಲ್ಲ? ನಾನೂ ಕೂಡ ಅದೇ ಜಿಲ್ಲೆಯವನಾಗಿ ಸಹಕಾರಿ ಕ್ಷೇತ್ರದಲ್ಲಿ ಅನೇಕ ದಿನಮಾನಗಳನ್ನು ಕಂಡಿದ್ದೇನೆ. ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ 2000 ರೂಪಾಯಿಗಳನ್ನು ಕೊಟ್ಟಿರುವಂಥ ಸಂದರ್ಭದಲ್ಲಿಯೂ ಕೂಡ ಈ ಸಕ್ಕರೆ ಕಾರ್ಖಾನೆಯವರು 1800 ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ, ಲಾಭವಾಗಿದ್ದರೆ ಏಕೆ ಕೊಡಲಿಲ್ಲ. ಅದಕ್ಕೆ ಪ್ರಕಾಶ್ ಹುಕ್ಕೇರಿಯವರು ಎತ್ತಿರುವಂಥ ವಿಷಯ ಸತ್ಯಕ್ಕೆ ದೂರವಾದುದು ಎಂದು ಹೇಳಬಯಸುತ್ತೇನೆ.

ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ : ನಾನು ಸಹಕಾರ ಸಚಿವರಲ್ಲಿ ವಿನಂತಿಸುವುದೇನೆಂದರೆ, ತನಿಖೆ ಆಗಲಿಕ್ಕೆ ನಮ್ಮದೇನು ತಕರಾರು ಇಲ್ಲ. ಈಗೇನಾಗಿದೆಯೆಂದರೆ ಹಂತ ಹಂತವಾಗಿ ಕೊಡುತ್ತಾರೆ. ಈಗ, ಒಬ್ಬರು ರೂ.2000 ಒಬ್ಬರು ರೂ.1800 ಕೊಟ್ಟಿರಬೇಕು. ಕಬ್ಬನ್ನು ಅರೆದ ನಂತರ ಹಣ ಕೊಡುವಂಥ ಸಂದರ್ಭ ಇದೆ ಅದು ತಮಗೂ ಗೊತ್ತಿದೆ. ಹೋದ ಸಾರಿ ನಮಗೆ 2500 ರೂಪಾಯಿಗಳವರೆಗೆ ದರ ಸಿಕ್ಕಿದೆ. ಹಾಗಾಗಿ ತನಿಖೆ ಬಗ್ಗೆ ನಾವೇನು ಹೇಳುತ್ತಿಲ್ಲ. ನಾವು ಹೇಳುವುದು ಇಷ್ಟೇ, ಏನಾದರೂ ಒಂದು ಗಂಭೀರವಾದ ಆರೋಪವಾದರೆ ಅದು ದಾಖಲೆ ಸಮೇತ ಆಗಿದೆಯೇ ಇಲ್ಲವೇ ಅಥವಾ ಚುನಾವಣೆಯ ಮೇಲೆ ಏನಾದರೂ ಪ್ರಭಾವ ಬೀರುವ ಸಲುವಾಗಿ ವಿಷಯ ಬಂದಿರಬಹುದು ಎಂದು ನಾವು ತಿಳಿದುಕೊಂಡಿದ್ದೇವೆ. ಇದರ ಬಗ್ಗೆ ನಮ್ಮದೇನು ತಕರಾರು ಇಲ್ಲ.

ಶ್ರೀ ಶಿವರಾಜ್ ಎಸ್. ತಂಗಡಗಿ : ಮಾನ್ಯ ಅಧ್ಯಕ್ಷರೇ, ನಮ್ಮ ಹಿರಿಯ ಸದಸ್ಯರಾದಂಥ ರೇವಣ್ಣನವರು ವ್ಯವಸ್ಥಾಪಕ ನಿರ್ದೇಶಕರ ಅಧಿಕಾರವನ್ನು ಉಪಾಧ್ಯಕ್ಷರು ಬಳಸಿಕೊಂಡಿದ್ದಾರೆ ಎಂದು ಹೇಳಿದರು. ಆ ರೀತಿ ಅವ್ಯವಹಾರಗಳು ಆಗಿವೆ ಎಂದು ದೂರುಗಳು ನಮ್ಮ ಗಮನಕ್ಕೆ ಬಂದ ಮೇಲೆ ನಾವು ಇವತ್ತು Additional Registrar of Co-operativeನ ಶ್ರೀ ದೀಪಕ್ ರಾಜ್ ಎನ್ನುವವರ ನೇತೃತ್ವದಲ್ಲಿ ಒಂದು ತಂಡವನ್ನು ರಚಿಸಿ ತನಿಖೆ ಮಾಡಿಸಿದ್ದು ಆ ವರದಿ ಈಗ ನಮ್ಮ ಹತ್ತಿರ ಬಂದಿದೆ. ಆ ತನಿಖಾ ವರದಿ ಪ್ರಕಾರ ಅವರು ತಪ್ಪು ಮಾಡಿದ್ದರೆ ನಿಶ್ಚಿತವಾಗಿ ಸರ್ಕಾರ ಅವರ ಮೇಲೆ ಕ್ರಮ ಕೈಗೊಳ್ಳುತ್ತದೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು : ಆಯಿತು, ರಾಮಸ್ವಾಮಿಗೌಡರು, ಇಲ್ಲ, ಕೆ.ಪಿ. ಬಚ್ಚೇಗೌಡ ಪ್ರಶ್ನೆ ಕೇಳಿ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆ ಹನಿ ನೀರಾವರಿ ಯೋಜನೆಗೆ ಬಿಡುಗಡೆ ಮಾಡಿರುವ ಹಣ

72 (642) ಶ್ರೀ ಕೆ.ಪಿ. ಬಚ್ಚೇಗೌಡ (ಚಿಕ್ಕಬಳ್ಳಾಪುರ) : ಮಾನ್ಯ ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ಹನಿ ನೀರಾವರಿ ಯೋಜನೆಗೆ ಸರ್ಕಾರ ಬಿಡುಗಡೆ ಮಾಡಿರುವ ಸಹಾಯ ಧನದ ಮೊತ್ತ ಎಷ್ಟು? (ತಾಲ್ಲೂಕುವಾರು 3 ವರ್ಷಗಳ ವಿವರ ನೀಡುವುದು);

ಆ) ತೋಟಗಾರಿಗೆ ಇಲಾಖೆಯಿಂದ ರೈತರಿಗೆ ರಿಯಾಯಿತಿ ದರದಲ್ಲಿ ನೀಡಿದ ಔಷಧಿಗಳು ಯಾವುವು (3 ವರ್ಷಗಳ ವಿವರ ನೀಡುವುದು)?

ಇ) ಕಳೆದ ವರ್ಷ ತೋಟಗಾರಿಕೆ ಇಲಾಖೆ ವತಿಯಿಂದ ಚಿಕ್ಕಬಳ್ಳಾಪುರ ಜಿಲ್ಲೆಯ ಎಷ್ಟು ರೈತರನ್ನು ಹೊರ ರಾಜ್ಯಕ್ಕೆ ಪ್ರವಾಸ ಕಳುಹಿಸಲಾಗಿದೆ; (ತಾಲ್ಲೂಕು ಮತ್ತು ರೈತರವಾರು ವಿವರ ನೀಡುವುದು);

ಈ) ಕಳೆದ ವರ್ಷ ರಾಜ್ಯದ ವಿವಿಧ ಜಿಲ್ಲೆಗಳಿಂದ ತೋಟಗಾರಿಕೆ ಇಲಾಖೆ ವತಿಯಿಂದ ಹೊರ ರಾಜ್ಯಗಳಿಗೆ ಪ್ರವಾಸಕ್ಕೆ ಕಳುಹಿಸಿದ್ದ ರೈತರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)?

ಉ) ಹೊರ ರಾಜ್ಯಗಳಿಗೆ ಪ್ರವಾಸಕ್ಕೆ ಹೋಗಿದ್ದ ರೈತರುಗಳಿಗೆ ತಗುಲಿದ ವೆಚ್ಚ ಎಷ್ಟು? ರಾಜ್ಯವಾರು ವಿವರ ನೀಡುವುದು?

ಶ್ರೀ ಉಮೇಶ್ ಕತ್ತಿ (ತೋಟಗಾರಿಕೆ ಮತ್ತು ಬಂಧೀಖಾನೆ ಸಚಿವರು) :

ಅ) 2007–08ನೇ ಸಾಲಿನಿಂದ 2009–10ನೇ ಸಾಲಿನವರೆಗೆ ಒಟ್ಟು ರೂ.622.54 ಲಕ್ಷಗಳ ಸಹಾಯಧನ ಬಿಡುಗಡೆ ಮಾಡಲಾಗಿದೆ.

ತಾಲ್ಲೂಕುವಾರು 3 ವರ್ಷಗಳ ವಿವರ ಈ ಕೆಳಗಿನಂತಿದೆ.

From 2007-08 to 2009-10 is Rs.622.54 Lakhs. Talukwise details of 3 years is as follows.

ಕ್ರ ಸಂ.	ತಾಲ್ಲೂಕು	2007–08		208–09		2009–10		ಒಟ್ಟು	
		ಬಿಡುಗಡೆಯಾದ ಅನುದಾನ	ಖರ್ಚು	ಬಿಡುಗಡೆಯಾದ ಅನುದಾನ	ಖರ್ಚು	ಬಿಡುಗಡೆಯಾದ ಅನುದಾನ	ಖರ್ಚು	ಬಿಡುಗಡೆಯಾದ ಅನುದಾನ	ಖರ್ಚು
1	ಚಿಕ್ಕಬಳ್ಳಾಪುರ	63.04	63.04	69.54	69.54	29.35	24.35	162.03	156.93
2	ಚಿಂತಾಮಣಿ	77.44	77.44	70.40	70.40	46.46	36.46	194.30	184.30
3	ಗೌರಿಬಿದನೂರು	32.35	32.35	25.64	25.64	3.36	3.36	61.35	61.35
4	ಬಾಗೇಪಲ್ಲಿ	28.76	28.76	28.65	28.65	0	0.	57.41	57.41
5	ಗುಡಿಬಂಡೆ	9.49	9.49	5.29	5.29	1.80	1.80	16.58	16.58
6	ಶಿಡ್ಲಘಟ್ಟ	29.58	29.58	66.46	66.46	34.93	27.48	130.97	123.52
	ಒಟ್ಟು	240.66	240.66	265.98	265.98	115.90	93.45	622.54	600.09

ಆ) ತೋಟಗಾರಿಕೆ ಇಲಾಖೆಯಿಂದ ರೈತರಿಗೆ ರಿಯಾಯಿತಿ ದರದಲ್ಲಿ ನೀಡಿದ ಔಷಧಿಗಳ ವಿವರ ಕೆಳಕಂಡಂತಿದೆ.

ಕ್ರ.ಸಂ.	ಸಾಲು	ವಿತರಿಸಲಾದ ಔಷಧಿಗಳು
1	2007–08	ಮ್ಯಾಂಕೂರ್ಝೇಬ್, ಜಿ.ಬಿ.ಆರ್.ಎಸ್, ಅಜಾಡಿರಿಕ್ಟನ್, ಫಿಶ್ ಆಯಿಲ್‌ರೋಸಿನ್ ಸೋಪ್, ಟ್ರೈ ಕೊಡರ್ಮಾ.
2	2008–09	ಬೇವಿನ ಎಣ್ಣೆ, ಮ್ಯಾಂಕೂರ್ಝೇಬ್, ಕಾಪರ್ ಅಕ್ಸಿ ಕ್ಲೋರೈಡ್, ಮೆಥೊಮಿಲ್, ಝೈನೆಬ್, ಮಟ್ಕೊ, ಇಮಿಡಾಕ್ಲೋಪ್ರಿಡ್, ಕಾರ್ಬನ್ ಡೈಝಿಮ್, ಜಿ.ಬಿ.ಆರ್.ಎಸ್, ಅಜಾಡಿರಿಕ್ಟನ್, ಫಿಶ್ ಆಯಿಲ್ ರೋಸಿನ್ ಸೋಪ್, ಕ್ಲೋರೊಪೈರಿಪಾಸ್.
3	2009–10	ಬೇವಿನ ಎಣ್ಣೆ, ಮ್ಯಾಂಕೂರ್ಝೇಬ್, ಕಾಪರ್ ಅಕ್ಸಿ ಕ್ಲೋರೈಡ್, ಮೆಥೊಮಿಲ್, ಝೈನೆಬ್, ಮಟ್ಕೊ, ಮಿಡಾಕ್ಲೋಪ್ರಿಡ್, ಕಾರ್ಬನ್ ಡೈಝಿಮ್, ಜಿ.ಬಿ.ಆರ್.ಎಸ್,

		ಅಜಾಡಿರಿಕ್ಟನ್, ಫಿಶ್ ಆಯಿಲ್ ರೋಸಿನ್ ಸೋಪ್, ಕ್ಲೋರೊಪೈರಿಪಾಸ್.

ಇ) 55 ಜನ ರೈತರು.

ತಾಲ್ಲೂಕು ಹಾಗೂ ರೈತರವಾರು ವಿವರ ಅನುಬಂಧ-1 ರಲ್ಲಿ ಒದಗಿಸಿದೆ.

ಈ) ಮತ್ತು ಉ) ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಿದೆ.

ಅನುಬಂಧ- 1

ಕಳೆದ ವರ್ಷ (2008-09ನೇ ಸಾಲಿನಲ್ಲಿ) ತೋಟಗಾರಿಕೆ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆಯಿಂದ ಹೊರ ರಾಜ್ಯ ಪ್ರವಾಸ ಕೈಗೊಂಡಿರುವ ತಾಲ್ಲೂಕುವಾರು ರೈತರ ವಿವರಗಳು

ಕ್ರ.ಸಂ.	ರೈತರ ಹೆಸರು	ತಾಲ್ಲೂಕು
1	ಜಿ.ಮಂಜುನಾಥ್ ಬಿನ್ ಕೆ.ವಿ.ಗಂಗಣ್ಣ, ಕೇತೆನಹಳ್ಳಿ.	ಚಿಕ್ಕಬಳ್ಳಾಪುರ
2	ಆರ್. ರವಿ ಬಿನ್ ಕೆ.ವಿ. ರಾಮಪ್ಪ, ಕೇತೆನಹಳ್ಳಿ.	ಚಿಕ್ಕಬಳ್ಳಾಪುರ
3	ಚಂದ್ರಪ್ಪ ಬಿನ್ ವೆಂಕಟಸ್ವಾಮಿಪ್ಪ, ಕತ್ತರಿಗುಪ್ಪೆ.	ಚಿಕ್ಕಬಳ್ಳಾಪುರ
4	ಹೆಚ್.ಎನ್. ಕೊಂಡಪ್ಪ ಬಿನ್ ನರಸಿಂಹಪ್ಪ, ವನಗಿರಪ್ಪನಹಳ್ಳಿ	ಚಿಕ್ಕಬಳ್ಳಾಪುರ
5	ವಿ. ಮುನಿರಾಜು ಬಿನ್ ವೆಂಕಟಪ್ಪ, ಟಿ. ಹೊಸೂರು.	ಚಿಕ್ಕಬಳ್ಳಾಪುರ
6	ಎಂ. ಮಂಜುನಾಥ್ ಬಿನ್ ಮುನಿಯಪ್ಪ, ಕತ್ತರಿಗುಪ್ಪೆ.	ಚಿಕ್ಕಬಳ್ಳಾಪುರ
7	ಮೂರ್ತಿ ಬಿನ್ ಪಿ.ಸಿ. ಪಾಪಣ್ಣ,	ಚಿಕ್ಕಬಳ್ಳಾಪುರ
8	ನರಸಿಂಹಮೂರ್ತಿ ಬಿನ್ ಚಿಕ್ಕರಾಚಪ್ಪ, ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ

9	ಅಮರೇಶ್ ಬಿನ್ ಬೈರಪ್ಪ, ಅಂಗರೇಖನಹಳ್ಳಿ	ಚಿಕ್ಕಬಳ್ಳಾಪುರ
10	ಚಲಪತಿ ಬಿನ್ ಚಿಕ್ಕಚನ್ನಪ್ಪ, ಕತ್ತರಿಗುಪ್ಪೆ.	ಚಿಕ್ಕಬಳ್ಳಾಪುರ
11	ಜಿ.ನಾರಾಯಣಸ್ವಾಮಿ ಬಿನ್ ಗುಂಟುವಪ್ಪ, ಕತ್ತರಿಗುಪ್ಪೆ.	ಚಿಕ್ಕಬಳ್ಳಾಪುರ
12	ಹೆಚ್.ಗಂಗರಾಜು ಬಿನ್ ಹನುಮಂತಪ್ಪ, ಕತ್ತರಿಗುಪ್ಪೆ.	ಚಿಕ್ಕಬಳ್ಳಾಪುರ
13	ಸಿ.ಕೆ.ವಿಜಯಕುಮಾರ್ ಬಿನ್ ಕೃಷ್ಣಪ್ಪ, ಚಿಮ್ಮನಹಳ್ಳಿ.	ಚಿಕ್ಕಬಳ್ಳಾಪುರ
14	ಸಿ.ಎಂ.ಬಾಬು ಬಿನ್ ಮುನಿಶಾಮಪ್ಪ, ಚಿಮ್ಮನಹಳ್ಳಿ.	ಚಿಕ್ಕಬಳ್ಳಾಪುರ
15	ಶಂಕರರೆಡ್ಡಿ ಬಿನ್ ತಮ್ಮಣ್ಣ, ಚಿಮನಹಳ್ಳಿ	ಚಿಕ್ಕಬಳ್ಳಾಪುರ
16	ಮುನಿಕೃಷ್ಣ ಬಿನ್ ಬೈರಪ್ಪ, ಚಿಮನಹಳ್ಳಿ.	ಚಿಕ್ಕಬಳ್ಳಾಪುರ
17	ಕೆ.ಹೆಚ್. ಕೃಷ್ಣ ಬಿನ್ ಹನುಮಂತಪ್ಪ, ಕತ್ತರಿಗುಪ್ಪೆ.	ಚಿಕ್ಕಬಳ್ಳಾಪುರ
18	ಬಾಲಕೃಷ್ಣ ಬಿನ್ ವೆಂಕಟಶಾಮಪ್ಪ ಕತ್ತರಿಗುಪ್ಪೆ.	ಚಿಕ್ಕಬಳ್ಳಾಪುರ
19	ಗೋಪಾಲಪ್ಪ ಬಿನ್ ನಾರಾಯಣಸ್ವಾಮಿ, ಕತ್ತರಿಗುಪ್ಪೆ.	ಚಿಕ್ಕಬಳ್ಳಾಪುರ
20	ಸುಬ್ಬರೆಡ್ಡಿ ಬಿನ್ ದೊಡ್ಡ ಚಿನ್ನಪ್ಪ, ಕತ್ತರಿಗುಪ್ಪೆ.	ಚಿಕ್ಕಬಳ್ಳಾಪುರ
21	ಗಂಗಪ್ಪ ಬಿನ್ ಮುನಿಯಪ್ಪ, ಕಾಡದಿಬ್ಬೂರು.	ಚಿಕ್ಕಬಳ್ಳಾಪುರ
22	ಕೆ.ಎನ್. ಕೃಷ್ಣಪ್ಪ ಬಿನ್ ನಾರಾಯಣಪ್ಪ, ಕತ್ತರಿಗುಪ್ಪೆ.	ಚಿಕ್ಕಬಳ್ಳಾಪುರ
23	ಈಶ್ವರಪ್ಪ ಬಿನ್ ನಾರಾಯಣಪ್ಪ, ವನಗಾನಹಳ್ಳಿ.	ಚಿಕ್ಕಬಳ್ಳಾಪುರ
24	ಆನಂದ ಬಿನ್ ಚನ್ನಪ್ಪ, ಅಂಗರೇಖನಹಳ್ಳಿ.	ಚಿಕ್ಕಬಳ್ಳಾಪುರ

25	ನಾಗೇಶ್ ಬಿನ್ ಶಾಮಣ್ಣ, ಮಂಚನಬಲೆ.	ಚಿಕ್ಕಬಳ್ಳಾಪುರ
26	ಲಕ್ಷ್ಮಪ್ಪರೆಡ್ಡಿ ಬಿನ್ ಸುಬ್ಬರೆಡ್ಡಿ, ಮಂಚನಬಲೆ.	ಚಿಕ್ಕಬಳ್ಳಾಪುರ
27	ಎ.ಆರ್. ಚನ್ನಕೇಶವಮೂರ್ತಿ ಬಿನ್ ರಾಮಪ್ಪ, ಅಂಗರೇಖನಹಳ್ಳಿ.	ಚಿಕ್ಕಬಳ್ಳಾಪುರ
28	ಮುನಿರಾಜು ಬಿನ್ ರಾಮಕೃಷ್ಣಪ್ಪ, ಟಿ. ಹೊಸೂರು.	ಚಿಕ್ಕಬಳ್ಳಾಪುರ
29	ಗುರುಸ್ವಾಮಿ ಬಿನ್ ರಾಮಕೃಷ್ಣಪ್ಪ, ಟಿ.ಹೊಸೂರು.	ಚಿಕ್ಕಬಳ್ಳಾಪುರ
30	ಮಂಜುನಾಥ್ ಬಿನ್ ವೆಂಕಟರಾಯಪ್ಪ, ಕೃಷ್ಣಾಪುರ.	ಚಿಕ್ಕಬಳ್ಳಾಪುರ
31	ರಮೇಶ್ ಬಿನ್ ನಾರಾಯಣಪ್ಪ, ಹೊನ್ನಗಿರಿಯಪ್ಪನಹಳ್ಳಿ.	ಚಿಕ್ಕಬಳ್ಳಾಪುರ
32	ಬಿ. ಆದಿನಾರಾಯಣಪ್ಪ ಬಿನ್ ನಾರಾಯಣಪ್ಪ, ಕಡೇಹಳ್ಳಿ.	ಗುಡಿಬಂಡೆ
33	ಟಿ. ಜಂಗಮಯ್ಯ ಬಿನ್ ಲೇ. ಜಂಗಮಯ್ಯ, ಮಾಚನಹಳ್ಳಿ	ಗುಡಿಬಂಡೆ
34	ಎನ್. ಅಶ್ವಥಪ್ಪ ಬಿನ್ ನಾರಾಯಣಪ್ಪ, ವರ್ಲಕೊಂಡ	ಗುಡಿಬಂಡೆ
35	ಕೃಷ್ಣರೆಡ್ಡಿ ಬಿನ್ ಚಿಕ್ಕಕ್ಯಾತಪ್ಪ, ಚಲಕಾಲಪರ್ತಿ.	ಚಿಕ್ಕಬಳ್ಳಾಪುರ
36	ಹೆಚ್.ಎನ್. ಗಂಗಾದರಯ್ಯ ಬಿನ್ ಅಂಗಡಿ ನಂಜುಂಡಪ್ಪ, ಹಳೇಹಳ್ಳಿ	ಗೌರಿಬಿದನೂರು
37	ಜಿ.ಬಿ. ಸುರೇಶ್ ಬಿನ್ ಬಯ್ಯಪ್ಪರೆಡ್ಡಿ, ಗುಟ್ಟೇನಹಳ್ಳಿ.	ಗೌರಿಬಿದನೂರು
38	ಎನ್.ವಿ.ರವಿ ಬಿನ್ ವೆಂಕಟರಮಣಪ್ಪ, ನಾಮಗೊಂಡ್ಲು.	ಗೌರಿಬಿದನೂರು
39	ಗಿರೀಶ್ ಬಿನ್ ಮುನಿಕೆಂಪಯ್ಯ, ಉಪ್ಪಾರಹಳ್ಳಿ.	ಗೌರಿಬಿದನೂರು

40	ಜಯರಾಮಯ್ಯ ಬಿನ್ ಬಂಡೆಪ್ಪ, ಪಿ.ನಾಗೇನಹಳ್ಳಿ.	ಗೌರಿಬಿದನೂರು
41	ರಾಮಕೃಷ್ಣ ರೆಡ್ಡಿ ಬಿನ್ ವೆಂಕಟರಮಣರೆಡ್ಡಿ, ನಗರಗೆರೆ.	ಗೌರಿಬಿದನೂರು
42	ಕೆ.ಎನ್. ವಿವೇಕನಂದರೆಡ್ಡಿ ಬಿನ್ ನಂಜರೆಡ್ಡಿ, ಕುರುಬರಹಳ್ಳಿ.	ಗೌರಿಬಿದನೂರು
43	ಅಮರ್ ನಾರಾಯಣಸ್ವಾಮಿ ಬಿನ್ ಜಿ. ಸುಬ್ಬರೆಡ್ಡಿ, ಗೊಲ್ಲಹಳ್ಳಿ	ಚಿಂತಾಮಣಿ
44	ಕೊಂಡರೆಡ್ಡಿ ಬಿನ್ ಚನ್ನರಾಯಪ್ಪ, ತಿಮ್ಮಂಪಲ್ಲಿ.	ಬಾಗೇಪಲ್ಲಿ
45	ಆರ್.ವೆಂಕಟೇಶ್ ಬಿನ್ ರಾಮದಾಸ್, ಡಿ.ಕೊತ್ತಹಳ್ಳಿ	ಬಾಗೇಪಲ್ಲಿ
46	ಗಂಗಾರಾಜು ಬಿನ್ ನಾರಾಯಣಪ್ಪ, ಕತ್ತರಿಗುಪ್ಪೆ.	ಚಿಕ್ಕಬಳ್ಳಾಪುರ
47	ವೆಂಕಟರಮಣಪ್ಪ ಬಿನ್ ವೆಂಕಟರಾಯಪ್ಪ, ಗೊಳೂರು.	ಬಾಗೇಪಲ್ಲಿ
48	ವೆಂಕಟರೆಡ್ಡಿ ಬಿನ್ ಮುದ್ದರೆಡ್ಡಿ, ಬಂಡಪ್ಪನಹಳ್ಳಿ.	ಶಿಡ್ಲಘಟ್ಟ
49	ಅನಿಲ್ ಕುಮಾರ್ ಬಿನ್ ನಂಜೇಗೌಡ, ನಾಯಕನಹಳ್ಳಿ.	ಶಿಡ್ಲಘಟ್ಟ
50	ನಾಗರಾಜು ಬಿನ್ ಕೆಂಪೇಗೌಡ, ಕಾಲನಾಯಕನಹಳ್ಳಿ.	ಶಿಡ್ಲಘಟ್ಟ
51	ಸೂರ್ಯ ನಾರಾಯಣ ಬಿನ್ ಕೆಂಪೇಗೌಡ, ಕಾಲನಾಯಕನಹಳ್ಳಿ.	ಶಿಡ್ಲಘಟ್ಟ
52	ಮಂಜುನಾಥ್ ಬಿನ್ ವೆಂಕಟರಾಯಪ್ಪ, ಬಲುವನಹಳ್ಳಿ.	ಶಿಡ್ಲಘಟ್ಟ
53	ಕೆಂಪೇಗೌಡ ಬಿನ್ ಮುನೇಗೌಡ, ಬಲುವನಹಳ್ಳಿ.	ಶಿಡ್ಲಘಟ್ಟ

54	ಕೃಷ್ಣಾ ರೆಡ್ಡಿ ಬಿನ್ ಚಿಕ್ಕನಾರಾಯಣಪ್ಪ, ಕಾಪಲ್ಲಿ.	ಚಿಂತಾಮಣಿ
55	ನಾಗರಾಜು ಬಿನ್ ಚಿಕ್ಕನಾರಾಯಣಪ್ಪ, ಕಾಪಲ್ಲಿ.	ಚಿಂತಾಮಣಿ

ಅನುಬಂಧ– 2

ಕ್ರಸಂ.	ಜಿಲ್ಲೆಗಳು	ರೈತರ ಸಂಖ್ಯೆ	ಪ್ರವಾಸಕ್ಕೆ ತಗುಲಿದ ವೆಚ್ಚ (ರೂ.ಲಕ್ಷಗಳಲ್ಲಿ)
1	ಶಿವಮೊಗ್ಗ	119	2.97
2	ಚಿತ್ರದುರ್ಗ	225	5.63
3	ಕೊಡಗು	45	1.13
4	ಹಾಸನ	200	5.00
5	ಚಿಕ್ಕಮಗಳೂರು	50	1.25
6	ಬೆಳಗಾಂ	156	3.90
7	ಬೆಂಗಳೂರು(ಗ್ರಾಮ)	165	4.12
8	ರಾಮನಗರ	175	4.38
9	ಕೋಲಾರ	75	1.88
10	ಚಿಕ್ಕಬಳ್ಳಾಪುರ	55	1.34
11	ಮೈಸೂರು	55	1.38
12	ದಕ್ಷಿಣ ಕನ್ನಡ	116	2.34
13	ಉಡುಪಿ	45	1.13
14	ಉತ್ತರ ಕನ್ನಡ	40	1.00
15	ಕೊಪ್ಪಳ	50	1.25
16	ಗುಲ್ಬರ್ಗ	545	13.63
17	ಚಾಮರಾಜನಗರ	55	1.38
18	ಧಾರವಾಡ	165	4.13
19	ಬೀದರ್	30	0.75
20	ಬೆಂಗಳೂರು(ನಗರ)	52	1.30
21	ಗದಗ	30	0.75

22	ರಾಯಚೂರು	270	6.75
23	ಮಂಡ್ಯ	50	1.25
24	ದಾವಣಗೆರೆ	137	3.46
.	ಒಟ್ಟು	**2905**	**72.09**

ಶ್ರೀ ಕೆ.ಪಿ. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ, ಅನುದಾನದ ಬಾಕಿ ಎಷ್ಟು ಎಂದು ತಿಳಿಸಿಲ್ಲ. ಈ ಪ್ರವಾಸಕ್ಕೆ ರೈತರನ್ನು ಕಳುಹಿಸುವಂಥ ಸಂದರ್ಭದಲ್ಲಿ ಜಿಲ್ಲಾವಾರು ಮಾಹಿತಿಯನ್ನು ಕೇಳಿದ್ದೆನು. ಅದನ್ನು ಒದಗಿಸಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಕೇವಲ 50 ಜನರನ್ನು ಕಳುಹಿಸಿದ್ದಾರೆ. ಕೆಲವು ಜಿಲ್ಲೆಗಳಲ್ಲಿ 270 ಕ್ಕೂ ಹೆಚ್ಚು ಜನರನ್ನು ಕಳುಹಿಸಿರತಕ್ಕಂಥ ಮಾಹಿತಿಯನ್ನು ಒದಗಿಸಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ಜಿಲ್ಲೆಯ ರೈತರನ್ನು ಹೊರ ರಾಜ್ಯಗಳಿಗೆ ಪ್ರವಾಸ ಕಳುಹಿಸುವಂಥ ಸಂದರ್ಭದಲ್ಲಿ ಎಲ್ಲಿ ತೋಟಗಾರಿಕಾ ಬೆಳೆಗಳು ಹೆಚ್ಚಾಗಿರುತ್ತವೆ ಅಂಥ ಜಿಲ್ಲೆಗಳಲ್ಲಿ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ಉದಾಹರಣೆಗೆ ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆ ತೋಟಗಾರಿಕೆ ಬೆಳೆಗಳಲ್ಲಿ ಮುಂಚೂಣಿಯಲ್ಲಿರುವಂಥದ್ದು. ಆಲೂಗೆಡ್ಡೆ, ದ್ರಾಕ್ಷಿ ಮುಂತಾದ ಬೆಳೆಗಳಿಗೆ ಹೆಸರುವಾಸಿಯಾದ ಜಿಲ್ಲೆಯಾಗಿರುವುದರಿಂದ ಅಲ್ಲಿಂದ ಕೇವಲ 50 ಜನರನ್ನು ಮಾತ್ರ ಹೊರರಾಜ್ಯಗಳಿಗೆ ಪ್ರವಾಸಕ್ಕೆ ಕಳುಹಿಸಿದ್ದಾರೆ. ಇಂತ ತಾರತಮ್ಯ ಆಗುವುದು ಬೇಡ. ಉದಾಹರಣೆಗೆ ಗುಲ್ಬರ್ಗಾದಲ್ಲಿ 545 ಜನರನ್ನು ಇವತ್ತು ಹೊರ ರಾಜ್ಯಗಳಿಗೆ ಪ್ರವಾಸಕ್ಕೆ ಕಳುಹಿಸಿರುತ್ತಾರೆ. ಸಮಗ್ರವಾಗಿ ರೈತರನ್ನು ಎಲ್ಲಾ ಜಿಲ್ಲೆಗಳಿಂದ ಆದ್ಯತೆ ಮೇರೆಗೆ ಕಳುಹಿಸಬೇಕು ಎಂದು ಮನವಿ ಮಾಡುತ್ತೇನೆ. ಅದೇ ರೀತಿ ಔಷಧಿಗಳ ಖರೀದಿ ಏನಾಗುತ್ತಿದೆ ಎಂದರೆ, ರೈತರಿಗೆ ಬೇಕಾದಂತಹ ಎಲ್ಲಾ ಔಷಧಿಗಳನ್ನು ಸಹಾಯಧನದಲ್ಲಿ ಒದಗಿಸುವಂತಹ ಪ್ರಯತ್ನ ಆಗುತ್ತಿಲ್ಲ. ಕೇವಲ Mankozib ಮತ್ತು Copper Oxi-Chloride ನಂತಹ ಕೇವಲ ಕೆಲವೇ ಔಷಧಿಗಳನ್ನು ಒದಗಿಸುವುದರಿಂದ ಇವತ್ತು ತೋಟಗಾರಿಕಾ ಬೆಳೆಗಳಿಗೆ ಏನು ರೋಗ ಬರುತ್ತದೆ ಅಂತಹ ಸಂದರ್ಭಗಳಲ್ಲಿ ಅತೀ ಸಣ್ಣ ರೈತರು, ಸಣ್ಣ ರೈತರು ಉಳಿಸಿಕೊಳ್ಳುವುದಕ್ಕೆ ಇದು ಅವಶ್ಯಕತೆಯಾಗಿರುತ್ತದೆ.

ಅದಕ್ಕೆ ಹೆಚ್ಚಿನ ಔಷಧಿಗಳನ್ನು ಇಲಾಖಾ ಮುಖಾಂತರ ಬಿಡುಗಡೆ ಮಾಡಬೇಕು ಎಂದು ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಅವರ ಕೋರಿಕೆಯಂತೆ ಹೆಚ್ಚು ಜನ ಸದಸ್ಯರನ್ನು ಕಳುಹಿಸಬೇಕಾದಾಗ ಆಯಾಯ ಭಾಗದಲ್ಲಿ ಬಂದಿರುವಂತಹ ಅರ್ಜಿಗಳನ್ನು ಗಮನದಲ್ಲಿಟ್ಟುಕೊಂಡು ಕಳುಹಿಸುವಂತಹ ವ್ಯವಸ್ಥೆಯಾಗಿದೆ. ಇನ್ನು ಮುಂದೆ ಕಳುಹಿಸಬೇಕಾದಾಗ ಆಯಾಯ ಭಾಗದ ಜನರ ಬೇಡಿಕೆಗನುಗುಣವಾಗಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕಳುಹಿಸುವುದಕ್ಕೆ ಅವಕಾಶ ಮಾಡಿಕೊಡಲಾಗುವುದು ಎಂದು ಹೇಳುವುದಕ್ಕೆ ಬಯಸುತ್ತೇನೆ. ಇಲ್ಲಿ ಅವರು ಹೇಳಿದಂತಹ ರಾಷ್ಟ್ರೀಯ ತೋಟಗಾರಿಕಾ ಮಿಷನ್‌ನಿಂದ ಔಷಧಿ ಕೊಡಬೇಕಾದಂತಹ ಸಂದರ್ಭದಲ್ಲಿ ಸಮಗ್ರ ಕೀಟ ನಿರ್ವಹಣೆಯಲ್ಲಿ ಯೋಜನೆಯಲ್ಲಿ ಕೊಡಬೇಕಾಗಿರುವಂತಹ ಪ್ರತಿ ಹೆಕ್ಟೇರ್‌ಗೆ 10 ಸಾವಿರ ರೂಪಾಯಿಗಳಂತೆ ಹಾಗೂ ತೋಟಗಾರಿಕಾ ಬೆಳೆಗಳಿಗೆ ಕೀಟ ಮತ್ತು ರೋಗರುಜಿನಗಳಿಗೆ ಸಂಬಂಧಪಟ್ಟಂತೆ ಪ್ರತಿ ಹೆಕ್ಟೇರ್‌ಗೆ ಒಂದು ಸಾವಿರ ರೂಪಾಯಿಯಂತೆ National Horticulture Mission ನಲ್ಲಿ ಶೇಕಡಾ 50ರ ಸಹಾಯಧನದಲ್ಲಿ ಕೊಡುವಂತಹ ವ್ಯವಸ್ಥೆ ಇದೆ. ಅದರ ಜೊತೆಗೆ State sector ನಲ್ಲಿ ಶೇಕಡಾ 50ರ ಸಹಾಯಧನದಲ್ಲಿ ಕೊಡುವಂತಹ ವ್ಯವಸ್ಥೆ ಇದೆ. ಎಲ್ಲಾ ರೋಗಗಳಿಗೆ ಬೇಕಾಗಿರುವಂತಹ ಔಷಧಿಗಳಿಗೆಂದೇ ಏನೂ ಇಲ್ಲ, ಸೀಮಿತವಾಗಿ ಕೆಲವು ನಿಯಂತ್ರಣಗಳಿಗೆ ಯಾವಾಗ ಮಾಡಬೇಕು ಎಂದು ಸಸ್ಯ ಸಂರಕ್ಷಣಾ ಔಷಧಿಗಳೆಂದು ಏನು ಗುರುತಿಸಿರುವಂತಹ ಔಷಧಿಗಳಿವೆ, 13 ಔಷಧಿಗಳಿಗೆ ಮಾತ್ರ ಟೆಂಡರ್ ಕರೆದು, ಆ ಔಷಧಿಗಳನ್ನು ಗೊತ್ತುಪಡಿಸಿ ಅವುಗಳನ್ನು ಮಾರಾಟ ಮಾಡುವಂತಹ ವ್ಯವಸ್ಥೆಯನ್ನು, ಅವುಗಳಿಗೆ ಸಬ್ಸಿಡಿ ಕೊಡುವಂತಹ ವ್ಯವಸ್ಥೆಯನ್ನು ಮಾಡಲಾಗಿದೆ. ಹಾಗೆಯೇ ಮತ್ತೆ ಯಾವುದಾದರೂ ಬೇಕಾಗಿದ್ದರೆ ಅದನ್ನು ಇಲಾಖೆಯವರು ನಮ್ಮ ಗಮನಕ್ಕೆ ತಂದರೆ ಪರಿಶೀಲನೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೆ.ಪಿ.ಬಚ್ಚೇಗೌಡ : ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಪ್ರವಾಸ ಹೋಗತಕ್ಕಂತಹ ಸಂದರ್ಭದಲ್ಲಿ ಅರ್ಜಿಗಳು ಬಂದಿರತಕ್ಕಂತಹದ್ದರ ಬಗ್ಗೆ ನಾವು ಕ್ರಮ ತೆಗೆದುಕೊಂಡಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ಅರ್ಜಿ ಕರೆಯತಕ್ಕಂತಹ ವ್ಯವಸ್ಥೆ ಇಲ್ಲ. ಇಲಾಖೆಯಿಂದ ಅವರು ಬೇಕಾದರೆ ತರಿಸಿ ನೋಡಲಿ. ಎಲ್ಲಿಯೂ ಯಾವತ್ತೂ ರೈತರಿಂದ ಅರ್ಜಿಗಳನ್ನು ಸ್ವೀಕರಿಸಿ

ಪ್ರವಾಸ ಕಳುಹಿಸುತ್ತಿಲ್ಲ. ಇಲಾಖೆಗೆ ಇಂತಿಷ್ಟು ಜನ ರೈತರನ್ನು ಆಯ್ಕೆ ಮಾಡಿ ಪ್ರವಾಸಕ್ಕೆ ಕಳುಹಿಸಿ ಎಂದು ಮಾಹಿತಿ ಕಳುಹಿಸುತ್ತಾರೆ, ಅದರಂತೆ ಕಳುಹಿಸ ಲಾಗುತ್ತಿದೆ. ಇದನ್ನು ಬಿಟ್ಟು ಪ್ರತಿ ಜಿಲ್ಲೆಗೆ ಇಂತಿಷ್ಟು ಜನ ರೈತರನ್ನು ಕಳುಹಿಸಿ ಎಂದು ಮಾಹಿತಿ ಕೊಡಬೇಕೇ ಹೊರತು ಇವತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೇವಲ 50 ಜನರಿಗೆ ಮಾತ್ರ ಅವಕಾಶ ಕೊಡಲಾಗಿದೆ. ಅರ್ಜಿಯನ್ನಂತೂ ಕರೆದಿಲ್ಲ. ಇದು ತಪ್ಪು ಮಾಹಿತಿ.

ಶ್ರೀ ಸಿ.ಎಂ.ಉದಾಸಿ : ಇನ್ನು ಮುಂದೆ ತಾವು ಹೇಳಿದಂತಹ ಸಲಹೆಯನ್ನು ಗಮನದಲ್ಲಿ ಇಟ್ಟುಕೊಂಡು ಇಲಾಖಾಧಿಕಾರಿಗಳಿಗೆ ಸೂಚನೆ-ಯನ್ನು ಕೊಡುವಂತಹ ಕ್ರಮ ಕೈಗೊಳ್ಳುತ್ತೇವೆ.

ಭಟ್ಕಳ ಮತ್ತು ಹೊನ್ನಾವರ ತಾಲ್ಲೋಕಿನ ವ್ಯಾಪ್ತಿಯ ರಸ್ತೆಗಳ ದುರಸ್ಥಿ

73 (757) ಶ್ರೀ ಜೆ.ಡಿ.ನಾಯ್ಕ (ಭಟ್ಕಳ) : ಮಾನ್ಯ ಲೋಕೋಪ ಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕಿನ ಯಾವ್ಯಾವ ರಸ್ತೆಗಳಿಗೆ ದುರಸ್ಥಿ, ಸುಧಾರಣೆ ಹಾಗೂ ಡಾಂಬರೀಕರಣ ಇತ್ಯಾದಿ ಕೆಲಸಗಳಿಗೆ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ (ಕಳೆದ 3 ವರ್ಷಗಳ ವಿವರ ನೀಡುವುದು);

ಆ) ನಬಾರ್ಡ್ ಯೋಜನೆಯಡಿ ಆದ ಕಾಮಗಾರಿ ವಿವರ ಹಾಗೂ ಖರ್ಚು ಮಾಡಿದ ಮೊತ್ತವೆಷ್ಟು (ಕಳೆದ 3 ವರ್ಷಗಳ ವಿವರ ನೀಡುವುದು);

ಇ) ಕಳೆದ 3 ವರ್ಷಗಳಲ್ಲಿ ಸಿ.ಆರ್.ಎಫ್. ಯೋಜನೆಯಡಿ ಆದ ಕಾಮಗಾರಿ ಹಾಗೂ ಖರ್ಚಿನ ವಿವರ ನೀಡುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆ ಕಾರವಾರ ವಿಭಾಗದಲ್ಲಿ ಕಳೆದ 3 ವರ್ಷಗಳಲ್ಲಿ ಭಟ್ಕಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕುಗಳಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿ ಒಟ್ಟು 19 ಕಾಮಗಾರಿಗಳಿಗೆ 581.91 ಲಕ್ಷಗಳಿಗೆ ಅಂದಾಜು ಪತ್ರಿಕೆಗಳು ಮಂಜೂರಾಗಿದ್ದು ಇಲ್ಲಿಯವರೆಗೆ 414.32 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಅಲ್ಲದೇ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆಗಾಗಿ ಕಳೆದ 3 ವರ್ಷಗಳಲ್ಲಿ 164.01 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಹಾಗೂ ರಾಜ್ಯ ಹೆದ್ದಾರಿ ನಿರ್ವಹಣೆಗಾಗಿ ಪ್ರಸಕ್ತ ಸಾಲಿನಲ್ಲಿ 174.90 ಲಕ್ಷಗಳಿಗೆ ಭಟ್ಕಳ

ಪ್ಯಾಕೇಜ್‌ನಡಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.)

ಭಟ್ಕಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕಿನಲ್ಲಿ ರಾಷ್ಟ್ರೀಯ ಹೆದ್ದಾರಿಗಳನ್ನು ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ಕಳೆದ 3 ವರ್ಷಗಳಲ್ಲಿ ತೆಗೆದುಕೊಂಡ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ವಿವರಗಳು ಅನುಬಂಧದಲ್ಲಿದೆ.

ಇ) ವಿವರಗಳು ಅನುಬಂಧದಲ್ಲಿದೆ.

ಅನುಬಂಧ

ಮಾನ್ಯ ಶ್ರೀ ಜೆ.ಡಿ.ನಾಯ್ಕ (ಭಟ್ಕಳ) ಎಂಎಲ್‌ಎ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ. 757 ಗೆ ಪೂರಕ ಟಿಪ್ಪಣಿಗಳು

ಲೋಕೋಪಯೋಗಿ ಕಾರವಾರ ವಿಭಾಗದಲ್ಲಿ ಕಳೆದ 3 ವರ್ಷಗಳಲ್ಲಿ ಭಟ್ಕಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕುಗಳಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿಯ ಒಟ್ಟು 19 ಕಾಮಗಾರಿಗಳಿಗಾಗಿ 581.91 ಲಕ್ಷಗಳಿಗೆ ಅಂದಾಜು ಪತ್ರಿಕೆಗಳನ್ನು ಮಂಜೂರಾಗಿದ್ದು ಇಲ್ಲಿಯವರೆಗೆ 414.32 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಕ್ರ ಸಂ.	ಕಾಮಗಾರಿಯ ಹೆಸರು	ಒಟ್ಟು ಕಾಮಗಾರಿಗಳು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಖರ್ಚಾದ ಮೊತ್ತ (ರೂ.ಲಕ್ಷಗಳಲ್ಲಿ)
ಅ	ನಬಾರ್ಡ್ ಕಾಮಗಾರಿಗಳು			
1	ಭಟ್ಕಳ ತಾಲ್ಲೂಕಿನ ಕುಂಟವಾಣಿ ಅರವಕ್ಕಿ ವಾಯಾ ಕುಲವಡಿ ರಸ್ತೆ ಸುಧಾರಣೆ	01	42.00	47.01
2	ಭಟ್ಕಳ ತಾಲ್ಲೂಕಿನ ಹಡಾಳ ಕಚೋಡಿ ರಸ್ತೆ ಸುಧಾರಣೆ	01	60.00	40.21
3	ಭಟ್ಕಳ ತಾಲ್ಲೂಕಿನ ತಲಗೋಡ ರಸ್ತೆ ಸುಧಾರಣೆ	01	30.00	29.54
4	ಭಟ್ಕಳ ತಾಲ್ಲೂಕಿನ ಮಟ್ಟಳ್ಳಿ	01	25.00	23.83

	ಸಬ್ಬಟ್ಟಿ ರಸ್ತೆ ಸುಧಾರಣೆ			
5	ಹೊನ್ನಾವರ ತಾಲ್ಲೂಕಿನ ಹೆಗ್ಗಾರ ಮಾಗೋಡ ನಗರಬಸ್ತಿಕೇರಿ ಸೇರುವೆ ಹಿನ್ನೂರ ಅನೀಲ ಗೋಡ ರಸ್ತೆ ಸುಧಾರಣೆ	01	50.00	69.43
6	ಹೊನ್ನಾವರ ತಾಲ್ಲೂಕಿನ ಹೆಗ್ಗಾರ ಮಾಗೋಡ ನಗರ ಬಸ್ತಿಕೇರಿ ಸೇರುವೆ ಕಲಸಿನಡಿಕೇರಿ ರಸ್ತೆ ಸುಧಾರಣೆ	01	50.00	47.55
7	ಭಟ್ಕಳ ತಾಲ್ಲೂಕಿನ ಕವಲಕ್ಕಿ ಬೊರಳ್ಳಿ ನಗರತಾರಿ ರಸ್ತೆ ಸುಧಾರಣೆ	01	40.00	ಟೆಂಡರ್ ಪ್ರಕ್ರಿಯೆ ಯಲ್ಲಿದೆ
8	ಭಟ್ಕಳ ತಾಲ್ಲೂಕಿನ ಹೊಳೆಗದ್ದೆ ಗಂಜಿಕೇರಿ ರಸ್ತೆ ಸುಧಾರಣೆ	01	60.00	ಟೆಂಡರ್ ಪ್ರಕ್ರಿಯೆ ಯಲ್ಲಿದೆ
	ಒಟ್ಟು	**8.00**	**357.00**	**257.57**
ಆ	**5054 ರಸ್ತೆ ಮತ್ತು ಸೇತುವೆ**			
1	ಭಟ್ಕಳ ತಾಲ್ಲುಕಿನ ಕುದ್ರಗಿ ಹರಿಜನಕೇರಿ ರಸ್ತೆಗೆ ಸೇರುವ ಹೆಗ್ಗಾರ ಮಾಗೋಡ ನಗರಬಸ್ತಿಕೇರಿ ರಸ್ತೆ ಸುಧಾರಣೆ	01	5.50	5.72
2	ಭಟ್ಕಳ ತಾಲ್ಲೂಕಿನ ಭಟ್ಕಳ ಸೊರಬ ರಾಜ್ಯ ಹೆದ್ದಾರಿ ಕಿಮೀ 16.50 ರಿಂದ 18.70 ವರೆಗೆ ಸುಧಾರಣೆ	01	20.12	24.52
3	ಭಟ್ಕಳ ತಾಲ್ಲೂಕಿನ ಭಟ್ಕಳ ಸೊರಬ ರಾಜ್ಯ ಹೆದ್ದಾರಿ ಕಿಮೀ 6 ರಲ್ಲಿ ಸುಧಾರಣೆ	01	3.40	3.07

4	ಭಟ್ಕಳ ತಾಲ್ಲೂಕಿನ ಮಾರುಕೇರಿ ಕಿತ್ರೆ ಕೂಟಖಂಡ ರಸ್ತೆ ಸುಧಾರಣೆ	01	1.00	1.00
5	ಭಟ್ಕಳ ತಾಲ್ಲೂಕಿನ ಮಾರುಕೇರಿ ಕಿತ್ರೆ ಕೂಟಕಂಡ ರಸ್ತೆಯಲ್ಲಿ ಸಿ.ಡಿ. ನಿರ್ಮಾಣ	01	0.24	0.21
6	ಭಟ್ಕಳ ತಾಲ್ಲೂಕಿನ ಹಜಲೆ ಕೂಡು ರಸ್ತೆಯಲ್ಲಿ ಬಾಕ್ಸ್ ಕಲ್ವರ್ಟ್ ನಿರ್ಮಾಣ.	01	2.65	2.31
7	ಭಟ್ಕಳ ತಾಲ್ಲೂಕಿನ ಕಿತ್ರೆ ಅಂತರವಳ್ಳಿ ರಸ್ತೆ ವಾಯಾ ದೇವಿಮನೆ ರಸ್ತೆ ಸುಧಾರಣೆ	01	30.00	2.00 (ಕಾಮ ಗಾರಿ)
8	ಭಟ್ಕಳ ತಾಲ್ಲೂಕಿನ ಹಜಲೆ ಅಪ್ರೋಂಚ್ ರಸ್ತೆ ಕಿಮೀ 15.00 ರಲ್ಲಿ ರಿಟೇನಿಂಗ್ ವಾಲ್ ನಿರ್ಮಾಣ.	01	25.00	ಕಾಮ ಗಾರಿ ಪ್ರಕ್ರಿಯೆ ಯಲ್ಲಿದೆ
9	ಭಟ್ಕಳ ತಾಲ್ಲೂಕಿನ ಹಜಲೆಯಿಂದ ರಾಹೆ–17ಕ್ಕೆ ಸೇರುವ ಕಿಮೀ 10.20 ರಲ್ಲಿ ಸೇತುವೆ ನಿರ್ಮಾಣ.	01	25.00	ಕಾಮ ಗಾರಿ ಪ್ರಗತಿ ಯಲ್ಲಿದೆ
10	ಹೊನ್ನಾವರ ತಾಲ್ಲೂಕಿನ ಹೆಗ್ಗಾರ ಮಾಗೋಡ ನಗರಬಸ್ತಕೇರಿ ರಸ್ತೆ ಕಿಮೀ 8.00 ರಿಂದ 10.00 ರವರೆಗೆ ಮರು ಡಾಂಬರೀಕರಣ	01	12.00	13.12
	ಒಟ್ಟು	10	124.91	52.28
ಇ	ಕೇಂದ್ರ ರಸ್ತೆ ನಿಧಿ ಕಾಮಗಾರಿಗಳು :			
1	ಭಟ್ಕಳ ತಾಲ್ಲೂಕಿನ ಭಟ್ಕಳ	01	100.00	104.47

	ಸೊರಬ ರಾಜ್ಯ ಹೆದ್ದಾರಿ ಕಿಮೀ 0.00 ರಿಂದ 4.55 ರ ವರೆಗೆ ಸುಧಾರಣೆ			
	ಒಟ್ಟು:	**01**	**100.00**	**104.47**

ರಾಜ್ಯ ಹೆದ್ದಾರಿ ನಿರ್ವಹಣೆಗಾಗಿ ಒಟ್ಟು 27.10 ಕಿಮೀ ಗಳಿಗೆ ಭಟ್ಕಳ ತಾಲ್ಲೂಕಾ ಪ್ಯಾಕೇಜಿನಲ್ಲಿ ಒಟ್ಟು 174.90 ಲಕ್ಷಗಳಿಗೆ ನಿರ್ವಹಣಾ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ. ಅಲ್ಲದೇ ಜಿಲ್ಲಾ ಮುಖ್ಯ ರಸ್ತೆ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ದುರಸ್ತಿಗಾಗಿ ಒಟ್ಟು 164.01 ಲಕ್ಷಗಳನ್ನು ಕಳೆದ 3 ವರ್ಷಗಳಲ್ಲಿ ಖರ್ಚು ಮಾಡಲಾಗಿದ್ದು ವಿವರಗಳು ಈ ಕೆಳಗಿನಂತಿವೆ.

ಕ್ರ ಸಂ.	ವರ್ಷ	ಅಂದಾಜು ಮೊತ್ತ	ಖರ್ಚಾದ ಮೊತ್ತ
1	2006–07	37.04	37.04
2	2007–08	49.00	49.00
3	2008–09	77.97	77.97
	ಒಟ್ಟು	**164.01**	**164.01**

ಅನುಬಂಧ

ವಿಧಾನ ಸಭೆಯ ಸದಸ್ಯರಾದ ಶ್ರೀ ಜೆ.ಡಿ. ನಾಯ್ಕ (ಭಟ್ಕಳ)ರವರು ಮಂಡಿಸಿರುವ ವಿಧಾನ ಸಭೆ ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ 757 ಕ್ಕೆ ವಿವರಗಳು

ಹೊನ್ನಾವರ ತಾಲ್ಲೂಕು

ಹೆದ್ದಾರಿ ಸಂಖ್ಯೆ	ವರ್ಷ	ದುರಸ್ತಿ	ಅಭಿವೃದ್ಧಿ	ಡಾಂಬರೀಕರಣ
ರಾಷ್ಟ್ರೀಯ ಹೆದ್ದಾರಿ – 17	2006–07	12.00	–	–
	2007–08	20.44	–	298–76
	2008–09	16.66	–	–
ರಾಷ್ಟ್ರೀಯ	2006–07	7.34	–	52.00
	2007–08	8.59	–	–

ಹೆದ್ದಾರಿ – 206	2008–09	11.95	–	–

ಭಟ್ಕಳ ತಾಲ್ಲೂಕು

ಹೆದ್ದಾರಿ ಸಂಖ್ಯೆ	ವರ್ಷ	ದುರಸ್ತಿ	ಅಭಿವೃದ್ಧಿ	ಡಾಂಬರೀಕರಣ
ರಾಷ್ಟ್ರೀಯ ಹೆದ್ದಾರಿ – 17	2006–07	13.32	–	208.00
	2007–08	20.00	–	–
	2008–09	13.26	–	–
ರಾಷ್ಟ್ರೀಯ ಹೆದ್ದಾರಿ– 206	2006–07	–	–	–
	2007–08	–	–	–
	2008–09	–	–	–

ಶ್ರೀ ಜೆ.ಡಿ.ನಾಯ್ಕ್ : ಕಳೆದ ಮೂರು ವರ್ಷಗಳ ಅವಧಿಯಲ್ಲಿ ವಿಶೇಷವಾಗಿ ಭಟ್ಕಳ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕುಗಳಲ್ಲಿ ಏನು ಈ ರಸ್ತೆ ದುರಸ್ತಿ, ಸುಧಾರಣೆ, ಡಾಂಬರೀಕರಣಗಳಿಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂದು ವರ್ಷಾವಾರು ವಿವರಣೆಯನ್ನು ಕೇಳಿದ್ದೇನೆ, NABARD ಯೋಜನೆಯಲ್ಲಿ ಆಗಿರುವ ಕಾಮಗಾರಿಗಳ ವಿವರಣೆಯನ್ನು ಕೇಳಿದ್ದೇನೆ ಹಾಗೂ CRF ಯೋಜನೆಗಳಡಿಯಲ್ಲಿ ಕೊಡುವ ವಿವರಗಳನ್ನು ಕೇಳಿದ್ದೇನೆ. ಆದರೆ, wholesale ಆಗಿ ವಿವರಗಳನ್ನು ಕೊಟ್ಟಿದ್ದಾರೆ. ರಸ್ತೆ, ಬ್ರಿಡ್ಜ್‌ಗಳು ಮತ್ತು CRF ನಲ್ಲಿ ವಿವರವಾಗಿ ವರ್ಷಾವಾರು ವಿವರ ಕೊಟ್ಟಿಲ್ಲ. ಕಳೆದ ಮೂರು ವರ್ಷಗಳ ಪ್ರಗತಿಯಾಗಿರುವುದರಲ್ಲಿ ಕೊಟ್ಟಿರುವ ದುಡ್ಡನ್ನು ನೋಡಿದಾಗ CRF ನಲ್ಲಿ ಒಂದೇ ಒಂದು ಕೆಲಸ ಕೊಟ್ಟಿದ್ದಾರೆ. ಆದರೆ, ಅದು ಯಾವ ವರ್ಷವೆಂದು ಕೂಡ ನಿಯಮಿತವಾಗಿ ನಮೂದಿಸಿಲ್ಲ. ನಾನು ಮುಖ್ಯವಾಗಿ ಕೇಳುವುದೇನೆಂದರೆ, ಈ CRF ಇರಲಿ, NABARD ಇರಲಿ ಎಲ್ಲಾ ಕಡೆಗಳಲ್ಲಿಯೂ ನಮಗೆ ಜಿಲ್ಲೆಯಲ್ಲಿ ಎರಡೆರಡು ತಾಲ್ಲೂಕುಗಳು ಬರುತ್ತವೆ. ಕೆಲಸ ಮಾಡಬೇಕೆಂದರೆ ಬಹಳ ಕಷ್ಟ. ದಯಮಾಡಿ CRF ಹಾಗೂ NABARD ಗಳಿಗೆ ಸ್ವಲ್ಪ ಹೆಚ್ಚಿಗೆ ಕೊಟ್ಟರೆ ಹೆಚ್ಚಿಗೆ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಉತ್ತರವನ್ನು ತಾವು ಏನು ಕೊಟ್ಟಿದ್ದೀರಿ ಅದನ್ನು ದಯಮಾಡಿ

year-wise ಕೊಡಿ. Year-wise ಕೊಟ್ಟಿಲ್ಲ. wholesale ಉತ್ತರ ಕೊಟ್ಟಿದ್ದಾರೆ. ಕಳೆದ ಬಾರಿ ಇದೇ ಪ್ರಶ್ನೆಯನ್ನು ನಾನು ಕೇಳಿದ್ದೆ. ಆದರೆ, ಒಂದೇ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದರು. ಉಳಿದ ಪ್ರಶ್ನೆಗಳಿಗೆ ಉತ್ತರಗಳು ಬಂದಿಲ್ಲ. ಚುಕ್ಕೆ ಗುರುತಿನ ಪ್ರಶ್ನೆಗಳಲ್ಲಿ ಬಂದಿತ್ತು. ದಯಮಾಡಿ ಹೆಚ್ಚಿಗೆ ಅನುದಾನ ಕೊಡಬೇಕು. CRF ನಿಂದವಂತೂ ಬರುತ್ತಿಲ್ಲ, ಕೇವಲ ಒಂದು ವರ್ಷಕ್ಕೆ ಮಾತ್ರ ಕೊಟ್ಟಿದ್ದಾರೆ. ಅದಕ್ಕಾಗಿ ದಯಮಾಡಿ ಹೆಚ್ಚಿಗೆ ಕೊಡತಕ್ಕಂತಹ ವ್ಯವಸ್ಥೆಯಾಗಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಮೂರು ವರ್ಷಗಳ ವಿವರವನ್ನು ಪ್ರತ್ಯೇಕವಾಗಿ ಅವರಿಗೆ ಕೊಡಲಾಗುವುದು ಹಾಗೂ CRF ನಲ್ಲಿ ಮತ್ತೆ ಹೆಚ್ಚಿನ ಕಾಮಗಾರಿ ತೆಗೆದುಕೊಳ್ಳುವ ಸಲುವಾಗಿ ಪ್ರಸ್ತಾವನೆಯನ್ನು ಕಳುಹಿಸಿ ಕೊಡಲಾಗುವುದು. ನಾನು ತಮ್ಮ ಗಮನಕ್ಕೆ ತರಲು ಬಯಸುವುದೇನೆಂದರೆ, 2009-10ನೇ ಸಾಲಿಗೆ ರಾಷ್ಟ್ರೀಯ ಹೆದ್ದಾರಿ-17 ರಲ್ಲಿ 4 ಕೋಟಿ 32 ಲಕ್ಷ ರೂಪಾಯಿಗಳಿಗೆ ಅನುಮೋದನೆ ದೊರಕಿದೆ. ಭಟ್ಕಳ ತಾಲ್ಲೂಕಿನಲ್ಲಿ 5 ಕಿ.ಮೀ.ಗೆ, ಹೊನ್ನಾವರ ತಾಲ್ಲೂಕಿನಲ್ಲಿ 7 ಕಿ.ಮೀ.ಗೆ, ಒಟ್ಟು 12 ಕಿ.ಮೀ.ಗೆ 4 ಕೋಟಿ 32 ಲಕ್ಷ ರೂಪಾಯಿಗಳಲ್ಲಿ ರಾಷ್ಟ್ರೀಯ ಹೆದ್ದಾರಿ-17ರಲ್ಲಿ ಕಾಮಗಾರಿಗೆ ಈಗ್ಗೆ ಎರಡು ದಿವಸಗಳ ಮೊದಲು ಅನುಮೋದನೆ ದೊರೆತಿದೆ. ಈ ಕೆಲಸವನ್ನು ಟೆಂಡರ್ ಕರೆದು ಕಾಮಗಾರಿ ಕೈಗೊಳ್ಳುತ್ತೇವೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ತಾವು ಹೇಳಿದ ಹಾಗೆ ಮೂರು ವರ್ಷಗಳ ವಿವರವನ್ನು ನಾನು ಕಳುಹಿಸಿಕೊಡುತ್ತೇನೆ.

ಮುಳಬಾಗಿಲು ತಾಲ್ಲೂಕಿನ ರಸ್ತೆಗಳ ಅಭಿವೃದ್ಧಿ

74 (649) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008-09 ಮತ್ತು 2009-10 ನೇ ಸಾಲಿನಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ಎಷ್ಟು ಕಿಮೀ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ. ಇದಕ್ಕಾಗಿ ವೆಚ್ಚ ಮಾಡಿರುವ ಮೊತ್ತ ಎಷ್ಟು;

ಆ) ತಾಲ್ಲೂಕಿನಲ್ಲಿ ಬಹು ಪಾಲು ರಸ್ತೆಗಳು ದುರಸ್ತಿಗೊಳ್ಳದೇ ಸಂಚಾರಕ್ಕೆ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಇ) ಹಾಗಿದ್ದಲ್ಲಿ ಈ ರಸ್ತೆಗಳನ್ನು ಆದ್ಯತೆ ಮೇರೆಗೆ ದುರಸ್ತಿ ಮಾಡಿಸಲು ಸರ್ಕಾರ ರೂಪಿಸಿರುವ ಕಾರ್ಯ ಯೋಜನೆಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 2008-09ನೇ ಸಾಲಿನಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಕೈಗೊಂಡ ರಸ್ತೆ ಕಾಮಗಾರಿಗಳ ವಿವರ.

ಕ್ರ ಸಂ.	ಲೆಕ್ಕಶಿರ್ಷಿಕೆ	ಅಭಿವೃದ್ಧಿ ಪಡಿಸಲಾದ ಉದ್ದ ಕಿ.ಮೀ ಗಳಲ್ಲಿ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ವೆಚ್ಚ ರೂ. ಲಕ್ಷಗಳಲ್ಲಿ
1	ಸಿ.ಆರ್.ಎಫ್.	8.25	135.00	130.79
2	ನಬಾರ್ಡ್	14.56	363.00	159.25
3	ಎಸ್.ಸಿ.ಪಿ ಕಾಮಗಾರಿ	3.19	52.00	52.00
4	ಟಿ.ಎಸ್.ಪಿ ಕಾಮಗಾರಿ	0.75	12.80	12.80
	ಒಟ್ಟು	26.75	562.80	354.84

2009-10 ನೇ ಸಾಲಿನಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಕೈಗೊಂಡ ರಸ್ತೆ ಕಾಮಗಾರಿಗಳ ವಿವರ

ಕ್ರಸಂ.	ಲೆಕ್ಕಶೀರ್ಷಿಕೆ	ಅಭಿವೃದ್ಧಿ ಪಡಿಸಲು ಯೋಜಿಸಲಾದ ಉದ್ದ ಕಿ.ಮೀ ಗಳಲ್ಲಿ	ಅಂದಾಜು ಮೊತ್ತ ರೂ.ಲಕ್ಷ ಗಳಲ್ಲಿ	ವೆಚ್ಚ ರೂ. ಲಕ್ಷಗಳಲ್ಲಿ
1	ಸಿ.ಆರ್.ಎಫ್.	9.60	100.00	-
2	ನಂಜುಂಡಪ್ಪ ವರದಿ	9.36	118.33	9.55
3	ಸುವರ್ಣ ಯೋಜನೆ	7.70	67.16	4.96
4	ನಬಾರ್ಡ್	12.00	225.00	66.83
5	ಓ.ಆರ್.ಎಫ್	3.85	100.00	-
6	ಎಸ್.ಸಿ.ಪಿ	2.07	77.23	8.00

	ಕಾಮಗಾರಿ (ಕಾಂಕ್ರೀಟ್ ರಸ್ತೆ)			
7	ಟಿ.ಎಸ್.ಪಿ ಕಾಮಗಾರಿ (ಕಾಂಕ್ರೀಟ್ ರಸ್ತೆ)	0.18	6.43	3.35
ಒಟ್ಟು		**44.76**	**694.15**	**92.69**

ಆ) ರಾಜ್ಯ ಹೆದ್ದಾರಿಗಳು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳನ್ನು ಗುಂಡಿ ರಹಿತವಾಗಿ ಇಡಲಾಗಿದೆ.

ರಾಜ್ಯ ಹೆದ್ದಾರಿಗಳು : ಮುಳಬಾಗಿಲು ತಾಲ್ಲೂಕು ವ್ಯಾಪ್ತಿಯಲ್ಲಿ ಒಂದು ರಾಜ್ಯ ಹೆದ್ದಾರಿ ಇದ್ದು 33.30 ಕಿ.ಮೀ ಉದ್ದವಿರುತ್ತದೆ. ಮುಳಬಾಗಿಲು ತಾಲ್ಲೂಕು ಮೂಡಿಗೆರೆ ಮಾರ್ಗವಾಗಿ ಬಾಣಾವರ ಶಿರಾ ಚಿಕ್ಕಬಳ್ಳಾಪುರ ಚಿಂತಾಮಣಿ ಶ್ರೀನಿವಾಸಪುರದಿಂದ ಆಂಧ್ರಗಡಿ ಸೇರುವ ರಸ್ತೆ (ರಾಜ್ಯ ಹೆದ್ದಾರಿ 58) 356.50 ರಿಂದ 389.80 ಕಿಮೀ ವರೆಗೆ ಹಾದು ಹೋಗುತ್ತದೆ.

ಆ) ಮುಳಬಾಗಿಲು ತಾಲ್ಲೂಕಿನಲ್ಲಿ 33.30 ಕಿ.ಮೀ ನಷ್ಟು ರಾಜ್ಯ ಹೆದ್ದಾರಿ ಇದ್ದು ಪ್ಯಾಕೇಜ್ 2–ಡಿ ರಲ್ಲಿ ಮೂರು ವರ್ಷಗಳ ನಿರ್ವಹಣಾ ಅವಧಿಯು ಸೆಪ್ಟೆಂಬರ್ 2009 ರ ಅಂತ್ಯಕ್ಕೆ ಮುಗಿದಿದ್ದು 101.50 ಲಕ್ಷಗಳ ಅನುದಾನದಲ್ಲಿ 1.78 ಕಿಮೀನಷ್ಟು 5.50 ಮೀ ಅಗಲಕ್ಕೆ ಅಭಿವೃದ್ಧಿಪಡಿಸಿ ಡಾಂಬರೀಕರಣ ಮಾಡಲಾಗಿದ್ದು ಉಳಿದ ಸರಪಳಿಗಳಿಗೆ ಡಾಂಬರು ಹಾಗೂ ಇತರೆ ನಿರ್ವಹಣೆ ಕಾಮಗಾರಿಯನ್ನು ಮಾಡಲಾಗಿದೆ. ಸೆಪ್ಟೆಂಬರ್ 2009 ರ ಅಂತ್ಯಕ್ಕೆ ಮೂರು ವರ್ಷಗಳ ನಿರ್ವಹಣಾ ಕಾಮಗಾರಿ ಮುಗಿದಿದ್ದು ಜನವರಿ 2010 ರವರೆಗೆ ಈ ರಸ್ತೆ ನಿರ್ವಹಣೆಗೆ ಲೆಕ್ಕ ಶೀರ್ಷಿಕೆ 3054 ಯೋಜನೆಯಡಿಯಲ್ಲಿ ರೂ.3.00 ಲಕ್ಷಗಳ ಅನುದಾನದಲ್ಲಿ ರಸ್ತೆಯನ್ನು ಗುಂಡಿ ರಹಿತ ರಸ್ತೆಯನ್ನಾಗಿ ಮಾಡಿ ವಾಹನಗಳ ಸಂಚಾರಕ್ಕೆ ಯೋಗ್ಯವಾಗಿರಿಸಲಾಗಿದೆ. ಈ ರಸ್ತೆಯನ್ನು ರಾಜ್ಯ ಹೆದ್ದಾರಿ 58 ರಿಂದ ರಾ.ಹೆ 234 ಕ್ಕೆ ಮೇಲ್ದರ್ಜೆಗೇರಿಸಿದ್ದು 06–01–2010 ರಂದು ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ಹಸ್ತಾಂತರಿಸಲಾಗಿದೆ.

ಜಿಲ್ಲಾ ಮುಖ್ಯ ರಸ್ತೆಗಳು

2008-09ನೇ ಸಾಲಿನಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ 345.38 ಕಿಮೀಗಳಷ್ಟು ಜಿಲ್ಲಾ ಮುಖ್ಯ ರಸ್ತೆಗಳಿದ್ದು, ಇದರಲ್ಲಿ ಗುಂಡಿ ಮುಚ್ಚಲು ಲೆಕ್ಕ ಶೀರ್ಷಿಕೆ 3054-12 ನೇ ಹಣಕಾಸು ಯೋಜನೆಯಡಿಯಲ್ಲಿ ರೂ.93.29 ಲಕ್ಷಗಳ ಅನುದಾನ ಬಿಡುಗಡೆ ಮಾಡಿದ್ದು, ಈ ಅನುದಾನದಲ್ಲಿ 261.11 ಕಿಮೀನಷ್ಟು, ಉದ್ದದ ರಸ್ತೆಯನ್ನು ಗುಂಡಿ ರಹಿತ ರಸ್ತೆಯನ್ನಾಗಿ ಮಾಡಲಾಗಿದೆ. ಉಳಿಕೆ 84.27 ಕಿಮೀ ಉದ್ದದ ರಸ್ತೆಯಲ್ಲಿ 8.25 ಕಿ.ಮೀ ಉದ್ದದ ರಸ್ತೆಯನ್ನು ವಿವಿಧ ಲೆಕ್ಕ ಶೀರ್ಷಿಕೆ ಯಡಿಯಲ್ಲಿ ಮೇಲ್ಕಂಡ ವಿವರಗಳಂತೆ ಅಭಿವೃದ್ಧಿಗೊಳಿಸಲಾಗಿದೆ.

2009-10ನೇ ಸಾಲಿನಲ್ಲಿ 345.38 ಕಿಮಿಗಳಷ್ಟು, ಜಿಲ್ಲಾ ಮುಖ್ಯ ರಸ್ತೆಗಳಲ್ಲಿ 3054-12 ನೇ ಹಣಕಾಸು ಯೋಜನೆಯಡಿಯಲ್ಲಿ 34.78 ಲಕ್ಷ ಅನುದಾನದಲ್ಲಿ ಮುಂಗಾರು ಪೂರ್ವ ನಿರ್ವಹಣೆ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ಹಾಗೂ ಲೆಕ್ಕ ಶೀರ್ಷಿಕೆ 3054-12 ನೇ ಹಣಕಾಸು ಯೋಜನೆಯಡಿಯಲ್ಲಿ ರೂ.34.75 ಲಕ್ಷ ಹಾಗೂ 3054 ಯೋಜನೆಯಡಿ ಯಲ್ಲಿ ರೂ. 84.50 ಲಕ್ಷಗಳು ಒಟ್ಟು ಅನುದಾನ 119.25 ಲಕ್ಷಗಳಲ್ಲಿ 258.92 ಕಿಮೀ ಡಾಂಬರು ತೇಪೆ ಕೆಲಸ ನಿರ್ವಹಿಸಲಾಗಿದೆ. ಉಳಿಕೆ 76.02 ಕಿಮೀಗಳಲ್ಲಿ ಈ ಸಾಲಿನ ವಿವಿಧ ಲೆಕ್ಕ ಶಿರ್ಷಿಕೆಯಡಿಯಲ್ಲಿ ಮೇಲ್ಕಂಡಂತೆ 37.51 ಕಿಮೀನಷ್ಟು ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಿ ವಾಹನಗಳ ಸಂಚಾರಕ್ಕೆ ಯೋಗ್ಯವಾಗಿರಿಸಿದೆ. ಉಳಿದ 38.59 ಕಿಮೀ ಉದ್ದವನ್ನು ಇತ್ತೀಚೆಗೆ ಮೇಲ್ದರ್ಜೆಗೇರಿಸಲಾಗಿದ್ದು, ಈ ಉದ್ದವನ್ನು ಸಹ ಅನುದಾನದ ಲಭ್ಯತೆಗನುಗುಣವಾಗಿ ಅಭಿವೃದ್ಧಿಗೊಳಿಸಲಾಗುವುದು.

ಇ) ದುರಸ್ತಿ ಅವಶ್ಯವಿರುವ ರಸ್ತೆಯನ್ನು ಕೈಗೆತ್ತಿಕೊಂಡು ಅನುದಾನದ ಲಭ್ಯತೆಗನುಗುಣವಾಗಿ ಹಂತ ಹಂತವಾಗಿ ಅಭಿವೃದ್ಧಿಗೊಳಿಸಲಾಗುವುದು.

ಶ್ರೀ ಅಮರೇಶ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಆದರೆ, ಅದು ಸಮರ್ಪಕವಾಗಿಲ್ಲ. ಏಕೆಂದರೆ, ಈಗಗಲೇ 2008-09ನೇ ಸಾಲಿನಲ್ಲಿ CRF ಮತ್ತು ಎಲ್ಲಾ ಯೋಜನೆಗಳಲ್ಲೂ ಕೂಡ ಸುಮಾರು 562.80 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿತ್ತು. ಅದರಲ್ಲಿ 354.84 ಅನ್ನು ಕೊಟ್ಟಿದ್ದಾರೆ. ಅದೇ ರೀತಿ 2009-10ರಲ್ಲಿ 694.15 ರ ಬದಲಿಗೆ 92 ಮಾತ್ರ ಕೊಟ್ಟು ಇದನ್ನು ಕೈತೊಳೆದುಕೊಂಡಿದ್ದಾರೆ. ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಬೇಕು. 3054 ಲೆಕ್ಕ ಶೀರ್ಷಿಕೆಯಡಿಯಲ್ಲಿ

ಈಗಾಗಲೇ ಬೇಕಾದಷ್ಟು ಅನುದಾನ ಪೆಂಡಿಂಗ್ ಇದೆ. ಆ ಅನುದಾನವನ್ನು ಕೂಡ ತಾವು ಬಿಡುಗಡೆ ಮಾಡಬೇಕು. ಈಗಾಗಲೇ ಕಾಮಗಾರಿಗಳನ್ನು ಹಂತ ಹಂತವಾಗಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಕೈತೊಳೆದುಕೊಳ್ಳುತ್ತಿದ್ದೀರಿ. ದಯವಿಟ್ಟು ಯಾವುದು ಕಾರ್ಯಕ್ರಮವನ್ನು ನೀವು ಕೊಡುತ್ತೀರೋ ಅದನ್ನು ಪೂರ್ಣವಾಗಿ ಕೈಗೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಹಾಗೆ, ಟೆಂಡರ್ ಪ್ರಕ್ರಿಯೆಯಲ್ಲಿ ನಡೆದಿರತಕ್ಕಂತಹ ಎಲ್ಲಾ ಕಾಮಗಾರಿಗಳ ಕೆಲಸವೂ ಸಹ ನಡೆಯುತ್ತಿದೆ. 562ಕ್ಕೆ 350 ಲಕ್ಷ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ ಎನ್ನುವ ಮಾತನ್ನು ಹೇಳಿದರು. ಆ ಕಾಮಗಾರಿ ಮುಗಿದ ಹಾಗೆ ಬಿಲ್ ಸಬ್‌ಮಿಟ್ ಮಾಡಿದ ಹಾಗೆ ಹಣ ಬಿಡುಗಡೆಯಾಗುತ್ತದೆ ಎಂದು 2008–09ನೇ ಸಾಲಿನ ಕಾಮಗಾರಿಯ ಬಗ್ಗೆ ಹೇಳುವುದಕ್ಕೆ ಬಯಸುತ್ತಿದ್ದೇನೆ. 2009–10ನೇ ಸಾಲಿನ ಕಾಮಗಾರಿಗೂ ಸಹ 694 ಲಕ್ಷ ರೂಪಾಯಿಗಳಿಗೆ ಟೆಂಡರ್ ಕರೆದು ಕೆಲಸ ಪ್ರಾರಂಭವಾಗಿದೆ. ಅವುಗಳನ್ನು ಮುಗಿಸುವಂತಹ ಕೆಲಸವೂ ಕೂಡ ಆಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ರಾಜ್ಯ ಹೆದ್ದಾರಿ–58, 06–01–2010ಕ್ಕೆ ರಾಷ್ಟ್ರೀಯ ಹೆದ್ದಾರಿ 234 ರಲ್ಲಿ ಸೇರುವುದರಿಂದ ತಮ್ಮ ಕ್ಷೇತ್ರದ ಅಭಿವೃದ್ಧಿ ಕಾಮಗಾರಿ ಇನ್ನು ಮುಂದೆ ಅತೀ ಶೀಘ್ರದಲ್ಲಿ ಆಗುತ್ತದೆ ಎನ್ನುವುದನ್ನು ಸಹಿತ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಅಮರೇಶ್ : ಮಾನ್ಯ ಅಧ್ಯಕ್ಷರೆ, ಇವರು 3054 ಲೆಕ್ಕ ಶೀರ್ಷಿಕೆಯ ಬಗ್ಗೆ ಯಾವುದನ್ನೂ ಹೇಳಲಿಲ್ಲ. ಏಕೆಂದರೆ, 3054 ಬಗ್ಗೆ ಬೇಕಾದಷ್ಟು ಪೆಂಡಿಂಗ್ ಇದೆ. ಇರತಕ್ಕಂತಹ ಅನುದಾನದಲ್ಲಿ ಏನು ಈಗ ಗುತ್ತಿಗೆದಾರರು ಕೆಲಸ ಮಾಡಿದ್ದಾರೆ, ಅವರಿಗೆ ಮೊದಲಿಗೆ ಆದ್ಯತೆಯ ಮೇರೆಗೆ ಕೆಲಸ ಮುಗಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಈಗ 3054 ನಲ್ಲಿ ಬಾಕಿ ಇರುವಂತಹ ಹಣವನ್ನು ಈ ತಿಂಗಳಿನಲ್ಲೇ ಪಾವತಿ ಮಾಡುವಂತಹ ಕೆಲಸವನ್ನು ತೆಗೆದು ಕೊಳ್ಳುತ್ತೇನೆ.

ಬೆಳಗಾವಿ ಜಿಲ್ಲೆಯ ಸಣ್ಣ ರೈತರಿಗೆ ಸೌಲಭ್ಯ ಕುರಿತು

75 (655) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ-ಸದಲಗ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಬಜೆಟ್‌ನಲ್ಲಿ ಘೋಷಿಸಿದಂತೆ ರಾಜ್ಯದ ಎಷ್ಟು ಫಲಾನುಭವಿಗಳಿಗೆ (ಸಣ್ಣ ರೈತರಿಗೆ) ಬೀಜ, ಗೊಬ್ಬರಕೊಳ್ಳಲು ಸಹಾಯ ಧನ ನೀಡಲಾಗಿದೆ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಫಲಾನುಭವಿಗಳಿಗೆ ಈ ಸೌಲಭ್ಯ ದೊರೆತಿದೆ; ಈ ಫಲಾನುಭವಿಗಳ ಆಯ್ಕೆಗಿರುವ ಮಾನದಂಡ ಗಳೇನು?

ಆ) ಈ ಯೋಜನೆ ಅಡಿಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಆಯ್ಕೆ ಮಾಡಲಾಗಿರುವ ಫಲಾನುಭವಿಗಳೆಷ್ಟು; (ವಿಧಾನ ಸಭೆ ಕ್ಷೇತ್ರವಾರು ವಿವರ ನೀಡುವುದು)?

ಇ) ಇನ್ನೂ ಎಷ್ಟು ಫಲಾನುಭವಿಗಳಿಗೆ ಈ ಸೌಲಭ್ಯ ದೊರೆಯ ಬೇಕಾಗಿದೆ; ಅವರಿಗೆ ಇನ್ನೂ ಸಹಾಯ ಧನ ವಿತರಿಸದಿರಲು ಕಾರಣವೇನು; (ವಿವರ ನೀಡುವುದು)?

ಶ್ರೀ ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು) :

ಅ) ಕಳೆದ ಬಜೆಟ್‌ನಲ್ಲಿ ಘೋಷಿಸಿದಂತೆ ಒಟ್ಟು ರಾಜ್ಯದಲ್ಲಿ 19,85,500 ಫಲಾನುಭವಿಗಳಿಗೆ (ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ) ಬೀಜ, ಗೊಬ್ಬರಕೊಳ್ಳಲು ಸಹಾಯ ಧನ ನೀಡಲಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 1,11,095 ಫಲಾನುಭವಿಗಳಿಗೆ ಈ ಸೌಲಭ್ಯ ದೊರೆತಿದೆ. (ವಿವರಗಳು ಅನುಬಂಧದಲ್ಲಿ ನೀಡಲಾಗಿದೆ).

ಸಂಪೂರ್ಣವಾಗಿ ಖುಷ್ಕಿ ಬೇಸಾಯವನ್ನು ಅವಲಂಬಿಸಿರುವ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಹಾಯ ಧನ ನೀಡಲಾಗಿದೆ.

ಆ) ಈ ಯೋಜನೆಯಡಿ ಬೆಳಗಾವಿ ಜಿಲ್ಲೆಯಲ್ಲಿ 1,26,440 ಫಲಾನುಭವಿಗಳನ್ನು ಆಯ್ಕೆ ಮಾಡಿದೆ. (ವಿಧಾನಸಭಾ ಕ್ಷೇತ್ರವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ).

ಇ) ಇನ್ನು 15345 ಫಲಾನುಭವಿಗಳಿಗೆ ಈ ಸೌಲಭ್ಯ ದೊರೆಯ ಬೇಕಾಗಿದೆ. ಕಾರಣಗಳು (ಅನುಬಂಧದಲ್ಲಿ ನೀಡಲಾಗಿದೆ).

ಅನುಬಂಧ

ಸಂಪೂರ್ಣವಾಗಿ ಖುಷ್ಕಿ ಬೇಸಾಯವನ್ನು ಅವಲಂಬಿಸಿರುವ ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಗಳಿಗೆ ತಲಾ ರೂ. 1000-00 ವಿಧಾನಸಭಾ ಮತಕ್ಷೇತ್ರವಾರು ಫಲಾನುಭವಿಗಳಿಗೆ ವಿತರಣೆಯಾದ ಸಹಾಯಧನದ ವಿವರ.

ಅಸಂ	ಮತಕ್ಷೇತ್ರದ ಹೆಸರು	ಒಟ್ಟು ಫಲಾನುಭವಿಗಳ ಸಂಖ್ಯೆ	ಸಹಾಯಧನದ ವಿತರಣೆ ಮಾಡಿದ ಫಲಾನುಭವಿಗಳ ಸಂಖ್ಯೆ	ಸಹಾಯ ಧನ ವಿತರಣೆಯಾಗದ ಫಲಾನುಭವಿಗಳ ಸಂಖ್ಯೆ	ಷರಾ
1	ಅಥಣಿ	6295	5051	1244	ಹಲವರು ಮೃತರಾಗಿದ್ದು, ಬೇರೆಡೆಗೆ ವಲಸೆಹೋಗಿದ್ದು ವಾರಸುದಾರರು ಲಭ್ಯವಿಲ್ಲದ ಕಾರಣ ವಿತರಣೆಯಾಗಿರುವದಿಲ್ಲ.
2	ಕಾಗವಾಡ	5961	4355	1606	
3	ಬೈಲಹೊಂಗಲ	14225	13098	1127	ಮೃತಪಟ್ಟವರು / ಊರುಬಿಟ್ಟು ಹೋದವರು.
4	ಕಿತ್ತೂರ	16145	16145	0	-
5	ಬೆಳಗಾವಿ (ಉತ್ತರ)	0	0	0	ರೈತರು ಊರುಬಿಟ್ಟು ಹೋಗಿರುವ /ಮರಣ ಹೊಂದಿದ್ದು ಹಾಗೂ ರೈತರ ಹೆಸರು ತಿದ್ದುಪಡಿ ಇರುವುದರಿಂದ ಸದರಿ ಚೆಕ್ ತಿದ್ದುಪಡಿ ಮಾಡುವ ಹಂತದಲ್ಲಿದೆ.
6	ಬೆಳಗಾವಿ (ದಕ್ಷಿಣ)	4340	1676	2664	
7	ಬೆಳಗಾವಿ ಗ್ರಾಮೀಣ	10162	9102	1060	
8	ಚಿಕ್ಕೋಡಿ/ಸದಲಗಾ	4138	3427	711	ಅರ್ಹ ಫಲಾನುಭವಿಗಳು ಮೃತಪಟ್ಟಿದ್ದರಿಂದ ಹಾಗೂ ಜಂಟಿ ಖಾತೆ ಹೊಂದಿರುವದರಿಂದ ಸದರಿಯವರಿಗೆ ವಾರಸಾ ಮಾಡಿಕೊಳ್ಳಲು ಹಾಗೂ ಒಪ್ಪಿಗೆ ಪತ್ರ ಸಲ್ಲಿಸಲು ತಿಳಿಸಲಾಗಿದ್ದು ವಿತರಣೆ ಕಾರ್ಯಪ್ರಗತಿಯಲ್ಲಿದೆ.
9	ನಿಪ್ಪಾಣಿ	2393	2269	124	
10	ಗೋಕಾಕ	2008	2008	0	
11	ಅರಭಾವಿ	2766	2766	0	
12	ಹುಕ್ಕೇರಿ	5349	4559	790	ಖಾತೆದಾರ / ಮೃತ/ವಾರಸುದಾರರು ಇಲ್ಲದಿರುವದರಿಂದ ಸಹಾಯಧನ ವಿತರಣೆಯಾಗಿರುವದಿಲ್ಲ.
13	ಯಮಕನಮರಡಿ	11481	9553	1928	
14	ಖಾನಾಪೂರ	3655	2396	1259	ಸದರಿ ಫಲಾನುಭವಿಗಳು ತಮ್ಮ ಹೊಟ್ಟೆ ಪಾಡಿಗಾಗಿ ಬೇರೆ ರಾಜ್ಯಗಳಿಗೆ ಹೋಗಿರುತ್ತಾರೆ./ಖಾತೆ ಬದಲಾವಣೆ ಆಗಿರುವದಿಲ್ಲ ಕಾರಣ ವಿಳಂಬ ವಾಗಿರುತ್ತದೆ.
15	ರಾಯಬಾಗ	8413	7736	677	ಮೃತ ಖಾತೆದಾರರು/ವಾರಸುದಾರರು ಬೇರೆರಾಜ್ಯಕ್ಕೆ ಕೂಲಿಕೆಲಸಕ್ಕೆ ಗುಳೆ ಹೋಗಿರುತ್ತಾರೆ.
16	ಕುಡಚಿ	115	108	7	ಮೃತ ಖಾತೆದಾರರು/ವಾರಸುದಾರರು ಬೇರೆರಾಜ್ಯಕ್ಕೆ ಕೂಲಿಕೆಲಸಕ್ಕೆ ಗುಳೆ ಹೋಗಿರುತ್ತಾರೆ.
17	ರಾಮದುರ್ಗ	20279	20210	69	ಫಲಾನುಭವಿಗಳು ಊರಿನಲ್ಲಿ ಇರುವದಿಲ್ಲ. ಕೆಲವು ರೈತರು ಮೃತರಾಗಿರುತ್ತಾರೆ.
18	ಸವದತ್ತಿ	8715	6636	2079	ಮೃತಪಟ್ಟವರು ಹಾಗೂ ಊರು ಬಿಟ್ಟು ಹೋಗಿರುವರು
	ಒಟ್ಟು	126440	111095	15345	

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬೆಳಗಾಂ ಜಿಲ್ಲೆಯಲ್ಲಿ ಸಣ್ಣ ರೈತರಿಗೆ 1,26,440 ಜನರನ್ನು ಗುರುತು ಮಾಡಿ, 1,11,000 ಜನರಿಗೆ. ನೀವು ಈಗಾಗಲೇ ಸಹಾಯಧನ ವಿತರಣೆ ಮಾಡಿದ್ದೀರಿ. ಆದರೆ, ಇನ್ನೂ 15,345 ಫಲಾನುಭವಿಗಳಿಗೆ ಸಹಾಯಧನವನ್ನು ನೀವು ವಿತರಣೆ ಮಾಡಬೇಕಾಗಿದೆ. ನೀವು ಉತ್ತರದಲ್ಲಿ ಏನು ಕೊಟ್ಟಿದ್ದೀರಿ ಎಂದರೆ, ಈ 15 ಸಾವಿರ ರೈತರಿಗೆ ಏಕೆ ಕೊಡುವುದಕ್ಕೆ ಆಗಿಲ್ಲವೆಂದರೆ, ಅವರು ಊರು ಬಿಟ್ಟುಹೋಗಿದ್ದಾರೆ ಹಾಗೂ ಕೆಲವರು ಮರಣ ಹೊಂದಿದ್ದಾರೆ ಎಂದು ಉತ್ತರ ಕೊಟ್ಟಿದ್ದೀರಿ. ನಮ್ಮ ಜಿಲ್ಲೆಯಲ್ಲಿ ಈ ರೀತಿಯ ಊರು ಬಿಟ್ಟು ಹೋದಂತಹ ಪರಿಸ್ಥಿತಿ ಇಲ್ಲ. ಏಕೆಂದರೆ, ನಮ್ಮ ಪ್ರದೇಶಕ್ಕೆ ಹತ್ತಿರದಲ್ಲಿ ಬೆಂಗಳೂರು ಅಥವಾ ಮೈಸೂರು ಸಿಟಿ ಬರುವುದಿಲ್ಲ. ರೈತರು ಹಳ್ಳಿಯಲ್ಲೇ ಜೀವನ ಮಾಡಬೇಕಾಗುತ್ತದೆ. ಜಮೀನನ್ನು ಅವಲಂಬಿಸಿಯೇ ಇವತ್ತು ಬೆಳೆಯನ್ನು ಬೆಳೆಯಬೇಕು. ನಿನ್ನೆ ಉತ್ತರದಲ್ಲಿ ಮಾನ್ಯ ಕಟ್ಟಾ ಸುಬ್ರಹ್ಮಣ್ಯರವರು ಹಳ್ಳಿಗಳಿಂದ ಜನ ಬೆಂಗಳೂರಿಗೆ ವಲಸೆ ಬರುತ್ತಿದ್ದಾರೆ ಎದು ಹೇಳಿದರು. ಆ ರೀತಿಯ ಪರಿಸ್ಥಿತಿ ನಮ್ಮಲ್ಲಿ ಇಲ್ಲ. ದಯವಿಟ್ಟು ಈ ರೀತಿಯ ಉತ್ತರಗಳನ್ನು ನೀವು ನೀಡಬಾರದು ಎಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಒದು ವರ್ಷವಾಯಿತು. ಕಳೆದ ವರ್ಷ ಬಜೆಟ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಸಣ್ಣ ರೈತರಿಗೆ ಅನುಕೂಲ ವಾಗಲಿ ಎಂದು ಬೀಜ ಮತ್ತು ಗೊಬ್ಬರಗಳನ್ನು ಖರೀದಿಸುವುದಕ್ಕೆ ಎಂದು ಒಂದು ಸಾವಿರ ರೂಪಾಯಿಗಳ ಧನಸಹಾಯವನ್ನು ಕೊಟ್ಟಿದ್ದರು. ಅವರು ಮರಣ ಹೊಂದಿದ್ದಾರೆ ಎಂದು ಹೇಳುವುಧು ಸರಿಯಲ್ಲ.

ನಮ್ಮ ಹೆಸರಿನಲ್ಲಿ ಕಾಗದ ಪತ್ರಗಳನ್ನು ಮಾಡಿಕೊಡಬೇಕೆಂದು ಅಪ್ಪ ಸಾಯುವ ಮುನ್ನ ಮಕ್ಕಳು ಆತನ ಬೆನ್ನತ್ತುತ್ತಾರೆ! ಅವರು ಸತ್ತ ಮೇಲೆ ಬೇರೆ ವಿಷಯ. ಇನ್ನೊಂದು ವಿಷಯದ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ. ಈ ಕಾರ್ಯಕ್ರಮವನ್ನು ಈ ವರ್ಷವೂ ಮುಂದುವರೆಸುತ್ತೀರೋ? ಇಲ್ಲವೋ? ಈ ಕಾರ್ಯಕ್ರಮ ಒಂದು ವರ್ಷಕ್ಕೆ ಮಾತ್ರ ಸೀಮಿತವಾಗಿತ್ತು. ಇದರ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ಮಾನ್ಯ ಕೃಷಿ ಸಚಿವರು ತಿಳಿಸಬೇಕೆಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎ.ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಸುಮಾರು 54 ಲಕ್ಷದಷ್ಟಿದ್ದಾರೆ. ನಾವು 198.55 ಫಲಾನುಭವಿಗಳಿಗೆ ಹಣ ಖರ್ಚು ಮಾಡಿದ್ದೇವೆ. ಅಂದರೆ, 500 ಕೋಟಿ ರೂ.ಹಣ ಕೊಡಲಾಗಿತ್ತು. ಇದೇ ರೀತಿ ಬೆಳಗಾಂ ಜಿಲ್ಲೆಗೆ ಬಿಡುಗಡೆಯಾದ ಅನುದಾನ 11.77 ಕೋಟಿ ಮತ್ತು ವೆಚ್ಚ ಮಾಡಿದ ಅನುದಾನ 11.10 ಕೋಟಿ, ಬಾಕಿ 1.67 ಕೋಟಿ ಇದ್ದು, ಈಗಲೂ ಸರಿಯಾದ ದಾಖಲಾತಿಗಳಿದ್ದಲ್ಲಿ, ಅವರಿಗೆ ಹಣ ಕೊಡುವ ವ್ಯವಸ್ಥೆ ಮಾಡಲಾಗುವುದು.

ಯಶಸ್ವಿನಿ ಆರೋಗ್ಯ ವಿಮಾ ಯೋಜನೆ

52 (950) ಶ್ರೀ ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಶಸ್ವಿನಿ ಆರೋಗ್ಯ ವಿಮಾ ಯೋಜನೆಯ ಟ್ರಸ್ಟಿಗಳ ಹೆಸರೇನು? ಅವರ ಯಾವ ದಿನಾಂಕದಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಟ್ರಸ್ಟಿಗಳ ಅವಧಿ ಎಷ್ಟು; ಈ ಟ್ರಸ್ಟಿಗಳನ್ನು ಯಾರು ನಿಯಮಿಸುತ್ತಾರೆ;

ಆ) ಈ ಯೋಜನೆಯಲ್ಲಿ ಕೈಗೊಳ್ಳುವ ಶಸ್ತ್ರಚಿಕಿತ್ಸೆಗಳ ಹೆಸರೇನು; ಪ್ರತಿಯೊಂದು ಶಸ್ತ್ರಚಿಕಿತ್ಸೆಗೆ ನಿಗದಿಯಾದ ಹಣವೆಷ್ಟು; ಇದು ಎಂದು ನಿಗದಿಯಾಗಿದೆ;

ಇ) ಕಳೆದ 7 ವರ್ಷಗಳಲ್ಲಿ ಎಷ್ಟು Cardiology, Neurology, Orthopedic, Renal, Urological, Pediatric ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಈ ಬಗ್ಗೆ ವಿವಿಧ ಆಸ್ಪತ್ರೆಗಳಿಗೆ ಎಷ್ಟು ಹಣ ಸಂದಾಯ ಮಾಡಲಾಗಿದೆ;

ಈ) ಈ ಯೋಜನೆ ಕೇವಲ ಶಸ್ತ್ರ ಚಿಕಿತ್ಸೆಗಾಗಿ ಮೀಸಲಾಗಿದ್ದರೂ ಕೂಡ Neo-natal care ಗಾಗಿ ಈ ಯೋಜನೆ ಏಕೆ ವಿಸ್ತರಿಸಲಾಯಿತು ಮತ್ತು ಹೊಸದಾಗಿ Neo-natal care ಗೆ ಮಾತ್ರ ಏಕೆ ಹೆಚ್ಚಿಸಲಾಯಿತು.

ಉ) ಕಳೆದ 7 ವರ್ಷಗಳಲ್ಲಿ ನಾರಾಯಣ ಹೃದಯಾಲಯ ಬೆಂಗಳೂರು ಮತ್ತು ಅಶ್ವಿನಿ ಚಿಕ್ಕಮಕ್ಕಳ ಆಸ್ಪತ್ರೆ ಬಿಜಾಪುರಕ್ಕೆ ಎಷ್ಟು ಹಣ ಸಂದಾಯ ಮಾಡಲಾಗಿದೆ; ಪ್ರತಿ ವರ್ಷದ ಮಾಹಿತಿಯನ್ನು ಬೇರೆ ಬೇರೆಯಾಗಿ ನೀಡುವುದು;

ಶ್ರೀ ಲಕ್ಷ್ಮಣ ಎಸ್. ಸವದಿ (ಸಹಕಾರ ಸಚಿವರು) :

ಅ) ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್ ಅನ್ನು ದಿ: 10.11.2003 ರಂದು ಉಪನೋಂದಾವಣಾ ಅಧಿಕಾರಿ, ಗಾಂಧೀನಗರ, ಬೆಂಗಳೂರು, ಇಲ್ಲಿ ಭಾರತೀಯ ಟ್ರಸ್ಟ್ ಅಧಿನಿಯಮ 1882 ರ ಅಡಿಯಲ್ಲಿ 6(ಆರು) ಜನ ಪದನಿಮಿತ್ತ ಸರ್ಕಾರದ ಹಿರಿಯ ಅಧಿಕಾರಿಗಳು ಹಾಗೂ ವಿವಿಧ ವೈದ್ಯಕೀಯ ಕ್ಷೇತ್ರವನ್ನು ಪ್ರತಿನಿಧಿಸುವ 5 ಜನ ಡಾಕ್ಟರ್‌ಗಳನ್ನೊಳಗೊಂಡಂತೆ ಒಟ್ಟು 11 ಜನ ಟ್ರಸ್ಟಿಗಳಿಂದ ನೋಂದಾಯಿಸಲ್ಪಟ್ಟಿದೆ.

ಯಶಸ್ವಿನಿ ಸಹಕಾರ ರೈತರ ಆರೋಗ್ಯ ರಕ್ಷಣಾ ಟ್ರಸ್ಟಿನಲ್ಲಿ ಈ ಕೆಳಗಿನಂತೆ 12 ಜನ ಟ್ರಸ್ಟಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.'

1. ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಕರ್ನಾಟಕ ಸರ್ಕಾರ.
2. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ಸರ್ಕಾರ.
3. ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ ಚಾಮರಾಜಪೇಟೆ, ಬೆಂಗಳೂರು.
5. ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ, ಬೆಂಗಳೂರು.
7. ಡಾ|| ದೇವಿಪ್ರಸಾದ್ ಶೆಟ್ಟಿ, ಅಧ್ಯಕ್ಷರು ನಾರಾಯಣ ಹೃದಯಾಲಯ, ಬೊಮ್ಮಸಂದ್ರ ಬೆಂಗಳೂರು.
8. 1. ಡಾ|| ಅಲೆಕ್ಸಾಂಡರ್ ಕುರುವಿಲ್ಲಾ, ವೈದ್ಯಕೀಯ ಅಧೀಕ್ಷಕರು, ನಾರಾಯಣ ಹೃದಯಾಲಯ, ಬೊಮ್ಮಸಂದ್ರ, ಬೆಂಗಳೂರು (ಪ್ರಾರಂಭದಿಂದ ದಿನಾಂಕ: 27.06.2006 ರವರೆಗೆ)

   2. ಡಾ|| ಸಿ.ಎಸ್. ಮಂಜುನಾಥ್ ನಿರ್ದೇಶಕರು, ಜಯದೇವ್ ಆಸ್ಪತ್ರೆ, ಬೆಂಗಳೂರು, (ದಿನಾಂಕ:27.06.2006. ರಿಂದ ಈವರೆಗೆ)

9. ಡಾ॥ ಎಂ.ಡಿ. ದೀಕ್ಷಿತ್, ನಿರ್ದೇಶಕರು, ಕೆ.ಎಲ್.ಇ. ಹಾರ್ಟ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಬೆಳಗಾಂ.

10. ಡಾ॥ ಗುರುದೇವ್, ನೆಫ್ರಾಲಜಿಸ್ಟ್ ಜೆ.ಎಸ್.ಎಸ್. ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಮೈಸೂರು.

11. ಡಾ॥ ಎಲ್.ಎಚ್.ಬಿದರಿ, ಡಾ॥ ಬಿದರಿಯವರ ಅಶ್ವಿನಿ ಆಸ್ಪತ್ರೆ ಬಿಜಾಪುರ. ಶ್ರೀ ಟಿ.ಎಸ್.ತಿಮ್ಮರಾಜು, ಚಾರ್ಟರ್ಡ್ ಅಕೌಂಟೆಂಟ್, ಬೆಂಗಳೂರು. (ದಿನಾಂಕ: 12.08.2009 ರಿಂದ ಈವರೆಗೆ)

12. 1. ಕ್ರ. ಸಂ. (1) ರಿಂದ (6) ರವರೆಗಿನ ಪದನಿಮಿತ್ತ ಅಧಿಕಾರಿಗಳು ಹಾಗೂ ಕ್ರ. ಸಂ. (7)ರ ಡಾ. ದೇವಿಪ್ರಸಾದ್ ಶೆಟ್ಟಿ ಇವರುಗಳು ಕಾಯಂ ಟ್ರಸ್ಟಿಗಳಾಗಿರುತ್ತಾರೆ. ಉಳಿದ ಟ್ರಸ್ಟಿಗಳನ್ನು ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟು ನಿಯಮಕ್ಕೆ ಅನುಸಾರವಾಗಿ ಟ್ರಸ್ಟ್ ಸಭೆಯಲ್ಲಿ ನೇಮಿಸಲಾಗುತ್ತದೆ.

2. ಕ್ರ.ಸಂ. (8) ರಿಂದ (11) ರವರೆಗಿನ ಟ್ರಸ್ಟಿಗಳ ಅವಧಿ ಪ್ರಾರಂಭದಲ್ಲಿ ಮೂರು ವರ್ಷಗಳಿದ್ದು, ಆ ನಂತರ ಯಶಸ್ವಿನಿ ಟ್ರಸ್ಟು ಆಗಿದಾಂಗ್ಗೆ ನಿಗದಿಪಡಿಸುವ ಹೆಚ್ಚುವರಿ ಅವಧಿಗೆ ಪುನರ್ ನೇಮಕಕ್ಕೆ ಅರ್ಹರು.

3. ಈ ಮೇರೆಗೆ ಕ್ರ. ಸಂ. (9) ರಿಂದ (11) ರವರೆಗಿನವರು ದಿನಾಂಕ: 27.06.2006 ರಲ್ಲಿ ಜರುಗಿದ ಯಶಸ್ವಿನಿ ಟ್ರಸ್ಟು ಸಭೆಯಲ್ಲಿ ಮತ್ತೆ ಮೂರು ವರ್ಷಗಳ ಅವಧಿಗೆ ಹಾಗೂ ದಿನಾಂಕ: 29.05.2009 ರಲ್ಲಿ ಜರುಗಿದ ಯಶಸ್ವಿನಿ ಟ್ರಸ್ಟು ಸಭೆಯಲ್ಲಿ ಕ್ರ. ಸಂ. (8) (2) ರಿಂದ (11) ರವರೆಗಿನ ಟ್ರಸ್ಟಿಗಳನ್ನು ಮತ್ತೆ ಮೂರು ವರ್ಷಗಳ ಅವಧಿಗೆ ಪುನರ್ ನೇಮಕ ಮಾಡಲಾಗಿದೆ.

4. ಕ್ರ. ಸಂ. 12 ರಲ್ಲಿನ ಟ್ರಸ್ಟಿಯನ್ನು ಟ್ರಸ್ಟು ನಿಬಂಧನೆಗಳ ಪ್ರಕಾರ ದಿನಾಂಕ: 12.08.2009ರ ಯಶಸ್ವಿನಿ ಟ್ರಸ್ಟು ಸಭೆಯಲ್ಲಿ ಎರಡು ವರ್ಷಗಳ ಅವಧಿಗೆ ಕೋ-ಆಪ್ಟ್ ಮಾಡಲಾಗಿದೆ.

ಆ) ಈ ಯೋಜನೆಯಲ್ಲಿ ಕೈಗೊಳ್ಳುವ ಶಸ್ತ್ರಚಿಕಿತ್ಸೆಗಳು ಈ ಕೆಳಗಿನಂತಿವೆ.

ಹೃದ್ರೋಗ (Cardrology), ಕಿವಿ, ಮೂಗು, ಗಂಟಲು (ENT), ಉದರ ಶಸ್ತ್ರ ಚಿಕಿತ್ಸೆ (Gastrol), ಸಾಮಾನ್ಯ (General), ನರರೋಗ Neuro, ಸ್ತ್ರಿರೋಗ (OBG), ಕಣ್ಣು (Optho), ಮೂಳೆ ರೋಗ (Ortho) ಮೂತ್ರಪಿಂಡ Uro, ಇತರೆ (Other), (CVS, Vascular, Endo, Medical Emergency Neonatal etc)

ಈ ಯೋಜನೆಯಡಿಯಲ್ಲಿ ಸುಮಾರು 1600 ವಿವಿಧ ಶಸ್ತ್ರ ಚಿಕಿತ್ಸೆಗಳನ್ನು ಒಳಗೊಂಡಿದ್ದು, ಪ್ರತಿಯೊಂದು ಶಸ್ತ್ರಚಿಕಿತ್ಸೆಗೆ ಪಾವತಿಸಬೇಕಾದ ಹಣದ ಮೊತ್ತವನ್ನು ನಿಗದಿಪಡಿಸಲಾಗಿದೆ.

ಇ) 1. ಕಳೆದ 7 ವರ್ಷಗಳಲ್ಲಿ ಈ ಕೆಳಗಿಂತೆ ಶಸ್ತ್ರಚಿಕಿತ್ಸೆಗಳನ್ನು ನಿರ್ವಹಿಸಲಾಗಿದೆ.

ಶಸ್ತ್ರಚಿಕಿತ್ಸೆ	ಸಂಖ್ಯೆ
ಹೃದ್ರೋಗ (Cardirology),	44112
ನರರೋಗ (Neurology)	1435
ಮೂಳೆ ರೋಗ (Orthopaedic)	18143
ಮೂತ್ರಪಿಂಡ (Urological)	21026
ಸಾಮಾನ್ಯ ಖಾಯಿಲೆ (General)	42931
ಗರ್ಭಕೋಶ (OBG),	61138
ಕಣ್ಣು (Optho),	50025
ಉದರ (Gastro),	8090
ಕಿವಿ, ಮೂಗು, ಗಂಟಲು (ENT),	18056
ಇತರೆ (Other), (CVS, ENDO etc.	5307
ಒಟ್ಟು	**265363**

Pediatric – ಇದು ಜನರಲ್ ಸರ್ಜರಿಯಲ್ಲಿ ಹಾಗೂ Renal- ಇದು ಯೂರಲಾಜಿಯಲ್ಲಿ ಸೇರಿದ್ದು ಪ್ರತ್ಯೇಕ ಶಸ್ತ್ರ ಚಿಕಿತ್ಸೆಯ ವಿವರ ಲಭ್ಯವಿರುವುದಿಲ್ಲ.

2. ಈ ಬಗ್ಗೆ ವಿವಿಧ ಆಸ್ಪತ್ರೆಗಳಿಗೆ ಕಳೆದ ಏಳು ವರ್ಷಗಳಲ್ಲಿ ಒಟ್ಟು ರೂ. 24196.61 ಲಕ್ಷಗಳನ್ನು ಶಸ್ತ್ರಚಿಕಿತ್ಸೆ ವೆಚ್ಚವಾಗಿ ಸಂದಾಯ ಮಾಡಲಾಗಿದೆ.

ವರ್ಷಾವಾರು ಶಸ್ತ್ರ ಚಿಕಿತ್ಸೆ ವೆಚ್ಚ ಈ ಕೆಳಗಿನಂತಿದೆ.

ವರ್ಷ	ಆಸ್ಪತ್ರೆಗಳ ಸಂಖ್ಯೆ	ಮೊತ್ತ (ರೂ.ಲಕ್ಷಗಳಲ್ಲಿ)
2003–04	100	1065.35
2004–05	151	1808.30
2005–06	159	2579.63
2006–07	281	3809.14
2007–08	302	5325.38
2008–09	376	5983.60
2009–10	363	3625.21
ಒಟ್ಟು	**1732**	**24196.61**

ಈ) ಯಶಸ್ವಿನಿ ಯೋಜನೆಯು ಶಸ್ತ್ರ ಚಿಕಿತ್ಸೆಗೆ ಮೀಸಲಾಗಿದ್ದರೂ, ಗ್ರಾಮೀಣ ಪ್ರದೇಶದ ಸಹಕಾರಿ ರೈತರ ಬೇಡಿಕೆ ಮೇರೆಗೆ_ ಕೃಷಿ/ವಿದ್ಯುತ್ ಉಕಪಕರಣಗಳಿಂದ ಆಗುವ ಅಪಘಾತಗಳು. ನಾಯಿ/ಹಾವು ಕಡಿತ ಹೋರಿ ಇರಿತ, ನೀರಿನಲ್ಲಿ ಮುಳುಗುವುದು, ಸುಟ್ಟಗಾಯ, ವಿಷಸೇವನೆ ಇತ್ಯಾದಿ ವೈದ್ಯಕೀಯ ತುರ್ತು ಚಿಕಿತ್ಸೆಗಳನ್ನು ಹಾಗೂ ಗ್ರಾಮೀಣ ಪ್ರದೇಶದಲ್ಲಿ ನವಜಾತ ಶಿಶುವಿನ ಮರಣ ಪ್ರಮಾಣ ಮತ್ತು ತಾಯಿಯ ಮರಣ ಪ್ರಮಾಣವನ್ನು ಕಡಿಮೆ ಮಾಡುವ ಉದ್ದೇಶದಿಂದ ನವಜಾತ ಶಿಶುವಿನ ಶುಶ್ರೂಷೆ ಮತ್ತು ಸಾಮಾನ್ಯ ಹೆರಿಗೆಯನ್ನು ಯೋಜನೆಯಡಿಯಲ್ಲಿ ಹೆಚ್ಚುವರಿ ಸೌಲಭ್ಯವಾಗಿ ಸೇರಿಸಲಾಗಿದೆ. ವೈದ್ಯಕೀಯ ತುರ್ತು ಚಿಕಿತ್ಸೆಗಳಿಗೆ ಪ್ರತಿ ದಿನಕ್ಕೆ ರೂ. 750–/ರಂತೆ ಎರಡು ದಿನಗಳ ಚಿಕಿತ್ಸೆಗೆ ರೂ.1500/–ಗಳನ್ನು ಮತ್ತು ನವಜಾತ ಶಿಶುವಿನ ಶುಶ್ರೂಷೆಗೆ ಪ್ರತಿ ದಿನಕ್ಕೆ ರೂ. 500/– ರಂತೆ ಐದು

ದಿನಗಳ ಚಿಕಿತ್ಸೆಗೆ ರೂ.2500/-ಗಳನ್ನು ನಿಗದಿಪಡಿಸಲಾಗಿದ್ದು, ಈ ಮಿತಿಯೇ ಈಗಲೂ ಮುಂದುವರಿಸುತ್ತಿದೆ.

ಉ) ಕಳೆದ 7 ವರ್ಷಗಳಲ್ಲಿ ನಾರಾಯಣ ಹೃದಯಾಲಯ ಬೆಂಗಳೂರು ಇದಕ್ಕೆ. ರೂ.5702.89 ಲಕ್ಷಗಳನ್ನು ಮತ್ತು ಅಶ್ವಿನಿ ಚಿಕ್ಕಮಕ್ಕಳ ಆಸ್ಪತ್ರೆ ಬಿಜಾಪುರ ಇದಕ್ಕೆ ರೂ.6.51ನ್ನು ಸಂದಾಯ ಮಾಡಲಾಗಿದೆ ವರ್ಷವಾರು ಸಂದಾಯ ಮಾಡಿದ ವೆಚ್ಚದ ವಿವರ ಈ ಕೆಳಗಿನಂತಿದೆ.

(ಮೊತ್ತ ರೂ. ಲಕ್ಷಗಳಲ್ಲಿ)

ವರ್ಷ	ನಾರಾಯಣ ಹೃದಯಾಲಯ ಬೆಂಗಳೂರು	ಅಶ್ವಿನಿ ಚಿಕ್ಕಮಕ್ಕಳ ಆಸ್ಪತ್ರೆ ಬಿಜಾಪುರ
2003–04	398.45	–
2004–05	508.64	0.44
2005–06	837.62	1.25
2006–07	1048.32	0.72
2007–08	1216.58	1.54
2008–09	1056.42	1.62
2009–10	636.61	0.94
ಒಟ್ಟು	**5702.89**	**6.51**

ಡಾ: ಬಗಲಿ ಸಾರ್ವಭೌಮ ಸಾತಗೌಡ : ಸನ್ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಮಾನ್ಯ ಸಹಕಾರ ಸಚಿವರು ಉತ್ತರಿಸಿದ್ದಾರೆ. ಆದರೆ, ಅವರ ಉತ್ತರ ಸತ್ಯಕ್ಕೆ ದೂರವಾಗಿದೆ. ಏಕೆಂದರೆ, ವಿವಿಧ ವೈದ್ಯಕೀಯ ಕ್ಷೇತ್ರವನ್ನು ಪ್ರತಿನಿಧಿಸುವ 5 ಜನ ಡಾಕ್ಟರುಗಳನ್ನು ಒಳಗೊಂಡಂತೆ ಒಟ್ಟು 11 ಜನ ಟ್ರಸ್ಟಿಗಳಿಂದ ನೋಂದಾಯಿಸಲ್ಪಟ್ಟಿದೆ ಎಂದು ಹೇಳಿದ್ದಾರೆ. ಆದರೆ, ಈ 5 ಜನ ಟ್ರಸ್ಟಿಗಳಲ್ಲಿ ಒಬ್ಬರು Cardiologist, ಒಬ್ಬರು nephrologists ಮತ್ತೊಬ್ಬರು Pediatrician ಆಗಿದ್ದಾರೆ. ಇದು ವಿವಿಧ ವೈದ್ಯಕೀಯ ಕ್ಷೇತ್ರಗಳಿಂದ ಹೇಗಾಗುತ್ತದೆ? ಟ್ರಸ್ಟಿಗಳನ್ನು ನೇಮಿಸುವಾಗ ಕೇವಲ ಹೃದಯ ರೋಗ ತಜ್ಞರಿಗೆ ಸಂಬಂಧಿಸಿದಂತೆ ಏತಕ್ಕೆ ಮಹತ್ವ ನೀಡುತ್ತಿದ್ದಾರೆ? ಸ್ತ್ರೀ ರೋಗ

ತಜ್ಞರಿಗೆ ಏಕೆ ಮಹತ್ವ ನೀಡುತ್ತಿಲ್ಲ? ನರ ರೋಗ ತಜ್ಞ (neurologist) ರನ್ನು ಏಕೆ ಟ್ರಸ್ಟಿಗಳೆಂದು ನೇಮಿಸುತ್ತಿಲ್ಲ? ಅದೇ ರೀತಿ orthopedic, ಎಲುಬು ಮತ್ತು ಕೀಲು ತಜ್ಞರುಗಳನ್ನು ಏಕೆ ಟ್ರಸ್ಟಿಗಳನ್ನಾಗಿ ನೇಮಿಸುತ್ತಿಲ್ಲ ಎಂಬುದನ್ನು ಮಾನ್ಯ ಸಚಿವರಿಂದ ತಿಳಿಯಬಯಸುತ್ತೇನೆ.

ಶ್ರೀ ಲಕ್ಷ್ಮಣ ಸ. ಸವದಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸಾರ್ವಭೌಮ ಬಗಲಿಯವರು ಮೂಲತಃ ವೈದ್ಯಕೀಯ ಕ್ಷೇತ್ರದಿಂದ ರಾಜಕೀಯ ಪ್ರವೇಶಿಸಿ ಅನೇಕ ಅನುಭವಗಳನ್ನು ಹೊಂದಿರುವವರಾಗಿದ್ದು, ವಿವಿಧ ವೈದ್ಯಕೀಯ ಕ್ಷೇತ್ರವನ್ನು ಪ್ರತಿನಿಧಿಸುವ ಎಲ್ಲರನ್ನೂ ಒಳಗೊಂಡಂತೆ ಟ್ರಸ್ಟಿಗಳನ್ನಾಗಿ ನೇಮಿಸಬೇಕೆಂದು ಅವರು ತಮ್ಮ ಕಳಕಳಿ ವ್ಯಕ್ತಪಡಿಸಿದ್ದಾರೆ. ಈಗಾಗಲೇ ಅವರೊಂದಿಗೆ ಒಂದು ಸಲ ನಾನು ಸಭೆ ನಡೆಸಿದ್ದೇನೆ. ವಿರೋಧ ಪಕ್ಷದ ಅನೇಕ ಮಾನ್ಯ ಶಾಸಕರುಗಳು ಮತ್ತು ಅನೇಕ ವೈದ್ಯರುಗಳೊಂದಿಗೆ ಸೇರಿಕೊಂಡು ಈಗಾಗಲೇ ಆ ಟ್ರಸ್ಟ್ ಬಗ್ಗೆ ಚಿಂತನೆ ಪ್ರಾರಂಭಿಸಿದ್ದೇವೆ. ಆದುದರಿಂದ, ಕೆಲವು ದಿವಸಗಳಲ್ಲಿಯೇ ಈ ಸಂಬಂಧ ಮತ್ತೊಂದು ಸಭೆ ಕರೆಯಲಿದ್ದೇನೆ. ಅವರೊಂದಿಗೆ ಮತ್ತೊಮ್ಮೆ ಮಾನ್ಯ ಸದಸ್ಯರನ್ನು ಆಹ್ವಾನಿಸಿ, ಅವರು ನೀಡಿರುವ ಸಲಹೆಗಳನ್ನು ಅಲ್ಲಿ ಚರ್ಚಿಸಿ, ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳುವುದಕ್ಕೆ ನಾವು ಪ್ರಯತ್ನಿಸುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಡಾ: ಬಗಲಿ ಸಾರ್ವಭೌಮ ಸಾತಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಸಚಿವರು ಈಗಾಗಲೇ ಈ ದಿಸೆಯಲ್ಲಿ ಸಾಕಷ್ಟು ಚರ್ಚಿಸಿದ್ದಾರೆ. ಇನ್ನು ಇದರ ಬಗ್ಗೆ ಚರ್ಚಿಸುವ ಅವಶ್ಯಕತೆ ಇಲ್ಲ. ನನ್ನ ಕಳಕಳಿ ಇಷ್ಟೆ. ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್ ಕೇವಲ ಹೃದಯ ರೋಗ ತಜ್ಞರಿಗೆ ಮಾತ್ರ ಮೀಸಲಾಗಿದೆಯೇ ಅಥವಾ ಸದರಿ ಟ್ರಸ್ಟ್‌ಗೆ ಸ್ತ್ರೀ ರೋಗ ತಜ್ಞರು, ನ್ಯೂರೋಲಾಜಿಸ್ಟ್ ಅವರುಗಳನ್ನು ನೇಮಿಸಲು ಕ್ರಮ ಕೈಗೊಳ್ಳುವರೇ ಎಂಬುದನ್ನು ನಾನು ತಿಳಿಯಬಯಸುತ್ತೇನೆ.

ಶ್ರೀ ಲಕ್ಷ್ಮಣ ಸ.ಸವದಿ : ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಪ್ರಶ್ನೆ ಬಗ್ಗೆ ನಾನು ಪರಿಶೀಲಿಸುತ್ತೇನೆ. ಮುಂದಿನ ದಿನಗಳಲ್ಲಿ ಆ ಟ್ರಸ್ಟ್‌ನಲ್ಲಿರುವವ ರೊಂದಿಗೆ ಚರ್ಚಿಸುವ ಮೂಲಕ ಸದಸ್ಯರು ನೀಡಿರುವ ಸಲಹೆಯನ್ನು ಆ ಟ್ರಸ್ಟ್‌ನವರಿಗೆ ನೀಡಲು ಮುಂದಾಗುತ್ತೇನೆ.

ಮೂಡಬಿದರೆ ಸಮೀಪ ಬೈಪಾಸ್ ರಸ್ತೆ ನಿರ್ಮಿಸುವ ಬಗ್ಗೆ.

62 (986) ಶ್ರೀ ಅಭಯಚಂದ್ರ ಜೈನ್ ಕೆ. (ಮೂಡಬಿದರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 13ರಲ್ಲಿ ಮೂಡಬಿದರೆ ಸಮೀಪ ಬೈಪಾಸ್ ರಸ್ತೆ ನಿರ್ಮಿಸುವ ಬಗ್ಗೆ ಸರ್ಕಾರವು ಸರ್ವೆ ಕಾರ್ಯಕ್ಕಾಗಿ ಹಣ ಮಂಜೂರಾತಿ ಮಾಡಿದ್ದು, ಸರ್ವೆ ಕಾರ್ಯ ಯಾವ ಹಂತದಲ್ಲಿದೆ;

ಆ) ಬೈಪಾಸ್ ರಸ್ತೆ ನಿರ್ಮಾಣ ಎಂದು ಪ್ರಾರಂಭಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಾಷ್ಟ್ರೀಯ ಹೆದ್ದಾರಿ ಸಂಖ್ಯೆ:13ರ ಶಿವಮೊಗ್ಗ ಮಂಗಳೂರು ಭಾಗದ ರಸ್ತೆಯನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಯನ್ನು NHDP Phase IV A ರಲ್ಲಿ ಸೇರ್ಪಡೆ ಮಾಡಿದ್ದು ಈಗಾಗಲೇ ಸಾಧ್ಯಾಸಾಧ್ಯತೆ ಅನ್ವೇಷಣಾ ಹಾಗೂ ತಾಂತ್ರಿಕ ವರದಿ (Feasibility study & detailed Engineering) ತಯಾರಿಸುವ ಕಾರ್ಯವನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯದ ತಾಂತ್ರಿಕ ಸಲಹೆಗಾರರಾದ M/s. Feedback Ventures Consultants, Bangalore ರವರಿಗೆ ವಹಿಸಿರುತ್ತಾರೆ. ಸದರಿ ಸಂಸ್ಥೆಯು ಈಗ Alignment & First Traffic Survey ವರದಿಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಿದ್ದು ಈ ಬಗ್ಗೆ ಭೂಸಾರಿಗೆ ಮಂತ್ರಾಲಯವು ತೀರ್ಮಾನ ಕೈಗೊಳ್ಳಬೇಕಿದೆ.

ಆ) ಬೈಪಾಸ್ ರಸ್ತೆ ನಿರ್ಮಾಣದ ಬಗ್ಗೆ ಕೇಂದ್ರ ಭೂಸಾರಿಗೆ ಮಂತ್ರಾಲಯವು ತೀರ್ಮಾನ ಕೈಗೊಳ್ಳಬೇಕಿದೆ.

ಶ್ರೀ ಕೆ. ಅಭಯಚಂದ್ರ ಜೈನ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ, ಮೂಡಬಿದರೆಯಲ್ಲಿ 1991ನೇ ಇಸವಿಯಲ್ಲಿ ಅಂದರೆ, ಸುಮಾರು 19 ವರ್ಷಗಳ ಹಿಂದೆ ಲೋಕೋಪಯೋಗಿ ಇಲಾಖೆ ಯಿಂದ ಬೈಪಾಸ್ ರಸ್ತೆ ಕಾಮಗಾರಿಗೆ ಅಡಿಗಲ್ಲು (foundation stone) ಹಾಕಲಾಗಿತ್ತು. ತದನಂತರ, ಮೂಡಬಿದರೆಯ ಲೋಕೋಪಯೋಗಿ ಇಲಾಖೆಯ ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆಗೊಂಡಿತು. ಆ ರಸ್ತೆ

ಕಳೆದ 19 ವರ್ಷಗಳಿಂದ ಬೈಪಾಸ್ ಕಾಮಗಾರಿ ಆಗಲಿಲ್ಲ. ಇವತ್ತು ಈ ಕುರಿತಾದ ಪ್ರಸ್ತಾವನೆ NHDP ಗೆ ಹೋಗಿದ್ದು, ಪರಿಶೀಲನೆಯಲ್ಲಿದೆ ಎಂದು ಉತ್ತರದಲ್ಲಿ ತಿಳಿಸಿದ್ದೀರಿ. ಆದರೆ, ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಲೋಕೋಪಯೋಗಿ ಇಲಾಖೆಯು ತೆಗೆದುಕೊಳ್ಳಬೇಕಾಗುತ್ತದೆ. ಪ್ರಸ್ತಾವ ಕೇಂದ್ರ ಸರ್ಕಾರಕ್ಕೆ ಹೋಗಿದ್ದರೂ, ಲೋಕೋಪಯೋಗಿ ಇಲಾಖೆಯು ಒತ್ತಡ ಹೇರಿದಲ್ಲಿ, ಅಲ್ಲಿ ಬೈಪಾಸ್ ರಸ್ತೆ ಕಾಮಗಾರಿ ಸಾಧ್ಯವಾಗುತ್ತದೆ. ಆದುದರಿಂದ ಮೂಡಬಿದರೆಯಲ್ಲಿ ಬೈಪಾಸ್ ರಸ್ತೆ ಕಾಮಗಾರಿಗೆ 19 ವರ್ಷಗಳ ಹಿಂದೆ ಅಡಿಗಲ್ಲು ಹಾಕಿದ್ದರೂ, ಇದುವರೆಗೂ ಬೈಪಾಸ್ ಕಾಮಗಾರಿ ಆಗಿರುವುದಿಲ್ಲ. ಆದಕಾರಣ, ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಮೇಲೆ ತಮ್ಮ ಇಲಾಖೆಯು ಒತ್ತಡ ಹೇರಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಸಭಾಧ್ಯಕ್ಷರೆ, ಸುಮಾರು 19 ವರ್ಷಗಳ ಹಿಂದೆ ಬೈಪಾಸ್ ರಸ್ತೆ ಕಾಮಗಾರಿಗೆ ಅಡಿಗಲ್ಲು ಹಾಕಲಾಗಿತ್ತು ಎನ್ನುವ ಮಾತುಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ, ನಾನು 12 ವರ್ಷಗಳ ಹಿಂದೆ ಈ ಸ್ಥಳಕ್ಕೆ ಹೋದಾಗ, ಆ ಸ್ಥಳದಲ್ಲಿ ಬೈಪಾಸ್ ಕಾಮಗಾರಿ ಮಾಡಬೇಕಾಗಿದ್ದ ರಸ್ತೆ ಗುರ್ತಿಸಿರುವುದನ್ನು ನಾನು ನೋಡಿದ್ದೇನೆ. 19 ವರ್ಷಗಳ ಹಿಂದೆಯೇ ಈ ಕಾರ್ಯ ಆಗಿದ್ದಿದ್ದರೆ, ಈ ಕುರಿತಾದ ಹಣಕಾಸು, ಟೆಂಡರ್, ಇತ್ಯಾದಿ ಪ್ರಕ್ರಿಯೆಗಳಾಗುತ್ತಿದ್ದವು. ಆದರೆ, ಇದ್ಯಾವುದೇ ಪ್ರಕ್ರಿಯೆ ಆಗಿಲ್ಲ. ಈಗ ಅದರ ಬಗ್ಗೆ ನಾವು ಈಗ ಚರ್ಚಿಸುವುದು ಬೇಡ. ಇವತ್ತು ಏನು ನಡೆಯುತ್ತಿದೆ ಎಂಬುದರ ಬಗ್ಗೆ ನಾನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತಿದ್ದೇನೆ. ಇವತ್ತು State support ನಿಂದ ಇದನ್ನು NHDP Phase IV A ನಲ್ಲಿ ಸೇರ್ಪಡೆಗೊಳಿಸಲಾಗಿದ್ದು, M/s. Feedback Ventures Consultants, Banglore ಇವರಿಂದ ಸರ್ವೆ ನಡೆಸಲಾಗಿದೆ. ಮೂಡಬಿದರೆ ಯಲ್ಲಿ ಬೈಪಾಸ್ ಕಾಮಗಾರಿ ಮಾಡುವುದನ್ನೂ ಇದರಲ್ಲಿ ಸೇರಿಸಿದ್ದಾರೆ. ಅತಿ ಶೀಘ್ರದಲ್ಲಿಯೇ ಈ ಕುರಿತು ತೀರ್ಮಾನ ಕೈಗೊಂಡು ಈ ಕೆಲಸ ಆಗುತ್ತದೆಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ನಾನು ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಪ್ರಾಥಮಿಕ ಕೃಷಿ ಸಹಕಾರ ಬ್ಯಾಂಕುಗಳ ಮೂಲಕ ರೈತರಿಗೆ ಸಾಲ ವಿತರಣೆ

65 (630) ಶ್ರೀ ಸುನೀಲ್ ವಿ.ಹೆಗಡೆ (ಹಳಿಯಾಳ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಬ್ಯಾಂಕುಗಳ ಮೂಲಕ ರೈತರಿಗೆ ಎಷ್ಟು ಸಾಲ ವಿತರಣೆ ಮಾಡಲಾಗಿದೆ? (ಮೂರು ವರ್ಷಗಳ ವಿವರ ನೀಡುವುದು);

ಆ) ಈ ಸಾಲಕ್ಕೆ ವಿಧಿಸಿರುವ ಬಡ್ಡಿ ಎಷ್ಟು ಹಾಗೂ ಸುಸ್ತಿ ಸಾಲಕ್ಕೆ ಎಷ್ಟು ಸುಸ್ತಿ ಬಡ್ಡಿ ವಿಧಿಸಲಾಗುವುದು?

ಇ) ಸರ್ಕಾರ ಈ ಸಾಲಗಳಿಗೆ ಯಾವ್ಯಾವ ರೀತಿಯ ರಿಯಾಯಿತಿಗಳನ್ನು ನೀಡಿದೆ ಹಾಗೂ ಇದಕ್ಕೆ ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಈ) ರಿಯಾಯಿತಿ ದರದಲ್ಲಿ ಸಾಲ ಮಂಜೂರಾತಿ ಮತ್ತು ವಿತರಣೆ ಸಮರ್ಪಕವಾಗಿ ನಡೆದಿರುವ ಬಗ್ಗೆ ಸರ್ಕಾರ ದೃಢೀಕರಿಸಿಕೊಂಡಿರುವುದೇ?

ಉ) ಹಾಗಿಲ್ಲದಿದ್ದಲ್ಲಿ, ತೆಗೆದುಕೊಳ್ಳುವ ಕ್ರಮವೇನು?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಈ ಕೆಳಗಿನಂತೆ ರೈತರಿಗೆ ಕೃಷಿ ಸಾಲ ನೀಡಲಾಗಿದೆ.

(ರೂ.ಕೋಟಿಗಳಲ್ಲಿ)

ಕ್ರ. ಸಂ.	ವರ್ಷ	ಅಲ್ಪಾವಧಿ		ಮಧ್ಯಮಾವಧಿ		ಒಟ್ಟು ಮೊತ್ತ	
		ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1.	2006-07	826125	2274.33	51503	137.99	877628	2412.31
2.	2007-08	1251411	2849.50	10160	98.54	1261571	2948.04
3.	2008-09	1285554	3290.68	14463	114.41	1296017	3405.08
4.	2009-10 (ದಿ:1-4-2009 ರಿಂದ 28-02-2010 ರವರೆಗೆ)	1073908	2869.07	9450	136.59	1083358	3005.66

ಆ) 2009–10ನೇ ಸಾಲಿನಲ್ಲಿ ವಿತರಿಸುತ್ತಿರುವ ಕೃಷಿ ಸಾಲದ ಮೇಲೆ ಗಡುವು ದಿನಾಂಕದೊಳಗೆ ಮರುಪಾವತಿ ಮಾಡಿದರೆ ಶೇಕಡ 3 ರಷ್ಟು ಬಡ್ಡಿ ವಿಧಿಸಲಾಗುವುದು. ಸುಸ್ತಿಯಾದ ಸಾಲಕ್ಕೆ ಸುಸ್ತಿಯಾದ ದಿನಾಂಕದಿಂದ ರೈತರು ಸಹಕಾರ ಸಂಘ/ಬ್ಯಾಂಕುಗಳಿಗೆ ಸಾಮಾನ್ಯ ಬಡ್ಡಿದರದಂತೆ ಮತ್ತು ಇತರೆ ಖರ್ಚುಗಳು ಇದ್ದಲ್ಲಿ ಅದರ ಸಹಿತ ಮರುಪಾವತಿ ಮಾಡಬೇಕಾಗಿರುತ್ತದೆ.

ಇ) ವಸೂಲಾದ ಸಾಲಗಳ ಮೇಲೆ ಸರ್ಕಾರವು ಕೃಷಿ ಪತ್ತಿನ ಸಹಕಾರ ಸಂಸ್ಥೆಗಳಿಗೆ ಭರಿಸಿಕೊಡುವ ಸಹಾಯಧನದ ಪ್ರಮಾಣ:

ವರ್ಷ	ಬಡ್ಡಿ ರಿಯಾಯಿತಿ ದರ (%)
2008–09ನೇ ಸಾಲಿಗೆ	ಅಲ್ಪಾವಧಿ ಸಾಲ – 7.10 ಮಧ್ಯಮಾವಧಿ & – 11.75 ದೀರ್ಘಾವಧಿ ಸಾಲಗಳು
2009–10ನೇ ಸಾಲಿಗೆ	ಅಲ್ಪಾವಧಿ ಸಾಲ – 6.45 ಮಧ್ಯಮಾವಧಿ & – 10.75 ದೀರ್ಘಾವಧಿ ಸಾಲಗಳು

2007–08ನೇ ಸಾಲಿನ ಕ್ಲೇಮು ಬಾಬ್ತು ರೂ.156.18 ಕೋಟಿಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ. 2008–09ನೇ ಸಾಲಿನ ಬಾಬ್ತು ರೂ.71.10 ಕೋಟಿಗಳನ್ನು ಈಗಾಗಲೇ ಸರ್ಕಾರದಿಂದ ಬಿಡುಗಡೆ ಮಾಡಲಾಗಿದ್ದು, ಖಜಾನೆಯಿಂದ ಡ್ರಾ ಮಾಡಲು ಕ್ರಮವಿಡಲಾಗಿದೆ.

ಈ) ರಿಯಾಯಿತಿ ದರದಲ್ಲಿ ಸಾಲ ಮಂಜೂರಾತಿ ಹಾಗೂ ವಿತರಣೆ ಸಮರ್ಪಕವಾಗಿ ನಡೆದಿರುವುದನ್ನು ಸಂಬಂಧಪಟ್ಟ ಬ್ಯಾಂಕಿನ ಅಧಿಕಾರಿಗಳು ಜಿಲ್ಲಾ ಸಹಕಾರಾ ಸಂಘಗಳ ಉಪ ನಿಬಂಧಕರು ಮತ್ತು ಸಹಕಾರ ಲೆಕ್ಕಪರಿಶೋಧನಾ ಉಪ ನಿರ್ದೇಶಕರುಗಳಿಂದ ದೃಢೀಕರಿಸಿದ ನಂತರ ಬಡ್ಡಿ ಸಹಾಯಧನವನ್ನು ಮಂಜೂರು ಮಾಡಲಾಗಿದೆ.

ಉ) ಅನ್ವಯಿಸುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) (ಶ್ರೀ ಸುನೀಲ್ ವಿ.ಹೆಗಡೆ (ಹಳಿಯಾಳ) ಇವರ ಪರವಾಗಿ) : ಮಾನ್ಯ ಸಭಾಧ್ಯಕ್ಷರೆ, ಸಹಕಾರ ಸಚಿವರು ಏನು ಉತ್ತರ ಕೊಟ್ಟಿದ್ದಾರೆ, ಕೇಂದ್ರ ಸರ್ಕಾರವು ರೈತರಿಗೆ ನೀಡುವ ಸಾಲದ ಮೇಲೆ ಶೇಕಡ 2 ರಷ್ಟು ಬಡ್ಡಿ ದರ ವಿಧಿಸುತ್ತಿದೆ. ಆದುದರಿಂದ, ರಾಜ್ಯ ಸರ್ಕಾರವು ಶೇಕಡ 1ರ ಬಡ್ಡಿ ದರಕ್ಕೆ ಇಳಿಸುವ ಉದ್ದೇಶವೇನಾದರೂ ಇದೆಯೇ? ಇದು ಮೊದಲನೆಯದು. ಎರಡನೆಯದಾಗಿ, ಹಣಕಾಸು ಸಚಿವರು ಸದನದಲ್ಲಿದ್ದಾರೆ. ನೆರೆಪೀಡಿತ ಪ್ರದೇಶದಲ್ಲಿರುವವರು ತೆಗೆದು ಕೊಂಡಿರುವ ಸಾಲವನ್ನು ಧಾರಾಳವಾಗಿ ಮನ್ನಾ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ? ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಸಹಕಾರ ಮಂತ್ರಿಗಳನ್ನು ಕೇಳಬಯಸುತ್ತೇನೆ. ರೈತರಿಗೆ ಸಕಾಲದಲ್ಲಿ ಸಾಲ ಕೊಡಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡುವುದಕ್ಕೆ ಅವಕಾಶ ಇದೆಯೇ? ಈ ಮೂರು ಪ್ರಶ್ನೆಗಳಿಗೂ ತಾವು ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಹಣಕಾಸು ಸಚಿವರು) : ಅಧ್ಯಕ್ಷರೆ, ನಾನು ಈ ಹಿಂದೆ ಬಡ್ಡಿ ದರವನ್ನು ಶೇಕಡ 3ಕ್ಕೆ ಇಳಿಸಿದಾಗಲೇ ಅವರ ಅಪ್ಪನವರಿಂದ ಹಾಸನದ ಸಾರ್ವಜನಿಕ ಸಭೆಯಲ್ಲಿ ಬೇಕಾಷ್ಟು ಸಲ ಕೇಳಿದ್ದೇನೆ. ನೀವು ಎಡ, ಬಲದಲ್ಲಿ ಕುಳಿತಿದ್ದು, ಮತ್ತೊಂದು ಮುಖ್ಯಮಂತ್ರಿ ಯಾಗಿದ್ದ ಕುಮಾರಸ್ವಾಮಿಯವರಿದ್ದರು. 'ಏನು ಯಡಿಯೂರಪ್ಪನವರೆ, ಇಷ್ಟು ಧಾರಾಳವಾಗಿ ಬಡ್ಡಿ ಮನ್ನಾ ಮಾಡುತ್ತಾ ಹೋದರೆ ಗತಿ ಏನು? ಖಜಾನೆ ತುಂಬಲು ಎಲ್ಲಿಂದ ದುಡ್ಡು ತರುತ್ತೀರಿ? ಇದೆಲ್ಲಾ ಸರಿಯಲ್ಲ'ವೆಂದು ಹೇಳಿದ್ದರು. ಅವರು ಹೇಳಿದ್ದ ಈ ಮಾತು ಇವತ್ತು ನನಗೆ ನೆನಪಿಗೆ ಬರುತ್ತಿದೆ. ಆದುರಿಂದ, ಮತ್ತೆ ಆ ತರಹದ ತಪ್ಪು ಮಾಡುವುದಿಲ. ಈಗ ಇರುವ ಶೇಕಡ 3ರಷ್ಟನ್ನು ಉಳಿಸಿಕೊಂಡು ಹೋಗುತ್ತೇವೆ.

ಶ್ರೀ ಹೆಚ್.ಡಿ.ರೇವಣ್ಣ : ಈಗ ಕೇಂದ್ರ ಸರ್ಕಾರವು ಸಾಲದ ಮೇಲೆ ಶೇಕಡ 2ರಷ್ಟು ಬಡ್ಡಿ ವಿಧಿಸುತ್ತಿರುವಾಗ ತಾವು ಇನ್ನೂ ಒಂದು ಪರ್ಸೆಂಟ್ ಜಾಸ್ತಿ ಹಾಕುವುದಾದರೆ, ಇದರಲ್ಲಿ ಅರ್ಥವೇನಿದೆ? ಈಗ ಕೇಂದ್ರ ಸರ್ಕಾರವು ರೈತರಿಗೆ ನೀಡುವ ಸಾಲದ ಮೇಲೆ ಶೇಕಡ 2ರಷ್ಟು ಬಡ್ಡಿ ದರ ವಿಧಿಸುತ್ತಿದ್ದು, ಈಗ ರಾಜ್ಯ ಸರ್ಕಾರದವರಾದ ನೀವು ಶೇಕಡ 4ರ ಬಡ್ಡಿ ದರ ವಿಧಿಸುತ್ತೇವೆಂದರೆ, ರೈತರ ಬಗ್ಗೆ ಮುಖ್ಯಮಂತ್ರಿಗಳ ಧೋರಣೆ ಏನು ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕೇಂದ್ರ ಸರ್ಕಾರ 2%ಗೆ ಕೊಡುತ್ತೇವೆಂದು ಹೇಳುವಾಗ ನೀವು ಇನ್ನೂ 1% ಕಡಿಮೆ ಮಾಡುತ್ತೇವೆಂದು

ಉದಾರ ಧೋರಣೆ ತಾಳುವುದನ್ನು ಬಿಟ್ಟು ಮುಖ್ಯಮಂತ್ರಿಗಳು ಕುಮಾರಸ್ವಾಮಿ ಯವರು, ದೇವೇಗೌಡರು ಹೇಳಿದರು ಎಂದು ಹೇಳುವುದಾದರೆ ಹೇಗೆ? ನೀವು ಕೇಂದ್ರ ಸರ್ಕಾರಕ್ಕೆ ಬದ್ಧರಾಗಿದ್ದೀರಾ ಎಂದು ಕೇಳುತ್ತಿದ್ದೇನೆ. 2% ಗೆ ಕೇಂದ್ರ ಸರ್ಕಾರ ಕೊಡುತ್ತದೆ. ಅದಕ್ಕೆ 1%ಗೆ ಏನಾದರು ಮಾಡಲು ಮುಖ್ಯಮಂತ್ರಿಗಳು ಧಾರಾಳತನ ತೆಗೆದುಕೊಳ್ಳುತ್ತಾರೆಯೇ? ಅದರ ಜೊತೆಗೆ ಉತ್ತರ ಕರ್ನಾಟಕದಲ್ಲಿ ನೆರೆಹಾವಳಿ ಪ್ರದೇಶದಲ್ಲಿರುವ ರೈತರೇನು ಸಾಲ ತೆಗೆದುಕೊಂಡಿದ್ದಾರೆ ಸಂಕಷ್ಟದಲ್ಲಿದ್ದಾರೆ. ಅವರ ಸಾಲವನ್ನು ಮನ್ನಾ ಮಾಡುತ್ತೀರಾ?

ಶ್ರೀ ಬಂಡೆಪ್ಪ ಖಾಶಂಪೂರ್ : ಮಾನ್ಯ ಅಧ್ಯಕ್ಷರೆ, ಹೋದ ವರ್ಷ ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ನೆರೆಹಾವಳಿಯಾಗಲಿ, drought affected area. ನಮ್ಮ ಬೀದರ್ ಎಲ್ಲಾ drought affected area. ಅಲ್ಲಿ ಆರ್.ಬಿ.ಐ. ಗೈಡ್‌ಲೈನ್ಸ್ ಪ್ರಕಾರ ಎಲ್ಲಾ ಬ್ಯಾಂಕ್‌ಗಳು ರೈತರೇನು short term ಲೋನ್ ತೆಗೆದುಕೊಂಡಿದ್ದಾರೆ ಅವರಿಗೆ ಈ ರೀತಿ ತೊಂದರೆಯಾಗಿದೆ, ಈ ವರ್ಷ ಸಾಲವನ್ನು ಕಟ್ಟಲು ಆಗುವುದಿಲ್ಲವೆಂದು ಅದನ್ನೆಲ್ಲಾ medium term ಲೋನ್ ಆಗಿ convert ಮಾಡಿ ಮುಂದಿನ ವರ್ಷಕ್ಕೆ ಹಾಕಬೇಕು ಎಂಬ ನಿಟ್ಟಿನಲ್ಲಿ ಆದೇಶ ಬಂದಿದೆ. ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಆದರೆ, ನಮ್ಮ ಬೀದರ್‌ನಲ್ಲಿ ವಿಶೇಷವಾಗಿ ತಮ್ಮ ಕೋಆಪರೇಟೀವ್ ಸೆಕ್ಟಾರ್ ಬ್ಯಾಂಕುಗಳು ಇದು ಯಾವುದಕ್ಕೂ ಮನ್ನಣೆ ಕೊಟ್ಟಿಲ್ಲ. ಆದ್ದರಿಂದ, ರೈತರೇನು ಕಾರ್ಖಾನೆಗಳಿಗೆ ಕಬ್ಬನು ಸಾಗಿಸಿದ್ದಾರೆ ಅವರ ಅಕೌಂಟ್‌ನಿಂದ ಹಣ cut ಆಗಿಬಿಟ್ಟಿದೆ. ಇದರಿಂದ ರೈತರು ಸಂಕಷ್ಟ ದಲ್ಲಿದ್ದಾರೆ. ಆರ್‌ಬಿಐ ಗೈಡ್‌ಲೈನ್ಸ್ ಇದೆ short term ನಿಂದ long term ಮಾಡಿ ಮುಂದಿನ ವರ್ಷಕ್ಕೆ ಮಾಡಿಯೆಂದು ಇದ್ದರೂ ಅವರು ಏಕೆ ಕ್ರಮ ಕೈಗೊಂಡಿಲ್ಲ? ನಮ್ಮ ಬೀದರ್‌ನಲ್ಲಿ ಹಾಗೇ ಇದೆ.

ಶ್ರೀ ಲಕ್ಷ್ಮಣ ಸವದಿ (ಸಹಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ರೇವಣ್ಣನವರು ಮುಖ್ಯವಾಗಿ 2 ಪ್ರಶ್ನೆಗಳನ್ನು ಕೇಳಿದ್ದಾರೆ. ಕೇಂದ್ರ ಸರ್ಕಾರ ಬಡ್ಡಿದರದಲ್ಲಿ ಕಡಿಮೆ ಮಾಡಿದೆ, ನೀವೂ ಮಾಡಿಯೆಂದು ಕೇಳಿದ್ದಾರೆ. ನಾನು ಮಾನ್ಯ ರೇವಣ್ಣನವರಿಗೆ ಮತ್ತು ಎಲ್ಲಾ ಹಿರಿಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕೇಂದ್ರ ಸರ್ಕಾರದವರು ಈ ಸಲ 7% ಬಡ್ಡಿದರದಲ್ಲಿ ಸಾಲ ಕೊಡಬೇಕೆಂದು ಮೊನ್ನೆಯ ಬಜೆಟ್‌ನಲ್ಲಿ

ಘೋಷಣೆ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಈಗಾಗಲೇ 3% ಬಡ್ಡಿದರದಲ್ಲಿ ಸಾಲವನ್ನು ಕೊಡುತ್ತಿರುವ ಸಂದರ್ಭವಿರುವುದರಿಂದ ಬಹುಶಃ ತಾವು ಬಡ್ಡಿ ದರದಲ್ಲಿ ಇನ್ನಷ್ಟು ಕಡಿಮೆ ಮಾಡಿಯೆಂದು ಏನು ಕೇಳುತ್ತಿದ್ದೀರಿ ಆ ಪ್ರಸ್ತಾವನೆ ನಮ್ಮ ಮುಂದೆ ಇಲ್ಲ. ನಾವೂ ನೀವು ಕೂಡಿ ಇದ್ದ ಸರ್ಕಾರದಲ್ಲಿ 1760 ಕೋಟಿ ಏನು ಸಾಲ ಮನ್ನಾ ಮಾಡಿದ್ದೇವೆ ಆ ಹಣವನ್ನು ಮರುಪಾವತಿ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ನಾವು ವಿನಂತಿಯನ್ನು ಕೊಟ್ಟಿದ್ದೇವೆ. ಒಂದು ವೇಳೆ ಕೇಂದ್ರ ಸರ್ಕಾರ ಆ ನಮ್ಮ ವಿನಂತಿಯನ್ನು ಮನ್ನಣೆ ಮಾಡಿ ಆ 1760 ಕೋಟಿ ಹಣವನ್ನು ಕೊಟ್ಟಿದ್ದೇ ಆದರೆ ಮುಂದಿನ ದಿನಮಾನಗಳಲ್ಲಿ ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : ಸಹಕಾರಿ ಮಂತ್ರಿಗಳಿಗೆ ಸಹಕಾರಿಯಾಗಲಿ ಯೆಂದು ಇದನ್ನು ಹೇಳುತ್ತೇನೆ. ನಿಮಗೆ ಇದರಿಂದ ಏನೂ ಬರ್ಡನ್ ಆಗುವುದಿಲ್ಲ. ಈ ವಿಚಾರ ನಿಮ್ಮ ತಲೆಯಲ್ಲಿ ಬರಬೇಕು. ಕೇಂದ್ರ ಸರ್ಕಾರ 7% ಬಡ್ಡಿದರದವನ್ನು ಮಾಡಿರುವಾಗ 4% ನೀವು ಈ ವರ್ಷಕ್ಕೆ ಬರ್ಡನ್ ಹೊತ್ತಿಕೊಳ್ಳುತ್ತಿದ್ದೀರಿ. ಮುಂದಿನ ವರ್ಷಕ್ಕೆ prompt payment ಮಾಡಿದವರಿಗೆ 2% ಕಡಿಮೆಯಾಗುತ್ತದೆ. ಅಲ್ಲಿ 2% ಕಡಿಮೆಯಾದಮೇಲೆ ನಿಮಗೂ 2% ಬರ್ಡನ್ ಕಡಿಮೆಯಾಗುತ್ತದೆ. ಆ 2% ಏನು ಬರ್ಡನ್ ಕಡಿಮೆಯಾಗುತ್ತದೆ ಅದನ್ನು pass on ಮಾಡಿ ಅಷ್ಟೇ. There is no change in your burden. The same 4% burden would continue. Already you are ready to bear 4% burden. Isn't it? ಈಗ ನೀವು 4% ಬರ್ಡನ್ ಹೊತ್ತಿಕೊಂಡಿದ್ದೀರಲ್ಲವೇ? ಕೇಂದ್ರ ಸರ್ಕಾರ 2% ನಿಮ್ಮ ಬರ್ಡನ್ ಕಡಿಮೆ ಮಾಡಲು ಈ ಸಲ ತೀರ್ಮಾನ ಮಾಡಿದ ಮೇಲೆ ನೀವೂ 2% ಬರ್ಡನ್ ಕಡಿಮೆ ಮಾಡುತ್ತೇವೆಂದು ಹೇಳಲು ತೊಂದರೆಯೇನು? ಅದನ್ನು ಹೇಳದಿದ್ದರೆ ನಿಮ್ಮನ್ನು ರೈತ ವಿರೋಧಿಗಳು ಎಂದು ಎಲ್ಲಾ ರೈತ ಸಮುದಾಯ ಕರೆಯುತ್ತವೆ. ಏನೂ ಮಾಡಲು ಆಗುವುದಿಲ್ಲ. You are anti-farmers ಎಂದು ರೈತರು ಹೇಳುತ್ತಾರೆ.

ಶ್ರೀ ಲಕ್ಷ್ಮಣ ಸವದಿ : ಆ ಮಾತು .ಬೇರೆ. ಅದನ್ನು ರೈತರು ತೀರ್ಮಾನ ಮಾಡುತ್ತಾರೆ.

ಶ್ರೀ ಬಿ.ಎನ್. ಬಚ್ಚೇಗೌಡ : ನಿಮ್ಮ ಕಾಲದಲ್ಲಿ 6% ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ : ನಾನು ಅದನ್ನು ಇಲ್ಲಾ ಎಂದು ಹೇಳಿದ್ದೇನೆಯೇ? ಅದನ್ನು ಡಿಸ್‌ಪ್ಯೂಟ್ ಮಾಡಿದ್ದೇನೆಯೇ? I am not disputing it? ನೀವು 6% ರಿಂದ 4% ಗೆ 4% ರಿಂದ 3% ಗೆ ಇಳಿಸಿದಿರಿ. ಈ ರೀತಿ ಇಳಿಸುವಾಗ ನೀವು ಇನ್ನೂ ಬರ್ಡನ್ 4% ಹೊತ್ತುಕೊಂಡಿದ್ದೀರಿ. ಸರ್ಕಾರದ ಮೇಲೆ ಈಗ 4% ಬರ್ಡನ್ ಇದೆ. ಇದನ್ನು ಕಳೆದ ಎರಡು ವರ್ಷದಿಂದ ಸರ್ಕಾರ ಮಾಡುತ್ತಿದೆ. ಈ 4% ಬರ್ಡನ್‌ನಲ್ಲಿ 2% ಕಡಿಮೆ ಮಾಡಿದರೆ there will be no change. ಮಾಡಲಿಲ್ಲವೆಂದರೆ ನಿಮಗೆ 2% ಕಡಿಮೆಯಾಗುತ್ತದೆ, ರೈತರಿಗೆ ಕೊಡುವುದನ್ನು ನೀವು ಇಟ್ಟುಕೊಳ್ಳುತ್ತಿದ್ದೀರಿ ಎಂದು ನಾವು ರೈತರಿಗೆ ಹೇಳುತ್ತೇವೆ.

ಶ್ರೀ ಲಕ್ಷ್ಮಣ ಸವದಿ : ಮಾನ್ಯ ಸಿದ್ದರಾಮಯ್ಯನವರು ನಿಮಗೆ 4% ಬರ್ಡನ್ ಆಗುತ್ತದೆಂದು ಹೇಳಿದರು. ನಾವು ಈಗಾಗಲೇ ಈ ವರ್ಷ ರೈತರಿಂದ 3% ಬಡ್ಡಿದರದಲ್ಲಿ ಸಾಲವನ್ನು ಕೊಡುತ್ತಿದ್ದೇವೆ. ನಾವು ಸರ್ಕಾರದಿಂದ 9 ರೂಪಾಯಿ 45 ಪೈಸೆ ಆ ವ್ಯತ್ಯಾಸವನ್ನು ಭರಿಸಲು ಬ್ಯಾಂಕುಗಳಿಗೆ ಕೊಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಬಡ್ಡಿ 7% ಅಲ್ಲವೇ?

ಶ್ರೀ ಲಕ್ಷ್ಮಣ ಸವದಿ : 7% ಅಲ್ಲ. ಅವರು ಈಗ ಘೋಷಣೆ ಮಾಡಿದ್ದಾರೆ. ಅದು ಇನ್ನೂ ಬರಬೇಕು. ಅದು ಬಂದ ಮೇಲೆ ನೋಡೋಣ. ನಾವು ಈಗ ಕೊಡುತ್ತಿರುವುದನ್ನು ಹೇಳುತ್ತಿದ್ದೇನೆ. ಕಳೆದ ಬಾರಿ 2009–10ನೇ ಸಾಲಿಗೆ ನಾವು ಕೊಟ್ಟಿರತಕ್ಕದ್ದು 9 ರೂ.45 ಪೈಸೆ.

ಶ್ರೀ ಬಂಡೆಪ್ಪ ಖಾಶಂಪುರ್ : ಮಾನ್ಯ ಅಧ್ಯಕ್ಷರೆ..

ಅಧ್ಯಕ್ಷರು : ಈ ಪ್ರಶ್ನೆಗೆ 20 ನಿಮಿಷವಾಯಿತು. ನಾನು ಮುಕ್ತಾಯ ಮಾಡುತ್ತೇನೆ. ಬೇಗ ಮುಗಿಸಿ.

ಶ್ರೀ ಸಿದ್ದರಾಮಯ್ಯ : 3% ಪ್ಲಸ್ 9.50% ಸೇರಿಸಿ ಒಟ್ಟು 12.5% ಬಡ್ಡಿ ಇರುವುದೇ? Are you sure about it?

ಶ್ರೀ ಲಕ್ಷ್ಮಣ ಸವದಿ : ಹೌದು.

ಶ್ರೀ ಸಿದ್ದರಾಮಯ್ಯ : ಎಲ್ಲಿ? ಯಾವ ಬ್ಯಾಂಕ್‌ನಲ್ಲಿ?

ಶ್ರೀ ಲಕ್ಷ್ಮಣ ಸವದಿ : ಎಲ್ಲಾ ಡಿ.ಸಿ.ಸಿ. ಬ್ಯಾಂಕುಗಳಲ್ಲಿ ಅಷ್ಟು ಇದೆ.

ಶ್ರೀ ಸಿದ್ದರಾಮಯ್ಯ : ಕಮರ್ಶಿಯಲ್ ಬ್ಯಾಂಕ್‌ಗಳಲ್ಲಿ ಎಷ್ಟು?

ಶ್ರೀ ಲಕ್ಷ್ಮಣ ಸವದಿ : ಕಮರ್ಶಿಯಲ್ ಬ್ಯಾಂಕ್‌ಗಳದ್ದು ಬೇರೆ ಇದೆ. ಸಹಕಾರಿ ಸಂಘಗಳಿಂದೇನು ಸಾಲ ಕೊಡುತ್ತಿದ್ದೇವೆ ಎಲ್ಲಾ ಬ್ಯಾಂಕ್ ಮೂಲಕ ರೈತರಿಗೆ ಏನು ಸಾಲ ಕೊಟ್ಟಿದ್ದೇವೆ, ಕೃಷಿ, ಬೆಳೆ ಸಾಲ ಏನು ಕೊಡುತ್ತಿದ್ದೇವೆ ಅವರ ಕಡೆಯಿಂದ 3% ಬಡ್ಡಿದರದಲ್ಲಿ ತೆಗೆದುಕೊಂಡು ಬರುವ ವ್ಯತ್ಯಾಸವಾದ 9 ರೂಪಾಯಿ 45 ಪೈಸೆಯನ್ನು ನಾವು ಸರ್ಕಾರದಿಂದ ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ ಸೊಸೈಟಿಗಳಲ್ಲಿ 12.50% ಬಡ್ಡಿ ಇದೆಯೇ?

ಶ್ರೀ ಲಕ್ಷ್ಮಣ ಸವದಿ : ಹೌದು. ಅವರದ್ದು Cost of funding 12 ರೂಪಾಯಿ 75 ಪೈಸೆ ಆಗುತ್ತದೆ.

ಶ್ರೀ ವೆಂಕಟರಾವ್ ನಾಡಗೌಡ : ಅಪೆಕ್ಸ್‌ಬ್ಯಾಂಕ್‌ನಿಂದ ಡಿ.ಸಿ.ಸಿ. ಬ್ಯಾಂಕಿಗೆ ಬರುತ್ತದೆ. ಡಿ.ಸಿ.ಸಿ. ಬ್ಯಾಂಕ್‌ನವರು ತಮ್ಮದನ್ನು ಇಟ್ಟುಕೊಂಡು ಇವರಿಗೆ ಕೊಡುತ್ತವೆ. ಅಷ್ಟೊತ್ತಿಗೆ 12% ಆಗುತ್ತದೆ.

ಶ್ರೀ ಸಿದ್ದರಾಮಯ್ಯ : ಶೆಡ್ಯೂಲ್ಡ್ ಬ್ಯಾಂಕ್‌ದ್ದು ಎಷ್ಟಿದೆ? 7% ಇದೆ.

ಶ್ರೀ ಲಕ್ಷ್ಮಣ ಸವದಿ : ಅದರ ಬಗ್ಗೆ ನನ್ನ ಹತ್ತಿರ ನಿಖರವಾದ ಮಾಹಿತಿ ಇಲ್ಲ.

ಶ್ರೀ ಸಿದ್ದರಾಮಯ್ಯ : ಅದನ್ನು ಹೇಳಿ.

ಶ್ರೀ ಲಕ್ಷ್ಮಣ ಸವದಿ : ಮಾಹಿತಿ ಪಡೆದು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಕೇಂದ್ರ ಸರ್ಕಾರದವರು ಮಾಡುವುದು ಶೆಡ್ಯೂಲ್ಡ್ ಬ್ಯಾಂಕ್‌ಗೆ.

ಶ್ರೀ ಲಕ್ಷ್ಮಣ ಸವದಿ : ಕಳೆದ ಭಾರಿ ಮಧ್ಯಮಾವಧಿ ಸಾಲಕ್ಕೆ 13 ರೂಪಾಯಿ 75 ಪೈಸೆ ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : ಕೇಂದ್ರ ಸರ್ಕಾರ ಮಾಡುವುದು ಶೆಡ್ಯೂಲ್ಡ್ ಬ್ಯಾಂಕ್‌ಗೆ.

ಶ್ರೀ ಲಕ್ಷ್ಮಣ ಸವದಿ : ಸಹಕಾರಿ ಬ್ಯಾಂಕುಗಳ ಬಗ್ಗೆ ಕೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ಹೇಳುತ್ತಿದ್ದೇನೆ. ಶೆಡ್ಯುಲ್ಡ್ ಬ್ಯಾಂಕ್‌ದ್ದು ಬೇಕಾದರೆ ಮಾಹಿತಿ ತರಿಸಿ ಕೊಡುತ್ತೇನೆ.

ಶ್ರೀ ಬಸವರಾಜ್ ಬೊಮ್ಮಾಯಿ : ಪ್ರಶ್ನೆ ಇರುವುದು ಕೋಆಪರೇಷನ್ ಬಗ್ಗೆ. ಆದ್ದರಿಂದ ಅದಕ್ಕೆ ಸಂಬಂಧಿಸಿದಂತೆ ಉತ್ತರ ಕೊಡುತ್ತಿದ್ದಾರೆ. ಬಜೆಟ್ ಫೈನಲ್ ಮಾಡುವಾಗ ಶೆಡ್ಯೂಲ್ಡ್ ಬ್ಯಾಂಕ್‌ನಿಂದ ಎಷ್ಟು ಕೊಡುತ್ತಾರೆ, ನಾವು

ಎಷ್ಟು ಕೊಡುತ್ತಿದ್ದೇವೆ ಎಂಬುದನ್ನು ಮುಖ್ಯಮಂತ್ರಿಯವರ ಕೈಯಿಂದ ಉತ್ತರ ಕೊಡಿಸುತ್ತೇವೆ.

ಶ್ರೀ ಲಕ್ಷ್ಮಣ ಸವದಿ : ಉತ್ತರ ಕರ್ನಾಟಕದಲ್ಲಿರುವ 14 ಜಿಲ್ಲೆಗಳಲ್ಲಿ ಇವತ್ತು ವಸೂಲಾತಿ 52% ಇದೆ. ನಾವು ಈಗಾಗಲೆ ಕೊಟ್ಟಿರುವ ಬೆಳೆ ಸಾಲ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ ಅಲ್ಲಿ ಇವತ್ತು 52% ವಸೂಲಾಗಿದೆ. ಆ ವಸೂಲಾಗಿರುವುದನ್ನು ನೋಡಿದಾಗ ಸಾಲ ಮನ್ನ ಮಾಡುವ ಅವಶ್ಯಕತೆ ಇಲ್ಲ ಎನ್ನುವುದು ಒಳ್ಳೆಯದು. ಎರಡನೆಯದ್ದು, ಬೀದರ್ ಭಾಗದಲ್ಲಿ ತಾವು ಏನು short term ಇರುವುದನ್ನು medium term ಮಾಡಬೇಕೆಂದು ಹೇಳಿದ್ದೀರಿ ಅದರ ಬಗ್ಗೆಯೇ ಸರ್ಕಾರದಿಂದ ಸೂಚನೆ ಹೋಗಿದೆ. ಒಟ್ಟಾರೆ ರಾಜ್ಯದಲ್ಲಿ ಎಲ್ಲೂ ಒತ್ತಾಯ ಪೂರ್ವಕವಾಗಿ ಸಾಲ ವಸೂಲಾತಿ ಆಗಬಾರದು ಎಂದು ನಾವು ಸೂಚನೆ ಕೊಟ್ಟಿದ್ದೇವೆ. ಆದರೆ, ಸ್ವಯಂಪ್ರೇರಿತವಾಗಿ ರೈತರು ಸಾಲ ತುಂಬಿದ್ದೇ ಆದರೆ ಯಾರೂ ತಿರಸ್ಕಾರ ಮಾಡಲು ಆಗುವುದಿಲ್ಲ. ಸ್ವಯಂಪ್ರೇರಿತವಾಗಿ ತುಂಬಿದರೆ ತುಂಬಿಸಿ ಕೊಳ್ಳಬೇಕಾಗುತ್ತದೆ. ಆ ನಿಟ್ಟಿನಲ್ಲಿ ನಾವು ಕ್ರಮ ಕೈಗೊಂಡಿದ್ದೇವೆ.

(ಗೊಂದಲ)

ಅಧ್ಯಕ್ಷರು : ಈಗ ಲಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್ : .... ನಮ್ಮ ಭಾಗದಲ್ಲಿ 52% ರೈತರು ಕಟ್ಟುತ್ತಿದ್ದಾರೆಂದು ಹೇಳಿದರು, ಇದು ಸುಳ್ಳು. Automatic ಆಗಿ DCC ಬ್ಯಾಂಕ್‌ನಲ್ಲಿರುವ ಅವರ ಖಾತೆಯಲ್ಲಿ ಜಮಾ ಖರ್ಚು ಮಾಡಿ ಅವರು ವಾಪಸ್ ಕೊಡುತ್ತಿದ್ದಾರೆ. ರೈತರು ಯಾರೂ ತಮ್ಮಷ್ಟಕ್ಕೆ ತಾವು ದುಡ್ಡು ಕಟ್ಟಲು ಹೋಗುತ್ತಿಲ್ಲ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಗೊಂದಲ)

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 12ನೇ ಮಾರ್ಚ್ 2010ರ 5ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 87 ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ–1)

ಅಧ್ಯಕ್ಷರು : ಮಂಡಿಸಲಾಯಿತು.

3. ಚುನಾವಣಾ ಪ್ರಸ್ತಾವ :

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) : ಕರ್ನಾಟಕ ರಾಜ್ಯ ಡಾ:ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ವಿಶ್ವವಿದ್ಯಾನಿಲಯಗಳ ಸಿಂಡಿಕೇಟ್‌ಗೆ ನಡೆಯುವ ಚುನಾವಣಾ ಪ್ರಸ್ತಾವವನ್ನು ನಾನು ದಿನಾಂಕ: 02.03.2010 ರಂದು ಮಂಡಿಸಿರುತ್ತೇನೆ. ತದನಂತರ ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಲಾಗಿ, ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ವಿಶ್ವವಿದ್ಯಾನಿಲಯಗಳ ಸಿಂಡಿಕೇಟ್‌ಗೆ ಒಬ್ಬರು ವಿಧಾನ ಸಭಾ ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ವಿಶ್ವವಿದ್ಯಾನಿಲಯಗಳ ಸಿಂಡಿಕೇಟ್‌ಗೆ ಒಬ್ಬರು ವಿಧಾನ ಸಭಾ ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡುವುದು"

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು

4. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ತರಲು ರಚಿತವಾದ ಕರ್ನಾಟಕ ವಿಧಾನ ಸಭೆಯ ನಿಯಮಗಳ ಸಮಿತಿಯ ವರದಿ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಸಭೆಯ ನಿಯಮಗಳ ಸಮಿತಿಯು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ ಮಂಡಿಸಿದ ವರದಿಯನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಿಯಮಾವಳಿ ಸಮಿತಿಯನ್ನು ಹಿಂದಿನ ಸಭಾಧ್ಯಕ್ಷರು ನೇತೃತ್ವದಲ್ಲಿ ರಚಿಸಲಾಗಿತ್ತು. ಮಾನ್ಯ ಜಯಚಂದ್ರರವರೂ ಸಹ ಅದರಲ್ಲಿ ಸದಸ್ಯರಾಗಿದ್ದರು. ಆ ಸಮಿತಿ ನಾಲ್ಕು ಶಿಫಾರಸ್ಸುಗಳನ್ನು ಮಾಡಿದೆ. ಮೊದಲನೆಯದಾಗಿ, on par with PAC 'ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ' ರಚನೆ ಮಾಡಬೇಕು. PAC ತರಹವೇ ಸಮಿತಿಯೊಂದನ್ನು ರಚಿಸಬೇಕು ಎಂದು ಸಮಿತಿ ಹೇಳಿದೆ. CAG ಸಹ ಈ ರೀತಿ 'ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಮಿತಿ' ರಚಿಸಬೇಕೆಂದು recommendation ಮಾಡಿದೆ. ಎರಡನೆಯದಾಗಿ, ಪ್ರತಿ ಶುಕ್ರವಾರ ಖಾಸಗಿ ನಿರ್ಣಯ ಮತ್ತು ವಿಧೇಯಕಗಳ ಕಲಾಪಕ್ಕಾಗಿ ಸಮಯವೊಂದನ್ನು ನಾವು ನಿಗದಿ ಮಾಡಿಕೊಂಡಿದ್ದೆವು. ಆದರೆ ಪ್ರತಿ ಶುಕ್ರವಾರ ಅದು ಆಗುತ್ತಿಲ್ಲ. ಏಕೆಂದರೆ, ಪ್ರತಿ ಶುಕ್ರವಾರ ಮಧ್ಯಾಹ್ನ ಆಗುತ್ತಲೇ, ಮಾನ್ಯ ಸದಸ್ಯರೆಲ್ಲರೂ ಹೋಗುವ ಆತುರದಲ್ಲಿರುವುದರಿಂದ ಯಾವುದೇ ಖಾಸಗಿ ನಿರ್ಣಯ/ವಿಧೇಯಕಗಳ ಮೇಲೆ ಚರ್ಚೆಯಾಗುತ್ತಿಲ್ಲ. ಆದ್ದರಿಂದ ಖಾಸಗಿ ಕಾರ್ಯಕಲಾಪಗಳನ್ನು ಪ್ರತಿ ಶುಕ್ರವಾರ ಬದಲು ಇನ್ನು ಮುಂದೆ ಪ್ರತಿ ಗುರುವಾರದಂದು ನಿಗದಿಗೊಳಿಸ ಬೇಕೆಂದು ನಿಯಮಾವಳಿ ಸಮಿತಿ recommendation ಮಾಡಿದೆ. ನಾನು

ನೋಡಿದಂತೆ ಪ್ರತಿ ಶುಕ್ರವಾರ ಬಹಳ ಹಿಂದೆ ಒಮ್ಮೆ ಚರ್ಚೆಯಾದ ಮೇಲೆ, ಬೇರೆ ಯಾವುದೇ ಖಾಸಗಿ ನಿರ್ಣಯ ಸದನದಲ್ಲಿ ಚರ್ಚೆಗೆ ಬಂದೇ ಇಲ್ಲ. ಮೂರನೆಯದಾಗಿ, ವಿಧಾನ ಮಂಡಲದ ಸಮಿತಿಗಳಲ್ಲಿನ ಕೋರಂ ಬಗ್ಗೆ ನಿಯಮಾವಳಿ ಸಮಿತಿ ಶಿಫಾರಸ್ಸು ಮಾಡಿದೆ. ಈಗ ಕನಿಷ್ಟ ಐದು ಜನ ಇರಬೇಕು ಅಥವಾ 1/4 ಹಾಜರಿರಬೇಕೆಂದು ಇದೆ. ಒಂದೊಂದು ಸಮಿತಿಯಲ್ಲಿ ಒಂದೊಂದು ರೀತಿ ಕೋರಂ ಇರುವುದನ್ನು ಸಮಿತಿ ಪರಿಶೀಲಿಸಿ, ಏಕ ರೂಪವಾಗಿ ಕೋರಂ ಇರುವಂತೆ ಮಾಡಬೇಕೆಂದು, ಎಲ್ಲಾ ಸಮಿತಿ ಸಭೆಗಳಲ್ಲಿ ಕನಿಷ್ಟ ಪಕ್ಷ ಹಾಜರಿರಬೇಕಾದ ಸದಸ್ಯರ ಸಂಖ್ಯೆ ಒಟ್ಟು ಸದಸ್ಯರ ಮೂರನೇ ಒಂದು ಭಾಗ ಇರಬೇಕೆಂದು ಸಮಿತಿ ಶಿಫಾರಸ್ಸು ಮಾಡಿದೆ. ನಾಲ್ಕನೆಯದಾಗಿ, ಬಹಳ ಪ್ರಮುಖವಾದುದು. ಸಮಿತಿಯ ಸದಸ್ಯರು ಸಚಿವರಾದಾಗ, ಅವರ ಸಮಿತಿಯ ಸದಸ್ಯತ್ವ ರದ್ದಾಗುತ್ತದೆ ಎಂಬ ಶಿಫಾರಸ್ಸನ್ನೂ ಸಹ ಸಮಿತಿ recommend ಮಾಡಿದೆ. ಈ ರೀತಿಯಾಗಿ ನಿಯಮಾವಳಿ ಸಮಿತಿ ನಾಲ್ಕು ಶಿಫಾರಸ್ಸುಗಳನ್ನು ಮಾಡಿದೆ. ಇದನ್ನು ಸದನ ಒಪ್ಪಿಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ,....

ಅಧ್ಯಕ್ಷರು : ತಾವೂ ಸಹ ಸಮಿತಿಯಲ್ಲಿ ಇದ್ದಿರಲ್ಲವೇ?

ಶ್ರೀ ಟಿ.ಬಿ.ಜಯಚಂದ್ರ : ಹೌದು, ಇದ್ದೆ.

ಅಧ್ಯಕ್ಷರು : ತಾವೇ ಸದಸ್ಯರಾಗಿದ್ದ ಸಮಿತಿ ಕೊಟ್ಟ ವರದಿಯ ಮೇಲೆ ಮತ್ತೆ ಏನು ಮಾತನಾಡುತ್ತೀರಿ?

ಶ್ರೀ ಟಿ.ಬಿ.ಜಯಚಂದ್ರ : ನಾನು ಹೇಳಿದ್ದೆಲ್ಲವೂ ಈ ವರದಿಯಲ್ಲಿ ಬಂದಿಲ್ಲ. ಅದಕ್ಕೋಸ್ಕರ ಕೆಲವೊಂದು ವಿಚಾರಗಳನ್ನು ಹೇಳಲು ನಾನು ಎದ್ದು ನಿಂತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಸಾಮಾನ್ಯವಾಗಿ ಸಮಿತಿಯ ಸದಸ್ಯರು ಇಲ್ಲಿ ಚರ್ಚಿಸುವುದಿಲ್ಲ. ನೀವು ಎಲ್ಲವನ್ನೂ ಸಮಿತಿ ಸಭೆಗಳಲ್ಲೇ ಚರ್ಚಿಸಿರುತ್ತೀರಿ. ಡಾ: ಮಹಾದೇವಪ್ಪನವರೂ ಸಹ ಸಮಿತಿಯ ಸದಸ್ಯರಾಗಿದ್ದಾರೆ. ಅವರೂ ಕೂಡ ಈಗ ಎದ್ದು ನಿಂತು ಮಾತನಾಡಿ, Suggestion ಕೊಡಲಿಕ್ಕೆ ಶುರು ಮಾಡಿದರೆ ಹೇಗೆ? On the basis of your Suggestions, Committee recommendations ಮಾಡಿದೆ.

ಅಧ್ಯಕ್ಷರು : ಇದರ ಬಗ್ಗೆ ಮತ್ತೆ ಚರ್ಚೆ ಮಾಡುವುದರಲ್ಲಿ ಯಾವುದೇ ಅರ್ಥವಿಲ್ಲ.

ಶ್ರೀ ಟಿ.ಬಿ.ಜಯಚಂದ್ರ : ಇದನ್ನು ನಾವು ಒಪ್ಪಿದ್ದೇವೆ. ನನ್ನದೊಂದು ಸಲಹೆ ಇದೆ. ಅದನ್ನು ಹೇಳಲೆಂದೇ ನಾನು ಎದ್ದು ನಿಂತಿದ್ದೇನೆ. ವಿರೋಧ ಪಕ್ಷದವರೇ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಅಧ್ಯಕ್ಷರಾಗುತ್ತಾರೆ. ಈಗ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವ್ಯಾಪ್ತಿಗೆ ಬರತಕ್ಕದ್ದರಲ್ಲಿ ಸ್ವಲ್ಪ ಭಾಗ ತೆಗೆದು, ಹೊಸದಾಗಿ ರಚಿಸಲಾಗುವ ಸಮಿತಿ ವ್ಯಾಪ್ತಿಗೆ ಸೇರಿಸಲಾಗುತ್ತದೆ. ಪಿಎಸಿ ನಲ್ಲಿ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಲು ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕಾಗಿ ಬೇರೆ ಬೇರೆ ರಾಜ್ಯಗಳಲ್ಲಿರುವಂತಹ ವ್ಯವಸ್ಥೆಯನ್ನು ಅನುಷ್ಠಾನ ಮಾಡಬೇಕೆಂಬ ಉದ್ದೇಶದಿಂದ ಹೊಸದಾಗಿ 'Committee on Panchayath Raj' ಮಾಡಲಿಕ್ಕೆ ಹೊರಟ್ಟಿದ್ದೇವೆ. ನಾನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷನಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಇದುವರೆಗೂ ಪಂಚಾಯತ್ ರಾಜ್ ಇಲಾಖೆಯ ಒಂದೇ ಒಂದು report ನ್ನೂ ಸಹ ಸಮಿತಿ review ಮಾಡಲಿಕ್ಕೆ ಸಾಧ್ಯವಾಗಿಲ್ಲ. ಏಕೆಂದರೆ, ಸಮಿತಿಗೆ ಕಾಲಾವಕಾಶ ಇಲ್ಲ. ಆದ್ದರಿಂದ ಈ ರೀತಿ ಹೊಸದಾಗಿ ಸಮಿತಿ ರಚಿಸುವುದನ್ನು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತರಬೇಕು. ಈ ರೀತಿ ಹೊಸದಾಗಿ ರಚಿಸಲಾಗುವ 'Committee on Panchayath Raj' ನ ಅಧ್ಯಕ್ಷ ಸ್ಥಾನವನ್ನೂ ಸಹ ವಿರೋದ ಪಕ್ಷದವರಿಗೆ ಮೀಸಲಾಗಿಡಬೇಕೆಂದು ನಾನು ಸಲಹೆ ಕೊಡಬಯಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಅದನ್ನು ಪರಿಶೀಲಿಸುತ್ತೇವೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಕರ್ನಾಟಕ ವಿಧಾನ ಸಭೆಯ ನಿಯಮಗಳ ಸಮಿತಿಯು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ ಮಂಡಿಸಿದ ವರದಿಯನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಸಭೆಯ ನಿಯಮಗಳ ಸಮಿತಿಯು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ ಮಂಡಿಸಿದ ವರದಿಯನ್ನು ಸಭೆಯು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಕರ್ನಾಟಕ ವಿಧಾನ ಸಭೆಯ ನಿಯಮಗಳ ಸಮಿತಿಯು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ ಮಂಡಿಸಿದ ವರದಿಯನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ನಿಯಮಾವಳಿ ಸಮಿತಿ ವರದಿಗೆ ಒಪ್ಪಿಗೆ ನೀಡಲಾಯಿತು

5. ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು :

ವಿಷಯ: (ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಪುರಸಭೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ.

ಶ್ರೀ ಬಿ. ರಮಾನಾಥ ರೈ (ಬಂಟ್ವಾಳ) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಪುರಸಭೆಯ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಗಂಭೀರ ಸಮಸ್ಯೆ ಇದೆ. ಈಗಾಗಲೇ ಇಲಾಖೆಯವರು ಎರಡನೇ ಹಂತದ ಕುಡಿಯುವ ನೀರಿನ ಯೋಜನೆಯ ಅನುಷ್ಠಾನಕ್ಕಾಗಿ ಯೋಜನೆ ರೂಪಿಸಿದ್ದಾರೆ. ಇದನ್ನು ಶೀಘ್ರ ಅನುಷ್ಠಾನಗೊಳಿಸಿ, ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ನಿರ್ದಿಷ್ಟವಾದಂತಹ ಉತ್ತರವನ್ನು ನೀಡಬೇಕೆಂದು ಮಾನ್ಯ ಸಚಿವರನ್ನು ಕೋರುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಜಲಸಂಪನ್ಮೂಲ ಸಚಿವರು) : (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ)

ಬಂಟ್ವಾಳ ನಗರಕ್ಕೆ ನೇತ್ರಾವತಿ ನದಿಯ ಮೂಲದಿಂದ ಕುಡಿಯುವ ನೀರಿನ ಯೋಜನೆ 1998 ರಲ್ಲಿ ಅನುಷ್ಠಾನಗೊಂಡಿದ್ದು, ನೀರು ಸರಬರಾಜು ವಿತರಣಾ ಕಾಮಗಾರಿಯು ಪುರಸಭೆಯ ನಿರ್ವಹಣೆಯಲ್ಲಿದೆ. ಬಂಟ್ವಾಳ ನಗರದ ಪ್ರಸ್ತುತ ಜನಸಂಖ್ಯೆಯು 2001ರ ಜನಗಣತಿಯಂತೆ 36836 ಇದ್ದು, ಪ್ರಸ್ತುತ 42000 ಇರುತ್ತದೆ. ನಗರದ ನೀರಿನ ಬೇಡಿಕೆ 3.75 ಎಮ್‌ಎಲ್‌ಡಿ ಇದ್ದು, ಹಾಲಿ 3.68 ಎಮ್‌ಎಲ್‌ಡಿ ನೀರು ಪೂರೈಸಲಾಗುತ್ತಿದೆ. ಅಂದರೆ ತಲಾ ದಿನಂಪ್ರತಿ 100 ಲೀಟರ್‌ನಂತೆ ಸರಬರಾಜು ಮಾಡಲಾಗುತ್ತಿದೆ. ಆದರೆ ಬೇಸಿಗೆಯ 4 ತಿಂಗಳಲ್ಲಿ ತೆರೆದ ಬಾವಿಗಳಲ್ಲಿ ಅಂತರ್ಜಲ ಕುಸಿದು, ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತದೆ.

ಬಂಟ್ವಾಳ ನಗರಕ್ಕೆ ಎರಡನೇ ಹಂತದ ಕುಡಿಯುವ ನೀರಿನ ಯೋಜನೆಯನ್ನು ಅಂದಾಜು ರೂ. 42.50 ಕೋಟಿಗಳಿಗೆ ಯೋಜನಾ ವರದಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ತಯಾರಿಸಿದ್ದು, ಪ್ರಸ್ತುತ ನೀರಿನ ಲಭ್ಯತೆ ಆಧಾರದ ಮೇಲೆ ಮುಂದಿನ 5–10 ವರ್ಷಗಳಿಗೆ ಸಾಕಾಗುವಷ್ಟು ಲಭ್ಯವಿರುವುದರಿಂದ, ತಕ್ಷಣ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕಾಗಿರುತ್ತದೆ. ಬಂಟ್ವಾಳ ಪಟ್ಟಣಕ್ಕೆ ಹಾಲಿ ಇರುವ ನೀರು ಸರಬರಾಜು ವಿತರಣಾ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವ ಬಗ್ಗೆ ಸಮಗ್ರ ನೀರು ಸರಬರಾಜು ಯೋಜನೆಗೆ ಬದಲಾಗಿ ನೀರು ವಿತರಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ರೂ.25.00 ಕೋಟಿಗಳ ಅಂದಾಜು ಪಟ್ಟಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ತಯಾರಿಸಿ ಪುರಸಭೆಗೆ ಅನುಮೋದನೆಗಾಗಿ ಸಲ್ಲಿಸಿರುತ್ತದೆ. ಈ ಯೋಜನೆ ಕೈಗೊಳ್ಳಲು ಸರ್ವೆಕಾರ್ಯ ಮತ್ತು ಡಿ.ಪಿ.ಆರ್. ತಯಾರಿಸಲು ಕನ್ಸಲ್‌ಟೆಂಟ್‌ಗಳನ್ನು ನೇಮಿಸುವ ಉಪಕ್ರಮಕ್ಕೆ ರೂ.12.25 ಲಕ್ಷವನ್ನು ಮಂಡಳಿಗೆ ಪಾವತಿಸಲು ದಿನಾಂಕ: 4–12–2009ರಲ್ಲಿ ಪುರಸಭೆಯನ್ನು ಕೋರಲಾಗಿರುತ್ತದೆ. ಹಣವನ್ನು ಪುರಸಭೆಯು ಪಾವತಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ, ಪ್ರಸ್ತುತ ಮೆ॥ಏರ್‌ಕಾನ್ ಕನ್ಸಲ್‌ಟೆಂಟ್ಸ್, ಹುಬ್ಬಳ್ಳಿ ಇವರಿಗೆ ಡಿ.ಪಿ.ಆರ್., ತಯಾರಿಸಲು ಮತ್ತು ವಿವರವಾದ ಅಂದಾಜು ಪಟ್ಟಿಯನ್ನು ಸಲ್ಲಿಸಲು ವಹಿಸಿಕೊಡಲಾಗಿದ್ದು, ಸದರಿ ಅಂದಾಜು ಪಟ್ಟಿಗೆ ಪುರಸಭೆಯ ಮೇಲುರುಜು ಪಡೆದು ತದನಂತರ, ಮಂಡಳಿಯ 2010–2011ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಿ,

ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(ಆ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿರುವ ಸರ್ಕಾರಿ ಮುದ್ರಣಾಲಯವನ್ನು ಸ್ಥಳಾಂತರಿಸುವ ಬಗ್ಗೆ.

ಶ್ರೀ ಬಿ. ರಮಾನಾಥ ರೈ : ಸನ್ಮಾನ್ಯ ಸಭಾಧ್ಯಕ್ಷರೆ, ಬೆಳ್ತಂಗಡಿ ತಾಲ್ಲೂಕಿನ ಮಂಗಳೂರಿನಲ್ಲಿ ಒಂದು ಸರ್ಕಾರದ ಮುದ್ರಣಾಲಯವಿತ್ತು, ಚೆನ್ನಾಗಿ ಕೆಲಸ ನಡೆಯುತ್ತಿತ್ತು. ಹಂತಹಂತವಾಗಿ ಅಧಿಕಾರಿಗೆ ನಿಷ್ಕ್ರಿಯೆ ಯಿಂದಾಗಿ ಮುಚ್ಚುವ ಸ್ಥಿತಿಗೆ ಬಂತು. ಮಂಗಳೂರು ನಗರ ಬೆಳೆಯುತ್ತಿ ರತಕ್ಕಂಥ ಒಂದು ದೊಡ್ಡ ನಗರ. ಅದರಿಂದ ಈ ಸ್ಥಳೀಯ ನೌಕರರಿಗೂ ಕೂಡ ಅನುಕೂಲವಾಗುತ್ತಿತ್ತು, ಈ ಮುದ್ರಣಾಲಯ ನಮ್ಮ ಜಿಲ್ಲೆಯಲ್ಲಿದ್ದರೆ ಖಂಡಿತಾ ಒಂದು ಗೌರವವಿರುತ್ತದೆ ಎಂಬುದು ನನ್ನ ಅಭಿಪ್ರಾಯ, ಬಹುಶಃ ತಾತ್ಕಾಲಿಕವಾಗಿ ನೌಕರಿ ಮಾಡುವವರಿಗೂ ಕೂಡ ಅನುಕೂಲವಾಗುತ್ತಿತ್ತು, ಇದನ್ನು ಸ್ಥಳಾಂತರ ಮಾಡಿದ್ದಾರೆ. ಅದಕ್ಕೆ ಬೇಕಾದ ಕಟ್ಟಡ ಇನ್ನಿತರ ಎಲ್ಲಾ ವ್ಯವಸ್ಥೆಗಳಿದ್ದು ಅದನ್ನು ಅಲ್ಲಿಯೆ ಮುಂದುವರಿಸುವುದನ್ನು ಮಾಡಬೇಕೆಂದು ನಾನು ಈ ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಬಸರವಾಜ ಬೊಮ್ಮಾಯಿ : ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಇ) ಬಂಡೀಪುರ ಹುಲಿ ಯೋಜನೆ ವ್ಯಾಪ್ತಿಯ ಓಂಕಾರ ವಲಯದ ಭೋಳೇ ಗೌಡನಕಟ್ಟೆ ಟೈಗರ್ ಪ್ರಿಸರ್ವ್ ಪ್ರದೇಶದಲ್ಲಿ ಗಣಿಕಾರಿಕೆಗೆ ಅನುಮತಿ ನೀಡಲು ಸರ್ಕಾರ ತೀರ್ಮಾನಿಸಿರುವ ಕುರಿತು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ 6 ರಕ್ಷಿತ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದೇವೆಂದು ಒಂದು ಪ್ರಕಟಣೆ, ತೀರ್ಮಾನ ಹೊರಬಿದ್ದ ಮೇಲೆ ನಮ್ಮ ಭಾಗದಲ್ಲಿ ಬೋಳೇಗೌಡನಕಟ್ಟೆ ಎಂದು ಬಂಡೀಪುರ ಹುಲಿ ಯೋಜನೆಗೆ ಸೇರಿದ ಪ್ರದೇಶವಾಗಿದೆ. ಈ 6 ರಲ್ಲಿ ಅದು ಕೂಡ ಸೇರಿದೆ ಎಂದು ವಿಷಯ ಗೊತ್ತಾದ ಮೇಲೆ ಆ ಭಾಗದಲ್ಲಿರುವ ಸುಮಾರು 20-30 ಗ್ರಾಮಸ್ಥರೆಲ್ಲಾ ಬಹಳ ಆತಂಕಕ್ಕೆ ಒಳಗಾಗಿ, ಈಗೇನಾದರೂ ಗಣಿಗಾರಿಕೆ ಬಂದರೆ, ಈಗಾಗಲೆ ಕಾಡಿನಲ್ಲಿರುವ ಆನೆಗಳೆಲ್ಲಾ ಬಂದು ಬೆಳೆಯನ್ನೆಲ್ಲಾ ಹಾನಿಯಾಗಿ ಅವರ

ಬೆಳೆದಂಥ ಪಸಲನ್ನು ಗ್ರಾಮಸ್ಥರು ಪಡೆಯದಿರುವ ಪರಿಸ್ಥಿತಿಯಲ್ಲಿ, ಇನ್ನು ನಾವು ಊರನ್ನೇ ಖಾಲಿ ಮಾಡುವ ಪರಿಸ್ಥಿತಿ ಬರುತ್ತದೆ ಎಂಬುದು ಒಂದು. ಎರಡನೆಯದು, ಈ ಗಣಿಗಾರಿಕೆ ಆರಂಭವಾದರೆ ಮುಂದೆ ನಮಗೆ ಬೇರೆ ಬೇರೆ ರೀತಿಯ ಖಾಯಿಲೆಗಳು ಬರುವುದಕ್ಕೆ ಆರಂಭವಾಗಿ ನಾವು ಬಹಳ ತೊಂದರೆಯನ್ನು ಅನುಭವಿಸಬೇಕಾಗುತ್ತದೆ ಎನ್ನುವ ನಿಟ್ಟಿನಲ್ಲಿ ಬಹಳ ಆತಂಕಕ್ಕೆ ಒಳಗಾಗಿ, ಬಹಳ ಚಿಂತೆನಲ್ಲಿ ದಿನಗಳನ್ನು ಕಳೆಯುವಂಥ ಪರಿಸ್ಥಿತಿ ಕಳೆದ ಒಂದು ವಾರದಿಂದ ಆ ಭಾಗದ ಸುತ್ತಮುತ್ತಲ ಗ್ರಾಮಗಳಲ್ಲಿದೆ. ಪ್ರಾಣ ಹೋದರು ಗಣಿಗಾರಿಕೆಗೆ ಅವಕಾಶ ಕೊಡುವುದಿಲ್ಲ, ಮೈಸೂರಿನ ಅರಣ್ಯ ಸಂಪತ್ತಿನ ಮೇಲೆ ಗಣಿಧಣಿಗಳ ಕರಿನೆರಳೆಂದು, Save the forest from miners, ಮಲ್ಲಿಗೆ ಕಂಪು ಬೀರುವ ನಾಡಿನಲ್ಲಿ ಕೆಂಪು ಮಣ್ಣಿನ ದೂಳು, ಅರಣ್ಯದೊಡಲು ದೋಚಲು ಬರುತ್ತಿದ್ದಾರೆ ಧರೋಡೆಕೋರರು ಎಂದು ಈಗಾಗಲೇ ಈ ರೀತಿಯಾಗಿ ಎಲ್ಲಾ ಮೈಸೂರಿನ ಪ್ರಮುಖ ಪತ್ರಿಕೆಗಳಲ್ಲಿ ಹೇಳಿಕೆ ಬಂದಿವೆ. ಶೂನ್ಯವೇಳೆಯಲ್ಲಿ ಇದನ್ನೆಲ್ಲಾ ಏತಕ್ಕೆ ಹೇಳುತ್ತಿದ್ದೇನೆಂದರೆ, ಇಷ್ಟೆಲ್ಲಾ ಸುದ್ದಿ ಬರದೇ ಇದ್ದಿದ್ದರೆ ಶೂನ್ಯವೇಳೆಯಲ್ಲಿ ಪ್ರಸ್ತಾಪವಾಗುವ ವಿಷಯವಾಗುತ್ತಿರಲಿಲ್ಲ. ಈ ರೀತಿ ಬಂದಿರುವ ಕಾರಣಕ್ಕೆ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸುಮಾರು 30 ಗ್ರಾಮಗಳಿಗೆ ಈಗಾಗಲೆ ಪರಿಸರ ವಾದಿಗಳು, ಹೋರಾಟಗಾರರು ಭೇಟಿ ಕೊಟ್ಟು ಅಲ್ಲಿಯ ಜನರೊಡನೆ ಸಮಾಲೋಚನೆ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಅಧಿವೇಶನ ನಡೆಯುತ್ತಿದ್ದು, ನಾವೆಲ್ಲಾ ಸದನದಲ್ಲಿದ್ದು ಈ ಬಗ್ಗೆ ಸ್ಪಷ್ಟವಾದ ಅಭಿಪ್ರಾಯ ವೇನಿದೆ ಎಂದು ತಿಳಿಸದೆ ಹೋದರೆ ಸರಿಹೋಗುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ (ಭಾರಿ ನೀರಾವರಿ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) :

ಮಾನ್ಯ ಅಧ್ಯಕ್ಷರೆ :

ಈ ಹಿಂದೆ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಸ್ವಾಮ್ಯದ ಸಂಸ್ಥೆಗಳಿಗೆ ಮೀಸಲಿಟ್ಟಿದ್ದ ಪ್ರದೇಶಗಳ ಪೈಕಿ, ರಾಷ್ಟ್ರೀಯ ಖನಿಜ ನೀತಿ 1993ರನ್ವಯ ಖಾಸಗಿ ವಲಯಕ್ಕೆ ಪ್ರೋತ್ಸಾಹ ಮತ್ತು ಅವಕಾಶ ಕಲ್ಪಿಸುವ ಸಲುವಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ 33 ಎಂಎಂಎಂ 94 ದಿನಾಂಕ: 15.3.2003ರಲ್ಲಿ 11620.56 ಚ.ಕಿ.ಮೀ. ಪ್ರದೇಶಗಳನ್ನು De-reserve ಮಾಡಲಾಗಿತ್ತು.

ಈ ರೀತಿ De-reserved ಮಾಡಲಾದ ಅಧಿಸೂಚನೆಯ ವಿರುದ್ಧ ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಕೆಲವರು ಮೊಕದ್ದಮೆಗಳನ್ನು ಹೂಡಿದ್ದರಿಂದ ಹಾಗೂ ಈ ಅಧಿಸೂಚನೆಗೆ ಮಾನ್ಯ ನ್ಯಾಯಾಲಯದ ತಡೆಯಾಜ್ಞೆ ಇದ್ದ ಕಾರಣ ಈ ಪ್ರದೇಶಗಳಲ್ಲಿ ಗಣಿಗಾರಿಕೆಗೆ ಅನುಮತಿಯನ್ನು ನೀಡುವ ಕುರಿತು ಯಾವುದೇ ಪ್ರಸ್ತಾವನೆಯನ್ನು ಪರಿಗಣಿಸಿರಲಿಲ್ಲ.

ಮಾನ್ಯ ಲೋಕಾಯುಕ್ತರವರು ದಿನಾಂಕ: 18.12.2008 ರಂದು ಸರ್ಕಾರಕ್ಕೆ ನೀಡಿದ್ದ ತಮ್ಮ ತನಿಖಾ ವರದಿಯಲ್ಲಿ ಈ ಹಿಂದೆ ರಾಜ್ಯ ಸರ್ಕಾರವು 2003ನೇ ಸಾಲಿನಲ್ಲಿ ಪ್ರದೇಶಗಳನ್ನು De-reserve ಮಾಡುವಾಗ ಸಚಿವ ಸಂಪುಟಕ್ಕೆ ತಪ್ಪು ಮಾಹಿತಿಯನ್ನು ನೀಡಿ ರಕ್ಷಿತ ಅರಣ್ಯ ಪ್ರದೇಶಗಳನ್ನೂ ಸಹ De-reserve ಮಾಡಲಾಗಿರುತ್ತದೆ ಎಂದು ವರದಿ ಮಾಡುತ್ತಾ, ಈ ಪ್ರದೇಶಗಳನ್ನು ಮತ್ತೆ Reserve ಮಾಡುವಂತೆ ಮಾನ್ಯ ಲೋಕಾಯುಕ್ತರವರು ಶಿಫಾರಸ್ಸು ಮಾಡಿರುತ್ತಾರೆ.

ಈ ವಿಷಯವನ್ನು ಸಚಿವ ಸಂಪುಟದಲ್ಲಿ ಸಮಗ್ರವಾಗಿ ಚರ್ಚಿಸಲಾಗಿ, ಖನಿಜಗಳ ಮೌಲ್ಯವರ್ಧನೆಯ ದೃಷ್ಟಿಯಿಂದ ಹಾಗೂ ಸ್ಥಳೀಯ ಪ್ರದೇಶಗಳ ಅಭಿವೃದ್ಧಿಯ ದೃಷ್ಟಿಯಿಂದ ಕರ್ನಾಟಕ ರಾಜ್ಯ ಉನ್ನತ ಮಟ್ಟದ ಸಮಿತಿಯಲ್ಲಿ (SHLCC) ಅನುಮೋದಿಸಲ್ಪಟ್ಟಿರುವ ಉಕ್ಕು ಕಾರ್ಖಾನೆಗಳಿಗೆ ಇನ್ನಿತರ ಷರತ್ತುಗಳಿಗೊಳಪಟ್ಟು ಭಾರತ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು ಗಣಿಗುತ್ತಿಗೆಯನ್ನು ಮಂಜೂರು ಮಾಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಲು/ಪರಿಗಣಿಸಲು ತೀರ್ಮಾನಿಸಲಾಗಿರುತ್ತದೆ. ಹಾಗೆಯೇ, ಸದರಿ ಅಧಿಸೂಚನೆಯಲ್ಲಿ ಒಳಗೊಂಡಿರುವ ಪಶ್ಚಿಮ ಘಟ್ಟಗಳ ವ್ಯಾಪ್ತಿಗೆ ಬರುವ ಪ್ರದೇಶಗಳನ್ನು ಸದರಿ ಅಧಿಸೂಚನೆಯಿಂದ ಹೊರತುಪಡಿಸಿ ತೀರ್ಮಾನಿಸಲಾಗಿರುತ್ತದೆ.

De-reserve ಮಾಡಲಾದ ಪ್ರದೇಶಗಳ ಪೈಕಿ ಮೈಸೂರು ಜಿಲ್ಲೆಯಲ್ಲಿನ ಬ್ಲಾಕ್ ಸಂಖ್ಯೆ: 22ರ ಪ್ರದೇಶವು ಒಟ್ಟು 813.26 ಚ.ಕಿ.ಮೀಟರ್ ಪ್ರದೇಶಗಳಾಗಿರುತ್ತದೆ. ಇದರಲ್ಲಿ ಬಂಡಿಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಇರುವ ಹಾಗೂ ಓಂಕಾರ ವನ್ಯಜೀವಿ ವಲಯದ ವ್ಯಾಪ್ತಿಗೆ ಬರುವ ಬೋಳೇಗೌಡನಕಟ್ಟೆ ಹುಲಿ ಸಂರಕ್ಷಣಾ ಪ್ರದೇಶ (ಟೈಗರ್ ಪ್ರಿಸರ್ವ್ ಪ್ರದೇಶವು) 11 ಕಿ.ಮೀಟರ್ ಪ್ರದೇಶ ಮಾತ್ರ ಸೇರಿರುತ್ತದೆ. ಬಂಡಿಪುರ

ರಾಷ್ಟ್ರೀಯ ಉದ್ಯಾನವನದಲ್ಲಿ ಬರುವ ಬೋಳೇಗೌಡನಕಟ್ಟೆ ಹುಲಿ ಸಂರಕ್ಷಣಾ ಪ್ರದೇಶದಲ್ಲಿ ಯಾವುದೇ ಕಾರಣಕ್ಕೂ ಗಣಿಗಾರಿಕೆ ಅನುಮತಿ ನೀಡುವುದಿಲ್ಲ.

(ಈ) ಜಮಖಂಡಿನಗರದಲ್ಲಿನ ತಾಲ್ಲೂಕು ಖಜಾನೆ ಕಚೇರಿಯಲ್ಲಿ ಕಂಪ್ಯೂಟರ್ ಕೆಟ್ಟಿರುವ ಬಗ್ಗೆ.

ಶ್ರೀ ಶ್ರೀಕಾಂತ ಕುಲಕರ್ಣಿ : ಮಾನ್ಯ ಅಧ್ಯಕ್ಷರೆ, ಜಮಖಂಡಿನಗರ ದಲ್ಲಿನ, ತಾಲ್ಲೂಕಿ ಖಜಾನೆ ಕಚೇರಿಯಲ್ಲಿದ್ದಂಥ ಕಂಪ್ಯೂಟರ್ ಕಳೆದ 2–3 ತಿಂಗಳಿನಿಂದ ಕೆಲಸ ಮಾಡದೆ, ಪದೆ ಪದೆ ರಿಪೇರಿಗೆ ಬಂದು ಬಹಳ ತೊಂದರೆಯಾಗುತ್ತಿದೆ. ಈ ಬಗ್ಗೆ ಸ್ಥಳೀಯ ಅಧಿಕಾರಿಗಳು, ಹಿರಿಯ ಅಧಿಕಾರಿಗಳ ಗಮನಕ್ಕೆ ತರುವ ಕೆಲಸವನ್ನು ಮಾಡಿಲ್ಲ. ಜಮಖಂಡಿ ವಿಧಾನ ಸಭಾಕ್ಷೇತ್ರದ ಸುಮಾರು 25,000 ಫಲಾನುಭವಿಗಳು wife ಇರಬಹುದು, widow pension ಇರಬಹುದು, ಸಂಧ್ಯಾಸುರಕ್ಷವಿರಬಹುದು, ಅಂಗವಿಕಲರ ಮಾಶಾಸನ ಇತ್ಯಾದಿ ದೊಡ್ಡ ಸಂಖ್ಯೆಯಲ್ಲಿರುವ ಫಲಾನುಭವಿಗಳಿಗೆ ಕಳೆದ ಮೂರು ತಿಂಗಳಿಂದ ಯಾವುದೆ ಪೇಮೆಂಟ್ ಆಗಿಲ್ಲ, ಇದರಿಂದ ಬಹಳ ತೊಂದರೆಯಾಗಿದೆ. ಆದುದರಿಂದ ಇದನ್ನು ರಿಪೇರಿ ಅಥವಾ ತಕ್ಷಣ ಬದಲಾವಣೆ ಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಭಾರಿ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರೇನು ಕಂಪ್ಯೂಟರ್ ಕೆಟ್ಟಿರುವ ಬಗ್ಗೆ ಹೇಳಿದ್ದಾರೆ, ಆ ಬಗ್ಗೆ ಸೂಕ್ತ ಕ್ರಮವನ್ನು ಕೂಡಲೆ ಜರುಗಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇವೆ.

6. ವಿತ್ತೀಯ ಕಾರ್ಯಕಲಾಪಗಳು :

2010–11 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ :

ಶ್ರೀ ವಿ ಶ್ರೀನಿವಾಸ ಪ್ರಸಾದ (ನಂಜನಗೂಡು) : ಮಾನ್ಯ ಅಧ್ಯಕ್ಷರೆ, 2010–11ನೇ ಸಾಲಿನ ಆಯವ್ಯಯವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹಣಕಾಸು ಇಲಾಖೆಯನ್ನು ಕೂಡ ಹೊಂದಿರುವವರು ಈಗಾಗಲೆ ಸದನದ ಮುಂದೆ ಮಂಡಿಸಿದ್ದಾರೆ. ಬಹುಶಃ ಮಂಡಿಸುವ ಸಂದರ್ಭದಲ್ಲು ಕೂಡ ಸದನದ ಗಮನವನ್ನು ಕೂಡ ಸೆಳೆದಿದ್ದರು. 5ನೇ ಸಾರಿ ಸತತವಾಗಿ ಬಜೆಟ್

ಅನ್ನು ಮಂಡನೆ ಮಾಡುತ್ತಿದ್ದೇನೆ ಎನ್ನುವ ಹೆಗ್ಗಳಿಕೆ ಕೂಡ ಅವರ ಪಾಲಿಗಿದೆ. ಅದರಲ್ಲಿ ಮುಖ್ಯಮಂತ್ರಿಗಳಾಗಿ ಮೂರನೇ ಬಾರಿಗೆ ಅವರು ಬಜೆಟನ್ನು ಮಂಡಿಸಿರತಕ್ಕಂಥದ್ದು, ಸಮ್ಮಿಶ್ರ ಸರ್ಕಾರದಲ್ಲಿ ಉಪ ಮುಖ್ಯ ಮಂತ್ರಿಗಳಾಗಿ ಆಗಲೂ ಕೂಡ ಹಣಕಾಸು ಇಲಾಖೆಯನ್ನು ಹೊಂದಿ ಎರಡು ಬಾರಿ ಬಜೆಟನ್ನು ಮಂಡಿಸಿರತಕ್ಕಂಥದ್ದು, ಮುಖ್ಯ ಮಂತ್ರಿಗಳಾದ ಮೇಲೆ ಮೊಟ್ಟ ಮೊದಲನೇ ಬಾರಿಗೆ ಮಂಡಿಸಿದಂತಹ ಆಯವ್ಯಯದಲ್ಲಿ ಅವರು ಒಂದು ಮಾತನ್ನು ಹೇಳಿದ್ದರು. ನಾನು ಸಮ್ಮಿಶ್ರ ಸರ್ಕಾರದಲ್ಲಿ ಹಣಕಾಸಿನ ಉಪ ಮುಖ್ಯಮಂತ್ರಿಗಳಾಗಿ, ಹಣಕಾಸಿನ ಸಚಿವನಾಗಿದ್ದರೂ ಕೂಡ ನಾನು ಒಳ್ಳೆಯ ಬಜೆಟನ್ನು ಕೊಡುವುದಕ್ಕಾಗಲಿಲ್ಲ ಎನ್ನತಕ್ಕಂಥದ್ದು; ಆದ್ದರಿಂದ ಸಮ್ಮಿಶ್ರ ಸರ್ಕಾರದಲ್ಲಿ ಜನಗಳಿಗೆ ಭ್ರಮನಿರಸನ ಆಯಿತು, ಜನಗಳ ನಿರೀಕ್ಷೆಗೆ ತಕ್ಕಂತೆ ನಾವು ಒಳ್ಳೆಯ ಆಡಳಿತವನ್ನು ಕೊಡುವುದಕ್ಕಾಗಲಿಲ್ಲ. ಹಾಗಾಗಿ ಜನ ನಮಗೆ ಬಹುಮತದ ಹತ್ತಿರ ಹತ್ತಿರ ತಂದಿದ್ದಾರೆ ಎನ್ನತಕ್ಕಂತಹ ಮಾತನ್ನು ಹೇಳಿದರು. ಹಾಗಾಗಿ ನಾವು ಜನಗಳ ನಿರೀಕ್ಷೆಗೆ ತಕ್ಕಂತೆ ಅತ್ಯುತ್ತಮವಾದ ಬಜೆಟನ್ನು ಕೊಡುತ್ತೇವೆಂದು ಹೇಳಿದ್ದರು. ಮಾನ್ಯ ರೇವಣ್ಣರವರು ಇದ್ದಾರೆ. ನಾನು ಸದನದಲ್ಲಿ ಚರ್ಚೆಯಾಗುತ್ತಿರುವಾಗ ನಾನು ಕೇಳುತ್ತಿರುತ್ತೇನೆ. ನೀವು 20 ತಿಂಗಳು ದೈಹಿಕವಾಗಿ ಒಂದಾಗಿದ್ದರೇ ಹೊರತು ಮಾನಸಿಕವಾಗಿ ಒಂದಾಗಿ ಯಾವತ್ತೂ ಕೂಡ ಆಡಳಿತ ನಡೆಸಿಲ್ಲ ಎನ್ನತಕ್ಕಂಥದ್ದು ಗೊತ್ತಾಗುತ್ತದೆ. Physically ಒಂದಾಗಿದ್ದರೆ ಹೊರತು 'mentally working with different directors' ಎನ್ನತಕ್ಕಂಥಾದ್ದು. ಆ 20 ತಿಂಗಳುಗಳಲ್ಲಿ ಅವರೇನು ಎರಡು ಬಾರಿ ಬಜೆಟನ್ನು ಮಂಡಿಸಿದರು, ಅದು ಒಳ್ಳೆಯ 'ಬಜೆಟ್ ಆಗಲಿಲ್ಲ ಎಂದು ಅವರ ಮನಸ್ಸಿನಲ್ಲಿತ್ತು. ಆದರೆ ಈಗ ಅವರು ಮುಖ್ಯ ಮಂತ್ರಿಗಳಾಗಿ ಸ್ವತಃ ಅವರಿಗೆ ಬಹುಮತ ಇದ್ದಂತಹ ಸಂದರ್ಭದಲ್ಲಿ ನಾನು ಅತ್ಯುತ್ತಮವಾದ ಬಜೆಟನ್ನು ಕೊಡುತ್ತೇನೆ ಎನ್ನತಕ್ಕಂಥದ್ದನ್ನು ಬಹಳ ಹೆಮ್ಮೆಯಿಂದ ಹೇಳುತ್ತಿದ್ದರು. ಅಭಿವೃದ್ಧಿ ಬಗ್ಗೆ ಬಹಳ ಒತ್ತಿ ಒತ್ತಿ ಹೇಳುತ್ತಿದ್ದರು. ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯತಕ್ಕಂತಹ ರೀತಿಯಲ್ಲಿ ಕಾರ್ಯಕ್ರಮಗಳನ್ನು ಸಾಧನೆಯಾಗಿ ಇಟ್ಟುಕೊಂಡು ನಾನು ಮಾಡಿದ್ದೇನೆ ಎನ್ನತಕ್ಕಂತಹ ಮಾತನ್ನು ಹೇಳಿದರು.

(ಈ ಹಂತದಲ್ಲಿ ಡಾ: ಹೆಚ್.ಸಿ. ಮಹಾದೇವಪ್ಪರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಈ ಸಾರಿಯ ಬಜೆಟ್ ವಿಶೇಷ ಎಂದರೆ, ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಐದು ಬಾರಿ ಬಜೆಟನ್ನು ಮಂಡಿಸಿಕೊಂಡು ಬಂದಿದ್ದಾರೆ. ಸಭಾ ನಾಯಕರ ಜೊತೆ ನಮ್ಮ ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯನವರು ಕೂಡ ಇದ್ದಾರೆ. ಒಂದು ಕಡೆ ಅವರು ಸತತವಾಗಿ ಐದು ಬಾರಿ ಸಭಾ ನಾಯಕರಾಗಿ ಬಜೆಟನ್ನು ಮಂಡಿಸಿದರೆ ಇವರು ವಿರೋಧ ಪಕ್ಷದ ನಾಯಕರಾಗಿ ಅನುಭವ ಇರತಕ್ಕಂಥಹವರು, ಏಳು ಬಾರಿ ಬಜೆಟನ್ನು ಮಂಡಿಸಿರತಕ್ಕಂತಹವರು ಮಾನ್ಯ ಸಿದ್ದರಾಮಯ್ಯನವರು. ಈ ಸಾರಿಯ ಬಜೆಟ್ಟಿನ ವಿಶೇಷ ಕೂಡ. ಮಾನ್ಯ ಸಿದ್ದರಾಮಯ್ಯನವರು ಏಳು ಬಾರಿ ತಮ್ಮ ಬಜೆಟನ್ನು ಏನು ಮಂಡಿಸಿದ್ದಾರೆ, ಅದರ ಅನುಭವದ ಮೇಲೆ ಸುಮಾರು ಐದು ಗಂಟೆಗಳ ಕಾಲ ಈ ಸದನದಲ್ಲಿ ಬಹಳ ಅರ್ಥಪೂರ್ಣವಾಗಿ ಸುದೀರ್ಘವಾಗಿ ಮಾತನಾಡಿದ್ದಾರೆ. ಎಳೆ ಎಳೆಯಾಗಿ ಬಿಡಿಸಿ ಹೇಳಿದ್ದಾರೆ. ಅದು ಎಷ್ಟರ ಮಟ್ಟಿಗೆ ಅರ್ಥವಾಗಿದೆಯೋ ಅವರು ಉತ್ತರ ಕೊಡುತ್ತಾರೋ ಅವರು ಬಜೆಟ್ ಮೇಲೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ನೋಡೋಣ. ನಾನು ಅದರ ಬಗ್ಗೆ ದೀರ್ಘವಾಗಿ ಹೋಗುವುದಿಲ್ಲ. ಅವರು ತುಂಬ ಚೆನ್ನಾಗಿ ಹೇಳಿದ್ದಾರೆ. Revenue surplus ಹೇಗೆ fiscal deficit 2009-10 ರಲ್ಲಿ ಹೇಗಾಗಿದೆ ಎನ್ನತಕ್ಕಂತಹ ರೀತಿಯಲ್ಲಿ ಸುದೀರ್ಘವಾಗಿ ಹೇಳಿದ್ದಾರೆ. ನಮ್ಮ ಶಾಸಕಾಂಗ ಪಕ್ಷದ ನಾಯಕರೂ ಕೂಡ ತುಂಬಾ ಚೆನ್ನಾಗಿ ಹೇಳಿದರು. ಅಧಿವೇಶನ ಇಲ್ಲದೆ ಇರತಕ್ಕಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಮಾತುಗಳು ಹಾಗೂ ಹೇಳಿಕೆಗಳು ಹೇಗಿದ್ದವು ಎಂದು ಹೇಳಿದರು. ಇಲ್ಲೆಲ್ಲಾ ಬೇಡ ನಾವು ಅಧಿವೇಶನ ಸೇರುತ್ತೇವೆ, ಬನ್ನಿ ಅಲ್ಲಿ ಮಾತನಾಡೋಣ ಎನ್ನತಕ್ಕಂತಹ ರೀತಿಯಲ್ಲಿ ಹೇಳಿದರು. ಅಲ್ಲಿ ನೀವೂ ಹೇಳಿ, ನಾನೂ ಮಾತನಾಡುತ್ತೇನೆ, ಅಧಿವೇಶನದ ಮುಖಾಂತರ ಜನಗಳಿಗೆ ತಿಳಿಸೋಣ ಎಂದು ಹೇಳಿದರು. ಆದರೆ ಅವರು ಅಧಿವೇಶನದಲ್ಲಿ ಇರಲಿಲ್ಲ. ಅವರು Planning Commission Vice-Chairman ನೋಡುವುದಕ್ಕೆ ಹೋಗಿದ್ದರೋ ಮತ್ತೊಬ್ಬರನ್ನು ನೋಡುವುದಕ್ಕೆ ಹೋಗಿದ್ದರೋ ದೆಹಲಿಯಲ್ಲಿ ಬೇರೆ ಬೇರೆ ಕೆಲಸಗಳಿಗೆ ಹೋಗಿದ್ದರೋ ಗೊತ್ತಿಲ್ಲ. ಆದರೂ ಕೂಡ ನಮ್ಮ ಮಾನ್ಯ

ವಿರೋಧ ಪಕ್ಷದ ನಾಯಕರು ಬಜೆಟ್ ಬಗ್ಗೆ ಮಾತನಾಡತಕ್ಕಂತಹ ಸಂದರ್ಭದಲ್ಲಿ ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇರಲಿಲ್ಲವೆಂದು ಅವರ ಗಮನವನ್ನು ಕೂಡ ಸೆಳೆದರು. ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ನಾನು ಅದರ ಬಗ್ಗೆ ವಿವರವಾಗಿ ಹೋಗುವುದಿಲ್ಲ. ಒಂದು ವರ್ಷದ ಬಜೆಟ್‌ನಲ್ಲಿ ನೀವು ಕೊಟ್ಟಿರತಕ್ಕಂತಹ ಭರವಸೆಗಳು, ಕಾರ್ಯಕ್ರಮಗಳು, ನಿಮ್ಮ financial discipline ಹೇಗಿತ್ತು, ನಿಮ್ಮ resources mobilization ಹೇಗಿತ್ತು, ಯಾವ ರೀತಿ revenue surplus ಆಯಿತು, ಯಾವ ರೀತಿ fiscal deficit ಆಯಿತು ಎಂದು ತುಂಬಾ ಚೆನ್ನಾಗಿ ಹೇಳಿದ್ದಾರೆ. ನಾನು ಅದನ್ನು repeat ಮಾಡುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ನಾವು ಯಾವುದೇ ಆಯವ್ಯಯವನ್ನು ಮಂಡಿಸಬೇಕಾದರೆ ನಮಗೆ ಆಧಾರದ ಎಂದರೆ Election Manifesto ಮೇಲೆ ನಾವು ಮಾಡುವುದು. ಜನತೆಗೆ ನಾವು ಭರವಸೆ ಕೊಟ್ಟಿರುವಂಥದ್ದು. ಯಾವುದೇ ರಾಜಕೀಯ ಪಕ್ಷಕ್ಕೆ ಚುನಾವಣಾ ಪ್ರಣಾಳಿಕೆ ನಮಗೆ ಅದು ಬೈಬಲ್ ಆಗಿರುತ್ತದೆ, ಖುರಾನ್‌ನಷ್ಟೇ ಪವಿತ್ರ ಮತ್ತು ಭಗವದ್ಗೀತೆ ಎನ್ನತಕ್ಕಂತಹ ಮಾತನ್ನು ಹೇಳುತ್ತೇವೆ. ಬೈಬಲ್ ಅಥವಾ ಖುರಾನ್ ಎಂದು ಹೇಳಿದರೆ ನಿಮಗೆ ಸ್ವಲ್ಪ ಕೋಪ ಬರಬಹುದು. ಅದು ನಿಮ್ಮ ಪಾಲಿಗೆ ಭಗವದ್ಗೀತೆನೆ ಆಗಿರಲಿ. ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಜನಗಳಿಗೆ ಏನು ಭರವಸೆ ಕೊಟ್ಟಿರುತ್ತೇವೆ ಅದರ ಮೇಲೆ ನಾವು ಬಜೆಟನ್ನು ಮಂಡಿಸತಕ್ಕಂಥದ್ದು. ಬಜೆಟನ್ನು ಮಂಡಿಸುವಾಗ ನಾವು ಅಂಗೈಯಲ್ಲಿ ಅರಮನೆ ಸೃಷ್ಟಿ ಮಾಡಿಬಿಡಬಹುದು. ಭರವಸೆಗಳ ಮಹಾಪೂರ ಕಾರ್ಯಕ್ರಮಗಳನ್ನು ಬೇಕಾದಷ್ಟು ಹೇಳಬಹುದು. ಅಲ್ಲಿ ಹೇಳತಕ್ಕಂಥದ್ದಕ್ಕೆ ಅವಕಾಶಗಳಿವೆ. ಆದರೆ ಎಷ್ಟರ ಮಟ್ಟಿಗೆ ಅದನ್ನು ಅನುಷ್ಠಾನಕ್ಕೆ ತರುತ್ತೇವೆ ಎನ್ನತಕ್ಕಂಥದ್ದು ಪ್ರಶ್ನೆ. ನಾವು ಭರವಸೆಗಳನ್ನು ಎಷ್ಟರ ಮಟ್ಟಿಗೆ ಈಡೇರಿಸುತ್ತೇವೆ ಎನ್ನತಕ್ಕಂಥದ್ದು ಬಹಳ ಮುಖ್ಯವಾದುದು. ಈ ಕಡೆ ನಾವು ಬಹಳ ಗಮನವನ್ನು ಕೊಡಬೇಕಾಗುತ್ತದೆ. resources mobilization ತುಂಬಾ ಇರತಕ್ಕಂಥದ್ದು. ಹಣಕಾಸನ್ನು ನಾವು ಯಾವ ರೀತಿ ಸಂಗ್ರಹ ಮಾಡುತ್ತೇವೆ ಎನ್ನುವುದು ಬಹಳ ಮುಖ್ಯವಾದ ವಿಚಾರ. ಬಜೆಟ್‌ನಲ್ಲಿ ಎಷ್ಟು ಜಮೆ ಆಗುತ್ತದೆ. ಖರ್ಚು ಕೂಡ ಹಾಗೆಯೇ ಇರುತ್ತದೆ. What is budget? Budget is receipt and expenditure. Resources ನ್ನು mobilize ಮಾಡುವುದು ಅದಕ್ಕೆ ತಕ್ಕಂತಹ

O.30 F-13

ರೀತಿಯಲ್ಲಿ ನಾವು ಯೋಜನೆಗಳನ್ನು ರೂಪಿಸಿ ಹಣವನ್ನು ಖರ್ಚು ಮಾಡುವಂತಹ ರೀತಿಯಲ್ಲಿ ಇರುತ್ತದೆ. ಎಲ್ಲರಿಗೂ ಒಪ್ಪಿಗೆಯಾಗುವಂತಹ ಬಜೆಟ್ ಈ ದೇಶದ ಇತಿಹಾಸದಲ್ಲಿ ಕೇಂದ್ರ ಸರ್ಕಾರವಾಗಲಿ ರಾಜ್ಯ ಸರ್ಕಾರವಾಗಲಿ ಕೊಡುವುದಕ್ಕಾಗುವುದಿಲ್ಲ. ಬಜೆಟ್ ಅನ್ನು ಮಂಡಿಸಿದ ತಕ್ಷಣ ನಾವೂ ಹೇಳುತ್ತೇವೆ, ಆಡಳಿತ ನಡೆಸತಕ್ಕಂತಹವರು ನಮಗೆ ಬಹಳ ಆಶಾದಾಯಕವಾದ ಬಜೆಟ್ ಎಂದು ಸಹಜವಾಗಿ ಹೇಳಲೇಬೇಕು.

ನಾವು ವಿರೋಧ ಪಕ್ಷದಲ್ಲಿರುವವರು ನಿರಾಶಾದಾಯಕವಾದ ಬಜೆಟ್ ಎಂದು ಹೇಳುತ್ತೇವೆ. ನಾವು ಕೇಂದ್ರದವರು ಬಜೆಟ್ ಮಂಡಿಸಿದಂತಹ ಸಂದರ್ಭದಲ್ಲಿ ನೀವು ವಿರೋಧ ಪಕ್ಷದಲ್ಲಿದ್ದರೆ ನೀವೂ ಕೂಡ ಹೇಳುತ್ತೀರಿ. ಇದು ನಿರಾಶಾದಾಯಕವಾದ ಬಜೆಟ್, ಆಡಳಿತ ನಡೆಸುವವರು ಆಶಾದಾಯ ಕವಾದ ಬಜೆಟ್ ಎಂದು ಹೇಳುತ್ತೇವೆ. ಆದರೆ ನೀವು ಮಾತನಾಡುವ ಸಂದರ್ಭದಲ್ಲಿ ಅಥವಾ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ನಮಗೆ ಎಲ್ಲಿ ಆಶಾದಾಯಕವಾಗಿದೆ ಎಂಬುದನ್ನು ಹೇಳಬೇಕು. ಎಲ್ಲಿ ಆಶಾದಾಯಕವಾದ ಕಾರ್ಯಕ್ರಮಗಳನ್ನು ಹಾಕಿದ್ದೇವೆ, ಎಲ್ಲಿ ಆಶಾದಾಯಕವಾದ ಚಿಂತನೆಗಳನ್ನು ಮಾಡಿದ್ದೇವೆ ಎನ್ನತಕ್ಕಂಥದ್ದನ್ನು ಹೇಳುತ್ತೀರಿ. ನೀವು ಎಲ್ಲಿ ಎಡವಿದ್ದೀರಿ, ಏಕೆ ಇದು ನಿರಾಶಾದಾಯಕವಾದ ಬಜೆಟ್ ಆಗಿದೆ ಎನ್ನತಕ್ಕಂಥದ್ದು ಹೇಳತಕ್ಕಂಥದ್ದು ನಮ್ಮ ಜವಾಬ್ದಾರಿ ಹಾಗೂ ನಮ್ಮ ಕರ್ತವ್ಯ ಕೂಡ ಆಗಿರುತ್ತದೆ. ಹಾಗಾಗಿ ಈ ಬಜೆಟ್‌ನಲ್ಲಿ ನಾವು ನಿರೀಕ್ಷೆ ಮಾಡಿದ ರೀತಿಯಲ್ಲಿ ಇದು ಒಂದು ರೀತಿ ಸಮತೋಲನವಾದ ಹಾಗೂ ಆಶಾದಾಯಕವಾದ ಬಜೆಟ್ ಆಗುವ ಬದಲು ಸ್ವಲ್ಪ ನಿರಾಶಾದಾಯಕವಾದ ಬಜೆಟ್ ಹೆಚ್ಚಾಗಿದೆ ಎನ್ನತಕ್ಕಂಥದ್ದನ್ನು ಹೇಳುತ್ತೇನೆ. ನನ್ನ ದೃಷ್ಟಿಯಲ್ಲಿ ಇದಕ್ಕೆ ಕಾರಣ ಕೂಡ ಬಹಳ ಮುಖ್ಯ. ಏಕೆಂದರೆ, resources mobilization ಬೇಕೆಂದು ನಾನು ಹೇಳಿದೆ. ಇದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಇಲಾಖೆಯನ್ನು ಇಟ್ಟುಕೊಂಡಿರುವುದರಿಂದ ಇದು ಸಾಧ್ಯವಾಗು ತ್ತಿದೆಯೇ ಎಂದು ತಾವು ಮುಖ್ಯಮಂತ್ರಿಗಳು ಯೋಚನೆ ಮಾಡಬೇಕು. Finance portfolio ಇಟ್ಟುಕೊಂಡಿರುವವರು ಇದು ಬೆಳಿಗ್ಗೆಯಿಂದ ರಾತ್ರಿಯ ವರೆಗೆ ಕಣ್ಣಿನಲ್ಲಿ ಕಣ್ಣು ಇಟ್ಟು ನೋಡತಕ್ಕಂಥದ್ದು ಆಗಬೇಕು. ಟ್ರೆಜರಿ ತುಂಬಿದರೆ ಎಲ್ಲಾ ಕೆಲಸ ನಡೆಯುವುದು. ಖಜಾನೆ ಇದ್ದರೆ ತಾನೆ ನಿಮ್ಮ ಎಲ್ಲಾ ಇಲಾಖೆಗಳು ನಡೆಯತಕ್ಕಂಥದ್ದು. ಬಹುಶಃ ಅದಕ್ಕೋಸ್ಕರ ಮಾನ್ಯ

ಸಿದ್ದರಾಮಯ್ಯನವರು ಬಹಳ ಯಶಸ್ವಿಯಾದ ಹಣಕಾಸಿನ ಸಚಿವರಾಗಿದ್ದರು. ಅವರ ಸರ್ಕಾರದಲ್ಲಿ ಹಣಕಾಸು ತುಂಬ ಇದ್ದು ಅದು ನಡೆಯುತ್ತಿತ್ತು. ಈಗಿರತಕ್ಕಂತಹ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಸಾಧ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಬಳಿ ಬಹುಶಃ 12 ಇಲಾಖೆಗಳಿವೆ. ಒಬ್ಬ ಮುಖ್ಯಮಂತ್ರಿ ಬಳಿ 12 ಇಲಾಖೆಗಳು ಮತ್ತು ರಾಜಕೀಯವಾಗಿ ಭಿನ್ನಮತೀಯ ಚಟುವಟಿಕೆಗಳು. ನೆನ್ನೆ ಕೂಡ ಇಲ್ಲಿ ಇರುತ್ತಾರೆ ಎಲ್ಲೋ ಒಂದು ಕಡೆ ರೆಸಾರ್ಟ್‌ನಲ್ಲಿ ಸಭೆ ನಡೆಯುತ್ತಿದ್ದರೆ ಅಲ್ಲಿ ಗಮನ ಹರಿಸುವುದಕ್ಕಾಗಿ ಓಡುತ್ತಾರೆ. Uncertainty ಅವರಿಗೆ ಕಾಡುತ್ತಿರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳ ಬಳಿ 12 portfolio, ಒಂದು ಸಚಿವ ಸಂಪುಟ ವ್ಯವಹಾರಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಹಣಕಾಸು, Intelligence (ಗುಪ್ತ ವಾರ್ತೆ) ನಗರಾಭಿವೃದ್ಧಿ, ನಗರಾಭಿವೃದ್ಧಿಯಲ್ಲಿ BDA ಮತ್ತು ಮಹಾನಗರ ಪಾಲಿಕೆಗಳು, ಕನ್ನಡ ಮತ್ತು ಸಂಸ್ಕೃತಿ, ಗಣಿ ಮತ್ತು ಭೂ ವಿಜ್ಞಾನ, ಸಾರ್ವಜನಿಕ ಸಂಸ್ಥೆಗಳು ಅರಣ್ಯ, ಜೀವ ಶಾಸ್ತ್ರ ಮತ್ತು ಪರಿಸರ ಇಲಾಖೆ. ಇದರ ಜೊತೆಗೆ ಈಗ ಮಾನ್ಯ ಈಶ್ವರಪ್ಪನವರು ರಾಜೀನಾಮೆ ಕೊಟ್ಟ ಮೇಲೆ ಎನರ್ಜಿ. ಪವರ್ ಮಿನಿಸ್ಟರ್ ಕೂಡ ಅವರೇ. ಹೀಗೆ ಸುಮಾರು 12 ಇಲಾಖೆಗಳನ್ನು ಇಟ್ಟುಕೊಂಡಿರತಕ್ಕಂತಹವರು ತಮ್ಮದೇ ಆದ ರಾಜಕೀಯವಾದ ತೊಂದರೆಗಳಿರತಕ್ಕಂತಹವರು ಒಬ್ಬ ಮುಖ್ಯ ಮಂತ್ರಿಗಳು ಹಣಕಾಸಿನ ಬಗ್ಗೆ ಹಾಗೂ ರಿಸೋರ್ಸಸ್ ಬಗ್ಗೆ ಅಷ್ಟೊಂದು concentration ಮಾಡುವುದಕ್ಕೆ ಆಗುತ್ತದಾ? ಇಷ್ಟೊಂದು ಇಲಾಖೆಗಳನ್ನು ಇಟ್ಟುಕೊಂಡು ಅವರು ಗಮನ ಕೊಡುವುದಕ್ಕೆ ಆಗುತ್ತಿಲ್ಲ ಹಾಗಾಗಿ ನಮಗೆ fiscal deficit ಬರುವುದಕ್ಕೆ ಇದೆಲ್ಲಾ ಕಾರಣವಾಗಿದೆ. Financial discipline ಸರಿಯಾದ ರೀತಿಯಲ್ಲಿ ಇಲ್ಲ, ಪೂರ್ಣ ಪ್ರಮಾಣದಲ್ಲಿ ಆ ಕಡೆ ಗಮನ ಕೊಟ್ಟು ಸಂಪನ್ಮೂಲಗಳನ್ನು ಸಂಗ್ರಹ ಮಾಡತಕ್ಕಂತಹ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಆಗುತ್ತಿಲ್ಲ. ಬಹಳ ತೊಂದರೆ ಇದೆ. ಇದಕ್ಕೆ ಪೂರ್ಣ ಪ್ರಮಾಣದಲ್ಲಿರತಕ್ಕಂತಹ ಅದರ ಬಗ್ಗೆ ಅನುಭವ ಇರತಕ್ಕಂತಹ ಅದರ ಬಗ್ಗೆ ಬಹಳ ಬುದ್ಧಿವಂತಿಕೆಯಿಂದ ಹಾಗೂ ಚಾಕಚಕ್ಯತೆಯಿಂದ ಮಾಡತಕ್ಕಂತಹ ಒಬ್ಬ ಹಣಕಾಸಿನ ಸಚಿವರು ಇದ್ದಾಗ ಮಾತ್ರ ಬಜೆಟ್‌ಗೆ ಅರ್ಥ ಇರುತ್ತದೆ. ಬಹುಶಃ ಸಂಪನ್ಮೂಲಗಳು ಸಂಗ್ರಹ ಆಗುತ್ತವೆ ಎಂದು ಈ ಸಂದರ್ಭದಲ್ಲಿ ನಾನು ಅವರ ಗಮನವನ್ನು ಸೆಳೆಯುತ್ತಾ, ನಾನು ಅನೇಕ ರಾಜ್ಯಗಳ

ಮುಖ್ಯಮಂತ್ರಿಗಳನ್ನು ನೋಡಿದ್ದೇನೆ. ಮಾನ್ಯ ದಿಗ್ವಿಜಯಸಿಂಗ್‌ರವರು ಮಧ್ಯಪ್ರದೇಶದ ಮುಖ್ಯ ಮಂತ್ರಿಗಳಾಗಿದ್ದಾಗ ಒಂದೇ ಒಂದು porfolio ಅವರು ಇಟ್ಟುಕೊಂಡಿರಲಿಲ್ಲ. ಮುಖ್ಯಮಂತ್ರಿ ಆದರೆ, he is the captain of the team. ಮಂತ್ರಿಮಂಡಲದ ನಾಯಕ ಹಾಗೂ ಮುಖಂಡರಾಗಿರುವವರು. ಸಂಪೂರ್ಣ over all supervise ಮಾಡತಕ್ಕಂತಹ ಅಧಿಕಾರ ಅವಕಾಶಗಳಿರತಕ್ಕಂತಹ ಜವಾಬ್ದಾರಿ ಇರತಕ್ಕಂತಹವರು. ಅವರು ಪ್ರತಿಯೊಂದು ಇಲಾಖೆ ಕೂಡ ನೋಡಬಹುದು.

ತಮ್ಮ ಕ್ಯಾಬಿನೆಟ್ ಸಹೋದ್ಯೋಗಿಗಳಿರತಕ್ಕಂಥ ಎಲ್ಲ ಇಲಾಖೆಗಳವರೂ ಕೂಡ ಕುಳಿತು ಒಬ್ಬ ಮುಖ್ಯಮಂತ್ರಿಗಳಾದ ತಾವು ಸಂಪೂರ್ಣವಾಗಿ ನಿಮ್ಮ ಆಡಳಿತದಲ್ಲಿ ಎಲ್ಲೆಲ್ಲಿ ಏನೇನು ನಡೆಯುತ್ತಿದೆ, ಎಲ್ಲೆಲ್ಲಿ ನ್ಯೂನತೆಗಳಿವೆ, ತೊಂದರೆಗಳಿವೆ, ಎಲ್ಲಿ ಸರಿಪಡಿಸಬೇಕು ಎನ್ನುವ ಕಡೆಗೆ ಗಮನ ಕೊಟ್ಟರೆ ಮಾತ್ರ ನೀವು ಉತ್ತಮ ಆಡಳಿತವನ್ನು ಕೊಡುವುದಕ್ಕೆ ಸಾಧ್ಯ. ಬಹುಶಃ ಇವತ್ತು ನೀವು 12 portfolio ಗಳನ್ನು ಇಟ್ಟುಕೊಂಡು ಇವತ್ತು ಒಳ್ಳೆಯ ಬಜೆಟ್‌ನ್ನು ಕೊಡತಕ್ಕಂಥದ್ದರ ಬಗ್ಗೆ, ಹೆಚ್ಚು ಹಣವನ್ನು ಸಂಗ್ರಹ ಮಾಡಿ ಆಡಳಿತವನ್ನು ಚೆನ್ನಾಗಿ ನಡೆಸುವುದಕ್ಕೆ ಸಾಧ್ಯವಾಗುತ್ತಿಲ್ಲವೆನ್ನತಕ್ಕ ವಿಚಾರವನ್ನು ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಇನ್ನು ಬಜೆಟ್ ಬಗ್ಗೆ ಹೇಳಬೇಕೆಂದರೆ, ನಾವು ಅನೇಕ ಸಲ ಚಾಣಕ್ಯ, ಕೌಟಿಲ್ಯರ ಹೆಸರುಗಳನ್ನು ಹೇಳುತ್ತೇವೆ. ನನ್ನ ದೃಷ್ಟಿಯಲ್ಲಿ ಇವತ್ತು ಚಾಣಕ್ಯನ ಅರ್ಥಶಾಸ್ತ್ರ ಅಥವಾ ಕೌಟಿಲ್ಯನ ಅರ್ಥಶಾಸ್ತ್ರಗಳಿಲ್ಲ. ಒಂದು ರೀತಿ outdated ಆಗಿಬಿಟ್ಟಿದೆಯೆ ಎನ್ನತಕ್ಕಂಥದ್ದನ್ನು ಹೇಳುತ್ತೇನೆ. ಈಗಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇವತ್ತು ಬಹುಶಃ ನಮಗೆ ಯಾವ ರೀತಿಯಾದಂಥ ಆರ್ಥಿಕ ಚಿಂತನೆಗಳನ್ನು ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಚಿಂತನೆಯನ್ನು ಮಾಡಿದಾಗ ಗಾಂಧೀಜಿಯವರ ಆರ್ಥಿಕ ಚಿಂತನೆಗಳೇನಿವೆಯಲ್ಲ ಬಹುಶಃ ಈ ತರಹದ ಪ್ರಜಾಪ್ರಭುತ್ವ ಸಂಸ್ಥೆಗಳಿಗೆ ಆಯ್ಕೆಯಾಗಿ ಬಂದು ಆಡಳಿತವನ್ನು ನಡೆಸತಕ್ಕಂಥವರು ಸ್ವಲ್ಪ ಆ ಕಡೆಗೆ ಗಮನವನ್ನು ಕೊಡಬೇಕಾಗುತ್ತದೆ. ಗಾಂಧೀಜಿಯವರ ಆರ್ಥಿಕ ಚಿಂತನೆಗಳು ಎಂದರೆ ಅವು ಬಹಳ ಸರಳವಾಗಿದೆ. ಅಂತ್ಯೋದಯ ಮತ್ತು ಸರ್ವೋದಯ ಎನ್ನತಕ್ಕಂಥದ್ದು. ಅಂತ್ಯೋದಯ ಎಂದರೆ ಸಮಾಜದಲ್ಲಿ ಅತ್ಯಂತ ಕೆಳಸ್ತರದಲ್ಲಿರತಕ್ಕಂಥವರು. ಗಾಂಧೀಜಿಯವರು ಅಂತ್ಯೋದಯ ಎಂದು ಹೇಳಿದರೆ ಅವರು ಬೆಳಗ್ಗೆ

Sweeping Community ಭಂಗಿ ಕಾಲೋನಿಯಲ್ಲಿ ಚಹಾ ಕುಡಿಯುವವರ ಜೊತೆ ಅಂತ್ಯೋದಯ, ಅಲ್ಲಿಂದ ಅವರ ಶ್ರೇಯಸ್ಸು, ಅವರ ಅಭಿವೃದ್ಧಿ, ಅಲ್ಲಿಂದ ಸರ್ವೋದಯದವರೆಗೆ ಹೋಗಿ ಸಮಾಜದ ಬಗ್ಗೆ ಚಿಂತನೆಯನ್ನು ಮಾಡತಕ್ಕಂಥ ರೀತಿಯಲ್ಲಿ ಇದ್ದಂಥ ಗಾಂಧೀಜಿಯವರ ಆಲೋಚನೆಗಳು ಮತ್ತು ಅವರ ಆರ್ಥಿಕ ಚಿಂತನೆಗಳು ಕೂಡ ಇದ್ದವು. ಸ್ವಲ್ಪ ನೀವು ಆ ಕಡೆಯಲ್ಲಿ ಚಿಂತನೆ ಮಾಡಬೇಕು. ಏಕೆಂದರೆ ಬಿ.ಜೆ.ಪಿ.ಯವರು ಕೂಡ socialism ನಿಂದ ದೂರ ಹೋಗಿಲ್ಲ ಒಂದು ಸಾರಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಕೂಡ ನಾನು ನೆನಪಿಸಿದೆ. 1979 ರಲ್ಲಿ ಭಾರತೀಯ ಜನತಾ ಪಕ್ಷ ಹೊಸದಾಗಿ ಬಂದು ಅಟಲ್ ಬಿಹಾರಿ ವಾಜಪೇಯಿಯವರು ಅಧ್ಯಕ್ಷರಾದಾಗಲೂ ಕೂಡ ಅಲ್ಲಿ ಬಹಳ ಚರ್ಚೆಗಳು ನಡೆಯಿತು. ಇವತ್ತಿನ ಸಂದರ್ಭದಲ್ಲಿ ಈ ರಾಜ್ಯದ, ರಾಷ್ಟ್ರದ ರಾಜಕೀಯದಲ್ಲಿ ನಾವು ಸಮಾಜವಾದವನ್ನು ಅಳವಡಿಸಿಕೊಳ್ಳದೇ ಹೋದರೆ, ಆ ರೀತಿಯ ಚಿಂತನೆಗಳನ್ನು ಮಾಡಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳದೇ ಹೋದರೆ ಕೇವಲ ನಾವು ಹಿಂದಿ, ಹಿಂದೂ, ಹಿಂದೂಸ್ತಾನ ಎಂದು ಹೇಳಿಕೊಂಡು ಆಡಳಿತವನ್ನು ನಡೆಸುವುದಕ್ಕೆ ಆಗುವುದಿಲ್ಲ, ಜನರ ಬೆಂಬಲವನ್ನು ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ದೃಷ್ಟಿಯಿಂದ ಸಮಾಜವಾದವನ್ನೂ ಕೂಡ ನಾವು ಅಳವಡಿಸಿಕೊಳ್ಳಬೇಕು, ಆ ರೀತಿಯ ಕಾರ್ಯಕ್ರಮಗಳ ಚಿಂತನೆಗಳಾಗಬೇಕು ಎಂದು ಬಿ.ಜೆ.ಪಿ. ಆ ನಿಟ್ಟಿನಲ್ಲಿ ಹೊರಟಿತು. ಆಗ Gandhijian Socialism ಅನ್ನು adopt ಮಾಡಿಕೊಂಡಂಥವರು ಕೂಡ ಆದರು. Gandhijian Socialism ಅನ್ನು adopt ಮಾಡಿಕೊಂಡಿರ ತಕ್ಕಂಥವರೂ ಕೂಡ ಗಾಂಧೀಜಿಯವರ ಆರ್ಥಿಕ ಚಿಂತನೆಗಳನ್ನು ನಾವು ಅಳವಡಿಸಿಕೊಂಡರೆ, ಆ ರೀತಿಯಾದಂಥ ಚಿಂತನೆಗಳನ್ನು ಮಾಡಿದರೆ ಬಹಳ ಅತ್ಯುತ್ತಮವಾದಂಥ ಬಜೆಟ್ ಆಗುತ್ತದೆ. ಇವತ್ತು ಸಮಾಜದಲ್ಲಿರತಕ್ಕಂಥ ಅಶಕ್ತರ ಬಗ್ಗೆ ಸರ್ಕಾರ ಚಿಂತನೆ ಮಾಡುವುದು ಜವಾಬ್ದಾರಿಯಾಗಿರುತ್ತದೆ. ಅಶಕ್ತರು ಎಂದರೆ ಯಾರಿಗೆ ಶಕ್ತಿ ಇಲ್ಲವೋ, ಯಾವ ಜನಾಂಗಕ್ಕೆ ಶಕ್ತಿ ಇಲ್ಲವೋ ಅಂಥವರ ನೆರವಿಗೆ ಹೋಗತಕ್ಕಂಥದ್ದು, ಅವನ ಆರ್ಥಿಕ ಸಬಲೀಕರಣವಾಗತಕ್ಕಂಥದ್ದು, ಅವನಿಗೆ ಸಾಮಾಜಿಕವಾದಂಥ ರೀತಿಯಲ್ಲಿ ನೆಮ್ಮದಿ ಸಿಗತಕ್ಕಂಥ ರೀತಿಯಲ್ಲಿ ಮತ್ತು ಅವನಿಗೆ ಶೈಕ್ಷಣಿಕವಾದಂಥ ರೀತಿಯಲ್ಲಿ ಬೆಳವಣಿಗೆಯಾಗಬೇಕು ಎನ್ನತಕ್ಕಂಥದ್ದರ ಬಗ್ಗೆ, ಹೀಗೆ ಒಟ್ಟಾರೆ

ಅಶಕ್ತರ ಬಗ್ಗೆ ಯೋಚನೆ ಮಾಡತಕ್ಕಂಥದ್ದರ ಬಗ್ಗೆ ಮೊದಲನೆಯದಾಗಿ ಆದ್ಯತೆಯನ್ನು ಕೊಡಬೇಕು ಎನ್ನತಕ್ಕಂಥದ್ದು ಮುಖ್ಯ. ಆ ಹಿನ್ನಲೆಯಲ್ಲಿ ಅಂತ್ಯೋದಯ ಮತ್ತು ಸರ್ವೋದಯದ ಆರ್ಥಿಕ ಚಿಂತನೆಗಳ ಹಿನ್ನಲೆಯಲ್ಲಿ ನೀವು ಬಜೆಟ್‌ನ್ನು ಹೊಂದಿಸಬಹುದಾಗಿತ್ತು. ಆದರೆ ನೀವು ಕೆಳಸ್ತರದವರಿಗೆ ಏನನ್ನೂ ಕೊಟ್ಟೇ ಇಲ್ಲವೆಂದು ಹೇಳುತ್ತಿಲ್ಲ. ಆದರೆ ಯಾವ ಪ್ರಮಾಣದಲ್ಲಿ ಮತ್ತು ಯಾವ ಮಟ್ಟದಲ್ಲಿ ಅವರ ಬಗ್ಗೆ ಯೋಜನೆ ಕೊಡಬೇಕಾಗಿತ್ತೋ, ಕೆಳಸ್ತರದವರಿಗಾಗಿ ಅಂತ್ಯೋದಯದಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳ ಬೇಕಾಗಿತ್ತೋ, ಬಜೆಟ್‌ನಲ್ಲಿ ಅವರಿಗೆ ಹೆಚ್ಚಿನ ಹಣಕಾಸಿನ ಸಹಾಯವನ್ನು ಮಾಡಬೇಕಾಗಿತ್ತೋ ಆ ಮಟ್ಟಕ್ಕೆ ನೀವು ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಸ್ವಲ್ಪ ಅವೆಲ್ಲಾ ಬಿಟ್ಟು ಸರ್ವೋದಯದ ಕಡೆಗೆ ನೀವು ಯೋಚನೆಯನ್ನು ಮಾಡಿದ್ದೀರಿ ಎನ್ನತಕ್ಕಂಥದ್ದನ್ನೂ ಕೂಡ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಮೈಸೂರಿನಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿದರು. ಇತ್ತೀಚೆಗೆ ಒಂದು ಆರಾಧನಾ ಕಾರ್ಯಕ್ರಮ ದಲ್ಲಿ, ನನಗೆ ಎಲ್ಲಿಯವರೆವಿಗೆ ಮಠಗಳು, ಮಠಾಧಿಪತಿಗಳಿರುತ್ತಾರೋ ಅಲ್ಲಿಯವರೆವಿಗೆ ನನ್ನ ಸರ್ಕಾರಕ್ಕೆ ಭಯವಿಲ್ಲ, ನಾನು ನಿರ್ಭೀತಿಯಿಂದ ಆಡಳಿತವನ್ನು ನಡೆಸುತ್ತೇನೆಂದರು. ನಾನು ಅದರ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಬಹುಶಃ ತಮಗೆ ಹೇಳತಕ್ಕಂಥದ್ದು, ಮಠಗಳ, ಮಠಗಳ ಮಠಾಧಿಶರ ಆಶೀರ್ವಾದ ಇರುವವರೆವಿಗೆ ನಿಮಗೆ ನಿರ್ಭೀತಿ ಯಿಂದ ಆಡಳಿತ ನಡೆಸುತ್ತೇವೆ ಎನ್ನುವ ಭಯವಿಲ್ಲವೋ ಅಥವಾ ರೆಡ್ಡಿ ಸಹೋದರರ ಬೆಂಬಲವಿರುವವರೆವಿಗೆ ನಿಮಗೆ ನಿರ್ಭೀತಿಯಿಂದ ಆಡಳಿತ ವನ್ನು ನಡೆಸುವುದಕ್ಕೆ ಸಾಧ್ಯ ನಿಮಗೆ ಎನ್ನತಕ್ಕಂಥದ್ದು, ರೆಡ್ಡಿ ಸಹೋದರರ ಬೆಂಬಲವಿಲ್ಲದಿದ್ದರೆ ಸಾಧ್ಯವೆ? ಇಲ್ಲ. ನಿಮಗೆ ಗೊತ್ತಿದೆ, ಇತ್ತೀಚೆಗೆ ನಡೆದಂತ ಚಟುವಟಿಕೆಗಳಲ್ಲಿ ನೀವು ಎಲ್ಲೂ ತತ್ತರಿಸಿ ಹೋಗಿದ್ದೀರಿ. ಸ್ವತಃ ಮುಖ್ಯಮಂತ್ರಿಗಳೆ, ನಿಮಗೆ ಮಠಗಳ ಮಠಾಧೀಶರ ಆಶೀರ್ವಚನವಲ್ಲ, ಅದು ಇಲ್ಲದೇ ಇದ್ದರೂ ಕೂಡ ನಡೆಯುತ್ತದೆ. ಆದರೆ ನೀವು ಹೇಳಬೇಕು, ರೆಡ್ಡಿ ಸಹೋದರರ ಬೆಂಬಲವಿಲ್ಲದೇ ಹೋದರೆ ನಿಮ್ಮ ಸರ್ಕಾರ ಗಡಗಡ ನಡುಗುತ್ತಿರುತ್ತದೆ. ನಮಗೂ ಕೂಡ ಮಠಗಳ ಬಗ್ಗೆ ಬಹಳ ಗೌರವವಿದೆ. ಸರ್ಕಾರದಿಂದ ಹಣಕಾಸಿನ ನೆರವನ್ನು ಕೇಳಿರತಕ್ಕಂಥ ಮಠಗಳು ಬಹಳ ಕಡಿಮೆ ನೀವು ಮಠಗಳಿಗೆ ಗೌರವ ಕೊಡಬೇಕಾದರೆ, ಮಠಾಧಿಪತಿಗಳಿಗೆ ಒಳ್ಳೆಯ ಹೆಸರನ್ನು ತರಬೇಕಾದರೆ, ಮಠಾಧೀಶರು ನಿಮ್ಮಲ್ಲಿ ಕೇಳತಕ್ಕಂಥದ್ದು

ಏನೆಂದರೆ ನೀವು ಒಳ್ಳೆಯ ಆಡಳಿತವನ್ನು ರಾಜ್ಯದಲ್ಲಿ ಕೊಡಿ ಎಂದು ಕೇಳತಕ್ಕಂಥದ್ದು. ನಮ್ಮ ಮಠಗಳ, ಮಠಾಧಿಪತಿಗಳ ಹೆಸರನ್ನು ಬಳಸಿ ಕೊಳ್ಳತಕ್ಕಂಥ ಸಂದರ್ಭದಲ್ಲಿ ಜನರಿಗೆ ಮೆಚ್ಚುಗೆ ಆಗುವ ರೀತಿಯಲ್ಲಿ ಸರ್ಕಾರದ ಆಡಳಿತವಿರಬೇಕು. ಒಳ್ಳೆಯ ಸರ್ಕಾರವಿದೆ, ಒಳ್ಳೆಯ ಆಡಳಿತವಿದೆ, ಒಳ್ಳೆಯ ರೀತಿಯಲ್ಲಿ ಜನರ ಬದುಕಿದೆ ಎನ್ನತಕ್ಕಂಥ ರೀತಿಯಲ್ಲಿ ಆಡಳಿತ ನಿಮ್ಮಿಂದ ನಡೆಯಬೇಕು ಎಂದು ಮಠಾಧಿಪತಿಗಳು ಬಯಸತಕ್ಕಂಥದ್ದು. ಅದನ್ನು ಕೊಡಿ ಎಂದು ಅವರು ಹೇಳತಕ್ಕಂಥದ್ದು. ಈಗೆಲ್ಲೋ ಒಂದು ಕಡೆ ನೋಡಿದೆ. 60 ಕೋಟಿ ರೂಪಾಯಿಗಳನ್ನು ಮಠಗಳಿಗೆ ನೀವು ಕೊಟ್ಟಿದ್ದೀರಿ. ಕೆಲವು ಮಠಗಳಿಗೆ 5 ಕೋಟಿ ಕೊಟ್ಟಿದ್ದೀರಿ. ಕೆಲವು ಮಠಗಳ ಆಸ್ತಿ ಪಾಸ್ತಿ ನೋಡಿದರೆ ಎರಡು–ಮೂರು ಸಾವಿರ ಕೋಟಿ ರೂ.ಗಳ ಆಸ್ತಿ ಇರತಕ್ಕಂಥ ಮಠಗಳು ನಿಮ್ಮಿಂದ ಎರಡು ಕೋಟಿ, ಮೂರು ಕೋಟಿ ನಿರೀಕ್ಷೆ ಮಾಡುತ್ತಾರೆಯೆ? ನಿರೀಕ್ಷೆ ಮಾಡುತ್ತಿರುವವರು ನಿಮ್ಮ ಪ್ರಚಾರಕ್ಕೋಸ್ಕರ. ಆದರೆ ಬೇರೆ ಯಾವ ಮಠಗಳವರೂ ನಿಮ್ಮನ್ನು ಹಣ ಕೊಡಿ ಎಂದು ಕೇಳಿಲ್ಲ. ಇವತ್ತು ಮಠಗಳಿಗೆ ಕೋಟ್ಯಾಂತರ ರೂ.ಗಳ ಅನುದಾನವನ್ನು ಕೊಡುತ್ತಿರುವಾಗ ಅದರ ಜೊತೆಗೆ ನಿಮ್ಮ 5 ಕೋಟಿ, ಎರಡು ಕೋಟಿ ಬೇಕಾಗಿಲ್ಲ. ನೀವು ಎಷ್ಟು ಕೋಟಿ ರೂ.ಗಳನ್ನು ಯಾವ ಯಾವ ಮಠಗಳಿಗೆ ನೀವು ಕೊಡುತ್ತೀರೋ, ಅನುದಾನವನ್ನು ಕೊಡತಕ್ಕಂಥದ್ದರ ಬಗ್ಗೆ ಅದು ಸರ್ಕಾರದ ಆದೇಶದ ಪ್ರಕಾರವಾಗಿಯೇ ಆ ಅನುದಾನ ಉಪಯೋಗವಾ ಗುತ್ತಿದೆಯೆ? ಖಂಡಿತ ಇಲ್ಲ. ಅದರ ಬಗ್ಗೆ ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಯಾವ ಮಠಗಳು, ಮಠಾಧಿಪತಿಗಳು 'ನಿಮಗೆ ಹಣವನ್ನು ಕೇಳುವುದಿಲ್ಲ. ಆದರೆ ನೀವು ಇವತ್ತು ಮಠಗಳಿಗೆ 60 ಕೋಟಿ ರೂಪಾಯಿಗಳನ್ನು ಕೊಟ್ಟಿರತಕ್ಕಂಥದ್ದು. ಈಗ ನೀವು ಒಂದು ಕಡೆ ಹೇಳುತ್ತೀರಿ, ಕರ್ನಾಟಕದಲ್ಲಿ ಒಂದು ಶತಮಾನದಲ್ಲಿಯೇ ಕಂಡರಿಯದ ಜಲಪ್ರಳಯವಾಗಿದೆಯೆಂದು, ಈ ರೀತಿ ಹೇಳಿ ಸರ್ಕಾರದ ಕಾರ್ಯಕ್ರಮ ದಿಂದ ಹಿಡಿದು ಸಾರ್ವಜನಿಕ ಕಾರ್ಯಕ್ರಮಗಳೆಲ್ಲವೂ ಕೂಡ ಯಾವುವು ಅದ್ದೂರಿಯಾಗಿ ನಡೆಯಬಾರದು ಎಂದು ಸರ್ಕಾರದ ಸಂದೇಶವನ್ನು ಹೇಳುತ್ತೀರಿ. ಯಾವ ಕಾರ್ಯಕ್ರಮವೂ ಅದ್ದೂರಿಯಾಗಿ ನಡೆಯಬಾರದು, ಜನರು ಜಲಪ್ರಳಯದಿಂದ ತತ್ತರಿಸಿ ಹೋಗಿದ್ದಾರೆ. ಇನ್ನೂ ಕೂಡ ಆ ಪ್ರದೇಶಗಳಲ್ಲಿ ಗಂಜಿ ಕೇಂದ್ರಗಳು ಇದ್ದು ಜನರು ಶೆಡ್‌ಗಳಲ್ಲಿ ಇದ್ದಾರೆ, ಆ ಜನರಿಗೆ ಸರಿಯಾದ ಪುನರ್ವಸತಿಯಾಗಿಲ್ಲ, ಜನರು ನರಳುತ್ತಿದ್ದಾರೆಯಾದ

ಕಾರಣ ನಮಗೆ ಅದ್ದೂರಿ ಕಾರ್ಯಕ್ರಮಗಳು ಬೇಡವೆಂದು ಹೇಳುತ್ತೀರಿ. ಈ ರೀತಿ ಬೇಡವೆಂದು ಹೇಳಿ ನೀವು ಕೃಷ್ಣದೇವರಾಯನ ಪಟ್ಟಾಭಿಷೇಕ ಮಾಡುತ್ತೀರಿ. ಅದನ್ನು ನೀವು ಮುಂದಕ್ಕೆ ಹಾಕುವುದಕ್ಕೆ ಆಗುತ್ತಿರಲಿಲ್ಲವೆ? ಇದಕ್ಕಾಗಿ ನೀವು 30 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಒಂದು ಕಡೆ ನೀವೇ ಹೇಳುತ್ತೀರಿ, ಅದ್ದೂರಿ ಕಾರ್ಯಕ್ರಮಗಳು ಬೇಡ, ಸರಳವಾದ ಕಾರ್ಯಕ್ರಮಗಳನ್ನು ನಡೆಸಿ, ಜನರು ಇವತ್ತು ನೊಂದು ಬೆಂದು ಸಂಕಷ್ಟದಲ್ಲಿದ್ದಾರೆ ಎಂದು ಹೇಳಿದ್ದೀರಿ. ಆದರೆ ನೀವು ಕೃಷ್ಣದೇವರಾಯನ ಪಟ್ಟಾಭಿಷೇಕಕ್ಕೆ 30 ಕೋಟಿ ರೂ.ಗಳನ್ನು ಮತ್ತು ಮಠಗಳಿಗೆ 60 ಕೋಟಿ ರೂ.ಗಳನ್ನು ಕೊಡುತ್ತೀರಿ. ಸ್ವಾಮಿ ನಾನು ಕೇಳತಕ್ಕಂಥದ್ದು, ನಿಮ್ಮ ಬಜೆಟ್ ನಲ್ಲಿಯೇ ಹೇಳಿದ್ದೀರಲ್ಲ, ಅಂಗನವಾಡಿ ಕಾರ್ಯಕರ್ತರಿಗೆ ಮತ್ತು ಸಹ ಕಾರ್ಯಕರ್ತರ ಬಗ್ಗೆ ಏನು ಹೇಳಿದ್ದೀರೆಂದರೆ, ಅವರು ಬಹಳ ಕಷ್ಟದಲ್ಲಿದ್ದಾರೆ, ಅವರಿಗೆ ಪೆನ್‌ಶನ್ ಇಲ್ಲ, ಪೆನ್‌ಶನ್ ಅನ್ನು ಕೊಡೋಣ ಎನ್ನತಕ್ಕಂಥ ರೀತಿಯಲ್ಲಿ ತಾವು ಅಂಗನವಾಡಿ ಕಾರ್ಯಕರ್ತರಿಗೆ 150 ರೂ.ಗಳನ್ನು ಅವರ ಸಂಬಳದಲ್ಲಿಯೇ ಹಿಡಿದು ಕೊಳ್ಳುವುದು ಎನ್ನಲಾಗಿದೆ. ಆ ಹಣಕ್ಕೆ ಸರ್ಕಾರ 150 ರೂ.ಗಳನ್ನು ಸೇರಿಸಿ ಅದ್ನು ಸೇರಿಸಿ ಅವರು ನಿವೃತ್ತಿಯಾದ ಮೇಲೆ ಅವರಿಗೆ ಪೆನ್‌ಶನ್‌ನ್ನು ಕೊಡತಕ್ಕಂಥದ್ದು. ಸಹಾಯಕ ಕಾರ್ಯಕರ್ತರಿಗೆ 75 ರೂ.ಗಳನ್ನು ಅವರ ಸಂಬಳದಲ್ಲಿಯೇ ಹಿಡಿಯುವುದು. ನಾವು ಇವರಗೆ ಎಷ್ಟು ಸಂಬಳವನ್ನು ಕೊಡುತ್ತಿದ್ದೇವೆ? ನಾನು ಇದನ್ನು ಏಕೆ ಹೇಳಿದೇನೆಂದರೆ, ಮಠಗಳಿಗೆ ಕೊಡುವಂಥ 60 ಕೋಟಿ ರೂ.ಗಳು ಮತ್ತು ಕೃಷ್ಣದೇವರಾಯನ ಪಟ್ಟಾಭಿಷೇಕಕ್ಕೆ 30 ಕೋಟಿ ರೂಪಾಯಿ, ಹೀಗೆ ಒಟ್ಟು 90 ಕೋಟಿ. ಪಾಪ ಈ ಅಂಗನವಾಡಿ ಕಾರ್ಯಕರ್ತರ ಮತ್ತು ಸಹಾಯಕ ಕಾರ್ಯಕರ್ತರ ಗೌರವಧನವನ್ನು ಹೆಚ್ಚು ಮಾಡಿ ಪೆನ್‌ಶನ್ ಕೊಡಬಹು ದಾಗಿತ್ತು. ಅದನ್ನು ಬಿಟ್ಟು 150 ರೂಪಾಯಿ ಹಿಡಿದುಕೊಳ್ಳುತ್ತೀರಿ ಎಂದಿದ್ದೀರಿ. ಪಾಪ ಅವರಿಗೆ ನೀವು ಕೊಡುವ ಗೌರವಧನವೇ ಹೊಟ್ಟೆಗೆ ಸಾಲದಾಗಿದೆ. ನಾನು ಇದನ್ನೇ ಹೇಳಿದ್ದು ಅಂತ್ಯೋದಯ ಎಂದರೆ ಎಲ್ಲಿ ಬ್ರೇಕ್ ಆಗಿದೆಯೆಂದು. ಇವರ ಬಗ್ಗೆ ನೀವು ಯೋಚನೆ ಮಾಡಬೇಕಾಗಿತ್ತಲ್ಲವೆ? ಅಂಗನವಾಡಿ ಕಾರ್ಯಕರ್ತರಿಗೆ ಪೆನ್‌ಶನ್ ಕೊಡಬೇಕಾದರೆ ಅವರು ಕಟ್ಟಬೇಕಾದ ಹಣವನ್ನು ನೀವು ತುಂಬಿ ಅವರಿಗೆ ಬರತಕ್ಕಂಥ ಸಂಬಳದಲ್ಲಿ ನೀವು ಹಿಡಿಯುವುದು. ನೀವು ಅವರ ಗೌರವಧನವನ್ನು ಜಾಸ್ತಿ ಮಾಡಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಶ್ರೀನಿವಾಸ್ ಪ್ರಸಾದ್‌ರವರು ಬಜೆಟ್ ಮೇಲೆ ಉತ್ತಮವಾದ ಬೆಳಕನ್ನು ಚೆಲ್ಲಿ ಚರ್ಚೆ ಮಾಡುತ್ತಿದ್ದಾರೆ. ಆದರೆ ಸರ್ಕಾರದ ಕಡೆ ಮುಂದಿನ ಸಾಲಿನಲ್ಲಿ ಒಬ್ಬ ಸಚಿವರೂ ಕೂಡ ಇಲ್ಲ. ಅಂದರೆ ನೋಡಿ, ಇವರಿಗೆ ಬಜೆಟ್ ಮೇಲೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಎಷ್ಟರಮಟ್ಟಿಗೆ ಆಸಕ್ತಿ ಇದೆಯೆಂದು. ಬಜೆಟ್ ಮೇಲೆ ಚರ್ಚೆ ಆಗುವಾಗ ಹಣಕಾಸಿನ ಸಚಿವರಾದ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಕುಳಿತು ತಾಳ್ಮೆಯಿಂದ ಏನು ಚರ್ಚೆಯಲ್ಲಿ ಮಾತನಾಡುತ್ತಾರೆ ಎಂಬುದನ್ನು ಅವರು ನೋಡಬೇಕಾಗಿತ್ತು. ಅವರೇನಾದರೂ ಬಸವರಾಜ ಬೊಮ್ಮಾಯಿಯವರಿಗೆ Authorize ಮಾಡಿದ್ದಾರೇನೋ ನನಗೆ ಗೊತ್ತಿಲ್ಲ. ಬಸವರಾಜ ಬೊಮ್ಮಾಯಿಯವರೆ, ತಾವೇನಾದರು Authorization ತೆಗೆದುಕೊಂಡಿದ್ದೀರ?

ಶ್ರೀ ಶ್ರೀನಿವಾಸ ಪ್ರಸಾದ್ : ಅವರೇ ನೇಮಕ ಮಾಡಿರಬೇಕು. ಅವರ ಕಡೆ ಯಾರಾದರು ಇರಬೇಕು.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಬಜೆಟ್‌ನಲ್ಲಿ ಯಾರಿಗೂ ಸರಿಯಾದಂಥ ರೀತಿಯಲ್ಲಿ ಹಣವನ್ನು ಕೊಡಲಿಲ್ಲ. ಇವರಿಗೂ ಕೊಡಲಿಲ್ಲ. ಬಸವರಾಜ ಬೊಮ್ಮಾಯಿಯವರಿಗೂ ಕೊಡಲಿಲ್ಲ. ಕೃಷಿಗೂ ಕೊಡಲಿಲ್ಲ, ಪಶುಸಂಗೋಪನೆಗೂ ಕೊಡಲಿಲ್ಲ. ಇವರಿಗ್ಯಾರಿಗೂ ಸರಿಯಾಗಿ ಹಣ ಕೊಟ್ಟಿಲ್ಲವಾದ ಕಾರಣ ಇವರೆಲ್ಲರಿಗೂ ಆಸಕ್ತಿ ಹೊರಟುಹೋಗಿದೆ ಪಾಪ. ಆ ಆಸಕ್ತಿ ಹೊರಟುಹೋಗಿ ಒಬ್ಬರೂ ಕೂಡ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ತಯಾರಾಗಿಲ್ಲ ಮತ್ತು ಒಬ್ಬರೂ ಕೂಡ ಒಂದು ನೋಟ್ ಮಾಡಿಕೊಳ್ಳುವುದಿಲ್ಲ. ಹಿರಿಯ ಸದಸ್ಯರಾದ ಶ್ರೀನಿವಾಸಪ್ರಸಾದ್‌ರವರು ಬಜೆಟ್ ಮೇಲೆ ಭಾಷಣ ಮಾಡುತ್ತಿದ್ದಾರೆ, ಯಾರಾದರೂ ಕುಳಿತುಕೊಂಡು ಅದಕ್ಕೆ ಉತ್ತರ ಕೊಡಬೇಕು, ಈ ಸದನದ ಮೂಲಕ ಜನರಿಗೆ ಹೇಳಬೇಕು, ನಾವು ತೆರಿಗೆ ಹಣವನ್ನು ಯಾವ ರೀತಿ ಖರ್ಚು ಮಾಡುತ್ತೇವೆ ಮತ್ತು ಯಾವ ರೀತಿಯಾಗಿ ತೆರಿಗೆಯನ್ನು ವಸೂಲು ಮಾಡುತ್ತಿದ್ದೇವೆ ಮತ್ತು ರಾಜ್ಯದಲ್ಲಿ ಏನಾಗುತ್ತಿದೆ ಎಂಬ ಬಗ್ಗೆ ಇಡೀ ರಾಜ್ಯದ ಜನರಿಗೆ ಈ ಸದನದ ಮೂಲಕ ಅವರು ಉತ್ತರ ಕೊಡಬೇಕಾಗುತ್ತದೆ. ಈ ರೀತಿಯ ಜವಾಬ್ದಾರಿ ಇರಬೇಕು. ಆದರೆ ಆ ಜವಾಬ್ದಾರಿ ಒಬ್ಬ ಮಂತ್ರಿಗೂ ಇಲ್ಲ. ಒಬ್ಬ ಮಂತ್ರಿಯೂ ಕೂಡ ಮುಂದುಗಡೆ ಇಲ್ಲಿ ಕುಳಿತುಕೊಳ್ಳುವುದಿಲ್ಲ.

O.30 F-14

(12.30 PM)

ಹಣಕಾಸಿನ ಸೆಕ್ರೆಟರಿಗಳು ಒಬ್ಬರೂ ಇಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಅಧಿಕಾರಿಗಳು ಇಲ್ಲ.

ಶ್ರೀ ಸಿದ್ಧರಾಮಯ್ಯ : Principal Secretary ಇಲ್ಲ. ಅಲ್ಲಿ ನೋಡಿ Finance Department ನವರು ಎಲ್ಲಿದ್ದಾರೆ?

ಶ್ರೀ ಬಸವರಾಜ್ ಬೊಮ್ಮಾಯಿ : ಅಜೆಂಡಾದಲ್ಲಿ . . .

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈಗಾಗಲೇ ಅರ್ಧ ಗಂಟೆ ಆಯಿತಲ್ಲ.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್ : ಅಜೆಂಡಾದಲ್ಲಿ financial discusion ಇದೆ.

ಶ್ರೀ ಬಸವರಾಜ್ ಬೊಮ್ಮಾಯಿ : ಇದೆ. ಒಂದು ನಿಮಿಷ ಕೇಳಿ.

CHAIRMAN : Finance ನವರು ಇದ್ದಾರೆ.

ಶ್ರೀ ಸಿದ್ದರಾಮಯ್ಯ : Finance ನವರು ಎಲ್ಲಿದ್ದಾರೆ? Secretary ಎಲ್ಲಿದ್ದಾರೆ? ಅಲ್ಲಿ ಯಾರೋ Under Secretary ಗಳು ಇರಬೇಕು ಅಷ್ಟೇ.

ಶ್ರೀ ಬಸವರಾಜ್ ಬೊಮ್ಮಾಯಿ : ಈಗ ಬಿಲ್ ಬಗ್ಗೆ discussion ಆಗುವ ಸಮಯ. ಆದರೆ ಅದರ ಬದಲು ಬಜೆಟ್ ಮೇಲೆ .ಚರ್ಚೆ ಪ್ರಾರಂಭವಾಗಿದ್ದರಿಂದ ಕರೆಸುತ್ತೇವೆ.

CHAIRMAN : Secretary ಯವರನ್ನು ಕರೆಸಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಭಾಷಣ ಮಾಡುವಾಗ ಎಲ್ಲಾ tax yielding departments ಗಳೆಲ್ಲ ಇರಬೇಕು. Motor Vehicle Tax, Commercial Tax, Stamps and Registration, excise ನಿಂದ 6.500 ಯಿಂದ 7,000 ಕೋಟಿ ರೂಪಾಯಿ tax ಬರುತ್ತದೆ. Stamps and Registration ನಿಂದ ಎರಡೂವರೆ ಕೋಟಿ ರೂಪಾಯಿ ಬರುತ್ತದೆ. At least ಅವರಾದರೂ ಬರೆದುಕೊಳ್ಳಬೇಕಲ್ಲ. ಅವರು ಏನು ಸಲಹೆ ಕೊಡುತ್ತಾರೆ ಅದನ್ನು note down ಮಾಡಿಕೊಂಡು ನಾಳೆ ಉತ್ತರ ಬರೆದು ಕೊಡುವವರು ಅವರೇ ಅಲ್ಲವೇ? ಆ Department ನವರು ಇಲ್ಲದೆ ನೀವು ಏನು ಉತ್ತರ ಕೊಡುತ್ತೀರಿ?

ಶ್ರೀ ಬಸವರಾಜ್ ಬೊಮ್ಮಾಯಿ : ಮಾನ್ಯ ವಿರೋಧ ಪಕ್ಷದ ನಾಯಕರು ಮೊನ್ನೆ ಸುದೀರ್ಘವಾಗಿ ಏನು ಮಾತನಾಡಿದ್ದಾರೆ, ಅದನ್ನು ಸಂಪೂರ್ಣವಾಗಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಅದೇ ರೀತಿ ಮಾನ್ಯ ಹಿರಿಯ ಸದಸ್ಯರು ಮಾತನಾಡುತ್ತಿದ್ದಾರೆ. ಅವರು ಪೀಠಿಕೆ ಹಾಕುತ್ತಿದ್ದಾರೆ. ಅವರು ಇನ್ನೂ ಬಜೆಟ್ ವಿಷಯಕ್ಕೆ ಬಂದಿಲ್ಲ. ಅವರು ಏನು ಮಾತನಾಡುತ್ತಾರೆ ಅದನ್ನು note down ಮಾಡಿ ಖಂಡಿತವಾಗಿ ಮುಖ್ಯಮಂತ್ರಿಗಳಿಗೆ ತಿಳಿಸುತ್ತೇವೆ.

SRI SIDDARAMAIAH : You are a senior Member. ಆ ತರಹ ಹೇಳುವುದಕ್ಕೆ ಬರುವುದಿಲ್ಲ.

CHAIRMAN : ಹಣಕಾಸು ಇಲಾಖೆಯವರು ಇಲ್ಲ. ನೀವು ಹಣಕಾಸು ಇಲಾಖೆಯವರನ್ನು ಕರೆಸಿ.

ಶ್ರೀ ಬಸವರಾಜ್ ಬೊಮ್ಮಾಯಿ : ಅಧಿಕಾರಿಗಳಿಗೆ summon ಮಾಡುತ್ತೇನೆ. ನೀವು ಹೇಳುವುದನ್ನು note down ಮಾಡಿಕೊಂಡು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತರುತ್ತೇವೆ. ಸರಿಯಾದ ಉತ್ತರವನ್ನು ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ : ಆಯಿತು, ಈಗ ಯಾರು ಬರೆದುಕೊಂಡಿದ್ದಾರೆಂದು ತೋರಿಸಿ.

ಶ್ರೀ ಬಸವರಾಜ್ ಬೊಮ್ಮಾಯಿ : ಅವರು ಇನ್ನು ಪೀಠಿಕೆಯನ್ನು ಹಾಕುತ್ತಿದ್ದಾರೆ, ಇನ್ನು ಮಠಗಳ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆ. ಮಾನ್ಯ ಸದಸ್ಯರು ಬಜೆಟ್ ವಿಷಯಕ್ಕೆ ಬಂದಿಲ್ಲ, ಬಜೆಟ್ ವಿಷಯಕ್ಕೆ ಬಂದಾಗ ನಾವು note down ಮಾಡುತ್ತೇವೆ. ಉತ್ತರ ಕೊಡುತ್ತೇವೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ಬಸವರಾಜ್ ಬೊಮ್ಮಾಯಿಯವರೇ, ನೀವು ಮೊದಲಿನ ತರಹ ಇಲ್ಲ, ಈಗ ನೀವು ಬಹಳ ಬದಲಾವಣೆಯಾಗಿ ಬಿಟ್ಟಿದ್ದೀರಿ.

ಶ್ರೀ ಬಸವರಾಜ್ ಬೊಮ್ಮಾಯಿ : ಇಲ್ಲ ಸಾರ್. ನೀವು ಮಾತನಾಡಿ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ನಾನು ತಮಗೆ ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವ ಧನ ಹೆಚ್ಚು ಮಾಡಿ ಎಂದು ಹೇಳುತ್ತಿದ್ದೆನು. ಅದು ಅವರ loudable demand ಇದೆ. ಎಷ್ಟೋಂದು ಸಂಘಟನೆಗಳಾಗಿ ಅವರ ನೋವನ್ನು ತೋಡಿಕೊಳ್ಳುತ್ತಿದ್ದಾರೆ. ಎಷ್ಟೋಂದು ರೀತಿಯಲ್ಲಿ ಅವರು

ಸರ್ಕಾರದ ಗಮನವನ್ನು ಸೆಳೆಯುತ್ತಿದ್ದಾರೆ. ಅವರಿಗೆ ಗೌರವಧನವನ್ನು ಹೆಚ್ಚು ಮಾಡಿ. ಅವರಿಗೆ pension ಕೊಡಬೇಕಾಗಿರುವುದರ ಕಡೆಗೆ 75 ಅಥವಾ 150 ರೂಪಾಯಿಗಳನ್ನು ಹಿಡಿದುಕೊಂಡಿದ್ದರೆ ಸರಿ ಇರುತ್ತಿತ್ತು. ಅವರ ಸಂಬಳದಲ್ಲಿ ತೆಗೆದುಕೊಂಡು ಆಮೇಲೆ ಅದಕ್ಕೆ ಸೇರಿಸಿ pension ಕೊಡುತ್ತೇವೆಂದು ಹೇಳುತ್ತೀರಿ. ನೀವು ಸ್ವಲ್ಪ ಯೋಚನೆ ಮಾಡಿ. ಅದಕ್ಕೆ ನಾನು ಗಾಂಧೀಜಿ ಯವರ ಅಂತ್ಯೋದಯ ಎಂದು ಅದಕ್ಕೋಸ್ಕರ ಹೇಳಿರತಕ್ಕಂಥಾದ್ದು. ಅಶಕ್ತರಿಗೆ ಅಸಹಾಯಕರಿಗೆ ನೀವು...

ಶ್ರೀ ಪಿ.ಎಂ. ನರೇಂದ್ರಸ್ವಾಮಿ : ಅಂಗನವಾಡಿ ಕಾರ್ಯಕರ್ತೆಯರ ಮನವಿಯನ್ನು ನಾವು ಮನ್ನಣೆ ಮಾಡಿದ್ದೇವೆ. ಅವರೇ ಸೂಚಿಸಿದಂತಹ ಮಾರ್ಗಸೂಚಿಯನ್ವಯ ನಾವು ಕ್ರಮ ತೆಗೆದುಕೊಂಡಿದ್ದೇವೆ. ಆದರೆ ತಾವು ಗೌರವಧನದ ಬಗ್ಗೆ ತಾವು ಮಾತನಾಡಿರುವುದಕ್ಕೆ ನಮ್ಮ ಅಭ್ಯಂತರ ಇಲ್ಲ. pension ವಿಚಾರದಲ್ಲಿ ಅವರು ಕೊಟ್ಟಂತಹ ಬೇಡಿಕೆಯನ್ನು ನಾವು ಮನ್ನಣೆ ಮಾಡಿದ್ದೇವೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ನಮಗೆ ಎಲ್ಲರಿಗೂ ಕೂಡ ಗೊತ್ತಿದೆ. ಪೌರ ಕಾರ್ಮಿಕರ ಬಗ್ಗೆ ಹೇಳುವುದಾದರೆ ಮೊನ್ನೆ ಯಾರೋ ಪೊರಕೆ ಹಿಡಿದುಕೊಂಡು ಕುಳಿತಿದ್ದರು. ಪಾಪ ಅವರು ನೊಂದಿರತಕ್ಕಂಥವರು. ಬೆಂಗಳೂರಿನಲ್ಲಿ ಅವರಿಗೆ ಕೆಲಸವನ್ನು ಗುತ್ತಿಗೆ ಆಧಾರದ ಮೇಲೆ ಕೊಡುತ್ತಾರೆ. ಒಂದು ಬಜೆಟ್ ಮಂಡಿತಕ್ಕಂಥವರು ನಾನು ಅನೇಕ ಸಾರಿ I have been repeatedly telling, ಎಲ್ಲಿಯವರೆಗೆ ನಮ್ಮ ಜನ ಪ್ರತಿನಿಧಿಗಳಿಗೆ ಆಡಳಿತ ನಡೆಸುವವರಿಗೆ ಮಾನವೀಯ ಗುಣಗಳು, human qualities ಇರುವುದಿಲ್ಲವೋ, ಆಗ ನಾವು ಎಲ್ಲಿ ಮೈಮರೆಯುತ್ತೇವೆ, ಯಾವುದರ ಬಗ್ಗೆ ಯೋಚನೆ ಮಾಡುತ್ತೇವೆನ್ನುವುದರ ಬಗ್ಗೆ ನಾನು ಆಗಲೇ ಹೇಳಿದೆ. ಇದನ್ನು ಮರೆತು ಸರ್ವೋದಯದ ಬಗ್ಗೆ ಚಿಂತನೆ ಮಾಡುವುದು. ಮಠಗಳು, ಮಠಾಧಿಪತಿಗಳು ಕೃಷ್ಣದೇವರಾಯನ ಪಟ್ಟಾಭಿಷೇಕ, ಇನ್ನು ಮುಂದೆ ಹೇಳುತ್ತೇನೆ, ಎಷ್ಟು universities ಕೊಟ್ಟಿದ್ದೀರೆಂದರೆ 15-16 universities ಈಗ ಮಾಡಿಕೊಳ್ಳುತ್ತಿದ್ದೀರಿ. ನಾನು ಹೇಳುವಂತಾದ್ದು ಗುತ್ತಿಗೆದಾರರ ವಿಚಾರ. ನಾನು ಕಳೆದ ಬಾರಿ ಬಜೆಟ್ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದೆ. ಈ ಕೆಲಸವನ್ನು sweeping community ಯವರನ್ನು ಬಿಟ್ಟು ಸಮಾಜದಲ್ಲಿ ಬೇರೆಯವರು ಯಾರಾದರೂ

ಮಾಡುವುದಕ್ಕೆ ಆಗುತ್ತದೆಯೇನು? ಅವರನ್ನು contract basis ಮೇಲೆ ತೆಗೆದುಕೊಳ್ಳುತ್ತೀರಲ್ಲ, ಅವರಿಗೆ ಕೇಂದ್ರ ಸರ್ಕಾರದ ದಿನಗೂಲಿ ನಿಯಮದ ಪ್ರಕಾರ ಏನಾದರೂ ಹಣವನ್ನು ಕೊಡುತ್ತಿದ್ದೀರಾ? ಅವರಿಗೆ ಕೊಡುತ್ತಿರ ತಕ್ಕಂಥಾದ್ದು ಕೇವಲ 70 ರೂಪಾಯಿ ಮಾತ್ರ; ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಷ್ಟೇ ಅಲ್ಲ, ಎಲ್ಲಾ ಕಡೆ ಇದೇ ರೀತಿ ಆಗುತ್ತಿದ್ದು ಅವರ ಶೋಷಣೆ ಹೇಗೆ ನಡೆಯುತ್ತಿದೆ ಎಂದು ಹೇಳುತ್ತಿದ್ದೇನೆ. ಅವರಿಗೆ ಹಬ್ಬ ಹರಿದಿನಗಳಲ್ಲಿ ರಜಾ ಇಲ್ಲ, ಒಂದು ದಿನ ಅವರು ಉಳಿದುಕೊಂಡರೆ ಎರಡು ದಿನ ಸಂಬಳ ಇಲ್ಲ. ಅವರು ಕೆಲಸಗಳು ಯಾವ ರೀತಿ ಮಾಡುತ್ತಾರೆಂದು ತಮಗೆ ಗೊತ್ತಿದೆ, ಅವರಿಗೆ hand gloss ಮತ್ತು ಪಾದರಕ್ಷೆಗಳು ಇಲ್ಲ. ಅವರು ತಮ್ಮ ನೋವನ್ನು ಹೇಗೆ ತೋಡಿಕೊಂಡಿದ್ದಾರೆ. ಅವರು ಇಡೀ ತಿಂಗಳು ಬೆಂಗಳೂರು ನಗರದಲ್ಲಿ ದುಡಿದರೆ ಅವನ ಕೈಗೆ ಎರಡು ಸಾವಿರ ರೂಪಾಯಿ ಸಿಗಬಹುದು. Minimum wages ನಲ್ಲಿ ಕೊಟ್ಟರೆ ಅವರಿಗೆ 6,000 ರಿಂದ 7,000 ಸಿಗುತ್ತದೆ. ಅಷ್ಟು ದುಡ್ಡನ್ನು ನಾವು ಗುತ್ತಿಗೆದಾರರಿಗೆ ಕೊಡುತ್ತೇವೆ. ಆದರೆ ಆ ಹಣ ತಲುಪುತ್ತಿಲ್ಲ. ಗುತ್ತಿಗೆದಾರರ ಬದಲು ಯಾವ ಈ ಪೌರ ಕಾರ್ಮಿಕರು ದುಡಿಯುತ್ತಾರೆ, ಅವರಿಗೆ permanent job ಕೊಡಬೇಕು; ಗುತ್ತಿಗೆಗೆ ಕೊಡಬಾರದು. ಮೊದಲ ಆದ್ಯತೆಯನ್ನು ನಾವು ಅವರಿಗೆ ಕೊಡಬೇಕು, ಇವತ್ತು ನಾವು ಅವರ ಬಗ್ಗೆ ಯೋಚನೆಯನ್ನು ಮಾಡಬೇಕಾಗಿ ರತಕ್ಕಂಥ ಅವಶ್ಯಕತೆ ಇದೆ. ನಾನು ನೋಡಿದ ಪ್ರಕಾರ ಕಳೆದ ಸಾರಿ ಕೂಡ ಬಜೆಟ್‌ನಲ್ಲಿ ಪೌರ ಕಾರ್ಮಿಕರ ಬಗ್ಗೆ ಯೋಚನೆ ಮಾಡಿಲ್ಲ. Though they are in the Scheduled Caste, Scheduled Caste is also in list of caste. ಮುಂಧುವರೆದಂತಹವರು ಕೂಡ ವಿದ್ಯೆ, ಬುದ್ಧಿ, ಅಧಿಕಾರ-ಅಂತಸ್ತು ಇದ್ದಂತಹವರು ಇದ್ದೇವೆ. ಆದರೆ ಆ ಜನಾಂಗದಲ್ಲಿ ಇಲ್ಲ. 101 Schedule Caste ನಲ್ಲಿ ಉಪಜಾತಿಗಳು ಇವೆ, ಇವರು ಸಮಾಜದಲ್ಲಿ ಬಹಳ ಅತ್ಯಂತ ಕೆಳಸ್ತರದಲ್ಲಿ ಶೋಚನೀಯವಾಗಿರುವವರು. ಮಾನ್ಯ ಬಸವರಾಜ್ ಬೊಮ್ಮಾಯಿಯವರಿಗೆ ಗೊತ್ತಿದೆ, ನಮ್ಮ ಗ್ರಾಮೀಣ ಪ್ರದೇಶದಲ್ಲಿ 3-5 ಮನೆಗಳಿರುತ್ತವೆ. ಅವರಿಗೆ ಎಲ್ಲಾದರೂ ಆಶ್ರಯ ಯೋಜನೆಯಲ್ಲಿ ಒಂದು ಮನೆ ಅಥವಾ ನಿವೇಶನ ಕೊಟ್ಟಿದ್ದೇವೆಯೇ? ನಾನು ಕೆಡಿಪಿ ಮೀಟಿಂಗ್‌ನಲ್ಲಿ ಮಾತನಾಡುತ್ತಾ ಹೇಳಿದೆ. ನಮ್ಮ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ಯಾವ್ಯಾವ ಗ್ರಾಮಗಳಲ್ಲಿ ಪೌರಕಾರ್ಮಿಕರಿದ್ದಾರೆ ಅವರನ್ನು ಯಾರೂ ಕೇಳುವುದೇ

ಬೇಡವೇ? ಕಡ್ಡಾಯವಾಗಿ ಅವರಿಗೆ ಒಂದು ಆಶ್ರಯ ಯೋಜನೆಯಲ್ಲಿ ಒಂದು ಮನೆ, ಅವರಿಗೆ ಕುಡಿಯುವ ನೀರು ಇದೆಯೋ ಇಲ್ಲವೋ, ಅವರು ಒಳ್ಳೆಯ ಪರಿಸರದಲ್ಲಿ ಬದುಕುತ್ತಿದ್ದಾರೋ ಇಲ್ಲವೋ, ಪಂಚಾಯಿತಿಯಿಂದ ಅವರಿಗೆ ಸಂಬಳ ಕೊಡುತ್ತಿದ್ದಾರೋ ಇಲ್ಲವೋ, ಎನ್ನುವುದನ್ನು ಯೋಚನೆ ಮಾಡುವುದು ಬೇಡವೇನು? ಅವರು ಬಹಳ ನಿರ್ಗತಿಕರಾಗಿರತಕ್ಕಂಥವರು. ಅವರಿಗೆ ವಿಶೇಷವಾಗಿ ಆರ್ಥಿಕ ಸೌಲಭ್ಯವನ್ನು Special Component Plan ನಲ್ಲಿ ಅವರಿಗೆ ಕೊಡಿ ಎಂದು ಹೇಳುತ್ತೇನೆ. ಪರಿಶಿಷ್ಟ ಜಾತಿಗೆ ವಿಶೇಷ ಘಟಕ ಯೋಜನೆ ಏನಿದೆ ಅದರಲ್ಲಿ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡುತ್ತಿರುವುದರಲ್ಲಿ ನಮಗೆ ಮತ್ತು ರೇವು ನಾಯಕರಿಗೆ ಮಾತ್ರ ಕೊಡತಕ್ಕಂಥಾದ್ದಲ್ಲ. ನಮ್ಮ ಜೊತೆಯಲ್ಲಿರತಕ್ಕಂಥವರು, ನಮಗಿಂತಲೂ ಅಶಕ್ತರಾಗಿರತಕ್ಕಂಥವರು, ನಮ್ಮಿಂದ ತುಳಿತಕ್ಕೊಳಗಾಗಿರುವಂಥವರು, ಶೋಷಿತರಲ್ಲಿ ಶೋಷಿತರಾಗಿರತಕ್ಕಂಥವರು, ಬಡವರಲ್ಲಿ ಬಡವಾಗಿರತಕ್ಕಂಥವರು, ಅವಮಾನಿತರಲ್ಲಿ ಅವಮಾನಿತರಾಗಿರುವಂತಹ ಜನಾಂಗದ ಬಗ್ಗೆ ಯೋಜನೆ ಮಾಡುವುದು ಬೇಡ. ಇವತ್ತು ಮೈಸೂರು ಮಹಾನಗರ ಪಾಲಿಕೆ ಮತ್ತು ಎಲ್ಲಾ ಕಡೆ ಅವರನ್ನು ಗುತ್ತಿಗೆದಾರರ ಕಪಿಮುಷ್ಟಿಯಲ್ಲಿ ಕೊಟ್ಟುಬಿಟ್ಟು ಅವರಿಗೆ ಎಂತಹ ಶೋಷಣೆ, ನರಕಸದೃಶ್ಯವಾದಂತಹ ಜೀವನ ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರ ಬಜೆಟ್ ಮಂಡಿಸುವಾಗ ಯೋಚನೆ ಮಾಡಿ. ಅವರು ಸಮಾಜದಲ್ಲಿ ಕೆಳಸ್ತರದಲ್ಲಿ ಇರತಕ್ಕಂಥವರು, ಅಂತ್ಯೋದಯ ಎನ್ನುವುದು ಅವರಿಗೆ ತಲುಪತಕ್ಕಂಥಾದ್ದು, ಅಲ್ಲಿ ಗಾಂಧೀಜಿಯ ಚಿಂತನೆ ಇರುವಂತಾದ್ದು. ಬಹುಶಃ ಇದರ ಬಗ್ಗೆ ನಾನು ನೋಡಿದಂತಹ ಸಮಯದಲ್ಲಿ ಗುತ್ತಿಗೆದಾರರು ಇದ್ದರೂ ಕೂಡ ತಾವು ಗಮನ ಹರಿಸಿ ಅವರಿಗೆ ಯಾವುದೇ ರೀತಿಯಲ್ಲಿ ಪೌರ ಕಾರ್ಮಿಕರ ಮೇಲೆ ಶೋಷಣೆಯಾಗಬಾರದು, ಅವರೂ ಕೂಡ ಆರ್ಥಿಕವಾಗಿ ಸಬಲರಾಗಬೇಕು, ಅವರ ಮಕ್ಕಳಿಗೂ ಕೂಡ ಶಿಕ್ಷಣ ಸಿಗಬೇಕು, ಅವರೂ ಕೂಡ ಒಳ್ಳೆಯ ಬದುಕನ್ನು ನಡೆಸತಕ್ಕಂಥ ರೀತಿಯಲ್ಲಿ ಅವರಿಗೆ ನಾವು ಅವಕಾಶಗಳನ್ನು ಕೊಡಬೇಕೆಂದು ಹೇಳುತ್ತೇನೆ. ನಾನು ಏಕೆ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಪೌರಕಾರ್ಮಿಕರ ಬಗ್ಗೆ ಹೇಳುತ್ತೇನೆ ಎಂದರೆ ಇವರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಕೆಲವೊಂದು ಬೇಡದೆ ಇದ್ದಂತಹವರಿಗೆ ಕೋಟಿ ಕೋಟಿ ಹಣ ಚೆಲ್ಲುತ್ತೇವಲ್ಲ, ಆದುದರಿಂದ ಸ್ವಲ್ಪ ಈ ಕಡೆ ಗಮನವನ್ನು ಹರಿಸಿ, ಏಕೆ ಆಗುವುದಿಲ್ಲ.? ಇನ್ನು ಮಧ್ಯಾಹ್ನದ ಬಿಸಿಯೂಟದ ಬಗ್ಗೆ ಆಮೇಲೆ ಮಾತನಾಡುತ್ತೇನೆ. ಅಲ್ಲಿ ಕೆಲಸ

ಮಾಡುವವರಿಗೆ ಬಹಳ ಕಡಿಮೆ ಸಂಬಳ ಅವರಿಗೆ ಕೊಡತಕ್ಕಂಥಾದ್ದು ಇದೆ. ಆ ರೀತಿ ಕೆಲಸ ಮಾಡುವವರೆಲ್ಲ ಕೂಡ, ಪಾಪ ಅವರು ಅದರಲ್ಲಿ ದುಡಿದು ಬದುಕುವವರು. ಅವರ ಬಗ್ಗೆ ಕೂಡ ನೀವು ಗಮನ ಕೊಡಬೇಕೆಂದು ಹೇಳುತ್ತೇನೆ. ಒಟ್ಟಾರೆ Financial discipline ಬಗ್ಗೆ ಮಾನ್ಯ ಸಿದ್ಧರಾಮಯ್ಯ ನವರು ಈ ಸರ್ಕಾರದಲ್ಲಿ ಹಣಕಾಸಿನ ಶಿಸ್ತು ಇರಬೇಕು, ಅದನ್ನು ನಾವು ಕಾಣುತ್ತಿಲ್ಲವೆಂದು ಹೇಳುತ್ತಿದ್ದರು. ನಾನು 1989ರಲ್ಲಿ ಮೂರನೇ ಬಾರಿಗೆ Parliament ಗೆ ಆಯ್ಕೆಯಾದಂತಹ ಸಂದರ್ಭದಲ್ಲಿ ಮಾನ್ಯ ವಿರೇಂದ್ರ ಪಾಟೀಲರು ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದಾಗ ನೋಡಿದ್ದೆನು. ನಾನು ಒಂದು ದಿನ ಅವರ ಜೊತೆಯಲ್ಲಿ ಪ್ರವಾಸ ಮಾಡಿದೆನು ಆಗ ಅವರು ಹಣಕಾಸಿನ ಖಾತೆಯನ್ನು ಇಟ್ಟುಕೊಂಡಿದ್ದು, ಇನ್ನು ಯಾವುದೇ ಖಾತೆಯನ್ನು ಇಟ್ಟುಕೊಂಡಿರಲಿಲ್ಲ. ನಾನು ಈಗ ಸಮಾಜದ ಕೆಳಸ್ತರದಲ್ಲಿ ಇರುವಂತಹ ಜನರ ಬಗ್ಗೆ ಏನು ಮಾತನಾಡುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳನ್ನು ಅಂತಹ ಒಂದು ಕಾರ್ಯಕ್ರಮಕ್ಕೆ ಕರೆದುಕೊಂಡು ಹೋದೆನು. ನಾನು ಅಲ್ಲಿ ಒಂದು ಪ್ರಾಸ್ತಾವಿಕ ಭಾಷಣ ಮಾಡಿ ಅವರ ಗಮನ ಸೆಳೆದೆ. ಈ ಸಮಾಜದ ಕೆಳಸ್ತರದಲ್ಲಿರತಕ್ಕಂಥವರು ಈ ದೇಶದಲ್ಲಿ ಚುನಾವಣೆಗಳಲ್ಲಿ ಭಾಗವಹಿಸಿ ಹೆಚ್ಚು ಮತದಾನ ಮಾಡಿ ಏನೇನು ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿರುತ್ತಾರೆ, ಅವರ aspirations ಏನು ಎನ್ನುವುದರ ಬಗ್ಗೆ ಅವರ ಗಮನ ಸೆಳೆದೆ. ಅವನು ಚುನಾವಣೆ ದಿನ ಕೂಲಿನಾಲಿ ಬಿಟ್ಟು ಓಟು ಹಾಕುತ್ತಾನೆ. ಅವನಿಗೆ ಯಾವುದೋ ಒಂದು ಪಕ್ಷದ ಬಗ್ಗೆ, ಒಂದು ನಾಯಕತ್ವದ ಬಗ್ಗೆ ನಂಬಿಕೆ, ನನ್ನ ಜೀವನ ಸುಧಾರಿಸಬಹುದು, ನನ್ನ ಮಕ್ಕಳ ಜೀವನ ಸುಧಾರಿಸಬಹುದು ಎಂದು ಅವನು ಹೋಗಿ ಮತದಾನ ಮಾಡುತ್ತಾನೆ. ಸರ್ಕಾರ ಅಧಿಕಾರಕ್ಕೆ ಬಂದಂತಹ ಸಮಯದಲ್ಲಿ ಅವನಿಗೆ ಧ್ವನಿ ಇರುವುದಿಲ್ಲ. ಅವನು ಅವನ ಶಕ್ತಿಯನ್ನು ಧಾರೆ ಎರೆದು ಕೊಟ್ಟುಬಿಡುತ್ತಾನೆ, ಅದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿರುವಂಥಾದ್ದು, ಅಂತಹ ಕಾರ್ಯಕ್ರಮದಲ್ಲಿ ನಾನು ಮಾನ್ಯ ವಿರೇಂದ್ರ ಪಾಟೀಲ್‌ರವರಿಗೆ ಒಂದು ಸಮುದಾಯ ಭವನವನ್ನು ಕಟ್ಟುವುದಕ್ಕೆ 25 ಲಕ್ಷ ರೂಪಾಯಿ ಬೇಕಾಗಿದೆ ಎಂದು ಹೇಳಿದೆನು. ಇವರು ಆರ್ಥಿಕವಾಗಿ ಅಶಕ್ತರು, ಇವರಿಗೆ ಹತ್ತು ಸಾವಿರ ರೂಪಾಯಿ ಕೂಡ ಸಂಗ್ರಹ ಮಾಡಿಕೊಳ್ಳುವುದಕ್ಕಾಗುವುದಿಲ್ಲ, ನೀವು ಇವರಿಗೆ 25 ಲಕ್ಷ ರೂಪಾಯಿಯನ್ನು ಕೊಡಬೇಕೆಂದು ಹೇಳಿದೆನು.

ಅವರು ಬಹಳ ಚೆನ್ನಾಗಿ ಹೇಳಿದರು. ನಾನು 25 ಲಕ್ಷ ರೂಪಾಯಿಗಳನ್ನು ಕೊಡುತ್ತೇನೋ, ಇಲ್ಲವೋ, ಎಂದು ಹೇಳುತ್ತಿದ್ದಾರೆ. ನಮ್ಮ ಯುವಕ ಮಿತ್ರರು ಶ್ರೀನಿವಾಸ ಪ್ರಸಾದ್‌ರು ಏಕೋ ಸಂಶಯದಿಂದ ಹೇಳುತ್ತಿದ್ದಾರೆ. ನಾನು ಒಬ್ಬ ಮುಖ್ಯಮಂತ್ರಿಯಾಗಿ ನನಗೆ ಅದು ಅರ್ಥವಾಗಿದೆ. ಅಶಕ್ತರಿಗೆ ಯಾರಿಗೆ ಸ್ಪಂದಿಸಬೇಕು, ಯಾರಿಗೆ ಸಹಾಯ ಮಾಡಬೇಕೆಂದು ಈ ವೇದಿಕೆಯನ್ನು ಇಳಿಯುವಷ್ಟರಲ್ಲಿ 25 ಲಕ್ಷ ರೂಪಾಯಿಗಳನ್ನು ಇವರಿಗೆ ಕೊಟ್ಟಿದ್ದೇನೆ, ಇದು ಸರ್ಕಾರದ ಆಜ್ಞೆ ಎಂದು ಹೇಳಿದರು. ಅವರ ಜೊತೆಯಲ್ಲಿ ಸಂಜೆ ಮತ್ತೆ ಇನ್ನೊಂದು ಕಾರ್ಯಕ್ರಮಕ್ಕೆ ಹೋದೆ. ಒಂದು ಪ್ರತಿಷ್ಠಿತವಾದ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮಕ್ಕೆ ಹೋದೆ. ನಾನು ಮಾನ್ಯ ವಿರೇಂದ್ರ ಪಾಟೀಲ್‌ರವರ ಜೊತೆಯಲ್ಲಿ ಹೋಗಿ ಕುಳಿತುಕೊಂಡೆ. ಅಲ್ಲಿಗೆ ಹೋದ ತಕ್ಷಣ ಆ ಸಂಸ್ಥೆಯವರು ಅವರಿಗೆ ಒಂದು ಮನವಿಯನ್ನು ಕೊಟ್ಟರು. ನಾವು ಈ ಸ್ಟೇಡಿಯಂ ಅನ್ನು ಕಟ್ಟುತ್ತಿದ್ದೇವೆ. ನಮಗೆ ಒಂದು ಅತ್ಯುತ್ತಮವಾದ ಆಟದ ಮೈದಾನ ಬೇಕಾಗಿದೆ. ನಮಗೆ 20 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದರು. ಮಾನ್ಯ ವಿರೇಂದ್ರ ಪಾಟೀಲ್‌ರವರು ಮಾತನಾಡುತ್ತಾ ಹೇಳಿದರು. ನನ್ನ ಸರ್ಕಾರ ಈಗ ತಾನೇ ಅಧಿಕಾರಕ್ಕೆ ಬಂದಿದೆ. ನನ್ನ ಸರ್ಕಾರದಲ್ಲಿ ಒಬ್ಬ ಹಣಕಾಸಿನ ಸಚಿವರು ಇರುತ್ತಾರೆ. ಇವತ್ತು ಹಣಕಾಸಿನ ಸ್ಥಿತಿಗತಿಗಳು ಹೇಗಿದೆಯೆಂಬುದು ಗೊತ್ತಿಲ್ಲ. ಹಾಗಾಗಿ ನಾನು ನಿಮಗೆ ಏನು ಭರವಸೆಯನ್ನು ಕೊಡುವುದಿಲ್ಲ. ನೀವು ಏನು ಮನವಿಯನ್ನು ಕೊಟ್ಟಿದ್ದೀರಿ. ಅದನ್ನು ಹಣಕಾಸಿನ ಸಚಿವರಿಗೆ ಕಳುಹಿಸಿ ಕೊಡುತ್ತೇನೆಂಬ ಮಾತನ್ನು ಹೇಳಿದರು. ನಾನು ಅವರ ಜೊತೆಯಲ್ಲಿ ಬರುವಾಗ, ಅವರನ್ನು ನಾನು ಕೇಳಿದೆ. ಸಾರ್, 25 ಲಕ್ಷ ರೂಪಾಯಿಗಳು ನಾನು ವೇದಿಕೆ ಇಳಿಯುವಷ್ಟರಲ್ಲಿ ಇದು ಆಜ್ಞೆ ಆಗುತ್ತದೆಂದು ನೀವು ಬೆಳಿಗ್ಗೆ ಹೀಗೆ ಹೇಳಿದ್ದೀರಿ. ಆದರೆ ಇಲ್ಲಿ ನೀವು ಏನೂ ಕೊಡುವುದಿಲ್ಲವೆನ್ನುವ ರೀತಿಯಲ್ಲಿ ಹೇಳಿದ್ದೀರಿ. ಅದಕ್ಕೆ ನೀವು ಬಹಳ ಯೋಚನೆ ಮಾಡಿ ಕೇಳುತ್ತಿದ್ದೀರೆಂದು ಹೇಳಿದರು. ನಾನು ಈ ಸಂಸ್ಥೆಗೆ ಏನು ಬಂದಿದ್ದೇನೆ. ಇದು ಕೋಟ್ಯಾಂತರ ರೂಪಾಯಿಗಳಿರಬಹುದು, ನನಗೆ ಒಂದು ಹಾರ ಹಾಕಿ, ನಿಂಬೆಹಣ್ಣನ್ನು ಕೊಟ್ಟು, ಒಂದು ಮನವಿಯನ್ನು ಕೊಟ್ಟಿದ್ದಾರೆಂದು ಹೇಳಿದರೆ, ಇವರಿಗೆ ಯಾವ ಲೆಕ್ಕ? ಸರ್ಕಾರ ಇದೆ, ಏನೋ ಕೊಡಲಿ ಬಿಡಿ ಎಂದು ಹೇಳುತ್ತಾರೆ. ಆದರೆ ಕೊಡುವ ವಿಚಾರದಲ್ಲಿ ಯೋಚನೆ ಮಾಡುವಂಥದ್ದು ನಮಗೆ ಇರಬೇಕಲ್ಲಾ, ಎಂದು ಹೇಳಿದರು. ಇದು ಬುದ್ಧಿವಂತಿಕೆಯಲ್ಲಿ

ಇರುವಂಥದ್ದು. ನಿಮ್ಮನ್ನು ಯಾರು ಹೊಗಳುತ್ತಾರೆ, ಯಾರು ನಿಮಗೆ ಹಾರ, ತುರಾಯಿಗಳನ್ನು ಹಾಕಿ ಆಕಾಶದೆತ್ತರಕ್ಕೆ ತೆಗೆದುಕೊಂಡು ಹೋಗುತ್ತಾರೆ. ಅವರಿಗೆ ಅಲ್ಲ, ಇವತ್ತು ಹಣವನ್ನು ಕೊಡುವುದಕ್ಕೆ ಟ್ರೆಜರಿ ಇರುವಂಥದ್ದು. ಯಾರು ಅಶಕ್ತರು ಇರುತ್ತಾರೆ ಅವರಿಗೆ ಕೊಡುವ ಬಗ್ಗೆ ಯೋಚನೆ ಮಾಡಿ. ಇದನ್ನು ಬಹುಶಃ ನಾನು ಮಾನ್ಯ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿ ಯಾಗಿದ್ದಾಗ ನೋಡಿರುವಂಥದ್ದು. ಈ ರೀತಿ ಯೋಚನೆ ಮಾಡುವಂಥ ಅಂತರಿಕವಾದ ಒಳನೋಟ ಮಾನ್ಯ ಮುಖ್ಯಮಂತಿಯವರಿಗೆ, ಆಡಳಿತ ನಡೆಸುವಂಥವರಿಗೆ ಇರಬೇಕು. ಎಲ್ಲೆಲ್ಲಿ ಹೋಗಿ ಹೇಳುತ್ತಾರೋ ಅಲ್ಲೆಲ್ಲಾ 3 ಕೋಟಿ, 5 ಕೋಟಿ, 8 ಕೋಟಿ, 10 ಕೋಟಿ, ಕೊಡುತ್ತೇನೆಂದು ಹೇಳು ವಂಥದ್ದು ಸರಿಯಲ್ಲವೆನ್ನುವ ಮಾತನ್ನು ಹೇಳುತ್ತೇನೆ. ನನಗೆ ಸಮಾಧಾನ ವಾಗಿರುವಂಥದ್ದನ್ನು ಹೇಳಿದೆ, ಆಶಾದಾಯಕವಾಗಿಯೂ ಇದೆಯೆಂದು ಹೇಳಿದೆ. ನನಗೆ education ಬಗ್ಗೆ ತುಂಬಾ ಆಸಕ್ತಿ ಇದೆ. ನಾನು Parliament ನಲ್ಲಿ ಹೆಚ್ಚಿಗೆ ಶಿಕ್ಷಣದ ಬಗ್ಗೆಯೇ ಮಾತನಾಡುತ್ತಿದ್ದೆ, ಏಕೆಂದರೆ ಇವತ್ತು ದೇಶದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಏನು ಅಸಮಾನತೆ ಇದೆ. ಅದು ಇವತ್ತು ಕೂಡ ಇಲ್ಲಿ ಇರುವಂಥ ಮೂಢನಂಬಿಕೆಗಳು, ಶೋಷಣೆ, ಧೌರ್ಜನ್ಯ, ದಬ್ಬಾಳಿಕೆ, ಇದಕ್ಕೆ ಕಾರಣ ನಮಗೆ ಜ್ಞಾನ ಇಲ್ಲದೇ ಇರುವುದು. Education is nothing but knowledge ಎಂದು ಇನ್ನೇನು ಇಲ್ಲ. ಈ ದೇಶಕ್ಕೆ ಡಾ: ಅಂಬೇಡ್ಕರ್ ರವರು ಸಂವಿಧಾನವನ್ನು ಬರೆದು ಕೊಟ್ಟಾಗ directive principles ನಲ್ಲಿ Compulsory and free education ಹೇಳಿದ್ದರು. ಕಡ್ಡಾಯ ಮತ್ತು ಉಚಿತ ಶಿಕ್ಷಣ ಕೊಡಬೇಕೆಂದು ಹೇಳಿದರು. ನಾವು 1950ನೇ ಇಸವಿಯಲ್ಲಿ directive principle ಅಳವಡಿಸಿಕೊಂಡು ನಾವು ಏನಾದರೂ ಅದಕ್ಕೆ ಒಂದು ಕಾಯಿದೆಯನ್ನು ಮಾಡಿ ತಂದು ಬಿಟ್ಟಿದ್ದರೆ, ಈ ದೇಶದ ಪರಿಸ್ಥಿತಿಯೇ ಬದಲಾವಣೆಯಾಗುತ್ತಿತ್ತು. ನನು ಜ್ಞಾನ, ತಿಳಿವಳಿಕೆ ಕೊರತೆ ಇದೆಯೆಂದು ಹೇಳಿದೆ. Education is nothing but knowledge. ಮಾಡಲಿಲ್ಲ, ಆನಂತರ ಈಗ ನಾವು ಸರ್ವ ಶಿಕ್ಷಣ ಅಭಿಯಾನದಲ್ಲಿ ತರುತ್ತಿರುವಂಥದ್ದು, ನೀವು 10 ನೇ ತರಗತಿಯವರೆಗೂ ಕಡ್ಡಾಯ ಶಿಕ್ಷಣ ಮಾಡೋಣವೆಂದು ಇವತ್ತು ಮಾಡಿದ್ದೀರಿ. ಇದು ತುಂಬಾ ಒಳ್ಳೆಯ ಕಾರ್ಯಕ್ರಮ, ನೀವು ಶಿಕ್ಷಣದ ಬಗ್ಗೆ ಹೆಚ್ಚು ಹೆಚ್ಚು ಒತ್ತನು ಕೊಡಬೇಕಾಗಿದೆ. ಆದರೆ ಶಿಕ್ಷಣವನ್ನು ಕೊಡುವ ಸಂದರ್ಭದಲ್ಲಿ ಬಿಸಿಯೂಟದ ಬಗ್ಗೆ ನಾನು

ಯೋಚನೆ ಮಾಡುತ್ತಿದ್ದೇನೆ. ನಾನು ಕೂಡ Central Government ನಲ್ಲಿ Food Minister ಆಗಿದ್ದೆ. ನಾನು ಮತ್ತು Human Resources Development Minister ಯಾವ ರೀತಿಯಲ್ಲಿ Mid day meals ಕೊಡಬೇಕೆಂಬ ಬಗ್ಗೆ ಮಾತನಾಡಿಕೊಂಡಿದ್ದೆವು. Mid day meals ಎಂದರೆ ಏನೋ ಒಂದು ತುತ್ತು ಕೊಡೋಣವೆಂದು ಅಲ್ಲ. drop out ಹೇಗೆ ಆಗುತ್ತದೆಂದು ನಮಗೆ ಗೊತ್ತಿದೆ. ಬಡತನದಲ್ಲಿರುವವರಿಗೆ ಗೊತ್ತಿದೆ, ಹಳ್ಳಿಗಾಡಿನಿಂದ ಆಯ್ಕೆಯಾಗಿರುವ ನಮಗೆ ಗೊತ್ತಿದೆ. ಇಂಥ ತಂದೆ ತಾಯಿಯರು ದುಡಿಯುವುದೇ ದೊಡ್ಡದು, ಮಗುವನ್ನು ಶಾಲೆಗೆ ಹೋಗಿ ಎಂದು ಹೇಳುವ ಆ ಬುದ್ಧಿ, ಯೋಚನೆ ಇರುವುದಿಲ್ಲ. ತಾವು ದುಡಿದು, ತಮ್ಮ ಹೊಟ್ಟೆಗೆ ಆ ಮಗುವಿನ ಹೊಟ್ಟೆಗೆ ಕೊಡಬೇಕೆನ್ನುವಂಥದ್ದನ್ನು ನೋಡುತ್ತಾರೆ. ಆ ತಂದೆ ತಾಯಿಗಳು ದುಡಿಯುವುದಕ್ಕೆ ಹೋದರೆ, ಈ ಮಕ್ಕಳು ಸೀಬೆಕಾಯಿಯನ್ನು ಆಡಿಕೊಂಡು ಎಲ್ಲೋ ನಿಂತಿರುತ್ತವೆ. ಅದಕ್ಕೋಸ್ಕರ Mid day meals ಮಾಡಿ, ಮಧ್ಯಾಹ್ನ nutrition food, ಪೌಷ್ಠಿಕ ಆಹಾರವೆಂದು ಏನಾದರೂ ಆಹಾರವನ್ನು ಕೊಟ್ಟರೆ ಆ ಮಕ್ಕಳು ಓಡಿ ಬರುತ್ತವೆ. ಅವರಿಗೆ ಊಟ ಕೊಡುವ ಮೂಲಕ ಶಿಕ್ಷಣದಲ್ಲಿ ಆಸಕ್ತಿಯನ್ನು ಬರಿಸಬೇಕು. ಅದಕ್ಕೆ ಪ್ರಾಥಮಿಕ ಹಂತದಲ್ಲಿ ಶಿಕ್ಷಣದಲ್ಲಿ ಆಸಕ್ತಿ ಬರಬೇಕೆಂಬ ರೀತಿಯಲ್ಲಿ ಕೊಡಬೇಕೆಂದು ನಾವು ಆಹಾರವನ್ನು ಕೊಡವಂಥದ್ದು. ಇದಕ್ಕೆ ಹಣವನ್ನು ಎಷ್ಟು ಖರ್ಚು ಮಾಡುತ್ತಿದ್ದೆವೆಂದರೆ ಕೇಂದ್ರ ಸರ್ಕಾರದಿಂದ 2009–10ನೇ ಸಾಲಿನಲ್ಲಿ 234 ಕೋಟಿ ರೂಪಾಯಿಗಳು, ರಾಜ್ಯ ಸರ್ಕಾರ ದಿಂದ 223 ಕೋಟಿ ರೂಪಾಯಿಗಳು, ಒಟ್ಟು 457 ಕೋಟಿ ರೂಪಾಯಿಗನ್ನು ಖರ್ಚು ಮಾಡುತ್ತಿದ್ದೇವೆ. ಇವತ್ತು ಈ 457 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂಥ ಒಂದು ಕಾರ್ಯಕ್ರಮಕ್ಕೆ ಒಂದು ಪ್ರತ್ಯೇಕವಾದಂಥ ಇಲಾಖೆ ಬೇಕು. ಇದು ತಮಿಳುನಾಡಿನಲ್ಲಿರುವಂಥದ್ದು. ಇದನ್ನು ಶಿಕ್ಷಣ ಇಲಾಖೆಯ ಮೇಸ್ಟ್ರುಗಳಿಗೆ ಕೊಡುವುದಕ್ಕೆ ಹೋಗಬೇಡಿ. ಇದು ಆಗುತ್ತಾ ಇಲ್ಲ, ಇಷ್ಟು ಕೋಟಿ ರೂಪಾಯಿಗಳ ಯೋಜನೆ ಬಹಳ ಯಶಸ್ವಿಯಾಗಿ ನಡೆಯಲು ಮಾನ್ಯ ಬಸವರಾಜ ಬೊಮ್ಮಾಯಿಯವರೆ. ನೀವು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿ, ಇದು ಬಹಳ ಮುಖ್ಯವಾದದ್ದು. ಶಿಕ್ಷಣದ ಬಗ್ಗೆ ಆಸಕ್ತಿ ಬಂದು ಸರ್ವ ಶಿಕ್ಷಣ ಅಭಿಯಾನಕ್ಕೆ ಬುನಾದಿ ಇರುವಂಥದ್ದು. ಆದ್ದರಿಂದ ಇದನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುವಂಥ ರೀತಿಯಲ್ಲಿ ಇದಕ್ಕೆ

Separate Directorate ಬೇಕು. Full fledged Minister ಬೇಕಾಗುತ್ತದೆ, Separate Secretariat ಕೊಡಬೇಕಾಗುತ್ತದೆ. ತಾವು ಇದರ ಬಗ್ಗೆ ಯೋಚನೆ ಮಾಡಿ. ಇದಕ್ಕೆ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂಥದ್ದು. ಇನ್ನು ಕೂಡ ಹೆಚ್ಚೆಚ್ಚು ಹಣವನ್ನು 10ನೇ ತರಗತಿಯವರೆಗೂ Mid day meals ಕೊಡಬೇಕಾದರೆ ಇಲ್ಲಿ ಲಕ್ಷಾಂತರ ಮಕ್ಕಳಿಗೆ ಇದನ್ನು ಕೊಡುವಂಥದ್ದು. ಈ ಒಂದು ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಪ್ರತ್ಯೇಕವಾದ ಒಂದು ಇಲಾಖೆಯನ್ನು ನೀವು ಮಾಡುವ ಬಗ್ಗೆ ಗಮನವನ್ನು ಕೊಡಬೇಕೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಇವತ್ತು university ಗಳ ಬಗ್ಗೆ ಹೇಳುವುದಾದರೆ, ಎಷ್ಟು university ಗಳು ಇವೆ. ಬಳ್ಳಾರಿ– ಕೊಪ್ಪಳ ಸೇರಿಸಿ ಒಂದು university, ತುಮಕೂರಿಗೆ ಒಂದು university, ಒಟ್ಟು ಎಷ್ಟು conventional university ಗಳು ಎಷ್ಟು ಇವೆಯೆಂದು ತಿಳಿದುಕೊಂಡಿದ್ದೀರಿ. ಬಳ್ಳಾರಿಯದು ಸೇರಿಸಿಕೊಂಡು ಒಟ್ಟು 9 university ಗಳು ಬಂದಿರುವಂಥದ್ದು. ಅವು ಮೈಸೂರು, ಬೆಂಗಳೂರು, ಮಂಗಳೂರು, ಶಿವಮೊಗ್ಗ, ದಾವಣಗೆರೆ, ಗುಲ್ಬರ್ಗಾ, ಧಾರವಾಡ, ತುಮಕೂರು, ಬಳ್ಳಾರಿಯಲ್ಲಿವೆ. ಇದರ ಜೊತೆಗೆ ಇನ್ನು ಏನು Sanskrit University ಬರುತ್ತಿದೆ, ಈಗಾಗಲೇ ಕನ್ನಡಕ್ಕೆ ಹಂಪೆ university ಇರುವಂಥದ್ದು, ಸಂಗೀತಕ್ಕೆ ಒಂದು university.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಚೇರ್ಮನ್‌ರವರೆ, ತಮಗೆ ಗೊತ್ತಿದೆ. UGC recommendation ಪ್ರಕಾರ ಇದು ಮಾನ್ಯ ಪರಮೇಶ್ವರ್ ರವರಿಗೂ ಗೊತ್ತಿದೆ. 60 ರಿಂದ 100 ಕಾಲೇಜುಗಳನ್ನೊಳಗೊಂಡಂತೆ ಒಂದು ವಿಶ್ವವಿದ್ಯಾಲಯವನ್ನು ಮಾಡಬೇಕೆಂದು ಹೇಳಿದ್ದಾರೆ. ಹಾಗಾಗಿ ನಾನು UGC Chairman ರನ್ನು ಭೇಟಿ ಮಾಡಿದಾಗ, ಅವರು ಕೂಡ ಇದನ್ನು insist ಮಾಡಿದರು. ಇದು UGC ಯಿಂದ ಬಂದಿರುವ recommendation ಆಗಿದೆ. ನಮ್ಮಲ್ಲಿ UGC recommendation ಪ್ರಕಾರ bifurcations ನಡೆಯುತ್ತಿದೆ. ತಮಗೆ ಗೊತ್ತಿರುವ ಹಾಗೆ ಕಳೆದ ವರ್ಷ ದಾವಣಗೆರೆಯಲ್ಲಿ ಮಾಡಿದ್ದೇವೆ, ಈ ವರ್ಷ ಬಳ್ಳಾರಿ–ಕೊಪ್ಪಳ ಸೇರಿಸಿ ಬಳ್ಳಾರಿ ವಿಶ್ವವಿದ್ಯಾಲಯವನ್ನು ಮಾಡಿದ್ದೇವೆ. ಇದೇ ರೀತಿ ಧಾರವಾಡ university ಯನ್ನು bifurcate ಮಾಡಿ ಬೆಳಗಾಂ ಮಾಡಬೇಕೆಂಬ proposal ಕೂಡ ಇದೆ. Bangalore

University ಯನ್ನು ಕೂಡ bifurcate ಮಾಡಿ, trifurcate ಮಾಡುವಂತ ಸನ್ನಿವೇಶವಿದೆ. ಇದನ್ನು insist ಮಾಡಿದ್ದರು. ಬಾಂಬೆ, ಬೆಂಗಳೂರು, ಈ ರೀತಿ ಎಲ್ಲಾ ಎರಡಲ್ಲ, ಮೂರು, ನಾಲ್ಕು university ಗಳನ್ನು ಮಾಡುವಂಥ ಪರಿಸ್ಥಿತಿ ಉದ್ಭವವಾಗಿದೆ ಎಂದು ಹೇಳಿದ್ದಾರೆ. ಹೀಗಾಗಿ ಆ recommendationನಲ್ಲಿ ಹೊಸದಾಗಿ ವಿಶ್ವವಿದ್ಯಾಲಯಗಳನ್ನು ಮಾಡುತ್ತಿದ್ದೇವೆ. ಇದು ಬೇರೆ ಉದ್ದೇಶದಿಂದ ಅಲ್ಲ, ಅದರಿಂದ ಹೆಚ್ಚು ಹಣವನ್ನು ಸರ್ಕಾರ ಶಿಕ್ಷಣಕ್ಕೆ ತೊಡಗಿಸುತ್ತಿದೆ. ಇದನ್ನು ತಾವು ಸ್ವಾಗತ ಮಾಡುತ್ತೀರೆಂದು ಭಾವಿಸುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಒಂದು university ಯಾವ ಮಟ್ಟದಲ್ಲಿ ನಡೆಯಬೇಕಾಗಿತ್ತೋ, ಆ ಮಟ್ಟಕ್ಕೆ higher education, ವಾತಾವರಣದಲ್ಲಿ ನಡೆಯಬೇಕು.

ಶ್ರೀ ಬಸವರಾಜ ಬೊಮ್ಮಾಯಿ : UGC Recommendation ಒಂದು ಕಡೆ, Central Government Knowledge Commission recommendation ಕೂಡ ಈಗ ಇರುವಂಥ ಜನಸಂಖ್ಯೆ ಮತ್ತು ಈಗ ಇರುವಂಥ ಕಾಲೇಜುಗಳ ಸಂಖ್ಯೆಯನ್ನು ನೋಡಿದಾಗ, ಈಗ ಇರುವಂಥ University ಗಳು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ we should have more Universities for a concentrated effort for higher education ಎನ್ನುವ ಒಂದು recommendation ಅನ್ನು Government of India ಕೊಟ್ಟಿದೆ. ಆ ಹಿನ್ನಲೆಯಲ್ಲಿ ನಮ್ಮ ಸಚಿವರು ಇವತ್ತು ಕ್ರಮಗಳನ್ನು ಜರುಗಿಸುತ್ತಿದ್ದಾರೆ. ಅವರು ಉದಾಹರಣೆಗೆ ಹೇಳಿದಂತೆ ಬೆಂಗಳೂರಿನಲ್ಲಿ trifurcation ಮಾಡಬೇಕೆನ್ನುವ ಬಗ್ಗೆ ತುಮಕೂರಿನಲ್ಲಿದೆ. ಬೆಂಗಳೂರಿನಲ್ಲಿ ಮೂರು University ಯನ್ನು ಮಾಡಬೇಕೆನ್ನು proposal UGC ಯಲ್ಲೂ ಇದೆ, ನಮ್ಮ Knowledge Commission ನಲ್ಲೂ ಇದೆ, Central Government Knowledge Commission ನಲ್ಲೂ ಕೂಡ ಇದೆ. ಈ ರೀತಿ ನಮ್ಮಲ್ಲಿ ಮಾತ್ರವಲ್ಲ, ಇಡೀ ರಾಷ್ಟ್ರದಲ್ಲಿದೆ. ಆ ಹಿನ್ನಲೆಯಲ್ಲಿ ಮಾಡಿರುವಂಥದ್ದು.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಉದ್ದೇಶ ಏನೇ ಇರಲಿ, ಈಗಿನ ಸ್ಥಿತಿಗತಿಗಳ ಹಿನ್ನಲೆಯಲ್ಲಿ ಹಣಕಾಸಿನ ಮುಗ್ಗಟ್ಟಿನ ಬಗ್ಗೆ ನಾನು

ಮಾತನಾಡುತ್ತಾ, ಈಗ ನಮಗೆ ಸಂಗೀತ University ಯನ್ನು ಕೊಟ್ಟಿದ್ದೀರಿ. ಅದಕ್ಕೆ ಇನ್ನೂ ಭೂಮಿಯೇ ಸಿಕ್ಕಿಲ್ಲ, ಪರದಾಡುತ್ತಿದೆ, open University ಇದೆ. Engineering ಗೆ ಬೇರೆ ಇದೆ, Medical education ಗೆ University ಬೇರೆ ಇದೆ, Agriculture University ಗಳು ಇವೆ. Conventional University ಗಳು ಇವೆ. ಇದರ ಪ್ರಕಾರ ಮಾಡಬೇಕೆಂದರೆ, ನಮಗೆ ಹಣಕಾಸಿನ ಸ್ಥಿತಿಗಳು ಮುಗ್ಗಟ್ಟು ಹೇಗಿದೆ ಎನ್ನುವ ಬಗ್ಗೆ ತಮ್ಮ ಗಮನವನ್ನು ಸೆಳೆಯುತ್ತಿರುವಂಥದ್ದು. ಈಗ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳು ಬೇಕು, ಅದನ್ನು ಮಾಡಿ. ನಮ್ಮಲ್ಲಿ ಇವತ್ತಿನವರೆಗೂ ಜಾತಿವಾರು ವಿದ್ಯಾರ್ಥಿ ನಿಲಯಗಳಲ್ಲೆ ಇರುವಂಥದ್ದು. ಇದಕ್ಕೆ ಕಾರಣಗಳು ಇದೆ. ಸಮಾಜ ಕಲ್ಯಾಣ ಇಲಾಖೆಯವರು ಹಾಸ್ಟೆಲ್‌ಗಳನ್ನು ನಡೆಸುತ್ತಿರುವಂಥದ್ದು ಮತ್ತು ತೀರಾ ಬಡವರಿಗೋಸ್ಕರ ಹಿಂದಿನಿಂದ ಬಂದಿರುವಂಥವರು. ಯಾವ ಜನಾಂಗ ದವರಿಗೆ ಅವರು ಸ್ಥಿತಿಗತಿಗಳಲ್ಲಿ ಉತ್ತಮವಾಗಿರುವವರು ಹಿಂದಿನಿಂದಲೂ ಪ್ರತ್ಯೇಕವಾದ ಹಾಸ್ಟೆಲ್‌ಗಳನ್ನು, ವಿದ್ಯಾರ್ಥಿ ನಿಲಯಗಳನ್ನು ನಡೆಸಿಕೊಂಡು ಬರುತ್ತಿರುವಂಥದ್ದು. ಆದರೆ ತಾವು ಹೊಸದಾಗಿ ಯೋಚನೆ ಮಾಡಿದ್ದೀರಿ. ಇದು ಚೆನ್ನಾಗಿದೆಯೆಂದು ಹೇಳುತ್ತೇನೆ, ಮಾದರಿಯಾದಂಥ ವಿದ್ಯಾರ್ಥಿ ನಿಲಯಗಳು ಬೇಕೆನ್ನುವಂಥದ್ದು, ಇದು ತುಂಬಾ ಒಳ್ಳೆಯ ಯೋಚನೆ ಯಾಗಿದೆ. ಎಲ್ಲಾ ವಿದ್ಯಾರ್ಥಿಗಳು, ಎಲ್ಲಾ ಜನಾಂಗದವರು ಈಗ ಪ್ರತ್ಯೇಕವಾಗಿ OBC, SC, ST ಈ ರೀತಿಯಲ್ಲಿ ಇದೆಯಲ್ಲಾ ಇದನ್ನು ನೋಡಿ, ವಿದ್ಯಾರ್ಥಿಗಳು ಕೂಡ ಒಂದು ಒಳ್ಳೆಯ ವಾತಾವರಣದಲ್ಲಿ ಅವರೆಲ್ಲರೂ ಎಂಬ ಭಾವನೆ ಬರಬೇಕೆನ್ನುವ ದೃಷ್ಟಿಯಿಂದ ತಾವು ಈಗ 10 ಜಿಲ್ಲೆಗಳಲ್ಲಿ ಮಾದರಿ ವಿದ್ಯಾರ್ಥಿ ನಿಲಯಗಳನ್ನು ಏನು ಮಾಡುತ್ತಿದ್ದೀರಿ, ಅದನ್ನು ಮಾಡಿ, ಅದಕ್ಕೆ ಹೆಚ್ಚಿನ ಹಣವನ್ನು ಕೊಡಿ.

ಕೇವಲ 10 ಜಿಲ್ಲೆಗಳಿಗಲ್ಲ, ಇನ್ನೂ ಹೆಚ್ಚು ಜಿಲ್ಲೆಗಳಿಗೆ ಹೆಚ್ಚು ಹಣವನ್ನು ಕೊಡಿ. ಇದರಲ್ಲಿ ಆಶಾದಾಯಕವಾದ ಕೆಲವು ವಿಚಾರಗಳಿವೆ ಎಂದು ನಾನು ಹೇಳಿದೆ. Tribal Sub Plan ಮತ್ತು Special Component Paln ಗಳ ಹೇಳುವುದಾದರೆ, Tribal Sub Plan ನಲ್ಲಿ ಕೂಡ ಸರಿಯಾಗಿ ಉಪಯೋಗ ಆಗಬೇಕು. Primitive tribes ಗೂ ಕೂಡ ನಾವು ಆದ್ಯತೆ ಮೇಲೆ ಮಾಡಬೇಕಾಗಿತ್ತು. Those who are living from the centuries

in the midst of forests, ಆ primitive tribes ಗೂ ಆದ್ಯತೆ ಕೊಡಬೇಕು. ಕೇಂದ್ರ ಸರ್ಕಾರದಲ್ಲಿ Tribal Sub Plan ಮಾಡಿ ಕೋಟ್ಯಾಂತರ ರೂಪಾಯಿಯನ್ನು ಕೊಡುತ್ತಿದ್ದಾರೆ, ಆದರೆ ಅದು ಅವರಿಗೆ ಹೋಗುತ್ತಿಲ್ಲ ಎನ್ನುವುದಿದೆ.

(ಈ ಹಂತದಲ್ಲಿ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಈ ಸಾರಿ ನೀವು Tribal Sub Plan ಮತ್ತು Special Component Plan ನಲ್ಲಿ ಹಣವನ್ನು ಹೆಚ್ಚು ಮಾಡಿದ್ದೀರಿ. ಸಮಾಜದ ಕೆಳಸ್ತರದಲ್ಲಿರತಕ್ಕಂಥವರಿಗೆ Special Component Plan ನಲ್ಲಿರುವುದನ್ನು ಯಾವ ರೀತಿ ಉಪಯೋಗವಾಗಬೇಕು ಎನ್ನುವುದನ್ನು ಮಾಡಬೇಕು. ಆರ್ಥಿಕವಾಗಿ ಸಬಲೀಕರಣವಾಗುವ ರೀತಿಯಲ್ಲಿ ಮಾಡಬೇಕು. ನಾನು ಕೇಂದ್ರದಲ್ಲಿದ್ದು ಬಂದಿರುವವನು. Globalization ಹಿನ್ನಲೆಯಲ್ಲಿ W.T.O. agreement ಆದಾಗ ನಾನೂ ಕೂಡ ಕೇಂದ್ರದಲ್ಲಿ ಸದಸ್ಯನಾಗಿದ್ದೆ ಮತ್ತು ಆ ಚರ್ಚೆಯಲ್ಲಿ ಭಾಗವಹಿಸಿದ್ದೆನು. ಜಾಗತೀಕರಣದ ಹಿನ್ನಲೆಯಲ್ಲಿ ನಾವು ಬಹಳ ಹತಾಶರಾಗಿದ್ದೇವೆ. ಈ competitive worldನಲ್ಲಿ ನಾವು ಸ್ಪರ್ಧಾತ್ಮಕವಾದಂಥ, ವೈಜ್ಞಾನಿಕವಾದಂಥ ಯುಗದಲ್ಲಿ ನಾವು ಮುಂದುವರೆದಂಥ ಬೇರೆ ಬೇರೆ ರಾಷ್ಟ್ರಗಳ ಜೊತೆಯಲ್ಲಿ ಪೈಪೋಟಿ ಮಾಡಲು ಸಾಧ್ಯವೇ ಎನ್ನುವ ಪ್ರಶ್ನೆ ಬಂದು ಭಯ ಬೀಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. Globalization ವಿಷಯದ ಮೇಲೆ ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಜಾಗತೀಕರಣದ ಹಿನ್ನಲೆಯಲ್ಲಿ ನಾವು ಏಕೆ ಹೆದರುತ್ತಿದ್ದೇವೆ ಎನ್ನುವುದನ್ನು ಹೇಳಿದೆ. I had been to America as Consumer Affairs Minister. ಅಲ್ಲಿ ನನಗೆ ಕರ್ನಾಟಕದ ಒಬ್ಬ ಪ್ರೊಫೆಸರ್‌ರವರು, ಚೈನೀಸ್ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್‌ಗೆ ಹೋಗಿ ನೀವು ನೋಡಬೇಕು ಎಂದು ಹೇಳಿದರು. ಅಲ್ಲಿ ನೋಡಿ ನನಗೆ ಆಶ್ಚರ್ಯವಾಯಿತು. ಅಲ್ಲಿ ಒಂದು, ಡಾಲರ್‌ಗೆ, ಚೈನಾ ದೇಶದಲ್ಲಿ ಉತ್ಪಾದನೆಯಾಗತಕ್ಕಂಥ ಎಲ್ಲ ರೀತಿಯ ವಸ್ತುಗಳು ಅದು groceries ಇರಬಹುದು, cosmetics ಇರಬಹುದು, ಎಲ್ಲವೂ ಸಿಗುತ್ತಿತ್ತು. It was so cheap. ಅಮೆರಿಕಾ ದೇಶದ ಮಧ್ಯಮ ವರ್ಗದ ಜನರು ಚೈನೀಸ್ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್‌ಗೆ ಮುಗಿಬೀಳುತ್ತಿರುತ್ತಾರೆ. Globalization

ಹಿನ್ನಲೆಯಲ್ಲಿ ಸ್ಪರ್ಧೆ ಇರುವುದು ಇಷ್ಟೇ, cost of production and quality. ಉತ್ಪಾದನಾ ವೆಚ್ಚ ಕಡಿಮೆ ಇರಬೇಕು, ಗುಣಮಟ್ಟ ಚೆನ್ನಾಗಿರಬೇಕು. ನಮ್ಮಲ್ಲಿ ಇದು ಏಕೆ ಆಗುತ್ತಿಲ್ಲ ಎಂದು ನಾವು ಯೋಚನೆ ಮಾಡಿದಾಗ, ಚೈನಾ ದೇಶದಲ್ಲಿರುವವರ ಪ್ರತಿಯೊಬ್ಬನ ಕೈಗೂ ಕೂಡ ಉತ್ಪಾದನೆ ಮಾಡುವ ನಿಟ್ಟಿನಲ್ಲಿ ಕೆಲಸ ಸಿಗುತ್ತದೆ. ಆದರೆ ಇವತ್ತು ನಮ್ಮ ದೇಶದಲ್ಲಿ ಹಾಗೆ ಆಗುತ್ತಿಲ್ಲ. ಉದಾಹರಣೆಗೆ, ಪರಿಶಿಷ್ಟ ಜಾತಿಯನ್ನೇ ತೆಗೆದುಕೊಳ್ಳಿ, 30–35% ಇರುವ ಇವರನ್ನು ಎಂದಾದರೂ ಈ ದೇಶದ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿ ರುವಿರೇನು? ನೀವು ಏಕೆ ಹೆದರುತ್ತೀರಿ? ಇವರು ಇನ್ನೂ ಕೂಲಿ–ನಾಲಿ ಮಾಡಿಯೇ ಬದುಕಬೇಕು. Scheduled caste ನಲ್ಲಿರುವ ಒಂದು ಉಪ ಜನಾಂಗದವರು ಕಸ ಗುಡಿಸಿಕೊಂಡೇ ಇರಬೇಕು. ಅವರು ಈ ದೇಶದ ಉತ್ಪಾದನಾ ಕ್ಷೇತ್ರಕ್ಕೆ ಬರಲು ಆಗುತ್ತಿಲ್ಲ. ಉತ್ಪಾದನಾ ಕ್ಷೇತ್ರದಲ್ಲಿ ಆತನಿಗೆ ಅವಕಾಶಗಳೇ ಇಲ್ಲದೇ ಅವನನ್ನು ಒಂದು ಕಡೆ ಕೂರಿಸಿಬಿಟ್ಟಿರುವುದಾಗಿದೆ. ಹೀಗಿರುವಾಗ ನೀವು ಹೇಗೆ compete ಮಾಡಲು ಆಗುತ್ತದೆ? ಈ ದೇಶದಲ್ಲಿ ಪ್ರತಿಯೊಬ್ಬನನ್ನೂ ಕೂಡ ಉತ್ಪಾದನೆಯಲ್ಲಿ ತೊಡಗಿಸಿದಾಗ ಮಾತ್ರ ಉತ್ಪಾದನೆ ಜಾಸ್ತಿಯಾಗುತ್ತದೆ, ಆಗ ನಾನು ಹೇಳಿದ ಹಾಗೆ cost of production ಕಡಿಮೆಯಾಗುತ್ತದೆ, ಗುಣಮಟ್ಟ ಚೆನ್ನಾಗಿರುತ್ತದೆ. ಚೈನಾ ದೇಶದಲ್ಲಿ ಈ ರೀತಿಯಾಗುತ್ತಿರುವುದನ್ನು ನೋಡಿದಾಗ, ಬಹುಶಃ ಇದರಿಂದಾಗಿಯೇ ನಮ್ಮಲ್ಲಿ ಆಗುತ್ತಿಲ್ಲ ಎಂದು ನನಗೆ ಯೋಚನೆಯಾಯಿತು. ಆರ್ಥಿಕವಾಗಿ ಸಬಲೀಕರಣ ಆಗಬೇಕು. ಇದು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ, ಕೇಂದ್ರ ಇರಬಹುದು ಅಥವಾ ಬೇರೆಬೇರೆ ರಾಜ್ಯ ಸರ್ಕಾರಗಳು ಆರ್ಥಿಕ ಸಬಲೀಕರಣ ಆಗುವ ರೀತಿಯಲ್ಲಿ, ಇವರನ್ನು ಉತ್ಪಾದನೆಯಲ್ಲಿ ತೊಡಗಿಸಿಕೊಂಡು ನೀವು Special Component Plan ನಲ್ಲಿ ಅಥವಾ ಬೇರೆ ಬೇರೆ ರೀತಿಯಲ್ಲಿ ಅವಕಾಶವನ್ನು ಕೊಡಬೇಕು. ಇದು ಆದಾಗ ಮಾತ್ರ ಒಂದು ಅರ್ಥವಿರುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುತ್ತೇನೆ. ಕೊನೆಯದಾಗಿ, ಬೊಮ್ಮಾಯಿಯವರು ಹೇಳಿದ ಹಾಗೆ ಇದು ಬಹುಮತ ಇರತಕ್ಕಂಥ ಸರ್ಕಾರ. ಆದರೆ ಒಂದು vision ಇರಬೇಕಲ್ಲವೇ? ಯಾವ ಯಾವ ವರ್ಗಕ್ಕೆ ಏನೇನು ಬೇಕು ಎನ್ನುವುದನ್ನು ಬಜೆಟ್‌ನಲ್ಲಿ ಮಾಡುತ್ತೇವೆ. ಅದು below poverty line ಇರಬಹುದು,

higher income group ಇರಬಹುದು, ಮಧ್ಯಮ ವರ್ಗದವರಿಗೆ ಇರಬಹುದು ಎಲ್ಲರಿಗೂ ಕಾರ್ಯಕ್ರಮಗಳನ್ನು ಮಾಡುತ್ತೇವೆ. ಇದರ ಜೊತೆಗೆ, ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿ, ಐದು ವರ್ಷಗಳ ಅವಧಿಯಲ್ಲಿ ನಾವು ಇಂಥ ಕಾರ್ಯಕ್ರಮವನ್ನು ಮಾಡಿಯೇ ಮಾಡುತ್ತೇವೆ ಎನ್ನುವ ನಿಲುವು ಏಕೆ ಸರ್ಕಾರಕ್ಕೆ ಬರುತ್ತಿಲ್ಲ? ಉದಾಹರಣೆಗೆ ಹೇಳುವುದಾದರೆ ಕೊಳಗೇರಿಗಳು. ಸೂರ್ಯ–ಚಂದ್ರರಿರುವವರೆಗೂ ಈ ದೇಶದಲ್ಲಿ ಕೊಳಗೇರಿಗಳು ಇರಲೇಬೇಕೇ? ಐದು ವರ್ಷಗಳಲ್ಲಿ ಕೊಳಗೇರಿಗಳು ಇಲ್ಲದೇ ಇರುವ ರೀತಿಯಲ್ಲಿ ಅಲ್ಲಿರುವವನ್ನು ಪೂರ್ಣವಾಗಿ rehabilitation ಮಾಡುತ್ತೇವೆ, ಅವರಿಗೆ ಎಲ್ಲಾ ನಾಗರೀಕ ಸೌಲಭ್ಯಗಳನ್ನು ಕೊಡುತ್ತೇವೆ ಎನ್ನುವ ರಾಜಕೀಯ ಇಚ್ಛಾಶಕ್ತಿ ಏಕೆ ನಮಗಿಲ್ಲ? ಐದು ವರ್ಷಗಳಲ್ಲಿ ಇದನ್ನು ಮಾಡುವುದಕ್ಕೆ ನಿಮಗೆ ಸಾಧ್ಯವಿಲ್ಲವೇ? ಆ ರೀತಿಯಾದಂಥ ಒಂದು ಕಾರ್ಯಕ್ರಮವನ್ನೂ ನಾವು ಹಾಕಿಕೊಂಡಿಲ್ಲ. ಕೇರಳದ ರೀತಿಯಲ್ಲಿ literacy programme ಏಕೆ ಮಾಡಬಾರದು? ಐದು ವರ್ಷಗಳಲ್ಲಿ ಕರ್ನಾಟಕವನ್ನು ಸಂಪೂರ್ಣ ಸಾಕ್ಷರತಾ ರಾಜ್ಯವನ್ನಾಗಿ ಮಾಡುತ್ತೇವೆ ಎನ್ನುವ ರಾಜಕೀಯ ಶಕ್ತಿ ಏಕಿರಬಾರದು? ಬಹುಮತವಿರುವಂಥ ಸರ್ಕಾರ, ನಾವು ಐದು ವರ್ಷಗಳ ಕಾಲ ಆಡಳಿತ ನಡೆಸುತ್ತೇವೆ ಎನ್ನುವುದು ನಿಮ್ಮ ಮನಸ್ಸಿನಲ್ಲಿದ್ದರೆ ಈ ರೀತಿಯಾದಂಥ ಒಂದು vision ಅಥವಾ ಕನಸುಗಳನ್ನಿಟ್ಟುಕೊಂಡು ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿದರೆ ಖಂಡಿತವಾಗಿ ಆಗುತ್ತದೆ. ಆ ರೀತಿಯ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಲು ಇನ್ನು ಮೇಲಾದರೂ ಪ್ರಯತ್ನ ಮಾಡಿ. ಈಗ ನೀವು ಅಧಿಕಾರಕ್ಕೆ ಬಂದು ಎರಡು ವರ್ಷಗಳಾಗಿದೆ, ಇನ್ನೂ ಮೂರು ವರ್ಷವಿದೆ. ಮೂರು ವರ್ಷಗಳಲ್ಲಿ ಇಂಥ ಕಾರ್ಯಕ್ರಮವನ್ನು ನಾವು ಮಾಡಿಯೇ ಮಾಡುತ್ತೇವೆ ಎಂದು ಸ್ಪಷ್ಟವಾಗಿ ಹೇಳಿ. ಅದು literacy ಇರಬಹುದು ಅಥವಾ ಸ್ಲಂಗಳನ್ನು ತೆಗೆಯುವುದು ಇರಬಹುದು ಅಥವಾ ಗುಡಿಸಲು ರಹಿತ ಗ್ರಾಮೀಣ ಪ್ರದೇಶಗಳನ್ನು ಮಾಡುವುದು ಇರಬಹುದು. ಒಂದು ನಿರ್ದಿಷ್ಟವಾದಂಥ ರೀತಿಯಲ್ಲಿ ಈ ರೀತಿಯ ಕಾರ್ಯಕ್ರಮಗಳನ್ನು ನೀವು ಹಾಕಿಕೊಳ್ಳಬೇಕು, ಈ ಬಗ್ಗೆ ನೀವು ಯೋಚನೆಯನ್ನು ಮಾಡಬೇಕು ಎಂದು ಹೇಳುತ್ತೇನೆ. ಬಜೆಟ್‌ನಲ್ಲಿ ಎಲ್ಲೋ ಒಂದು ಮಾಡುವುದು, ಒಂದು ಬಿಡುವುದು ಮಾಡುವುದಕ್ಕಿಂತ ಇದನ್ನು ತಾವು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು, ಬಜೆಟ್ ಬಗ್ಗೆ ಸಿದ್ದರಾಮಯ್ಯನವರು ತುಂಬ ಚೆನ್ನಾಗಿ ಮಾತನಾಡಿದ್ದಾರೆ. ಬಜೆಟ್‌ನಲ್ಲಿ Plan and Non Plan ಎರಡೂ ಸೇರಿ 70,063 ಕೋಟಿ ರೂಪಾಯಿಗಳಿದೆ. Planning ಗೆ 45%, Non Planning ಗೆ 55% ಇಟ್ಟಿದ್ದಾರೆ. Non Plan ನಲ್ಲಿ ಸಂಬಳ ಸಾರಿಗೆಗಳು, ಸಾಲದ ಬಡ್ಡಿ ಇವುಗಳನ್ನೆಲ್ಲ ಕಟ್ಟುವುದಕ್ಕೆ ಹೋಗುತ್ತದೆ. ಯೋಜನಾ ವೆಚ್ಚಕ್ಕೆ 31,000 ಕೋಟಿ ರೂಪಾಯಿ, ಯೋಜನೇತರ ವೆಚ್ಚಕ್ಕೆ 39,063 ಕೋಟಿ ರೂ.ಗಳನ್ನು ಇಟ್ಟಿದ್ದಾರೆ. ಅರ್ಥಶಾಸ್ತ್ರದ ಹಿನ್ನಲೆಯಲ್ಲಿ ನಾವು ಯೋಚನೆ ಮಾಡಿದಾಗ, ಯೋಜನೆಗೆ ಹೆಚ್ಚು ಹಣ ಕೊಟ್ಟು, ಯೋಜನೇತರಕ್ಕೆ ಕಡಿಮೆ ಕೊಡುವುದು ಇದ್ದರೆ ಅದು ಅತ್ಯುತ್ತಮವಾದ ವ್ಯವಸ್ಥೆಯಾಗುತ್ತದೆ. ಆದರೆ ಅದು ಸಾಧ್ಯವಾಗುತ್ತಿಲ್ಲ. ಬೇರೆಬೇರೆ ರಾಜ್ಯಗಳಲ್ಲೂ ಅದು ಆಗುತ್ತಿಲ್ಲ. ಕಳೆದ ಸಾರಿಯೂ ನಾನು ಆಂಧ್ರ ಪ್ರದೇಶಕ್ಕೆ ಸಂಬಂಧಪಟ್ಟಂತೆ ಹೇಳಿದಾಗ, don't compare Andhra Pradesh with Karnataka ಎಂದು ಹೇಳಿದರು. ಆಂಧ್ರ ಪ್ರದೇಶದಲ್ಲಿ ಶೇ. 40% ರಷ್ಟು ಅಂದರೆ ಸುಮಾರು 22,000 ಕೋಟಿ ರೂಪಾಯಿಗಳನ್ನು ನೀರಾವರಿಗೆ ಕೊಟ್ಟಿದ್ದಾರೆ. ಆದರೆ ನಾವು ಇಲ್ಲಿ ನೀರಾವರಿಗೆ ಶೇ.14 ರಷ್ಟು ಮಾತ್ರ ಅಂದರೆ 4,428 ಕೋಟಿ ರೂಪಾಯಿ ಗಳನ್ನು ಕೊಟ್ಟಿದ್ದೇವೆ. ಸಿದ್ದರಾಮಯ್ಯನವರು ಮಾತನಾಡುತ್ತಾ, ಕಾವೇರಿ, ಕೃಷ್ಣ ನದಿ ಪಾತ್ರದ ಯೋಜನೆಗಳಿಗೆ ಸುಮಾರು 50,000 ಕೋಟಿ ರೂಪಾಯಿ ನಮಗೆ ಬೇಕಾಗುತ್ತದೆ ಎಂದು ಹೇಳಿದರು. ಇನ್ನು ಹೂಳು ಎತ್ತುವುದು ಬೇರೆಯದೆಲ್ಲವನ್ನು ತೆಗೆದುಕೊಂಡರೆ ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇವತ್ತು ಹೆಚ್ಚಿನ ಆದ್ಯತೆಯನ್ನು ನೀವು ನೀರಾವರಿಗೆ ಕೊಬೇಕಾಗಿತ್ತು. ಈಗ ಕೊಟ್ಟಿರುವುದು ಸಾಲಲಿಲ್ಲ. ಏಕೆಂದರೆ, ಈಗಾಗಲೇ ಆಹಾರ ಉತ್ಪಾದನೆ ಕಡಿಮೆಯಾಗಿದೆ. 118 ಮಿಲಿಯನ್ ಟನ್ ಆಹಾರ ಧಾನ್ಯ ಉತ್ಪಾದನೆಯಾಗುತ್ತದೆ ಎಂದು ನಾವು ನಿರೀಕ್ಷೆ ಮಾಡಿದ್ದರೂ, 106 ಮಿಲಿಯನ್ ಟನ್ ಬಂದಿದೆ. ಒಂದು ಕಡೆ ನಾವು ಹಸಿರು ಕ್ರಾಂತಿ ಬಗ್ಗೆ ಮಾತನಾಡುತ್ತೇವೆ, ಇನ್ನೊಂದು ಕಡೆ ನೀರಾವರಿ ಯೋಜನೆಗಳಿಗೆ ನಿರೀಕ್ಷೆ ಮಾಡಿದಷ್ಟು ಹಣವನ್ನು ಕೊಡುವುದಕ್ಕೆ ಆಗುತ್ತಿಲ್ಲ ಎನ್ನುವುದನ್ನು ಹೇಳಿದ್ದಾರೆ. ನೀರಾವರಿಗೆ ಹೆಚ್ಚಿಗೆ ಹಣ ಕೊಡಬೇಕಾಗಿತ್ತು.

ಇನ್ನು, ಕೈಗಾರಿಕೆಗಳ ವಿಷಯಕ್ಕೆ ಬಂದರೂ ಸಹ, ಕೈಗಾರಿಕೆಗಳಿಗೆ ನಾವು ಪ್ರೋತ್ಸಾಹ ಕೊಡಬೇಕು, ನಿಜ. ಬೇಡ ಎಂದು ನಾವು ಹೇಳಲಿಲ್ಲ. ಆದರೆ ಫಲವತ್ತಾದ ಭೂಮಿಯನ್ನು ರೈತರಿಂದ ತೆಗೆದುಕೊಳ್ಳಬಾರದು ಎಂದು ಹೇಳುತ್ತೇನೆ. Special Economic Zone ಮಾಡುವಾಗಲೂ ನೀವು ಬಂಜರು ಭೂಮಿಯನ್ನು ಕೊಡಬೇಕು ಅಥವಾ ನಿರುಪಯೋಗವಾಗಿರುವಂಥ ಜಮೀನನ್ನು ಕೊಡಬೇಕು ಅಥವಾ ರೈತರಿಗೆ ಬೇರೆ ಕಡೆ ಜಮೀನನ್ನು ಕೊಟ್ಟು ಅವರನ್ನು ಒಲಿಸಿ ತೆಗೆದುಕೊಳ್ಳಬೇಕು. ಮುಖ್ಯಮಂತ್ರಿಯವರ ಕೈಗಾರಿಕಾ ನೀತಿ ಅಷ್ಟು ಚೆನ್ನಾಗಿ ಕಾಣಲಿಲ್ಲ. ಉದ್ಯಮಿಗಳಿಗೆ ಯಾವುದೇ ರೀತಿಯಾದ ಷರತ್ತು ಹಾಕಬಾರದು ಎನ್ನುವುದೆಲ್ಲ ಸರಿಯಿಲ್ಲ. ಅವರಿಗೆ ನಾವು ಭೂಮಿ ಕೊಡುತ್ತೇವೆ, ನೀರು ಕೊಡುತ್ತೇವೆ, ವಿದ್ಯುತ್ ಕೊಡುತ್ತೇವೆ, ಬೇಕಾದ ಸೌಲಭ್ಯಗಳನ್ನು ಕೊಡುತ್ತೇವೆ. ಸರೋಜಿನಿ ಮಹಿಷಿ ವರದಿಯ ಮೇಲೆ ನಾನು ಕೂಡ ಪ್ರಸ್ತಾಪ ಮಾಡಿ ಲೋಕಸಭೆಯಲ್ಲಿ ಭಾಷಣ ಮಾಡಿದ್ದೆ. ಇಲ್ಲೂ ಕೂಡ, ಉದ್ಯಮಿಗಳು ಈ ನೆಲದಿಂದ ಪಡೆಯತಕ್ಕ ಪ್ರಯೋಜನಗಳು, ಸೌಲಭ್ಯಕ್ಕೆ ಪ್ರತಿಯಾಗಿ ನಮಗೆ ನೀವು ಇಲ್ಲಿನವರಿಗೆ ಹೆಚ್ಚಿನ ರೀತಿಯಾದಂಥ ಅವಕಾಶ ಗಳನ್ನು ಕೊಡಬೇಕು, ನಿರುದ್ಯೋಗದ ಸಮಸ್ಯೆಯನ್ನು ಬಗೆಹರಿಸತಕ್ಕಂಥ ನಿಟ್ಟಿನಲ್ಲಿ ಹೆಚ್ಚಿನ ಕೆಲಸಗಳನ್ನು ಕೊಡಬೇಕು ಎನ್ನುವುದನ್ನು ಕೂಡ ಹೇಳಿದೆ. ಮುಖ್ಯಮಂತ್ರಿಯವರು ಆ ರೀತಿ ಹೇಳಬಾರದಿತ್ತು. ನಾವು ಎಲ್ಲೆಲ್ಲಿ ಕೈಗಾರಿಕೆಗೆ ಪ್ರೋತ್ಸಾಹ ಕೊಟ್ಟು, ಉತ್ತೇಜನ ಕೊಟ್ಟು ಕೊಡುತ್ತೇವೋ ಅಲ್ಲಿ ಹೆಚ್ಚಿನ ರೀತಿಯಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ಅವರು ಕೊಡಬೇಕು. ಹಸಿರು ಕ್ರಾಂತಿ ಬಗ್ಗೆ ಮಾತನಾಡಿದರೆ ಆಗುವುದಿಲ್ಲ. ನೀರಾವರಿ, ವಿದ್ಯುತ್, ಕೃಷಿಗೆ ಹೆಚ್ಚು ಹೆಚ್ಚು ಒತ್ತನ್ನು ಈ ಬಜೆಟ್‌ನಲ್ಲಿ ಕೊಡಬೇಕಾಗಿತ್ತು. ಆದರೆ, ತುಂಬಾ ಕಡಿಮೆ ಒತ್ತು ಇರುವುದನ್ನು ನಾವು ಇದರಲ್ಲಿ ನೋಡುತ್ತಿದ್ದೇವೆ. ಇನ್ನು, ತೆರಿಗೆ ಬಗ್ಗೆ ಸಿದ್ದರಾಮಯ್ಯನವರು ಹೇಳಿದ್ದಾರೆ. Vat raise ಮಾಡಬೇಕಾಗಿತ್ತು, 1% ಹೆಚ್ಚು ಮಾಡಿದ್ದೀರಿ. ಆದರೆ, ಈ ಸಾರಿ ಹೆಚ್ಚಿಸುವುದು ಬೇಕಾಗಿರಲಿಲ್ಲವೆಂದು ಕಾಣಿಸುತ್ತದೆ. ಏಕೆಂದರೆ, ವಿಶ್ವ ಆರ್ಥಿಕ ಹಿಂಜರಿತ ದಿಂದ ಶ್ರೀಸಾಮಾನ್ಯ ಬಹಳ ಕೆಳಮಟ್ಟಕ್ಕೆ ಹೋಗಿದ್ದಾನೆ, ಬೆಲೆಗಳು ತುಬಾ ಏರಿವೆ, ಅಂತರಾಷ್ಟ್ರೀಯ ಮಟ್ಟದಲ್ಲಿ Petrol, diesel ಬೆಲೆ ಜಾಸ್ತಿಯಾಗಿದ್ದ ರಿಂದ ಕೇಂದ್ರ ಸರ್ಕಾರದವರು ಸಹ ಬೆಲೆ ಏರಿಸಿದಂಥ ಸಂದರ್ಭದಲ್ಲಿ ಇವತ್ತು ಪದಾರ್ಥಗಳ ಬೆಲೆ ವಿಪರೀತ ಏರತಕ್ಕಂಥ ಸಮಯದಲ್ಲಿ ಇಲ್ಲಿ

VAT ಅನ್ನು 1% tax ಜಾಸ್ತಿ ಮಾಡಿದ್ದೀರ. ಅದರ ಪರಿಣಾಮ ನೇರವಾಗಿ ಶ್ರೀಸಾಮಾನ್ಯ ಮೇಲೆ ಪರಿಣಾಮ ಬೀರುತ್ತದೆ. ಅದು ಆಗಬಾರದು. ಈ ಸಲ VAT ಮೇಲೆ tax ಹಾಕುವುದು ಬೇಕಾಗಿರಲಿಲ್ಲ. But, additional revenue ಮಾಡಬೇಕೆಂದು ನೀವು ಅದರ ಮೇಲೆ tax ಹಾಕಿದ್ದೀರಿ. ಏಕೆಂದರೆ, stamp, ನೋಂದಣಿ ಇದೆಲ್ಲ ಆಗುತ್ತಿಲ್ಲ, real estate business ಬಿದ್ದುಹೋಗಿದೆ, Chief Minister ರವರು Commercial tax ಬಗ್ಗೆ ಅಷ್ಟೊಂದು ಆಸಕ್ತಿ ತೋರಿಸಿದ ಹಾಗೆ ಕಾಣುವುದಿಲ್ಲ. ಎಷ್ಟು ತೆರಿಗೆ ಬರುತ್ತಿದೆ, ಎಷ್ಟು ಸಂಗ್ರಹ ಆಗಬೇಕಾಗಿತ್ತು ಎನ್ನುವುದನ್ನು ಬಜೆಟ್‌ನಲ್ಲಿ ಕೊಟ್ಟಿಲ್ಲ. ಮೋಟಾರು ವಾಹನಗಳ ಮೇಲೆ ಹೆಚ್ಚಿಗೆ ತೆರಿಗೆ ಹಾಕಿದ್ದೀರಿ. ನೀವ ಏನಿದ್ದರೂ ಕೂಡ ಅಬಕಾರಿ ಬಗ್ಗೆ ಯೋಚನೆ ಮಾಡಬೇಕು. ಅದು ಎಂತಹ ಅಪಾಯಕಾರಿ ಎಂದರೆ, ನಿಮಗೆ ಅಬಕಾರಿಯಿಂದ ಹಣ ಬರಬಹುದು. ಆದರೆ, ನೀವು ಸಾರಾಯಿ ನಿಲ್ಲಿಸಿದ್ದೇಕೆ? ಹಳ್ಳಿಗಳಲ್ಲಿ ನೆಮ್ಮದಿಯಿಲ್ಲ. ಹೆಂಗಸರು, ಮಕ್ಕಳ ಬದುಕಲಿಕ್ಕಾಗುತ್ತಿಲ್ಲ. ಅವರು ನಮ್ಮ ಹತ್ತಿರ ಬಂದು ಮನವಿ ಕೊಡುತ್ತಾರೆ.

(1- 00 PM)

ಅವರ ಕಣ್ಣೀರು ಒರೆಸಬೇಕಾಗಿದೆ. ಸಾರಾಯಿ ನಿಷೇಧ ಮಾಡಿದ್ದ ರಿಂದ ಏನಾಗಿದೆ ಎಂಬುದು ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಮನೆಮನೆಗಳಲ್ಲಿ ಇವತ್ತು ಕಡಿಮೆ ದರದಲ್ಲಿ ಅಂದರೆ 30–40 ರೂಪಾಯಿ ಗಳನ್ನು ಕೊಟ್ಟು ಬ್ರಾಂದಿ, ವಿಸ್ಕಿ ಕುಡಿಯುತ್ತಿದ್ದಾರೆ. ಹಳ್ಳಿಗಳಲ್ಲಿ ಯಾವ ರೀತಿ ಹಾವಳಿಯಾಗಿದೆ ಎನ್ನುವುದನ್ನು ನೋಡಬಹುದು. ಕುಡಿಯುವುದು ಜಾಸ್ತಿಯಾಗಿದೆ, ಅದರಿಂದ ಆದಾಯ ಹೆಚ್ಚು ಬರುತ್ತದೆಂದು ಹೇಳಬೇಕೇ ಹೊರತು, ಇವತ್ತು ಹಳ್ಳಿಗಾಡಿನಲ್ಲಿ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ ಸಂಜೆಯಾದ ಮೇಲೆ ನಾವು ನೀವು ಅಲ್ಲಿ ಹೋಗುವುದಕ್ಕೆ ಆಗುತ್ತದೆಯೇ? ನೆಮ್ಮದಿಯಾದಂಥ ಬದುಕು ಇದೆಯೇನು? ಯಾವುದೇ ಕುಟುಂಬದಲ್ಲಿ ಇವತ್ತು ನೆಮ್ಮದಿಯಿಂದ ಇದ್ದಾರೆಯೇ? ಇಲ್ಲ. ಅದಕ್ಕೆ ಕಟ್ಟುನಿಟ್ಟಾದ ರೀತಿಯಲ್ಲಿ ಅಬಕಾರಿ ಇಲಾಖಾ ವತಿಯಿಂದ ಯಾವ ರೀತಿಯಾಗಿ ಗ್ರಾಮೀಣ ಪ್ರದೇಶದ ಜನರಿಗೆ ತೊಂದರೆಯಾಗದ ರೀತಿಯಲ್ಲಿ ಈ ಅಬಕಾರಿಯಲ್ಲಿ ಇದು ಮಾರಾಟ ಬಹುಶಃ ಆಗಬೇಕಾಗಿತ್ತು, ಇವತ್ತು ತುಂಬಾ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಿರಿ, ಆದರೆ, ನಿಮಗೇನು ಅಂದರೆ ಅಬಕಾರಿ ಇಲಾಖೆ ಯಿಂದ ಜಾಸ್ತಿಯಾಗಿದೆ ಎನ್ನುವುದು ಒಂದು ಇದೆ. ಬಹುಶಃ ಇದರ ಕಡೆಗೆ

ಹೆಚ್ಚು ಗಮನ ಕೊಡಬೇಕು. ಇನ್ನು, ನಗರಾಭಿವೃದ್ಧಿಗೆ ಹಣ ಇಟ್ಟಿದ್ದೀರಿ. ಮಾನ್ಯ ಅಶೋಕ್‌ರವರು ಮಾತನಾಡುತ್ತಾ, ಬೆಂಗಳೂರಿನಲ್ಲಿ ಮನೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೀರಿ, ಏಕೆ ಇಲ್ಲಿಗೆ ಹೆಚ್ಚಿಗೆ ಕೊಡಬಾರದು? ಎಂದು ಹೇಳಿದರು. ಕೊಡಿ. ಆದರೆ, ಇಷ್ಟು ಹಣ ಕೊಟ್ಟಿರುವಂಥದ್ದು ಸರಿಯಲ್ಲ. ನಗರಾಭಿವೃದ್ಧಿಗೆ 32% ಅಂದರೆ 4748 ಕೋಟಿ ರೂಪಾಯಿಗಳು, ಗ್ರಾಮೀಣ ಪ್ರದೇಶಕ್ಕೆ 1563 ಕೋಟಿ ರೂಪಾಯಿಗಳು ಅಂದರೆ ಗ್ರಾಮೀಣ ಪ್ರದೇಶಕ್ಕೆ 4.86% ಕೊಟ್ಟಿದ್ದೀರಿ. ಈ ರೀತಿಯ ತಾರತಮ್ಯವನ್ನು ನೀವು ಬಿಡಬೇಕು. ನೀವು ವಸತಿ ಬಗ್ಗೆಯೂ ಕೂಡ ಗಮನ ಕೊಡಬೇಕಾಗಿದೆ. ಆಶ್ರಯ ಯೋಜನೆಯಲ್ಲಿ ನೀವು ಯಾವುದೇ ಮನೆ ಅಥವಾ ಸೈಟುಗಳನ್ನು ಬಡವರಿಗೆ ಕೊಟ್ಟಿಲ್ಲ. ಇದರ ಬಗ್ಗೆ ಕೂಡ ನೀವು ಗಮನಹರಿಸಬೇಕಾಗಿತ್ತು. ವಸತಿಗೆ ಬಜೆಟ್‌ನಲ್ಲಿ ಕೇವಲ 2.83% provision ಮಾಡಿದ್ದೀರಿ. ಇನ್ನೂ ಕೂಡ ಹೆಚ್ಚಿಗೆ ಕೊಡಬೇಕಾಗಿತ್ತು. ಜನಸ್ಪಂದನಾ ಕಾರ್ಯಕ್ರಮದಲ್ಲಿ, ಸಂಧ್ಯಾ ಸುರಕ್ಷಾ ಅಥವಾ ಬೇರೆ ಬೇರೆ ರೀತಿಯ ಯೋಜನೆಗಳಲ್ಲಿ ಜನರು ನಿವೇಶನಗಳನ್ನು ಕೇಳುತ್ತಿದ್ದಾರೆ. ಇದು ಜನರ ದೊಡ್ಡ ಬೇಡಿಕೆಯಾಗಿದೆ. ರೈತರಿಗೆ ಬೆಳೆಗೆ ಸಂಬಂಧಿಸಿದಂತೆ 3 ಕೋಟಿ ರೂಪಾಯಿಗಳನ್ನು ಕೊಟ್ಟು ನಾಗರಹೊಳೆಯಲ್ಲೋ ನೀವು solar system ಅಳವಡಿಸುವುದಲ್ಲ. ಎಲ್ಲಾ ಕಡೆ ಕೂಡ ಬಹಳ ಸಮಸ್ಯೆ ಇದೆ. ರೈತರು ಬೆಳೆದಂಥ ಬೆಳೆ ಅವರ ಕೈಗೆ ಸಿಗುತ್ತಿಲ್ಲ. ಆನೆಗಳ, ಹಂದಿಗಳ ಕಾಟ ತುಂಬಾ ಆಗುತ್ತಿದೆ. ಇಂಥ ಕಡೆ ನೀವು trench ಅಥವಾ ಅರಣ್ಯ ಸಿಬ್ಬಂದಿಯನ್ನು ಜಾಸ್ತಿ ಮಾಡುವುದು ಅಥವಾ solar system ಅಳವಡಿಸುವಂಥದ್ದು ಮಾಡಬೇಕು. ಈ ಸಂಬಂಧ ಸದನದಲ್ಲಿ ಬಹಳಷ್ಟು ಚರ್ಚೆಯಾಗಿದೆ. ಇದರ ಬಗ್ಗೆ ತಾವು ಹೆಚ್ಚು ಗಮನವನ್ನು ಕೊಡಬೇಕು. ನಾನು ಪ್ರಾರಂಭದಲ್ಲಿ ಹೇಳಿದ ಹಾಗೆ, ಮಾನ್ಯ ಮುಖ್ಯಮಂತ್ರಿಯವರು ಅಂತ್ಯೋದಯ ಯೋಜನೆಯ ಬಗ್ಗೆ ಹೆಚ್ಚು ಗಮನ ಕೊಟ್ಟು ಸರ್ವೋದಯದ ಬಗ್ಗೆ ಚಿಂತನೆ ಮಾಡಿದರೆ, ಇರತಕ್ಕಂಥದ್ದರಲ್ಲಿ ಒಂದು ಒಳ್ಳೆಯ ಬಜೆಟ್ ಅನ್ನು ಕೊಟ್ಟ ಹಾಗಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ರಾಜು (ರಾಮನಗರ) : ಮಾನ್ಯ ಅಧ್ಯಕ್ಷರೆ, ಬಜೆಟ್ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಅಭಿನಂದನೆಗಳು. ಸನ್ಮಾನ್ಯ ಮುಖ್ಯಮಂತ್ರಿಯವರು 5ನೇ ತಾರೀಖಿನಂದು ಬಜೆಟ್ ಮಂಡನೆ

ಮಾಡುವಾಗ ಕವಿಗಳ, ಸಾಹಿತಿಗಳ, ವಚನಗಳ ಸಾಲುಗಳನ್ನು ಉಲ್ಲೇಖ ಮಾಡಿ, ಸರ್ವರಿಗೂ ಸಮ ಬಾಳು ಸರ್ವರಿಗೂ ಸಮಪಾಲು ಎಂಬ ವಚನವನ್ನು ಈ ಸಭೆಯಲ್ಲಿ ಹೇಳಿದ್ದಾರೆ. ಸರ್ವರಿಗೂ ಸಮಬಾಳು ಸಮಪಾಲು ಎಂದು ಹೇಳಿದರೆ ಕೇವಲ ಶಿವಮೊಗ್ಗ ಅಥವಾ ಬಳ್ಳಾರಿಯಲ್ಲ. ಸಮಗ್ರ ಕರ್ನಾಟಕವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಬಜೆಟ್‌ನಲ್ಲಿ ಅನುಕೂಲ ಮಾಡಿಕೊಡಬೇಕಾಗಿತ್ತು. ರಾಮನಗರ ಜಿಲ್ಲೆಯಾಗಿ ಎರಡು ವರ್ಷಗಳಾದರೂ ಕೂಡ ಇದುವರೆಗೂ ಅದು ಜಿಲ್ಲೆ ಆಗುವಂಥ ಸೌಲಭ್ಯಗಳನ್ನು ಒದಗಿಸಿ ಕೊಡಲಿಲ್ಲ. ಮಾಜಿ ಮುಖ್ಯಮಂತ್ರಿಯಾದ ಸನ್ಮಾನ್ಯ ಕುಮಾರಸ್ವಾಮಿಯವರು ಹಾಕಿಕೊಟ್ಟ ಅನೇಕ ಕಾರ್ಯಕ್ರಮಗಳಿಗೆ ಹಣ ಕೊಡಲು ಪ್ರಯತ್ನ ಮಾಡಲಿಲ್ಲ. ಆದ್ದರಿಂದ, ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿ ಯಾದ ನಂತರ ರಾಮನಗರವನ್ನು ಮಲತಾಯಿ ಧೋರಣೆಯಿಂದ ಕಾಣುತ್ತಿದ್ದಾರೆ. ಅದಾಗಬಾರದು. ಸಿದ್ದರಾಮಯ್ಯನವರು ಮತ್ತು ರೇವಣ್ಣನವರು ಮಾತನಾಡುವ ಮಧ್ಯೆ 'ಬಜೆಟ್ ನೋಡಿ, ಜನಸಾಮಾನ್ಯರಿಗೆ ಹತ್ತಿರವಾದ ಬಜೆಟ್ ಅನ್ನು ಕೊಡುತ್ತೇನೆ' ಎಂದು ಬಹಳ ಘಂಟಾಘೋಷವಾಗಿ ಮಾನ್ಯ ಮುಖ್ಯಮಂತ್ರಿಯವರು ಹೇಳಿದರು. ಬಜೆಟ್ ಮಂಡನೆ ಮಾಡಿದ ಬಳಿಕ ಯೋಚನೆ ಮಾಡಿ ನೋಡಿದಾಗ ಬೆಟ್ಟವನ್ನು ಅಗೆದು ಇಲಿ ಹಿಡಿದ ಹಾಗೆ ಆಗಿದೆ. ಆದ್ದರಿಂದ ಇದು ಜನಸಾಮಾನ್ಯರ ಬಜೆಟ್ ಆಗಿಲ್ಲ. ಕೇವಲ ಉಳ್ಳವರ ಅಥವಾ ಮಾತು ಯಾರು ಜಾಸ್ತಿ ಆಡುತ್ತಾರೆ, ಅವರವರ ಅನುಕೂಲಕ್ಕೆ ತಕ್ಕಂತೆ ಬಜೆಟ್ ಮಂಡನೆ ಮಾಡುತ್ತಾರೆನ್ನುವುದನ್ನು ನೋಡಿ ನನಗೆ ತುಂಬಾ ಬೇಜಾರಾಗಿದೆ. ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಯವರು ಗಮನಹರಿಸಿ ಬರುವ ದಿನಗಳಲ್ಲಿ ರೈತರ ಪರ, ಮಹಿಳೆಯರ ಪರ, ಯುವಕರ ಪರ ಯಾವುದೇ ವಿಸ್ತೃತ ಕಾರ್ಯಕ್ರಮವನ್ನು ಹಾಕಿಕೊಳ್ಳದೆ, ಯಾವುದೇ ನಿಶ್ಚಿತ ಗುರಿ ಇಟ್ಟುಕೊಳ್ಳದೆ ಅವರಿಗೆ ಅನುಕೂಲ ಮಾಡುವ ನಿಟ್ಟಿನಲ್ಲಿ ಬಜೆಟ್‌ನಲ್ಲಿ ಮಠ ಮಾನ್ಯಗಳಿಗೆ ಹೆಚ್ಚಿಗೆ ಹಣ ಕೊಟ್ಟು ಜನಸಾಮಾನ್ಯರಿಗೆ, ರೈತರಿಗೆ, ಹಳ್ಳಿಗಾಡಿನ ಜನರಿಗೆ ಅನುಕೂಲವಾಗುವ ಯಾವುದೇ ಒಂದು ಒತ್ತು ಕೊಟ್ಟು ಅವರು ಕೆಲಸ ಮಾಡಲಿಲ್ಲವೆಂದು ಹೇಳುವುದಕ್ಕಿಷ್ಟಪಡುತ್ತೇನೆ. ಮಹಿಳೆಯರ ಪರವಾಗಿ ಯಾವುದೇ ನಿರ್ದಿಷ್ಟ ವಾದ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿಲ್ಲ. ನಿಮಗೆಲ್ಲ ಗೊತ್ತಿರುವ ಹಾಗೆ, ಕಳೆದ ವರ್ಷ 118 ಲಕ್ಷ ಟನ್ ಇರಬೇಕಾದುದು ಕೇವಲ 106 ಲಕ್ಷ ಟನ್ ಉತ್ಪಾದನೆಯಾಗಿ ಆಹಾರೋತ್ಪಾದನೆ ಕಡಿಮೆಯಾಗುತ್ತಿದೆ. ಎಣ್ಣೆಕಾಳು

ಉತ್ಪಾದನೆ ಕೂಡ 16 ಲಕ್ಷ ಟನ್‌ನಿಂದ 11 ಲಕ್ಷ ಟನ್‌ಗೆ ಇಳಿದಿದೆ. ಇದೆಲ್ಲ ಏನು ಸೂಚಿಸುತ್ತದೆಂದರೆ, ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಆಹಾರೋತ್ಪಾದನೆ ಮಾಡುವುದಕ್ಕೆ ಯಾವುದೇ ಸೌಲಭ್ಯಗಳಿಲ್ಲದೆ ಅವರು ವಂಚಿತರಾಗಿದ್ದಾರೆ. ಅವರಿಗೆ ಯಾವುದೇ ಅನುಕೂಲವಿಲ್ಲದೆ ಉತ್ಪತ್ತಿ ಮಾಡಲಿಕ್ಕೆ ಅನಾನುಕೂಲವಾಗುವಂಥ ವಾತಾವರಣ ಸೃಷ್ಟಿಯಾಗಿದೆ. ಯುವಕರು ಹಳ್ಳಿಗಳನ್ನು ಬಿಟ್ಟು ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಅವರಿಗೆ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಮುಖ್ಯಮಂತ್ರಿಯವರು ಹಾಕಿಕೊಂಡಿಲ್ಲ. ಹಿಂದುಳಿದ ವರ್ಗಕ್ಕೆ ಕಳೆದ ವರ್ಷ 124 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದು ಈ ವರ್ಷ ಕೇವಲ 34 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿರುವುದರಿಂದ ಹಿಂದುಳಿದ ವರ್ಗಕ್ಕೆ ಯಾವುದೇ ಅನುಕೂಲ ಮಾಡಿಕೊಡಲಿಕ್ಕಾಗಲಿಲ್ಲ. ಜೊತೆಗೆ, ಹಾಸ್ಟೆಲ್‌ನಲ್ಲಿ 10ನೇ ತರಗತಿಗಿಂತ ಕೆಳಗಿನ ಹಂತದಲ್ಲಿ ಓದುವ ಮಕ್ಕಳಿಗೆ 600 ರೂ. ಇದ್ದದನ್ನು 650 ರೂ.ಗೆ ಹೆಚ್ಚಿಸಿದ್ದಾರೆ. ಅದನ್ನು 750 ರೂ.ಗೆ ಹೆಚ್ಚಿಸಿದರೆ ಅನುಕೂಲವಾಗುತ್ತದೆ. ಕೇವಲ ಒಂದು ಊಟಕ್ಕೆ 10 ರೂ. ಎಂದರೂ 650–750 ರೂ. ಸಾಲದು. ಅದನ್ನು ಇನ್ನೂ ಹೆಚ್ಚಿಗೆ ಮಾಡಬೇಕಾಗಿತ್ತು. ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಆಹಾರವನ್ನು ಪೂರೈಕೆ ಮಾಡಲಾಗುತ್ತಿಲ್ಲ. ಅದರಲ್ಲಿಯೂ ಕೂಡ ಸೋರಿಕೆಯಾಗದೆ ವಿದ್ಯಾರ್ಥಿಗಳಿಗೆ ತಲುಪುವಂಥ ವ್ಯವಸ್ಥೆ ಆಗಬೇಕು. ಸರ್ಕಾರ ಹಳ್ಳಿಗಳಿಗೆ 6 ಗಂಟೆ 3 phase ಮತ್ತು 6 ಗಂಟೆ single phase current ಕೊಡುತ್ತೇವೆಂದು ಈಗಾಗಲೇ ಘೋಷಣೆ ಮಾಡಿದೆ. ಆದರೂ ಕೂಡ ಹಳ್ಳಿಗಳಲ್ಲಿ ಇದುವರೆಗೆ ಆ ಕೆಲಸವಾಗುತ್ತಿಲ್ಲ. ಇವತ್ತೂ ಕೂಡ 3 ಗಂಟೆ ಮಾತ್ರ 3 phase ಕರೆಂಟ್ ಬರುತ್ತಿದೆ. ಇದು ಸುಧಾರಣೆಯಾಗಬೇಕೆಂದು ನಾನು ತಮ್ಮ ಮೂಲಕ ವಿನಂತಿಸುತ್ತಿದ್ದೇನೆ. 1 ಸಾವಿರ ಹಳ್ಳಿಗಳನ್ನು ಸುವರ್ಣ ಗ್ರಾಮ ಯೋಜನೆ ಮೂಲಕ ಸುವರ್ಣ ಗ್ರಾಮಗಳನ್ನಾಗಿ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಸುವರ್ಣ ಗ್ರಾಮ ಎಂದರೆ ಹಳ್ಳಿಗಳಲ್ಲಿ ಕೇವಲ concrete ರಸ್ತೆ ಮಾಡುವುದಲ್ಲ. ಸುವರ್ಣ ಗ್ರಾಮ ಎಂದರೆ ಹಳ್ಳಿಯಲ್ಲಿ ಸಮಗ್ರ ಅಭಿವೃದ್ಧಿ ಮಾಡಬೇಕು. ಅದಕ್ಕೆ ಬೇಕಾದ ಶಾಲೆ, ಶೌಚಾಲಯ, ಪೀಠೋಪಕರಣ, ಕಟ್ಟಡಗಳನ್ನು ನಿರ್ಮಾಣ ಮಾಡಿದರೆ ಮಾತ್ರ ಮತ್ತು ಒದಗಿಸಿದರೆ ಮಾತ್ರ ಸಮಗ್ರ ಅಭಿವೃದ್ಧಿಯಾಗುತ್ತದೆ. ಬರುವ ದಿನಗಳಲ್ಲಿ 1 ಸಾವಿರ ಹಳ್ಳಿಗಳನ್ನು

ಸುವರ್ಣ ಗ್ರಾಮಗಳೆಂದು ಗುರುತಿಸಿದ್ದೀರಿ, ಆ ಹಳ್ಳಿಗಳಿಗೆ ಕೊಡುತ್ತಿರುವ I ಕೋಟಿ ರೂ. ಸಾಕಾಗುವುದಿಲ್ಲ. ಸಮಗ್ರ ಅಭಿವೃದ್ಧಿ ಮಾಡಬೇಕಾದರೆ ಇನ್ನೂ ಹೆಚ್ಚು ಹಣ ಕೊಡೇಕಾಗುತ್ತದೆಂದು ನಾನು ನಿಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಜೊತೆಗೆ ಆ ಗ್ರಾಮದಲ್ಲಿ ಸಮುದಾಯ ಕಟ್ಟಡವನ್ನೂ ಕೂಡ ಕಟ್ಟಿಸಬೇಕು. ಚರಂಡಿ ವ್ಯವಸ್ಥೆಯನ್ನೂ ಉತ್ತಮ ಪಡಿಸಬೇಕು. ಪಟ್ಟಣ ಪ್ರದೇಶಗಳಲ್ಲಿರುವ ಎಲ್ಲಾ ಅನುಕೂಲಗಳೂ ಹಳ್ಳಿಗಳಿಗೂ ಸಿಗಬೇಕು. ಆಗ ಮಾತ್ರ ಸುವರ್ಣ ಗ್ರಾಮದ ಕನಸು, ಯೋಜನೆಗಳು ಸಫಲವಾಗುತ್ತವೆ.

ಅಧ್ಯಕ್ಷರು : ಈಗ ಶಾಸನ ರಚನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ನಾವು 5–5 ನಿಮಿಷ ಕಾಲ ಬಜೆಟ್ ಮೇಲೆ ಮಾತನಾಡುತ್ತೇವೆ. ದಯಮಾಡಿ ಅವಕಾಶ ಕೊಡಿ.

ಅಧ್ಯಕ್ಷರು : ಇಂದು ಮಧ್ಯಾಹ್ನ 2.30 ವರೆಗೆ ಮಾತ್ರ ಸದನ ನಡೆಯುತ್ತದೆ.

ಶ್ರೀ ಡಿ.ಎನ್. ಜೀವರಾಜ್ : ಕರಡಿ ಸಂಗಣ್ಣನವರೆ, senior member ಇದ್ದೀರಿ, ತಮಗೆ ಗೊತ್ತಿರುವ ಹಾಗೆ, ಇವತ್ತು ಶುಕ್ರವಾರ. ಇನ್ನೂ ಶಾಸನ ರಚನೆ ಬೇರೆ ಆಗಬೇಕಲ್ಲವೇ? ಈಗ ಸಮಯ ಮಧ್ಯಾಹ್ನ 1.10 ಗಂಟೆಯಾಗಿದೆ. ನಿಮಗೆ ಸಭಾಧ್ಯಕ್ಷರು ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ 17ನೇ ತಾರೀಖು ಅವಕಾಶ ಕೊಡುತ್ತಾರೆ.

ಅಧ್ಯಕ್ಷರು : 17ನೇ ತಾರೀಖು ಬಜೆಟ್ ಮೇಲೆ ಮಾತನಾಡಲು ಎಲ್ಲರಿಗೂ ಅವಕಾಶ ಕೊಡುತ್ತೇನೆ. 17 ರಂದು ಯಾವುದೇ Bill ಚರ್ಚೆಗೆ ಇರುವುದಿಲ್ಲ.

7. ಶಾಸನ ರಚನೆ :

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

I ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ವಿಧೇಯಕ, 2010

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2010ರ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಅರವಿಂದ ಲಿಂಬಾವಳಿ : ಕರ್ನಾಟಕದಲ್ಲಿ ಎಲ್ಲಾ ಸರ್ಕಾರಗಳು ಇದ್ದಾಗಲೂ ಸಹ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ದೊರೆತಿದೆ. ಕರ್ನಾಟಕದಲ್ಲಿ ಕೂಡ Deemed Universities ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಬೇರೆ ಬೇರೆ ರಾಜ್ಯಗಳು ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ವಿಧೇಯಕಗಳನ್ನು ಮಂಡಿಸಿ ಆ ರೀತಿಯ Act ಅನ್ನು ಮಾಡಿ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುವು ಮಾಡಿಕೊಡುತ್ತಿವೆ. ಅಜೀಂ ಪ್ರೇಮ್‌ಜಿಯವರು ಈ ರೀತಿಯ ಖಾಸಗಿ ವಿಶ್ವವಿದ್ಯಾಲಯವನ್ನು ರಚನೆ ಮಾಡಬೇಕು ಮತ್ತು ಕರ್ನಾಟಕದ ಮುಖಾಂತರ ಇಡೀ ದೇಶದಲ್ಲಿ ಯಾರು ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಣದಲ್ಲಿ ಪಾಠ ಪ್ರವಚನ ಮಾಡುತ್ತಾರೆ ಅಂಥವರಿಗೆ Educational Management ರೀತಿಯ ತರಬೇತಿ ಸಿಗಬೇಕೆನ್ನುವ ಹಿನ್ನೆಲೆಯಲ್ಲಿ ಅವರು ಸ್ವ ಆಸಕ್ತಿಯಿಂದ ಶಿಕ್ಷಣ ಕ್ಷೇತ್ರದ ಸುಧಾರಣೆಗಾಗಿ ಮುಂದೆ ಬಂದಿದ್ದಾರೆ. ಆ ಹಿನ್ನೆಲೆಯಲ್ಲಿ ಈ ಖಾಸಗಿ ವಿಶ್ವವಿದ್ಯಾಲಯ ಸ್ಥಾಪನೆಗೆ ಅನುವು ಮಾಡಿಕೊಡಬೇಕೆನ್ನುವ ಕಾರಣಕ್ಕಾಗಿ ಈ ಬಿಲ್ ಅನ್ನು ಮಂಡಿಸುತ್ತಿದ್ದೇನೆ. ಅದರಲ್ಲೂ ವಿಶೇಷವಾಗಿ, ವಿಜ್ಞಾನ, ಸಮಾಜ ವಿಜ್ಞಾನ, ಮಾನವಿಕ ಶಾಸ್ತ್ರಗಳು, ಆಡಳಿತ ನಿರ್ವಹಣಾ ಕ್ಷೇತ್ರದಲ್ಲಿ, ಹಣಕಾಸು ಕ್ಷೇತ್ರದಲ್ಲಿ, ಶಿಕ್ಷಣ ಮತ್ತು ತಂತ್ರಜ್ಞಾನ ಈ ರಂಗಗಳಲ್ಲಿ ಗಮನಹರಿಸಬೇಕೆಂದು ಅವರು ಯೋಚನೆ ಮಾಡಿದ್ದಾರೆ. ಈ Act ಜಾರಿಗೆ ತಂದ ನಂತರ ಅದಕ್ಕೆ ಸಾಕಷ್ಟು ನಿಯಮ ಗಳನ್ನು ತರಬೇಕಾಗುತ್ತದೆ. ಅವರು ವಿಶ್ವವಿದ್ಯಾಲಯ ಪ್ರಾರಂಭ ಮಾಡುವಾಗ ಅವರು ಮತ್ತೆ ಸರ್ಕಾರಕ್ಕೆ approach ಮಾಡಬೇಕಾಗುತ್ತದೆ. ಅದಕ್ಕೆ ಸಮಿತಿಯನ್ನು ರಚನೆ ಮಾಡಿ ಈ ಹೊಸ ವಿಶ್ವವಿದ್ಯಾನಿಲಯಕ್ಕೆ ಸರಿಯಾದ ನಿಯಂತ್ರಣಗಳನ್ನು ಇಡಬೇಕಾಗುತ್ತದೆ. ಹಿಂದೆ ಮಾನ್ಯ ಮುಖ್ಯಮಂತ್ರಿಯವರು ಖಾಸಗಿ ವಿಶ್ವವಿದ್ಯಾಲಯಗಳನ್ನು ನಾವು ತೆರೆಯು ವುದಕ್ಕೆ ನಾವು ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದರು. ಆ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಇವತ್ತು enrollment ratio 11.5% ಇದೆ. ಅದನ್ನು ಜಾಸ್ತಿ ಮಾಡಬೇಕೆಂಬ ಹಿನ್ನೆಲೆಯಲ್ಲಿ ಖಾಸಗಿ ವಿಶ್ವವಿದ್ಯಾಲಯಕ್ಕೆ ಅನುವು ಮಾಡಿಕೊಡಬೇಕೆಂದು ತಮ್ಮ ಮೂಲಕ ಎಲ್ಲಾ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕಾಕಾ ಸಾಹೇಬ್ ಪಾಟೀಲ್ ಪಾಂಡುರಂಗ : ನಾನು ಸನ್ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ, ಅಜೀಂ ಪ್ರೇಮ್‌ಜಿಯವರ ಬಗ್ಗೆ ನಮಗೆ ಸಾಕಷ್ಟು ಗೌರವವಿದೆ. ಬೇರೆ ರಾಜ್ಯಗಳಲ್ಲಿ ನೋಡಿದಾಗ, ಇಂಥ University ಮಾಡುವಾಗ ಆ ರಾಜ್ಯದಲ್ಲಿ ಒಳ್ಳೆಯ ಹೆಸರು ಪಡೆದಂಥವರು, development ಮಾಡಿದ ಹಿಂದಿನ ಸಿ.ಎಂ.ಗಳ ಹೆಸರು ಇಟ್ಟು University ಮಾಡಿದ್ದಾರೆ. ಈ ರಾಜ್ಯದಲ್ಲಿ ಮಾನ್ಯ ನಿಜಲಿಂಗಪ್ಪನವರಾಗಲಿ, ವಿರೇಂದ್ರ ಪಾಟೀಲ್‌ರವರಾಗಲಿ ಅಥವಾ ಕೆಂಗಲ್ ಹನುಮಂತಯ್ಯನವರ ಹೆಸರಿನಲ್ಲಿ ಅಥವಾ ಕರ್ನಾಟಕ ಏಕೀಕರಣಕ್ಕೆ ಹೋರಾಟಕ್ಕೆ ಹೋರಾಡಿದ ಧುರೀಣರ ಹೆಸರನ್ನು ಇಟ್ಟು ನಾವೇಕೆ ಮಾಡಬಾರದು? ಅಜೀಂ ಪ್ರೇಮ್‌ಜಿ ಬಗ್ಗೆ ನಮ್ಮ ವಿರೋಧವಿಲ್ಲ. ಆದರೆ, ಈ ನಾಡಿನ ಗೌರವ ಕಾಪಾಡುವ ದೃಷ್ಟಿಯಿಂದ ಈ ರೀತಿಯ ವಿಚಾರವೇಕೆ ಸರ್ಕಾರಕ್ಕೆ ಬರಲಿಲ್ಲ ಎನ್ನುವ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಕರ್ನಾಟಕದಲ್ಲಿ ಹೊಸ ತೀರ್ಮಾನ ಮಾಡಲಿಕ್ಕೆ ಹೊರಟ್ಟಿದ್ದಾರೆ. ಈಗ ಶಿಕ್ಷಣ ಕ್ಷೇತ್ರದಲ್ಲಿ ಇವರು ಹೊಸ ಚಿಂತನೆ ಮಾಡುತ್ತಿದ್ದಾರೆ. ಖಾಸಗಿ ವಿಶ್ವವಿದ್ಯಾಲಯ ತೆರೆಯಬೇಕು ಎಂದು Ajim Premji University Bill 2010 and Alliance University Bill 2010 ಈ ಎರಡೂ ಒಂದೇ ತರಹವಿದ್ದು, ಈ ಎರಡೂ ಬಿಲ್‌ಗಳನ್ನು ಮಂಡಿಸುತ್ತಿದ್ದಾರೆ. ಈ ಬಿಲ್ ಮಂಡಿಸಲಿಕ್ಕೆ ಏನು ಕಾರಣ ಹೇಳಿದ್ದಾರೆಂದರೆ, ಇದರ ಉದ್ದೇಶವೇನೆಂದರೆ, Ajim Premji Foundation ನವರು ಈ ತರಹದ University ಯನ್ನು ತೆರೆಯಲಿಕ್ಕೆ ಮುಂದೆ ಬಂದಿದ್ದಾರೆ. ಇದರ ಅಗತ್ಯ ಏಕಿದೆ ಎಂದರೆ, ನಮಗೆ higher education enrollment, admission ratio ಕೇವಲ 11.5% ಮಾತ್ರ ಇದೆ, ಅದರಿಂದ ಎಲ್ಲರಿಗೂ ಶಿಕ್ಷಣ ಕೊಡಬೇಕು. ಈ ಶಿಕ್ಷಣ ಯಾರಿಗೆ ಕೊಡುವುದು? ಕರ್ನಾಟಕದ ಜನರಿಗೆ ಕೊಡುತ್ತಾರೆಯೇ? ಭಾರತೀಯರಿಗೆ ಕೊಡುತ್ತಾರೆಯೇ? ಅಥವಾ ಬೇರೆಯವರಿಗೆ ಕೊಡುತ್ತಾರೆಯೇ? ಸಂವಿಧಾನದಲ್ಲಿ, ಭಾರತದಲ್ಲಿರುವ 6 ರಿಂದ 14 ವರ್ಷದೊಳಗೆ ಇರುವ ಎಲ್ಲಾ ಮಕ್ಕಳಿಗೂ ಕಡ್ಡಾಯವಾದ ಪುಕ್ಕಟೆ ಶಿಕ್ಷಣ ಕೊಡಬೇಕು ಎಂದು ಇದೆ. ಅದಕ್ಕೋಸ್ಕರ ಕೇಂದ್ರ ಸರ್ಕಾರ Right to education ಎಂದು ಮಾಡಿದೆ. ಆ

ಬಿಲ್ ಪಾಸ್ ಆಗಿದೆ. ರಾಜ್ಯ ಸರ್ಕಾರಕ್ಕೂ Right to Education ಜವಾಬ್ದಾರಿ ಇದೆ. ಆದರೆ, ಈಗ ನೀವೇನು ಮಾಡುವುದಕ್ಕೆ ಹೊರಟಿದ್ದೀರಿ? Needy people ಗೆ quality education ಕೊಡುವುದಕ್ಕೆ ಹೊರಟಿದ್ದೇವೆಂದು ಹೇಳಿದ್ದೀರಿ? Who are those needy people? We have to provide quality education to every citizen of this country, every child of this country and every child of this Society, but not to a particular group or section of the Society. ಆಮೇಲೆ, ಸರ್ಕಾರದಿಂದ ಅನುಮತಿ ಕೊಟ್ಟ ಮೇಲೆ University, colleges ಅನ್ನು ದೇಶದಲ್ಲಿ ಎಲ್ಲಿಯಾದರೂ ತೆರೆಯಬಹುದೆಂದು ಹೇಳಿದ್ದಾರೆ. ಕರ್ನಾಟಕದಲ್ಲಿ ವಾಸ ಮಾಡುತ್ತಿರುವವರಿಗೆ, 25% domestic ನವರಿಗೆ ಕೊಡಬೇಕೆಂದು ಹೇಳುತ್ತೀರಿ. ಇನ್ನು 75% seat ಯಾರಿಗೆ ಕೊಡುತ್ತೀರಿ? How can you say that this gives quality education to all? Why you are restricting only to 25%, for the Karnataka people? ಏಕೆ? ಆ 25% ನಷ್ಟು ಕರ್ನಾಟಕದವರಿಗೆ ಕೊಡುವುದಾದರೆ do we need this type of University? Do the Karnataka people want this University? Section 9 ನಲ್ಲಿ University open to all classes, castes, creed and gender:- The Unniversity shall be open to all persons irrespective of class, creed or gender. Provided that admissions of not less than twenty five percent of the total seats in the academic programmes of the university shall be reserved for students domiciled in the state of Karnataka, subject to fulfilling the admission criteria ಎಂದ ಮೇಲೆ ಇದು, ಹಳ್ಳಿಯಿಂದ ಬಂದವರಿಗಾಗಲಿ, ದಲಿತವರ್ಗದಿಂದ ಬಂದವರಿಗಾಗಲಿ, ಬಡವರ್ಗದಿಂದ ಬಂದವರಿಗಾಗಲಿ, ಇವರ್‍ಯಾರಿಗೂ quality education ಇದರಲ್ಲಿ ಸಿಕ್ಕುವುದಿಲ್ಲ.

ಶ್ರೀ ತನ್ವೀರ್ ಸೇಟ್ : ಕೆಳಗಡೆ ಇನ್ನೊಂದು ಲೈನ್ ಇದೆ. reservation ಮಾಡಿರುವುದರಲ್ಲಿ ಆ category ಯವರು ಬಂದಿಲ್ಲವೆಂದರೆ the seats so reserved shall be filled by the candidates from the general pool. ಎಂದು ಇದೆ.

ಶ್ರೀ ಸಿದ್ದರಾಮಯ್ಯ : 25% ಕಡ್ಡಾಯವಾಗಿ ಕೊಡಬೇಕೆಂದೇನಿಲ್ಲ. ಇವರು ಬರದೇ ಹೋದರೆ ಯಾರೂ ಇಲ್ಲದೇ ಹೋದರೆ general category ಗೆ ಕೊಡಬಹುದು ಎಂದು ಇದೆ. ಇದನ್ನು ಏಕೆ ಸೇರಿಸಿದ್ದಾರೆಂದರೆ ಬರಲ್ಲ ಎಂದು ಅವರಿಗೆ ಗೊತ್ತಿದೆ. ಸುಮ್ಮನೆ ಇದು ಒಂದು clause ಇರಲಿ ಎಂದು ಸೇರಿಸಿದ್ದಾರೆ. ordinance ಮಾಡಿರಲಿ, ಆದರೆ ಬಿಲ್ ಬಂದಿದೆ ಅಲ್ಲವೆ? ಈಗ reject ಮಾಡಬಾರದು ಎಂದು ಇದೆಯೆ? withdraw ಮಾಡಬಾರದು ಎಂದು ಇದೆಯೆ? ಮಾನ್ಯ ಮಂತ್ರಿಗಳೇ, ಇದರಿಂದ ಕರ್ನಾಟಕ ಮಕ್ಕಳಿಗೆ, ಹಳ್ಳಿಯಿಂದ ಬಂದಂಥವರಿಗೆ, ಕೆಳವರ್ಗದಿಂದ ಬಂದಂಥವರಿಗೆ, ಅಕ್ಷರಸಂಸ್ಕೃತಿಯಿಂದ ನೂರಾರು ವರ್ಷಗಳ ಕಾಲ ವಂಚಿತರಾದ ವರ್ಗದವರಿಗೆ, ಇವರ್‍ಯಾರಿಗೂ ಉಪಯೋಗವಾಗುವಂಥ ಬಿಲ್ ಏನಲ್ಲ. ಆ ಯೂನಿವರ್ಸಿಟಿಯಿಂದ ಏನೂ ಉಪಯೋಗವಾಗುವುದಿಲ್ಲ. ನೀವು ಯಾವುದೇ ಒಂದು ಹೊಸ ಕಾಯಿದೆ ತರಬೇಕಾದರೆ, ಸಮಾಜದಲ್ಲಿ ರತಕ್ಕಂಥ ಎಲ್ಲರಿಗೂ ಕನಿಷ್ಠ ಬಹುಸಂಖ್ಯಾತ ವರ್ಗದ ಜನರಿಗೆ ಅನುಕೂಲ ವಾಗುವಂಥದ್ದು ಇರಬೇಕು. ಯಾರಿಗೆ quality education ಕೊಡಬೇಕಾಗಿ ರುವುದು? ಕೆಳಗಡೆ ಇರುವವರಿಗೆ, ಸಾಮಾಜಿಕ ನ್ಯಾಯದಿಂದ ವಂಚಿತರಾ ದವರಿಗೆ, ಅಶಕ್ತರಾಗಿರತಕ್ಕಂಥ ಜನರಿಗೆ, ಅವಕಾಶಗಳಿಂದ ವಂಚಿತರಾ ಗಿರತಕ್ಕಂಥ ಜನರಿಗೆ, they wanted quality education, they need quality education, not to the students who are coming from upper standard of society, they have got all the capacity, ಅವರು ಎಲ್ಲಿಗೆ ಹೋಗಿ ಓದಿಕೊಳ್ಳಬೇಕು, ಅವರಿಗೆ ಎಲ್ಲಿ quality education ಸಿಗುತ್ತದೆ ಅಲ್ಲಿ ಹೋಗಿ ಓದಿಕೊಳ್ಳುತ್ತಾರೆ. But ಯಾರು ಇವತ್ತು justice deny ಆಗಿದ್ದಾರೆ ಅವರಿಗೆ ಅಸಕ್ತ ವರ್ಗ, ವಂಚಿತರಾಗಿರತಕ್ಕಂಥ ವರ್ಗ, ಈ ಜನರಿಗೆ quality education ಕೊಟ್ಟರೆ ನಾವು quality education ಎಲ್ಲರಿಗೂ ಕೊಡುತ್ತೇವೆ ಎನ್ನುವ ಅರ್ಥ ಬರುತ್ತದೆ. ಈ ರೀತಿಯಾದ ಒಂದು ಯೂನಿವರ್ಸಿಟಿ ಮಾಡಿ ನೀವು ಏನಾದರೂ ಮಾಡಿಕೊಳ್ಳಿ, ಫೀಸ್ ಎಷ್ಟು ಎಂದು ಫಿಕ್ಸ್ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಇದೆಯೆ? You don't have powers to.... ನಿಮಗೇನು ಪವರ್ಸ್ ಇಲ್ಲ. ನಿಮಗೇನಿದೆ ಅಧಿಕಾರ? Management Committee ಯಿಂದ ಒಬ್ಬರು Secretary, Education

Secretary ಇರುತ್ತಾರೆ. ಅವರು ಹೋಗುತ್ತಾರೆ ಪಾಪ ಅಲ್ಲಿ ಬೇರೆಯವರು ಇರುತ್ತಾರೆ ಇವರು ಹೋದರೆ ಇವರ ಮಾತು ಯಾರು ಕೇಳುತ್ತಾರೆ? ಇವರು ಅಲ್ಲಿಗೆ ಹೋದರೆ ಸರಿಯಾಗಿ ಕಾಫಿ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. ನೀವು ರಾಜ್ಯಪಾಲರನ್ನು ವಿಸಿಟರ್ ಎಂದು ಮಾಡುತ್ತೀರಿ. ಅವರಿಗೇನು ಪವರ್ಸ್ ಇರುವುದಿಲ್ಲ. ಇಲ್ಲಿ ಮಂತ್ರಿಗಳಿಗೇನು ಇರುವುದಿಲ್ಲ. ಅಲಿಯನ್ಸ್ ಯೂನಿವರ್ಸಿಟಿಯಲ್ಲಿ ಮಿನಿಸ್ಟ್ರು ಆದರೂ ಇರುತ್ತಾರೆ. ಅವರನ್ನು ಕೋ-ವಿಸಿಟರ್ ಎಂದು ಮಾಡಿಕೊಂಡಿದ್ದೀರಿ. ಇಲ್ಲಿ ಅದೂ ಇಲ್ಲ. ಅದು ಇದೆಯೆ? ಈ ಯೂನಿವರ್ಸಿಟಿಯಲ್ಲಿ ನಿಮಗೇನು ಕೆಲಸ? ನಿಮ್ಮ ರೂಲ್ ಏನು ಎಂಬುದನ್ನು ಸ್ವಲ್ಪ ತಾವು ಹೇಳಬೇಕು. Yes, Minister Incharge of Higher Education, what is his role? What powers he has? Government can make rules ಎಂದು ಇದೆ. In accordance with provisions of the Act, Government can make rules ಅದು ಬಿಟ್ಟರೆ you have no powers, absolutely you have no powers. ಅದು ಏನು Visitor, who is the Governor of the State ಅವರು he may call for some nformation and give directions, ಅಷ್ಟು ಬಿಟ್ಟರೆ ಯೂನಿವರ್ಸಿಟಿಯಲ್ಲಿ ನಿಮಗೇನಿದೆ? ಯೂನಿವರ್ಸಿಟಿ ಮಾಡಬೇಕೆಂದರೆ ನೀವೇ ಅವರಿಗೆ ಜಾಗ ಕೊಡಬೇಕು, ಅವರೇನು ಆಕಾಶದಲ್ಲಿ ಕಟ್ಟಲ್ಲ. ನೀವೇ ನೀರು ಕೊಡಬೇಕು, ನೀವೇ ಪವರ್ ಕೊಡಬೇಕು, ಇವೆಲ್ಲಾ ಕೊಟ್ಟ ಮೇಲೆ ನಿಮಗೇನಾದರೂ ಇದೆಯೆ? ಇದರಲ್ಲಿ ಮೆರಿಟ್ ಇರುವವರಿಗೆ ಕೊಡುತ್ತಾರೆ. ಮೆರಿಟ್ ಸ್ಟುಡೆಂಟ್ ಎಂದರೆ ಯಾರು ಬರುತ್ತಾರೆ? ಮೆರಿಟ್‌ನಲ್ಲಿ ಬರುವವರು ಯಾವ ವರ್ಗದ ಜನ? ಮೆರಿಟ್ ಇಲ್ಲದೆ ಇರುವವರು ಎಲ್ಲಿಗೆ ಹೋಗಬೇಕು? ಈಗ ನಾವು grant in aid schools ಏನಿವೆ ಗ್ರಾಂಟ್ ಕೊಟ್ಟಿರತಕ್ಕಂಥ Private institutions ನಡೆಸುತ್ತಿರುವಂತಹವುಗಳು. ನಾವು medical colleges, engineering colleges ಎಲ್ಲಾ ನೋಡಿದ್ದೇವೆ. ಅಲ್ಲಿ ನಿಮ್ಮ ಮಾತು ಕೇಳುತ್ತಾರೆಯೆ? ಕೆಲವು grant in aid junior college and high schools ಗಳಿವೆ. ಅಲ್ಲಿ reservation follow ಮಾಡಿದ್ದಾರೆಯೆ? ದುಡ್ಡು ನಮ್ಮದು, ಸಂಬಳ ಕೊಡುವವರು ನಾವು. ಅಲ್ಲಿಗೆ ನಿಮ್ಮ Deputy Directors and Joint Directors ಹೋದರೆ ಅವರು ಒಳಗಡೆಗೆ

ಸೇರಿಸುವುದಿಲ್ಲ. ಇದು ನಿಮಗೆ ಗೊತ್ತಿದೆಯೆ? Grant in aid ಗೆ admitted ಆಗಿರತಕ್ಕಂಥ institutions ಗಳಲ್ಲಿ, ನಮ್ಮಲ್ಲಿ ಮರಿಮಲ್ಲಪ್ಪ ಎಂದು ಇದೆ, ಸದ್ ವಿದ್ಯಾ ಎಂದು ಇದೆ, ಇನ್ನೊಂದೆರಡು ಮೂರು ಮೈಸೂರಿನಲ್ಲಿ ಇವೆ. ಪ್ರತಿ ಸಾರಿ admission ಗೆ ಬಂದಾಗ ಗಲಾಟೆ. ಅಲ್ಲಿ ಹೋಗಿ ಧರಣಿ ಮಾಡಬೇಕು, ನೀವು ಏಕೆ reservation follow ಮಾಡಿಲ್ಲ. Merit cum reservation ಇರಬೇಕು. reservation follow ಮಾಡಬೇಕೆಂದು ಸರ್ಕಾರದ ಆದೇಶವಿದೆ. ಯಾರು ಮಾಡಿಲ್ಲ ಬೇಕಾದರೆ ನಾಳೆ ತರಿಸಿಕೊಂಡು ನೋಡಿ. ನಮ್ಮ Deputy Director ರವರಿಗೆ ಹೇಳಿದರೆ, ಅಲ್ಲಿಗೆ ಹೋಗುವುದಕ್ಕೆ ಬಿಡುವುದಿಲ್ಲ.

ಡಾ: ಹೆಚ್.ಸಿ.ಮಹದೇವಪ್ಪ : ಅಲ್ಲಿ admission ಗೂ roster maintain ಮಾಡುವುದಿಲ್ಲ appointment ಗೂ ಮಾಡಲ್ಲ.

ಶ್ರೀ ಸಿದ್ದರಾಮಯ್ಯ : ಇದನ್ನು ಮಾಡಿ ಏನು ಮಾಡುತ್ತೀರಿ? ಇಲ್ಲಿ reservation ಕೊಡುತ್ತೀರಾ? ಕರ್ನಾಟಕದಲ್ಲಿ ವಾಸ ಮಾಡುವವರಿಗೆ 25%, ಅವರು ಬಂದರೆ ಸರಿ ಬರದೇ ಹೋದರೆ ಯಾರಿಗಾದರೂ ಕೊಡುವುದು. Reservation ಎಲ್ಲಿದೆ? ಹಾಗಾದರೆ ಈ ಯೂನಿವರ್ಸಿಟಿ ಏಕೆ ಬೇಕು? I don't think this type of university is necessary to our state or to our country. Unless it is open to all, and social justice is followed. If there is no social justice, no quality education to all, not open to all, not open to Karnataka students, alone, then why do you want this type of university. We don't want, I don't think Karnataka need this type of University. ನಿಮಗೆ ಆ ರೀತಿ ಅನ್ನಿಸುತ್ತದೆಯೆ? ಇವರನ್ನು ಯಾರಾದರೂ ಒಳಗೆ ಸೇರಿಸಿ ಬಿಡುತ್ತಾರೆಯೆ? ನಿಮ್ಮನ್ನು ಮಾತನಾಡಿಸುತ್ತಾರೆಯೆ? ನಿಮಗೆ ಈಗಲೇ ಮಾತನಾಡಿಸುವುದಿಲ್ಲ. ಇವರಿಗೆಲ್ಲಾ ಸಾವಿರಾರು ಎಕರೆ ಜಮೀನುಗಳನ್ನು ಕೊಟ್ಟಿರುತೀರಿ. ನಿಮ್ಮ ನಿರಾಣಿಯವರು ಜಮೀನು ಕಳೆದುಕೊಂಡವರಿಗೆ ಕೆಲಸ ಕೊಡುತ್ತೇವೆಂದು ಹೇಳುತ್ತಾರೆ ನಿಮ್ಮ ಮಾತು ಅವರು ಕೇಳುತ್ತಾರೆಯೆ? ಅಜೀಂ ಪ್ರೇಮ್‌ಜಿಗೂ IT BT Industries ನಡೆಯುತ್ತವಲ್ಲ ಅಲ್ಲಿ ಕೆಲಸ ಕೊಡಿಸಿ ನೋಡೋಣ. ಕೆಲಸ ಕೊಡುತ್ತಾರೆಯೆ? ಅಲ್ಲಿ ಜಮೀನು ಕಳೆದುಕೊಂಡವರಿಗೆ ಕೊಡಲ್ಲ. ಬಚ್ಚೇಗೌಡರವರೆ, ಜಮೀನು ಕಳೆದುಕೊಂಡವರಿಗೆ ಕೊಟ್ಟಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : C and D ಯಲ್ಲಿ ಕೊಡುತ್ತಾರೆ. Skilled ಬೇಕಾದರೆ ಕೊಡುವುದಿಲ್ಲ. ಇದಕ್ಕೆ law ಮಾಡಬೇಕು.

ಶ್ರೀ ಸಿದ್ದರಾಮಯ್ಯ : Law ಮಾಡಿಲ್ಲವೆಂದರೆ ನಾವು Law ಮಾಡಬೇಕು. ನಿಮ್ಮ ಹೊಸಕೋಟೆಯ ಕಡೆಗೆ ಬೇಕಾದಷ್ಟು ಇವೆ. ನಿಮ್ಮ ಹತ್ತಿರ ಎಷ್ಟು ಜನ ಹುಡುಗರು ಬಂದಿದ್ದಾರೆ? ನೀವು ಅವರಿಗೆಲ್ಲಾ ಕೆಲಸ ಕೊಡಿಸುವುದಕ್ಕಾಗುತ್ತದೆಯೆ?

(1-30 PM)

ನಮ್ಮ ಹತ್ತಿರ ಬಂದು ಹುಡುಗರು ಪತ್ರ ತೆಗೆದುಕೊಂಡು ಹೋಗುತ್ತಾರೆ. ಆದರೆ, ಅವರನ್ನು ಗೇಟ್‌ನ ಒಳಗೆ ಬಿಡುವುದಿಲ್ಲ. ಫೋನ್ ಮಾಡಿದರೆ ಕರೆಯುತ್ತೇವೆಂದು ಹೇಳುತ್ತಾರೆ.

ಶ್ರೀ ಮುರುಗೇಶ್ ನಿರಾಣಿ (ಬೃಹತ್ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಭೂಸ್ವಾಧೀನ ಮಾಡಿಕೊಂಡು ಕೈಗಾರಿಕೆ ಪ್ರಾರಂಭ ಮಾಡುವುದಕ್ಕೆ ಅನುಕೂಲತೆ ಮಾಡಿಕೊಟ್ಟಿರುತ್ತೇವೆ. ಇಂಥ ಕಂಪನಿಗಳಲ್ಲಿ ಭೂಮಿಯನ್ನು ಕಳೆದುಕೊಂಡಂಥವರ ಶಿಕ್ಷಣಕ್ಕೆ ಅನುಗುಣವಾಗಿ ಕೆಲಸ ಕೊಡಬೇಕೆಂದು ಕಂಡಿಷನ್ ಹಾಕಿರುತ್ತೇವೆ. ಉದಾಹರಣೆಗೆ ಹೇಳುವುದಾದರೆ, ಟಾಟಾ ಮೋಟರ್ಸ್ ಮತ್ತು ಟಾಟಾ ಮಾರ್ಕೋಪಾಲ್ ಕಂಪನಿಗಳಿಗೆ ರೈತರಿಂದ ಜಮೀನುಗಳನ್ನು ವಶಪಡಿಸಿಕೊಂಡಿದ್ದು, ಇಲ್ಲಿನ ಎಲ್ಲಾ ರೈತರಿಗೆ ಅವರ ಶಿಕ್ಷಣಕ್ಕೆ ಅನುಗುಣವಾಗಿ ಕೆಲಸ ಕೊಟ್ಟಿದ್ದಾರೆ. ಡಾ: ಮಹಿಷಿ ವರದಿ ಪ್ರಕಾರ ಕನಿಷ್ಟ 80% ನಷ್ಟು ಕೆಲಸ ಕೊಡಬೇಕೆಂದು ಇದೆ. ಇಂಥ ಪ್ರಕರಣಗಳಲ್ಲಿ ತಾವೇನಾದರು ಸಲಹೆ ಕೊಡುವುದಾದರೆ, ಅವರ ಶಿಕ್ಷಣಕ್ಕೆ ಅನುಗುಣವಾಗಿ ಕೆಲಸ ಕೊಡಿಸುವಂಥ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ : ಮಾನ್ಯ ಅಧ್ಯಕ್ಷರೆ, ಒಂದು ಕಂಪನಿ ಪ್ರಾರಂಭ ಮಾಡುವಾಗ ಅಲ್ಲಿ ಯಾರ್ಯಾರ ಜಮೀನುಗಳನ್ನು ತೆಗೆದು ಕೊಂಡಿದ್ದಾರೆಯೋ ಅಂಥವರ ಮಕ್ಕಳಿಗೆ ಕೆಲಸ ಕೊಡುವುದಕ್ಕೆ ನಾವು ಆದೇಶ ಮಾಡಿದ್ದೇವೆ. ಆ ಪ್ರಕಾರ ಕೆಲಸಗಳನ್ನು ಕೊಟ್ಟಿದ್ದಾರೆಂದು ಮಾನ್ಯ ಸಚಿವರು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಹಲವಾರು ಪ್ರಾಜೆಕ್ಟ್‌ಗಳು ನಡೆಯುತ್ತಿವೆ. ತಾವೂ ಕೂಡ ಅದೇ ಭಾಗದಿಂದ ಬರುತ್ತೀರಿ. ಯು.ಕೆ.ಪಿ. ಯೋಜನೆಯಿಂದ ಸಂತಸ್ತ್ರರ ಮಕ್ಕಳಿಗೆ ಇವತ್ತಿಚಿನವರೆಗೆ ಎಲ್ಲಿಯಾದರು ಒಂದಾದರು ಸರ್ಕಾರಿ ನೌಕರಿ ಸಿಕ್ಕಿದೆಯೇ? ಯು.ಕೆ.ಪಿ ಯೋಜನೆಗೋಸ್ಕರ

ಮತ್ತು ರಾಜ್ಯದ ಹಿತಕ್ಕೋಸ್ಕರ ಅವರು ತ್ಯಾಗ ಮಾಡಿದ್ದಾರೆ. ಇವತ್ತಿನ ದಿವಸ ಇಂಥವರಿಗೆ ನೌಕರಿ ಕೊಡುವುದಕ್ಕೆ ಆಗುತ್ತಿಲ್ಲ. ಆದ್ದರಿಂದ, ನಾನು ಹೇಳುವುದೇನೆಂದರೆ, ತಾವು ಇದನ್ನು ಒಂದು ಪಾಲಿಸಿಯಾಗಿ ಅಡಾಪ್ಟ್ ಮಾಡಿಕೊಳ್ಳಬೇಕು. You don't restrict that to one project or one region, ಈ ಕಡೆ ಬಂದಿದೆ ಎಂದು ಅಲ್ಲಿಗೆ ಮಾತ್ರ ಸೀಮಿತ ಮಾಡುವುದಕ್ಕೆ ಹೋಗಬೇಡಿ. ಇವತ್ತಿನ ದಿವಸ ಯಾವುದೇ ಒಂದು ಪ್ರಾಜೆಕ್ಟ್‌ನಿಂದ effected ಆದರೂ ಕೂಡ ಅಲ್ಲೊಂದು clause ತಂದು ಕಡ್ಡಾಯವಾಗಿ ಇಂತಿಷ್ಟು ಮೀಸಲಾತಿಯನ್ನು ಕೊಡಬೇಕೆಂಬ ಪಾಲಿಸಿ ತಂದರೆ ಅನುಕೂಲ ವಾಗುತ್ತದೆ. ಇಲ್ಲದಿದ್ದರೆ ಇದಕ್ಕೆ ಏನು ಅರ್ಥ ಇರುವುದಿಲ್ಲ. ಆದ್ದರಿಂದ, ಇದನ್ನು ಮಾಡಬೇಕೆಂಬುದು ಅವರ ಉದ್ದೇಶವಾಗಿದೆ ಹೊರತು ಬೇರೇನು ಇಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುರುಗೇಶ್ ನಿರಾಣಿಯವರೆ, ಸರೋಜಿನಿ ಮಹಿಷಿ ವರದಿ ಬಂದು ಎಷ್ಟು ವರ್ಷ ಆಯಿತು? ಯಾರ ಕಾಲದಲ್ಲಿ ಬಂತು? ಇದು ಇಲ್ಲಿಯವರೆಗೆ ಜಾರಿಯಾಗಿದೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ : 80% ನಷ್ಟು C & D ವರ್ಗದ ನೌಕರಿಯನ್ನು ನೀಡಲಾಗಿದೆ.

ಶ್ರೀ ಸಿದ್ದರಾಮಯ್ಯ : ಇರಬಹುದು. ಆದರೆ, ಕೆಲವು ಕಡೆ ಏನಾಗಿದೆ ಎಂದರೆ ನಮ್ಮ ಮೈಸೂರು ತಾಲ್ಲೂಕಿನಲ್ಲಿ ಸಿಂಧುವಳ್ಳಿ ಟಿ.ವಿ.ಎಸ್. ಮೋಟರ್ ಸೈಕಲ್ ತಯಾರಿಕೆ ಘಟಕ ಇದೆ. ನಿಮ್ಮ ಪ್ರಕಾರ ಅಲ್ಲಿ ಲೋಕಲ್ ಜನರಿಗೆ ಕೆಲಸ ಕೊಡಬೇಕ್ಕಲ್ಲವೇ? ಸ್ಥಳೀಯ ಜನರಿಗೆ ಕೆಲಸ ಕೊಡದೆ, 80% ನಷ್ಟು ಹೊರಗಿನ ಜನರನ್ನು ಕರೆದುಕೊಂಡು ಬಂದು ಕೆಲಸ ಕೊಟ್ಟಿದ್ದಾರೆ. Unskilled ಕೆಲಸ ಮಾಡುವವರನ್ನು ತಮಿಳುನಾಡಿನಿಂದ ಕರೆದುಕೊಂಡು ಬಂದು ಕೆಲಸ ಕೊಟ್ಟಿದ್ದಾರೆ. ಜಮೀನು, ನೀರು, ವಿದ್ಯುಚ್ಛಕ್ತಿಯ ವ್ಯವಸ್ಥೆಯನ್ನು ನಾವು ಮಾಡಿಕೊಡುತ್ತೇವೆ. ಹೊರಗಿನವರಿಗೆ ಏಕೆ ಇಲ್ಲಿ ಕೆಲಸ ಕೊಟ್ಟಿದ್ದೀರಿ ಎಂದು ಕೇಳಿದಾಗ ತುಂಬಾ ಹತ್ತಿರ ಇರುವವರಿಗೆ ಕೆಲಸ ಕೊಟ್ಟರೆ ಯೂನಿಯನ್ ಆಕ್ಟಿವಿಟಿಸ್ ಪ್ರಾರಂಭ ಮಾಡುತ್ತಾರೆ. ಆದ್ದರಿಂದ, ದೂರದಲ್ಲಿ ರುವವರಿಗೆ ಕೊಟ್ಟಿದ್ದೇವೆಂದು ಟಿ.ವಿ.ಎಸ್. ಫ್ಯಾಕ್ಟರಿಯವರು ಹೇಳುತ್ತಾರೆ. ಮತ್ತೆ ಈಗ ಪ್ರತಿಯೊಬ್ಬರು out source ಅಂದರೆ ಹೊರ ಗುತ್ತಿಗೆಯ ಮೇಲೆ ಕೆಲಸ ಕೊಡುವುದಕ್ಕೆ ಪ್ರಾರಂಭ ಮಾಡಿಕೊಂಡಿದ್ದಾರೆ. ಇವರಿಗೆ 11 ತಿಂಗಳು

ಕೆಲಸ ಕೊಟ್ಟು ತೆಗೆಯುತ್ತಾರೆ. ಮತ್ತೆ 11 ತಿಂಗಳು ಕೆಲಸ ಕೊಟ್ಟು ಮತ್ತೆ ತೆಗೆದು ಹಾಕುತ್ತಾರೆ. ಟಿ.ವಿ.ಎಸ್ ಕಂಪನಿ 1997 ಅಥವಾ 1998 ರಲ್ಲಿ ಪ್ರಾರಂಭವಾಗಿದೆ. ಈ ಕಂಪನಿಗೋಸ್ಕರ ಜಮೀನು ಕಳೆದುಕೊಂಡವರಿಗೆ ಇವತ್ತಿನವರೆಗೂ ಅಲ್ಲೆ ಕೆಲಸ ಕೊಟ್ಟಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : Contract Labour Act ಗೆ ಅಮೆಂಡ್ ಮೆಂಟ್ ತರಬೇಕೆಂದು ಮೊನ್ನೆ ದಿವಸ ನಡೆದ Conference ನಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದಾರೆ. Equal work and Equal pay ಕೊಡತಕ್ಕಂಥದು ಈಗ ಆಗುವುದರಿಂದ ಇನ್ನು ಮುಂದೆ ಇದಕ್ಕೆ ಅವಕಾಶ ಇರುವುದಿಲ್ಲ.

ಶ್ರೀ ಸಿದ್ದರಾಮಯ್ಯ : ದಯವಿಟ್ಟು ಅದನ್ನು ಮೊದಲು ತೆಗೆದು ಕೊಂಡು ಬನ್ನಿ.

ಶ್ರೀ ತನ್ವೀರ್ ಸೇಠ್ : Core and non core sector ಯಾವುದು ಬರುತ್ತೆಂದು ಈಗಾಗಲೇ ಆಂಧ್ರ ಪ್ರದೇಶದಲ್ಲಿ ಮಾಡಿದ್ದಾರೆ. ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವವರಿಗೆ ನೀವು ಅವಕಾಶ ಮಾಡಿಕೊಟ್ಟರೆ ಬೇರೆವರಿಗೆ ಕೆಲಸ ಸಿಗುವುದಿಲ್ಲ. core sector ನಲ್ಲಿ ಕಾಂಟ್ರಕ್ಟ್ ಆಧಾರದ ಮೇಲೆ ಎಲ್ಲಿ ನೌಕರರನ್ನು ತೆಗೆದುಕೊಳ್ಳಬಹುದೆಂದು ಆಂಧ್ರ ಪ್ರದೇಶದಲ್ಲಿ ಮಾಡಿದ್ದಾರೆ. ಅದನ್ನು ತರಿಸಿಕೊಂಡು ನೋಡಬಹುದು. (ಗೊಂದಲ) ನಮ್ಮ ನಾಯಕರು ಇದರ ಬಗ್ಗೆ ಮಾತನಾಡುತ್ತಿದ್ದಾರೆ. ಆ ರೀತಿಯಾಗಿ ಇಲ್ಲಿಯೂ ಕೂಡ ಮಾಡುವುದಕ್ಕೆ ಸಾಮರ್ಥ್ಯ ಇಲ್ಲವೆ? ಇದನ್ನು ಪಾಸ್ ಮಾಡಿಕೊಳ್ಳುವುದಕ್ಕೆ ಮಾತ್ರ ನೀವು ಸೀಮಿತರಾಗಿದ್ದೀರಿ.

ಡಾ: ಹೆಚ್.ಸಿ.ಮಹದೇವಪ್ಪ : ಹೊರಗಡೆಯವರು ನಮ್ಮ ರಾಜ್ಯಕ್ಕೆ ಬಂದು establish ಮಾಡುತ್ತಿದ್ದಾರೆ. ಆದ್ದರಿಂದ, ಇವೆಲ್ಲಾ ಅದಕ್ಕೆ ಪೂರಕವಾದಂಥ ವಿಷಯಗಳಿವೆ.

ಅಧ್ಯಕ್ಷರು : ಆಯಿತು. ಮಾನ್ಯ ಸಿದ್ದರಾಮಯ್ಯನವರೆ, ತಾವು ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ, ಕರ್ನಾಟಕದಲ್ಲಿ ಇದನ್ನು ಮಾಡುವ ಅಗತ್ಯ ಇಲ್ಲವೆಂದು ಹೇಳುತ್ತೇನೆ. ಏಕೆಂದ್ರರೆ, ಕರ್ನಾಟಕದಲ್ಲಿ ಖಾಸಗಿ ಯೂನಿವರ್ಸಿಟಿಯನ್ನು ಪ್ರಾರಂಭ ಮಾಡುವುದಕ್ಕೆ ನಾವು ಕಾನೂನಲ್ಲಿ ಅವಕಾಶ ಮಾಡಿಕೊಡುತ್ತಿದ್ದೇವೆ.

ಆದ್ದರಿಂದ ಒಂದು ವೇಳೆ ಇಲ್ಲಿ ಮಾಡುವುದಾದರೆ, ಕರ್ನಾಟಕದವರಿಗೆ quality education ಕೊಡುವಂಥದ್ದು ಆಗಬೇಕು. ಮತ್ತೆ ಕರ್ನಾಟಕದವರಿಗೆ ಮೀಸಲಾತಿಯನ್ನು ಅನುಸರಿಸಬೇಕಾಗುತ್ತದೆ. Quality education ಅನ್ನು ಶ್ರೀಮಂತರಿಗೆ ಅಥವಾ ಹೊರ ದೇಶದವರಿಗೆ ಕೊಡುವುದಾದರೆ, Why should we allow private University? ಆದ್ದರಿಂದ, ಇದೆಲ್ಲಾ ನಮ್ಮ ಉದ್ದೇಶ ಆಗಬೇಕು. ಇನ್ನೊಂದು ತಮಾಷೆ ವಿಷಯ ಏನೆಂದರೆ, Chancellor ಇದ್ದಾರಲ್ಲಾ, Chairperson, the current Chairperson of the sponsoring body shall be the first Chancellor, (Section 14) who shall hold the office of the Chancellor for life. ಈ ರೀತಿಯಾದರೆ ಇದು ಅವರ ಮನೆಯ ಸಂಸ್ಥೆಯಾಗುತ್ತದೆ. ಆದ್ದರಿಂದ, ಇದು ಯೂನಿವರ್ಸಿಟಿ ಹೇಗೆ ಆಗುತ್ತದೆ? ಇದು ಅಕಾಡೆಮಿಕ್ ಹೇಗೆ ಆಗುತ್ತದೆ? ಅದರ ಬದಲು ಅವರು ಟ್ರಸ್ಟ್ ಮಾಡಿಕೊಳ್ಳಬಹುದಲ್ಲವೆ? Why University? Why do you call it as University. ಈತ ಆದ ಮೇಲೆ ಆತನ ಫ್ಯಾಮಿಲಿಯವರು ಇಲ್ಲಿರುತ್ತಾರೆ.

It is going to be family University. Heridatory rights will be created, ಅದು next sectionನಲ್ಲಿದೆ. Sponsoring body ಪುನಃ appoint ಮಾಡುವುದು. Chancellor appoints ಮಾಡುವುದರ ಬಗ್ಗೆ ನಿಮಗೇನಾದರು ಅಧಿಕಾರ ಇದೆಯಾ? Search Committee ಮಾಡಿ ಅಲ್ಲಿ ಬಂದಂಥವರು ಯೋಗ್ಯರಾಗಿದ್ದಾರೆಯೇ ಅಥವಾ ಒಳ್ಳೆಯ academician ಗಳನ್ನು ಮಾಡುವವರು ಇದ್ದಾರೆಂದು ಕೇಳುವಂಥ ಅಧಿಕಾರ ನಿಮಗೆ ಇದೆಯೇ? ಇನ್ನೊಬ್ಬರು ಬಂದು ನಾನು ಸಹ ಒಂದು ಯುನಿವರ್ಸಿಟಿ ತೆಗೆಯುತ್ತೇವೆಂದು ಇನ್ನೊಬ್ಬರು ಬಂದು ಇಲ್ಲಿ ಅವರು life long ಇಲ್ಲಿಯೇ ಉಳಿದುಕೊಳ್ಳುತ್ತಾರೆ. ಅಂದರೆ, ಆತನಾದ ಮೇಲೆ ಆತನ ಮಗ, ಮಗನಾದ ನಂತರ ಆತನ ಮೊಮ್ಮಗ, ಮೊಮ್ಮಗ ಆದ ಮೇಲೆ ಆತನ ಮರಿಮಗ ಆಗುತ್ತಾನೆ. ಇದಕ್ಕೆ ಯುನಿವರ್ಸಿಟಿಯೆಂದು . ಕರೆಯಬೇಕೆ? ಇದನ್ನು ಮಾಡಿದವರು ಯ್ಯಾರು? ಇದನ್ನು ಅಜೀಂ ಪ್ರೇಮ್‌ಜಿರವರೆ ಮಾಡಿಕೊಟ್ಟಿದ್ದಾರೆಯೇ? ಇದನ್ನು ಯಾರು ಮಾಡಿಕೊಟ್ಟಿದ್ದಾರೆಂದು ಗೊತ್ತಿಲ್ಲ. It looks like that, I don't know ಇದನ್ನು ನೀವೇ ಮಾಡಿದ್ದೀರೋ

O.30 F-18

ಅಥವಾ ಅವರು ಮಾಡಿದ್ದರೋ ಎಂಬುದು ನನಗೆ ಗೊತ್ತಿಲ್ಲ. ಇದನ್ನು ಒಪ್ಪಿಕೊಳ್ಳಬಹುದೆ ನೀವೇ ಹೇಳೀ?. Chairman of the sponsoring body will be the first Chancellor and he will be there for his life long and the next Chancellor will be appointed by the sponsoring body, invariably he will be the son or daughter of his family, ಬಡವರ ಮಕ್ಕಳಿಗೆ fees concession ಏನಾದರ ಕೊಡುತ್ತಾರೆಯೇ? Fees concession ಕೊಡಬೇಕೆಂದು ಇದರಲ್ಲಿ ಇದೆಯೇ? ಸ್ಕಾಲರ್ ಶಿಪ್ ಕೊಡಬೇಕೆಂದು ಇದೆಯೇ? ಹಾಗಾದರೆ, ಇದನ್ನು ಏತಕ್ಕೆ ತೆಗೆದುಕೊಂಡು ಬಂದಿರಿ? Quality education to whom? Quality education not to the people who have money, the people who don't have money ಅವರಿಗೆ quality education ಸಿಗಬೇಕು. ಮಾನ್ಯ ಸಿದ್ದು ಸವದಿಯವರೆ ಇದು ಹೌದೋ ಅಥವಾ ಅಲ್ಲವೋ ಎಂಬುದರ ಬಗ್ಗೆ ಹೇಳಿ? ಇದನ್ನು ತರಬೇಡಿ ದಯವಿಟ್ಟು ವಾಪಸ್ಸು ತೆಗೆದುಕೊಳ್ಳಿ, ಇದರ ಅಗತ್ಯ ನಮಗೆ ಇಲ್ಲ. ಇದನ್ನು withdraw ಮಾಡುವುದು ಬೇಡ. ಇದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಒಂದು Join Select Committee ಮಾಡುವುದಕ್ಕೆ ಒಪ್ಪಿಕೊಳ್ಳುತ್ತೀರಾ? ಸಮಿತಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿ ಏನೇನು ಆಗಬೇಕೆಂಬುದರ ಬಗ್ಗೆ ನಿಧಾನವಾಗಿ ಕುಳಿತುಕೊಂಡು ಸಲಹೆಯನ್ನಾದರು ಕೊಡೋಣ.

ಶ್ರೀ ಅರವಿಂದ ಲಿಂಬಾವಳಿ : ನೀವು ಮಾತನಾಡಿದ ಮೇಲೆ ನಾನು ಮಾತನಾಡುವುದಕ್ಕೋಸ್ಕರ ನೀವು ಏನು ಮಾತನಾಡುತ್ತಿದ್ದೀರೆಂಬ ಬಗ್ಗೆ ನೋಟ್ ಮಾಡಿಕೊಳ್ಳುತ್ತಿದ್ದೇನೆ.

Sri Siddaramaiah : You have got all the right to reply. ಆದ್ದರಿಂದ, ನೀವು ಮಾತನಾಡುವುದು ಬೇಡ ಎಂದು ನಾವು ಹೇಳುವುದಿಲ್ಲ. ಆದರೆ, ನನ್ನ ಸಲಹೆಗಳು ಏನೆಂದರೆ, ಇದು ಸಾಮಾನ್ಯ ವರ್ಗದ ಜನರಿಗೆ ಮತ್ತು ಕೆಳ ವರ್ಗದ ಜನರಿಗೆ ಉಪಯೋಗ ಆಗತಕ್ಕಂಥದ್ದಲ್ಲ. ಕೆಳವರ್ಗ ಮತ್ತು ಶೋಷಿತ ವರ್ಗದ ಜನರಿಗೆ ಗುಣಮಟ್ಟದ ಶಿಕ್ಷಣ ಕೊಡುವುದಕ್ಕೆ ಪ್ರಾರಂಭ ಮಾಡತಕ್ಕಂಥ ವಿಶ್ವವಿದ್ಯಾಲಯ ಅಲ್ಲ.

ನೀವು ಶ್ರೀಮಂತರಿಗೆ ಪ್ರತಿಷ್ಠಿತ ವರ್ಗದವರಿಗೆ ಅಥವಾ privileged class ನವರಿಗೆ ನೀವು quality education ಕೊಡುವುದಾದರೆ ಈ ರಾಜ್ಯಕ್ಕೆ ಅದು ಬೇಕೆ?

ಶ್ರೀ ಸಿದ್ದು ಸವದಿ : ಹಣ ಇಲ್ಲದವರಿಗೆ ಗುಣಮಟ್ಟದ ಶಿಕ್ಷಣ ಬೇಡವೆಂದರೆ ಇನ್ಯಾರಿಗೂ ಬೇಡವೇ ಬೇಡ? ಅಂದರೆ ನಮ್ಮ ರಾಜ್ಯದ ಯಾರಿಗೆ ಬೇಡವೆ? ಎಲ್ಲರಿಗೂ ತಿರಸ್ಕಾರ ಮಾಡುವುದಾ?

ಶ್ರೀ ಸಿದ್ದರಾಮಯ್ಯ : ಎಲ್ಲರಿಗೂ ಸಿಗಬೇಕು.

ಶ್ರೀ ಸಿದ್ದು ಸವದಿ : ಹಣ ಇಲ್ಲದವರಿಗೆ ಸಿಗುವುದಾದರೆ, ನಮ್ಮ ರಾಜ್ಯದವರಿಗೆ ಯಾರಿಗೂ ಬೇಡವೆನ್ನಿ. ಎಲ್ಲರಿಗೂ ತಿರಸ್ಕಾರ ಮಾಡುವುದಾ? ಒಂದು ಕಂಪನಿಯವರು ದುಡ್ಡು ಹಾಕಿ..

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರಿಗೆ, ಅವರಿಗೆ ಸ್ವಲ್ಪ ಕುಳಿತು ಕೊಳ್ಳುವುದಕ್ಕೆ ಹೇಳಿ. ನೀವು ಬಿಲ್ ಮೇಲೆ ಮಾತನಾಡುವಾಗ ಮಾತನಾಡಿ. Please ಆಮೇಲೆ ಅವರು ಬಿಲ್ ಮೇಲೆ ಮಾತನಾಡಲಿ.

ಅಧ್ಯಕ್ಷರು : Please ಸಿದ್ದು ಸವದಿಯವರೆ ನೀವು ಆ ಮೇಲೆ ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಅವರು ಆ ಮೇಲೆ ಮಾತನಾಡಲಿ. ನಿಮ್ಮ opportunity ಬಂದಾಗ ಮಾತನಾಡಿ ಬೇಡವೆಂದವರು ಯಾರು? ಬಡವರ ಮಕ್ಕಳಿಗೆ ನೀವು ಬೇಡವೆನ್ನುವುದಾದರೆ ಬೇಡ. ಎಲ್ಲರಿಗೂ ಕೊಡಿ ಎಂದು ನಾನು ಹೇಳುತ್ತಿರುವುದು. ನಮ್ಮವರೆ ಬೇಕಾದಷ್ಟು university ಗಳನ್ನು ಮಾಡಿ ಬಿಟ್ಟಿದ್ದಾರೆ. 1915–16 ರಲ್ಲಿ Mysore University ಪ್ರಾರಂಭ ವಾಯಿತು. ಆಮೇಲೆ Karnataka University ಪ್ರಾರಂಭವಾಯಿತು. 1964 ರಲ್ಲಿ Bangalore University ಪ್ರಾರಂಭವಾಯಿತು. ಈಗ ಎಷ್ಟು ಇವೆ ಎಂದರೆ, ಗುಲ್ಬರ್ಗಾ, ತುಮಕೂರು ಹೀಗೆ ಎಲ್ಲಾ ಸೇರಿ ಒಟ್ಟು 14 University ಗಳು ಇವೆ. ಇವು ಅಲ್ಲದೆ Medical University, Engineering University, Agriculture, Horticulture, Animal Husbandry, ಮುಂದೆ floriculture University ಮಾಡಬೇಕಾಗುತ್ತದೆ. ಆಮೇಲೆ Vegetable University ಮಾಡಬೇಕಾಗುತ್ತದೆ. ಇವೆಲ್ಲದೆ ವೇದ

ಯೂನಿವರ್ಸಿಟಿ. ಆಮೇಲೆ ಋಗ್ವೇದ, ಯಜುರ್ವೇದ, ಅಥರ್ವಣವೇದ ಯೂನಿವರ್ಸಿಟಿಗಳು ಆಮೇಲೆ ಒಂದೊಂದಕ್ಕೆ ಒಂದು ಯೂನಿವರ್ಸಿಟಿಗಳು ಬರುತ್ತವೆ. ಇವೆಲ್ಲಾ ಯಾರಿಗೋಸ್ಕರ ಮಾಡುತ್ತಿದ್ದೀರಿ? ನಾನು ಏನು ಹೇಳುತ್ತಿದ್ದೇನೆಂದರೆ; ಎಲ್ಲರಿಗೂ ಇವತ್ತು ಗುಣಮಟ್ಟದ ಶಿಕ್ಷಣ ಸಿಗಬೇಕು. ಇವತ್ತಿನ ಅಗತ್ಯತೆ ಏನಿದೆ? ಇವತ್ತು ಅನೇಕ Challenges ಗಳನ್ನು ಸೊಸೈಟಿ ಫೇಸ್ ಮಾಡಬೇಕಾಗಿದೆ, ಅದನ್ನು ಫೇಸ್ ಮಾಡಬೇಕಾದರೆ, ಮಾನ್ಯ ಸಿದ್ಧರಾಮಯ್ಯರವರೆ ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕು. ಇದು ಎಲ್ಲರಿಗೂ ಶಿಕ್ಷಣ ಸಿಗುವುದಕ್ಕೆ ಮಾಡತಕ್ಕಂಥ ವಿಶ್ವವಿದ್ಯಾನಿಲಯ ಅಲ್ಲ. ಇದು ಕೆಲವು ಪ್ರತಿಷ್ಠಿತ ವರ್ಗದವರಿಗೆ, ಶ್ರೀಮಂತ ವರ್ಗದವರಿಗೆ, ಹಣ ಇರತಕ್ಕಂಥವರಿಗೆ ಮಾಡುವುದಕ್ಕೆ ಹೊರಟಿರತಕ್ಕಂಥ ಒಂದು ವಿಶ್ವದ್ಯಾನಿಲಯ. ಈ ಬಿಲ್‌ನ್ನು ನಾವು ಮಾಡಿ ಕೊಡಬೇಕೆ? ನಾವು ಸಮಾಜವಾದವನ್ನು ಪ್ರತಿಪಾದನೆ ಮಾಡತಕ್ಕಂಥವರು, ಸಾಮಾಜಿಕ ನ್ಯಾಯ ಸಂವಿಧಾನದಲ್ಲಿ ಪ್ರತಿಪಾದನೆ ಮಾಡಿಕೊಂಡಿರತಕ್ಕಂಥವರು ಮತ್ತೆ ಬಜೆಟ್‌ನಲ್ಲಿ "ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ಎಂದು ನಿಮ್ಮ ಯಡಿಯೂರಪ್ಪನವರು ಹೇಳಿದ್ದಾರೆ. ಅದು ಇಲ್ಲಿ ಎಲ್ಲರಿಗೂ ಸಿಗುತ್ತದೆಯೆ? ಎಲ್ಲಿದೆ? ಅದಕ್ಕಾಗಿ ಇದನ್ನು ದಯಮಾಡಿ withdraw ಮಾಡಿ. ಈ University ನಮಗೆ ಬೇಕಾಗಿಲ್ಲ. ನಮಗೆ ಈಗ ಇರುವಂಥ University ಗಳಿಗೆ ಹೆಚ್ಚಿಗೆ ಹಣ ಕೊಟ್ಟು quality education ಮಾಡುವುದಕ್ಕೆ ಕೊಟ್ಟು, ನಮ್ಮಲ್ಲಿರುವಂಥ facility ಗಳನ್ನು improve ಮಾಡಿ ಅಲ್ಲಿರತಕ್ಕಂಥ Lecturers, Teacher, Professor ಗಳನ್ನು fill-up ಮಾಡಿ. Higher Education ಹೆಚ್ಚು ಒತ್ತು ಕೊಡುವಂಥದ್ದು ಮತ್ತು ಹೆಚ್ಚು ಆಕರ್ಷಣೆ ಮಾಡತಕ್ಕಂಥ ರೀತಿಯಲ್ಲಿ ಅಲ್ಲಿ ಎಲ್ಲಾ ರೀತಿಯ ಸವಲತ್ತುಗಳನ್ನು improve ಮಾಡತಕ್ಕಂಥ ಕೆಲಸವನ್ನು ಮಾಡಿ. ಅದನ್ನು ಬಿಟ್ಟು ಅವರು ಬಂದು ಮಾಡುತ್ತಾರೆ, ನಮ್ಮ ಜವಾಬ್ದಾರಿ ಕಡಿಮೆ ಆಗುತ್ತದೆ 11.05 ಇರತಕ್ಕಂಥ Admission ಇವರು ಬಂದ ಮೇಲೆ ಜಾಸ್ತಿಯಾಗಿ ಬಿಡುತ್ತದೆ, ಇನ್ನುಳಿದಿರತಕ್ಕಂಥ ಬಡ ಮಕ್ಕಳಿಗೆ ಸಿಗುತ್ತದೆನ್ನತಕ್ಕಂಥ ಯಾವುದೇ ಆಶಾಭಾವನೆಯನ್ನು ವಿಚಾರವನ್ನು ಈ ಬಿಲ್ ಮೂಲಕ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನನ್ನ ಸಲಹೆ ಏನೆಂದರೆ, ಈ ಬಿಲ್ ನಮ್ಮ

ಸಮಾಜಕ್ಕೆ ಅಗತ್ಯವಿಲ್ಲ. ಕರ್ನಾಟಕದ ಕನ್ನಡಿಗರಿಗೆ ಇದು ಅಗತ್ಯವಿಲ್ಲ. ಮಾನ್ಯ ಕನ್ನಡ ಹೋರಾಟಗಾರರಾದ ಬೆಲ್ಲದ್‌ರವರು ಏನು ಅನ್ನುತ್ತಾರೆ?

ಶ್ರೀ ಚಂದ್ರಕಾಂತ್ ಬೆಲ್ಲದ್ : ಮಾನ್ಯ ಅಧ್ಯಕ್ಷರೆ, ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕು ಇದರಲ್ಲಿ ಎರಡು ಮಾತಿಲ್ಲ.

ಶ್ರೀ ಸಿದ್ದರಾಮಯ್ಯ : ಪಾಪ ಅವರು ನಮ್ಮ ಪರವಾಗಿದ್ದಾರೆ. ಹೆಚ್ಚು ಕಡಿಮೆ ಎಲ್ಲರೂ ನಮ್ಮ ಪರವಾಗಿಯೆ ಇದ್ದಾರೆ. More than 50% ಮಾನ್ಯ ಬಚ್ಚೇಗೌಡರು ನಮ್ಮ ಪರವಾಗಿಯೆ ಇರುವುದು.

ಡಾ: ಹೆಚ್.ಸಿ.ಮಹದೇವಪ್ಪ : ಶಿಕ್ಷಣ ಸಚಿವರು ಸಂಪೂರ್ಣ ನಮ್ಮ ಪರವಾಗಿಯೆ ಇದ್ದಾರೆ.

ಶ್ರೀ ಸಿದ್ದರಾಮಯ್ಯ : ದಯಮಾಡಿ ನೀವು ಉತ್ತರ ಕೊಡುವಾಗ ಈ ಬಿಲ್ ವಾಪಸ್ಸು ತೆಗೆದುಕೊಂಡಿದ್ದೇವೆಂದು ಹೇಳಿದರೆ ರಾಜ್ಯಕ್ಕೆ, ಕನ್ನಡಿಗರಿಗೆ ಮತ್ತು ನಮ್ಮ ಎಲ್ಲಾ ಮಕ್ಕಳಿಗೂ ಕೂಡ ಒಳ್ಳೆಯದು ಆಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈ ವಿನೂತನ ಮತ್ತು ಕರ್ನಾಟಕದಲ್ಲಿ ಹೊಸದಾಗಿರತಕ್ಕಂಥ ಒಂದು ಮಸೂದೆಯನ್ನು ಇವತ್ತು ತಂದಿದ್ದಾರೆ. ಇದನ್ನು ತಂದಿರುವುದಕ್ಕೆ ಮೂಲ ಸ್ಫೂರ್ತಿ ಏನು ಎನ್ನುವುದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಬಹುಶಃ ಎಲ್ಲರೂ ಫಾರೆನ್‌ಗೆ ಹೋದಾಗಲೋ, ಮಾನ್ಯ ಯಡಿಯೂರಪ್ಪನವರು ಡಾಕ್ಟರೇಟ್ ತೆಗೆದು ಕೊಳ್ಳುವುದಕ್ಕೆ ಹೋದಂಥ ಯೂನಿವರ್ಸಿಟಿಗಳು ಬಹಳಷ್ಟು ಇದ್ದಾವಲ್ಲಾ? ಇದೆ ತರಹ ಇರುವಂಥ ಯೂನಿವರ್ಸಿಟಿಗಳಲ್ಲಿ ತಾನೆ ಕೊಟ್ಟಿರುವುದು. ಅಲ್ಲಿಗೇನಾದರೂ ಹೋದಾಗ ಸ್ಫೂರ್ತಿ ಬಂತೋ ಏನು ಕತೆಯೋ ನನಗೆ ಗೊತ್ತಾಗುತ್ತಿಲ್ಲ. ಆದರೆ ನಾನು ನಿಮ್ಮ ಉದ್ದೇಶವನ್ನು ಪ್ರಶ್ನೆ ಮಾಡುತ್ತಿಲ್ಲ I have my own apprehensions. ದಯಮಾಡಿ ಹೊಸ ಪ್ರಯೋಗ ಮಾಡಬೇಕಾದಾಗ ಎಲ್ಲಾ ತರಹದ ಅನುಮಾನಗಳು ಕೂಡ ಇರುತ್ತದೆ. ಆದರೆ ಒಂದು ಅನುಮಾನಕ್ಕೆ ಕಾರಣವೇನೆಂದರೆ, ನಾನು ಮೂಲತಃ ಹೇಳಿ ಬಿಡುತ್ತೇನೆ. ತಮಗೆ ಗೊತ್ತಿದೆ, ಈಗಾಗಲೇ Deemed University ಗಳು ನಮ್ಮಲ್ಲಿ 4-5 ಇವೆ. ಆ Deemed Universityಗಳ ಮೇಲೆ ಆ University ಗಳು ಎಷ್ಟರಮಟ್ಟಿಗೆ ತಮ್ಮ ಕಾರ್ಯವನ್ನು ಹೇಗೆ ನಿರ್ವಹಣೆ ಮಾಡುತ್ತಿದ್ದಾರೆನ್ನುವುದಕ್ಕೋಸ್ಕರ ಈಗಾಗಲೇ ಕೇಂದ್ರ ಸರ್ಕಾರದಲ್ಲಿ ಒಂದು ಸಮಿತಿಯನ್ನು ಮಾಡಿ ಅವು ತೃಪ್ತಿಯಾಗಿಲ್ಲವೆನ್ನುವ ಕಾರಣಕ್ಕೋಸ್ಕರ ಆ

status ಅನ್ನು ವಾಪಸ್ಸು ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದು ಈಗಾಗಲೇ ದೆಹಲಿಯಲ್ಲಿದೆ. ಅವರು ಒಂದು ತಾರ್ಕಿಕವಾದ ನಿಲುವಿಗೆ ಬಂದು ಬಿಟ್ಟಿದ್ದಾರೆ. ಮಾಧ್ಯಮದಲ್ಲಿ ಓದುತ್ತೇವೆ, ಅದನ್ನು ನಾವು ಕೇಳಿ ತಿಳಿದುಕೊಂಡಿದ್ದೇವೆ. ನಾನು ಒಂದು ವಿಷಯವನ್ನು ಕೇಳುತ್ತೇನೆ; ಯಾರಿಗೆ Deemed University ಗಳಿಗೆ ಕೊಟ್ಟರೋ, ಅವರಿಗೆ ಒಂದು basic infrastructure ಇತ್ತು. ಒಂದು College ಒಂದು Institution ಇತ್ತು, ನೂರಾರು Institutions ಗಳು ಇದ್ದವು, ಹಾಗಾಗಿ Deemed University ಗಳ Status ನ್ನು ಕೊಟ್ಟಿರುವಂಥದ್ದು. ಇಲ್ಲಿ ನನಗೆ ಏನು ಬಂದಿದೆ ಎಂದರೆ, ನಿಮ್ಮ ಆಕ್ಟ್ ಪ್ರಕಾರ ಡಾ: ಪ್ರೇಮಜಿಯವರ ಬಗ್ಗೆ ನಾವು ಏನು ಮಾತನಾಡ ತಕ್ಕದ್ದಲ್ಲಾ? ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಪಡೆದಿರತಕ್ಕಂಥ ಒಬ್ಬ ಕೈಗಾರಿಕೋದ್ಯಮಿ. ಅವರು ನಿಮಗಿಂತ ಜಾಸ್ತಿ ನಿಮ್ಮ ಪಕ್ಕದಲ್ಲಿ ಕುಳಿತಿರತಕ್ಕಂಥ ನಿರಾಣಿಯವರಿಗೆ ಸ್ನೇಹಿತರು. ಸ್ನೇಹಿತರು ಅಂದರೆ ಇನ್ನೇನು ಅರ್ಥಮಾಡಿಕೊಳ್ಳುವುದಕ್ಕೆ ಹೋಗಬೇಡಿ, ಒಬ್ಬ ಕೈಗಾರಿಕೋದ್ಯಮಿ. ಈ foundation ಮುಂದೆ ಬಂದಿದೆ ಎನ್ನುವ ಕಾರಣಕ್ಕೋಸ್ಕರ ನೀವು ಇದನ್ನು ಮಾಡಬೇಕೆಂದು ಪ್ರಸ್ತಾವ ತಂದಿದ್ದೀರಿ. Foundation means: Ajeem Premaji foundation which is a company registered under section 25 of the Companies Act 1956 or any other foundation formed and registered Ajeem Premaji the purpose under section 25 of the companies Act 1956. ಅಂದರೆ ಅಜೀಮ್ ಪ್ರೇಮಜಿ ಕಂಪನಿಗಳು ಇವೆಯಲ್ಲಾ ಆ ಕಂಪನಿಗಳ foundation ಆದಾರದ ಮೇಲೆ ಇವತ್ತು ಯೂನಿವರ್ಸಿಟಿಯನ್ನು ತರುತ್ತಿದ್ದೀರಿ. ನಾನು ಒಂದು ಮೂಲ ಪ್ರಶ್ನೆಯನ್ನು ಕೇಳುತ್ತೇನೆ. ನಮ್ಮ Deemed University ಗಳಿಗೆ infrastructure ಇತ್ತು. ಇಲ್ಲಿ ಯಾವುದೇ ತರಹದ infrastructure ಇಲ್ಲ. ಅವರಿಗೆ ಇಲ್ಲಿ ದೊಡ್ಡ ದೊಡ್ಡ ಕಂಪನಿಗಳು ಇವೆ. ಮಾಹಿತಿ ತಂತ್ರಜ್ಞಾನದಲ್ಲಿ industries, training centres ಇನ್ನೊಂದು ಇರಬಹುದು, ಎಲ್ಲಾ ಇರಬಹುದು, ಇದು ಇವರ infrastructure. ಆ infrastructure ಮೇಲೆ ನೀವು ಇವರಿಗೆ University status ನ್ನು ಕೊಡುವುದು ಸಾಧ್ಯವೆ? ನೀವು ಮೂಲದಿಂದ ಯೋಚನೆಯನ್ನು ಮಾಡಿ. ನನ್ನ ಸಲಹೆ ಏನೆಂದರೆ, ನಮ್ಮ

ರಾಜ್ಯದಲ್ಲಿರತಕ್ಕಂಥವರು ಇಬ್ಬರು. ಒಂದು ಕಡೆ ನಾರಾಯಣಮೂರ್ತಿಯವರು ಇದ್ದಾರೆ ಮತ್ತು ಡಾ॥ ಪ್ರೇಮಜಿಯವರು ಇದ್ದಾರೆ, ಅದನ್ನು ನಾನು ಒಪ್ಪುತ್ತೇನೆ. ಅವರ ಉದ್ದೇಶವನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ ನಾರಾಯಣಮೂರ್ತಿಯವರು ಮೈಸೂರಿನಲ್ಲಿ ಇಡೀ ಪ್ರಪಂಚದ ಮಟ್ಟದಲ್ಲಿ ಮೆಚ್ಚತಕ್ಕಂಥ ರೀತಿಯಲ್ಲಿ ಒಂದು Training Center ನ್ನು ಮಾಡಿರುತ್ತಾರೆ.

ಆ ರೀತಿಯಾಗಿ training ಕೊಡುವಂತಹ ಸಾಕಷ್ಟು institutions ಇದ್ದಾಗ ಅವರು ಏನಾದರೂ ಒಂದು ಯೂನಿವರ್ಸಿಟಿಯನ್ನು ಕೇಳಿದರೆ there is something. ಇಲ್ಲಿ ಏನಾಗಿದೆ ಎಂದರೆ, ಆ ರೀತಿಯಾಗಿ ವಿಶ್ವದಲ್ಲಿ ಮೆಚ್ಚತಕ್ಕಂತಹ ಒಬ್ಬ ಕೈಗಾರಿಕೊದ್ಯಮಿಯಾಗಿದ್ದಾರೆ. ಅವರಿಗೆ ಪದ್ಮಭೂಷಣ, ಪದ್ಮವಿಭೂಷಣ ಪ್ರಶಸ್ತಿ ಎಲ್ಲವನ್ನು ಕೊಟ್ಟಿದ್ದಾರೆ. ಆದರೆ ಅವರು ಒಬ್ಬ ಕರ್ನಾಟಕದ ಹೆಮ್ಮೆಯ ಪುತ್ರ ಅದರಲ್ಲಿ ಎರಡನೆಯ ಅನುಮಾನವೇನು ಇಲ್ಲ. ಅವರ ಉದ್ದೇಶವನ್ನು ಸಹ ನಾನು ಅಲ್ಲಗಳೆಯುತ್ತಿಲ್ಲ. ಆದರೆ ಈ ರೀತಿಯಾಗಿ ಅವರಿಗೆ ಒಂದು ವಿಶ್ವವಿದ್ಯಾನಿಲಯವನ್ನು ವಹಿಸಿಕೊಡುವಂತಹ ಸಂದರ್ಭದಲ್ಲಿ ತಾವು ಬಹಳ ಎಚ್ಚರಿಕೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ ಇದರ ಬಗ್ಗೆ ನನಗೆ ಗೊತ್ತಿಲ್ಲ, ನಿಮ್ಮ ಬಿಲ್‌ನ್ನು ನೋಡಿಯೇ ನಾನು ಮಾತನಾಡುತ್ತಿರುವುದು. ಅವರದು ಯಾವ infrastructure ಇದೆ, ಅದನ್ನು ತಾವು ಹೇಗೆ ಕೊಡುತ್ತೀರಿ. What is the basis for giving him the university? ನಿಮ್ಮ ಉದ್ದೇಶ ಬೇರೆ ಇರಬಹುದು. ಈ ಯೂನಿವರ್ಸಿಟಿಯನ್ನು ಕೊಟ್ಟ ಮೇಲೆ ನೀವು institutions ನ್ನು start ಮಾಡಿಸುತ್ತೀರಾ? Instead of doing that, they should have statrted the institutions. They should have started the colleges and should have come before the Government for the affiliation or something like a University. ಆ ತರಹ ಬರಬಹುದಾಗಿತ್ತು. ಆದರೆ ಮೂಲತಃ ಇಲ್ಲಿ ಏನಾಗಿದೆ ಎಂದರೆ; ನನಗನಿಸುತ್ತದೆ ಪ್ರೇಮ್‌ಜೀಯವರ ಆ ಕಂಪನಿಯು ಇವತ್ತು ಚೆನ್ನಾಗಿದೆ, ನಾಳೆ ದಿವಸ ಆರ್ಥಿಕ ಕುಸಿತವಾದರೆ? ಅಷ್ಟಾದರೂ ಕೂಡ ಇವರು ಮಾಹಿತಿ ತಂತ್ರಜ್ಞಾನದಲ್ಲಿ ಉಳಿದುಕೊಂಡು ಬಂದಿದ್ದಾರೆ. ಪರಿಸ್ಥಿತಿ ಏನಾಗಿದೆ ಎಂದು ಇದು ನಿಮಗೆ ಗೊತ್ತಿದೆ. ಅಮೇರಿಕಾ ದೇಶದ ಅಧ್ಯಕ್ಷರಾದ ಶ್ರೀ ಓಬಾಮರವರು ಈಗಾಗಲೇ ಹೊರದೇಶದಲ್ಲಿ ಕಂಪನಿಗಳಲ್ಲಿರತಕ್ಕಂತಹವರೆಲ್ಲರೂ ಕೂಡ tax avoid ಮಾಡುವುದಕ್ಕೋಸ್ಕರ

ಬರುತ್ತಿದ್ದೀರಿ, ವಾಪಸ್ಸು ಬನ್ನಿ ಎಂದು ಹೇಳುತ್ತಿದ್ದಾರೆ. suppose ನಾಳೆ ಏನಾದರೂ ಅವರು ವಾಪಸ್ಸು ಅಮೇರಿಕಾಕ್ಕೆ ಹೋಗುವಂತಹ ಪ್ರಶ್ನೆ ಬಂದರೆ ಇವರ ಅಸ್ತಿತ್ವವೇನು? ಇವರು basically Education Institution start ಮಾಡಿದರೆ ಆಗ ಇದು ಅಸ್ತಿತ್ವದಲ್ಲಿ ಉಳಿಯುವುದಕ್ಕೆ ಸಾಧ್ಯವಿದೆ. ಯಾರದು business ಇರಲಿ, ಇಲ್ಲದಿರಲಿ ಇಲ್ಲಿ basis for the university is only a company. ಅಂದರೆ ಅವರ ಉದ್ದೇಶವು ಈ ತರಹ ಇರಬಹುದು. Yes, they have made lot of money. ಇನ್ನು ಮಾಹಿತಿ ತಂತ್ರಜ್ಞಾನದಲ್ಲಿ ಬಹಳಷ್ಟು ದುಡ್ಡನ್ನು ಮಾಡಿದ್ದಾರೆ. ಇದನ್ನು ಕೂಡ ಎಲ್ಲೋ ಒಂದು ಕಡೆ portion amount ನ್ನು ಹಾಕಿ ಇದರಲ್ಲಿಯೂ ಕೂಡ ದುಡ್ಡು ಮಾಡುವುದಕ್ಕೆ ಹೊರಟಿರಬಹುದು, ಅದರಲ್ಲಿ ಏನು ಇಲ್ಲವೆಂದು ಅಲ್ಲ. Business interest ಇಲ್ಲವೆಂಬ ಮಾತನ್ನು ಹೇಳುವುದಿಲ್ಲ. ಈಗ ನನಗೆ ಮಾತನಾಡುವಾಗ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಶ್ರೀ ನಾರಾಯಣಮೂರ್ತಿಯವರದ್ದು ಕೂಡ ಒಂದು foundation ಇದೆ. They are doing lot of charity works. ಏಕೆಂದರೆ ನಮ್ಮ ಜಿಲ್ಲೆಯಲ್ಲಿ ಬಂದು ಪ್ರತಿಯೊಂದು ಸ್ಕೂಲ್ ಮಕ್ಕಳಿಗೂ ಕೂಡ ಅವರು text-booksನ್ನು ಹಾಗೂ Note booksನ್ನು ಹಂಚಿದ್ದಾರೆ. ಈ ರೀತಿಯ ಕಾರ್ಯಕ್ರಮಗಳು ಸಾಕಷ್ಟು ಇದೆ. ನಾನು ಅವರನ್ನು ಕೇಳಿದೆ. ಏನು ಇಷ್ಟೆಲ್ಲಾ ಮಾಡುತ್ತೀರಿ ಅಂದೆ. They are spending crores and crores. ಆ ರೀತಿಯಾಗಿ ಅವರು charity works ಮಾಡುತ್ತಿದ್ದಾರೆ. ನಾನು ಅದನ್ನು ನೋಡಲೇ ಇಲ್ಲ. ಮೈಸೂರಿನಲ್ಲಿ ಕಟ್ಟಿರುವಂತಹ institution ಬಗ್ಗೆ ಮೊನ್ನೆ ಶ್ರೀಮತಿ ಸೋನಿಯಾಗಾಂಧಿಯವರು ಬಂದು inauguration ಮಾಡಿದರು. That is a world class infrastructure. If they come forward to establish a university, you agree. But other than the company, other than the business; what infrastructure they have? ಹೇಗೆ ನೀವು ಈ ಬಿಲ್ಲನ್ನು ತರುವುದಕ್ಕೆ ಸಾಧ್ಯ ಎನ್ನುವಂತಹದ್ದು ನನ್ನ ಮೂಲ ಪ್ರಶ್ನೆ. ಆದರೆ ಅದಕ್ಕೋಸ್ಕರವೆ ನೀವು ಎಲ್ಲೋ ಒಂದು ಕಡೆಗೆ ಈ private university ಗಳು ಬರಬಾರದು ಎನ್ನುವಂತಹ ಮಾತನ್ನು ಕೂಡ ನಾನು ಹೇಳುವುದಿಲ್ಲ. ಏಕೆಂದರೆ ಇದನ್ನು ಎಲ್ಲರೂ ಮಾಡುವುದಕ್ಕಾಗುವುದಿಲ್ಲ. ಈಗ ನಾನು ಯೂನಿವರ್ಸಿಟಿಯನ್ನು ಮಾಡುವುದಕ್ಕಾಗುವುದಿಲ್ಲ, ನೀವು

ಮಾಡಿದರೂ ಮಾಡಬಹುದು. ಆದರೆ ನಾನು ಮಾಡುವುದಕ್ಕಾಗುವುದಿಲ್ಲ. ಯಾರಿಗೆ ಮೂಲಧನವಿದೆಯೋ ಅದರ ಮುಖೇನ ಅವರಿಗೆ business ಗೆ ಸಹಾಯವಾಗುತ್ತದೆ ಅದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ಎಲ್ಲೋ ಒಂದು ಕಡೆಗೆ education ಬೇಕು. ನೀವು ಆ ಬಗ್ಗೆ ಬಜೆಟ್‌ನಲ್ಲಿ ಹೇಳಿದ್ದೀರಿ. 11.5 ರಿಂದ 22 ಪಾಯಿಂಟ್‌ಗೆ ತೆಗೆದುಕೊಂಡು ಹೋಗುತ್ತೇವೆಂದು ಹೇಳಿದ್ದೀರಿ, that is good intention, I don't dispute on it. ಆ ತರಹ ಶಿಕ್ಷಣ ಕೊಡಬೇಕಾಗುತ್ತದೆ. This university ನೀವು ಉದ್ದೇಶ ಇಟ್ಟುಕೊಂಡಿರುವುದು ಏನು ಎಂದರೆ ಈ ಯೂನಿವರ್ಸಿಟಿಗೆ ಬೇರೆ ಯೂನಿವರ್ಸಿಟಿಗಿಂತ ವೈವಿಧ್ಯಮಯವಾಗಿರುವಂತಹ ಉದ್ದೇಶವಿದೆ ಎಂದು ನಾನು ಭಾವನೆಯನ್ನು ಮಾಡಿಕೊಳ್ಳುತ್ತೇನೆ. ಏಕೆಂದರೆ, in the line of information technology ಇರಬಹುದು. ಅಥವಾ research ಇರಬಹುದು. ಈ ರೀತಿಯಾಗಿ ನಾನಾ ರೀತಿಯ ಉದ್ದೇಶಗಳನ್ನು ಇಟ್ಟುಕೊಂಡಿರುವಂತಹ ಒಂದು ಉದ್ದೇಶವಿರಬಹುದು. objective of university ಅಂದಾಗ Provide instruction, teaching, mining research development in various discipline in the areas such as elementary education, secondary education, education management, education policy, education in finance, school quality framework, teaching learning, teacher education, technology in education including other than fields of development and the subject disciplines such as social science, humanities and management and make provision for research advancement and dissemination of knowledge of these fields. ಇದೇ ತರಹ education ನ್ನು. ಇದೇ ತರಹ ಉದ್ದೇಶ ನಮ್ಮ ಎಲ್ಲಾ ಯೂನಿವರ್ಸಿಟಿಗಳಿಗೂ ಇದೆ. ಅದಕ್ಕಿಂತ ವಿಭಿನ್ನವಾಗಿ ಏನು ಇರುವುದಿಲ್ಲ. ಏನೋ ವಿಭಿನ್ನವಾಗಿ ಏನಾದರೂ ಇದೆಯೇ ಎಂದು ನಾನು ಅಂದುಕೊಂಡಿದ್ದೆ. ನಮ್ಮ ಯಾವ ಯೂನಿವರ್ಸಿಟಿಗಳು ಮಾಡದೆ ಇರುವಂತಹ ರೀತಿಯಲ್ಲಿ specific ಆಗಿ ಯಾವುದೋ ಒಂದು field ನಲ್ಲಿ ಎಲ್ಲಿಯೂ establish ಆಗಿಲ್ಲ, ನಮ್ಮ ಯೂನಿವರ್ಸಿಟಿಯಲ್ಲಿ ಕೊಡುವುದಕ್ಕಾ ಗಲಿಲ್ಲ. ಆ ತರಹ education ಕೊಡುವುದಕ್ಕಾಗಲಿಲ್ಲ, ಅಂತಹ ಕಡೆ ನೀವು ಏನಾದರೂ ಕೊಟ್ಟಿದ್ದೀರೆನೋ ಎಂದು ಉದ್ದೇಶವನ್ನು ಇಟ್ಟುಕೊಂಡಿದ್ದೆ. ನಿಮ್ಮ ಈ

O.30 F-19

ಬಿಲ್ಲಿನಲ್ಲಿ ನನಗೇನು ಅಂತಹದ್ದು ಕಾಣುವುದಿಲ್ಲ. ನೀವು ಎಷ್ಟು ಪ್ಯಾರಾ ಓದಿಕೊಂಡು ಬಂದರೂ ಕೂಡ ಅದು ನಮಗೆ ಕಾಣುವುದಿಲ್ಲ. ಆದರೆ ಒಂದು ಏನೆಂದರೆ, ಅವರು ಏನು ನಮ್ಮಿಂದ ಹಣ ಕೇಳುವುದಿಲ್ಲ. ಇಲ್ಲಿ ಅವರದೆ ದುಡ್ಡು, ಅವರೆ ಬಂಡವಾಳವನ್ನು ಹಾಕುತ್ತಾರೆ. ಆದರೆ ಒಂದು ಕಾರಣವೆಂದರೆ, ಅವರು ಯಾವುದೇ ಕಾರಣಕ್ಕೂ ಜಮೀನು ಬೇಕೆಂದು ನಮ್ಮ ಹತ್ತಿರ ಬರಬಾರದು. complete ಅವರದೆ ಆದಂತಹ infrastructure ಆದರೆ there is something, ಆದರೆ ಎಲ್ಲೋ, ಒಂದು ಕಡೆಗೆ ನಾನು ಹೇಳುತ್ತೇನೆ. ನಿಮ್ಮ restrictions ಅವರ ಮೇಲೆ ಇರಬೇಕಾಗುತ್ತದೆ. appointments ಇರಬಹುದು, ಇನ್ನೊಂದಿರಬಹುದು. ಯಾವ ತರಹ Education ಕೊಡುತ್ತಾರೆನ್ನುವ ಬಗ್ಗೆ ನಮ್ಮದು ಎಲ್ಲೋ ಒಂದು ಕಡೆಗೆ ಸರ್ಕಾರದ ಒಂದು close contact ಇರಬೇಕು, eyes of Government only ಇರಬೇಕಾಗುತ್ತದೆ ಎನ್ನುವಂತಹ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಎಲ್ಲೋ ಒಂದು ಕಡೆಗೆ ಕೊನೆಗೆ ಒಂದನ್ನು ಮಾಡಿದ್ದೀರಿ. Power to dissolve University ಅಂದರೆ ಏನೇ ಆಸ್ತಿಯನ್ನು ಮಾಡಿದರೂ ಕೂಡ ಇದರ ಬಗ್ಗೆ ದಯಮಾಡಿ ನಾನು ಹೇಳುತ್ತೇನೆ. ನೀವು ಒಂದು condition ನ್ನು ಹಾಕಬೇಕು. ಇವತ್ತು ಏನಾದರೂ business ಮಾಡುತ್ತಿದ್ದಾರೆ. ನಾಳೆ business ಏನಾದರೂ ಹೆಚ್ಚು ಕಡಿಮೆ ಆದರೆ ಅವರು ಅಂಗಡಿಯನ್ನು ಮುಚ್ಚಿಕೊಂಡು ಹೋಗಬಾರದು. ಅವರೆಲ್ಲರೂ ಹೋಗುತ್ತಾರೆ ಏಕೆಂದರೆ ಅವರೆಲ್ಲರೂ ವ್ಯವಹಾರಸ್ಥರು ಆಗಿದ್ದಾರೆ. ಆದರೆ ನಿಮಗೆ ಇಲ್ಲಿ ಯೂನಿವರ್ಸಿಟಿ ಅಂದರೆ they start with, they should have some properties ಏನು property ಇದೆ ನಿಮಗೆ. ನೀವು ಅವರಿಗೆ ಯಾವ ರೀತಿಯಾಗಿ University statusನ್ನು ಕೊಡುತ್ತೀರಿ? ಈಗ power to dissolve. In case if you dissolve, the entire property should vest in the Government, not with anybody and the Government should be in a position to take over that university in the event of any change in their policies and programmes, intentions and all these ಈ ರೀತಿಯಾಗಿ ಇನ್ನೊಂದು ಸ್ವಲ್ಪ stringent clauses ಇಟ್ಟರೆ ಅದಕ್ಕೆ ಅರ್ಥ ಬರುತ್ತದೆ. ನಾನು ಒಂದು ಹೇಳುತ್ತೇನೆ, ದಯಮಾಡಿ ತಾವು

ಪ್ರೇಮ್‌ಜೀ ಅವರ ಹತ್ತಿರ ಈ ಬಗ್ಗೆ ಚರ್ಚೆ ಮಾಡಿ. ಈ ಬಿಲ್ ಪಾಸಾದ ತಕ್ಷಣ ಆಗುವುದಿಲ್ಲ. ದಯಮಾಡಿ ಅವರಿಗೆ, ಅವರ ಉದ್ಯಮಕ್ಕೆ ಪೂರಕವಾಗಿ ರುವಂತಹ ಏನು Human resource ಬೇಕೋ ಆ ಕಾರಣಕ್ಕೋಸ್ಕರ ಅವರು ಇಲ್ಲಿಗೆ ಬಂದಿದ್ದಾರೆ. ಬೇರೆ ಏನು ಕರ್ನಾಟಕದಲ್ಲಿ ಇನ್ನೇನು ಸುಧಾರಣೆ ಯನ್ನು ಮಾಡುತ್ತೇವೆ ಎಂದು ಏನು ಇಲ್ಲ. ಅದೆಲ್ಲಾ ಯಾರೋ ಒಬ್ಬರಿಗೆ ನಮ್ಮಂಥವರಿಗೆ ಅಥವಾ ನಿಮ್ಮಂಥವರಿಗೆ ಇರಬಹುದು. ಈ ಉದ್ಯಮಿಗಳಾ ದವರಿಗೆ ಯಾರಿಗೂ ಅದು ಇರುವುದಿಲ್ಲ. ಅವರಿಗೆ money making is the only thing. They have borrowed money from the shareholders and shareholders ಗೆ ಸಮಾಧಾನ ಮಾಡುವುದನ್ನು ಬಿಟ್ಟರೆ ಬೇರೆ ಏನು ಇರುವುದಿಲ್ಲ. ಅವರು ಏನು ಬೇಕಾದರೂ ಮಾಡುತ್ತಾರೆ. ಅವರಿಗೆ ಈ social justice ಎಲ್ಲಾ ಇರುತ್ತದೆ ಎಂದು ನೀವು ಏನು ಪರೀಕ್ಷೆ ಮಾಡುತ್ತೀರೋ ಅದು ತಪ್ಪಾಗುತ್ತದೆ but I don't deny his integrity ಅದನ್ನು ನಾನು question ಮಾಡುತ್ತಿಲ್ಲ. But as a Government we have to make use of the resoures also. ಯುನಿವರ್ಸಿಟಿಯನ್ನು ನೀವು ಕೊಟ್ಟು ನಾಳೇ ಏನೋ ಎಲ್ಲಾ ಯೂನಿವರ್ಸಿಟಿಗಳಿಗಿಂತ ಚೆನ್ನಾಗಿ ಅವರು ಮುಂದೆ ಬರುವುದಾದರೆ it is a welcoming thin. If they are going to attract the students from the other countries it is a welcoming proposition. ಆದರೆ ಒಂದು ಮಾತನ್ನ ಹೇಳುತ್ತೇನೆ, ಇವತ್ತು ನಮಗೆ ಏನಾಗುತ್ತದೆ; Education ಬಗ್ಗೆ ನೀವು ಬಿಲ್‌ನ್ನು ತಂದಿರಬೇಕಾದಾಗ್ಯೂ ಒಂದು ಯೋಚನೆಯನ್ನು ಮಾಡಬೇಕು. ನಮ್ಮ ಮಕ್ಕಳು, ಎಲ್ಲಾ ಮಕ್ಕಳು ಕೂಡ ಇವತ್ತು ಸಾರಸಗಟಾಗಿ ಬೇರೆ ಬೇರೆ ದೇಶಕ್ಕೆ ಹೋಗುತ್ತಿದ್ದಾರೆ. ಇಂಗ್ಲೆಂಡ್‌ಗೆ ಹಾಗೂ ಆಸ್ಟ್ರೇಲಿಯಾಕ್ಕೆ ಹೋಗುತ್ತಿದ್ದಾರೆ. ಅಮೇರಿಕಾದವರು ಹೆಚ್ಚಾಗಿ ನಮ್ಮನ್ನು ಬಿಟ್ಟುಕೊಳ್ಳುವುದಿಲ್ಲ ಆದರೂ ಕೂಡ ಹೋಗುತ್ತಿದ್ದಾರೆ. ಎಲ್ಲಾ ಕಡೆಯಲ್ಲಿಯೂ ಹೋದರೂ ಕೂಡ ಇವತ್ತು ಏನಾಗುತ್ತಿದೆ ಆಸ್ಟ್ರೇಲಿಯಾದಲ್ಲಿ ಸಿಕ್ಕಾಪಟ್ಟೆ ಜನರು ಹೋಗುತ್ತಿದ್ದಾರೆ. ಅಲ್ಲಿ ಜನಾಂಗೀಯ ಸಮಸ್ಯೆ ಹುಟ್ಟಿಕೊಂಡಿದೆ. ಹಾಡುಹಗಲಿನಲ್ಲಿ ನಮ್ಮ ಮಕ್ಕಳು ಕೊಲ್ಲುವಂತಹ ಪರಿಸ್ಥಿತಿ ಯಾಗಿದೆ. ಏತಕ್ಕೋಸ್ಕರವಾಗಿ ಅವರು ಅಲ್ಲಿಗೆ ಹೋಗಿದ್ದಾರೆ; ಅವರು ಹೋಗಿರುವುದೆಲ್ಲವೂ ಶಿಕ್ಷಣಕ್ಕೋಸ್ಕರ. ಅವರೆಲ್ಲರೂ ಎಂಬಿಎ, ಎಂಸಿಎ, ಎಂಎಸ್ ಈ ತರಹ qualification ಮಾಡುವುದಕ್ಕಾಗಿ

ಹೋಗುತ್ತಿದ್ದಾರೆ. ಬಹುಶಃ ಅಂತಹ infrastructure ಭಾರತದಲ್ಲಿ ಇದ್ದಿದ್ದರೆ ಅವರು ಹೋಗುತ್ತಿರಲಿಲ್ಲ ಅದು ನನಗೂ ಕೂಡ ಅರ್ಥವಾಗುತ್ತದೆ. If Ajim Premji can create thet infrastructure in India or in Bangalore I welcome it, there is no doubt. ನಾನು ಏಕೆ ಇದನ್ನು ಹೇಳುತ್ತೇನೆಂದರೆ, ನೀವು before passing the Bill, They have to keep all these in view. ನಿಮ್ಮ act ಇನ್ನು ಸ್ವಲ್ಪ stringent ಇರಬೇಕಾಗುತ್ತದೆ.

ಈಗ ನೀವು ಒಂದು ಸಾರಿ ಆ ವಿಶ್ವವಿದ್ಯಾಲಯ ಮಾಡಿಕೊಟ್ಟುಬಿಟ್ಟರೆ ನಾಳೆ ನೀವು ಏನೂ ಪ್ರಶ್ನೆ ಮಾಡುವ ಹಾಗಿಲ್ಲ. ನೀವು ಆ ರಿಪೋರ್ಟ್ ಅನ್ನು ಅಸೆಂಬ್ಲಿಯಲ್ಲಿ lay ಮಾಡಬೇಕೆಂಬ ಮಾತನ್ನು ಹೇಳಿದ್ದೀರಿ. ಅದರಲ್ಲಿ ಸ್ವಲ್ಪ ಮಟ್ಟಿಗೆ ನಮಗೆ ಗೊತ್ತಾಗುತ್ತದೆ. Atleast ಅದನ್ನು lay ಮಾಡಿದಾಗ ಯಾವುದೋ ಒಂದು Subject committee ಅದನ್ನು review ಮಾಡುತ್ತಾರೆ, ಆಗ ಅದರ ಬಗ್ಗೆ ಸ್ವಲ್ಪಮಟ್ಟಿಗೆ ಗೊತ್ತಾಗುತ್ತದೆ. ಆಂತರಿಕವಾದ ವಿಚಾರಗಳಲ್ಲೂ ಕೂಡ ನೀವು ಸ್ವಲ್ಪ ಎಲ್ಲೋ ಒಂದು ಕಡೆ some more control is necessary ಎಂಬುದು ನನ್ನ ಅಭಿಪ್ರಾಯ. ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕು, ನಿನ್ನೆ ಪತ್ರಿಕೆಯಲ್ಲಿ ತಾವು ನೋಡಿದ್ದೀರಿ ಎನ್ನಿಸುತ್ತದೆ, ಒಬಾಮಾರವರು ಒಂದು statement ಕೊಡುತ್ತಾರೆ ಭಾರತ ದೇಶದಿಂದ ಬರುತ್ತಿರುವಂಥ Educationists, Scientists, Researchers ಅನ್ನು ನೋಡಿದಾಗ ಒಂದು ರೀತಿಯಲ್ಲಿ teerrorism ಎನ್ನುವಂತೆ ಅಂದರೆ ಅಮೆರಿಕಾದವರ ಉದ್ದೇಶ ಹೇಳುತ್ತಾರೆ, ಒಂದು ರೀತಿಯ ಭಯೋತ್ಪಾದನಾ ರೀತಿಯಲ್ಲಿ ಇವತ್ತು ಬರುತ್ತಿದ್ದಾರೆ ಎಂಬ ಮಾತನ್ನು ಹೇಳುತ್ತಾರೆ. ಅಂದರೆ They are afraid of our intelligence. ಅದನ್ನು ನಾನು ಒಪ್ಪುತ್ತೇನೆ. ಎಲ್ಲೋ ಒಂದು ಕಡೆ ಆಸ್ಟ್ರೇಲಿಯಾ ದೇಶಕ್ಕೆ ಹೋಗಿ ನಮ್ಮ ಮಕ್ಕಳು ಎಲ್ಲರೂ ಜನಾಂಗೀಯ ಸಮಸ್ಯೆಯಿಂದ ಹಾಡು ಹಗಲಲ್ಲಿ ಸಾಯುತ್ತಿದ್ದಾರೆ. ಆ ಮಕ್ಕಳು ಹೋಗಿರುವವರು ವಾಪಸ್ಸು ಬರುವುದಕ್ಕೆ ಸಾಧ್ಯವಿದೆ. ಅದನ್ನು ಇಲ್ಲವೆಂದು ಹೇಳುವುದಿಲ್ಲ. ಇದನ್ನೆಲ್ಲಾ ನೋಡಿದಾಗ ನನಗೆ ಎಲ್ಲಿ ಅನುಮಾನ ಬರುತ್ತಿದೆ ಎಂದರೆ WIPRO ಒಂದು ದೊಡ್ಡ ಕಂಪನಿ ಬಹಳಷ್ಟು ಜನರಿಗೆ ಉದ್ಯೋಗ ನೀಡಿರಬಹುದು, ಅವರಿಗೆ ಪೂರಕವಾಗಿ Human resources development ಮಾಡುವುದಕ್ಕೆ ಈ ಯೂನಿವರ್ಸಿಟಿ ಮಾಡಬೇಕು

ಎನ್ನುವುದಾದರೆ ಪ್ರಯೋಜನ ಆಗುವುದಿಲ್ಲ. ಎಲ್ಲೋ ಒಂದು ಕಡೆ ಸಾಮಾಜಿಕ ನ್ಯಾಯಗಳು ಇರಬೇಕಾಗುತ್ತದೆ and giving a higher education also ಇದು ಬೇಕಾಗುತ್ತದೆ. ನಮ್ಮ ಕಥೆ ಏನಾಗಿದೆಯೆಂದರೆ ನಮ್ಮ ಯುನಿವರ್ಸಿಟಿಗಳು ಇವತ್ತು ನಾಯಿ ಕೊಡೆಗಳಂತೆ ಬರುತ್ತಿವೆ. Agricultural University etc, ಏನು ಕಣ್ಣು ಮುಚ್ಚಿಕೊಂಡು ಯುನಿವರ್ಸಿಟಿಗಳು ಬರುತ್ತಿವೆ, ಅದರಲ್ಲಿ ಒಬ್ಬ ಟೀಚರ್ ಅನ್ನು ನೇಮಕ ಮಾಡಲಿಕ್ಕೆ ಅವರಲ್ಲಿ ದುಡ್ಡಿಲ್ಲ. ಇವತ್ತು lecturers ಅನ್ನು ನೇಮಕ ಮಾಡಲಿಕ್ಕೆ ಅವರಲ್ಲಿ ದುಡ್ಡಿಲ್ಲ. ಇಲ್ಲಿ ಈ ರೀತಿ ಪ್ರೇಂಜಿ ಯುನಿವರ್ಸಿಟಿ ಬಂದಾಗ ಅಲ್ಲಿ ಆ ಸಮಸ್ಯೆ ಇರುವುದಿಲ್ಲ. ಏನಾದರೂ ಇದನ್ನು ಕೊಡಿ, ನಮ್ಮ Engineering Colleges ನಲ್ಲಿರುವವರೆಲ್ಲಾ ಹೋಗಿ ಅಲ್ಲಿಗೆ ಕೆಲಸಕ್ಕೆ ಸೇರುತ್ತಾರೆ. ಒಬ್ಬರ ಅಡ್ರೆಸ್ ಸಿಗುವುದಿಲ್ಲ. ಈಗ ನಿಮಗೆ ಅಪೋಲೋ ಆಸ್ಪತ್ರೆ ಬಂದ ಮೇಲೆ ಜಯದೇವ ಆಸ್ಪತ್ರೆ ಖಾಲಿ ಹೊಡೆಯುತ್ತಿದೆ ಆ ರೀತಿ ಆಗುತ್ತದೆ ಅಷ್ಟೇ. ಇದರಲ್ಲಿಯೂ ಕೂಡ business interest ಇರುತ್ತದೆ, ಇಲ್ಲವೆನ್ನುವುದಿಲ್ಲ. But Business interest ಇದೆಯೆನ್ನುವ ಕಾರಣಕ್ಕೋಸ್ಕರ we cannot deprive it also. ಇವೆಲ್ಲಾ aspects ಇವೆ. ಸ್ವಲ್ಪ some more stringent, ನನ್ನ ಸಲಹೆ ಕೇಳಿದರೆ ಈಗ Alliance University ಅದೊಂದು ಬಂದಿದೆ, That is also a different concept. ಅದಕ್ಕೆ ನಾನು ಹೇಳುವುದು ಎಂದರೆ ನೀವು ಒಂದು Joint Select Committee ಮಾಡಿ, let them go into the details and then come out. ಎರಡು ಅಥವಾ ಮೂರು ತಿಂಗಳು ಇರಲಿ, ಮುಂದಿನ ಜೂನ್, ಜುಲೈ ತಿಂಗಳಿಗೆ ಮತ್ತೆ ಸದನ ಸೇರುತ್ತೇವೆ. ಅಷ್ಟರಲ್ಲಿ ಒಂದು Joint Select Committee ಮಾಡಿ let them react, let them come out with some reaction and then we come to a conclusion. That is my suggestion in the best interest of the State. ನಾನು ನಿಮ್ಮ intentions ಅನ್ನು ಯಾವತ್ತು ಕೂಡ ಪ್ರಶ್ನಿಸುತ್ತಿಲ್ಲ. ನಮ್ಮ ಮಕ್ಕಳು ಇವತ್ತು ಆಸ್ಟ್ರೇಲಿಯಾ, ಇಂಗ್ಲೆಂಡ್‌ಗೆ ಹೋಗಿ ಸಾಯುತ್ತಿರುವುದ್ನು ನಾವು ನೋಡಿದರೆ ಬಹುಶಃ ನಾವು ಇಂಗ್ಲೆಂಡ್ ಏರ್‌ಪೋರ್ಟ್‌ನಲ್ಲಿ ನೋಡುತ್ತೇವೆ. ಸಾಕಷ್ಟು ಜನ ಅಮೆರೀಕಾದಲ್ಲಿ ಯಾವ ಹೋಟೆಲ್‌ನಲ್ಲಿ ನೋಡಿದರೂ Indians ಕೆಲಸ ಮಾಡುತ್ತಿದ್ದಾರೆ. ಹೋಟೆಲ್‌ನಲ್ಲಿ ಸಪ್ಲೈ ಕೆಲಸ ಮಾಡಿ ನಾವು ಊಟ

ಮಾಡುತ್ತೇವೆ. ನಾವು ಇಲ್ಲಿ studies ಗೋಸ್ಕರ ಬಂದಿದ್ದೇವೆ ಎಂದು ಹೇಳುತ್ತಾರೆ. ಏನಪ್ಪಾ ಓದುತ್ತೀರಿ? ಎಂದು ಕೇಳಿದರೆ, ಅವರು ಎಂ.ಬಿ.ಎ. ಓದುತ್ತೇವೆ ಎನ್ನುತ್ತಾರೆ. ಎಂ.ಬಿ.ಎ. ಏನು ಅಲ್ಲೇ ಕಲಿಯಬೇಕೆ? ಇಲ್ಲಿಲ್ಲವೇ? ಮಾಡಬಹುದು, ನಮ್ಮಲ್ಲಿ institutions ಬರಬೇಕು. ನಾನು ಒಪ್ಪುತ್ತೇನೆ. ಅದಕ್ಕೋಸ್ಕರ ಇವೆಲ್ಲವನ್ನು ದೂರದೃಷ್ಟಿಯಲ್ಲಿಟ್ಟುಕೊಂಡು ಎಲ್ಲೋ ಒಂದು ಕಡೆ institutions develop ಮಾಡಲಿಕ್ಕೆ ಅವಕಾಶ ಮಾಡಿ. ಅವರು institutions ಮಾಡಿಲ್ಲ, ಹಾಗಿದ್ದಾಗ ಯೂನಿವರ್ಸಿಟಿ ಕೊಡುವುದು ಸರಿಯೇ? ಅದಕ್ಕೋಸ್ಕರ ಸ್ವಲ್ಪ ಯೋಚನೆ ಮಾಡಿ Joint Select Committee ಗೆ ಕಳುಹಿಸಿ; ನೀವು ಅವರಿಗೆ ಒಂದು ಅಥವಾ ಎರಡು ತಿಂಗಳು ಅವಕಾಶ ಕೊಡಿ, ಇದರ ಬಗ್ಗೆ ಯೋಚನೆ ಮಾಡಿದರೆ ರಾಜ್ಯದ ಹಿತದೃಷ್ಟಿಯಿಂದ ಅದು ಬಹಳ ಸೂಕ್ತವಾಗುತ್ತದೆ ಎನ್ನುವುದು ನನ್ನ ಸಲಹೆಯಾಗಿದೆ.

ಡಾ: ಜಿ.ಪರಮೇಶ್ವರ್ (ಕೊರಟಗೆರೆ) : ಮಾನ್ಯ ಅಧ್ಯಕ್ಷರೇ, ಅರವಿಂದ ಲಿಂಬಾವಳಿಯವರ ಉದ್ದೇಶ ಬಹಳ ಚೆನ್ನಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಬಹಳ ದೊಡ್ಡ ಬದಲಾವಣೆಯನ್ನು ರಾಜ್ಯದಲ್ಲಿ ತರುತ್ತೇನೆಂಬ ಉದ್ದೇಶವನ್ನು ನಾನು ಸಹ ಎರಡು ವರ್ಷಗಳಿಂದಲೂ ಗಮನಿಸಿಕೊಂಡು ಬರುತ್ತಿದ್ದೇನೆ. ಕೆಲವು ಸಾರಿ ಬಹಳ ಸಂತೋಷವಾಗುತ್ತದೆ, ಕೆಲವು ಸಾರಿ ಬಹಳ ವಿಷಾದ ಕೂಡ ಆಗುತ್ತದೆ. ಏಕೆಂದರೆ ಅವರು ಇದ್ಯಾವುದೋ ಒಂದು ಸುಳಿಯಲ್ಲಿ ಸಿಕ್ಕಿಹಾಕಿ ಕೊಂಡಿದ್ದಾರೇನೋ ಎಂದು ಕಾಣಿಸುತ್ತಿದೆ. ಮಾನ್ಯ ಮುಖ್ಯಮಂತ್ರಿಗಳಿಂದ ಹೊಸದಾಗಿ ಸುಳಿ ಉತ್ಪತ್ತಿಯಾಗಿ ಬಿಟ್ಟಿದೆ. ಶಿಕ್ಷಣ, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಬಹಳ ದೊಡ್ಡ ಬದಲಾವಣೆ ಮಾಡುತ್ತೇನೆ ಮತ್ತು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿಯೂ ಬಹಳ ದೊಡ್ಡ ಬದಲಾವಣೆ ಮಾಡಿಬಿಡುತ್ತೇನೆಂದು ಹೊರಟುಬಿಟ್ಟಿದ್ದಾರೆ. ನೀವು ಅದಕ್ಕೆ ಏಕೆ ಸಿಕ್ಕಿಹಾಕಿ ಕೊಂಡಿದ್ದೀರೋ ನನಗೆ ಅರ್ಥವಾಗಿಲ್ಲ. ಒಂದೊಂದು subject ಗೆ ಒಂದೊಂದು ಯುನಿವರ್ಸಿಟಿ, ಸಂಸ್ಕೃತಕ್ಕೆ ಒಂದು ಯುನಿವರ್ಸಿಟಿ, ಭರತನಾಟ್ಯಕ್ಕೆ ಒಂದು ಯುನಿವರ್ಸಿಟಿ, ಸಂಗೀತಕ್ಕೆ ಒಂದು ಯುನಿವರ್ಸಿಟಿ ಇದೆಲ್ಲಾ ಸೇರಿ Comprehensive ಆಗಿ University ಅಂದರೆ ಅರ್ಥ ಏನು? ಪ್ರತಿಯೊಂದು discipline ಕೂಡ ಒಂದು ವಿಶ್ವವಿದ್ಯಾಲಯದಲ್ಲಿರಬೇಕು ಎಂತಲೇ University ಎಂದು

ಹೇಳುವುದು. ಮೂಲತಃ ನಾವು Technical University, Medical University ಮಾಡಿದ್ದೇ ಬಹಳ ದೊಡ್ಡ ತಪ್ಪು, ಏಕೆಂದರೆ ಆ Universities ಹೊರಗಡೆ ಹೋದ ಮೇಲೆ ಬೆಂಗಳೂರು ವಿಶ್ವವಿದ್ಯಾಲಯ ಏನಾಯಿತು? ಆ Universities ಹೋದ ಮೇಲೆ Mysore University ಏನಾಯಿತು? Karnataka University ಏನಾಯಿತು? ತಮಗೆ ಗೊತ್ತಿರಬಹುದು, ಅನೇಕ ಸಂದರ್ಭಗಳಲ್ಲಿ University ಯವರಿಗೆ ಸಂಬಳ ಕೊಡಲಿಕ್ಕೆ ಹಣವಿಲ್ಲ. ಅಂಥ ಪರಿಸ್ಥಿತಿ Create ಆಗಿ ಹೋಗಿದೆ. ಇವತ್ತು ತಾವು ಏನು ಮಾಡಿದ್ದೀರಿ? ಹೊಸದಾಗಿ Private University ಕೊಡಬೇಕೆಂದು ಹೊರಟಿದ್ದೀರಿ. ಇದಕ್ಕೆ ನಿಮಗೆ ಯಾರು ಸಲಹೆ ಕೊಟ್ಟರೋ ಗೊತ್ತಿಲ್ಲ ನಮಗೆ? ಅದೂ ಕೂಡ ಒಬ್ಬೊಬ್ಬರ ಹೆಸರಿನಲ್ಲಿ ನೀವು ಬಿಲ್ ತರುತ್ತಿದ್ದೀರಿ. ಅಜೀಮ ಪ್ರೇಮ್‌ಜಿ, ಅಲ್ಲೈಯನ್ಸ್, ಮತ್ತೆ ಇನ್ನೊಬ್ಬರು ಅರ್ಜಿ ಹಾಕಿದರೆ ಅವರ ಹೆಸರಿನಲ್ಲಿ ಮಾಡಿ, ನೀವು ಕರ್ನಾಟಕ ರಾಜ್ಯದಲ್ಲಿ ಹೊಸ ಬದಲಾವಣೆಯನ್ನು ತರುತ್ತೇವೆ, ನಾವು Private University Bill ಅನ್ನು introduce ಮಾಡುತ್ತೇವೆ, ಅದರ ಚೌಕಟ್ಟಿನಲ್ಲಿ ಯಾರ್‍ಯಾರು ಬರುತ್ತಾರೆ, ಅವರಿಗೆ ನಾವು University ಕೊಡುತ್ತೇವೆಂದು ನೀವು ಹೇಳಿದ್ದಿದ್ದರೆ ಆಗ ನಾನು ಒಪ್ಪಿಕೊಳ್ಳುತ್ತಿದ್ದೆ. ಒಬ್ಬೊಬ್ಬರ ಹೆಸರಿನಲ್ಲಿ ತಂದಿದ್ದೀರಿ, ಏನಿದೆ ಇದರಲ್ಲಿ, ತಮಗೆ ಗೊತ್ತಿದೆ. UGC ನಲ್ಲಿ ಏನಿದೆ, ಒಂದು ವಿಶ್ವವಿದ್ಯಾಲಯ ಮಾಡಲಿಕ್ಕೆ ಕೊಡಬೇಕೆಂದರೆ ಯಾವ ರೀತಿ guidelines ಇದೆ. UGC guidelines ಏನಿದೆ. ಏನಾದರೂ ಇದೆಯೇ ಅದು. ಒಂದು Deemed University, forget about Private University. Deemed University ಕೊಡಬೇಕಾದರೆ 'ಇವತ್ತೇಕೆ ದೇಶದಲ್ಲಿ ಗೊಂದಲವಾಗಿದೆ. 126 ಡೀಮ್ಡ್ ಯೂನಿವರ್ಸಿಟಿಗಳನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ಅದರಲ್ಲಿ 44 ಯುನಿವರ್ಸಿಟಿಗಳು ಸರಿಯಾದ ಮಟ್ಟದಲ್ಲಿಲ್ಲ ಎಂದು ಅವರು reject ಮಾಡಿದ್ದಾರೆ. ಅಂಥ ಸಂದರ್ಭ ಇರುವಾಗ ಇದರಲ್ಲಿ ಯಾವುದಾದರೂ ಒಂದು ಗೈಡ್‌ಲೈನ್ಸ್ ಇದೆಯೇ? ಅವರಿಗೆ ಇಂತಿಷ್ಟು infrastructure ಇರಬೇಕು, ಅವರಿಗೆ academic experience ಇರಬೇಕು. ಇಷ್ಟು staff ಇರಬೇಕು. ಅವರಿಗೆ ಇಷ್ಟು experience ಇರಬೇಕು, ಏನಿದೆ? ಈಗ ಮಾನ್ಯ ಜಯಚಂದ್ರರವರು ಹೇಳಿದರು, ಅಜೀಂ ಪ್ರೇಮ್‌ಜಿಯವರು

ಯಾವುದಾದರೂ ಒಂದು institutions ಮಾಡಿದ್ದಾರೆಯೇ? ನಮಗ್ಯಾರಿಗೂ ಕೂಡ ಅವರ Industrial Accumenship ಬಗ್ಗೆ ಬೇರೆ ಅಭಿಪ್ರಾಯವಿಲ್ಲ ಆದರೆ ಶಿಕ್ಷಣ ಕ್ಷೇತ್ರದಲ್ಲಿ ಅವರಿಗೆ ಏನು ಅನುಭವ ಇದೆ? ಒಂದು Institution ಮಾಡಿದ್ದಾರೆಯೇ? ಒಂದು ಕಾಲೇಜ್ ಮಾಡಿದ್ದಾರೆಯೇ? A College of a Natonal or International standard ಮಾಡಿದ್ದಾರೆಯೇ? ಮಾಡಿದ್ದರೆ ಕೊಡಿ ಅವರಿಗೆ ನಾವು ಬೇಡವೆನ್ನುವುದಿಲ್ಲ. ಯಾವ ಆಧಾರದ ಮೇಲೆ ನೀವು ಇವತ್ತು ಅವರಿಗೆ ಯುನಿವರ್ಸಿಟಿ ಕೊಡಲಿಕ್ಕೆ ಹೊರಟಿದ್ದೀರಿ? What is your guidelines? What is the guidelines of the University grant Commission? ಅಂತಿಮವಾಗಿ ನೀವು ಇಲ್ಲಿ ಬಿಲ್ ಪಾಸ್ ಮಾಡಿ ಪ್ರೈವೇಟ್ ಯುನಿವರ್ಸಿಟಿ ಮಾಡಲಿಕ್ಕೆ ಕೊಡುತ್ತೀರಿ ಎಂದಿಟ್ಟುಕೊಳ್ಳಿ. ಇದು University Grant Commission ನಲ್ಲಿ ratify ಆಗಬೇಕಲ್ಲವೇ? Ultimately the UGC has to recognize. ಇಲ್ಲದಿದ್ದರೆ ಆ ವಿದ್ಯಾರ್ಥಿಗಳು ಪಾಸ್ ಮಾಡಿದ ಡಿಗ್ರಿಗಳಿಗೆ ಯಾರು recognition ಕೊಡುತ್ತಾರೆ? If there is no recognition by the University Grant Commission, Their degree will not be recognized anywhere in the Country and in the World. ಆ ಡಿಗ್ರಿ ಸರ್ಟಿಫಿಕೇಟ್ ತೆಗೆದುಕೊಂಡು ಹೋಗಿ ಏನು ಮಾಡುವುದು? ಉಪ್ಪಿನಕಾಯಿ ಹಾಕಬೇಕೇ? ಇದು ನಿಜಕ್ಕೂ ಕೂಡ ಕೇಂದ್ರ ಸರ್ಕಾರದ ಕಾನೂನಿನ ಚೌಕಟ್ಟಿನಲ್ಲಿ University Grant Commission ಕಾನೂನಿನ ಚೌಕಟ್ಟಿನಲ್ಲಿ ಬರುವುದಿಲ್ಲ. ಆದ್ದರಿಂದ ಇದನ್ನು ಸರಿಯಾದ ರೂಪದಲ್ಲಿ ತಂದಿಲ್ಲ. ಬಿಲ್‌ನ ಒಳಗಿರುವ details ಗೆ ಆಮೇಲೆ ಹೋಗೋಣ. ಆದರೆ ನೀವು ತಂದಿರತಕ್ಕಂಥ ರೀತಿಯಿದೆಯೆಲ್ಲಾ, ಅದೇ ಸರಿಯಿಲ್ಲ. ನಮ್ಮಲ್ಲಿ ಏನು comprehensive act ಇದೆ Karnataka State Universities Act ಏನಿದೆ, ಅದೇರೀತಿ Karnataka State Private Universities Act ತರಬಹುದಾಗಿತ್ತು. ಅದಕ್ಕೆ ನೀವು ಗೈಡ್‌ಲೈನ್ಸ್‌ನಲ್ಲಿ ಫಿಕ್ಸ್ ಮಾಡಬಹುದಾಗಿತ್ತು. ಇಂತಿಷ್ಟು infrastructure ಬೇಕು. ಎಲ್ಲಿಯವರೆಗೆ ಬೇಕು ಎಂದು ನಿಮಗೆ ಗೊತ್ತಿದೆ. ಏಕೆಂದರೆ ನಾನೂ ಕೂಡ ಈಗ ಈ ಡೀಮ್ಡ್ ಯುನಿವರ್ಸಿಟಿಯ ಗೊಂದಲದಲ್ಲಿ ಸಿಕ್ಕಿಹಾಕಿಕೊಂಡಿದ್ದೇನೆ. ಆದ್ದರಿಂದ ನನಗೆ ಚೆನ್ನಾಗಿ ಗೊತ್ತಿದೆ. ಒಂದು ಕ್ಲಾಸ್ ರೂಮನ್ನು 20–20

ಅಡಿ ಇಡಬೇಕೆಂದು Inspection team ಬಂದು tape ಇಟ್ಟುಕೊಂಡು ಅಳತೆ ಮಾಡುತ್ತಾರೆ. ಅಂಥ ಪರಿಸ್ಥಿತಿಯಲ್ಲಿರುವಾಗ ಒಬ್ಬ ಪ್ರೊಫೆಸರ್ ಕಡಿಮೆ ಇದ್ದರೆ ನಿಮ್ಮ ಯುನಿವರ್ಸಿಟಿಯಲ್ಲ, recognition reject ಮಾಡುತ್ತಾರೆ. Forget about the University. AICTE., MCI ಗೊತ್ತು, ತಮಗೆಲ್ಲಾ ಗೊತ್ತಿದೆ. one staff ಕಡಿಮೆ ಇದ್ದರೆ ನಿಮಗೆ de-recognize ಮಾಡುವಂಥ ಸಂದರ್ಭದಲ್ಲಿ ಇವರಿಗೆ ಒಬ್ಬರು ಮೇಷ್ಟ್ರು ಇಲ್ಲ, ಒಂದು ಕ್ಲಾಸ್ ರೂಮ್ ಇಲ್ಲ. ಅವರಿಗೆ ಹಣ ಇದೆ ಸ್ವಾಮಿ. ಏಕೆಂದರೆ ಪ್ರಪಂಚದಲ್ಲಿ ಅವರು ಬಹಳ ದೊಡ್ಡ ಶ್ರೀಮಂತರು ಎಂದು ಹೇಳಿ Forbes magazine ನಲ್ಲಿ ಬಂದುಬಿಟ್ಟಿದೆ, ಅವರ ಹತ್ತಿರ ದುಡ್ಡಿದೆ, ಸಂತೋಷ.

ಅವರಿಗೆ ಈ ರೀತಿ ಹೇಳಿ, you build an institution, we will grant you a deemed university status, we will recommend you for deemed university status. What difference it makes? ಅದನ್ನು ಬಿಟ್ಟು ಇಲ್ಲಿ ನೀವು ಒಂದು flood gate open ಮಾಡಿ, ಇಲ್ಲಿ ಕಾಲೇಜು ಗಳನ್ನು ಕೊಟ್ಟ ರೀತಿಯಲ್ಲಿ ಕೊಟ್ಟು, ನಾವು ಒಂದು ಕಾಲದಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಕೊಟ್ಟೆವು. ಆ ರೀತಿಯಲ್ಲಿ ನೀವು University ಗಳನ್ನು ಎಲ್ಲರಿಗೂ ಕೊಡುತ್ತಾ ಹೋದರೆ ಅದಕ್ಕೆ ಏನಾದರೂ ಬೆಲೆ ಇರುತ್ತದೆಯೇ? ಇದರಿಂದ ಯಾವುದಾದರೂ ಡಿಗ್ರಿಗೆ ಬೆಲೆ ಇರುತ್ತದೆಯೇ? ಖಂಡಿತವಾಗಿ ಬೆಲೆ ಇರುವುದಿಲ್ಲ. ಈ ಬಿಲ್‌ನಲ್ಲಿ ತಾವು ಕ್ವಾಲಿಟಿ ಎಜುಕೇಷನ್ ಎಂದು ಹೇಳುತ್ತೀರಿ. ಹಾಗಾದರೆ ಬೇರೆ University ಗಳಲ್ಲಿ ಕ್ವಾಲಿಟಿ ಇಲ್ಲವೇ? ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕ್ವಾಲಿಟಿ ಇಲ್ಲವೇ? Do you accept that there is no quality education in Bangalore University or any Karnataka Universities. ನಮ್ಮಲ್ಲಿ ಕ್ವಾಲಿಟಿ ಇದೆ, improve ಮಾಡಿ. ಎಷ್ಟು ವರ್ಷಗಳ ಕಾಲ recruitment ಆಗಿಲ್ಲ? ಇವತ್ತು ಎಷ್ಟು Subject ಗಳಲ್ಲಿ ಟೀಚರ್ಸ್ ಖಾಲಿ ಇದ್ದಾರೆ? ಗಣಿತದ ವಿಷಯದಲ್ಲಿ, Physics ನಲ್ಲಿ, ಹಾಗೂ ಕಾಮರ್ಸ್‌ನಲ್ಲಿ ಟೀಚರ್ಸ್‌ಗಳು ಇಲ್ಲ. Has the Government taken any steps to recruit them? ಅದಕ್ಕೆ ಏನೂ ಇಲ್ಲ. ನಾನು ತುಮಕೂರು ವಿಶ್ವವಿದ್ಯಾನಿಲಯವನ್ನು ಕೊಟ್ಟೆ, ಏತಕ್ಕೆ ನಾನು ಕೊಟ್ಟೆ? ನಾನು ಸಚಿವನಾಗಿದ್ದಂತಹ ಕಾಲದಲ್ಲಿ ತುಮಕೂರು

ವಿಶ್ವವಿದ್ಯಾನಿಲಯವನ್ನು ಕೊಡಬೇಕಾದರೆ ಕಾರಣವೇನೆಂದರೆ, ಅವತ್ತಿಗೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ 450 ಕಾಲೇಜುಗಳು ಇತ್ತು, administration ಮಾಡುವುದು ಕಷ್ಟವಾಗುತ್ತದೆ ಎಂದು Academic Councilor resoluion ಮಾಡಿದ್ದರು. ನೀವು ಇದನ್ನು bifurcate ಮಾಡಬೇಕೆಂದು Bangalore University Academic Councilor resolution ಮಾಡಿದ್ದರು. ಈಗ further bifurcate ಮಾಡಬೇಕೆಂದು resolution ಮಾಡಿದ್ದಾರೆ. ತಾವೇ ಹೇಳಿದ ಹಾಗೆ ಮೂರನ್ನು ಮಾಡಬೇಕೆಂದು ಹೇಳಿದ್ದಾರೆ. ಆ ರೀತಿ ಮಾಡಿದ್ದರೂ ಕೂಡ ಅವುಗಳಿಗೇ ಹಣವನ್ನು ಕೊಡಲಿಲ್ಲ. ಎರಡು ವರ್ಗಗಳಾಯಿತು, ತುಮಕೂರು ವಿಶ್ವವಿದ್ಯಾನಿಲಯಕ್ಕೆ ಜಾಗ ಕೊಟ್ಟಿದ್ದೀರಾ? ಹಣ ಕೊಟ್ಟಿದ್ದೀರಾ? ಇಡೀ ದೇಶದಲ್ಲಿಯೇ. ಅತ್ಯಂತ ಪ್ರಗತಿಪರವಾದ ರಾಜ್ಯವೆಂದು ಹೇಳಲು ನಾವು ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯವನ್ನು ಮಾಡಿರುವುದು ಇವತ್ತು ಏನಾಗಿದೆ? ಅಲ್ಲಿಗೆ ಜಾಗವನ್ನು ಕೊಟ್ಟಿದೆ, ಒಂದು ಸಣ್ಣ ಕಟ್ಟಡವನ್ನು ಮಾತ್ರ ಇಲ್ಲಿಯವರೆಗೆ ಕಟ್ಟಲಾಗಿದೆ. What is your intension? Don't try to proliferate the education system. ಇದು ಬಹಳ ದೊಡ್ಡ ಆಘಾತ. ನೀವು ಒಂದು ಕೈಗಾರಿಕೆಯನ್ನು ಕೊಡಿ, ಒಂದು ಫ್ಯಾಕ್ಟರಿಯನ್ನು ಕೊಡಿ. ಆದರೆ, ಶಿಕ್ಷಣ ಕ್ಷೇತ್ರದಲ್ಲಿ ನೀವು ಏನಾದರೂ manipulate ಮಾಡುವುದಕ್ಕೆ ಹೋದರೆ, ಇದು ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ಇದರಿಂದ ಇದು ಸಮಾಜದ ಮೇಲೆ ಪರಿಣಾಮ ಬೀರುವುದರಿಂದ ನಮ್ಮ ವಿದ್ಯಾರ್ಥಿ ಗಳು ಹಾಳಾಗುತ್ತಾರೆ ಎಂಬುದನ್ನು ನೀವು ಜ್ಞಾಪಕದಲ್ಲಿ ಯಾವಾಗಲು ಇಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ, ನಾವು ಏನಾದರೂ flood gate ಅನ್ನು open ಮಾಡಿದರೆ ಪ್ರೈವೇಟ್ ಯೂನಿವರ್ಸಿಟೀಸ್ ಅನ್ನು ನೀವು ನಮ್ಮ ರಾಜ್ಯದಲ್ಲಿ ತರುವುದಕ್ಕೆ ಹೋದರೆ ಹೇಗೆ? What is the experience of the Jharkand? ಅವರು Private University Bill ಅನ್ನು ತಂದರು, ಇವತ್ತು ಅಲ್ಲಿ ಏನಾಯಿತು, ಎಲ್ಲಾ ಅವರು University ಗಳನ್ನು ಮುಚ್ಚಿಕೊಂಡು ಹೋಗಿದ್ದಾರೆ. ಕೊಳವೆ ಬಾವಿ ತೆಗೆಯುವವರಿಗೆ ಹಾಗೂ ಮತ್ತೆ ಯಾವುದೋ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡುವವರಿಗೆ ಮತ್ತು ಇನ್ನೂ ಯಾರ್ಯಾರಿಗೋ Private Universities ಕೊಟ್ಟರು,

ಸುಮಾರು ನನಗೆ ಗೊತ್ತಿರುವ ಹಾಗೆ 120 ವಿಶ್ವವಿದ್ಯಾಲಯಗಳನ್ನು ಕೊಟ್ಟರು (Number in subject to corrections). ಅಲ್ಲಿ ಯಾರ್ಯಾರಿಗೆ ಅಂದರೆ ಅರ್ಜಿ ಹಾಕಿದ್ದವರಿಗೆಲ್ಲಾ, ಅವರಿಗೆ ಯಾರ್ಯಾರು ಬೇಕೋ ಅಂತಹರಿಗೆಲ್ಲಾ ಕೊಟ್ಟರು. ನಮ್ಮ ಬೆಂಗಳೂರಿನಿಂದಲೂ ಸಹ ಒಬ್ಬರು ಇದ್ದರು, ಈಗ ಅವರ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ, ಅವರು ಬೋರ್‌ವೆಲ್ ರಿಗ್ ಕೆಲಸವನ್ನು ಇಲ್ಲಿ ನಡೆಸುತ್ತಿದ್ದರು, ಅವರೂ ಕೂಡ ಛತ್ತೀಸ್‌ಘಡ್‌ಗೆ ಹೋಗಿ ಒಂದು ಅರ್ಜಿಯನ್ನು ಹಾಕಿಬಿಟ್ಟರು, ಅವರಿಗೂ ಸಹ ಒಂದು ವಿಶ್ವವಿದ್ಯಾನಿಲಯವನ್ನು ಕೊಟ್ಟರು. ಆ ಸಮಯದಲ್ಲಿ ನಾನು Higher Education Minister ಆಗಿದ್ದೆ. ಆಗ ಅವರು ನನ್ನ ಹತ್ತಿರ ಬಂದು ಸ್ವಾಮಿ ನೀವು ಈ ವಿಶ್ವವಿದ್ಯಾನಿಲಯಕ್ಕೆ Chancellor ಆಗಬೇಕೆಂದು ಕೇಳಿಕೊಂಡರು. ಆಗ ನಾನು ಇಲ್ಲಿ ನಾವು Chancellor ಆಗಿರುವುದೇ ಸಾಕಾಗಿದೆ, ಬೇಡವೆಂದು ಹೇಳಿದೆ. That was a bad experience. ಬೇಕಾದರೆ ನೀವು ಈ ಬಗ್ಗೆ ತಿಳಿದುಕೊಳ್ಳಿ. ಯಾವ ರಾಜ್ಯದಲ್ಲಿ Private University ಯನ್ನು ಕೊಟ್ಟು Successful ಆಗಿದ್ದಾರೆ ಎಂದು ತಿಳಿದುಕೊಳ್ಳಿ. ಬೇರೆ ಎಲ್ಲಿಯೂ ಸಹ ಮಾಡಿಲ್ಲ. ಅದು ಆದ ಮೇಲೆ ಯಾವುದೇ ರಾಜ್ಯವು Private Universities ಅನ್ನು ಕೊಡುವುದಕ್ಕೆ ಹೋಗಲಿಲ್ಲ. ನೀವು ಈ ಬಿಲ್ ಅನ್ನು ಏಕೆ ತಂದಿದ್ದೀರಿ ಎಂಬುದು ಗೊತ್ತಿಲ್ಲ. ಇಲ್ಲಿ ಕೊಡುವುದೇ ಆದರೆ, ಒಂದು ಒಳ್ಳೆಯ ಇಂಜಿನಿಯರಿಂಗ್ ಕಾಲೇಜ್ ಮಾಡಿ ಅಥವಾ ಮೆಡಿಕಲ್ ಕಾಲೇಜ್ ಮಾಡಿ. ಅವರಿಗೆ permission ಕೊಡಿ, ಅವರು ಮಾಡಲಿ. Best of the Institution ಅನ್ನು ಈಗ Hyderabad ನಲ್ಲಿ ಮಾಡಲಿಲ್ಲವೇ? ಅಲ್ಲಿ ಅವರು Business School ಮಾಡಲಿಲ್ಲವೇ? Let them invest and let them built such an International Level Institution. ನಮ್ಮ ವಿದ್ಯಾರ್ಥಿಗಳಿಗೆ ಅವಕಾಶ ಕೊಡಲಿ. ಇದರಲ್ಲಿ ಇರುವ details ಅನ್ನು ನಾನು ಓದಿ ನೋಡಿದೆ. ಇದರಲ್ಲಿ ನೀವು admission ಬಗ್ಗೆ ಮಾತನಾಡಿಲ್ಲ, fees ಬಗ್ಗೆ ಮಾತನಾಡಿಲ್ಲ, ಡೊನೇಷನ್ ಅನ್ನು ಸಹ ಇವರು ತೆಗೆದುಕೊಳ್ಳಬಹುದು, ಡೊನೇಷನ್ ಬಗ್ಗೆ ನೀವು ಅಲ್ಲಿ ಹೇಳಿದ್ದೀರಿ. 1983 ರಲ್ಲಿ Capitation Abolition Act ಆಗಿರುವುದು ನಿಮಗೆ ಜ್ಞಾಪಕವಿರಬಹುದು, ಇವತ್ತು ಯಾವುದೇ ರೀತಿಯಲ್ಲಿ

ಡೊನೇಷನ್ ತೆಗೆದುಕೊಳ್ಳಬಾರದು. Donation should not be collected in any form ಎಂದು TMFI Case ನಲ್ಲಿ judgment ಆಗಿದೆ. ಆದರೆ, ನೀವು ಇಲ್ಲಿ ಹೇಳಿರುವ ಪ್ರಕಾರ ಡೊನೇಷನ್ ಅನ್ನು ತೆಗೆದುಕೊಳ್ಳಬಹುದು. How do you permit in the Act? ಗಿಫ್ಟ್ ಒಂದೇ ಅಲ್ಲ. All contributions, donations made in this behalf by any other person or body, which are not prohibited by any law for the time being is imposed. How can you permit that? You are going against the existing Act. ಅದು ಸಾಧ್ಯವೇ ಇಲ್ಲ. ಸುಪ್ರೀಂ ಕೋರ್ಟ್‌ನಲ್ಲಿ judgment ಆಗಲಿ, ನಮ್ಮಲ್ಲಿಯೇ Act ಇದೆ. ಡೊನೇಷನ್ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. Except fees they are not supposed to collect any money in any form. ಆದ್ದರಿಂದ, ಅದನ್ನು ನೀವು ಗಮನದಲ್ಲಿಟ್ಟುಕೊಳ್ಳಬೇಕು. Fees ಅನ್ನು ಯಾರು fix ಮಾಡುವುದು? ಅಜೀಂಪ್ರೇಮ್‌ಜಿಯವರು ಒಂದು ಕಮಿಟಿಯನ್ನು ಮಾಡಿಕೊಂಡು ಆ ವಿಶ್ವವಿದ್ಯಾನಿಲಯದವರೇ fees ಅನ್ನು fix ಮಾಡಿಕೊಳ್ಳುವುದೇ? Who has to regulate it? Is there any provision for the Government to regulate this fee structure? In fact ಅವರು ಗೈಡ್‌ಲೈನ್ಸ್ ಕೊಟ್ಟಿದ್ದಾರೆ. ಸುಪ್ರೀಂಕೋರ್ಟ್ ಗೈಡ್‌ಲೈನ್ಸ್ ಕೊಡುವಾಗ Retired Judge or the Present Judge can sit as a Chairman of the Fees Committee to fix the fees. ಅದನ್ನೂ ಕೂಡ ನೀವು ಏನೂ ಹೇಳಲಿಲ್ಲ. ಅವರು ಎಷ್ಟು ಬೇಕಾದರೂ fees fix ಮಾಡಿಕೊಳ್ಳಬಹುದು. ಇವತ್ತು ನಮ್ಮ ಮಾನ್ಯ ನಾಯಕರು ಹೇಳಿದ ಹಾಗೆ, reservation ಗೆ ಸಂಬಂಧಪಟ್ಟ ಹಾಗೆ ಏನಾದರೂ ಮಾತನಾಡಿದ್ದೀರಾ? 18% reservation ಕೊಡುವುದಿಲ್ಲವೆಂದು ಹೇಳುತ್ತಾರೆ, ಯಾವ ಹಿಂದುಳಿದ ವರ್ಗಗಳಿಗೂ reservation ಕೊಡುವುದಿಲ್ಲ ವೆಂದು ಹೇಳುತ್ತಾರೆ. Because it is a Private University. Industries ಗೆ 18% Reservation ಕೊಡಬೇಕೆಂದು ನಾವು ಒದ್ದಾಡುತ್ತಿದ್ದೇವೆ. ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಎಸ್.ಸಿ./ಎಸ್.ಟಿ. ಯವರಿಗೆ ಹಾಗೂ ಹಿಂದುಳಿದ ವರ್ಗಗಳಿಗೆ ಎಂದು ಏನು ಸರ್ಕಾರದಲ್ಲಿ reservation ಇದೆ ಅದನ್ನು Private sector ಗಳಲ್ಲಿ ಕೊಡಬೇಕೆಂದು ನಾವು ಈಗಾಗಲೇ

ಒತ್ತಾಯ ಮಾಡಿ ವಾದ ಮಾಡುತ್ತಿದ್ದೇವೆ. ಅಂತಹ ಸಂದರ್ಭದಲ್ಲಿ ನೀವು Private ಗೆ ಕೊಟ್ಟುಬಿಟ್ಟರೆ ಬೇರೆಯವರು ಎಲ್ಲಿಗೆ ಹೋಗಬೇಕು? There is no reservation as far as admission is concerned. There is no reservation as far as the appointments are concerned. TMFI ಗೆ ಕೇಸ್ ಬಂದಿದ್ದು ಮಾನ್ಯ ಸಚಿವರಿಗೆ ಜ್ಞಾಪಕವಿರಬಹುದು. TMFI Insitution ನವರಿಗೆ ಸರ್ಕಾರಕ್ಕೆ 20% reservation ಕೊಡಿ ಎಂದು ಮನವಿ ಮಾಡಿದೆವು. 50% ಬೇಡ, 20% reservation ಕೊಡಿ because you are a deemed to be University ಎಂದು ಕೇಳಿದೆವು. ಅದಕ್ಕೆ ಅವರು ಕೊಡುವುದಿಲ್ಲ ಎಂದು ಹೇಳಿದ್ದಕ್ಕೆ, that is a reason the Government went to the Court only to protect that 20%, the interest of the Students of our State. ಕೊಡಲಿಲ್ಲ. ಇವತ್ತು ನೀವು ಬ್ಲಾಕೆಂಟ್ ಆಗಿ University ಯವರಿಗೆ ಕೊಟ್ಟರೆ, ನಾಳೆ ಎಲ್ಲರೂ ಹೊರಡುತ್ತಾರೆ. ನಾನು ಕೂಡ ಸಿದ್ದಾರ್ಥ ಸಂಸ್ಥೆಯನ್ನು ತುಮಕೂರಿನಲ್ಲಿ ನಡೆಸುತ್ತಿದ್ದೇನೆ. ನಾನು ಕೂಡ ನಿಮಗೆ ಇಲ್ಲಿ ಅರ್ಜಿ ಹಾಕುತ್ತೇನೆ. ನನಗೆ deemed to be university ಇದೆ. ಇದು ಬೇಡ, ನನಗೆ Private University ಕೊಡಿ, I will be better of doing in that way ಎಂದು ಕೇಳುತ್ತೇನೆ. ಇದು ಆಗುತ್ತದೆಯೇ? ಇನ್ನೂ 10 ಕಾಲೇಜುಗಳನ್ನು ಕೊಡಿ. ಕಾಲೇಜುಗಳನ್ನು ಕೊಟ್ಟ ರೀತಿಯಲ್ಲಿ ವಿಶ್ವವಿದ್ಯಾನಿಲಯಗಳನ್ನು ಕೊಡುವುದು ಸರಿಯೇ? ಮೆಡಿಕಲ್ ಕಾಲೇಜುಗಳು ಅಥವಾ ಇಂಜಿನಿಯರಿಂಗ್ ಕಾಲೇಜುಗಳನ್ನು ಮಾಡಿದರೆ fine. ಏಕೆಂದರೆ, ಎಲ್ಲರಿಗೂ opportunities ಸಿಗುತ್ತದೆ. Higher Education ಗೆ ಈಗ ಏನು 7% ಇದೆ, ಅದು ನಾಳೆ ನಿಮ್ಮ ಕಾಲದಲ್ಲಿ 25% ಆಗಲಿ. ಅದನ್ನು ಮಾಡಿ. ಆದರೆ, ವಿಶ್ವವಿದ್ಯಾನಿಲಯಗಳನ್ನು ಕೊಡಬೇಡಿ. University is something which is impossible. ಇದನ್ನು ಅಷ್ಟು ಸುಲಭವಾಗಿ ತೆಗೆದುಕೊಳ್ಳುವಂತಹದ್ದು ಅಲ್ಲ. ಏಕೆಂದರೆ, you are awarding a Degree. ಆ ಡಿಗ್ರಿಗೆ ಒಂದು recognition ಬೇಕು. ಇಲ್ಲದಿದ್ದರೆ, ನಾಳೆ ವಿದ್ಯಾರ್ಥಿಗಳು Degree Certificate ಇಟ್ಟುಕೊಂಡು, ಮಾರ್ಕೆಟ್‌ನಲ್ಲಿ ಕೆಲಸಕ್ಕೆ ಕುಳಿತುಕೊಳ್ಳಬೇಕಾಗುತ್ತದೆ. ದಯಮಾಡಿ, ಇದು ಸರಿ ಕಾಣಿಸು ವುದಿಲ್ಲ. ಗುಣಮಟ್ಟದ ಶಿಕ್ಷಣ ಕೊಡಬೇಕು? ನಿಮ್ಮದು ಯಾವ ರೀತಿಯ

ಗುಣಮಟ್ಟದ ಶಿಕ್ಷಣ ಸ್ವಾಮಿ? ವಿಶ್ವವಿದ್ಯಾನಿಲಯಗಳನ್ನು ಕೊಡಿ ಎಂದು ಅವರು ಅರ್ಜಿ ಹಾಕಿದ್ದರೆಯೇ? ನೀವಾಗಿ ನೀವೇ ನಾವು ವಿಶ್ವವಿದ್ಯಾನಿಲಯ ಗಳನ್ನು ಕೊಡುತ್ತೇವೆಂದು ಹೊರಟಿದ್ದೀರಿ. ಇದಕ್ಕೆ ಒಂದು Private University Bill ತನ್ನಿ. ಅಷ್ಟೊಂದು ನಿಮಗೆ ಇದನ್ನು ಮಾಡಲೇ ಬೇಕು, free opportunities ಅನ್ನು ಎಲ್ಲರಿಗೂ ಕೊಡಬೇಕು ಎಂದು ಇದ್ದರೆ ಒಂದು Comprehensive Bill ಅನ್ನು ತಂದು ಈ ಸದನದಲ್ಲಿ ಇಡಿ, ಚರ್ಚೆ ಮಾಡೋಣ. ಆನಂತರ ಯಾರು ಆ criteria fulfill ಮಾಡುತ್ತಾರೆ, ಆ ಗೈಡ್‌ಲೈನ್ಸ್ ಅನ್ನು fulfill ಮಾಡುತ್ತಾರೆ, ಅಂತಹವರಿಗೆ ನೀವು ವಿಶ್ವವಿದ್ಯಾ ನಿಲಯಗಳನ್ನು ಕೊಡುವುದಕ್ಕೆ ಬರುತ್ತದೆ. ಒಂದು ವೇಳೆ ವಿಶ್ವವಿದ್ಯಾನಿಲಯ ಗಳನ್ನು ಕೊಡಬೇಕೆಂದು ನಿಮ್ಮ ಹೊಸ ಚಿಂತನೆಗಳೇನಾದರೂ ಇರುವುದೇ ಆದರೆ ಕೊಡಿ. ನಾನು ಈ ಬಗ್ಗೆ details ಗೆ ಹೋಗುವುದಿಲ್ಲ. Detail ಆಗಿ ಹೋದರೆ ಅದರ ಬಗ್ಗೆ ದೊಡ್ಡ ಚರ್ಚೆಯನ್ನೇ ಮಾಡಬೇಕಾಗುತ್ತದೆ. ಒಂದೊಂದು provision ನಲ್ಲೂ ತಪ್ಪಿದೆ. ನಮ್ಮ ಮಾನ್ಯ ನಾಯಕರು ಹೇಳಿದ ಹಾಗೆ Chancellor appointment ಗೆ ಸಂಬಂಧಪಟ್ಟಂತೆ, life term ಗೆ permanent ಆಗಿ ಎಲ್ಲಿಯೂ ಇಲ್ಲ. ಬಹುಶಃ ಇಡೀ ಪ್ರಪಂಚದಲ್ಲೇ, Private ಇರಲಿ ಅಥವಾ Government ಇರಲಿ ಅಥವಾ deemed ಇರಲಿ, ಯಾವುದೇ university provision ನಲ್ಲೂ ಕೂಡ life term ಅಂದರೆ ಸಾಯುವ ತನಕ, ಇದನ್ನು ಹೇಗೆ ಮಾಡುವುದು, ಇದನ್ನು ಸರ್ಕಾರ ಮಾಡುವುದೇ? Private ನವರು ಏನೂ ಬೇಕಾದರೂ ಬರೆದುಕೊಳ್ಳಲಿ. ಆದರೆ, Can a Government put a stamp on this? ಈ ಬಗ್ಗೆ ಎಲ್ಲರಿಗೂ ಬರೆದುಕೊಟ್ಟು ಬಿಡಿ. ಎಲ್ಲರಿಗೂ ಒಂದೊಂದು ಯುನಿವರ್ಸಿಟಿ ಬರೆದು ಕೊಟ್ಟು, ನಿಮ್ಮ university ಯನ್ನು ನೀವು ಏನಾದರೂ ಮಾಡಿಕೊಳ್ಳಿ ಎಂದು ಬರೆದುಕೊಡಿ. Do you know what is the observation made by the University Grants Commission? ಬಹಳಷ್ಟು ಡೀಮ್ಡ್ ವಿಶ್ವವಿದ್ಯಾನಿಲಯಗಳು family run ಆಗಿದೆ. ಅದಕ್ಕೋಸ್ಕರ ನಾವು ಕೊಡಲು ಆಗುವುದಿಲ್ಲ ಎಂದು one of the observations made by the Univesity Grants Commission. ಆ ರೀತಿ ಇರುವಾಗ ನೀವು ಅವನಿಗೆ

life time permission ಕೊಟ್ಟುಬಿಟ್ಟರೆ ಹೇಗೆ ಆಗುತ್ತದೆ? What is the control? ಅವರು ಹೇಳಿದಂತೆ ತಮ್ಮ secretary ಹೋಗಿ ಕುಳಿತುಕೊಳ್ಳ ಬಹುದು, ಕಾಫಿ ಕೊಡುತ್ತಾರೋ ಇಲ್ಲವೋ, ಹಾಗೆಯೇ ಬಂದುಬಿಡಬಹುದು. ಇವರುಗಳು ಹೋಗುವುದೇ ಇಲ್ಲ ಬಿಡಿ. No Secretary will go and attend such meetings. ಅವರು ಯಾಕೆ ಹೋಗುತ್ತಾರೆ? Can the Principal Secretary to Government go and attend such meetings? It is impossible. Statutory Committees ಗೇ ಅವರು ಹೋಗುವುದಿಲ್ಲ, ಇನ್ನು ನಿಮ್ಮ ಈ Private meeting ಗೆ ಏಕೆ ಹೋಗಿ ಕುಳಿತುಕೊಳ್ಳುತ್ತಾರೆ? It is an insult. They consider it as an insult. ಆದ್ದರಿಂದ ಅವರು ಯಾರೂ ಹೋಗುವುದಿಲ್ಲ. Deputy Secretary, Under Secretary ರವರನ್ನು ಕಳುಹಿಸುತ್ತಾರೆ, ಅವರು ಆ meeting attend ಮಾಡಿ ಬರುತ್ತಾರೆ. ನೀವು ಹೇಗೆ Government interest ಅನ್ನು protect ಮಾಡುತ್ತೀರಿ? ಒಂದು ವೇಳೆ dissolve ಮಾಡಬೇಕೆಂದು ಮಾನ್ಯ ಜಯಚಂದ್ರರವರು ಹೇಳಿದಂತೆ dissolve ಮಾಡಿದರೆ ಮುಗಿದು ಹೋಯಿತಲ್ಲಾ? 10–15 ವರ್ಷ ಒಂದು ಯೂನಿವರ್ಸಿಟಿಯನ್ನು ನಡೆಸಿ property ಮಾಡಿ ನಾಳೆ ಸರ್ಕಾರಕ್ಕೆ ನಮಗೆ ಲ್ಯಾಂಡ್ ಕೊಡಿಯೆಂದು ಅರ್ಜಿಯನ್ನು ಹಾಕುತ್ತಾರೆ. You cannot deny. Because you have given it to some other people under some other provision. So, you will have to give them. ಇಲ್ಲದಿದ್ದರೆ ಅವರು ಕೋರ್ಟ್‌ಗೆ ಹೋಗುತ್ತಾರೆ. ಕೊಟ್ಟ ಮೇಲೆ ಆ ಆಸ್ತಿ ಮಾಡಿಕೊಂಡು dissolve ಮಾಡಿದಾಗ ಆ ಆಸ್ತಿಯನ್ನು ತೆಗೆದುಕೊಂಡು ಹೋಗುತ್ತಾರೆ. ನಿಮ್ಮ ಸರ್ಕಾರಕ್ಕೆ ಏನು control ಇದೆ? Proliferation of education system is not acceptable. ಇದನ್ನು ದಯವಿಟ್ಟು ತಿಳಿದುಕೊಳ್ಳಿ. ಇವತ್ತು improve ಮಾಡಿ, ಹಣ ಕೊಡಿ. ಇವತ್ತು education ಚೆನ್ನಾಗಿ ಆಗಬೇಕು, ಚೆನ್ನಾಗಿ ಆಗಬೇಕು ಎಂದು ಕೇಂದ್ರ ಸರ್ಕಾರದಲ್ಲಿ ಬೊಬ್ಬೆ ಹೊಡೆಯುತ್ತಿದ್ದಾರೆ. ನೀವು 50 ವರ್ಷ ದಿಂದ ಏನು ಮಾಡಿದ್ದೀರಿ ಎಂದು ನೀವೇ ಹೇಳುತ್ತೀರಿ. ಸ್ವಾಮಿ, ನೀವು ಅದೆಲ್ಲವನ್ನು ಮಾಡಿ. ನೀವು ಈಗ 5 ವರ್ಷದಲ್ಲಿ ಮಾಡಿಬಿಟ್ಟು ನಾವು 50 ವರ್ಷದಲ್ಲಿ ಮಾಡದಿರುವುದನ್ನು ಬರೀ 5 ವರ್ಷದಲ್ಲಿ ತಾವು ಮಾಡಿ

ಮುಗಿಸಿಬಿಡಬಹುದಲ್ಲಾ? ನಾವು ಮುಂದೆ ಅಧಿಕಾರಕ್ಕೆ ಬರುವುದರಲ್ಲಿ ಏನೂ ಇಲ್ಲದಂತೆ ತಾವು ಮಾಡಿದರೆ ಬಹಳ ಒಳ್ಳೆಯದು. ನೀವೇ ಎಲ್ಲಾ ಮಾಡಿ ಇಟ್ಟು ಬಿಟ್ಟರೆ ನಮಗೆ ಕೆಲಸವೇ ಇರುವುದಿಲ್ಲ. ಮಾಡಿ. ಮಾನ್ಯ ಕಾಗೇರಿ ಸಾಹೇಬರಿಗೆ ಎಷ್ಟೆಷ್ಟು ಶಿಕ್ಷಕರ ಹುದ್ದೆ ಖಾಲಿ ಇದೆಯೆಂಬುದನ್ನು ಕೇಳಿ. ಸ್ಕೂಲ್‌ಗಳಲ್ಲಿ ಗಂಟೆ ಒಡೆಯಲು peons ಇಲ್ಲ. Attenders ಇಲ್ಲ. Teachers ಇಲ್ಲ. ಅದನ್ನು ಮೊದಲು ಮಾಡಿ. ನಿಮ್ಮ ಪಾಲಿಸಿ ಏನು? Attenders, Peons recruitment ಮಾಡುವಂತಿಲ್ಲ. ನಾನೇ ನಡೆಸುತ್ತಿರುವ ಸಂಸ್ಥೆಯಲ್ಲಿ 60 ಪೋಸ್ಟ್ teachers ಖಾಲಿ ಇದೆ. How do you expect me to teach? ಆ ಮಕ್ಕಳು ಎಲ್ಲಿ ಹೋಗಬೇಕು. ಅವರೇನು ಸರ್ಕಾರಿ ಮಕ್ಕಳು, ಖಾಸಗಿ ಮಕ್ಕಳು ಎಂದು ಲೇಬಲ್ ಹಚ್ಚಿದ್ದಾರೆಯೇ? ಅವರಿಗೆ teach ಮಾಡುವುದು ಯಾರು? ಇವತ್ತು ಶಿಕ್ಷಕರು retire ಆದರೆ ನಾಳೆ ನೇಮಕಾತಿಗೆ ಬರೆದರೆ permission ಕೊಡುತ್ತೀರಾ? ನಮ್ಮ ತುಮಕೂರಿನ ಸಿದ್ಧಗಂಗಾ ಮಠದಲ್ಲಿ 75 ಪೋಸ್ಟ್ ಖಾಲಿ ಇದೆ. ನೀವು immediate ಆಗಿ permission ಕೊಡುತ್ತೀರಾ? ಮಕ್ಕಳಿಗೆ ಯಾವ ಶಿಕ್ಷಕರು ಪಾಠ ಮಾಡಬೇಕು ಹೇಳಿ? ಇದನ್ನು ಮೊದಲು ಮಾಡಿ ಎಂದರೆ Private ತಂದಿದ್ದೇವೆ ಎಂದರೆ ಇದರಲ್ಲಿ ನಿಮ್ಮ ಉದ್ದೇಶವೇನಿದೆ? ಅವರಿಗೆ institution ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕಿದ್ದರೆ ಕೊಡಿ. There are other provisions in the Government. ಅಜೀಂ ಪ್ರೇಮ್‌ಜಿ ಫೌಂಡೇಷನ್‌ಗಿಂತ one of the best international level institutions ಕಟ್ಟಿದ್ದಾರಪ್ಪಾ ಎಂದು ಅವರು ಬೆಂಗಳೂರಿಗೆ ಬರುತ್ತಾರೆ. There are so many international schools in Bangalore. ಬೇಕಾದಷ್ಟು ಜನ foreign students, NRIS ಎಲ್ಲಾ ಬಂದು study ಮಾಡುತ್ತಿದ್ದಾರೆ. Let them build it like that. ನಮಗೆ 20%, 30%, 50% ನಿಮಗೆ ಏನು ತಿಳಿಯುತ್ತದೋ ಆ ಪರ್ಸೆಂಟೇಜ್ fix ಮಾಡಿ ನಮ್ಮ ಹುಡುಗರಿಗೆ admissions ಕೊಡಲಿ. ತೆಗೆದು ನೋಡಿ. NIIT ನವರು 20% ಸೀಟನ್ನು ನಮಗೆ ಕೊಡಬೇಕೆಂದು ನಾನು file ಮೇಲೆ ಬರೆದಿದ್ದೇನೆ. Have they been implemented? It is a Government institution. ಏಕೆ ಕೊಡುವುದಿಲ್ಲವೆಂದು ಅವರಿಗೆ ಕೇಳಿ. ಇವತ್ತು ನಾವು

ಸೂರತ್‌ಕಲ್‌ಗೆ ನಮ್ಮ ವಿದ್ಯಾರ್ಥಿಗಳಿಗೆ ಕಳಿಸಬೇಕೆಂದರೆ ಅವರು ಸಿ.ಇ.ಟಿ. ಯಲ್ಲಿ ನಮಗೆ ಕೊಡುವುದಿಲ್ಲ. Why they are not giving? ನಮ್ಮ ನೀರು, ಭೂಮಿ, ವಿದ್ಯುತ್, 5 ಸಲ file reject ಮಾಡಿ, ನಾನು ಅವರಿಗೆ ಹೇಳಿದೆ. ಕಡೆಗೆ ಅವರು ಒಪ್ಪಿಕೊಂಡಿದ್ದಾರೆ. They look into the file. ಅವರು ನಮಗೆ 20% ಸೀಟನ್ನು ಸಿ.ಇ.ಟಿ.ಯಲ್ಲಿ ಕೊಡುವುದಿಲ್ಲ. All India competition ನಲ್ಲಿ ಬರಬೇಕು. ಅಂಥ ಪರಿಸ್ಥಿತಿ ಇರುವಾಗ ಇವತ್ತು ನಾವು Private Bill ನ್ನು ತರುವುದು I don't think it is right. The time is not right. ಈ ಸಂದರ್ಭದಲ್ಲಿ ಇದು ಬೇಡಿ. ಏಕೆಂದರೆ All India level ನಲ್ಲಿ, Deemed University ಯಲ್ಲಿ ಗೊಂದಲವಾಗುತ್ತಿದೆ. ಅಂಥ ಸಂದರ್ಭದಲ್ಲಿ ನಾವು Private University permit ಮಾಡುತ್ತಿದ್ದೇವೆ, ಕರ್ನಾಟಕ ಸರ್ಕಾರ Private University ಯನ್ನು permit ಮಾಡುತ್ತಿದೆ ಎಂದರೆ I don't think it is right. ಇದನ್ನು ವಾಪಸ್ ತೆಗೆದುಕೊಳ್ಳಬೇಕು. ದಯಮಾಡಿ ವಾಪಸ್ ತೆಗೆದುಕೊಳ್ಳಿ. ಏಕೆಂದರೆ ನಿಮ್ಮಿಂದ ಈ ಕೆಲಸ ಆಗಬಾರದು. ಯಾರೋ ನಿಮ್ಮಿಂದ ಮಾಡಿಸಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು ಮಾಡಿದ್ದಾರೆ. ಮಾನ್ಯ ಅರವಿಂದ ಲಿಂಬಾವಳಿಯವರೆ ಇದರ ಹಿಂದೆ ಏನೋ ಉದ್ದೇಶವಿದೆ, ಪಿತೂರಿ ಇದೆ. ನಿಮಗೆ ಆ ರೀತಿ ಇರುವುದು ಅನ್ನಿಸುತ್ತಿಲ್ಲವೇ? ಇದರ ಹಿಂದೆ ಬಹಳ ದೊಡ್ಡ ಪಿತೂರಿ ಇದೆ. Don't get into this. ಇದಕ್ಕೆ ನೀವು ಸಿಕ್ಕಿಹಾಕಿಕೊಳ್ಳಬೇಡಿ. ಬಸವರಾಜ್ ಬೊಮ್ಮಾಯಿಯವರೆ, ಇದರ ಹಿಂದೆ ಏನಾದರು ಪಿತೂರಿ ಇದೆಯೇ ಎಂಬ ಬಗ್ಗೆ ತಾವು ಹೇಳಬೇಕು. ಇದರ ಉದ್ದೇಶವನ್ನು ನೋಡಿದರೆ ನನಗೆ ಇದರ ಹಿಂದೆ ಏನೋ ಪಿತೂರಿ ಇದೆಯೆಂದು ಅನ್ನಿಸುತ್ತದೆ. ನಿಜಕ್ಕೂ ಆ ರೀತಿ ಇದೆ ಇದು. ಬೇಡಿ.

ಶ್ರೀ ಬಸವರಾಜ್ ಬೊಮ್ಮಾಯಿ : ಅವರು one of the most efficient Ministers. ಯಾವ ಹುನ್ನಾರವೂ ಅವರ ಹತ್ತಿರ ನಡೆಯುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಏಕೆ, ಯಾರಾದರೂ inefficient ಇದ್ದಾರೆಯೆ?

ಶ್ರೀ ಬಸವರಾಜ್ ಬೊಮ್ಮಾಯಿ : ನೀವು ಆ ರೀತಿ ಪ್ರಶ್ನೆ ಕೇಳುತ್ತೀರೆಂದು ನನಗೆ ಗೊತ್ತು. ಆದ್ದರಿಂದ one of the most ಎಂದು ಹೇಳಿದೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ all are efficient?

ಡಾ: ಜಿ.ಪರಮೇಶ್ವರ್ : ನಾನು ಅವರ efficiency ಬಗ್ಗೆ ಮಾತನಾಡಲಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : ಆದ್ದರಿಂದ ಅವರ ಹತ್ತಿರ ಯಾವುದೇ ಹುನ್ನಾರ ಆಗುವುದಿಲ್ಲ. ಅವರು ಬಹಳ study ಮಾಡಿ ಮಾಡಿದ್ದಾರೆ. ಉತ್ತರ ಕೊಡಬೇಕಾದರೆ ಎಲ್ಲವನ್ನು ಅವರು ಹೇಳುತ್ತಾರೆ. ಯಾವುದಾದರು ಒಂದು ಬದಲಾವಣೆಯಾದಾಗ ಹತ್ತು ಹಲವಾರು ಮೂಲಭೂತ ಪ್ರಶ್ನೆಗಳು ಹುಟ್ಟೇ ಹುಟ್ಟುತ್ತವೆ. ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ.

ಅಧ್ಯಕ್ಷರು : ವಿಷಯಾಂತರ ಬೇಡ. ಬಿಲ್ಲಿನ ಬಗ್ಗೆ ಮಾತ್ರ ಮಾತನಾಡಿ.

ಡಾ: ಜಿ. ಪರಮೇಶ್ವರ್ : ಸರ್ಕಾರ ಖಂಡಿತಾ ಕೊಡುತ್ತದೆ. We expect that.

ಶ್ರೀ ಬಸವರಾಜ್ ಬೊಮ್ಮಾಯಿ : ನೀವು ಸಚಿವರಾಗಿದ್ದ ಕಾಲದಲ್ಲಿ The Karnataka University Bill ತಂದಾಗ ನಾವು ಆ ಕಡೆ ಇದ್ದು ಮಾತನಾಡಲಿಲ್ಲವೇ? ಆಗ ನೀವು ಕೆಲವು ಬದಲಾವಣೆಗಳನ್ನು ತಂದಿರಿ.

ಡಾ: ಜಿ. ಪರಮೇಶ್ವರ್ : ನಾನು ಇಲ್ಲಾ ಎಂದು ಹೇಳುವುದಿಲ್ಲ.

ಶ್ರೀ ಬಸವರಾಜ್ ಬೊಮ್ಮಾಯಿ : Vice Chancellor appointment, Academic Council ನಿಂದ ಹಿಡಿದು Senate syndicate provisions ಮೂಲಭೂತವಾಗಿ ಬದಲಾವಣೆ ಮಾಡಿದಿರಿ. ಆಗ ನಾವು ಆ ಕಡೆ ನಿಂತು ಎಲ್ಲಾ ಹೇಳಿದರೂ ಕೂಡ ನೀವು ಮಾಡಲಿಲ್ಲ. ನೀವು ಅಂದು ಮಾತನಾಡುವಾಗ Progressive, Progressive ಎಂದು ಹೇಳುತ್ತಿದ್ದಿರಿ. Academic Council ನಿಂದ ಎಲ್ಲಾ ಅಧಿಕಾರವನ್ನು ಸರ್ಕಾರದಲ್ಲಿ ಇಟ್ಟುಕೊಂಡಿರಿ ಈ ಕಡೆ ಇದ್ದಾಗ. ಈಗ ಸರ್ಕಾರಕ್ಕೆ ಯಾವುದು ಇರಬಾರದು ಎನ್ನುವುದು.

ಅಧ್ಯಕ್ಷರು : ಬಿಲ್ಲಿನ ಬಗ್ಗೆ ಮಾತನಾಡಿ. ವಿಷಯಾಂತರ ಬೇಡ.

ಡಾ: ಹೆಚ್.ಸಿ. ಮಹದೇವಪ್ಪ : ಇವರ ಪ್ರಸ್ತಾಪ ಮಾಡಿರುವುದೇ ಬೇರೆ, ಅವರು ಹೇಳುತ್ತಿರುವುದೇ ಬೇರೆ.

ಶ್ರೀ ಬಸವರಾಜ್ ಬೊಮ್ಮಾಯಿ : ನಾವು ಬದಲಾದಂಥ ಪರಿಸ್ಥಿತಿ ಯಲ್ಲಿ ನಿಮ್ಮ ಸರ್ಕಾರ ನೇಮಿಸಿರುವಂಥ Knowledge Commission ಹೇಳುತ್ತದೆ, you should bring private investment in the higher education ಎಂದು. ಆ ಹಿನ್ನೆಲೆಯಲ್ಲಿ ಅವರು ಇದನ್ನು ತಂದಿದ್ದಾರೆ.

Dr. G.PARAMESHWAR : Please, don't try to misguide. Knowledge Commission reportನಲ್ಲಿ Private University ಯನ್ನು ಕೊಟ್ಟು ಈ ರೀತಿ ಕೊಡಿಯೆಂದು ಹೇಳಿದ್ದಾರೆಯೇ? Encourage the Private initiative. I am not saying that 'don't do that'. But in what form? Has he got an experience of starting a single institution? ಯಾರಿಗೆ University ಯನ್ನು ಕೊಡುತ್ತಿದ್ದೀರಿ? U.G.C. guide lines ಏನಿದೆ? Deemed to be University ಗೆ ಕೊಡಬೇಕಾದರೆ, forget about the private. Deemed to be University ಗೆ ಕೊಡಬೇಕಾದರೆ they have set certain guidelines. ಆ Guidelines follow ಮಾಡಿ. ಹೌದು, ನಾನು Comprehensive Bill ತೆಗೆದುಕೊಂಡು ಬಂದೆ. Did I not convince everybody on this side? ಎಲ್ಲರೂ including every Member of the House, ಅಧ್ಯಕ್ಷರು ಅಲ್ಲಿ ಕುಳಿತುಕೊಂಡು ನೂರು ಮಾರ್ಕ್ಸ್ ಕೊಟ್ಟರು. ನಿಮಗೆ ಗೊತ್ತಿಲ್ಲ. ನೀವು ಆ ಮನೆಯಲ್ಲಿ ಇದ್ದಿರಿ. ಅಂಥ ಸಂದರ್ಭದಲ್ಲಿ

ಶ್ರೀ ಬಸವರಾಜ ಬೊಮ್ಮಾಯಿ : ನೀವು comment ಮಾಡಿರುವುದು ಗೊತ್ತಿದೆ. ನಾನು ಕೆಳಮನೆಯಲ್ಲಿ ಎಲ್ಲರನ್ನೂ convince ಮಾಡುವುದಕ್ಕೆ ಆಗಲಿಲ್ಲವೆಂದು ಹೇಳಿದ್ದೀರಿ. ಏಕೆಂದರೆ ಅಲ್ಲಿ ನಾವು ಮೂಲಭೂತ ಪ್ರಶ್ನೆಗಳನ್ನು ಎತ್ತಿದ್ದೆವು.

ಡಾ: ಜಿ.ಪರಮೇಶ್ವರ್ : ಅದಕ್ಕೆಲ್ಲಾ ಉತ್ತರ ಕೊಟ್ಟೆ.

ಶ್ರೀ ಬಸವರಾಜ್ ಬೊಮ್ಮಾಯಿ : ಏನೂ ಉತ್ತರ ಕೊಡಲಿಲ್ಲ ನೀವು. ಆವತ್ತು ಯಾವ ಉತ್ತರವನ್ನೂ ನೀವು ಕೊಡಲಿಲ್ಲ. ನಮ್ಮ ಸಮಾಧಿಯ

ಮೇಲೆ ಈ ಬಿಲ್ಲನ್ನು ತಂದಿದ್ದೀರೆಂದು ನಾವು ವ್ಯಾಖ್ಯಾನ ಮಾಡಲು ಹೊರಟಿದ್ದೆವು. ಬೇಕಾದರೆ ಕಡತ ತೆಗೆಸಿ ನೋಡೋಣ.

ಡಾ: ಜಿ. ಪರಮೇಶ್ವರ್ : ಜಗದೀಶ್‌ಶೆಟ್ಟರ್ ರವರು ವಿರೋಧ ಪಕ್ಷದ ನಾಯಕರಾಗಿ he came and congratulated me there.

Sri BASAVARAj BOMMAI : I am aware of it. In spite of that, still certain questions were not answered.

ಅಧ್ಯಕ್ಷರು : ವಿಷಯಾಂತರ ಬೇಡ.

ಡಾ: ಜಿ.ಪರಮೇಶ್ವರ್ : ನಮಗೆ ಸ್ವಲ್ಪ ಅನುಭವವಿದೆ. ಈ ಶಿಕ್ಷಣ ಕ್ಷೇತ್ರ ನಾನು ಮೊದಲೇ ಹೇಳಿದಂತೆ ಇದರಲ್ಲಿ ನಾವು ಏನಾದರು ಕೆಡಿಸಿದರೆ ಸಮಾಜದ ಮೇಲೆ ಬಹಳ ದೊಡ್ಡ ಆಘಾತವಾಗುತ್ತದೆ. ಆ ಕಾರಣಕ್ಕಾಗಿ ಹೇಳುತ್ತೇನೆ. ನಮ್ಮ ಮಕ್ಕಳು ಇವತ್ತು ಏನು ಹೊರದೇಶಕ್ಕೆ ಹೋಗಿ ಒಳ್ಳೆಯ ಹೆಸರನ್ನು ಮಾಡಿದ್ದಾರೆ, ಜಯಚಂದ್ರರವರು ಒಬಾಮಾರವರ ಹೆಸರನ್ನು ತೆಗೆದುಕೊಂಡು ಹೇಳಿದರು. ಒಬಾಮಾ, President of the United States of America, reference ತೆಗೆದುಕೊಂಡು, ಒಬಾಮಾರಂಥವರೂ ಕೂಡ India ದೇಶದವರು ಹೆಚ್ಚಿನ ಮಟ್ಟಕ್ಕೆ human resources ಅನ್ನು ಇದೇ ರೀತಿ ಮಾಡಿದರೆ ನಮಗೆ ಇನ್ನೂ ಕೂಡ ಕಷ್ಟವಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಕಾರಣವೇನೆಂದರೆ, we have a good set up. ಅದನ್ನು ನಾವು ಇಂಪ್ರೂವ್ ಮಾಡಬೇಕೇ ಹೊರತು Proliferate ಮಾಡಬಾರದು. ಅದು ಆಗಬಾರದೆಂಬುದು ನಮ್ಮ ಸಲಹೆಯಾಗಿದೆ. ನೀವೇ ಬಿಲ್ ತಂದು ಒಳ್ಳೆಯ ಹೆಸರು ತೆಗೆದುಕೊಳ್ಳಿ. ಅರವಿಂದ ಲಿಂಬಾವಳಿಯವರಿಗೆ ಒಳ್ಳೆಯ ಹೆಸರು ಬರುತ್ತದೆಂದರೆ ನಾವು ಸಂತೋಷ ಪಡುತ್ತೇವೆ. ನಮಗೇನೂ ಹೊಟ್ಟೆಯುರಿ ಇಲ್ಲ. ನೀವು ಒಳ್ಳೆಯ ಕೆಲಸ ಮಾಡಿದಲ್ಲಿ, ನಿಮಗೆ ನಾವು ಸಪೋರ್ಟ್ ಮಾಡುತ್ತೇವೆ. ಜೊತೆಗೆ, ಬಿರುದು-ಬಾವಲಿಗಳೆಲ್ಲವನ್ನೂ ನೀಡುತ್ತೇವೆ. ಆದರೆ, ಇದಕ್ಕೋಸ್ಕರ ಹಾಳು ಮಾಡುವುದು ಬೇಡ ಅಥವಾ ಇದರಲ್ಲಿ ನೀವು ಎಲ್ಲಿ ರೆಗ್ಯುಲೇಟ್ ಮಾಡಬೇಕೋ ಮಾಡಿ, ಮತ್ತೊಮ್ಮೆ ಬಿಲ್ ತೆಗೆದುಕೊಂಡು ಬರಬೇಕೆಂದು ಸಲಹೆ ಕೊಡುತ್ತೇವೆ. Private Universities Bill ತೆಗೆದುಕೊಂಡು ಬನ್ನಿ. Individual ಆಗಿ, ಒಬ್ಬೊಬ್ಬರ ಹೆಸರಿನಲ್ಲಿ ಬಿಲ್ ಬೇಡ. ಒಂದು comprehensive ಆಗಿರುವ ಬಿಲ್ ತನ್ನಿ, ಸದನದಲ್ಲಿ ಚರ್ಚಿಸೋಣ. ಬಿಲ್‌ನಲ್ಲಿ ಒಳ್ಳೆಯ ಉದ್ದೇಶವಿದ್ದು, ತೆಗೆದುಕೊಂಡು ಬಂದರೆ,

ನಾವು ನಿಮಗೆ ಖಂಡಿತವಾಗಿಯೂ ಸಹಕರಿಸುತ್ತೇವೆ. ಆದುದರಿಂದ, ಈ ಸಂದರ್ಭದಲ್ಲಿ ಈ ಫಾರ್ಮ್‌ನಲ್ಲಿ ತಂದಿರುವ ಬಿಲ್ ಸರಿಯಿಲ್ಲ. ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಿಗೆ ತಮ್ಮ ಮೂಲಕ ತಿಳಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ: ಶರಣ ಪ್ರಕಾಶ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗ ತಾನೇ ವಿರೋಧ ಪಕ್ಷದ ನಾಯಕರು, ಜಯಚಂದ್ರರವರು ಮತ್ತು ಡಾ: ಪರಮೇಶ್ವರ್‌ರವರು ಬಹಳ ಚೆನ್ನಾಗಿ ಬಿಲ್ ಮೇಲೆ deliberate ಮಾಡಿದ್ದಾರೆ. ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ. ಆದರೆ, ಈ ಬಿಲ್ ತಂದಿರುವ spirit behind the bill, I appreciate and welcome it. ಏಕೆಂದರೆ, this is the need of the hour. ಇದರಲ್ಲಿ ಬಹಳಷ್ಟು ನ್ಯೂನತೆಗಳಿರಬಹುದು, ಇದರಲ್ಲಿ ಬಹಳಷ್ಟನ್ನು ಮಾರ್ಪಾಟುಗೊಳಿಸುವ ಅಗತ್ಯತೆ ಇರಬಹುದು. ಆದರೆ, what is the spirit behind this bill? I will oppose this Bill in this form. ಇದರಲ್ಲಿ ಎರಡನೆಯ ಪ್ರಶ್ನೆಯೇ ಇಲ್ಲ. ಏಕೆಂದರೆ, ನಮ್ಮ ನಾಯಕರು ಬಹಳ Valid points ಹೇಳಿದ್ದಾರೆ. ನಾನೂ ಕೂಡ ಒಂದೇ ಉಸುರಿನಲ್ಲಿ ಮಾನ್ಯ ಮಂತ್ರಿಗಳಿಗೆ ಹೇಳುವುದೇನೆಂದರೆ, this type of bill is required now? The time is right. ಡಾ: ಪರಮೇಶ್ವರ್‌ರವರು ಹೇಳಿದಂತೆ, ಬಿಲ್ ಅನ್ನು ಈ ರೀತಿ ತರುವುದಕ್ಕಿಂತಲೂ ಇದನ್ನೊಂದು Comprehensive Bill ಆಗಿ ತಂದು, ಸದನದಲ್ಲಿ ಚರ್ಚಿಸಿದರೆ ಒಳ್ಳೆಯದು. ಏಕೆಂದರೆ, ನಮ್ಮ ದೇಶದಲ್ಲಿ ಜನಸಂಖ್ಯೆಗನುಗುಣವಾಗಿ ಅಭಿವೃದ್ಧಿಯಾಗ ಬೇಕಾದರೆ, We have to use the human resource. ಒಂದು ವೇಳೆ human resource ಅನ್ನು ಬಳಕೆ ಮಾಡಿಕೊಳ್ಳಬೇಕಾದರೆ, higher education is the only way out. ನಮ್ಮ ದೇಶದ ಜನಸಂಖ್ಯೆಗೆ ನಮ್ಮ ಹತ್ತಿರ ಬಂಡವಾಳವಿಲ್ಲ. ಅವರೆಲ್ಲರಿಗೂ ನಾವು ಕೆಲಸ ಕೊಡುವುದಕ್ಕಾಗುವುದಿಲ್ಲ. ಆದರೆ, ನಾವು ಏನು ಮಾಡಬಹುದು? ಒಳ್ಳೆಯ ಶಿಕ್ಷಣ ಕೊಟ್ಟು we can create man power where there is demand. ಈ man power ಗೆ quality education ಕೊಟ್ಟರೆ there should be demand in the whole globe. ಆ ರೀತಿಯ ವ್ಯವಸ್ಥೆ ಮಾಡುವ ಅವಶ್ಯಕತೆ ಇದೆ. It is the need of the hour. The spirit behind the Bill is welcomed.

ಅದಕ್ಕೋಸ್ಕರ, ಮಾನ್ಯ ಮಂತ್ರಿಗಳಲ್ಲಿ ನನ್ನ ಮನವಿ ಏನೆಂದರೆ, ಇದರಲ್ಲಿ ನೀವು ಕೆಲವು ಅಂಶಗಳನ್ನು ಸೇರಿಸಬೇಕು. ಏನೆಂದರೆ, there should be no profit motive in this. ಅಷ್ಟೆ. I welcome this. Unless and until they come into Education Bill, especially higher and primary education bill without any profit motto, ಇವತ್ತು ಶಿಕ್ಷಣ ಕ್ಷೇತ್ರದಲ್ಲಿ ಹಣ ಮಾಡುವ ಉದ್ದೇಶವಿಲ್ಲವೆಂದರೆ, definitely ಅದಕ್ಕೆ ರಿಸಲ್ಟ್ ಬರುತ್ತದೆ. ಅದಕ್ಕೋಸ್ಕರ, ನೀವು ಇದರಲ್ಲಿ ಹೇಳಬೇಕಾಗಿರುವುದೇನೆಂದರೆ, it should be without profit motive and it should be inclusive of all. ಈಗ ನಾವು category-wise ಹೇಗೆ ಕೊಡುತ್ತೇವೋ, ಇವೆರಡನ್ನೂ ಸೇರಿಸಿ Comprehensive Bill ಆಗಿ ತಂದರೆ we will welcome this Bill. ಈ ಸದನದಲ್ಲಿ deliberation ಆಗಬೇಕು. ಏಕೆಂದರೆ, ಇವತ್ತು ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕೆಂದರೆ, there should be a deliberation in the House. ಅದಕ್ಕೋಸ್ಕರ ತಂದಿರುವ ಈ ಬಿಲ್ ಅನ್ನು withdraw ಮಾಡಿ, Comprehensive Bill ಆಗಿ ತನ್ನಿ, we will discuss. ಇಲ್ಲವೆಂದರೆ, ಈ ಬಿಲ್ ಅನ್ನು Joint Select Committee ಗೆ ವಹಿಸಬೇಕು. There should be detailed discussion on this Bill.

ಶ್ರೀ ವೆಂಕಟರಾವ್ ನಾಡಗೌಡ : ಸನ್ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಹೊಸದಾಗಿ ಅಜೀಂ ಪ್ರೇಮ್‌ಜಿಯವರ ಹೆಸರಿನಲ್ಲಿ ಒಂದು ವಿಶ್ವವಿದ್ಯಾನಿಲಯ ಪ್ರಾರಂಭಿಸುವುದಕ್ಕೆ ಬಿಲ್ ತಂದಿದ್ದಾರೆ. ಈ ಬಿಲ್ ಮೇಲೆ ಹಿರಿಯ ಮಾಜಿ ಸಚಿವರು, ಶಿಕ್ಷಣ ಸಚಿವರು, ವಿರೋಧ ಪಕ್ಷದ ನಾಯಕರೆಲ್ಲರೂ ಸುದೀರ್ಘವಾಗಿ ಮಾತನಾಡಿದ್ದಾರೆ. ಈ ಬಿಲ್ ನೋಡಿದರೆ ಸರ್ಕಾರದ ಹಿಡಿತ ಏನು ಎನ್ನುವುದರ ಬಗ್ಗೆ ಕೆಲವು ಅನುಮಾನಗಳು ಮತ್ತು ನಮ್ಮ ಸಾಮಾಜಿಕ ಕಳಕಳಿ ಏನು ಎನ್ನುವುದರ ಬಗ್ಗೆ ಚರ್ಚಿಸಿದ್ದಾರೆ. ಇದರಲ್ಲಿ ಒಂದು ಸಮಿತಿಯಲ್ಲಿ ಇಬ್ಬರು ಕಾರ್ಯದರ್ಶಿಗಳನ್ನು ನೇಮಿಸಿರುವುದು ಬಿಟ್ಟರೆ, ಸರ್ಕಾರದ ಹಿಡಿತವೇನೂ ಇಲ್ಲ. ಸರ್ಕಾರ ಅವರಿಗೆ ಅಧಿಕಾರ ಕೊಟ್ಟು ಈ ತರಹ ಮಾಡಿರುವುದು ಸಮಂಜಸವಲ್ಲ. ಯುಜಿಸಿ ನಿಯಮಗಳನ್ನು ಪಾಲಿಸಿಲ್ಲವೆಂದು ಹೇಳಿದ್ದರಲ್ಲದೆ, ಒಬ್ಬೊಬ್ಬರ ಹೆಸರಿನಲ್ಲಿ ಬಿಲ್ ತರುವುದು ಸಮಂಜಸವಲ್ಲವೆಂತಲೂ ತಿಳಿಸಿದ್ದಾರೆ. ಈ ಸಂಬಂಧ Comprehensive

Bill ತಂದರೆ ಉತ್ತಮವಾಗಿರುತ್ತದೆಂಬುದು ನಮ್ಮ ಉದ್ದೇಶ ಕೂಡ ಅದೇ ಆಗಿದೆ. ಒಳ್ಳೆಯ ಉದ್ದೇಶವಿದ್ದರೂ ಇಷ್ಟೆಲ್ಲಾ ಗೊಂದಲಗಳಿರುವಾಗ ನಾನು ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಈ ಬಿಲ್ ಅನ್ನು ವಾಪಸ್ಸು ತೆಗೆದುಕೊಂಡು ಮತ್ತೊಮ್ಮೆ ಚಿಂತಿಸಿ, ಪ್ರತ್ಯೇಕ ವಿಶ್ವವಿದ್ಯಾನಿಲಯಗಳಿಗೆ ಅನುಮತಿ ಕೊಡುವ ಸಂಬಂಧ ಒಂದು Comprehensive Bill ತರುವುದು ಸೂಕ್ತ. ಇಲ್ಲವೆಂದರೆ, Joint Select Committee ಗೆ, ಸದನ ಸಮಿತಿಗೆ ಒಪ್ಪಿಸಿ, ಸುದೀರ್ಘ ಚರ್ಚೆಯಾಗಲಿ. ಏಕೆಂದರೆ, ಈ ರೀತಿಯಲ್ಲಿ ವಿಶ್ವವಿದ್ಯಾನಿಲಯಗಳನ್ನು ತೆರೆಯಲು ನಾವು ಅನುಮತಿ ಕೊಡುತ್ತಾ ಹೋಗುವುದು ಸಮಂಜಸವಲ್ಲ. ಆದುದರಿಂದ ಈ ಸಂಬಂಧ ಸಮಿತಿಯೊಂದನ್ನು ನೇಮಿಸಿ, ಸಮಿತಿಗೆ ಈ ಬಿಲ್ ಅನ್ನು ವಹಿಸಿಕೊಟ್ಟು, ಸಮಿತಿಯಲ್ಲಿ ಸುದೀರ್ಘವಾಗಿ ಚರ್ಚೆಯಾದ ಬಳಿಕವೇ ಸದನದಲ್ಲಿ ಮಂಡಿಸುವುದು ಸೂಕ್ತವೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಲಕ್ಷ್ಮಿನಾರಾಯಣ (ಬೈಂದೂರು) : ಸನ್ಮಾನ್ಯ ಅಧ್ಯಕ್ಷರೆ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯ ನಮ್ಮ ರಾಜ್ಯಕ್ಕೆ ಬರುತ್ತಿರುವುದು ನಿಜವಾಗಿಯೂ ನಮಗೊಂದು ವರವೆಂದು ನಂಬಿದ್ದೇವೆ. ಏಕೆಂದರೆ, ಇವತ್ತಿನ ದಿವಸಗಳಲ್ಲಿ ಬೆಂಗಳೂರಿಗೆ ಪ್ರಖ್ಯಾತ ಹೆಸರು ಬಂದಿದ್ದರೆ, ಪ್ರಪಂಚದಲ್ಲಿ ಬೆಂಗಳೂರು ಪ್ರಸಿದ್ಧಿ ಪಡೆದಿದ್ದರೆ, ಅದು ಡಾ: ಅಜೀಂ ಪ್ರೇಮ್ ಜಿ, ಡಾ: ನಾರಾಯಣ ಮೂರ್ತಿ ಹಾಗೂ ಇನ್ನಿತರ ಕೆಲವರ ಪ್ರಯತ್ನದಿಂದಾಗಿ ಬಂದಿದೆಯೆಂದು ಹೇಳಲು ನಾನು ಇಷ್ಟಪಡುತ್ತೇನೆ. ತಾವು ಪತ್ರಿಕೆಗಳಲ್ಲಿ ಓದಿರಬಹುದು. ಪ್ರಪಂಚದಲ್ಲಿ ನಂ.1 ರಾಷ್ಟ್ರವಾಗಿರುವ, ಈಗತಾನೇ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಅಮೆರಿಕಾದ ಅಧ್ಯಕ್ಷರು ಹೇಳಿರುವುದನ್ನು ಪ್ರಸ್ತಾಪಿಸಿದ್ದಾರೆ. ಅಮೆರಿಕಾದ ಅಧ್ಯಕ್ಷರಾದ ಒಬಾಮರವರು ಹೇಳಿರುವುದೇನೆಂದರೆ, ಭಾರತವೂ ಸೇರಿದಂತೆ ಇತರೆ ರಾಷ್ಟ್ರಗಳು ನಂ. 1 ಸ್ಥಾನಕ್ಕೇರಲು ಪ್ರಯತ್ನಿಸುತ್ತಿವೆಯೇ ಹೊರತು ನಂ. 2ಕ್ಕೆ ಅಲ್ಲ" ಎಂದು. ಈಗ ನಂ.1 ಅಮೆರಿಕಾ ಆಗಿದೆ. ಇತರೆ ರಾಷ್ಟ್ರಗಳು ನಂ.1 ಸ್ಥಾನಕ್ಕೇರಲು ಪ್ರಯತ್ನಿಸುತ್ತಿರುವುದಾಗಿ ಅವರು ಹೇಳಿದ್ದಾರೆ. ನಂ.1 ಸ್ಥಾನ ಪಡೆದುಕೊಳ್ಳಬೇಕಾದರೆ, ಪ್ರಯತ್ನವಿಲ್ಲದೆ ಬರಲು ಸಾಧ್ಯವಿಲ್ಲ. Quality education ಕೊಡದೇ ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಅತಿ ದೊಡ್ಡ ರಾಷ್ಟ್ರವಾಗಿರುವ, ಪ್ರಪಂಚದ ಜನಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿರುವ ಭಾರತದಂತಹ

ರಾಷ್ಟ್ರದಲ್ಲಿ ಇಂತಹ-ಒಂದು quality education ಕೊಡುವ ಯೂನಿವರ್ಸಿಟಿ ಬಂದರೆ ನಿಜವಾಗಿಯೂ ಸಹಾಯಕವಾಗುತ್ತದೆ. ಇಂತಹ quality education ತೆಗೆದುಕೊಳ್ಳಲು quality brain ಇರುವ ವಿದ್ಯಾರ್ಥಿಗಳಷ್ಟೇ ಸೇರಿದರೆ ಮಾತ್ರ ಸಾಧ್ಯವಾಗುತ್ತದೆ. ಇದಲ್ಲದೆ, ಅಜೀಂ ಪ್ರೇಮ್‌ಜಿ ಅಂತಹವರು ಇಂತಹ ಯೂನಿವರ್ಸಿಟಿ ತೆರೆಯುವುದಾಗಿ ಮುಂದೆ ಬಂದಾಗ ಸರ್ಕಾರದಿಂದ ಅವರು ಯಾವುದೇ ಗ್ರಾಂಟ್ ಕೇಳಲಿಕ್ಕಿಲ್ಲ. ಇಲ್ಲಿ ಬೇಕಾಗಿರುವ ಜಾಗವಾಗಲಿ ಅಥವಾ ಅದಕ್ಕೆ ಪೂರಕವಾದ ಇನ್ನಿತರ ಅನುಕೂಲಗಳನ್ನು ಕೇಳಬಹುದೇ ಹೊರತು ಹಣಕಾಸನ್ನು ಅವರು ಕೇಳುವುದಿಲ್ಲ ಅಥವಾ ಇದರಿಂದ ಅವರಿಗೆ ಹಣ ಮಾಡಬೇಕೆನ್ನುವ ಉದ್ದೇಶ ಇದೆಯೆಂದು ನನಗನ್ನಿಸುವುದಿಲ್ಲ.

ಪ್ರಪಂಚದಲ್ಲಿಯೇ ಅತಿ ಶ್ರೀಮಂತರಾಗಿರುವವರು ಇಂತಹ ವಿದ್ಯಾ ಸಂಸ್ಥೆ ಸ್ಥಾಪಿಸಲು ಮುಂದೆ ಬಂದಾಗ ಅದಕ್ಕೆ ಹತ್ತು ಹಲವಾರು ಅನುಮಾನ ಗಳನ್ನಿಟ್ಟುಕೊಳ್ಳುವುದು ಸರಿಯಲ್ಲವೆಂದು ಅನಿಸುತ್ತದೆ. ತಮಗೆಲ್ಲರಿಗೂ ಗೊತ್ತಿರಬಹುದು. ಸುಮಾರು 100 ವರ್ಷಗಳ ಹಿಂದೆ Tata Institute ಇತ್ತು. ಇವತ್ತು ಅದು Indian Institute of Science ಆಗಿದೆ. ಈ ಸಂಸ್ಥೆಯಲ್ಲಿ Degree, Ph.D., ಮಾಡಿರುವವರು ಪ್ರಪಂಚದಲ್ಲಿಯೇ ಒಳ್ಳೆಯ ಹೆಸರು ತೆಗೆದುಕೊಂಡಿದ್ದಾರೆ. ಬೆಂಗಳೂರಿನಲ್ಲಿ ನೂರು ವರ್ಷಗಳ ಹಿಂದೆ ಟಾಟಾರವರು ಶುರು ಮಾಡಿದ ಈ ವಿದ್ಯಾಸಂಸ್ಥೆಯು ಕ್ರಮೇಣ Indian Institute of Science ಎಂದು ಪರಿವರ್ತನೆಗೊಂಡು ಈಗ ಸರ್ಕಾರದ ವಶದಲ್ಲಿದೆ. ತಮಗೆ ತಿಳಿದಿರಬಹುದು. 30 ವರ್ಷಗಳ ಹಿಂದೆ ಪತ್ರಿಕೆಯಲ್ಲಿ, ಕೆಲವು ಕೆಲಸಗಳಿಗೆ ಅರ್ಜಿಗಳನ್ನು ಹಾಕಬೇಕಾದರೆ, 'Degree Holders from the Bangalore University need not apply' ಎಂದು ಪ್ರಕಟವಾಗುತ್ತಿತ್ತು! ಅನಂತರ, ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣಕ್ಕೆ ಸಂಬಂಧಿ ಸಿದಂತೆ quality improve ಆಯಿತು. ಆ ಸಮಯದಲ್ಲಿ ಆ ಸ್ಥಿತಿಯಲ್ಲಿದ್ದ ಹಲವಾರು ವಿದ್ಯಾಸಂಸ್ಥೆಗಳು private participation ನಿಂದಾಗಿ ಉತ್ತಮ ಗೊಂಡವು. ಆದುದರಿಂದ, ಈ ಕುರಿತು ನಾವು ಯಾವುದೇ ಅನುಮಾನ ಇಟ್ಟುಕೊಳ್ಳದೆ, ಅಜೀಂ ಪ್ರೇಮ್‌ಜಿಯವರು ಇಂತಹ ವಿಶ್ವವಿದ್ಯಾನಿಲಯ ಸ್ಥಾಪಿಸಲು ಉದ್ದೇಶಿಸಿರುವಾಗ ಅದಕ್ಕೆ ಅನುಮತಿ ನೀಡುವುದು ಬಹಳ

ಸಮಂಜಸವೆಂದು ನಾನು ಒಬ್ಬ ಪ್ರಾಧ್ಯಾಪಕನಾಗಿ ಕಾರ್ಯ ನಿರ್ವಹಿಸಿರುವ ಅನುಭವದ ಹಿನ್ನೆಲೆಯಲ್ಲಿ ಹೇಳುತ್ತಿದ್ದೇನೆ.

ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ): ಮಾನ್ಯ ಅಧ್ಯಕ್ಷರೆ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯವನ್ನು 'quality of education' ಸಲುವಾಗಿ ಒಂದು ಸಂಸ್ಥೆಯನ್ನು ಕೊಡುತ್ತಿದ್ದಾರೆ. Then I want to know what is the definition of 'quality of education'? What is important is how do you view that 'quality of education'? How do you ensure that the institution is gong to give quality of education? What are the indiators of quality of education? Whether these indicators have been incorporated there? No. The big question remains, No.1 is, how do you ensure the 'quality of education'? No.2 is, the institution which is starting an educational institution, does it have any experience? Is it an educational institution? It is a company. A company does only business. Ajim Premji is a great man. He has done great contribution to the State, to the Country, to the World. But how do you say that it is not transaction on business side? What is the experience of this institution to run this educational institution? They are talking of primary education. Then what is their experience to impart primary education by the society? These are the things that have not clarified. I will be very happy to openly support the Bill, it has to be passed. But my only request to the Hon'ble Minister is to see whether these things can be incorporated in the Act.

ಅಧ್ಯಕ್ಷರು : ಮಾನ್ಯ ಮಹಾದೇವಪ್ಪನವರೆ, Short ಆಗಿ ಬೇಗ ಮಾತನಾಡಿ ಮುಗಿಸಿ.

ಡಾ: ಹೆಚ್.ಸಿ.ಮಹಾದೇವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರು ತರಲು ಉದ್ದೇಶಿಸಿರುವ ಈ ವಿಧೇಯಕ ಈಗಾಗಲೇ ಅನೇಕ ಮಾನ್ಯ ಸದಸ್ಯರು ಹೇಳಿದ ಹಾಗೆ, ನಮ್ಮ ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿದೆ. ಜೊತೆಗೆ University Grant Commission guidelines ಗೆ ವಿರುದ್ಧವಾಗಿದೆ. 1983ನೇ ಇಸವಿಯ total abolition of Capitation

Fees ತೀರ್ಮಾನಕ್ಕೆ ಸಹ ಇದು ವಿರುದ್ಧವಾಗಿದೆ. ಯಾವುದೇ ಒಂದು ಶಿಕ್ಷಣ ಸಂಸ್ಥೆಯನ್ನೇ ಪ್ರಾರಂಭ ಮಾಡದಿರತಕ್ಕಂಥ ಖಾಸಗಿ ವ್ಯಕ್ತಿಗೆ ವಿಶ್ವವಿದ್ಯಾ ನಿಲಯವನ್ನು ಸ್ಥಾಪಿಸಲು ಅನುಮತಿ ಕೊಡುವುದು ಸರಿಯಲ್ಲ. ಸರ್ಕಾರ ತನ್ನ ಜವಾಬ್ದಾರಿಯನ್ನು ಹಿಂದೆ ಸರಿದು, ಸರ್ಕಾರದ ಹಿತಕ್ಕೆ ಮಾರಕವಾಗು ವಂತಹ ಈ ತೀರ್ಮಾನವನ್ನು ಕೈಗೊಂಡಿದೆ. ಸರ್ಕಾರಕ್ಕೆ ಮಾರಕವಾಗಿದೆ ಎಂದರೆ, ಅದು ಜನತೆಗೂ ಮಾರಕವಾಗತಕ್ಕಂಥ ತೀರ್ಮಾನವಾಗುತ್ತದೆ. ಈಗಾಗಲೇ ಮಾನ್ಯ ಸದಸ್ಯರು ಎಲ್ಲರೂ ಹೇಳಿದ್ದಾರೆ. ಸರ್ಕಾರ ಅಥವಾ ಮಾನ್ಯ ಶಿಕ್ಷಣ ಸಚಿವರು ಇದನ್ನೊಂದು Prestige ಆಗಿ ಪರಿಗಣಿಸತಕ್ಕಂಥ ಅಗತ್ಯವಿಲ್ಲ. ಮಾನ್ಯ ಸಚಿವರಾದ ಲಿಂಬಾವಳಿಯವರಿಗೆ ಸಾಮ್ಾಜಿಕ ನ್ಯಾಯದಲ್ಲಿ ಬದ್ಧತೆ ಇದೆ, ತುಳಿತಕ್ಕೆ ಒಳಗಾದ ಸಮಾಜದಿಂದ ಅವರೂ ಕೂಡ ಬಂದವರಾಗಿದ್ದಾರೆ. ಇದನ್ನು ಪ್ರತಿಷ್ಠೆಯಾಗಿ ಮಾಡಿಕೊಳ್ಳಬಾರದು. ಡಾ: ಬಾಬಾಸಾಹೇಬ್ ಅಂಬೇಡ್ಕರ್‌ರವರನ್ನು ಕೆಲವರು 'ಮೀಸಲಾತಿ ಒದಗಿಸಿದ್ದರಿಂದ ನಿಮಗೆ ಸಂತೋಷವಾಯಿತೇ ಎಂದು ಕೇಳಿದಾಗ, ಅವರು 'ಮೀಸಲಾತಿಯಿಂದ ನನಗೇನೂ ಸಂತೋಷವಾಗಲಿಲ್ಲ, ಎಲ್ಲಿಯತನಕ ನನ್ನ ಜನ ಅಧಿಕಾರದ ನಿರ್ಣಾಯಕ ಸ್ಥಳಗಳಲ್ಲಿ ಕೂರುವುದಿಲ್ಲವೋ, ಅಲ್ಲಿಯತನಕ ನನಗೆ ಸಂತೋಷವಿಲ್ಲ' ಎಂದು ಹೇಳಿದರಂತೆ. ಅಧಿಕಾರದ ನಿರ್ಣಾಯಕ ಸ್ಥಳಗಳಿಗೆ ಹೋಗಬೇಕಾದರೆ ಅವರು ಏನು ಮಾಡಬೇಕು? ಅವರು higher education ಗೆ ಹೋಗಬೇಕು. Higher Education ನಲ್ಲಿ special component ನಲ್ಲಿ SC/ST students ಗೆ ಖರ್ಚು ಮಾಡಿರುವುದು zero paise. ಇದರ ಬಗ್ಗೆ ನಾವು SC/ST Committee ಯಲ್ಲಿ review ಮಾಡಿದ್ದೇವೆ. ಮಾನ್ಯ ಲಿಂಬಾವಳಿಯವರೇ ಈಗ ಶಿಕ್ಷಣ ಸಚಿವರಾಗಿದ್ದಾರೆ. ಹಿಂದೆ ಇದ್ದಂಥ CET ಸುಪ್ರೀಂಕೋರ್ಟ್‌ನಲ್ಲಿ ರದ್ದಾದ ಮೇಲೆ, ಖಾಸಗಿ ಯವರು ಬಂದ ಮೇಲೆ, SC/ST ಹುಡುಗರಿಗೆ Fees ಕಟ್ಟಲಿಕ್ಕಾಗದೆ, ಅವರು ತೊಂದರೆ ಪಡುತ್ತಿದ್ದಾರೆ. ಸರ್ಕಾರ ಅವರಿಗೆ fees ಕಟ್ಟಿ, CET ನಲ್ಲಿ Private ನಲ್ಲಿ ಏನು ಕೊಡಬೇಕೋ, ಅದನ್ನು ಕೊಟ್ಟು ಅವರಿಗೆ ನೀವು ಶಿಕ್ಷಣ ಕೊಡಿ ಎಂದು ಕಳೆದ ವಿಧಾನ ಸಭೆಯಲ್ಲಿ ನಾವು ಹೇಳಿದ್ದೆವು. 1000 SC/ST ವಿದ್ಯಾರ್ಥಿಗಳಿಗೆ ಪ್ರವೇಶಕ್ಕೆ ಹೋಗಲಿಕ್ಕಾಗುತ್ತಿಲ್ಲ. 500 ಜನ ಮೆಡಿಕಲ್ ಕಾಲೇಜಿಗೆ ಹೋಗಲಿಕ್ಕಾಗುತ್ತಿಲ್ಲ. ಸರ್ಕಾರ ಈ ರೀತಿ ಎಲ್ಲಿ ವಿದ್ಯಾರ್ಥಿಗಳು

ಖಾಸಗಿ ಶಿಕ್ಷಣ ಕ್ಷೇತ್ರಗಳಿಗೆ CET ಮುಖಾಂತರ ಪ್ರವೇಶ ಪಡೆಯಲು ಆಗುತ್ತಿಲ್ಲ, ಅಂತಹವರಿಗೆ fees ಕಟ್ಟತಕ್ಕಂಥ ತೀರ್ಮಾನ ಮಾಡಿ, higher education ಗೆ ಅವರನ್ನು Promote ಮಾಡಿ. ಆದರೆ ಖಾಸಗಿ ವ್ಯಕ್ತಿ ಶಿಕ್ಷಣ ಸಂಸ್ಥೆಯನ್ನೇ ಪ್ರಾರಂಭ ಮಾಡದೆ, ನಾನು ವಿಶ್ವವಿದ್ಯಾನಿಲಯವನ್ನು ನಡೆಸುತ್ತೇನೆ ಎಂದು ಹೇಳಿದರೆ, ಅವರಿಗೆ ಸರ್ಕಾರ ಅದನ್ನು ಕೊಟ್ಟು ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳಬಾರದು. History ಅಂತಹ ಒಂದು ತೀರ್ಮಾನವನ್ನು ಕ್ಷಮಿಸುವುದಿಲ್ಲ. ಆದ್ದರಿಂದ ಇದನ್ನು Prestige ಮಾಡಿಕೊಳ್ಳದೆ, ಇಡೀ ಸದನ ಖಾಸಗಿ ಕ್ಷೇತ್ರವನ್ನು ಬಳಸಿಕೊಂಡು, higher education ಅನ್ನು, ಅದರ quality ಯನ್ನು ಮತ್ತು ವಿಶ್ವ ಮಟ್ಟದಲ್ಲಿ competition ಗೆ ನಮ್ಮ ಯುವ ಜನಾಂಗವನ್ನು ತಯಾರು ಮಾಡಲಿಕ್ಕೆ ಪೂರಕವಾದಂತಹ ವಾತಾವರಣವನ್ನು ನಿರ್ಮಾಣ ಮಾಡಲಿಕ್ಕೆ Comprehensive bill ವೊಂದನ್ನು ತಂದು, Joint Select Committee ಗೆ ಹಾಕಿ, ಅಧ್ಯಯನ ಮಾಡಿ, ಒಂದು progressive ವರದಿಯನ್ನು ಕೊಟ್ಟ ನಂತರ, ಸರ್ಕಾರ ಇಂತಹ ಆಲೋಚನೆಯನ್ನು ಮಾಡಬೇಕು. ಆದ್ದರಿಂದ ಈ ವಿಧೇಯಕವನ್ನು ಕೈ ಬಿಟ್ಟು, Joint Select Committee ಗೆ ಇದನ್ನು refer ಮಾಡಬೇಕು. ಈಗಾಗಲೇ ರಾಜ್ಯದ ಉದ್ದಗಲಕ್ಕೂ ಜನ 'ಶಿಕ್ಷಣ ಖಾಸಗಿ ಕ್ಷೇತ್ರದ ಕೈಯಲ್ಲಿದೆ, ಶಿಕ್ಷಣದ ವ್ಯಾಪಾರೀಕರಣವಾಗುತ್ತಿದೆ, ದುರ್ಬಲ ವರ್ಗದವರಿಗೆ, ತುಳಿತಕ್ಕೆ ಒಳಗಾದವರಿಗೆ, ಬಡ ಕುಟುಂಬಗಳಿಗೆ ಶಿಕ್ಷಣ ಪಡೆಯಲಿಕ್ಕೆ ಸಾಧ್ಯವಾಗುತ್ತಿಲ್ಲ' ಎಂದು ವ್ಯಾಪಕವಾಗಿ ಮಾತನಾಡಿ ಕೊಳ್ಳುತ್ತಿದ್ದಾರೆ. ಅದೇ ರೀತಿ ಕೂಡ ಇಲ್ಲಿ ನಡೆಯುತ್ತಿದೆ. ಇಂತಹ ಸನ್ನಿವೇಶದಲ್ಲಿ ಈ ಒಂದು ಕೆಲಸಕ್ಕೆ ಸರ್ಕಾರ ಕೈ ಹಾಕಬಾರದು. ಒಂದು Comprehensive bill ವೊಂದನ್ನು ತರುವುದಕ್ಕೆ, Joint Select Committee ಮಾಡಬೇಕೆಂದು ಹೇಳಿ, ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಸಾಮಾಜಿಕ ನ್ಯಾಯದಲ್ಲಿ ಕಾಳಜಿ ಮತ್ತು ಬದ್ಧತೆ ಇರತಕ್ಕಂಥ ಸನ್ಮಾನ್ಯ ಲಿಂಬಾವಳಿಯವರು ನಮ್ಮ ಮನವಿಯನ್ನು ತಮ್ಮ ಅಂತರಾಳಕ್ಕೆ ಇಳಿಸಿಕೊಂಡು, ಇದನ್ನು Joint Select Committee ಗೆ refer ಮಾಡುವುದಕ್ಕೆ ಒಪ್ಪಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ,......

ಅಧ್ಯಕ್ಷರು : ತಾವು ಈಗಾಗಲೇ ಮಾತನಾಡಿದ್ದೀರಿ. ಈಗ ಮಾನ್ಯ ರೇವಣ್ಣನವರು ಮಾತನಾಡಲಿ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಿನ್ನೆ ನಮ್ಮ ಮೆಡಿಕಲ್ ಕಾಲೇಜ್ಸ್‌ಗೆ MCI ನವರು recognition ಕೊಡುತ್ತಿಲ್ಲ. ಸರ್ಕಾರ ಪ್ರಾರಂಭ ಮಾಡಿರುವ ಕಾಲೇಜ್‌ಗಳಿಗೇ MCI ನವರು recognition ಮಾಡಿಲ್ಲ ಎನ್ನುವುದಾದರೆ, ಇವರ ಮೇಲೆ ನೀವೇನು control ಇಟ್ಟುಕೊಳ್ಳುತ್ತೀರಿ?

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಅರವಿಂದ ಲಿಂಬಾವಳಿಯವರು ಏನೋ ಒಂದು ಒಳ್ಳೆಯ ಬಿಲ್‌ನ್ನು ತಂದಿದ್ದಾರೆ ಎಂಬ ಭಾವನೆಯನ್ನು ಇಟ್ಟುಕೊಂಡಿದ್ದೆ. ಅವರು ಇನ್ನೊಂದು ಕೆಲಸ ಮಾಡಬಹುದು. ಸುಮ್ಮನೆ ಸರ್ಕಾರಿ ಕಾಲೇಜ್‌ಗಳನ್ನೆಲ್ಲಾ ಅವರು ಖಾಸಗಿ ಯವರಿಗೇ ಕೊಟ್ಟುಬಿಡುವುದು ಒಳ್ಳೆಯದು. ಮಾನ್ಯ ಸಚಿವರು ಅದಕ್ಕೊಂದು ಬಿಲ್ ಅನ್ನು ತಂದುಬಿಡಲಿ. ವಿದ್ಯೆ ಇವತ್ತು ಉಳ್ಳವರ ಪಾಲಾಗುತ್ತಿದೆ. ಖಾಸಗಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಬಿಲ್ ತಂದಿರುವುದು ಸರಿಯಲ್ಲ. ಸಾಮಾಜಿಕ ನ್ಯಾಯದ ಬಗ್ಗೆ ಕಾಳಜಿವುಳ್ಳ ಮಾನ್ಯ ಸಚಿವರು ಇಂತಹ ಬಿಲ್ ಅನ್ನು ಮಂಡಿಸುವುದಕ್ಕೆ ಮುಂಚೆ ಒಂದು ಸಾರಿ ಯೋಚನೆ ಮಾಡಬೇಕಾಗಿತ್ತು. ಇವತ್ತು ಸಂಪೂರ್ಣ ಅಧಿಕಾರವನ್ನು ಖಾಸಗಿಯವರೆ ಕೊಟ್ಟರೆ ಯಾವ ರೀತಿಯಾಗುತ್ತದೆ ಎಂದು ಯೋಚಿಸಬೇಕು. ಇವತ್ತು ಏನಾಗಿದೆ ಎಂದರೆ, ವಿದ್ಯೆಯನ್ನು ಕೆಲವು ಕಡೆಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಇವತ್ತು ಬೆಂಗಳೂರು ಇರಬಹುದು ಅಥವಾ ಮತ್ತೊಂದು ಕಡೆ ಇರಬಹುದು, ಎಲ್ಲಾ ಕಡೆಗಳಲ್ಲೂ ಇದೇ ರೀತಿಯಾಗಿದೆ. ಹಿಂದಿನ ಕಾಲದಲ್ಲಿ ವಿದ್ಯಾ ದಾನ ಮಾಡುತ್ತಿದ್ದರು, ಆದರೆ ಇಂದಿನ ಕಾಲದಲ್ಲಿ ವಿದ್ಯೆ ಮಾರಾಟವಾಗುತ್ತಿದೆ. ಮಾನ್ಯ ಸಚಿವರು ಕೂಡಲೇ ಈ ಬಿಲ್ ಅನ್ನು ವಾಪಸ್ ತೆಗೆದುಕೊಳ್ಳಬೇಕು, ಅದರ ಜೊತೆಗೆ ಇದನ್ನು Joint Select Committee ಗೆ refer ಮಾಡಬೇಕು. ಖಾಸಗಿಯವರಿಗೆ ವಿದ್ಯಾ ಕ್ಷೇತ್ರವನ್ನು ಮಾರಾಟ ಮಾಡಲಿಕ್ಕೆ ಹೋಗಬೇಡಿ. ಮಾನ್ಯ ಅರವಿಂದ ಲಿಂಬಾವಳಿಯವರ ಕಾಲದಲ್ಲಿಯಾದರೂ ಇಂತಹ ಬಿಲ್ ಪಾಸಾಗಬಾರದು. ಈ ಬಿಲ್ ಅನ್ನು ವಾಪಸ್ ತೆಗೆದುಕೊಂಡರೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಅತಿ ಹೆಚ್ಚಿನ ಗೌರವ ಬರುತ್ತದೆ. ನೀವು most backward ನಿಂದ ಬಂದಿರುವಂತಹ

ರಾಜಕಾರಣಿಯಾಗಿದ್ದೀರಿ. ನಿಮ್ಮ ಕೈಯಿಂದ ಇಂತಹ ಬಿಲ್ ಮಂಡನೆ ಮಾಡಿಸಬಾರದಾಗಿತ್ತು. ಆದರೆ ಯಾವ ಉದ್ದೇಶದಿಂದ ಈ ಬಿಲ್ ತಂದಿದ್ದಾರೋ ಗೊತ್ತಿಲ್ಲ. ಇದು ಆಗಬಾರದಾಗಿತ್ತು. ಇದು ದುರದೃಷ್ಟಕರ. ಶ್ರೀಮಂತರ ಕೈಯ್ಯಲ್ಲಿ ಈ ರೀತಿಯಾಗಿ ಖಾಸಗಿ ವಿಶ್ವವಿದ್ಯಾನಿಲಯಗಳನ್ನು ಕೊಡುವುದು ಸೂಕ್ತವಲ್ಲ ಎಂಬ ನನ್ನ ಅಭಿಪ್ರಾಯ ತಿಳಿಸಿ, ಈ ಬಿಲ್ ಅನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಸಚಿವರು ಉತ್ತರ ಹೇಳಲಿ.

ಡಾ: ಜಿ.ಪರಮೇಶ್ವರ್ : ಮಾನ್ಯ ಸಚಿವರು reply ಕೊಡುವುದು ಬೇಡ. ಅವರು ಈ ಬಿಲ್ ಅನ್ನು ವಾಪಸ್ ತೆಗೆದುಕೊಳ್ಳುತ್ತಿದ್ದೇನೆ ಹೇಳಿಬಿಡಲಿ ಅಥವಾ ಇದನ್ನು Joint Select Committee ಗೆ refer ಮಾಡಲಿ.

ಅಧ್ಯಕ್ಷರು : ಮಾನ್ಯ ಸಚಿವರಿಗೆ ಉತ್ತರ ನೀಡಲೂ ಸಹ ನೀವು ಬಿಡದಿದ್ದರೆ ಹೇಗೆ?

ಡಾ: ಜಿ.ಪರಮೇಶ್ವರ್ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದಿಷ್ಟೇ. ಮಾನ್ಯ ಸಚಿವರು ಉತ್ತರ ಕೊಡುವುದರಿಂದ ಏನೂ ಪ್ರಯೋಜನ ವಾಗುವುದಿಲ್ಲ.

ಅಧ್ಯಕ್ಷರು : ಏನೂ ಪ್ರಯೋಜನವಾಗುವುದಿಲ್ಲ ಎನ್ನುವುದು ತಮ್ಮ ಅಭಿಪ್ರಾಯವಾಗಿದೆ. ಆದರೆ ಸದನ ಮಾನ್ಯ ಸಚಿವರ ಅಭಿಪ್ರಾಯವನ್ನೂ ಸಹ ಕೇಳಬೇಕಲ್ಲವೇ?

ಡಾ: ಜಿ.ಪರಮೇಶ್ವರ್ : Joint Select Committee ಗೆ ಇದನ್ನು refer ಮಾಡುತ್ತೇನೆಂದು ಅವರು ಹೇಳಲಿ.

ಅಧ್ಯಕ್ಷರು : ಆಯಿತು, it is your view. Let me hear the Government's view. This is democracy.

(ಗೊಂದಲ)

ಶ್ರೀ ಎಂ.ಆರ್.ಕೃಷ್ಣಮೂರ್ತಿ : ಇಲ್ಲಿ ಮಾತನಾಡಿರುವುದರಲ್ಲಿ ಏನಾದರೂ ತಪ್ಪಿದೆಯೇ?

(ಗೊಂದಲ)

ಅಧ್ಯಕ್ಷರು : ಮಾನ್ಯ ಪರಮೇಶ್ವರ್‌ರವರೆ, ತಮ್ಮ ಎಲ್ಲಾ views ಹೇಳಲಿಕ್ಕೆ ಅವಕಾಶ ಕೊಟ್ಟಿದ್ದೇನೆ. ದಯವಿಟ್ಟು ಮಾನ್ಯ ಸಚಿವರಿಗೆ ಉತ್ತರ ಹೇಳಲಿಕ್ಕೆ ಅವಕಾಶ ಕೊಡಿ.

(ಗೊಂದಲ)

ಡಾ: ಜಿ.ಪರಮೇಶ್ವರ್ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ನಾನು ಹೇಳುವುದನ್ನು ಕೇಳಿ. ನಾನು ಇದೇ ಸ್ಥಾನದಲ್ಲಿ ಇದೇ ಪರಿಸ್ಥಿತಿಯಲ್ಲಿ ಅನುಭವಿಸಿದ್ದೇನೆ.

ಅಧ್ಯಕ್ಷರು : ತಮ್ಮ ಅಭಿಪ್ರಾಯವನ್ನು ತಾವು ಹೇಳಿದ್ದೀರಿ. ಮಾನ್ಯ ಸಚಿವರು ಉತ್ತರ ಕೊಟ್ಟಮೇಲೆ We will decide. ಆದರೆ ಅವರು ಹೇಳಲಿಕ್ಕೆ ತಾವು ಅವಕಾಶ ಕೊಡದಿದ್ದರೆ ಹೇಗೆ?

(ಗೊಂದಲ)

ಡಾ: ಜಿ.ಪರಮೇಶ್ವರ್ : ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳುತ್ತೇನೆ ಕೇಳಿ. ಅವರು reply ಮಾಡಿ discussion ಗೆ ತೆಗೆದುಕೊಳ್ಳು ವುದಕ್ಕಿಂತ, ಇದನ್ನು Joint Select Committee ಗೆ ಹಾಕುತ್ತೇವೆ ಎನ್ನುವಂತಹ ಒಂದೇ ಮಾತನ್ನು ಅವರು ಹೇಳಲಿ.

ಅಧ್ಯಕ್ಷರು : That is your request. ಅವರು ಇನ್ನೂ ಏನನ್ನೂ ಹೇಳಿಯೇ ಇಲ್ಲವಲ್ಲ. ಅವರಿಗೆ ಏನೂ ಹೇಳಲಿಕ್ಕೂ ನೀವು ಬಿಡುವುದಿಲ್ಲ ಎಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಅವರು ಏನು ಹೇಳುತ್ತಾರೋ ಕೇಳೋಣ. ಈ ತರಹ you cannot pressurize.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ನಾನೇನು ಉತ್ತರ ಹೇಳಬೇಕೆಂದು ಅವರೆ ಡಿಕ್ಟೇಟ್ ಮಾಡಿಬಿಟ್ಟರೆ, ಸನ್ಮಾನ್ಯ ಸದಸ್ಯರಿಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ ಏಕೆಂದರೆ, ನನ್ನ ಬಗ್ಗೆ ಅಪಾರವಾದ ಪ್ರೀತಿ, ವಿಶ್ವಾಸವನ್ನಿಟ್ಟುಕೊಂಡು ನನ್ನ ಬಗ್ಗೆ ಅಭಿನಂದನೆಯ ಮಾತುಗಳನ್ನು ಕೂಡ ಹೇಳಿದ್ದಾರೆ. ಆದರೆ ಬಸವಣ್ಣನವರು, 'ಹೊಗಳಿ ಹೊಗಳಿ ಎನ್ನ ಹೊನ್ನ ಶೂಲಕ್ಕೇರಿಸಬೇಡಿ' ಎಂದು ವಚನವನ್ನು ಹೇಳಿದ್ದಾರೆ. ಹಾಗಾಗಿ ತಾವೆಲ್ಲರೂ ಅಭಿಮಾನವನ್ನಿಟ್ಟಿದ್ದಕ್ಕೆ ಧನ್ಯವಾದಗಳು, ಆದರೆ ಅದರಿಂದ ನಾನಂತು ದಾರಿತಪ್ಪಿ ಹೋಗುವುದಿಲ್ಲ. ತಮಗೆ ಶಿಕ್ಷಣದ ಬಗ್ಗೆ ಎಷ್ಟು ಕಾಳಜಿ ಇದೆಯೊ, ಅದೇ ಕಾಳಜಿ ಹಿನ್ನಲೆಯೊಳಗೆ ಈ ಬಿಲ್ ಅನ್ನು ತಂದಿದ್ದೇವೆ. ಮಾನ್ಯ ಜಯಚಂದ್ರರವರು ಇದನ್ನು ಬಹಳ ಚೆನ್ನಾಗಿ ವಿಶ್ಲೇಷಣೆಯನ್ನು ಮಾಡಿದರು,

ಇದರಲ್ಲಿ ತಪ್ಪುಗಳೇನಾದರೂ ಇದ್ದರೆ ಅದನ್ನು ಸರಿಪಡಿಸುವಂಥ ಕೆಲಸವನ್ನು ನಿಶ್ಚಿತವಾಗಿ ನಾನು ಮಾಡುತ್ತೇನೆ. ಆದರೆ ಇಡಿ ದೇಶದಲ್ಲಿ 42 ಖಾಸಗಿ ವಿಶ್ವವಿದ್ಯಾನಿಲಯಗಳಿರುವುದು ಡಾ: ಪರಮೇಶ್ವರ್ ಅವರಿಗೆ ಚೆನ್ನಾಗಿ ಗೊತ್ತಿದೆ. ಇತ್ತೀಚೆಗೆ ಕೇಂದ್ರ ಸರ್ಕಾರ ದೆಹಲಿ ಹತ್ತಿರವಿರುವ ಹರಿಯಾಣ ರಾಜ್ಯದಲ್ಲಿ ಬರುವ Jindal Law University ಯನ್ನು ಕೂಡ establish ಮಾಡಿದೆ. ಹಾಗಾಗಿ ಬೇರೆ ಬೇರೆ ರಾಜ್ಯಗಳಲ್ಲಿ ಈ 42 ವಿಶ್ವವಿದ್ಯಾನಿಲಯಗಳಿರುವಾಗ, 'Pioneer State of Education' ಎನ್ನುವಂಥ ಕರ್ನಾಟಕದಲ್ಲಿ ನಾವು ಈ ರೀತಿಯ ವಿಶ್ವವಿದ್ಯಾಲಯಗಳಿಗೆ ಅವಕಾಶ ಮಾಡಿಕೊಡುವುದಿಲ್ಲವೆನ್ನುವುದೇ, ಈ ರೀತಿ ಚರ್ಚೆಯನ್ನು ತಪ್ಪುದಾರಿಗೆ ಎಳೆಯುವಂತ, ತಪ್ಪು ಸಂದೇಶವನ್ನು ಕೊಡುವಂಥದ್ದಾಗುತ್ತದೆ.

ಡಾ: ಜಿ. ಪರಮೇಶ್ವರ್ : ನಾವು ಅವರನ್ನು ತಪ್ಪುದಾರಿಗೆಳೆದಿಲ್ಲಾ. ಅವರನ್ನು ನಾವು ಯಾವುದೇ ರೀತಿಯಲ್ಲಿ misunderstood ಮಾಡಿ ಕೊಂಡಿಲ್ಲ. ಖಾಸಗಿ ಸಂಸ್ಥೆಗೆ ಇದನ್ನು ಕೊಡಬೇಡಿ ಎಂದೂ ಹೇಳಿಲ್ಲ. Not in this form, ನಾವು ಹೇಳಿದ್ದೇನೆಂದರೆ, 42 ಖಾಸಗಿ ವಿಶ್ವವಿದ್ಯಾ ನಿಲಯಗಳನ್ನು ದೇಶದಲ್ಲೆಲ್ಲಾ ಖಾಸಗಿಯವರಿಗೆ ಕೊಟ್ಟಿದ್ದಾರೆಂಬುದು ನನಗು ಗೊತ್ತಿದೆ, ಆದರೆ ನೀವು ಆ form ನಲ್ಲಿ ತಂದಿಲ್ಲ. It is not within the frame work of the University Grants Commission. ಅಷ್ಟನ್ನೇ ನಾವು ಕೇಳುವುದು. ಅದನ್ನು ಮಾಡಿ ಸ್ವಾಮಿ ಎಂದು ನಾವು ಕೇಳುವುದು. ನೀವು ಸುಮ್ಮನೆ ಹೇಗೊ ತಂದು ಯಾವುದ್ಯಾವುದೋ rules, provisions ಪ್ರಾವಿಷನ್ ಮಾಡಿ ಇಟ್ಟರೆ ನಾಳೆ ದಿವಸ ಏನು? ನೋಡಿ, ಅಜೀಂ ಪ್ರೇಂಜಿ ಅವರಿಗೆ ಹಣವಿದೆ, ನಾಳೆ ದಿವಸ ಈ ಬಿಲ್ ಕೆಳಗೆ ಯಾರೊ ಒಬ್ಬ ನನಗೆ ವಿಶ್ವವಿದ್ಯಾಲಯಬೇಕೆಂದು ಅರ್ಜಿ ಹಾಕುತ್ತಾನೆ, how do you deny? Every fellow in the street will apply.

ಶ್ರೀ ಅರವಿಂದ ಲಿಂಬಾವಳಿ : ನಾನು ಪೂರ್ತಿ ಹೇಳಿಬಿಡುತ್ತೇನೆ. 42 ವಿಶ್ವವಿದ್ಯಾಲಯಗಳಿರುವುದರಿಂದ, ಇದು ಕರ್ನಾಟಕದಲ್ಲೇ establish ಆಗುವುದಕ್ಕೆ ಹೊರಟಿರುವಂಥ ಮೊದಲನೆ ಖಾಸಗಿ ವಿಶ್ವವಿದ್ಯಾಲಯ, ಮತ್ತೆ ಬೇರೆ ಬೇರೆ ರಾಜ್ಯಗಳಲ್ಲೇನು ಕಾನೂನು ಇದೆ, ಆ ಎಲ್ಲಾ ಕಾನೂನುಗಳ reference ತೆಗೆದುಕೊಂಡು ಇದನ್ನು ಮಂಡನೆ ಮಾಡಿದ್ದೇವೆ. Act ಆಗಿದ

ತಕ್ಷಣ grant ಆಗದ ಹೊರತು, UGC ಅನುಮತಿ ದೊರಕದೆ ಹೊರತು, ಯುನಿವರ್ಸಿಟಿಯಂತು establish ಆಗುವುದಕ್ಕೆ ಸಾಧ್ಯವಿಲ್ಲ. ಇದರಲ್ಲಿ UGCಯ norms violate ಆಗಿದ್ದರೆ, ಖಂಡಿತವಾಗಿ ಅವರು ನಮಗೆ ಬರದೆ ಬರೆಯುತ್ತಾರೆ. ಹಾಗಾಗಿ ಈ ರೀತಿ establish ಆಗುತ್ತಿರುವ ವಿಶ್ವವಿದ್ಯಾಲಯಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರೆ, ಕರ್ನಾಟಕದಲ್ಲೂ ಕೂಡ ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳಿದ್ದಾವೆ, ಅಂಥ ಶಿಕ್ಷಣ ಸಂಸ್ಥೆಗಳಲ್ಲಿ ಇವತ್ತು ಅನೇಕ ಕರ್ನಾಟಕದ ಬಡ ವಿದ್ಯಾರ್ಥಿಗಳು ಓದುತ್ತಿದ್ದಾರೆ, ಹಣವಂತರೂ ಕೂಡ ಓದುತ್ತಿದ್ದಾರೆ. ಆ ರೀತಿಯ ಒಂದು ಶಿಕ್ಷಣ ಸಂಸ್ಥೆಗಳನ್ನು establish ಮಾಡಿರುವ ಸಂದರ್ಭದಲ್ಲಿ, ಮತ್ತೊಂದು ಬಹಳ ಎಚ್ಚರಿಕೆಯನ್ನು ನಾವು ವಹಿಸಿಬೇಕಾದುದು, ಮಾನ್ಯ ವಿರೋಧ ಪಕ್ಷದ ನಾಯಕರ ಗಮನದಲ್ಲಿದೆ ಎಂದು ಭಾವಿಸುತ್ತೇನೆ, ಅತೀ ಶೀಘ್ರದಲ್ಲಿ foreign university ಗಳು ನಮ್ಮ ದೇಶಕ್ಕೆ ಬರುವುದಿದೆ. Foreign University ಗಳು ಬರುವಂಥ ಸಂದರ್ಭದಲ್ಲಿ ನಮ್ಮಲ್ಲಿ ಒಳ್ಳೊಳ್ಳೆ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವಂಥ ಯಾರು ಶಕ್ತಿವಂಥರಿದ್ದಾರೆ. ಏಕೆಂದರೆ, ಜಯಚಂದ್ರರವರು ಅದನ್ನು point out ಮಾಡಿದರು. ನಮ್ಮ ದೇಶದ ವಿದ್ಯಾರ್ಥಿಗಳು ಬೇರೆ ದೇಶಗಳಿಗೆ ಹೋಗಿ ಓದುತ್ತಿರುವ ಸಂದರ್ಭವಿರುವುದರಿಂದ ಅಲ್ಲಿರುವ ವಿದ್ಯಾರ್ಥಿಗಳನ್ನು ನಾವು attract ಮಾಡಿ, ನಮ್ಮ ದೇಶದ ವಿದ್ಯಾರ್ಥಿಗಳು, ಇಲ್ಲಿಯು quality education ಸಿಗುವಂಥ ವಿಶ್ವವಿದ್ಯಾನಿಲಯಗಳು ಇಲ್ಲಿ ಇದ್ದಾವೆ, ಅದು ಖಾಸಗಿಯಾಗಿರಬಹುದು ಸರ್ಕಾರಿ ಆಗಿರಬಹುದು, ನಿಶ್ಚಿತವಾಗಿ ಸರ್ಕಾರಿ ವಿಶ್ವವಿದ್ಯಾಲಯಗಳನ್ನು ಆ ಮಟ್ಟಕ್ಕೆ ತರುವಂಥ ಕೆಲಸವನ್ನು ನಾವು ನೀವು ಎಲ್ಲಾ ಸೇರಿ ಮಾಡೋಣ. ಆದರೆ ಇಂಥ ಒಂದು ಖಾಸಗಿ ವಿಶ್ವವಿದ್ಯಾಲಯ ಸ್ಥಾಪನೆಯಾಗುತ್ತಿದೆ, ಅದಕ್ಕೆ ಅವರು service moto ದಿಂದ invest ಮಾಡುವುದಕ್ಕೆ ತಯಾರಿದ್ದಾರೆ ಎಂಬುದು ಮುಖ್ಯ. ಈ ವಿಶ್ವವಿದ್ಯಾಲಯದ ಬಗ್ಗೆ ಹೇಳುವುದಾದರೆ, ಅವರು ವಿಶೇಷವಾಗಿ ನಮ್ಮ ಉತ್ತರ ಕರ್ನಾಟಕದಲ್ಲಿ ಯಾವ ಪ್ರೈಮರಿ ಸ್ಕೂಲ್‌ಗಳಿದ್ದಾವೆ, ಅಲ್ಲಿ ಒಂದು study ಯನ್ನು ಮಾಡಿದ್ದಾರೆ. ಮತ್ತು ಆ ಪ್ರೈಮರಿ ಸ್ಕೂಲ್‌ಗಳ ಅಭಿವೃದ್ಧಿಗೋಸ್ಕರ ಸಾಕಷ್ಟು ಹಣವನ್ನು ಕೂಡ donation ರೂಪದಲ್ಲಿ ಕೊಟ್ಟಿದ್ದಾರೆ. ಅಲ್ಲಿ ಪ್ರಾಥಮಿಕ, ಪ್ರೌಢ ಶಿಕ್ಷಣದಲ್ಲಿರುವಂಥ, ಅಧ್ಯಾಪನ ಮಾಡುವಂಥ, ಪಾಠಪ್ರವಚನವನ್ನು

ಮಾಡುವಂಥ ಅಧ್ಯಾಪಕರು ಯಾರಿದ್ದಾರೆ, ಅವರಿಗೆ quality education ಕೊಡುತ್ತಿಲ್ಲ ಮತ್ತು ಅವರಿಗೆ management ಬರುತ್ತಿಲ್ಲ ಎನ್ನುವ ಹಿನ್ನೆಲೆಯಲ್ಲಿ ಈ ರೀತಿಯ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದಕ್ಕೆ ಮುಂದೆ ಬಂದಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : ಮೆಡಿಕಲ್ ಕಾಲೇಜು ಕೊಡಿ, ನಿಮಗಿಂತ ಒಳ್ಳೆಯ ಎಜ್ಯುಕೇಷನ್ ಎಂದು ಅವರು ತೋರಿಸಲಿ.

ಶ್ರೀ ಅರವಿಂದ ಲಿಂಬಾವಳಿ : ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳ ಉದ್ದೇಶ ಅವರಿಗಿಲ್ಲ. ನಾನು ಹೇಳುತ್ತಿರುವುದು, ಯಾರು ಪಾಠ ಪ್ರವಚನ ಮಾಡುತ್ತಿರುವ ನಮ್ಮ ಅಧ್ಯಾಪಕರಿದ್ದಾರೆ, ಅವರಿಗೆ ಸರಿಯಾದಂಥ ತರಬೇತಿಯನ್ನು ಕೊಡಬೇಕು. Let me complete.

DR. G. PARAMESHWAR : Finance, technology, Social-Science, humanity, management ಎಲ್ಲವನ್ನೂ ಕೊಟ್ಟು ಬಿಟ್ಟಿದ್ದೀರಿ. There is nothing left, not one single faculty. ಒಬ್ಬ ಮೇಸ್ಟ್ರು ಇಲ್ಲ, ಒಂದು ಕ್ಲಾಸ್ ರೂಂ ಇಲ್ಲ, ಅವರಿಗೆ ಯುನಿವರ್ಸಿಟಿ ಕೊಡುತ್ತೇವೆಂದರೆ, ಅಧ್ಯಕ್ಷರೆ, ತಾವು ಒಪ್ಪುತ್ತೀರಾ? ನಮ್ಮ ಜಿಲ್ಲೆಯಲ್ಲಿ ಒಂದು recognizable institution ಇದೆಯಾ?

ಶ್ರೀ ಅರವಿಂದ ಲಿಂಬಾವಳಿ : ನಾನು yield ಆಗಿಲ್ಲ ನಾನು ಮುಗಿಸುತ್ತೇನೆ. ನಾನು ಮುಗಿಸಿದ ಮೇಲೆ ಚರ್ಚೆ ಮಾಡೋಣವಂತೆ, ನಾನು ನಿಮ್ಮೆಲ್ಲರದನ್ನು ಬರೆದುಕೊಂಡಿದ್ದೇನೆ, ಸಾವದಾನವಾಗಿ ಕೇಳಿದ್ದೇನೆ. ನಾನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಅವರಿಗೆ ಯೋಚನೆ ಬಂದ್ದದ್ದು ಎಲ್ಲಿಂದ ಅಂತ. ಅಲ್ಲಿ ಆ ರೀತಿಯ ಸರಿಯಾದ ಶಿಕ್ಷಣ ಸಿಗದಿರುವುದರಿಂದ ಎಲ್ಲಾ field ನಲ್ಲೂ ಈ ಸಮಸ್ಯೆ ಇದೆ ಎನ್ನುವ ಹಿನ್ನೆಲೆಯಲ್ಲಿ ಅವರಿಗೆ ಈ ಯೋಚನೆ ಬಂದು ಈ proposal ಅನ್ನು ತಂದಿದ್ದಾರೆ. ಆ ಒಂದು ಹಿನ್ನೆಲೆಯಲ್ಲಿ ಖಾಸಗಿ ವ್ಯಕ್ತಿಗಳಿಂದ ಈ ಒಂದು university establish ಆಗಲಿ ಎನ್ನುವ ಹಿನ್ನೆಲೆಯಲ್ಲಿ ಈ university establish ಮಾಡುತ್ತಿದ್ದೇವೆ. ಇದು ಸರ್ಕಾರಿ ವಿಶ್ವವಿದ್ಯಾಲಯವಲ್ಲ, ಇದು ಖಾಸಗಿ ವಿಶ್ವವಿದ್ಯಾಲಯವಾಗಿರುವುದರಿಂದ, ಅವರ ಜೊತೆಯಲ್ಲಿ ಚರ್ಚೆ ಮಾಡಿ, ಬೇರೆ ಬೇರೆ ರಾಜ್ಯಗಳಲ್ಲಿ ನಿಯಮಗಳಿವೆ, ಯುಜಿಸಿಯಿಂದಲೂ ಮಾಹಿತಿಗಳನ್ನು ಪಡೆದು

ಕೊಂಡು ಆ ರೀತಿಯ ಒಂದು Bill ಅನ್ನು ನಾನು ಇಲ್ಲಿ ಮಂಡಿಸಿದ್ದೇನೆ. ಆ ಒಂದು ಹಿನ್ನೆಲೆಯಲ್ಲಿ ಮೀಸಲಾತಿ ವಿಷಯವಾಗಿರಬಹುದು, ಈ ಬಗ್ಗೆ Supreme Court ನ ನಿರ್ಧಾರ ಏನಿದೆ ಎಂಬುದು ತಮಗೆ ಗೊತ್ತಿದೆ, ಖಾಸಗಿಯಲ್ಲಿ ಒಂದು ಮೀಸಲಾತಿಯನ್ನು ಜಾರಿಗೆ ತರುವುದಕ್ಕೆ ನಮಗೆ ಸಾಧ್ಯವೇ? ಒಟ್ಟಾರೆಯಾಗಿ ಈ ದೇಶದಲ್ಲಿ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ತರಬೇಕೆಂದು ಕಾನೂನು ಏನಾದರೂ ಬಂದರೆ, ನಿಶ್ಚಿತವಾಗಿಯು ಇದರಲ್ಲೂ ಮೀಸಲಾತಿ ಬಂದೆ ಬರುತ್ತದೆ.

ಡಾ: ಹೆಚ್.ಸಿ.ಮಹಾದೇವಪ್ಪ : ಸುಪ್ರೀಂ ಕೋರ್ಟ್ ಡಿಸಿಷನ್ ಬೇರೆ. ಅಮೇರಿಕಾದ ಸಂವಿಧಾನದಲ್ಲಿ ಮೀಸಲಾತಿ ಇಲ್ಲ, through an affirmative action 100 A+ companies in America they have provided reservation. American, African 37% ಅಮೇರಿಕಾದಲ್ಲಿ CEOs ಆಗಿದ್ದಾರೆ, Professors ಆಗಿದ್ದಾರೆ.

ಶ್ರೀ ಅರವಿಂದ ಲಿಂಬಾವಳಿ : ನಮ್ಮ ದೇಶದಲ್ಲಿ ಇಲ್ಲವಲ್ಲಾ, ನಮ್ಮ ದೇಶ ನಡೆಯುವುದು ನಮ್ಮ ದೇಶದ Act ಮೇಲೆ. ನಾನು ಕೂಡ ಅದಕ್ಕೆ ಹೋರಾಟ ಮಾಡಿದವನೇ, ಕೇಂದ್ರದಲ್ಲಿ ನಿಶ್ಚಿತವಾಗಿ ಈ ರೀತಿಯ Act ತೆಗೆದುಕೊಂಡು ಬನ್ನಿ.

ಡಾ: ಹೆಚ್.ಸಿ.ಮಹಾದೇವಪ್ಪ : ಶರದ್‌ಪವಾರ್ ಅವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯ ಸಭೆ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಕೊಡುವ ವಿಷಯದಲ್ಲಿ ನಡೆದಾಗ, ಈಗೇನು ಮಹಾನಿಯರ ಹೆಸರುಗಳನ್ನು ಪ್ರಸ್ತಾಪ ಮಾಡುತ್ತಿದ್ದೀರಲ್ಲ, ಅವರೆಲ್ಲಾ ಕೊಡುವುದಕ್ಕಾಗುವು ದಿಲ್ಲವೆಂದು ಹೇಳಿದರು. ಇವರಿಗೆ ಯೂನಿವರ್ಸಿಟಿ ಕೊಟ್ಟು ಬಿಟ್ಟರೆ ನಿಮಗೆ ಎಲ್ಲಿ Social justice ಸಿಗುತ್ತದೆ? All these people were present before the Sharad Pawar, who was the chair person of the Cabinet Sub Committee to provide reservation to private sector.

ಶ್ರೀ ಅರವಿಂದ ಲಿಂಬಾವಳಿ : ಒಪ್ಪಿಕೊಂಡೆ, ನೀವು ಕಾನೂನು ತಂದರೆ, ನಾನು ಕೂಡ ಅದಕ್ಕೆ ನಿಶ್ಚಿತವಾಗಿ ಬೆಂಬಲಿಸುತ್ತೇನೆ, ಮೊದಲು ನೀವು ಕೇಂದ್ರದಲ್ಲಿ ತೆಗೆದುಕೊಂಡು ಬನ್ನಿ.

ಡಾ: ಜಿ.ಪರಮೇಶ್ವರ್ : ಅದು ಆಮೇಲೆ, ಕಾನೂನು ನೀವು ಮಾಡುವುವವರು ನೀವು ಮಾಡಿ ಸ್ವಾಮಿ. ನಾವು ಇಲ್ಲಿ ಮಾಡಿದ್ದನ್ನೆ

ಕೇಂದ್ರದವರು ನಮ್ಮನ್ನು ನೋಡಿಕೊಂಡು ಅಲ್ಲಿ ಮಾಡಿದರೆಂದು ಎಷ್ಟೋ ಸಾರಿ ಹೇಳುತ್ತೀರಿ, ಇದು ಅಂಥ ಒಂದು ಉದಾಹರಣೆಯಾಗಲಿ ನೀವು ತೆಗೆದುಕೊಂಡು ಬನ್ನಿ.

ಅಧ್ಯಕ್ಷರು : university Act ನಲ್ಲಿ ಗೆ ಎಲ್ಲಿದೆ Provision? ಒಂದು university Act ನಲ್ಲಿ ಮೀಸಲಾತಿ ತರುವುದಕ್ಕೆ ಅವಕಾಶವಿದೆಯಾ? How it is possible unless there is a Constitution amendment? ಸುಮ್ಮನೆ ಏನೊ ಸಲಹೆ ಕೊಡಬೇಕೆನ್ನುವುದಾಗಬಾರದು.

ಡಾ: ಹೆಚ್.ಸಿ.ಮಹಾದೇವಪ್ಪ : ಸರ್, ಯುನಿವರ್ಸಿಟಿ ವ್ಯಾಪ್ತಿನಲ್ಲಿ ಕಾಲೇಜುಗಳು ಬರುತ್ತದೆ.. (ಗೊಂದಲ)

MR. SPEAKER : That is there. Constiution has to be amended.

ಶ್ರೀ ಸಿದ್ದರಾಮಯ್ಯ : ಮಾಡಲೇಬೇಕಾಗುತ್ತದೆ, ಎಲ್ಲವನ್ನು ಈ ರೀತಿ ಖಾಸಗಿಯಾಗಿ ಮಾಡಿಕೊಂಡು ಹೋಗುತ್ತಿದ್ದರೆ ಹೇಗೆ? ಆ ರೀತಿ ಹೇಳುವುದಕ್ಕೆ ಬರುವುದಿಲ್ಲ... (ಗೊಂದಲ)

ಡಾ: ಜಿ.ಪರಮೇಶ್ವರ್ : ಅಧ್ಯಕ್ಷರೆ, ದಯವಿಟ್ಟು, ತಾವು ಈ ಸ್ಟ್ಯಾಂಡ್ ತೆಗೆದುಕೊಳ್ಳಬೇಡಿ.

ಡಾ: ಜಿ.ಪರಮೇಶ್ವರ್ : ಹೊಸದಾಗಿ ಕಾನೂನು ಮಾಡಿದಾಗ . . .

ಅಧ್ಯಕ್ಷರು : Private Institution reservation ಮಾಡಬೇಕಾದರೆ, there must be a Constitutional amendment. ನೀವು ಅಲ್ಲಿ ಮಾಡುವುದನ್ನು ಇಲ್ಲಿ ಇವರು ಮಾಡಿ ಎಂದರೆ, how is it?

ಡಾ: ಜಿ.ಪರಮೇಶ್ವರ್ : ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದಕ್ಕೆ ಏನು justification ಇದೆ? ಏಕೆ ಮಾಡಬಾರದು?

MR.SPEAKER : There must be Contitution amendment. Private Institutions or Private Industries, everybody should provide reservation. ಅದನ್ನು ಮಾಡಲೇಬೇಕು. We will see it.

ಡಾ: ಜಿ. ಪರಮೇಶ್ವರ್ : ಮಾಡುವುದಕ್ಕೆ ಯಾವುದೇ ಅಡಚಣೆ ಇಲ್ಲ ಅಧ್ಯಕ್ಷರೆ. ಮಾಡುವುದಕ್ಕೆ ನಿಮಗೆ ಮನಸ್ಸೇ ಇಲ್ಲ.

ಅಧ್ಯಕ್ಷರು : ಅದರ ಬಗ್ಗೆ ಚರ್ಚೆ ಬೇಡ. We will discuss.

ಡಾ: ಹೆಚ್.ಸಿ. ಮಹಾದೇವಪ್ಪ : ಈ ತರಹ apprehension ಇರುವುದರಿಂದಲೆ, Joint Selection Committee ಗೆ ಕೊಡಿ. Comprehensive bill ಮಂಡಿಸಲಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇದು ಕೊಡಬೇಕೆಂದು ಎಲ್ಲಿದೆ? Private University ಯನ್ನು ಅಜೀಂ ಪ್ರೇಂಜಿಯವರ ಹೆಸರಿನಲ್ಲಿ ಯೂನಿವರ್ಸಿಟಿ ಕೊಡಬೇಕೆಂದು ಇಲ್ಲಿ ಎಲ್ಲಿದೆ? Under which provision of the Constitution is there which provides Azim Premji can open Private University? ಎಲ್ಲಿದೆ. If you are committed to social justice. . .

ಅಧ್ಯಕ್ಷರು : It is our right.

ಶ್ರೀ ಬಂಡೆಪ್ಪ ಕಾಶಂಪೂರ್ : ಒಂದು ದೊಡ್ಡ institution ಮಾಡಿಕೊಂಡು ಬೆಳೆದುಕೊಂಡು ಬಂದು ಇವತ್ತು ಒಂದು ಯೂನಿವರ್ಸಿಟಿ ಕೊಟ್ಟಿದ್ದೀರಿ ಎಂದರೆ ಸರಿ.

ಡಾ: ಜಿ.ಪರಮೇಶ್ವರ್ : ತಾವು ಅಧ್ಯಕ್ಷರಿದ್ದೀರಿ, ತಾವು ಆ stand ತೆಗೆದುಕೊಳ್ಳಬೇಡಿ. Let the Government reply.

ಅಧ್ಯಕ್ಷರು : ನಾನು Stand ತೆಗೆದುಕೊಂಡಿಲ್ಲ. The argument is going out of the way. That is why I suggested.

ಡಾ: ಜಿ. ಪರಮೇಶ್ವರ್ : ಅಧ್ಯಕ್ಷರೆ, ದಯಮಾಡಿ ತಪ್ಪು ತಿಳಿದು ಕೊಳ್ಳಬೇಡಿ. ನಮಗೆ ಸರ್ಕಾರದಲ್ಲಿ ಹೊಸದಾಗಿ ಕಾನೂನು ಮಾಡುವುದು ಬಿಟ್ಟರೆ,

ಅಧ್ಯಕ್ಷರು : university Act ಬಿಟ್ಟು ಬೇರೆ ಏನೇನೋ ಹೇಳುತ್ತಾ ಹೋದರೆ, where is the end for it? You talk within the purview.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇಲ್ಲಿ ಇರತಕ್ಕಂತಹವರೆಲ್ಲರಿಗೂ ನೀವು ಕಂಟ್ರೋಲ್ ಮಾಡುತ್ತೀರಿ. ಅದಕ್ಕೆ ತಾವು ಎತ್ತರವಾದ ಜಾಗದಲ್ಲಿ ಕುಳಿತಿದ್ದೀರಿ. ನೀವು ಆ ಪೀಠದಿಂದ ಕುಳಿತು decision ಕೊಡುತ್ತಿರುವುದು ನೋಡಿದರೆ,

ಅಧ್ಯಕ್ಷರು : ಇದು ಡಿಸಿಷನ್ ಅಲ್ಲ. It is not decision. ನಾನು ಡಿಸಿಷನ್ ಕೊಟ್ಟಿಲ್ಲ. Don't say that. ನಾನೇನು ಹೇಳಿದ್ದು, university Act ಅನ್ನು ಬಿಟ್ಟು ಬೇರೆ ಬೇರೆ ಕಡೆ ಚರ್ಚೆಗೆ ಹೋಗಬೇಡಿ ಎಂದು ಹೇಳಿದ್ದು. ಯೂನಿವರ್ಸಿಟಿ ಬೇಕೋ ಬೇಡವೋ ಎಂದು I have not given decision. Don' misguide. No. No. ನನ್ನನ್ನು ಅರ್ಥ ಮಾಡಿಕೊಳ್ಳಿ. ನಾನು ಏನು ಹೇಳಿದೆ, ನಾನು ಹೇಳಿದ್ದು ಇಷ್ಟೆ. Private University Act ತಂದಿದ್ದಾರೆ, ಅದನ್ನು ಬಿಟ್ಟು ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುವುದು ಬೇಡ. ರಿಸರ್ವೇಷನ್ ಅದಕ್ಕೂ ಇದಕ್ಕೂ compare ಮಾಡಿಕೊಂಡು, ಅಮೇರಿಕಾದಲ್ಲಿದೆ, ಅಥವಾ ಬೇರೆ ದೇಶದಲ್ಲಿದೆ, ಈ ತರಹ ಹೇಳುವ ಅಗತ್ಯ ಇದಕ್ಕೆ ಬರುವುದಿಲ್ಲ ಎಂದು ಹೇಳಿದೆ ಅಷ್ಟೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನೀವು ಧ್ವನಿಗೂಡಿಸುವುದು ನೋಡಿದಾಗ ನನಗೇನು ಅನುಮಾನ ಬಂದಿತು ಎಂದರೆ,

ಅಧ್ಯಕ್ಷರು : ತಮಗೆ ಎಲ್ಲವೂ ಅನುಮಾನ ಬರುತ್ತದೆ. ನಿಮ್ಮ ಅನುಮಾನಕ್ಕೆ I am not responsible. ತಮಗೆ ನನ್ನ ಬಗ್ಗೆನೂ ಅನುಮಾನ ಬರುತ್ತದೆ. I am helpless.

ಡಾ: ಹೆಚ್.ಸಿ. ಮಹಾದೇವಪ್ಪ : ಈ ತರಹ ಖಾಸಗಿ ವಿಶ್ವವಿದ್ಯಾನಿಲಯ ತರುವುದು ಒಂದು ಪಯನೀರ್ ಎಂದು ಹೇಳಿದ ಮೇಲೆ ವ್ಯಾಪಕವಾದ ಸ್ಟಡಿ ಮಾಡಬೇಕಾಗುತ್ತದೆ.

Mr. T.B. JAYACHANDRA : Your thought has been guided.

MR. SPEAKER : I have not been guided. No. It is ny own experience. What I know, ಅದನ್ನು ಹೇಳಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ : ತಮ್ಮ ಪತ್ನಿ ಅಲ್ಲಿ ಪ್ರಾಂಶುಪಾಲರು ಎಂದು ಹೇಳಿದರು. ಅದಕ್ಕೋಸ್ಕರ ಆ ಯೋಚನೆ ಬಂದಿತ್ತಾ ಎಂದು.

ಅಧ್ಯಕ್ಷರು : that is different. ಅವಳ ಮಾತೇ ನಾನು ಕೇಳುವುದಿಲ್ಲ. ಅವರು ನನಗೇನೂ ಹೇಳುವುದೇ ಇಲ್ಲ. ಕೇಳುವಂತಹ ತಾಳ್ಮೆಯೂ ಇಲ್ಲ.

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನಮ್ಮ ಜಿಲ್ಲೆಯಿಂದ ಬಂದವರಿದ್ದೀರಿ, ಸ್ವಲ್ಪ ತಾಳ್ಮೆಯಿಂದ ಇರಿ, ನಮಗೂ ಸ್ವಲ್ಪ ಸಮಯ ಕೊಡಿ. ಅಧ್ಯಕ್ಷರೆ ತಾವು ಈ ವಿಧೇಯಕವನ್ನು ನೋಡಬೇಕು.

ಅಧ್ಯಕ್ಷರು : ನಾನು ವಿಧೇಯಕ ಸರಿ ತಪ್ಪು ಎಂದು ಹೇಳುವುದಕ್ಕೆ ಹೋಗಲಿಲ್ಲ.

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಸರಿ ತಪ್ಪು ಪ್ರಶ್ನೆ ಅಲ್ಲ. ಈ ಸದನದ ಪ್ರತಿಯೊಬ್ಬ ಸದಸ್ಯರಿಗೂ ಅಜೀಂ ಪ್ರೇಂಜಿಯವರ ಬಗ್ಗೆ ಗೌರವ ಇದೆ. ಆದರೆ ಕೊಡುವಾಗ ನ್ಯೂನತೆ ಇದೆ ಎಂದು ನಮ್ಮ ಎಲ್ಲಾ ನಾಯಕರುಗಳು ಹೇಳಿದ್ದಾರೆ. ಅದಕ್ಕೆ ನಾವು ವಿರೋಧ ಮಾಡುತ್ತಿದ್ದೇವೆ. ಇದು ಒಂದು. ಇನ್ನು ಎರಡನೆಯದಾಗಿ, ತಾವು ಅದರಲ್ಲಿ ನೋಡಬೇಕು. ಮೊದಲಿಗೆ ಅಲಯನ್ಸ್ ಎಂದು ಒಂದು ಇದೆ, ಆಯಿತು ನಾಳೆ ನಾನೂ ಒಂದು ಅರ್ಜಿ ಹಾಕುತ್ತೇನೆ ಕೊಡುತ್ತೀರಾ? ನಾವೂ ಅರ್ಜಿ ಹಾಕುತ್ತೇವೆ ಕೊಡಿ. 200 ಎಕರೆ ಸ್ವಂತ ಜಮೀನಿದೆ, ನಮ್ಮ ಸ್ವಂತ ಜಮೀನಿನಲ್ಲೆ ಮಾಡುತ್ತೇವೆ ಕೊಡುತ್ತೀರಾ? ಅದಕ್ಕೆ ಇದು ಸರಿಯಾದುದು ಅಲ್ಲ. ಅವರು suggest ಮಾಡಿದ್ದಾರೆ. ದಯವಿಟ್ಟು ನೀವು ಇದನ್ನು ಪ್ರತಿಷ್ಠೆ ಮೇಲೆ ನಿಂತುಕೊಳ್ಳಬೇಡಿ. Joint Select on Committeeಗೆ ಕೊಟ್ಟು amendment ತಂದು, ಯಾವ ರೀತಿ ಮಾಡಬೇಕೆಂದು ತೀರ್ಮಾನ ಮಾಡಿ.

ಶ್ರೀ ಅರವಿಂದ ಲಿಂಬಾಳಿ : Comprehensive bill ತರುವುದಕ್ಕೆ ಸಾಧ್ಯವಿಲ್ಲ ಅದು. ನಾನು ಅದನ್ನೇ ಹೇಳುವುದಕ್ಕೆ ಹೊರಟಿದ್ದೆ. ಮಾನ್ಯ ಅಧ್ಯಕ್ಷರೆ, ಇದು ಏಕೋ ನಾವು ಎಂಜಿನಿಯರಿಂಗ್ ಓದುವ ದಿನಗಳು ನೆನಪಾಗುತ್ತವೆ. ಮೊದಲನೇ ವರ್ಷ ಸೇರಿದಾಗ ನಮ್ಮ ಕಾಲೇಜಿನಲ್ಲಿ ಕೆಲವರು ರ್‍ಯಾಗಿಂಗ್ ಮಾಡಿದರು. ಇಲ್ಲಿಯೂ ನಾನು ಮೊದಲನೇ ಸಾರಿ ಶಾಸಕನಾಗಿ ಆಯ್ಕೆಯಾಗಿದ್ದೇನೆ. ನಮ್ಮ ಸೀನಿಯರ್ಸ್ ಎಲ್ಲಾ ಹೀಗೆ ರ್‍ಯಾಗಿಂಗ್ ಮಾಡುವುದಕ್ಕೆ ಪ್ರಾರಂಭ ಮಾಡಿದರೆ, ನನ್ನ ಪರಿಸ್ಥಿತಿ ಏನಾಗಬೇಕು? Comprehensive bill ವಿಚಾರ ಮಾತನಾಡಿದರು. ಡಾ: ಪರಮೇಶ್ವರ್ ರವರೂ ಹೇಳಿದರು, ಅನೇಕ ಸದಸ್ಯರೂ ಹೇಳುತ್ತಿದ್ದಾರೆ. ಇದು ತರುವುದಕ್ಕೆ ಸಾಧ್ಯವಿಲ್ಲ. ಛತ್ತೀಸ್ ಗಡದಲ್ಲಿ ಜಡ್ಜ್‌ಮೆಂಟ್ ತಮಗೆ ಗೊತ್ತಿದೆ. ಡಾ: ಯಶ್‌ಪಾಲ್ Vs. ಛತ್ತೀಸ್ ಗಡದ, University Act ವಿಚಾರದಲ್ಲಿ ಆದರೂ ಪ್ರತಿಯೊಂದು ಯೂನಿವರ್ಸಿಟಿಗೂ ಆಯಾ ರಾಜ್ಯಗಳು

ಒಂದೊಂದು Act ಅನ್ನು ಮಾಡಬೇಕು ಎನ್ನುವುದನ್ನು ಅವರು Verdict ಕೊಟ್ಟಿದ್ದಾರೆ. ಆ ಹಿನ್ನೆಲೆಯಲ್ಲಿ ಡೀಮ್ಡ್ ಯೂನಿವರ್ಸಿಟಿ ಹಿನ್ನೆಲೆಯಲ್ಲಿ ಚರ್ಚೆ ನಡೆಯುತ್ತಿರುವುದು ತಮಗೆ ಗೊತ್ತಿದೆ. ಡೀಮ್ಡ್ ಯೂನಿವರ್ಸಿಟಿ ವಿಚಾರದಲ್ಲಿ ಅವರು ಹೇಳಿರತಕ್ಕಂಥದ್ದು ಕೆಲವೊಂದು ನಾನು ಒಪ್ಪಿಲ್ಲ. ಆ ಹಿನ್ನೆಲೆಯಲ್ಲಿ ನಾನು statement ಕೊಟ್ಟೆ, ಕರ್ನಾಟಕದ ಆರು ಡೀಮ್ಡ್ ಯೂನಿವರ್ಸಿಟಿಗಳು ಯಾವುದು ಇದೆ, ಒಳ್ಳೊಳ್ಳೆ ಸಂಸ್ಥೆಗಳವರು ಮುಂದೆ ಬಂದರೆ ಅವರಿಗೂ ಖಾಸಗಿ ವಿಶ್ವವಿದ್ಯಾನಿಲಯಗಳನ್ನು ಮಾಡಿಕೊಡುತ್ತೇವೆಂದು ಹೇಳಿದ್ದೇವೆ. ಯಾರೋ ಅಪ್ಲಿಕೇಷನ್ ಹಾಕಿದರೆ ಅವರಿಗೆ ಕೊಡಬಾರದು ಎನ್ನುವಂತಹ ಉದ್ದೇಶದಿಂದ ಆ ಜಡ್ಜ್‌ಮೆಂಟ್ ಬಂದಿದೆ. ಆ ರಾಜ್ಯದ ವಿಧಾನಮಂಡಲ ಗಳಲ್ಲಿ ಅಲ್ಲಿ ಚರ್ಚೆಯಾಗಬೇಕು ಮತ್ತು ಪಾಸ್ ಆಗಬೇಕೆನ್ನುವ ಹಿನ್ನೆಲೆಯಲ್ಲಿ ಅದು ಬಂದಿರುವುದು. ಹಾಗಾಗಿ Comprehensive bill ತರುವುದಕ್ಕೆ ಸಾಧ್ಯವಿಲ್ಲ. ಪ್ರತಿಯೊಂದು ವಿಶ್ವವಿದ್ಯಾನಿಲಯಕ್ಕೆ ಕೂಡ ಆ ರೀತಿ ಅವಶ್ಯಕತೆ ಇರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಪರಿಶೀಲನೆ ಮಾಡಿ ಅದನ್ನು ಸದನದಲ್ಲಿ ತರಬೇಕು ಎನ್ನುವಂತಹ ಜಡ್ಜ್‌ಮೆಂಟ್ ಇರುವುದರಿಂದ ಆ ಹಿನ್ನೆಲೆಯಲ್ಲಿ ಈ ಬಿಲ್ ತರುತ್ತಿದ್ದೇವೆ. ಚರ್ಚೆಯಲ್ಲಿ ಇನ್ನೊಂದು ವಿಷಯ ಬಂದಿತು. ಇವರು Industry ಇರುವವರು ಅದಕ್ಕೋಸ್ಕರ Industry status ನಲ್ಲಿ ಇದನ್ನು ಯೂನಿವರ್ಸಿಟಿ ಎಂದು consider ಮಾಡಿ ಬಿಡುತ್ತೀರಿ ಎಂದು. ನಾನು ಈಗ ತಾನೆ ಹೇಳುತ್ತಿದ್ದೆ, ಪ್ರತಿ ರಾಜ್ಯದ ಕಾನೂನಿನ ಅವಶ್ಯಕತೆ ವಿಶ್ವವಿದ್ಯಾನಿಲಯಕ್ಕೆ ಇರುವುದರಿಂದ ಆ ರೀತಿಯ ಕಾನೂನು ಮಾಡುತ್ತಿದ್ದೇವೆ. ಅವರು ಇಂಡಸ್ಟ್ರೀ ನಡೆಸುತ್ತಿದ್ದರೂ ಕೂಡ, ಶಿಕ್ಷಣ ಕ್ಷೇತ್ರದಲ್ಲಿ ಅವರು ಸೇವೆ ಮಾಡಬೇಕೆಂದು ಬಂದರೆ, ಡಾ: ಸಾರ್ವಭೌಮ ಬಗಲಿಯವರು ಹಾಗೂ ನಮ್ಮ ಸೇಡಂ ಶಾಸಕರು ಒಂದು ಸಲಹೆ ಕೊಟ್ಟರು, profit ಮಾಡುವ ಉದ್ದೇಶದಿಂದ ಇದು ಆಗಬಾರದು. ಅದನ್ನು ನಾನೂ ಒಪ್ಪುತ್ತೇನೆ. ಆ ಹಿನ್ನೆಲೆಯಲ್ಲಿ ನಿಯಂತ್ರಣ ತರುವಂತಹ ಎಲ್ಲಾ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ. ನಿಶ್ಚಿತವಾಗಿ ಸರ್ಕಾರ ಅದರ ಬಗ್ಗೆ ಎಚ್ಚರಿಕೆ ವಹಿಸುತ್ತದೆ. Appointment ವಿಚಾರದಲ್ಲಿ ಮಾನ್ಯ ಡಾ: ಪರಮೇಶ್ವರ್‌ರವರು ಹೇಳಿದಂತೆ ಆ ವಿಷಯವನ್ನು ಗಣನೆಗೆ ತೆಗೆದುಕೊಳ್ಳುತ್ತೇನೆ. Family Trust ತರಹ ಹೋಗಿ, family member ಅನ್ನು appoint ಮಾಡುವುದು, ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಇದನ್ನು ಪ್ರಸ್ತಾಪ ಮಾಡಿದರು.

ಈ ವಿಚಾರವನ್ನು ಕೂಡ ಸರಿಯಾದ ರೀತಿಯಲ್ಲಿ ಅಡಕವಾಗುವಂತಹ ರೀತಿಯಲ್ಲಿ ನಾನು ಎಲ್ಲಾ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಸರ್ಕಾರಕ್ಕೂ ಕೂಡ ಅಧಿಕಾರ ಚಲಾಯಿಸುವುದಕ್ಕೆ ಅಧಿಕಾರ ಇದೆ. Section 54(2) ಸರ್ಕಾರಕ್ಕೆ ಡೈರೆಕ್ಷನ್ ಕೊಡುವ ಅಧಿಕಾರ ಇದರಲ್ಲಿ ಇದೆ. ಆ ರೀತಿ ಕ್ರಮ ಜರುಗಿಸುವ ಸಾಧ್ಯತೆ ಸರ್ಕಾರದಲ್ಲಿ ಇದೆ. ಎಲ್ಲವನ್ನೂ ಅವರಿಗೆ ಬಿಟ್ಟು ಕೊಟ್ಟು ನಮಗೆ ಸಂಬಂಧ ಇಲ್ಲ ಎನ್ನುವ ರೀತಿಯಲ್ಲಿ ಕುಳಿತವರಲ್ಲ. ಇದರಲ್ಲಿ ಸರ್ಕಾರಿ ಕಾಲೇಜುಗಳನ್ನು ಅಭಿವೃದ್ಧಿಪಡಿಸುವಂತಹ ರಾಜ್ಯದಲ್ಲಿ ಕೇಂದ್ರ್ರದ ವಿಶ್ವವಿದ್ಯಾಲಯವೂ ಇದೆ, ರಾಜ್ಯದ ವಿಶ್ವವಿದ್ಯಾನಿಲಯಗಳೂ ಇವೆ. ಅದರ ಮುಖೇನ ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡುವುದರ ಜೊತೆಗೆ ಹೆಚ್ಚು ಹೆಚ್ಚು ವಿದ್ಯಾರ್ತಿಗಳು ಕರ್ನಾಟಕ ರಾಜ್ಯಕ್ಕೆ ಬರಬೇಕು. ನನಗೆ ಅನೇಕ ವಿದೇಶಿ ಡೆಲಿಗೇಷನ್‌ನವರು ಬಂದು ಭೇಟಿ ಆದರು. Karnataka, it is an educational hub. ಅದಕ್ಕೋಸ್ಕರ ಅವರು ಅಪೇಕ್ಷೆ ಪಡುತ್ತಿದ್ದಾರೆ. ಇಂತಹ Foregin University ಗಳು ಬರುವ ಮುಂಚೆ ಈ ರೀತಿ ಶಿಕ್ಷಣದಲ್ಲಿ ಆಸಕ್ತಿ ಇರತಕ್ಕಂತಹವರು ವಿಶ್ವವಿದ್ಯಾನಿಲಯಗಳನ್ನು ಮಾಡುತ್ತೇವೆಂದು ಮುಂದೆ ಬಂದಂತಹ ಸಂದರ್ಭದಲ್ಲಿ ಯುವಕರು ಇದ್ದಂತಹವರಿಗೆ ಕೊಡುವು ದರಲ್ಲಿ ತಪ್ಪೇನಿಲ್ಲ. ಈಗಾಗಲೇ ದೇಶದ ಬೇರೆ ಬೇರೆ ಭಾಗಗಳಲ್ಲಿ 42 ವಿಶ್ವವಿದ್ಯಾಲಯಗಳು ಇರುವುದರಿಂದ, ಡಾ: ಪರಮೇಶ್ವರ್‌ರವರಿಗೆ ಚೆನ್ನಾಗಿ ಗೊತ್ತಿದೆ. Engineering field ನಲ್ಲಿ, Medical field ನಲ್ಲಿ ಇವತ್ತಿಗೂ ಕೂಡ Karnataka stands No.1. ಅಂತಹ ಸನ್ನಿವೇಶದಲ್ಲಿ ಈ ರೀತಿ ಅವಕಾಶಗಳು ಇದ್ದಂತಹ ಸಂದರ್ಭದಲ್ಲಿ ನಾವು ಅದರ ಉಪಯೋಗ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಇದನ್ನು ಮಾಡಲಾಗಿದೆ ಹೊರತು, ಖಾಸಗಿಯವರಿಗೆ ಶಿಕ್ಷಣ ಕ್ಷೇತ್ರವನ್ನು ಪೂರ್ಣವಾಗಿ ಹಸ್ತಾಂತರಿಸಬೇಕೆಂಬ ಉದ್ದೇಶದಿಂದ ಇದು ಮಾಡಿರುವುದು ಅಲ್ಲ. ಆ ರೀತಿಯ ಕ್ವಾಲಿಟಿ ಶಿಕ್ಷಣ ಕೊಡುವಂಥದ್ದಕ್ಕೆ ಇದರಲ್ಲಿ ನಾವು ಕೆಲವೊಂದು restrict ಮಾಡಿದ್ದೇವೆ. ಬೇರೆ ರಾಜ್ಯಗಳಲ್ಲಿ ಇದು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ 25% ಕೊಡಲೇಬೇಕೆಂಬ ಮಾತೇನಿದೆ, ...

ಈಗ ಸಿ.ಇ.ಟಿ.ಯಲ್ಲಿಯೂ ಕರ್ನಾಟಕದವರಿಗಾಗಿ ರಿಸರ್ವೇಶನ್ ಮಾಡಿದ್ದೇವೆ. ಅದರಲ್ಲಿಯೂ ಸೀಟ್ ಉಳಿಯುತ್ತಿವೆ. ಅದರಲ್ಲಿ ನಾವೇನು

ಮಾಡುತ್ತಿದ್ದೇವೆಂದರೆ, ವಾಪಸ್ ಕೊಡುತ್ತಿದ್ದೇವೆ. ಆ ರೀತಿಯ ಹಿನ್ನಲೆಯೊಳಗೆ ಅಕಸ್ಮಾತ್ ತುಂಬದೇ ಇದ್ದರೆ ಅದನ್ನು ವಾಪಸ್ ಕೊಡಬೇಕು ಎನ್ನುವಂಥ ಹಿನ್ನಲೆಯೊಳಗೆ ಅದನ್ನು ಹೇಳಲಾಗಿದೆ. ಕರ್ನಾಟಕದವರಿಗೆ ಕೊಡಲೇಬೇಕೆಂದು insist ಮಾಡಿರುವಂಥದ್ದು ಕೂಡ ಬೇರೆ ರಾಜ್ಯಗಳಲ್ಲಿ ವಿಶ್ವವಿದ್ಯಾಲಯಗಳು ಏನು ರಚನೆಯಾಗಿವೆ ಅದರಲ್ಲಿ ಕೂಡ ಆ ರೀತಿ ಇಲ್ಲ. ಮತ್ತೆ ಇದೊಂದು ಖಾಸಗಿಯಾಗಿರುವುದರಿಂದ, ನನಗೇಕೋ ಇದು ಅರ್ಥವಾಗುವುದಿಲ್ಲ, ನಾವು ಸರ್ಕಾರದಿಂದ ಯಾವುದಾದರೂ ಟ್ರಸ್ಟ್ ಮಾಡಿದರೆ ಅದು ಖಾಸಗಿ ಎನ್ನುತ್ತೀರಿ, ಯಾರಾದರೂ ಖಾಸಗಿಯದ್ದಾಗಿ ಮಾಡಬೇಕು ಎಂದರೆ ಅದನ್ನು ಸರ್ಕಾರ ನಿಯಂತ್ರಣದಲ್ಲಿಟ್ಟುಕೊಳಬೇಕು ಎನ್ನುತ್ತೀರಿ. ಅದಕ್ಕಾಗಿ ಇದೊಂದು ಒಳ್ಳೆಯ ಉದ್ದೇಶದಿಂದ ಸರ್ಕಾರ ಮಾಡುತ್ತಿದೆ. ದಯವಿಟ್ಟು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ಇದನ್ನು ಬೆಂಬಲಿಸಬೇಕು ಮತ್ತು ಕರ್ನಾಟಕದಲ್ಲಿ ಶಿಕ್ಷಣ ಕ್ಷೇತ್ರವನ್ನು ಮುನ್ನಡೆಸುವಂಥ ಕೆಲಸದಲ್ಲಿ ಭಾಗಿಯಾಗಬೇಕೆಂದು ಮಾನ್ಯ ಅಧ್ಯಕ್ಷರ ಮುಖೇನ ಎಲ್ಲಾ ಸದಸ್ಯರಲಿ ಮತ್ತೊಮ್ಮೆ ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾವು ಎತ್ತಿದಂಥ ಅನೇಕ ಮೂಲ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಲಿಲ್ಲ. ನಾವು ಎರಡ್ಮೂರು ವಿಚಾರಗಳನ್ನು ಹೇಳಿದ್ದೇವೆ. ಅವರೇನು ಹೇಳುತ್ತಾರೆಂದರೆ ಸರ್ಕಾರ ನಿಯಂತ್ರಣದಲ್ಲಿಟ್ಟುಕೊಳ್ಳುತ್ತದೆಂದು. ಆದರೆ ಈ ಬಿಲ್‌ನಲ್ಲಿ ಎಲ್ಲಿದೆ ಅವರ ನಿಯಂತ್ರಣ. ನಿಯಂತ್ರಣವಿಲ್ಲ.

ಶ್ರೀ ಅರವಿಂದ ಲಿಂಬಾವಳಿ : ಅದರಲ್ಲಿದೆ.

ಶ್ರೀ ಸಿದ್ದರಾಮಯ್ಯ : ಎಲ್ಲಿದೆ?

ಡಾ: ಹೆಚ್.ಸಿ. ಮಹದೇವಪ್ಪ : ಪ್ರೇಮ್‌ಜಿವರಿಗೆ ಈ ರೀತಿ ಕೊಟ್ಟು ಆಮೇಲೆ ಅದನ್ನು ನೀವು wind up ಮಾಡುವುದಕ್ಕೆ ಆಗುತ್ತದೆಯೆ? He will wind up the political sect.

ಶ್ರೀ ಸಿದ್ದರಾಮಯ್ಯ : ನೀವು ಹೇಳಿರುವ ಹಾಗೆ ಇದನ್ನೆಲ್ಲಾ ಮಾಡುವುದಕ್ಕಾಗುವುದಿಲ್ಲ. Grant-in-aid Institutions ನಲ್ಲಿಯೇ ನೀವು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಇನ್ನು ಖಾಸಗಿಯವರದ್ದನ್ನು ಇವರ ಕೈಯಲ್ಲಿ ನಿಯಂತ್ರಣ ಮಾಡುವುದಕ್ಕಾಗುತ್ತದೆಯೆ? ಇವೆಲ್ಲಾ ಆಗದೇ ಇರುವಂಥ ಕೆಲಸಗಳು. ಅಲ್ಲಿ ನಮ್ಮ ಸೆಕ್ರೆಟರಿ ಇರುತ್ತಾರೆ. ಅಲ್ಲಿ ಮೂರು ಜನ

ಮೆಂಬರ್ ಮತ್ತು ಛೇರ್ಮನ್ ಒಬ್ಬರು, ಹೀಗೆ ನಾಲ್ಕೂ ಜನರೂ ಬೇರೆಯವರು ಇರುತ್ತಾರೆ. Education Secretary ಅಲ್ಲಿಗೆ ಹೋಗುತ್ತಾರೆ. ನಿಮ್ ಸೆಕ್ರೆಟರಿ ಮಾತನ್ನು ಅವರು ಕೇಳುತ್ತಾರೆಯೆ? ಆದುದರಿಂದ ನಾನು ಈ ಮೊದಲೇ ಹೇಳಿದಂತೆ ನಿಮಗೆ ಕಾಫಿಯನ್ನೂ ಕೂಡ ಅಲ್ಲಿ ಕೊಡುವುದಿಲ್ಲ. ಹಾಗೆಯೇ ಕಳುಹಿಸಿಬಿಡುತ್ತಾರೆ, ನೀವು ಹೋಗಿ ಎಂದು. ಆದುದರಿಂದ ನೀವು ಹೇಳುವುದೆಲ್ಲವೂ ಆಗದೇ ಇರುವಂಥ ಕೆಲಸಗಳು. ಅದಕ್ಕೋಸ್ಕರವೇ ನಾನು ಏನು ಹೇಳುತ್ತೇನೆಂದರೆ, ನೀವು ಒಂದು ಹೊಸ ಯೋಚನೆ, ಹೊಸ ಚಿಂತನೆ ಯನ್ನು ಮಾಡುತ್ತಿದ್ದೀರಿ. ಅದಕ್ಕೋಸ್ಕರವೇ ಇದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡುವುದಕ್ಕಾಗಿಯೇ ಮಾನ್ಯ ಪರಮೇಶ್ವರ್‌ರವರು ಹಾಗೂ ಇತರ ಸದಸ್ಯರುಗಳು ಜಂಟಿ ಸದನ ಸಮಿತಿ ರಚನೆ ಮಾಡಿ ಅದಕ್ಕೆ ಇದನ್ನು ಪರಿಶೀಲನೆಗಾಗಿ ಒಪ್ಪಿಸಿ ಎಂದು ಕೇಳುತ್ತಿದ್ದಾರೆ. ಆದುದರಿಂದ ನೀವು ಇದನ್ನು Joint Select Committee ಗೆ ಕೊಡಿ. ಅಲ್ಲಿ ಇದರ ಬಗ್ಗೆ ಚರ್ಚೆ ಮಾಡೋಣ. ಏಕೆಂದರೆ ಇದರ ಜೊತೆಗೆ ಇನ್ನೊಂದು Alliance ದು ವಿಧೇಯಕ ಇದೆಯೆಂದು ಮಾಡುತ್ತಿದ್ದೀರಿ. ಇದನ್ನೂ ಕೂಡ ಮಾಡುತ್ತಿದ್ದೀರಿ. ಇವೆಲ್ಲದರ ಸಾಧಕ ಭಾದಕಗಳನ್ನು ಕೊಡಿ. ಅವೆಲ್ಲವುಗಳನ್ನೂ ನೋಡಿ ಇನ್ನೊಂದು ತಿಂಗಳಲ್ಲಿ ಒಂದು ರಿಪೋರ್ಟ್‌ನ್ನು ಕೊಡೋಣ. ಆಮೇಲೆ ಒಂದು ತೀರ್ಮಾನಕ್ಕೆ ಬರೋಣ. ಈಗ ಸಭಾನಾಯಕರು ಕೂಡ ಬಂದಿದ್ದಾರೆ. ಮಾನ್ಯ ಸಭಾನಾಯಕರೆ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ವಿಧೇಯಕದ ಬಗ್ಗೆ ನೋಡಿ ಪರಿಶೀಲಿಸಿ ಚರ್ಚೆ ಮಾಡದೇ ಸುಮ್ಮನೆ ಏಕಾಏಕಿ ವಿಧೇಯಕವನ್ನು ಪಾಸ್ ಮಾಡಿಕೊಡಿ ಎಂದರೆ ಹೇಗೆ ಹೇಳಿ. ಅದರಲ್ಲಿ ಕರ್ನಾಟಕದ ವಿದ್ಯಾರ್ಥಿಗಳಿಗೆ ರಿಸರ್ವೇಶನ್ ಇಲ್ಲ. Quality Education ಅನ್ನು ನಾವು ಯಾರಿಗೆ ಕೊಡಬೇಕಾಗಿರುವುದು? ನಮ್ಮ ಕರ್ನಾಟಕದ Student ಗಳಿಗೆ.

ಶ್ರೀ ಅರವಿಂದ ಲಿಂಬಾವಳಿ : ಇದೆ ಆದರೆ ಯಾವುದೇ ರಾಜ್ಯದಲ್ಲಿಯೂ ರಿಸರ್ವ್ ಮಾಡುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಅವರು ಸಿಗದೇ ಹೋದರೆ ಯಾರಿಗೆ ಕೊಡುತ್ತೀರಿ? ನೀವು ಹೇಳಿರುವುದರಲ್ಲಿ General Category ಯವರಿಗೆ ಎಂದು ಇದೆ. General Category ಎಂದರೆ ಯಾರು? Not Kannadigas. Any student anywhere from the country or from the world.

That is the interpretation. ಆದುದರಿಂದ ಮಾನ್ಯ ಅಧ್ಯಕ್ಷರೆ, ಇನ್ನು ಎರಡನೆಯದಾಗಿ ಯಾವ ವರ್ಗದ ಜನರಿಗೆ ಇವರು Quality Education ಅನ್ನು ಕೊಡಬೇಕಾಗಿರುವುದೆಂದರೆ ಅಶಕ್ತ ಜನರಿಗೆ ಇವರು Quality Education ಅನ್ನು ಕೊಡಬೇಕಾಗಿರುವುದು. ನೀವು ಶಕ್ತಿ ಇರತಕ್ಕಂಥವರಿಗೇ Quality Education ಅನ್ನು ಕೊಡುತ್ತೀರ? ಹಣ ಇರುವವರಿಗೆ, ಹಣವನ್ನು ಖರ್ಚು ಮಾಡುವವರಿಗೆ ನೀವು ಕೊಡುತ್ತೀರ? ಹಣವಂತರಿಗೆ ಕೊಡುತ್ತೀರ? ಯಾರ ಹತ್ತಿರ ಹಣವಿಲ್ಲ, ಅಂಥ ವಿದ್ಯಾರ್ಥಿಗಳಿಗೆ Quality Education ಬೇಕಾಗಿರತಕ್ಕಂಥದ್ದು. ಅಂಥವರಿಗೇನಾದರು ಈ ವಿಧೇಯಕದಲ್ಲಿ ಇದೆಯೆ? ಆ ರೀತಿಯದ್ದು ಏನೂ ಇಲ್ಲ. ಎಲ್ಲಾ ಕಡೆ ಖಾಸಗಿಯಲ್ಲಿ ರಿಸರ್ವೇಶನ್ ಕೊಡುವುದಕ್ಕಾಗುತ್ತದೆಯೆ ಎಂದರೆ ಹೇಗೆ. ಅರವಿಂದ ಲಿಂಬಾವಳಿಯಂಥ ವರಿಂದ ನಾನು ಈ ರೀತಿಯದ್ದನ್ನು expect ಮಾಡಿರಲಿಲ್ಲ. ನಾವು ಖಾಸಗಿ ಯಲ್ಲಿ ರಿಸರ್ವೇಶನ್ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ಆದರೆ ನಾವು ಪ್ರಯತ್ನ ಮಾಡೋಣ. Why not? ನಾವು ಪ್ರಯತ್ನ ಮಾಡೋಣ. We are all from the suppressed and depressed sections of the society. Should you not think about it? ನೀವು ಈ ರೀತಿಯದ್ದೆಲ್ಲವನ್ನೂ ಮಾಡುವ ಬಗ್ಗೆ ಚಿಂತನೆ ಮಾಡಿದ ಮೇಲೆ ಅಶಕ್ತ ವಿದ್ಯಾರ್ಥಿಗಳಿಗೂ Quality Education ಸಿಗುವಂತೆ ಮಾಡಿ. ಅದನ್ನು ಬಿಟ್ಟು ನಾವು ಈ ತರಹ ಮಾಡುತ್ತೇವೆ, ಆಮೇಲೆ ಮುಂದೆ ಮಾಡಿಕೊಳ್ಳುತ್ತೇವೆಂದು ಹೇಳಿದರೆ ಅಂಥದ್ದಕ್ಕೆ ನಮ್ಮ ಒಪ್ಪಿಗೆಯಿಲ್ಲ. ಆದುದರಿಂದ ನಾನು ಈಗಲೂ ಅವರಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುವುದೇನೆಂದರೆ ಮತ್ತು I appeal to Hon'ble Chief Minister, don't make it prestige, don't stand on prestige. Plaese agree to give it to the Joint Selection Committee. ಮಾಡಿ. ಆ ಜಾಯಿಂಟ್ ಸೆಲೆಕ್ಷನ್ ಕಮಿಟಿ ಇದರ ಬಗ್ಗೆ ಸ್ಟಡಿ ಮಾಡಿ ರಿಪೋರ್ಟ್ ಕೊಡಲಿ. ಆಮೇಲೆ ಆ ವರದಿ ಬಂದಮೇಲೆ ಮತ್ತೆ ಚರ್ಚೆ ಮಾಡೋಣ, ಕೂಲಂಕಷವಾಗಿ ಆಮೇಲೆ ಯೋಚನೆಯನ್ನು ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಡುವಾಗ ಒಂದು ಮಾತನ್ನು ಹೇಳಿದರು. ಈ ಹೊಸ ಪ್ರಯೋಗವನ್ನು ಮಾಡುವ ಬಗ್ಗೆ ನಾವು ಈಗಾಗಲೇ ಅಧಿಕಾರಿಗಳ ಜೊತೆ

ಕುಳಿತುಕೊಂಡು consult ಮಾಡಿ ಬೇರೆ ಬೇರೆ ರಾಜ್ಯಗಳಲ್ಲಿ ಏನು ವಾತಾವರಣವಿದೆ ಎಂಬ ಬಗ್ಗೆ ಎಲ್ಲವನ್ನೂ ಸ್ಟಡಿ ಮಾಡಿ ಅಂತಿಮವಾಗಿ ಈ ವಿಧೇಯಕವನ್ನು ತಂದಿದ್ದೇವೆಂದರು. ಬಹುಶಃ ನೀವು ಯಾವುದಾದರೂ ಒಂದು ಸನ್ನಿವೇಶದಲ್ಲಿ ಈ ರೀತಿಯಾದಂಥ ಒಂದು ಖಾಸಗಿ ಯುನಿವರ್ಸಿಟಿ ಮಾಡುವುದಕ್ಕೋಸ್ಕರ ಒಂದು ಕಮಿಟಿಯನ್ನು ಮಾಡಿದ್ದೇವೆ, ಇಂಥವರನ್ನು ನಾಮಿನೇಟ್ ಮಾಡಿದ್ದೇವೆ, ಅವರು ಇಷ್ಟು ಬಾರಿ ಕುಳಿತುಕೊಂಡು ಈ ಬಗ್ಗೆ ಚರ್ಚೆ ಮಾಡಿದ್ದಾರೆ, ಇಷ್ಟು ಮೀಟಿಂಗ್ ಮಾಡಿದ್ದಾರೆ, ಇಂಥ ರಾಜ್ಯಗಳಿಗೆ ಹೋಗಿ ಅಧ್ಯಯನ ಮಾಡಿದ್ದಾರೆ ಮತ್ತು ಇಂಥದ್ದೆಲ್ಲವನ್ನೂ ಪರಿಶೀಲನೆ ಮಾಡಿದ್ದಾರೆ ಎಂಬ ಬಗ್ಗೆ ದಾಖಲೆಯೇನಾದರೂ ನಿಮ್ಮ ಹತ್ತಿರ ಇದ್ದರೆ ಅದನ್ನು ಸದನದಲ್ಲಿಡಿ. ಇದು ಒಂದು ವಿಚಾರ. ಇನ್ನು ಎರಡನೆಯದಾಗಿ, ನಾವು ಜಂಟಿ ಸದನ ಸಮಿತಿ ಎಂದರೆ. . . .

ಶ್ರೀ ಅರವಿಂದ ಲಿಂಬಾವಳಿ : ನಾನು ಬೇರೆ ಬೇರೆ ರಾಜ್ಯಗಳಿಂದ ಮಾಹಿತಿಯನ್ನು ತರಿಸಿಕೊಂಡಿದ್ದೇವೆ ಎಂದು ಹೇಳಿದ್ದು.

ಶ್ರೀ ಟಿ.ಬಿ. ಜಯಚಂದ್ರ : ನೀವು ಕುಳಿತುಕೊಳ್ಳಿ ಸ್ವಾಮಿ. ಸರ್ಕಾರ ನಡೆಸಿರುವ ನಮಗೇನೂ ಗೊತ್ತಿಲ್ಲವೆ. ನೀವು ಹೇಳಿದುದರಲ್ಲಿ ಸಾಧಕ ಬಾಧಕಗಳ ಬಗ್ಗೆ ಚರ್ಚೆ ಮಾಡಬಹುದು. ಈಗ ನೋಡಿ ಈ ವಿಧಾನಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಾಗ ನಿಮ್ಮಲ್ಲಿ ಕೆಲವರಲ್ಲಿ ಒಳ್ಳೆಯ ಉದ್ದೇಶವಿತ್ತು. ಆದರೆ ಅದು ಚರ್ಚೆಗೆ ಬಂದಾಗ ವಾಸ್ತವಿಕವಾಗಿ ಅವೆಲ್ಲವೂ ಈಚೆಗೆ ಬರುತ್ತದೆ. ಜಂಟಿ ಸದನ ಸಮಿತಿ ಎಂದರೆ ನೀವು ಅಲ್ಲಿ ನಿಮಗೆ ವಿರೋಧವೇ ಬರುತ್ತದೆ ಎನ್ನತಕ್ಕಂಥ ಭಾವನೆಯನ್ನೇ ನೀವು ಇಟ್ಟುಕೊಳ್ಳಬೇಡಿ. ಆ ಸಮಿತಿಗೆ ನಿಮ್ಮ ಮಾತನ್ನು ಕೇಳತಕ್ಕಂಥ ಎಚ್ಚು ಜನರನ್ನೇ ಹಾಕಿ. ಆದರೆ ವಾಸ್ತವಿಕವಾಗಿ ವಿಚಾರ ಅಲ್ಲಿ ಚರ್ಚೆಯಾಗಲಿ. ಎರಡು ತಿಂಗಳು ಅಥವಾ ಮೂರು ತಿಂಗಳು ಎಂದು ಕಾಲಾವಧಿಯನ್ನು ನೀವು ನಿಗದಿ ಮಾಡಿ. ಅದರಿಂದ ವರದಿ ಬಂದಮೇಲೆ ನೀವು ಮಾಡಿ. ಜಂಟಿ ಸದನ ಸಮಿತಿಯ ಸಪೋರ್ಟ್ ನಿಮಗೆ ಸಿಕ್ಕಿದರೆ ಒಳ್ಳೆಯದಲ್ಲವೆ? ಈಗ Women's Bill ಅನ್ನು ನಮ್ಮ parliament ನಲ್ಲಿ ತಂದರು. ಜಂಟಿ ಸದನ ಸಮಿತಿಯನ್ನು ಮಾಡಿದರು. ಅದಾದ ಮೇಲೂ ಕೂಡ ಏನೆಲ್ಲಾ ಆಗುತ್ತಿದೆ ಅದರ ಬಗ್ಗೆ ನೋಡಿ. ನಾನು ಹೇಳುವುದೇನೆಂದರೆ, ಜಂಟಿ ಸದನ ಸಮಿತಿಯ ವರದಿ ನಿಮಗೆ ಒಂದು ಆಧಾರವಾಗುತ್ತದೆ. ಆಗ ನಿಮ್ಮ

ಮಂತ್ರಿಗಳು ಇದಕ್ಕೆ ಹೊಣೆಯಾಗುವುದಿಲ್ಲ. ಜಂಟಿ ಸದನ ಸಮಿತಿ ಇದಕ್ಕೆ ಹೊಣೆಯಾಗುತ್ತದೆ. ಆ ದೃಷ್ಟಿಯಿಂದ ನೋಡಿ. ಏಕೆಂದರೆ, ನಾನು ಒಂದು ವಿಚಾರವನ್ನು ಹೇಳುತ್ತೇನೆ. ನಿಮ್ಮ ಉದ್ದೇಶವನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಪ್ರೇಮ್‌ಜಿಯವರ ಬಗ್ಗೆಯೂ ನಾನು ಪ್ರಶ್ನೆ ಮಾಡುತ್ತಿಲ್ಲ. ನಿಮ್ಮ Capability ಬಗ್ಗೆ ನಮಗೆ ಅನುಮಾನವಿಲ್ಲ. ಆದರೆ let it be done in a systematic way. ಏಕೆಂದರೆ ಯಾವುದೇ ರೀತಿಯಲ್ಲಿಯೂ ಅನುಮಾನಗಳು ಬರತಕ್ಕಂಥ ರೀತಿಯಲ್ಲಿ ಆಗುವುದು ಬೇಡ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ಇಂಥ ಒಂದು ಅದ್ಭುತವಾದ ವಿಧೇಯಕವನ್ನು ಸರ್ಕಾರ ತಂದಿದೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಮ್ಮ ರಾಜ್ಯದ ಅನೇಕ ಪ್ರತಿಭಾ ವಿದ್ಯಾರ್ಥಿಗಳು ಬೇರೆ ದೇಶಕ್ಕೆ ಹೋಗಿದ್ದಾರೆ. ಈಗಾಗಲೇ ಉಪನಾಯಕರು ಹೇಳಿದರು, ಆಸ್ಟ್ರೇಲಿಯಾ, ಇಂಗ್ಲೆಂಡಿನಲ್ಲಿ ಹೊಡೆತ ತಿನ್ನುತ್ತಿದ್ದಾರೆ. ಅದೊಂದೇ ಅಲ್ಲ ನಾಸಾದಲ್ಲಿ ಶೇಕಡ 40 ರಷ್ಟು ನಮ್ಮ ದೇಶದ ಪ್ರತಿಭಾವಂತ ವಿದ್ಯಾರ್ಥಿಗಳಿದ್ದಾರೆಂದು ನಾವು ಕೇಳುತ್ತೇವೆ. ಆ ರೀತಿಯ ಅವಕಾಶಗಳು ನಮ್ಮ ರಾಜ್ಯದಲ್ಲಿ ಇಲ್ಲದೇ ಹೋದರೆ ನಮ್ಮ ರಾಜ್ಯದ ಎಲ್ಲ ಪ್ರತಿಭೆಗಳು ಬೇರೆ ಬೇರೆ ದೇಶಕ್ಕೆ ಹೋಗಿ ಅಲ್ಲಿಯೇ ಲಗ್ನ ಮಾಡಿ ಕೊಂಡು ನಮ್ಮ ಪ್ರತಿಭೆಗಳು ಅಲ್ಲಿಯೇ ಉಳಿಯುತ್ತವೆ. ಅದಕ್ಕಾಗಿ ಇಂಥ ಒಂದು ಒಳ್ಳೆಯ ಅವಕಾಶ ಬಂದಾಗ, ಅಜೀಂ ಪ್ರೇಮ್‌ಜಿ ಫೌಂಡೇಶನ್ ದವರು ಸಾಕಷ್ಟು ಶಿಕ್ಷಣ ಕ್ಷೇತ್ರದಲ್ಲಿ ಈಗಾಗಲೇ ಗ್ರಾಮಾಂತರ ಪ್ರದೇಶದ ಹಳ್ಳಿಗಳಲ್ಲಿ ಕೋಟಿ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದ್ದಾರೆ. ಅಂಥ ಒಂದು ಅವಕಾಶ ಬಂದಾಗ ಅದನ್ನು ಸದುಪಯೋಗ ಮಾಡಿಕೊಳ್ಳುವಂಥ ಒಂದು ಪ್ರಯತ್ನವನ್ನು ಮಾಡಬೇಕು. ಏನೋ ಒಂದು ಕುಂಟು ನೆಪ ಹೇಳಿಕೊಂಡು ಇಂಥ ಅವಕಾಶವನ್ನು ಕಳೆದುಕೊಳ್ಳಬಾರದು ಎನ್ನುವಂಥ ಸಲಹೆಯನ್ನು ಕೊಡಬಯಸುತ್ತೇನೆ. ಅದಕ್ಕಾಗಿ ಇದೊಂದು ಒಳ್ಳೆಯ ಅವಕಾಶ. ಇದೊಂದು ಸುವರ್ಣ ಅವಕಾಶ. 100 ಪರ್ಸೆಂಟ್ ದುಡ್ಡನ್ನು ನೀವು ಶಿಕ್ಷಣ ಇಲಾಖೆಗೆ ಖರ್ಚು ಮಾಡಿ ಪ್ರತಿಭಾವಂಥ ವಿದ್ಯಾರ್ಥಿಗಳನ್ನು ಈ ರಾಜ್ಯದಲ್ಲಿ ತಯಾರು ಮಾಡಬೇಕು ಎಂದು ಇಚ್ಛೆ ಉಳ್ಳತಕ್ಕಂಥ ಅಜೀಂ ಪ್ರೇಮ್‌ಜಿಯವರ ವಿಶ್ವವಿದ್ಯಾಲಯಕ್ಕೆ ದಯವಿಟ್ಟು ಎಲ್ಲಾ ವಿರೋಧ ಪಕ್ಷದವರಿಗೆ ಮತ್ತು ಸರ್ಕಾರ ಈ ವಿಧೇಯಕವನ್ನು ಅವಿರೋಧವಾಗಿ ಬೆಂಬಲಿಸಬೇಕೆನ್ನುವ ವಿನಂತಿಯನ್ನು ನಾನು ತಮ್ಮ ಮೂಲಕ ಮಾಡುತ್ತೇನೆ.

ಡಾ: ಜಿ.ಪರಮೇಶ್ವರ್ : ಮಾನ್ಯ ಅಧ್ಯಕ್ಷರೆ, ಎಲ್ಲೋ ಒಂದು ಕಡೆ ನಮ್ಮನ್ನು ತಪ್ಪು ಭಾವನೆಯಿಂದ ನೋಡುವ ರೀತಿಯಾಗಿ ಬಿಟ್ಟಿದೆ. ನಾವು ಈ ಬಿಲ್‌ನ್ನು ನೀವು ಮಾಡಬೇಡಿ, Private university ಯನ್ನು ಈ ರಾಜ್ಯದಲ್ಲಿ ಮಾಡಬೇಡಿ, ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯನ್ನು ತರಬೇಡಿ, ನಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡಬೇಡಿ ಎಂದು ನಾವು ಹೇಳಲಿಲ್ಲ. ನಾವು ಹೇಳಿದ್ದೇನೆಂದರೆ, ನೀವು ಕಾನೂನು ಮಾಡುತ್ತಿದ್ದೀರಿ, this is not a simple Government Order. ತಾವು ಕಾನೂನನ್ನು ಮಾಡುತ್ತಿದ್ದೀರಿ, ಇದು ಎಲ್ಲರಿಗೂ ಅನ್ವಯಿಸುತ್ತದೆ. ಮುಂದೆ ಈ ಬಿಲ್ ಪರ್ಮನೆಂಟ್ ಆಗಿ ಉಳಿಯಬೇಕು. ಮತ್ತೊಂದೇನಾದರೂ ಹೊಸ ಬದಲಾವಣೆ, ಮತ್ತ್ಯಾರೋ ಪ್ರಯತ್ನ ಮಾಡುವಾಗ ಅದು ಉಳಿಯಬೇಕಾಗುತದೆ. ಅದಕ್ಕೋಸ್ಕರ ಸರಿಯಾದ ರೀತಿಯಲ್ಲಿ ಈ ಬಿಲ್‌ನ್ನು ತೆಗೆದುಕೊಂಡು ಬನ್ನಿ ಎಂದಷ್ಟೇ ನಾವು ಹೇಳಿರುವುದು. ಬೇರೆ ಇನ್ನೇನು accuse ಮಾಡುತ್ತಿಲ್ಲ ಅಥವಾ ನೀವು ಅಜೀಂ ಪ್ರೇಮ್‌ಜಿಯವರಿಗೆ favor ಮಾಡುತ್ತಿದ್ದೀರಿ ಎಂದು ನಾವು ಹೇಳಲಿಲ್ಲ. ಅವರು ಬಹಳ ಒಳ್ಳೆಯ ಉದ್ದೇಶವನ್ನುಟ್ಟುಕೊಂಡೇ ಬಹುಶಃ ಅವರು ಇದನ್ನು ಮಾಡುವುದಕ್ಕೆ ಹೊರಟಿರುವುದು. ಆದರೆ ಏನಾಗುತ್ತದೆಂದರೆ, ಒಂದು ಸಣ್ಣ ಸಂಸ್ಥೆ ಕೂಡ ಇಲ್ಲದಿರುವಂಥವರಿಗೆ ನಾವು ವಿಶ್ವವಿದ್ಯಾಲಯ ಮಾಡುವುದಕ್ಕೆ ಅವಕಾಶ ಕೊಡುತ್ತೇವೆಂದಾಗ Indian Institute of Science ಗೆ Deemed University status ಕೊಟ್ಟಿದ್ದಾರೆ. ನಮ್ಮ ಬೇರೆ ಬೇರೆ ಸಂಸ್ಥೆಗಳಿಗೆ, ಸರ್ಕಾರಿ ಸಂಸ್ಥೆಗಳಿಗೆ ಕೊಟ್ಟಿದ್ದಾರೆ.

ಏಕೆ ಕೊಟ್ಟಿದ್ದಾರೆಂದರೆ ಗುಣಮಟ್ಟದ ಶಿಕ್ಷಣವಾಗಬೇಕು, ಅವೆಲ್ಲ intenational level ಗೆ ಬೆಳೆಯಬೇಕು ಎಂದು ಅವರಿಗೆ autonomous status ಗೆ ಕೊಡಬೇಕೆನ್ನುವ ಉದ್ದೇಶದಿಂದ ಕೊಟ್ಟಿದ್ದಾರೆ. ನೀವು ಮಾಡಿ, ನಾವು ಬೇಡವೆಂದು ಹೇಳುವುದಿಲ್ಲ. ಅವರಿಗೆ infrastructure ಇರಬೇಕು, ಎಲ್ಲಾ ರೀತಿಯ ಅನುಭವ ಇರಬೇಕು, ಆ ಕಾರಣಕ್ಕೆ ನಾವು ತಮಗೆ ಹೇಳುತ್ತಿದ್ದೇವೆ ಹೊರತು ನಮ್ಮದು ಬೇರೆ ಏನೂ ಉದ್ದೇಶವಿಲ್ಲ. ಇದರಲ್ಲಿ ಏನು ನ್ಯೂನತೆಗಳು ಇವೆ ಅದನ್ನು ಸರಿಪಡಿಸಿಕೊಂಡು ತಾವು ಈ ಬಿಲ್ ಅನ್ನು ತೆಗೆದುಕೊಂಡು ಬನ್ನಿ, ನಾವು ಸಹಕಾರ ಕೊಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಇವತ್ತಿನ ದಿವಸ ಇರುವಾಗ ಅವರಿಗೂ ನಾನು ಮನವಿ

ಮಾಡಿಕೊಳ್ಳುತ್ತೇನೆ. ಇದನ್ನು Joint Select Committee ಗೆ ಹಾಕಿ, ಏನೂ ತೊಂದರೆಯಾಗುವುದಿಲ್ಲ. ನಾವೂ ಕೂಡ Comprehensive Amendment ತಂದಾಗ ಸದನ Joint Select Committee ಗೆ ಹಾಕಬೇಕೆಂದು ತೀರ್ಮಾನ ಮಾಡಿತು. ಅವತ್ತು ನಾವು Joint Select Committee ಗೆ ಒಪ್ಪಿಕೊಂಡೆವು. ಅದಾದಮೇಲೆ ಚರ್ಚೆ ಮಾಡಿ Comprehensive Amendment ಅನ್ನು ಸದನಕ್ಕೆ ತೆಗೆದುಕೊಂಡು ಬಂದೆವು. ತಾವು ಆ ಕೆಲಸ ಮಾಡಿ. ನಾವು ನಿಮಗೆ ಖಂಡಿತವಾಗಿ ಸಹಕಾರ ಕೊಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಅಜೀಂ ಪ್ರೇಮ್‌ಜಿ ಅವರು ಖಾಸಗಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಬೇಕೆನ್ನುವ ವಿಚಾರದಲ್ಲಿ ಪ್ರಾರಂಭಿಕ ಚರ್ಚೆಯಾದಂತಹ ಕಾಲದಲ್ಲಿ ಅವರು ತೋರಿಸಿದಂತಹ ಆಸಕ್ತಿ ಮತ್ತು ಅವರ ಕಲ್ಪನೆ, ಅವರ ದೂರದೃಷ್ಟಿ ಕೇಳಿ ನಾನೇ ಆಶ್ಚರ್ಯಪಟ್ಟೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿರುವಂತಹ ಇಂತಹ ವ್ಯಕ್ತಿಗಳು ಇಲ್ಲಿ ಖಾಸಗಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವುದಕ್ಕೆ ಬಂದಾಗ ಇಲ್ಲಿರುವವರ ಮನಸ್ಸಿನಲ್ಲಿ ಆತಂಕಕ್ಕೆ ಎಲ್ಲೂ ಕೂಡ ಅವಕಾಶವಿಲ್ಲ. ಇಲ್ಲಿ ನಮ್ಮ Primary Education and Higher Education Department ನ Principal Secretary ಗಳು ಇರುತ್ತಾರೆ. ನಮ್ಮ control ನಲ್ಲಿ ಇರುತ್ತದೆ. ಈಗಾಗಲೇ ನಮ್ಮ ಅಧಿಕಾರಿಗಳು ಹೊರಗಡೆ ಇರುವಂತಹ ಖಾಸಗಿ ವಿಶ್ವವಿದ್ಯಾನಿಲಯಗಳು ಹೇಗೆ ಕೆಲಸ ಮಾಡುತ್ತಿವೆ ಎನ್ನುವುದನ್ನು ಅಭ್ಯಾಸ ಮಾಡಿ ಬಂದಿದ್ದಾರೆ. ಇಡೀ ಜಗತ್ತಿನಲ್ಲಿ IT/BT ಕ್ಷೇತ್ರದಲ್ಲಿ ನಮ್ಮ ಸಾಧನೆ ಮಾಡಿದ್ದು, ಅಮೆರಿಕಾ ದೇಶದ ಅಧ್ಯಕ್ಷ ಒಬಾಮಾ ನಮ್ಮ ಯುವಕರ ಪ್ರತಿಭೆಯನ್ನು ಕುರಿತು ಮಾತನಾಡುತ್ತಾ, ಇವರು ಹೀಗೆ ಬೆಳೆದು ಮುಂದುವರೆದರೆ ನಾಳೆ ಅಮೆರಿಕಾ ದೇಶವೇ ತನ್ನ ಸ್ಥಾನವನ್ನು ಬಿಟ್ಟು ಭಾರತ ಆ ಸ್ಥಾನಕ್ಕೆ ಬಂದು ಎಲ್ಲಿ ಮುಟ್ಟುತ್ತದೋ ಎನ್ನುವಂತಹ ಭಯವನ್ನು, ಆತಂಕವನ್ನು ವ್ಯಕ್ತಪಡಿಸುವ ಮಟ್ಟಕ್ಕೆ ನಮ್ಮ ಯುವಕ ಯುವತಿಯರು ಬೆಳೆದು ಮುಂದುವರೆಯುತ್ತಿದ್ದರೆ. ಇಂತಹ ಕಾಲಲ್ಲಿ ನಾವೇನಾದರೂ ಇಡೀ ದೇಶದಲ್ಲಿ ಒಂದು ಹೊಸ ಪ್ರಯೋಗ ಮಾಡುವುದಕ್ಕೆ ಹೊರಟಿದ್ದೇವೆ ಎಂದರೆ ನಾವೇ ಮೊದಲಿಗರು ಅಲ್ಲ. ನಮ್ಮ ಗೌರವಾನಿತ್ವ ಸದಸ್ಯರಿಗೆಲ್ಲರಿಗೂ ಗೊತ್ತಿರುವ ಹಾಗೆ ಇಡೀ ದೇಶದಲ್ಲಿ ಈಗಾಗಲೇ 42 ಕಡೆ ಖಾಸಗಿ ವಿಶ್ವವಿದ್ಯಾನಿಲಯಗಳು ನಡೆಯುತ್ತಿವೆ. ಇಂತಹ ಒಂದು ಸಂದರ್ಭದಲ್ಲಿ ಶಿಕ್ಷಕರಿಗೆ ಒಳ್ಳೆಯ

ತರಬೇತಿಯನ್ನು ಕೊಡುವುದು, ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚು ಮಾಡಬೇಕು ಎನ್ನುವ ಸದುದ್ದೇಶವನ್ನು ಇಟ್ಟುಕೊಂಡು ಅವರು ಬಂದಿದ್ದಾರೆ. ಬಹುಶಃ ಇವರನ್ನು ನಾವೇ ಒತ್ತಾಯ ಮಾಡಿ ತರಬೇಕಾಗಿರುವಂತಹ ವ್ಯಕ್ತಿಗಳು. ಅವರದೇ. ಆದಂತಹ ಕ್ಷೇತ್ರದಲ್ಲಿ ಅವರಿದ್ದಾರೆ, ಅವರಿಗೆ ಇಲ್ಲಿ ಬಂದು ಸಂಪಾದನೆ ಮಾಡಬೇಕೆನ್ನುವ ಅಗತ್ಯವಿಲ್ಲ. ನಾನು ಭಾರತೀಯವನಾಗಿ ಕರ್ನಾಟಕದಲ್ಲಿ ಇದ್ದು, ನನದೇ ಆದಂತಹ ಸೇವೆಯನ್ನು ಈ ಕ್ಷೇತ್ರದಲ್ಲಿ ಮಾಡಬೇಕೆನ್ನುವ ಸೇವಾ ಮನೋಭಾವನೆಯಿಂದ, ನಮ್ಮ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಶಕ್ತಿಯನ್ನು ತುಂಬಿ ಕೊಡಬೇಕೆನ್ನುವ ದೃಷ್ಟಿಯಿಂದ ಮುಂದೆ ಬರುತ್ತಿದ್ದಾರೆ ಹೊರತು ಬೇರೆ ಏನೂ ಕಾರಣದಿಂದ ಅಲ್ಲವೆನ್ನುವುದು ನಿಮಗೆ ಗೊತ್ತಿದೆ. ನಾವು ಅವರ ಜೊತೆ ಹತ್ತಾರು ಬಾರಿ ಚರ್ಚೆ ಮಾಡಿದ್ದೇವೆ, ಸಮಾಲೋಚನೆ ಮಾಡಿದ್ದೇವೆ, ಕೊನೆಗೆ ಅವರು ಆತಂಕ ವ್ಯಕ್ತಪಡಿಸಿದರು. ಬಹುಶಃ ಅರವಿಂದ ಲಿಂಬಾವಳಿಯವರಿಗೆ ನೆನಪಿರಬಹುದು, ನಾವು ಮಾತನಾಡುವಂತಹ ಸಂದರ್ಭದಲ್ಲಿ ಅವರು, ನಿಮ್ಮಲ್ಲಿ ಬಂದರೆ ಎಲ್ಲಿ ಅಡ್ಡಿ ಆತಂಕಗಳು ಬರುತ್ತವೆ, ನಾವು ಏಕೆ ಇಲ್ಲಿ ಬರುವುದು ಎನ್ನುವ ಆತಂಕವನ್ನು ವ್ಯಕ್ತಪಡಿಸಿದರು. ಅದಕ್ಕೆ ನಾವು ಆ ಪ್ರಶ್ನೆಯೇ ಇಲ್ಲ, ಕಂಡಿತ ನೀವು ಬನ್ನಿ, ನಾವು ನಿಮಗೆ ಏನು ಬೇಕು ಎಲ್ಲಾ ಅವಕಾಶವನ್ನು ಮಾಡಿಕೊಡುತ್ತೇವೆ, ನಮ್ಮ ಶಿಕ್ಷಕರಿಗೆ ಒಳ್ಳೆಯ ತರಬೇತಿ ಬೇಕು ಎಂದು ಹೇಳಿದೆವು. ಅವರ ಮನಸ್ಸಿನಲ್ಲಿ ಏನಿದೆ ಎಂದರೆ ನಮ್ಮ ಯುವ ಪ್ರತಿಭೆ ಅರಳಬೇಕು ಎಂದಿದ್ದರೆ ಆ ರೀತಿ ಬೆಳೆಸುವುದಕ್ಕೆ ಶಕ್ತಿಯಿರುವಂತಹ ಶಿಕ್ಷಕರ ಗುಣಮಟ್ಟ ಹೆಚ್ಚಬೇಕು ಎನ್ನುವುದು ಅವರ ಭಾವನೆ. ಇದನ್ನು ಅವರು ಚರ್ಚೆ ಮಾಡುವಂತಹ ಸಂದರ್ಭದಲ್ಲಿ express ಮಾಡಿದ್ದು ಇನ್ನೂ ನನ್ನ ಕಣ್ಮುಂದೆ ಇದೆ, ಇದನ್ನು ನಾವು ಮೊದಲಬಾರಿಗೆ ಪ್ರಯೋಗ ಮಾಡುತ್ತೇವೆನ್ನುವುದಲ್ಲ, ಇದನ್ನು Joint Select Committee ಕಳುಹಿಸುವಂತಹ ಅಗತ್ಯ. ಕೂಡ ಇಲ್ಲ. ಆಮೇಲೆ ಏನಾದರೂ ಸಣ್ಣಪುಟ್ಟ ನ್ಯೂನತೆಗಳನ್ನು ಕೊರತೆಗಳನ್ನು ಸರಿಪಡಿಸುವುದಕ್ಕೆ ಅವಕಾಶಗಳು ಇದ್ದೇ ಇದೆ. ಅದಕ್ಕೆ ದಾರಿ ಮುಚ್ಚಿರುತ್ತದೆ ಎಂದು ಏನಿಲ್ಲ. ಆದ್ದರಿಂದ ನಾನು ಈ ಮನೆಯ ಎಲ್ಲಾ ಸದಸ್ಯರಿಗೆ ವಿನಂತಿ ಮಾಡುತ್ತೇನೆ, ಅಪರೂಪದ ಅಂತರಾಷ್ಟ್ರೀಯ ಮಟ್ಟದ ವ್ಯಕ್ತಿತ್ವವನ್ನು ಹೊಂದಿರುವಂತಹ ಅಜೀಂ ಪ್ರೇಮ್‌ಜಿ ಯಂತಹವರು ಮುಂದೆ ಬಂದಿರುವಂತಹ ಈ ಕಾಲದಲ್ಲಿ ಇದಕ್ಕೆ

ಅವಕಾಶ ಮಾಡಿಕೊಡುವುದು ಒಳ್ಳೆಯದು. ದಯಮಾಡಿ ಇದನ್ನು pass ಮಾಡಿಕೊಡಬೇಕೆಂದು ತಮ್ಮಗೆಲ್ಲರಿಗೂ ಅತ್ಯಂತ ವಿನಯದಿಂದ ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡುತ್ತೇನೆ. ಮತ್ತೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುವುದೇನೆಂದರೆ ನಮ್ಮ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಈ ಖಾಸಗಿ ವಿಶ್ವವಿದ್ಯಾನಿಲಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕ್ಷೇತ್ರದಲ್ಲಿ ಬೋಧನೆ, ತರಬೇತಿ, ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಕೈಗೊಳ್ಳುವಂತಹ ಮುಖ್ಯ ಧ್ಯೇಯವನ್ನು ಹೊಂದಿದೆ. ಅದರಲ್ಲೂ ಸಾರ್ವತ್ರಿಕವಾಗಿ ವಿಜ್ಞಾನ, ಸಮಾಜ ವಿಜ್ಞಾನ, ಮಾನವ ಶಾಸ್ತ್ರಗಳ ಬಗ್ಗೆ, ಆಡಳಿತ, ಹಣಕಾಸು ಮತ್ತು ನಿರ್ವಹಣಾ ಕ್ಷೇತ್ರದಲ್ಲಿ ಒಂದು ಅತ್ಯುತ್ತಮವಾದ ಒಂದು ತಂತ್ರಜ್ಞಾನವನ್ನು ಬಳಸಬೇಕೆಂದು ಇದ್ದೇವೆ. ತಮಗೆ ಗೊತ್ತಿರಬಹುದು, ನಾನು ಬಜೆಟ್ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದೆನು. ನಮ್ಮಲ್ಲಿ Science teacher ಇಲ್ಲ. ಅದಕ್ಕೋಸ್ಕರ ಎಲ್ಲಾ ಕಡೆ Science College ಗಳನ್ನು ಪ್ರಾರಂಭ ಮಾಡಬೇಕು, ಇಲ್ಲದಿದ್ದರೆ ಮಕ್ಕಳಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ, ಅದರಿಂದ ಮಕ್ಕಳು ವಂಚಿತರಾಗುತ್ತಾರೆ ಎನ್ನುವ ಮಾತನ್ನು ನಾವು ಹೇಳಿದ್ದೇವೆ. ಇವತ್ತು graduation 15% ಮಾಡುತ್ತಿರುವುದು, ಅದನ್ನು 25%ಗೆ ತೆಗೆದುಕೊಂಡು ಹೋಗಬೇಕೆಂದು ಇದ್ದೇವೆ. ಆ ರೀತಿ ತರಬೇತಿ ಇರುವಂತಹ ಶಿಕ್ಷಕರ ಅಗತ್ಯವಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ನಾವು ಚಿಂತನೆಯನ್ನು ಮಾಡಿ ನಾವು ಮಾಡಿದ್ದೇವೆ. ದಯಮಾಡಿ ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ನಾವು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಜಿ. ಪರಮೇಶ್ವರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಬಹಳ ಪ್ರಾಮುಖ್ಯವಾದ ವಿಚಾರವನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಇವತ್ತು ಶಾಲೆಯಲ್ಲಿ mathematics, physics, science ಗೆ ಒಳ್ಳೆಯ ಶಿಕ್ಷಕರು ಇಲ್ಲ. ಇದರ ಬಗ್ಗೆ ಹೇಳಿರುವುದು ಬಹಳ ಸಂತೋಷ ವಾಯಿತು, ತಾವು ಹೇಳಿರಬಹುದು, ತಾವು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿರಬಹುದು. ಇದು ಬಹಳ ಪ್ರಾಮುಖ್ಯ. ನಮ್ಮ ಮಕ್ಕಳು ಇವತ್ತು Science ಗೆ ಹೋಗುವವರು ಬಹಳ ಕಡಿಮೆ ಆಗಿದ್ದಾರೆ. If you take the statistics of the degree college, science ಗೆ ಹೋಗುವವರು ಬಹಳ ಕಡಿಮೆ. 15 ಜನ science ಓದುವವರು ಒಂದು ಸೆಕ್ಷನ್‌ಗೆ ಸಿಕ್ಕಿದರೆ

ನಮ್ಮ ಪುಣ್ಯ, ಆ ರೀತಿಯ ಪರಿಸ್ಥಿತಿ ಇದೆ. ಆದ್ದರಿಂದ ಉದ್ದೇಶ ಬಹಳ ಚೆನ್ನಾಗಿದೆ. ನಾನು ಅದನ್ನು dispute ಮಾಡುತ್ತಿಲ್ಲ. ಆದರೆ ನಿಮಗೆ ಈ purpose serve ಮಾಡುವುದಕ್ಕೆ university ಏಕೆ ಬೇಕು? Training institute ಮಾಡಿ. ತಾವು ಈಗ science, arts ಗೆ ಎಲ್ಲಾದಕ್ಕೂ ನಾವು training ಕೊಡಬೇಕು ನಮಗೆ ಒಳ್ಳೆಯ ಶಿಕ್ಷಕರು ಬೇಕು ಎಂದು ಹೇಳಿದ್ದೀರಿ. In fact, Indian teachers are the best teachers. ಪ್ರಪಂಚದಾದ್ಯಂತ ಬೇರೆ ಬೇರೆ ವಿಶ್ವವಿದ್ಯಾನಿಲಯದಲ್ಲಿ ಇದ್ದಾರೆ. ನೀವು ಪ್ರಪಂಚದಲ್ಲಿ ಎಲ್ಲಿಯೇ ಹೋಗಿ ನೋಡಿ doctors, engineers, university ಗಳಲ್ಲಿ ,teachers ಇದ್ದಾರೆ. ಆದ್ದರಿಂದ ಇಲ್ಲಿ ಸರ್ಕಾರ ಒಂದೊಂದು ಜಿಲ್ಲೆಗೆ ಒಂದೊಂದು training institute ಮಾಡಿ. ಅದಕ್ಕೆ ಸರ್ಕಾರ ಹಣ ಕೊಡಿ. ಅಜೀಂಪ್ರೇಮ್‌ಜಿ ಇವರಿಗೂ ಕೊಡಿ, ಅವರಿಗೆ ಕೊಡಬೇಡಿ ಎಂದು ನಾನು ಹೇಳುವುದಿಲ್ಲ. ಅವರಿಗೂ ಒಂದು training institute ಕೊಡಿ, ಇದಕ್ಕೆ university ಏಕೆ ಬೇಕು? Let them call it by best of the name, Ajim Premji Foundation Training Academy ಎಂದು ಹೇಳಲಿ ಅಥವಾ ಮತ್ತೊಂದು ಹೇಳಲಿ. ಅದನ್ನು ಕೊಡಿ, ಆದರೆ ನಮ್ಮ ಪ್ರಶ್ನೆ ಏನೆಂದರೆ ಈ ರೀತಿ ನೀವು ಮಾಡಿದರೆ flood gate open ಮಾಡಿದ ಹಾಗೆ ಆಗುತ್ತದೆ. ಒಂದು class room ಇಲ್ಲ, ಒಂದು teachers ಇಲ್ಲ, ಅಂಥವರಿಗೆ ನೀವು University ಕೊಡುವುದಕ್ಕೆ ಹೊರಟರೆ ಬೇರೆ ಬೇರೆಯರಿಗೆ ಏನಾಗುತ್ತದೆ? Guidelines ಏನಾಗುತ್ತದೆ? ಹೊಸದಾಗಿ ನೀವು ಮಾಡುವುದಕ್ಕೆ ಹೋಗುವುದು ಬೇಡ. ಅದಕ್ಕೆ ಸರಿಯಾದ ರೀತಿಯಲ್ಲಿ online with UGC. ಯಾವುದಾದರೂ guidelines ಬೇಕಲ್ಲ. ಇಡೀ ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ನಮ್ಮನ್ನು control ಮಾಡುವುದು, regulate ಮಾಡುವುದು, guide ಮಾಡುವುದು University Grant Commission. ಆ University Grant Commission ನ ಚೌಕಟ್ಟಿನಲ್ಲಾದರೂ ಬರಬೇಕಲ್ಲ. ನಾವು ಬೇರೆ ಏನೂ ಹೇಳುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಯಮಾಡಿ ಕ್ಷಮಿಸಿ, ನಾವು ಇಲ್ಲಿ pass ಮಾಡಿದರೂ ಕೂಡ ಅದು UGC ಗೆ ಹೋಗಿ, ಅಲ್ಲಿ ಒಪ್ಪಿಗೆ ಕೊಟ್ಟ ಮೇಲೆ ಇಲ್ಲಿ ಪ್ರಾರಂಭವಾಗುವುದು.

ಶ್ರೀ ಜಿ. ಪರಮೇಶ್ವರ : ಕಾನೂನು ಮಾಡುವಾಗಲೇ ತಪ್ಪಾಗುತ್ತದಲ್ಲ ಎಂದು ನಾವು ಹೇಳುತ್ತಿರುವುದು. ನೀವು ಮಾಡಬೇಡಿ ಎಂದು ಹೇಳುವುದಿಲ್ಲ. ನೀವು ಮಾಡುವಾಗಲೇ ತಪ್ಪು ಮಾಡಿ, ಆಮೇಲೆ ಸರಿಪಡಿಸಿಕೊಳ್ಳುತ್ತೇವೆಂದರೆ ಇದು ಏನರ್ಥ? ಒಂದು Joint Select Committee ಮಾಡಿ. ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುವುದು ಇಷ್ಟೇ. ನಾವೆಲ್ಲರೂ ಸಲಹೆಗಳನ್ನು ಕೊಡುತ್ತೇವೆ.

ಶ್ರೀ ಅರವಿಂದ ಲಿಂಬಾವಳಿ : ಬೇರೆ ಬೇರೆ ರಾಜ್ಯಗಳಲ್ಲಿರುವಂತಹ University Act ಏನಿದೆ, ಅದರ ಆಧಾರ ಇಟ್ಟುಕೊಂಡೇ ಮಾಡಿರುವುದು.

ಡಾ: ಹೆಚ್.ಸಿ. ಮಹದೇವಪ್ಪ : ನಿಮಗೆ ಆಮೇಲೆ ಸರಿ ಮಾಡಿಕೊಳ್ಳುವಂತಹ urgency ಏನಿದೆ? ಮೂರು ತಿಂಗಳ ಕಾಲ ಒಂದು Joint Select Committee ಮಾಡಿ. Education experts opinion ಅನ್ನು collect ಮಾಡಿ. ಬೇರೆ ಬೇರೆ ರಾಜ್ಯಗಳಲ್ಲಿ ಎಲ್ಲಿ ನಡೆಯುತ್ತಿದೆ ಎಂದು ನೋಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮೂರು ತಿಂಗಳು Joint Select Committeeಗೆ ಹಾಕಿ. ಇಲ್ಲಿ University ಕೊಡಬೇಡಿ, ಅಜೀಂ ಪ್ರೇಮ್‌ಜೀಗೆ entertain ಮಾಡಬೇಡಿ ಎಂದು ಯಾರೂ ಹೇಳುತ್ತಿಲ್ಲ. ಅವರು ದೂರದೃಷ್ಟಿ, ಅವರ ಮುಂದಾಲೋಚನೆ ನೋಡಿ ಸ್ವತಃ ಮುಖ್ಯಮಂತ್ರಿಗಳೇ convince ಆಗಿದ್ದಾರೆ. ಆದರೆ ಇದು ತಪ್ಪಿದ್ದರೆ ಆಮೇಲೆ ಸರಿ ಮಾಡಿಕೊಳ್ಳೋಣ ಎಂದು ಹೇಳಿ ಮಾಡುವಂತಹ urgency ಏನಿದೆ?

ಶ್ರೀ ಅರವಿಂದ ಲಿಂಬಾವಳಿ :. ಇವೆಲ್ಲವನ್ನು ನಿರ್ಣಯಕ್ಕೆ ತೆಗೆದುಕೊಂಡು ಈ ಬಿಲ್ ಅನ್ನು ಮಂಡನೆ ಮಾಡಿದ್ದೀವಿ. ಏಕೆಂದರೆ, ಕಳೆದ ಒಂದು ವರ್ಷದಿದ ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಬೇರೆ ಬೇರೆ ರಾಜ್ಯಗಳಲ್ಲಿ 42 ಕಡೆಗಳಲ್ಲಿ ಇದೆ. ಮತ್ತು Foreign University ಗಳು ಬರುವಂತಹ ಎಲ್ಲಾ ಹೆದರಿಕೆ ನಮಗೆ ಇದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಬಹಳ ದೊಡ್ಡದಾಗಿ Prestige ಮಾಡಿಕೊಳ್ಳುವ ಅಗತ್ಯವಿಲ್ಲವೆಂದು ಅನಿಸುತ್ತದೆ. ಮೊದಲನೆಯದಾಗಿ ನಾವು ಅಜೀಂ ಪ್ರೇಮ್‌ಜಿ ಬಗ್ಗೆ ಏನು ಮಾತನಾಡಿಲ್ಲ. ಅವರಿಗೆ ಆ capacity ಇಲ್ಲ, International Standard Institution ಅನ್ನು ತೆಗೆಯುವಂಥ ಶಕ್ತಿ ಇಲ್ಲ. ಅವರ foundation ಗೆ ಎಲ್ಲಾ ಶಕ್ತಿಗಳು

ಇದೆಯೆಂದು ನಾವು ಅಂದು ಕೊಂಡರೂ ಕೂಡ, ನೀವು ಹೊಸದಾಗಿ ಖಾಸಗಿ University ಯನ್ನು ತೆಗೆಯುತ್ತಿದ್ದೀರಿ. ಅದನ್ನು ತೆಗೆದಮೇಲೆ flood gate open ಮಾಡಿದ ಹಾಗೆ ಆಗುತ್ತದೆ, ಬಹಳ ಜನರು ನಮಗೆ University ಬೇಕೆಂದು ಮಾಡುತ್ತಾರೆ. ಇವತ್ತಿನವರೆಗೂ ಮಾನ್ಯ ಅಜೀಂ ಪ್ರೇಮ್‌ಜಿ ಯವರು ಯಾವುದೇ education institutions ಗಳನ್ನು ನಡೆಸುತ್ತಿಲ್ಲ. ನನಗೆ ಗೊತ್ತಿರುವ ಮಟ್ಟಿಗೆ ಅವರು I.T. industry ಯನ್ನು ಮಾಡುತ್ತಿದ್ದಾರೆ, ಬೇರೆ business ಮಾಡುತ್ತಿರಬಹುದು. ಅವರು I.T. industry ಯಲ್ಲಿ global level ನಲ್ಲೂ ಒಳ್ಳೆಯ ಹೆಸರನ್ನು ಮಾಡಿದ್ದಾರೆ. O.K. fine. The question is ನಮಗೆ ಬೇಕಾಗಿರುವಂಥದ್ದು, ನಮ್ಮ ಕರ್ನಾಟಕದಲ್ಲಿ quality education, higher education 11.5% ಸಿಗುತ್ತಿರುವಂಥದ್ದು. ನಾವು ಎಲ್ಲರಿಗೂ Quality education ಕೊಡಬೇಕು, ಅದಕ್ಕೋಸ್ಕರ ಅದನ್ನು ಉನ್ನತೀಕರಿಸುವುದಕ್ಕಾಗಿ, knowledge ಎಲ್ಲರಿಗೂ ಸಿಗುವಂತೆ ಮಾಡಬೇಕು, ಗುಣಮಟ್ಟದ ಶಿಕ್ಷಣ ಸಿಗಬೇಕೆಂಬ ಉದ್ದೇಶ ಏನು ಇದೆ. ಆ ಉದ್ದೇಶ, ಇದರಿಂದ ಈಡೇರುತ್ತದೆಂದು ನನಗನಿಸುವುದಿಲ್ಲ. ಇದರ ಜೊತೆಗೆ ಅವರಿಗೆ ಬಹಳ ದೂರದೃಷ್ಟಿ ಇದೆ. OK. Chief Minister is convinced ಅವರು ಆದರ ಬಗ್ಗೆ ಎಲ್ಲಾ ಮಾಡಿದ್ದಾರೆ, ಶಿಕ್ಷಣವೆಲ್ಲಾ ಮಾಡುತ್ತಾರೆ. ಅದಕ್ಕೋಸ್ಕರನೇ ಇದರ ಎಲ್ಲಾ ಸಾಧಕ ಭಾದಕಗಳನ್ನೆಲ್ಲಾ ಚರ್ಚೆ ಮಾಡಿ, ನಮಗೆ ಇರುವಂಥ ಅನುಮಾನ ಮತ್ತು ಸಂಶಯಗಳನ್ನು ಕೂಡ ಬಗೆಹರಿಸಲು ಸಾಧ್ಯವಾಗುತ್ತದೆ. ಈ ವಿಷಯವಾಗಿ ಆಡಳಿತ ಪಕ್ಷದಿಂದ ಡಾ: ಸಾರ್ವಭೌಮ ಬಗಲಿಯವರು ಮಾತನಾಡಿದರು. ಈ ರೀತಿ ಇರುವಾಗ ನೀವು Joint Select Committee ಗೆ ಒಪ್ಪಿಕೊಳ್ಳಲು ಏನು ತೊಂದರೆ ಇದೆ? ಹಿಂದೆಯೂ ಈ ರೀತಿಯಲ್ಲಿ ಆಗಿಲ್ಲವೇ? ಒಂದು ಹೊಸ ಕ್ರಾಂತಿಕಾರಕ ಬದಲಾವಣೆಯನ್ನು ತರುತ್ತೇವೆಂದು ಹೇಳಿ. ಅದ್ಭುತವಾದ ಕಲ್ಪನೆಯದು ಹೇಳುತ್ತಿದ್ದೀರಿ. ನಮ್ಮ teacher ಗಳಿಗೆ international standard quality ಅವರಿಗೆ ಇರಬೇಕು. ನಮ್ಮ ಮಕ್ಕಳಿಗೆ international standard ನಲ್ಲಿ complete ಮಾಡುವ ಶಕ್ತಿ ಬರಬೇಕು. ಅದಕ್ಕೋಸ್ಕರ ಆ ರೀತಿಯಲ್ಲಿ training ಕೊಡಬೇಕು. ಆ ರೀತಿಯ training ಕೊಡಬೇಕೆಂದರೆ ಆ ತರಹದ training institute is suggested by

Dr.G.Parameshwar. ನೀವು ಅದನ್ನೇ ಕೊಡಿ, ಅವರ foundation ಮಾಡಲಿ. ಅಲ್ಲಿ ಬಡವರ ಮಕ್ಕಳನ್ನು ಸೇರಿಸೋಣ, ಅವರನ್ನು ಚೆನ್ನಾಗಿ ತಯಾರು ಮಾಡಲಿ. ಆ ರೀತಿ ಬೇರೆ ಬೇರೆ ಜಿಲ್ಲೆಗಳಲ್ಲೂ ಮಾಡಲಿ, ಅವರ ಹೆಸರಿನಲ್ಲಿ Private University ಯೇ ಏಕೆ ಬೇಕು? ಅವರಿಗೆ ಜೀವನ ಪರ್ಯಂತ ಅವರು ಇರುವವರೆಗೂ ಒಂದು University ಯನ್ನು ಮಾಡಿ ಕೊಡುವುದು ಏಕೆ? ಅದಕ್ಕೆ ಈ ಎಲ್ಲಾ ವಿಷಯಗಳನ್ನು ಚರ್ಚೆ ಮಾಡುವುದ ಕೋಸ್ಕರವಾಗಿ, ನೀವು ಇದನ್ನು prestige ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ನಾನು ಈಗಲೂ I request the Government to constitute a Joint Select Committee. Let Joint Select Committee go in to in detail and come out with a report. ಅಮೇಲೆ ಚರ್ಚೆ ಮಾಡಿ ಏನು ಮಾಡಬೇಕೆಂಬ ತೀರ್ಮಾನವನ್ನು ಮಾಡೋಣ. ಅದು ಬಿಟ್ಟು ನೀವೇ ಏಕೆ ಅದಕ್ಕೆ ಹಠ ಮಾಡುವುದಕ್ಕೆ ಹೋಗುತ್ತೀರಿ. Chief Minister ಮಾಡುತ್ತಾರೆಂದು ನಾನು ಅಂದು ಕೊಂಡಿದ್ದೇನೆ. ದಯವಿಟ್ಟು ತಾವು ಅದನ್ನು ಮಾಡಿ.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಈ ಶಾಸನ ಈ ಮನೆಯ ಇತಿಹಾಸದಲ್ಲಿ ಒಂದು ಕೆಟ್ಟ ಕಾನೂನನ್ನು ನಿರ್ಮಾಣ ಮಾಡುತ್ತಿದೆ. ತಾವು ಎಷ್ಟು ಬಾರಿ ಇಲ್ಲಿ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ಆಗ Joint Select Committee ಎಷ್ಟು ಸಾರಿ ಆಗಿಲ್ಲ. ಹಿಂದೆ ಭೂಮಿ ಒತ್ತುವರಿ ಪ್ರಕರಣ ಬಂದಾಗ ಮಾನ್ಯ ಬೊಮ್ಮಾಯಿಯವರು ಕಂದಾಯ ಮಂತ್ರಿಗಳಾಗಿದ್ದರು. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು. ಆಗ ಇದನ್ನು Joint Select Committee ಗೆ ಕೊಟ್ಟರು, ಮತ್ತೆ drug policy ಮಾಡುವಾಗ ನಾನು ಮಾನ್ಯ ಮುಖ್ಯಮಂತ್ರಿ ಯವರನ್ನು ಕೇಳದೇ ಮಾನ್ಯ ನಾಡಗೌಡರ ಅಧ್ಯಕ್ಷತೆಯಲ್ಲಿ Joint Select Committee ಯನ್ನು constitute ಮಾಡಿದ್ದೆ. Establishment of Nursing Home bill ಮಾಡುವಾಗ ಮಾಡಿದ್ದೆವು. ತಾವು ದಯಮಾಡಿ prestige ಮಾಡಿಕೊಳ್ಳದೆ ನಿಮ್ಮ ಮನಸ್ಸಿನಲ್ಲಿ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಮಾಡುವ ಬಗ್ಗೆ ನಾವು ವಿರುದ್ಧವಾಗಿಲ್ಲ. ಆದರೆ ಈ ಒಂದು ವಿಶ್ವವಿದ್ಯಾಲಯ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಸರ್ಕಾರ ಮಾಡುವಾಗ ಅದರ ಬಗ್ಗೆ

ಚರ್ಚೆ ಮಾಡುವ ಅಧಿಕಾರ ಈ ಮನೆಯ ಎಲ್ಲಾ ಸದಸ್ಯರಿಗೂ ಇದೆ. ಉನ್ನತ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ, ನಮ್ಮ ಮಕ್ಕಳಿಗೆ ತರಬೇತಿಯನ್ನು ಕೊಡುವುದಕ್ಕೆ ಇಂಥ ಒಂದು ಮಹತ್ತರವಾದಂಥ ನಿಲುವನ್ನು ತಾಳುವಾಗ ಮೂರು ತಿಂಗಳ ಕಾಲ ಸಮಯ ಕೊಡಬೇಕು. ನಿಮಗೆ ಅನುಭವವಿದೆ, ಹೋರಾಟದ ಹಿನ್ನಲೆ ಇದೆ, ಸುದೀರ್ಘವಾದ ರಾಜಕೀಯ ಹಿನ್ನಲೆಯನ್ನು ಇಟ್ಟುಕೊಂಡು, ಈ ಕಾಯಿದೆಯನ್ನು Pass ಮಾಡಿಕೊಳ್ಳೋಣ, University Grant Commission ಏನಾದರೂ objection ಮಾಡಿದರೆ ಸರಿ ಮಾಡೋಣವೆನ್ನುವಂಥ ಮಾತುಗಳು ಮತ್ತು ತರಾತುರಿಯಲ್ಲಿ ಈ ಕಾಯಿದೆಯನ್ನು ಅಂಗಿಕಾರ ಮಾಡುವುದಕ್ಕೆ ಮೊದಲೇ ತಾವು ದಯಮಾಡಿ ...

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಇದರ ಜೊತೆಗೆ ಬೇರೆ ಬೇರೆ ರಾಜ್ಯಗಳಲ್ಲಿ.. ..

Dr. H.C. MAHADEVAPPA : Time and again we are appealing the Government to- re-consider an subject this matter to the Joint Select Committee. Time and again we are appealing to the Government.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅದ್ಯಕ್ಷರೆ, ನಾವು ಯಾವಾಗ ಅನುಮಾನ ಪಡಬೇಕು? ಮೊದಲನೆಯದಾಗಿ ಆ ವ್ಯಕ್ತಿಗೆ ಆ ಶಕ್ತಿ ಇಲ್ಲ, ಆ capacity ಇಲ್ಲ, ಆ ರೀತಿಯ ಪ್ರಶ್ನೆಗಳು ಬಂದಾಗ ಯೋಚನೆ ಮಾಡಬೇಕು. ಎರಡನೆಯದಾಗಿ, ಈಗಾಗಲೇ ಈ ದೇಶದಲ್ಲಿ 42 ವಿಶ್ವವಿದ್ಯಾಲಯಗಳನ್ನು ಖಾಸಗಿಯವರು ಪ್ರಾರಂಭ ಮಾಡಿರುವಂಥ ಉದಾಹರಣೆಗಳು ಇವೆ. ಮೂರನೆಯದಾಗಿ, ಅಜೀಂ ಪ್ರೇಮ್‌ಜಿಯಂಥವರು ಮುಂದೆ ಬರುವುದೇ ಅಪರೂಪ. ಆ ರೀತಿ ದೊಡ್ಡವರು ಕರ್ನಾಟಕ ರಾಜ್ಯದಲ್ಲಿ ಏನಾದರೂ ಒಂದು ಒಳ್ಳೆಯ ಕೆಲಸವನ್ನು ಮಾಡಬೇಕೆಂದು ಮುಂದೆ ಬಂದಾಗ, ಎಲ್ಲದರೂ ಇದಕ್ಕೆ ನಾವು ಎಳೆದಾಡುತ್ತೇವೆಂಬ message ಹೋದರೆ, ಅವರು ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ. ನಾಲ್ಕನೆಯದಾಗಿ ಬಹಳ ಮುಖ್ಯವಾಗಿ ನಾವು ಇಲ್ಲಿ bill pass ಮಾಡಿದ ಮೇಲೂ ಇದಕ್ಕೆ UGC ಒಪ್ಪಿಗೆ ಕೊಡಬೇಕು. ಒಂದು ಸದುದ್ದೇಶದಿಂದ ಇಲ್ಲಿ ಇರುವಂಥ ನಮ್ಮ ಶಿಕ್ಷಕರಿಗೆ, ಮಕ್ಕಳಿಗೆ ತರಬೇತಿಯ ಶಿಕ್ಷಣವನ್ನು ಕೊಡುತ್ತೇವೆಂಬ ಸದ್ಭಾವನೆಯಿಂದ

ಮುಂದೆ ಬಂದಾಗ, ಮತ್ತು ಈ ಕಮಿಟಿಯಲ್ಲಿ ನಮ್ಮ Higher education ಮತ್ತು Primary education ಎರಡೂ ಇಲಾಖೆಗಳ Secretary ಗಳು ಇರುತ್ತಾರೆ. ಇದರಲ್ಲಿ ನಮ್ಮ control ಇರುತ್ತದೆಂದು ಆದಮೇಲೆ, ಇಲ್ಲಿ ನಾವು Joint Select Committee ಯೋಚನೆ ಮಾಡುವಂಥದ್ದು, ಅದರಲ್ಲಿ ನೋಡುವಂಥದ್ದು ಏನು ಇದೆ? ಈ ರೀತಿ ಇಡೀ ದೇಶದಲ್ಲಿ ಒಂದು ಹೊಸ ವಿಶ್ವವಿದ್ಯಾಲಯವನ್ನು ಖಾಸಗಿಯವರಿಗೆ ಮಾನ್ಯ ಯಡಿಯೂರಪ್ಪನವರೆ ಕೊಡುತ್ತಿದ್ದೀರಿ. ಇದರ ಸಾಧಕ ಭಾದಕಗಳ ಕಲ್ಪನೆ ನಿಮಗೆ ಇಲ್ಲವೆಂದು ಹೇಳಿದರೆ ನಾವು ಅದಕ್ಕೆ ಖಂಡಿತವಾಗಿ ತಲೆ ಬಾಗುತ್ತೇವೆ. ಆದರೆ ಈಗಾಗಲೇ ಪ್ರಾರಂಭವಾಗಿದೆ, ಈಗ 42 ಖಾಸಗಿ ವಿಶ್ವವಿದ್ಯಾಲಯಗಳು ಪ್ರಾರಂಭವಾಗಿರುವುದರಿಂದ ಏನು ಕೊರತೆಗಳು ಇವೆ, ಅವುಗಳನ್ನು ಸರಿಪಡಿಸಿಕೊಂಡು, ಇಲ್ಲಿ ಆ ರೀತಿಯಲ್ಲಿ ಏನು ಕೊರತೆಯಾಗದಂತೆ ನೇರವಾಗಿ ಈ ವರ್ಷದಲ್ಲೆ ಪ್ರಾರಂಭ ಮಾಡುವುದಕ್ಕೆ ಎಲ್ಲಾ ಸಿದ್ಧತೆಗಳು ಆಗುತ್ತಿರುವಂಥ ಈ ಕಾಲದಲ್ಲಿ, ಇದು ತಡವಾಗಬಾರದೆಂಬ ಸದುದ್ದೇಶ ಬಿಟ್ಟು ಇದರಲ್ಲಿ ಬೇರೆ ಭಾವನೆಗಳು ಏನೂ ನಮಗೆ ಇಲ್ಲ. ತಾವು ಪ್ರತಿ ಪಕ್ಷದಲ್ಲಿದ್ದುಕೊಂಡು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಬೇಕು, ಆತಂಕವನ್ನು ವ್ಯಕ್ತಪಡಿಸಬೇಕು. ಅದರ ಬಗ್ಗೆ ಎರಡು ಮಾತಿಲ್ಲ. ಆ ಸಂಪೂರ್ಣ ಸ್ವಾತಂತ್ರ್ಯ ನಿಮಗೆ ಇದೆ. ನಾನು ಮಾನ್ಯ ಪ್ರತಿ ಪಕ್ಷದ ನಾಯಕರಲ್ಲಿ ವಿನಂತಿ ಮಾಡುವುದೇನೆಂದರೆ, ದಯಮಾಡಿ ಇದಕ್ಕೆ ಯಾವುದೇ ಅಡ್ಡಿಯನ್ನು ಮಾಡದೇ, ಇದನ್ನು ಸರ್ವಾನುಮತದಿಂದ pass ಮಾಡಿ ಕೊಡಬೇಕೆಂದು ಮತ್ತೊಮ್ಮೆ ನಾನು ವಿನಂತಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇವರು ಏನು ಬಿಡುವ ಹಾಗೆ ಕಾಣುತ್ತಿಲ್ಲ.

ಡಾ: ಜಿ.ಪರಮೇಶ್ವರ್ : ಮಾನ್ಯ ಅಧ್ಯಕ್ಷರೆ, ನಾವು ಮಾನ್ಯ ಮುಖ್ಯಮಂತ್ರಿಯವರ ಸದುದ್ದೇಶವನ್ನು, ಸರ್ಕಾರದ ಸದ್ದುದ್ದೇಶವನ್ನು ಪ್ರಶ್ನೆ ಮಾಡುತ್ತಿಲ್ಲ. ತಾವು ದಯಮಾಡಿ ಅರ್ಥ ಮಾಡಿಕೊಳ್ಳಿ, ನಾನು ಒಂದೇ ಒಂದು Provision ಅನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ. "The Current Chair Person of the sponsoring body shall be the First Chancellor who shall hold the office of the Chancellor for life." ಇದನ್ನು ನಾವು ಒಪ್ಪಿಕೊಳ್ಳಬೇಕೆಂದರೆ ಹೇಗೆ ಆಗುತ್ತದೆ? ನೀವು ಅವರಿಗೆ ಕೊಡಿ, ನೀವು ಒಳ್ಳೆಯ ಕೆಲಸವನ್ನು

ಮಾಡುತ್ತಿದ್ದೀರಿ. ಅಜೀಂ ಪ್ರೇಮ್‌ಜಿಯವರನ್ನು ಶಿಕ್ಷಣ ಕ್ಷೇತ್ರಕ್ಕೆ ತರುವುದ್ದರಿಂದ ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೀರಿ. ನಾವು ಅದರ ಬಗ್ಗೆ ಪ್ರಶ್ನೆ ಇಲ್ಲ, ಆದರೆ ನಮ್ಮ ಪ್ರಶ್ನೆ ಏನೆಂದರೆ ಕಾನೂನನ್ನು ಮಾಡುವಾಗ ಸರಿಯಾದ ಕಾನೂನನ್ನು ಮಾಡಬೇಕೆಂಬುದೇ ಇರುವುದು. ತಾವು ಇದನ್ನು ಎರಡು ತಿಂಗಳು Joint Select Committee ಗೆ ಹಾಕಿ, ಈಗ ರಾಷ್ಟ್ರದಲ್ಲಿ 42 University ಗಳನ್ನು ಮಾಡಿದ್ದಾರೆಂಬ ಮಾತು ಇದೆ. ಈ 42 University ಗಳ act ಅನ್ನು ನಾವು ನೋಡೋಣ. ಇದರಲ್ಲಿ ಯಾವ್ಯಾವ Provision include ಮಾಡಿದ್ದಾರೆಂಬುದನ್ನು ನೋಡೋಣ. ನಮಗೆ ಏನು ಗೊತ್ತಿಲ್ಲ. Chancellor for life ಎಂದು ಯಾವುದಾದರೂ University ಯಲ್ಲಿ ಮಾಡಿದ್ದಾರ? ಯಾವ University ಯಲ್ಲೂ ಮಾಡಿಲ್ಲ. ಆದುದರಿಂದ ನಾವು ಅದೆಲ್ಲವನ್ನು ನೋಡೋಣ.

ಶ್ರೀ ಅರವಿಂದ ಲಿಂಬಾವಳಿ : ನೀವು ಪಕ್ಕದಲ್ಲಿರುವ ತಮಿಳುನಾಡು ರಾಜ್ಯಕ್ಕೆ ಹೋದರೆ ಅಲ್ಲಿ ಏನು ಕಾನೂನು ಇದೆಯೆಂಬುದು ನೋಡಬಹುದು.

ಡಾ: ಜಿ. ಪರಮೇಶ್ವರ್ : ನಮಗೆ ಗೊತ್ತಿಲ್ಲ. ತಾವು ಈಗ ಹೇಳುತ್ತಿದ್ದೀರಿ, ಅದನ್ನೇ ನೋಡೋಣ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಮುಗಿಸಿ, ಇಲ್ಲವೆಂದರೆ ನಾನು ಮತಕ್ಕೆ ಹಾಕುತ್ತೇನೆ.

ಶ್ರೀ ಅಮರೇಗೌಡ ಬಯ್ಯಾಪುರ : ದೇಶದಲ್ಲಿ, ಬೇರೆ ರಾಜ್ಯದಲ್ಲಿ, ಇನ್ನಿತರ ಕಡೆಗಳಲ್ಲಿ ಈ ರೀತಿ ಇದ್ದರೆ ನಾವು ಒಪ್ಪೋಣ.

ಶ್ರೀ ಬಸವರಾಜ ಬೊಮ್ಮಾಯಿ : ಡಾ: ಪರಮೇಶ್ವರ್‌ರವರು Life time Chancellor ಬಗ್ಗೆ ಹೇಳಿದರು. ಆ ವಿಷಯದ ಬಗ್ಗೆ ಹೇಳುತ್ತೇನೆ.

ಡಾ: ಜಿ.ಪರಮೇಶ್ವರ್ : ಆ ಬಗ್ಗೆ ನಮ್ಮದು ಏನು ತಕರಾರು ಇಲ್ಲ. ಇದರಲ್ಲಿ donation ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. You are simply contravening the Act of 1993 Donation Abolition Act. ಇವೆಲ್ಲಾ ತಪ್ಪಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಗಮನಿಸಬೇಕು, ಏಕೆಂದರೆ ತಾವು ಕಾನೂನನ್ನು ಮಾಡುತ್ತಿದ್ದೀರಿ, ತಪ್ಪು ಕಾನೂನು ಮಾಡುವುದು ಬೇಡ. ದಯಮಾಡಿ ತಾವು 2,3 ತಿಂಗಳು ಸಮಯ ಕೊಡುವುದಕ್ಕೆ ಆಗುವುದಿಲ್ಲ

ವೆಂದರೆ ನಾವು ಇನ್ನು ಏನು ಹೇಳಬೇಕು? ನಾವು ನಿಮಗೆ ವಿರುದ್ಧ ಮಾಡಿದ್ದರೆ, ನಿಮಗೆ ಮಾಡಿ ಕೊಡುವುದಿಲ್ಲವೆಂದು ಹೇಳಿದ್ದರೆ, ನೀವು ಬಿಲ್ ಅನ್ನು ಪಾಸ್ ಮಾಡಿಕೊಳ್ಳಿ, ಆದರೆ ನಾವು ಸಲಹೆ ಕೊಡುತ್ತೇವೆ, ಒಳ್ಳೆಯ ರೀತಿಯಲ್ಲಿ ಕಾನೂನು ಮಾಡೋಣವೆಂದರೆ, ಅದಕ್ಕೆ ನೀವು ಸಹಕಾರ ಕೊಡುವುದಿಲ್ಲವೆಂದರೆ ಇನ್ನು ನಾವು ಏನು ಮಾಡೋಣ ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ : ಪರಮೇಶ್ವರ್ ಬಹಳ ಗೌರವವಿರುವಂಥವರು. Life time Chancellor ಬಗ್ಗೆ ಹೇಳಿದಿರಲ್ಲ, ... ಚರ್ಚೆ ಬೇಡವೇ? ಹಾಗಿದ್ದರೆ ಮತಕ್ಕೆ ಹಾಕಿ ಅಧ್ಯಕ್ಷರೆ.

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಶ್ರೀ ಸಿದ್ದರಾಮಯ್ಯ : ಸರ್ಕಾರ ಒಂದು ಪ್ರೆಸ್ಟೀಜ್‌ಗೆ ಅಂಟಿಕೊಂಡು....

ಶ್ರೀ ಬಸವರಾಜ ಬೊಮ್ಮಾಯಿ : ನವು ಉತ್ತರ ಕೊಡುತ್ತೇವೆ ಎಂದರೆ ಬೇಡ ಎಂದು ಹೇಳುತ್ತೀರಲ್ಲ.

ಶ್ರೀ ಸಿದ್ದರಾಮಯ್ಯ : ಬೇಡವೆಂದು ನಾವು ಎಲ್ಲಿ ಹೇಳಿದ್ದೇವೆ. ಉತ್ತರ ಕೊಡುವುದು ಬೇಡ ಎಂದವರು ಯಾರು? Section 9 ರಲ್ಲಿ, ಜೀವನ ಪರ್ಯಂತ ಅವರೇ Chancellor ಆಗಿರಬೇಕು, ಕಾನೂನಿನಲ್ಲಿ ಇದನ್ನೆಲ್ಲ ಬದಲಾವಣೆ ಮಾಡಬಾರದು, ಬೇರೆ ಕಡೆ ಯಾವ ಯೂನಿವರ್ಸಿಟಿಗಳಲ್ಲಿ ಈ ರೀತಿ ಇದೆ ಎನ್ನುವುದನ್ನೂ ನೋಡುವುದಕ್ಕೆ ಬಿಡುವುದಿಲ್ಲ ಎಂದರೆ ಇವರು ಮಾಡುತ್ತಿರುವುದು ಪ್ರಜಾಪ್ರಭುತ್ವದ ರೀತಿಯೇ? ಪ್ರಜಾಪ್ರಭುತ್ವದಲ್ಲಿ ಇಂಥವುಗಳಿಗೆಲ್ಲ ಅವಕಾಶ ಮಾಡಿಕೊಡಬೇಕೇ/ ಸಂವಿಧಾನಕ್ಕೆ ವಿರುದ್ಧವಾಗಿ ತಂದಿರುವ ಇದನ್ನು ಮಾಡಲಿಕ್ಕೆ ನಮ್ಮ ವಿರೋಧ ಇದೆ, ಇದನ್ನು ಮಾಡಲಿಕ್ಕೆ ಬಿಡುವುದಿಲ್ಲ.. Quality education ಬೇಕು ಎಂದರೆ, ಯಾರಿಗೆ Quality education ಕೊಡುವುದು?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಉತ್ತರ ಕೊಟ್ಟಿದ್ದೇವೆ, ಸರ್ಕಾರದ ನಿಲುವು ಏನು ಎಂದು ಸ್ಪಷ್ಟಪಡಿಸಿದ್ದೇವೆ, ಸಾಕಷ್ಟು ವಿವರವಾಗಿ ಹೇಳಿದ್ದೇವೆ. ಮುಖ್ಯಮಂತ್ರಿಗಳೂ ಹೇಳಿದ್ದಾರೆ. ಎಲ್ಲರೂ ಸಮರ್ಪಕವಾದ ಉತ್ತರ ಕೊಟ್ಟಿದ್ದಾರೆ.

(ಗೊಂದಲ)

(ಈ ಹಂತದಲ್ಲಿ ಅಧ್ಯಕ್ಷರು ವಿಧೇಯಕದ ಪರ್ಯಾಲೋಚನಾ ಪ್ರಸ್ತಾವವನ್ನು ತೆಗೆದು ಕೊಂಡರು ಹಾಗೂ ಇದನ್ನು ವಿರೋಧಿಸಿ ವಿರೋಧ ಪಕ್ಷಗಳ ಸದಸ್ಯರು ಧರಣಿಗಾಗಿ ಸದನದ ಬಾವಿಗೆ ಬಂದರು ಮತ್ತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ;

"2010ರ ಅಜಿಂ ಪ್ರೇಮ್‌ಜಿ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 58ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 58 ರವರೆಗೆ ಎರಡು ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 58ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವದ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2010ರ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2010ರ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ವಿಧೇಯಕದ ಪ್ರಸ್ತಾವ ಅಂಗೀಕಾರವಾಗುವವರೆಗೆ ಧರಣಿ ನಿರತರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು ಮತ್ತು ಸದನದ ಬಾವಿಯಿಂದ ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ಒಂದು ಪ್ರಕಟಣೆ ಇದೆ.

8. ಪ್ರಕಟಣೆ :

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ, ಕರ್ನಾಟಕ ವಿಧಾನ ಪರಿಷತ್ತು ದಿನಾಂಕ: 12-3-2010ರಂದು, 2009ನೇ ಸಾಲಿನ ದಂಡ ಪ್ರಕ್ರಿಯೆ ಸಂಹಿತೆ, ಕರ್ನಾಟಕ (ತಿದ್ದುಪಡಿ) ವಿಧೇಯಕವನ್ನು ಯಾವುದೇ ತಿದ್ದುಪಡಿಗಳಿಲ್ಲದೇ ಅಂಗೀಕರಿಸಲಾಗಿದೆ" ಎಂದು ತಿಳಿಸಿರುತ್ತಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : This is anti democratic, anti constitutional . . . .

(ಗೊಂದಲ)

ಅಧ್ಯಕ್ಷರು : ಈಗ ಅಲಿಯನ್ಸ್ ವಿಶ್ವವಿದ್ಯಾಲಯ ವಿಧೇಯಕ, 2010 ಅನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳೋಣ.

9. ಶಾಸನ ರಚನೆ :

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಅಲಿಯನ್ಸ್ ವಿಶ್ವವಿದ್ಯಾಲಯ ವಿಧೇಯಕ, 2010

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2010ರ ಅಲಿಯನ್ಸ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇದನ್ನು ಇನ್ನೂ introduce ಮಾಡಿಲ್ಲ.

ಅಧ್ಯಕ್ಷರು : Introduce ಆಗಿದೆ. ನೀವು discuss ಮಾಡಿ.

Sri Siddaramaiah : It has not come up. He has not moved it.

Mr. Speaker : It is moved.

(ಗೊಂದಲ)

Sri Siddaramaiah : It is not taken up for discussion.

Mr. Speaker : Discuss it.

ಶ್ರೀ ಸಿದ್ದರಾಮಯ್ಯ : Discuss ಮಾಡುತ್ತೇವೆ, ಇದನ್ನು ನಾಳೆ ಮಾಡಿ, ಇವತ್ತು ಏಕೆ ಮಾಡುತ್ತೀರಿ?

(ಗೊಂದಲ)

ಅಧ್ಯಕ್ಷರು : ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ನಾನು ವಿನಂತಿಯನ್ನು ಮಾಡುತ್ತೇನೆ, ಎಲ್ಲ ಸದಸ್ಯರು ತಮ್ಮ ಸ್ಥಾನಗಳಿಗೆ ಹೋಗಿ ಚರ್ಚೆಯಲ್ಲಿ ಭಾಗವಹಿಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು protest ಮಾಡುವಾಗ ನೀವು ಇದನ್ನು introduce ಮಾಡಿದರೆ ಹೇಗೆ?

ಅಧ್ಯಕ್ಷರು : ಈಗಾಗಲೇ introduce ಆಗಿದೆ. Don't mistake. ಚರ್ಚೆ ಮಾಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಾವು ಅಜೆಂಡಾದಲ್ಲಿ ಇದನ್ನು ಕಳುಹಿಸಿದ್ದೀರಿ, ಇದು move ಆಗಿದೆ. Move ಮಾಡಿಲ್ಲ ಎಂದು ವಾದ ಮಾಡುವುದು ಸರಿಯಲ್ಲ, ಈಗಾಗಲೇ move ಮಾಡಿದ್ದಾರೆ.

(ಗೊಂದಲ)

Sri Siddaramaiah : The House is not in order. How can we discuss it?

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಮಾಡುತ್ತಿರುವಂಥ ಯಾವುದೇ ಒಳ್ಳೆಯ ಕೆಲಸಕ್ಕೆ ಮತ್ತು ಕ್ರಾಂತಿಕಾರಕ ಕೆಲಸಕ್ಕೆ ನಿಮ್ಮಿಂದ ಸಹಕಾರ ಸಿಗುತ್ತಿಲ್ಲ. ಪ್ರತಿಯೊಂದಕ್ಕೂ ಪ್ರತಿಭಟನೆ ಮಾಡುವುದರಿಂದ ಏನು ಸಾಧನೆ ಮಾಡಿದ ಹಾಗಾಗುತ್ತದೆ? ಚರ್ಚೆ ಮಾಡೋಣ ಬನ್ನಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಪ್ರತಿಭಟನೆ ವ್ಯಕ್ತಪಡಿಸಿದ್ದೀರಿ. ಈಗ ಮುಂದಿನ ವಿಷಯಕ್ಕೆ ಹೋಗೋಣ ಬನ್ನಿ.

(ಗೊಂದಲ)

ಅಧ್ಯಕ್ಷರು : ಧರಣಿಯಿದ್ದರೂ ಮಾಡಬಹುದು ಎಂದು ಲೋಕಸಭೆಯಲ್ಲೂ ಅನೇಕ ತೀರ್ಮಾನಗಳಾಗಿವೆ. ಅದರ ಬಗ್ಗೆ ಸಾಕಷ್ಟು precedents ಇವೆ.

(ಗೊಂದಲ)

(ಗೊಂದಲದ ನಡುವೆಯೇ ಅಧ್ಯಕ್ಷರು ವಿಧೇಯಕದ ಪರ್ಯಾಲೋಚನಾ ಪ್ರಸ್ತಾವ ಹಾಗೂ ಅಂಗೀಕಾರ ಪ್ರಸ್ತಾವಗಳನ್ನು ತೆಗೆದುಕೊಂಡರು ಮತ್ತು ವಿಧೇಯಕಕ್ಕೆ ಧ್ವನಿ ಮತದ ಅಂಗೀಕಾರ ದೊರೆಯಿತು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2010ರ ಅಲಿಯನ್ಸ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂಧ 58ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 58ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 58ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವದ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2010ರ ಅಲಿಯನ್ಸ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2010ರ ಅಲಿಯನ್ಸ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ವಿಧೇಯಕ ಪ್ರಸ್ತಾವ ಅಂಗೀಕಾರವಾಗುವವರೆಗೆ ಧರಣಿ ನಿರತರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು ಮತ್ತು ಸದನದ ಬಾವಿಯಿಂದ ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡುತ್ತಿದ್ದರು)

(ವಿಧೇಯಕದ ಪರ್ಯಾಲೋಚನಾ ಪ್ರಸ್ತಾವ ಮತ್ತು ಅಂಗೀಕಾರ ಪ್ರಸ್ತಾವ ನಡೆಯುತ್ತಿದ್ದ ವೇಳೆ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ತಮ್ಮ ಸ್ಥಾನದಲ್ಲಿ ನಿಂತು ಗೊಂದಲದ ನಡುವೆಯೇ ಈ ಕೆಳಕಂಡಂತೆ ಮಾತನಾಡುತ್ತಿದ್ದರು)

ಶ್ರೀ ಸಿದ್ದರಾಮಯ್ಯ : ಅಧ್ಯಕ್ಷರೇ ಏನಿದು? ಮುಖ್ಯಮಂತ್ರಿಗಳೇ ಏನಿದು?

(ಗೊಂದಲ)

Sri Siddaramaiah : What is this? Democracy ಯೇ ಇದು? Is this the Parliamentary syatem of Democracy? Where are you? ಮಾನ ಮರ್ಯಾದೆ ಇದೆಯೇನ್ರೀ ನಿಮಗೆ? ಎಲ್ಲಾ ಬಿಲ್‌ಗಳನ್ನು ಪಾಸ್ ಮಾಡಿಕೊಳ್ಳುತ್ತಿದ್ದೀರೇನು?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಸನ್ಮಾನ್ಯ ಅಧ್ಯಕ್ಷರೆ, we are boycotting the entire proceedings.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇದು ಸರ್ವಾಧಿಕಾರಿ ಧೋರಣೆ. This is too much.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು 17ನೇ ಮಾರ್ಚ್ 2010 ರಂದು ಬುಧವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 3.50 ಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 17ನೇ ಮಾರ್ಚ್ 2010ರ ಬುಧವಾರ ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

* * * * * *

10. ಅನುಬಂಧ – 1

ರಸ್ತೆ ನಿರ್ಮಾಣ

481 (987) ಶ್ರೀ ಅಭಯಚಂದ್ರ ಜೈನ್. ಕೆ. (ಮೂಡಬಿದ್ರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದರೆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಿರ್ತಾಡಿಕಜ್ಜೆ ಯಿಂದ ಹೊಸ ಅಂಗಡಿಯವರೆಗೆ ರಸ್ತೆ ನಿರ್ಮಾಣ ಮಾಡಲು ನಾಲ್ಕು ವರ್ಷಗಳ ಹಿಂದೆ ಮಂಜೂರಾತಿಯಾಗಿದ್ದು, ಇದುವರೆಗೂ ಕಾಮಗಾರಿ ಪ್ರಾರಂಭಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಮಗಾರಿ ಪ್ರಾರಂಭಿಸಲು ವಿಳಂಬಕ್ಕೆ ಕಾರಣಗಳೇನು (ವಿವರ ಒದಗಿಸುವುದು);

ಇ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮೂಡಬಿದರೆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಿರ್ತಾಡಿಕಜ್ಜೆ ಯಿಂದ ಹೊಸ ಅಂಗಡಿಯವರೆಗಿನ ರಸ್ತೆಗೆ ನಾಲ್ಕು ವರ್ಷಗಳ ಹಿಂದೆ ಯಾವುದೇ ಅಂದಾಜು ಮಂಜೂರಾತಿ ಆಗಿರುವುದಿಲ್ಲ. ಆದ್ದರಿಂದ ಕಾಮಗಾರಿ ಪ್ರಾರಂಭಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಮುಂದಿನ ಸಾಲಿನ ವರ್ಷದಲ್ಲಿ ಲಭ್ಯವಾಗುವ ಅನುದಾನದಲ್ಲಿ ಆದ್ಯತೆ ಮೇಲೆ ಕಾಮಗಾರಿಯನ್ನು ತೆಗೆದುಕೊಳ್ಳಬಹುದಾಗಿದೆ.

ನಿರ್ಬಂಧಿತ ಪ್ರದೇಶದ ನಿಯಮ ಸಡಿಲಿಸುವುದು

482 (631) ಶ್ರೀ ಆನಂದ ಸಿಂಗ್ (ವಿಜಯನಗರ-ಬಳ್ಳಾರಿ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬ್ಬು ಬೆಳೆ ನಿಯಂತ್ರಣ ಕಾಯ್ದೆಯಲ್ಲಿ ಕಬ್ಬು ಬೆಳೆ ಪ್ರದೇಶವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಿದ್ದು ಕಬ್ಬು ಬೆಳೆಯುವ ರೈತರು ಸ್ವತಃ ತಾವು ಬೆಳೆದ ಕಬ್ಬನ್ನು ಮುಕ್ತವಾಗಿ ಮಾರಾಟ ಮಾಡುವ ಹಕ್ಕಿನಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ;

ಆ) ಬಂದಿದ್ದಲ್ಲಿ ರೈತರ ಹಿತದೃಷ್ಟಿಯಿಂದ ಕಬ್ಬು ಬೆಳೆ ಪ್ರದೇಶವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸುವ ನಿಯಮವನ್ನು ಸಡಿಲಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ ಎಂದಿನಿಂದ ಜಾರಿಗೊಳಿಸಲಾಗುವುದು?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ಹೌದು, ಕೆಲವು ರೈತ ಸಂಘಟನೆಗಳಿಂದ ಈ ಬೇಡಿಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ನಿರ್ಬಂಧಿತ ಪ್ರದೇಶವೆಂದು ಘೋಷಿಸುವ ನಿಯಮವನ್ನು ಸಡಿಲಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಕರ್ನಾಟಕದಲ್ಲಿ, ಬೇರೆ ರಾಜ್ಯಗಳಲ್ಲಿ ಇರುವಂತೆ, ಪ್ರತಿ ಕಾರ್ಖಾನೆಗೂ ತನ್ನದೇ ಆದ ಮೀಸಲು ಕ್ಷೇತ್ರ ಇರುತ್ತದೆ. ರಾಜ್ಯವು ಕಬ್ಬು ಅಭಿವೃದ್ಧಿ, ಕಬ್ಬು ಸಾಗಾಣಿಕೆ, ಕಬ್ಬಿನ ಬೆಲೆ ಈ ಎಲ್ಲಾ ವಿಷಯವನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದ ಕಬ್ಬು (ನಿಯಂತ್ರಣ) ಕಾಯ್ದೆ 1966 ಇದನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸ ಬೇಕಾಗಿದೆ. ಈ ಕಾಯಿದೆಯ ಕಲಂ 6(1) (ಎ) (ಬಿ) (ಸಿ) (ಡಿ) (ಇ) ಅಡಿಯಲ್ಲಿ ಕಬ್ಬನ್ನು ಕೊಳ್ಳುವ ಸಂಬಂಧವಾಗಿ ನಿಯಮ ರೂಪಿಸಿರುತ್ತದೆ. ಅದರಂತೆ ಪ್ರತಿಯೊಂದು ಸಕ್ಕರೆ ಕಾರ್ಖಾನೆಯು ಸಾಮರ್ಥ್ಯಕ್ಕೆ ತಕ್ಕಂತೆ

ಮೀಸಲು ಕ್ಷೇತ್ರದ ಒಳಗಡೆ ಕಬ್ಬು ಕೊಳ್ಳಬೇಕಿರುತ್ತದೆ. ಮೀಸಲು ಕ್ಷೇತ್ರದಲ್ಲಿ ಕಬ್ಬು ಬೆಳೆಗಾರರು ಅಥವಾ ಕಬ್ಬು ಬೆಳೆಗಾರರ ಸಂಘವು ಕಾರ್ಖಾನೆಗೆ ನೀಡುವ ಕಬ್ಬಿನ ಪ್ರಮಾಣವನ್ನು ನಿಗಧಿ ಮಾಡಿ ಸೂಕ್ತ ಒಪ್ಪಂದ ಮಾಡಿಕೊಂಡು ಅದನ್ನು ಕಡ್ಡಾಯವಾಗಿ ಸಕ್ಕರೆ ಕಾರ್ಖಾನೆಗೆ ಸರಬರಾಜು ಮಾಡಬೇಕು. ಕಾರ್ಖಾನೆಯು ಮೀಸಲು ಕ್ಷೇತ್ರದ ವ್ಯಾಪ್ತಿಯಿಂದ ಹೊರಗೆ ಕಬ್ಬನ್ನು ಸಾಗಾಣಿಕೆ ಮಾಡಲು ನಿರ್ಬಂಧವಿರುತ್ತದೆ. ಈ ಬಗ್ಗೆ ದಿನಾಂಕ: 09–09–2009 ರಂದು ಕರ್ನಾಟಕ ಗೌರವ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ: 31532/2008 ರಲ್ಲಿ ಆದೇಶ ನೀಡಿದ್ದು, ಪ್ರತಿ ಕಾರ್ಖಾನೆಯು ತನ್ನ ಮೀಸಲು ಪ್ರದೇಶದ ಒಳಗಡೆಯಿಂದ ಮಾತ್ರ ಕಬ್ಬನ್ನು ಪಡೆಯ ಬೇಕೆಂದು ಸೂಚಿಸಿದೆ, ಹಾಗೂ ಕಬ್ಬನ್ನು ಹೊರಗೆ ಸಾಗಾಣಿಕೆ ಮಾಡಬೇಕಾದರೆ ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಪರ್ಮಿಟ್ ಪಡೆದು ಸಾಗಾಣಿಕೆ ಮಾಡಬೇಕಾಗಿರುತ್ತದೆ. ಹಾಲಿ ಇರುವ ಕೇಂದ್ರ ಸರ್ಕಾರದ ಕಬ್ಬು (ನಿಯಂತ್ರನ) ಕಾಯ್ದೆಯಂತೆ ಕಬ್ಬನ್ನು ಮುಕ್ತವಾಗಿ ಮಾರಾಟ ಮಾಡಲು ಅವಕಾಶವಿರುವುದಿಲ್ಲ. ಈ ವಿಷಯವನ್ನು ಎಲ್ಲಾ ಕಾರ್ಖಾನೆಗಳಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ತಿಳಿಸಿ ಗೌರವ ಉಚ್ಚ ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಇ) ಕೇಂದ್ರ ಸರ್ಕಾರದ ಕಬ್ಬು (ನಿಯಂತ್ರಣ) ಕಾಯ್ದೆ 1966 ರನ್ವಯ ಇದು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ.

ರಸ್ತೆ ನಿರ್ಮಾಣ

483 (102) ಶ್ರೀ ಸಿ. ಅಪ್ಪಚ್ಚು ರಂಜನ್ ಎಂ.ಪಿ. (ಮಡಿಕೇರಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರಪೇಟೆ ತಾಲ್ಲೂಕು ಹೆಬ್ಬಾಲೆ ಸೂಳಿಕೋಟೆಯ ಒಳಸೇತುವೆ ನಿರ್ಮಾಣ ಆಗಿದ್ದು, ಈ ಸೇತುವೆಗೆ ಹೊಂದಿಕೊಂಡಂತೆ ರಸ್ತೆ ನಿರ್ಮಾಣ ಆಗದಿರಲು ಕಾರಣಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಸೋಮವಾರಪೇಟೆ ಮತ್ತು ಪಿರಿಯಾಪಟ್ಟಣ ತಾಲ್ಲೂಕಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಹೆಬ್ಬಾಳೆ

ಸೂಳೆಕೋಟೆಯ ಬಳಿ ದ್ವಿಪಥದ ಸೇತುವೆ ನಿರ್ಮಾಣವಾಗಿರುತ್ತದೆ. ಸದರಿ ಸೇತುವೆಯು ಹೆಬ್ಬಾಳೆ ಸೂಳೆಕೋಟೆಯ ಜಿಲ್ಲಾ ಮುಖ್ಯ ರಸ್ತೆಯ ಚೈನೇಜ್ 0.00 ಕಿಮೀ ರಲ್ಲಿ ನಿರ್ಮಾಣವಾಗಿರುತ್ತದೆ. ರಸ್ತೆಯ ವಾಹನ ಸಾಂದ್ರತೆಯು 350 ಪಿ.ಸಿ.ಯೂ. ಇರುತ್ತದೆ.

ಸದರಿ ಸೇತುವೆಯ ಕಾಮಗಾರಿಯನ್ನು 1997ರ ವರ್ಷ ದಲ್ಲಿ ಪ್ರಾರಂಭಿಸಿ 2000ನೇ ವರ್ಷದಲ್ಲಿ ಪೂರ್ಣಗೊಳಿಸಲಾಗಿರುತ್ತದೆ. ಈ ಸೇತುವೆಯ ಅಂದಾಜು ಮೊತ್ತ ರೂ.42.00 ಗಳಾಗಿರುತ್ತದೆ. ಸದರಿ ಸೇತುವೆಯ ಕೂಡು ರಸ್ತೆಯು ಹೆಚ್ಚುವರಿ ನೀರಿನ ಹರಿವಿನಿಂದಾಗಿ 9 ಮೀ ಅಗಲದ ಏರಿಯಲ್ಲಿ 3.5 ಅಗಲದ ಏರಿಯು ಜರಿದಿದ್ದು, ಪ್ರಸ್ತುತ ಕೂಡು ರಸ್ತೆ 5 ಮೀ ಅಗಲ ಇರುತ್ತದೆ.

ಈ ಭಾಗದಲ್ಲಿ ದ್ವಿಚಕ್ರ, ನಾಲ್ಕು ಚಕ್ರ ಹಾಗೂ ಟ್ರ್ಯಾಕ್ಟರ್‌ಗಳು ಓಡಾಡುತ್ತಿರುತ್ತವೆ. ಸದರಿ ಹಾನಿಗೊಳಗಾದ ಏರಿಯ ಭಾಗದ ದುರಸ್ತಿಯು ಸೇರಿದಂತೆ ರಸ್ತೆಯ ಅಭಿವೃದ್ಧಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮುಖ್ಯ ಇಂಜಿನಿಯರ್ ರವರಿಗೆ ಸೂಚಿಸಲಾಗಿದೆ. ಪ್ರಸ್ತಾವನೆ ಸ್ವೀಕೃತವಾದ ನಂತರ ಅನುದಾನದ ಲಭ್ಯತೆಯನ್ನಾಧರಿಸಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಸೇತುವೆ ನಿರ್ಮಾಣದ ಕಾಮಗಾರಿ

485 (20) ಶ್ರೀ ಅಪ್ಪಾಜಿ ಚನ್ನಬಸವರಾಜ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ-13 ನಿಡಗುಂದಿ-ಬಸರಕೋಡು ರಸ್ತೆಯಲ್ಲಿನ ಕಿ.ಮೀ.10.8 ರಲ್ಲಿನ (ಬಡವಟಗಿ-ಒಳಪಟ್ಟಿ) ಸೇತುವೆ ನಿರ್ಮಾಣದ ಕಾಮಗಾರಿಯನ್ನು ಸುಮಾರು ರೂ.100 ಲಕ್ಷಗಳನ್ನು ಅಂದಾಜಿನಲ್ಲಿ ತೆಗೆದು ಕೊಳ್ಳಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಈ ಕಾಮಗಾರಿಯು ಆಯವ್ಯಯ ಪಟ್ಟಿಯಲ್ಲಿ ಪ್ರಕಟಗೊಂಡಿದ್ದಾಗ್ಯೂ ಆಡಳಿತ ಮಂಜೂರಾತಿಯನ್ನು ನೀಡದಿರಲು ಕಾರಣವೇನು?

ಇ) 2009-10ರಲ್ಲಿನ ಅಪೆಂಡಿಕ್ಸ್-ಇ ಆಯವ್ಯಯ ಪುಸ್ತಕದಲ್ಲಿ ಮೇಲ್ಕಂಡ ಕಾಮಗಾರಿಯನ್ನು ಪ್ರಕಟಿಸದೇ ಇರುವುದರ ಉದ್ದೇಶವೇನು?

ಈ) ಈ ಕಾಮಗಾರಿಯನ್ನು ತ್ವರಿತಗತಿಯಿಂದ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ರಾಜ್ಯ ಹೆದ್ದಾರಿ-13 ನಿಡಗುಂದಿ-ಬಸರಕೋಡ್ ರಸ್ತೆಯಲ್ಲಿನ ಸೇತುವೆ ನಿರ್ಮಾಣದ ಕಾಮಗಾರಿಯನ್ನು ಸುಮಾರು ರೂ.100 ಲಕ್ಷಗಳ ಅಂದಾಜಿನಲ್ಲಿ ತೆಗೆದು ಕೊಳ್ಳಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮೇಲಿನ ಕಾಮಗಾರಿಯ ರೂ.100 ಲಕ್ಷ ಮೊತ್ತದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉ), ಧಾರವಾಡ ಇವರಿಗೆ ಸೂಚಿಸಲಾಗಿದೆ.

ಇ) ಮೇಲಿನ ಕಾಮಗಾರಿಯು 2009-10ನೇ ಸಾಲಿನ ರಸ್ತೆ ಮತ್ತು ಸೇತುವೆಗಳ ಆಯವ್ಯಯ ಪಟ್ಟಿಯಲ್ಲಿ ರೂ. 100 ಲಕ್ಷಗಳ ಅಂದಾಜು ಮೊತ್ತ ಹಾಗೂ ರೂ.30 ಲಕ್ಷಗಳ ಅನುದಾನದೊಂದಿಗೆ ಸೇರ್ಪಡೆಯಾಗಿರುತ್ತದೆ.

ಈ) ಈ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ನೀಡಿ ಶೀಘ್ರದಲ್ಲಿ ಗುತ್ತಿಗೆ ಕರೆಯಲು ಕ್ರಮ ಕೈಗೊಳ್ಳಲಾಗುವುದು.

ಸಹಕಾರ ಸಂಘದಲ್ಲಿ ಅವ್ಯವಹಾರ

486 (771) ಶ್ರೀ ಅಶ್ವತ್ಥ್, ಶ್ರೀ ಹೆಚ್.ಸಿ.ಬಾಲಕೃಷ್ಣ ಮತ್ತು ಶ್ರೀ ಕೆ.ರಾಜು : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನಡೆದಿದ್ದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಜ್ಯೇಷ್ಠತೆಯನ್ನು ಕಡೆಗಣಿಸಿ ನೀಡಲಾಗಿದ್ದ 150 ನಿವೇಶನಗಳಲ್ಲಿ 110 ನಿವೇಶನಗಳನ್ನು ಅರ್ಹರಾದವರಿಗೆ ಮರುಹಂಚಿಕೆ ಮಾಡಲಾಗಿದೆಯೇ? ಮರುಹಂಚಿಕೆ ಮಾಡಿರುವ 110 ಸದಸ್ಯರ ವಿಳಾಸ ದೊಂದಿಗೆ ಸಂಪೂರ್ಣ ವಿವರ ನೀಡುವುದು?

ಆ) ಉಳಿದ 40 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆಯೇ? ಮಾಹಿತಿ ನೀಡುವುದು?

ಇ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಈ) ಈ ಅವ್ಯವಹಾರದಲ್ಲಿ ಭಾಗಿಯಾಗಿದ್ದ ಸುಮಾರು ರೂ.6.00 ಕೋಟಿಗೂ ಮೇಲ್ಪಟ್ಟ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿರುವುದು ನಿಜವಲ್ಲವೇ? (ಆಸ್ತಿಯು ಮುಟ್ಟುಗೋಲಿನ ಆದೇಶದ ಪ್ರತಿ ನೀಡುವುದು);

ಉ) ಈ ಅವ್ಯವಹಾರಕ್ಕೆ ಸಂಬಂಧಿದಂತೆ ಇನ್ನೂ ಸುಮಾರು 200 ವಿವಿಧ ದಾವಾ ಪ್ರಕರಣಗಳು ಇತ್ಯರ್ಥಕ್ಕಾಗಿ ಬಾಕಿ ಇರುವುದು ನಿಜವಲ್ಲವೇ? ಪ್ರತಿಯೊಂದು ದಾವಾ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು?

ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು) :

ಅ) ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಈ ಹಿಂದೆ ಅಧಿಕಾರದಲ್ಲಿದ್ದಂತಹ ಆಡಳಿತ ಸಮಿತಿಯು ಜೇಷ್ಠತೆಯನ್ನು ಕಡೆಗಣಿಸಿ ಕಿರಿಯ ಸದಸ್ಯರಿಗೆ ಹಂಚಿಕೆ ನೀಡಿದ್ದ 150 ನಿವೇಶನಗಳನ್ನು ಹಂಚಿಕೆಯನ್ನು ನಂತರ ಅಧಿಕಾರಕ್ಕೆ ಬಂದಂತಹ ಆಡಳಿತ ಸಮಿತಿಯು ರದ್ದುಪಡಿಸಿ ಈ ಪೈಕಿ 110 ನಿವೇಶನಗಳನ್ನು ಜೇಷ್ಠತೆಯನ್ನು ಅನುಸರಿಸಿ ಮರುಹಂಚಿಕೆ ಮಾಡಿರುತ್ತಾರೆ. ಮರುಹಂಚಿಕೆ ಮಾಡಿರುವ 110 ಸದಸ್ಯರ ಸಂಪೂರ್ಣ ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.

ಆ) ಉಳಿದ ಎಲ್ಲಾ 40 ನಿವೇಶನಗಳು ಮೂಲೆ ನಿವೇಶನಗಳಾಗಿದ್ದು, ಸದರಿ ನಿವೇಶನಗಳನ್ನು ಇನ್ನೂ ಮರುಹಂಚಿಕೆ ಮಾಡಿರುವುದಿಲ್ಲ.

ಇ) ಸಂಘದಿಂದ ಪಡೆದ ಮಾಹಿತಿಯಂತೆ ಸಂಘದ ಆಡಳಿತ ಮಂಡಳಿಯವರು ಸದರಿ ಮೂಲೆ ನಿವೇಶನಗಳು ಸಂಘದ ಸದಸ್ಯರೊಳಗೆ ಹರಾಜು ಮೂಲಕವೇ ಮಾರಾಟ ಮಾಡಲು ನಿರ್ಣಯಿಸಿರುತ್ತಾರೆ.

ಈ) ಹೌದು. ಸಹಕಾರ ಸಂಘಗಳ ಉಪನಿಬಂಧಕರು-1, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರು ದಿನಾಂಕ: 27.05.2002 ರಂದು ಶ್ರೀ ಟಿ. ರಾಜ್‌ಕುಮಾರ್, ಶ್ರೀ ಎಂ.ವಿ. ರುದ್ರಾಚಾರ್ ಮತ್ತು 9 ಜನ ಇತರರು ಹಾಗೂ ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘದ ವಿರುದ್ಧ ಕೆಳಗಿನಂತೆ ಆದೇಶ ಹೊರಡಿಸಿದ್ದಾರೆ.

"ಈ ನ್ಯಾಯಾಲಯವು ಪ್ರತಿವಾದಿ-1 ರಿಂದ 12 ಇವರುಗಳ ವಿರುದ್ಧ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಅಧಿಭಾರ ಅರ್ಜಿಯನ್ನು ಪುರಸ್ಕರಿಸಲಾಗಿದೆ ಹಾಗೂ ಪ್ರತಿವಾದಿಗಳಿಂದ ಒಟ್ಟು ರೂ.4,59,69,000.00 (ನಾಲ್ಕು ಕೋಟಿ ಐವತ್ತೊಂಭತ್ತು ಲಕ್ಷದ ಅರವತ್ತೊಂಬತ್ತು ಸಾವಿರ)ಗಳನ್ನು ಸದರಿ ಮೊಬಲಗನ್ನು ದುರುಪಯೋಗಪಡಿಸಿಕೊಂಡಿರುವ ದಿನಾಂಕದಿಂದ

ಸಂಪೂರ್ಣ ತೀರುವಳಿಯಾಗುವವರೆಗೆ ಸಾಲಿಯಾನ ಶೇಕಡಾ 18ರ ಬಡ್ಡಿಯೊಂದಿಗೆ ಎಲ್ಲಾ ಪ್ರತಿವಾದಿಗಳಿಂದ ವಸೂಲಿ ಮಾಡತಕ್ಕಂದೆಂದು ಈ ಮೂಲಕ ಆದೇಶಿಸಿರುತ್ತೇನೆ. ಅಲ್ಲದೇ ಈ ಮೇಲ್ಕಂಡ ಮೊಬಲಗನ್ನು ಈಗಾಗಲೇ 1959ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 103ರ ರೀತ್ಯಾ ತೀರ್ಪಿಗೆ ಮುನ್ನ ಜಪ್ತಿ ಮಾಡಿರುವ ಈ ಕೆಳಗಿನ ಷೆಡ್ಯೂಲಿನಲ್ಲಿ ಕಾಣಿಸಿರುವ ಪ್ರತಿವಾದಿ 1 ರಿಂದ 2 ಇವರ ಹಾಗೂ ಇವರ ಕುಟುಂಬದ ಹೆಸರಿನಲ್ಲಿರುವ ಸ್ಥಿರಾಸ್ತಿಯು ಸೇರಿದಂತೆ ಎಲ್ಲಾ ಪ್ರತಿವಾದಿಗಳ ಹೆಸರಿನಲ್ಲಿರುವ ಚರ ಮತ್ತು ಸ್ಥಿರಾಸ್ತಿಗಳನ್ನು ನಿಯಮಾನುಸಾರ ಜಪ್ತಿ ಹಾಗೂ ಮಾರಾಟ ಮಾಡುವುದರ ಮೂಲಕ ಸದರಿ ಮೊಬಲಗನ್ನು ವಸೂಲಿ ಮಾಡತಕ್ಕದೆಂದು ಈ ಮೂಲಕ ಆದೇಶಿಸಿರುತ್ತೇನೆ."

ಉ) ಈ ವಿಷಯಕ್ಕೆ ಸಂಬಂಧಿಸಿದಂತೆ ಒಟ್ಟು 198 ದಾವಾ ಪ್ರಕರಣಗಳು ದಾಖಲಾಗಿರುತ್ತವೆ. ಈ ಪೈಕಿ ಈವರೆವಿಗೆ ಒಟ್ಟು 73 ದಾವಾ ಪ್ರಕರಣಗಳನ್ನು ವಿಲೇವಾರಿಗೊಳಿಸಲಾಗಿರುತ್ತದೆ. ಇನ್ನು 125 ದಾವಾ ಪ್ರಕರಣಗಳು ಇತ್ಯರ್ಥಕ್ಕಾಗಿ ಬಾಕಿ ಇರುತ್ತವೆ. ಈ ಪೈಕಿ 18 ಪ್ರಕರಣಗಳು ಸಾಕ್ಷ್ಯದ ಹಂತದಲ್ಲಿ, 103 ಪ್ರಕರಣಗಳು ಪಾರ್ಟೀ ಸವಾಲು ಹಂತದಲ್ಲಿ ಮತ್ತು ಒಂದು ಪ್ರಕರಣವು ವಾದ ಮಂಡನೆಯ ಹಂತದಲ್ಲಿ ಇರುತ್ತದೆ. ಎರಡು ಪ್ರಕರಣಗಳು ಅಪೀಲು ನ್ಯಾಯಾಧಿಕರಣದ ಮುಂದೆ ಮತ್ತು ಒಂದು ಪ್ರಕರಣವು ಶ್ರೇಷ್ಠ ನ್ಯಾಯಾಲಯದಲ್ಲಿ ಬಾಕಿ ಇರುತ್ತವೆ.

ಅನುಬಂಧ-I

ಮರು ಹಂಚಿಕೆ ಪಡೆದಿರುವ 110 ಸದಸ್ಯರುಗಳ ಹೆಸರು, ವಿಳಾಸ ಮತ್ತು ನಿವೇಶನ ಸಂಖ್ಯೆ

1) [illegible] 7

2) [illegible] 10

3) [illegible] 14

4) [illegible] 15

5) [illegible] 16

6) [illegible] 17

7) [illegible] 19

8) [illegible] 20

9) [illegible] 21

10) [illegible] 22

11) [illegible] 23

12) [illegible] 24

13) [illegible] 28

14) [illegible] 29

15) [illegible] 35

16) [illegible] 37

17) [illegible] 38

18) [illegible] 41

19) [illegible] 45

20) [illegible] 48

21) [illegible] 50

22) [illegible], ನಂ.1, [illegible], 14ನೇ [illegible], [illegible], [illegible], ಬೆಂಗಳೂರು-560040. 53

23) [illegible], ನಂ.757/19, 8 ನೇ [illegible], 13ನೇ [illegible], [illegible], ಬೆಂಗಳೂರು-560019. 56

24) [illegible], ನಂ. 3[illegible], [illegible], [illegible], ಬೆಂಗಳೂರು-560025. 57

25) [illegible], ನಂ.24, 1ನೇ [illegible], 4ನೇ [illegible], 2ನೇ [illegible], [illegible], ಬೆಂಗಳೂರು-560048. 59

26) [illegible], ನಂ. 15, [illegible], ಬೆಂಗಳೂರು-560080. 61

27) [illegible], ನಂ. 136, [illegible], 20ನೇ [illegible], [illegible], ಬೆಂಗಳೂರು-560018. 65

28) [illegible], ನಂ.37, 1ನೇ [illegible], 2ನೇ [illegible], [illegible], ಬೆಂಗಳೂರು-560019. 69

29) [illegible], c/o [illegible], ನಂ.32, 1ನೇ [illegible], [illegible], [illegible], ಬೆಂಗಳೂರು-560023. 72

30) [illegible], ನಂ. 74, 7ನೇ [illegible], 3ನೇ [illegible], [illegible], ಬೆಂಗಳೂರು-560079. 74

31) [illegible], 1ನೇ [illegible], [illegible], ಬೆಂಗಳೂರು-560027. 76

32) [illegible], ನಂ.255, [illegible], ಬೆಂಗಳೂರು-560040. 82

33) [illegible], ನಂ.12(ಹಳೆ ನಂ.43), [illegible], ಬೆಂಗಳೂರು-560075. 83

34) [illegible], 3ನೇ [illegible], [illegible], ಬೆಂಗಳೂರು-560040. 84

35) [illegible], 715, [illegible], ಬೆಂಗಳೂರು-560040. 85

36) [illegible], ನಂ.2/3, [illegible], ಬೆಂಗಳೂರು-560040. 88

37) [illegible], ನಂ.136, 4ನೇ [illegible], 2ನೇ [illegible], [illegible], ಬೆಂಗಳೂರು-560078. 89

38) [illegible], ನಂ. 136/8, 2ನೇ [illegible], [illegible], ಬೆಂಗಳೂರು-560018. 92

39) [illegible], ನಂ. ಬಿ-45, [illegible], 1ನೇ [illegible], ಬೆಂಗಳೂರು-5600[illegible]. 96

40) [illegible], ನಂ. 296, 20ನೇ [illegible], [illegible], ಬೆಂಗಳೂರು-5600[illegible]. 98

41) [illegible], ನಂ.46, [illegible], 3ನೇ [illegible], 4ನೇ [illegible], [illegible], 2ನೇ [illegible], ಬೆಂಗಳೂರು-560079. 99

42) [illegible], ನಂ.147, [illegible], ಬೆಂಗಳೂರು-5600[illegible]. 100

43) [illegible], ನಂ. ಬಿ. 67, [illegible], ಬೆಂಗಳೂರು-560053. 102

CO-OPERATIVE HOUSING SOCIETY L. BANGALORE

[illegible signature]

44) ಶ್ರೀ. [illegible], ನಂ.16, 103
4ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ,
[illegible],
[illegible], ಬೆಂಗಳೂರು-560079.

45) ಶ್ರೀ. [illegible] 104
4ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ,
[illegible],
[illegible], ಬೆಂಗಳೂರು-560079.

46) ಶ್ರೀ. [illegible] 105
[illegible], ನಂ.[illegible], 2ನೇ ಅಡ್ಡ ರಸ್ತೆ,
[illegible].
1ನೇ ಮುಖ್ಯ ರಸ್ತೆ, ಬೆಂಗಳೂರು-[illegible].

47) ಶ್ರೀ. [illegible] 106
[illegible], ನಂ. 414,[illegible],
[illegible], ಬೆಂಗಳೂರು-560040.

48) ಶ್ರೀ.[illegible], ನಂ. 7, 107
3ನೇ ಅಡ್ಡ ರಸ್ತೆ, [illegible],
[illegible],
ಬೆಂಗಳೂರು-560072.

49) ಶ್ರೀ. [illegible], ನಂ.167, 108
3ನೇ ಮುಖ್ಯ ರಸ್ತೆ, [illegible],
[illegible], 3ನೇ [illegible], ಬೆಂಗಳೂರು-[illegible].

50) ಶ್ರೀ. [illegible] 109
[illegible], ನಂ. 686,
14ನೇ ಅಡ್ಡ ರಸ್ತೆ, [illegible],
ಬೆಂಗಳೂರು-560040.

51) ಶ್ರೀ.[illegible], 111
ಶ್ರೀ [illegible], ನಂ. 186,
1ನೇ ಅಡ್ಡ ರಸ್ತೆ, 3ನೇ ಮುಖ್ಯ ರಸ್ತೆ,
[illegible],
[illegible], ಬೆಂಗಳೂರು-[illegible].

52) ಶ್ರೀ. [illegible], ನಂ. 796/ಎ, 112
9ನೇ ಮುಖ್ಯ ರಸ್ತೆ, 1ನೇ ಎ, ಅಡ್ಡ ರಸ್ತೆ,
[illegible] 1ನೇ [illegible], ಬೆಂಗಳೂರು-560050.

53) ಶ್ರೀಮತಿ. [illegible] D/o [illegible], 116
ನಂ. 12/2, 5ನೇ ಎ ಅಡ್ಡ ರಸ್ತೆ, [illegible],
[illegible], ಬೆಂಗಳೂರು-560023.

54) ಶ್ರೀಮತಿ. [illegible], ನಂ. 2266, 117
[illegible],
ಬೆಂಗಳೂರು-[illegible].

55) ಶ್ರೀಮತಿ. [illegible], ನಂ.[illegible], 118
[illegible],
ಬೆಂಗಳೂರು-[illegible].

56) ಶ್ರೀ. [illegible], ನಂ. 19, 119
[illegible] ರಸ್ತೆ, [illegible],
[illegible], ಬೆಂಗಳೂರು-560021.

57) ಶ್ರೀಮತಿ. [illegible], 121
ನಂ. 7ನೇ ಕ್ರಾಸ್, ಮುಖ್ಯ ರಸ್ತೆ,
[illegible],
[illegible], ಬೆಂಗಳೂರು-560040.

58) ಶ್ರೀ. [illegible], ನಂ.151, 122
4ನೇ ಅಡ್ಡ ರಸ್ತೆ, [illegible],
ಬೆಂಗಳೂರು-[illegible].

59) ಶ್ರೀಮತಿ. [illegible], ನಂ. 1745, 123
[illegible], ಎ ಮುಖ್ಯ ರಸ್ತೆ,
9ನೇ [illegible],
ಬೆಂಗಳೂರು-[illegible].

60) ಶ್ರೀ. [illegible], ನಂ. 1234, 124
9ನೇ ಮುಖ್ಯ ರಸ್ತೆ, [illegible],
ಬೆಂಗಳೂರು-[illegible].

61) ಶ್ರೀಮತಿ. [illegible], ನಂ. 18, 127
5ನೇ ಅಡ್ಡ ರಸ್ತೆ, [illegible],
[illegible],
ಬೆಂಗಳೂರು-[illegible].

62) ಶ್ರೀ. [illegible], ನಂ.221, 128
[illegible], 2ನೇ [illegible], [illegible],
ಬೆಂಗಳೂರು-[illegible].

63) ಶ್ರೀಮತಿ. [illegible], w/o 132
[illegible],
[illegible], ಬೆಂಗಳೂರು-[illegible].

64) ಶ್ರೀ. [illegible], ನಂ. 628 ಎ, 138
2ನೇ ಮುಖ್ಯ ರಸ್ತೆ, 7ನೇ [illegible],
[illegible], ಬೆಂಗಳೂರು-560040.

HOUSING SOCIETY
BANGALORE

O. 30 F-28

65) ಶ್ರೀಮತಿ ಎಲ್. ಜಯಮ್ಮ, ನಂ. 144, 143
ಶ್ರೀ ಸತ್ಯನಾರಾಯಣ ಲೇಔಟ್,
[illegible] ರೋಡ್, [illegible],
ಬೆಂಗಳೂರು-560006.

66) ಆರ್.ಮಂಜುನಾಥ್. ನಂ.1953/77, 144
ಎಂ.ಸಿ.ಲೇಔಟ್, 3ನೇ ಮುಖ್ಯ ರಸ್ತೆ,
8ನೇ ಅಡ್ಡ ರಸ್ತೆ, ವಿಜಯನಗರ,
ಬೆಂಗಳೂರು-560040.

67) ಶ್ರೀಮತಿ ಎಸ್.ಎಂ.[illegible], ನಂ. 18, 145
1ನೇ ಮುಖ್ಯ ರಸ್ತೆ, 3ನೇ ಬ್ಲಾಕ್, 3ನೇ ಹಂತ,
ಬಸವೇಶ್ವರ ನಗರ, ಬೆಂಗಳೂರು-560079.

68) ಶ್ರೀ. ಆರ್. ವೆಂಕಟೇಶ್ 145
[illegible],
ನಂ. 18, 1ನೇ ಮುಖ್ಯ ರಸ್ತೆ, 3ನೇ ಹಂತ,
3ನೇ ಬ್ಲಾಕ್, ಬಸವೇಶ್ವರ ನಗರ, ಬೆಂಗಳೂರು-560079.

69) ಶ್ರೀ. [illegible], ನಂ. 5975/ಎ, 147
16ನೇ ಮುಖ್ಯ ರಸ್ತೆ, 2ನೇ ಫ್ಲೋರ್, [illegible],
ಬೆಂಗಳೂರು.

70) ಶ್ರೀಮತಿ. [illegible] 152
[illegible],
[illegible], ನಂ. 432, [illegible],
ಬೆಂಗಳೂರು.

71) ಶ್ರೀ. [illegible], 154
[illegible],
[illegible], ನಂ. 432, [illegible],
[illegible], ಬೆಂಗಳೂರು.

72) ಶ್ರೀ. ಆರ್. ವೆಂಕಟೇಶ್ [illegible], ನಂ. 63, 155
[illegible], 4ನೇ ಅಡ್ಡ ರಸ್ತೆ,
1ನೇ ಮುಖ್ಯ ರಸ್ತೆ, 3ನೇ [illegible],
[illegible], ಬೆಂಗಳೂರು-560011.

73) ಶ್ರೀಮತಿ. [illegible], ನಂ. 75, 156
1ನೇ ಮುಖ್ಯ ರಸ್ತೆ, 2ನೇ ಫ್ಲೋರ್,
[illegible] ಲೇಔಟ್,
[illegible], ಬೆಂಗಳೂರು-560076

74) ಶ್ರೀ. [illegible], ನಂ. 531, 157
2ನೇ ಬ್ಲಾಕ್, 2ನೇ ಮುಖ್ಯ ರಸ್ತೆ,
[illegible] ನಗರ, ಬೆಂಗಳೂರು-560018

75) ಶ್ರೀಮತಿ. [illegible], ನಂ. 78, 159
4ನೇ ಅಡ್ಡ ರಸ್ತೆ, [illegible] ಲೇಔಟ್,
ವಿಜಯನಗರ, ಬೆಂಗಳೂರು-560040

76) ಶ್ರೀಮತಿ. [illegible], ನಂ. 47, 162
[illegible] ಲೇಔಟ್, 2ನೇ ಹಂತ,
[illegible], ವಿಜಯನಗರ,ಬೆಂಗಳೂರು-560040

77) ಶ್ರೀ.[illegible], ನಂ. ಬಿ-25, 167
[illegible],
[illegible] ರೋಡ್, ವಿಜಯನಗರ,
ಬೆಂಗಳೂರು-560040

78) ಶ್ರೀ. [illegible], ನಂ. 1544, [illegible], 168
13ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ,
1ನೇ ಫ್ಲೋರ್, 2ನೇ ಬ್ಲಾಕ್, [illegible] ಲೇಔಟ್,
ಬೆಂಗಳೂರು-560076.

79) ಶ್ರೀ [illegible], ನಂ.22, 2ನೇ ಹಂತ, 171
2ನೇ ಅಡ್ಡರಸ್ತೆ, 2ನೇ ಫ್ಲೋರ್, [illegible] ನಗರ,
[illegible] ರಸ್ತೆ, ಬೆಂಗಳೂರು-560086

80) ಶ್ರೀ.[illegible], 183
[illegible] ಲೇಔಟ್, [illegible] ಅಡ್ಡ ರಸ್ತೆ, [illegible],
[illegible] ರೋಡ್. [illegible],
ಬೆಂಗಳೂರು-560079

81) ಶ್ರೀ. [illegible], 184
ನಂ. 15/1, [illegible],
[illegible], ಬೆಂಗಳೂರು-560033.

82) ಶ್ರೀಮತಿ. ಎಸ್. [illegible], ನಂ. 1123, 187
37ನೇ ಎ. ಅಡ್ಡ ರಸ್ತೆ, 2ನೇ ಮುಖ್ಯ ರಸ್ತೆ,
4ನೇ ಟಿ. ಬ್ಲಾಕ್, [illegible], ಬೆಂಗಳೂರು-560011.

83) ಶ್ರೀ. [illegible], ನಂ. 43, 189
[illegible] ಲೇಔಟ್,
3ನೇ ಹಂತ, ವಿಜಯನಗರ,
ಬೆಂಗಳೂರು-560040

84) ಶ್ರೀ. [illegible], ನಂ. 43, 192
[illegible] ಲೇಔಟ್, 3ನೇ [illegible],
ವಿಜಯನಗರ, ಬೆಂಗಳೂರು-560040.

BAPUJI CO-OPERATIVE HOUSING SOCIETY L. BANGALORE

85) [illegible] c/o [illegible], [illegible] — 193
[illegible] ಬೆಂಗಳೂರು-560061.

86) ಶ್ರೀ. [illegible], ನಂ. 95 — 194
3ನೇ ಮುಖ್ಯ ರಸ್ತೆ, [illegible],
[illegible] ಬೆಂಗಳೂರು-560072

87) ಶ್ರೀಮತಿ. [illegible], — 202
ನಂ. 704, 5ನೇ ಅಡ್ಡ ರಸ್ತೆ,
3ನೇ ಹಂತ, 3ನೇ [illegible],
3ನೇ ಬ್ಲಾಕ್, [illegible] ಬೆಂಗಳೂರು.

88) ಶ್ರೀಮತಿ. [illegible] [illegible]. — 203
ನಂ. 1209, 2ನೇ ಅಡ್ಡ ರಸ್ತೆ, 2ನೇ ಮುಖ್ಯ ರಸ್ತೆ,
[illegible], [illegible] 2ನೇ ಹಂತ,
ಬೆಂಗಳೂರು-560072.

89) ಶ್ರೀ. [illegible] c/o — 204
[illegible], [illegible]. 3ನೇ ಅಡ್ಡ ರಸ್ತೆ,
[illegible], [illegible], [illegible] ರಸ್ತೆ,
ಬೆಂಗಳೂರು-560072.

90) ಶ್ರೀಮತಿ. [illegible], ನಂ. 251, — 205
[illegible], [illegible] ಲೇಔಟ್,
ಬನಶಂಕರಿ 2ನೇ ಹಂತ, ಬೆಂಗಳೂರು-560040.

91) ಶ್ರೀಮತಿ. [illegible], ನಂ. 804, — 206
64ನೇ ಅಡ್ಡ ರಸ್ತೆ, [illegible] ಲೇಔಟ್,
ಬೆಂಗಳೂರು-560078.

92) ಶ್ರೀ. [illegible] c/o — 208
[illegible], ನಂ. 1827,
2ನೇ ಹಂತ, 6ನೇ ಮುಖ್ಯ ರಸ್ತೆ, ಇ ಬ್ಲಾಕ್,
[illegible], ಬೆಂಗಳೂರು-560010.

93) ಶ್ರೀ. [illegible], — 215
ನಂ. 2177, 8ನೇ ಮುಖ್ಯ ರಸ್ತೆ, ಇ ಬ್ಲಾಕ್,
2ನೇ ಹಂತ, [illegible], ಬೆಂಗಳೂರು-560010.

94) ಶ್ರೀ. [illegible] c/o [illegible], — 221
ನಂ. 106, 1ನೇ ಹಂತ, [illegible] ಲೇಔಟ್,
ಬೆಂಗಳೂರು-560040

95) ಶ್ರೀಮತಿ. [illegible], [illegible], — 222
ನಂ. 303, [illegible], ಬನಶಂಕರಿ [illegible],
ಬೆಂಗಳೂರು- 560040.

96) ಶ್ರೀ. [illegible], ನಂ. 2256, — 223
4ನೇ ಎ. ಅಡ್ಡ ರಸ್ತೆ, [illegible] ಲೇಔಟ್,
ಬನಶಂಕರಿ 2ನೇ ಹಂತ, ಬೆಂಗಳೂರು- 560040

97) ಶ್ರೀ. [illegible] — 240
ನಂ. 2/A, 303, [illegible],
ಬನಶಂಕರಿ, ಬೆಂಗಳೂರು-560040.

98) ಶ್ರೀ. [illegible], [illegible], — 241
ನಂ. 358, ಎ ಮುಖ್ಯ ರಸ್ತೆ, [illegible],
ಬೆಂಗಳೂರು-560021.

99) ಶ್ರೀ. [illegible], ನಂ. 123, — 247
2ನೇ ಮುಖ್ಯ ರಸ್ತೆ, [illegible] ಲೇಔಟ್,
[illegible], [illegible],
ಬೆಂಗಳೂರು-560071.

100) ಶ್ರೀಮತಿ. [illegible], c/o — 248
[illegible],
ನಂ. 779, 5ನೇ ಅಡ್ಡ ರಸ್ತೆ, [illegible] ಮುಖ್ಯ ರಸ್ತೆ,
[illegible] ಲೇಔಟ್, ಬನಶಂಕರಿ, ಬೆಂಗಳೂರು-560040.

101) ಶ್ರೀಮತಿ. [illegible] — 252
ನಂ. 363, 5ನೇ [illegible] ಮುಖ್ಯ ರಸ್ತೆ, 1ನೇ ಅಡ್ಡ ರಸ್ತೆ,
[illegible] ಲೇಔಟ್, ಬನಶಂಕರಿ, ಬೆಂಗಳೂರು-560040

102) ಶ್ರೀ. [illegible], ನಂ.48, 9ನೇ ಮುಖ್ಯ ರಸ್ತೆ, — 258
[illegible] 1ನೇ ಹಂತ, [illegible] ಲೇಔಟ್, ಬನಶಂಕರಿ,
ಬೆಂಗಳೂರು-560040

103) ಶ್ರೀ. [illegible], ನಂ. 32/4, 5ನೇ ಮುಖ್ಯ ರಸ್ತೆ, — 265
1ನೇ ಅಡ್ಡ ರಸ್ತೆ, [illegible] ಲೇಔಟ್,
[illegible], [illegible] ರಸ್ತೆ, ಬೆಂಗಳೂರು-560026

104) ಶ್ರೀ. [illegible], ನಂ. 73, — 289
1ನೇ [illegible], 12ನೇ A. ಮುಖ್ಯ ರಸ್ತೆ,
6ನೇ ಬ್ಲಾಕ್, [illegible],
ಬೆಂಗಳೂರು-560010.

105) ಶ್ರೀ. [illegible] c/o [illegible], — 290
ನಂ. 1980, 11ನೇ ಮುಖ್ಯ ರಸ್ತೆ,
ಬನಶಂಕರಿ, ಬೆಂಗಳೂರು-560040

BAPUJI CO-OPERATIVE HOUSING SOCIETY L. BANGALORE

Dwarakanath.N

BAPUJI CO-OPERATIVE HOUSING SOCIETY L.
BANGALORE

106) ಶ್ರೀ. ಇ. ಸಿದ್ದಯ್ಯ ಬಿನ್ ಈರಯ್ಯ, ನಂ. ಯು 88, 17ನೇ ಕ್ರಾಸ್, ಭುವನೇಶ್ವರಿ ನಗರ, ಬೆಂಗಳೂರು-560023.	293
107) ಶ್ರೀಮತಿ. ಗಾಯತ್ರಿ ನಂ. 65, 7ನೇ ಮುಖ್ಯ ರಸ್ತೆ, 3ನೇ ಬ್ಲಾಕ್, 3ನೇ ಹಂತ, ಬಸವೇಶ್ವರ ನಗರ, ಬೆಂಗಳೂರು-560079.	296
108) ಶ್ರೀಮತಿ. ಎಸ್. ಎ. ಉದಯ್ ಕುಮಾರ್ ನಂ.821, 5ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು-560040.	297
109) ಶ್ರೀ.ಹೆಚ್.ವಿ.ಶಿವಾನಂದಸ್ವಾಮಿ, ನಂ. 3433, 1ನೇ ಎಫ್ ಅಡ್ಡ ರಸ್ತೆ, 7ನೇ ಮುಖ್ಯ ರಸ್ತೆ, ಸುಬ್ಬಣ್ಣ ಗಾರ್ಡನ್, ವಿಜಯನಗರ, ಬೆಂಗಳೂರು-560040.	04
110) ಶ್ರೀಮತಿ.ಹೆಚ್.ಸಿ.ಸೌಭಾಗ್ಯಮ್ಮ, ನಂ-04, ಮೂಕಾಂಬಿಕಾ ದೇವಸ್ಥಾನ, ಮಹದೇಶ್ವರ ನಿಲಯ, ಸಾತನೂರು ರಸ್ತೆ, ಚನ್ನಪಟ್ಟಣ ನಗರ, ರಾಮನಗರ ಜಿಲ್ಲೆ.	05

ಮುಖ್ಯ ಕಾರ್ಯನಿರ್ವಹಣಾಧಿಕಾರಿ

ರೈತರಿಗೆ ಕೃಷಿ ಪರಿಕರಗಳನ್ನು ಕೊಳ್ಳಲು ಸಹಾಯ ಧನ

487 (640) ಶ್ರೀ ಬಚ್ಚೇಗೌಡ.ಕೆ. (ಚಿಕ್ಕಬಳ್ಳಾಪುರ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ರೈತರಿಗೆ ಕೃಷಿ ಪರಿಕರಗಳನ್ನು ಕೊಳ್ಳಲು ಸರ್ಕಾರ ನೀಡಿರುವ ಸಹಾಯಧನ ಮೊತ್ತ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು);

ಆ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಟ್ರ್ಯಾಕ್ಟರ್ ಕೊಳ್ಳಲು ರೈತರಿಗೆ ಸರ್ಕಾರ ನೀಡುವ ಪರಿಹಾರ ಧನದ ಮೊತ್ತ ಎಷ್ಟು (ತಾಲ್ಲೂಕುವಾರು ಮತ್ತು ಫಲಾನುಭವಿಗಳ ವಿವರ ನೀಡುವುದು);

ಇ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಟಿಲ್ಲರ್ ಕೊಳ್ಳಲು ರೈತರಿಗೆ ಸರ್ಕಾರ ನೀಡುವ ಪರಿಹಾರ ಧನದ ಮೊತ್ತ ಎಷ್ಟು (ತಾಲ್ಲೂಕುವಾರು ಮತ್ತು ಫಲಾನುಭವಿಗಳ ವಿವರ ನೀಡುವುದು);

ಈ) ಚಿಕ್ಕಬಳ್ಳಾಪುರ ಜಿಲೆಯಲ್ಲಿ ಇತರೆ ಉಪಕರಣಗಳನ್ನು ಕೊಳ್ಳಲು ರೈತರಿಗೆ ಸರ್ಕಾರ ನೀಡುವ ಪರಿಹಾರ ಧನದ ಮೊತ್ತ ಎಷ್ಟು? (ತಾಲ್ಲೂಕುವಾರು ಮತ್ತು ಪಲಾನುಭವಿಗಳ ವಿವರ ನೀಡುವುದು);

ಉ) ರೈತರು ಟ್ರ್ಯಾಕ್ಟರ್ ಖರೀದಿ ಮಾಡುವ ಸಂಬಂಧದಲ್ಲಿ ಸರ್ಕಾರದಿಂದ ಸಹಾಯ ಧನ ಪಡೆಯಲು ಸರ್ಕಾರ ವಿಧಿಸಿರುವ ಷರತ್ತುಗಳೇನು (ಷರತ್ತುಗಳ ಪ್ರತಿಯನ್ನು ನೀಡುವುದು)?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ರೈತರಿಗೆ ಕೃಷಿ ಪರಿಕರಗಳನ್ನು ಕೊಳ್ಳಲು ಸರ್ಕಾರ ನೀಡಿರುವ ಸಹಾಯಧನದ ಮೊತ್ತ ರೂ.889.83 ಲಕ್ಷ ಇರುತ್ತದೆ. (ತಾಲ್ಲೂಕುವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.)

ಆ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 2007-08 ರಿಂದ 2009-10ರ ವರೆಗೆ ಮೂರು ವರ್ಷಗಳಲ್ಲಿ ಟ್ರ್ಯಾಕ್ಟರ್ ಕೊಳ್ಳಲು ರೈತರಿಗೆ ಸರ್ಕಾರ ನೀಡಿರುವ ಸಹಾಯಧನದ ಮೊತ್ತ ರೂ.166.40 ಲಕ್ಷಗಳು (ತಾಲ್ಲೂಕುವಾರು ಮತ್ತು ಫಲಾನುಭವಿಗಳ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ).

ಇ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 2007-08 ರಿಂದ 2009-10 ರ ವರೆಗೆ ಮೂರು ವರ್ಷಗಳಲ್ಲಿ ಟಿಲ್ಲರ್ ಕೊಳ್ಳಲು ರೈತರಿಗೆ ಸರ್ಕಾರ ನೀಡುವ ಸಹಾಯಧನದ ಮೊತ್ತ ರೂ.274.71 ಲಕ್ಷಗಳು.
(ತಾಲ್ಲೂಕುವಾರು ಮತ್ತು ಫಲಾನುಭವಿಗಳ ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ.)

ಈ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 2007-08 ರಿಂದ 2009-10ರ ವರೆಗೆ ಕಳೆದ 3 ವರ್ಷಗಳಲ್ಲಿ ಇತರೆ ಉಪಕರಣಗಳನ್ನು ಕೊಳ್ಳಲು ರೈತರಿಗೆ ಸರ್ಕಾರ ನೀಡುವ ಪರಿಹಾರ ಧನದ ಮೊತ್ತ ರೂ. 179.52 ಲಕ್ಷಗಳು.
(ತಾಲ್ಲೂಕುವಾರು ಮತ್ತು ಫಲಾನುಭವಿಗಳ ವಿವರಗಳನ್ನು ಅನುಬಂಧ-4ರಲ್ಲಿ ನೀಡಲಾಗಿದೆ).

ಉ) ರೈತರು ಟ್ರಾಕ್ಟರ್ ಖರೀದಿ ಮಾಡುವ ಸಂಬಂಧದಲ್ಲಿ ಸರ್ಕಾರದಿಂದ ಸಹಾಯಧನ ಪಡೆಯಲು ಕೃಷಿ ಇಲಾಖೆ ವತಿಯಿಂದ

ನೀಡಿರುವ ಮಾರ್ಗಸೂಚಿ ಮತ್ತು ಸುತ್ತೋಲೆಯಲ್ಲಿ ನಮೂದಿಸಿರುವ ಅಂಶಗಳನ್ನು ಅನುಸರಿಸಿ ಸಂಬಂಧಪಟ್ಟ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರಿಗೆ ಅರ್ಜಿ ಮತ್ತು ದಾಖಲಾತಿಗಳನ್ನು ಸಲ್ಲಿಸಿ ಸಹಾಯಧನದ ಮೊತ್ತ ರೂ. 60000/– ಗಳನ್ನು ಪಡೆಯಬಹುದಾಗಿರುತ್ತದೆ.

(ಸುತ್ತೋಲೆ ಮತ್ತು ಮಾರ್ಗಸೂಚಿಗಳನ್ನು ಅನುಬಂಧ–5 ರಲ್ಲಿ ನೀಡಲಾಗಿದೆ.)

ವಿಧಾನಸಭೆ ಪ್ರಶ್ನೆ ಸಂ. 640.

ಅನುಬಂಧ- 1

2007-08 ರಿಂದ 2009-10ರ ವರೆಗೆ (ಮೂರು ವರ್ಷಗಳಲ್ಲಿ) ವಿತರಿಸಿದ ಕೃಷಿ ಪರಿಕರಗಳ ಸಹಾಯಧನ

ಆರ್ಥಿಕ : ಲಕ್ಷ ರೂಗಳಲ್ಲಿ

ಕ್ರ ಸಂ.	ತಾಲ್ಲೂಕು	ಸಹಾಯಧನ			ಒಟ್ಟು
		2007-08	2008-09	2009-10*	
1	ಬಾಗೇಪಲ್ಲಿ	67.04	33.94	116.68	217.66
2	ಚಿಕ್ಕಬಳ್ಳಾಪುರ	25.80	16.38	31.63	73.81
3	ಚಿಂತಾಮಣಿ	35.25	20.69	70.00	125.94
4	ಗೌರಿಬಿದನೂರು	82.03	53.67	165.89	301.59
5	ಗುಡಿಬಂಡೆ	34.55	17.47	55.03	107.05
6	ಶಿಡ್ಲಘಟ್ಟ	16.91	14.39	32.48	63.78
ಜಿಲ್ಲೆಯ ಒಟ್ಟು		261.58	156.54	471.71	889.83

* ಫೆಬ್ರವರಿ 2010ರ ಅಂತ್ಯಕ್ಕೆ

ವಿಧಾನ ಸಭೆ ಪ್ರ.ಸಂ. 640

ಅನುಬಂಧ - 2

2007-08 ರಿಂದ 2009-10ರ ವರೆಗೆ ವಿತರಿಸಿದ ಟ್ರ್ಯಾಕ್ಟರ್‌ಗಳ ತಾಲ್ಲೂಕುವಾರು ವಿವರಗಳು

ಭೌತಿಕ : ಸಂಖ್ಯೆಗಳಲ್ಲಿ ಆರ್ಥಿಕ : ಲಕ್ಷ ರೂಗಳಲ್ಲಿ.

ಕ್ರ.ಸಂ	ವರ್ಷ	ಬಾಗೇಪಲ್ಲಿ		ಚಿಕ್ಕಬಳ್ಳಾಪುರ		ಚಿಂತಾಮಣಿ		ಗೌರಿಬಿದನೂರು		ಗುಡಿಬಂಡೆ		ಶಿಡ್ಲಘಟ್ಟ		ಜಿಲ್ಲೆಯ ಒಟ್ಟು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	2007-08	6	3.60	9	5.40	7	4.20	6	3.60	5	3.00	12	7.20	45	27.00
	2008-09	20	12.00	15	9.00	11	6.60	8	4.80	7	5.60	17	10.20	78	48.20
	2009-10	25	15.00	10	6.00	40	24.00	30	18.00	21	12.60	26	15.60	152	91.20
	ಒಟ್ಟು	51	30.60	34	20.40	58	34.80	44	26.40	33	21.20	55	33.00	275	166.40

ಅನುಬಂಧ - 3

2007-08 ರಿಂದ 2009-10ರ ವರೆಗೆ ವಿತರಿಸಿದ ಪವರ್‌ಟಿಲ್ಲರ್‌ಗಳ ತಾಲ್ಲೂಕುವಾರು ವಿವರಗಳು

ಭೌತಿಕ : ಸಂಖ್ಯೆಗಳಲ್ಲಿ ಆರ್ಥಿಕ : ಲಕ್ಷ ರೂಗಳಲ್ಲಿ.

ಕ್ರ.ಸಂ	ವರ್ಷ	ಬಾಗೇಪಲ್ಲಿ		ಚಿಕ್ಕಬಳ್ಳಾಪುರ		ಚಿಂತಾಮಣಿ		ಗೌರಿಬಿದನೂರು		ಗುಡಿಬಂಡೆ		ಶಿಡ್ಲಘಟ್ಟ		ಜಿಲ್ಲೆಯ ಒಟ್ಟು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	2007-08	10	4.97	86	42.74	23	11.43	29	14.41	5	2.41	82	40.75	235	116.71
	2008-09	8	4.00	54	27.00	23	11.50	28	14.00	13	6.50	38	19.00	164	82.00
	2009-10	4	2.00	56	23.00	30	15.00	1	0.50	1	0.50	70	35.00	162	76.00
	ಒಟ್ಟು	22	10.97	196	92.74	76	37.93	58	28.91	19	9.41	190	94.75	561	274.71

ಅನುಬಂಧ - 4

2007-08 ರಿಂದ 2009-10ರ ವರೆಗೆ ವಿತರಿಸಿದ ಇತರೆ ಕೃಷಿ ಉಪಕರಣಗಳ ತಾಲ್ಲೂಕುವಾರು ವಿವರಗಳು

ಜಿಲ್ಲೆ : ಚಿಕ್ಕಬಳ್ಳಾಪುರ ಭೌತಿಕ : ಸಂಖ್ಯೆಗಳಲ್ಲಿ. ಆರ್ಥಿಕ : ಲಕ್ಷ ರೂಗಳಲ್ಲಿ.

ಕ್ರ.ಸಂ	ವರ್ಷ	ಬಾಗೇಪಲ್ಲಿ		ಚಿಕ್ಕಬಳ್ಳಾಪುರ		ಚಿಂತಾಮಣಿ		ಗೌರಿಬಿದನೂರು		ಗುಡಿಬಂಡೆ		ಶಿಡ್ಲಘಟ್ಟ		ಜಿಲ್ಲೆಯ ಒಟ್ಟು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	2007-08	39	4.41	204	15.65	64	6.55	50	5.53	22	2.4	95	5.74	474	40.28
	2008-09	90	13.97	54	5.85	57	6.63	82	22.94	44	7.13	152	14.58	479	71.1
	2009-10	37	3.8	242	24.15	140	16.47	16	2.68	46	5.55	217	15.49	698	68.14
	ಒಟ್ಟು	166	22.18	500	45.65	261	29.65	148	31.15	112	15.08	464	35.81	1651	179.52

ಅನುಬಂಧ–5

ಯಾಂತ್ರೀಕರಣ

ಕೃಷಿ ಯಾಂತ್ರೀಕರಣ ಮತ್ತು ಕೃಷಿ ಸಂಸ್ಕರಣಾ ಯೋಜನೆ

ಅ) ಕೃಷಿ ಯಾಂತ್ರೀಕರಣ ಯೋಜನೆ

2009–10ನೇ ಸಾಲಿನಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯನ್ನು ಹೈಟೆಕ್ ಕೃಷಿ ಯಂತ್ರೋಪಕರಣಗಳು, ಸಣ್ಣ ಟ್ರ್ಯಾಕ್ಟರ್‌ಗಳು, ಪವರ್ ಟಿಲ್ಲರ್ ಗಳು, ಡೀಸಲ್ ಪಂಪ್‌ಸೆಟ್, ಟ್ರಾಕ್ಟರ್/ಟಿಲ್ಲರ್ ಚಾಲಿತ ಸಸ್ಯ ಸಂರಕ್ಷಣಾ ಉಪಕರಣ ಮತ್ತು ನವೀನ ಕೃಷಿ ಯಂತ್ರೋಪಕರಣಗಳು ಆರು ವಿವಿಧ ಘಟಕಗಳೊಂದಿಗೆ ಅನುಷ್ಠಾನಗೊಳಿಸಬೇಕಾಗಿದೆ.

(ಆರ್ಥಿಕ: ಲಕ್ಷ ರೂ.ಗಳಲ್ಲಿ)

ಕ್ರ ಸಂ.	ಲೆಕ್ಕ ಶೀರ್ಷಿಕೆ	ವಲಯ	ಆಯವ್ಯಯದಲ್ಲಿ ಒದಗಿಸಲಾದ ಅನುದಾನ	ಷರಾ
1	2401–00–800–1–40	ಜಿಲ್ಲಾವಲಯ	506.83	
2	2401–00–800–1–44 (106) (ವರ್ಕ್‌ಪ್ಲಾನ್)	ರಾಜ್ಯ ವಲಯ	1000.00	
3	ಕರ್ನಾಟಕ ಕೃಷಿ ಯಾಂತ್ರೀಕರಣ ಅಭಿಯಾನ (RKVY)	ರಾಜ್ಯ ವಲಯ	10155.00	
	ಒಟ್ಟು		11661.83	

ಮಾರ್ಗಸೂಚಿಗಳು :

1. ದಿನಾಂಕ: 1–04–2009 ರ ನಂತರ ಖರೀದಿಸಿದ ಘಟಕಗಳಿಗೆ ಮಾತ್ರ ಪ್ರಸಕ್ತ ಸಾಲಿನಲ್ಲಿ ಸಹಾಯಧನವನ್ನು ನೀಡುವುದು.
2. ಕೇಂದ್ರ ಕಛೇರಿಯಿಂದ ಅನುಮೋದನೆಗೊಂಡಿರುವ ಸಂಸ್ಥೆಗಳಿಂದ ಖರೀದಿಸಿದ ಕೃಷಿ ಯಂತ್ರೋಪಕರಣಗಳ ಮಾದರಿಗಳು ಮಾತ್ರ ಸಹಾಯ ಧನ ಪಡೆಯಲು ಅರ್ಹವಾಗಿರುತ್ತವೆ. ಅನುಮೋದಿತ

ಸಂಸ್ಥೆಗಳ ಮುಂದೆ ವಿವಿಧ ಘಟಕಗಳಲ್ಲಿ ಅನುಮೋದಿತ ಪಟ್ಟಿ ಪುಸ್ತಕದಲ್ಲಿ ✔ ಗುರುತು ಮಾಡಲಾಗಿದೆ.

3. ಕೇಂದ್ರ ಕಛೇರಿಯಿಂದ ಅನುಮೋದನೆಗೊಂಡಿರುವ ಸಂಸ್ಥೆಗಳು, ಅನುಮೋದಿಸಿರುವ ಮಾದರಿಗಳನ್ನು ಮಾತ್ರ ಸರಬರಾಜು ಮಾಡಲು ಅರ್ಹವಾಗಿರುತ್ತವೆ.
4. ಪ್ರತಿ ಕೃಷಿ ಯಂತ್ರೋಪಕರಣಗಳ ಹಾಗೂ ಕೃಷಿ ಸಂಸ್ಕರಣಾ ಮಾದರಿಗಳಿಗೆ ನಿಗದಿಪಡಿಸಿದ ಸಹಾಯಧನ ಅಥವಾ ಘಟಕದ ಬೆಲೆಯ ಶೇ.50 ರಷ್ಟು ಯಾವುದು ಕಡಿಮೆಯೋ ಆ ಸಹಾಯ ಧನವನ್ನು ಮಾತ್ರ ನೀಡುವುದು.
5. ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡಿರುವ ಸಣ್ಣ ಟ್ರಾಕ್ಟರ್ ಗಳಿಗೆ ರೂ. 60000/–ಸಹಾಯಧನವನ್ನು ನೀಡುವುದು.
6. ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡಿರುವ ಪವರ್ ಟಿಲ್ಲರ್ ಗಳಿಗೆ ಶೇ.50 ರಂತೆ ಗರಿಷ್ಠ ರೂ.50000/– ಸಹಾಯಧನವನ್ನು ಮಾತ್ರ ನೀಡುವುದು.
7. ಕಾಲಾನುಕಾಲಕ್ಕೆ ಕೇಂದ್ರ ಸರ್ಕಾರವು ಅನುಮೋದಿಸುವ ಸಣ್ಣ ಟ್ರಾಕ್ಟರ್ ಮತ್ತು ಪವರ್ ಟಿಲ್ಲರ್ ಮಾದರಿಗಳಿಗೆ ಮಾತ್ರ ಸಹಾಯ ಧನ ನೀಡುವುದು.
8. ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ನಿರ್ವಹಿಸುವ ಜೇಷ್ಠತಾ ಪಟ್ಟಿಯ ಹಾಗೂ ಅನುದಾನದ ಲಭ್ಯತೆ ಆಧಾರದ ಮೇಲೆ ಮೊದಲು ಬಂದವರಿಗೆ ಆಧ್ಯತೆ ಮೇರೆಗೆ ಸಹಾಯ ಧನ ಪಾವತಿಸಲು ನಿಯಮಾನುಸಾರ ಕ್ರಮ ಕೈಗೊಳ್ಳುವುದು ಹಾಗೂ ಸರ್ಕಾರದ ಸುತ್ತೋಲೆಯಂತೆ ಪಜಾ/ಪಪಂ/ಹಿ.ವ/ ಮಹಿಳೆಯರಿಗೆ ಆದ್ಯತೆ ನೀಡುವುದು.
9. ಕೇಂದ್ರ ಕಛೇರಿಯಿಂದ ಅನುಮೋದಿತ ಕೃಷಿ ಯಂತ್ರೋಪಕರಣಗಳ ಮಾದರಿಗಳ ದರ ಪಟ್ಟಿಯ ಬದಲಾಗಿ ಕೇಂದ್ರ ಕಛೇರಿಯಿಂದ ಅನುಮೋದಿತ ಸಂಸ್ಥೆಗಳ ಹಾಗೂ ಮಾದರಿಗಳ ಪಟ್ಟಿ ಹಾಗೂ ಅವುಗಳಿಗೆ ನಿಗದಿಪಡಿಸಿದ ಸಹಾಯಧನಗಳ ವಿವರಗಳನ್ನು ನೀಡಲಾಗುವುದು ರೈತರ ಇಚ್ಛೆ ಪಡುವ ಅನುಮೋದಿತ ಮಾದರಿಯ ದರವನ್ನು ಅನುಮೋದಿತ ತಯಾರಕರೊಂದಿಗೆ ಅಥವಾ

ತಯಾರಕರಿಂದ ನೇಮಿಸಲ್ಪಟ್ಟ ಅನುಮೋದಿತ ಡೀಲರ್‌ನೊಂದಿಗೆ ರೈತರು ಚರ್ಚಿಸಿ ಚೌಕಾಸಿ ಮಾಡಿ ದರ ನಿಗದಿಪಡಿಸಿಕೊಳ್ಳುವುದು.

10. ರೈತರು/ಸ್ವಸಹಾಯ ಗುಂಪುಗಳು ಸರ್ಕಾರದ ಸಹಾಯಧನ ಹೊರತುಪಡಿಸಿ ತಮ್ಮ ವಂತಿಗೆಯನ್ನು ಡಿ.ಡಿ. ಮೂಲಕ ಪಾವತಿಸಿ ಇಚ್ಚಿಸಿದ ಅನುಮೋದಿತ ಸವಲತ್ತಿಗೆ ಸಹಾಯಧನ ಪಡೆಯ ಬಹುದಾಗಿದೆ.
11. ಫಲಾನುಭವಿಗಳು ಸವಲತ್ತನ್ನು ಪಡೆಯಲು ಬ್ಯಾಂಕ್ ಸಾಲವನ್ನು ಪಡೆದಿದ್ದಲ್ಲಿ, ಸಹಾಯ ಧನವನ್ನು ಖಡ್ಡಾಯವಾಗಿ ಸಾಲ ನೀಡಿದ ಬ್ಯಾಂಕ್ ಖಾತೆಗೆ ನೀಡುವುದು.
12. 2008–09ನೇ ಸಾಲಿನ ದರ ಕರಾರು ಪ್ರಕ್ರಿಯೆಯಲ್ಲಿ ಅನುಮೋದಿತ ತಯಾರಕರ ಸಂಸ್ಥೆಯ ಅನುಮೋದಿತ ಡೀಲರ್‌ಗಳು ತಮ್ಮ ತಯಾರಕರ ಮೇಲು ಸಹಿಯನ್ನು ಬಿಲ್ಲುಗಳ ಮೇಲೆ ಪಡೆದು ಸಲ್ಲಿಸಿದಾಗ ಮಾತ್ರ ಸಹಾಯಧನವನ್ನು ನೀಡುವುದು.
13. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಹಾಗೂ ಇತರೆ ವರ್ಗದ ರೈತರಿಗೆ ಒಂದೇ ತೆರನಾದ ಸಹಾಯ ಧನವಿರುವ ಕಾರಣ ಫಲಾನುಭವಿಗಳಿಂದ ಪ್ರತ್ಯೇಕವಾಗಿ ಜಾತಿ ಪ್ರಮಾಣ ಪತ್ರ ಕೇಳುವ ಬದಲು ಅರ್ಜಿಯಲ್ಲಿ ನಮೂದಿಸಿದ ಮಾಹಿತಿಯನ್ನು ಆಧರಿಸಿ ಪ್ರತ್ಯೇಕ ಮಾಹಿತಿ ನೀಡುವುದು.
14. ನಿಗದಿತ ನಮೂನೆಯ ಅರ್ಜಿಯೊಂದಿಗೆ ಖರೀದಿಸಿದ ಉಪಕರಣಗಳ/ ಟ್ರಾಕ್ಟರ್/ ಟಿಲ್ಲರ್‌ಗಳ ಮಾದರಿಯನ್ನು ನಮೂದಿಸಿ, ಜೊತೆಯಲ್ಲಿ ರೈತರ ವಂತಿಗೆಯನ್ನು ಡಿ.ಡಿ. ಮುಖಾಂತರ ಪಡೆಯುವುದು.
15. ಅರ್ಜಿಯೊಂದಿಗೆ ಅನುಬಂಧ–ಎ ರಂತೆ ಎಲ್ಲಾ ದಾಖಲಾತಿಗಳನ್ನು ಪಡೆಯುವುದು ಹಾಗೂ ಸ್ವೀಕರಿಸಿದ ಅರ್ಜಿಗೆ ಸ್ವೀಕೃತಿಯನ್ನು ನೀಡುವುದು. ಈ ಎಲ್ಲಾ ಮಾಹಿತಿಯನ್ನು ಪ್ರತ್ಯೇಕ ವಹಿಯಲ್ಲಿ ದಾಖಲಿಸುವುದು.

    a) ಕೃಷಿ ಯಂತ್ರೋಪಕರಣಗಳನ್ನು/ ಸಂಸ್ಕರಣಾ ಘಟಕಗಳನ್ನು ಪಡೆದ ಬಗ್ಗೆ ಡೆಲಿವರಿ ಚಲನ್ (ಡೆಲಿವರಿ ಚಲನ್‌ನಲ್ಲಿ ಚಾಸಿಸ್ ನಂ., ಎಂಜಿನ್ ನಂ. ನನ್ನು ಅಗತ್ಯವಿರುವೆಡೆ ನಮೂದಿಸುವುದು),

b) ಸಣ್ಣ ಟ್ರ್ಯಾಕ್ಟರ್‌ಗೆ ಸಾರಿಗೆ ಇಲಾಖೆಯಿಂದ ನೋಂದಣಿ ಮಾಡಿಸಿದ ದಾಖಲಾತಿ (ನೋಂದಣಿ ಸಂಖ್ಯೆಯೊಂದಿಗೆ)

c) ರೈತರು / ಸ್ವಸಹಾಯ ಗುಂಪುಗಳು ಪಡೆದ ಸವಲತ್ತು ನೊಂದಿಗೆ ಸಹಾಯಧನ ಪಾವತಿಸುವ ಮುನ್ನ ಫಲಾನುಭವಿಯನ್ನೊಳಗೊಂಡ ಛಾಯಾ ಚಿತ್ರ ಪಡೆಯುವುದು.

d) ಪಡೆದ ಕೃಷಿ ಯಂತ್ರೋಪಕರಣದ ಕಾರ್ಯ ನಿರ್ವಹಣೆಯ ಬಗ್ಗೆ ರೈತರ ತೃಪ್ತಿಕರ ಪತ್ರ ಪಡೆಯುವುದು.

16. ಈ ಮೇಲ್ಕಂಡ ದಾಖಲಾತಿಗಳನ್ನು ದಾಖಲಿಸಲು ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಒಂದು ದಾಖಲಾತಿ ವಹಿಯನ್ನು (ರಿಜಿಸ್ಟರ್) ಅನುಬಂಧ–ಎ ರಂತೆ ಕಡ್ಡಾಯವಾಗಿ. ನಿರ್ವಹಿಸುವುದು. ಸದರಿ ದಾಖಲಾತಿ ವಹಿಯಲ್ಲಿ ಅರ್ಜಿದಾರರು ಸಲ್ಲಿಸಿದ ವಿವರಗಳನ್ನು ಭರ್ತಿ ಮಾಡಿ, ಅರ್ಜಿದಾರರು ಸಲ್ಲಿಸಿದ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸುವುದು.

17. ಅರ್ಜಿಯನ್ನು ಪಡೆದ ನಂತರ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು, ಬಿಲ್ಲು ತಯಾರಿಸಿ ಒಂದು ವಾರದೊಳಗಾಗಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ಮೇಲ್ ರುಜುವಿಗೆ ಸಲ್ಲಿಸುವುದು. ಸಹಾಯಧನದ ಮೊತ್ತವನ್ನು ಸರಬರಾಜುದಾರರಿಗೆ ಅಥವಾ ಫಲಾನುಭವಿಯ ಬ್ಯಾಂಕ್ ಖಾತೆಗೆ ಜಮೆ ಮಾಡಲು, ಕ್ರಮ ವಹಿಸುವುದು.

18. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಅಗತ್ಯ ದಾಖಲೆಗಳನ್ನು ಮಾರ್ಗ ಸೂಚಿಯಂತೆ ಪರಿಶೀಲಿಸಿ ಬಿಲ್ಲು ಪಡೆದ ತಕ್ಷಣ ಬಿಲ್ಲನ್ನು ಮೇಲುರುಜು ಮಾಡುವುದು. ಅರ್ಜಿ ಸಲ್ಲಿಸಿದ 30 ದಿನದೊಳಗಾಗಿ ಸರಬರಾಜುದಾರರಿಗೆ ಸಹಾಯ ಧನವನ್ನು ನೀಡುವಂತೆ ಕ್ರಮ ಕೈಗೊಳ್ಳುವುದು.

19. ಟ್ರಾಕ್ಟರ್ ಸಹಾಯ ಧನದ ಅರ್ಜಿಯನ್ನು ತಾತ್ಕಾಲಿಕ ನೋಂದಣಿ ಪ್ರಮಾಣ ಪತ್ರದ ಆಧಾರದ ಮೇಲೆ ಸ್ವೀಕರಿಸುವುದು. ಆದರೆ ಸಹಾಯ ಧನ ವಿತರಿಸುವ ಮುನ್ನ ಶಾಶ್ವತ ನೋಂದಣಿ ಪ್ರಮಾಣ ಪತ್ರದ ದೃಡೀಕರಿಸಿದ ನಕಲು ಪ್ರತಿಯನ್ನು ಪಡೆಯುವುದು.

20. ಪ್ರತಿ ಮಾಹೆಯ ಅಂತ್ಯಕ್ಕೆ ಸಹಾಯಧನ ಪಡೆದ ಫಲಾನುಭವಿಗಳ ವಿವರಗಳನ್ನು ಗಣಕೀಕರಿಸಿ ಅಂತರ್ಜಾಲದಲ್ಲಿ ಅಳವಡಿಸುವುದು. ಅದೇ ಪಟ್ಟಿಯನ್ನು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಜನ ಪ್ರತಿನಿಧಿಗಳಿಗಾಗಿ ಮಾಹಿತಿಯನ್ನು ಸಲ್ಲಿಸುವುದು ಮತ್ತು ಪತ್ರಿಕಾ ಪ್ರಕಟಣೆಗೆ ಜಿಲ್ಲಾ ವಾರ್ತಾಧಿಕಾರಿಗಳು. ವಾರ್ತಾ ಮತ್ತು ಪ್ರಚಾರ ಇಲಾಖೆಗೆ ನೀಡುವುದು.
21. ಬಿಡುಗಡೆಯಾದ ಅನುದಾನದ ಶೇ. 75 ರಷ್ಟು ವೆಚ್ಚ ಭರಿಸಿದ ನಂತರ ಕೂಡಲೇ ಕೇಂದ್ರ ಕಛೇರಿಗೆ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸುವುದು.
22. ಒಬ್ಬನೇ ಫಲಾನುಭವಿಯು ಒಂದಕ್ಕಿಂತ ಹೆಚ್ಚಿನ ವಿವಿಧ (ಬೇರೆ ಬೇರೆ) ಸವಲತ್ತುಗಳನ್ನು ಪಡೆಯಲು ಅನುದಾನ ಲಭ್ಯತೆ ನೋಡಿ ಕೊಂಡು ಅವಕಾಶ ನೀಡುವುದು. ಆದರೆ ಒಂದೇ ಸವಲತ್ತನ್ನು ಒಮ್ಮೆ ಮಾತ್ರ ಪಡೆಯಲು ಅರ್ಹರಿರುತ್ತಾರೆ.
23. ಸಹಾಯಧನದಡಿ ವಿತರಿಸಲಾದ/ಪಡೆದ ಎಲ್ಲಾ ಸವಲತ್ತುಗಳ ಮೇಲೆ "ಕರ್ನಾಟಕ ಸರ್ಕಾರದ ಕೃಷಿ ಇಲಾಖಾ ಸಹಾಯ ಧನದನದ ನೆರವಿನಿಂದ ಖರೀದಿಸಲಾಗಿದೆ" ಎಂದು ದೊಡ್ಡ ಅಕ್ಷರಗಳಲ್ಲಿ ಅಳಿಸಲಾಗದ ಬಣ್ಣದಿಂದ ಬರೆಸತಕ್ಕದ್ದು.

ಸೂಚನೆ: ಲೆಕ್ಕ ಶೀರ್ಷಿಕೆವಾರು ಜಿಲ್ಲಾವಾರು ಭೌತಿಕ ಮತ್ತು ಆರ್ಥಿಕ ಗುರಿಯನ್ನು ಪ್ರತ್ಯೇಕವಾಗಿ ಮುಂದಿನ ದಿನಗಳಲ್ಲಿ ನೀಡಲಾಗುವುದು.

ಕರ್ನಾಟಕ ಸರ್ಕಾರ

ಸಂಖ್ಯೆ: ಕ್ಷೇಪ್ರ/ಕೃಯಾಂ/ಆರ್.ಸಿ/1/2009–10

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು–1,
ದಿನಾಂಕ: 16.10.2009
ಇ–ಮೇಲ್ : agrift@nic.in

ಸುತ್ತೋಲೆ

ವಿಷಯ : 2009–10 ನೇ ಸಾಲಿನ ಕೃಷಿ ಯಂತ್ರೋಪಕರಣ ಹಾಗೂ ಕೃಷಿ ಸಂಸ್ಕರಣಾ ಘಟಕಗಳಿಗೆ ಸಹಾಯಧನ ನೀಡಲು ಅರ್ಹಗೊಂಡ ಸಂಸ್ಥೆಗಳು ಮತ್ತು ದೊರೆಯುವ ಸಹಾಯಧನದ ಪಟ್ಟಿ.

ಉಲ್ಲೇಖ : 1. ಇಲಾಖಾ ಟೆಂಡರು ಪ್ರಕಟಣೆ ಸಂಖ್ಯೆ: ಕ್ಷೇಪ್ರ/ಕೃಯಾಂ/ಆರ್.ಸಿ/1/2009–10 ದಿನಾಂಕ: 9.6.2009.
2. ದಿನಾಂಕ: 20.9.09 ಹಾಗೂ 1.10.09 ರಂದು ನಡೆದ ದರ ಸಮಾಲೋಚನೆ ಸಭೆ ನಡುವಳಿಗಳು.

ಉಲ್ಲೇಖದನ್ವಯ ಕೃಷಿ ಯಂತ್ರೋಪಕರಣಗಳು ರಿಯಾಯಿತಿಯಲ್ಲಿ 2009–10ನೇ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳಡಿಯಲ್ಲಿ ಕೃಷಿ ಇಲಾಖೆ ಯಿಂದ ಸಹಾಯಧನದಲ್ಲಿ ವಿತರಿಸಲು ಟೆಂಡರು ಪ್ರಕ್ರಿಯೆ ಜರುಗಿಸಲಾಗಿತ್ತು. ವಿವಿಧ ಕೃಷಿ ಯತ್ರೋಪಕರಣಗಳ/ಕೃಷಿ ಸಂಸ್ಕರಣಾ ಘಟಕಗಳ/ಸಾಧನಗಳ ದರ ಕರಾರು ಪ್ರಕ್ರಿಯೆಯಲ್ಲಿ ಅರ್ಹಗೊಂಡ ಸಂಸ್ಥೆಗಳ ಸರಬರಾಜು ಮಾಡುವ ಮಾದರಿಗಳ ಪಟ್ಟಿ, ಗರಿಷ್ಠ ದರ ಹಾಗೂ ಅವುಗಳಿಗೆ ದೊರೆಯುವ ಸಹಾಯಧನದ ಮೊತ್ತದ ವಿವರಗಳುಳ್ಳ ಮೊದಲನೆ ದರಪಟ್ಟಿಯನ್ನು ಈ ಸುತ್ತೋಲೆಗೆ ಲಗತ್ತಿಸಿದೆ. ಸದರಿ ಪ್ರಕ್ರಿಯೆಯಲ್ಲಿ ಅರ್ಹಗೊಂಡ ಕೆಲವು ಸಂಸ್ಥೆಗಳ ಮಾದರಿಗಳ ದರವು ಹೆಚ್ಚಾಗಿರುವುದರಿಂದ ಸದರಿ ಸಂಸ್ಥೆಗಳ

ಮಾದರಿಗಳನ್ನು ತಾಂತ್ರಿಕ ಸಮಿತಿಯಲ್ಲಿ ಮತ್ತೊಮ್ಮೆ ಪರಿಶೀಲಿಸಿ ಎರಡನೆಯ ದರಪಟ್ಟಿಯನ್ನು ನೀಡಲಾಗುವುದು.

ಕೃಷಿ ಯಂತ್ರೋಪಕರಣ/ ಕೃಷಿ ಸಂಸ್ಕರಣಾ ಘಟಕಗಳಿಗೆ/ ಸಾಧನಗಳಿಗೆ ಸಹಾಯಧನ ನೀಡುವಾಗ ಈ ಮುಂದಿನ ಅಂಶಗಳನ್ನು ಗಮನಿಸುವುದು.

1. ಈಗಾಗಲೇ ನೀಡಿರುವ ಕೃಷಿ ಯಂತ್ರೋಪಕರಣ/ಕೃಷಿ ಸಂಸ್ಕರಣಾ–ಯೋಜನೆಯ ಮಾರ್ಗಸೂಚಿ ಅನ್ವಯ ಹಾಗೂ ಸಂಬಂಧಪಟ್ಟ ಯೋಜನೆಗಳ ಮಾರ್ಗಸೂಚಿಗಳನ್ನು ಪರಿಪಾಲಿಸತಕ್ಕದ್ದು.
2. ಈ ಸುತ್ತೋಲೆಯಲ್ಲಿ ಅನುಮೋದಿಸಿರುವ ಸಂಸ್ಥೆಗಳ ಮಾದರಿಗಳು ಹಾಗೂ ಸಹಾಯಧನದ ಮೊತ್ತ 30–09–2010 ರವರೆಗೆ ಜಾರಿಯಲ್ಲಿ ಇರುವವು.
3. ಈ ಸುತ್ತೋಲೆಯಲ್ಲಿ ಅರ್ಹಗೊಂಡ ಸಂಸ್ಥೆಗಳ ಮಾದರಿಗಳ ಇಲಾಖಾ ಹಂತದಲ್ಲಿ ಸಂಸ್ಥೆಗಳೊಂದಿಗೆ ದರ ಸಮಾಲೋಚನೆ ನಂತರ, ಪರಿಷ್ಕರಿಸಿದ ಗರಿಷ್ಠ ದರಗಳು ಹಾಗೂ ಅವುಗಳಿಗೆ ದೊರೆಯುವ ಸಹಾಯಧನವನ್ನು ನಮೂದಿಸಲಾಗಿದೆ. ಪ್ರತಿ ಘಟಕಗಳಡಿ ನಿಗದಿಪಡಿಸಿದ ಸಹಾಯಧನ ಅಥವಾ ಘಟಕದ ಬೆಲೆಯ ಶೇ.50 ರಷ್ಟು ಅದರಲ್ಲಿ ಯಾವುದು ಕಡಿಮೆಯೊ ಆ ಸಹಾಯಧನವನ್ನು ಮಾತ್ರ ನೀಡುವುದು.
4. ರೈತರು ತಮಗೆ ಅವಶ್ಯ ಎನಿಸಿದ ಮತ್ತು ಇಚ್ಛೆಪಟ್ಟ ಅನುಮೋದಿತ ಸಂಸ್ಥೆಗಳ ಮಾದರಿಯನ್ನು ಪ್ರಚಲಿತವಿರುವ ಮಾರುಕಟ್ಟೆ / ಅನುಕೂಲಕರ ದರದಲ್ಲಿ ಚೌಕಾಸಿ ಮಾಡಿ ಫಲಾನುಭವಿಯ ವಂತಿಗೆಯನ್ನು ಮಾತ್ರ ನೀಡಿ ಸವಲತ್ತನ್ನು ಪಡೆಯಲು ಸಂಪೂರ್ಣವಾಗಿ ಸ್ವತಂತ್ರರಿರುತ್ತಾರೆ.
5. ಸದರಿ ಕೃಷಿ ಯಂತ್ರೋಪಕರಣ/ಕೃಷಿ ಸಂಸ್ಕರಣಾ ಘಟಕಗಳನ್ನು ಅನುಮೋದಿತ ಸಂಸ್ಥೆಗಳು ಅಥವಾ ಅವರ ಅಧಿಕೃತ ಮಾರಾಟಗಾರರಿಂದ (ಕೃಷಿ ಇಲಾಖೆಯ ಕೇಂದ್ರ ಕಛೇರಿಯಿಂದ ಅನುಮೋದಿತ) ಮಾತ್ರ ಖರೀದಿಸಲು ರೈತರಿಗೆ ಅವಕಾಶವಿದೆ.

6. ದರ ಕರಾರು ಪ್ರಕ್ರಿಯೆಯಲ್ಲಿ ಅನುಮೋದನೆಗೊಂಡ ತಯಾರಕರು/ ಆಮದುದಾರರು/ಹಂಚಿಕೆದಾರರು ಸಲ್ಲಿಸಿರುವ ವಿತರಕರ ಪಟ್ಟಿಯನ್ನು ಈ ದರ ಕರಾರು ಕಿರುಹೊತ್ತಿಗೆಯೊಡನೆ ಲಗತ್ತಿಸಿದೆ.
7. ಎಂಜಿನ್ ಮತ್ತು ಮೋಟಾರ್‌ಗಳನ್ನು ಪ್ರತ್ಯೇಕವಾಗಿ ಸರಬರಾಜು ಮಾಡುವಲ್ಲಿ ಐಎಸ್‌ಐ ಗುರುತುಳ್ಳ ಎಂಜಿನ್ ಮತ್ತು ಮೋಟಾರ್ ಗಳನ್ನು ಮಾತ್ರ ಸರಬರಾಜು ಮಾಡುವುದು.
8. ಸಹಾಯಧನದಡಿ ಸವಲತ್ತನ್ನು ಪಡೆಯಲಿಚ್ಚಿಸುವ ರೈತರು, ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ದಾಖಲಾತಿಗಳೊಂದಿಗೆ ರೈತ ಸಂಪರ್ಕ ಕೇಂದ್ರ/ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸುವುದು.
9. ಅರ್ಜಿ ಸಲ್ಲಿಸಿದ ಎಲ್ಲಾ ರೈತರಿಗೆ ಸ್ವೀಕೃತಿ ಪತ್ರವನ್ನು ನೀಡುವುದು.
10. ಸ್ವೀಕೃತವಾದ ಎಲ್ಲಾ ಅರ್ಜಿಗಳ ವಿವರಗಳನ್ನು ಒಂದು ಪ್ರತ್ಯೇಕ ವಹಿಯಲ್ಲಿ ದಾಖಲಿಸುವುದು.
11. ಯಂತ್ರೋಪಕರಣಗಳ ಒಟ್ಟು ಮೌಲ್ಯ ರೂ.20000/–ಕ್ಕಿಂತ ಹೆಚ್ಚಿದ್ದಲ್ಲಿ ಸರಬರಾಜುದಾರರು ಸರಬರಾಜು ಮಾಡಿದ ಸವಲತ್ತು ಮತ್ತು ಫಲಾನುಭವಿಯನ್ನೊಳಗೊಂಡ ಛಾಯಾಚಿತ್ರವನ್ನು ಸಹಾಯಕ ಕೃಷಿ ನಿರ್ದೇಶಕರ ಸಹಿ ಪಡೆದು ಸಹಾಯ ಧನದ ಬಿಲ್ಲಿನೊಂದಿಗೆ ಸಹಾಯಕ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.
12. ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಸದರಿ ಛಾಯಾಚಿತ್ರಗಳನ್ನು ವರ್ಷಾವಾರು ಮತ್ತು ಘಟಕವಾರು ವಿಂಗಡಿಸಿ ಆಲ್ಬಂ (album) ಮಾಡಿ ಇಟ್ಟುಕೊಳ್ಳತಕ್ಕದ್ದು.
13. ವಿತರಕರು ಉಪಕರಣ ಸರಬರಾಜು ಮಾಡುವಾಗ ಪ್ರತಿ ಉಪಕರಣಗಳ ಮೇಲೆ "2009–10 ಸಾಲಿನಲ್ಲಿ ಕೃಷಿ ಇಲಾಖಾ ಸಹಾಯಧನ ಪಡೆಯಲಾಗಿದೆ" ಎಂದು ಮುದ್ರಿಸುವುದು. ಮತ್ತು ಸಂಬಂಧಿಸಿದ ಸಂಸ್ಥೆಗಳ ಹೆಸರು, ಬ್ರಾಂಡ್ ಹಾಗೂ ಇತರೆ ಅಂಶಗಳನ್ನು ಸವಲತ್ತಿನ ಮೇಲೆ ಎಂಬೋಜ್ ಮಾಡುವುದು. ಎಂಬೋಜ್ ಮಾಡಲು ಕಷ್ಟಸಾಧ್ಯವಿದ್ದಲ್ಲಿ ವಿವರಗಳುಳ್ಳ ಪ್ಲೇಟ್ ಗಳನ್ನು ತಯಾರಿಸಿ ಯಂತ್ರೋಪಕರಣಗಳಿಗೆ ರಿವೀಟ್ ಮಾಡುವುದು.

O 30 E-30

14. ಉಪಕರಣಗಳನ್ನು ಸಹಾಯಕ ಕೃಷಿ ನಿರ್ದೇಶಕರ ಗಮನಕ್ಕೆ ತಂದು ಸರಬರಾಜು ಮಾಡುವುದು.
15. ಉಪಕರಣಗಳೊಂದಿಗೆ ಉಪಯೋಗಿಸುವ ವಿಧಾನದ (Users manual) ಹಾಗೂ ಅಳತೆ / Specification ಇರುವ ಕೈಪಿಡಿಯನ್ನು ಒದಗಿಸುವುದು.
16. ಉಪಕರಣಗಳ ಪ್ರಾತ್ಯಕ್ಷಿಕೆಯನ್ನು ತಪ್ಪದೇ ಸರಬರಾಜುದಾರರೇ ಏರ್ಪಡಿಸುವುದು.
17. 7.5 ಹೆಚ್.ಪಿ. ಗಿಂತ ಅಧಿಕ ಸಾಮರ್ಥ್ಯದ ಡೀಸಲ್ ಪಂಪುಸೆಟ್ ಗಳಿಗೆ ಸಹಾಯಧನವನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರದ ಅನುದಾನದಲ್ಲಿ ಭರಿಸುವುದು.
18. ಕೇಂದ್ರ ಸರ್ಕಾರದ ವರ್ಕ್ ಪ್ಲಾನ್ ಮಾರ್ಗಸೂಚಿ ಅನ್ವಯ ಅನುಮೋದಿತ ಉಪಕರಣಗಳಿಗೆ ನಿಗದಿಪಡಿಸಿದ ಕೇಂದ್ರ ಸರ್ಕಾರದ ಸಹಾಯಧನ (ಶೇಕಡವಾರು ಗರಿಷ್ಟ ಮೊತ್ತ) ವನ್ನು ಅನುಮೋದಿತ ಉಪಕರಣಗಳಿಗೆ ಪ್ರತ್ಯೇಕವಾಗಿ ನೀಡಲಾಗಿರುತ್ತದೆ. ಅಂತಹ ಉಪಕರಣಗಳಿಗೆ ವರ್ಕ್ ಪ್ಲಾನ್ ಲೆಕ್ಕ ಶೀರ್ಷಿಕೆ 2401–00–800–1–32ಅಡಿ ಬಿಡುಗಡೆ ಮಾಡುವ ಅನುದಾನದೊಂದಿಗೆ (ರಾಜ್ಯ ಅಥವಾ ಜಿಲ್ಲಾ ವಲಯ) ರಾಜ್ಯ ಸರ್ಕಾರದ ಅನುದಾನವನ್ನು ಸಮನ್ವಯಗೊಳಿಸಿ ಸಹಾಯಧನವನ್ನು ಎರಡು ಬಿಲ್ಲುಗಳಲ್ಲಿ ಭರಿಸುವುದು. ರಾಜ್ಯದ ಪಾಲನ್ನು ಲೆಕ್ಕ ಶೀರ್ಷಿಕೆ 2401–00–800–1–44 ಅಥವಾ 2401–00–800–1–40 (ಜಿಲ್ಲಾ ವಲಯ) ಅಡಿ ಒದಗಿಸಿದ ಅನುದಾನದಲ್ಲಿ ಭರಿಸುವುದು. ಕರ್ನಾಟಕ ಕೃಷಿ ಯಾಂತ್ರೀಕರಣ ಅಭಿಯಾನ ಯೋಜನೆಯಡಿ (ಲೆಕ್ಕ ಶೀರ್ಷಿಕೆ 2401–00–800–1–57) ಎಲ್ಲಾ ಉಪಕರಣಗಳಿಗೆ ಒಂದೇ ಬಿಲ್ಲಿನಲ್ಲಿ ಸಹಾಯಧನವನ್ನು ಭರಿಸುವುದು.
19. ಒಟ್ಟು ಸಹಾಯಧನವನ್ನು ನೀಡಲಾಗಿರುವ ಉಪಕರಣಗಳಿಗೆ ಒಂದೇ ಬಿಲ್ಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಲೆಕ್ಕ ಶೀರ್ಷಿಕೆ 2401–00–800–1–57 ಅಥವಾ ಲೆಕ್ಕ ಶೀರ್ಷಿಕೆ 2401–00–800–1–44 ಅಥವಾ 2401–00–800–1–40 (ಜಿಲ್ಲಾವಲಯ) ಅಡಿ ಭರಿಸುವುದು.

20. ಸಹಾಯಧನವನ್ನು ದರ ಕರಾರು ಪ್ರಕ್ರಿಯೆಯಲ್ಲಿ ಅನುಮೋದನೆ ಗೊಂಡ ಸಂಸ್ಥೆಗಳಿಗೆ ಅಥವಾ ಅನುಮೋದಿತ ವಿತರಕರಿಗೆ ನೀಡಬಹುದು. ಆದರೆ ಕೇಂದ್ರ ಕಛೇರಿಯಿಂದ ಅನುಮೋದಿತ ಗೊಂಡ ವಿತರಕರು ಬಿಲ್ಲು ನೀಡಿದಲ್ಲಿ ಸದರಿ ಬಿಲ್ಲಿಗೆ ದರ ಕರಾರು ಪ್ರಕ್ರಿಯೆಯಲ್ಲಿ ಅನುಮೋದನೆಗೊಂಡ ಸಂಬಂಧಿಸಿದ ಸಂಸ್ಥೆಯ ಮೇಲು ಸಹಿಯಾಗಿರಬೇಕು.
21. ಅರ್ಜಿಯಲ್ಲಿ ನೀಡಿದ ಎಲ್ಲಾ ವಿವರಗಳನ್ನು ಹಾಗೂ ದಾಖಲಾತಿ ಗಳನ್ನು ಕೂಲಂಕಶವಾಗಿ ಪರಿಶೀಲಿಸಿ ನಿಯಾಮಾನುಸಾರ ಸಹಾಯ ಧನದ ಬಿಲ್ಲನ್ನು ತಯಾರಿಸಿ ಅರ್ಜಿ ಸಲ್ಲಿಸಿದ ಒಂದು ವಾರದೊಳಗಾಗಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ಮೇಲು ಸಹಿಗಾಗಿ ಸಲ್ಲಿಸುವುದು.
22. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ ತಕ್ಷಣವೇ ಮೇಲುಸಹಿ ಮಾಡುವುದು.
23. ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಿದ ಒಂದು ತಿಂಗಳೊಳಗಾಗಿ ಸಹಾಯಧನವನ್ನು ವಿತರಿಸುವುದು.
24. ಸಹಾಯಧನವನ್ನು ಸಂದರ್ಭೋಚಿತವಾಗಿ ಸರಬರಾಜುದಾರರ ಸಂಸ್ಥೆ ಅಥವಾ ಫಲಾನುಭವಿಯ ಬ್ಯಾಂಕ್ ಅಥವಾ ಫಲಾನುಭವಿಗೆ ನೀಡುವುದು.
25. ಕೈಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳನ್ನು ಕೇಂದ್ರ ಕಚೇರಿಯ ಅನುಮತಿ ಪಡೆದು ಕೃಷಿ ಯಾಂತ್ರೀಕರಣದ ಯೋಜನೆಯ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಲಭ್ಯವಿರುವ ಅನುದಾನವನ್ನು ಉಪಯೋಗಿಸಿ ಕೊಂಡು ವಿತರಿಸುವುದು. (ಕೇಂದ್ರ ಕಛೇರಿಯ ಸುತ್ತೋಲೆ ಸಂ.ಸಸಂವಿ/ತಾಂ–1/ಸಸಂರ/ಉ/ಎಂಪ್ಯಾನೆಲ್ಮೆಂಟ್ ಪಟ್ಟಿ/ 2009–10 ದಿ: 13.10.09)

(ಕರಡು ಕೃಷಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.)

ಸಹಿ/–
ಕೃಷಿ ಆಯುಕ್ತರ ಪರವಾಗಿ.

ಪ್ರತಿಯನ್ನು :-

1. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು. ಇವರ ಅವಗಾಹನೆಗಾಗಿ ಆದರಪೂರ್ವಕವಾಗಿ ಸಲ್ಲಿಸಿದೆ.
2. ಅಪರ ಕೃಷಿ ನಿರ್ದೇಶಕರು (ಮಾನವ ಸಂಪನ್ಮೂಲ ಅಭಿವೃದ್ಧಿ/ ಬೆಳೆ ಅಭಿವೃದ್ಧಿ & ಯೋಜನೆ/ ಸಾವಯವ ಕೃಷಿ ಇವರ ಮಾಹಿತಿಗಾಗಿ ಕಳುಹಿಸಿದೆ.
3. ಮುಖ್ಯ ಲೆಕ್ಕಾಧಿಕಾರಿಗಳು ಮತ್ತು ಕಾನೂನು ಅಧಿಕಾರಿಗಳು, ಕೇಂದ್ರ ಕಛೇರಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಪ್ರತಿಯನ್ನು ಅನುಸರಣಾ ಮತ್ತು ಅನುಪಾಲನಾ ಕ್ರಮಕ್ಕಾಗಿ ರವಾನಿಸಿದೆ.

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತಿಗಳು.
2. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಹಾಗೂ ಎಲ್ಲಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು
3. ಎಲ್ಲಾ ರೈತ ಸಂಪರ್ಕ ಕೇಂದ್ರಗಳ ಕೃಷಿ ಅಧಿಕಾರಿಗಳು
4. ಸಂಬಂಧಪಟ್ಟ ಸಂಸ್ಥೆಗಳು.

ಟ್ರಾಕ್ಟರ್ ಸರಬರಾಜಿಗೆ ಅನುಮೋದಿತ ಸಂಸ್ಥೆಗಳ ಮಾದರಿವಾರು ದರಗಳು ಹಾಗೂ ಸಹಾಯಧನ (ರೂ.ಗಳಲ್ಲಿ)

ಕ್ರ ಸಂ.	ಸಂಸ್ಥೆ	ಮಾದರಿ	ದರ
1	2	3	4
1	ಮೆ. ಇಂಡೋಫಾರ್ಮ್ ಟ್ರಾಕ್ಟರ್ಸ್ ಅಂಡ್ ಮೋಟರ್ಸ್ ಲಿ. ಎಸ್.ಸಿ.ಒ. 859, ಎನ್.ಎ.ಸಿ. ಕಾಲ್ಕಾ ರೋಡ್, ಮಣಿಮಾಜ್ರ, ಚಂಡಿಗಡ-160101.	ಇಂಡೋಫಾರ್ಮ್ – 2030 ಡಿಐ	362505
		ಇಂಡೋಫಾರ್ಮ್ – 2035 ಡಿಐ	400513

		ಇಂಡೋಫಾರ್ಮ್ – 2040 ಡಿಐ	427401
		ಇಂಡೋಫಾರ್ಮ್ – 3035 ಡಿಐ	400513
		ಇಂಡೋಫಾರ್ಮ್ – 3040 ಡಿಐ	427401
		ಇಂಡೋಫಾರ್ಮ್ – 3050 ಡಿಐ	481271
2.	ಮೆಃ ವಿ.ಎಸ್.ಟಿ. ಟಿಲ್ಲರ್ಸ್ ಅಂಡ್ ಟ್ರ್ಯಾಕ್ಟರ್ಸ್ ಲಿ. ವೈಟ್ ಫೀಲ್ಡ್ ರೋಡ್, ಪೋಸ್ಟ್ ಬಾಕ್ಸ್ ನಂ.4801, ಮಹದೇವಪುರ ಪೋಸ್ಟ್, ಬೆಂಗಳೂರು–560 048.	ಮಿತ್ಸು ಬಿಷಿ ಶಕ್ತಿ ಎಂಟಿ 180 ಡಿ	258000
3	ಮೆ. ಜಾನ್ ಡೀರ್ ಇಕ್ವಿಪ್ ಮೆಂಟ್ ಪ್ರೈ ಲಿ., ಆಫ್ ಪುಣೆ ನಗರ್ ರೋಡ್, ಸಣಸವಾಡಿ, ಪುಣೆ–412208.	ಜಾನ್‌ಡೀರ್ 5103 ಎಕಾನಮಿ	457000
		ಜಾನ್‌ಡೀರ್ 5103 Version-II	480000
		ಜಾನ್‌ಡೀರ್ 5103 S Version-II	499000
		ಜಾನ್‌ಡೀರ್ 5038 ಡಿ	474000
4	ಮೆಃ ಎಸ್ಕಾರ್ಟ್ಸ್ ಲಿ., ಅಗ್ರಿಮೇಷಿನರಿ ಮಾರ್ಕೆಟಿಂಗ್ ಡಿವಿಜನ್, ನಂ.43, ಬಸವೇಶ್ವರ ಹೆಚ್.ಬಿ.ಸಿ.ಎಸ್. 2ನೇ ಹಂತ, ಚಂದ್ರಲೇಔಟ್, ವಿಜಯನಗರ, ಬೆಂಗಳೂರು–40	ಎಸ್ಕಾರ್ಟ್ಸ್ ಜವಾನ್ (ಎಂಪಿಟಿ)	341400

		ಪವರ್‌ಟ್ರ್ಯಾಕ್ 434	425000
		ಪವರ್‌ಟ್ರ್ಯಾಕ್ 439	459310
		ಫಾರ್ಮ್‌ಟ್ರ್ಯಾಕ್ 30 (ಹೀರೋ)	425120
		ಪವರ್‌ಟ್ರ್ಯಾಕ್ 434 ಎಕ್ಸ್ ಎಲ್	428290
		ಪವರ್‌ಟ್ರ್ಯಾಕ್ 439 ಎಕ್ಸ್ ಎಲ್	467490
		ಎಸ್ಕಾರ್ಟ್ಸ್ 335 ಜೋಶ್ ಪ್ಲಸ್	377550
		ಪವರ್‌ಟ್ರ್ಯಾಕ್ 445	490360
		ಫಾರ್ಮ್ ಟ್ರ್ಯಾಕ್ ಚಾಂಪಿಯನ್	460040
5	ಮೆಃ ಮಹೀಂದ್ರ ಅಂಡ್ ಮಹೀಂದ್ರ ಲಿ. ಟ್ರಾಕ್ಟರ್ ಡಿವಿಜನ್, ರಹೇಜಾ ಚೇಂಬರ್ಸ್, 12, ಮ್ಯೂಸಿಯಂ ರೋಡ್, ಬೆಂಗಳೂರು-560 001	ಮಹೀಂದ್ರ 265 ಡಿಐ	399000
		ಮಹೀಂದ್ರ ಬಿ-275 ಡಿಐ	422700
		ಮಹೀಂದ್ರ ಬಿ-275 ಡಿಐ (ಹೈಟಾರ್ಕ್)	427700
		ಮಹೀಂದ್ರ 235 ಡಿಐ (ಏರ್ ಫೋ)	294000
		ಮಹೀಂದ್ರ 255 ಡಿಐ	301000
		ಮಹೀಂದ್ರ ಸ್ಯಾಕ್ಟರ್ (ಬ್ರಾಂಡ್ ಶ್ಯಾನ್)	290000
		ಮಹೀಂದ್ರ ಅರ್ಜುನ್ 445 ಡಿಐ	503000

		ಮಹೀಂದ್ರ 475 DI MKM New Bhoomiputra	464300
		ಮಹೀಂದ್ರ ಬಿ–295 ಡಿಐ ಸುಪರ್ ಟರ್ಬೋ	432600
6	ಮೆ: ಐಶರ್ ಟ್ರ್ಯಾಕ್ಟರ್ಸ್, (ಎ ಯುನಿಟ್ ಆಫ್ ಟಾಫೆ ಮೋಟರ್ಸ್ ಅಂಡ್ ಟ್ರಾಕ್ಟರ್ಸ್ ಲಿ.) ಹೆಚ್.ನಂ. 23//1, 1ನೇ ಮಹಡಿ, ಕ್ರಿಸೆಂಟ್ ರೋಡ್, ಹೈಗ್ರೌಂಡ್ಸ್, ಶಿವಾನಂದ ಸರ್ಕಲ್, ಬೆಂಗಳೂರು–560001.	ಐಶರ್–333	401040
		ಐಶರ್–368	416316
		ಐಶರ್–312	379950
		ಐಶರ್–242 ಎಕ್ಸ್ ಟ್ರಾಕ್	309856
		ಐಶರ್–380	445044
		ಐಶರ್–480	478353
7	ಮೆ. ಎಚ್.ಎಂ.ಟಿ. ಲಿ. ಟ್ರಾಕ್ಟರ್ ಗ್ರೂಪ್, ನಂ.59, ಬಳ್ಳಾರಿ ರೋಡ್, ಬೆಂಗಳೂರು–22.	ಎಚ್‌ಎಂಟಿ 3522	486000
		ಎಚ್‌ಎಂಟಿ 2522	396000
		ಎಚ್‌ಎಂಟಿ 2522 ಒಎಸ್.	387000
		ಎಚ್‌ಎಂಟಿ 3522 ಡಿ.ಎಕ್ಸ್	486000
		ಎಚ್‌ಎಂಟಿ 4022	498000
8	ಮೆ. ನ್ಯೂ ಹಾಲಂಡ್ ಟ್ರ್ಯಾಕ್ಟರ್ಸ್ (ಇಂಡಿಯಾ) ಪ್ರೈ.ಲಿ., ನಂ–50, ಓಕ್ಲಾ ಇಂಡಸ್ಟ್ರೀಯಲ್ ಎಸ್ಟೇಟ್–III, ನವ ದೆಹಲಿ–110 020.	ನ್ಯೂ ಹಾಲಂಡ್ 3030	448144

		ನ್ಯೂ ಹಾಲಂಡ್ 3130	469516
		ನ್ಯೂ ಹಾಲಂಡ್ 3037	459792
		ನ್ಯೂ ಹಾಲಂಡ್ 3230	490212
		ನ್ಯೂ ಹಾಲಂಡ್ 4510	510212
9	ಮೆಃ ಟ್ರ್ಯಾಕ್ಟರ್ಸ್ ಅಂಡ್ ಫಾರ್ಮ್ ಇಕ್ವಿಪ್‌ಮೆಂಟ್ ಲಿ. ನಂ35, ನುಂಗಂಬಕ್ಕಮ್ ಹೈರೋಡ್, ಚೆನ್ನೈ–600034.	ಎಂಎಫ್ 1035 ಡಿಐ	415080
		ಟಾಫೆ 2750 ಡಿಐ	302810
		ಟಾಫೆ 30 ಡಿಐ ಎಚ್‌ಡಿ	388710
		ಎಂಎಫ್ 1035 ಡಿಐ ಜೆ ಮಹಾಶಕ್ತಿ	430000
10	ಮೆ: ಪಿ.ಎಂ.ಡೀಸಲ್ಸ್ ಪ್ರೈ.ಲಿ., ಅಜಿ ಇಂಡಸ್ಟ್ರೀಯಲ್ ಎಸ್ಟೇಟ್, ಪೋಸ್ಟ್ ಬಾಕ್ಸ್ ನಂ.1003, ರಾಜ್ ಕೋಟ್–360 003.	ಫೀಲ್ಡ್ ಮಾರ್ಷಲ್ ಎಫ್ ಎಂ–625 ಡಿಐ	236200
11	ಮೆಃ ಇಂಟರ್ ನ್ಯಾಷನಲ್ ಟ್ರ್ಯಾಕ್ಟರ್ಸ್ ಲಿ., ಸೋನಾಲಿಕಾ ಹೌಸ್, 283, ಎಜಿಸಿಆರ್ ಎನ್‌ಕ್ಲೇವ್, ಕರ್‌ಕರ್ ಡೂಮ, ದೆಹಲಿ–110 092.	ಇಂಟರ್ ನ್ಯಾಷನಲ್ ಡಿ.ಐ. 30 Baagban	335750
12	ಮೆ. ಕ್ಯಾಪ್ಟನ್ ಟ್ರಾಕ್ಟರ್ಸ್ ಪ್ರೈ.ಲಿ. 106, ರಾಯಲ್	ಕ್ಯಾಪ್ಟನ್ ಡಿಐ 2600 ಮಿನಿ	246500

	ಕಾಂಪ್ಲೆಕ್ಸ್ ಭುತಖಾನ ಚೌಕ್, ದೇಬರ್ ರೋಡ್, ರಾಜಕೋಟ್–360002, ಗುಜರಾತ್.	ಟ್ರಾಕ್ಟರ್	
13	ಮೆ: ಸ್ಟ್ಯಾಂಡರ್ಡ್ ಕಾರ್ಪೊರೇಷನ್ (ಇಂಡಿಯಾ) ಲಿ. ಸ್ಟ್ಯಾಂಡರ್ಡ್ ಚೌಕ್, ಹಂಡಿಯಾಯ, ಬರ್ನಾಲ –148101.	ಸ್ಟ್ಯಾಂಡರ್ಡ್ 330	394500
		ಸ್ಟ್ಯಾಂಡರ್ಡ್ 335	438000
		ಕನಿಷ್ಟ ದರ	236200
		ಒಟ್ಟು ಸಹಾಯ ಧನ	60000/–
		ಕೇಂದ್ರದ ಪಾಲು	45000/–
		ರಾಜ್ಯದ ಪಾಲು	15000/–

ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂಖ್ಯೆ: ಕ್ಷೇಪ್ರ/ಕೃಯಾಂ/ಆರ್.ಸಿ/1/2009-10

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-1,
ದಿನಾಂಕ: 11.02.2010
ಇ-ಮೇಲ್ : agrift@nic.in

ಸುತ್ತೋಲೆ

ವಿಷಯ : ಕೇಂದ್ರ ಸರ್ಕಾರದ ಅನುಮೋದಿತ ಟ್ರಾಕ್ಟರ್ ಮಾದರಿಗಳ ತಯಾರಕರನ್ನು ನೊಂದಣಿ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ :

1. ಇಲಾಖಾ ಟೆಂಡರು ಪ್ರಕಟಣೆ ಸಂಖ್ಯೆ: ಕ್ಷೇಪ್ರ/ಕೃಯಾಂ/ಆರ್.ಸಿ/1/2009-10 ದಿ: 9.6.2009
2. ಇದೇ ಕಛೇರಿಯ ಸಮ ಸಂಖ್ಯೆಯ ದಿ: 16-10-2009 ರ ಸುತ್ತೋಲೆ.
3. ಇದೇ ಕಛೇರಿಯ ಸಮ ಸಂಖ್ಯೆಯ ದಿ: 30-1-2010ರ ಸುತ್ತೋಲೆ.
4. ಕೇಂದ್ರ ಸರ್ಕಾರದ ಪತ್ರ ಸಂ. 13-10/99-My(I&P) ದಿ: 10-09-09
5. ಇದೇ ಕಛೇರಿಯ ಸಮ ಸಂಖ್ಯೆಯ ದಿ: 18-01-10ರ ಕೇಂದ್ರ ಸರ್ಕಾರದ ಅನುಮೋದಿತ ಟ್ರಾಕ್ಟರ್ ಮಾದರಿಗಳ ತಯಾರಕರ ನೋಂದಣಿ ಪ್ರಕಟಣೆ.

ಉಲ್ಲೇಖ ಪತ್ರ (1) ರನ್ವಯ ಕೃಷಿ ಯಂತ್ರೋಪಕರಣಗಳನ್ನು ಕೃಷಿ ಇಲಾಖೆಯ ವಿವಿಧ ಕಾರ್ಯಕ್ರಮಗಳಡಿಯಲ್ಲಿ ಸಹಾಯಧನದಡಿ ವಿತರಿಸಲು ಜರುಗಿದ ಟೆಂಡರು ಪ್ರಕ್ರಿಯೆ ಅರ್ಹಗೊಂಡ ಟ್ರ್ಯಾಕ್ಟರ್ ತಯಾರಕ ಸಂಸ್ಥೆಗಳ

ಕೇಂದ್ರ ಸರ್ಕಾರದ ಅನುಮೋದಿತ ಟ್ರ್ಯಾಕ್ಟರ್ ಮಾದರಿಗಳ ಪಟ್ಟಿ, ಗರಿಷ್ಠ ದರ ಹಾಗೂ ದೊರೆಯುವ ಸಹಾಯಧನದ ಮೊತ್ತದ ವಿವರಗಳನ್ನು ಉಲ್ಲೇಖಿತ ಸುತ್ತೋಲೆ (2) ಮತ್ತು (3) ರನ್ವಯ ನೀಡಲಾಗಿತ್ತು. ಆದರೆ ಉಲ್ಲೇಖಿತ ಪತ್ರ (4) ರನ್ವಯ ಕೇಂದ್ರ ಸರ್ಕಾರವು ಸಹಾಯಧನ ಪಡೆಯಲು ಅರ್ಹವಿರುವ ಟ್ರಾಕ್ಟರ್ ಮಾದರಿಗಳ ಪಟ್ಟಿಯನ್ನು ಪರಿಷ್ಕರಿಸಿರುತ್ತಾರೆ. ಅದರಂತೆ ಉಲ್ಲೇಖಿತ (5) ರಂತೆ ಕೇಂದ್ರ ಸರ್ಕಾರದ ಅನುಮೋದಿತ ಪಟ್ಟಿಯಲ್ಲಿರುವ 114 ಟ್ರಾಕ್ಟರ್ ಮಾದರಿಗಳಲ್ಲಿ ಈಗಾಗಲೇ ಇಲಾಖೆಯಲ್ಲಿ ಅನುಮೋದನೆಗೊಳ್ಳದ ಟ್ರಾಕ್ಟರ್ ಮಾದರಿಗಳ ತಯಾರಕರನ್ನು ನೋಂದಣಿಗಾಗಿ ನೋಂದಣಿ ಪ್ರಕಟಣೆ ಹೊರಡಿಸಲಾಗಿತ್ತು. ಸದರಿ ನೋಂದಣಿ ಪ್ರಕ್ರಿಯೆಯಲ್ಲಿ ಅರ್ಹಗೊಂಡ ಟ್ರಾಕ್ಟರ್ ತಯಾರಕರು. ಹಾಗು ಅವರ ಮಾದರಿಗಳನ್ನು ಖರೀದಿಸಿದ ರೈತರಿಗೂ ಸಹ ಸಹಾಯಧನ ಒದಗಿಸಲು ಆದೇಶಿಸಲಾಗಿದೆ. ಟ್ರಾಕ್ಟರ್‌ಗೆ ಸಹಾಯಧನ ಒದಗಿಸುವಾಗ ಉಲ್ಲೇಖಿತ (2) ಸುತ್ತೋಲೆಯಲ್ಲಿ ನೀಡಿದ ಅಂಶಗಳೊಂದಿಗೆ ಈ ಕೆಳಕಂಡ ಅಂಶಗಳನ್ನು ಪಾಲಿಸಲು ಸೂಚಿಸಲಾಗಿದೆ.

- ಟ್ರಾಕ್ಟರ್ ಸಹಾಯಧನವನ್ನು ನೇರವಾಗಿ ಟ್ರಾಕ್ಟರ್ ಖರೀದಿಸಲು ಸಾಲ ಒದಗಿಸಿದ ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡುವುದು.
- ಯಾವುದೇ ಕಾರಣಕ್ಕೆ ಟ್ರಾಕ್ಟರ್ ವಿತರಕರ (ಡೀಲರ್) ಸಂಸ್ಥೆಗೆ ಅಥವಾ ಸಾಲ ಒದಗಿಸಿದ ಬ್ಯಾಂಕ್ ಖಾತೆಯ ಬದಲಾಗಿ ಬೇರೆ ಬ್ಯಾಂಕ್ ಖಾತೆಗೆ ಸಹಾಯ ಧನವನ್ನು ನೀಡಬಾರದು.
- ಟ್ರಾಕ್ಟರ್ ಮಾದರಿಗಳ ದರಗಳು ಗರಿಷ್ಠ ದರಗಳಾಗಿದ್ದು ರೈತರು ಅನುಕೂಲಕರ ದರಕ್ಕೆ ಚೌಕಾಸಿ ಮಾಡಿ ಖರೀದಿಸಲು ಅವಕಾಶವಿರುತ್ತದೆ.
- ಇಲಾಖೆಗೆ ನೀಡಿದ ಟ್ರಾಕ್ಟರ್ ಮಾದರಿಗಳ ದರಗಳು ಮುಕ್ತ ಮಾರುಕಟ್ಟೆಯ ದರಕ್ಕಿಂತ ಹೆಚ್ಚಿದ್ದಲ್ಲಿ ಸಂಬಂಧಿಸಿದ ಸಂಸ್ಥೆಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
- ಅನುಮೋದಿತ ಪಟ್ಟಿಯಲ್ಲಿ ಇರುವಂತೆ ಮಾದರಿಗಳಿಗೆ ಮಾತ್ರ ಸಹಾಯಧನವನ್ನು ಒದಗಿಸುವುದು. ಸಹಾಯಧನ ಒದಗಿಸುವ ಮುನ್ನ ಸರಬರಾಜು ಮಾದರಿಗಳನ್ನು ಕೂಲಂಕಷವಾಗಿ ಪರಿಶೀಲಿಸುವುದು.

ಅನುಮೋದಿಸಿದ ಟ್ರಾಕ್ಟರ್ ತಯಾರಕ ಸಂಸ್ಥೆ ಹಾಗೂ ಅನುಮೋದಿತ ಮಾದರಿಗಳ ಗರಿಷ್ಟ ದರದ ವಿವರಗಳು (ರೂಗಳಲ್ಲಿ)

ಕ್ರ ಸಂ.	ಸಂಸ್ಥೆ	ಮಾದರಿ	ದರಗಳು
1	ಮೆ: ಎಸ್ಕಾರ್ಟ್ಸ್ ಲಿ., ಅಗ್ರಿಮೆಷಿನರಿ ಮಾರ್ಕೆಟಿಂಗ್ ಡಿವಿಜನ್, ನಂ.43, ಬಸವೇಶ್ವರ ಹೆಚ್.ಬಿ.ಸಿ.ಎಸ್. 2ನೇ ಹಂತ, ಚಂದ್ರಲೇಔಟ್, ವಿಜಯನಗರ, ಬೆಂಗಳೂರು–40	ಪವರ್ ಟ್ರ್ಯಾಕ್ 439 ಡಿಎಕ್ಸ್	496998
2	ಮೆ: ಮಹೀಂದ್ರ ಅಂಡ್ ಮಹೀಂದ್ರ ಲಿ. (FES) ಸ್ವರಾಜ್ ಡಿವಿಷನ್, 4ನೇ ಫೇಸ್, ಎಸ್.ಎ.ಎಸ್. ನಗರ, ಮೊಹಾಲಿ ಜಿಲ್ಲೆ ರೊಪಾರ್, ಪಂಜಾಬ್– 160055	ಸ್ವರಾಜ್ 722 ಸೂಪರ್	340807
		ಸ್ವರಾಜ್ 724 ಎಫ್‌ಇ	382914
		ಸ್ವರಾಜ್ 733 ಎಫ್‌ಇ (8+2) ಸ್ಪೀಡ್ ಗೇರ್ ಬಾಕ್ಸ್	416241
		ಸ್ವರಾಜ್ 735	481896

		ಎಫ್‌ಇ (8+2)	
		ಸ್ವರಾಜ್ 834 ಎಫ್‌ಇ	430299
		ಸ್ವರಾಜ್ 724 ಎಫ್‌ಇ ಆರ್ಚರ್ಡ್	379363
		ಸ್ವರಾಜ್ 735 ಎಕ್ಸ್‌ಎಂ	487912
		ಸ್ವರಾಜ್ 843 ಎಕ್ಸ್.ಎಂ.	500179
		ಸ್ವರಾಜ್ 834 ಎಕ್ಸ್.ಎಂ.	439744
		ಸ್ವರಾಜ್ 724 ಎಕ್ಸ್.ಎಂ.	382914
3	ಮೆಃ ನ್ಯೂ ಹಾಲಂಡ್ ಟ್ರ್ಯಾಕ್ಟರ್ಸ್ (ಇಂಡಿಯಾ) ಪ್ರೈ.ಲಿ., ನಂ.50, ಓಕ್ಲಾ ಇಂಡಸ್ಟ್ರಿಯಲ್ ಎಸ್ಟೇಟ್–ಐಐಐ, ನವದೆಹಲಿ–20.	ನ್ಯೂ ಹಾಲಂಡ್ 4010	482904
4	ಮೆಃ ಟ್ರಾಕ್ಟರ್ಸ್ ಅಂಡ್ ಫಾರ್ಮ್ ಇಕ್ವಿಪ್‌ಮೆಂಟ್ ಲಿ. ನಂ.35, ನ್ಯುಂಗಂಬಕ್ಕಮ್ ಹೈರೋಡ್, ಚೆನ್ನೈ–600034.	ಟಾಫೆ ಎಂಎಫ್ 241 ಡಿಐಜೆ ಮಹಾಶಕ್ತಿ	466506
		ಟಾಫೆ ಎಂಎಫ್ 241 ಡಿಐ ಪ್ಲಾನಿಟರಿ ಡ್ರೈವ್	494076
		ಟಾಫೆ ಎಂಎಫ್	490138

		4410	
5	ಮೆಃ ಕುಬೋಟ ಅಗ್ರಿಕಲ್ಚರಲ್ ಮೆಶಿನರಿ ಇಂಡಿಯಾ ಪ್ರೈ ಲಿ., ರೀಗಸ್ ಲೆವೆಲ್–12, ಅಲ್ಬಿಯಸ್ ಓಲಂಪಿಯಾ ಟೆಕ್‌ಪಾರ್ಕ್, ನಂ.1, ಎಸ್‌ಐಡಿಸಿಓ ಇಂಡಸ್ಟ್ರೀಯಲ್ ಎಸ್ಟೇಟ್, ಗಿಂಡಿ, ಚೆನ್ನೈ–32	ಕುಬೋಟ ಜಪಾನ್ ಬಿ–2420	443000
		ಕುಬೋಟ ಜಪಾನ್ ಎಲ್–3408 ಡಿಡಿ	630000
6	ಮೆಃ ಪ್ರೀತ್ ಟ್ರಾಕ್ಟರ್ಸ್ ಪ್ರೈ.ಲಿ., ಪೋಸ್ಟ್ ಬಾಕ್ಸ್–28, ಪಾಟೀಯಾಲ ರೋಡ್, ನಾಭಾ–147201 (ಪಂಜಾಬ್)	ಪ್ರೀತ್ 3549– ಐ	465000
		ಪ್ರೀತ್ 4049– ಐ	478000
		ಪ್ರೀತ್ 5049– ಐ	488540
7	ಮೆ. ಸಾಮೆ ಡಚ್ ಫಾಹರ್ ಇಂಡಿಯಾ ಪ್ರೈ.ಲಿ. ನಂ.45/3 ಬೆಲ್ ಮಾರ್ ಎಸ್ಟೇಟ್, ನಾಗಸಂದ್ರಹಳ್ಳಿ, 8ನೇ ಮೈಲಿಕಲ್ಲು, ತುಮಕೂರು ರೋಡ್, ಬೆಂಗಳೂರು–73	ಸಾಮೆ 36 ಡಿಐ ಯೂರೋ ಡಬ್ಲ್ಯೂ	396245
		ಸಾಮೆ 393	426864
		ಸಾಮೆ 403	455608
8	ಮೆ. ಫೋರ್ಸ್ ಮೋಟಾರ್ಸ್ ಲಿ. ಮುಂಬೈ ಪುಣೆ ರೋಡ್ ಅಕುರ್ಡಿ ಪುಣೆ–411035.	ಟೆಂಪೋ ಓಎಕ್ಸ್ 25 (ಆರ್ಚ್‌ಡ್ ಸ್ಪೆಷಲ್)	356338
		ಬಲವಾನ್ 330	415386
		ಟೆಂಪೋ	458211

		ಬಲವಾನ್ 400	
		ಒಟ್ಟು ಸಹಾಯ ಧನ	60000
		ಕೇಂದ್ರದ ಪಾಲು	45000
		ರಾಜ್ಯದ ಪಾಲು	15000

(ಕರಡು ಕೃಷಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಪ್ರತಿಯನ್ನು :-

೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು. ಇವರ ಅವಗಾಹನೆಗಾಗಿ ಅದರಪೂರ್ವಕವಾಗಿ ಸಲ್ಲಿಸಿದೆ.

೨. ಅಪರ ಕೃಷಿ ನಿರ್ದೇಶಕರು (ಮಾನವ ಸಂಪನ್ಮೂಲ ಅಭಿವೃದ್ಧಿ/ ಬೆಳೆ ಅಭಿವೃದ್ಧಿ & ಯೋಜನೆ/ ಸಾವಯವ ಕೃಷಿ), ಮುಖ್ಯ ಲೆಕ್ಕಾಧಿಕಾರಿಗಳು ಮತ್ತು ಕಾನೂನು ಅಧಿಕಾರಿಗಳು, ಕೇಂದ್ರ ಕಛೇರಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಪ್ರತಿಯನ್ನು ಅನುಸರಣಾ ಮತ್ತು ಅನುಪಾಲನಾ ಕ್ರಮಕ್ಕಾಗಿ ರವಾನಿಸಿದೆ.

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ಜಿಲ್ಲೆಗಳ ಪಂಚಾಯತಿಗಳು
2. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು, ಎಲ್ಲಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು ಹಾಗೂ ಎಲ್ಲ ರೈತ ಸಂಪರ್ಕ ಕೇಂದ್ರಗಳ ಕೃಷಿ ಅಧಿಕಾರಿಗಳು (ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳ ಮುಖಾಂತರ)
3. ಸಂಬಂಧಪಟ್ಟ ಸಂಸ್ಥೆಗಳು.

(ಕರಡು ಕೃಷಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕೃಷಿ ಆಯುಕ್ತರ ಪರವಾಗಿ.

ಬೆಂಗಳೂರು ಮಾಗಡಿ ಮಧ್ಯೆ ಇರುವ ತಿಪ್ಪಗೊಂಡನಹಳ್ಳಿ ಸೇತುವೆ ಪೂರ್ಣಗೊಳಿಸುವುದು

489 (636) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಾಗಡಿ ಮುಖ್ಯ ರಸ್ತೆಯ ತಿಪ್ಪಗೊಂಡನಹಳ್ಳಿ ಸೇತುವೆ ಎಂದು ಪ್ರಾರಂಭಿಸಲಾಯಿತು; ಇದರ ರೂಪುರೇಷೆಗಳೇನು; ಇದನ್ನು ಎಂದು ಪೂರ್ಣಗೊಳಿಸಬೇಕಾಗಿತ್ತು;

ಆ) ಕಳೆದ ಎರಡೂ ಅಧಿವೇಶನಗಳಲ್ಲಿ ಕ್ರಮವಾಗಿ ಅಕ್ಟೋಬರ್ 2009 ಹಾಗೂ ಫೆಬ್ರವರಿ 2010ರ ಒಳಗಾಗಿ ಪೂರ್ಣಗೊಳಿಸಲಾಗುವುದೆಂದು ಸರ್ಕಾರ ಉತ್ತರ ನೀಡಿದ್ದು, ಇನ್ನೂ ಮುಗಿಯದೇ ಇರಲು ಕಾರಣಗಳೇನು;

ಇ) ಎಂದು ಈ ಸೇತುವೆಯನ್ನು ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತಗೊಳಿಸಿಕೊಡಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಈ ಕಾಮಗಾರಿಗಳನ್ನು 3ನೇ ಹಂತದ ಸೇತುವೆ ಕಾಮಗಾರಿಗಳಲ್ಲಿ ತೆಗೆದುಕೊಳ್ಳಲಾಗಿದ್ದು, ಮೇ 2007 ರಲ್ಲಿ ಪ್ರಾರಂಭಿಸಲಾಗಿದೆ.

ಈ ಸೇತುವೆಯು 12 ಮೀ ಅಗಲ ಹಾಗೂ 18 ಮೀಗಳ 4 ಸ್ಪ್ಯಾನ್‌ಗಳೊಂದಿಗೆ ಯೋಜಿತಗೊಂಡಿರುತ್ತದೆ. ಕಾಮಗಾರಿಯನ್ನು ಸೆಪ್ಟೆಂಬರ್ 2009ಕ್ಕೆ ಮುಗಿಸಬೇಕಾಗಿತ್ತು.

ಆ) ಈ ಸೇತುವೆಯ ಆರ್.ಸಿ.ಸಿ. ಸ್ಟ್ರಕ್ಚರ್ ಕಾಮಗಾರಿ ಈಗಾಗಲೇ ಮುಗಿದಿದ್ದು, ಎರಡೂ ದಿಕ್ಕಿನ ಕೂಡು ರಸ್ತೆಗಳ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಈ ಹಿಂದೆ ಒಪ್ಪಿದಂತೆ ಫೆಬ್ರವರಿ – 2010 ರೊಳಗೆ ಕಾಮಗಾರಿಯನ್ನು ಮುಗಿಸಬೇಕಿತ್ತು, ಆದರೆ ಕೂಡು ರಸ್ತೆಗಳ ನಿರ್ಮಾಣದಲ್ಲಿ ಉದ್ಭವಿಸಿದ ಕೆಲವು ವಿನ್ಯಾಸ ಮಾರ್ಪಾಡುಗಳಿಂದ ವಿಳಂಬವಾಗಿರುತ್ತದೆ.

ಇ) ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿದ್ದು, ದಿನಾಂಕ: 20–03–2010 ರೊಳಗೆ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು.

490 (637) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೆ.ಆರ್.ಡಿ.ಸಿ.ಎಲ್. ವತಿಯಿಂದ ಆಗಿರುವ ಸೇತುವೆಗಳ ಸಂಖ್ಯೆ ಎಷ್ಟು; ಎಂದಿನಿಂದ ಪ್ರಾರಂಭಿಸಲಾಗಿದೆ; ಇವುಗಳ ರೂಪುರೇಷೆಗಳೇನು; (ಸಂಪೂರ್ಣ ವಿವರ ನೀಡುವುದು);

ಆ) ಇವುಗಳಲ್ಲಿ ಪ್ರಸ್ತುತ ಉಪಯೋಗಕ್ಕೆ ಬಾರದ ಸೇತುವೆಗಳ ಸಂಖ್ಯೆ ಎಷ್ಟು (ಸಂಪೂರ್ಣ ವಿವರ ನೀಡುವುದು);

ಇ) ಇವುಗಳಲ್ಲಿ ಅಪ್ರೋಚ್ ಆಗದೇ ಇರುವ ಸೇತುವೆಗಳು ಯಾವುವು? (ವಿವರ ನೀಡುವುದು);

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮಾಗಡಿ ಕ್ಷೇತ್ರದಲ್ಲಿ 2ನೇ ಹಂತದಲ್ಲಿ ಒಂಬತ್ತು ಸೇತುವೆಗಳನ್ನು ಮತ್ತು 3ನೇ ಹಂತದಲ್ಲಿ ಒಂದು ಸೇತುವೆ ನಿರ್ಮಾಣ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಇವುಗಳ ವಿವರಗಳನ್ನು ಅನುಬಂಧದಲ್ಲೂ ಪ್ರತ್ಯೇಕವಾಗಿ ನೀಡಲಾಗಿದೆ.

ಆ) 2ನೇ ಹಂತದ ಕೆಳಕಂಡ ಎರಡು ಸೇತುವೆಗಳಲ್ಲಿ ಕೂಡು ರಸ್ತೆಗಳಿಗೆ ಅವಶ್ಯವಿರುವ ಭೂಸ್ವಾಧೀನ ಪ್ರಕ್ರಿಯೆಗಳು ಇನ್ನೂ ಪೂರ್ಣಗೊಂಡಿಲ್ಲದಿರುವ ಕಾರಣ ಕೂಡು ರಸ್ತೆಗಳ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಆದ್ದರಿಂದ, ಈ ಸೇತುವೆಗಳ ವಾಹನ ಸಂಚಾರಕ್ಕೆ ಸಜ್ಜಾಗಿರುವುದಿಲ್ಲ. ಈ ಕೆಳಗಿನ ಎರಡು ಸೇತುವೆಗಳ ಕೂಡ ರಸ್ತೆಗೆ ಬೇಕಾಗಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಯಲ್ಲಿ 6(1) ನೋಟಿಫಿಕೇಶನ್ ಹೊರಡಿಸಲಾಗಿರುತ್ತದೆ. ಅಗತ್ಯ ಭೂ ಪರಿಹಾರ ವಿತರಿಸಿ, ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

1. ರಾಮನಗರ ತಾಲ್ಲೂಕಿನ ಎಂ.ಗೋಪಳ್ಳಿ– ಕಂಚುಗಾರನಹಳ್ಳಿ ರಸ್ತೆಯ ಕಿ.ಮೀ 1.00 ರಲ್ಲಿ ವೃಷಭಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ.
2. ರಾಮನಗರ ತಾಲ್ಲೂಕು, ಬಾಣಂದೂರು – ಭೈರವನದೊಡ್ಡಿ ರಸ್ತೆಯ ಕಿ.ಮೀ. 2.80ರಲ್ಲಿ ನಲ್ಲಿಗುಡ್ಡ ಕೋಡಿ ಹಳ್ಳಕ್ಕೆ

ಅಡ್ಡಲಾಗಿ ಸೇತುವೆ ನಿರ್ಮಾಣ. ಹಾಗೂ 3ನೇ ಹಂತದ ಸೇತುವೆಗಳಲ್ಲಿ ಮಾಗಡಿ – ಹುಲಿಯೂರು ದುರ್ಗ ರಸ್ತೆಯ ಕಿ.ಮೀ. 35.05 ರಲ್ಲಿ ಅರ್ಕಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ದಿನಾಂಕ: 20-03-2010 ರೊಳಗೆ ವಾಹನ ಸಂಚಾರಕ್ಕೆ ಸಜ್ಜಾಗುವುದು.

ಇ) 2ನೇ ಹಂತದ ಕೆಳಕಂಡ ಎರಡು ಸೇತುವೆಗಳಲ್ಲಿ ಕೂಡು ರಸ್ತೆಗಳಿಗೆ ಅವಶ್ಯವಿರುವ ಭೂಸ್ವಾಧೀನ ಪ್ರಕ್ರಿಯೆಗಳು ಇನ್ನೂ ಪೂರ್ಣಗೊಂಡಿಲ್ಲದಿರುವ ಕಾರಣ ಕೂಡು ರಸ್ತೆಗಳ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಈ ಕೆಳಗಿನ ಎರಡು ಸೇತುವೆಗಳ ಕೂಡು ರಸ್ತೆಗೆ ಬೇಕಾಗಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಯಲ್ಲಿ 6(1) ನೋಟಿಫಿಕೇಶನ್ ಹೊರಡಿಸಲಾಗಿರುತ್ತದೆ. ಅಗತ್ಯ ಭೂ ಪರಿಹಾರ ವಿತರಿಸಿ, ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

1. ರಾಮನಗರ ತಾಲ್ಲೂಕಿನ ಎಂ.ಗೋಪಳ್ಳಿ– ಕಂಚುಗಾರನಹಳ್ಳಿ ರಸ್ತೆಯ ಕಿ.ಮೀ 1.00 ರಲ್ಲಿ ವೃಷಭಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ.
2. ರಾಮನಗರ ತಾಲ್ಲೂಕು, ಬಾಣಂದೂರು – ಭೈರವನದೊಡ್ಡಿ ರಸ್ತೆಯ ಕಿ.ಮೀ. 2.80ರಲ್ಲಿ ನಲ್ಲಿಗುಡ್ಡ ಕೋಡಿ ಹಳ್ಳಕ್ಕೆ ಅಡ್ಡಲಾಗಿ ಸೇತುವೆ ನಿರ್ಮಾಣ.

ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ ಕೆ.ಆರ್.ಡಿ.ಸಿ.ಎಲ್ ವತಿಯಿಂದ ಕೈಗೊಂಡಿರುವ ಸೇತುವೆ ಕಾಮಗಾರಿಗಳು [ಅನುಬಂಧ]						
ಫೇಸ್ – 2 ರ ಸೇತುವೆ ಕಾಮಗಾರಿಗಳು						
ಕ್ರ.ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಸೇತುವೆ ಸ್ಪ್ಯಾನ್ ವಿವರಗಳು	ಸೇತುವೆ ಅಗಲ	ಪ್ರಾರಂಭಿಸಿದ ದಿನಾಂಕ	ಮುಕ್ತಾಯ ದಿನಾಂಕ
1	ಮಾಗಡಿ ತಾಲ್ಲೂಕಿನ ಬೆಂಗಳೂರು – ಮಾಗಡಿ – ಹುಲಿಯೂರುದುರ್ಗ ರಸ್ತೆ ಕಿ.ಮೀ 42.00 ರಲ್ಲಿ ಸೇತುವೆ ನಿರ್ಮಾಣ	64.50	9.72 ಮೀ ಗಳ 2 ಸ್ಪ್ಯಾನ್	12.00	[illegible]-2008	[illegible]-2009
2	ಮಾಗಡಿ ತಾಲ್ಲೂಕಿನ ಬೆಂಗಳೂರು – ಮಾಗಡಿ – ಹುಲಿಯೂರುದುರ್ಗ ರಸ್ತೆ ಕಿ.ಮೀ 45.40 ರಲ್ಲಿ ಸೇತುವೆ ನಿರ್ಮಾಣ	61.00	8.86 ಮೀ ಗಳ ಒಂದು ಸ್ಪ್ಯಾನ್	12.00	[illegible]-2008	[illegible]-2009
3	ಮಾಗಡಿ ತಾಲ್ಲೂಕಿನ ಬೆಂಗಳೂರು – ಮಾಗಡಿ – ಹುಲಿಯೂರುದುರ್ಗ ರಸ್ತೆ ಕಿ.ಮೀ 46.50 ರಲ್ಲಿ ಸೇತುವೆ ನಿರ್ಮಾಣ	46.90	6.86 ಮೀ ಗಳ ಒಂದು ಸ್ಪ್ಯಾನ್	12.00	ಡಿಸೆಂಬರ್-2008	[illegible] 2009
4	ಮಾಗಡಿ ತಾಲ್ಲೂಕಿನ [illegible] – [illegible] ರಸ್ತೆಯಲ್ಲಿ ಸೇತುವೆ ನಿರ್ಮಾಣ	35.00	4.00 ಮೀ ಅಗಲದ, 2 ಮೀ ಎತ್ತರದ 2 ವೆಂಟ್‌ಗಳು	12.00	ಮೇ 2008	[illegible] – 2008
5	ರಾಮನಗರ ತಾಲ್ಲೂಕಿನ [illegible] [illegible] ರಸ್ತೆಯ ಕಿ.ಮೀ 0.60 ರಲ್ಲಿ ಸೇತುವೆ ನಿರ್ಮಾಣ	34.00	4.00 ಮೀ ಅಗಲದ, 2 ಮೀ ಎತ್ತರದ 2 ವೆಂಟ್‌ಗಳು	12.00	ಮೇ 2008	[illegible] – 2008
6	ರಾಮನಗರ ತಾಲ್ಲೂಕಿನ [illegible] [illegible] ರಸ್ತೆಯ ಕಿ.ಮೀ 7.06 ರಲ್ಲಿ ಸೇತುವೆ ನಿರ್ಮಾಣ	34.00	4.00 ಮೀ ಅಗಲದ, 2 ಮೀ ಎತ್ತರದ 2 ವೆಂಟ್‌ಗಳು	12.00	ಮೇ 2008	[illegible] – 2008
7	[illegible] ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ	141.00	10.80 ಮೀ ಗಳ 4 ಸ್ಪ್ಯಾನ್‌ಗಳು	12.00	[illegible]-2008	[illegible]-2009
8	ರಾಮನಗರ ತಾಲ್ಲೂಕು ಎಂ. [illegible] – [illegible] ಕಿ.ಮೀ 1.00 ರಲ್ಲಿ [illegible] ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ	94.00	10.80 ಮೀ ಗಳ 5 ಸ್ಪ್ಯಾನ್‌ಗಳು	8.50	[illegible] – 2008	[illegible]
9	ರಾಮನಗರ ತಾಲ್ಲೂಕು [illegible] – [illegible] ರಸ್ತೆಯ ಕಿ.ಮೀ 2.6 ರಲ್ಲಿ [illegible] ಸೇತುವೆ ನಿರ್ಮಾಣ	64.60	10.72 ಮೀ ಗಳ 2 ಸ್ಪ್ಯಾನ್‌ಗಳು	10.00	[illegible] – 2008	[illegible]
ಫೇಸ್ – 3						
ಕ್ರ.ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಸೇತುವೆ ಸ್ಪ್ಯಾನ್ ವಿವರಗಳು	ಸೇತುವೆ ಅಗಲ	ಪ್ರಾರಂಭಿಸಿದ ದಿನಾಂಕ	ಮುಕ್ತಾಯ ದಿನಾಂಕ
1	ಮಾಗಡಿ – ಹುಲಿಯೂರುದುರ್ಗ ರಸ್ತೆಯ ಕಿ.ಮೀ 33.05 ರಲ್ಲಿ [illegible] ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ	378.00	18.00 ಮೀ ಗಳ 4 ಸ್ಪ್ಯಾನ್‌ಗಳು	12	[illegible]-2007	[illegible] ಮುಗಿದಿದೆ. [illegible] ಕಾಮಗಾರಿ ಪ್ರಗತಿಯಲ್ಲಿದ್ದು, ಸೇತುವೆ ಕಾಮಗಾರಿ 20-03-2010 ರೊಳಗೆ ಮುಕ್ತಾಯವಾಗುವುದು

ಮಾಗಡಿ ವಿಧಾನ ಸಭಾ ಕ್ಷೇತ್ರದ ಬಿಡದಿ ಹೋಬಳಿಯ ಸೇತುವೆ ಕಾಮಗಾರಿ ಅಪೂರ್ಣ

491 (638) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ವಿಧಾನಸಭಾ ಕ್ಷೇತ್ರದ ಬಿಡದಿ ಹೋಬಳಿಯ ಬಾನಂದೂರು ಹಾಗೂ ಕೆ.ಗೋಪನಹಳ್ಳಿ ಬಳಿ ನಿರ್ಮಾಣವಾಗುತ್ತಿರುವ ಸೇತುವೆಗಳನ್ನು ಎಂದು ಪ್ರಾರಂಭಿಸಲಾಯಿತು (ಇವುಗಳ ರೂಪು ರೇಷೆಗಳೇನು);

ಆ) ಇನ್ನೂ ಈ ಕಾಮಗಾರಿಗಳು ಪೂರ್ಣಗೊಳ್ಳದೇ ಇರಲು ಕಾರಣಗಳೇನು;

ಇ) ಈ ಸೇತುವೆಗಳು ಸುಮಾರು ಹಳ್ಳಿಗಳಿಗೆ ಲಿಂಕ್ ಸೇತುವೆಯಾಗಿದ್ದು, ಈಗಾಗಲೇ ವಿಳಂಬವಾಗಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿಲ್ಲವೆ;

ಈ) ಹಾಗಿದ್ದಲ್ಲಿ, ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮೊದಲೇ ಕಾಮಗಾರಿಯನ್ನು ಮುಗಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ತುರ್ತು ಕ್ರಮ ತೆಗೆದುಕೊಂಡು ಇನ್ನೂ ಎಷ್ಟು ದಿನದಲ್ಲಿ ಈ ಸೇತುವೆಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ)

1) ರಾಮನಗರ ತಾಲ್ಲೂಕಿನ ಎಂ.ಗೋಪಳ್ಳಿ–ಕಂಚುಗಾರನಹಳ್ಳಿ ರಸ್ತೆಯ ಕಿ.ಮೀ. 1.00 ರಲ್ಲಿ ವೃಷಭಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿಯನ್ನು ಜೂನ್ 2006 ರಲ್ಲಿ ಪ್ರಾರಂಭಿಸಲಾಯಿತು. ಈ ಸೇತುವೆಯು 8.5 ಮೀಗಳ 5 ಸ್ಪ್ಯಾನ್‌ಗಳನ್ನು ಒಳಗೊಂಡಿರುತ್ತದೆ.
2) ರಾಮನಗರ ತಾಲ್ಲೂಕು, ಬಾಣಂದೂರು– ಬೈರವನ ದೊಡ್ಡಿ ರಸ್ತೆಯ ಕಿ.ಮೀ. 2.80 ರಲ್ಲಿ ನಲ್ಲಿಗುಡ್ಡ ಕೋಡಿ ಹಳ್ಳಕ್ಕೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿಯನ್ನು ಜೂನ್ 2006ರಲ್ಲಿ ಪ್ರಾರಂಭಿಸಲಾಯಿತು. ಈ ಸೇತುವೆಯು

10 ಮೀ ಅಗಲ ಹಾಗೂ 10.72 ಮೀಗಳ 2 ಸ್ಪ್ಯಾನ್‌ಗಳನ್ನು ಒಳಗೊಂಡಿರುತ್ತದೆ.

ಆ) ಈ ಸೇತುವೆಗಳ ಆರ್.ಸಿ.ಸಿ. ಸ್ಟ್ರಕ್ಚರ್ ಕಾಮಗಾರಿ ಈಗಾಗಲೇ ಮುಗಿದಿದ್ದು, ಕೂಡು ರಸ್ತೆಗಳಗೆ ಅವಶ್ಯವಿರುವ ಭೂಸ್ವಾಧೀನ ಪ್ರಕ್ರಿಯೆಗಳು ಇನ್ನೂ ಮುಗಿಯದ ಕಾರಣ, ಸೇತುವೆಗಳ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ.

ಇ) ಭೂಸ್ವಾಧೀನ ಪ್ರಕ್ರಿಯೆಗಳ ವಿಳಂಬದಿಂದ ಸೇತುವೆ ಕಾಮಗಾರಿಗಳು ಪೂರ್ಣಗೊಂಡಿರುವುದಿಲ್ಲ.

ಈ) ಕೂಡು ರಸ್ತೆಗಳಿಗೆ ಅವಶ್ಯವಿರುವ ಭೂಮಿ ದೊರೆತ ನಂತರ 3 ತಿಂಗಳುಗಳ ಅವಧಿಯಲ್ಲಿ ಸೇತುವೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು.

ಚೌಡೇಶ್ವರಿಹಳ್ಳಿ ಬ್ರಿಡ್ಜ್ ಅಪೂರ್ಣ

492 (639) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ವಿಧಾನಸಭಾ ಕ್ಷೇತ್ರದ ಕೂಟಗಲ್ ಹೋಬಳಿಯ ಚೌಡೇಶ್ವರಿಹಳ್ಳಿ ಹೊಸೂರು ಮಧ್ಯ ನಿರ್ಮಾಣಗೊಳ್ಳುತ್ತಿರುವ ಸೇತುವೆಯನ್ನು ಯಾವಾಗ ಪ್ರಾರಂಭಿಸಲಾಯಿತು; ಇದರ ರೂಪುರೇಷೆಗಳೇನು;

ಆ) ಇತ್ತೀಚೆಗೆ ಈ ಕಾಮಗಾರಿ ಕೆಲಸ ನಿಂತಿರುವುದಕ್ಕೆ ಕಾರಣಗಳೇನು;

ಇ) ಈ ಸೇತುವೆಯು ಸುಮಾರು ಹಳ್ಳಿಗಳಿಗೆ ಲಿಂಕ್ ಸೇತುವೆಯಾಗಿದ್ದು, ಈಗಾಗಲೇ ವಿಳಂಬವಾಗಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿಲ್ಲವೆ;

ಈ) ಹಾಗಿದ್ದಲ್ಲಿ, ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮೊದಲೇ ಕಾಮಗಾರಿಯನ್ನು ಮುಗಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ತುರ್ತು ಕ್ರಮ ತೆಗೆದುಕೊಂಡು ಇನ್ನೂ ಎಷ್ಟು ದಿನದಲ್ಲಿ ಈ ಸೇತುವೆಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಈ ಸೇತುವೆ ಕಾಮಗಾರಿಯನ್ನು ಮೇ 2009ರಂದು ಪ್ರಾರಂಭಿಸಲಾಗಿರುತ್ತದೆ. ಈ ಕಾಮಗಾರಿಯಲ್ಲಿ 2 ಅಬಟ್‌ಮೆಂಟ್ಸ್ ಮತ್ತು 2 ಪಿಯರ್‌ಗಳನ್ನು ಒಳಗೊಂಡಂತೆ 7.5 ಮೀ. ಅಗಲಕ್ಕೆ ಸೇತುವೆ ನಿರ್ಮಾಣ ಮಾಡಬೇಕಿರುತ್ತದೆ. ಹಾಲಿ ಒಂದು ಅಬಟ್‌ಮೆಂಟ್ ಮತ್ತು ಒಂದು ಪಿಯರ್‌ನ ಕೆಲಸಗಳನ್ನು ಕ್ಯಾಪ್‌ಲೆವೆಲ್ ಮಟ್ಟಕ್ಕೆ ಪೂರ್ಣಗೊಳಿಸಲಾಗಿದೆ.

ಆ) ಮಳೆಗಾಲದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಹಳ್ಳದಲ್ಲಿ ನೀರು ಹರಿದು ಸದರಿ ಕಾಮಗಾರಿಗೆ ಅಡಚಣೆ ಉಂಟಾಗಿದ್ದರಿಂದ ಮಳೆಗಾಲದಲ್ಲಿ ಮಾತ್ರ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿತ್ತು.

ಇ) ಇಲ್ಲ. ಸದರಿ ಸೇತುವೆ ಮೇಲ್ಭಾಗದಲ್ಲಿ ತಾತ್ಕಾಲಿಕ ಏರಿಯನ್ನು ನಿರ್ಮಿಸಿ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಮಾಡಿ ಕೊಡಲಾಗಿದೆ.

ಈ) ಈ ಸೇತುವೆ ಕಾಮಗಾರಿಯನ್ನು ಜೂನ್ 2010ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಸಹಕಾರ ಸಂಘ ಚುನಾವಣಾ ಸಮಯದಲ್ಲಿ ಆಡಳಿತ ಮಂಡಳಿಗಳ ತಿರ್ಮಾನ

493 (650) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್–ದಕ್ಷಿಣ) : ಮಾನ್ಯ ಸಹಕಾರ ಸಚಿವರು ಈ ಕೆಳಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರ ಸಂಘಗಳಲ್ಲಿ ಆಡಳಿತ ಮಂಡಳಿಯ ಚುನಾವಣೆಗಳು ಸಮೀಪಿಸುತ್ತಿರುವ ಸಂದರ್ಭಗಳಲ್ಲಿ ಅಂತಹ ಸಹಕಾರ ಸಂಘಗಳ ಆಡಳಿತ ಮಂಡಳಿಗಳು ಮಹತ್ತರ ವಿಷಯದ ಬಗ್ಗೆ ತೀರ್ಮಾನಗಳನ್ನು ತೆಗೆದು ಕೊಳ್ಳಬಹುದೇ?

ಆ) ಅಂತಹ ತೀರ್ಮಾನಗಳನ್ನು ತೆಗದುಕೊಂಡಲ್ಲಿ ಅವುಗಳನ್ನು ಅನುಷ್ಠಾನಕ್ಕೆ ತರಬಹುದೇ?

ಇ) ಅಂತಹ ತೀರ್ಮಾನಗಳನ್ನು ಅನುಷ್ಠಾನಗೊಳಿಸುವುದರಿಂದ ಸಹಕಾರಿ ಸಂಘಗಳಿಗೆ ನಷ್ಟವಾದಲ್ಲಿ ಜವಾಬ್ದಾರರು ಯಾರು?

ಈ) ಇಂತಹ ವಿಷಯಗಳಿಗೆ ಸಂಬಂಧಿಸಿದಂತೆ ಸಹಕಾರ ಇಲಾಖೆಯಿಂದ ಏನಾದರೂ ಮಾರ್ಗಸೂಚಿಗಳನ್ನು ನೀಡಲಾಗಿರುವುದೇ?

ಉ) ಮಾರ್ಗಸೂಚಿ ನೀಡಿದ್ದಲ್ಲಿ, ಅದರ ಪ್ರತಿ ಒದಗಿಸುವುದು?

ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು) :

ಅ) ಮತ್ತು ಆ) ಸಹಕಾರ ಸಂಘಗಳ ಆಡಳಿತ ಮಂಡಳಿ ತನ್ನ ಅಧಿಕಾರಾವಧಿಯಲ್ಲಿ ಸಂಘಕ್ಕೆ ಪೂರಕವಾಗುವ ಯಾವುದೇ ಮಹತ್ವದ ನಿರ್ಧಾರ ಕೈಗೊಳ್ಳಲು ಸ್ವತಂತ್ರವಾಗಿರುತ್ತದೆ. ಆದರೆ ಚುನಾವಣೆ ಪ್ರಕ್ರಿಯೆ ಜಾರಿಯಲ್ಲಿರುವಾಗ ಯಾವುದೇ ಮಹತ್ವದ ನಿರ್ಣಯ ಕೈಗೊಳ್ಳುವುದು ಸಮಂಜಸವಾಗಿರುವುದಿಲ್ಲ.

ಇ) ಸಹಕಾರ ಸಂಘಗಳಿಗೆ ನಷ್ಟವಾಗುವ ರೀತಿಯಲ್ಲಿ ಆಡಳಿತ ಮಂಡಳಿ ತೀರ್ಮಾನ ತೆಗೆದುಕೊಂಡಿದ್ದಲ್ಲಿ ಆಯಾ ಅವಧಿಯ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಜಂಟಿಯಾಗಿ ಅಥವಾ ವೈಯಕ್ತಿಕವಾಗಿ ಜವಾಬ್ದಾರರಾಗುತ್ತಾರೆ.

ಈ) ಮತ್ತು ಉ) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಒ 15 ಸಿಎಲ್‌ಎಂ 2005, ದಿನಾಂಕ: 03.02.2005ರ ಪ್ರಕಾರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30ಬಿ ಅಡಿಯಲ್ಲಿ ಸಹಕಾರಿ ಸಂಘಗಳ ನೌಕರರ ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ವೃತ್ತಿಪರತೆ ತರುವ ಬಗ್ಗೆ ವಿಸ್ತೃತವಾದ ನಿರ್ದೇಶನಗಳನ್ನು ನೀಡಿರುತ್ತದೆ. ಸದರಿ ನಿರ್ದೇಶನದ 15ನೇ ನಿಬಂಧನೆಯು ಕೆಳಗಿನಂತಿದೆ.

"ಯಾವುದೇ ಸಹಕಾರ ಸಂಘದ ಆಡಳಿತ ಸಮಿತಿಯ ಪದಾವಧಿ ಮುಕ್ತಾಯ ಪೂರ್ವದ ಕೊನೆಯ ಮೂರು ತಿಂಗಳ ಅವಧಿಯಲ್ಲಿ ಯಾವುದೇ ನೇಮಕಾತಿಗಳನ್ನು ಮಾಡತಕ್ಕದ್ದಲ್ಲ."

ಬೀದರ್ ಜಿಲ್ಲೆಯ ರೈತರಿಗೆ ನೀಡುತ್ತಿರುವ ಬೆಳೆ ಸಾಲ

494 (651) ಶ್ರೀ ಬಂಡೆಪ್ಪ ಕಾಶಂಪೂರ್ (ಬೀದರ್-ದಕ್ಷಿಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ರೈತರಿಗೆ ನೀಡುತ್ತಿರುವ ಬೆಳೆ ಸಾಲವನ್ನು ಯಾವ್ಯಾವ ಬ್ಯಾಂಕುಗಳಿಂದ ನೀಡಲಾಗುತ್ತಿದೆ? (ವಿವರ ನೀಡುವುದು);

ಆ) ಕಳೆದ ಒಂದು ವರ್ಷದಲ್ಲಿ ಬೀದರ್ ಜಿಲ್ಲೆಯು ರೈತರಿಗೆ ಯಾವ್ಯಾವ ಬ್ಯಾಂಕುಗಳಿಂದ ಯಾವ್ಯಾವ ಪ್ರಮಾಣದಲ್ಲಿ ಸಾಲವನ್ನು ನೀಡಲಾಗಿದೆ? (ವಿವರ ನೀಡುವುದು);

ಇ) ಸಹಕಾರ ಬ್ಯಾಂಕುಗಳಿಂದ ರೈತರಿಗೆ ನೀಡುವ ಬೆಳೆ ಸಾಲದ ವ್ಯಾಪ್ತಿಯನ್ನು ರಾಷ್ಟ್ರೀಕೃತ ಬ್ಯಾಂಕುಗಳಿಗೂ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದೇ?

ಈ) ಹಾಗಿದ್ದಲ್ಲಿ, ಇದನ್ನು ಎಂದಿನಿಂದ ಜಾರಿಗೆ ತರಲಾಗುವುದು?

ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು) :

ಅ) ಬೀದರ್ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮುಖಾಂತರ ರೈತರಿಗೆ ಬೆಳೆ ಸಾಲವನ್ನು ನೀಡಲಾಗುತ್ತಿದೆ.

ಆ) ಬೀದರ್ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮುಖಾಂತರ ರೈತರಿಗೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ ನೀಡಲಾಗಿರುವ ವಿವರ ಈ ಕೆಳಗಿನಂತಿದೆ :-

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ತಾಲ್ಲೂಕು	ಅಲ್ಪಾವಧಿ		ಮಧ್ಯಮಾವಧಿ	
		ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1)	ಬೀದರ್	29539	4432–79	266	250–92
2)	ಹುಮನಾಬಾದ್	33776	4590–64	316	253–63
3)	ಬಿ.ಕಲ್ಯಾಣ	28657	3209–97	177	161–78
4)	ಬಾಲ್ಕಿ	39891	4498–85	321	182–24
5)	ಔರಾದ್	31112	4016–57	151	165–45
	ಒಟ್ಟು	**162975**	**20746–82**	**1231**	**1014–02**

ಬೀದರ್ ಜಿಲ್ಲೆಯಲ್ಲಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಂದ ನೀಡಿರುವ ದೀರ್ಘಾವಧಿ ಸಾಲದ ವಿವರ:

ಸಂಖ್ಯೆ	ಮೊತ್ತ (ರೂ.ಲಕ್ಷಗಳಲ್ಲಿ)
23	26.52

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಮೈಸೂರು – ಮಾನಂದವಾಡಿ (ರಾಷ್ಟ್ರೀಯ ಹೆದ್ದಾರಿ 33) ರಸ್ತೆಯ ಅಭಿವೃದ್ಧಿ

496 (758) ಶ್ರೀ ಚಿಕ್ಕಣ್ಣ (ಹೆಚ್.ಡಿ.ಕೋಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕು ವ್ಯಾಪ್ತಿಯ ಮೂಲಕ ಹಾದು ಕೇರಳ ರಾಜ್ಯಕ್ಕೆ ಸಂಪರ್ಕಿಸುವ ಮೈಸೂರು – ಮಾನಂದವಾಡಿ ರಾಜ್ಯ ಹೆದ್ದಾರಿ ಸಂಖ್ಯೆ33 ರಲ್ಲಿ ಬಾವಲಿಯಿಂದ 31 ಕಿಮೀ. ಅರಣ್ಯ ಪ್ರದೇಶದಲ್ಲಿರುವ ರಸ್ತೆಯನ್ನು ಅಭಿವೃದ್ಧಿಪಡಿಸಲು ಅರಣ್ಯ ಇಲಾಖೆಯು ಅನುಮತಿ ನೀಡಿದೆಯೇ;

ಆ) ಈ ಹಿಂದೆ ಇದೇ ಪ್ರಶ್ನೆಯನ್ನು ಸದನದಲ್ಲಿ ಕೇಳಲಾಗಿ ಮಾನ್ಯ ಲೋಕೋಪಯೋಗಿ ಸಚಿವರು, ಅರಣ್ಯ ಇಲಾಖೆ ಅನುಮತಿ ಪಡೆದು ಡಿಸೆಂಬರ್ 2009 ರೊಳಗಾಗಿ ಕಾಮಗಾರಿ ಪೂರ್ಣಗೊಳಿಸಲಾಗುವುದೆಂದು ಲಿಖಿತ ಹೇಳಿಕೆ ನೀಡಿದ್ದರು, ಆದರೆ, ಇದುವರೆಗೂ ಈ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಅರಣ್ಯ ಇಲಾಖೆಯು ಅನುಮತಿ ನೀಡಿದೆ. ಆದರೆ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಜೀವಶಾಸ್ತ್ರ ಮತ್ತು ಪರಿಸರ ಇಲಾಖೆ ಇವರ ನೇತೃತ್ವದಲ್ಲಿ ರಚಿಸಲಾಗಿರುವ ಉಸ್ತುವಾರಿ ಸಮಿತಿಯು ಬಾಕಿ ಕೆಲಸಗಳನ್ನು ಪೂರ್ಣಗೊಳಿಸಲು ಅನುಮತಿ ನೀಡಿರುವುದಿಲ್ಲ.

ಆ) ಈ ಕಾಮಗಾರಿಯ ಒಟ್ಟು ರಸ್ತೆಯ ಉದ್ದ 30.50 ಕಿ.ಮೀ ಆಗಿದ್ದು ಇದರಲ್ಲಿ 28.80 ಕಿ.ಮೀ ರಸ್ತೆಯು ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನದಲ್ಲಿ ಹಾದು ಹೋಗುತ್ತಿದ್ದು ಉಳಿದ 1.70 ಕಿ.ಮೀ ರಸ್ತೆಯು ಉದ್ಯಾನವನದ ಹೊರಭಾಗದಲ್ಲಿದೆ.

ಉದ್ಯಾನವನದ ಹೊರಭಾಗದಲ್ಲಿನ 1.70 ಕಿ.ಮೀ ಹಾಗೂ ಉದ್ಯಾನವನದಲ್ಲಿ ಉದ್ದೂರು ಕ್ರಾಸ್‌ನಿಂದ ಕೇರಳ ಗಡಿವರೆಗೆ ಇರುವ 19.30 ಕಿ.ಮೀ ರಸ್ತೆಯನ್ನು ಎಲ್ಲಾ ರೀತಿಯಲ್ಲೂ ಪೂರ್ಣಗೊಳಿಸಲಾಗಿದೆ. ಉದ್ದೂರು ಕ್ರಾಸ್‌ನಿಂದ ದಮ್ಮನಕಟ್ಟೆವರೆಗಿನ 9.50 ಕಿ.ಮೀ. ರಸ್ತೆಯಲ್ಲಿ 5.00 ಕಿ.ಮೀ ಗಳಿಗೆ ಬಿ.ಎಂ ಪದರವನ್ನು ಹಾಗೂ 3.00 ಕಿ.ಮೀಗಳಿಗೆ ಡಬ್ಲ್ಯೂ.ಎಂ.ಎಂ

ಪದರವನ್ನು ಹೊದಿಸಲಾಗಿದೆ. ಉಳಿದಂತೆ 1.50 ಕಿ.ಮೀ ರಸ್ತೆಯನ್ನು ಇನ್ನೂ ಕೈಗೊಳ್ಳಬೇಕಿದೆ.

ಉದ್ದೂರು ಕ್ರಾಸ್‌ನಿಂದ ದಮ್ಮನಕಟ್ಟೆವರೆಗಿನ ಮೇಲ್ಕಂಡ 9.50 ಕಿ.ಮೀ ರಸ್ತೆಯಲ್ಲಿನ ಬಾಕಿ ಕೆಲಸಗಳನ್ನು ಪೂರ್ಣಗೊಳಿಸಲು ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಜೀವಶಾಸ್ತ್ರ ಮತ್ತು ಪರಿಸರ ಇಲಾಖೆ ಇವರ ನೇತೃತ್ವದಲ್ಲಿ ರಚಿಸಲಾಗಿರುವ ಉಸ್ತುವಾರಿ ಸಮಿತಿಯು ಅನುಮತಿ ನೀಡದಿರುವ ಕಾರಣ ಸದರಿ ರಸ್ತೆಯು ಮಾರ್ಚ್ 2009 ರಿಂದ ಅಪೂರ್ಣಗೊಂಡಿರುತ್ತದೆ. ಉಸ್ತುವಾರಿ ಸಮಿತಿಯು ಮೇಲಿನ 9.50 ಕಿ.ಮೀ ರಸ್ತೆಗೆ ಬದಲಾಗಿ ಪರ್ಯಾಯ ರಸ್ತೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಶಿಫಾರಸ್ಸು ಮಾಡಿದ್ದು ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಸಮಾಪನೆಯಲ್ಲಿರುವ ಸಹಕಾರ ಸಂಘಗಳು

497 (646) ಶ್ರೀ ದಿನಕರ ಕೇಶವ ಶೆಟ್ಟಿ (ಕುಮುಟ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಹಕಾರ ಸಂಘಗಳು ಸಮಾಪನೆಯಲ್ಲಿವೆ? (ವರ್ಷವಾರು, ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಕೆಲವು ಸಮಾಪನೆ ಸಹಕಾರ ಸಂಘಗಳ ನೋಂದಣಿ ರದ್ದುಪಡಿಸಲು ಅನಾವಶ್ಯಕ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಇ) ಬಂದಿದ್ದಲ್ಲಿ, ಸಹಕಾರ ಇಲಾಖೆಯ ಅಪರ ನಿಬಂಧಕರಂತಹ ಉನ್ನತ ಹುದ್ದೆಯ ಅಧಿಕಾರಿಗಳನ್ನು ಸಮಾಪನಾಧಿಕಾರಿಗಳನ್ನಾಗಿ ನೇಮಿಸಲಾಗಿರುವುದೇ?

ಈ) ಇಂತಹ ನೇಮಕಾತಿಗಳು ಸಮರ್ಥನೀಯವೇ?

ಶ್ರೀ ಲಕ್ಷ್ಮಣ ಸವದಿ. (ಸಹಕಾರ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ಸಮಾಪನೆಯಲ್ಲಿರುವ ಸಹಕಾರ ಸಂಘಗಳ ವಿವರ ಈ ಕೆಳಕಂಡಂತಿರುತ್ತವೆ.

ಕ್ರ ಸಂ.	ವರ್ಷ	ಸಮಾಪನೆಯಲ್ಲಿರುವ ಸಹಕಾರ ಸಂಘಗಳ ಸಂಖ್ಯೆ
01.	2006–07	2536
02.	2007–08	2382
03.	2008–09 (ಡಿಸೆಂಬರ್ 2009ರ ಅಂತ್ಯಕ್ಕೆ)	2356

ವರ್ಷವಾರು, ಜಿಲ್ಲಾವಾರು ಸಮಾಪನೆಯಲ್ಲಿರುವ ಸಹಕಾರ ಸಂಘಗಳ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

ಆ) ಬಂದಿದೆ, ಮುಖ್ಯವಾಗಿ ಕೆಲವು ಸಹಕಾರ ಸಂಘಗಳ ಆಸ್ತಿ ವಿಲೇವಾರಿಯ ಬಗ್ಗೆ ಅನಿರೀಕ್ಷಿತವಾಗಿ ಕೆಲವರು ವಿವಿಧ ನ್ಯಾಯಾಲಯಗಳಲ್ಲಿ ಪ್ರಶ್ನಿಸಿದ್ದು, ಹಲವು ಪ್ರಕರಣಗಳು ಇನ್ನೂ ಇತ್ಯರ್ಥವಾಗದೇ ಇರುವುದರಿಂದ ಹಾಗೂ ಹಲವಾರು ಸಹಕಾರ ಸಂಘಗಳ ಆಸ್ತಿ ವಿಲೇವಾರಿಯ ಬಗ್ಗೆ ದಾಖಲಾತಿಗಳ ಕೊರತೆ ಇರುವುದರಿಂದ ನೊಂದಣಿ ರದ್ಧತಿ ವಿಳಂಬವಾಗುತ್ತದೆ.

ಇ) ಹೌದು, ಎರಡು ಸಂಸ್ಥೆಗಳಲ್ಲಿ ಮಾತ್ರ ನೇಮಿಸಲಾಗಿರುತ್ತದೆ.

ಈ) ಸದರಿ ಸಂಸ್ಥೆಗಳ ಆಸ್ತಿ-ಜವಾಬ್ದಾರಿಗಳ ಸಮರ್ಪಕ ವಸೂಲಾತಿ ಹಾಗೂ ವಿಲೇವಾರಿಗೆ ಮತ್ತು ವ್ಯಾಜ್ಯಗಳ ಶೀಘ್ರ ಪರಿಹಾರಕ್ಕೆ ಜವಾಬ್ದಾರಿ ಯುತವಾದ ಕಾರ್ಯವನ್ನು ನಿರ್ವಹಿಸುವ ದೃಷ್ಟಿಯಿಂದ ಇಂತಹ ನೇಮಕಾತಿಗಳನ್ನು ಮಾಡಲಾಗಿದೆ.

ಅನುಬಂಧ – 1

2006–07, 2007–08 ಮತ್ತು 2008–09ರ ಅಂತ್ಯಕ್ಕೆ ಸಮಾಪನೆಯಲ್ಲಿರುವ ಸಹಕಾರ ಸಂಘಗಳ ಸಂಖ್ಯೆ

ಕ್ರ ಸಂ.	ಜಿಲ್ಲೆಯ ಹೆಸರು	2006–07	2007–08	2008–09
	ಬೆಂಗಳೂರು ಪ್ರಾಂತ			
1	ಬೆಂಗಳೂರು ನಗರ–1	68	57	56
2	ಬೆಂಗಳೂರು ನಗರ–2	74	63	54
3	ಬೆಂಗಳೂರು (ಗ್ರಾಮಾಂತರ)	103	33	30
4	ರಾಮನಗರ	–	71	70
5	ತುಮಕೂರು	68	58	52
6	ಕೋಲಾರ	171	94	92
7	ಚಿಕ್ಕಬಳ್ಳಾಪುರ	–	90	87
8	ಚಿತ್ರದುರ್ಗ	49	50	44
9	ದಾವಣಗೆರೆ	106	97	92
10	ಶಿವಮೊಗ್ಗ	82	74	72
	ಒಟ್ಟು	**721**	**687**	**648**
	ಗುಲ್ಬರ್ಗಾ ಪ್ರಾಂತ			
11	ಬಳ್ಳಾರಿ	93	87	96
12	ಬೀದರ್	78	76	90
13	ಗುಲ್ಬರ್ಗಾ	273	245	178
14	ಕೊಪ್ಪಳ	48	46	63
15	ರಾಯಚೂರು	93	45	41
	ಒಟ್ಟು	**585**	**499**	**468**

	ಮೈಸೂರು ಪ್ರಾಂತ			
16	ಮೈಸೂರು	152	132	108
17	ಚಾಮರಾಜನಗರ	24	23	16
18	ಮಂಡ್ಯ	67	62	56
19	ಹಾಸನ	94	90	102
20	ಚಿಕ್ಕಮಗಳೂರು	20	36	46
21	ಕೊಡಗು	23	22	17
22	ಮಂಗಳೂರು	25	19	19
23	ಉಡುಪಿ	19	31	35
	ಒಟ್ಟು	**424**	**415**	**399**
	ಬೆಳಗಾವಿ ಪ್ರಾಂತ			
24	ಬೆಳಗಾಂ	99	111	190
25	ಬಿಜಾಪುರ	126	118	137
26	ಬಾಗಲಕೋಟೆ	127	126	98
27	ಧಾರವಾಡ	186	179	163
28	ಗದಗ	77	71	79
29	ಹಾವೇರಿ	95	89	83
30	ಕಾರವಾರ	96	87	91
	ಒಟ್ಟು	**806**	**781**	**841**
	ಒಟ್ಟು	**2536**	**2382**	**2356**

ಸಕ್ಕರೆ ದಾಸ್ತಾನು

499 (1006) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಎಷ್ಟು ಸಕ್ಕರೆ ಅವಶ್ಯವಿದೆ?

ಆ) ರಾಜ್ಯದಲ್ಲಿ ಇಂದು ಸಕ್ಕರೆ ದಾಸ್ತಾನು ಎಷ್ಟಿದೆ?

ಇ) ಸಕ್ಕರೆ ಆಮದು ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ಕೇಂದ್ರ ಸರ್ಕಾರದ ಟಿ.ಪಿ.ಡಿ.ಎಸ್ ಅಡಿಯಲ್ಲಿ ಪ್ರತಿ ಮಾಹೆ ರಾಜ್ಯಕ್ಕೆ 8697 ಮೆಟ್ರಿಕ್ ಟನ್ ಲೆವಿ ಸಕ್ಕರೆಯನ್ನು ಕರ್ನಾಟಕ ರಾಜ್ಯಕ್ಕೆ ಬಿಡುಗಡೆ ಮಾಡುತ್ತಿದ್ದು, ರಾಜ್ಯದ ಬಿ.ಪಿ.ಎಲ್ ಹಾಗೂ ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿದಾರರಿಗೆ, ಪ್ರತಿ ಪಡಿತರ ಚೀಟಿಗೆ 1 ಕೆ.ಜಿ.ಯಂತೆ ಪ್ರತಿ ಮಾಹೆ ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಹಂಚಿಕೆ ಮಾಡಲಾಗುತ್ತಿದೆ.

ಆ) ದಿನಾಂಕ: 31.01.2010 ರಲ್ಲಿದ್ದಂತೆ 9.38 ಲಕ್ಷ ಮೆ. ಟನ್ ಸಕ್ಕರೆ ದಾಸ್ತಾನು ಇರುತ್ತದೆ.

ಇ) ಕೇಂದ್ರ ಸರ್ಕಾರದಿಂದ ಹಂಚಿಕೆಯಾದ ಲೆವಿ ಸಕ್ಕರೆಯನ್ನು ಪಡಿತರ ವ್ಯವಸ್ಥೆಯಡಿ ವಿತರಣೆ ಮಾಡುತ್ತಿರುವುದರಿಂದ ಸಕ್ಕರೆ ಆಮದು ಮಾಡಿಕೊಳ್ಳುವ ವಿಷಯ ರಾಜ್ಯ ಸರ್ಕಾರದ ಮುಂದಿಲ್ಲ.

ಎ.ಪಿ. ಎಂ.ಸಿ. ಕಾನೂನಿನ ಅನುಷ್ಠಾನ

500 (765) ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2007 ಜುಲೈನಲ್ಲಿ ರೈತರ ಹಿತದೃಷ್ಟಿಯಿಂದ ಎ.ಪಿ.ಎಂ.ಸಿ ಕಾನೂನಿಗೆ ಮಾಡಿರುವ ಬದಲಾವಣೆಗಳು ಹಾಗೂ ಹೊಸ ಕಾನೂನುಗಳು ಬಹಳಷ್ಟು ಮಾರುಕಟ್ಟೆಗಳಲ್ಲಿ ಅನುಷ್ಠಾನಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕರ್ನಾಟಕ ಕೃಷಿ ಉತ್ಪನ್ನ ಮಾರಾಟ ಶಾಸನದ ಕಲಂ 75, 78, 78ಎ ಯಾವಾಗಿನಿಂದ ಜಾರಿಗೊಳಿಸಲಾಗಿದೆ;

ಇ) ಈ ಕಲಂಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುತ್ತಿರುವ ಎ.ಪಿ.ಎಂ.ಸಿ ಗಳು ಯಾವುವು; ಅನುಷ್ಠಾನಗೊಳಿಸದೇ ಇರುವ ಎ.ಪಿ.ಎಂ.ಸಿ. ಗಳು ಯಾವುವು;

ಈ) ರಾಜ್ಯದ ಎಲ್ಲಾ ಎ.ಪಿ.ಎಂ.ಸಿ.ಗಳಲ್ಲಿ ಕಟ್ಟುನಿಟ್ಟಾಗಿ ಇದೇ ಸಾಲಿನಿಂದ ಜಾರಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಉ) ಎ.ಪಿ.ಎಂ.ಸಿ. ಕಾನೂನಿನ ಕಲಂ 77ಎ ಅನ್ನು ಯಾವ್ಯಾವ ಕೃಷಿ ಉತ್ಪನ್ನಗಳಿಗೆ ಅನ್ವಯಿಸಿ ಜಾರಿಗೊಳಿಸಲಾಗಿದೆ;

ಊ) ಇದನ್ನು ಎಲ್ಲಾ ಕೃಷಿ ಉತ್ಪನ್ನಗಳಿಗೆ ಅನ್ವಯಿಸಿ ಜಾರಿಗೊಳಿಸಲು ಎಷ್ಟು ಸಮಯ ಬೇಕಾಗುವುದು?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹಾಲಿ ಇದ್ದ ಕಲಂ 75ಕ್ಕೆ ತಿದ್ದುಪಡಿ ಮಾಡಿ ದಿ: 16/08/2007 ರಿಂದ ಜಾರಿಗೆ ನೀಡಲಾಗಿದೆ.

ಕಲಂ 78ಎ ಅನ್ನು ಹೊಸದಾಗಿ ಸೇರ್ಪಡೆಗೊಳಿಸಿ ದಿ:16/08/2007 ರಿಂದ ಜಾರಿಗೆ ನೀಡಲಾಗಿದೆ.

ಹಾಲಿ ಇದ್ದ ಕಲಂ 78ಕ್ಕೆ ತಿದ್ದುಪಡಿ ಮಾಡಿ ದಿ: 01/07/2008 ರಿಂದ ಜಾರಿಗೆ ನೀಡಲಾಗಿದೆ.

ಇ) ಕಾಯ್ದೆಯಲ್ಲಿನ ಮೇಲ್ಕಂಡ ಅವಕಾಶಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸದೆ ಇರುವುದನ್ನು ಗಮನಿಸಿ ದಿ: 18/02/2010 ರಲ್ಲಿ ಸುತ್ತೋಲೆ ನಿರ್ದೇಶನಗಳನ್ನು ನೀಡಲಾಗಿದೆ. ಸದರಿ ನಿರ್ದೇಶನಗಳ ಪಾಲಿಸುವಿಕೆ ಕುರಿತು ಕಾಲಕಾಲಕ್ಕೆ ಪರಿಶೀಲನೆ ನಡೆಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

ಈ) ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಉ) ರಾಜ್ಯದ ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಅನ್ವಯಿಸುವಂತೆ ಮೆಕ್ಕೆಜೋಳವನ್ನು ಕೃಷಿ ಉತ್ಪನ್ನವೆಂದು ಸರ್ಕಾರವು ಅಧಿಸೂಚನೆ ಸಂ:ಸಇ/430/ಮಾಇಸ್ಥೇ/2006, ದಿ: 10/07/2008 ರಲ್ಲಿ ಅಧಿಸೂಚಿಸಿದೆ.

ಊ) ಹಂತ ಹಂತವಾಗಿ ಜಾರಿಗೊಳಿಸಲಾಗುವುದು.

ನಿವೇಶನ ಹಂಚಿಕೆ

501 (759) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ಇಲ್ಲಿಯವರೆವಿಗೆ ಬೀದರ್ ಜಿಲ್ಲೆಯ ವಿವಿಧ ಕೃಷಿ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರಿಗಳಿಗೆ/ ಹಮಾಲರಿಗೆ ಎಷ್ಟು ನಿವೇಶನ/ಮನೆಗಳನ್ನು ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ; ಇವುಗಳ ಮಾರುಕಟ್ಟೆ ದರ ಎಷ್ಟು; ಇದಕ್ಕಾಗಿ ಇಲ್ಲಿಯವರೆವಿಗೆ ಎಷ್ಟು ಫಲಾನುಭವಿಗಳು ಅರ್ಜಿ ಸಲ್ಲಿಸಿ ಹಣ ಪಾವತಿ ಮಾಡಿದ್ದಾರೆ (ಅರ್ಜಿದಾರರ ಹೆಸರು ವಿವರಗಳನ್ನು ಮಾರುಕಟ್ಟೆವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

ಆ) ಯಾವ್ಯಾವ ಕೃಷಿ ಮಾರುಕಟ್ಟೆ ವ್ಯಾಪ್ತಿಯಲ್ಲಿ ನಿವೇಶನ/ಮನೆ ಹಂಚಿಕೆಯ ಬಗ್ಗೆ ದೂರುಗಳು ಬಂದಿವೆ;

ಇ) ಈ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ಬೀದರ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರವ ಔರಾದ್, ಭಾಲ್ಕಿ, ಹುಮ್ನಾಬಾದ್, ಬಸವಕಲ್ಯಾಣ, ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಸಂಬಂಧಿಸಿದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಹುಮ್ನಾಬಾದ್ ಮಾರುಕಟ್ಟೆ ಸಮಿತಿಯ ನಿವೇಶನ ಹಂಚಿಕೆ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ದೂರು ಬಂದಿದ್ದು, ಪರಿಶೀಲಿಸಿ ಸಮಿತಿ ಪ್ರಸ್ತಾವನೆ ತಿರಸ್ಕರಿಸಿದೆ.

ಇ) ಹೊಸದಾಗಿ ಪ್ರಕಟಣೆ ನೀಡಿ ಅರ್ಜಿ ಆಹ್ವಾನಿಸಿ ನಿಯಮಾನುಸಾರ ಪ್ರಸ್ತಾವನೆ ಮರು ಸಾದರಪಡಿಸಲು ಹುಮ್ನಾಬಾದ್ ಸಮಿತಿಗೆ ಸೂಚನೆ ನೀಡಲಾಗಿದೆ.

ಅನುಬಂಧ

ಬೀದರ್ ಜಿಲ್ಲೆಯ ವಿವಿಧ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕಳೆದ 3 ವರ್ಷಗಳಲ್ಲಿ ಹಾಗೂ ಇಲ್ಲಿಯವರೆಗೆ ನಿವೇಶನ/ಮನೆಗಳನ್ನು ಹಂಚಿಕೆ ಮಾಡಿರುವುದಕ್ಕೆ ಸಂಬಂಧಿಸಿದ ವಿವರ.

ಹಂಚಿಕೆ ಊರು	ನಿವೇಶನ ಹಂಚಿಕೆ	ಹಮಾಲರಿಗೆ ವಸತಿಗೃಹ ಹಂಚಿಕೆ	ಮಾರುಕಟ್ಟೆ ದರ			ಷರಾ
	ಇಲ್ಲ	ಇಲ್ಲ	–			–
	ಇಲ್ಲ	ಇಲ್ಲ	ನಿವೇಶನ ಹಂಚಿಕೆ ದರ ಪ್ರತಿ ಚದರಡಿಗೆ ರೂ.40/– ರಂತೆ ನಿಗಧಿಪಡಿಸಿದೆ.			118 ನಿವೇಶನ ಹಂಚಿಕೆಗೆ ಉದ್ದೇಶಿಸಿದೆ.
ಹುಮ್ನಾಬಾದ್	ಮು.ಮಾ. ಪ್ರಾಂ.ದಲ್ಲಿ 07 ಮೂಲೆ ನಿವೇಶನಗಳನ್ನು ಬಹಿರಂಗ ಹರಾಜು ಮೂಲಕ ಹಂಚಿಕೆ ಮಾಡಿದೆ.	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 7 ಹಮಾಲರಿಗೆ 20*20 ಅಳತೆ ನಿವೇಶನ ಹಂಚಿಕೆ ಮಾಡಲಾಗಿದೆ. ರೂ.4000/–ರಂತೆ ಪ್ರತಿಯೊಬ್ಬರಿಂದ ಪಡೆಯಲಾಗಿದೆ.	ನಿವೇಶನ ಸಂ:	ಸಮಿತಿ ನಿಗಧಿ ಪಡಿಸಿದ ದರ	ಬಿಡ್‌ನಲ್ಲಿ ಬಂದ ದರ	ಮು.ಮಾ.ಪ್ರಾಂ. ದಲ್ಲಿ 19, ದುಬಲಗುಂಡಿ ಉ.ಮಾ.. ಪ್ರಾಂ. ದಲ್ಲಿ 60 ನಿವೇಶನಗಳಿಗೆ ಹಂಚಿಕೆ ಮಾಡಲು ಸಮಿತಿ ಕ್ರಮ ಕೈಗೊಂಡಿದ್ದು, 80 ಅರ್ಜಿಗಳು ಬಂದಿದೆ. ದೂರುಗಳು ಬಂದಿದ್ದು ಪರಿಶೀಲಿಸಿ ಸಮಿತಿ ಪ್ರಸ್ತಾವನೆ ತಿರಸ್ಕರಿಸಿದೆ. ಹೊಸದಾಗಿ ಪ್ರಕಟಣೆ ನೀಡಿ ಅರ್ಜಿ ಆಹ್ವಾನಿಸಿ ನಿಯಮಾನುಸಾರ ಪ್ರಸ್ತಾವನೆ ಮರು ಸಾದರಪಡಿಸಲು ತಿಳಿಸಿದೆ.
			52	60,000	101000	
			53	60,000	105000	
			56	60,000	108000	
			57	82,800	110000	
			61	82,800	110000	
			62	82,800	110000	
			66	82,800	100000	
	ಚಿಟಗುಪ್ಪ ಉ.ಮಾ. ಪ್ರಾಂ.ದಲ್ಲಿ 01 ಮೂಲೆ ನಿವೇಶನ ಹಾಗೂ 07 ಖಾಲಿ ನಿವೇಶನ ಹಂಚಿಕೆ ಮಾಡಿದೆ.	ಇಲ್ಲ	01 ಮೂಲೆ ನಿವೇಶನ, ಸಮಿತಿ ದರ ರೂ.21,000/–, ಬಿಡ್ ದರ ರೂ.90,000/–, ಚಿಟಗುಪ್ಪ ಉ.ಮಾ. ಪ್ರಾಂ, ಪ್ರತಿ ಚದರಡಿಗೆ ರೂ.30/–. ಮು.ಮಾ.ಪ್ರಾಂ. ಹುಮನಾಬಾದ್ ಪ್ರತಿ ಚದರಡಿಗೆ ರೂ.40/– ದುಬಲಗುಂಡಿ ಉ.ಮಾಪ್ರಾಂ. ರೂ.30/–.			

ಬಸವ ಕಲ್ಯಾಣ	ಇಲ್ಲ	ಇಲ್ಲ	ಮು.ಮಾ.ಪ್ರಾಂಗಣ ರೂ.74/– ಪ್ರತಿ ಚ.ಅಡಿಗೆ, ಹುಲಸೂರು ಉಪ ಮಾರುಕಟ್ಟೆ ಪ್ರಾಂಗಣ ರೂ.45/– ಪ್ರತಿ ಚ.ಅಡಿಗೆ.	ಹುಲಸೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 51 ನಿವೇಶನ ಹಂಚಿಕೆಗೆ ಉದ್ದೇಶಿಸಿದೆ.
ಬೀದರ್	ಇಲ್ಲ	ಇಲ್ಲ	ಪ್ರತಿ ಚದರಡಿಗೆ ರೂ.375/– ರಂತೆ ನಿಗಧಿಪಡಿಸಿದೆ.	ಪ್ರಸ್ತುತ 42 ನಿವೇಶನಗಳು ಹಂಚಿಕೆಗೆ ಉದ್ದೇಶಿಸಿ ಟೆಂಡರ್ ಪ್ರಕಟಣೆ ನೀಡುವ ಹಂತದಲ್ಲಿದೆ.

ಖೈದಿಗಳ ಬಿಡುಗಡೆ

503 (761) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ತೋಟಗಾರಿಕೆ ಹಾಗೂ ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಜೈಲುಗಳನ್ನು ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿರುವ ಎಷ್ಟು ಜನ ಖೈದಿಗಳನ್ನು ಸನ್ನಡತೆಯ ಆಧಾರದ ಮೇಲೆ ಬಿಡುಗಡೆ ಮಾಡಲು ಸರ್ಕಾರ ನಿರ್ಧರಿಸಿದೆ, ಈ ದಿಸೆಯಲ್ಲಿ ಇಲ್ಲಿಯವರೆವಿಗೆ ಸಾಧಿಸಿರುವ ಪ್ರಗತಿ ಏನು?

ಆ) ರಾಜ್ಯ ಸರ್ಕಾರದ ನಿರ್ಧಾರದ ಹಿನ್ನೆಲೆಯಲ್ಲಿ ರಾಜ್ಯದ ಯಾವ ಯಾವ ಜೈಲುಗಳಿಂದ ಎಷ್ಟೆಷ್ಟು ಖೈದಿಗಳು ಅವಧಿಪೂರ್ವ ಬಿಡುಗಡೆ ಯಾಗಲಿದ್ದಾರೆ, ಇವರು ಎಷ್ಟೆಷ್ಟು ವರ್ಷಗಳ ಕಾಲ ಶಿಕ್ಷೆ ಅನುಭವಿಸಿದ್ದರು (ಇಂತಹವರ ಹೆಸರು, ವಿವರ ನೀಡುವುದು);

ಇ) ಸನ್ನಡತೆಯ ಆಧಾರದ ಮೇಲೆ ಬಿಡುಗಡೆಯಾಗಿ ಹೊರ ಬರುವ ಖೈದಿಗಳು ಉತ್ತಮ ನಡತೆಯೊಂದಿಗೆ ಸಮಾಜದ ಮುಖ್ಯವಾಹಿನಿಗೆ ಸೇರ್ಪಡೆಯಾಗುವಲ್ಲಿ ಸರ್ಕಾರವು ಯಾವ ಪಾತ್ರಗಳನ್ನು ವಹಿಸುವುದು.

ಈ) ಇಂತಹವರ ಕಲ್ಯಾಣಕ್ಕೆ ಸರ್ಕಾರ ಯಾವುದಾದರೂ ಕಾರ್ಯಕ್ರಮಗಳನ್ನು ರೂಪಿಸುವುದೇ?

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧೀಖಾನೆ ಸಚಿವರು):

ಅ) ಒಟ್ಟು 594 ಜನ ಖೈದಿಗಳು.

ಅಕಾಲಿಕ ಬಿಡುಗಡೆ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. (ಆದರೆ ಇನ್ನೂ ಅಂತಿಮ ನಿರ್ಧಾರವಾಗಿರುವುದಿಲ್ಲ.)

ಆ) (1) 07 ವರ್ಷ ಮತ್ತು ಮೇಲ್ಪಟ್ಟು ವಾಸ್ತವಿಕ ಸಜೆ ಪೂರೈಸಿರುವ ಪುರುಷ ಜೀವಾವಧಿ ಶಿಕ್ಷಾ ಬಂದಿಗಳು :-

ಬೆಂಗಳೂರು ಕೇಂ.ಕಾ.	215
ಗುಲ್ಬರ್ಗಾ ಕೇಂ.ಕಾ.	58
ಬೆಳಗಾವಿ ಕೇಂ.ಕಾ.	101
ವಿಜಾಪೂರ ಕೇಂ.ಕಾ.	33
ಬಯಲು ಬಂದೀಖಾನೆ, ಕೋರಮಂಗಲ	19
ಮೈಸೂರು ಕೇಂ.ಕಾ.	66
ಧಾರವಾಡ ಕೇಂ.ಕಾ.	11
ಬಳ್ಳಾರಿ ಕೇಂ.ಕಾ.	36
	539

(2) 05 ವರ್ಷ ಮತ್ತು ಮೇಲ್ಪಟ್ಟು ವಾಸ್ತವಿಕ ಸಜೆ ಪೂರೈಸಿರುವ ಮಹಿಳಾ ಜೀವಾವಧಿ ಶಿಕ್ಷಾ ಬಂದಿಗಳು :-

ಬೆಂಗಳೂರು ಕೇಂ.ಕಾ.	10
ಗುಲ್ಬರ್ಗಾ ಕೇಂ.ಕಾ.	01
ಬೆಳಗಾವಿ ಕೇಂ.ಕಾ.	05
ಮೈಸೂರು ಕೇಂ.ಕಾ.	04
ಧಾರವಾಡ ಕೇಂ.ಕಾ.	01
ಬಳ್ಳಾರಿ ಕೇಂ.ಕಾ.	01
	22

(3) 60 ವರ್ಷ ಮೇಲ್ಪಟ್ಟು ವಯಸ್ಸಾಗಿ ಕನಿಷ್ಠ 05 ವರ್ಷ ಮತ್ತು ಮೇಲ್ಪಟ್ಟು ವಾಸ್ತವಿಕ ಸಜೆ ಪೂರೈಸಿರುವ ಪುರುಷ ಜೀವಾವಧಿ ಶಿಕ್ಷಾ ಬಂದಿಗಳು :-

ಬೆಂಗಳೂರು ಕೇಂ.ಕಾ.	10
ಬೆಳಗಾವಿ ಕೇಂ.ಕಾ.	07
ವಿಜಾಪೂರ ಕೇಂ.ಕಾ.	05
ಮೈಸೂರು ಕೇಂ.ಕಾ.	06
ಧಾರವಾಡ ಕೇಂ.ಕಾ.	02
	30

(4) 50 ವರ್ಷ ಮೇಲ್ಪಟ್ಟು ವಯಸ್ಸಾಗಿ ಕನಿಷ್ಠ 04 ವರ್ಷ ಮತ್ತು ಮೇಲ್ಪಟ್ಟು ವಾಸ್ತವಿಕ ಸಜೆ ಪೂರೈಸಿರುವ ಮಹಿಳಾ ಜೀವಾವಧಿ ಶಿಕ್ಷಾ ಬಂದಿಗಳು.

ಬೆಂಗಳೂರು ಕೇಂ.ಕಾ.	02
ಬಳ್ಳಾರಿ ಕೇಂ.ಕಾ.	01
	03

ಒಟ್ಟು 594

ಶಿಕ್ಷಾ ಬಂದಿಗಳ ವಿವರಗಳುಳ್ಳ ವಿವರಣಾ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ. (ಈ ಬಗ್ಗೆ ಇನ್ನೂ ಅಂತಿಮ ತೀರ್ಮಾನವಾಗಬೇಕಿದೆ).

ಇ) ಕಾರಾಗೃಹಗಳಲ್ಲಿ ಬಂಧಿಗಳಿಗೆ ಪವರ್‌ಲೂಮ್ ಮತ್ತು ಹ್ಯಾಂಡ್ ಲೂಮ್, ಟೈಲರಿಂಗ್, ಕಾರ್ಪೆಂಟರಿ, ಕಾರ್ಪೆಟ್ ತಯಾರಿಕೆ, ಪ್ರಿಂಟಿಂಗ್, ಚಮ್ಮಾರಿಕೆ, ಕಮ್ಮಾರಿಕೆ, ಟೆಂಟ್ ತಯಾರಿಸುವುದು, ಸೋಪು ಮತ್ತು ಫಿನಾಯಿಲ್ ತಯಾರಿಸುವುದು, ಬೇಕರಿ ತರಬೇತಿ, ಗಣಕಯಂತ್ರದ ತರಬೇತಿ ಮತ್ತು ಆಧುನಿಕ ರೀತಿಯಲ್ಲಿ ವ್ಯವಸಾಯ ಹಾಗೂ ತೋಟಗಾರಿಕೆ ತರಬೇತಿಯನ್ನು ನೀಡಲಾಗುತ್ತಿದ್ದು, ಶಿಕ್ಷಾ ಬಂದಿಗಳು ಬಿಡುಗಡೆಯ ನಂತರ ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆತು ತಮ್ಮ ಸ್ವಂತ ಅವಲಂಬನೆಯಲ್ಲಿ ಬದುಕನ್ನು ನಿರ್ವಹಿಸಲು ಸಕ್ಷಮರನ್ನಾಗಿ ಮಾಡಲಾಗುತ್ತಿದೆ.

ಈ) ಅಕಾಲಿಕವಾಗಿ ಬಿಡುಗಡೆಯಾಗುವ ಬಂದಿಗಳಿಗೆ, ಕರ್ನಾಟಕ ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್, ಡಿ.ದೇವರಾಜ ಅರಸ್ ಬ್ಯಾಕ್‌ವರ್ಡ್ ಕ್ಲಾಸಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ ಮತ್ತು ಡಾ: ಬಿ.ಆರ್. ಅಂಬೇಡ್ಕರ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ ರವರಿಂದ ಅತೀ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯವನ್ನು ಒದಗಿಸಿ ಕಾರಾಗೃಹದಲ್ಲಿ ಪಡೆದ ವೃತ್ತಿ ತರಬೇತಿಯನ್ನು ಸದುಪಯೋಗಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ರೈತರ ವಿದೇಶ ಪ್ರವಾಸ

504 (762) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ರಾಜ್ಯದ ಎಷ್ಟು ಜನ ರೈತರನ್ನು ಅಧ್ಯಯನ ಪ್ರವಾಸಕ್ಕಾಗಿ ಯಾವ್ಯಾವ ದೇಶಗಳಿಗೆ ಸರ್ಕಾರದ ವತಿಯಿಂದ ಕಳುಹಿಸಲಾಗಿತ್ತು; ಇದಕ್ಕಾಗಿ ಸರ್ಕಾರಕ್ಕೆ ತಗುಲಿದ ವೆಚ್ಚವೆಷ್ಟು (ಪೂರ್ಣ ವಿವರವನ್ನು ಒದಗಿಸುವುದು);

ಆ) ಈ ವಿದೇಶಿ ಪ್ರವಾಸದಿಂದ ಕೃಷಿ ಕ್ಷೇತ್ರಕ್ಕೆ/ ರೈತರಿಗೆ ಯಾವ ರೀತಿ ಅನುಕೂಲವಾಗಿದೆ;

ಇ) ಪ್ರಸಕ್ತ ಸಾಲಿನಲ್ಲಿಯೂ ಸಹ ರೈತರನ್ನು ವಿದೇಶಕ್ಕೆ ಕಳುಹಿಸುವ ಕಾರ್ಯಕ್ರಮ ಇದೆಯೇ; ಈ ಪ್ರವಾಸಕ್ಕೆ ರೈತರನ್ನು ಆಯ್ಕೆ ಮಾಡುವಾಗ ಪಾಲಿಸುವ ನಿಯಮಗಳೇನು;

ಈ) ಇಂತಹ ಸಮಯದಲ್ಲಿ ರೈತರನ್ನು ಆಯ್ಕೆ ಮಾಡುವಾಗ ಅತ್ಯಂತ ಹಿಂದುಳಿದ ಬೀದರ್ ಜಿಲ್ಲೆಯ ವಿಶೇಷವಾಗಿ ಭಾಲ್ಕಿ ಮತ್ತು ಕ್ಷೇತ್ರದ ರೈತರನ್ನು ಆಯ್ಕೆ ಮಾಡಲಾಗುವುದೇ?

ಶ್ರೀ ಎಸ್.ಎ. ರವಿಂದ್ರನಾಥ್ (ಕೃಷಿ ಸಚಿವರು) :

ಅ) ಕಳೆದ ವರ್ಷ ರಾಜ್ಯದ 528 ಜನ ರೈತರನ್ನು ಅಧ್ಯಯನ ಪ್ರವಾಸಕ್ಕಾಗಿ ಚೀನಾ ದೇಶಕ್ಕೆ ಸರ್ಕಾರದ ವತಿಯಿಂದ ಕಳುಹಿಸಲಾಗಿತ್ತು. ಇದಕ್ಕಾಗಿ ಸರ್ಕಾರಕ್ಕೆ ತಗಲಿದ ವೆಚ್ಚ ರೂ. 3,58,77,600/-

ಆ) ರೈತರಿಗೆ ಚೀನಾ ದೇಶದಲ್ಲಿನ ಕೃಷಿ ತಾಂತ್ರಿಕತೆಗಳ ಬಗ್ಗೆ ಅರಿವು ಮೂಡಿಸಲಾಗಿರುತ್ತದೆ. ಸದರಿ ತಾಂತ್ರಿಕತೆಗಳನ್ನು ತಮ್ಮ ಕ್ಷೇತ್ರಗಳಲ್ಲಿ ಅಳವಡಿಸಿ

ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಿರುವುದರಿಂದ ರೈತರಿಗೆ ಈ ಪ್ರವಾಸ ದಿಂದ ಅನುಕೂಲವಾಗಿರುತ್ತದೆ.

ಇ) ಹೌದು.

ಪ್ರಸಕ್ತ ಸಾಲಿನಲ್ಲಿಯೂ ಸಹ ರೈತರನ್ನು ಚೀನಾ ದೇಶಕ್ಕೆ ಅಧ್ಯಯನ ಪ್ರವಾಸಕ್ಕೆ ಕಳುಹಿಸುವ ಕಾರ್ಯಕ್ರಮವಿದೆ. ಇದಲ್ಲದೆ ಇಸ್ರೇಲ್ ದೇಶಕ್ಕೆ ರೈತರನ್ನು ಅಧ್ಯಯನ ಪ್ರವಾಸಕ್ಕೆ ಕಳುಹಿಸುವ ಕಾರ್ಯಕ್ರಮ ಇದೆ.

ಈ ಪ್ರವಾಸಕ್ಕೆ ರೈತರನ್ನು ಆಯ್ಕೆ ಮಾಡುವಾಗ ಪಾಲಿಸುವ ನಿಯಮಗಳೇನೆಂದರೆ.

- ಸ್ವಂತ ಜಮೀನಿನಲ್ಲಿ ಸ್ವಯಂ ವ್ಯವಸಾಯ ಮಾಡುತ್ತಿರಬೇಕು.
- ಪ್ರಗತಿಪರ ರೈತರಾಗಿರಬೇಕು.
- ಓದಲು ಮತ್ತು ಬರೆಯಲು ಜ್ಞಾನ ಹೊಂದಿರಬೇಕು.
- ಕೃಷಿ ಪಂಡಿತ ಪ್ರಶಸ್ತಿ ಮತ್ತು ಕೃಷಿ ಪ್ರಶಸ್ತಿ ಪಡೆದ ರೈತರಿಗೆ ಆದ್ಯತೆ ನೀಡುವುದು.
- 20 ರಿಂದ 60 ವರ್ಷಗಳ ವಯೋಮಿತಿಯಲ್ಲಿದ್ದು, ಉತ್ತಮ ಆರೋಗ್ಯ ಹೊಂದಿರಬೇಕು.
- ಪ್ರತಿ ತಾಲ್ಲೂಕಿನಿಂದ ಮೂರು ಜನ ರೈತರನ್ನು ಆಯ್ಕೆ ಮಾಡಬೇಕು.
- ಸರ್ಕಾರದ ನಿಬಂಧನೆಯಂತೆ ಮಹಿಳೆಯರಿಗೆ ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವರ್ಗದ ರೈತರನ್ನು ಆಯ್ಕೆ ಮಾಡಬೇಕು. ನಿಬಂಧನೆಯಂತೆ ತಾಲ್ಲೂಕು ಮಟ್ಟದಲ್ಲಿ ಆರಿಸಲು ಸಾಧ್ಯವಾಗದೇ ಇದ್ದಲ್ಲಿ, ಜಿಲ್ಲಾ ಮಟ್ಟದಲ್ಲಿ ಯಾದರೂ ಮೇಲೆ ತಿಳಿಸಿದ ವರ್ಗದ ರೈತರುಗಳನ್ನು ಕನಿಷ್ಟ ಸಂಖ್ಯೆಯಲ್ಲಿ ಆಯ್ಕೆ ಮಾಡಬೇಕಾಗಿರುತ್ತದೆ.

ಈ) ಭಾಲ್ಕಿ ಮತ ಕ್ಷೇತ್ರದ ರೈತರನ್ನು ಸಹ ಆಯ್ಕೆ ಮಾಡಲಾಗುವುದು.

ಬಿ.ಪಿ.ಎಲ್ ಪಡಿತರ ಚೀಟಿ

505 (763) ಶ್ರೀ ಈಶ್ವರ್ ಭೀಮಣ್ಣ (ಭಾಲ್ಕಿ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ವಿವಿಧ ಮತ ಕ್ಷೇತ್ರಗಳಲ್ಲಿ ಎಷ್ಟು ಬಿಪಿಎಲ್ ಪಡಿತರ ಚೀಟಿಗಳನ್ನು ನೀಡಲಾಗಿದೆ.

ಈ ಅವಧಿಯಲ್ಲಿ ಬಿಪಿಲ್ ಪಡಿತರ ಚೀಟಿಯನ್ನು ಕೋರಿ ಬಂದಿದ್ದ ಅರ್ಜಿಗಳೆಷ್ಟು?

ಆ) ಈ ಅವಧಿಯಲ್ಲಿ ಎಷ್ಟು ಗುರಿಯನ್ನು ಹೊಂದಲಾಗಿತ್ತು.

ಈ ಗುರಿಯನ್ನು ಸಾಧಿಸಲಾಗಿದೆಯೇ?

ಇ) ಜಿಲ್ಲೆಯಲ್ಲಿ ನೀಡಿರುವ ಬಹುತೇಕ ಬಿಪಿಎಲ್ ಕಾರ್ಡುಗಳು ಲೋಪದೋಷದಿಂದ ಕೂಡಿರುವ ಬಗ್ಗೆ ಹಾಗೂ ಅನರ್ಹರಿಗೆ ನೀಡಿಕೆ ಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಲೋಪದೋಷಗಳನ್ನು ಸರಿಪಡಿಸಿ ಅರ್ಹರಿಗೆ ಬಿಪಿಎಲ್ ಪಡಿತರ ಚೀಟಿಯನ್ನು ನಿಗಧಿತ ಸಮಯದಲ್ಲಿ ನೀಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಹೆಚ್. ಹಾಲಪ್ಪ (ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ)

ವಿಧಾನಸಭಾ ಕ್ಷೇತ್ರದ ಹೆಸರು	ನೆಮ್ಮದಿ ಕೇಂದ್ರಗಳ ಮೂಲಕ ವಿತರಣೆಯಾದ ಪಡಿತರ ಚೀಟಿಗಳು			ಬಿಪಿಎಲ್ ಕೋರಿ ಬಂದ ಒಟ್ಟು ಅರ್ಜಿಗಳು
	ಬಿಪಿಎಲ್	ಎಪಿಎಲ್	ಒಟ್ಟು	
ಆ) ಇದರಲ್ಲಿ ಅರಕಲಗೂಡು ಮತಕ್ಷೇತ್ರಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) 2005–06 ರಿಂದ ಫೆಬ್ರವರಿ 2010ರವರೆಗೆ ಬಿಡುಗಡೆಯಾದ ಹಣ;

The Amount released from 2005-06 to February 2010;

ಕೇಂದ್ರ ಸರ್ಕಾರ	ರೂ.1621.57
ರಾಜ್ಯ ಸರ್ಕಾರ	ರೂ.195.77
ಒಟ್ಟು :	**ರೂ.1817.34**

ಆ) ರೂ. 185.61 ಲಕ್ಷ.
Rs. 185.61 lakhs.

ಸರ್ಕಾರೇತರ ಸಂಘ ಸಂಸ್ಥೆಗಳು

529 (770) ಶ್ರೀ ಹೆಚ್.ಪಿ. ಮಂಜುನಾಥ್ (ಹುಣಸೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನಲ್ಲಿರುವ ಸರ್ಕಾರೇತರ ಸಂಘ ಸಂಸ್ಥೆಗಳ ಮತ್ತು ಸಹಕಾರ ಸಂಘಗಳ ಸಂಖ್ಯೆ ಎಷ್ಟು? (ಅವುಗಳ ಹೆಸರು, ವಿಳಾಸ ಮತ್ತು ಸಂಸ್ಥೆಯ ಮುಖ್ಯ ಕಾರ್ಯಚಟುವಟಿಕೆ ಬಗ್ಗೆ ವಿವರ ನೀಡುವುದು);

ಆ) ಈ ಸಹಕಾರ ಸಂಘಗಳ ಹಾಗೂ ಸಂಸ್ಥೆಗಳ ಕಾಯ್ದೆಗಳಡಿ ಯಾವುದಾದರೊಂದು ಸಹಕಾರಿ ಸಂಘ ಅಥವಾ ಸಂಘ ಸಂಸ್ಥೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಖಾತರಿಪಡಿಸಲು ನಿಗದಿ ಪಡಿಸಿರುವ ಮಾನದಂಡಗಳು ಅಥವಾ ನಿಗದಿಪಡಿಸಿರುವ ನಿಯಮಗಳೇನು?

ಇ) ಸಂಘ ಸಂಸ್ಥೆಗಳ ಹಾಗೂ ಸಹಕಾರ ಸಂಘಗಳ ಕಾರ್ಯ ಚಟುವಟಿಕೆ ಮೇಲೆ ಇಲ್ಲಾಖೆಯಿಂದ ನಿಯಂತ್ರಣವೇನಾದರೂ ಇರುವುದೇ?

ಈ) ಮೇಲ್ಕಂಡವುಗಳ ಪೈಕಿ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಸಂಘಗಳು ಎಷ್ಟು? ಅಸಮರ್ಪಕವಾಗಿ ನಡೆಯುತ್ತಿರುವುದು ಎಷ್ಟು ಮತ್ತು ಯಾವುವು?

ಉ) ಪಟ್ಟಿಯಲ್ಲಿರುವ ಸಂಘ ಸಂಸ್ಥೆಗಳ ವಿರುದ್ಧ ದೂರುಗಳೇನಾದರೂ ದಾಖಲಾಗಿರುವುದೇ ಅಥವಾ ತನಿಖೆ ನಡೆಯುತ್ತಿರುವುದೇ (ವಿವರ ನೀಡುವುದು)?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು) :

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನಲ್ಲಿ ಒಟ್ಟು 462 ಸಂಘ ಸಂಸ್ಥೆಗಳು ನೊಂದಣಿಯಾಗಿರುತ್ತವೆ. ಸದರಿ ತಾಲ್ಲೂಕಿನಲ್ಲಿ 204 ಸಹಕಾರ ಸಂಘಗಳು ಬ್ಯಾಂಕುಗಳು ನೊಂದಣಿಯಾಗಿರುತ್ತವೆ.

ಆ) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ಅಡಿಯಲ್ಲಿ ನೊಂದಣಿ ಯಾದ ಸಹಕಾರ ಸಂಘಗಳು ಕಾಯ್ದೆ ಮತ್ತು ನಿಯಮಗಳಿಗೆ ಅನುಗುಣವಾಗಿ ರಚಿಸಿಕೊಂಡಿರುವ ಉಪವಿಧಿಗಳ ರೀತ್ಯಾ ಕೆಲಸ ನಿರ್ವಹಿಸ ಬೇಕಾಗಿರುತ್ತದೆ. ಮುಖ್ಯವಾಗಿ ಉಪವಿಧಿಗಳಲ್ಲಿ ತೋರಿಸಿರುವ ಧ್ಯೇಯೋದ್ದೇಶಗಳ ರೀತ್ಯಾ ಸದಸ್ಯರಿಗೆ ಸೇವೆ ನೀಡಬೇಕಾಗಿರುತ್ತದೆ.

ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ಮತ್ತು ಕರ್ನಾಟಕ ಸಂಘಗಳ ನೋಂದಣಿ ನಿಯಮಗಳು 1961 ರ ರೀತ್ಯಾ ನೋಂದಣಿಯಾದ ಸಂಘ ಸಂಸ್ಥೆಗಳು ಕಾಯ್ದೆ ಮತ್ತು ನಿಯಮಗಳಿಗನುಗುಣವಾಗಿ ಕೆಲಸ ನಿರ್ವಹಿಸಬೇಕಾಗಿರುತ್ತದೆ. ಹಾಗೆಯೇ ಪ್ರತಿಯೊಂದು ಸಂಘಕ್ಕೂ, ಒಂದು ಜ್ಞಾಪನಾ ಪತ್ರವನ್ನು ನೋಂದಣಿ ಮಾಡಿ ಕೊಡಲಾಗುತ್ತಿದ್ದು, ಅದರಲ್ಲಿ ನಮೂದಾಗಿರುವ ಧ್ಯೇಯೋದ್ದೇಶಗಳ ರೀತ್ಯಾ ಕೆಲಸ ನಿರ್ವಹಿಸಬೇಕಾಗಿರುತ್ತದೆ.

ಇ) ಸಂಘ ಸಂಸ್ಥೆಗಳು ಮತ್ತು ಸಹಕಾರ ಸಂಘಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ಕಾಯ್ದೆ ಮತ್ತು ನಿಯಮಗಳು ಹಾಗೂ ಅವುಗಳ ಉಪವಿಧಿಗಳ ರೀತ್ಯಾ ಕೆಲಸ ನಿರ್ವಹಿಸಬೇಕಾಗಿರುತ್ತದೆ. ಕಾಲಕಾಲಕ್ಕೆ ಸರ್ಕಾರ

ಮತ್ತು ನಿಯಂತ್ರಣಾಧಿಕಾರಿಗಳು ನಿಯಮಾನುಸಾರ ನೀಡುವ ನಿರ್ದೇಶನ ಗಳಂತೆ ಸಹ ಕೆಲಸ ಮಾಡಬೇಕಾಗಿರುತ್ತದೆ.

ಈ) ಮೇಲ್ಕಂಡ ಸಹಕಾರ ಸಂಘಗಳ ಪೈಕಿ 188 ಸಹಕಾರ ಸಂಘಗಳು ಕಾರ್ಯನಿರತವಾಗಿದ್ದು 09 ಸಹಕಾರ ಸಂಘಗಳು ಸಮಾಪನೆಯಲ್ಲಿ ಹಾಗೂ 07 ಸಹಕಾರ ಸಂಘಗಳು ನಿಷ್ಕ್ರೀಯವಾಗಿರುತ್ತವೆ. ತಾಲ್ಲೂಕಿನಲ್ಲಿ ವಾಸವಾಂಬ ಸಹಕಾರ ಸಂಘ, ಅಸ್ರ ಅಲ್ಪಸಂಖ್ಯಾತರ ಪತ್ತಿನ ಸಹಕಾರ ಸಂಘ, ಹಲವಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳು ಉತ್ತಮ ಹಾಗೂ ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿವೆ.

ಸಂಘ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ರೀತ್ಯಾ ಆಡಿಟ್ ವರ್ಗೀಕರಣ ಹಾಗೂ ಲಾಭ- ನಷ್ಟ ವರ್ಗೀಕರಣವನ್ನು ಮಾಡಲು ಅವಕಾಶಗಳಿರುವುದಿಲ್ಲ. ಆದರೆ ಕಾಯ್ದೆ ಉಪಬಂಧಗಳ ರೀತ್ಯಾ ಪ್ರತಿ ವರ್ಷ ಮಹಾಸಭೆ ನಡೆಸುವುದು, ಲೆಕ್ಕ ಪತ್ರಗಳ ತಪಾಸಣೆ ಮಾಡಿಸಿ ಲೆಕ್ಕ ಪರಿಶೋಧನಾ ವರದಿಯೊಂದಿಗೆ ನೋಂದಣಾಧಿಕಾರಿಗಳ ಕಛೇರಿಗೆ ಸಲ್ಲಿಸಿ ನಿಗದಿತ ಶುಲ್ಕವನ್ನು ಸರ್ಕಾರಕ್ಕೆ ಪಾವತಿಸಿ, ಸ್ವೀಕೃತಿ ಪಡೆಯಬೇಕಾಗಿರುತ್ತದೆ. ಅದರಂತೆ ದಿನಾಂಕ: 01.06.2008 ರಿಂದ ಫೆಬ್ರವರಿ 2010 ರವರೆಗೆ 33 ಸಂಘ ಸಂಸ್ಥೆಗಳು ನೋಂದಣಾಧಿಕಾರಿಗಳ ಕಛೇರಿಗೆ ಸಲ್ಲಿಸಿ ಸ್ವೀಕೃತಿಯನ್ನು ಪಡೆದಿರುತ್ತವೆ.

ಉ) ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಲಭ್ಯವಾಗುವ ದೂರು ಅರ್ಜಿಗಳನ್ನು ವಿಚಾರಣೆ ಮಾಡಿ ಇತ್ಯರ್ಥ ಗೊಳಿಸಲಾಗುತ್ತಿದೆ. ಸಂಘ ಸಂಸ್ಥೆಗಳಿಗೆ ಸಂಬಂಧಿಸಿದಂತೆ "ಹುಣಸೂರು ತಾಲ್ಲೂಕು ಗಾಣಿಗರ ಸಂಘ (ರಿ)" ಶಿವಜ್ಯೋತಿನಗರ, ಶಂಕರಮಠದ ರಸ್ತೆ, ಹುಣಸೂರು-571 105 ಇದರ ವಿರುದ್ಧ ಪ್ರಾಪ್ತವಾದ ದೂರು ಅರ್ಜಿಯನ್ನು ವಿಚಾರಣೆ ನಡೆಸಿ ವರದಿ ನೀಡಲು ಹುಣಸೂರು ತಾಲ್ಲೂಕಿನ ಸಹಕಾರ ಅಭಿವೃದ್ಧಿ ಅಧಿಕಾರಿಗೆ ಕಳುಹಿಸಲಾಗಿದ್ದು ವಿಚಾರಣೆಗೆ ಸಂಘದವರು ಸ್ಪಂದಿಸದ ಕಾರಣ ಆರೋಪಗಳು ಸಾಬೀತಾಗಿವೆ ಎಂದು ಪರಿಗಣಿಸಿ ಆಡಳಿತ ಸಮಿತಿಯನ್ನು ರದ್ದುಗೊಳಿಸಿ ಅಧಿನಿಯಮದ ಪ್ರಕರಣ 2/ಎ ರೀತ್ಯಾ ಆಡಳಿತಗಾರರನ್ನು ನೇಮಿಸುವಂತೆ ನೋಂದಣಾಧಿಕಾರಿಗಳು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

O. 30 F-48

ಬಿ.ಪಿ.ಎಲ್. ಪಡಿತರ ಚೀಟಿ ವಿತರಣೆ

530 (104) ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಬಿಪಿಎಲ್ ಪಡಿತರ ಚೀಟಿ ವಿತರಣೆ ಮಾಡಲಾಗಿದೆ (ಜಿಲ್ಲಾವಾರು ಮಾಹಿತಿ ಒದಗಿಸುವುದು);

ಆ) ತಾಲ್ಲೂಕು ನೆಮ್ಮದಿ ಕೇಂದ್ರಗಳ ಮೂಲಕ ಬಿಪಿಎಲ್ ಆಹಾರ ಪಡಿತರದಾರರು ಪಡಿತರ ಚೀಟಿ ಪಡೆಯಲು ಅರ್ಜಿ ಸಲ್ಲಿಸುವ ಬಗ್ಗೆ ಎಲ್ಲಾ ಹಳ್ಳಿಗಳಿಗೆ ಸರಿಯಾದ ಮಾಹಿತಿ ಸಿಗದೇ ನಿಜವಾದ ಅರ್ಹ ಬಿಪಿಎಲ್ ಪಡಿತರದಾರರು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ಹಾಲಪ್ಪ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕತ ವ್ಯವಹಾರಗಳ ಸಚಿವರು) :

ಅ) ರಾಜ್ಯದಲ್ಲಿ 11,99,700 ಎಎವೈ ಮತ್ತು 86,44,634 ಬಿಪಿಎಲ್ ಪಡಿತರ ಚೀಟಿ ಚಾಲ್ತಿಯಲ್ಲಿರುತ್ತದೆ. (ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ)

ಆ) ಇಲ್ಲ.

ಇ) ಸಾರ್ವಜನಿಕರು ತಮ್ಮ ಪಡಿತರ ಚೀಟಿಯನ್ನು ಪಡೆಯಲು ತಾಲ್ಲೂಕು ಮಟ್ಟದ ಬ್ಲಾಕ್ ಆಫೀಸ್‌ಗಳಲ್ಲಿ ಅರ್ಜಿ ನೀಡಿ, ಎಪಿಎಲ್ ಪಡಿತರ ಚೀಟಿಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಖಾಯಂ ಪಡಿತರ ಚೀಟಿಗಳ ವಿತರಣೆ ರಾಜಾದ್ಯಾಂತ ನಡೆಯುತ್ತಿದ್ದು, ಪ್ರಕ್ರಿಯೆ ಮುಗಿದ ನಂತರ ಸರ್ಕಾರದ ಸೂಕ್ತ ನಿರ್ಣಯಾನುಸಾರ ಬಿಪಿಎಲ್ ಪಡಿತರ ಚೀಟಿಯನ್ನು ಅರ್ಹರು ಪಡೆಯಲು ಅವಕಾಶ ಕಲ್ಪಿಸಲಾಗುವುದು.

Annexure to LAQ 104

Sl. No.	Name of the District	AAY Cards	BPL Cards	No. of Naromadi Coupons	Total BPL	APL Cards	Total Cards
1	2	3	4	5	6	7	8
1	Bagalkot	47660	167577	74034	289271	176882	466153
2	Bangalore IRA	18769	281951	0	300720	832660	1133380
3	Bangalore Rural	15500	115330	63272	194102	68253	262355
4	Bangalore Urban	15898	308685	109439	434022	196048	630070
5	Belgaum	96677	470987	149871	717535	580742	1298277
6	Bellary	66486	187282	111419	365187	177595	542782
7	Bidar	45175	150791	88370	284336	189680	474016
8	Bijapur	66558	186047	129234	371837	172745	544582
9	Chamarajnagar	36075	151901	49499	237475	72296	309771
10	Chickballapura	32789	171771	60838	265398	87431	352829
11	Chikkamagalur	23537	158679	43155	225371	82939	308310
12	Chitradurga	47378	234497	59164	341039	88639	429678
13	D.Kannada	15881	154635	6684	177200	205400	382600
14	Davanagere	53933	229643	110169	393745	138551	532296
15	Dharwad	32809	170687	101526	305022	149896	454918
16	Gadag	31737	107042	54720	193499	93391	286890
17	Gulbarga	104530	345593	224558	674681	296979	971660
18	Hassan	25098	302320	66167	393585	125825	519410
19	Haveri	50536	181348	81174	313058	100387	413445
20	Kodagu	6128	71469	12338	89935	63103	153038
21	Kolar	33127	197797	83576	314500	106824	421324
22	Koppal	42062	117135	92912	252109	95100	347209
23	Mandya	37209	272133	89070	398412	178699	577111
24	Mysore	51104	416605	117390	585099	174629	759728
25	Raichur	60279	157107	116220	333606	153096	486702
26	Ramanagar	20229	158679	34011	212919	90368	303287
27	Shimoga	41483	207908	63151	312522	151757	464279
28	Tumkur	56307	377656	86193	520156	194832	714988
29	Udupi	17873	90488	6188	114549	120341	234890
30	Uttara Kannada	16895	180916	35633	233444	132684	366128
	GRAND TOTAL	1199700	6324659	2319975	9844334	5297772	15142106

ಸಿಂಧನೂರಿನಲ್ಲಿ ಹೊರವರ್ತುಲ ರಸ್ತೆ ನಿರ್ಮಿಸುವುದು

532 (364) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯ ಸಿಂಧನೂರು ಪಟ್ಟಣದಲ್ಲಿ ಅತೀ ಹೆಚ್ಚಿನ ವಾಹನ ದಟ್ಟಣೆಯಿಂದ ಸ್ಥಳೀಯ ನಾಗರೀಕರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಸಿಂಧನೂರಿನಲ್ಲಿ ಹೊರ ವರ್ತುಲ ರಸ್ತೆಯನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಹೊರ ವರ್ತುಲ ರಸ್ತೆಯ ನಿರ್ಮಾಣಕ್ಕೆ ಸರ್ಕಾರ ಭೂಸ್ವಾಧೀನಪಡಿಸಿಕೊಂಡಿದೆಯೇ;

ಉ) ಹಾಗಿದ್ದಲ್ಲಿ, ಎಷ್ಟು ಎಕರೆ ಭೂಮಿಯನ್ನು ಸ್ವಾಧೀನಪಡಿಸಿ ಕೊಳ್ಳಲಾಗಿದೆ;

ಊ) ಈ ಭೂಮಿಗೆ ಸರ್ಕಾರ ಎಕರೆಯೊಂದಕ್ಕೆ ನಿಗದಿಪಡಿಸಿರುವ ಮೊತ್ತ ಎಷ್ಟು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿರುತ್ತದೆ.

ಆ) ಈ ಬಗ್ಗೆ ತೊಂದರೆಯನ್ನು ನಿವಾರಿಸಲು ಸಿಂಧನೂರು ಪಟ್ಟಣದಲ್ಲಿ ಕಲ್ಮಲಾ ಶಿಗ್ಗಾಂವ ರಾಹೆ–23, ಸಿಂಧನೂರು ಹೆಮ್ಮಡಗಾ ರಾಹೆ–30 ಮತ್ತು ಶ್ರೀರಂಗಪಟ್ಟಣ–ಜೇವರ್ಗಿ ರಾಹೆ–19 ಈ 3 ರಾಜ್ಯ ಹೆದ್ದಾರಿಗಳು ಹಾಯ್ದು ಹೋಗುತ್ತಿರುವ ಪೈಕಿ 1) ಕಲ್ಮಲಾ ಶಿಗ್ಗಾಂವ ರಾಹೆ–23 ಮತ್ತು ಶ್ರೀರಂಗಪಟ್ಟಣ–ಜೇವರ್ಗಿ ರಾಹೆ–19 ಕೆಶಿಪ್ ವತಿಯಿಂದ ಅಭಿವೃದ್ಧಿಪಡಿಸಲಾಗಿರುತ್ತದೆ. ಕಲ್ಮಲಾ ಶಿಗ್ಗಾಂವ ರಾಹೆ–23 ರಸ್ತೆಯನ್ನು ದ್ವಿಪಥ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುತ್ತದೆ ಮತ್ತು ಸಿಂಧನೂರು ಹೆಮ್ಮಡಗಾ ರಾಹೆ–30 ರಸ್ತೆಯನ್ನು ಪಟ್ಟಣ ಪರಿಮಿತಿಯಲ್ಲಿ ಅಗಲೀಕರಣಗೊಳಿಸಲಾಗಿರುತ್ತದೆ.

ಇ) ಇಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ

533 (988) ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ಗಳ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಗೆ ಕೆ.ಎ.ಟಿ. ಮತ್ತು ಮಾನ್ಯ ಉಚ್ಚ ನ್ಯಾಯಾಲಯದಿಂದ ನಿರ್ದೇಶನಗಳಿದ್ದರೂ ಸಹ ಸರ್ಕಾರ ಇಂಜಿನಿಯರ್‌ಗಳ ಬ್ಯಾಕ್‌ಲಾಗ್ ಹುದ್ದೆಗಳಿಗೆ ಗುತ್ತಿಗೆ ನೌಕರರನ್ನೇ ಖಾಯಂ ಮಾಡಲು ರಚಿಸಲಾದ 2005ರ ವಿಶೇಷ ನಿಯಮಾವಳಿಯನ್ನು ಅನುಷ್ಠಾನಗೊಳಿಸುವ ಮೊದಲು ನ್ಯಾಯಾಲಯಗಳ ಅನುಮತಿ ಪಡೆಯಲಾಗದೆ ಇರುವುದಕ್ಕೆ ಕಾರಣವೇನು;

ಆ) ದಿನಾಂಕ: 7-4-2005ರ ಸಚಿವ ಸಂಪುಟದ ನಿರ್ಣಯದಲ್ಲೂ ಸಹ ಕೆಎಟಿಯ ಅನುಮತಿ ಪಡೆಯುವಂತೆ ಸೂಚಿಸಿದ್ದರೂ ಅನುಮತಿ ಪಡೆಯದೆ 2005ರ ವಿಶೇಷ ನಿಯಮಾವಳಿಗಳನ್ನು ಅನುಷ್ಠಾನಗೊಳಿಸಿರುವ ಹಿನ್ನೆಲೆಯಲ್ಲಿ ಕಾರ್ಯಾಂಗದಿಂದ ಸಚಿವ ಸಂಪುಟದ ನಿರ್ಣಯವನ್ನು ಉಲ್ಲಂಘಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮೇಲ್ಕಂಡ ವಿಷಯಗಳ ಹಿನ್ನೆಲೆಯಲ್ಲಿ ದಿನಾಂಕ: 25-5-2009 ರಂದು ಕೆಎಟಿಯು 2005ರ ವಿಶೇಷ ನಿಯಮಾವಳಿಯನ್ನು ರದ್ದುಪಡಿಸಿರುವುದರಿಂದ 1278, ಎಸ್‌ಸಿ/ಎಸ್‌ಟಿ ಇಂಜಿನಿಯರ್‌ಗಳ ಉದ್ಯೋಗ ಭದ್ರತೆಗೆ ಸರ್ಕಾರದ ಮುಂದಿನ ಕ್ರಮ ಏನು;

ಈ) ಹೆಚ್ಚು ಅಂಕಗಳು ಹಾಗೂ ಅರ್ಹತೆ ಇದ್ದು, ನ್ಯಾಯಾಲಯ ದಿಂದಲೂ ಸಹ ತೀರ್ಪು ಪಡೆದಿರುವಂತಹ, ವಯೋಮಿತಿ ಮೀರುತ್ತಿರುವ ಅರ್ಹ ಎಸ್‌ಸಿ/ಎಸ್‌ಟಿ ನಿರುದ್ಯೋಗಿ ಇಂಜಿನಿಯರ್‌ಗಳ ಭವಿಷ್ಯದ ಕುರಿತಾಗಿ ಸರ್ಕಾರ ತೆಗೆದುಕೊಂಡ ಕ್ರಮ ಏನು;

ಉ) ಸರ್ಕಾರ, ಕೇವಲ ಉಚ್ಚ ನ್ಯಾಯಾಲಯದ ಅಂತಿಮ ತೀರ್ಪನ್ನು ನಿರೀಕ್ಷಿಸುವುದರ ಜೊತೆಗೆ, ನ್ಯಾಯಾಲಯದ ಅನುಮತಿಯನ್ನು ಪಡೆಯುವುದರೊಂದಿಗೆ ಈ ಬ್ಯಾಕ್‌ಲಾಗ್ ಇಂಜಿನಿಯರ್ ನೇಮಕಾತಿಯ ಜ್ವಲಂತ ಸಮಸ್ಯೆಯನ್ನು ಶಾಶ್ವತವಾಗಿ ಬಗೆ ಹರಿಸಲು ಯಾವುದಾದರೂ ಕ್ರಮಗಳು ಮಾರ್ಗೋಪಾಯಗಳು, ಪ್ರಸ್ತಾವನೆಗಳು ಸರ್ಕಾರದ ಮುಂದೆ ಇದೆಯೇ, ಇದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು;

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ, ಜಲ ಸಂಪನ್ಮೂಲ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಗಳಲ್ಲಿ ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್ ವೃಂದದ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಇಂಜಿನಿಯರ್‌ಗಳನ್ನು ವಿಲೀನಗೊಳಿಸಲು ಉದ್ದೇಶಿಸಿ "The Karnataka Civl Services (Absorption of persons appointed on contract basis against backing vacancies in the category of Assistant Engineers and Junior Engineers in the Departments of Public Works Engineering and Water Resources and Rural Development and Panchayat Raj) (Special) Rules 2005" ರ ಕರಡು ನಿಯಮಾವಳಿಯನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ಸಚಿವ ಸಂಪುಟವು ದಿನಾಂಕ: 7–4–2005 ರಂದು ನಡೆದ ಸಭೆಯಲ್ಲಿ ಅನುಮೋದಿಸಿತು. ಸಚಿವ ಸಂಪುಟದ ಆದೇಶದಂತೆ ಸದರಿ 2005ರ ವಿಶೇಷ ಕರಡು ನಿಯಮಾವಳಿಯಿಂದ ಬಾಧಿತರಾದವರಿಂದ ಆಕ್ಷೇಪಣೆ/ಅಹವಾಲುಗಳನ್ನು ಸಲ್ಲಿಸಲು 15 ದಿವಸಗಳ ಕಾಲಾವಕಾಶವನ್ನು ಕಲ್ಪಿಸಿ ಸಂಖ್ಯೆ ಲೋಇ:420:ಸೇಸಕಿ:03 ದಿನಾಂಕ: 12–4–2005ರ ಅಧಿಸೂಚನೆಯಲ್ಲಿ ಪ್ರಕಟಿಸಿ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅನುಮೋದನೆ ಪಡೆಯುವಂತೆ ಸೂಚಿಸಿ ರಾಜ್ಯ ಉಚ್ಚ ನ್ಯಾಯಾಲಯದ ಅಡ್ವೋಕೇಟ್ ಜನರಲ್‌ರವರಿಗೆ ಸಂಖ್ಯೆ ಲೋಇ:420: ಸೇಸಕಿ:03 ದಿನಾಂಕ: 13–4–2005 ರಲ್ಲಿ ಸರ್ಕಾರದ ಪತ್ರ ಬರೆಯಲಾಯಿತು.

ಆ) ಮೇಲೆ '(ಅ)' ದಲ್ಲಿನ ಉತ್ತರದಂತೆ ಕ್ರಮ ವಹಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಬ್ಯಾಕ್‌ಲಾಗ್ ಇಂಜಿನಿಯರ್‌ಗಳ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಲಾಗಿದ್ದ ಅರ್ಜಿ ಸಂಖ್ಯೆ 6258/2003 ಮತ್ತು ಇತರೆ ಪ್ರಕರಣಗಳಲ್ಲಿ ಸರ್ಕಾರವು ಹೊರಡಿಸಿದ್ದ 2005ರ ವಿಶೇಷ ನಿಯಮಾವಳಿಯನ್ನು ಮಾನ್ಯ ನ್ಯಾಯಮಂಡಳಿಯು ದಿನಾಂಕ: 25-5-2009ರಂದು ಅಸಿಂಧುಗೊಳಿಸಿರುತ್ತದೆ. ಅದರಂತೆ ನ್ಯಾಯ ಮಂಡಳಿಯ ದಿನಾಂಕ: 25-5-2009ರ ತೀರ್ಪಿನಿಂದ ಬಾಧಿತರಾದ ಬ್ಯಾಕ್‌ಲಾಗ್ ಇಂಜಿನಿಯರ್‌ಗಳು ಈಗಾಗಲೇ ಉಚ್ಚ ನ್ಯಾಯಾಲಯದಲ್ಲಿ ಸಂಖ್ಯೆ 15314/09 ರಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ನ್ಯಾಯ ಮಂಡಳಿಯ ತೀರ್ಪಿಗೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 12-6-2009ರಂದು ತಡೆಯಾಜ್ಞೆ ನೀಡಿರುತ್ತದೆ. ಹಾಗೂ ಈ ಕುರಿತು ರಾಜ್ಯ ಸರ್ಕಾರವು ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ 23707/09ರ ಪ್ರಕರಣವನ್ನು ಮೇಲೆ ತಿಳಿಸಿದ ರಿಟ್ ಅರ್ಜಿಯೊಂದಿಗೆ ಒಂದುಗೂಡಿಸಿ ನ್ಯಾಯಾಲಯದ ಮುಂದೆ ತೀರ್ಮಾನಕ್ಕೆ ಬಾಕಿ ಇರುತ್ತದೆ.

ಈ) ಮೇಲಿನ (ಇ)ದಲ್ಲಿನ ಉತ್ತರದಂತೆ ಬ್ಯಾಕ್‌ಲಾಗ್ ಇಂಜಿನಿಯರ್‌ಗಳ ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದ ಮಂದೆ ವಿಚಾರಣೆಗೆ ಬಾಕಿ ಇದ್ದು, ಸಬ್ ಜ್ಯೂಡಿಸ್ (Sub-Judice) ಆಗಿರುವುದರಿಂದ ಉಚ್ಚ ನ್ಯಾಯಾಲಯದಿಂದ ಈ ಪ್ರಕರಣವು ಇತ್ಯರ್ಥವಾಗುವವರೆಗೂ ಈ ಕುರಿತು ಮುಂದಿನ ಯಾವುದೇ ಕ್ರಮ ವಹಿಸಲು ಸಾಧ್ಯವಾಗುವುದಿಲ್ಲ, ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಮೇಲೆ (ಈ) ದಲ್ಲಿ ನೀಡಿರುವ ಉತ್ತರದಂತೆ ಪ್ರಶ್ನೆ ಉದ್ಭವಿಸುವುದಿಲ್ಲ.

ಪಾದಚಾರಿ ರಸ್ತೆ

534 (989) ಶ್ರೀ ನರೇಂದ್ರಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಹೆದ್ದಾರಿಗಳನ್ನು ನಿರ್ಮಿಸುವಾಗ ಪಾದಚಾರಿಗಳು ಸಂಚರಿಸಲು ಯಾವ್ಯಾವ ಜಾಗರೂಕತೆಯನ್ನು ಸರ್ಕಾರ ತೆಗೆದುಕೊಂಡಿದೆ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಾಜ್ಯ ಹೆದ್ದಾರಿಗಳನ್ನು ನಿರ್ಮಿಸುವಾಗ ಪಾದಚಾರಿಗಳು ಸಂಚರಿಸಲು ನಗರ ಪ್ರದೇಶದಲ್ಲಿ ಇರುವ ರಸ್ತೆಗಳಲ್ಲಿ ಪಾದಚಾರಿಗಳಿಗೆ ಫುಟ್‌ಪಾತ್ ಹಾಗೂ ರಸ್ತೆಗಳನ್ನು ದಾಟಲು ಜೀಬ್ರಾ ಕ್ರಾಸಿಂಗ್‌ಗಳು, ಇತ್ಯಾದಿ ಸೂಚನಾ ಫಲಕಗಳನ್ನು IRC ಮತ್ತು MoRTH ಗಳಲ್ಲಿ ನಿಗದಿ ಪಡಿಸಿದ ನಿಯಮಗಳು ಹಾಗೂ Caution boards, Reflectory boards, Barricading, Construction of Safty signals Diversion Roads etc., ಗಳನ್ನು ಅಳವಡಿಸಿ ಮುಂಜಾಗ್ರತೆ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ಹಾಗೂ ರಸ್ತೆಯ ಇಕ್ಕೆಲಗಳಲ್ಲಿ 1 ರಿಂದ 2 ಮೀಟರ್ ಅಗಲಕ್ಕೆ ಹಾರ್ಡ್ ಶೋಲ್ಡರ್ಸ್‌ಗಳನ್ನು ಮಾಡಲಾಗಿದ್ದು, ಗ್ರಾಮ-ಪಟ್ಟಣ ಪರಿಮಿತಿಯಲ್ಲಿ ಎತ್ತರಿಸಿದ ಕರ್ಬ್‌ಗಳನ್ನು ಅಳವಡಿಸಿ ಫುಟ್‌ಪಾತ್‌ನ್ನು ನಿರ್ಮಿಸಿದ್ದು, ಹ್ಯಾಂಡ್ ಡ್ರೈವಿಂಗ್ಸ್‌ನ್ನು ಅಳವಡಿಸಿ ಟ್ರಾಫಿಕ್ ಸಿಗ್ನಲ್ಸ್‌ನ್ನು ಹಾಗೂ ಅಗತ್ಯ ಸೂಚನಾ ಫಲಕಗಳನ್ನು ಅಳವಡಿಸಿ ಪಾದಚಾರಿಗಳಿಗೆ ಅನುಕೂಲವಾಗುವಂತೆ ಜಾಗರೂಕತೆಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ಮೇಲೆ ತಿಳಿಸಿದಂತೆ IRC ಮತ್ತು MoRTH ಗಳಲ್ಲಿ ನಿಗದಿಪಡಿಸಿದ ನಿಯಮಗಳಂತೆ ಜಾಗರೂಕತೆಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಬಹುಮಡಿ ಕಟ್ಟಡಗಳಲ್ಲಿ ಲಿಫ್ಟ್‌ಗಳಲ್ಲಿ ಸಿಲುಕಿದ ಜನರಿಗೆ ರಕ್ಷಣೆ

535 (990) ಶ್ರೀ ನರೇಂದ್ರಬಾಬು ನೆ.ಲ (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಬಹುಮಹಡಿಗಳಲ್ಲಿ ಅಳವಡಿಸಿರುವ ಲಿಫ್ಟ್‌ಗಳು ಆಗಿಂದಾಗ್ಗೆ ಕೆಟ್ಟು ಮಧ್ಯದಲ್ಲಿ ನಿಲ್ಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಹುಮಹಡಿಗಳಲ್ಲಿ ಲಿಫ್ಟ್‌ಗಳು ಕೆಟ್ಟು ಅಪಘಾತಕ್ಕೆ ಈಡಾದ ಸಂದರ್ಭದಲ್ಲಿ ಸಾವನ್ನಪ್ಪಿದ ಜನಸಾಮಾನ್ಯರಿಗೆ ಸರ್ಕಾರ ಎಷ್ಟು ಮೊತ್ತದ ಪರಿಹಾರ ಧನ ನೀಡುತ್ತಿದೆ;

ಇ) ಹಳೆಯ ಲಿಫ್ಟ್‌ಗಳನ್ನು ಬದಲಾವಣೆ ಮಾಡಿ ಹೊಸ ಲಿಫ್ಟ್‌ಗಳನ್ನು ಅಳವಡಿಸಲು ಸರ್ಕಾರ ಯಾವ ರೀತಿಯ ಕ್ರಮ ಜರುಗಿಸಿದೆ (ವಿವರ ನೀಡುವುದು);

ಈ) ಬಹುಮಹಡಿಗಳಲ್ಲಿ ಅಳವಡಿಸಿರುವ ಲಿಫ್ಟ್‌ಗಳು ಕೆಟ್ಟು ಮಧ್ಯದಲ್ಲಿ ನಿಂತಾಗ ಅದರಲ್ಲಿ ಸಿಲುಕಿರುವ ಜನರಿಗೆ ಸರ್ಕಾರ ಯಾವ ರೀತಿಯ ರಕ್ಷಣೆ ಒದಗಿಸಿದೆ (ವಿವರ ನೀಡುವುದು); ಈ ಕುರಿತು ಸರ್ಕಾರದಿಂದ ಆದೇಶ ಹೊರಡಿಸಲಾಗಿದೆಯೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಸರ್ಕಾರಿ ಬಹುಮಡಿಗಳಲ್ಲಿ ಲಿಫ್ಟ್‌ಗಳು ಕೆಟ್ಟು ಅಪಘಾತಕ್ಕೆ ಈಡಾದ ಯಾವುದೇ ಘಟನೆಗಳು ಸಂಭವಿಸಿರುವುದಿಲ್ಲ.

ಇ) ಬಹುಮಹಡಿ ಕಟ್ಟಡದ 3ನೇ ಹಂತದ 2 ಲಿಫ್ಟ್‌ಗಳು, ವಿಧಾನಸೌಧ, ಉಚ್ಚ ನ್ಯಾಯಾಲಯ, ಶಾಸಕರ ಭವನ, ರಾಜಭವನ, ಸಿಟಿ ಸಿವಿಲ್ ಕೋರ್ಟ್, ಟಿ.ವಿ.ಟವರ್, ವಿಕ್ಟೋರಿಯ ಆಸ್ಪತ್ರೆ ಸಂಕೀರ್ಣದಲ್ಲಿನ ಹಳೆಯ ಲಿಫ್ಟ್‌ಗಳ ಬದಲಾವಣೆಯ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಈ) ಬಹುಮಹಡಿಗಳಲ್ಲಿ ಅಳವಡಿಸಿದ ಲಿಫ್ಟ್‌ಗಳು ಕೆಟ್ಟು ಮಧ್ಯದಲ್ಲಿ ನಿಂತಾಗ ಲಿಫ್ಟ್‌ಗಳ ನಿರ್ವಹಣೆಯನ್ನು ಅವುಗಳ ಮೂಲ ತಯಾರಕರಾದ ಓಟೀಸ್, ಕೊನೆ, ಓಮೇಗಾ ಈ ಕಂಪನಿಗಳು ಸದರಿ ಲಿಫ್ಟ್‌ಗಳನ್ನು ತಕ್ಷಣವೇ ದುರಸ್ತಿಪಡಿಸಿ ಅನುಕೂಲ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ಲಿಫ್ಟ್‌ಗಳಲ್ಲಿ ಆಪರೇಟರ್‌ಗಳನ್ನು ನೇಮಿಸಿದ್ದು, ಲಿಫ್ಟ್ ಕೆಟ್ಟು ನಿಂತಾಗ ಜನರನ್ನು ಹೊರ ತರಲು ಆಪರೇಟರ್‌ಗಳಿಗೆ ತರಬೇತಿ ನೀಡಲಾಗಿದೆ. ಈ ಕುರಿತಂತೆ ಸರ್ಕಾರದಿಂದ ಯಾವುದೇ ಆದೇಶವನ್ನು ಹೊರಡಿಸಲಾಗಿರುವುದಿಲ್ಲ.

O.30 F-49

ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸ್ಥಾಪನೆ

536 (767) ಶ್ರೀ ಪರಣ್ಣ ಈಶ್ವರಪ್ಪ ಮುನವಳ್ಳಿ (ಗಂಗಾವತಿ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಂಗಾವತಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ವಿಶೇಷ ಮಾರುಕಟ್ಟೆ ಸ್ಥಾಪನೆ ವಿಷಯ ಸರ್ಕಾರದ ಮುಂದೆ ಇದೆಯೇ;

ಆ) ದಿನಾಂಕ: 02/12/2009 ಮತ್ತು ದಿನಾಂಕ: 06/01/2010 ರಂದು ಸಹಕಾರ ಇಲಾಖೆಯಿಂದ ಹೊರಡಿಸಿರುವ ಅಧಿಸೂಚನೆಯಿಂದ ಗಂಗಾವತಿ ಮಾರುಕಟ್ಟೆಯ ಮೇಲಾಗುವ ಪರಿಣಾಮದ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ;

ಇ) ಗಂಗಾವತಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಹೊಂದಿ ಕೊಂಡು ಸುಮಾರು 130 ಎಕರೆ ಜಮೀನು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಜಮೀನಿನಲ್ಲಿ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ನಿರ್ಮಿಸುವ ಬಗ್ಗೆ ಸರ್ಕಾರದ ನಿಲುವೇನು?

ಉ) ಗಂಗಾವತಿ ತಾಲ್ಲೂಕಿನಲ್ಲಿರುವ ನವಲಿ ಗ್ರಾಮದ ರೈಸ್ ಟೆಕ್ನಾಲಜಿ ಪಾರ್ಕ್ ನಿರ್ಮಿಸುತ್ತಿರುವುದು ಸ್ವಾಗತಾರ್ಹ. ಇದನ್ನು ಗಂಗಾವತಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಗೆ ಸೇರಿರುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ಹೌದು.

ಆ) ದಿನಾಂಕ: 02/12/2009 ರ ಅಧಿಸೂಚನೆಯನ್ನು ರದ್ದುಪಡಿಸಿ ಪರಿಷ್ಕೃತ ಅಧಿಸೂಚನೆಯನ್ನು ದಿನಾಂಕ: 06/01/2010 ರಲ್ಲಿ ಪ್ರಕಟಿಸಿ ಆಕ್ಷೇಪಣೆ ಹಾಗೂ ಸಲಹೆಗಳನ್ನು ಆಹ್ವಾನಿಸಲಾಗಿದೆ. ಈ ಬಗ್ಗೆ ಬಂದಿರುವ ಆಕ್ಷೇಪಣೆ ಹಾಗೂ ಸಲಹೆಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪ್ರಶ್ನಿತ 130 ಎಕರೆಗಳನ್ನು ಒಳಗೊಂಡಂತೆ ಗಂಗಾವತಿ ಸಮಿತಿಗೆ ಸೇರಿದ ಪ್ರಾಂಗಣದ ವಿಸ್ತೀರ್ಣ 164 ಎಕರೆ ಇರುತ್ತದೆ.

ಈ) ಗಂಗಾವತಿ ಮುಖ್ಯ ಮಾರುಕಟ್ಟೆ ಪ್ರಾಂಗಣವು ಒಟ್ಟು 164 ಎಕರೆ ವಿಸ್ತೀರ್ಣವು ಹೊಂದಿದೆ. ವಿವಿಧ ಪೇಟೆ ಕಾರ್ಯಕರ್ತರು ಹಾಗೂ ಸಂಘ ಸಂಸ್ಥೆಗಳಿಗೆ ವ್ಯಾಪಾರ ಚಟುವಟಿಕೆಗಳಿಗೆ ನಿವೇಶನ ಹಂಚಿಕೆ ಮಾಡಿದ್ದು ಪ್ರಸ್ತುತ 406 ನಿವೇಶನಗಳು ಹಂಚಿಕೆಗೆ ಲಭ್ಯವಿದ್ದು, ಹಂಚಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಭತ್ತ ಉತ್ಪನ್ನದ ಬಿತ್ತನೆಯಿಂದ ಮಾರಾಟದವರೆಗೆ ಅಗತ್ಯವಾಗುವ ಎಲ್ಲಾ ಸೌಕರ್ಯಗಳನ್ನು ರೈತರಿಗೆ ಕಲ್ಪಿಸುವುದು ಮತ್ತು ಉಪ ಉತ್ಪನ್ನಗಳ ಪ್ರಯೋಜನಗಳನ್ನು ಸ್ಥಳೀಯವಾಗಿ ಬಳಸಿಕೊಳ್ಳುವ ಉದ್ದೇಶದಿಂದ ರೈಸ್ ಟೆಕ್ನಾಲಜಿ ಪಾರ್ಕ್ ಯೋಜನೆ ರೂಪಿಸಿದೆ. ನವಲಿ ಹಾಗೂ ಸೋಮನಾಳ ಭಾಗದ ವ್ಯಾಪ್ತಿಯಲ್ಲಿ 330.17 ಎಕರೆ ಸರ್ಕಾರಿ ಜಮೀನು ಹಾಗೂ 140.20 ಎಕರೆ ಜಮೀನನ್ನು ಭೂ ಸ್ವಾಧೀನ ಪ್ರಕ್ರಿಯೆ ಮೂಲಕ ಪಡೆಯಲು ಪ್ರಸ್ತಾವವಿದ್ದು, ಪರಿಶೀಲನೆಯಲ್ಲಿದೆ. ಆದ್ದರಿಂದ, ಈ ಉದ್ದೇಶಕ್ಕಾಗಿ ಪ್ರಸ್ತುತ ಸಮಿತಿಯ ಪ್ರಾಂಗಣದಲ್ಲಿ ಇರುವ ಸ್ಥಳಾವಕಾಶದಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪನೆಗೆ ಪೂರಕವಾಗಿರುವುದಿಲ್ಲ.

ಉ) ಭತ್ತ ಮತ್ತು ಅಕ್ಕಿ ಉತ್ಪನ್ನಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ಕಾರಟಗಿಯಲ್ಲಿ ಸ್ಥಾಪಿಸುವ ಸಂಬಂಧ ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಆಕ್ಷೇಪಣೆ ಹಾಗೂ ಸಲಹೆಗಳನ್ನು ಆಹ್ವಾನಿಸಿದ್ದು ಅಂತಿಮ ತೀರ್ಮಾನ ಕೈಗೊಳ್ಳುವ ಸಂಬಂಧ ಬಂದಿರುವ ಆಕ್ಷೇಪಣೆ ಹಾಗೂ ಸಲಹೆಗಳ ಕುರಿತು ಸರ್ಕಾರದ ಪರಿಶೀಲನೆಯಲ್ಲಿದೆ.

ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿ

537 (654) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ಮೀಸಲಿರಿಸಿದ್ದ ಅನುದಾನವೆಷ್ಟು? ಇಲ್ಲಿಯವರೆಗೆ ಈ ಇಲಾಖೆಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಆ) ಅಪೆಂಡಿಕ್ಸ್–ಇ ಎಂದರೇನು? ಇದನ್ನು ಸಿದ್ಧಪಡಿಸುವ ಉದ್ದೇಶವೇನು; ಅಪೆಂಡಿಕ್ಸ್–ಇ ಇಲ್ಲದೆ ಇಲಾಖೆಯವರು ವೆಚ್ಚ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ? ಬಂದಿದ್ದರೆ, ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) 2009–10ನೇ ಸಾಲಿನ ಆರ್ಥಿಕ ವರ್ಷ ಮುಗಿಯುತ್ತ ಬಂದಿದ್ದರೂ ಇಲಾಖೆಯಿಂದ ಇನ್ನೂ ಯಾವುದೇ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳದಿರಲು ಕಾರಣವೇನು?

ಈ) 2009–10ನೇ ಸಾಲಿನಲ್ಲಿ ಇಲಾಖಾ ವತಿಯಿಂದ ರಾಜ್ಯದಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಿವರ ನೀಡುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) 2009–10ನೇ ಸಾಲಿನ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ಮೀಸಲಿರಿಸಿದ್ದ ಅನುದಾನ ಮತ್ತು ಇಲ್ಲಿಯವರೆಗಿನ ಬಿಡುಗಡೆಯ ವಿವರಗಳನ್ನು ಅನುಬಂಧ–1 ರಲ್ಲಿ ವಿವರಿಸಿದೆ.

ಆ) ಕರ್ನಾಟಕ ಬಜೆಟ್ ಮಾನ್ಯುಯಲ್ ಅನುಸಾರ ಪ್ರತಿ ಸಾಲಿನಲ್ಲಿಯೂ ಇಲಾಖಾವಾರು ನಿಗದಿಪಡಿಸಲಾಗುವ ಒಟ್ಟಾರೆ ಬಜೆಟ್ ಅನುದಾನವನ್ನು ಆಧರಿಸಿ ಕಾಮಗಾರಿವಾರು ತಯಾರಿಸಲಾಗುವ ಕಾರ್ಯಕ್ರಮ ಪಟ್ಟಿ.

ಆಯವ್ಯಯದಲ್ಲಿ ಲಭ್ಯವಿರುವ ಅನುದಾನಕ್ಕೆ ಸೀಮಿತಗೊಳಿಸಿ ಸಾರ್ವಜನಿಕರ ಹಿತದೃಷ್ಟಿಯನ್ನು ಗಮನದಲ್ಲಿರಿಸಿ ಅಗತ್ಯವಿರುವ ಅವಶ್ಯಕ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಅದರನ್ವಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು ಹಾಗೂ ಹಿಂದಿನ ಸಾಲುಗಳಿಂದ ಮುಂದುವರೆದ ಕಾಮಗಾರಿಗಳಿಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅವಶ್ಯಕ ಅನುದಾನ ಹಾಗೂ ಹೊಸ ಕಾಮಗಾರಿಗಳಿಗೆ ಅವಶ್ಯಕ ಅನುದಾನ ಆಧರಿಸಿ ವಾಸ್ತವಿಕ ಯೋಜನೆ ಸಿದ್ಧಪಡಿಸುವುದು ಇದರ ಮೂಲ ಉದ್ದೇಶ. ಹಿಂದಿನ ಸಾಲಿನಲ್ಲಿ ಅನುಮೋದಿತ ಅಪೆಂಡಿಕ್ಸ್–ಇ ನಲ್ಲಿರುವ ಕಾಮಗಾರಿಗಳು ಪ್ರಸಕ್ತ ಸಾಲಿನಲ್ಲಿ ಮುಂದುವರೆದಿದ್ದು ಆಯವ್ಯಯ ಅನುಮೋದನೆ ಆದ ನಂತರ ಅಂತಹ ಕಾಮಗಾರಿಗಳಿಗೆ ವೆಚ್ಚವನ್ನು ಮಾಡಲಾಗುತ್ತದೆ.

ಇ) ಹಿಂದಿನ ಸಾಲಿನಲ್ಲಿ ಅನುಮೋದನೆಗೊಂಡು ಮುಂದುವರೆದ ಕಾಮಗಾರಿಗಳಿಗೆ ಆದ್ಯತೆ ನೀಡಿ ಆಯವ್ಯಯದಲ್ಲಿ ಇಲಾಖೆಗೆ ನಿಗಧಿಪಡಿಸಲಾಗುವ ಅನುದಾನದಲ್ಲಿ ಈ ಮುಂದುವರೆದ ಕಾಮಗಾರಿಗಳಿಗೆ ಅನುದಾನವನ್ನು ಒದಗಿಸಲಾಗಿದೆ. ಆಯವ್ಯಯದಲ್ಲಿ ಇಲಾಖೆಗೆ ನಿಗಧಿಪಡಿಸಲಾಗಿರುವ ಅನುದಾನದಲ್ಲಿ ಯಾವುದೇ ಅನುದಾನ ಉಳಿಕೆಯಾಗಿರುವುದಿಲ್ಲವಾದ್ದರಿಂದ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ.

ಈ) 2009-10ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖಾ ವತಿಯಿಂದ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.

ಲೆಕ್ಕ ಶೀರ್ಷಿಕೆ	ಕಾಮಗಾರಿಗಳ ಸಂಖ್ಯೆ
5054-ಇತರೆ ರಸ್ತೆ ನಿರ್ಮಾಣ	1909
5054-ನಬಾರ್ಡ್ ರಸ್ತೆ	4199
ವಿಶೇಷ ಘಟಕ ಯೋಜನೆ	1067
ಗಿರಿಜನ ಉಪಯೋಜನೆ	580
ವಿಶೇಷ ಅಭಿವೃದ್ಧಿ ಯೋಜನೆ (ಡಾ.ನಂಜುಂಡಪ್ಪ ವರದಿ ಆಧಾರಿತ)	704
ಸುವರ್ಣ ವಿಕಾಸ ರಸ್ತೆ	370
4059- ಇಲಾಖಾ ಕಟ್ಟಡಗಳು	1000
4216- ವಸತಿ ಗೃಹಗಳು	309

ಅನುಬಂಧ– 1

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ: 654ಕ್ಕೆ ಉತ್ತರ

(Rs. In Lakhs)

Sl. No.	Head of Account	Grant for 2009-10	Releases till date
1	2	3	4
I.1	5054 R&B (Plan)	36129.66	35029.66
	5054- Panchalinga Dharshana	6000.00	6000.00
	5054- ORF Concorence given by FD for works included in A-E Part I	3134.00	
	Total grant available under 5054 R&B	**45263.66**	**41029.66**
2	5054 Nabard Rurak Roads	21870.40	21870.40
3	5054 Central Road Fund	20000.00	17742.24
	Special Development Plan (DR.D.M)		
4	5054-04-800-1-09-133 Dr.D.M. Nanjundappa	5000.00	4684.00
5	5054-04-800-3-01-133 NABARD	8000.00	4671.77
6	5054-80-190-0-01-133 KRDCL	10000.00	0.00
	5054- (Plan) SCSP		
7	5054-03-0337-0-02-422-SCP-ORF	5000.00	3100.00
8	5054-04-800-3-01-422-NABARD Roads	4381.60	4381.60

	5054- (Plan) TSP		
9.	5054-03-337-0-02-423-TSP-ORF	1382.64	1099.64
10	5054-04-800-3-01-423-TSP-NABARD	1500.00	1500.00
11	3054 (Plan) "Mukhya Mantri Gremeena Raste Abhivruddhi Yojane"	20000.00	17900.00
12	5054-04-800-1-09-172 Suvarna Rasthe Vikasa Yojane	10000.00	4436.77
13	3054-04-105-1-01-200 12th Finance Commission	14615.00	7715.00
14	3054-03-337-0-05-200 (Plan) State Highway Maintenance	5000.00	3600.00
15	3054-03-337-0-05-200 (Plan) State Highway Bridge Maintenance	596.46	0.00
	Roads Total	**172609.76**	**133731.08**
II.2	Buildings (Plan) excluding Judiciary		
a	4059-80-051-0-29-386	15350.00	12050.00
	Concurrence given by FD for works included in A-E Part works	4508.00	
	Reappropriated from Dharwad & Gulbarga Circuit Bench to A-E Part works under 4059 (Plan)	1000.00	
	Reappropriated from	1000.00	

	H/A 4216 (Plan) Residential Bldgs to A-E Part I works under 409 (Plan)		
	Total Grant available under 4059 (Deptl bldgs)	**21858.00**	**12050.00**
b	4059-80-051-0-30-386	2200.00	500.00
c	4059 Dharwad Gulbarga Circuit Bench	3200.00	2000.00
	Rs 1000 lakh Reappropriated to 4059 (4200-1000)		
	4059-80-051-0-40-386-Belgaum Suvarna Soudha.	6200.00	5251.00
	4059 Total:	**33458.00**	**19801.00**
d	4216-01-700-2-01-386 Housing	5600.00	4600.00
	Rs 1000 lakh Resppropriated to 4059 (6600-1000)		
	4216. HSR Layout	1500.00	170.00
e	2059	300.00	240.00
f	2216	400.00	276.00
3	Buildings (Non Plan)		
a	2059-80-053-4-00-200	13101.17	10907..17
b	2059-80-053-5-02-200 12th Finance	1320.00	1105.00
c	2216-01-700-3-01-200	5943.30	5658.30
	Buildings Total	**61622.47**	**42757.47**
	Roads, Bridges & Bldgs. Total	**234232.23**	**176488.55**

ಕಾಮಗಾರಿಯನ್ನು ಪ್ರಾರಂಭಿಸುವುದು

538 (365) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರಿನಿಂದ ತಾವರಗೇರೆ ರಸ್ತೆ ಈಗಾಗಲೇ ಕೇಸಿಫ್‌ನಲ್ಲಿ ಸೇರಿದ್ದು, ಇನ್ನೂ ಕಾಮಗಾರಿಯು ಪ್ರಾರಂಭವಾಗಿಲ್ಲದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಸಿಂಧನೂರಿನಿಂದ ತಾವರೆಗೇರೆ ರಸ್ತೆಯ ಅಭಿವೃದ್ಧಿ ಕಾಮಗಾರಿಯು ಕೆಶಿಪ್–II ರ 3411 ಕಿಮೀ. ರಸ್ತೆ ಅಭಿವೃದ್ಧಿಯ ಯೋಜನೆ ಯಲ್ಲಿ ಸೇರಿರುತ್ತದೆ.

ಸಿಂಧನೂರಿನಿಂದ ತಾವರೆಗೇರೆ ರಸ್ತೆಯ ಅಭಿವೃದ್ಧಿ ಕಾಮಗಾರಿ ಯನ್ನು ಮುಂದಿನ ಎರಡನೇ ಅಥವಾ ಮೂರನೇ ಹಂತದಲ್ಲಿ ಏಷ್ಯಯನ್ ಅಭಿವೃದ್ಧಿ ಬ್ಯಾಂಕ್ ಅಥವಾ ಸ್ಥಳೀಯ ಹಣಕಾಸು ಸಂಸ್ಥೆಗಳ ಅಥವಾ ಖಾಸಗಿ ಬಂಡವಾಳ ಹೂಡಿಕೆಯ ಯೋಜನೆಗಳಲ್ಲಿ ತೆಗೆದುಕೊಳ್ಳಲಾಗಿದೆ. ಈ ವಿಷಯದಲ್ಲಿ ಅಧ್ಯಯನಗಳನ್ನು ಕೈಗೊಳ್ಳಲಾಗುತ್ತಿದ್ದು ಒದಗಿ ಬರಬಹುದಾದ ಆರ್ಥಿಕ ಸಂಪನ್ಮೂಲಕ್ಕೆ ಅನುಸಾರವಾಗಿ ಸೂಕ್ತವಾದ ಕ್ರಿಯಾ ಯೋಜನೆ ಗಳನ್ನು ಸಿದ್ಧಪಡಿಸಲಾಗುತ್ತಿದೆ. ಸಿಂಧನೂರಿನಿಂದ ತಾವರಗೇರೆ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ವಿವರವಾದ ಯೋಜನಾ ವರದಿಯನ್ನು ಈಗಾಗಲೇ ಸಿದ್ಧಪಡಿಸಲಾಗಿರುತ್ತದೆ.

ಆ) ಈ ಕಾಮಗಾರಿಯನ್ನು ಮೇಲೆ ತಿಳಿಸಿರುವ ಅಧ್ಯಯನವು ಪೂರ್ಣಗೊಂಡ ಬಳಿಕ ಪ್ರಾರಂಭಿಸಬಹುದಾಗಿರುತ್ತದೆ.

ಕಾಮಗಾರಿಯನ್ನು ಪ್ರಾರಂಭಿಸುವುದು

539 (366) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ಪಟ್ಟಣಕ್ಕೆ ಬೈಪಾಸ್ ರಸ್ತೆ ಕೇಸಿಫ್-1 ರಲ್ಲಿ ಸೇರಿ ವರ್ಲ್ಡ್‌ಬ್ಯಾಂಕ್‌ನಿಂದ ಅನುಮತಿ ಪಡೆದು ಹಾಗೂ ಸರ್ವೆ ಕಾರ್ಯ ಕೂಡ ಪೂರ್ಣಗೊಂಡು ಕೊನೆಯ ಹಂತದಲ್ಲಿ ಕಾಮಗಾರಿಯನ್ನು ಕೈಬಿಡಲು ಕಾರಣವೇನು;

ಆ) ಈ ಯೋಜನೆಯನ್ನು ಮುಂದಿನ ಆಯವ್ಯಯದಲ್ಲಿ ತೆಗೆದುಕೊಳ್ಳಲು ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-1 ರಲ್ಲಿ ಪೂರ್ವಭಾವಿ ಅಧ್ಯಯನದ ಮೇರೆಗೆ ಸಿಂಧನೂರು ಪಟ್ಟಣಕ್ಕೆ ಬೈಪಾಸ್ ರಸ್ತೆ ನಿರ್ಮಿಸುವ ಬಗ್ಗೆ ಪ್ರಸ್ತಾವನೆಯನ್ನು ಮಾಡಲಾಗಿತ್ತು. ಆದರೆ ಈ ಬಗ್ಗೆ ವಿವರವಾದ ಯೋಜನಾ ವರದಿಯನ್ನು ತಯಾರಿಸಿರುವುದಿಲ್ಲ. ಈ ಸಮಯ ದಲ್ಲಿ ಸಿಂಧನೂರಿನಿಂದ ಬೂದಗುಂಪ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿತ್ತು. ಹಾಗೂ ಕಾಮಗಾರಿಯು ಪ್ರಗತಿಯಲ್ಲಿತ್ತು. ಈ ಕಾಮಗಾರಿಯಲ್ಲಿ ಸಿಂದನೂರಿನಲ್ಲಿ ಹಾಲಿ ರಸ್ತೆಯ ಅಭಿವೃದ್ಧಿಯನ್ನು ಸೇರಿಸಲಾಗಿತ್ತು. ಈ ಸಮಯದಲ್ಲಿ ಸಿಂದನೂರು ಪಟ್ಟಣದಲ್ಲಿನ 1.2 ಕಿಮೀ. ರಸ್ತೆಯನ್ನು ಚತುರ್ಥ ಪಥ ರಸ್ತೆಯನ್ನಾಗಿ ವಿಸ್ತರಿಸಿ ಅಭಿವೃದ್ಧಿ ಪಡಿಸಲಾಗಿದೆ.

ಆ) ಈ ಯೋಜನೆಯನ್ನು ಮುಂದಿನ ಆಯವ್ಯಯದಲ್ಲಿ ತೆಗೆದುಕೊಳ್ಳಲು ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದಿಲ್ಲ.

ಬಿ.ಪಿ.ಎಲ್. ಕಾರ್ಡ್ ವಿತರಣೆ

540 (1008) ಶ್ರೀ ಪ್ರಿಯಕೃಷ್ಣ (ಗೋವಿಂದ ರಾಜನಗರ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋವಿಂದರಾಜನಗರ ಮತಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಕಡು ಬಡವರಿಗೆ ಬಿಪಿಎಲ್ ಕಾರ್ಡ್ ವಿತರಿಸಲಾಗಿದೆ;

ಆ) ಎಷ್ಟು ಬಾಕಿ ಇದೆ; ಬಿಪಿಎಲ್ ಕಾರ್ಡ್ ವಿತರಣೆ ಮಾಡುವಲ್ಲಿ ಇರುವ ಮಾನದಂಡವೇನು;

ಇ) ಬಿಪಿಎಲ್ ಕಾರ್ಡ್ ವಿತರಣೆಯಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣವೇನು?

ಶ್ರೀ ಹೆಚ್.ಹಾಲಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) 16638.

ಆ) ಬಾಕಿ ಇರುವುದಿಲ್ಲ.

ಗ್ರಾಮಾಂತರ ಪ್ರದೇಶದಲ್ಲಿ 12,000/- ರೂ. . . . ಗಳವರೆಗಿನ ವಾರ್ಷಿಕ ವರಮಾನ, ಪಟ್ಟಣ ಪ್ರದೇಶದಲ್ಲಿ 17,000/- ರೂ.ಗಳವರೆಗಿನ ವಾರ್ಷಿಕ ವರಮಾನವುಳ್ಳ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿಯನ್ನು ಪಡೆಯಲು ಅರ್ಹರು.

ಕೆಳಕಂಡ ಮಾನದಂಡಗಳಿಗೆ ಒಳಪಟ್ಟ ಕುಟುಂಬಗಳು ಅಕ್ಷಯ (BPL) ಪಡಿತರ ಚೀಟಿ ಪಡೆಯಲು ಅರ್ಹರಿರುವುದಿಲ್ಲ.

1. 3 ಹೆಕ್ಟೆರ್ ಒಣ ಭೂಮಿ ಅಥವಾ ತತ್ಸಮಾನವಾದ ನೀರಾವರಿ ಭೂಮಿ ಹೊಂದಿರುವವರು.
2. ಸ್ಥಿರ ದೂರವಾಣಿ ಹೊಂದಿರುವವರು.
3. ಸ್ವಂತವಾಗಿ ಯಾರೇ ಡೀಸಲ್/ ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು. (ಲೂನಾ/ಟಿವಿಎಸ್ ಹೊಂದಿರುವವರು ಹೊರತುಪಡಿಸಿ)
4. ಬ್ಯಾಂಕ್ / ಸಹಕಾರಿ ಸಂಘಗಳಲ್ಲಿ 1.00 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು.
5. ಒಂದು ಬೋರ್‌ವೆಲ್ ಹೊಂದಿ, ನೀರಾವರಿ ಸೌಕರ್ಯ ಪಡೆಯುತ್ತಿರುವವರು.
6. ತಿಂಗಳಿಗೆ ರೂ.1,000ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ/ಸರ್ಕಾರೇತರ/ಖಾಸಗಿ ಸಿಬ್ಬಂದಿಗಳು.
7. ಆದಾಯ ತೆರಿಗೆ ಪಾವತಿಸುವವರು.

8. ರಿಜಿಸ್ಟರ್ಡ್ ಕಾಂಟ್ರಾಕ್ಟರ್, ಎಪಿಎಂಸಿ ಟ್ರೇಡರ್ಸ್/ ಕಮೀಷನ್ ಏಜೆಂಟ್ಸ್/ಬೀಜ/ ರಾಸಾಯನಿಕ ಗೊಬ್ಬರ ಇತ್ಯಾದಿಗಳ ಮಾರಾಟಗಾರರು. (ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸುವುದು)

ನಗರ ಪ್ರದೇಶದಲ್ಲಿ ಮೇಲ್ಕಂಡ ಮಾನ ದಂಡಗಳ ಜೊತೆಗೆ ಈ ಕೆಳಕಂಡ ಮಾನದಂಡಗಳು ಒಳಗೊಂಡಿರುತ್ತದೆ.

1. 20' X 30' ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಥವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು.
2. ರಸ್ತೆ ಬದಿಯಲ್ಲಿ ಹಾಗೂ ಸಣ್ಣ ಪ್ರಮಾಣದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರನ್ನು ಹೊರತು ಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಎಪಿಎಲ್ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವರು.
3. ವಾಸದ/ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ಪಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ.2,000/- ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ.

ಇ) ಎಲ್ಲಾ ಕುಟುಂಬದ ಸದಸ್ಯರ ಭಾವಚಿತ್ರ ಹಾಗೂ ಜೀವಮಾಪಕಗಳ ಸಂಗ್ರಹಣೆಗೆ ಹೆಚ್ಚಿನ ಸಮಯಾವಕಾಶವಾಗಿದೆ. ಆದರೆ ಪಡಿತರ ಚೀಟಿಯ ವಿತರಣೆಯಲ್ಲಿ ವಿಳಂಬವಾಗಿರುವುದಿಲ್ಲ.

ಸರ್ಕಾರಿ ಬಂಗಲೆಗಳ ರಿಪೇರಿ ಖರ್ಚು

544 (751) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿರುವ ಸಚಿವರ ಬಂಗಲೆಗಳ ನವೀಕರಣ ರಿಪೇರಿ ಇತ್ಯಾದಿಗಳಿಗೆ ವೆಚ್ಚವಾದ ಹಣವೆಷ್ಟು; (ಕಳೆದ ಎರಡು ವರ್ಷಗಳ ಅವಧಿಯ ಸಚಿವರ ಬಂಗಲೆವಾರು ವಿವರ ನೀಡುವುದು);

ಆ) ಕೈಗೊಂಡ ಕಾಮಗಾರಿಗಳಿಗೆ ಹೆಚ್ಚು ವೆಚ್ಚವನ್ನು ತೋರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಪ್ರತಿಯೊಬ್ಬ ಸಚಿವರ ಬಂಗಲೆಗಳಿಗೆ ಇಂತಿಷ್ಟು ಹಣವನ್ನು ಮಾತ್ರ ನವೀಕರಣ, ರಿಪೇರಿಗೆ ಖರ್ಚು ಮಾಡಬೇಕೆಂಬ ನಿಯಮ ಇದೆಯೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬೆಂಗಳೂರಿನಲ್ಲಿರುವ ಸಚಿವರ ಬಂಗಲೆಗಳ ನವೀಕರಣ ರಿಪೇರಿ ಇತ್ಯಾದಿಗಳಿಗೆ ವೆಚ್ಚವಾದ ಹಣವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.

ಆ) ಬಂದಿದೆ.

ಇ) ಪ್ರತಿಯೊಬ್ಬರ ಸಚಿವರ ಬಂಗಲೆಗಳಿಗೆ ಇಂತಿಷ್ಟು ಹಣವನ್ನು ಮಾತ್ರ ನವೀಕರಣ, ರಿಪೇರಿಗೆ ಖರ್ಚು ಮಾಡಬೇಕೆಂಬ ನಿಯಮ ಇರುವುದಿಲ್ಲ. ಆದರೂ ಸಚಿವರ ಬಂಗಲೆಗಳ ನವೀಕರಣ ಮತ್ತು ದುರಸ್ತಿ ಕಾಮಗಾರಿಗಳನ್ನು ಅವಶ್ಯಕತೆಗೆ ಅನುಗುಣವಾಗಿ ಹಾಗೂ ಸಚಿವರುಗಳ ಕೋರಿಕೆಯ ಮೇರೆಗೆ ಕೈಗೊಳ್ಳಲಾಗುತ್ತಿದೆ.

ಅನುಬಂಧ-1			
ಕಳೆದ ಎರಡು ವರ್ಷಗಳ ಅವಧಿಯಲ್ಲಿ ಬೆಂಗಳೂರಿನಲ್ಲಿರುವ ಸಚಿವರ ಬಂಗಲೆಗಳ ನವೀಕರಣ, ರಿಪೇರಿ, ಇತ್ಯಾದಿಗಳಿಗೆ ವೆಚ್ಚ ಮಾಡಿದ ವಿವರಗಳು			
			(ರೂ.ಲಕ್ಷಗಳಲ್ಲಿ)
ಕ್ರ ಸಂ.	ಖಾತೆಗಳ ವಿವರಗಳು	ವಸತಿಗೃಹ	ಸಿವಿಲ್ ಕಾಮಗಾರಿಯ ವೆಚ್ಚದ ವಿವರ
1	2	3	4
1	ಮಾನ್ಯ ಮುಖ್ಯ ಮಂತ್ರಿಗಳು	ರೇಸ್ ವ್ಯೂ ಕಾಟೇಜ್ ರೇಸ್ ಕೋರ್ಸ್ ರಸ್ತೆ	158.24
2	ಮಾನ್ಯ ಕಂದಾಯ ಸಚಿವರು	ರೇಸ್ ವ್ಯೂ ಬಿಲ್ಡಿಂಗ್, ರೇಸ್ ಕೋರ್ಸ್ ರಸ್ತೆ	98.73
3	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು	ಕಾವೇರಿ, ಕೆ.ಕೆ. ರಸ್ತೆ.	10.12
4	ಮಾನ್ಯ ಮಾಜಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು	ಕೆ.ಕೆ.ಸೌತ್-1	38.85
5	ಮಾನ್ಯ ಮಾಜಿ ಇಂಧನ ಸಚಿವರು	ಕೆ.ಕೆ.ಸೌತ್-2	5.10
6	ಮಾನ್ಯ ಲೋಕೋಪಯೋಗಿ ಸಚಿವರು	ಕೆ.ಹೆಚ್.ಬಿ. ನಂ.02, ಕ್ರೆಸೆಂಟ್ ರಸ್ತೆ	26.25
7	ಮಾನ್ಯ ಸಣ್ಣ ನೀರಾವರಿ ಯೋಜನೆ ಸಚಿವರು	ಕೆ.ಹೆಚ್.ಬಿ. ನಂ.03, ಕ್ರೆಸೆಂಟ್ ರಸ್ತೆ	23.13

8	ಮಾನ್ಯ ಮುಖ್ಯ ಮಂತ್ರಿಯವರ ಅಧಿಕೃತ ನಿವಾಸ	ಅನುಗ್ರಹ	59.32
9	ಮಾನ್ಯ ಗೃಹ ಸಚಿವರು	ಕೆ.ಹೆಚ್.ಬಿ. ನಂ.04, ಕ್ರೆಸೆಂಟ್ ರಸ್ತೆ	0.00
10	ಮಾನ್ಯ ಕೃಷಿ ಮಾರುಕಟ್ಟೆ ಸಚಿವರು	ನಂ.30, ಸ್ಯಾಂಕಿ ರಸ್ತೆ	26.91
11	ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು	ನಂ.31, ಸ್ಯಾಂಕಿ ರಸ್ತೆ	6.57
12	ಮಾನ್ಯ ಕಾರ್ಮಿಕ ಸಚಿವರು	ಎ–2 ಜಯಮಹಲ್ ಬಡಾವಣೆ	29.20
13	ಮಾನ್ಯ ಜವಳಿ ಮತ್ತು ಯುವಜನ ಸೇವಾ ಸಚಿವರು	ಬಿ–5 ಜಯಮಹಲ್ ಬಡಾವಣೆ	16.40
14	ಮಾನ್ಯ ಸಮಾಜ ಕಲ್ಯಾಣ ಸಚಿವರು	ನಂ.1, ಸಪ್ತಸಚಿವರ ವಸತಿಗೃಹ, ಸ್ಯಾಂಕಿ ರಸ್ತೆ	34.87
15	ಮಾನ್ಯ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು	ನಂ.3, ಸಪ್ತಸಚಿವರ ವಸತಿಗೃಹ, ಸ್ಯಾಂಕಿ ರಸ್ತೆ	3.26
16	ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು	ನಂ.4, ಸಪ್ತಸಚಿವರ ವಸತಿಗೃಹ, ಸ್ಯಾಂಕಿ ರಸ್ತೆ	26.56
17	ಮಾನ್ಯ ಮಾಜಿ ವಸತಿ ಮತ್ತು ಮುಜರಾಯಿ ಸಚಿವರು	ನಂ.6, ಸಪ್ತಸಚಿವರ ವಸತಿಗೃಹ, ಸ್ಯಾಂಕಿ ರಸ್ತೆ	0.00

18	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು	ನಂ.7, ಸಪ್ತಸಚಿವರ ವಸತಿಗೃಹ, ಸ್ಯಾಂಕಿ ರಸ್ತೆ	23.12
ಒಟ್ಟು			586.63

ರೈತರ ಸಾಲಕ್ಕೆ ಸ್ಟಾಂಪ್ ಶುಲ್ಕ ರದ್ದು

545 (752) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2009-10ರಲ್ಲಿ ಎಷ್ಟು ರೈತರಿಗೆ ಸಹಕಾರ ಸಂಘಗಳ ಬ್ಯಾಂಕು, ಡಿ.ಸಿ.ಸಿ. ಬ್ಯಾಂಕು ಇತ್ಯಾದಿಗಳ ಮೂಲಕ ಸಾಲ ನೀಡಲಾಗಿದೆ?

ಆ) ಈ ಸಾಲದ ಅಂದಾಜು ಮೊತ್ತವೆಷ್ಟು?

ಇ) ರೈತರು ತೆಗೆದುಕೊಳ್ಳುವ ಸಾಲಕ್ಕೆ ಸಂಬಂಧಪಟ್ಟಂತೆ ಶೇಕಡಾ ಎಷ್ಟು ಸ್ಟಾಂಪ್ ಶುಲ್ಕ ಪಾವತಿಸಬೇಕಾಗಿದೆ?

ಈ) ಈ ಸ್ಟಾಂಪ್ ಶುಲ್ಕವನ್ನು ರದ್ದುಗೊಳಿಸಲು ಸರ್ಕಾರ ನಿರ್ಧರಿಸಿದೆಯೇ?

ಶ್ರೀ ಲಕ್ಷ್ಮಣ.ಸವದಿ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿ 2009-10ನೇ ಸಾಲಿನಲ್ಲಿ ಅಂದರೆ ದಿನಾಂಕ: 01.04.2009 ರಿಂದ 28.02.2010 ರವರೆಗೆ 10,96,086 ಜನ ರೈತರಿಗೆ ಕೃಷಿ ಪತ್ತಿನ ಸಹಕಾರ ಸಂಘಗಳ ಮತ್ತು ಡಿಸಿಸಿ ಬ್ಯಾಂಕುಗಳ ಮೂಲಕ ಕೃಷಿ ಸಾಲ ವಿತರಿಸಲಾಗಿದೆ.

ಆ) 2009-10 ನೇ ಸಾಲಿನಲ್ಲಿ ಅಂದರೆ ದಿನಾಂಕ: 01.04.2009 ರಿಂದ 28.02.2010 ರವರೆಗೆ ರೂ.3099.40 ಕೋಟಿಗಳಷ್ಟು ಕೃಷಿ ಸಾಲ ವಿತರಿಸಲಾಗಿದೆ.

ಇ) ಕರ್ನಾಟಕ ಸರ್ಕಾರ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಕಂ.ಇ.ಮುನೋಮ. 2002 (1) ದಿ: 3/4/-5-05ರಲ್ಲಿ ನೀಡಿರುವ ಆದೇಶದ ಮೇರೆಗೆ ಕೃಷಿ ಉದ್ದೇಶದ ಪರಿಭಾಷೆಯಲ್ಲಿ ಬರುವ ಎಲ್ಲಾ ಚಟುವಟಿಕೆಗಳಿಗೆ ನೀಡುವ ಸಾಲಗಳ ಬಗ್ಗೆ ಬರೆದುಕೊಡುವ ದಸ್ತಾವೇಜುಗಳಿಗೆ ಪೂರ್ಣ ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ವಿನಾಯಿತಿ ನೀಡಿ

ಆದೇಶ ಹೊರಡಿಸಿದೆ. ಗ್ರಾಮೀಣ ಗೃಹ ನಿರ್ಮಾಣ ಹಾಗೂ ಕೃಷಿಯೇತರ ಚಟುವಟಿಕೆಗಳ ದೀರ್ಘಾವಧಿ ಸಾಲಕ್ಕೆ ಶೇಕಡ 0.05 ರಷ್ಟು ಸ್ಟಾಂಪ್ ಶುಲ್ಕ ಭರಿಸಬೇಕಾಗಿರುತ್ತದೆ.

ಈ) ಮೇಲಿನಂತೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕದಲ್ಲಿ ವಿನಾಯಿತಿ ನೀಡಿರುವುದರಿಂದ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ರಾಷ್ಟ್ರೀಯ ಹೆದ್ದಾರಿ 48ರ ರಸ್ತೆ ಅಗಲೀಕರಣ

546 (105) ಶ್ರೀರಾಮಸ್ವಾಮಿಗೌಡ ಬಿ.ಬಿ. (ಕುಣಿಗಲ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ಪಟ್ಟಣದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ–48 ರಸ್ತೆಯನ್ನು ಪಟ್ಟಣ ಭಾಗದಲ್ಲಿ ಅಗಲೀಕರಣ ಮಾಡುವುದಕ್ಕಾಗಿ ಇಕ್ಕೇಲಗಳಲ್ಲಿ ಅಂಗಡಿ : ಕಟ್ಟಡಗಳನ್ನು ಸ್ಥಳೀಯ ಜಿಲ್ಲಾಡಳಿತ ತೆರವುಗೊಳಿಸಿ, ನೆಲಸಮ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ತೆರವುಗೊಳಿಸಿರುವ ರಸ್ತೆಯ ಇಕ್ಕೇಲಗಳಲ್ಲಿ ಡಾಂಬರೀಕರಣವಿಲ್ಲದ ಕಾರಣ ವಾಹನ ಸಂಚಾರಕ್ಕೆ ನಗರದ ನಿವಾಸಿಗಳಿಗೆ ಪ್ರತಿನಿತ್ಯ ತೊಂದರೆಯಾಗುತ್ತಿಲ್ಲವೆ;

ಇ) ರಾಷ್ಟ್ರೀಯ ರಸ್ತೆ ಅಭಿವೃದ್ಧಿ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರದ ಲೋಕೋಪಯೋಗಿ ಅಥವಾ ಇತರೆ ಇಲಾಖೆಯ ಅನುದಾನಗಳ ಮುಖೇನ ಅಗಲೀಕರಣ ಹಾಗೂ ಢಾಂಬರೀಕರಣದ ಕಾಮಗಾರಿಗಳನ್ನು ಜರೂರಾಗಿ ಮಾಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಉದ್ಭವಿಸುವುದಿಲ್ಲ.

ಇ) ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಬೈಪಾಸ್ ರಸ್ತೆಯನ್ನು ನಿರ್ಮಾಣ ಮಾಡುತ್ತಿರುವುದರಿಂದ ಕುಣಿಗಲ್ ಪಟ್ಟಣದಲ್ಲಿ ಹಾದುಹೋಗುವ ರಸ್ತೆಯ ಅಗಲೀಕರಣ ಮತ್ತು ಡಾಂಬರೀಕರಣ ಮಾಡುವ ಬಗ್ಗೆ ಯಾವುದೇ ಪ್ರಸ್ತಾವನೆಯು ಲೋಕೋಪಯೋಗಿ ಇಲಾಖೆ ಹಾಗೂ ರಾಷ್ಟ್ರೀಯ ಹೆದ್ದಾರಿ ವಲಯದಿಂದ ಇರುವುದಿಲ್ಲ.

O.30.F-51

ರಾಜ್ಯ ಹೆದ್ದಾರಿಯ ಅಗಲೀಕರಣ

547 (106) ಶ್ರೀ ರಾಮಸ್ವಾಮಿಗೌಡ ಬಿ.ಬಿ. (ಕುಣಿಗಲ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಹೆದ್ದಾರಿ 111, 84 ಮತ್ತು 85 ರಸ್ತೆಗಳ ಪೈಕಿ, ಕುಣಿಗಲ್ ತಾಲ್ಲೂಕಿನ ವ್ಯಾಪ್ತಿಯಲ್ಲಿ ಹಾದು ಹೋಗುವ ಭಾಗದ ರಸ್ತೆಗಳು ಕಿರಿದಾಗಿದ್ದು, ಸಂಚಾರಕ್ಕೆ ಯೋಗ್ಯವಿಲ್ಲದಿರುವುದರಿಂದ ಸಾರ್ವಜನಿಕರು ದಿನನಿತ್ಯ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ರಸ್ತೆಗಳನ್ನು ಅಗಲೀಕರಣ ಮಾಡಲು ಹಾಗೂ ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಕೊಂಡು ಜರೂರಾಗಿ ಅನುದಾನ ಗಳನ್ನು ಒದಗಿಸುವುದೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಾಜ್ಯ ಹೆದ್ದಾರಿ 111 (ದೊಡ್ಡಗಂಗವಾಡಿ ಚೌಡನಕುಪ್ಪೆ ರಸ್ತೆ) : ಕುಣಿಗಲ್ ತಾಲ್ಲೂಕು ವ್ಯಾಪ್ತಿಯಲ್ಲಿ ಸದರಿ ರಸ್ತೆಯು ಸರಪಳಿ ಕಿಮೀ 12 ರಿಂದ 20.15 ರವರೆಗೆ ಒಟ್ಟು 8.15 ಕಿಮೀ ಉದ್ದವಿದ್ದು, ಇದರ ಅಗಲ 3.75 ಮೀಟರ್ ಇರುತ್ತದೆ. ಸದರಿ ರಸ್ತೆಯಲ್ಲಿ ಒಟ್ಟಾರೆ ಪಿ.ಸಿ.ಯು. 6441 (As per Census 2008-09) ಇರುತ್ತದೆ. 2009–10 ನೇ ಸಾಲಿನಲ್ಲಿ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿ ಕೊಡಲಾಗಿದೆ.

ಸದರಿ ರಸ್ತೆಯನ್ನು ದ್ವಿಪಥ ರಸ್ತೆಯನ್ನಾಗಿ ಪರಿವರ್ತಿಸುವ ಅಗತ್ಯವಿದ್ದು, ಈ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮುಖ್ಯ ಇಂಜಿನಿಯರ್ ರವರಿಗೆ ಸೂಚಿಸಲಾಗಿದೆ. ಪ್ರಸ್ತಾವನೆಯು ಸ್ವೀಕೃತಿಯಾದ ನಂತರ ಅನುದಾನದ ಲಭ್ಯತೆಗನುಸಾರವಾಗಿ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ರಾಜ್ಯ ಹೆದ್ದಾರಿ 84 (ಸಿರಾ ನಂಜನಗೂಡು ರಸ್ತೆ): ಕಿಮೀ 99.28 ರಿಂದ 107.28 ಕಿಮೀ–8.00 ಕಿಮೀ ಕಿಮೀ 109.49 ರಿಂದ 137.05 ಕಿಮೀ–27.56 ಕಿಮೀ ಒಟ್ಟು 35.56 ಕಿಮೀ ಉದ್ದ ಈ ಪೈಕಿ 92.28 ರಿಂದ

107.28 ಕಿಮೀ ವರೆಗಿನ 8.00 ಕಿಮೀ ಉದ್ದದ ರಸ್ತೆಯು 5.5 ಮೀ ಅಗಲವಿರುತ್ತದೆ. ಕಿಮೀ 109.49 ರಿಂದ 137.05 ಕಿಮೀ ವರೆಗಿನ 27.56 ಕಿಮೀ ಉದ್ದ ರಸ್ತೆಯು 3.75 ಮೀ ಅಗಲವಿರುತ್ತದೆ. ಇದರಲ್ಲಿ 9.00 ಕಿಮೀ ಉದ್ದವು ಜಲ್ಲಿ ಮೇಲ್ಮೈಯನ್ನು ಹೊಂದಿದ್ದು ಉಳಿದ ಭಾಗವು ಡಾಂಬರ್ ಮೇಲ್ಮೈ ಹೊಂದಿರುತ್ತದೆ. ಡಾಂಬರ್ ಮೇಲ್ಮೈಲಿನ ತಗ್ಗು ಗುಂಡಿಗಳನ್ನು ಮುಚ್ಚಿ ಸುಗಮ ವಾಹನ ಸಂಚಾರಕ್ಕೆ ರಸ್ತೆಯನ್ನು ಯೋಗ್ಯವನ್ನಾಗಿಡಲಾಗಿರುತ್ತದೆ. ಈ ರಸ್ತೆಯನ್ನು ದ್ವಿಪಥ ರಸ್ತೆಯನ್ನಾಗಿ ಪರಿವರ್ತಿಸಲು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ. ಪ್ರಸ್ತಾವನೆಯು ಸ್ವೀಕೃತಿಯಾದ ನಂತರ ಅನುದಾನದ ಲಭ್ಯತೆಗನುಸಾರವಾಗಿ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ರಾಜ್ಯ ಹೆದ್ದಾರಿ 85 (ಬೆಂಗಳೂರು ಜಲಸೂರು ರಸ್ತೆ)" : ಈ ರಸ್ತೆಯ ಡಾಂಬರ್ ಮೇಲ್ಮೈನ ಗುಂಡಿಗಳನ್ನು ಮುಚ್ಚಿ ಗುಂಡಿ ಮುಕ್ತ ರಸ್ತೆಗಳನ್ನಾಗಿರಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುತ್ತದೆ. ಈ ರಸ್ತೆಯನ್ನು ದ್ವಿಪಥ ರಸ್ತೆಯನ್ನಾಗಿ ಪರಿವರ್ತಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ. ಪ್ರಸ್ತಾವನೆಯು ಸ್ವೀಕೃತಿಯಾದ ನಂತರ ಅನುದಾನದ ಲಭ್ಯತೆಗನುಸಾರವಾಗಿ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಆ) ಮೇಲ್ಕಂಡ ಮೂರು ರಾಜ್ಯ ಹೆದ್ದಾರಿ ರಸ್ತೆಗಳನ್ನು ಅಗಲೀಕರಣ ಮತ್ತು ದ್ವಿಪಥ ರಸ್ತೆಗಳಾಗಿ ಅಭಿವೃದ್ಧಿ ಪಡಿಸುವ ಸಲುವಾಗಿ ಸಂಬಂಧಪಟ್ಟ ಮುಖ್ಯ ಇಂಜಿನಿಯರ್‌ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಪ್ರಸ್ತಾವನೆಯು ಸ್ವೀಕೃತಿಯಾದ ನಂತರ ಅನುದಾನದ ಲಭ್ಯತೆಗನುಸಾರವಾಗಿ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಕಾಂಪೌಂಡ್ ಮತ್ತು ವಿದ್ಯುದ್ಧೀಕರಣ ಕಾಮಗಾರಿ

548 (108) ಶ್ರೀ ರಾಮಸ್ವಾಮಿಗೌಡ ಬಿ.ಬಿ.(ಕುಣಿಗಲ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ಪಟ್ಟಣದಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ ಕಾಂಪೌಂಡ್ ಮತ್ತು ವಿದ್ಯುದ್ಧೀಕರಣ ಕಾಮಗಾರಿಗಳನ್ನು ಮಾಡಲು

ಲೋಕೋಪಯೋಗಿ ಇಲಾಖೆಗೆ ಪ್ರಸ್ತಾವನೆಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಈ ಕಾಮಗಾರಿಗಳಿಗೆ ಸರ್ಕಾರವು ಅನುದಾನ ಬಿಡುಗಡೆ ಮಾಡಲು ಕ್ರಮ ಜರುಗಿಸುವುದು; ಕ್ರಮ ಜರುಗಿಸಿದ್ದಲ್ಲಿ ಬಿಡುಗಡೆ ಮಾಡಿರುವ ಅನುದಾನವೆಷ್ಟು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಕುಣಿಗಲ್ ಪಟ್ಟಣದಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಅನುದಾನ ಬಿಡುಗಡೆಗಾಗಿ ಉಪಯೋಗಿತ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿದ್ದು, ಅವರಿಂದ ಅನುದಾನ ಬಿಡುಗಡೆಯಾದ ಕೂಡಲೇ ಕಾಮಗಾರಿಗಳನ್ನು ಕೈಗೊಳ್ಳ ಲಾಗುವುದು.

ಆ) ಅನುದಾನ ಬಿಡುಗಡೆಯಾದ ನಂತರ ನಿಯಮಾನುಸಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ಮೇಲ್ಕಂಡಂತೆ ಅನುದಾನದ ಬಿಡುಗಡೆಯ ಪ್ರಸ್ತಾವನೆ ಸಲ್ಲಿಸಿರುವುದರಿಂದ ಅನುದಾನ ಬಿಡುಗಡೆಯ ನಿರೀಕ್ಷೆಯಲ್ಲಿದೆ.

ರಸ್ತೆಗಳ ಅಭಿವೃದ್ಧಿ

549 (109) ಶ್ರೀ ರಾಮಸ್ವಾಮಿಗೌಡ ಬಿ.ಬಿ. (ಕುಣಿಗಲ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ತಾಲ್ಲೂಕಿನ ವ್ಯಾಪ್ತಿಯಲ್ಲಿ ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿ, ಮೇಲ್ದರ್ಜೆಗೇರಿಸುವಿಕೆ, ಅಗಲೀಕರಣ, ನಿರ್ವಹಣೆ ಇತ್ಯಾದಿಗಾಗಿ ಪ್ರಸ್ತುತ ಸಾಲಿನಲ್ಲಿ ಸ್ಥಳೀಯ ಅಭಿಯಂತರರು ರೂ.20.00 ಕೋಟಿಗೂ ಹೆಚ್ಚು ಅನುದಾನಗಳ ಬೇಡಿಕೆಗೆ ಪ್ರಸ್ತಾವಗಳನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಕೋರಿರುವ ಅನುದಾನಗಳನ್ನು ಈ ಸಾಲಿನಲ್ಲಿಯೇ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿರುವುದಿಲ್ಲ.

ಆ) ಕುಣಿಗಲ್ ತಾಲ್ಲೂಕಿನ ರಸ್ತೆಗಳ ಅಭಿವೃದ್ಧಿಗಾಗಿ ಪ್ರಸಕ್ತ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆ ಯೋಜನೆ ಅಡಿಯಲ್ಲಿ ರೂ. 1067.67 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

ಸದರಿ ರಸ್ತೆಗಳ ನಿರ್ವಹಣೆಗಾಗಿ ಅನುಕ್ರಮವಾಗಿ ರಾಜ್ಯ ಹೆದ್ದಾರಿಗಳಿಗೆ ರೂ. 44.24 ಲಕ್ಷಗಳ ಅನುದಾನವನ್ನು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಿಗೆ ರೂ.43.18 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಹಾಗೂ ಈ ನಿರ್ವಹಣಾ ಅನುದಾನದಡಿ 93.06 ಕಿಮೀ ಉದ್ದದ ರಾಜ್ಯ ಹೆದ್ದಾರಿಗಳನ್ನು ಮತ್ತು 253.95 ಕಿಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳನ್ನು ನಿರ್ವಹಣೆ ಮಾಡಲಾಗಿದೆ.

ಸಹಕಾರ ಗ್ರಾಹಕರ ಮಹಾ ಮಂಡಳಿಯ ಶಾಖೆಗಳು

550 (635) ಶ್ರೀ ಎ.ಬಿ.ರಮೇಶ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳಿಯ (ಕೆ.ಸಿ.ಸಿ.ಎಫ್) ವತಿಯಿಂದ ಕಾರ್ಯ ನಿರ್ವಹಿಸುತ್ತಿರುವ ಶಾಖೆಗಳು ಎಷ್ಟು;

ಆ) ಈ ಶಾಖೆಗಳ ಪೈಕಿ ಎಷ್ಟು ಲಾಭದಲ್ಲಿವೆ ಹಾಗೂ ಎಷ್ಟು ನಷ್ಟದಲ್ಲಿವೆ (ಪೂರ್ಣ ಮಾಹಿತಿ ನೀಡುವುದು);

ಇ) ಕೆಂಪೇಗೌಡ ರಸ್ತೆಯಲ್ಲಿ ಕೆ.ಸಿ.ಸಿ.ಎಫ್.ನ ಶಾಖೆ ಕಾರ್ಯನಿರ್ವಹಿಸುತ್ತಿರುವುದೇ; ಇದರ ಪ್ರಧಾನ ವ್ಯವಸ್ಥಾಪಕರು ಯಾವ ದರ್ಜೆಯ ಹಾಗೂ ಯಾವ ಇಲಾಖೆಯ ಅಧಿಕಾರಿಯಾಗಿರುತ್ತಾರೆ.

ಈ) ಈ ಅಧಿಕಾರಿ ಬೇರೆ ಯಾವುದಾದರೂ ಹುದ್ದೆಯಲ್ಲಿ ಸಮಾನಾಂತರವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆಯೇ; ಹಾಗಿದ್ದಲ್ಲಿ ಯಾವ ದಿನಾಂಕದಿಂದ ಈ ಹುದ್ದೆಯನ್ನು ನಿರ್ವಹಿಸುತ್ತಿರುತ್ತಾರೆ?

ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು) :

ಅ) 19.

ಆ) ಲಾಭದಲ್ಲಿರುವ ಶಾಖೆಗಳು– 18

ನಷ್ಟದಲ್ಲಿರುವ ಶಾಖೆಗಳು– 01

(ಮಾಹಿತಿಯನ್ನು ಲಗತ್ತಿಸಿದೆ)

ಇ) ಕೆಂಪೇಗೌಡ ರಸ್ತೆಯಲ್ಲಿ ಕೆ.ಸಿ.ಸಿ.ಎಫ್.ನ ಶಾಖೆ ಕಾರ್ಯನಿರ್ವಯಿಸುತ್ತಿದೆ. ಇದರ ಪ್ರಧಾನ ವ್ಯವಸ್ಥಾಪಕರು 'ಎ' ದರ್ಜೆ ಅಧಿಕಾರಿಯಾಗಿದ್ದು, ಸದರಿಯವರು ಸಹಕಾರ ಸಂಘಗಳ ಉಪ ನಿಬಂಧಕರ ವೃಂದದ ಸಹಕಾರ ಇಲಾಖೆಯ ಅಧಿಕಾರಿಯಾಗಿರುತ್ತಾರೆ.

ಈ) ಇಲ್ಲ.

ಪ್ರಸ್ತುತ ಶ್ರೀ ಬಿ.ಆರ್.ಲಿಂಗರಾಜು ಸಹಕಾರ ಸಂಘಗಳ ಉಪ ನಿಬಂಧಕರು. ಸದರಿ ಹುದ್ದೆಯಲ್ಲಿ ದಿನಾಂಕ: 04-01-2010 ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಸದರಿಯವರು ಈ ಹುದ್ದೆಯ ಹೊರತಾಗಿ ಬೇರೆ ಯಾವುದೇ ಸಮನಾಂತರವಾದ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿಲ್ಲ.

ಅನುಬಂಧ

ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳಿಯ ಲಾಭ ಹಾಗೂ ನಷ್ಟದಲ್ಲಿನ ಶಾಖೆಗಳ ವಿವರ

(2008-09ರ ತಾತ್ಕಾಲಿಕ ಆಸ್ತಿ ಜವಾಬ್ದಾರಿ ತಃಖ್ತೆಯ ರೀತ್ಯಾ)

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಶಾಖೆಯ ಹೆಸರು		ನಿವ್ವಳ ಲಾಭ	ನಿವ್ವಳ ನಷ್ಟ
	ಬೆಂಗಳೂರು ನಗರದಲ್ಲಿನ ಜನತಾ ಬಜಾರ್‌ಗಳು			
1	ಜನತಾ ಬಜಾರ್	ಕೆಂಪೇಗೌಡ ರಸ್ತೆ	31.20	--
2	ಜನತಾ ಬಜಾರ್	ಜಯನಗರ	0.63	--
3	ಜನತಾ ಬಜಾರ್	ಸದಾಶಿವನಗರ	2.00	--
4	ಜನತಾ ಬಜಾರ್	ನಂದಿದುರ್ಗ	1.56	--
5	ಜನತಾ ಬಜಾರ್	ಸಂಜಯನಗರ	0.81	--
6	ಜನತಾ ಬಜಾರ್	ಹೆಚ್.ಎ.ಎಲ್	--	2.13
7	ಜನತಾ ಬಜಾರ್	ಬಸವೇಶ್ವರ ನಗರ	7.34	--
ಇತರೆ ನಗರದಲ್ಲಿನ ಜನತಾ ಬಜಾರ್‌ಗಳು				
8	ಜನತಾ ಬಜಾರ್	ಮಂಡ್ಯ	2.24	--
9	ಜನತಾ ಬಜಾರ್	ತುಮಕೂರು	1.34	--
10	ಜನತಾ ಬಜಾರ್	ಚಿತ್ರದುರ್ಗ	1.97	--

11	ಜನತಾ ಬಜಾರ್	ಹುಬ್ಬಳ್ಳಿ	3.22	--
12	ಜನತಾ ಬಜಾರ್	ಚಾಮರಾಜನಗರ	6.07	--
ಕರ್ನಾಟಕ ಸಹಕಾರಿ ಗ್ರಾಹಕರ ಮಹಾಮಂಡಳ ಪ್ರಾದೇಶಿಕ ಶಾಖೆಗಳು				
13	ಕ.ಸ.ಗ್ರಾ.ಮ. ಶಾಖೆ	ಹೊಸಪೇಟೆ	7.02	--
14	ಕ.ಸ.ಗ್ರಾ.ಮ. ಶಾಖೆ	ಕಾರವಾರ	0.84	--
15	ಕ.ಸ.ಗ್ರಾ.ಮ. ಶಾಖೆ	ಚಿಕ್ಕಬಳ್ಳಾಪುರ	1.55	--
16	ಕ.ಸ.ಗ್ರಾ.ಮ. ಶಾಖೆ	ಹಾಸನ	1.40	--
17	ಕ.ಸ.ಗ್ರಾ.ಮ. ಶಾಖೆ	ಮೈಸೂರು	1.41	--
18	ಕ.ಸ.ಗ್ರಾ.ಮ. ಶಾಖೆ	ಕೋಲಾರ	2.24	--
19	ಕ.ಸ.ಗ್ರಾ.ಮ. ಶಾಖೆ	ಬಾಗಲಕೋಟೆ	0.19	--
		ಕೇಂದ್ರ ಕಛೇರಿ	35.71	--
		ಒಟ್ಟು	**108.74**	**2.13**

ರಾಜ್ಯ ಹೆದ್ದಾರಿ ದುರಸ್ತಿ

551 (769) ಶ್ರೀ ರವಿ. ಸಿ.ಟಿ. (ಚಿಕ್ಕಮಗಳೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ಮಂಗಳೂರು ರಾಜ್ಯ ಹೆದ್ದಾರಿ ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಯ ಅಭಿವೃದ್ಧಿಗೆ ಇಲಾಖೆ ಕೈಗೊಂಡಿರುವ ಕ್ರಮಗಳೇನು; ಯಾವಾಗ ಅಭಿವೃದ್ಧಿ ಪಡಿಸಲಾಗುವುದು; ಹೇಗೆ ಅಭಿವೃದ್ಧಿಪಡಿಸಲಾಗುವುದು (ವಿವರ ನೀಡುವುದು)?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಕಡೂರು ಮಂಗಳೂರು ಹೆದ್ದಾರಿಯು ಕಡೂರು ಕಾಂಗಾಡ್ ರಾಜ್ಯ ಹೆದ್ದಾರಿ ಸಂಖ್ಯೆ:64 ಎಂಬುದಾಗಿ ನಾಮಾಂಕಿತಗೊಂಡಿದ್ದು ಒಟ್ಟಾರೆ 165.80 ಕಿಮೀ ಗಳಷ್ಟು ಉದ್ದವಿದ್ದು ಚಿಕ್ಕಮಗಳೂರು ಜಿಲ್ಲೆಯಲ್ಲಿ 99.27

ಕಿಮೀ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 66.53 ಕಿಮೀಗಳಷ್ಟು ಹಾದು ಹೋಗುತ್ತದೆ. ಈ ರಸ್ತೆಯಲ್ಲಿ 15000 ಕ್ಕೂ ಅಧಿಕ ಪಿ.ಸಿ.ಯು.ಗಳ ವಾಹನ ಸಾಂದ್ರತೆ ಇದ್ದು ಈ ರಸ್ತೆಯು ರಾಷ್ಟ್ರೀಯ ಹೆದ್ದಾರಿ–13, ರಾಷ್ಟ್ರೀಯ ಹೆದ್ದಾರಿ–17 ಗಳಿಗೆ ಸಂಪರ್ಕ ಕಲ್ಪಿಸುವುದಾಗಿರುತ್ತದೆ. ಭಾರತ ಸರ್ಕಾರದ ದಿನಾಂಕ: 25–2–2009ರ ಅಧಿಸೂಚನೆಯಲ್ಲಿ ಸದರಿ ಕಡೂರು ಮಂಗಳೂರು ಹೆದ್ದಾರಿಯು ಭಾಗಶಃ ಉದ್ದವು ರಾಷ್ಟ್ರೀಯ ಹೆದ್ದಾರಿ 234 ಮಂಗಳೂರು ತಿರುವಣ್ಣಾಮಲೈ ಎಂಬುದಾಗಿ ಮೇಲ್ದರ್ಜೆಗೊಂಡಿರುತ್ತದೆ. ಹೀಗೆ ಮೇಲ್ದರ್ಜೆಗೊಂಡಿರುವ ರಸ್ತೆಯಲ್ಲಿ ತುಳು ಸಮ್ಮೇಳನದ ಕಾಮಗಾರಿಗಳು ಪ್ರಗತಿಯಲ್ಲಿರುವ ಭಾಗಗಳನ್ನು ಹೊರತುಪಡಿಸಿ, ಉಳಿದ ರಸ್ತೆ ಭಾಗಗಳನ್ನು ಕೂಡಲೇ ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ಹಸ್ತಾಂತರಿಸಲು ದಿನಾಂಕ: 02.03.2010 ರಂದು ಸರ್ಕಾರದಿಂದ ನಿರ್ದೇಶನ ನೀಡಲಾಗಿದೆ. ಹಾಗೂ ಸರ್ಕಾರದ ನಿರ್ದೇಶನದಂತೆ ಹಸ್ತಾಂತರಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು, ಸಾಕಷ್ಟು ರಸ್ತೆ ಭಾಗಗಳನ್ನು ಈಗಾಗಲೇ ಹಸ್ತಾಂತರಿಸಲಾಗಿದೆ. ತುಳು ಸಮ್ಮೇಳನದ ಸಲುವಾಗಿ ಕೈಗೊಂಡಿರುವ ಕಾಮಗಾರಿಗಳು ಪೂರ್ಣಗೊಂಡ ನಂತರ ಕೂಡಲೇ ಅವುಗಳನ್ನು ಸಹ ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ವರ್ಗಾಯಿಸಲಾಗುವುದು. ಆದ್ದರಿಂದ ಸದರಿ ರಸ್ತೆಯ ಅಭಿವೃದ್ಧಿ ಯನ್ನು ಇನ್ನು ಮುಂದೆ ರಾಷ್ಟ್ರೀಯ ಹೆದ್ದಾರಿ ವಲಯದಿಂದ ಕೈಗೊಳ್ಳಬೇಕಿದೆ.

ಈ ರಸ್ತೆಯ ಚಿಕ್ಕಮಗಳೂರು ವಿಭಾಗದ ವ್ಯಾಪ್ತಿಯಲ್ಲಿ ಕೆಳಕಂಡಂತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದೆ.

1) ಕೇಂದ್ರ ರಸ್ತೆ ನಿಧಿಯಡಿ 4.15 ಕಿಮೀ ಗಳ ಉದ್ದವನ್ನು ರೂ.200.00 ಲಕ್ಷಗಳಲ್ಲಿ ಹಾಗೂ
2) 5054– ಇತರೆ ರಸ್ತೆ ನಿರ್ಮಾಣ ಶೀರ್ಷಿಕೆಯಡಿ 0.75 ಕಿಮೀ ಉದ್ದವನ್ನು ರೂ.50.00 ಲಕ್ಷಗಳಲ್ಲಿ ಅಭಿವೃದ್ಧಿ ಗೊಳಿಸಲಾಗುತ್ತಿದ್ದು ಪೂರ್ಣಗೊಳ್ಳುವ ಹಂತದಲ್ಲಿದೆ.
3) ಉಳಿದಂತೆ ಪ್ರಸಕ್ತ ಸಾಲಿನಲ್ಲಿ ರೂ.26.80 ಲಕ್ಷ ಮೊತ್ತದಲ್ಲಿ ರಸ್ತೆಗಳ ಗುಂಡಿಗಳನ್ನು ಮುಚ್ಚಿ ನಿರ್ವಹಣೆ ಮಾಡಿ ವಾಹನ ಸಂಚಾರಕ್ಕೆ ಯೋಗ್ಯವಾಗಿಡಲಾಗಿರುತ್ತದೆ.

ಮೇಲೆ ತಿಳಿಸಿದಂತೆ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.

ಯಶಸ್ವಿನಿ ಆರೋಗ್ಯ ರಕ್ಷಣೆ

552 (648) ಶ್ರೀ ಹೆಚ್.ಡಿ.ರೇವಣ್ಣ (ಹೊಳೇನರಸೀಪುರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಾರಿಯಲ್ಲಿರುವ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನೋಂದಾವಣೆಯಾಗಿರುವ ಸದಸ್ಯರುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಹಾಗೂ ವರ್ಷವಾರು ಮಾಹಿತಿ ನೀಡುವುದು);

ಆ) ಆ ಪೈಕಿ ಅನುಕೂಲ ಪಡೆದಿರುವ ಫಲಾನುಭವಿಗಳು ಎಷ್ಟು (ಕಳೆದ ಮೂರು ವರ್ಷಗಳ ಜಿಲ್ಲಾವಾರು ಮಾಹಿತಿ ನೀಡುವುದು);

ಇ) ಯಶಸ್ವಿನಿ ಯೋಜನೆಯಲ್ಲಿ ಫಲಾನುಭವಿಗಳಾಗಲು ಇರಬೇಕಾದ ಅರ್ಹತೆಗಳೇನು; ಹಾಗೂ ಗುರುತಿಸಲಾಗಿರುವ ವರ್ಗ ಗಳಾವುವು;

ಈ) ಅರ್ಹರಾದವರಿಗೆ ಯಶಸ್ವಿನ ಕಾರ್ಡನ್ನು ನೀಡಲು ನಿರಾಕರಿಸು ತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ; ಹಾಗಿದ್ದಲ್ಲಿ ನಿರಾಕರಿಸಲು ಕಾರಣಗಳೇನು; (ಮಾಹಿತಿ ನೀಡುವುದು)?

ಶ್ರೀ ಲಕ್ಷ್ಮಣ ಸ.ಸವದಿ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿ ಜಾರಿಯಲ್ಲಿರುವ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನೋಂದಾವಣೆಯಾಗಿರುವ ಸದಸ್ಯರುಗಳ ವಿವರ ಈ ಕೆಳಗಿನಂತಿದೆ.

ವರ್ಷ	ನೋಂದಾವಣೆಯಾದ ಸದಸ್ಯರು	ಸಂಗ್ರಹಣೆಯಾದ ಮೊತ್ತ (ರೂ.ಲಕ್ಷಗಳಲ್ಲಿ)
2006–07	1853966	2156.01
2007–08	2318778	2775.16
2008–09	3047877	3610.91
2009–10	3069282	4136.12

ಜಿಲ್ಲಾವಾರು ಹಾಗೂ ವರ್ಷವಾರು ಮಾಹಿತಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಲಾಗಿದೆ.

O. 30 F-52

ಆ) ರಾಜ್ಯದಲ್ಲಿ ಜಾರಿಯಲ್ಲಿರುವ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನೋಂದಾವಣೆಯಾಗಿರುವ ಸದಸ್ಯರುಗಳ ಪೈಕಿ ಅನುಕೂಲ ಪಡೆದಿರುವ ಫಲಾನುಭವಿಗಳ ವಿವರ ಈ ಕೆಳಗಿನಂತಿದೆ.

ವರ್ಷ	ಉಚಿತ ಹೊರ ರೋಗಿ ಚಿಕಿತ್ಸೆ ಪಡೆದವರು	ಶಸ್ತ್ರ ಚಿಕಿತ್ಸೆಗೆ ಒಳಗಾದವರು	ಶಸ್ತ್ರ ಚಿಕಿತ್ಸೆ ವೆಚ್ಚ (ರೂ. ಕೋಟಿಗಳಲ್ಲಿ)
2206–07	206977	39616	38.76
2007–08	-155572	60855	54.31
2008–09	191109	75264	61.25
2009–10	102070	46588	40.20

ಕಳೆದ ಮೂರು ವರ್ಷಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–2 ರಲ್ಲಿ ಲಗತ್ತಿಸಲಾಗಿದೆ.

ಇ) ಯಶಸ್ವಿನಿ ಯೋಜನೆಯಲ್ಲಿ ಫಲಾನುಭವಿಗಳಾಗಲು ಇರಬೇಕಾದ ಅರ್ಹತೆಗಳು ಈ ಕೆಳಗಿನಂತಿವೆ.

1. ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಲು ಯಾವುದೇ ಒಬ್ಬ ವ್ಯಕ್ತಿ ಸಹಕಾರ ಸಂಘದ ಸದಸ್ಯನಾಗಿರಬೇಕು. ಅಂದರೆ ಆತನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಅಡಿ ಅಥವಾ ಕರ್ನಾಟಕ ಸೌಹಾರ್ದ ಸಹಕಾರ ಅಧಿನಿಯಮ 1997ರ ಅಡಿ ಅಥವಾ ಬಹು ರಾಜ್ಯ ಸಹಕಾರ ಸಂಘಗಳ ಅಧಿನಿಯಮ 2007ರ ಅಡಿ ನೋಂದಾಯಿಸಿದ ಸಹಕಾರ ಸಂಘದ ಸದಸ್ಯತ್ವ ಪಡೆದು ಯಶಸ್ವಿನಿ ವರ್ಷದ ಮೊದಲ ದಿನ ಅಂದರೆ ಜೂನ್ ಒಂದಕ್ಕೆ ಕನಿಷ್ಠ ಆರು ತಿಂಗಳಾಗಿರಬೇಕು.
2. ಯಾವುದೇ ಒಬ್ಬ ವ್ಯಕ್ತಿ ಗ್ರಾಮೀಣ ಪ್ರದೇಶದಲ್ಲಿರುವ ಸಹಕಾರ ಸಂಘಗಳ ಸದಸ್ಯನಾಗಿರಬೇಕು. ಆದಾಗ್ಯೂ ನಗರ/ ಪಟ್ಟಣದ ಜೊತೆಗೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ಸುತ್ತಮುತ್ತಲಿನ ಪ್ರದೇಶದಲ್ಲಿನ ಕೃಷಿ ಪತ್ತಿನ ಸಹಕಾರ ಸಂಘಗಳ/ಹಾಲು ಉತ್ಪಾದಕರ ಸಹಕಾರ

ಸಂಘಗಳ ಸದಸ್ಯರು ನಗರ/ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿದ್ದು, ಅವರು ಸದಸ್ಯತ್ವ ಹೊಂದಿರುವ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಕೃಷಿ ಜಮೀನು ಹೊಂದಿರುವವರು, ಈಗಾಗಲೇ ಕಳೆದ ಸಾಲುಗಳಲ್ಲಿ ಯೋಜನೆ ಯಡಿಯಲ್ಲಿ ನವೀಕರಣ / ನೊಂದಾವಣೆ ಯಾಗಿದ್ದಲ್ಲಿ, ಪ್ರಸಕ್ತ ಸಾಲಿಗೂ ಸಹ ಅಂತಹವರುಗಳು ಯೋಜನೆ ಯಡಿಯಲ್ಲಿ ನವೀಕರಿಸಲು/ ನೋಂದಾಯಿಸಲು ಅರ್ಹರು.

3. ಗ್ರಾಮೀಣ ಪ್ರದೇಶದಲ್ಲಿರುವ ಸ್ವ-ಸಹಾಯ ಗುಂಪಿನ ಸದಸ್ಯರು ಮತ್ತು ಅವರ ಕುಟುಂಬದ ಸದಸ್ಯರು ಸಹಕಾರಿ ಬ್ಯಾಂಕ್ ಅಥವಾ ಗ್ರಾಮೀಣ ಸಹಕಾರಿ ಸಂಘದಲ್ಲಿ ಹಣಕಾಸಿನ ವಹಿವಾಟು ಮಾಡುತ್ತಿದ್ದಲ್ಲಿ ಅವರೂ ಕೂಡ ಯೋಜನೆಯ ಸೌಲಭ್ಯ ಪಡೆಯಲು ಅರ್ಹರು.
4. ನಗರ/ಪಟ್ಟಣ ಪ್ರದೇಶದಲ್ಲಿ ಸಹಕಾರ ಮೀನುಗಾರರು, ಸಹಕಾರಿ ಬೀಡಿ ಕಾರ್ಮಿಕರು ಮತ್ತು ಸಹಕಾರಿ ನೇಕಾರರು ಕೂಡ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.
5. ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆ ಯಡಿ ಪ್ರಧಾನ ಅರ್ಜಿದಾರರು ಅಂದರೆ ಸಹಕಾರ ಸಂಘದಲ್ಲಿ ಸದಸ್ಯತ್ವ ಹೊಂದಿರುವ ಅರ್ಹ ವ್ಯಕ್ತಿ ಮತ್ತು ಅವಿಭಕ್ತ ಕುಟುಂಬದ ಎಲ್ಲಾ ಅರ್ಹ ಸದಸ್ಯರು ಯಶಸ್ವಿನಿ ಯೋಜನೆಯಡಿಯಲ್ಲಿ ಪ್ರತಿಯೊಬ್ಬ ಸದಸ್ಯರಿಗೆ ನಿಗದಿಪಡಿಸಿದ ವಾರ್ಷಿಕ ವಂತಿಗೆ ರೂ.150/- ಅನ್ನು ಪಾವತಿಸಬೇಕು. ಯೋಜನೆಯ ಸಬಲತೆಯ ದೃಷ್ಟಿಯಿಂದ 2010-11ನೇ ಸಾಲಿನಲ್ಲಿ ಹೊಸದಾಗಿ ನೋಂದಾಯಿಸಲು ಬಯಸುವ ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬದ ಕನಿಷ್ಠ ನಾಲ್ಕು ಅರ್ಹ ವ್ಯಕ್ತಿಗಳನ್ನು ಯೋಜನೆ ಯಡಿಯಲ್ಲಿ ಮನ ಒಲಿಸಿ ನೋಂದಾಯಿಸುವ ನಿರ್ಬಂಧ ವನ್ನು ವಿಧಿಸಲಾಗಿದೆ. ಆದಾಗ್ಯೂ ನವೀಕರಣ ಗೊಳ್ಳುವ ಫಲಾನುಭವಿಗಳಿಗೆ ಈ ನಿರ್ಬಂಧ ಅನ್ವಯಿಸುವುದಿಲ್ಲ.

6. ಆದರೆ ಒಬ್ಬ ವ್ಯಕ್ತಿ ಯಶಸ್ವಿನಿ ವರ್ಷ ಪ್ರಾರಂಭವಾಗುವ ದಿನ ಅಂದರೆ ಜೂನ್ ಒಂದಕ್ಕೆ 75 ವರ್ಷ ಮುಗಿಸಿದಲ್ಲಿ ಯಶಸ್ವಿನಿ ಯೋಜನೆಯ ಸೌಲಭ್ಯವನ್ನು ಪಡೆಯಲು ಅರ್ಹನಾಗಿರುವುದಿಲ್ಲ.

ಈ)

1. 2008–09 ರಿಂದ ಪ್ರಧಾನ ಫಲಾನುಭವಿಗೆ ಹಾಗೂ ಅವನ ಕುಟುಂಬ ಸದಸ್ಯರಿಗೆ ಒಂದು ವಿಶಿಷ್ಟ ಯುನಿಕ್ ಐಡಿ ಸಂಖ್ಯೆಯನ್ನು ನೀಡಿ ಅವರುಗಳ ಫೋಟೋ ಸಹಿತ ಮಾಹಿತಿಯನ್ನು ಯಶಸ್ವಿನಿ ವೆಬ್‌ಸೈಟ್ www.Yeshasvini.kar.nic.in ನಲ್ಲಿ ಅಳವಡಿಸಲಾಗಿದೆ. ನೋಂದಾವಣೆ ಅರ್ಜಿ ನಮೂನೆಯ ಇನ್ನೊಂದು ಪ್ರತಿಯನ್ನು ಫಲಾನುಭವಿಯ ಉಪಯೋಗಕ್ಕೆ ನೀಡಲಾಗುತ್ತದೆ.
2. 2008–09ನೇ ಸಾಲಿನಲ್ಲಿ ಹೊಸದಾಗಿ ನೋಂದಾವಣೆಯಾಗಿದ್ದ ಫಲಾನುಭವಿಗಳು 2009–10ನೇ ಸಾಲಿನಲ್ಲಿ ತಮ್ಮ ಪಾಲಿನ ವಂತಿಗೆ ಹಣ ಪಾವತಿಸಿ ನವೀಕರಣಗೊಂಡಿದ್ದಲ್ಲಿ ಹಾಗೂ 2009–10ನೇ ಸಾಲಿನಲ್ಲಿ ಹೊಸದಾಗಿ ನೋಂದಾವಣೆಯಾಗಿದ್ದಲ್ಲಿ ಅಂತಹ ಫಲಾನುಭವಿಯ ಹಾಗೂ ಅವನ ಕುಟುಂಬ ಸದಸ್ಯರ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ.
3. ಯೋಜನೆಯಡಿಯಲ್ಲಿ ಚಿಕಿತ್ಸೆ ಪಡೆಯಲು ಬಯಸುವವರು ಸದಸ್ಯರ ಉಪಯೋಗಕ್ಕೆ ನೀಡಿರುವ ಗುರುತಿನ ಚೀಟಿಯ ಭಾಗವನ್ನು ಹಾಗೂ ಸದಸ್ಯತ್ವ ನವೀಕರಣ ಮಾಡಿದ ಬಗ್ಗೆ ಹಣ ಪಾವತಿ ರಶೀದಿಯನ್ನು ಗುರುತಿಸಿದ ಆಸ್ಪತ್ರೆಗಳಲ್ಲಿ ಹಾಜರು ಪಡಿಸಬೇಕು. ಈ ಕಾರ್ಡ್‌ನ್ನು ಗಣಕೀಕೃತ ವಿವರಗಳೊಂದಿಗೆ ಪರಿಶೀಲಿಸಿ ಯೋಜನೆಯ ಸೌಲಭ್ಯವನ್ನು ಆಸ್ಪತ್ರೆಯವರು ನೀಡುತ್ತಾರೆ.
4. ಆದ್ದರಿಂದ 2008–09ರಿಂದ ಯಶಸ್ವಿನ ಗುರುತಿನ ಕಾರ್ಡ್ ನೀಡುತ್ತಿರುವ ಪದ್ಧತಿಯನ್ನು ನಿಲ್ಲಿಸಲಾಗಿದೆ. ಅರ್ಹರಾದವರಿಗೆ ಯಶಸ್ವಿನಿ ಯೋಜನೆಯಡಿ ನೋಂದಾಯಿಸು

ವುದನ್ನು ಹಾಗೂ ಕಾರ್ಡನ್ನು ನೀಡಲು ನಿರಾಕರಿಸುತ್ತಿರುವ ಪ್ರಶ್ನೆ ಉದ್ಭವಿಸುತ್ತಿಲ್ಲ. ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. 2010-11ನೇ ಸಾಲಿನಲ್ಲಿ ಸದಸ್ಯರನ್ನು ನೋಂದಾಯಿಸುವ ಬಗ್ಗೆ ನೀಡಲಾದ ಸುತ್ತೋಲೆ ಪ್ರತಿಯನ್ನು ಅನುಬಂಧ-3 ರಲ್ಲಿ ಲಗತ್ತಿಸಲಾಗಿದೆ.

Annexure - 1

Yeshasvini Co-op Farmers Health Care Trust

District wise and Year wise Enrollment Report

Rs. Amount in Lakhs

SL. No.	District	2006-07		2007-08		2008-09		2009-10	
		Members	Amt Collected	Members	Amt Collected	Members	Amt Collected	Members	Amt Collected
1	Belgaum	123864	148.63	189139	226.97	247556	295.84	251170	338.89
2	Bijapur	81322	95.81	112704	135.24	194317	233.18	193416	253.66
3	Bagalkot	97283	116.73	127440	152.93	210186	252.22	214136	297.72
4	Dharwad	13891	16.22	22631	27.15	38691	46.13	47318	66.23
5	Gadag	46894	53.92	17463	20.95	38848	46.22	44422	60.62
6	Haveri	48807	55.71	50014	58.87	81450	92.48	91847	112.84
7	U.K	58118	67.37	69500	82.2	94055	111.04	102223	138.64
8	Bellary	56000	66.85	60801	72.96	88919	106.55	86613	120.78
9	Bidar	77858	92.43	90468	108.55	98749	118.48	98514	137.92
10	Gulbarga	71097	85.32	79125	94.95	93100	111.72	92864	132.08
11	Koppal	31059	36.51	35125	42.03	42911	50.89	43154	58.57
12	Raichur	54200	63.97	81892	98.26	98392	118.07	91150	127.61
13	Bangalore 1	6422	6.76	7304	8.76	9902	11.46	11346	14.94
14	Bangalore Urban	43117	49.93	55973	67.16	88151	105.78	93583	116.51
15	Bangalore-R	114550	133.47	140081	168.09	83805	100.57	79677	111.54
16	Chitradurga	52902	57.77	65350	78.15	98297	114.55	101451	131.04
17	Davangere	56624	66.43	71558	85.71	111130	131.50	133730	174.12
18	Kolar	140000	152.84	153317	183.93	87079	104.49	68208	91.08
19	Shimoga	56998	66.95	80024	96.03	75365	87.19	74221	103.91
20	Tumkur	68236	81.27	103351	124.05	191861	226.12	150997	185.88
21	Ramenagar	0	0	0	0	85916	103.09	89208	124.88
22	Chikkaballapura	0	0	0	0	80435	96.52	49019	67.30
23	Mysore	86280	99.45	108900	129.11	129680	148.66	153368	211.67
24	Chamrajnagar	34033	40.72	42655	51.18	48383	58.04	52365	72.48
25	Mandya	116371	134.28	151271	180.22	218969	256.76	222021	299.46
26	Hassan	112641	129.72	135755	162.91	130372	156.44	136385	195.94
27	Chikmaglur	50459	56.82	67612	80.33	79090	92.25	77594	103.71
28	Kodagu	37651	44.98	41760	50.1	46063	55.15	46714	65.40
29	D.K	59000	68.4	79712	95.65	72878	87.44	86798	106.99
30	Udupi	58289	66.75	77853	92.72	83327	92.08	85770	113.71
	Grand Total	1853966	2156.01	2318778	2775.16	3047877	3610.91	3069282	4136.12

Annexure - 2

FAMILY HEALTH PLAN LIMITED

Yeshasvini Cooperative Farmers Health Care Scheme

District wise and Year wise OPD & Surgery Performed

Amount in Rs.

Sl. No.	District	2006-07			2007-08			2008-09			2009-10		
		OPD	Surgery		OPD	Surgery		OPD	Surgery		OPD	Surgery	
			Cases	Amount		Cases	Amount		Cases	Amount		Cases	Amount
1	Belgaum	21476	1707	24387200	8815	3622	37926000	12429	5298	37071600	11047	3063	26769000
2	Bijapur	2035	1727	15828100	3634	2828	21698000	4207	3419	23931400	2210	1798	15012800
3	Bagalkot	9407	1730	15456550	7558	3248	24071200	12311	4952	31575500	7472	2658	18374200
4	Dharwad	7113	340	3545450	13310	1044	8032500	12826	2056	12578700	5403	1276	9165700
5	Gadag	2804	621	5999650	1353	1003	7525350	2626	1851	11522200	1792	997	7586400
6	Haveri	9624	1430	10970850	2667	2845	20329750	8344	4181	28463900	1121	2608	17959800
7	UK-	1950	998	9761600	19253	1328	11334700	3203	1595	13129700	2989	857	7019100
8	Raichur	2222	1263	10654850	9565	1738	15006200	4738	1851	15895400	963	794	8080800
9	Koppal	382	449	5352200	590	802	6823900	550	904	7144000	764	528	4682600
10	Gulbarga	1382	1271	14484100	3470	2087	20217700	3253	2679	25910800	1317	1341	14810500
11	Bidar	12576	618	5996100	843	760	7428900	1186	1089	10576700	299	473	5180900
12	Bellary	282	616	8494350	421	951	12022050	902	1103	12115000	602	629	7150900
13	Bangalore Urban & Rural, include Ramanagar	14883	2349	27820550	24621	3524	39034950	55301	4211	40351700	22660	3131	28444600
14	Kolar &Chikkaballapura	14873	2920	26846150	4789	3408	32503550	3343	2874	26458800	1568	1411	13946000
15	Tumkur	3066	2197	24398250	2997	3261	32604700	4122	4679	39872500	1936	3449	28262050
16	Chitradurga	5169	1736	16201200	2810	2738	26734250	4542	3303	29048200	2155	2058	19175900
17	Davangere	17612	2597	23593600	9130	4139	35899600	12019	4829	37509400	8287	3276	25384900
18	Shimoga	4105	1057	11453700	4824	1558	15070900	8538	1831	16184300	4815	1197	10953700
19	Mysore	5187	1379	17511300	4860	1911	20999600	5747	2486	27132600	3955	1951	20418500
20	Chamrajnagar	3249	739	7773750	755	1103	11796650	1510	1485	13208300	298	1080	10442500
21	Mandya	33291	4599	37530650	13537	7654	56308950	12952	8486	64525400	8209	5414	42027300
22	Hassan	14156	2708	21017650	8853	3326	26832750	4655	3906	31354700	4024	2894	23401100
23	Chikmaglur	11193	1360	12214900	2247	1890	16204150	3572	1794	16603150	3192	1242	11491300
24	Kodagu	437	404	4385350	510	501	6052700	610	611	6567100	344	392	4689100
25	DK	1519	842	8550200	1968	963	9440950	4266	1203	12621500	3382	823	8407500
26	Udupi	6984	1959	17372600	2192	2623	21248800	3357	2588	21116900	1266	1248	13157800
	Grand Total	206977	39616	387600850	155572	60855	543148750	191109	75264	612469450	102070	46588	401994950

ಅನುಬಂಧ – 3

ಕರ್ನಾಟಕ ಸರ್ಕಾರ

ಸಂಖ್ಯೆ: ಸಿ.ಒ 9 ಸಿ.ಎಲ್.ಎಸ್ 2010

ಕರ್ನಾಟಕ ಸರ್ಕಾರದ ಸಚಿವಾಲಯ,
ಸಹಕಾರ ಇಲಾಖೆ,
ಬೆಂಗಳೂರು, ದಿನಾಂಕ: 01.02.2010.

ಸುತ್ತೋಲೆ

ವಿಷಯ : 2010–11ನೇ ಸಾಲಿಗೆ ಯಶಸ್ವಿನಿ ಫಲಾನುಭವಿಗಳನ್ನು ನೋಂದಾಯಿಸುವ ಬಗ್ಗೆ.

ಉಲ್ಲೇಖ : 1. ಸರ್ಕಾರದ ಮಾರ್ಗಸೂಚಿ ಸುತ್ತೋಲೆ ಸಂಖ್ಯೆ: ಸಿಒ 12 ಸಿಎಲ್ಎಸ್ 2009 ದಿನಾಂಕ: 28.02.2009 ಹಾಗೂ ಸ್ಪಷ್ಟೀಕರಣ ದಿನಾಂಕ: 23.07.2009, 06.08.2009 ಮತ್ತು 20.08.2009.

****

ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆಯನ್ನು 2003–04ನೇ ಸಾಲಿನಿಂದ ಪ್ರಾರಂಭಿಸಲಾಗಿದ್ದು, ಈ ಯೋಜನೆಯ ಸೌಲಭ್ಯವು ರಾಜ್ಯದ ಗ್ರಾಮೀಣ ಸಹಕಾರಿಗಳ ಆರೋಗ್ಯ ರಕ್ಷಣೆಗೆ ಒಂದು ವರದಾನವಾಗಿದೆ. ಒಬ್ಬ ವ್ಯಕ್ತಿ ಗ್ರಾಮೀಣ ಸಹಕಾರ ಸಂಘ ಒಂದರ ಸದಸ್ಯನಾಗಿ ಕನಿಷ್ಠ ಆರು ತಿಂಗಳಾಗಿದ್ದಲ್ಲಿ, ಆತನು ಹಾಗೂ ಅವನ ಕುಟುಂಬದ ಎಲ್ಲಾ ಸದಸ್ಯರು ಯಶಸ್ವಿನಿ ವಂತಿಗೆಯನ್ನು ಪ್ರತಿವರ್ಷ ಪಾವತಿ ಮಾಡುವ ಮೂಲಕ ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಬಹುದು. ಅಲ್ಲದೆ ಸಹಕಾರ ಸಂಘ/ಬ್ಯಾಂಕ್‌ಗಳೊಡನೆ ವ್ಯವಹರಿಸುತ್ತಿರುವ ಗ್ರಾಮೀಣ ಪ್ರದೇಶದಲ್ಲಿರುವ ಸ್ವ–ಸಹಾಯ ಗುಂಪು ಹಾಗೂ ಸ್ತ್ರೀ ಶಕ್ತಿ ಗುಂಪಿನ ಸದಸ್ಯರು ಮತ್ತು ಅವರ ಕುಟುಂಬದ ಸದಸ್ಯರು ಕೂಡ ಯೋಜನೆಯ ಸೌಲಭ್ಯ ಪಡೆಯಬಹುದು. ನಗರ/ಪಟ್ಟಣ ಪ್ರದೇಶದಲ್ಲಿನ ಸಹಕಾರಿ

ಮೀನುಗಾರರು, ಸಹಕಾರಿ ಬೀಡಿಕಾರ್ಮಿಕರು, ಸಹಕಾರಿ ನೇಕಾರರು ಕೂಡ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಯಶಸ್ವಿನಿ ಯೋಜನೆಯು ಪ್ರಾರಂಭವಾದಾಗಿನಿಂದಲೂ ಗ್ರಾಮೀಣ ಸಹಕಾರಿಗಳು ಯೋಜನೆಯ ಸೌಲಭ್ಯವನ್ನು ಯಶಸ್ವಿಯಾಗಿ ಪಡೆಯುತ್ತಿದ್ದು, 2010–11 ನೇ ಸಾಲಿನ ಯೋಜನೆಯ ಅನುಷ್ಠಾನಕ್ಕಾಗಿ ಈ ಕೆಳಗಿನ ಮಾರ್ಗಸೂಚಿ ನಿಯಮಗಳನ್ನು ಹೊರಡಿಸಲಾಗಿದೆ.

1. ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಲು ಯಾವುದೇ ಒಬ್ಬ ವ್ಯಕ್ತಿ ಸಹಕಾರ ಸಂಘದ ಸದಸ್ಯನಾಗಿರಬೇಕು. ಅಂದರೆ ಆತನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಅಡಿ ಅಥವಾ ಕರ್ನಾಟಕ ಸೌಹಾರ್ದ ಸಹಕಾರ ಅಧಿನಿಯಮ 1997ರ ಅಡಿ ಅಥವಾ ಬಹು ರಾಜ್ಯ ಸಹಕಾರ ಸಂಘಗಳ ಅಧಿನಿಯಮ 2007ರ ಅಡಿ ನೋಂದಾಯಿಸಿದ ಸಹಕಾರ ಸಂಘದ ಸದಸ್ಯತ್ವ ಪಡೆದು ಯಶಸ್ವಿನಿ ವರ್ಷದ ಮೊದಲ ದಿನ ಅಂದರೆ 01.06.2010ಕ್ಕೆ ಕನಿಷ್ಠ ಆರು ತಿಂಗಳಾಗಿರಬೇಕು ಹಾಗೂ ಗ್ರಾಮೀಣ ಪ್ರದೇಶ ದಲ್ಲಿರುವ ಸಹಕಾರ ಸಂಘಗಳ ಸದಸ್ಯನಾಗಿರಬೇಕು.
2. ಆದಾಗ್ಯೂ ನಗರ/ಪಟ್ಟಣದ ಜೊತೆಗೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ಸುತ್ತಮುತ್ತಲಿನ ಪ್ರದೇಶದಲ್ಲಿನ ಕೃಷಿ ಪತ್ತಿನ ಸಹಕಾರ ಸಂಘಗಳ/ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರು ನಗರ/ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿದ್ದು, ಅವರು ಸದಸ್ಯತ್ವ ಹೊಂದಿರುವ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಕೃಷಿ ಜಮೀನು ಹೊಂದಿರುವವರು, ಈಗಾಗಲೇ ಕಳೆದ ಸಾಲುಗಳಲ್ಲಿ ಯೋಜನೆ ಯಡಿಯಲ್ಲಿ ನವೀಕರಣ/ನೋಂದಾವಣೆಯಾಗಿದ್ದಲ್ಲಿ, ಪ್ರಸಕ್ತ ಸಾಲಿಗೂ ಸಹ ಅಂತಹವರುಗಳು ಯೋಜನೆಯಡಿಯಲ್ಲಿ ನವೀಕ ರಿಸಲು/ನೋಂದಾಯಿಸಲು ಅರ್ಹರಾಗಿರುತ್ತಾರೆ.
3. ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆಯಡಿ ಪ್ರಧಾನ ಅರ್ಜಿದಾರರು ಮತ್ತು ಆತನ ಕುಟುಂಬದ ಎಲ್ಲಾ ಅರ್ಹ ಸದಸ್ಯರನ್ನು ಯಶಸ್ವಿನಿ ಯೋಜನೆಯಡಿಯಲ್ಲಿ ನೋಂದಾಯಿ ಸುವುದು ಮತ್ತು ಪ್ರತಿಯೊಬ್ಬ ಸದಸ್ಯರು ವಾರ್ಷಿಕ ವಂತಿಗೆ ಹಣ ಪಾವತಿಸುವುದು ಯೋಜನೆಯ ಸಬಲತೆಯ ದೃಷ್ಟಿಯಿಂದ ಅವಶ್ಯವಾಗಿದೆ. ಆದ್ದರಿಂದ ಪ್ರಧಾನ ಅರ್ಜಿದಾರರು ಮತ್ತು ಅವರ

ಕುಟುಂಬದ ಎಲ್ಲಾ ಅರ್ಹ ಸದಸ್ಯರನ್ನು ಹೊಸದಾಗಿ ನೋಂದಾಯಿಸುವ ಮಿತಿಯನ್ನು ಕನಿಷ್ಠ ನಾಲ್ಕು ಅರ್ಹ ವ್ಯಕ್ತಿಗಳಿಗೆ ಸೀಮಿತಗೊಳಿಸಿ ಮುಂದುವರಿಸಲಾಗಿದೆ.

4. ಆದಾಗ್ಯೂ, 2009–10ನೇ ಸಾಲಿನಲ್ಲಿ ಕಾರಣಾಂತರಗಳಿಂದ ನಿಗದಿತ ಮಿತಿಗಿಂತ ಕುಟುಂಬದ ಕಡಿಮೆ ಸದಸ್ಯರನ್ನು ಹೊಸದಾಗಿ ನೋಂದಾಯಿಸಿ/ನವೀಕರಿಸಿದ್ದಲ್ಲಿ, ಅಂತಹ ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬದ ಅರ್ಹ ಸದಸ್ಯರು ಯೋಜನೆಯ ಸೌಲಭ್ಯದಿಂದ ವಂಚಿತರಾಗಬಾರದೆಂಬ ಉದ್ದೇಶದಿಂದ 2010–11 ಸಾಲಿನಲ್ಲಿ ಅಂತಹ ಫಲಾನುಭವಿಗಳ ಕುಟುಂಬದ ಅರ್ಹ ಸದಸ್ಯರನ್ನು ಯೋಜನೆಯಡಿಯಲ್ಲಿ ಸೇರಿಸಲು ಅವರ ಮನವೊಲಿಸಿ ನೋಂದಾವಣೆಯನ್ನು ನವೀಕರಿಸತಕ್ಕದ್ದು.

5. ಅವಿಭಕ್ತ ಕುಟುಂಬದ ಯಾವುದೇ ಒಬ್ಬ ಸದಸ್ಯರು/ಸದಸ್ಯಳು ಅರ್ಹ ಸಹಕಾರ ಸಂಘದ ಸದಸ್ಯನಾಗಿ/ಳಾಗಿ ಯಶಸ್ವಿನಿ ವರ್ಷದ ಮೊದಲ ದಿನ ಅಂದರೆ 01.06.2010 ಕ್ಕೆ ಆರು ತಿಂಗಳಾಗಿದ್ದಲ್ಲಿ, ಕುಟುಂಬದ ಪ್ರತಿಯೊಬ್ಬ ಸದಸ್ಯನೂ ನಿಗದಿತ ಅವಧಿಯಲ್ಲಿ ವಾರ್ಷಿಕ ವಂತಿಗೆ ಸಲ್ಲಿಸುವ ಮೂಲಕ ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಬಹುದು. ಅವಿಭಕ್ತ ಕುಟುಂಬ ಅಂದರೆ ತಂದೆ, ತಾಯಿ, ಗಂಡು/ಹೆಣ್ಣು ಮಕ್ಕಳು (ಮದುವೆಯಾದ/ಮದುವೆಯಾಗದ) ಸೊಸೆ, ಮೊಮ್ಮಕ್ಕಳೂ ಸೇರಿ ಎಂದು ಅರ್ಥೈಯಿಸಲಾಗಿದೆ.

6. ಮದುವೆಯಾಗಿರುವ ಹೆಣ್ಣು ಮಗಳು ಹಾಗೂ ಅವಳ ಮಕ್ಕಳು ತಂದೆ/ತಾಯಿ/ಅಣ್ಣ/ತಮ್ಮ ಇವರ ಕುಟುಂಬದಲ್ಲಿಯೇ ಅಂದರೆ ಪ್ರಧಾನ ಅರ್ಜಿದಾರರ ಕುಟುಂಬದಲ್ಲಿ ವಾಸವಾಗಿದ್ದರೆ, ಅವರ ಪಾಲಿನ ವಂತಿಗೆ ಹಣ ಪಾವತಿಸಿದರೆ ನವೀಕರಣ/ನೋಂದಾವಣೆಗೆ ಹಾಗೂ ಯೋಜನೆಯ ಸೌಲಭ್ಯ ಪಡೆಯಲು ಅರ್ಹಳಾಗಿರುತ್ತಾಳೆ. ಆದಾಗ್ಯೂ, 2010–11ನೇ ಸಾಲಿನ ಯೋಜನೆಯ ಅವಧಿಯಲ್ಲಿ ಮದುವೆಯಾದ ಮಗಳು ತಂದೆ/ತಾಯಿಯ ಜೊತೆ ವಾಸವಾಗಿರದೆ ಬೇರೆ ಇದ್ದಲ್ಲಿ ಅಥವಾ ಸಂಘದ ಕಾರ್ಯವ್ಯಾಪ್ತಿಯ ಹೊರಗೆ ವಾಸವಿದ್ದರೆ ಅಂಥಹ ಸಂದರ್ಭದಲ್ಲಿ ಯೋಜನೆಯ ಸೌಲಭ್ಯವನ್ನು ತಂದೆ/ತಾಯಿಯ ಕುಟುಂಬದ ಸದಸ್ಯೆಯಾಗಿ ಪಡೆಯಲು ಅರ್ಹರಾಗುವುದಿಲ್ಲ. ಆದರೆ, ಅವಳೇ ಸಂಘದ ಸದಸ್ಯೆಯಾಗಿ ಯಶಸ್ವಿನಿ

ವರ್ಷದ ಮೊದಲ ದಿನಕ್ಕೆ ಆರು ತಿಂಗಳು ಕಳೆದಿದ್ದಲ್ಲಿ ಈ ನಿಯಮ ಅಂಥವಳಿಗೆ ಅನ್ವಯಿಸುವುದಿಲ್ಲ.

7. ಯಶಸ್ವಿನಿ ಫಲಾನುಭವಿಯು ವಯಸ್ಕನಾಗಿರಲಿ, ಅಪ್ರಾಪ್ತ ವಯಸ್ಕನಾಗಿರಲಿ ವಾರ್ಷಿಕ ವಂತಿಗೆಯನ್ನು ಪ್ರತಿಯೊಬ್ಬರು ರೂ.150/– ರಂತೆ ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬ ಸದಸ್ಯರಿಗೆ ಕಡ್ಡಾಯವಾಗಿ ಪಾವತಿ ಮಾಡಬೇಕು. ಈ ಪೈಕಿ ರೂ.10 ಅನ್ನು ಸಂಘದ ಸಾದಿಲ್ವಾರು ವೆಚ್ಚಕ್ಕೆ ಮತ್ತು ಯಶಸ್ವಿನಿ ಫಲಾನುಭವಿಗಳನ್ನು ನೋಂದಾಯಿಸಲು ಶ್ರಮಿಸಿದವರಿಗೆ ಪ್ರೋತ್ಸಾಹಧನವಾಗಿ ಸಹಕಾರ ಸಂಘ/ಸಂಸ್ಥೆಯು ಇಟ್ಟುಕೊಂಡು, ಉಳಿದ ರೂ.140/ ಅನ್ನು 15 ದಿವಸಗಳ ಒಳಗಾಗಿ ಸಂಬಂಧಿಸಿದ ಜಿಲ್ಲಾ ಸಹಕಾರಿ ಬ್ಯಾಂಕುಗಳಲ್ಲಿ ಯಶಸ್ವಿನಿ ಟ್ರಸ್ಟ್ ಹೊಂದಿರುವ ಖಾತೆಗೆ ಜಮಾ ಮಾಡಬೇಕು/ ವರ್ಗಾಯಿಸತಕ್ಕದ್ದು. ವಿಳಂಬವಾದಲ್ಲಿ ಆ ಹಣವನ್ನು ಇಟ್ಟುಕೊಂಡ ಸಹಕಾರಿ ಸಂಸ್ಥೆಯವರು ಬ್ಯಾಂಕಿನ ನಿಯಮಗಳ ಪ್ರಕಾರ ವಿಳಂಬದ ಅವಧಿಗೆ ಬಡ್ಡಿ ಪಾವತಿ ಮಾಡಲು ಬದ್ಧವಾಗುತ್ತಾರೆ.

8. ಒಂದೇ ಕುಟುಂಬದ ಸದಸ್ಯರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಯಶಸ್ವಿನಿ ಫಲಾನುಭವಿಗಳನ್ನು ನೋಂದಾಯಿಸಿದಲ್ಲಿ, ವಿಶೇಷ ರಿಯಾಯಿತಿ ನೀಡುವುದನ್ನು ಪ್ರಸಕ್ತ ವರ್ಷ ಅಂದರೆ 2010–11ನೇ ಸಾಲಿಗೂ ಮುಂದುವರಿಸಲಾಗಿದೆ. ಯಾವುದೇ ಒಂದು ಕುಟುಂಬದಲ್ಲಿ ಐವರು ಅಥವಾ ಅದಕ್ಕಿಂತ ಹೆಚ್ಚಿಗೆ ಕುಟುಂಬ ಸದಸ್ಯರನ್ನು ಯಶಸ್ವಿನಿ ಫಲಾನುಭವಿಗಳನ್ನಾಗಿ ನೋಂದಾಯಿಸಿದಲ್ಲಿ ಅವರು ಪಾವತಿಸಬೇಕಾದ ವಂತಿಗೆ ಹಣದಲ್ಲಿ ಅಂದರೆ ಪ್ರತಿ ಸದಸ್ಯರಿಗೆ ರೂ.140/– ರಲ್ಲಿ ಶೇ.15 ರಿಯಾಯಿತಿ ಪಡೆಯಲು ಅರ್ಹರಿರುತ್ತಾರೆ.

9. ಯಶಸ್ವಿನಿ ಫಲಾನುಭವಿಯಾಗಲು ನಿಗದಿಗೊಳಿಸಿದ ಗರಿಷ್ಠ ವಯೋಮಿತಿ 75 ವರ್ಷ ಮುಂದುವರಿದಿರುತ್ತದೆ. ಅಂದರೆ ಯಾವುದೇ ಒಬ್ಬ ವ್ಯಕ್ತಿಯು ಯೋಜನೆಯ ಸೌಲಭ್ಯವನ್ನು ಪಡೆಯಲು ಯಶಸ್ವಿನಿ ವರ್ಷ ಪ್ರಾರಂಭ ಆಗುವ ದಿನ ಅಂದರೆ ಜೂನ್ 1 ರಂದು 75 ವರ್ಷ ಮುಗಿಸಿದ್ದಲ್ಲಿ ಯೋಜನೆಯ ಸೌಲಭ್ಯವನ್ನು ಪಡೆಯಲು ಅರ್ಹನಾಗುವುದಿಲ್ಲ. ಆದ್ದರಿಂದ 75 ವರ್ಷ ವಯಸ್ಸಾದ ಪ್ರಧಾನ ಅರ್ಜಿದಾರರು ಅವರ ಪಾಲಿನ ವಂತಿಗೆ ಹಣ ಪಾವತಿಸುವುದರಿಂದ ಮಾತ್ರ ವಿನಾಯಿತಿ ನೀಡಲಾಗಿದೆ. ಆದಾಗ್ಯೂ

ಉಳಿದಂತೆ ಪ್ರತಿಯೊಬ್ಬ ಪ್ರಧಾನ ಅರ್ಜಿದಾರರು ಹಾಗೂ ಅವರ ಕುಟುಂಬದ ಅರ್ಹ ಸದಸ್ಯರು ತಮ್ಮ ಪಾಲಿನ ವಂತಿಗೆ ಹಣವನ್ನು ಕಡ್ಡಾಯವಾಗಿ ಪಾವತಿಸಬೇಕು. ತಪ್ಪಿದ್ದಲ್ಲಿ ಅಂಥವರು ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.

0. ಯಶಸ್ವಿನಿ ಯೋಜನೆಯು ಒಂದು ಸ್ವಂತ ಬಂಡವಾಳ ಯೋಜನೆ ಯಾಗಿದ್ದು, ಯೋಜನೆಯಡಿ ಗ್ರಾಮೀಣ ಸಹಕಾರಿಗಳಿಂದ ಸಂಗ್ರಹಿಸಿದ ವಂತಿಗೆಯ ಮೊತ್ತಕ್ಕಿಂತ ಪ್ರತಿ ವರ್ಷ ಶಸ್ತ್ರಚಿಕಿತ್ಸಾ ವೆಚ್ಚ ಪಾವತಿ ಹೆಚ್ಚಿಗೆ ಆಗುತ್ತಿದೆ. ಯೋಜನೆಯ ಸಂಪೂರ್ಣ ವೆಚ್ಚವನ್ನು ಭರಿಸಲು ಹೆಚ್ಚಿನ ಪ್ರಮಾಣದಲ್ಲಿ ಫಲಾನುಭವಿಗಳನ್ನು ನೋಂದಾ ಯಿಸಲು ಪ್ರಯತ್ನಿಸುವುದು ಅತೀ ಅವಶ್ಯಕವಾಗಿದೆ. ಯಶಸ್ವಿನಿ ಯೋಜನೆಯಲ್ಲಿ ನೋಂದಾಯಿಸಿದ ಫಲಾನುಭವಿಗಳ ಸಂಖ್ಯೆ ಯೋಜನೆಯ ಪ್ರಾರಂಭದಲ್ಲಿ 16.00 ಲಕ್ಷ ಇದ್ದದ್ದು, ಕಳೆದ 6 ವರ್ಷಗಳಲ್ಲಿ ಈ ಸಂಖ್ಯೆಯು ಗರಿಷ್ಠ 30.72 ಲಕ್ಷ ಆಗಿರುತ್ತದೆ. ಗ್ರಾಮೀಣ ಪ್ರದೇಶದ ಸಹಕಾರ ಸಂಘಗಳ ಸದಸ್ಯರ ಸಂಖ್ಯೆಯೇ ಸುಮಾರು 96 ಲಕ್ಷ ಇರುವುದನ್ನು ಮತ್ತು ಗ್ರಾಮೀಣ ಪ್ರದೇಶದ ಸ್ತ್ರೀ ಶಕ್ತಿ ಗುಂಪು/ ಸ್ವಸಹಾಯ ಗುಂಪುಗಳ ಸದಸ್ಯರ ಸಂಖ್ಯೆಯನ್ನು ಗಮನಿಸಿದಾಗ ಯೋಜನೆಗೆ ಒಳಪಡಿಸಬೇಕಾದವರ ಸಂಖ್ಯೆ ಹೆಚ್ಚಿಗೆ ಇರುತ್ತದೆ. ಆದ್ದರಿಂದ, 2010–11ನೇ ಸಾಲಿನಲ್ಲಿ ಕನಿಷ್ಠ 60 ಲಕ್ಷ ಫಲಾನುಭವಿಗಳನ್ನು ನೋಂದಾಯಿಸುವ ಗುರಿ ನಿಗದಿಪಡಿಸಲಾಗಿದೆ. ಪ್ರತಿ ಜಿಲ್ಲೆಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಸಹಕಾರ ಸಂಘಗಳ ನಿಬಂಧಕರು ಪ್ರತಿ ಜಿಲ್ಲೆಗೆ ಪ್ರತ್ಯೇಕ ಗುರಿ ನಿಗದಿಗೊಳಿಸುವಂತೆ ಸೂಚಿಸಲಾಗಿದೆ.

11. 2009–10ನೇ ಸಾಲಿನಲ್ಲಿ 30.72 ಲಕ್ಷ ಫಲಾನುಭವಿಗಳನ್ನು ನೋಂದಾಯಿಸಿದ್ದು, ಅವರೆಲ್ಲರೂ 2010–11ನೇ ಸಾಲಿಗೆ ಯಶಸ್ವಿನಿ ಫಲಾನುಭವಿಯಾಗಿ ನವೀಕರಿಸುವಂತೆ ನೋಡಿಕೊಳ್ಳತಕ್ಕದ್ದು.

12. 2010–11ನೇ ಸಾಲಿಗೆ ಯಶಸ್ವಿನಿ ಫಲಾನುಭವಿಗಳನ್ನು ನೋಂದಾಯಿ ಸುವ ಕಾರ್ಯಕ್ರಮವನ್ನು ಈ ಕೆಳಗಿನಂತೆ ನಿಗದಿಗೊಳಿಸಲಾಗಿದೆ.

    ಅ) ಯಶಸ್ವಿನಿ ಫಲಾನುಭವಿಗಳನ್ನು ನೋಂದಾಯಿಸುವ/ ನವೀಕರಿಸುವ ಪ್ರಕ್ರಿಯೆಯನ್ನು ಪ್ರಾರಂಭ ಮಾಡುವ ದಿನಾಂಕ: 01.02.2010.

ಆ) ಯಶಸ್ವಿನಿ ಫಲಾನುಭವಿಗಳನ್ನು ನೋಂದಾಯಿಸುವ/ ನವೀಕರಿಸುವ ಮುಕ್ತಾಯ ದಿನಾಂಕ: 31.05.2010.

ಮೇಲೆ ನಮೂದಿಸಿದ ದಿನಾಂಕಗಳ ನಂತರದ ಅವಧಿ ಮುಂದುವರಿಯದಿದ್ದಲ್ಲಿ, ಯಶಸ್ವಿನಿ ಫಲಾನುಭವಿಗಳ ನೋಂದಾಯಿಸುವಿಕೆಗೆ/ ನವೀಕರಣಕ್ಕೆ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಒಂದು ವೇಳೆ ನಿಗದಿತ ದಿನಾಂಕಗಳ ನಂತರ ನೋಂದಾಯಿಸಿದಲ್ಲಿ ಅಂಥವರು ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗುವುದಿಲ್ಲ.

13. 2010–11ನೇ ಸಾಲಿನಲ್ಲಿ ಯಶಸ್ವಿನಿ ಫಲಾನುಭವಿಗಳನ್ನು ಹೊಸದಾಗಿ ನೋಂದಾಯಿಸಲು 2009–10ನೇ ಸಾಲಿನಲ್ಲಿ ಉಪಯೋಗಿಸದೇ ಬಾಕಿ ಉಳಿದಿರುವ ನೋಂದಾವಣೆ ಫಾರಂಗಳನ್ನು ಮಾತ್ರ ಉಪಯೋಗಿಸಬೇಕು. ಬೇರೆ ಯಾವುದೇ ಫಾರಂಗಳನ್ನು ಉಪಯೋಗಿಸತಕ್ಕದ್ದಲ್ಲ. ಫಲಾನುಭವಿಗಳಿಂದ ನಿಗದಿತ ವಾರ್ಷಿಕ ವಂತಿಗೆ ಹಣ ಪಡೆದು ಸಂಘದ ಹಣ ಸ್ವೀಕೃತಿ ರಶೀದಿಯನ್ನು ಕೊಡಬೇಕು. ಫಾರಂನಲ್ಲಿ ಫಲಾನುಭವಿಯನ್ನು ನೋಂದಾಯಿಸಿದ ತಿಂಗಳು, ವರ್ಷ ಮತ್ತು ದಿನಾಂಕವನ್ನು ತಪ್ಪದೆ ನಮೂದಿಸಬೇಕು. ನೋಂದಾವಣೆ ಫಾರಂನ ಕೆಳಭಾಗವನ್ನು ಫಲಾನುಭವಿಗೆ ಕೊಡಬೇಕು. ಮೇಲ್ಭಾಗವನ್ನು ಡೆಟಾ ಎಂಟ್ರಿ ಮಾಡಲು ಸಂಬಂಧಿಸಿದ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಿಗೆ ಕಳಿಸಬೇಕು. ಈ ಬಗ್ಗೆ ಸ್ವೀಕೃತಿ ಪಡೆಯಬೇಕು. ಫಾರಂಗಳನ್ನು ಪುಸ್ತಕದಿಂದ ಹರಿಯತಕ್ಕದ್ದಲ್ಲ. ಅವಶ್ಯ ಎಲ್ಲಾ ಮಾಹಿತಿ, ಫೋಟೋ ಮತ್ತು ವಂತಿಗೆ ಹಣ ಬಂದ ನಂತರವೇ ಫಾರಂನ್ನು ಭರ್ತಿ ಮಾಡಬೇಕು. ಅಪೂರ್ಣ ಹಾಗೂ ತಿದ್ದಿದ ಫಾರಂಗಳನ್ನು ಡೆಟಾ ಎಂಟ್ರಿಗೆ ಕಳುಹಿಸತಕ್ಕದ್ದಲ್ಲ. ಮಾಹಿತಿ ಭರ್ತಿ ಮಾಡಿದ ನಂತರ ಫಾರಂಗೆ ಸಹಕಾರ ಸಂಘದ ಕಾರ್ಯದರ್ಶಿಯವರು/ ಮ್ಯಾನೇಜರ್‌ರವರು ಸಂಘದ ಸೀಲು ಹಾಕಿ ಸಹಿ ಮಾಡಬೇಕು.

14. ಹೊಸದಾಗಿ ಫಲಾನುಭವಿಗಳ ನೋಂದಾವಣೆಗೆ ಬೇಕಾದ ಅವಶ್ಯಕ ಸಂಖ್ಯೆಯ ಫಾರಂಗಳನ್ನು ಸಹಕಾರ ಸಂಘಗಳ ಉಪನಿಬಂಧಕರುಗಳು ಟ್ರಸ್ಟ್ ಕಛೇರಿಯಿಂದ ಪಡೆದು ಅವರ ವ್ಯಾಪ್ತಿಯ ಸಹಕಾರ

ಸಂಘಗಳ ಕಾರ್ಯದರ್ಶಿಗಳಿಗೆ ಫಾರಂ ಪುಸ್ತಕಗಳನ್ನು ಹಂತಹಂತವಾಗಿ ಪೂರೈಸಿ ಸ್ವೀಕೃತಿ ಪಡೆಯಬೇಕು. ಒಮ್ಮೆ ಪೂರೈಸಿದ ಫಾರಂಗಳಲ್ಲಿ ಸಹಕಾರ ಸಂಘದವರು ಮಾಹಿತಿಯನ್ನು ಪೂರ್ತಿಯಾಗಿ ನಮೂದಿಸಿ ವಂತಿಗೆ ಹಣವನ್ನು ಬ್ಯಾಂಕಿಗೆ ಪಾವತಿ ಮಾಡಿದ ನಂತರವೇ ಮತ್ತೆ ಫಾರಂಗಳನ್ನು ಒದಗಿಸಬೇಕು. ಸಹಕಾರ ಸಂಘಕ್ಕೆ ಫಾರಂ ಪೂರೈಸುವಾಗ ಪುಸ್ತಕದ ಸಂಖ್ಯೆ ಮತ್ತು ಯುನಿಕ್ ಐ.ಡಿ. ಸಂಖ್ಯೆಯನ್ನು ನಮೂದಿಸಿ ಕಾರ್ಯದರ್ಶಿಯಿಂದ ಸ್ವೀಕೃತಿ ಪಡೆದುಕೊಳ್ಳಬೇಕು. ಈ ಬಗ್ಗೆ ಪರಿಶೀಲನೆಗಾಗಿ ಪ್ರತ್ಯೇಕ ಪುಸ್ತಕದಲ್ಲಿ ಬರೆದಿಟ್ಟಿರಬೇಕು.

15. 2010–11ನೇ ಸಾಲಿನಲ್ಲಿ ನೋಂದಾವಣೆ ನವೀಕರಿಸಲು ಹಾಗೂ ಅದೇ ಕುಟುಂಬದ ಹೊಸ ಸದಸ್ಯರ ಸೇರ್ಪಡೆಗೆ ಈ ಕೆಳಗಿನಂತೆ ಕ್ರಮವಹಿಸತಕ್ಕದ್ದು:–

ಅ) 2009–10ನೇ ಸಾಲಿನಲ್ಲಿ ಹೊಸದಾಗಿ ನೋಂದಾಯಿಸಿದ್ದ/ನವೀಕರಿಸಿದ್ದ ಯಶಸ್ವಿನಿ ಫಲಾನುಭವಿಗಳ ನೋಂದಾವಣೆಯನ್ನು 2010–11ನೇ ಸಾಲಿನಲ್ಲಿ ನವೀಕರಿಸಲು ಪ್ರತಿಯೊಬ್ಬ ವ್ಯಕ್ತಿಯಿಂದಲೂ ನಿಗದಿತ ವಾರ್ಷಿಕ ವಂತಿಗೆ ರೂ.150/–ರಂತೆ ಹಣ ಪಡೆದು ಸಂಘದ ಹಣ ಸ್ವೀಕೃತಿ ರಶೀದಿಯನ್ನು ಫಲಾನುಭವಿಗೆ ಕೊಡಬೇಕು. ಹಣ ಸ್ವೀಕೃತಿ ರಶೀದಿಯಲ್ಲಿ ಮತ್ತು ನವೀಕರಣ ನಮೂನೆಯಲ್ಲಿ ಈಗಾಗಲೇ ಅವರ ಕುಟುಂಬಕ್ಕೆ ಕೊಡಮಾಡಿದ ಯುನಿಕ್ ಐ.ಡಿ. ಸಂಖ್ಯೆಯನ್ನು ತಪ್ಪದೆ ನಮೂದಿಸಬೇಕು. ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬದ ಇತರ ಸದಸ್ಯರ ಹೆಸರು, ವಯಸ್ಸು ಮತ್ತು ಸಂಬಂಧವನ್ನು ನಮೂದಿಸಬೇಕು.

ಆ) 2009–10ನೇ ಸಾಲಿನಲ್ಲಿ ಹೊಸದಾಗಿ ನೋಂದಾಯಿಸಿದ್ದ/ನವೀಕರಿಸಿದ್ದ ಪ್ರಧಾನ ಅರ್ಜಿದಾರರ ಕುಟುಂಬದ ಯಾವುದೇ ಒಬ್ಬ ಸದಸ್ಯರನ್ನು 2010–11ನೇ ಸಾಲಿನಲ್ಲಿ ಹೊಸದಾಗಿ ಸೇರಿಸಲು ಬಯಸಿದಲ್ಲಿ, ಅಂತಹ ಫಲಾನುಭವಿಯ ಯಶಸ್ವಿನಿ ವಾರ್ಷಿಕ ವಂತಿಗೆ ಹಣವನ್ನು ಪಡೆದು ಸಂಘದ ಸ್ವೀಕೃತಿ ರಶೀದಿಯಲ್ಲಿ ಮತ್ತು ನವೀಕರಣ

ನಮೂನೆಯಲ್ಲಿ ಅವರ ಹೆಸರನ್ನು ನಮೂದಿಸಬೇಕು. ಹೊಸದಾಗಿ ಸೇರ್ಪಡೆಯಾದ ಫಲಾನುಭವಿಯ ಫೋಟೋ ವನ್ನು ಡಾಟಾ ಎಂಟ್ರಿಗೆ ಕಳುಹಿಸುವ ನವೀಕರಣ ನಮೂನೆಯ ಹಿಂಭಾಗದಲ್ಲಿ ಅಂಟಿಸಿ, (ಆದರೆ ಖಡ್ಡಾಯ ವಾಗಿ ಪೋಟೋವನ್ನು ಪಿನ್ನು (stapler) ಮಾಡಬಾರದು) ಅದರಲ್ಲಿ ಈಗಾಗಲೇ ಅವರ ಕುಟುಂಬಕ್ಕೆ ಕೊಡಮಾಡಿದ ಯುನಿಕ್ ಐ.ಡಿ. ಸಂಖ್ಯೆಯನ್ನು ತಪ್ಪದೆ ನಮೂದಿಸಬೇಕು ಹಾಗೂ ಹಾಲಿ ಇರುವ ಮತ್ತು ಹೊಸದಾಗಿ ಸೇರ್ಪಡೆ ಯಾದ ಅದೇ ಕುಟುಂಬ ಸದಸ್ಯರ ಹೆಸರು ಮತ್ತು ಪ್ರಧಾನ ಅರ್ಜಿದಾರರೊಂದಿಗಿನ ಸಂಬಂಧವನ್ನು ಬರೆಯಬೇಕು.

ಇ) 2010–11ನೇ ಸಾಲಿನಲ್ಲಿ ನವೀಕರಣ/ಸೇರ್ಪಡೆಯಾದ ಫಲಾನುಭವಿಗಳ ಎಲ್ಲಾ ಮಾಹಿತಿಯನ್ನು ಸುತ್ತೋಲೆಗೆ ಲಗತ್ತಿಸಿದ ನಮೂನೆಯಲ್ಲಿ ಭರ್ತಿಮಾಡಿ, ಈಗಾಗಲೇ ಆ ಕುಟುಂಬಕ್ಕೆ ಕೊಡಮಾಡಿದ ಯುನಿಕ್ ಐ.ಡಿ. ಸಂಖ್ಯೆ ಯನ್ನು ತಪ್ಪದೆ ನಮೂದಿಸಿ, ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬದ ಇತರ ಸದಸ್ಯರ ಹೆಸರು ಮತ್ತು ಸಂಬಂಧ, ವಯಸ್ಸನ್ನು ನಮೂದಿಸಿ ಅವಶ್ಯವಿದ್ದಲ್ಲಿ, ಫೋಟೋ ಅಂಟಿಸಿ ಸಹಕಾರ ಸಂಘದ ಕಾರ್ಯದರ್ಶಿ ಯವರು/ ಮ್ಯಾನೇಜರ್ ರವರು ಸಂಘದ ಸೀಲು ಹಾಕಿ ಸಹಿ ಮಾಡಬೇಕು ಹಾಗೂ ಈ ನಮೂನೆಯನ್ನು ಡಾಟಾ ಎಂಟ್ರಿಗಾಗಿ ಸಹಕಾರ ಸಂಘಗಳ ಉಪನಿಬಂಧಕರಿಗೆ ಕಳುಹಿಸಿ ಕೊಡಬೇಕು.

16. 2010–11ನೇ ಸಾಲಿನಲ್ಲಿ ಹೊಸದಾಗಿ ನೋಂದಾವಣೆ/ನವೀಕರಣ ಗೊಂಡ/ಸೇರ್ಪಡೆಯಾದ ಫಲಾನುಭವಿಗಳಿಗೆ ಸಂಘವು ವಾರ್ಷಿಕ ವಂತಿಗೆ ಹಣ ಪಡೆದು ಸ್ವೀಕೃತಿ ರಶೀದಿ ನೀಡಿರುವುದನ್ನು ಫಲಾನುಭವಿಯು ಸದರಿ ಸಾಲಿನ ಅಂತ್ಯದವರೆಗೆ ಭದ್ರವಾಗಿ ಇಟ್ಟುಕೊಳ್ಳಬೇಕು ಮತ್ತು ಯೋಜನೆಯ ಸೌಲಭ್ಯವನ್ನು ಪಡೆಯುವ ಸಂದರ್ಭದಲ್ಲಿ ರಶೀದಿಯನ್ನು ಗುರುತಿಸಲ್ಪಟ್ಟ ಆಸ್ಪತ್ರೆಗಳಿಗೆ ಖಡ್ಡಾಯ ವಾಗಿ ಹಾಜರುಪಡಿಸಬೇಕು ಎಂಬ ತಿಳಿವಳಿಕೆ ನೀಡತಕ್ಕದ್ದು.

17. 2008–09ರಿಂದ ಫಲಾನುಭವಿಗಳಿಗೆ ಯುನಿಕ್ ಐಡಿ ಸಂಖ್ಯೆಯನ್ನು ನೀಡಿ ಮಾಹಿತಿಯನ್ನು ಯಶಸ್ವಿನಿ ವೆಬ್‌ಸೈಟ್ www.yeshasvini.kar.nic.in ನಲ್ಲಿ ಅಳವಡಿಸಲಾಗಿದೆ. 2008–09ನೇ ಸಾಲಿನಲ್ಲಿ ಹೊಸದಾಗಿ ನೋಂದಾವಣೆಯಾಗಿದ್ದ ಫಲಾನುಭವಿಗಳು 2009–10 ನೇ ಸಾಲಿನಲ್ಲಿ ತಮ್ಮ ಪಾಲಿನ ವಂತಿಗೆ ಹಣ ಪಾವತಿಸಿ ನವೀಕರಣಗೊಂಡಿದ್ದ ಹಾಗೂ 2009–10ನೇ ಸಾಲಿನಲ್ಲಿ ಹೊಸದಾಗಿ ನೋಂದಾವಣೆಯಾಗಿದ್ದ ಫಲಾನುಭವಿಗಳ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ. ಆದ್ದರಿಂದ 2008–09 ಮತ್ತು ಅದಕ್ಕಿಂತ ಹಿಂದೆ ಯೋಜನೆಯ ಫಲಾನುಭವಿಗಳಾಗಿದ್ದವರು ನಂತರ ನೋಂದಾವಣೆ ನವೀಕರಿಸದೇ ಇದ್ದವರು, 2010–11ನೇ ಸಾಲಿನಲ್ಲಿ ಯೋಜನೆಯಡಿಯಲ್ಲಿ ಸೇರಿಸಲು ಬಯಸಿದಲ್ಲಿ ಅಂತಹ ಫಲಾನುಭವಿಗಳನ್ನು ನೋಂದಾಯಿಸಲು ಹೊಸ ನೋಂದಾವಣೆ ಫಾರಂಗಳನ್ನು ಉಪಯೋಗಿಸಬೇಕು.

18. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ವ್ಯವಸಾಯ ಸೇವಾ ಸಹಕಾರ ಸಂಘಗಳು/ಸಹಕಾರ ಬ್ಯಾಂಕುಗಳು ಬೆಳೆ ಸಾಲ/ ಮಧ್ಯಮಾವಧಿ ಸಾಲಗಳ ವಿತರಣೆ/ವಸೂಲಾತಿ ಸಮಯದಲ್ಲಿ ಸಾಲಗಾರರ ಕುಟುಂಬದ ಅರ್ಹ ಎಲ್ಲಾ ಸದಸ್ಯರ ಯಶಸ್ವಿನಿ ವಾರ್ಷಿಕ ವಂತಿಗೆಯ ಹಣವನ್ನು ಕಡ್ಡಾಯವಾಗಿ ಪಡೆಯಬೇಕು. ಈ ಪದ್ಧತಿಯನ್ನು ರಾಜ್ಯದ ಕೆಲವು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಮತ್ತು ಪ್ರಾಥಮಿಕ ಸಹಕಾರ ಪತ್ತಿನ ಸಂಘಗಳು ಈಗಾಗಲೇ ಪ್ರಾರಂಭಿಸಿದ್ದು, ಇದನ್ನು ಉಳಿದ ಬ್ಯಾಂಕುಗಳು ಕೂಡ ಅನುಸರಿಸತಕ್ಕದ್ದು.

19. ಅದೇ ರೀತಿ ಪಿಕಾರ್ಡ್ ಬ್ಯಾಂಕುಗಳೂ ಕೂಡ ದೀರ್ಘಾವಧಿ ಸಾಲ ವಿತರಣೆ/ ವಸೂಲಾತಿ ಸಂದರ್ಭದಲ್ಲಿ ಯಶಸ್ವಿನಿ ವಾರ್ಷಿಕ ವಂತಿಗೆಯ ಹಣವನ್ನು ಸಾಲಗಾರರ ಕುಟುಂಬದ ಪ್ರತಿಯೊಬ್ಬ ಅರ್ಹ ಸದಸ್ಯರಿಂದ ಕಡ್ಡಾಯವಾಗಿ ಪಡೆಯಬೇಕು.

20. ಹಾಲು ಉತ್ಪಾದಕರ ಸಹಕಾರ ಸಂಘಗಳು, ಸಹಕಾರಿ ಸಕ್ಕರೆ ಕಾರ್ಖಾನೆಗಳು, ಸಹಕಾರಿ ನೂಲಿನ ಗಿರಣಿಗಳು ಇತ್ಯಾದಿ ಸಹಕಾರಿ ಸಂಘಗಳು ಅವರ ಸದಸ್ಯರಿಗೆ ಹಣ ಪಾವತಿ ಮಾಡುವಾಗ ಅಂತಹ

ಸದಸ್ಯರ ಕುಟುಂಬದ ಎಲ್ಲಾ ಅರ್ಹ ವ್ಯಕ್ತಿಗಳ ಹೆಸರಿನಲ್ಲಿ ಯಶಸ್ವಿನಿ ವಂತಿಗೆ ಹಣವನ್ನು ಕಡ್ಡಾಯವಾಗಿ ಪಡೆಯಬೇಕು. ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬದ ಯಾವುದೇ ಸದಸ್ಯರು ಸರ್ಕಾರಿ ನೌಕರನಾಗಿ ಅಥವಾ ಖಾಸಗಿ ಕಂಪನಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಬೇರೆ ಯಾವುದೇ ಆರೋಗ್ಯ ವಿಮಾ ಯೋಜನೆಯ ಸೌಲಭ್ಯಕ್ಕೆ ಅರ್ಹನಾಗಿದ್ದಲ್ಲಿ, ಅಂತಹವರನ್ನು ಯಶಸ್ವಿನಿ ಯೋಜನೆಯ ಫಲಾನುಭವಿಯಾಗಿ ನೋಂದಾಯಿಸ ಬಾರದು. ಆದಾಗ್ಯೂ ಯಾವುದೇ ಕಾರಣಕ್ಕಾಗಿ ನೋಂದಾಯಿಸಿದರೂ ಅವರು ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗುವುದಿಲ್ಲ.

21. ಸುವರ್ಣ ಆರೋಗ್ಯ ಚೈತನ್ಯ ಯೋಜನೆಯು ಫಲಾನುಭವಿಗಳಿಗೆ ಹೆಚ್ಚು ಪ್ರಯೋಜನಕಾರಿ ಇರುವುದರಿಂದ ಹಾಗೂ ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯು ಜಾರಿಯಲ್ಲಿರುವ ಜಿಲ್ಲೆಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ವಂತಿಗೆ ಹಣವನ್ನು ಸರ್ಕಾರವೇ ಭರಿಸುವುದರಿಂದ ಆ ಯೋಜನೆಯ ಸೌಲಭ್ಯವನ್ನು ಅವರು ಪಡೆಯಬಹುದಾಗಿದೆ. ಆದರೆ ಯಶಸ್ವಿನಿ ಯೋಜನೆಯು ಅಂಥ ವರಿಗೆ ಹೆಚ್ಚು ಪ್ರಯೋಜನಕಾರಿ ಎನಿಸಿದಲ್ಲಿ ಅವರು ಆ ಯೋಜನೆಯಲ್ಲಿ ದೊರಕದ ಚಿಕಿತ್ಸೆ ಸೌಲಭ್ಯ ಪಡೆಯಲು ಇಚ್ಛಿಸಿದಲ್ಲಿ, ಯಶಸ್ವಿನಿ ಯೋಜನೆಯಡಿ ನೋಂದಾಯಿಸಿಕೊಳ್ಳ ಬಹುದು. ಆದರೆ, ಯಶಸ್ವಿನಿ ಯೋಜನೆಯ ನಿಯಮಗಳ ಪ್ರಕಾರ ನೋಂದಾವಣೆ ಅರ್ಹತೆಯನ್ನು ಅವರು ಹೊಂದಿರಬೇಕು ಮತ್ತು ವಂತಿಗೆ ಹಣವನ್ನು ಕಡ್ಡಾಯವಾಗಿ ಪಾವತಿ ಮಾಡಬೇಕು.

22. ರಾಜ್ಯದಲ್ಲಿ ಹಾಲು ಉತ್ಪಾದಕರ ಒಕ್ಕೂಟಗಳು ಮತ್ತು ಕೆಲವು ಸಹಕಾರ ಸಂಘ/ಸಂಸ್ಥೆಗಳು ಅವುಗಳ ಸದಸ್ಯರ ಯಶಸ್ವಿನಿ ವಂತಿಗೆಯಲ್ಲಿ ಭಾಗಶಃ ಹಣವನ್ನು ಸಹಕಾರ ಸಂಘದ ಸ್ವಂತ ಬಂಡವಾಳದಿಂದ ಭರಿಸುತ್ತಿವೆ. ಈ ಪದ್ಧತಿಯನ್ನು ರಾಜ್ಯದ ಎಲ್ಲಾ ಸಹಕಾರ ಸಂಘ/ ಸಂಸ್ಥೆಗಳೂ ಕೂಡ ಅನುಸರಿಸುವಂತೆ ಸೂಚಿಸಲಾಗಿದೆ.

23. ಲಾಭಗಳಿಸುತ್ತಿರುವ ಸಹಕಾರ ಸಂಘಗಳು ಅವು ಗಳಿಸಿದ ಲಾಭದ ಶೇ.3 ರಷ್ಟು ಹಣವನ್ನು ಯಶಸ್ವಿನಿ ಟ್ರಸ್ಟಿಗೆ ದೇಣಿಗೆ ರೂಪದಲ್ಲಿ ಪಾವತಿ ಮಾಡುವ ಬಗ್ಗೆ ಸರ್ಕಾರ ಮತ್ತು ಸಹಕಾರ ಸಂಘಗಳ ನಿಬಂಧಕರಿಂದ ಸುತ್ತೋಲೆ ಹೊರಡಿಸಲಾಗಿದ್ದು, ಆ ಪ್ರಕಾರ ಕಟ್ಟುನಿಟ್ಟಾಗಿ ಕ್ರಮ ಕೈಕೊಳ್ಳತಕ್ಕದ್ದು. ಯಶಸ್ವಿನಿ ಟ್ರಸ್ಟಿಗೆ ಪಾವತಿ ಮಾಡಿದ ದೇಣಿಗೆಗೆ ಆದಾಯ ತೆರಿಗೆ ಅಧಿನಿಯಮದ ಪ್ರಕರಣ 80 ಜಿ ಅಡಿಯಲ್ಲಿ ತೆರಿಗೆ ರಿಯಾಯಿತಿ ನೀಡಲಾಗಿದ್ದು, ಈ ಸೌಲಭ್ಯವನ್ನು ಆದಾಯ ತೆರಿಗೆ ಪಾವತಿ ಮಾಡುವ ಸಹಕಾರ ಸಂಘಗಳು ಉಪಯೋಗಿಸಿಕೊಳ್ಳಬೇಕು.
24. 2009–10ನೇ ಸಾಲಿನಲ್ಲಿ ಕೆಲವು ಸದಸ್ಯರು ಯಶಸ್ವಿನಿ ವಂತಿಗೆ ಹಣವನ್ನು ಸಹಕಾರ ಸಂಘಕ್ಕೆ ಪಾವತಿ ಮಾಡಿದ್ದು, ಫೋಟೋ ಇತ್ಯಾದಿ ಅವಶ್ಯಕ ಮಾಹಿತಿಯನ್ನು ಒದಗಿಸದೆ ಇದ್ದ ಕಾರಣದಿಂದ ಉಪಯೋಗಿಸದೆ ಸಹಕಾರ ಸಂಘದಲ್ಲಿ ಬಾಕಿ ಉಳಿದಿದ್ದ ವಂತಿಗೆ ಹಣವನ್ನು ಸದರಿ ಸಹಕಾರ ಸಂಘವು ಯಶಸ್ವಿನಿ ಟ್ರಸ್ಟಿಗೆ ನೀಡಿದ ದೇಣಿಗೆಯೆಂದು ಪರಿಗಣಿಸತಕ್ಕದ್ದು.
25. 2010–11ನೇ ಸಾಲಿನ ಯಶಸ್ವಿನಿ ಯೋಜನೆಯ ಅವಧಿಯು ದಿನಾಂಕ: 01.06.2010 ರಿಂದ ಪ್ರಾರಂಭವಾಗಿ 2011ರ ಮೇ 31ಕ್ಕೆ ಮುಗಿಯುತ್ತದೆ. ಆದ ಕಾರಣ ಈ ಸುತ್ತೋಲೆ ಅನ್ವಯ ಹೊಸದಾಗಿ ನೋಂದಾವಣೆಯಾಗುವ/ಸೇರ್ಪಡೆಯಾಗುವ ಫಲಾನುಭವಿಗಳು ಯಶಸ್ವಿನಿ ಯೋಜನೆಯ ಸೌಲಭ್ಯವನ್ನು ದಿನಾಂಕ: 01.06.2010 ರಿಂದ ಜಾರಿಗೆ ಬರುವಂತೆ ಮಾತ್ರ ಪಡೆಯಲು ಅರ್ಹರಾಗುತ್ತಾರೆ. ಆದ್ದರಿಂದ ಸಹಕಾರ ಸಂಘಗಳು ನೀಡುವ ವಂತಿಗೆ ಹಣ ಸ್ವೀಕೃತಿ ರಶೀದಿ/ಫಲಾನುಭವಿಗಳಿಗೆ ನೀಡುವ ನೋಂದಾವಣೆ ನಮೂನೆ ಭಾಗದ ಪ್ರತಿಯಲ್ಲಿ ಈ ಮೇಲಿನ ಅಂಶವನ್ನು ಸ್ಪಷ್ಟವಾಗಿ ಬರೆಯಬೇಕು ಮತ್ತು ತಿಳುವಳಿಕೆಯನ್ನು ಕೂಡ ಫಲಾನುಭವಿಗೆ ನೀಡಬೇಕು.

ಇತರೆ ವಿಷಯಗಳ ಬಗ್ಗೆ ಈ ಮೊದಲು ನೀಡಲಾದ ಸುತ್ತೋಲೆಗಳಲ್ಲಿ ಮೇಲಿನ ನಿಯಮಗಳಿಗೆ ವಿರುದ್ಧವಲ್ಲದ ಮಾರ್ಗಸೂಚಿ ನಿಯಮಗಳನ್ನು ಪಾಲಿಸುವಂತೆ ಸೂಚಿಸಲಾಗಿದೆ. ಯಶಸ್ವಿನಿ ಯೋಜನೆಯ ಮಾರ್ಗಸೂಚಿಗಳ ಬಗ್ಗೆ ತಿಳುವಳಿಕೆ ನೀಡಲು ಆಯಾ ಪ್ರಾಂತದ ಸಹಕಾರ

ಸಂಘಗಳ ಜಂಟಿ ನಿಬಂಧಕರು ಅವರ ವ್ಯಾಪ್ತಿಯ ಇಲಾಖಾಧಿಕಾರಿಗಳ, ಜಿಲ್ಲಾ ಸಹಕಾರ ಬ್ಯಾಂಕ್‌ಗಳ, ಹಾಲು ಉತ್ಪಾದಕರ ಒಕ್ಕೂಟಗಳ ಮತ್ತು ಇತರೆ ಪ್ರಮುಖ ಸಹಕಾರ ಸಂಘ/ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯನ್ನು ಪ್ರಾಂತಮಟ್ಟದಲ್ಲಿ ನಿರ್ವಹಿಸಲು ಸೂಚಿಸಿದೆ. ನಂತರ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರುಗಳು, ಅವರ ಜಿಲ್ಲೆಯ ಎಲ್ಲಾ ಗ್ರಾಮೀಣ ಸಹಕಾರ ಸಂಘಗಳ ಅಧ್ಯಕ್ಷರ ಮತ್ತು ಕಾರ್ಯದರ್ಶಿಯವರ, ಸ್ತ್ರೀಶಕ್ತಿ ಗುಂಪು/ಸ್ವಸಹಾಯ ಗುಂಪು ಮತ್ತು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳ ಸಭೆ ಕರೆದು ಕಾರ್ಯಾಗಾರ ಏರ್ಪಡಿಸಿ ಯೋಜನೆಯ ಮಾರ್ಗಸೂಚಿ ನಿಯಮಗಳು, ಇತಿಮಿತಿಗಳು ಮತ್ತು ಯೋಜನೆಯಿಂದ ಲಾಭ ಪಡೆಯುವವರ ಬಗ್ಗೆ ಮಾಹಿತಿಯನ್ನು ನೀಡಿ, ತೆಗೆದುಕೊಂಡ ಕ್ರಮದ ಬಗ್ಗೆ ದಿನಾಂಕ: 31.03.2010 ರೊಳಗೆ ವರದಿಯನ್ನು ಸಹಕಾರ ಸಂಘಗಳ ನಿಬಂಧಕರು ಮತ್ತು ಸರಕಾರಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

ಟ್ರ್ಯಾಕ್ಟರ್‌ಗೆ ಸಹಾಯಧನ

553 (764) ಶ್ರೀ ರುದ್ರೇಶಗೌಡ ವೈ.ಎನ್. (ಬೇಲೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಇಲಾಖೆವತಿಯಿಂದ ಟ್ರಾಕ್ಟರ್ ಕೊಂಡುಕೊಳ್ಳುವ ರೈತರಿಗೆ ಸಹಾಯಧನ (ಸಬ್ಸಿಡಿ) ನೀಡುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ, ರಾಜ್ಯದಲ್ಲಿ ಎಷ್ಟು ಟ್ರ್ಯಾಕ್ಟರ್‌ಗಳಿಗೆ ಸಹಾಯಧನ ನೀಡಲಾಗಿದೆ;

ಇ) ಟ್ರ್ಯಾಕ್ಟರ್ ಸಹಾಯಧನಕ್ಕಾಗಿ ಎಷ್ಟು ಅರ್ಜಿಗಳು ಬಂದಿರುತ್ತವೆ (ಜಿಲ್ಲಾವಾರು ವಿವರ ನೀಡುವುದು); ಅವುಗಳಲ್ಲಿ ಎಷ್ಟು ಜನರಿಗೆ ಟ್ರ್ಯಾಕ್ಟರ್ ಸಹಾಯಧನ ಮಂಜೂರು ಮಾಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು);

ಈ) ಉಳಿದ ಅರ್ಹ ಫಲಾನುಭವಿಗಳಿಗೆ ಟ್ರ್ಯಾಕ್ಟರ್ ಸಹಾಯಧನ (ಸಬ್ಸಿಡಿ) ನೀಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) :

ಅ) ಹೌದು.

ಕೃಷಿ ಇಲಾಖೆ ವತಿಯಿಂದ ಭಾರತ ಸರ್ಕಾರದಿಂದ ಅನುಮೋದಿಸಲ್ಪಟ್ಟ ಟ್ರ್ಯಾಕ್ಟರ್ ಮಾದರಿಗಳನ್ನು ಖರೀದಿಸುವ ರೈತರಿಗೆ ಸಹಾಯಧನ (ಸಬ್ಸಿಡಿ) ಒದಗಿಸಲಾಗುತ್ತಿದೆ.

ಆ) 2009–10ನೇ ಸಾಲಿನಲ್ಲಿ ಈವರೆಗೆ ಒಟ್ಟು 1657 ಟ್ರಾಕ್ಟರ್‌ಗಳಿಗೆ ಸಹಾಯಧನವನ್ನು ಒದಗಿಸಲಾಗಿದೆ.

ಇ) 2009–10ನೇ ಸಾಲಿನಲ್ಲಿ ಟ್ರ್ಯಾಕ್ಟರ್ ಸಹಾಯಧನಕ್ಕಾಗಿ 7206 ಅರ್ಜಿಗಳು ಬಂದಿರುತ್ತವೆ. ಅವುಗಳಲ್ಲಿ 1657 ಫಲಾನುಭವಿಗಳಿಗೆ ಟ್ರ್ಯಾಕ್ಟರ್ ಸಹಾಯಧನ ಮಂಜೂರು ಮಾಡಲಾಗಿದೆ. (ಅನುಬಂಧದಲ್ಲಿ ಜಿಲ್ಲಾವಾರು ವಿವರ ನೀಡಲಾಗಿದೆ.)

ಈ) ಕೇಂದ್ರ ಸರ್ಕಾರದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಟ್ರ್ಯಾಕ್ಟರ್‌ಗಳಿಗೆ ಸಹಾಯಧನ ನೀಡುವುದನ್ನು ಹಿಂಪಡೆದಿರುವುದರಿಂದ ಅನುದಾನದ ಕೊರತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಉಳಿದ 5549 ಫಲಾನುಭವಿಗಳಿಗೆ ಟ್ರಾಕ್ಟರ್ ಸಹಾಯಧನ (ಸಬ್ಸಿಡಿ) ಒದಗಿಸಲು ಆರ್ಥಿಕ ಇಲಾಖೆಗೆ ಹೆಚ್ಚುವರಿ ಅನುದಾನ ಬಿಡುಗಡೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಅನುಬಂಧ

2009–10 ನೇ ಸಾಲಿನ ರಾಜ್ಯದಲ್ಲಿ ಟ್ರ್ಯಾಕ್ಟರ್ ವಿತರಣೆಯ ವಿವರ

ಕ್ರ ಸಂ.	ಜಿಲ್ಲೆ	ಒಟ್ಟು ಬಂದಿರುವ ಅರ್ಜಿಗಳ ಸಂಖ್ಯೆ	ಸಹಾಯಧನ ವಿತರಿಸಿರುವ ಅರ್ಜಿಗಳ ಸಂಖ್ಯೆ	ಬಾಕಿ ಇರುವ ಅರ್ಜಿಗಳ ಸಂಖ್ಯೆ
1	ಬೆಂಗಳೂರು (ನ)	66	7	59
2	ಬೆಂಗಳೂರು (ಗ್ರಾ)	56	8	48
3	ರಾಮನಗರ	104	63	41
4	ಕೋಲಾರ	441	207	234
5	ಚಿಕ್ಕಬಳ್ಳಾಪುರ	168	53	115
6	ತುಮಕೂರು	375	55	320
7	ಶೀವಮೊಗ್ಗ	274	67	207
8	ಚಿತ್ರದುರ್ಗ	225	64	161
9	ದಾವಣಗೆರೆ	717	81	636

10	ಮೈಸೂರು	231	62	169
11	ಚಾಮರಾಜನಗರ	27	8	19
12	ಮಂಡ್ಯ	124	61	63
13	ಕೊಡಗು	26	13	13
14	ಹಾಸನ	259	34	225
15	ಚಿಕ್ಕಮಗಳೂರು	110	37	73
16	ದಕ್ಷಿಣ ಕನ್ನಡ	7	5	2
17	ಉಡುಪಿ	6	3	3
18	ಧಾರವಾಡ	261	45	216
19	ಗದಗ	259	53	206
20	ಹಾವೇರಿ	353	0	353
21	ಉತ್ತರ ಕನ್ನಡ	23	10	13
22	ಬೆಳಗಾವಿ	300	74	226
23	ವಿಜಾಪುರ	200	81	119
24	ಬಾಗಲಕೋಟೆ	254	75	179
25	ರಾಯಚೂರು	1495	295	1200
26	ಕೊಪ್ಪಳ	407	92	315
27	ಬಳ್ಳಾರಿ	188	24	164
28	ಗುಲ್ಬರ್ಗಾ	192	34	158
29	ಬೀದರ್	58	46	12
	ಒಟ್ಟು	**7206**	**1657**	**5549**

ಮಿನಿ ವಿಧಾನಸೌಧ ಹಾಗೂ ಸೇತುವೆ ನಿರ್ಮಾಣ ಕಾಮಗಾರಿಗಳು ಕುಂಠಿತಗೊಂಡಿರುವುದು

554 (18) ಶ್ರೀ ಸತ್ಯನಾರಾಯಣ.ಎಂ (ಚಾಮುಂಡೇಶ್ವರಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನಲ್ಲಿ ನಿರ್ಮಿಸುತ್ತಿರುವ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಎಂದು ಪೂರ್ಣಗೊಳಿಸಲಾಗುವುದು;

ಆ) ಈ ಕಟ್ಟಡ ನಿರ್ಮಾಣ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿರುವುದಕ್ಕೆ ಕಾರಣಗಳೇನು;

ಇ) ಕಟ್ಟಡ ನಿರ್ಮಾಣ ಕಾಮಗಾರಿಗೆ ಅನುದಾನದ ಕೊರತೆಯೇನಾದರೂ ಇದೆಯೇ; ಕಟ್ಟಡ ನಿರ್ಮಾಣ ಕಾಮಗಾರಿಗೆ ಪಾವತಿಸಬೇಕಾದ ಮೊತ್ತದ ಬಿಲ್ಲು ಬಾಕಿ ಇದೆಯೇ; ಹಾಗಿದ್ದಲ್ಲಿ ಎಷ್ಟು ಮೊತ್ತ ಬಾಕಿ ಇದೆ; ಮಾಹಿತಿಯನ್ನು ನೀಡುವುದು;

ಈ) ಮೈಸೂರು ತಾಲ್ಲೂಕು ಸಾಗರಕಟ್ಟೆ ಹತ್ತಿರ ಕೆ.ಆರ್.ಡಿ.ಸಿ.ಎಲ್ ವತಿಯಿಂದ ನಿರ್ಮಿಸುತ್ತಿರುವ ಬೃಹತ್ ಸೇತುವೆ ನಿರ್ಮಾಣ ಕಾಮಗಾರಿಯು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕಾಮಗಾರಿ ಸ್ಥಗಿತಗೊಂಡಿರುವುದಕ್ಕೆ ಕಾರಣಗಳೇನು; ಹಾಗೂ ಈ ಕಾಮಗಾರಿಯನ್ನು ಎಂದು ಪೂರ್ಣಗೊಳಿಸಲಾಗುವುದು; (ಪೂರ್ಣ ಮಾಹಿತಿಯನ್ನು ನೀಡುವುದು)?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮೈಸೂರಿನಲ್ಲಿ ನಿರ್ಮಿಸುತ್ತಿರುವ ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಮೇ 2010ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಆ) ಕಟ್ಟಡದ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿಲ್ಲ. ಆದರೆ, ಸದರಿ ಕಾಮಗಾರಿಯನ್ನು ಪ್ರಧಾನ ಮುಖ್ಯ ವಾಸ್ತು ಶಿಲ್ಪಿಗಳು ನೀಡಿರುವ ನಕ್ಷೆಗಳಂತೆ ಹಾಗೂ ಕಾಮಗಾರಿ ಸ್ಥಳಕ್ಕೆ ಅನುಗುಣವಾಗಿ ಸಿದ್ಧಪಡಿಸಿದ ತಾಂತ್ರಿಕ ವಿನ್ಯಾಸ ನಕ್ಷೆಯಂತೆ, ಕೆಲಸ ನಿರ್ವಹಿಸಲಾಗುತ್ತಿದೆ.

ಇ) ಸದರಿ ಕಾಮಗಾರಿಗೆ ಸಂಬಂಧಿಸಿದಂತೆ, ಮಾರ್ಚ್ ತಿಂಗಳಲ್ಲಿ ರೂ.16.00 ಲಕ್ಷಗಳ ಬಿಲ್ ಬಾಕಿ ಇದ್ದು, ಸದರ ಮೊತ್ತವನ್ನು ಹಣ ಭರವಸೆ ಪತ್ರ ಬಿಡುಗಡೆಯನ್ನಾಧರಿಸಿ ಪಾವತಿಸಲಾಗುವುದು.

ಈ) ಬಂದಿದೆ.

ಕೆ.ಆರ್.ಎಸ್. ಅಣೆಕಟ್ಟೆಯಲ್ಲಿನ ಹಿನ್ನೀರಿನ ಮಟ್ಟ ಹೆಚ್ಚಾದ್ದರಿಂದ ಕಾಮಗಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಹಿನ್ನೀರಿನ ಮಟ್ಟ ಕಡಿಮೆಯಾದ ನಂತರ ಆರ್.ಸಿ.ಸಿ. ಕಂಬ ಮತ್ತು ಸಬ್‌ಸ್ಟ್ರಕ್ಚರ್‌ಗಳನ್ನು ಪ್ರಾರಂಭಿಸಿ ಅನುದಾನದ ಲಭ್ಯತೆಯನ್ನು ಆಧರಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಪಡಿತರ ಚೀಟಿ

555 (996) ಶ್ರೀ ಶಿವಶಂಕರ ರೆಡ್ಡಿ ಎನ್. ಹೆಚ್ (ಗೌರಿಬಿದನೂರ) : ಮಾನ್ಯ ಆಹಾರ, ನಾಗರಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಡಿತರ ಚೀಟಿಯ ಪೂರೈಕೆ ಹಾಗೂ ವಿತರಣೆ ಸಕ್ರಮವಾಗಿ ವಿತರಣೆ ಆಗಿದೆಯೇ;

ಆ) ಇನ್ನು ಕೈಬಿಟ್ಟಿರುವ ಕುಟುಂಬಗಳಿಗೆ ಯಾವಾಗ ಪೂರೈಕೆ ಮಾಡಲಾಗುವುದು;

ಪಡಿತರದಾರರ ಹೆಸರು ವಿಳಾಸ, ಪ್ರತಿ ಎಫ್.ಪಿ.ಡಿ. ಕೇಂದ್ರಗಳಲ್ಲಿ ಪ್ರಕಟಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತೆಗೆದುಕೊಂಡಿರುವ ಕ್ರಮವೇನು;

ಇ) ಸುಮಾರು ಕೇಂದ್ರಗಳಲ್ಲಿ ಆಹಾರ ಪದಾರ್ಥಗಳನ್ನು 2–3 ರಿಂದ ವಿತರಿಸಿ ಮುಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದ್ದಲ್ಲಿ, ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಹಾಲಪ್ಪ (ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಹೌದು.

ಆ) ಪ್ರಸ್ತುತ ಖಾಯಂ ಗಣಕೀಕೃತ ಪಡಿತರ ಚೀಟಿ ವಿತರಣೆ ರಾಜ್ಯಾದ್ಯಂತ ನಡೆಯುತ್ತಿದ್ದು, ಬಿಟ್ಟು ಹೋಗಿರುವರು ತಾಲ್ಲೂಕು ಮಟ್ಟದಲ್ಲಿ ಬ್ಯಾಕ್ ಆಫೀಸ್‌ಗಳನ್ನು ಸಂಪರ್ಕಿಸಿ ತಮ್ಮ ಪಡಿತರ ಚೀಟಿಯನ್ನು ಪಡೆಯಬಹುದಾಗಿದೆ.

ಹೌದು.

ಪ್ರಸ್ತುತ ಖಾಯಂ ಗಣಕೀಕೃತ ಪಡಿತರ ಚೀಟಿ ವಿತರಣೆ ರಾಜ್ಯಾದ್ಯಂತ ನಡೆಯುತ್ತಿದ್ದು, ಪ್ರಕ್ರಿಯೆ ಮುಗಿದ ನಂತರ ದತ್ತಾಂಶವನ್ನು ಕ್ರೋಢೀಕರಿಸಿ, ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಚೀಟಿದಾರರ ವಿವರಗಳನ್ನು ಪ್ರಕಟಿಸಲಾಗುವುದು.

ಇ) ಹೌದು.

ಎಲ್ಲಾ ನ್ಯಾಯಬೆಲೆ ಅಂಗಡಿಗಳಿಗೆ ತಿಂಗಳ ಪೂರ್ತಿ ಬಾಗಿಲು ತೆರೆಯಲು ಹಾಗೂ ಪಡಿತರ ಚೀಟಿದಾರರಿಗೆ ಪಡಿತರ ವಿತರಣೆ ಮಾಡಲು

ಆದೇಶ ನೀಡಲಾಗಿದೆ. ಮೇಲುಸ್ತುವಾರಿ ಮಾಡಲು ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿ 7 ಜನ ಸದಸ್ಯರ ಜಾಗೃತಿ ಸಮಿತಿಯನ್ನು ರಚಿಸಿ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಹಾರ ಖಾತರಿ ಸಮಿತಿ ಹಾಗೂ ಜಿಲ್ಲಾ ಮಟ್ಟದಲ್ಲಿ ಆಹಾರ ಭದ್ರತಾ ಸಮಿತಿಯನ್ನು ರಚಿಸಲಾಗಿದೆ.

ರಸ್ತೆಗಳನ್ನು ಬೇಗ ಅಭಿವೃದ್ಧಿಪಡಿಸುವುದು

557 (998) ಶ್ರೀ ಸಿದ್ದು ಸವದಿ (ತೆರದಾಳ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೇಶಿಪ್ ಯೋಜನೆ ಯಾವಾಗಿನಿಂದ ಪ್ರಾರಂಭವಾಯಿತು; ಈಗಾಗಲೇ ಎಷ್ಟು ರಸ್ತೆಗಳನ್ನು ಈ ಯೋಜನೆಯಡಿ ಅಭಿವೃದ್ಧಿಪಡಿಸಲಾಗಿದೆ (ಜಿಲ್ಲಾವಾರು, ರಸ್ತೆಯ ಹೆಸರು ಸಹಿತ ಪೂರ್ಣ ಮಾಹಿತಿ ನೀಡುವುದು);

ಆ) ಜಮಖಂಡಿ, ಖಾಗವಾಡ ಮತ್ತು ಮುಧೋಳ ನಿಪ್ಪಾಣಿ ಈ ಎರಡೂ ರಸ್ತೆಗಳು ಕೇಶಿಪ್ ಯೋಜನೆಯಲ್ಲಿ ಇದ್ದು, ಯಾವಾಗ ಪ್ರಾರಂಭಿಸಲಾಗುವುದು;

ಇ) ಅಲ್ಲಿಯವರೆಗೆ, ಈ ರಸ್ತೆಗಳನ್ನು ಯಾವ ಅನುದಾನದಲ್ಲಿ ಧುರಸ್ತಿ ಮಾಡಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದಲ್ಲಿ ಕೆಶಿಪ್ ಯೋಜನೆಯನ್ನು 2001 ರಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆ ಅಡಿಯಲ್ಲಿ 2395 ಕಿಮೀ. ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಜಮಖಂಡಿಯಿಂದ ತೇರುದಾಳ–ಕುಡುಚಿ–ಮನಗಸುಳಿ–ಮಹಾರಾಷ್ಟ್ರ ಗಡಿವರೆಗಿನ 79 ಕಿಮೀ. ರಸ್ತೆ ಹಾಗೂ ಮುಧೋಳದಿಂದ ಮಾಲಿಂಗಪುರ ಕಬ್ಬೂರು ಮಾರ್ಗವಾಗಿ ನಿಪ್ಪಾಣಿವರೆಗಿನ 104 ಕಿಮೀ. ರಸ್ತೆ ಅಭಿವೃದ್ಧಿಯನ್ನು ಕೆಶಿಫ್–II ಯೋಜನೆ ಅಡಿಯಲ್ಲಿ ಸೇರಿಸಲಾಗಿದೆ.

ಸದರಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಯನ್ನು ಮುಂದಿನ ಎರಡನೇ ಅಥವಾ ಮೂರನೇ ಹಂತದಲ್ಲಿ ಏಷಿಯನ್ ಅಭಿವೃದ್ಧಿ ಬ್ಯಾಂಕ್ ಅಥವಾ ಸ್ಥಳೀಯ ಹಣಕಾಸು ಸಂಸ್ಥೆಗಳ ಅಥವಾ ಖಾಸಗಿ ಬಂಡವಾಳ ಹೂಡಿಕೆಯ ಯೋಜನೆಗಳಲ್ಲಿ ತೆಗೆದುಕೊಳ್ಳಲಾಗುತ್ತದೆ. ಈ ವಿಷಯದಲ್ಲಿ ಅಧ್ಯಯನಗಳನ್ನು ಕೈಗೊಳ್ಳಲಾಗುತ್ತಿದ್ದು ಒದಗಿ ಬರಬಹುದಾದ ಆರ್ಥಿಕ ಸಂಪನ್ಮೂಲಕ್ಕೆ ಅನುಸಾರವಾಗಿ ಸೂಕ್ತವಾದ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಲಾಗುತ್ತಿದೆ.

ಇ) ಸದರಿ ರಸ್ತೆಗಳು ಕೆಶಿಫ್‌ಗೆ ಹಸ್ತಾಂತರವಾಗುವವರೆಗೆ ಲೋಕೋಪಯೋಗಿ ಇಲಾಖೆಯ ನಿರ್ವಹಣಾ ಅನುದಾನದಲ್ಲಿ ದುರಸ್ತಿ ಮಾಡಲಾಗುವುದು.

ಅನುಬಂಧ – 1

KSHIP- KARNATAKA STATE HIGHWAYS IMPROVEMENT PROJECT				
DISTRICT WISE – PACKAGES & LENGTHS				
S. No	**Package**	**From**	**To**	**Length (Km)**
I	**Bidar district**			
1	U3	Hattigudur	Bidar	58.75
II	**Gulbarga district**			
1	U3	Hattigudur	Bidar	129.68
2	M13	Lingsugur	Hattigudur	38.30
III	**Raichur district**			
1	U1	Kalmala Junction	Sindhanur	76.30
2	U2	Sindhanur	Budugumpa	21.75
3	U5	AP Border	Kalmala Junction	31.00
4	BP1	Raichur Bypass Road		7.50
5	M1	Mudgal	Hungund	12.17
6	M11	Devinagar	Sindhnur	20.00

7	M12	Sindhanur	Lingsugur	52.00
8	M13	Lingsugur	Hattigudur	30.00
9	M30	Kalmala Junction	Kavital	50.00
10	M31	Kavital	Mudgal	51.50
IV	**Koppal district**			
1	U2	Sindhanur	Budugumpa	55.79
2	M34	Ron	Kushtagi	19.00
V	**Bellary district**			
1	U11	Hiriyur	Bellary	23.30
2	M10	Bellary	Devinagar	39.50
3	M11	Devonagar	Sindhnur	22.00
4	M14	Matiyam manhalli	Ittigi	46.90
VI	**Bijapur district**			
1	U4	Bijapur	Tikota	20.00
2	U7A	Bijapur	Krishna Bridge	36.70
3	BP2	Bijapur Bypass Road		6.50
4	M2	Tikota	Badachi	16.00
VII	**Bagalkot district**			
1	U7A	Bijapur	Krishna Bridge	11.30
2	U7B	Krishna Bridge	Lokapur	55.50
3	U8	Hungund	Belgaum	79.25
4	M1	Mudgal	Hungund.	27.50
VIII	**Belgaum district**			
1	U6	Sankesh war	Yaragatti	73.00
2	U8	Hungund	Belgaum	91.39

3	M2	Tikota	Badachi	27.00
4	M3	Badachi	Shedbal	49.00
5	M4	Shedbal	Sankeshwar	55.50
6	M4A	Shedbal	Sankeshwar	2.20
7	M4R	Shedbal	Sankeshwar	3.50
8	M29	Yaragatti	Hulikatti	30.00
9	U9	Khanapur	Alnawar	35.00
10	U10	Hulikatti	Nargund	12.15
IX	**Gadag district**			
1	U10	Hulikatti	Nargund	8.36
2	M33	Naval gund	Ron	22.36
3	M34	Ron	Kushtagi	33.50
X	**Dharwad district**			
1	M24	Alnawar	Yellapur	4.18
2	M33	Naval gund	Ron	22.00
XI	**Uttar Kannada district**			
1	M24	Alnawar	Yellapur	52.92
2	M25	Yellapur	Sirsi	50.30
3	M26	Sirsi	Mavingundi	49.89
4	M27	Kumbarva da	Sadashivgarh	52.00
5	M28	Ramnaga ra (Londa)	Kumbarvada	57.00
XII	**Mysore district**			
	M32	Mysore	Kerala Border	90.00
XIII	**Mandya district**			
	M5	Sriranga pattna	Chinya	32.00
	M6	Chinya	Nelligere	32.90
	M7	Nelligere	Kibbanahalli	9.01

XIV	**Tumkur district**			
1	M7	Nelligere	Kibbanahalli	38.00
2	M8	Kibbanaha lli	Huliyar	36.40
3	M9	Huliyar	Hiriyur	8.57
XV	**Chitradurga district**			
1	U11	Hiriyur	Bellary	120.00
2	M9	Huliyar	Hiriyur	40.15
XVI	**Davangere district**			
1	M14	Mariyam manhalli	Ittigi	5.80
2	M15	Ittagi	Harihar	53.68
3	M16	Harihar	Honnali	37.00
4	M17	Honnali	Shimoga	19.50
XVII	**Shimoga district**			
	M17	Honnali	Shimoga	21.68
XVIII	**Hassan district**			
1	M18	Belur	Chikmagalur	11.41
XIX	**Chikkamagalur district**			
1	M18	Belur	Chikmagalur	12.50
2	M19	Chikma galur	Tarikere	56.50
				2394.54
			Say	**2995.00**

ಗಣಕೀಕೃತ ಶಾಶ್ವತ ರೇಷನ್ ಕಾರ್ಡ್‌ಗಳ ಪೂರೈಕೆ

558 (999) ಶ್ರೀ ಸಿದ್ದು ಸವದಿ (ತೆರದಾಳ್) : ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಗಣಕೀಕೃತ ಶಾಶ್ವತ ರೇಷನ್ ಕಾರ್ಡ್‌ಗಳನ್ನು ವಿತರಿಸಲಾಗಿದೆ (ಜಿಲ್ಲಾವಾರು ಅಂಕಿ ಸಂಖ್ಯೆಗಳನ್ನು ನೀಡುವುದು);

ಆ) ಉಳಿದವುಗಳನ್ನು ಯಾವಾಗ ವಿತರಿಸಲಾಗುವುದು;

ಇ) ಇನ್ನೂ ಅನೇಕ ಜನರು ಸರ್ವೆಯಿಂದ ಅಥವಾ ಫೋಟೋದಿಂದ ಉಳಿದು ಹೋಗಿದ್ದು, ಅಂತಹ ಕುಟುಂಬಗಳ ಸರ್ವೆ ಯಾವಾಗ ಮಾಡಲಾಗುವುದು;

ಈ) ಅಕ್ಷಯ, ಅಂತ್ಯೋದಯ ಮತ್ತು ಎಪಿಎಲ್ ಕಾರ್ಡುಗಳು ಆಯಾ ವಿಧಾನ ಸಭಾ ಕ್ಷೇತ್ರವಾರು ಎಷ್ಟೆಷ್ಟು ಇವೆ ಎಂಬುದರ ಸಂಪೂರ್ಣ ಮಾಹಿತಿ ನೀಡುವುದು?

ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ರಾಜ್ಯದಲ್ಲಿ ದಿನಾಂಕ: 1–3–2010 ರವರೆಗೆ 59,88,366 ಶಾಶ್ವತ ಗಣಕೀಕೃತ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ.

ಗಣಕೀಕೃತ ಪಡಿತರ ಚೀಟಿ ವಿತರಣೆಯ ಕಾರ್ಯಕ್ರಮ ಜಾರಿಯಲ್ಲಿದ್ದು ಶೀಘ್ರದಲ್ಲಿ ಮುಕ್ತಾಯಗೊಳಿಸಲಾಗುವುದು. ಪಡಿತರ ಚೀಟಿದಾರರು ತಮ್ಮ ಪಡಿತರ ಚೀಟಿಯನ್ನು ಯಾವುದೇ ಕಾರಣಕ್ಕಾಗಿ ಪಡೆಯದೇ ಇದ್ದಲ್ಲಿ ಅಂತಹವರು ತಾಲ್ಲೂಕು ಮಟ್ಟದ ಬ್ಯಾಕ್ ಆಫೀಸ್ ಗಳಲ್ಲಿ ತಮ್ಮ ಪಡಿತರ ಚೀಟಿಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಇ) ಸರ್ವೆ ಮಾಡುವ ಯೋಜನೆ ಸದ್ಯಕ್ಕೆ ಇರುವುದಿಲ್ಲ. ಆದರೆ ಪಡಿತರ ಚೀಟಿದಾರರು ತಮ್ಮ ಫೋಟೋ ತೆಗೆಸಿಕೊಳ್ಳಲು ತಾಲ್ಲೂಕು ಮಟ್ಟದ ಬ್ಯಾಕ್ ಆಫೀಸ್‌ಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

ಈ) ಪಡಿತರ ಚೀಟಿ ವಿತರಣೆಯ ಕಾರ್ಯಪ್ರಗತಿಯಲ್ಲಿದೆ. ವಿಧಾನಸಭಾ ಕ್ಷೇತ್ರವಾರು ಮಾಹಿತಿಯನ್ನು ವಿತರಣೆ ಕಾರ್ಯ ಮುಗಿದ ನಂತರ ಕ್ರೋಡೀಕರಿಸಲಾಗುವುದು. ಚಾಲ್ತಿಯಲ್ಲಿರುವ ಪಡಿತರ ಚೀಟಿಗಳ ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ.

Annexure to LAQ 999

Sl. No.	Name of the District	AAY Cards	BPL Cards	No. of Nemmadi Coupons	Total BPL	APL Cards	Total Cards
	2	3	4	5	6	7	8
1	Bagalkot	47660	167577	74034	289271	176882	466153
2	Bangalore IRA	187[illegible]	231951	0	300720	832660	1133380
3	Bangalore Rural	15500	115330	63272	194102	68253	262355
4	Bangalore Urban	15898	308685	109439	434022	196048	630070
5	Belgaum	96677	470987	149871	717535	580742	1298277
6	Bellary	68486	187282	111419	365187	177595	542782
7	Bidar	45175	150791	88370	284336	189680	474016
8	Bijapur	56556	186047	129234	371837	172745	[illegible]
9	Chamarajnagar	36075	151901	49499	237475	72296	309771
10	Chickballapura	32789	171771	60838	265398	87431	352829
11	Chikkamagalur	23537	158679	43155	225371	82939	308310
12	Chitradurga	47378	234497	59164	341039	88639	429678
13	D.Kannada	15881	154635	6684	177200	205400	382600
14	Davanagere	53933	229643	110169	393745	138551	532296
15	Dharwad	32809	170687	101526	305022	149896	454918
16	Gadag	31737	107042	54720	193429	93391	286890
17	Gulbarga	104530	345593	224558	674681	296979	971660
18	Hassan	25098	302320	66167	393585	125825	519410
19	Haveri	50536	181349	81174	313058	100387	413445
20	Kodagu	6120	71469	12338	89935	63103	153038
21	Kolar	33127	197797	83576	314500	106824	421324
22	Koppal	42062	117135	92912	252109	95100	347209
23	Mandya	37209	272133	89070	398412	178699	577111
24	Mysore	51104	416605	117390	585099	174629	759728
25	Raichur	60279	157107	116220	333606	153096	486702
26	Ramanagar	20229	158679	34011	212919	90368	303287
27	Shimoga	41463	207908	63151	312522	151757	464279
28	Tumkur	56307	377656	86193	520156	194832	714988
29	Udupi	17873	90488	6188	114549	120341	234890
30	Uttara Kannada	16895	180916	35633	233444	132684	366128
	GRAND TOTAL	1199700	6324659	2319975	9844334	5297772	15142106

Annexure-to-LAG-999

Permanent Ration Card Distribution Report as on 1st Mar, 2010		
Sl. No.	**District Name**	**No. of Cards Distributed**
1	2	3
1	Bagalkote	178098
2	Bangalore Rural	91358
3	Bangalore Urban	135826
4	Belgaum	588949
5	Bellary	192466
6	Bidar	174905
7	Bijapur	133910
8	Chamarajanagar	131554
9	Chickmagalur	199475
10	Chitradurga	163391
11	Chikkaballapura	146627
12	Dakshina Kannada	341521
13	Davanagere	207820
14	Dharwad	179496
15	Gadag	113394
16	Gulbarga	317361
17	Hassan	288799
18	Haveri	170380
19	Kodagu	113024
20	Kolar	64835
21	Koppal	106082
22	Mandya	251502
23	Mysore	526204
24	Raichur	145573

25	Ramanagar	60515
26	Shimoga	273555
27	Tumkur	332950
28	Udupi	192578
29	Uttara Kannada	166218

ನೇಕಾರರರಿಗೆ ಶೇ. 3 ರ ಬಡ್ಡಿ ರಿಯಾಯಿತಿ ಸಾಲ

559 (1000) ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನೇಕಾರರಿಗೆ ಶೇಕಡಾ 3 ರಷ್ಟು ರಿಯಾಯಿತಿ ಬಡ್ಡಿಯಿಂದ ಎಷ್ಟು ಸಾಲವನ್ನು ವಿತರಿಸಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಬಹಳಷ್ಟು ಬಡ ನೇಕಾರರಿಗೆ ರಿಯಾಯಿತಿ ಬಡ್ಡಿಯಿಂದ ಸಾಲ ಕೊಡುವುದಕ್ಕೆ ವಿಶೇಷವಾಗಿ ಯಾವ ಬ್ಯಾಂಕುಗಳು ಮುಂದೆ ಬರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಇ) ರೈತರಂತೆ, ನೇಕಾರರಿಗೂ ರಾಷ್ಟ್ರೀಕೃತ ಬ್ಯಾಂಕುಗಳಿಂದ ಶೇಕಡಾ 3 ರಂತೆ ಬಡ್ಡಿಗೆ ಸಾಲ ಕೊಡಲು ಬೇಡಿಕೆ ಇರುವುದನ್ನು ಪರಿಗಣಿಸಲಾಗುವುದೇ?

ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿ ನೇಕಾರರಿಗೆ ಶೇ. 3 ರ ಬಡ್ಡಿ ದರದಲ್ಲಿ ಒಟ್ಟು 9251 ಪ್ರಕರಣಗಳಿಗೆ ರೂ.7929.08 ಲಕ್ಷಗಳ ಸಾಲವನ್ನು ಈ ಕೆಳಕಂಡ ಜಿಲ್ಲೆಗಳಿಗೆ ವಿತರಿಸಲಾಗಿದೆ.

ಕ್ರ. ಸಂ.	ಜಿಲ್ಲೆಯ ಹೆಸರು	ಪ್ರಕರಣ	ಮೊತ್ತ (ಲಕ್ಷಗಳಲ್ಲಿ)
1.	ಉಡುಪಿ	1	0.66
2.	ಕೊಪ್ಪಳ	34	11.76
3.	ಬೆಳಗಾವಿ	2637	3261.25

4.	ಬಿಜಾಪುರ	61	13.20
5.	ಬಾಗಲಕೋಟೆ	6498	4599.51
6.	ರಾಮನಗರ	2	10.00
7.	ತುಮಕೂರು	18	32.70
	ಒಟ್ಟು	**9521**	**7929.08**

ಆ) ಪಟ್ಟಣ ಸಹಕಾರ ಬ್ಯಾಂಕುಗಳ ದುಡಿಯುವ ಬಂಡವಾಳದ ಪ್ರಮಾಣವು ಶೇ.9.5 ರಿಂದ ಶೇ.10 ರಷ್ಟಿದ್ದು ಅವುಗಳು ಸಾಮಾನ್ಯವಾಗಿ ಸಾಲಗಳ ಮೇಲೆ ಶೇ.14 ರಿಂದ 16 ರಷ್ಟು ಬಡ್ಡಿ ವಿಧಿಸುತ್ತಿದ್ದು ಸರ್ಕಾರದ ಆದೇಶದಂತೆ ಶೇ.3ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ಜಾರಿಗೊಳಿಸಿದಲ್ಲಿ ನೇಕಾರರಿಂದ ಶೆ.3 ಮತ್ತು ಸರ್ಕಾರದಿಂದ ಶೇ.9.5 ಬಡ್ಡಿ ಸಹಾಯಧನ ಸೇರಿ ಒಟ್ಟು ಬಡ್ಡಿ ಶೇ.12.5 ರಷ್ಟಾಗಿ ಸಹಕಾರ ಸಂಸ್ಥೆಗಳಿಗೆ ಕನಿಷ್ಠ ಶೇ.2 ರಷ್ಟು ಬಡ್ಡಿ ಕಡಿಮೆಯಾಗಿರುವುದಿಂದ ಅವುಗಳು ನೇಕಾರರಿಗೆ ಶೇ.3ರ ಬಡ್ಡಿ ದರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಾಲವನ್ನು ಮಂಜೂರು ಮಾಡಲು ಮುಂದೆ ಬಂದಿರುವುದಿಲ್ಲ.

ಇ) ಇಲ್ಲ.

ರಾಜ್ಯ ಹೆದ್ದಾರಿ ಅಭಿವೃದ್ಧಿ

560 (754) ಶ್ರೀ ತುಕಾರಾಮ ಇ. (ಸಂಡೂರ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಹೆದ್ದಾರಿ 49 ರಲ್ಲಿ ಬರುವ ಸಂಡೂರು-ಹೊಸಪೇಟೆ ರಸ್ತೆ ಬಹಳ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆ ಕಾಮಗಾರಿಯನ್ನು ಸರ್ಕಾರ ಎಂದು ಪ್ರಾರಂಭಿಸಲಾಗುವುದು;

ಇ) ರಾಜ್ಯ ಹೆದ್ದಾರಿ 40 ರಲ್ಲಿ ಬರುವ ಸಂಡೂರು-ಕೂಡ್ಲಿಗಿ ಹಾಗೂ ಸಂಡೂರು-ತೋರಣ ಗಲ್ಲು ರಸ್ತೆಗಳು ತೀರಾ ಹದಗೆಟ್ಟಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದರೆ, ಈ ರಸ್ತೆಗಳ ದುರಸ್ತಿಗಳ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರಸ್ತೆಯ ಕಿಮೀ 24.00 ರಿಂದ 26.00 ರವರೆಗೆ (2.00 ಕಿಮೀ ಉದ್ದ) ಸುಧಾರಣೆ ಕಾಮಗಾರಿಯು 2009–10ನೇ ಸಾಲಿನ ಸುವರ್ಣ ರಸ್ತೆ ಯೋಜನೆ ಅಡಿಯಲ್ಲಿ ರೂ.104.16 ಲಕ್ಷ ಮೊತ್ತಕ್ಕೆ ಮಂಜೂರಾಗಿದ್ದು, ಸದರಿ ಕಾಮಗಾರಿಗೆ ಈಗಾಗಲೇ ಗುತ್ತಿಗೆ ನಿಗದಿಯಾಗಿದ್ದು, ಸಧ್ಯದಲ್ಲೇ ಕೆಲಸ ಪ್ರಾರಂಭಿಸಲಾಗುವುದು.

ಅಲ್ಲದೇ ಸದರಿ ರಸ್ತೆಯು 0.00 ರಿಂದ 1.00 ರಲ್ಲಿ ರಸ್ತೆ ಸುಧಾರಣೆ ಕಾಮಗಾರಿಯು 5054 ಡಾ: ನಂಜೂಂಡಪ್ಪ ವರದಿ ಯೋಜನೆ ಅಡಿಯಲ್ಲಿ ರೂ.62.01 ಲಕ್ಷ ಮೊತ್ತಕ್ಕೆ ಅನುಮೋದನೆಯಾಗಿದ್ದು, ಇ–ಪೋರ್ಟಲ್‌ನಲ್ಲಿ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, ಸಧ್ಯದಲ್ಲಿಯೇ ಈ ಕಾಮಗಾರಿಗೂ ಸಹ ಗುತ್ತಿಗೆ ನಿಗದಿಪಡಿಸಿ ಕೆಲಸ ಪ್ರಾರಂಭಿಸಲಾಗುವುದು.

ಇ) ಹೌದು ಬಂದಿದೆ.

ಈ) ಸದರಿ ರಸ್ತೆಗಳಿಗಾಗಿ 2009–10ನೇ ಸಾಲಿಗೆ 5054–ಸುವರ್ಣ ರಸ್ತೆ ಯೋಜನೆ ಅಡಿಯಲ್ಲಿ ಪ್ರತಿ ರಸ್ತೆಗೆ ರೂ.104.16 ಲಕ್ಷ ಮೊತ್ತದ ಕಾಮಗಾರಿಗಳು ಅನುಮೋದನೆಯಾಗಿರುತ್ತವೆ. ಈ ಕಾಮಗಾರಿಯಡಿ ಕಿಮೀ 127.25 ರಿಂದ 128.20 ಹಾಗೂ ಕಿಮೀ 131.50 ರಿಂದ 136.10 ರವರೆಗಿನ ಒಟ್ಟು 4.95 ಕಿಮೀ ಉದ್ದ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಪ್ರಸ್ತಾಪಿಸಲಾಗಿದೆ. ಈ ಪೈಕಿ ಒಂದು ಕಾಮಗಾರಿಗೆ ಗುತ್ತಿಗೆ ನಿಗದಿಪಡಿಸಲಾಗಿದೆ ಹಾಗೂ ಮತ್ತೊಂದು ಕಾಮಗಾರಿಗೆ ಇ–ಪೋರ್ಟಲ್ ಮುಖಾಂತರ ಗುತ್ತಿಗೆ ನಿಗದಿಪಡಿಸುವ ಪ್ರಕ್ರಿಯೆ ಜಾರಿಯಲ್ಲಿದೆ.

ಅಲ್ಲದೇ 2009–10ನೇ ಸಾಲಿನ 5054 ಡಾ: ನಂಜುಂಡಪ್ಪ ವರದಿ ಯೋಜನೆ ಅಡಿಯಲ್ಲಿ ಸದರಿ ರಸ್ತೆ ಸುಧಾರಣೆಗಾಗಿ ಒಟ್ಟು ರೂ.223.35 ಲಕ್ಷ ಮೊತ್ತದ ಕಾಮಗಾರಿಗಳು ಅನುಮೋದನೆಯಾಗಿರುತ್ತವೆ. ಈ ಯೋಜನೆ ಅಡಿಯಲ್ಲಿ ಕಿಮೀ 125.12 ರಿಂದ 131.25 ರವರೆಗಿನ ಒಟ್ಟು 6.10 ಕಿಮೀ ಉದ್ದ ಅಭಿವೃದ್ಧಿಪಡಿಸಲು ಪ್ರಸ್ತಾಪಿಸಲಾಗಿದೆ. ಈ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಗುತ್ತಿಗೆ ನಿಗದಿಪಡಿಸಿ ಲೋಕೋಪಯೋಗಿ ಇಲಾಖೆಯಿಂದ ಕೆಲಸ ಪ್ರಾರಂಭಿಸಲಾಗುವುದು.

ಬಿ.ಪಿ. ಎಲ್. ಕಾರ್ಡ್‌ಗಳ ವಿತರಣೆ

561 (755) ಶ್ರೀ ತುಕಾರಾಮ್. ಇ (ಸಂಡೂರ್) : ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಡೂರು ಮತಕ್ಷೇತ್ರದಲ್ಲಿ ಬಿಪಿಎಲ್ ಕಾರ್ಡುಗಳು ಸಮರ್ಪಕವಾಗಿ ವಿತರಣೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಸಂಡೂರು ಮತಕ್ಷೇತ್ರದಲ್ಲಿ ಇದುವರೆಗೂ ಸಮರ್ಪಕವಾಗಿ ಬಿಪಿಎಲ್ ಪಡಿತರ ಚೀಟಿಗಳು ವಿತರಣೆ ಆಗದೇ ಇರುವುದರ ಬಗ್ಗೆ ಯಾವುದೇ ದೂರುಗಳು ಸ್ವೀಕೃತಿಯಾಗಿರುವುದಿಲ್ಲ. ಮುಂದುವರೆದಂತೆ ಸಂಡೂರು ಮತಕ್ಷೇತ್ರದಲ್ಲಿ ಇದುವರೆಗೂ ಒಟ್ಟು 53,405 ಬಿಪಿಎಲ್ ಫಲಾನುಭವಿಗಳಿಗೆ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಅಡಿಕೆ ಬೆಳೆಗೆ ಬೇರು ಹುಳದ ಬಾಧೆ

562 (147) ಶ್ರೀ ವಸಂತ ಬಂಗೇರ. ಕೆ. (ಬೆಳ್ತಂಗಡಿ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆಗೆ ಬೇರು ಹುಳದ ಬಾಧೆ ತಗಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹೌದಾದಲ್ಲಿ, ಜಿಲ್ಲೆಯಲ್ಲಿ ಒಟ್ಟು ಎಷ್ಟು ಎಕರೆ ಅಡಿಕೆ ತೋಟ ಬೇರು ಹುಳದ ಬಾಧೆಗೆ ಒಳಗಾಗಿದೆ;

ಇ) ಹಾಗಿದ್ದಲ್ಲಿ, ರೈತರಿಗೆ ಉಂಟಾದ ನಷ್ಟದ ಒಟ್ಟು ಮೊತ್ತವೆಷ್ಟು;

ಈ) ಈ ರೀತಿ ರೋಗದಿಂದ ನಷ್ಟ ಉಂಟಾದ ರೈತರಿಗೆ ಯಾವ ರೀತಿಯ ಪರಿಹಾರವನ್ನು ಸರ್ಕಾರ ನೀಡುವುದು?

ಶ್ರೀ ಉಮೇಶ್. ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) ಹೌದು.

ಆ) 2467 ಹೆಕ್ಟೇರ್ಸ್.

ಇ) ಅಂದಾಜು ರೂ. 538.00 ಲಕ್ಷಗಳು

ಈ) ಬೇರು ಹುಳ ನಿಯಂತ್ರಣಕ್ಕಾಗಿ ರೈತರಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

- ಶೇ.50 ರ ಸಹಾಯಧನದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ನೀಡಲಾಗುತ್ತಿದೆ.
- ಬೇರು ಹುಳದ ನಿಯಂತ್ರಣೆ ಬಗ್ಗೆ ತಾಂತ್ರಿಕ ಮಾಹಿತಿ ಯನ್ನು ಪ್ರಕಟಣೆಗಳ ಮೂಲಕ ಒದಗಿಸಲಾಗುತ್ತಿದೆ
- ಬೇರು ಕೀಟ ಭಾದೆಯನ್ನು ನಿಯಂತ್ರಿಸಲು ಈವರೆಗೆ ಒಟ್ಟು 1552 ಹೆಕ್ಟೇರ್ ಪ್ರದೇಶದಲ್ಲಿ 2934 ಮಂದಿ ರೈತರಿಗೆ ರೂ.14.52 ಲಕ್ಷಗಳಷ್ಟು ನೆರವನ್ನು ನೀಡಲಾಗಿರುತ್ತದೆ.

ನಷ್ಟ ಉಂಟಾದ ರೈತರಿಗೆ ಇಲಾಖೆಯಿಂದ ಪರಿಹಾರ ನೀಡುವ ಕಾರ್ಯಕ್ರಮ ಇರುವುದಿಲ್ಲ.

ದ್ವಿಮುಖ ರಸ್ತೆ

565 (1011) ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ-ಧಾರವಾಡ ಪೂರ್ವ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಕಿತ್ತೂರ ಚೆನ್ನಮ್ಮಾ ಸರ್ಕಲ್‌ದಿಂದ ಗಬ್ಬೂರ ವರ್ತುಲ ವರೆಗೆ ದ್ವಿಮುಖ ರಸ್ತೆಯನ್ನು ನಿರ್ಮಿಸುವ ವಿಚಾರವಿದೆಯೇ?

ಆ) ಇದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು;

ಇ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಪ್ರಸ್ತುತ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಪ್ರಸ್ತಾವನೆ ಸರ್ಕಾರದ ಮುಂದಿಲ್ಲದ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷಿ ಪಾರ್ಕ್ ಸ್ಥಾಪಿಸುವುದು

566 (356) ಶ್ರೀ ವೆಂಕಟಸ್ವಾಮಿ (ದೇವನಹಳ್ಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಅಂತರ್ ರಾಷ್ಟ್ರೀಯ ಕೃಷಿ ಪಾರ್ಕ್ ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಎಂದು ಪ್ರಾರಂಭ ಮಾಡಲಾಗುವುದು, ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) :

ಅ) ಇಲ್ಲಾ.

ಆ) - ಅನ್ವಯಿಸುವುದಿಲ್ಲ –

ಕೃಷಿ ಉತ್ಪನ್ನ ಸಮಿತಿಯಿಂದ ಮಾರುಕಟ್ಟೆ ಸ್ಥಾಪಿಸುವುದು

567 (358) ಶ್ರೀ ವೆಂಕಟಸ್ವಾಮಿ (ದೇವನಹಳ್ಳಿ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ರೇಷ್ಮೆ ಇಲಾಖೆಯ ಜಮೀನಿನಲ್ಲಿ ಮಾರುಕಟ್ಟೆ ಸ್ಥಾಪಿಸಲು ಸರ್ಕಾರವು ತೀರ್ಮಾನಿಸಿದೆಯೇ;

ಆ) ಹಾಗಿದ್ದಲ್ಲಿ, ಎಂದು ಕಾಮಗಾರಿಯನ್ನು ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು; ಇದರ ಅನುದಾನ ಮೊತ್ತವೆಷ್ಟು?

ಶ್ರೀ ಶಿವರಾಜ್ ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ದೊಡ್ಡಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಉಪ ಮಾರುಕಟ್ಟೆಯಾದ ದೇವನಹಳ್ಳಿಯ ಲಾಲಗೊಂಡನಹಳ್ಳಿಯಲ್ಲಿ ರೇಷ್ಮೆ ಇಲಾಖೆಗೆ ಸೇರಿದ ಸರ್ವೆ ಸಂಖ್ಯೆ: 41, 42, 43 ರಲ್ಲಿನ 13.28 ಎಕರೆ ಜಮೀನು ಪಡೆದು ಉಪ ಮಾರುಕಟ್ಟೆ ಪ್ರಾಂಗಣ ನಿರ್ಮಿಸಲು ದಿನಾಂಕ: 29/08/2006 ರಲ್ಲಿ ದೊಡ್ಡಬಳ್ಳಾಪುರ ಸಮಿತಿಯಲ್ಲಿ ತೀರ್ಮಾನಿಸಲಾಗಿತ್ತು. ಆದರೆ, ಸದರಿ ಜಮೀನು ಜಿಲ್ಲಾಧಿಕಾರಿಗಳ ಆದೇಶ ಸಂ:ಎಲ್ಎನ್‌ಡಿ/ ಸಿಆರ್/204/2007-08 ದಿನಾಂಕ: 17/05/2008 ರಲ್ಲಿ ಕೇಂದ್ರ ಸರ್ಕಾರದ ಬಾಹ್ಯಾಕಾಶ ಇಲಾಖೆಗೆ ಸೇರಿದ ಇಸ್ರೋ ಸಂಸ್ಥೆಗೆ ವರ್ಗಾವಣೆಗೊಂಡಿರುವುದರಿಂದ ಉಪ ಮಾರುಕಟ್ಟೆ ನಿರ್ಮಾಣ ಮಾಡಲು ಸಾಧ್ಯವಾಗಿರುವುದಿಲ್ಲ.

ಆ) – ಅನ್ವಯಿಸುವುದಿಲ್ಲ –

ಕರ್ನಾಟಕ ವಿಧಾನ ಸಭೆ

ಬುಧವಾರ, 17ನೇ ಮಾರ್ಚ್ 2010 ರಂದು ಸದನವು
ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11–17 ಗಂಟೆಗೆ ಸಮಾವೇಶಗೊಂಡಿತ್ತು.

ಅಧ್ಯಕ್ಷರು ಕೆ.ಜಿ. ಬೋಪಯ್ಯರವರು ಪೀಠವನ್ನು ಅಲಂಕರಿಸಿದ್ದರು.

1. ವಿಷಯ : ವಿಧಾನ ಸಭೆಯಲ್ಲಿ ಅಲಿಯನ್ಸ್ ವಿಶ್ವವಿದ್ಯಾಲಯ ಮಸೂದೆ ಅಂಗೀಕಾರವಾದ ಬಗ್ಗೆ :

(ಕಾಂಗ್ರೆಸ್ ಹಾಗೂ ಜೆಡಿ(ಎಸ್) ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

ಅಧ್ಯಕ್ಷರು : ದಯವಿಟ್ಟು ಮಾನ್ಯ ಸದಸ್ಯರುಗಳೆಲ್ಲ ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ. Please.

ಶ್ರೀ ಡಿ.ಕೆ. ಶಿವಕುಮಾರ್ (ತಮ್ಮ ಸ್ಥಾನದಿಂದ) : ಮಾನ್ಯ ಸಭಾಧ್ಯಕ್ಷರೆ, ತಾವೂ ಸಹ ಈ ಜಾಗದಲ್ಲಿ ಕುಳಿತು ಈಗ ಸಭಾಧ್ಯಕ್ಷರಾಗಿದ್ದೀರಿ. ಆದರೆ, ಮೊನ್ನೆ ನಡೆದಂಥ ಯಾವುದೋ financial bills, political commitments ಇರುವಂಥ ಸಂದರ್ಭದಲ್ಲಿ, ಅನೇಕ ತೀರ್ಮಾನಗಳನ್ನು ತೆಗೆದುಕೊಂಡಿದ್ದನ್ನು ನಾವು ನೋಡಿದ್ದೇವೆ. ಆದರೆ, educationಗೆ ಸಂಬಂಧಪಟ್ಟಂತೆ ಯಾವುದಾದರೂ ಬಿಲ್‌ಗಳನ್ನು ಪಾಸ್ ಮಾಡಬೇಕಾದರೆ ಅದನ್ನು ನಿಮ್ಮ ಪಾರ್ಟಿಯಲ್ಲಿಟ್ಟು, general ಆಗಿ ಇಟ್ಟು, Business Advisory committee ಯಲ್ಲಿಟ್ಟಾಗ ನಮ್ಮ ಅನೇಕ ಸಲಹೆಗಳನ್ನು ತೆಗೆದು ಕೊಂಡು ತೀರ್ಮಾನವನ್ನು ತಾವು ಮಾಡಬೇಕು. ಆದರೆ, ಏಕಾಏಕಿ ಅಜೀಂ ಪ್ರೇಮ್‌ಜಿಯವರ institutionಗೆ ಸಂಬಂಧಪಟ್ಟಂತೆ ಬಿಲ್ ಬಂದಾಗ ಇದರ ಬಗ್ಗೆ ನಾವು ಚರ್ಚೆ ಮಾಡಬೇಕು, ಇದರ ಬಗ್ಗೆ ವ್ಯಾಪಕವಾಗಿ ಚರ್ಚೆ ಆಗಬೇಕೆಂದಾಗ, ನಾವು ಸದನದ ಬಾವಿಯಲ್ಲಿದ್ದಾಗ House orderನಲ್ಲಿ ಇಲ್ಲದಿದ್ದ ಸಂದರ್ಭದಲ್ಲಿ ಇಂಥ ತೀರ್ಮಾನ ತೆಗೆದುಕೊಂಡರೆ ಹೇಗೆ? Alliance ಎನ್ನುವ ಯಾವುದೋ ಒಂದು ಸಂಸ್ಥೆ, ಒಂದು ಸಣ್ಣ Business school, 8–10 ವರ್ಷಗಳಾಗಿರುವ ಒಂದು business school ಗೆ ಈ ರಾಜ್ಯದಲ್ಲಿ ಒಂದು ಕಾನೂನು ಮಾಡಿಬಿಟ್ಟು ಒಂದು University ಮಾಡುತ್ತೀರೆಂದರೆ ಇದಕ್ಕಿಂಥ ವಿಪರ್ಯಾಸ ಇನ್ನೇನು ಬೇಕು? ಯಾರು ಎಷ್ಟೇ Politically powerful ಇರಬಹುದು, businessನಲ್ಲಿ Powerful ಇರಬಹುದು, ಮತ್ತೊಂದು ಇರಬಹುದು, ಏನೋ ಒಂದು Manipal Institution ಕೆಟ್ಟುಹೋಯಿತೇ? ಇಲ್ಲ ಯಾವುದಾದರೊಂದು ದೊಡ್ಡ

University ಕೆಟ್ಟು ಹೋಯಿತೇ? ಈ ರಾಷ್ಟ್ರಕ್ಕೆ, ರಾಜ್ಯಕ್ಕೆ Foreign Universities ಬರಬೇಕೆಂದು cabinet ನಲ್ಲಿ clear ಆಗಿ ಒಂದು ತೀರ್ಮಾನ ಮಾಡಿದ್ದಾರೆ. World ನಲ್ಲಿ 100 institutions ಯಾವುದೆಂದು ಒಂದು committee ಮಾಡಿ ನಾವು ಯಾರ್ಯಾರನ್ನು ತರಬೇಕೆಂದು ಮುಂಚಿತ ವಾಗಿಯೇ accreditations ಮಾಡಿ ಅವರು 50 ಕೋಟಿ ರೂಪಾಯಿ deposit ಇಡಬೇಕು, ಅವರಿಗೆ background ಇರಬೇಕು, ಅವರಿಗೆ ಇಷ್ಟು ವರ್ಷ experience ಇರಬೇಕು, ಅಂಥವರಿಗೆ ಮಾತ್ರ ಅವಕಾಶ ಎಂದು ಒಂದು ತೀರ್ಮಾನ ಮಾಡಿದ್ದಾರೆ. ಹಾಗೆಯೇ, ಏನಾದರೊಂದು ನಾವು guidelines ಹಾಕದೆ ಏಕಾಏಕಿ ಏನೂ ಇಲ್ಲದಿರುವವರು school ನಡೆಸುತ್ತೇವೆಂದು ಹೇಳಿದ ಒಂದು institution ಗೆ, ಅವರಿಗೆ 5 ಎಕರೆ ಜಮೀನು ಸಹ ಇಲ್ಲ, ಎಲ್ಲೋ ಒಂದು business school ಮಾಡುತ್ತೇವೆ, MBA, BBM course ನಡೆಸುತ್ತಿದ್ದೇವೆ ಎಂದು ಹೇಳಿ ಒಂದು seat ಗೆ 8–10 ಲಕ್ಷ ರೂಪಾಯಿ ತೆಗೆದುಕೊಂಡು ಕೊಡುತ್ತಿರುವಂಥವರಿಗೆ ನಾವು university ಗೆ permission ಗೆ ಕೊಟ್ಟರೆ ಹೇಗೆ? ಈ ರಾಜ್ಯದಲ್ಲಿ ಏನು ನಡೆಯುತ್ತಿದೆ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. Education system ಅನ್ನು ಮಾಡಬೇಕೆಂದು ಇದ್ದೀರಿ? ಏನೋ Primary institutions ಮತ್ತೊಂದು ಒಬ್ಬರಿಗೆ ಸಹಾಯ ಮಾಡಬೇಕೆಂದರೆ ಪರವಾಗಿಲ್ಲ, ಇಂಥ ದೊಡ್ಡ ಕೆಟ್ಟ precedent ಹಾಕುವುದು ಬೇಡ. ಜೊತೆಗೆ ಅಲಿಯನ್ಸ್ ಬಿಲ್ ಇಲ್ಲಿ ಪಾಸಾಗಿರುವುದು ಒಬ್ಬರಿಗೂ ಕೂಡ ಗೊತ್ತಿಲ್ಲ. ಇದನ್ನು ಮಂಡನೆ ಮಾಡುವಾಗಲೂ ಕೂಡ ಇದರ ಬಗ್ಗೆ ವ್ಯಾಪಕವಾಗಿ ಚರ್ಚೆ ಮಾಡಲಿಕ್ಕೆ ಅವಕಾಶವಾಗಲಿಲ್ಲ. ಜೊತೆಗೆ ಇಂಥ ಬಿಲ್ ಬರುತ್ತಿದೆ ಎಂದು ಹೇಳಲಿಲ್ಲ. ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ ವಿಚಾರದಲ್ಲಿ ಎಲ್ಲಾ ಒಳಗಡೆ ಕುಳಿತಿದ್ದಾರೆ. ನೀವು ಕರೆದುಬಿಟ್ಟು, Education Minister ಇದನ್ನು ಮಾಡಿ ಬಿಟ್ಟರೆ ಇದೇನು ಸ್ವಾಮಿ? We can't accept this. ನೀವು ಸರ್ಕಾರವನ್ನು ಈ ಮಟ್ಟಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಜನ ಏನು ಹೇಳುತ್ತಾರೆ? ಅಲಿಯನ್ಸ್ ಎಂದರೆ ಯಾವ ಯೂನಿವರ್ಸಿಟಿ? ಎಲ್ಲಾದರೂ ಉಂಟೆ ಸ್ವಾಮಿ? Education system ಏಕೆ ಹಾಳು ಮಾಡುತ್ತಿದ್ದೀರಿ? The

world is looking at Bangalore. ಇಂಥ fraud ಗಳಿಗೆಲ್ಲಾ institutions ಕೊಡಕ್ಕಲ್ಲ, ಸ್ವಾಮಿ. ಮಣಿಪಾಲ institutions ಅಲ್ಲ ಅದು. ಅಜೀಂ ಪ್ರೇಮ್‌ಜಿ, yes, ನಮ್ಮಲ್ಲಿ dispute ಇರಬಹುದು. But, ಒಂದು ಹೆಸರು ಇದೆ. ಇಡೀ ಪ್ರಪಂಚದಲ್ಲಿ, ಬೆಂಗಳೂರಿನಲ್ಲಿ, Yes ಏನೋ ಮಾಡಬಹುದು ಎಂದು ಇದೆ. But, ಸರ್ಕಾರ ಇದನ್ನು ಏಕೆ ಅಷ್ಟು ಆತುರದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಿದೆ ಎಂದು ನನಗಂತೂ ಅರ್ಥವಾಗುತ್ತಿಲ್ಲ. ನಮ್ಮ ವಿರೋಧ ಪಕ್ಷದ ನಾಯಕರು ಅದರ ಬಗ್ಗೆ ಹೆಚ್ಚಿಗೆ ಮಾತನಾಡುತ್ತಾರೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮೊನ್ನೆ ಅಜೀಂ ಪ್ರೇಮ್ ಜಿ Private University ಬಗ್ಗೆ ಚರ್ಚೆಗೆ ಬಂದಾಗ ನಮಗಿರತಕ್ಕಂಥ ಪ್ರಾಮಾಣಿಕವಾದ ಅನಿಸಿಕೆಗಳು, ಆತಂಕಗಳು, ಇವೆಲ್ಲಾ ಪ್ರಸ್ತಾಪಿಸಿದ್ದೇವೆ. ನಾವು ಏನು ಬಹಳ ಒತ್ತಾಯಿಸಿರುವುದು? ಇಲ್ಲಿರತಕ್ಕಂಥ ಅನೇಕ ಅನುಭವ ಇರತಕ್ಕಂಥ ಸದಸ್ಯರುಗಳು, ಶಿಕ್ಷಣ ಸಂಸ್ಥೆಗಳನ್ನು ನಡೆಸತಕ್ಕಂಥವರು ಕೂಡ ಈ ಬಗ್ಗೆ ಮಾತನಾಡಿ, ಅದನ್ನು ಜಂಟಿ ಸದನ ಸಮಿತಿಗೆ ಕೊಡಿ, ಚರ್ಚೆ ಮಾಡೋಣ, ಜಂಟಿ ಸದನ ಸಮಿತಿಯಲ್ಲಿ ಚರ್ಚೆ ಮಾಡಿ ಬಂದ ಮೇಲೆ ಮತ್ತೆ ಚರ್ಚೆ ಮಾಡಿ ಅದಕ್ಕೆ ಒಪ್ಪಿಗೆ ಕೊಡತಕ್ಕಂಥ ಕೆಲಸವನ್ನು ಸದನದಲ್ಲಿ ಮಾಡೋಣವೆಂದು ಹೇಳಿದೆವು. ಮಾನ್ಯ ಸಭಾನಾಯಕರು ಕೂಡ ಇಲ್ಲಿಯೇ ಇದ್ದಾರೆ. ಈ ಸದನದಲ್ಲಿ ಹೊಸ ಸಂಪ್ರದಾಯವನ್ನು ಮಾಡಿದರೆ,- ಏಕೆಂದರೆ ನಾವು ಕಾನೂನುಗಳನ್ನು ಮಾಡುತ್ತಿರುವುದು, ಕಾನೂನು ಎಂದರೆ, ಮತ್ತೆ ಅದು ತಿದ್ದುಪಡಿಯಾಗುವವರೆಗೆ, ಅದು repeal ಆಗುವವರೆಗೆ ಇರತಕ್ಕಂಥದ್ದು. ಒಟ್ಟಾರೆಯಾಗಿ ಬಹುಸಂಖ್ಯಾತ ಜನರಿಗೆ ಅದು ಅನುಕೂಲವಾಗತಕ್ಕಂಥದ್ದು, ಸಹಾಯಕವಾಗತಕ್ಕಂಥದ್ದು, ಆ ಜನರ ಭವಿಷ್ಯ ರೂಪಿಸತಕ್ಕಂಥ ಕಾನೂನುಗಳು ಆಗಿರುತ್ತವೆ. ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯ ಬಗ್ಗೆ ಚರ್ಚೆಯಾಯಿತು. ಇನ್ನೊದು ಅಲಿಯನ್ಸ್ ಯೂನಿವರ್ಸಿಟಿಯ ಬಗ್ಗೆ ಚರ್ಚೆಯೂ ಆಗಲಿಲ್ಲ. ಅದನ್ನು ಮತಕ್ಕೂ ಹಾಕಲಿಲ್ಲ. ಅದರ ಬಗ್ಗೆ ನಾವು ಮಾತನಾಡುವುದಕ್ಕೆ ತಯಾರಿದ್ದೇವೆಂದು ಹೇಳಿದೆವು. ನೀವು ಅದನ್ನು ಮತಕ್ಕೆ ಹಾಕಲಿಲ್ಲ. ಚರ್ಚೆನೂ ಆಗಲಿಲ್ಲ. ಒಂದು Private Alliance University ಅದು ಯಾರೋ ಕುಲ ಗೋತ್ರ ಅವರು ಯಾರು ಎನ್ನುವುದು ಗೊತ್ತಿಲ್ಲ. ಯಾರೋ ಒಬ್ಬರು Scheduled tribe ನವರ institution, ಅವರು ಎಲ್ಲಿ

ನಡೆಸುತ್ತಿದ್ದಾರೆ, ಏನು ಮಾಡುತ್ತಿದ್ದಾರೆ, ಅವರ ಕಥೆ ಏನು? Education field ನಲ್ಲಿ ಅವರ background ಏನು ಅವರ reputation ಏನು, ಏನೇನು ಇದೆ ಇವೆಲ್ಲಾ ಗೊತ್ತಾಗಬೇಕಲ್ಲವೆ? ಏನೂ ಗೊತ್ತಿಲ್ಲದೆ ಅವರ್‍ಯಾರೋ ಒಂದು institution ನಡೆಸುತ್ತಿದ್ದಾರಂತೆ, ಅವರಿಗೆ ನೀವು ಒಂದು Universityಯನ್ನು ಕೊಟ್ಟುಬಿಡುವಂತಹದು ಸರಿಯೇ? ಆಮೇಲೆ Vice Chancellor ಆಗುವಂಥವರು ಜೀವನ ಪರ್ಯಂತ ಇರುವಂಥದ್ದು, ಸರ್ಕಾರಕ್ಕೆ ಯಾವ ಹತೋಟಿಯೂ ಇರುವುದಿಲ್ಲ. Vice Chancellor ಆದವರು ಅವರು ಸಾಯುವ ತನಕ ಅವರೇ ಇರುವುದು. ಆಮೇಲೆ ಅವರಿಗೆ ಬೇಕಾದಂಥವ ರೊಬ್ಬರನ್ನು ಮಾಡಿಕೊಳ್ಳುವುದು. ಇದು ಯಾವ ಕಾನೂನಿನಲ್ಲಿ ಈ ರೀತಿ ಬರುತ್ತದೆಯೋ ನನಗಂತೂ ಗೊತ್ತಿಲ್ಲ. ಒಟ್ಟಾರೆಯಾಗಿ ಮೂಲಭೂತವಾಗಿ ರತಕ್ಕಂಥ ಪ್ರಶ್ನೆಗಳಿಗೆ ಉತ್ತರ ಇಲ್ಲದ ಹಾಗೆ ಆಗಿಬಿಡುತ್ತದೆ. ಸದನದಲ್ಲಿ ಹೊಸ ಸಂಪ್ರದಾಯ, ಕೆಟ್ಟ ಸಂಪ್ರದಾಯಗಳಿಗೆ ಅವಕಾಶ ಮಾಡಿ ಕೊಡತಕ್ಕಂಥದ್ದು ಸರಿಯಾದುದಲ್ಲ. ಮಾನ್ಯ ಅಧ್ಯಕ್ಷರೆ, ನಿಮ್ಮಲ್ಲಿ ಮತ್ತೊಮ್ಮೆ ಮನವಿ ಮಾಡಿ ಕೊಳ್ಳುತ್ತೇನೆ. ಅವು ಚರ್ಚೆಯಾಗಬೇಕು. Aliance University ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಜೊತೆಗೆ ಅದಕ್ಕೊಂದು ಸದನ ಸಮಿತಿ ಮಾಡುವುದು ಅತ್ಯಂತ ಅವಶ್ಯ. ಇದನ್ನು ನಾವು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ನಾವು ಆವತ್ತು, you were all convinced, ನಿಮ್ಮನ್ನು convince ಮಾಡಿದ್ದೇವೆಂದು ತಿಳಿದುಕೊಂಡು ಬಿಟ್ಟಿದ್ದೇವೆ.

Mr. Speaker : Convince is to the government, not to me.

ಶ್ರೀ ಸಿದ್ದರಾಮಯ್ಯ : ಸರ್ಕಾರ ಒಪ್ಪಿದೆ ಎಂದು ತಿಳಿದುಕೊಂಡು ಬಿಟ್ಟಿದ್ದೇವು. ನಿಮಗೆ ಎಂದರೆ ನಾವು ನಿಮಗೆ ತಾನೆ ಹೇಳಬೇಕು. ನಮ್ಮ ಹಕ್ಕುಗಳನ್ನು ರಕ್ಷಣೆ ಮಾಡುವವರು ಯಾರು ಸ್ವಾಮಿ? ಸರ್ಕಾರ ಕೂಡ consider ಮಾಡಬೇಕು. It is a different thing. But, you have to protect our interest.

Mr. Speaker : Interest of both as per law.

Sri. SIDDARAMAIAH : You are there as a judge. ನಾವೇನು ಕಾನೂನು ಬಿಟ್ಟು ಕೇಳುತ್ತಿದ್ದೇವೆಯೇ?

Mr. SPEAKER : Interest of State as per law. ಕಾನೂನನ್ನೇ ಜಾರಿ ಮಾಡಬಾರದು ಎಂದರೆ..

ಶ್ರೀ ಸಿದ್ದರಾಮಯ್ಯ : Illegal ಆಗಿ ಇರುವುದನ್ನು ಹೇಳಲಿಕ್ಕೆ ಆಗುವುದಿಲ್ಲ. ಈಗ ಬಜೆಟ್ ಮೇಲೆ ಚರ್ಚೆಯಾಗಬೇಕು. ಇನ್ನು ಬಜೆಟ್ ಮೇಲೆ ಡಿಸ್ಕಷನ್ ಮುಗಿದಿಲ್ಲ. ಈ ತರಹ ಆದರೆ, ಇನ್ನೆಲ್ಲಿ ನಾವು ಮುಗಿಸುತ್ತೇವೆ? ವೆಲ್‌ನಲ್ಲಿರಬೇಕಾದ ಪರಿಸ್ಥಿತಿ ಬಂದಿದೆ. ನನಗೆ ಅನುಭವ ಇರುವ ಮಟ್ಟಿಗೆ, ನನಗೆ ಜ್ಞಾಪಕ ಇರುವ ಮಟ್ಟಿಗೆ ವೆಲ್‌ನಲ್ಲಿರುವಾಗ When the House is not in order, ಸದಸ್ಯರುಗಳು ಅವರವರ ಸ್ಥಾನದಲ್ಲಿ ಇಲ್ಲದೆ ಇರುವಾಗ, ಬಿಲ್‌ನ್ನು ಮೂವ್ ಮಾಡಿ ಪಾಸ್ ಮಾಡುವುದು ಇದೆಯಲ್ಲ it is going to be a wrong precedent. Very wrong precedent. ನನಗೆ ಜ್ಞಾಪಕ ಇದ್ದ ಹಾಗೆ ಆ ರೀತಿ ಮಾಡುತ್ತಿರಲಿಲ್ಲ. ಪಾರ್ಲಿಮೆಂಟಿನಲ್ಲೂ ಕೂಡ ಆ ತರಹ ಮಾಡುವುದಿಲ್ಲ. ಮೊನ್ನೆ ಮಹಿಳಾ ಮೀಸಲಾತಿ ಬಿಲ್ ಬಂದಾಗಲೂ ಕೂಡ, ಸದಸ್ಯರನ್ನು ಸಸ್ಪೆಂಡ್ ಮಾಡಿರುವುದು ಬೇರೆ ವಿಚಾರ. ಅವರು ವೆಲ್‌ನಲ್ಲಿರುವಾಗ, ಗಲಾಟೆ ಮಾಡುವಾಗ, ಪಾರ್ಲಿಮೆಂಟಿನ ಲೋಯರ್ ಹೌಸ್‌ನಲ್ಲಿ ಕೂಡ ಮಾಡುವುದಕ್ಕೆ ಹೋಗಲಿಲ್ಲ. ಬಿಲ್ ಅನ್ನು ಚರ್ಚೆ ಮಾಡುವುದಕ್ಕೆ ಹೋಗಲಿಲ್ಲ. ಮುಂದಕ್ಕೆ ಹಾಕಿದರು. ಎಲ್ಲರನ್ನೂ ಕರೆದು ಮಾತನಾಡುತ್ತೇವೆ ಒಂದು consensus ಗೆ ಬರೋಣ ಆಮೇಲೆ ಚರ್ಚೆ ಮಾಡೋಣ ಎಂದು ಹೇಳಿ ಮುಂದಕ್ಕೆ ಹಾಕಿದರು. But, it is going to be a new and bad precedent. Bad convention. ನಾವು ಆ ದಿವಸ request ಮಾಡಿದೆವು. ಇಂಥವೆಲ್ಲಾ BAC ಯಲ್ಲಿ ಚರ್ಚೆಯಾದರೆ ಬಹಳ ಒಳ್ಳೆಯದು. ಇಲ್ಲದಿದ್ದರೆ ಹೊಸ ಸಂಪ್ರದಾಯ ಮಾಡಬೇಕಾಗುತ್ತದೆ, ಕೆಟ್ಟ ಸಂಪ್ರದಾಯಗಳಾದರೆ, ತಪ್ಪುಗಳನ್ನು ಮಾಡಿ ಬಿಟ್ಟು ಹೋದರೆ, ನಮ್ಮನ್ನು ಮುಂದಿನ ಜನ ಕ್ಷಮಿಸುತ್ತಾರೆಯೇ? ಸರ್ಕಾರ ಕೂಡ ಇದನ್ನು Prestige ಮಾಡಿಕೊಳ್ಳುವುದಕ್ಕೆ ಹೋಗಬಾರದು. ಮತ್ತೆ ಅದನ್ನು ಚರ್ಚಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಜಾತಿ ಆಧಾರದ ಮೇಲೆ ಎಲ್ಲಾದರೂ Education Institutions ಕೊಡುತ್ತಾರೆಯೆ? ಗೌಡರ, ಲಿಂಗಾಯಿತರು, scheduled caste, ಬ್ರಾಹ್ಮಣರು, ಎಂದು ಜಾತಿವಾರು Education

Institutons ಕೊಡುತ್ತಾರೆಯೆ? ಇದು ಎಂಥ ಶೇಮ್! ಯಾರೋ ಒಬ್ಬ management ನವನು scheduled tribe ಅಂತೆ, ಅದಕ್ಕೋಸ್ಕರವಾಗಿ ಒಂದು ಯೂನಿವರ್ಸಿಟಿ ಕೊಡುವುದು ಎಂದರೆ ಇದಕ್ಕಿಂತ ಅವಮಾನ ಇನ್ನೇನು ಸ್ವಾಮಿ? ಇದಕ್ಕಿಂತ ಅವಮಾನ ಇನ್ನೇನು ಬೇಕು? ಇದಕ್ಕೆ Chief Minister conscience permit ಮಾಡುತ್ತದೆಯೆ? ಜಾತಿ ಆಧಾರದ ಮೇಲೆ institutions ಕೊಟ್ಟರೆ ಹೇಗೆ?

ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) : ಮಾನ್ಯ ಅಧ್ಯಕ್ಷರೆ, ಶುಕ್ರವಾರ ದಿವಸ ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯ ಬಗ್ಗೆ ಬಿಲ್ ಬಂದಾಗ ವಿರೋಧ ಪಕ್ಷದಲ್ಲಿನ ಸದಸ್ಯರು ಸಮಗ್ರವಾಗಿ ಮಾತನಾಡಿದೆವು. ಅದರಲ್ಲೇನು ಜಾಸ್ತಿ ಕೇಳಿರಲಿಲ್ಲ. ಹೊಸದಾಗಿ ಕಾನೂನು ಮಾಡುತ್ತಿದ್ದೀರಿ, Private ನವರಿಗೆ ಕೊಡುತ್ತಿದ್ದೀರಿ, ಅದಕ್ಕೆ ಸದನ ಸಮಿತಿ ಮಾಡಿ, ಆ ಬಗ್ಗೆ ಚರ್ಚೆ ಮಾಡಲಿ, ಮೂರು ತಿಂಗಳು ಮುಂದಕ್ಕೆ ಹಾಕಿ ಎಂದು ಹೇಳಿದ್ದೆವು. ಅವತ್ತು ವಿರೋಧ ಪಕ್ಷದವರ ಬೇಡಿಕೆ ಇಷ್ಟೆ ಇತ್ತು. ಧರಣಿ ಮಾಡುವಾಗಲೇ ಅದನ್ನು ಪಾಸ್ ಮಾಡಿಕೊಂಡು ಹೋದರು. ಅಲಿಯನ್ಸ್ ಬಿಲ್ ತೆಗೆದು ಕೊಂಡು ಬಂದಿರಿ, ಅದಕ್ಕೆ "ನಾವು ಊಟ ಮಾಡಿಲ್ಲ. At least ನಮಗೆ ಅರ್ಧಗಂಟೆ ಟೈಂ ಕೊಡಿ, ನಾವು ನಂತರ ಇದರ ಬಗ್ಗೆ ಚರ್ಚೆ ಮಾಡುತ್ತೇವೆ" ಎಂದು ಹೇಳಿದರೂ, ಇದಕ್ಕೂ ನೀವು ಟೈಂ ಕೊಡಲಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ತಾವು ವಿರೋಧ ಪಕ್ಷದ ಪರವಾಗಿ ಇರಬೇಕೆಂದು ನಾವು ಭಾವಿಸುತ್ತೇವೆ.

ಅಧ್ಯಕ್ಷರು : ಆ ರೀತಿ ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ನಾವು ಅಳವಡಿಸಿಕೊಂಡಿರುವ ರೂಲ್ಸ್ ಏನು ಇದೆ, ಅದರ ಪ್ರಕಾರ ಇರಬೇಕೆಂದು ಹೇಳಿ. No. ನೀವು ಆ ತರಹ ವಿರೋಧ ಪಕ್ಷದ ಪರವಾಗಿರಬೇಕು, ಇವರ ಪರವಾಗಿರಬೇಕು, ಈ ಮಾತೆಲ್ಲಾ ಹೇಳಬೇಡಿ.

ಶ್ರೀ ಬಂಡೆಪ್ಪ ಕಾಶೆಂಪೂರ್ : ನಿಮ್ಮ ಹತ್ತಿರ ನಾವು ಬೇಡಿಕೊಳ್ಳುತ್ತೇವೆ.

ಅಧ್ಯಕ್ಷರು : ಬೇಡಿಕೊಳ್ಳುವುದು that is different, ಈ ಕಾನೂನು ಪುಸ್ತಕವನ್ನು ಮಾಡಿರುವುದು ಸದನ ನಡೆಸುವುದಕ್ಕೆ. ಇದರಲ್ಲಿ ಏನು ಇದೆ ಅದನ್ನೇ ಮಾಡಬೇಕು.

ಶ್ರೀ ಬಂಡೆಪ್ಪ ಕಾಶೆಂಪೂರ್ : ಒಪ್ಪಿಕೊಂಡೆ. ಆಯಿತು, ನಮಗೆ ರಕ್ಷಣೆ ಯಾರು ಕೊಡಬೇಕು? ನೀವು ತಾನೆ ನಮಗೆ ರಕ್ಷಣೆ ಕೊಡಬೇಕು.

ಅಧ್ಯಕ್ಷರು : ಆ ರೀತಿ ಹೇಳುವುದಕ್ಕೆ ಬರುವುದಿಲ್ಲ. You take back that word. ವಾಪಸ್ ತೆಗೆದುಕೊಳ್ಳಿ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಆಯಿತು. ವಾಪಸ್ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ನೀವು ಆ ರೀತಿ ಮಾತನಾಡುವುದಕ್ಕೆ ಬರುವುದಿಲ್ಲ. ಇಲ್ಲಿ ಯಾರ ಪರ ಇರುವುದಕ್ಕೆ ಆಗುವುದಿಲ್ಲ. ವೆಲ್‌ನಲ್ಲಿ ಇದ್ದು ನೀವೇನ್ರೀ ಮಾತನಾಡುತ್ತೀರಿ? ಅವರು ಹಾಗೆ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಸಿದ್ದರಾಮಯ್ಯ : ವಿರೋಧ ಪಕ್ಷದವರ ಪರವಾಗಿ ಇರಬೇಕು ಎಂದರೆ ನೀವು ನಮ್ಮನ್ನು ರಕ್ಷಣೆ ಮಾಡಬೇಕು..

ಅಧ್ಯಕ್ಷರು : ರಕ್ಷಣೆ ಮಾಡಬೇಕು ಎಂದು ಕೇಳಿ. ಪರವಾಗಿರಬೇಕು, ರಕ್ಷಣೆ ಮತ್ತು ಪರದಲ್ಲಿ there is a difference in meaning. ವಿರೋಧ ಪಕ್ಷದ ನಾಯಕರೆ, ರಕ್ಷಣೆ, ಪರ, there is a difference in meaning. ಅರ್ಥ ಬೇರೆ.

ಶ್ರೀ ಸಿದ್ದರಾಮಯ್ಯ : ನೀವು ನಮಗೆ ಪರವಾಗಿರಿ ಎಂದು ಅಲ್ಲ. ರಕ್ಷಣೆ ಮಾಡಿ ಅಂಥ. ನಮ್ಮ ಹಕ್ಕುಗಳನ್ನು ರಕ್ಷಣೆ ಮಾಡಿ ಅಂಥ.

ಅಧ್ಯಕ್ಷರು : ರಕ್ಷಣೆ ಮಾಡಿ ಎಂದು ಕೇಳುವುದು ಅದು ನಿಮ್ಮ ಹಕ್ಕು. ಆದರೆ ಕೇಳಿದ್ದು ಏನು? ಅವರ ಪರವಾಗಿರಬೇಕೆಂದು ಕೇಳಿದರು.

ಶ್ರೀ ಸಿದ್ದರಾಮಯ್ಯ : No. no ಆ ತರಹ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ನಮಗೆ ರಕ್ಷಣೆ ಇರಬೇಕು, ನೀವು ನಿಷ್ಪಕ್ಷಪಾತವಾಗಿರಬೇಕು.

ಅಧ್ಯಕ್ಷರು : ಮತ್ತೆ ಹೇಗೆ ತೆಗೆದುಕೊಳ್ಳಬೇಕು? ಸರಿ ನಾನು ಅದನ್ನು ಒಪ್ಪುತ್ತೇನೆ. ಆದರೆ, 'ರಕ್ಷಣೆ' 'ಪರ' ಇದಕ್ಕೆ ವ್ಯತ್ಯಾಸಗಳಿದೆ ಎಂದು ನನಗೆ ಗೊತ್ತಿರುವ ಕನ್ನಡದಲ್ಲಿ ನಾನು ತಿಳಿದುಕೊಂಡಿದ್ದೇನೆ. 'ರಕ್ಷಣೆ', 'ಪರ' ಏನಿದರ ಅರ್ಥ? ವಿರೋಧ ಪಕ್ಷದ ಪರ ಇರಬೇಕಾದರೆ ಈ ಸ್ಥಾನದಲ್ಲಿರಬೇಕೆ? ಹಾಗೆ ಹೇಳಬಹುದೆ? ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಬಂಡೆಪ್ಪ ಕಾಶೆಂಪೂರ್ : ನಮ್ಮ ಬೀದರ್ ಭಾಷೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೆ ನಾನು ವಾಪಸ್ ತೆಗೆದುಕೊಳ್ಳುತ್ತೇನೆ. ಆದರೆ ನನ್ನ ಉದ್ದೇಶ ಏನೆಂದರೆ.....

ಅಧ್ಯಕ್ಷರು : ಬೀದರ್ ಭಾಷೆ ನನಗೆ ಗೊತ್ತಿಲ್ಲ. ನಾವು ಅಚ್ಚಕನ್ನಡ ಮಾತ್ರ ಕಲಿತಿದ್ದೇವೆ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಏಕೆಂದರೆ, ರಕ್ಷಣೆ ಕೊಡಿ ಎಂದು ನಾವು ಯಾರನ್ನ ಕೇಳಬೇಕು? ಅವರಿಗೆ ನಾವು ಕೇಳುವುದಕ್ಕೆ ಬರುವುದಿಲ್ಲ. ನಾವು ನಿಮಗೆ request ಮಾಡಬೇಕು.

ಅಧ್ಯಕ್ಷರು : ಅದು ಕೇಳಿ, ಆದರೆ ಪರ ಎನ್ನುವ ಶಬ್ದ ಪ್ರಯೋಗಿಸಬಾರದು.

ಶ್ರೀ ಬಂಡೆಪ್ಪ ಕಾಶೆಂಪೂರ್ : ಅಲಿಯನ್ಸ್ ಬಿಲ್ ಬಗ್ಗೆ ಚರ್ಚೆ ಮಾಡದೇ immediate ಪಾಸ್ ಮಾಡಿಕೊಂಡು ಹೋದರೆ ನಾವು ಒಳಗೆ ಏಕೆ ಬರಬೇಕು? ಇವತ್ತು ಮೆಜಾರಿಟಿ ಎಂದು ಎಲ್ಲಾ ಮಾಡಿಕೊಂಡು ಹೋದರೆ ನಾವ್ಯಾಕೆ ಡಿಬೇಟ್ ಮಾಡಬೇಕು? ಇನ್ನೊಂದು ಏಕೆ ಮಾಡಬೇಕು?

ಅವರೇ ಎಲ್ಲವನ್ನು ಮುಗಿಸಿಕೊಂಡು ಹೋಗುವುದಾದರೆ, ನಾವು ಹೊರಗಡೆ ಹೋಗಿ ಅಟೆಂಡೆನ್ಸ್‌ಗೆ ಸಹಿ ಮಾಡಿ ಹೋಗುತ್ತೇವೆ. ಸದರಿ ಬಿಲ್‌ಅನ್ನು ವಾಪಸ್ಸು ತೆಗೆದುಕೊಂಡು ಮತ್ತೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾತನಾಡಿದ ಮೇಲೆ ತಾವು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಈಗಾಗಲೆ ಡಿ.ಕೆ.ಶಿವಕುಮಾರ್ ರವರು ಪ್ರಸ್ತಾಪ ಮಾಡಿದ್ದಾರೆ.

ಅಧ್ಯಕ್ಷರು : ಸರ್ಕಾರದ ಕಡೆಯಿಂದ ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ. ದಯವಿಟ್ಟು ಸುಮ್ಮನಿರಿ. ಸಭೆ ಆರ್ಡ್‌ರ್‌ನಲ್ಲಿ ಇಲ್ಲ. ಆದ್ದರಿಂದ, ಯಾವುದೇ ಚರ್ಚೆ ಬೇಡವೆಂದು ನೀವೇ ಹೇಳುತ್ತೀರಿ. ಪ್ರಸ್ತಾವನೆ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಈಗ ಸರ್ಕಾರದ ಕಡೆಯಿಂದ ಉತ್ತರ ಕೊಡುತ್ತಿದ್ದಾರೆ. ಅವರು ಏನು ಹೇಳುತ್ತಾರೆಂಬುದನ್ನು ಕೇಳಿ, ಆನಂತರ ತೀರ್ಮಾನ ಮಾಡೋಣ. The House is not in order. ಆದ್ದರಿಂದ, ಯಾವುದೇ ರೀತಿಯ ಚರ್ಚೆ ಮಾಡಬಾರದೆಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಆದ್ದರಿಂದ, ಈಗ ಸರ್ಕಾರ ಏನು ಹೇಳುತ್ತದೆಯೋ ನೋಡಿ I will decide. ಆದ್ದರಿಂದ, ಅವರು ಉತ್ತರ ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ : ಮಾನ್ಯ ಸಭಾಧ್ಯಕ್ಷರೆ, ಶುಕ್ರವಾರದಂದು ಸವಿಸ್ತಾರವಾಗಿ ಅಜೀಂ ಪ್ರೇಮ್‌ಜಿ ಖಾಸಗಿ ವಿಶ್ವವಿದ್ಯಾಲಯವನ್ನು ರಾಜ್ಯದಲ್ಲಿ ಕೊಡಬೇಕೆಂಬುದರ ಬಗ್ಗೆ ಸಾಕಷ್ಟು ವಿವರವಾಗಿ ಚರ್ಚೆಯಾಗಿದೆ. ವಿರೋಧ ಪಕ್ಷದಲ್ಲಿರುವ ಎಲ್ಲಾ ಪ್ರಮುಖರುಗಳು ಸವಿಸ್ತಾರವಾಗಿ ಈ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮಂಡನೆ ಮಾಡಿದ್ದಾರೆ. ಈ ರೀತಿಯಾದ ಖಾಸಗಿ ವಿಶ್ವವಿದ್ಯಾಲಯಗಳು ರಾಜ್ಯದಲ್ಲಿ ಬರಬೇಕಾದಂಥ ಅಗತ್ಯತೆಗಳನ್ನು ಸರ್ಕಾರ ಮನಗಂಡು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉನ್ನತ ಶಿಕ್ಷಣ ಸಚಿವರು ಸದನದಲ್ಲಿ ಮಾತನಾಡಿ ಇಡೀ ದೇಶದಲ್ಲಿ ಈ ರೀತಿಯಾದ ಒಟ್ಟು 42 ಖಾಸಗಿ ವಿಶ್ವವಿದ್ಯಾಲಯಗಳು ಕೆಲಸ ಮಾಡುತ್ತಿರುವಾಗ ಅಜೀಂ ಪ್ರೇಮ್‌ಜಿ ಅಂಥವರು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಮುಂದೆ ಬಂದಿರುವುದರಿಂದ ನಾವು ರಾಜ್ಯದಲ್ಲಿ ಅವಕಾಶವನ್ನು ಮಾಡಿಕೊಡ ಬೇಕಾದಂಥ ಅಗತ್ಯತೆ ಇದೆ ಎಂದು ಸದನದಲ್ಲಿ ಮನವರಿಕೆಯಾಗುವ ರೀತಿಯಲ್ಲಿ ಹೇಳಿದರೂ ಕೂಡ ವಿರೋಧ ಪಕ್ಷದಲ್ಲಿರುವ ನೀವು ಇದನ್ನು ವಿರೋಧಿಸಿ ಇಲ್ಲಿ ಧರಣಿ ಕೂಡ ಮಾಡಿದ್ದೀರಿ. ಸಹಜವಾಗಿ ವಿರೋಧ ಪಕ್ಷದಲ್ಲಿರುವವರಿಗೆ ಧರಣಿಯನ್ನು ಮಾಡುವಂಥ ಒಂದು ಅಧಿಕಾರ ಇದೆ. ಆದ್ದರಿಂದ ತಾವುಗಳು ಧರಣಿ ಮಾಡಿ ನಿಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದೀರಿ. ಆದರೆ, ಸರ್ಕಾರದ ಕಡೆ ನಾವು ನಮ್ಮ ವಿವೇಚನೆಗೆ ತಕ್ಕಂತೆ ಈ ರೀತಿಯ ವಿಶ್ವವಿದ್ಯಾಲಯಗಳು ಬರುವುದು ನಮ್ಮ ರಾಜ್ಯದಲ್ಲಿನ ಭವಿಷ್ಯದ ಶಿಕ್ಷಣ ಕ್ಷೇತ್ರದ ಉನ್ನತ್ತಿಗೋಸ್ಕರವಾಗಿ ಇದು ಅಗತ್ಯವಾಗಿದೆ ಎಂದು ಮನವರಿಕೆ ಮಾಡಿ ನಾವು ಇದನ್ನು ಸ್ವೀಕಾರ ಮಾಡಿದ್ದೇವೆ. ಮತ್ತೆ ಇಡೀ ಸದನದ ಸದಸ್ಯರ ಬಹುಮತದಿಂದ ಈ ಒಂದು ಅಂಗೀಕಾರವನ್ನು ಸ್ವೀಕಾರ ಮಾಡಿದೆ. ವಿರೋಧ ಪಕ್ಷವಾಗಿ ತಾವುಗಳು ನಿಮ್ಮ ಭಾವನೆಯನ್ನು ವ್ಯಕ್ತಪಡಿಸುವುದಕ್ಕೆ ನಿಮಗೆ ಯಾವ ರೀತಿಯಾದ ಅಧಿಕಾರ ಇದೆಯೋ ಅದೇ ರೀತಿಯಲ್ಲಿ ಆಡಳಿತ ಪಕ್ಷದವರಾಗಿ ನಮ್ಮದೇ ಆದಂಥ ಕೆಲವು ನಿರ್ಣಯ ಗಳನ್ನು ಈ ಸದನದಲ್ಲಿ ತೆಗೆದುಕೊಳ್ಳುವುದಕ್ಕೆ ಬಹುಮತದ ಆಧಾರದ ಮೇಲೆ ನಮಗೂ ಕೂಡ ಅಧಿಕಾರ ಇದೆ. ಆ ಪ್ರಕಾರ ನಾವು ತೆಗೆದುಕೊಂಡಿದ್ದೇವೆ. ಮತ್ತೆ ಅಲಿಯನ್ಸ್ ವಿಶ್ವವಿದ್ಯಾಲಯದ ಬಗ್ಗೆ ಚರ್ಚೆಯಾಗಬೇಕೆಂದು ಈಗ ಮಾನ್ಯ ಸದಸ್ಯರುಗಳು ಮತ್ತು ನಾಯಕರುಗಳು ಅಭಿಪ್ರಾಯವನ್ನು ವ್ಯಕ್ತಪಡಿ ಸುತ್ತಿದ್ದೀರಿ. ಆದರೆ, ಇದಕ್ಕೂ ಕೂಡ ಮಾನ್ಯ ಅಧ್ಯಕ್ಷರು ಅವಕಾಶವನ್ನು ಕೊಟ್ಟಿದ್ದರು. ನಿಮ್ಮ ಸ್ಥಳಕ್ಕೆ ಬಂದು ಕುಳಿತುಕೊಳ್ಳಿ ಎಂದು ತಾವು ಆ

ಸಂದರ್ಭದಲ್ಲಿ ವಿನಂತಿ ಕೂಡ ಮಾಡಿಕೊಂಡಿದ್ದೀರಿ. ತಾವು ಮೂರು ಮೂರು ಸಲ ವಿನಂತಿ ಮಾಡಿಕೊಂಡರೂ ಸಹ ವಿರೋಧ ಪಕ್ಷದವರು ತಮ್ಮ ಸ್ಥಾನಕ್ಕೆ ಬರಲಿಲ್ಲ.

(ಗೊಂದಲ)

ಅಧ್ಯಕ್ಷರು : ನಾನು ಹೇಳಿದ್ದೇನೆ. ಆದರೆ, ಅವಕಾಶ ಕೊಟ್ಟಿಲ್ಲವೆಂದು ನೀವುಗಳು ಹೇಳಿದರೆ ನಾನೇನೂ ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಚರ್ಚೆಗೆ ತಾವು ಅವಕಾಶ ಮಾಡಿಕೊಟ್ಟರೂ ಸಹ ವಿರೋಧ ಪಕ್ಷದವರು ಆ ಒಂದು ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಲಿಲ್ಲ. ನೀವುಗಳು ತಮ್ಮ ಸ್ಥಾನದಲ್ಲಿ ಕುಳಿತುಕೊಂಡು ಆ ಚರ್ಚೆಯನ್ನು ಮುಂದುವರಿಸಬೇಕಾಗಿತ್ತು. ಮಾನ್ಯ ಅಧ್ಯಕ್ಷರು ಮಾಡಿಕೊಟ್ಟಂಥ ಅವಕಾಶವನ್ನು ವಿರೋಧಪಕ್ಷದವರು ಬಳಕೆ ಮಾಡಿಕೊಳ್ಳದೆ ಈ ರೀತಿಯಾಗಿ ಧರಣಿಯನ್ನು ಮುಂದುವರಿಸುವುದು ಸರಿಯಲ್ಲವೆಂಬುದು ನನ್ನ ಅಭಿಪ್ರಾಯ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ನಾವೆಲ್ಲಾ ಯುಗಾದಿ ಹಬ್ಬವನ್ನು ಸ್ನೇಹಿತರ ಜೊತೆ, ಬಂಧು-ಬಾಂಧವರ ಜೊತೆ ಮಾಡಿ ಹೊಸ ವರ್ಷವನ್ನು ಹೊಸ ನಿಟ್ಟಿನಲ್ಲಿ ಶುಭಾರಂಭ ಮಾಡಬೇಕೆಂಬ ಅಪೇಕ್ಷೆ ಮಾಡಿ ಈ ಸದನದ ಒಳಗಡೆ ಬಂದಿದ್ದೀರೆಂದು ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳುವುದೇನೆಂದರೆ, ಆ ಭಾಗದಲ್ಲಿ ಕುಳಿತು ಕೊಂಡಿರುವ ನಮ್ಮ ಹಿರಿಯ ಸದಸ್ಯರು ಆಡಳಿತ ಪಕ್ಷದಲ್ಲಿದ್ದು ಸಾಕಷ್ಟು ಅನುಭವವನ್ನು ಹೊಂದಿದ್ದಾರೆ ಮತ್ತು ಕಾರ್ಯಕಲಾಪಗಳು ಹೇಗೆ ನಡೆಸಬೇಕೆಂದು ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ಮತ್ತೆ ಸದನದ ಸತ್ಸಂಪ್ರದಾಯಗಳನ್ನು ಎತ್ತಿ ಹಿಡಿದಂಥವರಾಗಿದ್ದಾರೆ. ಮಾನ್ಯ ಅಧ್ಯಕ್ಷರ ಸಮಕ್ಷಮದಲ್ಲಿ ವ್ಯಾಪಕವಾಗಿ ಈ ಒಂದು ಬಿಲ್ ಬಗ್ಗೆ ಚರ್ಚೆಯಾಗಿದೆ. ಇದನ್ನು ಹೊಸದಾಗಿ ಅಂದರೆ ಏಕಾಏಕಿ ತಂದಿರುವಂಥದ್ದಲ್ಲ. ದೇಶದ ಅನೇಕ ಕಡೆ ಈ ರೀತಿಯಾಗಿ ಖಾಸಗಿ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡುವಂಥದ್ದಾಗಿದೆ. ಬೇರೆ ಬೇರೆ ಕಡೆ ಇರುವ ನ್ಯೂನತೆ ಮತ್ತು ಕೊರತೆಗಳನ್ನು ನಾವು ಸರಿಪಡಿಸಿಕೊಂಡು ಈ ಬಿಲ್ ಅನ್ನು ಇಲ್ಲಿ introduce ಮಾಡುವಂಥ ಪ್ರಯತ್ನ ಮಾಡಿದ್ದೇವೆ. ಹೊರದೇಶದವರು ಇಲ್ಲಿ ಬಂದು

ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಬಹುದೆಂದು ತಮಗೆಲ್ಲಾ ಗೊತ್ತಿರುವ ವಿಷಯವಾಗಿದೆ. ಅಜೀಂ ಪ್ರೇಮ್‌ಜಿರವರ ಬಗ್ಗೆ ತಾವು ಮಾತನಾಡುವಾಗ ಉಪಯೋಗಿಸವಂಥ ಶಬ್ದಗಳ ಬಗ್ಗೆ ನಾವು ಸ್ವಲ್ಪ ಗಮನ ಹರಿಸಬೇಕು. ಅವರಿಗೆ ಇದರ ಬಗ್ಗೆ ಸ್ವಂತ ಆಸಕ್ತಿ ಏನಿದೆ ಎಂಬುದನ್ನು ನೋಡಬೇಕು. ಶಿಕ್ಷಣದಲ್ಲಿ ಅಮೂಲಾಗ್ರವಾದಂಥ ಒಂದು ಬದಲಾವಣೆಯನ್ನು ತರಬೇಕೆಂದು ಮತ್ತೆ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಶಿಕ್ಷಕರಿಗೆ ಹೊಸ ರೀತಿಯಲ್ಲಿ ತರಬೇತಿಯನ್ನು ಕೊಡಬೇಕು ಮತ್ತೆ ಶಿಕ್ಷಕರು ಒಳ್ಳೆಯ ರೀತಿಯಲ್ಲಿ ತರಬೇತಿಯನ್ನು ಪಡೆದುಕೊಂಡಾಗ ಅಷ್ಟೇ ಒಳ್ಳೆಯ ರೀತಿಯಲ್ಲಿ ನಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಸಿಗುತ್ತದೆಂಬ ಸದ್ಭಾವನೆಯಿಂದ ಅವರು ಬಂದಿದ್ದಾರೆ. ಆದ್ದರಿಂದ ಇದರ ಬಗ್ಗೆ ವ್ಯಾಫಕವಾದಂಥ ಚರ್ಚೆ ಮಾಡಿ ತಾವು ಕೂಡ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ಈ ಸಂದರ್ಭದಲ್ಲಿ ಮಾನ್ಯ ಸಿದ್ಧರಾಮಯ್ಯನವರಲ್ಲಿ ಕೇಳುವುದೇನೆಂದರೆ, ಹಿಂದೆ ಈ ರೀತಿಯಾಗಿ ಎಷ್ಟು ಬಾರಿ ಚರ್ಚೆಯಾಗಿಲ್ಲ? ನಾನು ವಿರೋಧ ಪಕ್ಷದಲ್ಲಿದ್ದಂಥ ಸಂದರ್ಭದಲ್ಲಿ ಈ ರೀತಿಯಾಗಿ ಚರ್ಚೆಗಳು ಆದ ಮೇಲೆ ನಾನೂ ಕೂಡ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರಬಹುದು. ಮತ್ತೆ ಧರಣಿ ಕೂಡ ಮಾಡಿರಬಹುದು. ಆದರೆ, ಮಾನ್ಯ ಸಭಾಧ್ಯಕ್ಷರು ಒಂದು ಸಾರಿ ತೀರ್ಮಾನ ತೆಗೆದುಕೊಂಡು ಅದರ ಮೇಲೆ ವೋಟಿಂಗ್ ಮಾಡಿದ ನಂತರ ಬಿಲ್ ಪಾಸ್ ಆದ ಮೇಲೆ ಮತ್ತೆ ಚರ್ಚೆ ಮಾಡತಕ್ಕಂಥ ಸಂಪ್ರದಾಯ ಈ ಮನೆಯಲ್ಲಿ ಇಲ್ಲ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾವು ಚರ್ಚೆಗೆ ಸಿದ್ಧರಿದ್ದೇವೆ. ಚರ್ಚೆಯಾಗದೆ ಯಾವುದನ್ನು ಸಹ ಏಕಾಏಕಿ ತಮ್ಮ ಒಂದು ಅಧಿಕಾರವನ್ನು ಮೊಟಕುಗೊಳಿಸಿ ನಾವು ಹೋಗಬೇಕೆಂದು ಎಂದೂ ಆಪೇಕ್ಷೆಪಡುವವರಲ್ಲ. ನೀವು ಹೇಳುವುದಕ್ಕೆ ಸಂಪೂರ್ಣ ಅವಕಾಶವನ್ನು ಕೊಡೋಣ. ಕೊನೆಗೆ ಬಹುಮತದ ಆಧಾರ ಮೇಲೆ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಮಗೂ ಕೂಡ ಸ್ವಾತಂತ್ರ್ಯ ಇದೆ. ಆ ಪ್ರಕಾರ ಬಿಲ್ ಪಾಸ್ ಆಗಿದೆ. ಆದ್ದರಿಂದ, ಅದರ ಬಗ್ಗೆ ಮತ್ತೆ ಪ್ರಸ್ತಾಪ ಮಾಡದೆ ದಯಮಾಡಿ ಎಲ್ಲರೂ ಸಹಕರಿಸಿ ನಿಮ್ಮ ಕುರ್ಚಿಗಳಿಗೆ ಬನ್ನಿ. ವ್ಯಾಪಕವಾಗಿ ಚರ್ಚೆ ಮಾಡೋಣ, ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಒಂದು ಶಾಸನ ಸಭೆಯಲ್ಲಿ ಒಂದು ಶಾಸನ ಮಾಡುವಂಥ ಕಾಲದಲ್ಲಿ ಬಹಳಷ್ಟು ಆಮೂಲಾಗ್ರ ವಾದಂಥ ಚರ್ಚೆಯಾಗಬೇಕು. ಮತ್ತೆ ಮುಂದೆ ಏನು ದುಷ್ಪರಿಣಾಮ ಆಗುತ್ತದೆಂಬುದರ ಬಗ್ಗೆ ಚಿಂತನೆ ಮಾಡಿ ಅದಕ್ಕೆ ಸಲಹೆಗಳನ್ನು ಕೊಡಬೇಕು.

ಬೇಕಾದರೆ, ಅಗತ್ಯವಾಗಿ ಏನಾದರು ತಿದ್ದುಪಡಿ ಮಾಡುವುದಕ್ಕೆ ನಾವು ಸಹ ಒಪ್ಪಿಕೊಂಡು ನಿಮ್ಮ ಮುಂದೆ ಬರಬೇಕು. ಆದ್ದರಿಂದ ಇದರ ಬಗ್ಗೆ ಯಾವುದೇ ಅಡ್ಡಿ ಆತಂಕಗಳಿಲ್ಲ. ಬಿಲ್ ಪಾಸ್ ಆಗುವುದರ ಬಗ್ಗೆ ನನಗೂ ಕೂಡ ಅರ್ಥವಾಗುತ್ತದೆ. ಇದರ ಬಗ್ಗೆ ತಮ್ಮ ಸಮಕ್ಷಮದಲ್ಲಿ ವ್ಯಾಪಕ ಚರ್ಚೆಯಾದ ಮೇಲೆ ಕೊನೆಗೆ ಇದರ ಬಗ್ಗೆ ನೀವು ಹಠ ಮಾಡಿ ಸದನದ ಬಾವಿಗೆ ಬಂದಿರಿ. ನಾನು ಹೇಳುವುದೇನೆಂದರೆ, ಒಂದು ಸದನದ ಕಾರ್ಯ ಕಲಾಪಗಳು ಹೀಗೆ ನಡೆಯಬೇಕೆಂದು ಎಲ್ಲಾದರೂ ಸಂಪ್ರದಾಯ ಇದೆಯೇ? ಲೋಕಸಭೆಯಲ್ಲಿ ಅಥವಾ ದೇಶದಲ್ಲಿನ ಯಾವುದೇ ರಾಜ್ಯದಲ್ಲಿನ ವಿಧಾನ ಮಂಡಲಗಳಲ್ಲಿ ಈ ರೀತಿಯ ಸಂಪ್ರದಾಯ ಇದೆಯೇ? ಚರ್ಚೆ ಮಾಡಿ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದೀರಿ. ಮತ್ತೆ ಇದರ ಅಗತ್ಯ ಏನೆಂಬುದನ್ನು ಹೇಳಿದ್ದೇವೆ. ಈ ವಿಶ್ವವಿದ್ಯಾಲಯ ಬಂದ ಮೇಲೆ ಇದರ ಲಾಭ ನಷ್ಟ ಮತ್ತು ಒಳ್ಳೆಯದು, ಕೆಟ್ಟದ್ದು ಏನೆಂಬುದರ ಬಗ್ಗೆ ಜನ ತೀರ್ಮಾನ ಮಾಡಲಿ. ಮತ್ತೆ ಇದರ ಬಗ್ಗೆ ಯೋಚನೆ ಮಾಡುವುದಕ್ಕೂ ಅವಕಾಶ ಕೂಡ ಇದೆ. ಪ್ರಾಮಾಣಿಕ ಮತ್ತು ಕಳಕಳಿ ಹೊಂದಿರುವಂಥ ಅಜೀಂ ಪ್ರೇಮ್ ಜಿಯವರು ಶಿಕ್ಷಣದಲ್ಲಿ ಅಮೂಲಾಗ್ರವಾದಂಥ ಬದಲಾವಣೆಯನ್ನು ತರುವುದಕ್ಕೆ ಮುಂದೆ ಬಂದಿದ್ದಾರೆ. ಮತ್ತೆ ಇನ್ನು ಅನೇಕ ಜನ ಮುಂದೆ ಬರುತ್ತಿದ್ದಾರೆ. ನಾನು ಮತ್ತು ಮಾನ್ಯ ಶಿವಕುಮಾರ್‌ರವರು ಬಹಳ ಗಂಟೆಗಳವರೆಗೆ ಚರ್ಚೆ ಮಾಡಿದ್ದೇವೆ. ಒಳ್ಳೆಯ ರೀತಿಯಲ್ಲಿ ಕಾರ್ಯಕಲಾಪಗಳು ನಡೆಯುತ್ತಿದೆ, ಅದೇ ರೀತಿಯಲ್ಲಿ ಮುಂದುವರಿಸಿ ಎಂದು ನನ್ನ ಬೆನ್ನು ತಟ್ಟಿದ್ದಾರೆ. ಆದರೆ, ಹಬ್ಬ ಮಾಡಿ ಬಂದು ಇವತ್ತು ಬೆಳಿಗ್ಗೆ ಏಕೆ ಈ ರೀತಿ ನಡೆದುಕೊಳ್ಳುತ್ತಿದ್ದಾರೆಂಬುದು ನನಗೆ ಅರ್ಥವಾಗುತ್ತಿಲ್ಲ. ದಯಮಾಡಿ ಎಲ್ಲರೂ ತಮ್ಮ ಕುರ್ಚಿಯಲ್ಲಿ ಕುಳಿತು ಸಹಕರಿಸಿ, ಕಾರ್ಯಲಾಪ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ. ಮಾನ್ಯ ಸಿದ್ಧರಾಮಯ್ಯನವರೆ, ನೀವು ಹೋಗುತ್ತಿರುವ ಧಾಟಿ ಸರಿ ಇದೆ, ಇದೇ ರೀತಿಯಲ್ಲಿ ಸದನ ಕಾರ್ಯಕಲಾಪಗಳನ್ನು ನಡೆಸಬೇಕೆಂಬ ಅಭಿಪ್ರಾಯವನ್ನು ಮಾನ್ಯ ಡಿ.ಕೆ.ಶಿವಕುಮಾರ್‌ರವರು ವ್ಯಕ್ತಪಡಿಸಿ ಇಲ್ಲಿ ಬಂದು ಪ್ರತಿಭಟನೆ ಮಾಡಿದರೆ, ನಾವು ಏನು ಮಾಡೋಣ ಸ್ವಾಮಿ? ರಾತ್ರಿ 12.00 ಗಂಟೆಯವರೆಗೂ ನನ್ನ ಜೊತೆ ಅವರು ಮಾತನಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ನೀವಿಬ್ಬರು ಆಕಾಶದಲ್ಲಿ ಮಾತನಾಡಿಕೊಂಡು ಭೂಮಿಯ ಮೇಲೆ ತಂದು ಹೇಳಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ದಯಮಾಡಿ ಎಲ್ಲರೂ ಸ್ಥಾನಕ್ಕೆ ಬಂದು ಕಾರ್ಯಕಲಾಪ ನಡೆಯುವುದಕ್ಕೆ ಸಹಕರಿಸಿ. ಮಾನ್ಯ ಅಧ್ಯಕ್ಷರು ಒಂದು ತೀರ್ಮಾನವನ್ನು ಕೊಟ್ಟ ಮೇಲೆ ಮತ್ತೆ ಮತ್ತೆ ಅದರ ಬಗೆ ಪ್ರಸ್ತಾಪ ಮಾಡುವುದು ಈ ಮನೆಯ ಗೌರವಕ್ಕೆ ತಕ್ಕದ್ದಲ್ಲ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಅವಕಾಶ ಕೊಡಿ. ನಾನು ಅಲಿಯನ್ಸ್ ವಿಶ್ವವಿದ್ಯಾಲಯದ ಬಗ್ಗೆ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಆ ನಂತರ ತಾವು ಹೇಳಿ. Government has got all rights. ಆದ್ದರಿಂದ, ನಿಮಗೆ ಅಧಿಕಾರ ಇದೆ. ಆನಂತರ ಹೇಳಿ.

ಶ್ರೀ ಅರವಿಂದ ಲಿಂಬಾವಳಿ : ನೀವು ಅಲಿಯನ್ಸ್ ಬಗ್ಗೆ ಕೇಳಿದ್ದೀರಿ. ಆದ್ದರಿಂದ ಅದರ ಬಗ್ಗೆ ಹೇಳುತ್ತೇನೆ. ಹೇಳುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈಗ ಸಮಯವನ್ನು ವ್ಯರ್ಥಮಾಡದೆ ಒಳ್ಳೆಯ ಕೆಲಸಗಳ ಬಗ್ಗೆ ಚರ್ಚೆ ಮಾಡೋಣ. ಈ ರೀತಿ ತೀರ್ಮಾನ ತೆಗೆದುಕೊಂಡು ಸಮಯವನ್ನು ಏಕೆ ವ್ಯರ್ಥ ಮಾಡುತ್ತೀರಿ? ಸದನವನ್ನು 5 ನಿಮಿಷ ಮುಂದಕ್ಕೆ ಹಾಕಿ.

ಅಧ್ಯಕ್ಷರು : ಈಗ ಸದನವನ್ನು ಅರ್ಧಗಂಟೆ ಮುಂದೂಡಲಾಗಿದೆ.

(ಸದನವು 11 ಗಂಟೆ 39 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಅರ್ಧ ಗಂಟೆ ನಂತರ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 1 ಗಂಟೆ 3 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು, ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.)

(ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ವಿರೋಧ ಪಕ್ಷದ ಸದಸ್ಯರು ಧರಣಿ ಮಾಡುತ್ತಿದ್ದರು)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ಸದನವನ್ನು ಮುಂದೂಡಿ ನಮ್ಮನ್ನು, ಸಭಾನಾಯಕರನ್ನು, ಸಂಸದೀಯ ವ್ಯವಹಾರಗಳು ಸಚಿವರು, ಶಿಕ್ಷಣ ಸಚಿವರು ಮತ್ತು ಶಿಕ್ಷಣ ಸಚಿವರು ಸೇರಿದಂತೆ ನಮ್ಮೆಲ್ಲಾ ಮುಖಂಡರನ್ನು ಕರೆದು ಚರ್ಚೆ ಮಾಡಿದ್ದೀರಿ.

ನಮ್ಮ ಅಭಿಪ್ರಾಯ ಸರ್ಕಾರದ ಉದ್ದೇಶವನ್ನು ಪ್ರಶ್ನೆ ಮಾಡುತ್ತಿಲ್ಲ. ಗುಣಮಟ್ಟದ ಶಿಕ್ಷಣ ಎಲ್ಲರಿಗೂ ಸಿಗಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಆದರೆ ಇದು ಫ್ಲಡ್ ಗೇಟ್ ತೆಗೆದಂತಾಗಬಾರದು ಮತ್ತು ಕಮರ್ಷಿಯಲೈಸ್ ಕೂಡ ಆಗಬಾರದು. ಕರ್ನಾಟಕದ ಹೆಚ್ಚು ಮಕ್ಕಳಿಗೆ ಶಿಕ್ಷಣ ಸಿಗಬೇಕು, ಗುಣಮಟ್ಟದ ಶಿಕ್ಷಣ ಸಿಗಬೇಕೆನ್ನುವ ಕಳಕಳಿ ನಮ್ಮದಾಗಿದೆ. ಅದಕ್ಕೋಸ್ಕರ ನಾವು ಅನೇಕ ಸಲಹೆಗಳನ್ನು ಕೊಟ್ಟಿದ್ದೆವು, ದುರಾದೃಷ್ಟವಶಾತ್ ಅಜೀಂ ಪ್ರೇಮ್‌ಜಿ ಖಾಸಗಿ ವಿಶ್ವವಿದ್ಯಾಲಯದ ಬಗ್ಗೆ ಚರ್ಚೆಯಾಯಿತು, ನಾವು ಈ ಕಾರಣಗಳಿಗೋಸ್ಕರ ನಾವು ಪ್ರತಿಭಟನೆ ಮಾಡಿದೆವು. ಆದರೆ ಅಲಿಯನ್ಸ್ ಯೂನಿವರ್ಸಿಟಿ, ಅದರ ಕಲಂ ಗೋತ್ರವೇನು ಗೊತ್ತಿರುವುದಿಲ್ಲ, ಅದರ ಬಗ್ಗೆ ಚರ್ಚೆನೇ ಆಗದೆ ಆಗಿಹೋಗಿದೆ, ಆ ಬಗ್ಗೆ ಈಗ ನಾವು ನಿಮ್ಮ ಸಮಕ್ಷದಲ್ಲಿ ಚರ್ಚೆ ಮಾಡಿದ್ದೇವೆ. ಮೇಲ್ಮನೆಗೆ ಎರಡು ಬಿಲ್‌ಗಳು ಹೋಗಿದ್ದಾವೆ. ಅಲ್ಲಿ ನೀವೇನು ಅಭಿಪ್ರಾಯಗಳನ್ನು ಕೊಟ್ಟಿದ್ದೀರಿ, ನಿಮ್ಮ ಮುಂದೇನು ಹೇಳಿದ್ದೇವೆ, ಸರ್ಕಾರ ಪರಿಗಣಿಸುತ್ತದೆಂದು ಹೇಳಿದ್ದಾರೆ. ದಯಮಾಡಿ, ಮೇಲ್ಮನೆಯಲ್ಲಿ ಏನು ಒಪ್ಪಿಗೆಯನ್ನು ಕೊಟ್ಟಿದ್ದಾರೆ, ಅದನ್ನು ಹೇಳಬೇಕಾಗುತ್ತದೆ. ತಮ್ಮ ಅಧ್ಯಕ್ಷತೆಯಲ್ಲಿ ಸರ್ಕಾರ ಮತ್ತು ವಿರೋಧ ಪಕ್ಷದವರು ಕುಳಿತು ಮಾತನಾಡು ವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ ಅದಕ್ಕೆ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ, ಅಜೀಂ ಪ್ರೇಮ್‌ಜಿಯವರ ಬಿಲ್ ಬಗ್ಗೆ ಇಲ್ಲಿ ಈಗಾಗಲೇ ಚರ್ಚೆಯಾಗಿದೆ. ನಮ್ಮ ಅಭಿಪ್ರಾಯವನ್ನು ಕೊಟ್ಟಿದ್ದೇವೆ, ಸಕಾರ ಪಾಸ್ ಮಾಡಿಕೊಂಡಿದೆ. ಆದರೆ ಈ ಅಲಿಯನ್ಸ್ ವಿಶ್ವವಿದ್ಯಾಲಯದ ಬಿಲ್ ಏನು ಬಂತು ಇದರ ಬಗ್ಗೆ ಚರ್ಚೆನೂ ಆಗಿಲ್ಲ. ತಮ್ಮ ಕೊಠಡಿಯಲ್ಲಿ ಚರ್ಚೆಯಾಗುವಾಗ ನಮ್ಮ ಸಲಹೆಗಳನ್ನೆಲ್ಲಾ ಕೊಟ್ಟಿದ್ದೇವೆ. ಮೇಲ್ಮನೆಗೆ ಸಂಬಂಧ ಪಟ್ಟಿದ್ದೆಲ್ಲಾ ಸೂಕ್ತವಾದ ಉತ್ತರವನ್ನು ಅವರು ಕೊಡುತ್ತಾರೆಂದು ಭಾವಿಸುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಕೊಠಡಿಯಲ್ಲಿ ವಿರೋಧ ಪಕ್ಷದ ನಾಯಕರು ಸೇರಿದಂತೆ ಅನೇಕ ಹಿರಿಯ ನಾಯಕರೊಡನೆ ಚರ್ಚಿಸಿದಂತೆ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಬಿಲ್ ಇಲ್ಲಿ ಏನು ಪಾಸ್ ಆಗಿದೆ, ಎರಡೂ ಕೂಡ ಪಾಸ್ ಆಗಿದೆ. ಆ ಹಿನ್ನೆಲೆಯಲ್ಲಿ ವಿಧಾನ ಪರಿಷತ್ತಿನಲ್ಲೂ ಕೂಡ ಚರ್ಚೆಯಾಗ

ಬೇಕಾಗಿದೆ. ತಮ್ಮ ಸಮ್ಮುಖದಲ್ಲಿ ಚರ್ಚೆಯಾದಂತೆ ಆ ಬಗ್ಗೆ ಅಲ್ಲಿ ಸುದೀರ್ಘವಾಗಿ ಚರ್ಚೆ ಮಾಡಿ, ಅಲಿಯನ್ಸ್ ವಿಶ್ವವಿದ್ಯಾಲಯದ ಬಗ್ಗೆ ಸರ್ಕಾರ ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ. ಮತ್ತೆ ಅದು Prestigious institution ಎಂಬುದರಲ್ಲಿ ಎರಡನೇ ಮಾತಿಲ್ಲ. ಎಲ್ಲಾ ಮಾಹಿತಿಗಳನ್ನು ವಿರೋಧ ಪಕ್ಷದ ನಾಯಕರಿಗೆ ಒದಗಿಸುವಂತೆ ಸಭಾನಾಯಕರು ಹೇಳಿದ್ದಾರೆ. ನಾನು, ಬೇರೆ ಬೇರೆ ರಾಜ್ಯಗಳಲ್ಲಿರುವಂಥ 58 ವಿಶ್ವವಿದ್ಯಾಲಯಗಳ ಬಗ್ಗೆ ಅಲ್ಲಿ ಏನು ಆಕ್ಟ್ ಪಾಸ್ ಆಗಿದೆ, ಪರಿಣಿತರ ವರದಿ, ಇತ್ಯಾದಿ ಮಾಹಿತಿಗಳನ್ನು ಕೂಡ, ವಿರೋಧ ಪಕ್ಷದ ಎಲ್ಲಾ ಹಿರಿಯ ನಾಯಕರಿಗೆ ಒದಗಿಸುತ್ತೇನೆ. ಈ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಸರ್ಕಾರ ಸೂಕ್ತವಾದ ನಿರ್ಧಾರವನ್ನು ಕೈಗೊಳ್ಳುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅಧ್ಯಕ್ಷರು : ಈಗ ಕರ್ನಾಟಕದಲ್ಲಿ ಎರಡು ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆ ಬಗ್ಗೆ ಎರಡು ಬಿಲ್‌ಗಳು ಇಲ್ಲಿ introduce ಆಗಿತ್ತು, ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಅಲಿಯನ್ಸ್ ವಿಶ್ವವಿದ್ಯಾಲಯದ ಬಗ್ಗೆ ಚರ್ಚೆಯಾಗಿಲ್ಲ. ವಿಧಾನ ಪರಿಷತ್ತಿಗೆ ಹೋದಾಗ, ಸರ್ಕಾರ, ಇವತ್ತು ನನ್ನ ಕೊಠಡಿಯಲ್ಲಿ ಏನು ಅಭಿಪ್ರಾಯವನ್ನು ಮಂಡಿಸಿದೆ, ಅದನ್ನು ಸರ್ಕಾರ ಪರಿಗಣಿಸಿ ಅದಕ್ಕೆ ಸೂಕ್ತವಾದ ತೀರ್ಮಾನವನ್ನು ಕೂಡ ಕೈಗೊಳ್ಳುತ್ತದೆ ಎಂಬುದು ತೀರ್ಮಾನವಾಗಿದೆ. ಹಾಗಾಗಿ ಆ ಒಂದು ಆಶ್ವಾಸನೆ ಮತ್ತು ತೀರ್ಮಾನದ ಆಧಾರದ ಮೇಲೆ ಬಾವಿಯಲ್ಲಿರುವ ಎಲ್ಲಾ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಹಕರಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಸರ್ಕಾರ ನಮ್ಮ ಅಭಿಪ್ರಾಯವನ್ನು ಮನ್ನಣೆ ಮಾಡುತ್ತೇವೆಂದು ಒಪ್ಪಿಕೊಂಡಿದೆ. ದಯಮಾಡಿ ಬಾವಿಯಲ್ಲಿರುವ ಎಲ್ಲಾ ಸದಸ್ಯರು ತಮ್ಮ ಸ್ಥಾನಗಳಿಗೆ ಬರಬೇಕು.

(ಸದನದ ಬಾವಿಯಲ್ಲಿದ್ದ ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಕ್ಕೆ ತೆರಳಿದರು)

2. ಪ್ರಶ್ನೋತ್ತರ :

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಚಿಕ್ಕಬಳ್ಳಾಪುರದಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಾಣ

91 (781) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರ ಪರವಾಗಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರದಲ್ಲಿ ಭಾರತದ ಮಾಜಿ ಪ್ರಧಾನ ಮಂತ್ರಿ ಪಂಡಿತ್ ಜವಹರ್‌ಲಾಲ್ ನೆಹರು ಮತ್ತು ಸರ್. ಎಂ.ವಿಶ್ವೇಶ್ವರಯ್ಯರವರು ಪ್ರಾರಂಭಿಸಿದ ಗ್ರಂಥಾಲಯ ಕಟ್ಟಡವು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಆ ಕಟ್ಟಡದ ಕಾರ್ಯ ಎಂದು ಪ್ರಾರಂಭ ಮಾಡಲಾಗುವುದು, ಅದಕ್ಕೆ ಮೀಸಲಿಟ್ಟ ಹಣವೆಷ್ಟು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಈ ಕುರಿತಾಗಿ ರೂ. 160.00 ಲಕ್ಷ ಅನುದಾನ ಮಂಜೂರು ಮಾಡುವಂತೆ ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿದೆ. ಸದರಿ ಇಲಾಖೆಯಿಂದ ಅನುದಾನ ಮಂಜೂರಾದ ಕೂಡಲೇ ಕಾಮಗಾರಿ ಪ್ರಾರಂಭಿಸಲಾಗುವುದು.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಹಾಗೂ ಪಂಡಿತ್ ಜವಾಹರಲಾಲ್ ನೆಹರುರವರು ಇವರಿಬ್ಬರೂ ಗುದ್ದಲಿ ಪೂಜೆ ಮಾಡಿದ್ದಂಥ ಒಂದು ಗ್ರಂಥಾಲಯವಿದೆ. ಇವತ್ತು ಆ ಕಟ್ಟಡ ಶಿಥಿಲವಾಗಿದೆ. ಅಲ್ಲಿ ನಾಯಿಗಳು ಹಾಗೂ ಭಿಕ್ಷುಕರು ಬಂದು ಮಲಗುತ್ತಾರೆ. ಅಂತಹ ಒಬ್ಬ ಹಿರಿಯ ಮುತ್ಸದ್ದಿಯವರು ಗುದ್ದಲಿ ಪೂಜೆ ಮಾಡಿದಂತಹ ಪ್ರಾಚೀನವಾದ ಒಂದು ಗ್ರಂಥಾಲಯ ಕಟ್ಟಡ ಇವತ್ತು ಆ ಪರಿಸ್ಥಿತಿಗೆ ಬಂದಿದೆ, ಆ ಕಟ್ಟಡವನ್ನು ಕಟ್ಟಲಿಕ್ಕೆ ಇವರ ಬಳಿ ಹಣ ಇಲ್ಲ. ಅವರು ಏನು ಹೇಳುತ್ತಾರೆಂದರೆ, ಲೋಕೋಪಯೋಗಿ ಇಲಾಖೆಗೆ ನಾವು 160 ಲಕ್ಷ ರೂ.ಗಳನ್ನು ಕೇಳಿದ್ದೇವೆ, ಅವರು ಹಣ ಕೊಟ್ಟರೆ ನಾವು

ಮಾಡುತ್ತೇವೆಂದು ಹೇಳುತ್ತಾರೆ. ಇವರಿಗೆ ಪಂಡಿತ್ ಜವಾಹರಲಾಲ್ ನೆಹರುರವರ ಬಗ್ಗೆ ಅಥವಾ ಸರ್ ಎಂ. ವಿಶ್ವೇಶ್ವರಯ್ಯನವರ ಬಗ್ಗೆ ಹಾಗೂ ಇವರು ಕಟ್ಟಿದಂತಹ ಗ್ರಂಥಾಲಯದ ಬಗ್ಗೆ ಇವರಿಗೆ ಯಾವ ತರಹ ಆಸಕ್ತಿ ಇದೆ ಎಂದು ತಾವು ಅರ್ಥ ಮಾಡಿಕೊಳ್ಳಬೇಕು. 160 ಲಕ್ಷ ರೂ. ಗಳನ್ನು PWD ಇಲಾಖೆಯವರು ಬಿಡುಗಡೆ ಮಾಡಿದರೆ ಮಾಡುತ್ತೇವೆಂದು ಹೇಳುತ್ತಾರೆ. ಕೆಂಗೇರಿಯಲ್ಲಿ ಗಾಂಧೀಜಿಯವರು ಓಡಾಡಿದಂತಹ ಸ್ಥಳಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಗಾಂಧೀಜಿಯವರ ಸ್ಥಳಕ್ಕೆ ಒಂದು ಕೋಟಿ ರೂ. ಕೊಟ್ಟಿದ್ದಾರೆ. ಪಂಡಿತ್ ಜವಾಹರಲಾಲ್ ನೆಹರು ಹಾಗೂ ಮಾನ್ಯ ವಿಶ್ವೇಶ್ವೇರಯ್ಯನವರು ಗುದ್ದಲಿ ಪೂಜೆ ಮಾಡಿದಂತಹ ಕಟ್ಟಡಕ್ಕೆ ಇವರ ಹತ್ತಿರ ಹಣ ಇಲ್ಲವೆಂದರೆ ನಿಜವಾಗಿಯೂ ನಮಗೆ ನೋವಾಗುತ್ತದೆ. ಇವರು ತತಕ್ಷಣ ಹಣ ಬಿಡುಗಡೆ ಮಾಡುತ್ತಾರಾ ಅಥವಾ ಇಲ್ಲವೋ ಎಂಬುದನ್ನು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಬಹಳ ಪ್ರಮುಖವಾದಂತಹ ಪ್ರಶ್ನೆಯನ್ನು ತಾವು ಎತ್ತಿದ್ದೀರಿ. ಒಬ್ಬ ಭಾರತದ ಒಬ್ಬ ಮಾಜಿ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರುರವರ ಹೆಸರು ಮತ್ತು ಸರ್ ಎಂ. ವಿಶ್ವೇಶ್ವರಯ್ಯನವರು ಪ್ರಾರಂಭಿಸಿದಂತಹ ಈ ಗ್ರಂಥಾಲಯ ಶಿಥಿಲಾವಸ್ಥೆಯಲ್ಲಿ ಇರುವುದಕ್ಕೆ ಇಷ್ಟು ದಿವಸಗಳಿಂದ ಬಿಟ್ಟಿದ್ದೇವೆ ಎನ್ನುವುದೇ ನಮಗ್ಯಾರು ಗೌರವ ತರುವಂತಹ ಸಂಗತಿ ಅಲ್ಲ. ಅದಕ್ಕೆ ತತಕ್ಷಣ ಅಗತ್ಯ ಹಣವನ್ನು ಬಿಡುಗಡೆ ಮಾಡಿ ಆದಷ್ಟು ಬೇಗ ಇದನ್ನು ಸುವ್ಯವಸ್ಥೆಗೆ ತಂದು ನಮಗೆಲ್ಲರಿಗೂ ಗೌರವ ತರುವ ರೀತಿಯಲ್ಲಿ ಆ ಕಟ್ಟಡವನ್ನು ರಿಪೇರಿ ಹಾಗೂ ಅಭಿವೃದ್ಧಿ ಮಾಡುವುದರ ಕಡೆಗೆ ನಾವು ಗಮನವನ್ನು ಕೊಟ್ಟು ತತಕ್ಷಣ ಆ ಕೆಲಸವನ್ನು ಮಾಡುತ್ತೇವೆ.

ಅಧ್ಯಕ್ಷರು : ಅಷ್ಟು ಆಶ್ವಾಸನೆ ಕೊಟ್ಟ ಮೇಲೆ ಪ್ರಶ್ನೆ ಬೇಡ.

ಡಾ:ಎಂ.ಸಿ.ಸುಧಾಕರ್ : ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿಸಿ ಕೊಳ್ಳುವುದು,.....

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳೇ 'ನಾನು ಮಾಡಿಸುತ್ತೇನೆ', ಎಂದು ಹೇಳಿದ ಮೇಲೆ ಇನ್ನೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಎಲ್ಲಾ ಕೆಲಸ ಮಾಡಿಸಿ ನಿಮ್ಮ ಜಿಲ್ಲೆಯ ಎಲ್ಲರನ್ನೂ ಕರೆದುಕೊಂಡು ಹೋಗಿ, ಮಾನ್ಯ ಪ್ರತಿಪಕ್ಷದ ನಾಯಕರನ್ನೂ ಕರೆದುಕೊಂಡು ಹೋಗಿ ಒಳ್ಳೆಯ ರೀತಿಯಲ್ಲಿ

ಅದನ್ನು ಪ್ರಾರಂಭ ಮಾಡೋಣ. ನೀವೆಲ್ಲಾ ಸೇರಿ ಅದು ಯಾವ ರೀತಿ ಆಗಬೇಕೆಂದು ಅಪೇಕ್ಷೆ ಪಡುತ್ತೀರೋ ಆ ರೀತಿ ಮಾಡೋಣ.

ಕಾರ್ಕಳದಲ್ಲಿ ಮಹಿಳಾ ಪಾಲಿಟೆಕ್ನಿಕ್ ಕಾಲೇಜ್ ಕಟ್ಟಡ

92 (1406) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರ್ಕಳದಲ್ಲಿರುವ ಮಹಿಳಾ ಪಾಲಿಟೆಕ್ನಿಕ್‌ಗೆ ಕಟ್ಟಡ ಕಟ್ಟಲು ಸ್ಥಳವನ್ನು ಒದಗಿಸಿದ್ದರೂ ಕಟ್ಟಡದ ಕೆಲಸ ಪ್ರಾರಂಭವಾಗಿಲ್ಲದಿರುವ ಕಾರಣವೇನು;

ಆ) ಕಟ್ಟಡ ಮಂಜೂರಾತಿಯಾಗಿದೆಯೇ ಹಾಗೂ ಎಷ್ಟು ಮೊತ್ತದೊಂದಿಗೆ ಕಾಮಗಾರಿ ನಿರ್ವಹಣೆಯನ್ನು ಯಾವ ಏಜೆನ್ಸಿಯವರು ಪ್ರಾರಂಭ ಮಾಡಿರುತ್ತಾರೆ;

ಇ) ಕಾರ್ಕಳ ತಾಲ್ಲೂಕಿನ ಬೈಲೂರು-ಮುನಿಯಾಲು-ಬಜೆಗೋಲಿಯಲ್ಲಿ ಪದವಿ ಕಾಲೇಜನ್ನು ಸರ್ಕಾರ ಪ್ರಾರಂಭಿಸುವ ಪ್ರಸ್ತಾವನೆ ಇದೆಯೇ;

ಈ) ಹಾಗಿದ್ದಲ್ಲಿ, ಈ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗುವುದೆ?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಕಾರ್ಕಳದಲ್ಲಿರುವ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್‌ಗೆ ಕಟ್ಟಡವನ್ನು ನಿರ್ಮಿಸಲು ಅನುದಾನದ ಲಭ್ಯತೆಯನ್ನು ನೋಡಿ ಕೊಂಡು ಅನುಮೋದನೆ ನೀಡಲಾಗುವುದು.

ಆ) ಸೂಕ್ತ ಸಂದರ್ಭದಲ್ಲಿ ತೀರ್ಮಾನಿಸಲಾಗುವುದು.

ಇ) ಇದೆ.

ಈ) ಅನುದಾನದ ಲಭ್ಯತೆ ಮತ್ತು ಅಗತ್ಯತೆಯ ಆಧಾರ ಮುಂಬರುವ ವರ್ಷಗಳಲ್ಲಿ ಪ್ರಾರಂಭಿಸಲಾಗುವುದು.

ಶ್ರೀ ಕೆ. ಅಭಯ ಚಂದ್ರ ಜೈನ್ (ಶ್ರೀ ಗೋಪಾಲ ಭಂಡಾರಿ ಹೆಚ್. ರವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾಡುತ್ತೇವೆಂದು ಹೇಳುತ್ತೀರಿ, ಆದರೆ ಮಹಿಳಾ ಕಾಲೇಜು ಪ್ರಾರಂಭವಾಗಿ ಒಂದು ಸಣ್ಣ ಹಾಲ್‌ನಲ್ಲಿ ನಡೆಯುತ್ತಿದೆ. ಮೂರು ವರ್ಷಗಳು ಕಳೆದರೂ ಇನ್ನೂ ಕೂಡ ಸ್ವಂತ ಕಟ್ಟಡ ಆಗಲಿಲ್ಲ. ಈ ವರ್ಷವಾದರೂ ಆ ಕಟ್ಟಡ ಕಟ್ಟಬೇಕಿತ್ತು. ಈ ವರ್ಷ ಕೂಡ ಬಜೆಟ್‌ನಲ್ಲಿ

ಏನೂ ತೋರಿಸದೆ ಕಡೆಗಣಿಸಲಾಗಿದೆ. ಈ ವರ್ಷವೇ ಹೊಸ ಕಟ್ಟಡ ಪ್ರಾರಂಭ ಮಾಡಬೇಕು. ಹಾರಿಕೆ ಉತ್ತರ ಕೊಟ್ಟರೆ ಆಗುವುದಿಲ್ಲ. ಮಾನ್ಯ ಉನ್ನತ ಶಿಕ್ಷಣ ಸಚಿವರು ಸರಿಯಾದ ಉತ್ತರ ಕೊಡಬೇಕು. ಮಹಿಳಾ ಟೆಕ್ನಿಕಲ್ ಕಾಲೇಜನ್ನು ಹಿಂದುಳಿದ ಪ್ರದೇಶ ಕಾರ್ಕಳ ತಾಲ್ಲೂಕಿಗೆ ಕೊಟ್ಟಿದ್ದೀರಿ. ಕೊಟ್ಟು ಮೂರು ವರ್ಷಗಳಾದವು. ಈಗ ಅದು ಸಣ್ಣ ಸಣ್ಣ ಕೊಠಡಿಗಳಲ್ಲಿ ನಡೆಯುತ್ತಿದೆ. ಆದ್ದರಿಂದ ಕೂಡಲೇ ಹೊಸ ಕಟ್ಟಡ ನಿರ್ಮಾಣವಾಗ ಬೇಕಾಗಿದೆ. ಅದಕ್ಕೆ 13 ಎಕರೆ ಜಾಗ ಕಾದಿರಿಸುವಂತಹ ಕೆಲಸ ಕೂಡ ಆಗಿದೆ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, 132 ಕಾಲೇಜುಗಳು ಮತ್ತು ಆ ಪಾಲಿಟೆಕ್ನಿಕ್‌ಗಳಿಗೆ ನಾವು ಕಟ್ಟಡವನ್ನು ಪ್ರಾರಂಭ ಮಾಡಿದ್ದೇವೆ. ಕಾರ್ಕಳದ ವಿಷಯವಾಗಿ ಹೇಳುವುದಾದರೆ ಅವರು ನಮಗೆ ಲ್ಯಾಂಡ್ hand over ಮಾಡುವುದು ನಿಧಾನವಾಯಿತು. ಕಾಲೇಜು ಪ್ರಾರಂಭವಾಗಿ ಮೂರು ವರ್ಷ ಆದರೂ ಕೂಡ ಲ್ಯಾಂಡ್ ಇಲ್ಲವೆಂದರೆ ಕಟ್ಟಡ ಕಟ್ಟುವುದಕ್ಕೆ ಸಾಧ್ಯವೇ ಇಲ್ಲ. ಅದು ನಿಧಾನವಾಗಿದ್ದರಿಂದ ಆರ್ಥಿಕ ಇಲಾಖೆಯಿಂದ ಒಪ್ಪಿಗೆಯನ್ನು ಪಡೆದು ಮುಂದಿನ ವರ್ಷದಲ್ಲಿ ಕಟ್ಟಡ ಕಾಮಗಾರಿಯನ್ನು ತೆಗೆದುಕೊಳ್ಳು ವಂತಹ ಯೋಜನೆಯನ್ನು ಸಿದ್ಧಪಡಿಸುತ್ತೇವೆ.

ಶ್ರೀ ಕೆ. ಅಭಯಚಂದ್ರ ಜೈನ್ : ಮಾನ್ಯ ಅಧ್ಯಕ್ಷರೆ, 13 ಎಕರೆ ಜಾಗ ತಯಾರಿದೆ. ಆದ್ದರಿಂದ ಈ ವರ್ಷ ಕಟ್ಟಡ ಪ್ರಾರಂಭ ಮಾಡಿದರೆ ಸುಲಭ ವಾಗುತ್ತದೆ. ಈ ಸಾರಿಯ ಬಜೆಟ್‌ನಲ್ಲಿ ಸ್ವಲ್ಪ ಹಣ ಕಾದಿರಿಸಿ, ಈ ವರ್ಷವೇ ಹೊಸ ಕಟ್ಟಡ ಪ್ರಾರಂಭ ಮಾಡಿದರೆ ಹಿಂದುಳಿದ ಪ್ರದೇಶಕ್ಕೆ ಅನುಕೂಲ ವಾಗುತ್ತದೆ ಎಂದು ನಮ್ಮ ಆಸೆ.

ಶ್ರೀ ಅರವಿಂದ ಲಿಂಬಾವಳಿ : ನನ್ನದೂ ಕೂಡ ಅದೇ ಆಸೆ ಇದೆ. ಅವರು ಕಟ್ಟಡ ಕಟ್ಟುವುದಕ್ಕೆ ಜಾಗ ಕೊಡುವುದಕ್ಕೆ ತಡ ಮಾಡಿದ್ದಾರೆ. ಹಾಗಾಗಿ ನಮ್ಮ ಇಲಾಖೆಯಿಂದ ತಡವಾಗಿದೆ. ಅಷ್ಟೇ ಹೊರತು ಅಲ್ಲಿ ಕಟ್ಟಡ ಕಟ್ಟಬಾರದು ಎಂದು ನಮ್ಮ ಉದ್ದೇಶ ಇಲ್ಲ. ಅತಿ ಶೀಘ್ರದಲ್ಲಿಯೇ ಅದನ್ನು ಪ್ರಾರಂಭ ಮಾಡುವಂತಹ ಕ್ರಮ ತೆಗೆದುಕೊಳ್ಳುತ್ತೇವೆ.

2010–11 ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜು ಮಂಜೂರು ಮಾಡುವ ವಿಚಾರ

93 (332) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) 2010–11ನೇ ಸಾಲಿನಲ್ಲಿ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜು ಮಂಜೂರು ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಹಾಲಿ ಮಂಜೂರಾಗಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸುವವರೆಗೆ ಯಾವುದೇ ಹೊಸ ಕಾಲೇಜುಗಳನ್ನು ಮಂಜೂರು ಮಾಡದಿರಲು ಸರ್ಕಾರ ತೀರ್ಮಾನಿಸಿರುತ್ತದೆ. ಆದುದರಿಂದ 2010–11ನೇ ಸಾಲಿನಲ್ಲಿ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಉದ್ದೇಶವಿರುವುದಿಲ್ಲ.

ಶ್ರೀ ಪ್ರತಾಪಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೆ, 2010–11ನೇ ಸಾಲಿನಲ್ಲಿ ಯಾವುದೇ ಹೊಸ ಪದವಿ ಪೂರ್ವ ಕಾಲೇಜುಗಳನ್ನು ಕೊಡವುದಿಲ್ಲವೆಂದು ಉತ್ತರ ಒದಗಿಸಿದ್ದಾರೆ. ನಮ್ಮ ಜಿಲ್ಲೆ ಶಿಕ್ಷಣ ಕ್ಷೇತ್ರದಲ್ಲಿ ಅತ್ಯಂತ ಹಿಂದುಳಿದಿರುವಂತಹ ಜಿಲ್ಲೆ. ಈಗ ಅಲ್ಲಿರುವಂತಹ ಮಕ್ಕಳ ಹಾಜರಾತಿಗೆ ಅನುಗುಣವಾಗಿ ಅಲ್ಲಿ ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳು ಬಹಳಷ್ಟು ಕಡಿಮೆ ಇರುವುದರಿಂದ, ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಹೆಚ್ಚಿನ ಪ್ರೌಢಶಾಲೆಗಳನ್ನು ಮತ್ತು ಪದವಿಪೂರ್ವ ಕಾಲೇಜುಗಳನ್ನು ಮಂಜೂರು ಮಾಡಬೇಕೆಂದು ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಶ್ರೀಯುತ ಪ್ರತಾಪಗೌಡ ಪಾಟೀಲ್‌ರವರು ಇವತ್ತು ಹೊಸ ಜೂನಿಯರ್ ಕಾಲೇಜುಗಳು ಬೇಕೆನ್ನುವಂತಹ ಅಪೇಕ್ಷೆಯನ್ನು ವ್ಯಕ್ತಪಡಿಸಿ ಈ ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ ನಾವು ಕಳೆದ ಕೆಲವು ವರ್ಷಗಳಿಂದ 2006–07ರಲ್ಲಿ 199 ಕಾಲೇಜುಗಳು ಮತ್ತು 2007–08ರಲ್ಲಿ 293 ಕಾಲೇಜುಗಳನ್ನು ಇಡೀ ರಾಜ್ಯದಲ್ಲಿ ಪ್ರಾರಂಭ ಮಾಡಿದ್ದೇವೆ. ಅದಕ್ಕೆ ಮೂಲಭೂತ ಸೌಕರ್ಯಗಳನ್ನು

ಕೊಡುವಂತಹ ಎಲ್ಲಾ ಪ್ರಯತ್ನವನ್ನೂ ನಮ್ಮ ಸರ್ಕಾರದಲ್ಲಿ ಕಳೆದ ಎರಡು ವರ್ಷಗಳಿಂದ ಬಹಳ ಬಲವಾಗಿ ಬೇರೆ ಬೇರೆ ಯೋಜನೆ ಅಡಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದರ ಜೊತೆಯಲ್ಲಿ ನಾನು ಕಳೆದ ವಾರ ಅಷ್ಟೇ ಈ ಸದನದಲ್ಲಿ ಹೇಳಿದ ಹಾಗೆ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳನ್ನು ನಾವು ದೊಡ್ಡ ಪ್ರಮಾಣದಲ್ಲಿ ರಾಜ್ಯದ ಜೂನಿಯರ್ ಕಾಲೇಜುಗಳಲ್ಲಿ ತೆಗೆಯುವುದಕ್ಕೆ ನಾವು ಅವಕಾಶಗಳನ್ನು ಮಾಡಿಕೊಡುತ್ತಿದ್ದೇವೆ. ಸುಮಾರು 437 ವಿಜ್ಞಾನ ಮತ್ತು ಸುಮಾರು 210 ವಾಣಿಜ್ಯ ವಿಭಾಗಗಳನ್ನು ತೆಗೆಯುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ. ಬರುವಂತಹ ದಿನಗಳಲ್ಲಿ ಶ್ರೀಯುತ ಪ್ರತಾಪಗೌಡ ಪಾಟೀಲ್‌ರವರು ಕೇಳುತ್ತಿರುವ ಸ್ಥಳದಲ್ಲಿ ಜ್ಯೂನಿಯರ್ ಕಾಲೇಜನ್ನು ಕೊಡುವುದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ರಾಜ್ಯದಲ್ಲಿ ಕುಡಿಯುವ ನೀರಿಗಾಗಿ ಸಮಿತಿ ರಚಿಸಿರುವ ಬಗ್ಗೆ

94 (1337) ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಬಹಳ ಅವಶ್ಯಕತೆಯಿರುವ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿಗಾಗಿ ಸಮಿತಿ ರಚಿಸಲಾಗಿದ್ದು, ಆ ಸಮಿತಿ ಅಸ್ತಿತ್ವದಲ್ಲಿದೆಯೇ;

ಆ) ಹಾಗಿದ್ದಲ್ಲಿ, ಇದುವರೆವಿಗೂ ಸಮಿತಿಗೆ ಬಿಡುಗಡೆ ಮಾಡಲಾದ ಅನುದಾನವೆಷ್ಟು;

ಇ) ಸಮಿತಿಯನ್ನು ಮುಂದುವರೆಸುವ ಇಚ್ಛೆ ಸರ್ಕಾರಕ್ಕಿದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಇದೆ.

ಆ) ರೂ.35.20 ಕೋಟಿ ಅನುದಾನವನ್ನು ಶಾಸಕರ ಅಧ್ಯಕ್ಷತೆ ಯಲ್ಲಿರುವ ಟಾಸ್ಕ್ ಫೋರ್ಸ್ ಸಮಿತಿಗಳಿಗೆ ಬಿಡುಗಡೆ ಮಾಡಲಾಗಿದೆ. ಇದಲ್ಲದೆ, ಬರಪೀಡಿತ 86–ತಾಲ್ಲೂಕುಗಳಲ್ಲಿ ಕೈಗೊಂಡ ಕುಡಿಯುವ ನೀರಿನ ಕಾಮಗಾರಿಗಳನ್ನು ಟಾಸ್ಕ್ ಫೋರ್ಸ್ ಸಮಿತಿ ಶಿಫಾರಸ್ಸಿನಂತೆ ಅನುಷ್ಠಾನ

ಗೊಳಿಸಲು ತಿಳಿಸಿ, ಪ್ರತ್ಯೇಕವಾಗಿ ರೂ.14.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಸಧ್ಯಕ್ಕೆ ಸದರಿ ಸಮಿತಿಗಳು ಚಾಲನೆಯಲ್ಲಿವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ಆದರೆ ಕುಡಿಯುವ ನೀರಿನ ಸಮಸ್ಯೆಯಿಂದ ಪ್ರತಿಯೊಬ್ಬ ಶಾಸಕರಿಗೂ ತೊಂದರೆಯಾಗುತ್ತಿದೆ. ಕಾರಣ ಈಗಾಗಲೇ ಜಿಲ್ಲಾ ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇದೆ. ಅಲ್ಲಿ ಆ ಸದಸ್ಯರುಗಳು ಅವರಿಗೆ ಬೇಕಾದಂತಹ ಕೆಲವು ಗ್ರಾಮಗಳಿಗೆ ಕೊಟ್ಟುಕೊಳ್ಳುತ್ತಾರೆ. ಅದರ ಜೊತೆಗೆ ಅವರ ಹತ್ತಿರ ಹಣವೂ ಇಲ್ಲ. ಎಲ್ಲಾ spill over ಆಗಿ ಅವರು ಇನ್ನು ಎರಡು ಸಾರಿ ಜಿಲ್ಲಾ ಪಂಚಾಯಿತಿ ಸದಸ್ಯರಾದರೂ ಆ ಹಣವನ್ನು ತೀರಿಸುವುದಕ್ಕೆ ಸಾಧ್ಯವಿಲ್ಲ. ಅಷ್ಟೊಂದು spill over ಆಗಿವೆ. ಅಲ್ಲಿ ಬೋರ್ ವೆಲ್ ಕೊರೆಸಲಿಕ್ಕೆ ಐದು ರೂ. ಹಣ ಇಲ್ಲ. ಇಲ್ಲಿ ಶಾಸಕರ ನೇತೃತ್ವದಲ್ಲಿ ಅತಿ ತುರ್ತಾದಂತಹ ಸಮಸ್ಯೆ ಬಂದಂತಹ ಸಂದರ್ಭದಲ್ಲಿ ಏನು ಒಂದು ಸಮಿತಿ ರಚನೆ ಮಾಡಿದಿರಿ, ಇಡೀ ಎರಡು ವರ್ಷದಲ್ಲಿ ಒಂದು ಸಾರಿ 20 ಲಕ್ಷ ರೂ. ಹಣವನ್ನು ಬಿಡುಗಡೆ ಮಾಡಿದ್ದನ್ನು ಬಿಟ್ಟರೆ, ಪುನಃ ಮತ್ತೆ ಯಾವುದೇ ಹಣವನ್ನು ನಮ್ಮ ತಾಲ್ಲೂಕಿಗೆ ಬಿಡುಗಡೆ ಮಾಡಿಲ್ಲ. ಕುಡಿಯುವ ನೀರಿನ ಒಂದು ಬೋರ್ ಕೇಳಿದರೆ ನಿಮಗೆ ಬೋರ್ ಕೊರೆಸುವ ಯೋಗ್ಯತೆ ಇಲ್ಲವಾ ಎನ್ನುವಂತಹ ಪ್ರಶ್ನೆಯನ್ನು ಆ ಗ್ರಾಮಸ್ಥರು ಕೇಳುತ್ತಿರುತ್ತಾರೆ. ಬಹಳ ನೋವಾಗುತ್ತದೆ. ದಯಮಾಡಿ ಏನು ಸಮಿತಿ ಮಾಡಿದ್ದೀರಿ, ಈ ದೇಶದಲ್ಲಿ ಶಾಸಕರಿಗೇ ಕಣ್ಣಿರು ಹಾಕಿಸಿ ಬೇರೆ ಸಾಮ್ರಾಜ್ಯ ಕಟ್ಟಬೇಕಾದ ಅವಶ್ಯಕತೆ ಇಲ್ಲ. ದಯವಿಟ್ಟು ಶಾಸಕರ ಮಾನ ಮರ್ಯಾದೆ ಉಳಿಸುವುದಕ್ಕೋಸ್ಕರವಾದರೂ ಈ ಸಮಿತಿಗೆ ಸ್ವಲ್ಪ ಹೆಚ್ಚಿನ ಹಣವನ್ನು ತೊಡಗಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸುರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಹಳ್ಳಿಗಳಲ್ಲಿ ಜನಗಳು ಶಾಸಕರಿಗೆ ಎಲ್ಲಾ ಅಧಿಕಾರ ಇದೆ ಎಂದು ನಂಬಿಕೊಂಡಿದ್ದಾರೆ. ಆದರೆ ಕುಡಿಯುವ ನೀರಿನ ಬಗ್ಗೆ ಪ್ರತಿ ಹಳ್ಳಿಗಳಲ್ಲಿ ಬೋರ್‌ವೆಲ್ ಕೊರೆಯುವುದಕ್ಕೆ ನಮಗೆ ಅಧಿಕಾರ ಇಲ್ಲವೆಂದು ಹೇಳಿಕೊಳ್ಳುವುದಕ್ಕೆ ನಮಗೆ ನಾಚಿಕೆ ಆಗುತ್ತದೆ. ನಾವು ಮುಖ್ಯ ಕಾಯದರ್ಶಿಗಳಿಗೆ ಕೇಳಿದರೆ, ಒಂದು ವರ್ಷದಲ್ಲಿ ಶಾಸಕರಿಗೆ

ಒಂದು ಬೋರ್‌ವೆಲ್ ಕೂಡ ಕೊಟ್ಟಿಲ್ಲ. ಈ ವರ್ಷ ತಾವು ಏನು ಹಣ ಬಿಡುಗಡೆ ಮಾಡುತ್ತೀರೋ ಅದನ್ನು ತಕ್ಷಣ ಬೇಗ ಬಿಡುಗಡೆ ಮಾಡಬೇಕು. ಯಾವುದೇ ಕಾರಣಕ್ಕೂ ಟಾಸ್ಕ್ ಫೋರ್ಸ್ ಹಣ ಬಿಡುಗಡೆ ಮಾಡುವುದರಲ್ಲಿ ತಡ ಮಾಡಬಾರದು. ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆ ಬಹಳ ಜಾಸ್ತಿ ಇದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಆ ಕಡೆ ಈ ಕಡೆ ಇರುವಂತಹ ಶಾಸಕರೆಲ್ಲರೂ ಕೂಡ ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಕುಡಿಯುವ ನೀರಿನ ಸಮಸ್ಯೆ ಎಲ್ಲಾ ಕ್ಷೇತ್ರಗಳಲ್ಲಿ ಇದೆ. ಜಗದೀಶ್ ಶೆಟ್ಟರ್ ರವರೇ, ಕುಡಿಯುವ ನೀರಿನದು ಬಹಳ ದೊಡ್ಡ ಸಮಸ್ಯೆ ಯಾಗಿದೆ. ಒಂದನೆಯದಾಗಿ ವಿದ್ಯುಚ್ಛಕ್ತಿ ಅಭಾವದಿಂದ ಸಮಸ್ಯೆಯಾಗಿದೆ, ಎರಡನೆಯ ಸಮಸ್ಯೆ ಈಗ ಬೇಸಿಗೆ ಕಾಲ ಬಂದಿರುವುದರಿಂದ ಬಹಳಷ್ಟು bore-well dry up ಆಗಿವೆ. ಇದರಿಂದ ಜನರಿಗೆ ಕುಡಿಯುವ ನೀರಿನದು ಬಹಳ ದೊಡ್ಡ ಸಮಸ್ಯೆ ಆಗಿಬಿಟ್ಟಿದೆ. ಮಾನ್ಯ ಶಿವಲಿಂಗೇಗೌಡರ constituency ಒಂದೇ ಅಲ್ಲ, ಇಡೀ ರಾಜ್ಯದಲ್ಲಿ ಸಮಸ್ಯೆ ಇದೆ. ಈ ವಿಷಯ ನಿಯಮ 69ರಲ್ಲಿ ಕೂಡ ಚರ್ಚೆಗೆ ಬರುತ್ತಿದೆ. ಮಾನ್ಯ ಅಧ್ಯಕ್ಷರೆ, ನಾನು ತಮಗೆ ಮನವಿ ಮಾಡುವುದೇನೆಂದರೆ ಈಗ question hour ಆದತಕ್ಷಣ ನಿಯಮ 69ರಲ್ಲಿ ಇರುವುದನ್ನು half an hour discussion ಗೆ convert ಮಾಡಿ, ಎಲ್ಲಾ ಸದಸ್ಯರು ಹೇಳುವ ವಿಚಾರಗಳನ್ನು ಕೇಳಿ ಸರ್ಕಾರ ಅದರ ಬಗ್ಗೆ ಒಂದು ತೀರ್ಮಾನ ಮಾಡಿ ಹೇಳಬೇಕು. ಎಲ್ಲಾ task force ಗೆ ತಕ್ಷಣ ಹಣವನ್ನು ಬಿಡುಗಡೆ ಮಾಡಿದರೆ, ಆಗ ಅಲ್ಲಿ ಹೊಸದಾಗಿ ಒಂದು ಬೋರ್‌ವೆಲ್ ಕೊರೆಸುವುದಕ್ಕೆ ಮತ್ತು ಅಲ್ಲಿ ನೀರನ್ನು ಕೊಡುವುದಕ್ಕೆ ಏನೇನು ಸಾಧ್ಯತೆ ಇದೆ, augmentation ಮಾಡುವುದಕ್ಕೆ, pipeline ಹಾಕುವುದಕ್ಕೆ, motor ಕೂರಿಸುವುದಕ್ಕೆ ಅನುಕೂಲವಾಗುತ್ತದೆ. Immediately after question hour, please ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಹಿಂದೆ ಎಲ್ಲಾ ಸಾಕಷ್ಟು ಚರ್ಚೆ ಮಾಡಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : Task Force Committee ಅಸ್ತಿತ್ವದಲ್ಲಿ ಇದೆಯೇ ಇಲ್ಲವೇ ಎನ್ನುವುದು ಗೊತ್ತಿರಲಿಲ್ಲ. ಆದರೆ ಮಾನ್ಯ ಸಚಿವರು ಅದು ಅಸ್ತಿತ್ವದಲ್ಲಿದೆ ಎಂದು ಹೇಳಿದ್ದಾರೆ.

ಅಧ್ಯಕ್ಷರು : ಆಯಿತು. ಈಗ ಈ ವಿಚಾರದ ಬಗ್ಗೆ ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅರ್ಧ ಗಂಟೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಾದರೆ ಸಂತೋಷ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಶಿವಲಿಂಗೇಗೌಡರು ಪ್ರಶ್ನೆಯನ್ನು ಏನು ಎತ್ತಿದ್ದಾರೆ ಅದು ಇಲ್ಲಿ ಕಳೆದ ಎರಡು-ಮೂರು ಬಾರಿ ಚರ್ಚೆಯಾಗಿದೆ. ನಾನು Task Force Committee ಗೆ ಹಣವನ್ನು ನಮ್ಮ ಇಲಾಖೆಯಿಂದ release ಮಾಡುತ್ತೇನೆಂದು ಕೂಡ ಭರವಸೆಯನ್ನು ಕೂಡ ನಾನು ಕೊಟ್ಟಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು Task Force Committee ಗೆ ಹಣವನ್ನು release ಮಾಡಬೇಕೆಂದು ಹೇಳುತ್ತಿದ್ದಾರೆ. ನಾನು ಹೇಳುವುದೇನೆಂದರೆ ಎರಡು ಮೂರು ದಿವಸದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಆರ್ಡರ್ ಮಾಡುತ್ತೇವೆ. ಮತ್ತೆ ನೀವು ಅಧಿವೇಶನ ಮುಗಿಸಿಕೊಂಡು ನಿಮ್ಮ ಕ್ಷೇತ್ರಕ್ಕೆ ಹೋಗುವುದರೊಳಗಾಗಿ ಹಣ release ಮಾಡುತ್ತೇನೆಂದು ಭರವಸೆ ಯನ್ನು ನಾನು ಕೊಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಯಾವ ರೀತಿ ಮಾಡುತ್ತೀರೆಂದು ಇದರ ಮೇಲೆ ಚರ್ಚೆಯಾಗಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಈ ವಿಷಯದ ಮೇಲೆ ಚರ್ಚೆ ಮಾಡಬೇಕೆಂದು ಹೇಳಿದರೆ ಅದಕ್ಕೂ ತಯಾರಿದ್ದೇನೆ.

(ಗೊಂದಲ)

ಅಧ್ಯಕ್ಷರು : ಶಿವಲಿಂಗೇಗೌಡರು ಎತ್ತಿರುವಂತಹ ಕುಡಿಯುವ ನೀರಿನ ಬಗ್ಗೆ ಗಂಭೀರ ಸಮಸ್ಯೆ ಇರುವುದರಿಂದ ಇದಕ್ಕೆ ಅರ್ಧ ಗಂಟೆಗಳ ಕಾಲ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಈ ವಿಷಯ ಈಗಾಗಲೇ ನಿಯಮ 69 ರಲ್ಲಿ ಕೂಡ ಇದ್ದು ಎಲ್ಲಾ ಒಟ್ಟಿಗೆ ಸೇರಿ ಚರ್ಚೆಯನ್ನು ಮಾಡೋಣ.

(ಗೊಂದಲ)

ಅಧ್ಯಕ್ಷರು : ನಾನು ಹೇಳಿದೆನಲ್ಲ? ಮತ್ತೆ ಪುನಃ ಪ್ರಶ್ನೆ ಕೇಳುತ್ತೀರಿ. ನಾನು ಹೇಳಿದ ಮೇಲೂ ಮತ್ತೆ ಮತ್ತೆ ಎದ್ದು ಕೇಳಿದರೆ ಏನರ್ಥ? ಈಗ ತಮ್ಮ View ಅನ್ನು ಚರ್ಚೆ ಮಾಡುವಾಗ ಹೇಳಿ.

SRI QAMARUL ISLAM : Where there is a bre well, there is no current. ಅದರ ಬಗ್ಗೆ ಕೂಡ ಆಶ್ವಾಸನೆ ಕೊಡಬೇಕು.

MR. SPEAKER : I have already stated, Half an hour discussion ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ಮತ್ತೆ ಕೇಳುವುದರಲ್ಲಿ ಏನರ್ಥ? ಲಾಲಾಜಿ ಆರ್. ಮೆಂಡನ್‌ರವರು ಪ್ರಶ್ನೆಯನ್ನು ಕೇಳಿ.

ಪ್ರಶ್ನೆ ಸಂಖ್ಯೆ 95 (573)

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಜಮಖಂಡಿ ತಾಲ್ಲೂಕಿನ ಆಲಗೂರ ಗ್ರಾಮಕ್ಕೆ ಕುಡಿಯುವ ನೀರು ಒದಗಿಸುವ ಬಗ್ಗೆ

96 (163) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನ ಆಲಗೂರ ಗ್ರಾಮದ ಗಡ್ಡೀ ಜಮೀನುಗಳು ಕೃಷ್ಣಾ ದಡದಲ್ಲಿದ್ದರೂ ಶುದ್ಧವಾದ ಕುಡಿಯುವ ನೀರಿನ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೃಷ್ಣಾ ನದಿಯ ಎಡಭಾಗದಲ್ಲಿರುವ ತೊದಲ ಬಾಗಿ ಕೆರೆಯ ಹತ್ತಿರ ಬೋರು ಹಾಕಿ ನೀರು ಪೈಪ್‌ಲೈನ್ ಮೂಲಕ ತರುವುದರಿಂದ ಕುಡಿಯುವ ನೀರಿನ ಈ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯಲು ಸರ್ಕಾರ ತೀರ್ಮಾನಿಸುವುದೇ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಬಂದಿದೆ.

ಆ) ಆಲಗೂರ ಗ್ರಾಮಕ್ಕೆ ಹಾಲಿ ಕೃಷ್ಣ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡುತ್ತಿರುವ ಪೈಪ್‌ಲೈನ್ ವಿಸ್ತರಿಸಿ ಅಲಗೂರು ಗಡ್ಡಿ ಜಮೀನು (ತಾಂಡ)ಗಳಿಗೆ 2009-10ನೇ ಸಾಲಿನ ಡಿ.ಡಿ.ಪಿ. ಯೋಜನೆಯಡಿ

ರೂ.10.00 ಲಕ್ಷ ಅಂದಾಜು ಮೊತ್ತದಲ್ಲಿ ಕುಡಿಯುವ ನೀರು ಪೂರೈಕೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಡಲಾಗಿದೆ. ಆಲಗೂರ ಗ್ರಾಮ ಸುಮಾರು 8–10 ಸಾವಿರ ಜನಸಂಖ್ಯೆ ಇರುವಂತಹ ಗ್ರಾಮವಾಗಿರುವುದರಿಂದ ಈಗ ಪೂರೈಕೆಯಾಗುತ್ತಿರುವಂತಹ ನೀರು ಆ ಗ್ರಾಮಕ್ಕೆ ಸಾಕಾಗುತ್ತಿಲ್ಲ. ತಮ್ಮ ಜಮೀನಿನ ಗಡ್ಡೀ ಪ್ರದೇಶದಲ್ಲಿ ವಾಸ ಮಾಡತಕ್ಕಂಥ ಜನರಿಗೆ ಶುದ್ಧವಾದಂತಹ ಕುಡಿಯುವ ನೀರು ಸಿಗುತ್ತಿಲ್ಲ. ಒಂದೆರಡು ಕಿಲೋಮೀಟರ್ ಹೋಗಿ ಸೈಕಲ್ ಮೇಲೆ ನೀರು ತರುವಂತಹ ಪರಿಸ್ಥಿತಿ ಇದೆ. ಹೀಗಾಗಿ ಅದರಿಂದ ನೀರು ಕೊಡದೇ ಆ ನದಿ ಎಡ ಭಾಗದಲ್ಲಿ ತೊದಲಬಾಗಿ ಹತ್ತಿರ ಒಂದು ದೊಡ್ಡ ಕೆರೆ ಇದೆ. ಕೆರೆ ಪಕ್ಕ ಮಡ್ಡಿ ಪ್ರದೇಶದಲ್ಲಿ ಒಂದು ಬೋರ್ ಹಾಕಿದರೆ ಶುದ್ಧವಾದಂತಹ ರುಚಿಯಾದಂತಹ ನೀರು ಸಿಗುತ್ತದೆ. ಆ ನೀರನ್ನು lift ಮಾಡಿ ಈ ಕಡೆ ತಂದು ಬಿಟ್ಟರೆ ಶಾಸ್ವತವಾದಂತಹ ವ್ಯವಸ್ಥೆ ಮಾಡಿದ ಹಾಗೆ ಆಗುತ್ತದೆ. ಅದನ್ನು ಮಾನ್ಯ ಮಂತ್ರಿಗಳು ಮಾಡುವುದಕ್ಕೆ ಇಚ್ಛೆ ಪಡುತ್ತಾರೆಯೇ ಹೇಗೆ ಎಂದು ಕೇಳುವುದರಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಶ್ರೀಕಾಂತ್ ಕುಲಕರ್ಣಿಯವರು ಏನು ಪ್ರಶ್ನೆಯನ್ನು ಕೇಳಿದ್ದಾರೆ, ಅದರಲ್ಲಿ ಮುಖ್ಯವಾಗಿ ಅವರ ಉದ್ದೇಶ ಇರುವಂಥದ್ದು, ಆಲಗೂರ ಗ್ರಾಮದ ಗಡ್ಡೀ ಜಮೀನುಗಳಲ್ಲಿ ತಾಂಡಗಳು ಇವೆ, ಇಲ್ಲಿ ಕುಡಿಯುವ ನೀರಿನ ಯೋಜನೆ ಜಾರಿಗೆ ತರಬೇಕು, ಅದನ್ನು ಆಲಗೂರ ಗ್ರಾಮದ ಮುಖಾಂತರ ಅಲ್ಲದೆ ತೊದಲಬಾಗಿ ಎಂದು ಏನು ಒಂದು ಗ್ರಾಮವಿದೆ, ಅದರ ಮುಖಾಂತರ ಪೈಪ್ ಲೈನ್ ಹಾಕಿ ತರಬೇಕೆನ್ನುವ ವಿಚಾರವನ್ನು ಹೇಳಿದರು. ಈ ಅಲಗೂರ ಗ್ರಾಮದಿಂದ ಪೈಪ್‌ಲೈನ್ ಜೋಡಣೆ ಮಾಡಿಕೊಂಡು ಈ ಆಲಗೂರ ಗಡ್ಡೀ ಜಮೀನು ತಾಂಡಗಳಿಗೆ ನೀರು ಪೂರೈಕೆ ಮಾಡಬೇಕೆನ್ನುವ ಯೋಜನೆ ಸರ್ಕಾರದ ಮಟ್ಟದಲ್ಲಿದೆ. ಅದರ ಮುಖಾಂತರ ನಾವು ನೀರನ್ನು ಒದಗಿಸುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತೇವೆ. ತೊದಲಬಾಗಿ ನೀರು ತರಬೇಕೆಂದು ಅವರು ಸಲಹೆ ಕೊಡುತ್ತಿದ್ದಾರೆ, ಅಲ್ಲಿಂದ ನೀರು ತರುವಂತೆ ಮಾಡಿದರೆ cost ಜಾಸ್ತಿಯಾಗುತ್ತದೆಂದು ನಮಗೆ ಮಾಹಿತಿ ಇದೆ. ಹೀಗಾಗಿ ಆ ದೃಷ್ಟಿಯಿಂದ

ಮಾನ್ಯ ಸದಸ್ಯರು ಹೇಳಿದಂತೆ ಗಡ್ಡೀ ಜಮೀನು ತಾಂಡಗಳು ಏನಿವೆ ಅದಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಆಲಗೂರ ಗ್ರಾಮದಿಂದ ಮಾಡುತ್ತೇವೆಂದು ನಾನು ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ : ಈ ವಸತಿ ಪ್ರದೇಶದಲ್ಲಿ ಇರುವಂತಹ ಜನರಿಗೆ ನೀರು ಕೊಡುವುದಕ್ಕೆ ಸಾಧ್ಯವಿಲ್ಲ. ಬಹಳ ಖರ್ಚು ಬರುವುದಿಲ್ಲ, ಆದ್ದರಿಂದ ತೊದಲಬಾಗಿಯಿಂದ ನೀರನ್ನು ತರುವುದು ಸರಿಯೆಂದು ನನ್ನ ಅಭಿಪ್ರಾಯ. ಆದುದರಿಂದ ಅದರ ಬಗ್ಗೆ ದಯವಿಟ್ಟು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಅವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ನಾವು ಇದರ ಬಗ್ಗೆ ಅಧಿಕಾರಿಗಳಿಗೆ instruction ಕೊಟ್ಟು, ನಮಗೆ ಇರವಂತಹ ಮಾಹಿತಿ ಪ್ರಕಾರ ಆಲಗೂರ ಗ್ರಾಮದಿಂದ ಮಾಡಿದರೆ feasible ಆಗುತ್ತದೆಂದು report ಇದೆ. ನಾವು ಅದನ್ನು adopt ಮಾಡುತ್ತಿದ್ದೇವೆ. ಇನ್ನು ತೊದಲಬಾಗಿ ಯಿಂದ ನೀರು ತರುವ ಬಗ್ಗೆ ಹೇಳುತ್ತಿದ್ದಾರೆ. ಅಲ್ಲಿಂದ ನೀರು ತಂದರೆ ಎಷ್ಟು cost ಬರುತ್ತದೆ, ಅದು feasibility ಇದೆಯೋ ಇಲ್ಲವೋ ಎನ್ನುವುದರ ಬಗ್ಗೆ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟು study ಮಾಡಿ ವರದಿ ಕೊಡಿ ಎಂದು ಹೇಳುತ್ತೇನೆ. ಅದರಲ್ಲಿ ಯಾವುದು ಸರಿಯಿದೆ ಎನ್ನುವುದನ್ನು ನೋಡಿಕೊಂಡು we will take a decision.

ಸಂಡೂರು ತಾಲ್ಲೂಕಿನಲ್ಲಿ ಮುಖ್ಯೋಪಾಧ್ಯಾಯರ ಹಾಗೂ ಶಿಕ್ಷಕರ ಕೊರತೆ ಇರುವ ಬಗ್ಗೆ

97 (779) ಶ್ರೀ ತುಕಾರಾಮ್. ಇ (ಸಂಡೂರ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಡೂರು ತಾಲ್ಲೂಕಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಮುಖ್ಯೋಪಾಧ್ಯಾಯರ ಹಾಗೂ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಸಂಖ್ಯೆ ಎಷ್ಟು (ವಿವರಗಳನ್ನು ಒದಗಿಸುವುದು);

ಇ) ಶಿಕ್ಷಕರ ನೇಮಕಾತಿ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸಂಡೂರು ತಾಲ್ಲೂಕಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರನ್ನು ಹೊಂದಿದ್ದು, ಶಿಕ್ಷಕರ ಕೊರತೆ ಇರುವುದಿಲ್ಲ.

ಪ್ರತಿ ವರ್ಷ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಆಗುತ್ತಿರುವುದರಿಂದ ಶಿಕ್ಷಕರ ಕೊರತೆ ಇರುವುದಿಲ್ಲ.

ಪ್ರತಿ ಸರ್ಕಾರಿ ಪ್ರೌಢಶಾಲೆಗೆ ಒಂದು ಮುಖ್ಯ ಶಿಕ್ಷಕರ ಹುದ್ದೆ ಮಂಜೂರಾಗಿರುತ್ತದೆ. ಮುಖ್ಯೋಪಾಧ್ಯಾಯರ ಕೊರತೆ ಇರುವುದಿಲ್ಲ.

ಆ) 62 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆ ಖಾಲಿ ಇರುತ್ತವೆ. 30 ಪ್ರೌಢಶಾಲಾ ಸಹ ಶಿಕ್ಷಕರ ಹುದ್ದೆ ಖಾಲಿ ಇರುತ್ತವೆ.

05 ಸರ್ಕಾರಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಹುದ್ದೆ ಖಾಲಿ ಇರುತ್ತವೆ.

ಸಂಡೂರು ತಾಲ್ಲೂಕಿನಲ್ಲಿ ಒಟ್ಟು 15 ಪ್ರೌಢಶಾಲೆಗಳಿದ್ದು, 10 ಸರ್ಕಾರಿ ಪ್ರೌಢಶಾಲೆಗಳಲ್ಲಿ ಮುಖ್ಯ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಕೆಳಕಾಣಿಸಿದ 05 ಸರ್ಕಾರಿ ಪ್ರೌಢಶಾಲೆಗಳಲ್ಲಿ ಮುಖ್ಯ ಶಿಕ್ಷಕರ ಹುದ್ದೆ ಖಾಲಿ ಇರುತ್ತವೆ.

1) ಸರ್ಕಾರಿ ಪ್ರೌಢಶಾಲೆ, ಡಿ.ಹಂತಾಪುರ, ಸಂಡೂರು ತಾ:
2) ಸರ್ಕಾರಿ ಪ್ರೌಢಶಾಲೆ, ಯು.ರಾಜಾಪುರ, ಸಂಡೂರು ತಾ :
3) ಸರ್ಕಾರಿ ಪ್ರೌಢಶಾಲೆ, ತೋರಣಗಲ್ಲು, ಸಂಡೂರು ತಾ :
4) ಸರ್ಕಾರಿ ಪ್ರೌಢಶಾಲೆ (ಉರ್ದು), ಸಂಡೂರು.
5) ಸರ್ಕಾರಿ ಪ.ಪೂ.ಕಾಲೇಜು (ಬಾಲಕರ), ಸಂಡೂರು.

ಇ) ದಿನಾಂಕ: 12-03-2010 ರಂದು 62 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಕೌನ್ಸಿಲಿಂಗ್ ಮಾಡಲಾಗಿದೆ. ಅಂಕಪಟ್ಟಿ ಹಾಗೂ ಇತರೆ ದಾಖಲೆಗಳ ನೈಜತೆಯನ್ನು ದೃಢೀಕರಿಸಿಕೊಂಡು ನೇಮಕಾತಿ ಆದೇಶ ನೀಡಲಾಗುವುದು.

ದಿನಾಂಕ: 26-04-2010 ರಿಂದ 30-04-2010 ರವರೆಗೆ ಕೌನ್ಸಿಲಿಂಗ್ ನಡೆಸಿ ಪ್ರೌಢಶಾಲಾ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಶ್ರೀ ಇ. ತುಕಾರಾಮ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಸಂಡೂರು ತಾಲ್ಲೂಕಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಗನುಗುಣವಾಗಿ ಮುಖ್ಯೋಪಾಧ್ಯಾಯರ ಮತ್ತು ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವಂತಹ ಪ್ರಶ್ನೆಗೆ ಉತ್ತರದಲ್ಲಿ ಇಲ್ಲವೆಂದು ಹೇಳುತ್ತಾರೆ. ನಂತರ "ಹೌದು, 62 ಜನ ಶಿಕ್ಷಕರು, ಐದು ಜನ ಪ್ರೌಢ ಶಾಲಾ ಮುಖ್ಯೋ ಪಾಧ್ಯಾಯರ ಹುದ್ದೆಗಳು ಖಾಲಿ ಇದೆ" ಎಂದು ಹೇಳಿದ್ದಾರೆ. ನಾನು ಕೇಳುವುದೇನೆಂದರೆ ನಂಜುಂಡಪ್ಪ ವರದಿ ಪ್ರಕಾರ ನನ್ನ ಕ್ಷೇತ್ರ ಅತ್ಯಂತ ಹಿಂದುಳಿದ ಕ್ಷೇತ್ರವಾಗಿದೆ. ನನ್ನ ಕ್ಷೇತ್ರ ಸುಮಾರು 75 ಭಾಗ ಗಣಿ ಪ್ರದೇಶ ಮತ್ತು ಕಾರ್ಖಾನೆಗಳಿಂದ ತುಂಬಿದೆ. ನಮ್ಮಲ್ಲಿ ಮಕ್ಕಳಿಗೆ ಶಿಕ್ಷಕರು ಇಲ್ಲವೆಂದಾಗ ಬಹಳ ಅನ್ಯಾಯವಾಗುತ್ತಿದೆ. ನಮ್ಮಲ್ಲಿ ಶಿಕ್ಷಕರ ಕೊರತೆಯಿಂದ ಮಕ್ಕಳು ಹೈಸ್ಕೂಲು ಮತ್ತು ಪಿಯುಸಿ ಯವರೆಗೆ ಶಿಕ್ಷಣವನ್ನು ಮಾಡಿ ಮುಂದಿನ ಶಿಕ್ಷಣಕ್ಕೆ ಹೋಗುವುದಕ್ಕೆ ಬಹಳ ಅನಾನುಕೂಲವಾಗುತ್ತಿದೆ. ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ ತಕ್ಷಣ ಶಿಕ್ಷಕರನ್ನು ತುಂಬಿದರೆ ಮುಂದಿನ ಪೀಳಿಗೆಗೆ ಪದವಿ ಶಿಕ್ಷಣ ಮತ್ತು ಹೆಚ್ಚಿನ ವಿಧ್ಯಾಭ್ಯಾಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಇದರ ಬಗ್ಗೆ ತಾವು ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಸಂಡೂರು ತಾಲ್ಲೂಕಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ? ಅವುಗಳನ್ನು ತುಂಬುದವುಕ್ಕೆ ಏನು ಪ್ರಯತ್ನ ಮಾಡಿದ್ದೀರೆಂದು ಪ್ರಶ್ನೆಯನ್ನು ಕೇಳಿದ್ದಾರೆ. ನಾವು ಈಗ್ಗಾಗಲೆ 62 ಶಿಕ್ಷಕರಿಗೆ 12ನೇ ತಾರೀಖು counselling ಮಾಡಿ ಖಾಲಿಯಿರುವಂತಹ ಸ್ಥಳವನ್ನು ಪೂರ್ಣ ತುಂಬಿದ್ದೇವೆ. ಹೈಸ್ಕೂಲ್‌ಗೆ ಸಂಬಂಧಪಟ್ಟಂತೆ processing ಆಗುತ್ತಿದೆ, ಈ ತಿಂಗಳ 24ನೇ ತಾರೀಖಿನಿಂದ 30ನೇ ತಾರೀಖಿನ ತನಕ counselling ಮಾಡಿ ಹೈಸ್ಕೂಲಿನಲ್ಲಿ ಖಾಲಿಯಿರುವಂತಹ 30 ಹುದೆಗಳನ್ನು ಈ ತಿಂಗಳ ಕೊನೆಯೊಳಗೆ ನಾವು ತುಂಬುತ್ತೇವೆ. ಈಗಾಗಲೇ ತಮಗೆ ಗೊತ್ತಿರುವಂತೆ

ನಮ್ಮೆಲ್ಲರ ಕ್ಷೇತ್ರಗಳಲ್ಲೂ ಖಾಲಿಯಿರುವಂತಹ ಸುಮಾರು 5,000 ಪ್ರಾಥಮಿಕ ಶಾಲಾ ಶಿಕ್ಷಕರನ್ನು, 2,500 ಪ್ರೌಢ ಶಾಲಾ ಶಿಕ್ಷಕರನ್ನು ತುಂಬುವುದಕ್ಕೆ counselling ಪ್ರಕ್ರಿಯೆ ಮಾಡಿ ಖಾಲಿಯಿರುವಂತಹ ಸ್ಥಳಗಳಲ್ಲಿ ಅವರನ್ನು ತುಂಬಿ ಕೊಡುತ್ತಿದ್ದೇವೆ. ಇಡೀ ರಾಜ್ಯದಲ್ಲಿ ಈ ಪ್ರಕ್ರಿಯೆ ಈಗ ನಡೆದಿದೆ. ಹೀಗಾಗಿ ಈ ತಿಂಗಳ ಕೊನೆಯೊಳಗಾಗಿ ಆ ಎಲ್ಲಾ ಸ್ಥಳಗಳಿಗೆ ನೂತನವಾಗಿ ಆಯ್ಕೆಯಾಗಿರುವಂತಹ ನಮ್ಮ ಶಿಕ್ಷಕರು ಅವರ ಸ್ಥಳವನ್ನು ಆಯ್ಕೆ ಮಾಡಿಕೊಂಡು ಅಲ್ಲಿರುತ್ತಾರೆ. ಆಗ ಅಲ್ಲಿ ಯಾವ ಹುದ್ದೆಯೂ ಖಾಲಿ ಇರುವುದಿಲ್ಲ. ಇಡೀ ರಾಜ್ಯದಲ್ಲಿ ಶಿಕ್ಷಕರನ್ನು ಪೂರ್ಣ ಪ್ರಮಾಣದಲ್ಲಿ ತುಂಬುವಂತಹ ನಮ್ಮ ಸರ್ಕಾರದ ಪ್ರಯತ್ನ ಈ ತಿಂಗಳೊಳಗೆ ಮುಕ್ತಾಯ ಗೊಳ್ಳುತ್ತದೆ. ಹಾಗಾಗಿ ಶಿಕ್ಷಕರ ಕೊರತೆ ಇಲ್ಲದ ಹಾಗೆ ನೋಡಿಕೊಳ್ಳುತ್ತೇವೆ. ಈಗಿರುವಂತಹ ಎಲ್ಲಾ ಹಂತದಲ್ಲಿಯೂ ಸಹ ಶಿಕ್ಷಕರ ಮೂಲಕ ಒಳ್ಳೆಯ ಗುಣಮಟ್ಟದ ಶಿಕ್ಷಣವನ್ನು ಕೊಡುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಸಂಡೂರು ತಾಲ್ಲೂಕು ಶೈಕ್ಷಣಿಕವಾಗಿ ಸ್ವಲ್ಪ ಹಿಂದುಳಿದಿದೆ ಎನ್ನುವುದು ಸರ್ಕಾರದ ಗಮನದಲ್ಲಿದೆ. ಅದಕ್ಕೆ ಒಂದು ವಿಶೇಷವಾದಂತಹ ಪ್ರಯತ್ನವನ್ನು BRC/PRC ಗಳ ಮೂಲಕ, ನಮ್ಮ ಬೇರೆ ಬೇರೆ ಹಂತದ ಅಧಿಕಾರಿಗಳ ಮೂಲಕ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡುವುದಕ್ಕೆ ಬೇಕಾಗಿರು ವಂತಹ ಅನೇಕ ಉಪಕ್ರಮಗಳನ್ನು ಮತ್ತು ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ.

ರಾಜ್ಯ ಶೈಕ್ಷಣಿಕವಾಗಿ ಮುಂದುವರೆಯುವುದಕ್ಕೆ ಸಂಡೂರು ತಾಲ್ಲೂಕು ಒಳಗೊಂಡಂತೆ ಇಡೀ ರಾಜ್ಯದಲ್ಲಿ ಬೇಕಾಗಿರುವಂಥ ಪ್ರಯತ್ನ ವನ್ನು ನಮ್ಮ ಇಲಾಖೆಯಿಂದ ಮಾಡುತ್ತಿದ್ದೇವೆ.

ಶ್ರೀ ಇ. ತುಕಾರಾಮ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬಹಳ ಸಮರ್ಪಕವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ಅವರಿಗೆ ಧನ್ಯವಾದ ಗಳನ್ನು ಸಲ್ಲಿಸುತ್ತಿದ್ದೇನೆ. ಅದೇ ರೀತಿಯಾಗಿ ಈ ಪ್ರಕ್ರಿಯೆ ನಿರಂತರವಾಗಿ ಇರಬೇಕೆಂದು ನಾನು ಸರ್ಕಾರಕ್ಕೆ ಮನವಿಯನ್ನು ಮಾಡುತ್ತಿದ್ದೇನೆ.

ರಾಜ್ಯದಲ್ಲಿರುವ ಗ್ರಂಥಾಲಯ ಮೇಲ್ವಿಚಾರಕರ ಬಗ್ಗೆ

98 (783) ಶ್ರೀ ರಮಾನಾಥ ರೈ.ಬಿ. (ಬಂಟ್ವಾಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗ್ರಂಥಾಲಯ ಮೇಲ್ವಿಚಾರಕರಾಗಿ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು;

ಆ) ಇವರು ಎಂದಿನಿಂದ ಕೆಲಸ ನಿರ್ವಹಿಸುತ್ತಿದ್ದಾರೆ;

ಇ) ಈ ಮೇಲ್ವಿಚಾರಕರನ್ನು ಕಾಯಂ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಯಾವಾಗ ಮಾಡಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಶ್ರೀ ಕೆ.ಶಿವನಗೌಡ ನಾಯಕ, (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರ ಪರವಾಗಿ) :

ಅ) 5,766

ಆ) 1987-88ನೇ ಸಾಲಿನಿಂದ ಹಂತ ಹಂತವಾಗಿ ಆಯ್ಕೆಗೊಂಡು ಕೆಲಸ ನಿರ್ವಹಿಸುತ್ತಿದ್ದಾರೆ.

ಇ) ಇಲ್ಲ.

ಶ್ರೀ ಬಿ.ರಮಾನಾಥ್ ರೈ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ಗ್ರಂಥಾಲಯ ಮೇಲ್ವಿಚಾರಕರಾಗಿ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ಎಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಉತ್ತರ 5,766 ಎಂದು ಹೇಳಿದ್ದಾರೆ. ಎರಡನೆಯ ಪ್ರಶ್ನೆ ಇವರು ಎಂದಿನಿಂದ ಕೆಲಸ ನಿರ್ವಹಿಸುತ್ತಿದ್ದಾರೆಂದು ಕೇಳಿದ್ದೇನೆ. ಅದಕ್ಕೆ ಉತ್ತರ 1987-88ನೇ ಸಾಲಿನಿಂದ ಇಲ್ಲಿಯವರೆಗೂ ಗುತ್ತಿಗೆ ಆಧಾರದ ಮೇಲೆ ಮತ್ತು ತಾತ್ಕಾಲಿಕವಾಗಿ ಕೆಲಸ ಮಾಡುವಂಥವರು ಇದ್ದಾರೆ. ನಾವು ಇಲ್ಲಿ ಅರ್ಥ ಮಾಡಿಕೊಳ್ಳಬೇಕು. ಒಂದು ಸಣ್ಣ ಇಲಾಖೆ ಯಲ್ಲಿ ಬಹುಶಃ ನೌಕರರ ಸಂಖ್ಯೆ ಹೆಚ್ಚಿಗೆ ಇದ್ದಿದ್ದರೆ ಇವರ ಕೆಲಸ ಕಾರ್ಯ ಆಗುತ್ತಿತ್ತು. ಅವರಿಗೆ ಶಕ್ತಿ ಇಲ್ಲ, ರಾಜಕೀಯವಾಗಿ ತಮ್ಮ ಬಲಿಷ್ಠತೆಯನ್ನು ತೋರಿಸುವಂಥ ಶಕ್ತಿ ಕೂಡ ಇಲ್ಲ. ಅದಕ್ಕಾಗಿ ಕೇಳಿರುವ ಪ್ರಶ್ನೆ ಈ ಮೇಲ್ವಿ ಚಾರಕರನ್ನು ಕಾಯಂ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ, ಇದ್ದಲ್ಲಿ ಯಾವಾಗ ಮಾಡಲಾಗುವುದೆಂದು ಕೇಳಿದ್ದು, ಅದಕ್ಕೆ ಉತ್ತರ ಬಹಳ ಸ್ಪಷ್ಟವಾಗಿ ಇಲ್ಲವೆಂದು ಹೇಳಿದ್ದೀರಿ. ತಾವು ಇಲ್ಲವೆಂದು ಹೇಳಿದ್ದು ಅವರಿಗೆ ಅದನ್ನು ಕೇಳುವಂಥ ಶಕ್ತಿ ಇಲ್ಲವೆಂದು ಸಾಮಾನ್ಯವಾಗಿ ನಾವು ಅರ್ಥ ಮಾಡಿಕೊಳ್ಳಬೇಕಾದಂಥ ವಿಚಾರ. ಅವರಿಗೆ ಶಕ್ತಿ ಇಲ್ಲ, ಅದಕ್ಕೆ ನಿಮ್ಮ

ಉತ್ತರವೂ ಇಲ್ಲವೆಂದು ಇದೆ. ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡುತ್ತೇವೆಂದು ಹೇಳುವಂಥದ್ದು ವಾಡಿಕೆಯಾಗಿದ್ದು ಅದು ಕೂಡ ಇಲ್ಲ. ತಾವು ಉತ್ತರ ಇಲ್ಲವೆಂದು ಹೇಳಿಬಿಟ್ಟಿದ್ದೀರಿ. ನಾನು ಹೇಳುವಂಥದ್ದು ಏನೆಂದರೆ, ತಮ್ಮ ಈ ಇಲಾಖೆಯಲ್ಲಿ ಇದು ನಿನ್ನೆ, ಇವತ್ತು ಎಂದಲ್ಲ, ಬಹಳ ವರ್ಷಗಳಿಂದ ಇದ್ದಾರೆ. ಆದರೆ ಮಾನವೀಯ ಹಿನ್ನೆಲೆಯಲ್ಲಿ ಅಂಥವರಿಗೆ ಬದುಕುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿ ಕೊಡುವಂಥದ್ದು, ಒಂದು ಜನಪ್ರಿಯ ಸರ್ಕಾರದ ಕರ್ತವ್ಯ ಕೂಡ ಹೌದೆಂದು ಹೇಳುವ ಮಾತನ್ನು ಹೇಳುತ್ತೇನೆ. ಇದು ಚುನಾಯಿತ ವ್ಯವಸ್ಥೆಯಲ್ಲಿರುವಂಥ ಸರ್ಕಾರವಾಗಿದೆ. ಇದಕ್ಕೆ ಸರ್ಕಾರ ಸರಿಯಾದ ರೀತಿಯಲ್ಲಿ ಸ್ಪಂದಿಸಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ರಮಾನಾಥ್ ರೈ ಅವರ ಕಳಕಳಿಯನ್ನು, ಭಾವನೆಯನ್ನು ಈ ಸದನವೂ, ಸರ್ಕಾರವೂ ಅರ್ಥೈಸಿಕೊಳ್ಳುತ್ತದೆ. ಅವರು ರಾಜ್ಯದಲ್ಲಿ ಗ್ರಂಥಾಲಯದ ಮೇಲ್ವಿಚಾರಕರಾಗಿ 5,766 ಜನ ಏನು ಇದ್ದಾರೆ, ಅವರನ್ನು ಕಾಯಂಗೊಳಿಸ ಬೇಕೆಂಬ ವಿಷಯವನ್ನು ಹೇಳಿದ್ದಾರೆ. ನಿಜ, 1987–88ನೇ ಸಾಲಿನಿಂದ ನೇಮಕವಾಗಿ ಅವರು ಕೆಲಸವನ್ನು ಮಾಡುತ್ತಿದ್ದಾರೆ. ಅವರಿಗೆ ಸಕಾರ 1,500 ರೂಪಾಯಿಗಳನ್ನು ಗೌರವಧನವನ್ನಾಗಿ ಕೊಡುತ್ತಿದೆ. ಈ 1,500 ರೂಪಾಯಿ ಗಳಲ್ಲಿ ಅವರು ಜೀವನವನ್ನು ನಡೆಸುವುದಕ್ಕೆ ಆಗುವುದಿಲ್ಲವೆನ್ನುವಂಥ ಮಾತನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾದಂಥದ್ದು. ಆದರೆ ಈ ಕಲ್ಪನೆ ಬಂದಿರುವಂಥದ್ದು ಮತ್ತು ಈ ಯೋಜನೆ ರೂಪಿತವಾಗಿರುವುದೇ ಇವರ ಗೌರವಧನದ ಆಧಾರದ ಮೇಲೆ ಇವರ ಸೇವೆಯನ್ನು ತೆಗೆದುಕೊಂಡು, ನಮ್ಮ ಗ್ರಾಮೀಣ ಭಾಗದಲ್ಲಿರುವಂಥ ಅಥವಾ ನಗರಗಳಲ್ಲಿರುವಂಥ ಜನತೆಗೆ ಓದುವ ಹವ್ಯಾಸವನ್ನು, ಅಕ್ಷರ ಅಭ್ಯಾಸದಿಂದ ಜ್ಞಾನವನ್ನು ಹೆಚ್ಚಿಸುವುದಕ್ಕೆ ಬೇಕಾಗಿರುವಂಥ ಒಂದು ಪ್ರಯತ್ನ ಇದು. ಈ ರೀತಿ ಗೌರವಧನದ ಆಧಾರದ ಮೇಲೆ ಅನೇಕ ಇಲಾಖೆಯಲ್ಲಿ ಅನೇಕರನ್ನು ನೇಮಕ ಮಾಡಿಕೊಂಡು ನಾವು ನಡೆಸುತ್ತಿದ್ದೇವೆ. ಈ ರೀತಿ ಕೇವಲ ಗ್ರಂಥಾಲಯಗಳಲ್ಲಿ ಮಾತ್ರ ಇದೆಯೆಂದು ಅಲ್ಲ. ಬೇರೆ ಬೇರೆ ಕಡೆಗಳಲ್ಲಿ ಈ ರೀತಿ ಗೌರವಧನದ ಆಧಾರದ ಮೇಲೆ ನಾವು ಅವರ ಸೇವೆಯನ್ನು ತೆಗೆದುಕೊಂಡು ಅವರಿಗೆ ಒಂದು ಕಾಲಮಿತಿ ಒಳಗೆ ಅವರು ಇಷ್ಟು ಸಮಯ, ಅವರು ಇಷ್ಟು ಕೆಲಸವನ್ನು ಮಾಡಿದರೆ, ಇಷ್ಟು ಗೌರವಧನವನ್ನು ಕೊಡುವುದೆಂದು ಮಾಡುತ್ತಿದ್ದೇವೆ. ಆದರೆ ಇವರನ್ನು ಕಾಯಂ ಮಾಡುವಂಥ ಯಾವುದೇ

ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ. ಇವರ ಸೇವೆ ಉತ್ತಮವಾಗಿ ಗ್ರಾಮೀಣ ಭಾಗಗಳ್ಲಲಿ ನಮ್ಮ ಜನತೆಗೆ ಸಿಗುತ್ತಿದೆ. ಇವರ ಸೇವೆಗೆ ತಕ್ಕಂತೆ ನಾವು ಗೌರವಧನವನ್ನು ಸಹ ಹಿಂದಿನಿಂದ ಹೆಚ್ಚಿಸಿಕೊಂಡು ಈಗ 1,500 ರೂಪಾಯಿ ಗಳನ್ನು ಕೊಡುತ್ತಿದ್ದೇವೆ. ಈ ಸಂಗತಿಯನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ.

ಶ್ರೀ ಬಿ. ರಮಾನಾಥ್ ರೈ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿರುವಂಥ ಮಾತೆಂದರೆ ಬೇರೆ ಬೇರೆ ಇಲಾಖೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವಂಥವರು ಬಹಳಷ್ಟು ಮಂದಿ ಇದ್ದಾರೆ. ಇದು ಸತ್ಯ. ಆದರೆ ಎಲ್ಲಾ ಇಲಾಖೆಯಲ್ಲೂ ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರು ವವರು ಸಂಖ್ಯಾ ಬಲ ಜಾಸ್ತಿಯಾಗಿರುವಂಥ ಇಲಾಖೆಗಳಲ್ಲಿ, ನಾನು ಕಂಡಿರುವಂಥದ್ದು, ಆ ಸಂದರ್ಭಕ್ಕೆ ಅನುಸಾರವಾಗಿ ಹಂತ ಹಂತವಾಗಿ ಅವರಿಗೆ ಗೌರವಧನವನ್ನು ಜಾಸ್ತಿ ಮಾಡುವಂಥದ್ದನ್ನು ನಾವು ಕಂಡಿದ್ದೇವೆ. ನೀವು ಉತ್ತರದಲ್ಲಿ ಕರಾರುವಕ್ಕಾಗಿ ಇಲ್ಲವೆಂದು, ಕಡ್ಡಿ ಮುರಿದಂತೆ ಹೇಳುವಂಥ ಉತ್ತರಕ್ಕಿಂತ ಹೆಚ್ಚಾಗಿ ಅವರಿಗೆ ಕನಿಷ್ಠ ಗೌರವವಾಗಿ ಬದುಕುವುದಕ್ಕೆ ಗೌರವಧನವನ್ನು ಕೊಡುತ್ತೇವೆಂದು ಹೇಳಬೇಕೆಂದು ಕೋರುತ್ತೇನೆ. ಅವರು ಗೌರವವಾಗಿ ಬದುಕಬೇಕಲ್ಲ? ಅವರು ಅಲ್ಲಿ ಕೆಲಸ ಮಾಡುತ್ತಾರೆ. ಅವರು ಬದುಕುವುದಕ್ಕೆ ಏನು ವ್ಯವಸ್ಥೆ ಇದೆ? ಅದನ್ನು ತಾವು ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಮ್ಮೆಲ್ಲರಿಗೂ ಗೊತ್ತಿರುವಂತೆ ಇದು ಪೂರ್ಣ ಕಾಲಿಕ ಕೆಲಸವಲ್ಲ. ಈ ಗ್ರಂಥಾಲಯ ಮೇಲ್ವಿಚಾರಕರ ಕೆಲಸ ಪೂರ್ಣ ಸಮಯ ಕೆಲಸ ಮಾಡುವಂಥದ್ದಲ್ಲ.

ಶ್ರೀ ಬಿ.ರಮಾನಾಥ್ ರೈ : ಮಾನ್ಯ ಅಧ್ಯಕ್ಷರೆ, ಇದು ಪೂರ್ಣ ಕಾಲಿಕ ಕೆಲಸವಲ್ಲವೆಂದು ಹೇಳಿದರೂ ಕೂಡ, ಬೇರೆ ಬೇರೆ ಇಲಾಖೆಗಳಲ್ಲಿ ಇದ್ದಾಗ ಹಂತ ಹಂತವಾಗಿ ಗೌರವಧನವನ್ನು ಜಾಸ್ತಿ ಮಾಡಿ, ಅವರು ಗೌರವವಾಗಿ ಬದುಕುವುದಕ್ಕೆ ಅವಕಾಶವಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಹಿಂದಿನಿಂದ ಹಾಗೆಯೇ ಮಾಡಿಕೊಂಡು ಬಂದು, ಈಗ ಅದು 1,500 ರೂಪಾಯಿ ಗಳವರೆಗೂ ಬಂದಿದೆ. ಇನ್ನು ಅಂಗನವಾಡಿ ಶಿಕ್ಷಕರು ಇದ್ದಾರೆ, ಬಿಸಿಯೂಟ ದವರು ಇದ್ದಾರೆ. ನಾನು ಮತ್ತೆ ಇದನ್ನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಇವರೆಲ್ಲರಿಗೂ ನಾವು ಗೌರಧನದ ಆಧಾರದ ಮೇಲೆ ಅವರ

ಸೇವೆಯನ್ನು ದಿನದಲ್ಲಿ ಅಲ್ಪ ಸಮಯ ತೆಗೆದುಕೊಂಡು ನಮ್ಮ ಜನತೆಗೆ ಜ್ಞಾನ, ಅಕ್ಷರಾಭ್ಯಾಸಗಳು, ಓದುವ ಹವ್ಯಾಸಗಳು, ಇತ್ಯಾದಿಗಳನ್ನು ಅನೇಕ ಮುಖಗಳಲ್ಲಿ ಅವರ ವ್ಯಕ್ತಿತ್ವ ಬೆಳವಣಿಗೆಗೆ ಬೇಕಾಗಿರುವಂಥ ಒಂದು ಪ್ರಯತ್ನವನ್ನು ಮೇಲ್ವಿಚಾರಕರ ಹುದ್ದೆಯನ್ನು ಗ್ರಂಥಾಲಯದಲ್ಲಿ ಮಾಡಿದ್ದೇವೆ. ಅವರನ್ನು ಕಾರ್ಯ ಮಾಡುವಂಥ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ. ಉಳಿದ ಅನೇಕ ಸಂಗತಿಗಳನ್ನು ತಮ್ಮ ಭಾವನೆಯಲ್ಲಿ ವ್ಯಕ್ತಪಡಿಸಿದ್ದೀರಿ. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ರಮಾನಾಥ್ ರೈರವರು ಕೇಳಿದ ಪ್ರಶ್ನೆಯನ್ನು ತಾವು ಅರ್ಥ ಮಾಡಿಕೊಳ್ಳಲಿಲ್ಲ. 1,500 ರೂಪಾಯಿಗಳು ಎನ್ನುವಂಥದ್ದು ಗೌರವಧನ, ಅದರಿಂದ ಅವರು ಹೇಗೆ ಜೀವನ ಮಾಡುವುದಕ್ಕೆ ಆಗುತ್ತದೆಂಬುದನ್ನು ತಾವು ಹೇಳಿ. ಅದು important ಆಗಿರುವುದು. ನೀವು ಅಂಗನವಾಡಿಯವರಿಗೆ ಕೊಡುತ್ತಿರುವಂಥದ್ದು ಎಷ್ಟು? ಇವರಿಗೆ ಎಷ್ಟು ಕೊಡುತ್ತಿದ್ದೀರಿ? ತಾವು ದಯಮಾಡಿ ಇದನ್ನು 500 ರೂ. ಅಥವಾ 1,000 ರೂಪಾಯಿಗಳು ಹೆಚ್ಚಿಗೆ ಕೊಡುತ್ತೇವೆಂದು ಹೇಳಿ.

ಶ್ರೀ ಬಿ. ರಮಾನಾಥ್ ರೈ : ಮಾನ್ಯ ಅಧ್ಯಕ್ಷರೆ, ಬೇರೆ ಬೇರೆ ಇಲಾಖೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ 10–12 ವರ್ಷಗಳಲ್ಲಿ ನೇಮಕ ಮಾಡಿಕೊಂಡಿವಂಥದ್ದು. ಇವತ್ತು 22 ವರ್ಷಗಳಿಂದ ಕೆಲಸ ಮಾಡುತ್ತಿರುವವರು ಇದ್ದಾರೆ. ನಾನು ಏನು ಹೇಳುತ್ತಿದ್ದೇನೆಂದರೆ ಯಾವುದೇ ಇತರ ಇಲಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡು ಕೆಲಸ ಮಾಡುತ್ತಿರುವವರು 10 ವರ್ಷ, 15 ವರ್ಷಗಳಾಗಿರುವವರು ಇದ್ದಾರೆ, ಇಲ್ಲವೆಂದು ಅಲ್ಲ. ಅವರಿಗೆ ಹಂತ ಹಂತವಾಗಿ ಜಾಸ್ತಿಯಾಗಿದೆ. ಅದು ಕೂಡ ಸಾಕಾಗುವುದಿಲ್ಲವೆಂಬುದು ನಮಗೆ ಗೊತ್ತಿದೆ. ಅದಕ್ಕಾಗಿ ಬೇರೆ ಬೇರೆ ಹೋರಾಟಗಳು, ಪ್ರಯತ್ನಗಳು ನಡೆಯುತ್ತಲೇ ಇವೆ. ಇದರ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕೆಂದು ನನ್ನ ಕಳಕಳಿ, ಈ ಸದನದ ಮೂಲಕ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ರಮಾನಾಥ್ ರೈಯವರು ಈ ಸದನದ ಹಿರಿಯ ಸದಸ್ಯರಾಗಿದ್ದಾರೆ; ಸಚಿವರಾಗಿ ಕೆಲಸ ಮಾಡಿದ್ದಾರೆ. ಅವರಿಗೂ ಸರ್ಕಾರದ ಒಳಗಿದ್ದು, ಹೊರಗಿದ್ದು, ವಸ್ತು ಸ್ಥಿತಿ ಏನೆಂಬುದರ ಬಗ್ಗೆ ಸ್ಪಷ್ಟವಾಗಿ ಮನವರಿಕೆ ಇದೆ. ಈಗ ಅವರು ಕೇಳಿರುವಂಥ

ಗ್ರಂಥಾಲಯದ ಮೇಲ್ವಿಚಾರಕರನ್ನು ಕಾರ್ಯಗೊಳಿಸಬಹುದೇ ಎಂಬ ಪ್ರಶ್ನೆ ಇದೆ. ಇವರನ್ನು ಕಾರ್ಯಗೊಳಿಸುವ ಪ್ರಸ್ತಾವನೆ ಇಲ್ಲ. ಈಗ ಅವರ ಗೌರವಧನವನ್ನು ಹೆಚ್ಚಿಸಬೇಕೆನ್ನುವ ಬಗ್ಗೆ ಶ್ರೀ ಜಯಚಂದ್ರರವರು, ತಾವು ಮತ್ತು ಇನ್ನು ಅನೇಕ ಸದಸ್ಯರ ಭಾವನೆ ಇದೆ. ಇದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಉದ್ಯೋಗ ಖಾತ್ರಿ ಯೋಜನೆಯ ಅನುದಾನದ ಬಗ್ಗೆ

99 (572) ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ (ಕುಷ್ಟಗಿ) : ಮಾನ್ಯ ಗ್ರಾಮೀಣಾವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಬಳಕೆ ಮಾಡಿದ ಅನುದಾನ ಎಷ್ಟು; ಈ ಪೈಕಿ ಕೇಂದ್ರ ಸರ್ಕಾರದಿಂದ ಬಂದ ಅನುದಾನ ಎಷ್ಟು;

ಆ) ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ನೀಡಿದ ಅನುದಾನ ಎಷ್ಟು (ತಾಲ್ಲೂಕುವಾರು ವಿವರಣೆ ಒದಗಿಸುವುದು);

ಇ) ಗ್ರಾಮ ಪಂಚಾಯತಿ ಮೂಲಕ ಕೈಗೊಂಡ ಕಾಮಗಾರಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅವ್ಯವಹಾರ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಗ್ರಾಮ ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳ ಮೇಲೆ ಸರ್ಕಾರವು ಶಿಸ್ತು ಕ್ರಮವನ್ನು ತೆಗೆದುಕೊಳ್ಳಲು ಇಚ್ಚಿಸುತ್ತದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಸದರಿ ಯೋಜನೆಯಡಿ ಪ್ರಸ್ತುತ ಸಾಲಿನಲ್ಲಿ ಬಳಕೆಯಾದ ಅನುದಾನ ರೂ. 2129.19 ಕೋಟಿಗಳು ಮತ್ತು ಕೇಂದ್ರದಿಂದ ಬಂದ ಅನುದಾನ ರೂ.2401.48 ಕೋಟಿಗಳು.

ಆ) ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಿಗೆ ಸಂಬಂಧಿಸಿದ ವಿವರಗಳು ಈ ಕೆಳಕಂಡಂತಿದೆ:

ಜಿಲ್ಲೆ	ತಾಲ್ಲೂಕು	ಪ್ರಸ್ತುತ ಸಾಲಿನಲ್ಲಿ ಬಿಡುಗಡೆಯಾದ ಅನುದಾನ (ಲಕ್ಷ ರೂ.ಗಳಲ್ಲಿ)	ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಸಂಖ್ಯೆ
ರಾಯಚೂರು	1. ದೇವದುರ್ಗ	2116.61	4263
	2. ಲಿಂಗಸುಗೂರು	2156.93	2637
	3. ಮಾನ್ವಿ	1855.94	5066
	4. ರಾಯಚೂರು	1279.03	2143
	5. ಸಿಂಧನೂರು	1946.97	3294
	ಒಟ್ಟು:	**9355.48**	**17403**
ಕೊಪ್ಪಳ	1. ಗಂಗಾವತಿ	1708.31	2940
	2. ಕೊಪ್ಪಳ	1548.05	11977
	3. ಕುಷ್ಟಗಿ	2540.14	9200
	4. ಯಲಬುರ್ಗಾ	2014.87	10256
	ಒಟ್ಟು:	**7811.37**	**34373**

ಇ) ಸರ್ಕಾರದ ಗಮನಕ್ಕೆ ಬಂದಿದೆ.

ಈ) ಹೌದು. ಸರ್ಕಾರವು ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸಲು ಇಚ್ಛಿಸುತ್ತದೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರವನ್ನು ಒದಗಿಸಿದೆ. ನಾನು ಕೇಳಿದ್ದ ಪ್ರಶ್ನೆ ಗ್ರಾಮ ಪಂಚಾಯಿತಿ ಮೂಲಕ ಕೈಗೊಂಡ ಕಾಮಗಾರಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅವ್ಯವಹಾರ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಎಂದು ಕೇಳಿದ್ದು, ಅದಕ್ಕೆ ಗಮನಕ್ಕೆ ಬಂದಿದೆಯೆನ್ನುವ ಮಾತನ್ನು ಸಚಿವರು ಒಪ್ಪಿಕೊಂಡಿದ್ದಾರೆ. ಅಲ್ಲಿ ಅವ್ಯವಹಾರಗಳು ಆಗಿರುವಂಥ ಸಂದರ್ಭದಲ್ಲಿ ನಮ್ಮ ರಾಯಚೂರು ಮತ್ತು

ಕೊಪ್ಪಳ ಜಿಲ್ಲೆಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಬಹಳಷ್ಟು ದುಡ್ಡು ಅವ್ಯವಹಾರವಾಗಿರುವುದರಿಂದ, ಒಂದೊಂದು ಗ್ರಾಮ ಪಂಚಾಯತಿಯಲ್ಲಿ ಎರಡು, ಎರಡೂವರೆ ಕೋಟಿ ರೂಪಾಯಿಗಳನ್ನು 6 ತಿಂಗಳುಗಳಲ್ಲಿ ಖರ್ಚು ಮಾಡಿದ್ದಾರೆ. ಆ ರೀತಿ ಖರ್ಚು ಮಾಡಿರುವುದಕ್ಕೆ ನಾವು ಸಂತೋಷವನ್ನು ವ್ಯಕ್ತಪಡಿಸೋಣ. ಆ ಹಣ ನೇರವಾಗಿ ಜನರಿಗೆ ಮುಟ್ಟುವಂಥದ್ದು ಆಗಿದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಈಗ ಏನು ಆಗಿದೆಯೆಂದರೆ ಇಂಥ ಅವ್ಯವಹಾರ continue ಆದರೆ ಸರ್ಕಾರದಿಂದ ಪುಕ್ಕಟೆಯಾಗಿ ಹಣ ಬರುತ್ತದೆಂದರೆ ನಮ್ಮ ರೈತರಿಗೆ ಕಾರ್ಮಿಕರು ಸಿಗುತ್ತಿಲ್ಲ. ಅದು ಯಾವ ರೀತಿ ಬರುತ್ತದೆಂದರೆ ಮತದಾರರ ಯಾದಿಯಲ್ಲಿ ಒಂದು ಗ್ರಾಮದಲ್ಲಿ 600 voters ಇದ್ದರೆ, ಅಲ್ಲಿ 700 I.D. ಗಳನ್ನು ಮಾಡಿರುವಂಥದ್ದು ಗ್ರಾಮ ಪಂಚಾಯಿತಿಯ ಸೆಕ್ರೆಟರಿ ಮತ್ತು ಅಲ್ಲಿರುವಂಥ ಯಾರೇ ಪ್ರತಿನಿಧಿಗಳು ಇರಬಹುದು ಅಥವಾ ಯಾರೇ ಅಧಿಕಾರಿಗಳು ಇರಬಹುದು, ಅವರೆಲ್ಲರ ಕುಮ್ಮಕ್ಕಿನಿಂದ ಇಂಥ ಅವ್ಯವಹಾರ ನಮ್ಮ ಜಿಲ್ಲೆಗಳಲ್ಲಿ ನಡೆದಿರುವಂಥದ್ದು. ಅದಕ್ಕೆ ಕಡಿವಾಣ ಹಾಕುವಂಥ ಕೆಲಸವಾಗಬೇಕು. ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಮಂಡನೆಯ ದಿವಸ ಇವರು ಸಂದರ್ಶನ ಕೊಡುವ ಸಂದರ್ಭದಲ್ಲಿ ಒಬ್ಬ ನೇರವಾಗಿ ದೂರವಾಣಿಯ ಮೂಲಕ ಮಾನ್ಯ ಮುಖ್ಯಮಂತ್ರಿಯವರನ್ನು ಒಂದು ಪ್ರಶ್ನೆ ಕೇಳಿದ. ಈ ಉದ್ಯೋಗ ಖಾತ್ರಿಯಿಂದ ನಮ್ಮ ರೈತರಿಗೆ ಕಾರ್ಮಿಕರು ಸಿಗದೇ ತೊಂದರೆಯಾಗಿದೆ. ಪುಕ್ಕಟೆಯಾಗಿ ಬಿಲ್ ಬರೆದು ಕೊಡುವುದು, ಅವ್ಯವಹಾರ ಮಾಡುವುದರಿಂದ ರೈತರಿಗೆ ಕಾರ್ಮಿಕರು ಸಿಗುವುದಿಲ್ಲ, ಮತ್ತೆ ಇಲ್ಲಿ ಕೆಲಸ ಕೂಡ ಆಗಿಲ್ಲ. ನಮಗೆ ಇದು ಉಪಯೋಗವಾಗಬೇಕು, ರೈತರು ಇದನ್ನು ಉಪಯೋಗ ಮಾಡಿಕೊಂಡಿಲ್ಲ, ಸರ್ಕಾರದ ಹಣ ಪುಕ್ಕಟೆಯಾಗಿ ಬರುತ್ತದೆಂದು ಹೇಳಿ ಇನ್ನಿತರ ಜೂಜಾಟ, ಕೆಟ್ಟ ಚಟಗಳಿಗೆ ಉಪಯೋಗವಾಗುವಂಥದ್ದು ಆಗಿದೆ. ಇದು ಬಹಳ ವಿಷಾದನೀಯ ವಿಷಯವಾಗಿದೆ.

ಆದ್ದರಿಂದ, ಏಪ್ರಿಲ್‌ನಿಂದ ಪ್ರಾರಂಭವಾಗುವ ಮುಂದಿನ ವರ್ಷದಿಂದಾದರೂ ಇದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸತಕ್ಕಂಥ ದಿಸೆಯಲ್ಲಿ ವಿಶೇಷವಾಗಿರತಕ್ಕಂಥ ಒಂದು ಸಮಿತಿಯನ್ನು ನೇಮಕ ಮಾಡಬೇಕು. ಹಿಂದೆ ಆಗಿರತಕ್ಕಂಥ ಅವ್ಯವಹಾರವನ್ನು ಬಯಲಿಗೆ ಎಳೆಯುವಂಥಾದ್ದು ಮತ್ತು ಅದಕ್ಕೆ ಏನಾದರೊಂದು ತನಿಖಾ ತಂಡವನ್ನು ಮಾಡಬೇಕು.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಇದಕ್ಕೆ ಶಿಸ್ತು ಬದ್ಧವಾದ ಒಂದು ಕಾನೂನು ತರಲೇಬೇಕು. ಇದು ಪ್ರತಿಯೊಂದು ಕಡೆಯೂ ನಡೆಯುತ್ತಿದೆ, ಇದಕ್ಕೆ ಶಿಸ್ತು ಬದ್ಧವಾದ ಒಂದು ಕಾನೂನು ತನ್ನಿ.

ಅಧ್ಯಕ್ಷರು : ಕುಳಿತುಕೊಳ್ಳಿ, ಅವರ ಮಾತು ಮುಗಿಯುವುದಕ್ಕೆ ಮೊದಲೇ ನೀವು ಎದ್ದು ನಿಂತು ಕೇಳುತ್ತೀರಿ, ಇದು ಸರಿಯಲ್ಲ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಇದಕ್ಕೆ ಜಿಲ್ಲಾಮಟ್ಟದಲ್ಲಿ ವಿಶೇಷವಾದ ಒಂದು ತನಿಖಾ ತಂಡವನ್ನು ನೇಮಕ ಮಾಡುವುದು ಬಹಳ ಸೂಕ್ತ ಎಂದು ಹೇಳುತ್ತೇನೆ. ಇದರಲ್ಲಿ ಭಾಗಿಗಳಾಗಿರುವ ಅಧಿಕಾರಿಗಳ ಮೇಲೆ ನೇರವಾಗಿ ಕ್ರಮ ತೆಗೆದುಕೊಂಡು, ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸುವುದು ಆಗಬೇಕೆಂದು ನನ್ನ ಅಪೇಕ್ಷೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಾಮುಖ್ಯವಾಗಿರತಕ್ಕಂಥ ಪ್ರಶ್ನೆ. ಈಗ ಮುಖ್ಯಮಂತ್ರಿಗಳು ಇಲ್ಲಿದ್ದಾರೆ. ಆ ಕಾರಣದಿಂದ ಅವರ ಗಮನವನ್ನು ಸೆಳೆಯುತ್ತಿದ್ದೇನೆ. ಉದ್ಯೋಗ ಖಾತ್ರಿ ಯೋಜನೆಯ ರಾಜ್ಯದಲ್ಲಿ ಮೂರು ವರ್ಷಗಳಿಂದಲೂ ಆಚರಣೆಯಲ್ಲಿದೆ. ನನ್ನ ಅನುಭವಕ್ಕೆ ಬಂದಿರುವ ಪ್ರಕಾರ, ಮೊದಲೇ ವರ್ಷ ರಾಜ್ಯದಲ್ಲಿ 236 ಕೋಟಿ ರೂಪಾಯಿಗಳು ಇದಕ್ಕೆ ಖರ್ಚಾಯಿತು. ಎರಡನೇ ವರ್ಷ ಅಂದರೆ ಹಿಂದಿನ ವರ್ಷ 357 ಕೋಟಿ ರೂಪಾಯಿಗಳು ಖರ್ಚಾಗಿದೆ. ಈ ವರ್ಷ 2,200–2,300 ಕೋಟಿ ರೂಪಾಯಿಗಳವರೆಗೂ ಖರ್ಚಾಗಿದೆ. ಅಂದರೆ ಸುಮಾರು 2,000 ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣ ಖರ್ಚಾಗಿರುವಂಥ ಸಂದರ್ಭದಲ್ಲಿ, ನಾನು ಇವತ್ತು ಬೆಳಗ್ಗೆ ಪತ್ರಿಕೆಯಲ್ಲಿ ಓದಿದೆ, ಅಲ್ಲಿ ಕೆಲಸ ಮಾಡುತ್ತಿದ್ದಂಥ ಒಬ್ಬ ಡೈರೆಕ್ಟರ್ ಅನ್ನು ವರ್ಗಾವಣೆ ಮಾಡಿದ್ದೀರಿ. ನಾವು ಈ ವಿಚಾರದಲ್ಲಿ ಸಾಕಷ್ಟು ಗಮನ ಹರಿಸಿದ್ದೇವೆ. ಆಂಧ್ರ ಪ್ರದೇಶ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಏಕೆ ಈ ಯೋಜನೆಯಲ್ಲಿ ಹೆಚ್ಚು ಹಣ ಖರ್ಚಾಗುತ್ತಿದೆ ಎಂದರೆ, ಅಲ್ಲಿ ಈ ಇಲಾಖೆಗೆ ಸಂಬಂಧಪಟ್ಟ ಕಾರ್ಯದರ್ಶಿಗಳನ್ನಾಗಲಿ ಅಥವಾ ನಿರ್ದೇಶಕರನ್ನಾಗಲಿ ಐದು ವರ್ಷಗಳಾದರೂ ವರ್ಗಾವಣೆ ಮಾಡಿಲ್ಲ. ಆದರೆ ನೀವು ಒಂದೆರಡು ವರ್ಷಕ್ಕೇ ಮಾಡುತ್ತೀರಿ. ಮಾರ್ಚ್ ತಿಂಗಳು ಮುಗಿಯುವುದಕ್ಕೆ ಇನ್ನೂ ಹದಿನೈದು ದಿವಸವಿರುವಾಗ, ಈಗ ವರ್ಗಾವಣೆ ಮಾಡುತ್ತೀರಿ ಎಂದರೆ ಅದರ ಬಗ್ಗೆ ಯೋಚನೆ ಮಾಡಬೇಕು. ಅಧಿಕಾರಿಗಳು ಪ್ರಾಮಾಣಿಕವಾಗಿ ಸ್ಪಂದಿಸಿದಂಥ ಸಂದರ್ಭದಲ್ಲಿ, ರಾಜ್ಯಕ್ಕೆ ಇಷ್ಟೊಂದು ಹಣವನ್ನು ತರಲು ಸಹಾಯ ಮಾಡಿರುವಾಗ,

ಅವರನ್ನು ಏಕಾಏಕಿ ವರ್ಗಾವಣೆ ಮಾಡುವುದರಿಂದ ಯೋಜನೆಗೆ ತೊಂದರೆ ಯಾಗುವುದಿಲ್ಲವೇ ಎನ್ನುವುದು ನನ್ನ ಭಾವನೆ. ದಯಮಾಡಿ ಅದರ ಬಗ್ಗೆ ಗಮನ ಹರಿಸಿ.

ಡಾ: ಹೆಚ್.ಸಿ.ಮಹದೇವಪ್ಪ : ಸನ್ಮಾನ್ಯ ಅಧ್ಯಕ್ಷರೆ, ಉದ್ಯೋಗ ಖಾತ್ರಿ ಯೋಜನೆ ಒಂದು ಒಳ್ಳೆಯ ಕಾರ್ಯಕ್ರಮ. ಗ್ರಾಮ ಪಂಚಾಯಿತಿಗಳಿಗೆ ತಮ್ಮದೇ ಆದಂಥ ಸಂಪನ್ಮೂಲದ ಕೊರತೆ ಇರುವ ಸಂದರ್ಭದಲ್ಲಿ ಈ ಹಣವನ್ನು ಸರಿಯಾಗಿ ಬಳಸಿಕೊಂಡರೆ, it is like rebuilding the nation through people's participation. ಜನರ ಸಹಭಾಗಿತ್ವದಿಂದ ಹಳ್ಳಿಗಳನ್ನು ಪುನರಾತ್ಥಾನ ಮಾಡತಕ್ಕಂಥ ಪ್ರಮುಖವಾದಂಥ ಕೆಲಸ. ಅದರ ಜೊತೆಗೆ, employment guarantee to those people who don't have work. ಈ ರೀತಿಯ ಯೋಜನೆ ಇರುವುದರಿಂದ ಹಳ್ಳಿಗಳನ್ನು ಪುನರ್ ನಿರ್ಮಾಣ ಮಾಡುವುದಕ್ಕೆ 2,000 ಕೋಟಿ ರೂಪಾಯಿಗಳನ್ನು ಸರಿಯಾಗಿ ಬಳಸಿ ಕೊಂಡು, ಅದನ್ನು Social auditing ವ್ಯಾಪ್ತಿಗೆ ಒಳಪಡಿಸುವ ಕೆಲಸವನ್ನು ಮಾಡಬೇಕು. ಈಗಾಗಲೇ ಪಂಚಾಯಿತಿ ವ್ಯಾಪ್ತಿಯಲ್ಲಿ Social auditing ವ್ಯವಸ್ಥೆ ಇದೆ. ಏನು ಕೆಲಸ ಮಾಡುತ್ತಿದ್ದಾರೆ, ಎಷ್ಟು ಕೆಲಸ ಆಯಿತು, ಯಾವ ರೀತಿ ಮಾಡಿದ್ದಾರೆ ಎನ್ನುವುದನ್ನು ನೋಡುವ ವ್ಯವಸ್ಥೆಯನ್ನು ಮಾಡಬಹುದು. ಹಿಂದೆ ನಾವು ಅಧಿಕಾರದಲ್ಲಿದ್ದಾಗಲೇ ಓಂಬುಡ್ಸ್‌ಮನ್ ಮಾಡಬೇಕೆಂದು propose ಮಾಡಿದ್ದೆವು. ಅದನ್ನೂ ಮಾಡಬಹುದು. ಜಿಲ್ಲಾ ಮಟ್ಟದಲ್ಲಿ M.P. ಗಳ ನೇತೃತ್ವದಲ್ಲಿ ಈಗಾಗಲೇ ಕೇಂದ್ರ ಸರ್ಕಾರದವರು Vigilance Committeeಯನ್ನು ಮಾಡಿದ್ದಾರೆ ಎಂದು ಅಂದುಕೊಂಡಿದ್ದೇನೆ. ಇದು ಹೆಚ್ಚು ಪರಿಣಾಮಕಾರಿಯಾಗಿ, ಜನರ ಸಹಭಾಗಿತ್ವದಿಂದ ಊರುಗಳನ್ನು ಕಟ್ಟತಕ್ಕಂಥ ಕೆಲಸವನ್ನು, ಗ್ರಾಮ ಸ್ವರಾಜ್ಯದ ಕನಸನ್ನು ನನಸು ಮಾಡಲಿಕ್ಕೆ, ಉದ್ಯೋಗವಿಲ್ಲದಂಥ ಕುಟುಂಬಕ್ಕೆ ಒಂದು ನೂರು ದಿನಗಳ ಕೆಲಸ ಕೊಡಲು ಅತ್ಯಂತ ಪ್ರಮುಖವಾದ ಯೋಜನೆ. ಹಳ್ಳಿಗಳಿಗೇ ನೇರವಾಗಿ ಈ ಹಣ ತಲುಪುವುದರಿಂದ ಈ ಬಗ್ಗೆ ಆಮೂಲಾಗ್ರವಾದ ಚಿಂತನೆಯನ್ನು ಮಾಡಿ ಮಾನ್ಯ ಸಚಿವರು ಇದನ್ನು ಸರಿಯಾಗಿ ಬಳಸಿಕೊಂಡು ಹಳ್ಳಿಗಳನ್ನು ಮತ್ತು ಸ್ವರಾಜ್ಯವನ್ನು ಕಟ್ಟತಕ್ಕಂಥ ಕನಸನ್ನು ನನಸು ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದ ಅಮರೇಗೌಡ ಬಯ್ಯಾಪುರರವರು, ಮಾನ್ಯ ಜಯಚಂದ್ರರವರು, ಡಾ: ಮಹದೇವಪ್ಪನವರು ಮತ್ತು ಇನ್ನೂ ಹಲವಾರು ಶಾಸಕರು ಈ ಯೋಜನೆಯ ಬಗ್ಗೆ ಬಹಳಷ್ಟು ಆಸಕ್ತಿ ಹೊಂದಿದ್ದಾರೆ ಮತ್ತು ಹೆಚ್ಚು ಆಸಕ್ತಿಯಿಂದಲೂ ಕೆಲಸ ಮಾಡಿದ್ದಾರೆ. ಉದ್ಯೋಗ ಖಾತ್ರಿ ಯೋಜನೆಯು ಬಹಳ ಪ್ರಮುಖವಾದಂಥ ಯೋಜನೆ. ಇದಕ್ಕೆ ಕೇಂದ್ರ ಸರ್ಕಾರ ಕೊಡುತ್ತಿರುವ ಹಣದ ಜೊತೆಗೆ ರಾಜ್ಯ ಸರ್ಕಾರವೂ ತನ್ನ ಪಾಲಿನ ಹಣವನ್ನು ಕೊಟ್ಟು ಇದನ್ನು ಯಶಸ್ವಿಯಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದೆ. ಈ ವರ್ಷ ನಾವು ಬಹಳ ದೊಡ್ಡ ಪ್ರಮಾಣದಲ್ಲಿ ಕೆಲಸ ತೆಗೆದುಕೊಂಡಿದ್ದೇವೆ. ಹಿಂದಿನ ಎರಡು ವರ್ಷಗಳಲ್ಲಿ ಈ ಯೋಜನೆಯಲ್ಲಿ ಖರ್ಚು ಬಹಳ ಆಗಿರಲಿಲ್ಲ, ಈ ವರ್ಷ ಬಹಳ ಆಗುತ್ತದೆ ಎಂದು ಜಯಚಂದ್ರರವರು ಹೇಳಿದರು. ಯಾವ ರೀತಿ ನಾವು ಇದನ್ನು active ಆಗಿ ತೆಗೆದು ಕೊಳ್ಳುತ್ತೇವೋ ಅದರ ಮೇಲೆ ಇದು ನಿರ್ಧಾರವಾಗುತ್ತದೆ. ಇದರಲ್ಲಿ ದುರುಪ ಯೋಗವಾಗಿದೆ ಎಂದು ಅಮರೇಗೌಡ ಬಯ್ಯಾಪುರರವರು ಹೇಳಿದರು. ಕೆಲವು ಕಡೆ ದುರುಪಯೋಗವಾಗಿದೆ ಎಂದು ಅಮರೇಗೌಡ ಬಯ್ಯಾಪುರ ರವರು ಹೇಳಿದರು. ಕೆಲವು ಕಡೆ ದುರುಪಯೋಗವಾಗಿದೆ, ಇಲ್ಲ ಎಂದು ಹೇಳುವುದಿಲ್ಲ, ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಆದರರೆ ಅದರ ಪ್ರಮಾಣ ಬಹಳ ಕಡಿಮೆಯಿದೆ. ಈ ಕಾರಣಕ್ಕಾಗಿ ನಾವು ಇಡೀ ಯೋಜನೆಯನ್ನೇ ದೂಷಿಸುವುದು, ಕೆಳಗೆ ಮಾಡುವುದು ಸರಿಯಲ್ಲ. ಏಕೆಂದರೆ, ಅದರಿಂದ ಬಹಳಷ್ಟು ಅನುಕೂಲತೆಗಳು ಗ್ರಾಮೀಣ ಪ್ರದೇಶಗಳಲ್ಲಿ ಆಗಿವೆ. ಅದರಿಂದ ಜನರಿಗೆ ಉದ್ಯೋಗ ಸಿಕ್ಕಿದೆ. ಇದರಲ್ಲಿ ಅವ್ಯವಹಾರ ವಾಗಿರುವ ಕಡೆಗಳಲ್ಲಿ ನಾವು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಅಲ್ಲಿನ ಕೆಳಹಂತದ ಜನಪ್ರತಿನಿಧಿಗಳಿಂದ ಹಿಡಿದು ಮೇಲಿನ ಹಂತದ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಇದನ್ನು ಸರಿಯಾದ ರೀತಿಯಲ್ಲಿ ಕಟ್ಟುನಿಟ್ಟಾಗಿ ಮಾಡಿದರೆ ಖಂಡಿತವಾಗಿಯೂ ಇದು ಬಹಳ successful ಆಗುತ್ತದೆ. ಈ ಯೋಜನೆಯಿಂದ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಬದಲಾವಣೆ ಬರಲಿಕ್ಕೆ ಸಾಧ್ಯವಿದೆ. ಮಾದರಿ ಗ್ರಾಮಗಳನ್ನು ನಿರ್ಮಾಣ ಮಾಡಲಿಕ್ಕೆ ಸಾಧ್ಯವಿದೆ. ಆ ರೀತಿಯ ಪ್ರಯತ್ನಕ್ಕೆ ಎಲ್ಲರ ಸಹಕಾರ ಬೇಕು ಎನ್ನುವುದು ನನ್ನ ಅಭಿಪ್ರಾಯ. ಎಲ್ಲೆಲ್ಲಿ ಅವ್ಯವಹಾರವಾಗಿದೆ ಅಲ್ಲಿ ಕಟ್ಟುನಿಟ್ಟಿನ

ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ನಾವು ಕ್ರಮ ಕೈಗೊಂಡಿದ್ದೇವೆ. ನಾನು ಅದರ ವಿವರಗಳನ್ನು ಕೊಟ್ಟಿದ್ದೇನೆ. ರಾಯಚೂರು ಜಿಲ್ಲೆಯಲ್ಲಿ ನಾಲ್ಕು ಪ್ರಕರಣಗಳನ್ನು ದಾಖಲು ಮಾಡಿದ್ದೇವೆ, ಅಂದರೆ ನಾಲ್ಕು ಮಂದಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿದ್ದೇವೆ. ಕೊಪ್ಪಳದಲ್ಲಿಯೂ ಕ್ರಮ ಕೈಗೊಂಡಿದ್ದೇವೆ. ಈವರೆಗೆ ಇಡೀ ರಾಜ್ಯದಲ್ಲಿ ಒಟ್ಟು 78 ಪ್ರಕರಣಗಳನ್ನು ನಾವು ದಾಖಲು ಮಾಡಿದ್ದೇವೆ, 113 ಜನ ಅಧಿಕಾರಿಗಳ ಮೇಲೆ ಕ್ರಿಮಿನಲ್ ಕೇಸ್ ಅಥವಾ ಬೇರೆ ಬೇರೆ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅದನ್ನೂ ಕಟ್ಟುನಿಟ್ಟಿನಿಂದ ಮಾಡುತ್ತಿದ್ದೇವೆ. ಆದರೂ ಕೆಲವು ಕಡೆ ಲೋಪದೋಷಗಳಿವೆ. ಎಲ್ಲೆಂದರೆ, ಕೆಳಹಂತದ ಜನಪ್ರತಿನಿಧಿಗಳು ಮತ್ತು ಅಲ್ಲಿನ ಅಧಿಕಾರಿಗಳು ಪರಸ್ಪರ ಶಾಮೀಲಾದಾಗ ಇವು ಆಗುತ್ತವೆ. ಅಲ್ಲಿ ಯಾರಾದರೊಬ್ಬರು ಕಟ್ಟುನಿಟ್ಟಾಗಿದ್ದರೆ ಈ ರೀತಿಯವು ಏನೂ ಆಗುವುದಿಲ್ಲ. ಹೀಗಾಗಿ, ಅದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಕ್ಕೆ ಎಲ್ಲ ಪ್ರಯತ್ನಗಳು ಆಗುತ್ತಿವೆ. ಮಾನ್ಯ ಮಹದೇವಪ್ಪನವರು ಹೇಳಿದ ಹಾಗೆ ಓಂಬುಡ್ಸ್‌ಮನ್ ನೇಮಕ ಮಾಡಬೇಕೆಂದು ಈಗಾಗಲೇ ನಾವು ಹೆಚ್ಚಿನ ರೀತಿಯಲ್ಲಿ ಪ್ರಯತ್ನವನ್ನು ಮಾಡುತ್ತಿದ್ದೇವೆ. ಓಂಬುಡ್ಸ್‌ಮನ್ ನೇಮಕ ಮಾಡುವ ಸಲುವಾಗಿ ಹಿಂದೆ ನಾವು call for ಸಹ ಮಾಡಿದ್ದೆವು. ಆದರೆ ಅದಕ್ಕೆ ಅರ್ಹರಾದಂಥ ಅಭ್ಯರ್ಥಿಗಳು ಬಂದಿಲ್ಲ. 93 ಅಭ್ಯರ್ಥಿಗಳು ಅರ್ಜಿ ಕೊಟ್ಟಿದ್ದರು. ಆದರೆ ಅದಕ್ಕೆ ಯಾವ ಮಟ್ಟದ qualification ಬೇಕೋ ಆ qualification ಇರುವವರು ಬಂದಿಲ್ಲ. ಅದಕ್ಕಾಗಿ ಮತ್ತೆ ನಾವು ಅರ್ಹರಾಗಿರುವಂಥ ವ್ಯಕ್ತಿಗಳನ್ನು ಆರಿಸುತ್ತಿದ್ದೇವೆ. ಪ್ರತಿಯೊಂದು ಜಿಲ್ಲೆಗೂ ಈ ರೀತಿಯ ಯೋಜನೆಗಳಲ್ಲಿ ಏನು ಅವ್ಯವಹಾರವಾಗುತ್ತಿದೆ, ಏನು ದೂರುಗಳು ಬರುತ್ತಿವೆ, ಅದನ್ನು ತನಿಖೆ ಮಾಡಲು, ತಕ್ಷಣವೇ ಕ್ರಮ ಕೈಗೊಳ್ಳುವ ಸಲುವಾಗಿ ಓಂಬುಡ್ಸ್‌ಮನ್ ನೇಮಕ ಮಾಡಲು ಬಹಳ ಗಂಭೀರವಾಗಿ ಪ್ರಯತ್ನ ನಡೆಯುತ್ತಿದೆ. ಆದಷ್ಟು ಬೇಗನೆ ಪ್ರತಿಯೊಂದು ಜಿಲ್ಲೆಗೂ ಓಂಬುಡ್ಸ್‌ಮನ್ ನೇಮಕ ಮಾಡುವುದನ್ನು ನಾವು ಮಾಡುತ್ತೇವೆ. ಅದೇ ರೀತಿ, Social audit ಬಗ್ಗೆ ಹೇಳಿದರು. ಇದರ ಬಗ್ಗೆ ಈಗಾಗಲೇ ಮೈಸೂರಿನಲ್ಲಿರುವ ನಜೀರ್ ಸಾಬ್ ಸಂಸ್ಥೆಯಲ್ಲಿ ಒಂದು ಸೆಮಿನಾರ್ ನಡೆದು ಅಧಿಕಾರಿಗಳಿಗೆ Social audit ಬಗ್ಗೆ ತರಬೇತಿ ಕೊಡುವಂಥ ಕೆಲಸವನ್ನು ಈಗಾಗಲೇ ನಾವು ಪ್ರಾರಂಭ ಮಾಡಿದ್ದೇವೆ. ಪ್ರತಿ ಹಂತದಲ್ಲೂ, ಪ್ರತಿ

O.30 F-62

ಜಿಲ್ಲೆಯಲ್ಲೂ Social audit ಮಾಡುವುದು, ಓಂಬುಡ್ಸ್‌ಮನ್ ನೇಮಕ ಮಾಡುವುದು ಮತ್ತು M.P. ಗಳ ಅಧ್ಯಕ್ಷತೆಯಲ್ಲಿ general enquiry ಮಾಡುವುದು ಇದ್ದೇ ಇರುತ್ತದೆ. ಇವುಗಳನ್ನೆಲ್ಲ ಮಾಡಿ, ಅದಕ್ಕೆ ಇನ್ನೂ ಹೆಚ್ಚು Squad ಮಾಡಿ, ಮುಂಬರುವಂಥ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುತ್ತೇವೆ. ಹೊಲಗಳಲ್ಲಿ ದುಡಿಯಲು ಕಾರ್ಮಿಕರು ಸಿಗುತ್ತಿಲ್ಲ ಎಂದು ಅಮರೇಗೌಡರು ಹೇಳಿದರು. ಈ ಯೋಜನೆ ಬಂದ ಮೇಲೆ, ಬಹಳಷ್ಟು ಜನ ಇದರಲ್ಲಿ involve ಆದಮೇಲೆ ಕೃಷಿ ಕೆಲಸಕ್ಕೆ ಕೂಲಿಗಳು ಸಿಗುತ್ತಿಲ್ಲ ಎನ್ನುವುದು Social problem ಆಗಿದೆ. ಅದರ ಬಗ್ಗೆ ಯಾವ ರೀತಿ ಚಿಂತನೆ ಮಾಡಬೇಕೆಂದರೆ, ಗ್ರಾಮೀಣ ಪ್ರದೇಶದ ಕೂಲಿ ಕಾರ್ಮಿಕರಿಗೆ ನಾವು 100 ದಿವಸಗಳ ಉದ್ಯೋಗವನ್ನೂ ಕೊಡಬೇಕು. ಅದರ ಜೊತೆಗೆ agriculture production ಗೂ ಅವರು ಸಹಾಯ ಮಾಡಬೇಕು. ಇವೆರಡನ್ನೂ ಯೋಚನೆ ಮಾಡಿ ನಾವು ಮಾಡಬೇಕಾಗಿದೆ. ಇದರ ಬಗ್ಗೆ ಇನ್ನೂ ಹೆಚ್ಚಿನ ಚರ್ಚೆಯಾಗಲಿ ಎನ್ನುವ ಮಾತನ್ನು ಹೇಳುತ್ತೇನೆ. ನೀವು ವ್ಯಕ್ತಪಡಿಸಿರುವ ಭಾವನೆಗಳಿಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡು ಬರುವಂಥ ದಿವಸಗಳಲ್ಲಿ ಇದನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ : ಚೆನ್ನಾಗಿ ಕೆಲಸ ಮಾಡಿ ಈ ಯೋಜನೆಗೆ ಹೆಚ್ಚು ಹಣ ತಂದಿರುವ ಅಧಿಕಾರಿಗಳನ್ನು ವರ್ಗಾವಣೆ ಮಾಡಿರುವ ಬಗ್ಗೆ ಹೇಳಿದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಅದನ್ನು ಸರಿ ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ : ಅಧಿಕಾರಿಗಳನ್ನು ಐದು ವರ್ಷ ಬದಲಾವಣೆ ಮಾಡಲು ಹೋಗಬೇಡಿ.

ಅಧ್ಯಕ್ಷರು : ಆಯಿತು, ಈಗ ಮುಂದಿನ ಪ್ರಶ್ನೆ.

ಶ್ರೀ ವೆಂಕಟರಾವ್ ನಾಡಗೌಡ : ಈ ಯೋಜನೆಯಲ್ಲಿ agriculture ಗೆ ಹೆಚ್ಚು ಒತ್ತು ಕೊಡುವುದಕ್ಕೆ ಅವಕಾಶವಿದೆ. ಅದನ್ನೂ ಸೇರಿಸಿದರೆ ಇನ್ನೂ ಅನುಕೂಲವಾಗುತ್ತದೆ. ಕೃಷಿ ಚಟುವಟಿಕೆಗಳಲ್ಲೂ ಇವರನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ದಯವಿಟ್ಟು ಮಂತ್ರಿಗಳು ಅದನ್ನು ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : ಬಜೆಟ್ ಮೇಲೆ ಚರ್ಚೆ ಮಾಡುವಾಗ ಇದನ್ನೂ ಚರ್ಚೆ ಮಾಡಿ.

ಶಾಲೆಯನ್ನು ಸ್ಥಳಾಂತರಿಸುವ ಬಗ್ಗೆ

100 (1363) ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್. : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಬ್ಬಿ ನಗರದಲ್ಲಿರುವ ವಿವೇಕಾನಂದ ವಿದ್ಯಾಪಾಠ ಶಾಲೆಯ ಕಟ್ಟಡದ ಮೇಲೆ ಹೈಟೆನ್ಷನ್‌ಲೈನ್ ಹಾದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹೈಟೆಕ್ಷನ್ ಲೈನ್ ಹಾದು ಹೋಗುವ ಮಾರ್ಗದಲ್ಲಿ ಅಡಿಗಳು ಕಟ್ಟಡಗಳನ್ನು ಕಟ್ಟಬಾರದು ಇದಕ್ಕೆ ಸರ್ಕಾರ ನಿಗದಿಪಡಿಸಿರುವ ನಿಬಂಧನೆಗಳೇನು (ವಿವರಗಳನ್ನು ನೀಡುವುದು);

ಇ) ಶಾಲಾ ಕಟ್ಟಡವನ್ನು ಪ್ರಾರಂಭಿಸಲು ಯಾವ ಆಧಾರದ ಮೇಲೆ ಅನುಮತಿಯನ್ನು ನೀಡಲಾಗಿದೆ.

ಈ) ಅನುಮತಿಯನ್ನು ನೀಡುವಾಗ ಸರ್ಕಾರದ ನಿಬಂಧನೆಗಳನ್ನು ಉಲ್ಲಂಘಿಸಿದಂತಾಗುವುದಿಲ್ಲವೇ;

ಉ) ಹಾಗಿದ್ದಲ್ಲಿ, ನಿಬಂಧನೆಗಳನ್ನು ಉಲ್ಲಂಘಿಸಿದ ಅಧಿಕಾರಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಊ) ಹೈಟೆನ್ಷನ್ ಲೈನ್ ಹಾದು ಹೋಗಿರುವುದರಿಂದ ಸದರಿ ಶಾಲೆಯಲ್ಲಿ ಸುಮಾರು 500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು ಅವರ ವಿದ್ಯಾಭ್ಯಾಸ ಮತ್ತು ಜೀವದ ಮೇಲೆ ದುಷ್ಪರಿಣಾಮ ಬೀರುವುದಲ್ಲವೇ;

ಋ) ಹಾಗಿದ್ದಲ್ಲಿ, ಈ ವಿದ್ಯಾಪೀಠದ ಶಾಲೆಯನ್ನು ಬೇರೆ ಕಡೆ ಸ್ಥಳಾಂತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಹಾಗಿದ್ದಲ್ಲಿ ಯಾವಾಗ ಸ್ಥಳಾಂತರಿಸಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ವಿದ್ಯುತ್ ಪರಿವೀಕ್ಷಕರು, ತುಮಕೂರು, ಇವರು ದಿ:29.05.2009 ರಲ್ಲಿ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ 1956ರ ನಿಯಮ 77(4) ಮತ್ತು 80ರ ಉಲ್ಲಂಘನೆಯಾಗಿದೆಯೆಂದು ವರದಿ ನೀಡಿರುತ್ತಾರೆ. ಈ ವಿವರಗಳು ಶಿಕ್ಷಣ ಇಲಾಖೆಯಲ್ಲಿ ಲಭ್ಯವಿಲ್ಲ.

ಇ) ಕಟ್ಟಡ ಕಟ್ಟಲು ಅನುಮತಿ ನೀಡುವುದು ನಗರಾಭಿವೃದ್ಧಿ ಪ್ರಾಧಿಕಾರವಾಗಿರುವುದರಿಂದ ಶಿಕ್ಷಣ ಇಲಾಖಾ ವ್ಯಾಪ್ತಿಗೆ ಬರುವುದಿಲ್ಲ.

ಈ) ಹೌದು.

ಉ) ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.

ಊ) ಸದರಿ ಸಂಸ್ಥೆಯ ಆಡಳಿತ ಕಛೇರಿ ಮೇಲೆ ಬೆಸ್ಕಾಂನ ಹೈಟೆನ್ಷನ್ ತಂತಿ ಹಾದು ಹೋಗಿದ್ದು, ಶಾಲಾ ತರಗತಿ ಕೋಣೆಗಳು ಬೆಸ್ಕಾಂನ ವೈರ್‌ಗೆ ಸಮಾನಾಂತರವಾಗಿ ಅಡ್ಡಗೋಡೆ ನಿರ್ಮಾಣ ಮಾಡಿದ್ದು ಈ ಗೋಡೆಯಿಂದ ಅಂದಾಜು 25 ಅಡಿ ದೂರದಲ್ಲಿ 4, 5 ಮತ್ತು 6ನೇ ತರಗತಿ ಹಾಗೂ ಶಾಲಾ ಕಛೇರಿ ಇರುತ್ತದೆ. ಉಳಿದ 1, 2, 3 ಮತ್ತು 7ನೇ ತರಗತಿಗಳು ನಡೆಯುವ ಕಟ್ಟಡಗಳು ಸುಮಾರು 75 ಅಡಿ ದೂರದಲ್ಲಿರುತ್ತವೆ ಮತ್ತು ಕಟ್ಟಡ ಸ್ಥಳಾಂತರ ಆಗಿರುವುದರಿಂದ ಯಾವುದೇ ದುಷ್ಪರಿಣಾಮ ಆಗುವುದಿಲ್ಲ.

ಋ) ಮಾನ್ಯ ಉಚ್ಚ ನ್ಯಾಯಾಲಯದ ರಿ.ಅ.ಸಂಖ್ಯೆ 243333/05, ದಿ: 5-1-2009 ರಲ್ಲಿನ ತೀರ್ಮಾನದಂತೆ ದಿ: 16.12.2009ರಂತೆ ಶಾಲಾ ಕೊಠಡಿಯನ್ನು ತೆರವುಗೊಳಿಸಲಾಗಿದೆ. ಹಾಗೂ ತರಗತಿಗಳನ್ನು ಬೇರೆ ಕಡೆ ನಡೆಸಲಾಗುತ್ತಿದೆ.

ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್. : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಉತ್ತರವನ್ನು ಒದಗಿಸಿರತಕ್ಕಂಥ ಅಧಿಕಾರಿಗಳು ಈ ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ ಎನ್ನುವುದು ನನ್ನ ಅಭಿಪ್ರಾಯ ಗುಬ್ಬಿ ನಗರದಲ್ಲಿರುವ ವಿವೇಕಾನಂದ ವಿದ್ಯಾಪೀಠ ಶಾಲಾ ಕಟ್ಟಡದ ಮೇಲೆ ಹೈಟೆನ್‌ಷನ್ ಲೈನ್ ಹಾದು ಹೋಗಿರುವ ಬಗ್ಗೆ, ವಿದ್ಯುತ್ ಪರಿವೀಕ್ಷಕರು, ತುಮಕೂರು, ಇವರು ದಿನಾಂಕ: 29-05-2009ರಲ್ಲಿ ಒಂದು ವರದಿ ಕೊಟ್ಟಿದ್ದಾರೆ. ನಿಯಮಬಾಹಿರವಾಗಿ, 220 K.V. ಮತ್ತು 120 K.V. ಎರಡು ಹೈಟೆನ್‌ಷನ್ ಲೈನ್‌ಗಳೂ ಅಲ್ಲಿ ಹಾದು ಹೋಗಿವೆ. ಈ ಶಾಲಾ

ಕಟ್ಟಡವನ್ನು ಸ್ಥಳಾಂತರ ಮಾಡಿ ಎಂದು ದಿನಾಂಕ: 05-01-2009 ರಲ್ಲಿ ಉಚ್ಚನ್ಯಾಯಾಲಯದಲ್ಲಿ ಒಂದು ಆದೇಶ ಕೂಡ ಆಗಿದೆ.

ಈ ಶಾಲಾ ಕಟ್ಟಡವನ್ನು ಸ್ಥಳಾಂತರ ಮಾಡಬೇಕೆಂಬ ಆದೇಶ ಕೂಡ ಆಗಿದೆ. ಈ ರೀತಿಯ ಆದೇಶವಾಗಿದ್ದರೂ ಅವರು ಸುಮಾರು ಒಂದೆರಡು ಕಟ್ಟಡಗಳನ್ನು ಸ್ಥಳಾಂತರ ಮಾಡುವ ರೀತಿಯಲ್ಲಿ ಮಾಡಿ ಇದುವರೆಗೂ ಕೂಡ ಅಲ್ಲಿಯೇ ಶಾಲೆಯನ್ನು ನಡೆಸುತ್ತಿದ್ದಾರೆ. ಆ ಶಾಲೆಯಲ್ಲಿ ಸುಮಾರು 500-600 ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಸುಮಾರು 4-5 ವರ್ಷಗಳಿಂದ ಈ ಶಾಲೆ ನಡೆಯುತ್ತಿದೆ. ಇದನ್ನು ಸ್ಥಳಾಂತರ ಮಾಡುವ ದಿಕ್ಕಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಗುಬ್ಬಿ ನಗರದಲ್ಲಿ ವಿವೇಕಾನಂದ ವಿದ್ಯಾಪೀಠವೆಂಬ ಶಾಲೆ ಇದ್ದು, ಅದು 1ನೇ ತರಗತಿಯಿಂದ 7ನೇ ತರಗತಿವರೆಗೆ ಶಾಲೆ ನಡೆಸುತ್ತಿದೆ. ಸದಸ್ಯರು ಹೇಳಿರುವ ಪ್ರಕಾರ ಶಾಲೆಯ ಮೇಲ್ಭಾಗದಲ್ಲಿ high tension line ಹಾದು ಹೋಗಿದ್ದು ಅದು ಸತ್ಯವಿದೆ. ಈ ಕೇಸ್ High Court ನಲ್ಲಿದ್ದು, ದಿ: 16-12-2009ರಲ್ಲಿ High Court ನಲ್ಲಿ ತೀರ್ಮಾನವಾಗಿದೆ. ಅದರ ಪ್ರಕಾರ ತರಗತಿಗಳನ್ನು ನಡೆಸುವುದನ್ನು shift ಮಾಡಿದ್ದಾರೆನ್ನುವ ವರದಿ ನಮ್ಮಲ್ಲಿದೆ. ಹಾಗಾಗಿ, ಮಕ್ಕಳಿಗೆ ಯಾವುದೇ ರೀತಿ ತೊಂಧರೆಯಾಗದಂತೆ ನಿಯಮಾವಳಿಗಳಡಿಯಲ್ಲಿ ಅವರು ಎಷ್ಟು ದೂರದಲ್ಲಿ ಶಾಲೆಯನ್ನು ನಡೆಸಬೇಕೋ ಅಷ್ಟು ದೂರದಲ್ಲಿ ಶಾಲೆಯನ್ನು ನಡೆಸುವುದಕ್ಕೆ ಸೂಕ್ತವಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ಈಗ ಅವರು high tension line ಅಡಿಯಲ್ಲಿ ಅಥವಾ ಅದರ ವ್ಯಾಪ್ತಿಯಲ್ಲಿ ಈ ತರಗತಿಗಳನ್ನು ನಡೆಸುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಆದಾಗ್ಯೂ, ಮಾನ್ಯ ಸದಸ್ಯರು ಈ ವಿಷಯದಲ್ಲಿ ಇನ್ನೂ ಹೆಚ್ಚಿನ ತೊಂದರೆ ತೊಡಕು ಏನಾದರೂ ಆಗುತ್ತಿದೆ ಎನ್ನುವ ರೀತಿಯಲ್ಲಿ ತಮ್ಮ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದಾರೆ, ಆ ಕುರಿತಂತೆ ಸರ್ಕಾರದಿಂದ ಇನ್ನಷ್ಟು ಹೆಚ್ಚು first-hand information ಅಥವಾ ಪ್ರಥಮ ಮಾಹಿತಿ ವರದಿಯನ್ನು ನಾವು ತರಿಸಿಕೊಳ್ಳುತ್ತೇವೆ. ಮಕ್ಕಳಿಗೆ ಯಾವುದೇ ರೀತಿ ತೊಂದರೆಯಾಗದಂತೆ ಮತ್ತು ನಿಯಮಾವಳಿಗಳ ಪ್ರಕಾರ high tension line ಅಡಿಯಲ್ಲಿ ಆ ರೀತಿ ಶಾಲೆಗಳನ್ನು ಕಟ್ಟುವುದು,

ನಡೆಸುವುದು ಸೂಕ್ತವಲ್ಲವೆನ್ನುವಂಥದ್ದಿದೆ. ನಮ್ಮ ಜೊತೆಯಲ್ಲಿ ಅಲ್ಲಿಯ ಸ್ಥಳೀಯ ಅಭಿವೃದ್ಧಿ ಪ್ರಾಧಿಕಾರಗಳೂ ಕೂಡ ಎಚ್ಚರಿಕೆಯನ್ನು ವಹಿಸಿಕೊಳ್ಳ ಬೇಕಾಗುತ್ತದೆ. ಏಕೆಂದರೆ, ಕಟ್ಟಡ ಕಟ್ಟಲು permission ಕೊಡುವವರು ಅಲ್ಲಿಯ ನಗರಸಭೆ, ಪುರಸಭೆಯವರು Permission ಕೊಡಬೇಕಾಗುತ್ತದೆ. ಸ್ಥಳಿಯ ಸಂಸ್ಥೆಯವರು permission ಕೊಡದೇ ಹೋಗಿದ್ದರೆ ಅವರು ಕಟ್ಟಿದ್ದು ಕಾನೂನು ಬಾಹಿರವಾಗುತ್ತದೆ. ಒಮ್ಮೆ ಇವರು permission ಕೊಟ್ಟಿದ್ದಿದ್ದರೆ ಅದು ತಪ್ಪಾಗುತ್ತದೆ. ಹಾಗಾಗಿ, ನಾವು ಅಲ್ಲಿ ಸ್ಥಳಿಯವಾಗಿ ಇನ್ನೂ ಹೆಚ್ಚು ವಿವರಗಳನ್ನು ತೆಗೆದುಕೊಂಡು high tension line ಎದುರುಗಡೆಯಲ್ಲಿ ನಮ್ಮ ಮಕ್ಕಳಿಗೆ ತೊಂದರೆಯಾಗದ ರೀತಿಯಲ್ಲಿ ತರಗತಿಗಳನ್ನು ನಿಯಮಾವಳಿಗಳ ಪ್ರಕಾರ ದೂರ ನಡೆಸುವುದಕ್ಕೆ ಬೇಕಾಗಿರುವ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಪ್ರಶ್ನೆ ಸಂಖ್ಯೆ 101 (1034)
ಮಾನ್ಯ ಸದಸ್ಯರು ಹಾಜರಿರಲಿಲ್ಲ

ಪ್ರಶ್ನೆ ಸಂಖ್ಯೆ 102 (1098)
ಮಾನ್ಯ ಸದಸ್ಯರು ಹಾಜರಿರಲಿಲ್ಲ

ಅಧ್ಯಕ್ಷರು : ಶ್ರೀ ಸಿ.ಎಸ್. ಪುಟ್ಟರಾಜುರವರ ಪ್ರಶ್ನೆ ಕಂದಾಯ ಇಲಾಖೆಗೆ ವರ್ಗಾವಣೆಯಾಗಿದೆ.

ಅನುದಾನ ಹಂಚಿಕೆಯಲ್ಲಿ ತಾರತಮ್ಯ

104 (569) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಬೆಳಗಾವಿ ಜಿಲ್ಲಾ ಪಂಚಾಯಿತಿಗೆ ವಿವಿಧ ಯೋಜನೆಗಳ

ಅಡಿಯಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನವೆಷ್ಟು (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು);

ಆ) ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಗೆ ಸಮನಾಗಿ ಅನುದಾನವನ್ನು ಹಂಚಿಕೆ ಮಾಡಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು;

ಇ) ಈ ಅರವಿಂದ ಹಂಚಿಕೆಯಲ್ಲಿ ತಾರತಮ್ಯ ಎಸಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಲಾಗುವ ಯೋಜನೆಗಳಿಗೆ ಜಿಲ್ಲಾ ಪಂಚಾಯತ್‌ವಾರು ಮಾತ್ರ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, 2009–10ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲಾ ಪಂಚಾಯತ್‌ಗೆ ಇಲ್ಲಿಯವರೆಗೆ ರೂ. 332.81 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಯೋಜನಾವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

2009–10ನೇ ಸಾಲಿನಲ್ಲಿ ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ರೂ. 2.20 ಕೋಟಿ ಮತ್ತು 5054– ಗ್ರಾಮೀಣ ಸಂಪರ್ಕ ಯೋಜನೆ ಅಡಿ ರೂ. 8.55 ಕೋಟಿ ಅನುದಾನವನ್ನು ಮಾತ್ರ ಬೆಳಗಾವಿ ಜಿಲ್ಲಾ ಪಂಚಾಯತ್‌ಗೆ ವಿಧಾನ ಸಭಾಕ್ಷೇತ್ರವಾರು ಅನುದಾನ ಬಿಡುಗಡೆ ಮಾಡಲಾಗಿದ್ದು, ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಆ) ವಿಧಾನ ಸಭಾ ಸದಸ್ಯರುಗಳು ಜನಪ್ರತಿನಿಧಿಗಳಿಂದ ವಿಧಾನ ಸಭಾ ಕ್ಷೇತ್ರದಲ್ಲಿನ ರಸ್ತೆಗಳ ಅಭಿವೃದ್ಧಿಗಾಗಿ ಅನುದಾನ ಬಿಡುಗಡೆ ಮಾಡಲು ಮನವಿಗಳು ಬಂದಾಗ ಮಾತ್ರ ಮನವಿಯಲ್ಲಿನ ಪ್ರಸ್ತಾವನೆಗಳನ್ವಯ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ವಿಧಾನ ಸಭಾ ಕ್ಷೇತ್ರವಾರು ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಅನುಬಂಧ – 1

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿ ಬರುವ ಕಾರ್ಯಕ್ರಮಗಳಿಗೆ 2009-10 ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲಾ ಪಂಚಾಯತ್‌ಗೆ ಬಿಡುಗಡೆ ಮಾಡಿರುವ ಅನುದಾನದ ವಿವರ

(ರೂ. ಕೋಟಿಗಳಲ್ಲಿ)

ಕ್ರ ಸಂ.	ಕಾರ್ಯಕ್ರಮ	ಬಿಡುಗಡೆ ಮಾಡಿರುವ ಅನುದಾನ		
		ರಾಜ್ಯ	ಕೇಂದ್ರ	ಒಟ್ಟು
1	ಎನ್.ಆರ್.ಇ.ಜಿ.ಎ.	21.92	197.24	219.16
2	ಎಸ್.ಜಿ.ಎಸ್.ವೈ.	1.32	4.27	5.59
3	ಸುವರ್ಣ ಗ್ರಾಮೋದಯ	26.00	0.00	26.00
4	4702- ಸಣ್ಣ ನೀರಾವರಿ (ಎಸ್.ಡಿ.ಪಿ.)	1.07	0:00	1.07
5	ಸಿ.ಎಂ.ಜಿ.ಎಸ್.ವೈ. (ಲಂಪ್ಸಮ್ ಗ್ರಾಂಟ್ಸ್)	2.20	0.00	2.20
6	5054-ಗ್ರಾಮೀಣ ಸಂಪರ್ಕ	8.55	0.00	8.55
7	5054- ಎಸ್.ಡಿ.ಪಿ.	7.57	0.00	7.57
8	12ನೇ ಹಣಕಾಸು ಆಯೋಗ - ರಸ್ತೆಗಳು	10.82	0.00	10.82
9	12ನೇ ಹಣಕಾಸು ಆಯೋಗ - ಕಟ್ಟಡಗಳು	2.25	0.00	2.25
10	12ನೇ ಹಣಕಾಸು ಆಯೋಗ - ಪಂಚಾಯತ್ ರಾಜ್ ಸಂಸ್ಥೆಗಳು	1.46	0.00	1.46
11	ಗ್ರಾಮೀಣಾ ನೀರು ಸರಬರಾಜು	18.44	29.70	48.14
	ಒಟ್ಟು	**101.60**	**231.21**	**332.81**

ಅನುಬಂಧ - 2

ಬೆಳಗಾವಿ ಜಿಲ್ಲಾ ಪಂಚಾಯತ್‌ಗೆ 2009-10 ನೇ ಸಾಲಿನಲ್ಲಿ ವಿಧಾನಸಭಾ ಕ್ಷೇತ್ರವಾರು ಬಿಡುಗಡೆ ಮಾಡಿರುವ ಅನುದಾನದ ವಿವರ

(ರೂ. ಕೋಟಿಗಳಲ್ಲಿ)

ಕ್ರ ಸಂ.	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ		
		3054	5054	ಒಟ್ಟು
1	ನಿಪ್ಪಾಣಿ	0.00	0.50	0.50

2	ಚಿಕ್ಕೋಡಿ– ಸದಲಗಾ	0.00	0.70	0.70
3	ಅಥಣಿ	0.20	0.65	0.85
4	ಕಾಗವಾಡ	0.20	0.65	0.85
5	ರಾಯಭಾಗ	0.20	0.65	0.85
6	ಹುಕ್ಕೇರಿ	0.20	0.00	0.20
7	ಅರಬಾವಿ	0.20	0.65	0.85
8	ಗೋಕಾಕ್	0.00	0.50	0.50
9	ಯಮಕನಮರಡಿ	0.00	0.50	0.50
10	ಬೆಳಗಾವಿ ದಕ್ಷಿಣ	0.20	0.65	0.85
11	ಬೆಳಗಾವಿ ಗ್ರಾಮಾಂತರ	0.20	0.50	0.70
12	ಖಾನಾಪುರ	0.20	0.65	0.85
13	ಕಿತ್ತೂರು	0.20	0.65	0.85
14	ಬೈಲಹೊಂಗಲ	0.20	0.65	0.85
15	ಸವದತ್ತಿ	0.20	0.65	0.85
	ಒಟ್ಟು	**2.20**	**8.55**	**10.75**

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. 2009–10ನೇ ಸಾಲು ಇನ್ನೂ ಮುಗಿದಿಲ್ಲ. ಹೊಸ ಸರ್ಕಾರ ರಚನೆಯಾದ ಮೇಲೆ 2008–09 ಮತ್ತು 2009–10ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ಮತ್ತು ಕ್ಷೇತ್ರವಾರು ಮಾಹಿತಿಯನ್ನು ನಾನು ಕೇಳಿದ್ದೇನೆ. ಆದರೆ, ಉತ್ತರದಲ್ಲಿ 2009–10ನೇ ಸಾಲಿನ ವಿವರಗಳನ್ನು ಮಾತ್ರ ಕೊಟ್ಟಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ವಿನಂತಿ ಮಾಡುವುದೇನೆಂದರೆ, 2008–09ನೇ ಸಾಲಿಗೆ ಬೆಳಗಾಂ ಜಿಲ್ಲಾ ಪಂಚಾಯಿತಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬುದರ ಬಗ್ಗೆ ಮಾಹಿತಿ ಕೊಡಬೇಕು. ಎರಡನೆಯದಾಗಿ, ಗ್ರಾಮೀಣ ನೀರು ಸರಬರಾಜು ಅಡಿಯಲ್ಲಿ ರಾಜ್ಯ ಮತ್ತು ಕೇಂದ್ರ ವಲಯಗಳಲ್ಲಿ ಒಟ್ಟಾರೆ ಜಿಲ್ಲೆಗೆ 48 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. ಆದರೆ, ನಮ್ಮ ಜಿಲ್ಲಾ ಪಂಚಾಯಿತಿಯಲ್ಲಿ 2008–09ನೇ ಸಾಲಿನಲ್ಲಿ ಕುಡಿಯುವ ನೀರಿನ ಯೋಜನೆಗೆ ಮಂಜೂರು ಮಾಡಲಾಗಿತ್ತು.

O.30 F-63

2009–10ನೇ ಸಾಲಿಗೆ ಯಾವುದೇ ಹೊಸ ಯೋಜನೆಗಳನ್ನು ತೆಗೆದು ಕೊಂಡಿಲ್ಲ. 2008–09ನೇ ಸಾಲಿನಲ್ಲಿ ಮಂಜೂರಾಗಿದ್ದ ಯೋಜನೆಗಳನ್ನು ಪೂರ್ಣಗೊಳಿಸಬೇಕೆಂದು ಜಿಲ್ಲಾ ಪಂಚಾಯಿತಿಯಲ್ಲಿ ಠರಾವು ಮಾಡಿ 2009–10ನೇ ಸಾಲಿನಲ್ಲಿ ಯಾವುದೇ ಹೊಸ ಯೋಜನೆಗಳನ್ನು ತೆಗೆದು ಕೊಂಡಿಲ್ಲ. ದಯವಿಟ್ಟು, 2008–09ನೇ ಸಾಲಿನಲ್ಲಿ ಮಂಜೂರಾದ ಯೋಜನೆ ಗಳನ್ನು 2009–10ನೇ ಸಾಲಿನಲ್ಲಿ ಸಂಪೂರ್ಣಗೊಳಿಸುತ್ತೀರೋ ಅಥವಾ ಅದನ್ನು ಮುಂದುವರೆದ ಕಾಮಗಾರಿಗಳನ್ನಾಗಿ ತೆಗೆದುಕೊಳ್ಳುತ್ತೀರೋ ಎನ್ನುವ ಬಗ್ಗೆ ವಿವರವನ್ನು ನೀಡಬೇಕೆಂದು ಕೋರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಗೌರವಾನ್ವಿತ ಶಾಸಕರಾದ ಪ್ರಕಾಶ್ ಹುಕ್ಕೇರಿಯವರಿಗೆ 2009–10ನೇ ಸಾಲಿನ ಮಾಹಿತಿಯನ್ನು ಒದಗಿಸಿದ್ದೇನೆ. ಅದು ಅಷ್ಟೇ ಅಲ್ಲ 2008–09ನೇ ಸಾಲಿನ ಮಾಹಿತಿ ಕೊಡಬೇಕೆಂದು ಈಗ ಹೇಳುತ್ತಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವತಿಯಿಂದ ಬೆಳಗಾಂ ಜಿಲ್ಲಾ ಪಂಚಾಯತಿಗೆ ವಿವಿಧ ಯೋಜನೆಗಳಡಿಯಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನವೆಷ್ಟು ಎಂದು ಕೇಳಿದ್ದಾರೆ.

ಅದರಲ್ಲಿ Specific ಆಗಿ ಯಾವ ವರ್ಷದ್ದೆಂದು ಕೇಳಿಲ್ಲ. 5 ವರ್ಷದ್ದೋ, 10 ವರ್ಷದ್ದೋ ಎಂದು ಕೇಳಿಲ್ಲ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ತಮ್ಮ ಜನಪ್ರಿಯ ಹೊಸ ಸರ್ಕಾರ ರಚನೆಯಾದ ನಂತರದ ಮಾಹಿತಿ ಕೇಳಿದ್ದೇನೆ. ನನ್ನ ಹತ್ತಿರ ಪ್ರಶ್ನೆ ಇದೆ.

ಅಧ್ಯಕ್ಷರು : ಮೊದಲು ಅವರು ಉತ್ತರ ಹೇಳಲಿ.

ಶ್ರೀ ಜಗದೀಶ್ ಶೆಟ್ಟರ್ : ಇವರು ಕೇಳಿದ ಪ್ರಶ್ನೆಯಲ್ಲಿ ನಮ್ಮ ಇಲಾಖೆಯಿಂದ ಎಂದು ಕೇಳಿದ್ದಾರೆ. ನಾವು ಈ ವರ್ಷದ ಮಾಹಿತಿ ಬೇಕೆಂದು ತಿಳಿದುಕೊಳ್ಳುತ್ತೇವೆ. ಈ ವರ್ಷ 332 ಕೋಟಿ ರೂ.ಗಳ ಅನುದಾನವನ್ನು ಜಿಲ್ಲಾ ಪಂಚಾಯಿತಿಗೆ ಕೊಟ್ಟಿದ್ದೇವೆಂದು ಹೇಳಿದ್ದೇವೆ. ಮುಖ್ಯಮಂತ್ರಿಯವರ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ 2 ಕೋಟಿ 20 ಲಕ್ಷ ರೂ. ಕೊಟ್ಟಿದ್ದೇವೆಂದು ಹೇಳಿದ್ದೇವೆ. 5054 ಹೆಡ್ ಅಡಿಯಲ್ಲಿ 8.55 ಕೋಟಿ ರೂ. ಕೊಟ್ಟಿದ್ದೇವೆಂದು ಇಷ್ಟೆಲ್ಲ ಮಾಹಿತಿ ಕೊಟ್ಟಿದ್ದೇವೆ. ಯಾವ್ಯಾವ ಸೆಪರೇಟ್ ಯೋಜನೆ ಎನ್ನುವುದನ್ನು ಕೇಳಿದ್ದಾರೆ. ಅದರ ಬಗ್ಗೆ split ಮಾಡಿ ನಾವು ಉತ್ತರ ಕೊಟ್ಟಿದ್ದೇವೆ. ಹೀಗಾಗಿ, ಸಂಪೂರ್ಣ ಉತ್ತರ ಕೊಟ್ಟಿದ್ದೇವೆ. 2008–09ರ ಸಾಲಿನ ಮಾಹಿತಿ ಏನಾದರೂ ಅವರಿಗೆ ಬೇಕಾಗಿದ್ದರೆ ಅವರು

separate ಆಗಿ ಪ್ರಶ್ನೆ ಕೇಳಿದರೆ ಅದಕ್ಕೂ ಉತ್ತರ ಕೊಡುತ್ತೇವೆ. 5 ವರ್ಷದ್ದು ಉತ್ತರ ಕೇಳಿದರೆ 5 ವರ್ಷದ್ದೂ ಉತ್ತರ ಕೊಡುತ್ತೇವೆ. 2008–09ರ ಸಾಲಿನದ್ದು ಕೆಲವು ಖರ್ಚಾಗಿದೆ, ಕೆಲವು ಖರ್ಚಾಗಿಲ್ಲ ಎಂದು ಹೇಳಿದರು. ಅದರ ಬಗ್ಗೆಯೂ ನಾನು ನೋಡಿ, ಯಾವುದು ಖರ್ಚಾಗಿದೆ, ಯಾವುದು ಖರ್ಚಾಗಿಲ್ಲ ಎಂಬ ಮಾಹಿತಿ ತರಿಸಿಕೊಂಡು ಏನಾದರೂ ಸರಿಪಡಿಸು ವುದಿದ್ದರೆ ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ 105 (1095)

ಮಾನ್ಯ ಸದಸ್ಯರು ಹಾಜರಿರಲಿಲ್ಲ

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 7ನೇ ಪಟ್ಟಿಯಲ್ಲಿರುವ 116 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳನ್ನು ಹಾಗೂ ದಿನಾಂಕ: 15.03.2010ರ 06ನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ ಚುಕ್ಕೆ ಗುರುತಿನ 15 ಪ್ರಶ್ನೆಗಳ ಪೈಕಿ 7 ಪ್ರಶ್ನೆಗಳ ಉತ್ತರಗಳನ್ನು ಮತ್ತು ಚುಕ್ಕೆ ಗುರ್ತಿಲ್ಲದ 142 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ಅನುಬಂಧ – I, ಅನುಬಂಧ – II, ಅನುಬಂಧ – III)

ಶ್ರೀ ನೆ.ಲ. ನರೇಂದ್ರಬಾಬು : ನನ್ನ ಒಂದು ವಿನಂತಿ ಏನೆಂದರೆ ಲಿಖಿತ ಮೂಲಕ ನೀಡಲಾಗುವ ಪ್ರಶ್ನೆಗಳಿಗೆ ಬಹಳಷ್ಟು ದಿನಗಳಿಂದ ಉತ್ತರ ಬಂದಿಲ್ಲ. ಮಾನ್ಯ ಸಚಿವರನ್ನು ತಮ್ಮ ಮುಖೇನ ವಿನಂತಿ ಮಾಡುವುದೇ ನೆಂದರೆ, ಇದೇ ವಿಷಯವಾಗಿ ತಮ್ಮ ಹತ್ತಿರ ಸಹ ಹಿಂದೆ ನಾನು ಬಂದಿದ್ದೆ. ಕಳೆದ ಬಾರಿಯೂ ವಿಧಾನಸಭೆಯಲ್ಲಿ ಇದೇ ತರಹ ಆಯಿತು.

ಅಧ್ಯಕ್ಷರು : ಆದಷ್ಟು ಬೇಗನೆ ಎಲ್ಲರಿಗೂ ಉತ್ತರ ಕಳುಹಿಸಿ ಕೊಡಬೇಕೆಂದು ಈಗಾಗಲೇ ನಾನು ಸೂಚನೆ ಕೊಟ್ಟಿದ್ದೇನೆ, ಮೊನ್ನೆ ಸಹ ಹೇಳಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) : ಉತ್ತರ ಕಳುಹಿಸಿ ಕೊಡಬೇಕೆಂದು ನಾನೂ ಕೂಡ ಎಲ್ಲಾ ಇಲಾಖಾ ಕಾರ್ಯದರ್ಶಿಗಳಿಗೆ ಸೂಚನೆ ಕೊಟ್ಟಿದ್ದೇನೆ.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು :

ಅ) 3ನೇ ಮತ್ತು 4ನೇ ಪಟ್ಟಿ

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಆರ್. ಅಶೋಕ್, ಸಾರಿಗೆ ಸಚಿವರ ಪರವಾಗಿ) :

1988ರ ಮೋಟಾರು ವಾಹನಗಳ ಅಧಿನಿಯಮ (1988ರ ಕೇಂದ್ರ ಅಧಿನಿಯಮ 59) ಕಲಂ 212(3)ರ ಪ್ರಕರಣದ ಮೇರೆಗೆ:

1. 1989ರ ಕರ್ನಾಟಕ ಮೋಟಾರು ವಾಹನಗಳ ನಿಯಮಾವಳಿಗೆ ತಿದ್ದುಪಡಿ ಮಾಡಿ ದಿನಾಂಕ: 23.10.2007 ರಂದು ಹೊರಡಿಸಲಾದ ಟಿಆರ್‌ಡಿ/235/ಸಾಇಪ/2006ನೇ ಸಂಖ್ಯೆಯ ಅಧಿಸೂಚನೆ.

2. 1989ರ ಕರ್ನಾಟಕ ಮೋಟಾರು ವಾಹನಗಳ ನಿಯಮಾವಳಿಗಳ ನಿಯಮ 9, 12, 20, 31, 67, 84 ಹಾಗೂ 87ಕ್ಕೆ ತಿದ್ದುಪಡಿ ಮಾಡಿ ದಿನಾಂಕ: 14.08.2009 ರಂದು ಹೊರಡಿಸಲಾದ ಟಿಆರ್‌ಡಿ/01/ಟಿಎಂಆರ್/2008ನೇ ಸಂಖ್ಯೆಯ ಅಧಿಸೂಚನೆ.

3. 1989ರ ಕರ್ನಾಟಕ ಮೋಟಾರು ವಾಹನಗಳ ನಿಯಮಾವಳಿಗಳ ನಿಯಮ 46 ಎ ಗೆ ತಿದ್ದುಪಡಿ ಮಾಡಿ ದಿನಾಂಕ: 02.02.2010 ರಂದು ಹೊರಡಿಸಲಾದ ಸಾರಿಇ/243/ಸಾಇಪ/2008ನೇ ಸಂಖ್ಯೆಯ ಅಧಿಸೂಚನೆ.

1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆ ಕಲಂ 22(4)ರ ಪ್ರಕರಣದ ಮೇರೆಗೆ:

4. 1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆಯಡಿಯಲ್ಲಿ ಶ್ರೀ ಯಡತೊರೆ ಜಗದ್ಗುರು ಶ್ರೀ ಯೋಗಾನಂದೇಶ್ವರ ಸರಸ್ವತಿ ಮಹಾ ಸಂಸ್ಥಾನ, ಕೃಷ್ಣರಾಜನಗರ ಇವರು ಹೊಂದಿರುವ ವಾಹನ

ಸಂ. ಕೆಎ 45 618 ಹಾಗೂ ಶ್ರೀ ವೀರಾಂಜನೇಯ ಧಾರ್ಮಿಕ ಹಾಗೂ ದತ್ತಿ ಸಂಸ್ಥೆ (ರಿ) ಬಂಗಾರ ಮಕ್ಕಿ ಹೊನ್ನಾವರ ತಾಲ್ಲೂಕು, ಇವರು ಹೊಂದಿರುವ ವಾಹನ ಮ್ಯಾಕ್ಸಿ ಕ್ಯಾಬ್, ಇವುಗಳಿಗೆ ಸಾರ್ವಜನಿಕ ಹಿತಾಸಕ್ತಿಯಿಂದ ಮೋಟಾರು ತೆರಿಗೆ ಪಾವತಿಯಿಂದ ವಿನಾಯಿತಿ ನೀಡಿ ದಿನಾಂಕ: 05.08.2009 ರಂದು ಹೊರಡಿಸಲಾದ ಸಾರಿಇ/10ಸಾಇನಿ/2009ನೇ ಸಂಖ್ಯೆಯ ಅಧಿಸೂಚನೆ.

5. 1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆಯಡಿಯಲ್ಲಿ ಮಿಸ್ಟರ್ ರಿಚರ್ಡ್ ಡೊಮೈನ್ ಹೈಡಿ ಬ್ರಿಟಿಷ್ ಡೆಪ್ಯೂಟಿ ಹೈ ಕಮಿಷನರ್ ರಾಯಭಾರಿ ಕಛೇರಿ ಬೆಂಗಳೂರು ಇವರಿಗೆ ಸಂಬಂಧಿಸಿದ ವಾಹನಕ್ಕೆ ಕರ್ನಾಟಕ ಸರ್ಕಾರವು ನೋಂದಣಿ ಶುಲ್ಕ ಹಾಗೂ ರಸ್ತೆ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ: 11.11.2009ರಂದು ಹೊರಡಿಸಲಾದ ಸಾರಿಇ/298/ಸಾಇಪ/2009ನೇ ಸಂಖ್ಯೆಯ ಅಧಿಸೂಚನೆ.

6. 1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆಯಡಿಯಲ್ಲಿ ಬೆಂಗಳೂರಿನಲ್ಲಿರುವ ಮಿಸ್ಟರ್. ಫ್ರೆಡ್‌ರಿಚ್ ರಾಹನ್, ಡೆಪ್ಯೂಟಿ ಕನ್ಸಲ್ ಜನರಲ್ ಆಫ್ ಫೆಡರಲ್ ರಿಪಬ್ಲಿಕ್ ಆಫ್ ಜರ್ಮನಿ, ರಾಯಭಾರಿ ಕಛೇರಿಯ ವಾಹನಕ್ಕೆ ಕರ್ನಾಟಕ ಸರ್ಕಾರವು ರಸ್ತೆ ತೆರಿಗೆ ಹಾಗೂ ನೋಂದಣಿ ಶುಲ್ಕದಿಂದ ವಿನಾಯಿತಿ ನೀಡಿ ದಿನಾಂಕ: 11.11.2009ರಂದು ಹೊರಡಿಸಲಾದ ಸಾರಿಇ/297/ಸಾಇಪ/2009ನೇ ಸಂಖ್ಯೆಯ ಅಧಿಸೂಚನೆ.

7. 1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆಯಡಿಯಲ್ಲಿ ಬೆಂಗಳೂರಿನಲ್ಲಿರುವ ಮಿಸ್ಟರ್ ರಿಚರ್ಡ್ ಹೈಡಿ ಬ್ರಿಟಿಷ್ ಡೆಪ್ಯೂಟಿ ಹೈ ಕಮಿಷನರ್ ಇವರ ಕಛೇರಿಯ ವಾಹನಕ್ಕೆ ಕರ್ನಾಟಕ ಸರ್ಕಾರವು ರಸ್ತೆ ತೆರಿಗೆ ಹಾಗೂ ನೋಂದಣಿ ಶುಲ್ಕದಿಂದ ವಿನಾಯಿತಿ ನೀಡಿ ದಿನಾಂಕ:12.01.2010ರಂದು ಹೊರಡಿಸಲಾದ ಸಾರಿಇ/334/ಸಾಇಪ/2009ನೇ ಸಂಖ್ಯೆಯ ಅಧಿಸೂಚನೆ.

8. 1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆಯಡಿಯಲ್ಲಿ ಬೆಂಗಳೂರಿನಲ್ಲಿರುವ ಮಿಸ್ಟರ್ ರಿಚರ್ಡ್ ಹೈಡಿ ಬ್ರಿಟಿಷ್ ಡೆಪ್ಯೂಟಿ ಹೈ ಕಮಿಷನರ್ ಇವರ ಸ್ವಂತ ವಾಹನಕ್ಕೆ ಕರ್ನಾಟಕ ಸರ್ಕಾರವು ನೋಂದಣಿ ಶುಲ್ಕ ಹಾಗೂ ರಸ್ತೆ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ: 12.01.2010 ರಂದು ಹೊರಡಿಸಲಾದ ಸಾರಿ ಇ/355/ಸಾಇಪ/2009ನೇ ಸಂಖ್ಯೆಯ ಅಧಿಸೂಚನೆ.

9. 1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆಯಡಿಯಲ್ಲಿ ಮಾತಾ ಅಮೃತಾನಂದಮಯಿ ಮಠ, ಬೆಂಗಳೂರು, ಬಿಡಬ್ಲ್ಯೂ ಸೂಪರ್ ಸ್ಪೆಷಾಲಿಟಿ ಐ ಹಾಸ್ಪಿಟಲ್, ಬೆಂಗಳೂರು ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮೆಡಿಕಲ್ ಟ್ರಸ್ಟ್(ರಿ), ಧರ್ಮಸ್ಥಳ, ದಕ್ಷಿಣ ಕನ್ನಡ, ಈ ಸಂಸ್ಥೆಗಳು ಹೊಂದಿರುವ ವಾಹನಗಳಿಗೆ ಸಾರ್ವಜನಿಕ ಹಿತಾಸಕ್ತಿಯಿಂದ ಮೋಟಾರು ವಾಹನ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಿ ದಿನಾಂಕ: 11.02.2010ರಂದು ಹೊರಡಿಸಲಾದ ಸಾರಿಇ/28/ಸಾಇಪ/2010ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

ಶ್ರೀ ಸುರೇಶ್ ಕುಮಾರ್ ಎಸ್. (ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) :

1. 2008ರ ಕರ್ನಾಟಕ ಸಾಮಾನ್ಯ ಸೇವೆಗಳು (ಭಾಷಾಂತರ ನಿರ್ದೇಶನಾಲಯ) (ನೇಮಕಾತಿ) ನಿಯಮಗಳ ಅನುಸೂಚಿಯನ್ನು ತಿದ್ದುಪಡಿ ಮಾಡಿ ದಿನಾಂಕ: 24.02.2009ರಂದು ಹೊರಡಿಸಲಾದ ಸಂವ್ಯಶಾಇ/17/ಭಾನಿವಿ/2007ನೇ ಸಂಖ್ಯೆಯ ಅಧಿಸೂಚನೆ.

2. 2001ರ ಕರ್ನಾಟಕ ಸಾಮಾನ್ಯ ಸೇವೆಗಳು (ಭಾಷಾಂತರ ನಿರ್ದೇಶನಾಲಯ) (ನೇಮಕಾತಿ) ನಿಯಮಗಳ ಅನುಸೂಚಿಯನ್ನು ತಿದ್ದುಪಡಿ ಮಾಡಿ ದಿನಾಂಕ: 23.01.2010 ರಂದು ಹೊರಡಿಸಲಾದ ಸಂವ್ಯಶಾಇ/46/ಭಾನಿವಿ/2008ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

(ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರ ಪರವಾಗಿ) : ಕರ್ನಾಟಕ ಅಬಕಾರಿ ಕಾಯ್ದೆ ಕಲಂ 71(4) ರನ್ವಯ :

1. ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯ 23ಕ್ಕೆ ಅಬಕಾರಿ ನಿಯಮಗಳನ್ನು ತಿದ್ದುಪಡಿ ಮಾಡಿ ದಿನಾಂಕ: 09.02.2010ರಂದು ಹೊರಡಿಸಲಾದ ಎಫ್‌ಡಿ 11 ಪಿಇಎಸ್ 2009ನೇ ಸಂಖ್ಯೆಯ ಅಧಿಸೂಚನೆ.

2. ಕರ್ನಾಟಕ ಅಬಕಾರಿ (ದ್ರಾಕ್ಷಾ ರಸದಿಂದ ಮದ್ಯ ತಯಾರಿಕೆ) ತಿದ್ದುಪಡಿ ಅಧಿನಿಯಮ 2008ರಡಿಯಲ್ಲಿನ ನಿಯಮ 2ಕ್ಕೆ ತಿದ್ದುಪಡಿ ಮಾಡಿ

ದಿನಾಂಕ: 09.02.2010ರಂದು ಹೊರಡಿಸಲಾದ ಎಫ್‌ಡಿ 13 ಪಿಇಎಸ್ 2009ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

I. ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಮತ್ತು ನಗರ ಸಭೆಗಳ ಸಚಿವರು) :

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ 48 ಮತ್ತು 49ನೇ ಪ್ರಕರಣಗಳ ಮೇರೆಗೆ :

1. ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ 2008-09ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

II. ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) ಅವರು:

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ 262 (3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ:

1. ಮೈಸೂರು ಜಿಲ್ಲಾ ಪಂಚಾಯತ್‌ನ 2007-08ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ ವರದಿ.

2. ಕೊಪ್ಪಳ ಜಿಲ್ಲಾ ಪಂಚಾಯತ್‌ನ 2008-09ನೇ ಸಾಲಿನ ವಾರ್ಷಿಕ ಆಡಳಿತ ವರದಿ.

3. ಗದಗ ಜಿಲ್ಲಾ ಪಂಚಾಯತ್‌ನ 2008-09ನೇ ಸಾಲಿನ ವಾರ್ಷಿಕ ಆಡಳಿತ ವರದಿಗಳನ್ನು ಮಂಡಿಸುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್, (ಕಾನೂನು, ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ) :

1956ರ ಕಂಪನಿ ಅಧಿನಿಯಮದ 619 (ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್‌ನ 2008-09ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

IV. ಶ್ರೀ ಅರವಿಂದ ಎಸ್. ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) ಅವರು:

1986ರ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ ಅಧಿನಿಯಮದ ಪರಿಚ್ಛೇದ 24(3)ರ ಮೇರೆಗೆ:

1. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ 2008–09ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಆ) ಕಾರ್ಯದರ್ಶಿಯವರ ವರದಿ :

ಕಾರ್ಯದರ್ಶಿ : ಗೌರವಾನ್ವಿತ ಸಭಾಧ್ಯಕ್ಷರ ಅನುಮೋದನೆಯೊಂದಿಗೆ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ (ಪ್ರಾದೇಶಿಕ ಕಾನೂನುಗಳ) ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ 2009 ನ್ನು ಈಗ ಸಭೆಯ ಮುಂದಿಡುತ್ತೇನೆ.

(ಅನುಬಂಧ– 4)

ಅಧ್ಯಕ್ಷರು : ಮಂಡಿಸಲಾಯಿತು. ಈಗ ಸದನವನ್ನು ಮಧ್ಯಾಹ್ನ 3–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1–58 ಗಂಟೆಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3–00 ಗಂಟೆಗೆ ಸೇರಲು ನಿಃಶ್ಚಯಿಸಿತು)

(ಸದನವು ಮಧ್ಯಾಹ್ನ 3 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು : ಈಗ ಶೂನ್ಯ ವೇಳೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

ಅ) ವಿಷಯ : ಅಡಿಕೆಗೆ ಬೆಂಬಲ ಬೆಲೆಯನ್ನು ಹೆಚ್ಚಿಸುವ ಬಗ್ಗೆ.

ಶ್ರೀ ಕೆ. ಅಭಯಚಂದ್ರ ಜೈನ್ (ಮೂಡಬಿದರೆ) : ಸನ್ಮಾನ್ಯ ಅಧ್ಯಕ್ಷರೆ, ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಡಿಕೆ ಬೆಳೆಗಾರರು ಬಹಳ ಸಂಕಷ್ಟಕ್ಕೆ ಈಡಾಗಿದ್ದಾರೆ. ಅಡಿಕೆ ಬೆಲೆ ತೀವ್ರವಾಗಿ ಕುಸಿತವಾಗಿದ್ದು, ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡುವಂಥ ಪರಿಸ್ಥಿತಿ ಉಂಟಾಗಿರುತ್ತದೆ. ಸರ್ಕಾರ ಈಗಾಗಲೇ ಬೆಂಬಲ ಬೆಲೆ ಘೋಷಿಸಿದರೂ ಕೂಡ ಯಾವ ರೀತಿಯ ಪ್ರಯೋಜನವಾಗಿರುವುದಿಲ್ಲ. ಅಡಿಕೆ ಬೆಳೆಗಾರರು ಅದರಲ್ಲಿಯೂ ಬಡ ರೈತರು ತಮ್ಮ ಅಗತ್ಯ ಬೆಲೆಗಾಗಿ ಅಡಿಕೆ ಮಾರಾಟ ಮಾಡುತ್ತಾರೆ. ಅಂಥ ರೈತರಿಗೆ ಚೆಕ್ ನೀಡಿದರೆ ಪಾವತಿ ವಿಳಂಬಗೊಂಡು ಅವರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ, ಅಂಥ ರೈತರಿಗೆ ನಗದು ಪಾವತಿ ಮಾಡುವ ವ್ಯವಸ್ಥೆ ಮಾಡಬೇಕು. ಬೆಂಬಲ ಬೆಲೆಯನ್ನು ಕನಿಷ್ಠ ಕೆ.ಜಿ.ಗೆ 125 ರೂಪಾಯಿ ಘೋಷಿಸಿ ರೈತರ ಸಹಾಯಕ್ಕೆ ಸರ್ಕಾರ ಮುಂದಾಗಬೇಕು. ಈ ಸಂಬಂಧ ಅಧಿಕಾರಿಗಳ ಜೊತೆ ವಿಸ್ತೃತ ಚರ್ಚೆ ನಡೆಸಿ ಸರ್ಕಾರ ಬೆಂಬಲ ಬೆಲೆಯನ್ನು ಪರಿಷ್ಕರಿಸಿ ಹೊಸ ಬೆಂಬಲ ಬೆಲೆಯನ್ನು ನಿಗದಿ ಪಡಿಸಬೇಕೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಶ್ರೀ ಶಿವರಾಜ್ ತಂಗಡಗಿ (ಕೃಷಿ ಮಾರುಕಟ್ಟೆ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಬೆಂಬಲ ಬೆಲೆಯನ್ನು ದಿನಾಂಕ: 31.3.2010ರವರೆಗೆ ವಿಸ್ತರಣೆ ಮಾಡಬೇಕೆಂಬ ಅವರ ಹೇಳಿಕೆ ಪ್ರಕಾರ ನಾವು 31ನೇ ತಾರೀಖಿನ ವರೆಗೂ ಕೂಡ ವಿಸ್ತರಣೆ ಮಾಡಿದ್ದೇವೆ. ಮೊನ್ನೆ ದಿವಸ ನಾನು ದಕ್ಷಿಣ ಕನ್ನಡ ಜಿಲ್ಲೆಗೆ ಪ್ರವಾಸ ಕೈಗೊಂಡಿದ್ದಂಥ ಸಂದರ್ಭದಲ್ಲಿ ಇನ್ನೊಂದು ತಿಂಗಳು ಬೆಂಬಲ ಬೆಲೆಯನ್ನು ವಿಸ್ತರಣೆ ಮಾಡಬೇಕೆಂದು ಅಲ್ಲಿನ ಬೆಳೆಗಾರರು ಹೇಳಿದ್ದರಿಂದ ಇನ್ನೊಂದು ತಿಂಗಳು ಬೆಂಬಲ ಬೆಲೆಯನ್ನು ವಿಸ್ತರಣೆ ಮಾಡಬೇಕೆಂದು ನಾವು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪತ್ರವನ್ನು ಬರೆದಿದ್ದೇವೆ. ಬೆಂಬಲ ಬೆಲೆಯಲ್ಲಿ ಅಡಿಕೆಯನ್ನು ಖರೀದಿ ಮಾಡುವುದಕ್ಕೆ ನಾವು ಕ್ಯಾಂಪ್ಕೋಗೆ 5 ಕೋಟಿ ರೂಪಾಯಿ ಕೊಟ್ಟಿದ್ದೇವೆ. ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಕ್ಯಾಂಪ್ಕೋ ನಿಂದ ಅಡಿಕೆ ಖರೀದಿ ಮಾಡತಕ್ಕಂಥ ಕೆಲಸ ಮಾಡಿದ್ದೇವೆ. ಚೆಕ್ ನೀಡಿದರೂ ಕೂಡ ಪಾವತಿ ವಿಳಂಬವಾಗುತ್ತದೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಇನ್ನು ಮುಂದೆ ವಿಳಂಬವಾಗದ ರೀತಿಯಲ್ಲಿ ಅಂದರೆ ಸರಿಯಾಗಿ ಚೆಕ್ ಅನ್ನು ಮುಟ್ಟಿಸು

ವಂಥ ಕೆಲಸವನ್ನು ಮಾಡುತ್ತೇನೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರ ಜೊತೆಗೆ ಹೇಳುವುದೇನೆಂದರೆ, ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ಇದರ ಜೊತೆಗೆ ನಮ್ಮ ಸರ್ಕಾರ ಸೇರಿ ಘೋಷಣೆ ಮಾಡಿದೆ. ಆದ್ದರಿಂದ, ಇದರ ಬಗ್ಗೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಅಭಯಚಂದ್ರ ಜೈನ್ : ಮಾನ್ಯ ಅಧ್ಯಕ್ಷರೆ, ಅದಕ್ಕೆ 100 ರೂಪಾಯಿ ಕಾಸ್ಟ್ ಬೀಳುತ್ತದೆ. ಕನಿಷ್ಠ 125 ರೂಪಾಯಿ ಮಾಡಬೇಕೆಂಬುದು ಅಲ್ಲಿನ ರೈತರ ಬೇಡಿಕೆ ಇದೆ. ಆದ್ದರಿಂದ, ಇದಕ್ಕೆ ಸರ್ಕಾರ ಸ್ವಲ್ಪವಾದರೂ ಸ್ಪಂದಿಸಬೇಕು. ಮತ್ತು ಕ್ಯಾಂಪ್ಕೋರವರು ಅಡಿಕೆಯ ಗುಣಮಟ್ಟವನ್ನು ಪರಿಶೀಲನೆ ಮಾಡಿ ಖರೀದಿ ಮಾಡುತ್ತಾರೆ. ಆದರೆ, ಈಗ ಒಳ್ಳೆ ಗುಣಮಟ್ಟದ ಅಡಿಕೆ ಬರುತ್ತಿಲ್ಲ. ಏಕೆಂದರೆ, ಅಲ್ಲಿ ವಿಶೇಷವಾದ ಮಳೆ ಬಂದು ಅಡಿಕೆಯಲ್ಲಾ ನೆನೆದು ಹೋಗಿದೆ. ಈಗಲೂ ಕೂಡ ಅಕಾಲಿಕ ಮಳೆ ಬಂದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆಯನ್ನು ಒಣಗಿಸುವುದಕ್ಕೂ ಕೂಡ ಸಾಧ್ಯವಾಗದ ಪರಿಸ್ಥಿತಿ ಅಲ್ಲಿದೆ. ರೈತರು ಒಂದು ಗೋಣಿ ಅಡಿಕೆಯನ್ನು ತೆಗೆದುಕೊಂಡು ಹೋಗುತ್ತಾರೆ. ಆದರೆ, ಅಡಿಕೆ ಗುಣಮಟ್ಟ ಪರಿಶೀಲನೆ ಮಾಡಿ ಎರಡು ದಿವಸ ಅಲ್ಲಿಯೇ ಇಟ್ಟು ಆನಂತರ ಬೆಲೆ ನಿಗದಿ ಮಾಡುವಂತ ಪರಿಸ್ಥಿತಿ ಇದೆ. ಆದ್ದರಿಂದ, ಬೆಲೆಯನ್ನು ಕನಿಷ್ಠ 100 ರೂಪಾಯಿಗಾದರೂ ಏರಿಸುವಂಥ ಕೆಲಸ ಮಾಡಿದರೆ ಜನರಿಗೆ ಉಪಯೋಗವಾಗುತ್ತದೆ. ಬೆಂಬಲ ಬೆಲೆಯನ್ನು ಹೆಚ್ಚು ಮಾಡಬೇಕೆಂದು ಪುತ್ತೂರಿನಲ್ಲಿ 29ನೇ ತಾರೀಖಿನ ದಿವಸ ರೈತರು ದೊಡ್ಡ ರ್‍ಯಾಲಿಯನ್ನು ಹಮ್ಮಿಕೊಂಡಿದ್ದಾರೆ. ಆದ್ದರಿಂದ, ಸ್ವಲ್ಪಮಟ್ಟಿಗಾದರೂ ಸರ್ಕಾರ ಅದರ ಬಗ್ಗೆ ಸ್ಪಂದಿಸುವಂಥ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಶಿವರಾಜ್ ತಂಗಡಗಿ (ಕೃಷಿ ಮಾರುಕಟ್ಟೆ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಅಧಿಕಾರಿಗಳ ಜೊತೆ ಚರ್ಚಿಸಿ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಆ) ವಿಷಯ : ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರ ನಿಗದಿ ಪಡಿಸುವ ಬಗ್ಗೆ.

ಶ್ರೀ ಪಿ.ಎಂ. ಅಶೋಕ್ (ರಾಮದುರ್ಗ) : ಮಾನ್ಯ ಅಧ್ಯಕ್ಷರೆ, ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರ ಉಲ್ಲಂಘನೆ ಆಗುತ್ತಿದೆ ಎಂದು ನಾನು ಕಳೆದ

ಬಾರಿ ಕೂಡ ಪ್ರಸ್ತಾಪ ಮಾಡಿದ್ದೇನೆ. ಇನ್ನು ಮುಂದೆ ಸರಿಯಾಗಿ ನಡೆದುಕೊಳ್ಳುವುದಕ್ಕೆ ನಿರ್ದೇಶನ ಕೊಡುತ್ತೇನೆಂದು ಮಾನ್ಯ ಸಚಿವರು ಇಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ, 16ನೇ ತಾರೀಖಿನ ದಿವಸ ನೂತನ ಗ್ರಾಮ ಪಂಚಾಯಿತಿ ಕಟ್ಟಡದ ಅಡಿಗಲ್ಲು ಸಮಾರಂಭದಲ್ಲಿಯೂ ಕೂಡ ಶಿಷ್ಟಾಚಾರ ಉಲ್ಲಂಘನೆಯಾಗಿದೆ. ಈ ಶಿಷ್ಟಾಚಾರದ ಬಗ್ಗೆ ಸರ್ಕಾರದ ಕಡೆಯಿಂದ ಕ್ಲಾರಿಫಿಕೇಷನ್ ಬೇಕಾಗಿದೆ. ತಾಲ್ಲೂಕಿನಲ್ಲಿರುವ ಒಂದೇ ಪಕ್ಷದ ಮಾಜಿ ಶಾಸಕರು ಅಥವಾ ತಾಲ್ಲೂಕಿನಲ್ಲಿರುವ ಎಲ್ಲಾ ಪಕ್ಷದ ಮಾಜಿ ಶಾಸಕರುಗಳ ಹೆಸರು ಸರ್ಕಾರಿ ಕಾರ್ಯಕ್ರಮದಲ್ಲಿ ಹಾಕಬೇಕೇ ಅಥವಾ ಬೇಡವೇ ಎಂದು ದಯವಿಟ್ಟು ಕ್ಲಾರಿಫಿಕೇಷನ್ ಅನ್ನು ತಕ್ಷಣ ಕೊಟ್ಟರೆ ಒಳ್ಳೆಯದು. ತಾಲ್ಲೂಕಿನಲ್ಲಿ ಮಾಜಿ ಶಾಸಕರ ಅಭಿಮಾನಿಗಳ ಸಂಘ ಮಾಡಿಕೊಂಡು ತಮಗೆ ಬೇಕಾದವರ ಹೆಸರುಗಳನ್ನು ಹಾಕಿಕೊಳ್ಳುತ್ತಿದ್ದಾರೆ. ರಾಮದುರ್ಗ ತಾಲ್ಲೂಖಿನಲ್ಲಿರುವ ಚಿಮ್ಮಲಕಟ್ಟೆ ಗ್ರಾಮ ಪಂಚಾಯಿತಿಯ ನೂತನ ಕಟ್ಟಡದ ಸಮಾರಂಭಕ್ಕೆ ಮಾಜಿ ಶಾಸಕರ ಹೆಸರನ್ನು ಸಹ ಹಾಕಿದ್ದಾರೆ. ಅವರು ಶಾಸಕರಾಗಿದ್ದಂಥ ಸಂದರ್ಭದಲ್ಲಿ ನನ್ನ ಹೆಸರು ಹಾಕಿಕೊಂಡಿದ್ದಾಗ ಅವರು ಆಕ್ಷೇಪಣೆ ಮಾಡಿರುವಂಥ ವಿಚಾರ ತಮ್ಮೆಲ್ಲರ ಗಮನಕ್ಕೂ ಕೂಡ ಬಂದಿದೆ. ಈ ವಿಷಯವನ್ನು ನಾನು ಕಳೆದ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಆದ್ದರಿಂದ, ಶಿಷ್ಟಾಚಾರದ ಬಗ್ಗೆ ದಯವಿಟ್ಟು ಸೂಕ್ತ ನಿರ್ದೇಶನವನ್ನು ಬಹಳ ಬೇಗ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈ ಪ್ರೋಟೋಕಾಲ್ ವಿಷಯ ಆಗಾಗ ಚರ್ಚೆಗೆ ಬರುತ್ತಿದೆ.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪೌರಾಡಳಿತ ಸಚಿವರು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಆಗಾಗ ಇಲ್ಲಿ ಚರ್ಚೆಗೆ ಬರುತ್ತಿದೆ. ಗ್ರಾಮ ಪಂಚಾಯಿತಿ ಅಡಿಗಲ್ಲು ಸಮಾರಂಭಕ್ಕೋಸ್ಕರ ಒಂದು ಆಮಂತ್ರಣ ಪತ್ರಿಕೆಯನ್ನು ಹೊರಡಿಸಿದ್ದಾರೆ. ಆ ಆಮಂತ್ರಣ ಪತ್ರಿಕೆಯಲ್ಲಿ 'ಶಿಲಾನ್ಯಾಸ' ಸನ್ಮಾನ್ಯ ಶ್ರೀ ಅಶೋಕ್ ಎಂ. ಪಟ್ಟಣ, ಜನಪ್ರಿಯ ಶಾಸಕರು, ರಾಮದುರ್ಗ ಎಂದು ಇದೆ. ಗ್ರಾಮ ಪಂಚಾಯಿತಿ ಯವರು ಈ ಆಮಂತ್ರಣ ಪತ್ರಿಕೆಯನ್ನು ಮಾಡಿಸಿದ್ದಾರೆ. ಅದರಲ್ಲಿ ಮಾಜಿ ಶಾಸಕರ ಹೆಸರು ಮತ್ತು ಸನ್ಮಾನ್ಯ ಶ್ರೀ ಸಚಿನ್‌ಗೌಡ ಎಂ.ಪಾಟೀಲ್, ಊರಿನ ಗಣ್ಯರು ಎಂದು ಇದೆ. ಶ್ರೀ ಸಿ.ಎಸ್. ನಾಯಕ್, ಗಣ್ಯರು, ಶ್ರೀ ಕುಲಿಗೌಡ,

ಊರಿನ ನಾಗರೀಕರು, ಶ್ರೀ ಬಿಜ್ಜಣನವರ್, ಊರಿನ ನಾಗರಿಕರು ಎಂದು ಎಲ್ಲರ ಹೆಸರನ್ನು ಆಮಂತ್ರ ಪತ್ರಿಕೆಯಲ್ಲಿ ಹಾಕಿಸಿದ್ದಾರೆ. ಅಲ್ಲಿನ ಶಿಲಾನ್ಯಾಸವನ್ನು ತಮ್ಮ ಕೈಯಲ್ಲಿ ಮಾಡಿಸಿದ್ದಾರೆ. ಇಷ್ಟಾಗಿಯೂ ಕೂಡ ಇದರ ಬಗ್ಗೆ ಎಲ್ಲರಿಗೂ ಸಹ ಸುತ್ತೋಲೆಯ್ನು ಕಳುಹಿಸಿಕೊಟ್ಟು ಇನ್ನೊಂದು ಸಾರಿ ಹೇಳುತ್ತೇವೆ. ಮಾನ್ಯ ಸದಸ್ಯರೆ ಕಟ್ಟಡಕ್ಕೆ ಶಿಲಾನ್ಯಾಸ ಮಾಡುತ್ತಿದ್ದಾರೆ. ಇದರ ಜೊತೆಗೆ ಸದರಿ ಆಮಂತ್ರಣ ಪತ್ರಿಕೆಯನ್ನು ಗ್ರಾಮ ಪಂಚಾಯಿತಿಯಿಂದ ಹೊರಡಿಸಲಾಗಿದೆ. ಆದ್ದರಿಂದ, ಊರಿನ ಎಲ್ಲರ ಹೆಸರುಗಳನ್ನು ಇದರಲ್ಲಿ ಹಾಕಿದ್ದಾರೆ. ಇದೊಂದು ವೋಟರ್ಸ್ ಲಿಸ್ಟ್, ಟೆಲಿಫೋನ್ ಡೈರೆಕ್ಟರಿ ರೀತಿಯಲ್ಲಿದೆ. ಇದರಲ್ಲಿ ಶಾಸಕರನ್ನು ಬಿಟ್ಟಿಲ್ಲ, ಅವರ ಕೈಯಲ್ಲಿಯೇ ಶಿಲಾನ್ಯಾಸ ಕೆಲಸ ಮಾಡಿಸಿದ್ದಾರೆ. ಆದರೂ ಕೂಡ ಅವರಿಗೆ ನಾವು ಮತ್ತೊಂದು ಸಾರಿ ಡೈರೆಕ್ಷನ್ ಕೊಡುತ್ತೇವೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಇದರಲ್ಲಿ ಮಾಜಿ ಶಾಸಕರ ಹೆಸರನ್ನು ಹಾಕಬಹುದೆ? ಹಾಕುವುದಾದರೆ ಎಲ್ಲರ ಹೆಸರನ್ನು ಹಾಕಿಸಿ, ನಮದೇನೂ ಅಭ್ಯಂತರ ಇಲ್ಲ. ಮಾನ್ಯ ಸದಸ್ಯರಿಗೆ ಈ ರೀತಿಯಾಗಿ ಎರಡೆರಡು ಸಾರಿ ಮಾಡಿದರೆ ಹೇಗೆ? ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್ : ಗ್ರಾಮಪಂಚಾಯಿತಿ ಕಾರ್ಯದರ್ಶಿ ಸರ್ಕಾರದ ಪರವಾಗಿಯೇ ಮಾಡಿಸುತ್ತಾರೆ.

ಅಧ್ಯಕ್ಷರು : ಸುತ್ತೋಲೆ ಕೊಡುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಪಿ.ಎಂ. ಅಶೋಕ್ : ಮಾನ್ಯ ಕಾನೂನು ಮಂತ್ರಿಯವರ ಗಮನಕ್ಕೆ ತರುವುದೇನೆಂದರೆ, ಮೊನ್ನೆ ದಿವಸ ನಡೆದ ಎಪಿಎಂಸಿ ಕಾರ್ಯಕ್ರಮದಲ್ಲಿ ಬಿಜೆಪಿ ಅಧ್ಯಕ್ಷರ ಹೆಸರನ್ನು ಸಹ ಹಾಕಲಾಗಿತ್ತು. ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ತಾವು ಹೇಳಿದ್ದೀರಿ. ಆದರೆ, ಇದುವರೆಗೂ ಏನು ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಜೆ.ಡಿ.ನಾಯಕ್ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂಥ ಆದೇಶ ನಮಗೆ ಕಳುಹಿಸಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಕಳುಹಿಸಿಕೊಡುತ್ತೇನೆ.

ಇ) ವಿಷಯ : ಬ್ಯಾಲಾಳು ಐ.ಡಿ.ಎಸ್.ಎನ್. ಬಳಿ ದಿನಾಂಕ: 16.03.2010ರ ಬೆಳಗಿನ ಜಾವ ನಡೆದ ಘಟನೆ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, 16ನೇ ತಾರೀಖಿನ ದಿವಸ ಇಸ್ರೋ ಕ್ಯಾಂಪಸಿನಲ್ಲಿ ಪೈರಿಂಗ್ ಆಗಿದೆ ಎಂದು ಪತ್ರಿಕೆಯಲ್ಲಿ ಮತ್ತು ಟಿ.ವಿ.ಯಲ್ಲಿ ಬಂದಿರುವುದನ್ನು ನಾವೆಲ್ಲಾ ನೋಡಿದ್ದೇವೆ. ಸುಮಾರು 3.30ರಲ್ಲಿ ಇಬ್ಬರು ವ್ಯಕ್ತಿಗಳು ಫೈರಿಂಗ್ ಮಾಡಿದರು, ಅದಕ್ಕೆ ಪ್ರತಿಯಾಗಿ ಸಿ.ಐ.ಎಸ್.ಎಫ್.ನ ಕಾನ್ಸ್‌ಟೇಬಲ್ ಆದ ಭಗವಾನ್ ಜಾಧವ್ ಎಂಬುವವರು ಸುಮಾರು 8 ಸುತ್ತು ಫೈರ್ ಮಾಡಿದ್ದಾರೆ. ಆನಂತರ ಅವರು ಎಸ್ಕೇಪ್ ಆಗಿದ್ದಾರೆ, ಯಾವುದೇ ಸಾವು-ನೋವು ಆಗಿಲ್ಲವೆಂದು ವರದಿ ಬಂದಿದೆ. ಇದು Security ಗೆ ಸಂಬಂಧ ಪಟ್ಟಂಥ ಪ್ರಶ್ನೆಯಾಗಿದೆ. ಆದ್ದರಿಂದ, ಅಲ್ಲಿಗೆ ಹೋದವರು ಯಾರು ಮತ್ತು ಅಲ್ಲಿಗೆ ಏಕೆ ಹೋಗಿದ್ದರೆಂದು ಹಾಗೂ ಅವರ ಉದ್ದೇಶ ಏನಾಗಿತ್ತು ಎಂಬುದರ ಬಗ್ಗೆ ಮತ್ತು ಅಲ್ಲಿ ಫೈರ್ ಮಾಡಿದ್ದು ಏಕೆ ಮತ್ತು ಅವರು ಯಾರ ಮೇಲೆ ಫೈರ್ ಮಾಡಿದ್ದಾರೆ ಎಬುದು ಅಂದರೆ, ಬಿಲ್ಡಿಂಗ್ ಅಥವಾ ವ್ಯಕ್ತಿಯ ಮೇಲೆ ಫೈರಿಂಗ್ ಮಾಡಿದ್ದಾರೆಯೇ? ಕಾನ್ಸ್‌ಟೇಬಲ್ 8 ಸುತ್ತು ಏತಕ್ಕೆ ಫೈರ್ ಮಾಡಿದ್ದಾನೆ ಎಂಬ ಬಗ್ಗೆ ಮಾಹಿತಿ ಬೇಕು. ಆದರೆ, ಇದರಲ್ಲಿ ಯಾರೂ ಸತ್ತಿಲ್ಲವೆಂದು ಹೇಳಿದ್ದಾರೆ. ಪೋಲೀಸ್‌ನವರು ಅಲ್ಲಿಗೆ ಹೋಗಿ ತನಿಖೆ ಮಾಡಿದ್ದಾರೆ. ಆದರೆ, ಆ ವ್ಯಕ್ತಿಗಳು ಯಾರೆಂಬುದು ಪತ್ತೆಹಚ್ಚತಕ್ಕಂಥದ್ದು ಮತ್ತು ಅವರನ್ನು ಅರೆಸ್ಟ್ ಮಾಡಿಸುವಂಥ ಕೆಲಸ ಇವತ್ತಿನವರೆಗೂ ಸಹ ಆಗಿಲ್ಲ. ಇದರ ಬಗ್ಗೆ ಕೇಂದ್ರ ಸರ್ಕಾರ ವರದಿ ಕೇಳಿದೆ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. What is the actual position? ಎಂಬ ಬಗ್ಗೆ ಮಾಹಿತಿ ಬೇಕು. ಅಂದರೆ, ಅಲ್ಲಿಗೆ ಹೋದಂಥ ಇಬ್ಬರು ವ್ಯಕ್ತಿಗಳು ಯಾರು, ಈತ ಏಕೆ ಫೈರ್ ಮಾಡಿದ ಹಾಗೂ ಆತನ ಉದ್ದೇಶ ಏನೆಂಬುದರ ಬಗ್ಗೆ ಸರ್ಕಾರದ ಹತ್ತಿರ ಬೇರೆ ಏನಾದರೂ ಮಾಹಿತಿ ಇದೆಯೇ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

- ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಪೊಲೀಸ್ ಠಾಣೆ ಸರಹದ್ದಿನ ಬ್ಯಾಲಾಳು ಗ್ರಾಮದ ಬಳಿ ಇರುವ ಭಾರತೀಯ ಅಂತರಿಕ್ಷ ಸಂಶೋಧನೆಗೆ ಸಂಬಂಧಿಸಿದ ಐ.ಡಿ.ಎಸ್.ಎನ್. ಸೌಲಭ್ಯದಡಿಯಲ್ಲಿ "ಚಂದ್ರಯಾನ" ಯೋಜನೆಯ ಉಪಗ್ರಹ ಕಳುಹಿಸುವ ಸೂಕ್ಷ್ಮ ತರಂಗಗಳನ್ನು ಸ್ವೀಕರಿಸಲು 2006ರಲ್ಲಿ ಎರಡು ಬೃಹತ್ ಆಂಟೆನಾಗಳನ್ನು ಸುಮಾರು 125 ಎಕರೆ ಜಮೀನಿನ ವಿಸ್ತೀರ್ಣದಲ್ಲಿ ಸ್ಥಾಪಿಸಲಾಗಿದೆ. ಇದರ ಭದ್ರತೆಯ ಜವಾಬ್ದಾರಿಯನ್ನು ಸಿ.ಐ.ಎಸ್.ಎಫ್.ಗೆ ವಹಿಸಲಾಗಿದೆ. ದಿನದ 24 ಗಂಟೆಯ ಅವಧಿಯಲ್ಲಿ ಭದ್ರತೆ ಮೇಲ್ವಿಚಾರಣೆಗೆ ಒಬ್ಬ ಸಹಾಯಕ ಕಮಾಂಡೆಂಟ್ ಮತ್ತು ಒಬ್ಬ ಇನ್ಸ್‌ಪೆಕ್ಟರ್ ಹಾಗೂ ಇತರ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ.
- ಐ.ಡಿ.ಎಸ್.ಎನ್. ಸೌಲಭ್ಯದ ಸುತ್ತ ಸುಮಾರು ಆರು ಅಡಿ ಎತ್ತರದ ಗೋಡೆಯನ್ನು ನಿರ್ಮಿಸಲಾಗಿದೆ. ಮುಖ್ಯದ್ವಾರವೂ ಸೇರಿದಂತೆ ಸುಮಾರು ಏಳು ಪ್ರಮುಖ ಸ್ಥಳಗಳಲ್ಲಿ ದಿನದ 24 ಗಂಟೆ ಅವಧಿಯಲ್ಲಿ ಮೂರು ಪಾಳಿಗಳಲ್ಲಿ ಶಸ್ತ್ರಸಜ್ಜಿತ ಸಿಬ್ಬಂದಿಯನ್ನು ಭದ್ರತೆ ಕಾರ್ಯಗಳಿಗೆ ನಿಯೋಜಿಸ ಲಾಗುತ್ತಿದೆ.
- ದಿನಾಂಕ: 16.03.2010ರ ಬೆಳಗಿನ ಜಾವ ಸುಮಾರು 4.30 ಗಂಟೆಯಲ್ಲಿ ಸಿ.ಐ.ಎಸ್.ಎಫ್.ನ ಇನ್ಸ್‌ಪೆಕ್ಟರ್ ಶಿವಪ್ರಸಾದ್ ಅವರು ತಾವರೆಕೆರೆ ಪೊಲೀಸ್ ಠಾಣೆಗೆ ದೂರವಾಣಿ ಕರೆ ಮಾಡಿ ಐ.ಡಿ.ಎಸ್.ಎನ್.ನ ಮುಖ್ಯದ್ವಾರದಲ್ಲಿ ಕರ್ತವ್ಯ ನಿರತರಾಗಿದ್ದ ಪಹರೆಯವರ ಕಡೆಗೆ ಯಾರೋ ದುಷ್ಕರ್ಮಿ ಗಳು ಗುಂಡನ್ನು ಹಾರಿಸಿದರೆಂದು ಮತ್ತು ಆ ಸಂದರ್ಭದಲ್ಲಿ ಮುಖ್ಯ ದ್ವಾರದ ಬಳಿ ಭದ್ರತಾ ಕಾರ್ಯದಲ್ಲಿ ನಿರತರಾಗಿದ್ದ ಶಸ್ತ್ರಸಜ್ಜಿತ ಪಹರೆ ಸಿಬ್ಬಂದಿ ಪ್ರತಿಯಾಗಿ ಗುಂಡು ಹಾರಿಸಿದಾಗ ದುಷ್ಕರ್ಮಿಗಳು ಪರಾರಿಯಾಗಿರುತ್ತಾರೆಂದು ತಿಳಿಸಿರುತ್ತಾರೆ.
- ಘಟನೆ ಬಗ್ಗೆ ತಿಳಿದ ಕೂಡಲೇ ಪೊಲೀಸ್ ಇನ್ಸ್‌ಪೆಕ್ಟರ್ ಅವರು ಅಪರಾಧ ಜರುಗಿದ ಸ್ಥಳವನ್ನು ಪರಿಶೀಲಿಸಿದ ನಂತರ ಶಿವಪ್ರಸಾದ್ ಮತ್ತು ಸಿ.ಐ.ಎಸ್.ಎಫ್.ನ ಇತರ

ಅಧಿಕಾರಿಗಳು ಘಟನೆ ಬಗ್ಗೆ ನೀಡಿದ ಮಾಹಿತಿಯಂತೆ ಬೆಳಗಿನ ಜಾವ ಸುಮಾರು 3.30ರ ಸುಮಾರಿಗೆ ಮುಖ್ಯದ್ವಾರದ ಆವರಣದಲ್ಲಿದ್ದ ನಾಯಿ ಶಬ್ದ ಮಾಡಿತ್ತು. ಆ ಸಂದರ್ಭದಲ್ಲಿ ಎಚ್ಚೆತ್ತುಕೊಂಡ ಸಿ.ಐ.ಎಸ್.ಎಫ್.ನ ಕಾನ್ಸ್ ಟೇಬಲ್ ಜೆ.ವಿ. ಭಗವನ್(ಜಾಧವ್) ಮುಖ್ಯದ್ವಾರದ ಎಡಗಡೆ ನೋಡಿದಾಗ ಇಬ್ಬರು ದುಷ್ಕರ್ಮಿಗಳು ಕಂಡು ಬಂದರು. ಅವರು ಖಾಕಿ ಉಡುಪು ಧರಿಸಿದ್ದು ಒಬ್ಬಾತ ಕೈಯಲ್ಲಿ ಬೈನ್ಯಾಕುಲ್ರ್ ರೀತಿಯ ಉಪಕರಣ ಹಿಡಿದಿದ್ದ ಮತ್ತು ಇನ್ನೊಬ್ಬ ಚಿಕ್ಕ ಶಸ್ತ್ರಾಸ್ತ್ರ ಹೊಂದಿದ್ದನ್ನು. ಅದರಿಂದ ಪಹರೆ ಕರ್ತವ್ಯದಲ್ಲಿದ್ದ ಸಿಬ್ಬಂದಿ ಜೆ.ವಿ. ಭಗವಾನ್ ರತ್ತ ಗುರಿಮಾಡಿ ಸುಮಾರು 2 ಗುಂಡನ್ನು ಹಾರಿಸಿದಾಗ ಪ್ರತಿಯಾಗಿ ಕಾನ್ಸ್‌ಟೇಬಲ್ ಭಗವಾನ್ ತನ್ನ ಬಳಿಯಿದ್ದ ಇನ್‌ಸಾಸ್ ರೈಫಲ್‌ನಿಂದ ಸುಮಾರು 8 ಗುಂಡುಗಳನ್ನು ಹಾರಿಸಿದ. ಆಗ ದುಷ್ಕರ್ಮಿಗಳು ಕತ್ತಲಲ್ಲಿ ಪರಾರಿಯಾಗಿರುತ್ತಾರೆಂದು ಅವರು ತಿಳಿಸಿದ್ದಾರೆ.

❖ ತಕ್ಷಣವೇ ಬೆಂಗಳೂರು ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರಾದ ಡಾ. ರವೀಂದ್ರ ಅವರನ್ನು ಸ್ಥಳಕ್ಕೆ ಬರಮಾಡಿ ಕೊಂಡು ಅಪರಾಧ ಜರುಗಿದ ಸ್ಥಳವನ್ನು ಸಂಪೂರ್ಣವಾಗಿ ಪರಿಶೀಲಿಸಿ ವರದಿ ನೀಡುವಂತೆ ಕೋರಲಾಗಿತ್ತು. ಅದರಂತೆ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞ ಡಾ. ರವೀಂದ್ರ ಅವರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದಾಗ ಸ್ಥಳದಲ್ಲಿ 5 ಖಾಲಿ ಗುಂಡಿನ ನಳಿಕೆಗಳು ದೊರಕಿವೆ. ಅವುಗಳ ಮೇಲೆ **ಓ.ಎಫ್.ವೈ. – 5.56*07** ಎಂದು ಮುದ್ರಿತವಾಗಿದ್ದು, ಇವುಗಳು ಸಿ.ಐ.ಎಸ್.ಎಫ್.ನ ಬಳಿಯಿದ್ದ ಇನ್‌ಸಾಸ್ ರೈಫಲ್ ನಿಂದ ಬಳಸಿರುವ ಗುಂಡುಗಳೆಂದು ತಿಳಿದು ಬಂದಿರುತ್ತದೆ. ಉಳಿದ 3 ಖಾಲಿ ಗುಂಡಿನ ನಳಿಕೆಗಳು ದೊರೆತಿರುವುದಿಲ್ಲ. ದುಷ್ಕರ್ಮಿಗಳು ಬಳಸಿದ ಶಸ್ತ್ರಾಸ್ತ್ರದ ಬಗ್ಗೆ ಅಥವಾ ಗುಂಡಿನ ಬಗ್ಗೆ ಯಾವುದೇ ಖಚಿತ ಮಾಹಿತಿ ಸ್ಥಳದಲ್ಲಿ ದೊರೆತಿರುವುದಿಲ್ಲ.

- ❖ ಸ್ಥಳದ ಸಂಪೂರ್ಣ ಪರಿಶೀಲನೆ ಮಾಡಿದಾಗ ದುಷ್ಕರ್ಮಿಗಳು ಕೃತ್ಯದಲ್ಲಿ ಬಳಸಿದ ಗುಂಡುಗಳ ಖಾಲಿ ನಳಿಕೆಗಳಾಗಲಿ, ಅಥವಾ ಸಂಬಂಧಿಸಿದ ಯಾವುದೇ ರಾಸಾಯನಿಕ ವಸ್ತುಗಳಾಗಲಿ ದೊರೆತಿರುವುದಿಲ್ಲ. ಸ್ಥಳದಲ್ಲಿ ಮುಂಜಾಗ್ರತಾ ಕ್ರಮವಾಗಿ ಸಾಕಷ್ಟು ಬಂದೋಬಸ್ತ್ ವ್ಯವಸ್ಥೆ ಏರ್ಪಡಿಸಿ ಯಾವುದೇ ರೀತಿಯಲ್ಲಿ ದುಷ್ಕೃತ್ಯ ನಡೆಯದಂತೆ ನಿಗಾ ವಹಿಸಲಾಗಿದೆ.
- ❖ ಘಟನೆ ನಡೆದ ಸ್ಥಳಕ್ಕೆ ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಕೇಂದ್ರ ವಲಯದ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಅವರು ಭೇಟಿ ನೀಡಿ ಪರಿಶೀಲಿಸಿರುತ್ತಾರೆ. ಗೋಡೆ ಮೇಲೆ ಯಾವುದೇ ಗುಂಡುತಾಗಿದ ಗುರುತು ಕೂಡ ಕಂಡು ಬಂದಿಲ್ಲ.
- ❖ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿ.ಐ.ಎಸ್.ಎಫ್.ನ ಉಸ್ತುವಾರಿ ಅಧಿಕಾರಿ, ಸಹಾಯಕ ಕಮಾಂಡೆಂಟ್ ಪಿ.ಕೆ. ರಾಮಸ್ವಾಮಿ ಅವರು ನೀಡಿದ ದೂರನ್ನು ಅನುಸರಿಸಿ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಗೊಳ್ಳಲಾಗಿದೆ. ಪ್ರಸ್ತುತ ತನಿಖೆ ಮುಂದುವರೆದಿದೆ.

ಮಾನ್ಯ ಅಧ್ಯಕ್ಷರೆ, ಇಷ್ಟನ್ನು ಪ್ರತಿಪಕ್ಷದ ನಾಯಕರಿಗೆ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಿನ್ನೆ ಬೆಳಗ್ಗೆ 7.00 ಗಂಟೆಗೆ ನಮಗೆ ಈ ಸುದ್ದಿ ಗೊತ್ತಾದ ತಕ್ಷಣ ನಮ್ಮ ಅಧಿಕಾರಿಗಳು ಅಲ್ಲಿಗೆ ಬೇಗ ಧಾವಿಸಿ ಹೋಗಿ ನೋಡಿದ್ದಾರೆ. ಅದು ಬಹಳ ಸೂಕ್ಷ್ಮವಾದ ಸ್ಥಳವಾಗಿರುವುದರಿಂದ ಎಚ್ಚರ ವಹಿಸಬೇಕಾಗುತ್ತದೆ. ಕೇಂದ್ರದ ಗೃಹ ಇಲಾಖೆ ಸಹ ಇದರ ಬಗ್ಗೆ ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಯಾವುದೇ ರೀತಿಯ ದುಷ್ಕೃತ್ಯಗಳು ಇದರ ಹಿಂದೆ ಇದೆ ಎಂದು ಮೇಲ್ನೋಟಕ್ಕೆ ಏನೂ ಕಾಣುತ್ತಿಲ್ಲ. ಆದರೂ ಸಹ ನಮ್ಮಿಂದ ಏನೇನು ತನಿಖೆಯಾಗಬೇಕು ಬಂದೋಬಸ್ತ್ ಮಾಡಬೇಕು ಮತ್ತು ಬಿಗಿಯಾದ ನಿಲುವನ್ನು ತೆಗೆದುಕೊಂಡು ತನಿಖೆ ಮುಂದುವರೆದಿದೆ.

ಹೆಚ್ಚಿನ ಮಾಹಿತಿ ಏನಾದರೂ ಸಿಕ್ಕರೆ ಖಂಡಿತವಾಗಿ ಈ ಮನೆಯಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ..

ಶ್ರೀ ಸಿದ್ದರಾಮಯ್ಯ : ಇವರ ಹೇಳಿಕೆಯಲ್ಲಿ ಯಾರೋ ಇಬ್ಬರು ಬಂದಿದ್ದರು ಅವರು ಫೈರ್ ಮಾಡಿದರು ಎಂದು ಹೇಳುತ್ತಾರೆ. ಅದಕ್ಕೇನೂ ಇದರಲ್ಲಿ ಮಾಹಿತಿ ಇಲ್ಲ. ಫೈರ್ ಮಾಡದೆ ಇವರ ಸಿ.ಐ.ಎಸ್.ಎಫ್.ನ ಭಗವಾನ್ ಎನ್ನುವವರು 8 ಬುಲೆಟ್‌ಗಳನ್ನು ಫೈರ್ ಮಾಡಿದ್ದಾನೆ. ಅಲ್ಲಿ ಒಬ್ಬರು ಸಬ್‌ಇನ್ಸ್‌ಪೆಕ್ಟರ್ ಲೆವಲ್ ಆಫೀಸರ್ ಇದ್ದಾರೆ. ಹೆಡ್‌ಕಾನ್ಸ್ ಟೇಬಲ್ ಇದ್ದಾರೆ. ಸುತ್ತ 6 ಅಡಿ ಎತ್ತರದ ಕಾಂಪೌಂಡ್ ಇದೆ. ಎಲ್ಲಾ ಇದ್ದರೂ ಕೂಡ ಇಬ್ಬರು ಎಲ್ಲಿಂದ ಒಳಗಡೆ ಬಂದರು? ಅವರು ಯಾರು ಎಂದು ಗೊತ್ತಿಲ್ಲ. ಅವರು ಅಪರಿಚಿತರು. ಅವರು ಗುಂಡು ಹಾರಿಸಿದ್ದಾರೆ. ಅವರು ಗುಂಡು ಹಾರಿಸಿದ್ದಕ್ಕೆ ಪ್ರತಿಯಾಗಿ ಇವನು ಗುಂಡು ಹಾರಿಸಿದ ಎಂದು ಹೇಳುತ್ತಾರೆ. ಆದರೆ ಅಲ್ಲಿ ಹೋಗಿ ನೋಡಿದರೆ ಸಿ.ಐ.ಎಸ್. ಎಫ್.ನ ಭಗವಾನ್ ಹಾರಿಸಿದ ಗುಂಡುಗಳು ಬಿಟ್ಟರೆ, ಅವರು ಹಾರಿಸಿದ ಗುಂಡು ಏನೂ ಸಿಕ್ಕಿಲ್ಲ. ಈ ಭಗವಾನ್ ಏನಾದರೂ ಸುಳ್ಳು ಹೇಳುತ್ತಾನಾ ಅಥವಾ ಇನ್ನೇನಾದರೂ ಕಾರಣಗಳು ಇವೆಯೇ? ಇದರ ಬಗ್ಗೆ ಕೂಲಂಕಷವಾಗಿ ತನಿಖೆ ಮಾಡುವುದು ಒಳ್ಳೆಯದು. ಇದನ್ನು ತನಿಖೆ ಮಾಡಿ ವರದಿ ಮಾಡಬೇಕು. ಏಕೆಂದರೆ ಇದು ಬಹಳ ಸೂಕ್ಷ್ಮವಾದಂಥ ಪ್ರದೇಶ ಆಗಿರುವುದರಿಂದ ಅಲ್ಲಿ 24 ಗಂಟೆ ಭದ್ರತೆಯ ವ್ಯವಸ್ಥೆಯನ್ನು ಮಾಡಿರತಕ್ಕಂಥದ್ದು. Is there only failure on the part of security? ಅಥವಾ ಇವನೇನಾದರೂ ಸುಳ್ಳು ಹೇಳುತ್ತಾನೆಯೆ? ಇದನ್ನು ಕೂಲಂಕಷವಾಗಿ ತನಿಖೆ ಮಾಡಬೇಕು, ಇದನ್ನು ನೆಗ್ಲೆಕ್ಟ್ ಮಾಡಬಾರದೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಈ) ವಿಷಯ : ಪ್ರಥಮ ದರ್ಜೆ ಕಾಲೇಜು ಕಟ್ಟಡದ ಬಗ್ಗೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಬೇಲೂರು) : ನನ್ನ ಕ್ಷೇತ್ರದ ಆಲೂರು ತಾಲ್ಲೂಕು ಕೇಂದ್ರ್ರದಲ್ಲಿ ಪ್ರಥಮ ದರ್ಜೆ ಕಾಲೇಜು ಇದ್ದು ಅಲ್ಲಿ ಸುಮಾರು 310 ವಿದ್ಯಾರ್ಥಿ ವಿದ್ಯಾರ್ಥಿನಿಯರು ಸೇರ್ಪಡೆಯಾಗಿದ್ದಾರೆ. ಆದರೆ ಕಾಲೇಜಿಗೆ ಸುಸಜ್ಜಿತವಾದ ಕಟ್ಟಡ ಇಲ್ಲದೆ ತರಗತಿ ನಡೆಯುವುದಕ್ಕೆ ತೊಂದರೆಯಾಗಿದೆ. ಪ್ರಯೋಗ ಶಾಲೆ ಆಗಿರಬಹುದು ಮತ್ತೊಂದು ಆಗಿರಬಹುದು ಅದಕ್ಕೆ ತೊಂದರೆಯಾಗಿದೆ. ಈಗ ನಡೆಯುತ್ತಿರತಕ್ಕಂಥ ಕಾಲೇಜು ನಮ್ಮ ಸರ್ಕಾರದ

Middle School ಕಟ್ಟಡದಲ್ಲಿ ನಡೆಯುತ್ತಿದೆ. ಸಣ್ಣ ಪುಟ್ಟ ಬೇರೆ ಬೇರೆ ಕಟ್ಟಡಗಳಲ್ಲಿ ನಡೆಸುತ್ತಿದ್ದೇವೆ. ಆದ್ದರಿಂದ ಕಟ್ಟಡದ ಸಲುವಾಗಿ ತುಂಬಾ ತೊಂದರೆಯಾಗಿದೆ. ಸರ್ಕಾರ ಕೂಡಲೆ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡವನ್ನು ಮಂಜೂರು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪೌರಾಡಳಿತ ಸಚಿವರು) (ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಶಾಸಕರಾದ ಹೆಚ್.ಕೆ.ಕುಮಾರಸ್ವಾಮಿಯವರು ಅವರ ಕ್ಷೇತ್ರದ ಹಾಸನ ಜಿಲ್ಲೆ ಆಲೂರು ತಾಲ್ಲೂಕಿನಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ಇರುವುದಾಗಿಯೂ 310 ಜನ ವಿದ್ಯಾರ್ಥಿಗಳು ವಿಧ್ಯಾಭ್ಯಾಸ ಮಾಡುತ್ತಿದ್ದಾರೆಂದು, ಸ್ವಂತ ಕಟ್ಟಡವಿಲ್ಲದೆ ಪಾಠ ಪ್ರವಚನಕ್ಕೆ ತೊಂದರೆಯಾಗಿರುವುದಾಗಿಯೂ ಈಗಾಗಲೇ 300 ಲಕ್ಷ ರೂ. ಗಳ ಅಂದಾಜಿನ ಕಾಮಗಾರಿಯ ಪ್ರಸ್ತಾಪವಿದ್ದು ಇನ್ನು ಮಂಜೂರಾತಿಯಾಗಿಲ್ಲವೆಂದು ತಿಳಿಸಿರುತ್ತಾರೆ. ಯಾವುದೇ ಪ್ರಥಮ ದರ್ಜೆ ಕಾಲೇಜಿಗೆ 300 ಲಕ್ಷ ರೂ.ಗಳಲ್ಲಿ ಕಟ್ಟಡ ಕಟ್ಟುವ ಪ್ರಸ್ತಾಪ ಸರ್ಕಾರದ ಮುಂದೆ ಇಲ್ಲ. ಒಂದು ಪ್ರಥಮ ದರ್ಜೆ ಕಾಲೇಜಿಗೆ 121 ಲಕ್ಷ ರೂ.ಗಳ ಅಂದಾಜಿನ ಕಾಮಗಾರಿಗಳನ್ನು ಮಂಜೂರಿಸಬಹುದಾಗಿದೆ. ಮಾನ್ಯ ಶಾಸಕರು ಪ್ರಸ್ತಾಪಿಸಿರುವ ವಿಷಯ ಕುರಿತಂತೆ ತುರ್ತಾಗಿ ಪರಿಶೀಲಿಸಲಾಗುವುದು. ಈಗಾಗಲೇ ಆಲೂರು ತಾಲ್ಲೂಕಿನ ಪ್ರಥಮ ದರ್ಜೆ ಕಾಲೇಜಿಗೆ 24; ಲಕ್ಷ ರೂ.ಗಳ ಅನುದಾನವನ್ನು ಕೊಡಲ್ಪಟ್ಟಿದ್ದು ಕಟ್ಟಡದ ಮೂರು ಕೊಠಡಿಗಳ ಕಾಮಗಾರಿ ಪೂರ್ಣಗೊಂಡಿದೆ. ಇನ್ನುಳಿದಂತೆ 2010–11 ನೇ ಸಾಲಿನಲ್ಲಿ ಅವಶ್ಯಕತೆಗೆ ಅನುಗುಣವಾಗಿ ಮತ್ತು ಅನುದಾನದ ಲಭ್ಯತೆಯನ್ನು ಆಧರಿಸಿ ಉಳಿದ ಕಾಮಗಾರಿಗಳನ್ನು ಕಟ್ಟಡದ ವಿಸ್ತರಣೆ ಎಂದು ತೆಗೆದುಕೊಳ್ಳಲು ಪರಿಶೀಲಿಸಲಾಗುವುದು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : 24 ಲಕ್ಷ ರೂ.ಗಳಲ್ಲಿ ಕಟ್ಟಡ ಕಟ್ಟಲಾಗಿದೆ. ಆದರೆ ಒಂದೇ ಒಂದು ಶಾಲಾ ಕೊಠಡಿ ಇರತಕ್ಕಂಥದ್ದು. ಉಳಿದದ್ದು ಕಛೇರಿಗೆ ಉಪಯೋಗಿಸಿಕೊಳ್ಳುತ್ತಾರೆ. ತುಂಬಾ ತೊಂದರೆ ಇರುವುದರಿಂದ ಈ ವರ್ಷದ ಅನುದಾನದಲ್ಲಿ ದಯಮಾಡಿ ಮಂಜೂರು ಮಾಡಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, 2010–11 ನೇ ಸಾಲಿನಲ್ಲಿ ಇದನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು. ಈಗ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಅರ್ಧ ಗಂಟೆ ಚರ್ಚೆ ಎಂದು ಹೇಳಿದ್ದೆ. ಡಾ: ಸುಧಾಕರ್‌ವರು ಮಾತನಾಡಿ.

5. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ :

ವಿಷಯ : ಪ್ರಸ್ತುತ ಬೇಸಿಗೆ ಕಾಲ ಪ್ರಾರಂಭವಾಗಿದ್ದು ರಾಜ್ಯಾದ್ಯಂತ ಭೀಕರವಾಗಿರುವ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ.

ಡಾ: ಎಂ.ಸಿ.ಸುಧಾಕರ್ (ಚಿಂತಾಮಣಿ) : ಮಾನ್ಯ ಅಧ್ಯಕ್ಷರೆ, ನಿಯಮ 69ರ ಮೇರೆಗೆ ರಾಜ್ಯದಲ್ಲಿ ಇರತಕ್ಕಂಥ ಹಲವಾರು ಜಿಲ್ಲೆಗಳಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಆಗಿರತಕ್ಕಂಥದ್ದು, ಈಗಾಗಲೇ ಬೇಸಿಗೆ ಪ್ರಾರಂಭವಾಗಿದ್ದು ಬಹಳ ಕ್ಷೇತ್ರಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗಿದ್ದು ಬಹಳ ದೊಡ್ಡ ಸಮಸ್ಯೆಯಾಗಿ ಆ ಭಾಗದ ಜನಪ್ರತಿನಿಧಿಗಳಾದ ನಮಗೆ ದೊಡ್ಡ ತಲೆನೋವಾಗಿರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮುಖ್ಯವಾಗಿ ನಮ್ಮ ಬಯಲು ಸೀಮೆ ಭಾಗದ ನಮ್ಮ ಸಮಸ್ಯೆಗಳನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ತಿಳಿಸುತ್ತಾ ಬೇರೆ ಕ್ಷೇತ್ರಗಳಲ್ಲಿಯೂ ಇದೇ ರೀತಿಯಾದಂಥ ಸಮಸ್ಯೆಗಳು ಇರತಕ್ಕಂಥದ್ದನ್ನು ಎಲ್ಲಾ ಸದಸ್ಯರು ಭಾಗವಹಿಸುವುದಕ್ಕೆ ತಾವು ಅವಕಾಶವನ್ನು ಕೊಟ್ಟಿರುವುದಕ್ಕೆ ತಮಗೆ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ. ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು ಸರಾಸರಿ 4501 ಮಿ.ಮೀಟರ್ ವಾಡಿಕೆ ಮಳೆ ಆಗಬೇಕಾಗಿತ್ತು. ಅಂತಹ ಒಂದು ಸಂದರ್ಭದಲ್ಲಿ ಕೇವಲ 3800 ಮಿ.ಮೀಟರ್ ಕಳೆದ ವರ್ಷ ಮಳೆ ಆಗಿರುವಂಥದ್ದಾಗಿದೆ. ಅದು ಕೆಲವು ಭಾಗಗಳಲ್ಲಿ ಮಾತ್ರ ಸಾಧಾರಣ ಮಳೆ ಆಗಿದ್ದು, ಇನ್ನು ಕೆಲವು ಭಾಗಗಳಲ್ಲಿ ಮಳೆ ಆಗಿಲ್ಲದೇ ಇರತಕ್ಕಂಥದ್ದು ನಾವು ಕಂಡಿದ್ದೇವೆ. ಅತಿ ಹೆಚ್ಚು ಕೆರೆಗಳು ಇರತಕ್ಕಂಥದ್ದು ಹಳೇ ಕೋಲಾರ ಜಿಲ್ಲೆ. ಸುಮಾರು 4000 ಕ್ಕಿಂತ ಹೆಚ್ಚು ಕೆರೆಗಳು ಇರತಕ್ಕಂಥದ್ದು ನಮ್ಮ ಭಾಗದಲ್ಲಿ. ಅಂಥ ಪರಿಸ್ಥಿತಿಯಲ್ಲಿ ಕೇವಲ ಒಂದೆರಡು ಭಾಗದಲ್ಲಿ ಮಾತ್ರ ಅಲ್ಪಸ್ವಲ್ಪ ಮಳೆ ಆಗಿರುವಂಥದ್ದು ಮತ್ತು ಆ ಕೆರೆಗಳಿಗೆ ನೀರು ಬಂದಿರತಕ್ಕಂಥದ್ದನ್ನು ನಾವು ನೋಡಿರುತ್ತೇವೆ.

ಎಲ್ಲೆಲ್ಲಿ ಕೆರೆಗಳಿಗೆ ನೀರು ಬಂದಿದೆ ಅಲ್ಲಿ ಅಂತರ್ಜಲ ಸ್ವಲ್ಪ ವೃದ್ಧಿಯಾಗಿರುವುದು, ಅಲ್ಲಿ ಬೋರ್‌ವೆಲ್ ಆಧಾರಿತವಾಗಿ ಅಂದರೆ

ಸಂಪೂರ್ಣವಾಗಿ ಕೊಳವೆ ಬಾವಿ ಆಧಾರಿತವಾಗಿ ಇವತ್ತು ಏನು ಕುಡಿಯುವ ನೀರನ್ನು ಬಳಕೆಯಾಗಿ ಬಳಸಿಕೊಳ್ಳುತ್ತಿದ್ದೇವೆ ಅದು ಇವತ್ತು ಮಳೆ ಅಭಾವದಿಂದ ಸಂಪೂರ್ಣವಾಗಿ ಕ್ಷೀಣಿಸಿರತಕ್ಕಂತಹದ್ದು, ಇವತ್ತು ಕುಡಿಯುವ ನೀರಿಗೆ ದೊಡ್ಡ ಆಹಾಕಾರ ಸೃಷ್ಟಿಯಾಗಿರುವುದು ಮತ್ತೊಂದು ವಿಚಾರ. ಕಳೆದ ವರ್ಷದ ಜೂನ್ ತಿಂಗಳಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿಯಿಂದ ನಿರ್ದೇಶಕರು ಗ್ರಾಮೀಣ ಮೂಲ ಸೌಲಭ್ಯಗಳ ಇಲಾಖೆ ಇವರು ಜಂಟಿ ಕಾರ್ಯದರ್ಶಿಯವರಿಗೆ ತಾರೀಖು 25–06–2009 ರಂದು ಕಳುಹಿಸಿರತ ಕ್ಕಂತಹ ಒಂದು ಪತ್ರ ಇದೆ. ನಮ್ಮ ಜಿಲ್ಲೆಯ ಬೇಡಿಕೆ ಏನಿತ್ತು ಎಂದರೆ, ಈಗಾಗಲೇ ಕೊರೆದಿರತ್ಕಕಂತಹ ಬೋರ್‌ವೆಲ್ ಮತ್ತು ಬೇಕಾಗಿರುವಂತಹ ಅನುದಾನ ಒಟ್ಟು 6 ತಾಲ್ಲೂಕುಗಳು ಸೇರಿ ಸುಮಾರು 8 ಕೋಟಿ 55 ಲಕ್ಷ ರೂಪಾಯಿಗಳ ಬೇಡಿಕೆಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದರು. ಈಗಾಗಲೇ ಸುಮಾರು 8–9 ತಿಂಗಳುಗಳ ಹಿಂದೆ ಬೇಡಿಕೆಯನ್ನು ಕಳುಹಿಸಿಕೊಟ್ಟಿದ್ದರು. ಆದರೆ, ಇದಕ್ಕೆ ಯಾವುದೇ ರೀತಿಯಾಗಿ ಅವಶ್ಯಕತೆಗೆ ಅನುಗುಣವಾಗಿ ಸರ್ಕಾರದಿಂದ ಹಣ ಬಿಡುಗಡೆಯಾಗಲಿಲ್ಲ. ಸರ್ಕಾರ 25–11–2008 ರಂದು ಚಿಕ್ಕಬಳ್ಳಾಪುರ ಜಿಲ್ಲೆಗೆ 120 ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತ್ತು. ನಂತರ ಟಾಸ್ಕ್‌ಫೋರ್ಸ್‌ನ ಅಡಿಯಲ್ಲಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ ಸುಮಾರು 20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿತ್ತು. ಆದರೆ, ನಮ್ಮ ಭಾಗದ ಬೇಡಿಕೆಗೆ ಅನುಗುಣವಾಗಿ ಇದನ್ನು ಗಮನಿಸಿದಾಗ ಇದು ಬಳಕೆ ಮಾಡುವುದಕ್ಕೆ ಯಾವರೀತಿ ಸಾಧ್ಯವಾಗುತ್ತದೆ ಎಂಬುದನ್ನು ತಾವು ಗಮನಿಸಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇದರ ಜೊತೆಯಲ್ಲಿ ಇವತ್ತು ನಮ್ಮ ಭಾಗದಲ್ಲಿ ಅಂತರ್ಜಲ ಸಾವಿರ ಅಡಿಯವರೆಗೆ ಮುಟ್ಟಿದೆ ಅಥವಾ ದಾಟಿದೆ ಎಂದರೆ ನಾವು ಐದಾರು ಬೋರ್‌ವೆಲ್‌ಗಳನ್ನು ಕೊರೆದರೂ ಸಹ ಅದರಲ್ಲಿ 2–3 ಮಾತ್ರ ನಮಗೆ ಯಶಸ್ಸು ಆಗಿ ಕುಡಿಯುವ ನೀರು ಸಿಗುವಂತಹ ಅವಕಾಶವಿದೆ. ಇಲ್ಲಿ ಒಂದು ಮಾತನ್ನು ಹೇಳಬೇಕಾದರೆ, Department of Health and Family Welfare Services ಸರ್ಕಾರ ವತಿಯಿಂದ ಇರತಕ್ಕಂತಹ, ಶೇಷಾದ್ರಿ ರಸ್ತೆಯಲ್ಲಿರುವಂತಹ ಒಂದು ಸಂಸ್ಥೆಯಲ್ಲಿ ಟೆಸ್ಟ್ ಮಾಡಿರುವಂತಹ water sample ನ ಒಂದು ರಿಪೋರ್ಟ್ ನನ್ನ ಹತ್ತಿರವಿದೆ. ಈ ರೀತಿ ಹಲವಾರು ಕಡೆಗಳಲ್ಲಿ ಪ್ರತಿಯೊಂದು ಬೋರ್‌ವೆಲ್ ಅನ್ನು ನಾವು surface water

ಬಿಟ್ಟರೆ, ಅಂತರ್ಜಲಕ್ಕೋಸ್ಕರ ಭೂಮಿಯೊಳಗೆ ಎಷ್ಟು ಆಳ ಹೋಗುತ್ತೇವೆಯೋ ಅಷ್ಟೂ ಕೂಡ ಒಂದು ರೀತಿಯಾಗಿ poisonous ಆಗುತ್ತದೆ. ಕುಡಿಯುವ ನೀರಿಗೆ ಯೋಗ್ಯವಿಲ್ಲದ ರೀತಿಯಲ್ಲಿ ಇರುವಂತಹ ನೀರನ್ನು ಇವತ್ತು ನಾವು ಜನರಿಗೆ ಕೊಡತಕ್ಕಂತಹ ಒಂದು ಕಷ್ಟದ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಅದರಲ್ಲಿ ಈಗ ಮಸ್ತೇನಹಳ್ಳಿ ಎನ್ನುವ ಒಂದು ಗ್ರಾಮದ ರಿಪೋರ್ಟ್‌ನಲ್ಲಿ ಅವರು ಹೇಳಿದ್ದಾರೆ. "The water sample is extremely hard and it is having excess of Nitrate. Hence it is unfit for Potable purpose," ಎಂದು ಇದೆ. ಈ ರೀತಿಯಾದ ಸಂದರ್ಭದಲ್ಲೂ ವಿಧಿಯಿಲ್ಲದೇ ಇಂತಹ ನೀರನ್ನು ನಮ್ಮ ಭಾಗದ ಜನರು ಬಳಕೆ ಮಾಡುಂತಹದ್ದು ಇದೆ. ಹಲವಾರು ಕಡೆಗಳಲ್ಲಿ fluoride ಅಂಶ ಜಾಸ್ತಿ ಹೆಚ್ಚು ಇರತಕ್ಕಂತಹ ಒಂದು ಸಂದರ್ಭದಲ್ಲಿ ಅದನ್ನು ಸೇವನೆ ಮಾಡಿ Skeletal Fluorosis ಇರಬಹುದು, ಈ ರೀತಿಯಾದಂತಹ ಪರಿಸ್ಥಿತಿಗೆ ನಾವೆಲ್ಲಾ ಗುರಿಯಾಗುತ್ತಿದ್ದರೂ ಸಹ ಕನಿಷ್ಠ ಇವೆಲ್ಲವನ್ನೂ ತಿಳಿದಿದ್ದೂ ಸಹ, ಇವತ್ತು ಅದರಲ್ಲಿ ವಿಷಾಂಶವಿದೆ ಎಂಬುದು ಗೊತ್ತಿದ್ದೂ ಸಹ, ಇವತ್ತು ನಮ್ಮ ಭಾಗದ ಜನ ಅದನ್ನೇ ಆಧಾರವಾಗಿಟ್ಟುಕೊಂಡು ನೀರನ್ನು ಕುಡಿಯುವಂತಹ ಸಂದರ್ಭವಿದೆ. ಈ ರೀತಿ ಸುಮಾರು ನಾವು 8 ತಿಂಗಳುಗಳಿಂದ ಸತತವಾಗಿ ಮಾಡಿರುವಂತಹ ಪ್ರಯತ್ನಕ್ಕೆ ಯಾವ ರೀತಿಯಲ್ಲೂ ಸರ್ಕಾರ ನಮಗೆ ಸ್ಪಂದಿಸಿಲ್ಲ. ಕುಡಿಯುವ ನೀರಿನ ಬವಣೆಯನ್ನು ತೀರಿಸಬೇಕಾದಂತಹ ಸಕಾರ ಇನ್ನೂ ತೀರಿಸಿಲ್ಲವೆಂಬ ನೋವಿನ ಜೊತೆಯಲ್ಲಿ ಹೇಳುತ್ತಿದ್ದೇನೆ. ಈ ವರ್ಷ ಮತ್ತೆ ಅಂಕಿಅಂಶಗಳನ್ನು ನಾನು ತರಿಸಿಕೊಂಡೆ. ನಮ್ಮ ಭಾಗದ ಕುಡಿಯುವ ನೀರಿನ ಸಮಸ್ಯೆಯನ್ನು ನಿಭಾಯಿಸುವುದಕ್ಕೆ ಎಷ್ಟು ಬೇಕು ಎನ್ನುವುದಕ್ಕೆ ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆಯ ತಾಲ್ಲೂಕುವಾರು ಪಟ್ಟಿಯನ್ನು ತರಿಸಿಕೊಂಡಾಗ ಈಗಾಗಲೇ ಬರೆದಿರತಕ್ಕಂತಹ ಬೋರ್‌ವೆಲ್‌ಗೆ ಬೇಕಾದಂತಹ ಅನುದಾನ, ಈಗಾಗಲೇ 8 ತಿಂಗಳುಗಳ ಹಿಂದೆ ಕಳುಹಿಸಿರತಕ್ಕಂತಹ ಪ್ರಸ್ತಾವನೆ, ಅದರ ಪ್ರಕಾರ ಸುಮಾರು 8 ಕೋಟಿ 71 ಲಕ್ಷ ರೂಪಾಯಿಗಳು ಎಂದು ಇವತ್ತು ಅಂಕಿ–ಅಂಶಗಳನ್ನು ಕೊಟ್ಟಿದ್ದಾರೆ ಇದರ ಜೊತೆಯಲ್ಲಿ . . . . .

ಅಧ್ಯಕ್ಷರು : ಇನ್ನೂ ಬಹಳಷ್ಟು ಜನರು ಮಾತನಾಡುವವರು ಇದ್ದಾರೆ.

ಡಾ: ಎಂ.ಸಿ. ಸುಧಾಕರ್ : ತಾವು ಅರ್ಧ ಗಂಟೆ ಕಾಲಾವಧಿಯ ಚರ್ಚೆ ಎಂದು ಹೇಳಿದ್ದೀರಿ.

ಅಧ್ಯಕ್ಷರು : ಎಲ್ಲರಿಗೂ ಸೇರಿ ಅರ್ಧ ಗಂಟೆ ಚರ್ಚೆ ಎಂದು ಹೇಳಿದ್ದೇನೆ. ತಮ್ಮ ಒಬ್ಬರಿಗೇ ಅಲ್ಲ.

ಡಾ: ಎಂ.ಸಿ.ಸುಧಾಕರ್ : ನನ್ನ ಒಬ್ಬನಿಗೇ ಅಲ್ಲ. ನಾನು ನೋಟೀಸ್ ಕೊಟ್ಟಿದ್ದೆ. ನಮ್ಮ ಭಾಗದ ಪರಿಸ್ಥಿತಿ ಬಹಳ ಕಷ್ಟದ ಪರಿಸ್ಥಿತಿಯಾಗಿದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಈ ಬಗ್ಗೆ ನಾನು ಮನವರಿಕೆ ಮಾಡಬೇಕು. ಈಗಾಗಲೇ ನಾನು ಈ ಹಿಂದೆ ಇದ್ದಂತಹ ಗ್ರಾಮೀಣಾಭಿವೃದ್ಧಿ ಸಚಿವರಿಗೂ ಸಹ ಇದರ ಬಗ್ಗೆ ಪತ್ರ ಬರೆದಿದ್ದೇನೆ. ಮಾನ್ಯ ಜಗದೀಶ್ ಶೆಟ್ಟರ್ ರವರು ನೂತನವಾಗಿ ಸಚಿವರಾಗಿ ಬಂದಾಗ ಅವರನ್ನು ಸಹ ಭೇಟಿ ಮಾಡಿ ಅವರ ಗಮನಕ್ಕೂ ಸಹ ತಂದಿದ್ದೇನೆ. ಇಲಾಖೆಯ ಕಾರ್ಯದರ್ಶಿಯವರಿಗೂ ಸಹ ಈ ಸಮಸ್ಯೆಯನ್ನು ಗಮನಕ್ಕೆ ತಂದಿದ್ದೆ. ಮಾನ್ಯ ಮುಖ್ಯಮಂತ್ರಿಯವರಿಗೂ ಸಹ ನಾನು ಜನವರಿಯಲ್ಲಿ ಪತ್ರ ಬರೆದಾಗ ಅವರ ಕಛೇರಿಯಿಂದ 'ಸೂಕ್ತ ಕ್ರಮ ತೆಗೆದುಕೊಳ್ಳಿ' ಎಂದು ಪತ್ರ ಬರೆದಿದ್ದರು. ಈಗಾಗಲೇ ಇರತಕ್ಕಂತಹ ಸಮಸ್ಯೆಗೆ ಹಣ ಬೇಕಾಗಿರುವುದು 8 ಕೋಟಿ ರೂಪಾಯಿಗಳು. ಈಗ ಉದ್ಭವವಾಗುವಂತಹ ಸಮಸ್ಯೆಗೆ ಸುಮಾರು 488 ಲಕ್ಷ ರೂಪಾಯಿಗಳು ಬೇಕು ಎಂದು ಕೇಳುತ್ತಿದ್ದಾರೆ. ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ದಯವಿಟ್ಟು ಎಲ್ಲೆಲ್ಲಿ ಸಮಸ್ಯೆಯಿದೆ, ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿ ಹೆಚ್ಚು ಸಮಸ್ಯೆಯಿರತಕ್ಕಂತಹದ್ದು. ನಮ್ಮ ಚಿಂತಾಮಣಿ ವಿಧಾನ ಸಭಾ ಕ್ಷೇತ್ರ, ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರ ಹಾಗೂ ಚಿಕ್ಕಬಳ್ಳಾಪುರದಲ್ಲಿ ಹೆಚ್ಚು ಸಮಸ್ಯೆಯಿದೆ. ಕೆಲವು ಕ್ಷೇತ್ರಗಳಲ್ಲಿ ಅವರು ಕೊಟ್ಟಿರತಕ್ಕಂತಹ ಮಾಹಿತಿ ಪ್ರಕಾರ ಸಮಸ್ಯೆ ಕಡಿಮೆಯಿದೆ. ನೀವು ಪ್ರತಿಯೊಂದು ತಾಲ್ಲೂಕಿಗೂ ಸಹ ಸಮಾನವಾಗಿ ಹಂಚಿಕೆ ಮಾಡಿದಾಗ ಇಲ್ಲಿ ನಮಗೆಲ್ಲರಿಗೂ ತೊಂದರೆ ಯಾಗುತ್ತದೆ. ಈಗಾಗಲೇ ಹಲವಾರು ಗ್ರಾಮಸ್ಥರು ಬಂದು ನಾವು ಅಲ್ಲಿ ಗಲಾಟೆ ಮಾಡುತ್ತೇವೆ, ಇಲ್ಲಿ ಗಲಾಟೆ ಮಾಡುತ್ತೆವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ನಾನು ಅವರಿಗೆ ಹೇಳಿದ್ದೇನೆ, ವಿಧಾನಸಭೆ ಅಧಿವೇಶನ ನಡೆಯುತ್ತಿದೆ, ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ ಹಾಗೂ ಈ ಬಗ್ಗೆ ಸರ್ಕಾರ ಸ್ಪಂದಿಸುತ್ತದೆ ಎನ್ನುವ ನಂಬಿಕೆ ಇಟ್ಟುಕೊಂಡು ದಯವಿಟ್ಟು ಇದೆಲ್ಲವನ್ನೂ ಮಾಡುವುದಕ್ಕೆ ಹೋಗಬೇಡಿ, ಪರಿಹಾರ ಮಾಡುತ್ತೇನೆ ಎನ್ನುವ ಮಾತನ್ನು ಹೇಳಿ ಬಂದಿದ್ದೇನೆ. ಇನ್ನೂ ಈ ಬಗ್ಗೆ

ಮಾತನಾಡುವವರು ಇದ್ದಾರೆ ಎಂದು ಹೇಳಿದ್ದರಿಂದ ಇನ್ನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗದೆ, ತಾವು ಈ ಒಂದು ಅವಕಾಶ ಕೊಟ್ಟಿದ್ದಕ್ಕೆ ಸರ್ಕಾರಕ್ಕೆ ಪರಿಪರಿಯಾಗಿ ಕೇಳಿಕೊಳ್ಳುತ್ತೇನೆ. ನಮಗೆ ಬೇರೆ ಯಾವುದೇ ಮೂಲವಿಲ್ಲ. ನಮಗೆ ಬೋರ್‌ವೆಲ್ ಕೊರೆಯುವುದು ಒಂದೇ ಮೂಲ. ದಯವಿಟ್ಟು ತಾವು ನಮ್ಮ ಭಾಗದ ಜನರ ರಕ್ಷಣೆಗೆ ಬರಬೇಕು, ಕುಡಿಯುವ ನೀರು ಪ್ರತಿಯೊಬ್ಬರ ಹಕ್ಕು. ಊಟವನ್ನು ಬೇಕಾದರೂ ಒಂದು ಹೊತ್ತು ಅಥವಾ ಎರಡು ಹೊತ್ತು ಬಿಟ್ಟಿರಬಹುದು. ಆದರೆ, ಕುಡಿಯುವ ನೀರಿಲ್ಲದೆ ಯಾವುದೇ ಜೀವಿ ಬದುಕುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುತ್ತಾ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಅಧ್ಯಕ್ಷರೆ, ಈಗ ಕುಡಿಯುವ ನೀರಿನ ಬಗ್ಗೆ ಶಾಸಕರ ನೇತೃತ್ವದಲ್ಲಿರುವ ಒಂದು ಟಾಸ್ಕ್ ಫೋರ್ಸ್ ಕಮಿಟಿಗೆ ಅಧಿಕಾರವನ್ನು ಹೆಚ್ಚಿಗೆ ಕೊಬೇಕೆಂದು ಬೆಳಿಗ್ಗೆ ಪ್ರಶ್ನೆಯನ್ನು ಹಾಕಿದ್ದೆವು. ಆ ಸಂದರ್ಭದಲ್ಲಿ ಇದು ಬಹಳ ಗಂಬೀರವಾದಂತಹ ಪ್ರಶ್ನೆ, ಇದಕ್ಕೆ ಅರ್ಧ ಗಂಟೆ ಕಾಲಾವಧಿ ಚರ್ಚೆ ಬೇಕು, ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಎಲ್ಲಾ ಕ್ಷೇತ್ರಗಳಲ್ಲೂ ಸಹ ಕುಡಿಯುವ ನೀರಿನ ಬವಣೆ ಎದ್ದು ಕಾಣುತ್ತಿದೆ, ಅದಕ್ಕೋಸ್ಕರ ಇದಕ್ಕೆ ವಿಶೇಷವಾಗಿ ಅರ್ಧ ಗಂಟೆ ಕಾಲಾವಧಿ ಚರ್ಚೆಯನ್ನು ಮಾಡಿ ಸರ್ಕಾರದ ಗಮನವನ್ನು ಸೆಳೆದು ಉತ್ತರವನ್ನು ಬಯಸಬೇಕು ಹಾಗೂ ಆ ಸಮಸ್ಯೆ ಬಗೆಹರಿಯಬೇಕು ಎನುವ ನಿಟ್ಟಿನಲ್ಲಿ ವಿರೋಧ ಪಕ್ಷದ ನಾಯಕರೆಲ್ಲರೂ ಸೇರಿ ತೀರ್ಮಾನವನ್ನು ಮಾಡಿದ್ದಾರೆ. ಸರ್ಕಾರದ ವತಿಯಿಂದ ಗ್ರಾಮೀಣಾಭಿವೃಧ್ಧಿ ಸಚಿವರು ಸಹ ಉತ್ತರವನ್ನು ಕೊಟ್ಟಿದ್ದಾರೆ. ಬಹಳ ಚುರುಕಾಗಿ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿಂದ ನಿಮ್ಮ ಕ್ಷೇತ್ರಗಳಿಗೆ ಹೋಗುವುದರೊಳಗಾಗಿ ಅಲ್ಲಿ ಹಣ ಬಂದಿರುತ್ತದೆ ಎನ್ನುವ ಮಾತನ್ನು ಸಹ ಹೇಳಿದ್ದಾರೆ. ಆದರೆ, ಇಲ್ಲಿ ಯಾವ ಪ್ರಮಾಣದಲ್ಲಿ ಹಣ ನೀಡುತ್ತಾರೆ ಎನ್ನುವುದು ಬಹಳ ಮುಖ್ಯವಾಗಿರತಕ್ಕಂತಹ ಪ್ರಶ್ನೆ. ಈಗಾಗಲೇ 600 ರಿಂದ 700 ಅಡಿಗಳಷ್ಟು ಆಳಕ್ಕೆ ಅಂತರ್ಜಲದ ಮಟ್ಟ ಕುಸಿದುಹೋಗಿದೆ. ಅಲ್ಲಿಂದ ನೀರನ್ನು ಮೇಲಕ್ಕೆ ಎತ್ತಬೇಕಾದರೆ, ಪಂಪ್ ಸೆಟ್‌ಗಳ ಮುಖಾಂತರ ನೀರನ್ನು ಎತ್ತಬೇಕಾದರೆ ಇವತ್ತು ವಿದ್ಯುಚ್ಛಕ್ತಿ ಸಮಸ್ಯೆ ತಾಂಡವವಾಡುತ್ತಿದೆ. ನಿನ್ನೆ ದಿವಸ ಯುಗಾದಿ ಹಬ್ಬ, ಹಬ್ಬದಲ್ಲಿ ಬಹಳಷ್ಟು ಜನ ಕಷ್ಟಪಟ್ಟು ಸ್ನಾನ ಮಾಡಬೇಕಾದಂತಹ ಪರಿಸ್ಥಿತಿ ಬಂತು. ನಮ್ಮ ಮಾನ್ಯ

ಮುಖ್ಯಮಂತ್ರಿಯವರು ಸದನದಲ್ಲಿ ನಿಂತು 7 ರಿಂದ 11 ಗಂಟೆವರೆಗೆ ಕರೆಂಟ್ ಅನ್ನು ಯಾವುದೇ ಕಾರಣದಿಂದಲೂ ತೆಗೆಯುವುದಿಲ್ಲವೆಂದು ಹೇಳಿದರು. ನಿನ್ನೆ ದಿವಸ ಎಷ್ಟು ಗಂಟೆಯವರೆಗೆ ಕರೆಂಟ್ ಅನ್ನು ಎಲೆಲ್ಲಿ ಕೊಟ್ಟರು ಎನ್ನುವುದನ್ನು ನೋಡುವುದಕ್ಕೆ ತಾವು ವರದಿಯನ್ನು ತರಿಸಿಕೊಳ್ಳ ಬೇಕಾಗುತ್ತದೆ. ಹಬ್ಬದ ದಿವಸವೂ ಸಹ ನೀರನ್ನು ಜನರಿಗೆ ಕೊಡಿಸುವುದಕ್ಕೆ ಆಗಲಿಲ್ಲವಲ್ಲಾ ಎಂಬ ದೃಷ್ಟಿಯಿಂದ 10–15 ನಿಮಿಷಕ್ಕೆ, ಅರ್ಧ ಗಂಟೆಗೂ ಸಹ MES center ಗೆ ಫೋನ್ ಮಾಡಿ ನೀರನ್ನು ಕೊಡಿ ಎಂದು ಹೇಳಿದರೂ ಸಹ ಮತ್ತೆ ಇನ್ನು ಅರ್ಧ ಗಂಟೆಯಲ್ಲಿ ಕರೆಂಟ್ ಹೋಗಿರುತ್ತದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಅಲ್ಲಿ ವಿದ್ಯುಚ್ಛಕ್ತಿ ಆಟವಾಡುತ್ತಿದೆ. ಆದ್ದರಿಂದ ಬೋರ್‌ವೆಲ್‌ಗಳನ್ನು ಕೊರಿಸುವ ಮುಖಾಂತರ ಇವತ್ತು ಹೆಚ್ಚಿನ ನೀರನ್ನು ಕೊಡಬೇಕು. ಅತಿ ತುರ್ತಾಗಿ, ಬೆಳಿಗ್ಗೆ ನೀರು ಓಡುತ್ತಿರುತ್ತದೆ. ಗ್ಯಾಪ್ ಹೊಡೆಯಿತು, ನೀರು ನಿಂತು ಹೋಯಿತು ಎಂದು ಸಾಯಂಕಾಲದ ಹೊತ್ತಿಗೆ ಬರುತ್ತಾರೆ. ಏನು ಮಾಡುವುದಕ್ಕೆ ಆಗುತ್ತದೆ? ಅವರು ಜಿಲ್ಲಾ ಪಂಚಾಯಿತಿ ಸದಸ್ಯರಿಗೆ ಅನುದಾನ ನೀಡುತ್ತಾರೆ. ಆದರೆ, ಜಿಲ್ಲಾ ಪಂಚಾಯಿತಿಯಲ್ಲಿ ಏನಾಗಿದೆ ಎಂದರೆ, ಎಲ್ಲಾ spill over ಗೆ ಹಣ ಸಾಕಾಗುವುದಿಲ್ಲವೆಂದು ಹಾಗೂ ಹೊಸದಾಗಿ ನಾವು ಈ ವರ್ಷ ಕ್ರಿಯಾ ಯೋಜನೆಯನ್ನು ಮಾಡಿಲ್ಲವೆಂದು, ಕ್ರಿಯಾ ಯೋಜನೆಯನ್ನು ಮಾಡುವುದಕ್ಕೆ ನಮ್ಮ ಹತ್ತಿರ ಹಣವಿಲ್ಲವೆಂದು, ನಾವು ಏನು ಮಾಡೋಣ ಎನ್ನುವ ಗೋಳನ್ನು ಅವರು ಹೇಳಿಕೊಳ್ಳುತ್ತಾರೆ. ಈ ಎಲ್ಲಾ ದೃಷ್ಟಿಯಿಂದ ಇವತ್ತು ಏನಾದರೂ ಒಂದು ಮಾರ್ಗವನ್ನು ಕಂಡುಹಿಡಿದು ಶಾಸಕರ ಗೌರವವನ್ನು ಉಳಿಸತಕ್ಕಂತಹ ಕೆಲಸವನ್ನು ಮಾಡಬೇಕಾಗಿದೆ. ಮತ್ತೆ ಗೌರವವನ್ನು ಉಳಿಸುವುದರ ಜೊತೆಗೆ ಜನಗಳ ಸಮಸ್ಯೆ ಬಗೆಹರಿಯಬೇಕಾಗಿದೆ. ಕುಡಿಯುವ ನೀರಿನ ಬಗ್ಗೆ ಡಿ.ಸಿ.ಯವರಿಗೆ ಫೋನ್ ಮಾಡಿದರೆ ನಮ್ಮ ಹತ್ತಿರ ಹಣವಿಲ್ಲ, EO ಕೇಳಿದರೆ ನಮ್ಮ ಹತ್ತಿರ ಇದ್ದಂತಹ ಹಣವೆಲ್ಲಾ ಖರ್ಚಾಗಿ ಹೋಗಿದೆ, ಮತ್ತೆ ಹಣ ಬರಬೇಕು ಎಂದು ಹೇಳುತ್ತಾರೆ. ನಾವು ಎಲ್ಲಿಂದ ಕೇಳುವುದು, ಎಲ್ಲಿಂದ ಕೊರೆಸುವುದು? ಒಬ್ಬ ಶಾಸಕರಾಗಿ ತಕ್ಷಣವೇ ಬಂದು ಕುಡಿಯವ ನೀರಿನ ಸಮಸ್ಯೆ ಜಾಸ್ತಿಯಾಗಿದೆ, ನೀರು ನಿಂತು ಹೋಗಿದೆ, ಯಾರದೋ ಪ್ರೈವೇಟ್ ಬಾವಿಯ ಹತ್ತಿರ ಹೋಗಿ ಅವರ ಹತ್ತಿರ ಬೈಯಿಸಿಕೊಂಡು ನೀರನ್ನು ತರುತ್ತಿದ್ದೇವೆ ಎಂದು ಒಂದು ಬೋರ್‌ವೆಲ್‌ನಾದರೂ ಕೊರೆಸಿಕೊಡಿ ಎಂದು

ಕೇಳಿದರೆ ತಕ್ಷಣ ಸ್ಪಂದಿಸುವುದಕ್ಕೆ ಇವತ್ತು ನಮ್ಮ ಹತ್ತಿರ ಹಣವಿಲ್ಲವೆಂದು, ನಾವು ಒಬ್ಬರು ಶಾಸಕರಿಗಾಗಿ ಇಲ್ಲವೆಂದು ಹೇಳುವ ಭಾವನೆ ಬರುವುದಾದರೆ ನಾವು ಏನು ಮಾಡಬೇಕು ಹೇಳಿ. ಮಾನ್ಯ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಇದ್ದಾರೆ. ದಯಮಾಡಿ ಇದನ್ನು ಯಾವುದೇ ಒಂಧು ದೃಷ್ಟಿಯಲ್ಲಿ ನೋಡದೆ ಗಂಭೀರವಾಗಿ ನೋಡಿ. ಬಹಳ ಗಾಂಭೀರ್ಯತೆಯಿಂದ ನೋಡಿ. ಶಾಸಕರ ಮತ್ತು ಕರ್ನಾಟಕ ರಾಜ್ಯದ ಜನತೆಯ ಪ್ರತಿಯೊಂದು ಕ್ಷೇತ್ರದಲ್ಲಿ, ಪ್ರತಿಯೊಂದು ಕಡೆಯಲ್ಲಿಯೂ ಸಹ, ಕೆಲವು ಕಡೆ ಆಮೇಲೆ ನೋಡೋಣ, ಮೊದಲು ಕೊರೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಅವರು ಹೋಗಿ ಕೊರೆದುಕೊಂಡು ಬರುತ್ತಾರೆ, ಮೋಟಾರ್ ಅನ್ನು ಇಳಿಸುತ್ತಾರೆ ಹಾಗೂ ಎಲ್ಲಾ ಕೆಲಸವೂ ಆಗುತ್ತವೆ.

(2-50 PM)

ನಮ್ಮ ಕಡೆ ಆ ತರಹ ಆಗುತ್ತಿಲ್ಲ. ನಾವು ಬಹಳ ಕಷ್ಟಪಡಬೇಕಾಗಿದೆ. ಅಲ್ಲಿ ಅವರು ಹೇಳಿದ ತಕ್ಷಣ ಹಣ ಇಲ್ಲದೇ ಇದ್ದರೆ ಯಾರೂ ಬೋರ್‌ವೆಲ್ ಅನ್ನು ಕೊರೆಯುವುದಕ್ಕೆ ಹೋಗುವುದಿಲ್ಲ. ಕ್ರಿಯಾ ಯೋಜನೆ ಇಲ್ಲದಿದ್ದರೂ ಸಹ ಕೊರೆಯುವುದಕ್ಕೆ ಹೋಗುವುದಿಲ್ಲ. ಅದಕ್ಕೋಸ್ಕರ ತಾವು ದಯಮಾಡಿ ಇದನ್ನು ಯಾವುದೇ ಬೇಧ-ಭಾವ ಇಟ್ಟುಕೊಳ್ಳಬೇಡಿ. ಇದರಲ್ಲಿ ಒಂದು ಗೌರವದ ಪ್ರಶ್ನೆ ಇದೆ. ಕುಡಿಯುವ ನೀರನ್ನು ಕೊಡುವುದಕ್ಕೆ ಒಬ್ಬ ಶಾಸಕ ರಿಂದ ಮತ್ತು ಸರ್ಕಾರದಿಂದ ಆಗಲಿಲ್ಲ ಎನ್ನುವ ಅಗೌರವಕ್ಕೆ ಯಾರೂ ಪಾತ್ರರಾಗುವುದು ಬೇಡ. ಇದಕ್ಕೆ ವಿಶೇಷವಾದ ಗಮನವನ್ನು ಕೊಟ್ಟು ಯಾವ ಮೂಲದಿಂದಲಾದರೂ ಪರಿವರ್ತನೆಯನ್ನು ಮಾಡಿ, ಕುಡಿಯುವ ನೀರಿನ ಆದ್ಯತೆಗೆ ದಯಮಾಡಿ ಅವಕಾಶವನ್ನು ಕಲ್ಪಿಸಿಕೊಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ.

ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಸಭಾಧ್ಯಕ್ಷರೆ, ವಿಶೇಷವಾಗಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಇವತ್ತು ಚರ್ಚೆಗೆ ಅವಕಾಶ ಮಾಡಿಕೊಟ್ಟಿರತಕ್ಕಂಥದ್ದು ನಿಜವಾಗಿಯೂ ಇವತ್ತಿನ ಸಂದರ್ಭದಲ್ಲಿ ಬಹಳ ಅವಶ್ಯಕತೆಯಿದೆ ಎಂದು ನಾನು ತಮ್ಮಲ್ಲಿ ಭಿನ್ನವಿಸಿಕೊಂಡು, ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭಿರವಾಗಿದೆ ಎಂದು ಹೇಳಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಯಾವಾಗಲೂ ಪ್ರತಿವರ್ಷ ಜನವರಿ ಬಂದರೆ, ಕುಡಿಯುವ ನೀರಿನ ಸಮಸ್ಯೆ ಸರ್ವೇಸಾಮಾನ್ಯವಾಗಿರುತ್ತದೆ. ಕುಡಿಯುವ ನೀರಿನ

ಸಮಸ್ಯೆಯಿದೆ ಎಂದು ನಾವು ಕಳೆದ 25 ವರ್ಷಗಳಿಂದ ಸರ್ಕಾರದ ಮೇಲೆ ಒತ್ತಡ ತರತಕ್ಕಂಥ ಪ್ರಯತ್ನ ಜನಪ್ರತಿನಿಧಿಗಳು ಮಾಡಿಕೊಂಡು ಬರುತ್ತಿದ್ದೇವೆ. ಆದರೂ ಪ್ರತಿ ವರ್ಷವೂ ನಮಗೆ ಮಳೆ ಕಡಿಮೆಯಾಗುತ್ತಿದೆ, ಅಂತರ್ಜಲ ಪಾತಾಳಕ್ಕೆ ಹೋಗುತ್ತಿದೆ. ಪ್ರತಿವರ್ಷವೂ ನಾವು ಹೊಸ ಕೊಳವೆ ಬಾವಿಗಳನ್ನು ಕೊರೆಯುವುದು ಅನಿವಾರ್ಯವಾಗಿದೆ. ಈ ಒಂದು ಪರಿಸ್ಥಿತಿಯನ್ನು ಇವತ್ತು ನಾವು ಎದುರಿಸುತ್ತಿದ್ದೇವೆ. ಅದಕ್ಕಾಗಿ ಒಂದು ಕಡೆ ಹೋರಾಟವೂ ನಡೆಯುತ್ತಿದೆ. ಶಾಶ್ವತ ಕುಡಿಯುವ ನೀರಿನ ಸೌಲಭ್ಯವನ್ನು ಬಯಲುಸೀಮೆ ಪ್ರದೇಶಕ್ಕೆ ಕೊಡಬೇಕೆಂದು ಒಂದು ದೊಡ್ಡ ಹೋರಾಟ ಇವತ್ತು ನಡೆಯುತ್ತಿದೆ. ಅದು ಒಂದು ಕಡೆ ಇರಲಿ. ತಾತ್ಕಾಲಿಕವಾಗಿ ಕಳೆದ ಮೂರು ತಿಂಗಳಿನಿಂದ ಪ್ರತಿನಿತ್ಯ 5 ರಿಂದ 10 ಬೋರ್‌ವೆಲ್‌ಗಳಿಗೆ ಸಂಬಧಿಸಿದಂತೆ ದೂರುಗಳು ಬರುತ್ತವೆ. ನೀರು ಕಡಿಮೆಯಾಗಿದೆ, urgent ಆಗಿ ನೀರನ್ನು ಕೊಡಬೇಕು ಇಲ್ಲದಿದ್ದರೆ ತೊಂದರೆಯಾಗುತ್ತದೆ ಎಂದು ದೂರುಗಳು ಬರುತ್ತವೆ. ಇವತ್ತು ಏನಾಗಿದೆಯೆಂದರೆ, ಮನುಷ್ಯರಿಗೆ ಮಾತ್ರವಲ್ಲ, ಅಲ್ಲಿರತಕ್ಕಂಥ ಜಾನುವಾರುಗಳಿಗೆ, ಪಶು–ಪಕ್ಷಿಗಳಿಗೆ ಎಲ್ಲದ್ದಕ್ಕೂ ಕೊಳವೆ ಬಾವಿ ನೀರೇ ಆಧಾರ. ಬೇರೆ ದಾರಿಯೇ ಇಲ್ಲ. ಆ ಒಂದು ಪರಿಸ್ಥಿತಿ ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇದೆ. ವಿಶೇಷವಾಗಿ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಬಾಗೇಪಲ್ಲಿ, ಗೌರಿಬಿದನೂರು ಆ ಎಲ್ಲಾ ಐದು ತಾಲ್ಲೂಕುಗಳಲ್ಲಿ ಸಂಪೂರ್ಣವಾಗಿ ಅಂತರ್ಜಲ ಪಾತಾಳಕ್ಕೆ ಹೋಗಿದೆ. ಅಂತರ್ಜಲದ ಮಟ್ಟ 800 ಅಡಿಯಿಂದ 1000 ಅಡಿಗೆ ಹೋಗಿದೆ. ಈ ಒಂದು ಪರಿಸ್ಥಿತಿ ಇವತ್ತು ಉಲ್ಬಣಗೊಂಡಿದೆ. ಈಗಾಗಲೇ ಪ್ರತಿನಿತ್ಯ ತಡೆದುಕೊಳ್ಳುವುದಕ್ಕಾಗುತ್ತಿಲ್ಲ. ಈ ಸಂಬಂಧ ಜಿಲ್ಲಾಧಿಕಾರಿಗಳನ್ನು ಕೇಳಿದರೆ, ಸರ್ ನಾವು ಕೊಳವೆ ಬಾವಿಗಳನ್ನು ಕೊಡುವುದಕ್ಕೆ ಬರುವುದಿಲ್ಲ, ರೂಲ್ಸ್ ಪ್ರಕಾರ scarcity ಪ್ರಕಾರ ಕೊಳವೆ ಬಾವಿಗಳಿಗೆ ಹಣ ಕೊಡುವುದಿಲ್ಲ ಎಂದು ಹೇಳುತ್ತಾರೆ. ಏನಿದ್ದರೂ ಮೋಟಾರ್ ಪಂಪ್ ಮತ್ತು ಪಿವಿಸಿ ಪೈಪ್ ಈ ತರಹ equipmentsಗೆ ಮಾತ್ರ ಹಣ ಕೊಡುತ್ತೇವೆ ಎನ್ನುವ ಮಾತನ್ನು ಅವರು ಹೇಳುತ್ತಾರೆ. ಕೊರೆದಿರತಕ್ಕಂಥ ಕೊಳವೆ ಬಾವಿಗಳಿಗೂ ಸರಿಯಾಗಿ ಅವರ ಹತ್ತಿರ ಹಣವಿಲ್ಲ ಮತ್ತು ಕಳೆದ ಮೂರು ತಿಂಗಳಿನಿಂದ ನಾವು ಅಧಿಕಾರಿಗಳ ಮೇಲೆ ಒತ್ತಾಯ ಮಾಡಿ ಕೆಲವು ಕಡೆ 20–30 ಕೊಳವೆ ಬಾವಿಗಳನ್ನು ಕೊರೆಸಿದ್ದೇವೆ. ಅಲ್ಲಿ ಕೊಳವೆ ಬಾವಿಗಳನ್ನು ಕೊರೆಸುವ ಅನಿವಾರ್ಯತೆ ಇದೆ. ನೀರೇ ಇಲ್ಲ, ಒಂದು

ಸಣ್ಣ drop ಇಲ್ಲ. ಅಂತಹ ಸಂದರ್ಭದಲ್ಲಿ ನಾವು ಅನಿವಾರ್ಯವಾಗಿ ಪರ್ಯಾಯ ವ್ಯವಸ್ಥೆ ಮಾಡಲೇಬೇಕಾಗುತ್ತದೆ. ಆ ಕೊಳವೆ ಬಾವಿಗಳಿಗೆ ಸರ್ಕಾರದಿಂದ ಇಲ್ಲಿವರೆಗೂ ಹಣ ಪಾವತಿಯಾಗಿಲ್ಲ. "ನೀವು ಹೇಳಿದಿರಿ, ನಿಮ್ಮ ಒತ್ತಾಯಕ್ಕೆ ಮಣಿದು ಜಿಲ್ಲಾ ಪಂಚಾಯತ್ ಅಧಿಕಾರಿಗಳಿಗೆ oral ಆಗಿ ಸೂಚನೆ ಕೊಟ್ಟಿದ್ದರ ಮೇಲೆ ಬೋರ್‌ವೆಲ್‌ಗಳನ್ನು ಕೊರೆಸಿದ್ದೇವೆ, ಅದಕ್ಕೆ ಹಣ ಇಲ್ಲ ಸರ್". ಎನ್ನುವ ಮಾತನ್ನು ಅಧಿಕಾರಿಗಳು ಹೇಳುತ್ತಿದ್ದಾರೆ. ಈಗ ಬರುತ್ತಾ AEE ಅವರಿಗೆ ಫೋನ್ ಮಾಡಿದರೆ, "ಸರ್, ನಿನ್ನೆಯಿಂದ ಇನ್ನೂ ಸುಮಾರು 15 ಹಳ್ಳಿಗಳಿಂದ ದೂರು ಬಂದಿದೆ. 15 ಹಳ್ಳಿಗಳಲ್ಲಿ ನೀರಿಲ್ಲ, ಪೂರ್ತಿ dry ಆಗಿದೆ," ಎಂದು ಹೇಳುತ್ತಾರೆ. ಪರ್ಯಾಯವಾಗಿ ಟ್ರ್ಯಾಕ್ಟರ್‌ನಿಂದ ನೀರು ಒದಗಿಸೋಣವೆಂದರೆ ಎಲ್ಲಿಯೂ surface water ಇಲ್ಲ. Agriculture land ನಲ್ಲಿ ಅಲ್ಲೊಬ್ಬರೋ ಅಥವಾ ಇಲ್ಲೊಬ್ಬರೋ, ಯಾರ್‍ಯಾರಿಗೋ 2000–3000 ಗ್ಯಾಲನ್ ನೀರಿದ್ದರೆ, ಬೆಳೆಗೆ ಆಗುವಷ್ಟು ನೀರು ಇಟ್ಟುಕೊಂಡಿದ್ದಾರೆ. ಅವರು ಸಹಾ ನೀರು ಕೊಡತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಹೀಗಾಗಿ ಅನಿವಾರ್ಯವಾಗಿ ಎಲ್ಲಿ ನೀರಿನ source ಸಿಕ್ಕಿದರೆ ಅಲ್ಲಿ ನಾವು ಹೊಸ ಕೊಳವೆ ಬಾವಿಯನ್ನು ಕೊರೆಸಲು ಹೋಗಲೇಬೇಕಾಗುತ್ತದೆ. ಇಲ್ಲದಿದ್ದರೆ ಊರಿನಲ್ಲಿರ ತಕ್ಕಂಥ ಜನ ಜಾನುವಾರುಗಳಿಗೆ ತೊಂದರೆಯಾಗುತ್ತದೆ. ಇದು ಇರತಕ್ಕಂಥ ವಾಸ್ತಾವಾಂಶ. ಸರ್ಕಾರ ನಮ್ಮ ಜಿಲ್ಲೆಗಳನ್ನು ಬರಗಾಲಪೀಡಿತ ಜಿಲ್ಲೆಗಳೆಂದು ಘೋಷಣೆ ಮಾಡಿದೆ. ಆ ಬರಗಾಲ ಹಿನ್ನೆಲೆಯಲ್ಲಿ ಏನೇನು ಸವಲತ್ತುಗಳನ್ನು ಕೊಡಬೇಕೋ ಅದರ ಬಗ್ಗೆ ಇಲ್ಲಿಯವರೆಗೂ ವ್ಯವಸ್ಥಿತ ರೀತಿಯಲ್ಲಿ ಸರ್ಕಾರ ಗಮನ ಕೊಟ್ಟಿಲ್ಲ. ಸರ್ಕಾರ ಬರಗಾಲ ಎಂದು ಹೇಳುತ್ತದೆ. ಆ ಬರಗಾಲಕ್ಕೆ ಪೂರಕವಾಗಿ ಯಾವ್ಯಾವ ತರಹದ ಸಿದ್ಧತೆಗಳನ್ನು ಮಾಡಬೇಕು, ಯಾವ್ಯಾವ ರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಸರ್ಕಾರದ ನಿಯಮಗಳಿವೆ, ಇಲ್ಲಿಯವರೆಗೂ ಆ ಕಡೆಗೆ ಸರ್ಕಾರ ಅಥವಾ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಗಮನವನ್ನು ಕೊಟ್ಟಿಲ್ಲ. ಇದು ವಾಸ್ತವಾಂಶ. ಆದುದರಿಂದ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ನಮ್ಮ ಆರ್.ಡಿ.ಪಿ.ಆರ್ ಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ, ದಯವಿಟ್ಟು ತಕ್ಷಣ ಹಣ ಬಿಡುಗಡೆ ಮಾಡಬೇಕು. ಜನ ಬಹಳ ತೊಂದರೆಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಬೇರೆ ಎಲ್ಲಿಂದಲೂ ನೀರನ್ನು ಒದಗಿಸಲು ಸಾಧ್ಯವಿಲ್ಲ ಆ ಪರಿಸ್ಥಿತಿ ಉದ್ಭವಿಸಿದೆ. ಆದ್ದರಿಂದ ದಯಮಾಡಿ

ಅಲ್ಲಿ ಎಷ್ಟೆಷ್ಟು ಹಣ ಕೇಳುತ್ತಾರೆ ಅಷ್ಟಷ್ಟು ಹಣವನ್ನು stand-by ಹೆಚ್ಚುವರಿಯಾಗಿ ಜಿಲ್ಲಾಧಿಕಾರಿಗಳ ಹತ್ತಿರ ಇಟ್ಟು, task-force ಮುಖಾಂತರ ಎಲ್ಲೆಲ್ಲಿ ಅವಶ್ಯಕತೆ ಇದೆ ಎನ್ನುವ ಪ್ರಸ್ತಾವನೆ ಬರುತ್ತದೆ ತಕ್ಷಣ ಅದಕ್ಕೆ ಹಣ ಬಿಡುಗಡೆ ಮಾಡುವಂಥ ವ್ಯವಸ್ಥೆ ಮಾಡಬೇಕು. ಕುಡಿಯುವ ನೀರನ್ನು ಕೊಡತಕ್ಕಂಥ ಕೆಲಸಕ್ಕೆ ಆದ್ಯತೆ ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸರ್ಕಾರಕ್ಕೆ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಅಧ್ಯಕ್ಷರೆ, ರೂಲ್ 69 ಅಡಿಯಲ್ಲೂ ಹಾಗೂ ಅರ್ಧಗಂಟೆ ಚರ್ಚೆಯಲ್ಲೂ ಅವಕಾಶ ಕೊಟ್ಟಿದ್ದೀರಿ ಅದಕ್ಕಾಗಿ ಧನ್ಯವಾದಗಳು. ಈಗಾಗಲೇ ಬಹಳಷ್ಟು ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ನಾನು ಹೇಳಿದ್ದನ್ನೇ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಚಿವರು ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುವುದು ಇಷ್ಟೆ, ನಮಗೆ ಏನು ಸಮಸ್ಯೆ ಇದೆ? ಅದಕ್ಕೆ ಹೇಗೆ ಪರಿಹಾರ ಹುಡುಕಬೇಕು? ನಮಗೆ ಇರತಕ್ಕಂಥ ಸಮಸ್ಯೆ ಏನೆಂದರೆ, ಕೆಲವೊಂದು ಗ್ರಾಮಗಳಲ್ಲಿ ಬಹಳಷ್ಟು ಕುಡಿಯುವ ನೀರಿನ ಸಮಸ್ಯೆ ಇದೆ. ಏಕೆಂದರೆ, ಗುಲ್ಬರ್ಗಾ ಮತ್ತು ಬೀದರ್ ಪ್ರದೇಶಗಳಲ್ಲಿ ಯಾವ ರೀತಿ ಬಿಸಿಲು ಇರುತ್ತದೆ ಎಂದು ತಮಗೆ ಗೊತ್ತಿದೆ. ಅಂಥಾದ್ದರಲ್ಲಿ, ಇವತ್ತು ಕುಡಿಯುವ ನೀರಿಗೆ ಸಮಸ್ಯೆ ಬಂದರೆ ಆ ಜನರು ಎಲ್ಲಿ ಹೋಗಬೇಕು? ಅದಕ್ಕೆ ಗ್ರಾಮ ಪಂಚಾಯತಿಗೆ ನೀವು ಬೋರ್‌ವೆಲ್ ಮತ್ತು ಪೈಪ್‌ಲೈನ್ maintenance ಕೊಟ್ಟಿದ್ದೀರಿ. ಮಾನ್ಯ ಸಚಿವರು ಗಮನಿಸಬೇಕಾದ ಅಂಶವೇನೆಂದರೆ, ಅದಕ್ಕೆ ಸರಿಯಾಗಿ ಹಣ ಬಿಡುಗಡೆಯಾಗಿಲ್ಲ. ಗ್ರಾಮ ಪಂಚಾಯಿತಿಯ maintenance of PWS and MWS and individual bore-wells ಗೆ ಹಣವಿಲ್ಲ. ದಯಮಾಡಿ ತುರ್ತಾಗಿ ತಾವು ಏನು ಹಣ ಬಿಡುಗಡೆ ಮಾಡಬೇಕು ಅದನ್ನು ಬಿಡುಗಡೆ ಮಾಡಬೇಕು. ತಾವೇನು ಅನುದಾನ ಕೊಡುತ್ತೀರಿ ಅದರಲ್ಲಿ 50% ಹಣ ಕೆ.ಇ.ಬಿ ಗೆ ಹೋಗುತ್ತಿದೆ. ಮಾನ್ಯ ಕೆ.ಎಂ.ಶಿವಲಿಂಗೇಗೌಡರು ಈಗ ಹೇಳಿದ ಹಾಗೆ, ಇವತ್ತು ವಿದ್ಯುತ್ 6 ಗಂಟೆ ಏನಿದೆ ಅಂದರೆ 3 ಫೇಸ್ ಇದೆ. ಆ 3 ಫೇಸ್‌ನಲ್ಲಿ overhead tank fill ಮಾಡಬೇಕು. ಹಾಗಾಗಿ ತೊಂದರೆಯಾಗುತ್ತಿದೆ. ಯಾವ್ಯಾವ ಗ್ರಾಮಗಳಲ್ಲಿ ಏನೇನು ಪರಿಸ್ಥಿತಿ ಇದೆ ಅದನ್ನು task-force ಮುಖಾಂತರ ಪರಿಗಣಿಸಿ, ಇವತ್ತು ಪರಿಹಾರ ಹುಡುವುದಕ್ಕೆ task-force ಗೆ ಸಂಪೂರ್ಣ ಅಧಿಕಾರ

ಕೊಡಬೇಕು. ನಿಮ್ಮ budget allocation ಆಗಿದ್ದರೂ ಗ್ರಾಮ ಪಂಚಾಯಿತಿಗಳಿಗೆ ಏನೇನು ಹಣ ಬಿಡುಗಡೆಯಾಗಬೇಕಾಗಿತ್ತು ಅದು ಸಂಪೂರ್ಣವಾಗಿ ಬಿಡುಗಡೆಯಾಗಿಲ್ಲ. ಅದನ್ನೂ ತಕ್ಷಣ ಬಿಡುಗಡೆ ಮಾಡಿ. ಮೋಟಾರ್ಸ್ ಮತ್ತು ಪೈಪ್‌ಗಳನ್ನು ಯಾವ ರೀತಿ ತೆಗೆದುಕೊಳ್ಳುತ್ತೀರಿ ಎನ್ನುವುದು ಬಹಳ ಮುಖ್ಯ. ಏಕೆಂದರೆ immediately pipeline ಮಾಡುವುದು ಇರುತ್ತದೆ. ಆದರೆ ಅಲ್ಲಿ ಗುಣಮಟ್ಟದ ಪೈಪ್‌ಗಳನ್ನು ಹಾಕದೇ ಇರುವುದರಿಂದ ಈ ತೊಂದರೆಯಾಗುತ್ತಿದೆ. ಆದ್ದರಿಂದ ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ, ಮಾರ್ಕೆಟ್ ನಲ್ಲಿರತಕ್ಕಂಥ standard companies, ಅದು ಫಿನೋಲೆಕ್ಸ್ ಆಗಿರಬಹುದು, ಆ ಕಂಡೀಷನ್ ಆಗಿ ನೀವು ಕೊಡಿ. ಆನಂತರ ಮೋಟಾರ್ಸ್ ಬಗ್ಗೆ ಹೇಳಬೇಕೆಂದರೆ, ಮೋಟಾರ್ ಹಾಕಿದ ಮೂರು ತಿಂಗಳಿನಲ್ಲೇ ಸುಟ್ಟು ಹೋಗುತ್ತದೆ. ಆದ್ದರಿಂದ ಮಾರ್ಕೆಟ್ ನಲ್ಲಿರತಕ್ಕಂಥ ಗುಣಮಟ್ಟದ ಪೈಪ್ಸ್ ಮತ್ತು ಮೋಟಾರ್ಸ್ ಬಹಳ ಮುಖ್ಯ ಇದೆ. ಅದನ್ನು ಮಾಡದೇ ಹೋದರೆ ಒಂದು ವರ್ಷದಲ್ಲಿ ಮತ್ತೆ ಮತ್ತೆ ನಾವು ಅದೇ ಕೆಲಸವನ್ನು ಮಾಡಬೇಕಾಗುತ್ತದೆ. ಅದಕ್ಕೆ ತಾವು ಇದರ ಬಗ್ಗೆ ಗಮನವನ್ನು ಕೊಡಬೇಕು. ತಾವು ಏನು ಅನುದಾನವನ್ನು ಕೊಡಬೇಕಾಗಿದೆ, ಗ್ರಾಮಪಂಚಾಯತಿ ಸೆಕ್ರೆಟರಿಗಳಿಗೆ headquarters ನಲ್ಲಿ ಮೂರು ತಿಂಗಳಾದರೂ ಇರುವುದಕ್ಕೆ ಹೇಳಿ. ಮೂರು ತಿಂಗಳು ಗ್ರಾಮ ಪಂಚಾಯತಿ ಸೆಕ್ರೆಟರಿಗಳು headquarters ನಲ್ಲಿದ್ದರೆ 50% problems solve ಆಗುತ್ತದೆ. EO ಗಳಿಗೆ regular ಆಗಿ ರೆವ್ಯೂ ಮಾಡುವುದಕ್ಕೆ ಹೇಳಿ. Task-force ನಿಂದ ಏನು ಕೊಡುತ್ತಿದ್ದೀರಿ, Deputy Commissioner ಅವರು ಕೊಡತಕ್ಕಂಥ scarcity ಹಣದಲ್ಲಿ ಬೋರ್‌ವೆಲ್ಸ್ ಕೊರೆಯುವ ಹಾಗೆ ಇಲ್ಲ. ನೀವು ಪ್ರತ್ಯೇಕವಾಗಿ linked document ನಲ್ಲಿ, ಆರ್.ಡಿ.ಪಿ.ಆರ್. ಇಲಾಖೆಯಿಂದ ಬೋರ್‌ವೆಲ್ ಕೊರೆಯುವುದಕ್ಕೆ ಹಣ ಬಿಡುಗಡೆ ಮಾಡಬೇಕಾಗುತ್ತದೆ. ಅದಕ್ಕಾಗಿ ಮಾನ್ಯ ಸಚಿವರು ಪ್ರತ್ಯೇಕವಾಗಿರತಕ್ಕಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ ಮತ್ತು ಅವಶ್ಯಕತೆಗನುಗುಣವಾಗಿ Task-force ಏನು decision ತೆಗೆದುಕೊಳ್ಳುತ್ತದೆ ಅದಕ್ಕೆ ಮನ್ನಣೆ ಕೊಟ್ಟು ಎಷ್ಟು ಹಣ ಬೇಕಾಗುತ್ತದೆ ಅಷ್ಟನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಏಕೆಂದರೆ ಸರ್ಕಾರಕ್ಕೆ NCCF ಮತ್ತು CRF ನಲ್ಲಿ ಹಣ ಬಂದಿರಬಹುದು. ಈ ವರ್ಷ ಸರ್ಕಾರಕ್ಕೆ NCCF ಮತ್ತು CRF ನಲ್ಲಿ ಎಷ್ಟು ಹಣ ಬಂದಿದೆ ಎಂದು

ಮಾನ್ಯ ಸಚಿವರು ಹೇಳಬೇಕು ಮತ್ತು ರಾಜ್ಯ ಸರ್ಕಾರದಿಂದ, ಆಯವ್ಯಯ ದಿಂದ ಎಷ್ಟು ಹಣ ಕೊಡಬೇಕಾಗುತ್ತದೆ ಎನ್ನುವುದನ್ನೂ ಸಹಾ ಮಾನ್ಯ ಸಚಿವರು ಹೇಳಬೇಕು. ಇದಕ್ಕೆ ಸಾಕಷ್ಟು ಹಣವನ್ನು ಒದಗಿಸಿ ಕೊಡಬೇಕು. ಮಾನ್ಯ ಸಚಿವರು 14 ಕೋಟಿ ರೂ. ಎಂದು ಹೇಳಿದರು. ತಾವು .86 ಎಂದು ಏನು ಇವತ್ತು ಹೇಳಿದಿರಿ ಅದಕ್ಕೆ 25 ಲಕ್ಷ ರೂಪಾಯಿಯೂ ಸಹಾ ಬರುವುದಿಲ್ಲ. ಆದುದರಿಂದ ಅದು ಯಾವುದಕ್ಕೂ ಸಾಲದು. ನಮ್ಮ ಗುಲ್ಬರ್ಗಾದಲ್ಲಿ ಸಂಬಂಧಿಸಿದಂತೆ ಹೇಳಬೇಕಾದರೆ, ಗುಲ್ಬರ್ಗಾಕ್ಕೆ 10 ಕೋಟಿ ರೂಪಾಯಿ ಬೇಕಾಗುತ್ತದೆ. ಬೇಸಿಗೆಯನ್ನು ನಿಭಾಯಿಸಬೇಕೆಂದರೆ ಇವತ್ತು 10 ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ನಮ್ಮ ಇಂಜಿನಿಯರ್ಸ್ ಪ್ರಸ್ತಾವನೆ ಕೊಟ್ಟಿದ್ದಾರೆ. ಪೈಪ್ ಗುಣಮಟ್ಟ ಮತ್ತು ಮೋಟಾರ್‌ಗಳ ಗುಣಮಟ್ಟ, ಗ್ರಾಮ ಪಂಚಾಯತಿ ಸೆಕ್ರೆಟರಿಗಳು headquarters ನಲ್ಲಿರುವುದು, ಪಂಚಾಯಿತಿ ಅನುದಾನವನ್ನು ನೇರವಾಗಿ ಕೆ.ಇ.ಬಿ. ಗೆ ಕೊಡದೇ ನೀವು ಅವರಿಗೇ ಮುಟ್ಟಿಸುವಂಥ ಕೆಲಸ ಮಾಡಿದರೆ ಇದು ನಿಭಾಯಿಸುವುದಕ್ಕೆ ಸಾಧ್ಯವಿದೆ ಎನ್ನುವ ಮಾತನ್ನು ಸರ್ಕಾರಕ್ಕೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಸಾ.ರಾ.ಮಹೇಶ್ (ಕೆ.ಆರ್.ನಗರ) : ಮಾನ್ಯ ಅಧ್ಯಕ್ಷರೆ, ತಾಲ್ಲೂಕುಗಳಲ್ಲಿ ಹಲವಾರು ಕಡೆ Rajiv Gandhi Rural Drinking Scheme ನ ಒಂದು ಯೋಜನೆ ಇದೆ. ಅದರಲ್ಲಿ ಈಗಾಗಲೇ ಲಕ್ಷಾಂತರ ರೂಪಾಯಿ ಕೆ.ಇ.ಬಿ ಬಿಲ್ ಬಾಕಿ ಇದೆ. ಉದಾಹರಣೆಗೆ ನಮ್ಮ ತಾಲ್ಲೂಕಿನಲ್ಲಿ ಮಿರ್ಲೆ ಮತ್ತು ಸಾಲಿಗ್ರಾಮದಲ್ಲಿ ಎರಡೂ ಹೋಬಳಿಯಿಂದ ಸುಮಾರು 40 ಲಕ್ಷ ರೂಪಾಯಿಗಳನ್ನು ಕಟ್ಟಬೇಕಾಗಿದೆ. ನೀವು ಹಣವನ್ನು ಕಟ್ಟಲಿಲ್ಲವೆಂದರೆ, ಇರತಕ್ಕಂಥ ಪವರ್ ಅನ್ನು ಕಟ್ ಮಾಡುತ್ತೇವೆಂದು ಕೆ.ಇ.ಬಿ. ಅವರು ಹೇಳುತ್ತಿದ್ದಾರೆ. ಕಾರ್ಯದರ್ಶಿಗಳು ಅಲ್ಲಿ ಬರತಕ್ಕಂಥ ಕಂದಾಯವನ್ನು ಸರಿಯಾಗಿ ಪಾವತಿ ಮಾಡಿಸಿಕೊಂಡು ಕೆ.ಇ.ಬಿ.ಗೆ ಕಟ್ಟುತ್ತಿಲ್ಲ. ಹಾಗಾಗಿ ದಯಮಾಡಿ ಈಗಿರತಕ್ಕಂಥ ವಿದ್ಯುತ್ ಸಮಸ್ಯೆಯಲ್ಲಿ ಆ ವಿದ್ಯುತ್ತನ್ನೂ ಕಟ್ ಮಾಡಿದರೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಇದು ಒಂದನೇ ಮನವಿ.

ಹಾಗೆಯೇ, ಈಗ ಸರ್ಕಾರವು ಶಾಶ್ವತ ಕುಡಿಯುವ ನೀರಿನ ಯೋಜನೆಯಡಿ ನೂರಾರು ಕೋಟಿ ರೂ.ಗಳನ್ನು ಖರ್ಚು ಮಾಡಿ ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿದೆ. ಈ ರೀತಿ ಯೋಜನೆ

ಮಾಡಿದ ಸಂದರ್ಭದಲ್ಲಿ, ಯೋಜನೆ ಅನುಷ್ಠಾನಗೊಳಿಸಿದ ನಂತರ ಅದನ್ನು ನೋಡಿಕೊಳ್ಳುವುದಕ್ಕೆ ಸರಿಯಾದ Skilled workers ಇಲ್ಲ. ಅವರು ಸರಿಯಾಗಿ ಸುಮಾರು 20–30 ಹಳ್ಳಿಗಳನ್ನು ನೋಡಿಕೊಳ್ಳದಿದ್ದರೆ ಮತ್ತು ಒಂದು ಸಲ ಆ ಯೋಜನೆ ಕೆಟ್ಟು ಹೋದರೆ ಮತ್ತೆ ಸರಿಪಡಿಸುವುದಕ್ಕೆ ತೊಂದರೆಯಾಗುತ್ತದೆ. ಜೊತೆಗೆ, ಆ ಭಾಗದ ಜನರಿಗೂ ತೊಂದರೆವುಂಟಾ ಗುತ್ತದೆ. ಆದುದರಿಂದ, ಅದರ ಕಡೆ ಹೆಚ್ಚು ಗಮನಹರಿಸಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಜೆ.ಡಿ. ನಾಯಕ್ (ಭಟ್ಕಳ) : ಮಾನ್ಯ ಅಧ್ಯಕ್ಷರೆ, ಈಗ ಹಲವು ಮಾನ್ಯ ಶಾಸಕರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ವಿಶೇಷವಾಗಿ ನಾವು ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದಿಂದ ಬಂದವರಾದ ನಾವು ನಮ್ಮ ಜಿಲ್ಲೆ ಕುರಿತು ಹೇಳುವುದಾದರೆ, ಒಂದು ಬದಿ ಕರಾವಳಿ, ಒಂದು ಬದಿ ಗುಡ್ಡಗಾಡು ಮತ್ತೊಂದು ಬದಿ ಬಯಲುಸೀಮೆ. ಹೀಗೆ ಮೂರು ರೀತಿಯ ಭೌಗೋಳಿಕ ಲಕ್ಷಣಗಳು ಸೇರಿಕೊಂಡಿದೆ. ಗುಡ್ಡಗಾಡಿನಲ್ಲಿ ನೀರು ಸಿಗುವುದಿಲ್ಲ. ಇನ್ನೊಂದು ಕಡೆ ಬಯಲುಸೀಮೆ. ಯಾವಾಗಲೂ ಶಾಶ್ವತವಾದ ತೆರೆದ ಬಾವಿ (open well) ಯಲ್ಲಿ ನೀರು ಸಿಗುತ್ತಿತ್ತು. ದಿನಗಳೆದಂತೆ ಜನವರಿ, ಫೆಬ್ರವರಿ, ಮಾರ್ಚ ತಿಂಗಳುಗಳಲ್ಲಿ ಬಯಲು ಸೀಮೆಯಲ್ಲಿ ತೆರೆದ ಬಾವಿಗಳು ಬರಡಾಗುತ್ತಿವೆ. ಜಿಲ್ಲಾ ಪಂಚಾಯತ್ ವತಿಯಿಂದ Mini- Water Scheme ಜಾರಿಗೊಳಿಸಿದ್ದರು. ಇವತ್ತು ಅಲ್ಲಿಯೂ ಖಾಲಿಯಾಗುತ್ತಿದೆ. ಆದುದರಿಂದ, ನಾನು ಹೇಳುವುದಷ್ಟೆ, ಮೈಸೂರು, ಬಿಜಾಪುರ, ಗುಲ್ಬರ್ಗಾ, ಕೋಲಾರ ಜಿಲ್ಲೆಗಳ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಿದ್ದು, ಮುಖ್ಯವಾಗಿ ತಮ್ಮ ಗಮನಕ್ಕೆ ತರುವುದೇನೆಂದರೆ, ಬಯಲು ಸೀಮೆ ಮತ್ತು ಕರಾವಳಿ ಜಿಲ್ಲೆಯತ್ತ ತಾವು ಗಮನಹರಿಸಬೇಕು. ಈಗಲಾದರೂ Scarcity ಯಲ್ಲಿ ಅಲ್ಲಿಗೆ ದುಡ್ಡು ಕೊಡದಿದ್ದರೆ ನಮಗೆ ನೀರಿನ ಸಮಸ್ಯೆ ಇನ್ನೂ ಉಲ್ಬಣಗೊಳ್ಳುತ್ತದೆ. ಮುಖ್ಯವಾಗಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವ ವ್ಯವಸ್ಥೆ ಮಾಡುವುದರಿಂದ, ನಗರ, ಗ್ರಾಮೀಣ ಪ್ರದೇಶ ಇರಬಹುದು, ಎಲೆಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆಯೋ, ಅಲ್ಲಿಗೆ ಟ್ಯಾಂಕರ್‌ಗಳ ಮೂಲಕ ನೀರನ್ನು ಸರಬರಾಜು ಮಾಡುವ ವ್ಯವಸ್ಥೆ ಮಾಡಬೇಕು ಮತ್ತು ಎಲ್ಲಿ ನೀರು ಬತ್ತಿ ಹೋಗಿದೆಯೋ, ವಿಶೇಷವಾಗಿ ಹೊಸದಾಗಿ ಬಾವಿ ತೆಗೆದು, ಅದು ಬೋರ್‌ವೆಲ್ ಇರಬಹುದು

ಅಥವಾ ತೆರೆದ ಬಾವಿಯಾಗಿರಬಹುದು, ಇವುಗಳ ವ್ಯವಸ್ಥೆ ಮಾಡಬೇಕು. ಮಾನ್ಯ ಸದಸ್ಯ ಸ್ನೇಹಿತರಾದ ಪಾಟೀಲರು ಹೇಳಿದಂತೆ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯವರು 3-4 ತಿಂಗಳುಗಳ ಕಾಲ ನಿರಂತರವಾಗಿ ಕೆಲಸ ಮಾಡದಿದ್ದರೆ ಯಾರಿಗೂ ನೀರು ಕೊಡುವ ವ್ಯವಸ್ಥೆ ಯಾಗುವುದಿಲ್ಲ. ಆದುದರಿಂದ, ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇ ನೆಂದರೆ, ಕರಾವಳಿ ಜಿಲ್ಲೆಯಲ್ಲಿ ದಯಮಾಡಿ ಒಬ್ಬೊಬ್ಬ ಶಾಸಕರಿಗೂ ಒಂದು ಕೋಟಿ ರೂ. ನಂತೆ ಅನುದಾನ ಕೊಟ್ಟರೆ ಸ್ವಲ್ಪಮಟ್ಟಿಗೆ ನಮಗೆ ಬರಗಾಲದಲ್ಲಿ ಟ್ಯಾಂಕರ್, ತೆರೆದ ಬಾವಿ, ಕೊಳವೆ ಬಾವಿ ಇಲ್ಲವೇ Mini Water Supply ಮೂಲಕವಾಗಲಿ ನೀರು ಒದಗಿಸಿಕೊಡುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ, ದಯಮಾಡಿ ಒಬ್ಬೊಬ್ಬ ಶಾಸಕರಿಗೂ ತಲಾ 1 ಕೋಟಿ ರೂ. ಬಿಡುಗಡೆ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) : ಸನ್ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಬೀದರ್ ಜಿಲ್ಲೆ ಮೊದಲೇ ಬರಗಾಲವೆಂದು ಘೋಷಿತವಾ ಗಿರುವ ಪ್ರದೇಶವಾಗಿದೆ. ಅದರಲ್ಲೂ ಕಳೆದ 2 ವರ್ಷಕ್ಕಿಂತಲೂ ಮೊದಲು ರಾಜೀವ್ ಗಾಂಧಿ ಸಬ್‌ಮಿಷನ್ ಯೋಜನೆಯಡಿ ಇಡೀ ಜಿಲ್ಲೆಯಲ್ಲಿ ಎರಡು ಸ್ಕೀಮ್‌ಗಳು ಅಪ್ರೂವಲ್ ಆಗಿ, ಮಂಜೂರಾಗಿ ಅದರ ಪಟ್ಟಿ ನಮಗೆಲ್ಲರಿಗೂ ಬಂದಿದೆ. ಒಂದು ಕಂಕಣ ಮತ್ತು ಅದರಿಂದ 14 ಹಳ್ಳಿಗಳು, ಇನ್ನೊಂದು ಜಂಪದ ಮತ್ತು ಅದರಿಂದ 12 ಹಳ್ಳಿಗಳು. ಇದುವರೆಗೂ ಆ ಕಾರ್ಯಕ್ರಮ ಪ್ರಾರಂಭವಾಗಿಲ್ಲ. ಇದು ಮೊದಲನೆಯದು, ಎರಡನೆಯದು, ನಮ್ಮ ಇಡೀ ಜಿಲ್ಲೆ ಕೊಳವೆಬಾವಿಗಳ ಮೇಲೆ ಅವಲಂಬಿತವಾಗಿದೆ. ಸುಮಾರು ಎಷ್ಟೋ ತಾಲ್ಲೂಕುಗಳು ಡಾ: ನಂಜುಂಡಪ್ಪನವರ ಯೋಜನೆಯಲ್ಲಿ ಸೇರಿವೆ. ಸನ್ಮಾನ್ಯ ಮುಖ್ಯಮಂತ್ರಿಗಳು ಈಗ ಸದನದಲ್ಲಿದ್ದಾರೆ. ಅವರ ಗಮನಕ್ಕೆ ತರಬಯಸುವು ದೇನೆಂದರೆ, ನಂಜುಂಡಪ್ಪನವರ ವರದಿ ಅನುಷ್ಠಾನದಲ್ಲಿ ವರ್ಷಕ್ಕೆ 2,500 ಕೋಟಿ ರೂ. ತಾವು ಕೊಡುತ್ತಿದ್ದೀರಿ. ಮೊಟ್ಟಮೊದಲು ಶಶಿಲ್ ನಮೋಶಿ ಯವರನ್ನು ನಂಜುಂಡಪ್ಪನವರ ವರದಿಯ ಅನುಷ್ಠಾನ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಿಸಿದ್ದು, ಅವರಿಗೂ ಮೊದಲ ಆದ್ಯತೆಯನ್ನು ನೀರಿಗೆ ಕೊಡಬೇಕು ಎಂದು ಹೇಳಿದ್ದೇನೆ. ಶಾಶ್ವತವಾದ ಕುಡಿಯುವ ನೀರಿನ ಯೋಜನೆಗಳಿಗೆ ಮೊದಲು ದುಡ್ಡು ಕೊಡಬೇಕೆಂದು ಅವರಿಗೂ ನಾನು ಹೇಳಿದ್ದೇನೆ. 4 ನೇ ವರ್ಷಕ್ಕೆ ತಾವು ಹಣವನ್ನು ಅಲೊಕೇಶನ್ ಮಾಡಿದ್ದರೂ

ಇವತ್ತಿನವರೆಗೂ ನಮ್ಮ ತಾಲ್ಲೂಕಿನಲ್ಲಿ ಶಾಶ್ವತವಾದ ನೀರಿನ ಯೋಜನೆ ಬಂದಿಲ್ಲ. ಹಾಗಾಗಿ, ದಯವಿಟ್ಟು ತಾವು ಅದರ ಬಗ್ಗೆ ಗಮನಹರಿಸಬೇಕು. ತಾವು ಸಮಿತಿಯ ಅಧ್ಯಕ್ಷರನ್ನು ಕರೆಸಿ ಮೊದಲ ಆದ್ಯತೆಯನ್ನು ನೀರಿಗೆ ಕೊಟ್ಟು, ಅನಂತರ ಬೇರೆ ಕೆಲಸಗಳನ್ನು ಮಾಡಬೇಕೆಂದು ಹೇಳುವ ನಿಟ್ಟಿನಲ್ಲಿ ತಾವು ಪ್ರಯತ್ನಿಸಬೇಕೆಂದು ತಮಗೆ ಅಧ್ಯಕ್ಷರ ಮೂಲಕ ಹೇಳಬಯಸುತ್ತೇನೆ.

ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಎಲ್ಲಾ ಮಾನ್ಯ ಸದಸ್ಯರು ಕುಡಿಯುವ ನೀರಿನ ಬಗ್ಗೆ ಮಾತನಾಡಿದ್ದಾರೆ. ಈಗ ನಾವು ಕೋಲಾರ ಜಿಲ್ಲೆಯ ಸುಮಾರು 6 ತಾಲೂಕುಗಳಲ್ಲಿ ಕುಡಿಯುವ ನೀರಿಗಾಗಿ 1,100 ರಿಂದ 1,200 ಅಡಿಗಳವರೆಗೆ ಕೊರೆದಿದ್ದೇವೆ. ಮುಳಬಾಗಿಲು ಅತಿ ಹಿಂದುಳಿದ ತಾಲ್ಲೂಕಾಗಿದ್ದು, ಅಲ್ಲಿನ ಸುಮಾರು 100 ಹಳ್ಳಿಗಳಲ್ಲಿ ಕೊಳವೆ ಬಾವಿಗಳು ಬತ್ತಿಹೋಗಿವೆ. ಆ 100 ಹಳ್ಳಿಗಳಿಗೂ ನಾವು ಹೋಗುವುದಕ್ಕಾಗುವುದಿಲ್ಲ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಚಿವರು ಕುಡಿಯುವ ನೀರಿಗಾಗಿ ನಮಗೆ ಹೆಚ್ಚಿನ ಅನುದಾನ ಕೊಟ್ಟು, ಈಗಾಗಲೇ ಕೊರೆದಿರುವ ಕೊಳವೆ ಬಾವಿಗಳ ಪೈಕಿ ಸುಮಾರು 50 ಲಕ್ಷ ರೂ. ಬಾಕಿ ಇದೆ. ಕೊಳವೆ ಬಾವಿಗಳನ್ನು ಕೊರೆಯುವುದಕ್ಕೆ ಯಾರೂ ಮುಂದೆ ಬರುತ್ತಿಲ್ಲ. ಮತ್ತು ಈಗಾಗಲೇ ವಿದ್ಯುತ್ ಇಲ್ಲದ ಕಾರಣ ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಅಳವಡಿಸಿದಲ್ಲಿ ಕುಡಿಯಲು ನೀರು ಕೊಡಲು ಸಾಧ್ಯವಾಗುತ್ತದೆ. ಕೊಳವೆ ಬಾವಿಗಳ ಕೈಪಂಪುಗಳು ಕೆಟ್ಟು ಹೋಗಿರುವುದರಿಂದ ಅವುಗಳನ್ನು ದುರಸ್ತಿಗೊಳಿಸಿದಲ್ಲಿ ನಿಜವಾಗಿಯೂ ಅನುಕೂಲವಾಗುತ್ತದೆ. ಎಲ್ಲೆಲ್ಲಿ ಕೊಳವೆ ಬಾವಿಗಳಿವೆಯೋ, ಅಲ್ಲಿ ಕೈಪಂಪುಗಳನ್ನು ಅಳವಡಿಸಬೇಕು. ಸದ್ಯಕ್ಕೆ ಯಾವುದೇ ಕೊಳವೆ ಬಾವಿಗಳ ಕೈಪಂಪುಗಳು ಕೆಲಸ ಮಾಡುತ್ತಿಲ್ಲ. ಅಲ್ಲಿ ಸಿಬ್ಬಂದಿ ಇರುವುದಿಲ್ಲ, ಯಾರೂ ಇರುವುದಿಲ್ಲ. ವಿದ್ಯುತ್ ಸೌಲಭ್ಯ ಇಲ್ಲದಿದ್ದರೆ, ಕೈಪಂಪುಗಳನ್ನಾದರೂ ಅಳವಡಿಸಿಕೊಂಡು ಕುಡಿಯುವ ನೀರು ಒದಗಿಸಬಹುದಾಗಿದೆ. ಇದರ ಜೊತೆಗೆ, ನಮ್ಮ ಕೋಲಾರ ಜಿಲ್ಲೆಯಿಂದ 2 ತಿಂಗಳಿಗೋಸ್ಕರ 11 ಕೋಟಿ ರೂ. ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ತಾವು ದಯವಿಟ್ಟು ಅದನ್ನೂ ಕೂಡ ಮಂಜೂರು ಮಾಡಿಕೊಡಬೇಕು. ಕಳೆದ ವರ್ಷದ ಅನುದಾನದಲ್ಲಿ 3 ಕೋಟಿ ರೂ.ಗಳಿಗೆ ಪ್ರಾವಿಜನ್ ಮಾಡಲಾಗಿತ್ತು. ಅದರಲ್ಲಿ 60 ಲಕ್ಷ ರೂ. ಬಿಡುಗಡೆ ಮಾಡಿದ್ದು, ಇನ್ನು 2.40 ಲಕ್ಷ ರೂ. ಬಾಕಿ ಇರುವುದರಿಂದ, ದಯವಿಟ್ಟು ಅದನ್ನೂ ಮಂಜೂರು ಮಾಡಿಕೊಡಬೇಕೆಂದು ತಮ್ಮಲ್ಲಿ ಕೋರುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

O.30 F-67

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು) : ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರು ಕುರಿತಂತೆ ಎರಡು ತರಹದ ಸಮಸ್ಯೆಗಳಿವೆ. ಒಂದು ಕಡೆ ನೀರಿದ್ದರೂ ಕುಡಿಯುವುದಕ್ಕಾಗುತ್ತಿಲ್ಲ. ಇನ್ನೊಂದೆಡೆ ಕುಡಿಯುವುದಕ್ಕೆ ನೀರಿಲ್ಲ. ನಾವು ಶನಿವಾರದಂದು ಕುಡಿಯುವ ನೀರಿನ ಬಗ್ಗೆ ಪಂಚಾಯಿತಿಯ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಜಿಲಾ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರುಗಳೊಂದಿಗೆ ಸಭೆ ನಡೆಸಿದ್ದೇವೆ. ಅಲ್ಲಿ ವಿದ್ಯುತ್ ಕೊರತೆಯಿಂದ ಬಹಳಷ್ಟು ಕಡೆ ಕುಡಿಯುವ ನೀರಿಗೆ ತೊಂದರೆಯಾಗುತ್ತಿದೆ. ಈಗ ಒಂದು ಕೊಳವೆ ಬಾವಿ ಕೊರೆಸಿ ಮೋಟಾರ್ ಅಳವಡಿಸಬೇಕೆಂದರೆ 50 ಸಾವಿರ ರೂ.ಗಳಷ್ಟು ಹಣವನ್ನು ಠೇವಣಿ ಇಡಬೇಕಾಗುತ್ತದೆ. ಇಷ್ಟು ಹಣವನ್ನು ಠೇವಣಿಯಾಗಿರಿಸಿದರೆ ಕೆಇಬಿಯವರು ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುತ್ತಾರೆ. ಹಣವನ್ನು ಠೇವಣಿಯಾಗಿಡದ ವಿನಾ ವಿದ್ಯುತ್ ಸಂಪರ್ಕ ಕೊಡುತ್ತಿಲ್ಲ. ಹಾಗಾಗಿ, ಅಷ್ಟು ಹಣವನ್ನು ತುಂಬುದವುಕ್ಕೆ ಅವರ ಬಳಿ ದುಡ್ಡಿಲ್ಲ. ನೀವು scarcity ಅಥವಾ ಯಾವುದರಲ್ಲಾದರೂ ಹಣ ತುಂಬುವ ವ್ಯವಸ್ಥೆ ಮಾಡಬೇಕು. ವಿದ್ಯುತ್ ಸಂಪರ್ಕ ಕಲ್ಪಿಸದಿದ್ದರೂ ಸ್ಕೀಮ್ ಸಿದ್ಧವಾಗಿವೆ. ಕೆಇಬಿಯಿಂದ ವಿದ್ಯುತ್ ಸಂಪರ್ಕ ಇಲ್ಲದ್ದರಿಂದ ಕುಡಿಯುವುದಕ್ಕೆ ನೀರಿಲ್ಲ. ಇದರ ಬಗ್ಗೆ ಈಗಾಗಲೇ ಅಲ್ಲಿಯ ಸಿಇಓ ಮತ್ತು ಡಿ.ಸಿ.ಯವರ ಗಮನಕ್ಕೂ ತಂದಿದ್ದೇವೆ. ಮೊನ್ನೆ ಜಿಲ್ಲಾ ಉಸ್ತವಾರಿ ಸಚಿವರಾದ ಸಿ.ಎಂ.ಉದಾಸಿಯವರು ಜಿಲ್ಲೆಗೆ ಬಂದಾಗಲೂ ಇದರ ಬಗ್ಗೆ ಚರ್ಚೆಯಾಗಿದೆ. ಅವರು ನಿಮಗೆ ಎಷ್ಟು ಹಣ ಬೇಕು ಎಂದು ಕೇಳಿದ್ದಕ್ಕೆ ಆ ಕುರಿತಾದ ಮನವಿ ಕೂಡ ಸಲ್ಲಿಸಲಾಗಿದೆ. ಮೊನ್ನೆ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ಇಂತಿಷ್ಟು ಗಂಟೆ ವಿದ್ಯುತ್ ಕೊಡುತ್ತೇವೆಂದು ಹೇಳಿದರು. ದಯವಿಟ್ಟು ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ತಾವು ಇಲ್ಲಿ ಆಶ್ವಾಸನೆ ಕೊಟ್ಟ ನಂತರ ಯಾವುದೂ ಕೂಡ ಈಡೇರಿಲ್ಲ. ಅಲ್ಲಿ 7 ಗಂಟೆ ವಿದ್ಯುತ್ ಇಲ್ಲ. ಮೂರು ಗಂಟೆ ವಿದ್ಯುತ್ ಕೊಟ್ಟು ನಂತರ ಮೂರು ಗಂಟೆ ಅಂತರದಲ್ಲಿ ವಿದ್ಯುತ್ ಕಡಿತಗೊಳಿಸಿ ಮತ್ತೆ ಮೂರು ಗಂಟೆ ವಿದ್ಯುತ್ ಕೊಡುವುದರಿಂದ ದೊಡ್ಡ ಹಳ್ಳಿಗಳಿಗೆ ನೀರು ತುಂಬಿಸುವುದಕ್ಕಾಗುತ್ತಿಲ್ಲ. ತಾವು ಇಲ್ಲಿ ಹೇಳಿದ್ದರೂ, ತಮ್ಮ ಭರವಸೆ ಅಲ್ಲಿ ಈಡೇರುತ್ತಿಲ್ಲ. ಆದುದರಿಂದ, ಅದನ್ನು ಸರಿಪಡಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ನಮ್ಮ ಪರಿಸ್ಥಿತಿ ಹೇಗಿದೆಯೆಂದರೆ, ರಾಯಚೂರು ಜಿಲ್ಲೆಯವರಾದ ನಾವು ವಿದ್ಯುತ್ ಉತ್ಪಾದಿಸುವವರಾಗಿದ್ದರೂ, ದೀಪದ ಕೆಳಗೆ ನಮಗೆ ಕತ್ತಲು!

ನಾವು ನಿಮಗೆ ವಿದ್ಯುತ್ ಕೊಡುತ್ತೇವೆ. ಎಲ್ಲಾ ಕಡೆಗಳಲ್ಲೂ ಗಲಾಟೆ ಮಾಡುತ್ತಾ ನೀವು ಹೋಗಬಾರದೆಂದು ರಾಯಚೂರಿನವರಾದ ನಾವು ಸಹಕರಿಸುವ ಮೂಲಕ ಹೊಸ ಯೋಜನೆಗಳಿಗೆ ಅನುವು ಮಾಡಿಕೊಟ್ಟಿದ್ದೇವೆ. ಆದರೆ ರಾಯಚೂರು ಜಿಲ್ಲೆಯವರಾದ ನಮ್ಮನ್ನು ಕತ್ತಲೆಯಲ್ಲಿಟ್ಟಿದ್ದೀರಿ. ಹಿಂದೆ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಹೈದರಾಬಾದ್-ಕರ್ನಾಟಕಕ್ಕೆ 24 ಗಂಟೆಗಳ ಕಾಲ ವಿದ್ಯುತ್ ಕೊಡಬೇಕಾಗುತ್ತದೆಂದು ನಾವು ಅವರಲ್ಲಿ ವಿನಂತಿಸಿಕೊಂಡಿದ್ದೆವು.

ಅಲ್ಲಿ ವಿಪರೀತ ಬಿಸಿಲು 42 ರಿಂದ, 43, 44 ಡಿಗ್ರಿಗಳವರೆಗೂ ತಾಪಮಾನವಿರುತ್ತದೆ. ಅಲ್ಲಿ ನಾವು ಜೀವನ ಮಾಡುವುದು ಕಷ್ಟವಾಗುತ್ತದೆ. ಆದುದರಿಂದ, 24 ಗಂಟೆಗಳ ಕಾಲ ವಿದ್ಯುತ್ ಕೊಡುವ ವ್ಯವಸ್ಥೆ ಮಾಡಿದರು. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ವಿದ್ಯುತ್ ಉತ್ಪಾದನೆ ಮಾಡುವ ಜಿಲ್ಲೆಯವರಿಗೆ 24 ಗಂಟೆಗಳ ಕಾಲ ವಿದ್ಯುತ್ ಕೊಡುವ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ, ಜೀವನ ನಡೆಸುವುದು ಕಷ್ಟವಾಗುತ್ತದೆ. ನಮ್ಮ ಮನವಿ ಏನೆಂದರೆ, ವಿದ್ಯುತ್ ಸಂಪರ್ಕ ಕಲ್ಪಿಸುವ ಸಂಬಂಧ 50,000 ರೂ.ಗಳನ್ನು ಕೆಇಬಿಗೆ ತುಂಬಲು ತಾವು ಡಿ.ಸಿ.ಯವರಿಗೆ ನಿರ್ದೇಶನ ನೀಡಿದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಅನುಕೂಲವಾಗುತ್ತದೆ.

ಶ್ರೀ ಆರ್. ನರೇಂದ್ರ (ಹನೂರು) : ಮಾನ್ಯ ಅಧ್ಯಕ್ಷರೆ, ಚಾಮರಾಜ ನಗರ ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಕೊಳ್ಳೇಗಾಲ ಬರಪೀಡಿತ ಪ್ರದೇಶವೆಂದು ಘೋಷಣೆಯಾಗಿದೆ. ಇವತ್ತಿನ ದಿವಸ ಶಾಸಕರಾದ ನಾವು ಯಾವ ಗತಿಯಲ್ಲಿದ್ದೇವೆಂದರೆ, ನಾವು ಯಾವುದೇ ಊರಿಗೆ ಹೋದರೂ ನಮ್ಮನ್ನು ಹೇಗೆ ಸ್ವಾಗತಿಸುತ್ತಾರೆಂದರೆ, ಖಾಲಿ ಬಿಂದಿಗೆ, ಖಾಲಿ ಕೊಡ ಹಿಡಿದುಕೊಂಡು ನಮ್ಮ ಮುಂದೆ ಹೆಂಗಸರು ಬಂದು ನಿಲ್ಲುತ್ತಾರೆ. ಪ್ರತಿಯೊಂದು ಊರಿಗೆ ಹೋದರೆ ನಾವು ಅವರನ್ನು ದಾಟಿ ಮುಂದೆ ಹೋಗದಿರುವ ಪರಿಸ್ಥಿತಿಯಲ್ಲಿದ್ದೇವೆ. ಇವತ್ತು ಶಾಸಕರಾಗಿ ನಾವು ಎರಡು ಕೆಲಸಗಳನ್ನು ಮಾಡಬೇಕಾಗುತ್ತದೆ. ಎಲ್ಲೆಲ್ಲಿ ಕುಡಿಯಲು ನೀರಿಲ್ಲವೋ, ಅಲ್ಲಿ ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆಸುವ ಕೆಲಸ ಮಾಡಬೇಕಾಗುತ್ತದೆ. ಇದರ ಜೊತೆಗೆ, ಕೆಟ್ಟಿರುವ ಕೊಳವೆಬಾವಿಗಳನ್ನು ರಿಪೇರಿ ಮಾಡುವ ಸ್ಥಿತಿ ಶಾಸಕರುಗಳಿಗೆ ಬಂದಿದೆ. ಏಕೆಂದರೆ, ಯಾವುದೇ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯದರ್ಶಿಗಳನ್ನು, ಅಧ್ಯಕ್ಷರುಗಳನ್ನು ಕೊಳವೆ ಬಾವಿಗಳನ್ನು ರಿಪೇರಿ ಮಾಡಿಸಿ ಎಂದರೆ,

ನಮ್ಮ ಹತ್ತಿರ ಒಂದು ರೂ. ಸಹ ಅನುದಾನ ಇಲ್ಲ, ನೀವೆ ರಿಪೇರಿ ಮಾಡಿಸಿ ಎನ್ನುತ್ತಾರೆ. ಕೊಳವೆ ಬಾವಿಗಳನ್ನು ರಿಪೇರಿ ಮಾಡಿಸುವುದಕ್ಕೆ ಗ್ರಾಮ ಪಂಚಾಯಿತಿಯಲ್ಲಿ ದುಡ್ಡಿಲ್ಲವೆಂದು ಪಂಚಾಯಿತಿ ಕಾರ್ಯದರ್ಶಿಯವರು ಹೇಳುತ್ತಿರುವುದರಿಂದ ಕುಡಿಯುವ ನೀರಿಗೆ ಬಹಳ ತೊಂದರೆಯುಂಟಾಗಿದೆ.

ಉದಾಹರಣೆಗೆ ನನ್ನ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಸುಮಾರು 2350 ಕೈಪಂಪುಗಳಿವೆ, ಕಿರು ನೀರು ಸರಬರಾಜು ಯೋಜನೆ 305 ಇವೆ. 165 ಓವರ್ ಹೆಡ್‌ಟ್ಯಾಂಕ್‌ಗಳಿವೆ. ಇದರಲ್ಲಿ ಅರ್ಧದಷ್ಟು ಕೊಳವೆ ಬಾವಿಗಳು ಕೆಟ್ಟು ಹೋಗಿದೆ, ಅರ್ಧದಷ್ಟು ಬತ್ತಿಹೋಗಿದೆ. ಆದ್ದರಿಂದ ಇವತ್ತಿನ ದಿವಸ ಕೊನೆಯ ಪಕ್ಷ 3 ತಿಂಗಳಾದರೂ ಜನರಿಗೆ ನೀರನ್ನು ಕೊಡಬೇಕು ಎಂದರೆ ಒಂದೊಂದು ಕ್ಷೇತ್ರಕ್ಕೆ 2 ಕೋಟಿ ಹಣವನ್ನು ಬಿಡುಗಡೆ ಮಾಡಿದರೆ ಮಾತ್ರ ಒಳ್ಳೆಯ ನೀರನ್ನು ಕೊಡಲು ಸಾಧ್ಯ. ಅದನ್ನು ಬಿಟ್ಟು ಮಾನ್ಯ ಸಚಿವರು ಹೇಳಿದಂತೆ 10–15, 20–30 ಲಕ್ಷ ರೂ. ಕೊಟ್ಟರೆ ಖಂಡಿತಾ ಇದನ್ನು ನಿಭಾಯಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಒಂದೊಂದು ಕ್ಷೇತ್ರಕ್ಕೆ ಕೊನೆಯ ಪಕ್ಷ 2 ಕೋಟಿ ಹಣವನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಅಭಾವ ರಾಜ್ಯಾದ್ಯಂತ ನೋಡುತ್ತಿದ್ದೇವೆ. ಅದಕ್ಕೆ ಎರಡು ರೀತಿಯ ಅಭಾವವಿದೆ. ಒಂದು, ವಿದ್ಯುತ್ ಅಭಾವ, ಎರಡನೆಯದ್ದು ಬೋರ್ ವೆಲ್‌ಗಳು ಡ್ರೈಅಪ್ ಆಗಿರುವುದು. ತಾವು ಕುಡಿಯುವ ನೀರಿಗಾಗಿಯೇ ಟಿ.ಸಿ. (ಟ್ರಾನ್ಸ್ ಫಾರ್ಮರ್)ಗಳನ್ನು ಸೆಪರೇಟ್ ಆಗಿ ಅಳವಡಿಸಲು ಪ್ರಯತ್ನ ಪಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ, ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆ ರೀತಿ ಮಾಡಿದರೆ ಕನಿಷ್ಠ ಪಕ್ಷ ಪಂಪ್‌ಗಳಾದರೂ safe ಇರುತ್ತವೆ. ಇಲ್ಲದಿದ್ದರೆ ಎರಡೆರಡು ದಿವಸಕ್ಕೆ ಒಂದು ದಿವಸ ಅದು burn ಆಗುತ್ತವೆ. ಆ ರೀತಿ burn ಆಗಿರುವುದನ್ನು replacement ಮಾಡುವುದಕ್ಕೆ ಮತ್ತೇ ಒಂದು ವಾರ ಹೋಗುತ್ತದೆ. ಆದ್ದರಿಂದ ಅಲ್ಲಿ ನಿರಂತರ ಕುಡಿಯುವ ನೀರಿನ ಸಮಸ್ಯೆ ತಲೆದೋರುತ್ತದೆ. ಆದ್ದರಿಂದ ಆ ಕಡೆ ಒತ್ತು ಕೊಡಬೇಕೆಂದು ಅವರಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ. 3 ಫೇಸ್ ವಿದ್ಯುತ್‌ನ್ನು 6 hours ನಿರಂತರವಾಗಿ ಕೊಡುತ್ತೇವೆಂದು ಹೇಳುತ್ತಾರೆ. ಆದರೆ, ಅದು ಆಗುತ್ತಿಲ್ಲ. ಬಹಳ ದೂರದಿಂದ ನೀರು

ತರುತ್ತಿದ್ದಾರೆ. ಕೆಲವು ಕಡೆ ಓವರ್ ಹೆಡ್‌ಟ್ಯಾಂಕ್‌ಗೆ ನೀರೇ ಹೋಗುತ್ತಿಲ್ಲ. ಕೆಲವು ಕಡೆ ನೀರು ಇದ್ದರೂ ಕೊಡಲು ಆಗುತ್ತಿಲ್ಲ. ಆದ್ದರಿಂದ ನಿರಂತರವಾಗಿ ಕನಿಷ್ಠ 6 ಗಂಟೆಗಳ ಕಾಲ ವಿದ್ಯುತ್‌ನ್ನು ಕೊಟ್ಟರೆ ಮಾತ್ರ ಕುಡಿಯುವ ನೀರಿನ ಸಮಸ್ಯೆಯನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ರಾಜ್ಯಾದ್ಯಾಂತ ಎಲ್ಲೆಲ್ಲಿ ಕುಡಿಯುವ ನೀರಿನ ಅಭಾವವಿದೆ ಅದರ ವರದಿಯನ್ನು ಟಾಸ್ಕ್ ಫೋರ್ಸ್ ಎಂದು ಶಾಸಕರ ಸಮಿತಿಯೇನಿದೆ ಅಲ್ಲಿ ತೆಗೆದುಕೊಂಡು ಕೊನೆಯ ಪಕ್ಷ ಒಂದು ತಾಲ್ಲೂಕಿಗೆ ಎರಡು ಕೋಟಿ ಅನುದಾನವನ್ನು ಕೊಟ್ಟರೆ ಮಾತ್ರ ಈ ಸಮಸ್ಯೆಯನ್ನು ತಾತ್ಕಾಲಿಕವಾಗಿ ಪರಿಹಾರ ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) (ದೇವರ ಹಿಪ್ಪರಗಿ) : ಮಾನ್ಯ ಅಧ್ಯಕ್ಷರೆ, ಬಹುಶಃ ನಮ್ಮ ಬಿಜಾಪುರ ಜಿಲ್ಲೆಗೆ ಬಹಳ ದೊಡ್ಡ ಮಳೆಯಾಗಿದೆ. ಆದರೆ ಇವತತಿನ ಪರಿಸ್ಥಿತಿ ಯಾವ ರೀತಿ ಇದೆಯೆಂದೆ 5 ನದಿಗಳು ನಮ್ಮ ಜಿಲ್ಲೆಯಲ್ಲಿ ಹರಿದರೂ ಅತಿ ಹೆಚ್ಚಿನ ಎತ್ತರದ ಪ್ರದೇಶದಲ್ಲಿರತಕ್ಕಂಥ, ವಿಶೇಷವಾಗಿ ದೋಣಿ ನದಿ ಅಕ್ಕ ಪಕ್ಕದಲ್ಲಿ ಬರತಕ್ಕ ಒಟ್ಟಾರೆ ಮೂರು ತಾಲ್ಲೂಕುಗಳಲ್ಲಿ ನಾವೇನು Salt Water ಎಂದು ಕರೆಯುತ್ತೇವೆ ಅದು ಬೋರ್‌ವೆಲ್ ಕೊರೆದರೆ ಬರುತ್ತದೆ. ಕುಡಿಯಲು ಉತ್ತಮವಾದ ನೀರು ಸಿಗುವುದಿಲ್ಲ. ನಮ್ಮಲ್ಲಿ ಮಳೆ ಬಂದಂಥ ಸಂದರ್ಭದಲ್ಲಿ ಕೆರೆಗಳಲ್ಲಿ ನೀರನ್ನು ಸಂಗ್ರಹಣ ಮಾಡಿ ಅದರಿಂದ ಉಪಯೋಗ ಮಾಡುತ್ತಾರೆ. ಆದರೆ, ನಮ್ಮ ಜಿಲ್ಲೆಯಲ್ಲಿ ವಿಶೇಷವಾಗಿ ಬಹಳ ಮುಖ್ಯವಾಗಿ ಕಷ್ಟವಾದ ಪರಿಸ್ಥಿತಿ ಹೊಂದಿರತಕ್ಕದ್ದು, ಸಿಂಧಗಿ ತಾಲ್ಲೂಕು, ಬಾಗೇವಾಡಿ ತಾಲ್ಲೂಕಿನ ನನ್ನ ಮತಕ್ಷೇತ್ರದಲ್ಲಿರತಕ್ಕ ಹೂವಿನ ಹಿಪ್ಪರಗಿ ಹೋಬಳಿ ಮತ್ತು ಶಿಂಧಗಿ ತಾಲ್ಲೂಕಿನ ದೇವರ ಹಿಪ್ಪರಗಿ ಹೋಬಳಿ. ಈ ಎರಡೂ ಹೋಬಳಿಯಲ್ಲಿ ಪ್ರತಿ ಗ್ರಾಮದಲ್ಲಿ 2–3 ತಿಂಗಳ ಕಾಲ ಕುಡಿಯುವ ನೀರಿನ ಸಮಸ್ಯೆ ಭಯಂಕರವಾಗಿರುತ್ತದೆ. ಆದ್ದರಿಂದ ನಮಗೆ ಟಾಸ್ಕ್‌ಫೋರ್ಸ್ ಎಂದು ಶಾಸಕರಿಗೆ ಏನು ಅಧಿಕಾರ ಕೊಟ್ಟಿದ್ದೀರಿ ಅದರಲ್ಲಿ 20–30 ಲಕ್ಷ ರೂ. ಕೊಡತಕ್ಕದ್ದು ಮಾತ್ರವಲ್ಲದೆ ತಾವು ಒಂದು ಆದೇಶ ಹೊಡಿಸಬೇಕು. ಯಾವ್ಯಾವ ಕ್ಷೇತ್ರದಲ್ಲಿ ಶಾಸಕರು ಸಂಚಾರ ಮಾಡಿದಂಥ ಸಂದರ್ಭದಲ್ಲಿ ಯಾವ್ಯಾವ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ತಕ್ಷಣ ಸ್ಪಂದಿಸಿಯೆಂದು ಶಾಸಕರ ಪತ್ರ ಡಿ.ಸಿ. ಯವರಿಗಾಗಲಿ ಜಿಲ್ಲಾಪಂಚಾಯಿತಿಯ ಸಿ.ಇ.ಓ. ರವರಿಗಾಗಲಿ ಹೋದರೆ ಅದಕ್ಕೆ ತಕ್ಷಣ ಸ್ಪಂದನೆ ಮಾಡುವ ಕನಿಷ್ಠ ಸೌಜನ್ಯವಾದರೂ ಆ ಅಧಿಕಾರಿಗಳು ತೋರಿಸ

ಬೇಕಾಗುತ್ತದೆ. ಉದಾಹರಣೆಗೆ ಹೇಳುತ್ತೇನೆ, ನನ್ನ ಕ್ಷೇತ್ರದಲ್ಲಿ ಬೆಕ್ಕಿನಾಳ ಎಂದು ಒಂದು ಗ್ರಾಮ ಬರುತ್ತದೆ. ಒಂದು ಸಲ ಅಲ್ಲಿಗೆ ಹೋದಾಗ 15 ದಿವದ ನೀರು ಇರಲಿಲ್ಲ. ತಕ್ಷಣವೇ ನಾನು ಸಿ.ಇ.ಓ. ರವರೊಂದಿಗೆ ಮಾತನಾಡಿ ಅಲ್ಲಿಂದ 3 ಕಿಲೋ ಮೀಟರ್ ದೂರದಿಂದ ಎಂಟು ದಿವಸದಲ್ಲಿ ಪೈಪ್ ಲೈನ್ ಮಾಡಿ ನೀರು ಕೊಡಿಸಬೇಕೆಂದು ಹೇಳಿದಾಗ ಅವರು ಓ.ಕೆ. ಎಂದು ಹೇಳಿದ್ದರು. ನಾನೇ ಸ್ವತಃ ಅದರ ಮುತುವರ್ಜಿ ವಹಿಸಿ ಮಾಡಿಸಿದರೆ ಇವತ್ತಿಗೂ, ಒಂಭತ್ತು ತಿಂಗಳಲ್ಲಿ 25 ಸಲ ಫೋನ್ ಮಾಡಿ ಮನವಿ ಮಾಡಿ ಆ ಬಿಲ್ಲನ್ನು ಕ್ಲಿಯರ್ ಮಾಡಲು ಹೇಳಬೇಕಾಯಿತು. ಆದ್ದರಿಂದ ಮೇನ್ ಟೆನೆನ್ಸ್‌ನ್ನು ದಯಮಾಡಿ ಗ್ರಾಮಪಂಚಾಯಿತಿಗೆ ಕೊಡಬೇಡಿ. ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗಳ ಬಗ್ಗೆ ಹೇಳಿದ್ದಾರೆ. ಮೂರು ಮೂರು ಗ್ರಾಮ ಪಂಚಾಯಿತಿಗೆ ಒಬ್ಬರು ಕಾರ್ಯದರ್ಶಿ ಇರುವ ಪರಿಸ್ಥಿತಿ ಇದೆ. ಒಂದು ತಾಲ್ಲೂಕಿನಲ್ಲಿ 40 ಗ್ರಾಮ ಪಂಚಾಯಿತಿ ಇದ್ದರೆ ಕೇವಲ 7 ಜನ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯವರಿದ್ದಾರೆ. ಅವರು ಯಾವ ಊರಿಗೆ ಹೋಗಬೇಕು? ಎಲ್ಲಿ ಮೇನ್‌ಟೆನೆನ್ಸ್ ಮಾಡಬೇಕು? ನಾವು ಇವತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗೆ ಎಲ್ಲರೂ ಬೈಯುತ್ತೇವೆ. ಆದರೆ, ಅವರ ಪರಿಸ್ಥಿತಿ ಏನಾಗಿದೆಯೆಂದರೆ, ಅವರು ಅಂಗಡಿಯಲ್ಲಿ ಸಾಲ ಮಾಡಿ ಪೈಪನ್ನು ತಂದು ರಿಪೇರಿ ಮಾಡಿದ್ದಾರೆ, ಮೋಟಾರ್‌ನ್ನು ರಿಪೇರಿ ಮಾಡಿದ್ದಾರೆ, ಅವರಿಗೆ ಒಂದೊಂದು ಪಂಚಾಯಿತಿಯಿಂದ 1–2 ಲಕ್ಷ ರೂ. ಬಾಕಿ ಹಣ ಕೊಡ ಬೇಕಾಗಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಕೆ. ಸುರೇಶ್‌ಗೌಡ (ನಾಗಮಂಗಲ) : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆ ಮಾನ್ಯ ಮುಖ್ಯಮಂತ್ರಿಯವರ ತವರೂರು. ಆ ಜಿಲ್ಲೆಯ ನಾಗಮಂಲ, ಕೆ.ಆರ್. ಪೇಟೆ ಮತ್ತು ಮಳವಳ್ಳಿ ಅತ್ಯಂತ ಹಿಂದುಳಿದ ತಾಲ್ಲೂಕುಗಳು ಎಂದು ಗೊತ್ತಾಗಿದೆ. ನಿನ್ನೆ ಯುಗಾದಿ ಹಬ್ಬ ಇತ್ತು. ನನಗೆ ಇರಬಹುದು, ಚಂದ್ರಶೇಖರ್‌ರವರಿಗೆ ಇರಬಹುದು, ನಮ್ಮ ಜಿಲ್ಲೆಯ ಬಹುತೇಕ ಶಾಸಕರಿಗೆ ನಿನ್ನೆ ಜನರ ಬೈಗುಳದಿಂದ ಹೊಸ ವರ್ಷ ಪ್ರಾರಂಭವಾಗಿದೆ. ರಾತ್ರಿ ಎರಡು ಗಂಟೆಯಲ್ಲಿ ಫೋನ್ ಮಾಡಿ ನೀವು ಮತ್ತು ನಿಮ್ಮ ಹೆಂಡತಿ ಮಕ್ಕಳು ಚೆನ್ನಾಗಿ Current ಇಟ್ಟುಕೊಂಡು, ನೀರು ಕುಡಿದುಕೊಂಡು ಇದ್ದರೆ ನಮಗೇನು ಬೇಡವೇ? ಎಂದು ಕೇಳುತ್ತಾರೆ. ನಮಗೆ hurt ಆಗುತ್ತಿದೆ. ಎರಡು

ತಿಂಗಳ ಹಿಂದೆ ಇದರ ಬಗ್ಗೆ ಜಿಲ್ಲಾ ಆಡಳಿತಾಧಿಕಾರಿಯವರ ಗಮನಕ್ಕೆ ತಂದಾಗ 'ನಿಮಗೆ ಎಲ್ಲೆಲ್ಲಿ ಬೋರ್‌ವೆಲ್‌ಗಳು ಬೇಕೋ ಅಲ್ಲಿ ತೆಗೆದುಕೊಳ್ಳಿ' ಎನ್ನುವ ಮಾತನ್ನು ಹೇಳಿದ್ದರು. ಆ ರೀತಿ ನಾವು ಸುಮಾರು 30 ಬೋರ್‌ವೆಲ್‌ಗಳನ್ನು ತೆಗೆಸಿದ್ದೇವೆ. ಒಳ್ಳೆಯ ನೀರು ಸಹಾ ಬಂದಿದೆ. ಆದರೆ, ಪರಿಸ್ಥಿತಿ ಏನಾಗಿದೆಯೆಂದರೆ, ಆ ಬೋರ್‌ವೆಲ್ ತೆಗೆದವರಿಗೆ ಯಾರು ಬಿಲ್ಲನ್ನು ಕೊಡಬೇಕು ಎನ್ನತಕ್ಕದ್ದು. ಹಿಂದೆ ಇದ್ದ ಡಿ.ಸಿ.ಯವರು ಈಗ ಇಲ್ಲ. ಬೋರ್ ವೆಲ್ ತೆಗೆಸಿಯೆಂದು ನಮಗೆ ಅವರು ಹೇಳಿ ಹೊರಟುಹೋದರು. ಗುತ್ತಿಗೆದಾರರು ಬೋರ್‌ವೆಲ್ ತೆಗೆದಿದ್ದಾರೆ. ಜಿಲ್ಲಾ ಪಂಚಾಯಿತಿಯವರನ್ನು ಕೇಳಿದರೆ ನಮಗೆ ಗೊತ್ತಿಲ್ಲವೆಂದು ಹೇಳುತ್ತಾರೆ, ಹೊಸ ಡಿ.ಸಿ.ಯವರನ್ನು ಕೇಳಿದರೆ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಬೋರ್‌ವೆಲ್ ತೆಗೆಸಿದ್ದೇವೆ, ನೀರೂ ಬಂದಿದೆ. ಆದರೆ, ಅದಕ್ಕೆ ಬೇಕಾದಂಥ ಪಂಪ್‌ಪೈಪು, ವಿದ್ಯುತ್ ಯಾವುದೂ ಇಲ್ಲ. ಏಕೆಂದರೆ ಇದು ಬೇಸಿಗೆ ಕಾಲ. ಮಾನ್ಯ ಮುಖ್ಯಮಂತ್ರಿ ಯವರು ಅವರ ತವರೂರನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು. ಏಕೆಂದರೆ ಅವರು ನಮ್ಮ ಊರಿನವರು. ಆ ಊರಿನ ಸುಪುತ್ರರು ಅವರು. ಅವರಿಗೆ ಶಿವಮೊಗ್ಗ ಒಂದೇ ಅಲ್ಲ. ದಯಮಾಡಿ ಅವರು ಮಂಡ್ಯ ಜಿಲ್ಲೆಗೆ ವಿಶೇಷವಾದ ಗಮನ ಕೊಡಬೇಕು. ಇವತ್ತು ಮಂಡ್ಯ ಜಿಲ್ಲಾ ಪಂಚಾಯಿತಿ ಯಲ್ಲಿ ಯಾರೂ ಜವಾಬ್ದಾರಿ ತೆಗೆದುಕೊಳ್ಳುತ್ತಿಲ್ಲ. ಸಿ.ಇ.ಓ.ರವರಿಗೆ ಏನಾದರು ಹೇಳಿದರೆ ನಮಗೆ ಗೊತ್ತಿಲ್ಲವೆಂದು ಹಾರಿಕೆಯ ಉತ್ತರ ಕೊಡುತ್ತಾರೆ. ಆ ಜಿಲ್ಲೆಯ ಎಂ.ಎಲ್.ಎ. ಗಳಿಗೆ ಅಲ್ಲಿ ಲೆಕ್ಕಕ್ಕೇ ಇಲ್ಲ. ಅಲ್ಲಿರುವ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಮಾತ್ತೊಂದನ್ನು ಬಿಟ್ಟರೆ ಮಿಕ್ಕವರ ಯಾರ ಮಾತೂ ಆ ಸಿ.ಇ.ಓ. ರವರಿಗೆ ಬೇಕಾಗಿಲ್ಲ. ಜನರು ಎಂ.ಎಲ್.ಎ. ಯವರನ್ನು ಗೆಲ್ಲಿಸಿದ್ದೇವೆ, ಅವರೇ ಎಲ್ಲದಕ್ಕೂ ಜವಾಬ್ದಾರರು ಎಂದು ತಿಳಿದು ಕೊಂಡಿದ್ದಾರೆ. ಇದರಿಂದ ಮಾನ್ಯ ಮುಖ್ಯಮಂತ್ರಿಯವರು ನಮ್ಮನ್ನು ಕಾಪಾಡಬೇಕು. ನಮಗೆ ಹೆಚ್ಚಿನ ಅನುದಾನ ಕೊಟ್ಟು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬೇಕು. ತಮಗೆ ಒಳ್ಳೆಯ ಹೆಸರು ಬರುತ್ತದೆ. ಏಕೆಂದರೆ ಕುಡಿಯುವ ನೀರಿಗೆ ಇವತ್ತು ನಾಳೆ ಎಂದು ಮೀನಾಮೇಷ ಎಣಿಸಬೇಡಿ. ದಯಮಾಡಿ ಪಂಚಾಯಿತಿ ಸಚಿವರೂ ಇಲ್ಲೇ ಇದ್ದಾರೆ. ಒಂದು ತೀರ್ಮಾನ ತೆಗೆದುಕೊಂಡು ಹೆಚ್ಚಿನ ಅನುದಾನವನ್ನು ಕುಡಿಯುವ ನೀರಿಗೆ ಕೊಡಿ. ಕೊಡುವುದಾದರೆ ಕೇವಲ ಬೋರ್‌ವೆಲ್‌ಗೆ ಎಂದು ಕೊಡಬೇಡಿ. ಅದಕ್ಕೆ ಬೇಕಾಗಿರುವ ಪಂಪ್, ಕೆ.ಇ.ಬಿ. ಸಂಪರ್ಕ, ಬರುವ ಎಲ್ಲಾ systems ಗೆ

ಸೇರಿಸಿ ಕೊಡಬೇಕು. ನನ್ನ ಕ್ಷೇತ್ರದ ಸುಮಾರು 50 ಹಳ್ಳಿಗಳಲ್ಲಿ 5–6 ಕಿಲೋಮೀಟರ್ ದೂರದಿಂದ ನೀರನ್ನು ತರಬೇಕಾದ ಪರಿಸ್ಥಿತಿ ಇದೆ. ದಯಮಾಡಿ ಇದನ್ನು ತಾವು ಅರ್ಥ ಮಾಡಿಕೊಂಡು ತಕ್ಷಣ ಕ್ರಮಕೈಗೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಪ್ರಕಾಶ್ ಹುಕ್ಕೇರಿ (ಚಿಕ್ಕೋಡಿ) : ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಸಚಿವರು ಬೆಳಿಗ್ಗೆ ಮಾತನಾಡುತ್ತಾ ತಕ್ಷಣ ಎರಡು ಮೂರು ದಿವಸಗಳಲ್ಲಿ ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡುವುದಾಗಿ ಹೇಳಿದ್ದಾರೆ. ಆದರೆ, ನಮ್ಮ ಬೆಗಾಂ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಸಮಸ್ಯೆ ಏನಿದೆಯೆಂದರೆ, ಚಿಕ್ಕೋಡಿ ತಾಲ್ಲೂಕಿನಲ್ಲಿ ಮೂರುವತಿ ಎಂ.ಎಲ್.ಎ. ಬರುತ್ತೇವೆ. ನಿಪ್ಪಾಣಿ, ರಾಯಭಾಗ್ ಬರುತ್ತದೆ. ನನ್ನ ಚಿಕ್ಕೋಡಿ ತಾಲ್ಲೂಕಿನಲ್ಲಿ ಅರ್ಧ ಭಾಗ ರಾಯಬಾಗ್ ಕ್ಷೇತ್ರಕ್ಕೆ ಹೋಗುವುದರಿಂದ ನಮಗೆ ತಾಲ್ಲೂಕಿಗೆ ಹಣವನ್ನು ಬಿಡುಗಡೆ ಮಾಡಿದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಕ್ಷೇತ್ರವಾರು ಹಣ ಬಿಡುಗಡೆ ಮಾಡಬೇಕೆಂದು ಅವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

(4-20 PM)

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ಈಗ 2009–10ರಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಕಾರ್ಯಪಡೆ ಎಂದು ಇತ್ತು, ಅದಕ್ಕೆ 35 ಕೋಟಿ ರೂ.ಗಳ ಹಣ ನಿಗದಿಪಡಿಸಿದ್ದರು. 175 ತಾಲ್ಲೂಕುಗಳಿಗೆ ಪ್ರತಿ ತಾಲ್ಲೂಕಿಗೆ 20 ಲಕ್ಷ ರೂ.ಗಳಂತೆ 2009–10ರಲ್ಲಿ ಹಣ ಬಿಡುಗಡೆಯಾಗಿದೆ. ಆಗ ಮೇಡಂರವರಿದ್ದರು. ಈ ಗ್ರಾಮೀಣಾಭಿವೃದ್ಧಿ ಸಚಿವರು ಹೊಸದಾಗಿ ಬಂದಿದ್ದಾರೆ. ಅವರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಕರುಣೆ ತೋರಿಸಬೇಕು. ಈ ಕಾರ್ಯಪಡೆಯನ್ನೇನಾದರೂ ಅವರ ಕಾಲದಲ್ಲಿ ನಿಲ್ಲಿಸಬೇಕೆಂಬ ಚಿಂತನೆ ಇದೆಯೋ ಏನೋ ಗೊತ್ತಿಲ್ಲ. Last year Madam ಇದ್ದಾಗ ತಾಲ್ಲೂಕಿಗೆ 20 ಲಕ್ಷ.ರೂ.ಗಳಂತೆ ಕೊಟ್ಟಿದ್ದರು. ಈಗಾಗಲೇ ಅದು ರಿಲೀಸ್ ಆಗಿದೆ ಎಂದು Action taken report ನಲ್ಲಿ ತಿಳಿಸಿಲಾಗಿದೆ. ಮತ್ತೆ ಇನ್ನೂ 14 ಕೋಟಿ ರೂ.ಗಳನ್ನು ಬರ ಪೀಡಿತ ಪ್ರದೇಶಗಳಿಗೆ ರಿಲೀಸ್ ಮಾಡಲಾಗಿದೆ ಎಂದು ಹೇಳುತ್ತಿದ್ದಾರೆ. ಆಡಳಿತ ಪಕ್ಷದ ಸದಸ್ಯರು ಒಬ್ಬರಾದರೂ ಕುಡಿಯುವ ನೀರಿಗೆ ತೊಂದರೆ ಇದೆ ಎಂದು ಹೇಳುತ್ತಿಲ್ಲ. ಇಷ್ಟೊತ್ತಿನವರೆಗೂ ವಿರೋಧ ಪಕ್ಷದ ಸದಸ್ಯರು ಮಾತ್ರವೇ ಕುಡಿಯುವ

ನೀರಿನ ಸಮಸ್ಯೆ ಬಗ್ಗೆ ಮಾತನಾಡಿದರು. ಇದರಲ್ಲಿ ಏನಾದರೂ ಭೇದ–ಭಾವ ನಡೆಯುತ್ತಿದೆಯೋ, ಏನೋ ನನಗೆ ಗೊತ್ತಿಲ್ಲ.....

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಆಡಳಿತ ಪಕ್ಷದವರೇನೂ ಮಾತನಾಡಬೇಡಿ ಎಂದು ನಾವು ಹೇಳುತ್ತಿಲ್ಲ. ನೀವೂ ಸಹ ಮಾತನಾಡಿ, ಯಾರು ಬೇಡ ಎನ್ನುತ್ತಾರೆ? ಆಯಿತು, ನೀವೇ ಮಾತನಾಡಿ.

(ಗೊಂದಲ)

ಅಧ್ಯಕ್ಷರು : ಆಯಿತು, ತಾವು ಮಾತನಾಡಿ ಮುಗಿಸಿ. ನಂತರ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಹೆಚ್.ಡಿ.ರೇವಣ್ಣ : ಆ ಕಡೆಯಿಂದ ಯಾರಾದರೂ ಒಬ್ಬರಾದರೂ ಎದ್ದು ನಿಂತುಕೊಂಡು ಸಮಸ್ಯೆ ಬಗ್ಗೆ ಮಾತನಾಡಬೇಡವೇ?

ಅಧ್ಯಕ್ಷರು : ನೀವು ಆ ಕಡೆಗೆ ನೋಡಿಕೊಂಡು ಮಾತನಾಡಬೇಡಿ. ನೀವು ನನ್ನ ಕಡೆಗೆ ನೋಡಿಕೊಂಡು, ನಿಮ್ಮ ಅಭಿಪ್ರಾಯವೇನು ಎಂಬುದನ್ನು ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಕಳೆದ 18 ತಿಂಗಳಿನಲ್ಲಿ ಕುಡಿಯುವ ನೀರಿನ ವಿಚಾರದಲ್ಲಿ ಹಳೆಯ ಪ್ರಸ್ತಾವನೆಗಳನ್ನು ಬಿಟ್ಟು, ಒಂದೂ ಸಹ ಹೊಸ ಪ್ರಸ್ತಾವನೆಯನ್ನು ತೆಗೆದುಕೊಳ್ಳಲಿಕ್ಕಾಗಿಲ್ಲ. Mini-water Supply ಇರಬಹುದು, Major- water supply ಇರಬಹುದು, ಕೊನೆಯ ಪಕ್ಷ ಬೋರ್‌ವೆಲ್ ತೋಡಿಸುವುದಾದರೂ ಇರಬಹುದು. ಬೋರ್‌ವೆಲ್ ತೋಡಿಸುವುದಕ್ಕೂ ಆಗದಂತಹ ಪರಿಸ್ಥಿತಿ ಈಗ ಇದೆ. ದಯಮಾಡಿ ಒಂದೊಂದು ತಾಲ್ಲೂಕಿಗೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದೊಂದು ಕೋಟಿ ರೂಪಾಯಿಗಳ ಹಣವನ್ನು ಕೊಡಬೇಕು. ತಾಲೂಕು ಮಟ್ಟದ ಶಾಸಕರ ಅಧ್ಯಕ್ಷತೆಯ ಕಾರ್ಯಪಡೆಗೆ ಈ ಹಣವನ್ನು ಕೊಟ್ಟು ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕೆಂದು ನಾನು ಕೋರುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಈಗ ಮಾನ್ಯ ರೇವಣ್ಣನವರು ತಾತ್ಕಾಲಿಕವಾದ ವಿಚಾರ ಹೇಳಿದರು. ಈಗ ಎಲ್ಲೆಲ್ಲಿಂದ ನೀರನ್ನು ತಂದರೆ ಎಲ್ಲಾ ತಾಲ್ಲೂಕುಗಳಿಗೂ ಕುಡಿಯುವ ನೀರನ್ನು ಕೊಡಬಹುದು ಎಂಬುದನ್ನು ಅವರು ಹೇಳಬೇಕು. ಯಾವ್ಯಾವ ಭಾಗಗಳ ಮುಖಾಂತರ ಬರಬೇಕು,

ಹಾಸನ ಮುಖಾಂತರ ಬರಬೇಕೇ? ಈ ಕಡೆ ಭಾಗದಿಂದ ಬರಬೇಕೇ? ಎಲ್ಲಿಂದ ಬರಬೇಕು ಎಂಬ ಬಗ್ಗೆ ಅವರು ಸ್ವಲ್ಪ ಬೆಳಕು ಚೆಲ್ಲಿದರೆ ಚೆನ್ನಾಗಿರುತ್ತದೆ.

ಅಧ್ಯಕ್ಷರು : ಈಗ ಮಾನ್ಯ ಮಂತ್ರಿಗಳಿಂದ. ಉತ್ತರ.

ಶ್ರೀ ಹೆಚ್.ಡಿ.ರೇವಣ್ಣ : ಅವರು ಎಲ್ಲೆಲ್ಲಿಂದ ಬೇಕಾದರೂ ತರಲಿ. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ನಾವೇನೂ ಅದಕ್ಕೆ ಬೇಡ ಎನ್ನುವುದಿಲ್ಲ.

ಅಧ್ಯಕ್ಷರು : ಈಗ ಮಾನ್ಯ ಮಂತ್ರಿಗಳಿಂದ ಉತ್ತರ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ತಾವು ಅರ್ಧ ಗಂಟೆ ಕಾಲ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಬಹಳ ಒಳ್ಳೆಯದು. ಸುಮಾರು 14 ಜನ ಶಾಸಕರು ಈ ಒಂದು ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಮಾನ್ಯ ಸುಧಾಕರ್‌ರವರು, ಮಾನ್ಯ ಶಿವಲಿಂಗೇಗೌಡರು, ಮಾನ್ಯ ಮುನಿಯಪ್ಪನವರು, ಮಾನ್ಯ ಶರಣ ಪ್ರಕಾಶ್‌ರವರು, ಮಾನ್ಯ ಮಹೇಶ್‌ರವರು, ಮಾನ್ಯ ಜೆ.ಡಿ.ನಾಯಕ್‌ರವರು, ಮಾನ್ಯ ಬಂಡೆಪ್ಪ ಕಾಶೆಂಪೂರ್‌ರವರು, ಮಾನ್ಯ ಅಮರೇಶ್‌ರವರು, ಮಾನ್ಯ ನಾಡಗೌಡರು, ಮಾನ್ಯ ನರೇಂದ್ರರವರು, ಮಾನ್ಯ ಕರಡಿ ಸಂಗಣ್ಣನವರು, ಮಾನ್ಯ ಎ.ಎಸ್. ಪಾಟೀಲ್ (ನಡಹಳ್ಳಿ)ಯವರು, ಮಾನ್ಯ ಸುರೇಶ್‌ಗೌಡರವರು, ಮಾನ್ಯ ಹುಕ್ಕೇರಿಯವರು ಮತ್ತು ಮಾನ್ಯ ರೇವಣ್ಣನವರು ಸದರಿ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ್ದಾರೆ. ಇನ್ನೂ ಬಹಳಷ್ಟು ಜನ ಶಾಸಕರು ಈ ಚರ್ಚೆಯಲ್ಲಿ ಭಾಗವಹಿಸಬೇಕೆನ್ನುವ ಆಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ನಾನು ಹೇಳುವಂಥದ್ದು ಏನೆಂದರೆ, ಇಲ್ಲಿ ಏನೊಂದು ಸಮಸ್ಯೆ ಪ್ರಸ್ತಾಪ ಮಾಡಿದ್ದಾರೆ ಮತ್ತು ವೈಯಕ್ತಿಕವಾಗಿಯೂ ಸಹಿತ ನನ್ನ ಜೊತೆ ತಮ್ಮ ತಮ್ಮ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ, ನಾನು ಅಲ್ಲಿ ಪ್ರವಾಸ ಹೋದಾಗ ಇರಬಹುದು ಅಥವಾ ಇಲ್ಲಿ ಅಸೆಂಬ್ಲಿ ನಡೆದಂತಹ ಸಂದರ್ಭದಲ್ಲಿ ಸಾಕಷ್ಟು ಬಾರಿ ನನ್ನನ್ನು ಭೇಟಿಯಾಗಿಯೂ ಸಹ ಹಲವಾರು ಸಮಸ್ಯೆಗಳನ್ನು ಹೇಳಿದ್ದಾರೆ. ಇವತ್ತು ಇಲ್ಲಿ ಪ್ರಸ್ತಾಪ ಮಾಡಿದ ಶಾಸಕರ ಭಾವನೆಗಳು ತಾತ್ಕಾಲಿಕವಾಗಿ ಪರಿಹಾರ ಕೊಡುವಂಥದ್ದರ ಬಗ್ಗೆ ಇವೆ. ಈಗ ಸದ್ಯಕ್ಕೆ ಅವರು ತಾತ್ಕಾಲಿಕ ಪರಿಹಾರಕ್ಕಾಗಿ ಚರ್ಚೆ ಮಾಡಿದ್ದಾರೆ. ಹಿಂದೆ ಮಾನ್ಯ ಸುಧಾಕರ್‌ರವರು ವೈಯಕ್ತಿಕವಾಗಿ ನನ್ನೊಡನೆ ಮಾತನಾಡುವಂತಹ ಸಂದರ್ಭದಲ್ಲಿ ನಾನು ಈ

ಮಾತನ್ನು ಹೇಳಿದ್ದೆ. ನಾವೆಲ್ಲಾ ತಾತ್ಕಾಲಿಕವಾದಂತಹ ಪರಿಹಾರದ ಬಗ್ಗೆ ಮಾತ್ರ ವಿಚಾರ ಮಾಡುತ್ತಿದ್ದೇವೆ. ಅದು ಅಡ್ಡಿಯಿಲ್ಲ. ಆದರೆ, ಕಾಯಂ ಆದ ಪರಿಹಾರ ಹುಡುಕುವುದರ ಬಗ್ಗೆಯೂ ನಾವು ವಿಚಾರ ಮಾಡಬೇಕು. ಆ ಬಗ್ಗೆ ಮಾನ್ಯ ಸಭಾಧ್ಯಕ್ಷರು ಅನುಮತಿಯನ್ನು ಕೊಟ್ಟರೆ, ಇನ್ನೊಂದು ಸಲ ಸಮಗ್ರವಾಗಿ ಪ್ರತಿಯೊಂದು ಜಿಲ್ಲೆಗೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಶಾಸಕರ ಸಭೆಯೊಂದನ್ನು ಸಹ ನಾನು ಕರೆಯುತ್ತೇನೆ. ಆಯಾ ಜಿಲ್ಲೆಗೆ ಹೋದಾಗ Review Meeting ಸಹ ಮಾಡುತ್ತೇನೆ. ನೊಮ್ಮೆ ನಾನು ಚಾಮರಾಜನಗರಕ್ಕೆ ಹೋಗಿದ್ದೆ. ಅಲ್ಲಿ ನಾನು review Meeting ಮಾಡಿದಾಗ, ಅಲ್ಲಿಗೆ ಎಲ್ಲಾ ಶಾಸಕರೂ ಸಹ ಬಂದಿದ್ದರು. ಅಲ್ಲದೆ ZP members ಸಹ ಬಂದಿದ್ದರು. ಅದೇ ರೀತಿಯಾಗಿ ನಾನು ಪ್ರತ್ಯೇಕವಾಗಿ Review Meeting ಮಾಡುವಂಥದ್ದು ಬೇರೆ. ಅದರ ಜೊತೆಗೆ ಪ್ರತ್ಯೇಕವಾಗಿ ಜಿಲ್ಲಾವಾರು ಸಭೆಯನ್ನು ನಾವು ಕರೆದರೆ, ಆಯಾ ಜಿಲ್ಲೆಗಳಲ್ಲಿ ಏನೊಂದು ನೀರಿನ source ಇದೆಯೋ, ಆ ನೀರಿನ source ನದಿ ಮೂಲದಿಂದ ಇರಬಹುದು ಅಥವಾ ಬೇರೆ source ನಿಂದ ಇರಬಹುದು, ಇವುಗಳನ್ನು study ಮಾಡಿಕೊಂಡು, ಇವತ್ತು ಅದಕ್ಕೆ ಕಾಯಂ ಆದಂತಹ ಪರಿಹಾರವನ್ನು ಹುಡುಕುವ ದಿಕ್ಕಿನಲ್ಲಿ ಪ್ರಯತ್ನ ಮಾಡೋಣ. ಈ ರೀತಿ ಸಮಸ್ಯೆ ಬಂದಂತಹ ಸಂದರ್ಭದಲ್ಲಿ emergency war-footing ನಲ್ಲಿ ಕೆಲಸ ಮಾಡುವಂಥದ್ದು ಆಗಬೇಕು. ಪ್ರತಿ ವರ್ಷ ಏಪ್ರಿಲ್, ಮೇ ತಿಂಗಳಿನಲ್ಲಿ ಈ ಸಮಸ್ಯೆ ಇರುತ್ತದೆ. ಅತಿವೃಷ್ಟಿ ಇರಲಿ ಅಥವಾ ಬೇರೆ ಏನೆ ಇರಲಿ, ಏಪ್ರಿಲ್, ಮೇ ಮತ್ತು ಜೂನ್ ತಿಂಗಳು ಬಂದರೆ ಕೆಲವು ಜಿಲ್ಲೆಗಳಲ್ಲಿ ಬರಗಾಲ ಮತ್ತು ನೀರಿನ ಸಮಸ್ಯೆಯನ್ನು ಪದೇ ಪದೇ ಕಾಣುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕಳೆದ ತಿಂಗಳು ನಾನು CEO ಗಳ meeting ಕರೆದಾಗ ಸಹಿತ, ಅವತ್ತೇ ನಾನು ಎಲ್ಲಾ CEO ಗಳಿಗೂ warning ಮಾಡಿದ್ದೆ. ಏಪ್ರಿಲ್, ಮೇ ತಿಂಗಳುಗಳಲ್ಲಿ ಏನು ಸಮಸ್ಯೆ ಬರುತ್ತದೋ, ಅದಕ್ಕೆ ತಕ್ಷಣವೇ ನೀವು response ಕೊಡಬೇಕು, ಎಲ್ಲಾ ರೀತಿಯಾದಂತಹ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು ಎನ್ನುವ warning ಅನ್ನು ಅವತ್ತು ಮಾಡಿದ್ದೆ. ಇವತ್ತು ನಮ್ಮ ಹಲವಾರು ಶಾಸಕರು ವಿಷಯಗಳನ್ನು ಇಲ್ಲಿ ಪ್ರಸ್ತಾವ ಮಾಡಿದ್ದಾರೆ. ಗ್ರಾಮ ಪಂಚಾಯಿತಿಯವರಿಗೆ maintenance ಕೊಡುವುದರಿಂದ ಬಹಳಷ್ಟು ತೊಂದರೆಯಾಗುತ್ತದೆ.

ವಿದ್ಯುಚ್ಛಕ್ತಿ ಬಿಲ್ ತುಂಬಲಿಕ್ಕಾಗುವುದಿಲ್ಲ. ಅಲ್ಲದೆ ಸರ್ಕಾರ ಅನುದಾನದಲ್ಲಿ ಅದನ್ನು ಕಟ್ ಮಾಡುತ್ತದೆ ಎಂದು ಹೇಳಿದ್ದಾರೆ. ಇದೊಂದು ಕಡೆ ಸಮಸ್ಯೆ ಯಾದರೆ, ಅವರ ಕೈಯಲ್ಲಿ entire maintenance ಮಾಡಲಿಕ್ಕಾಗುವುದಿಲ್ಲ ಎಂದೂ ಸಹ ಹೇಳಿದ್ದಾರೆ. ಹೀಗಾಗಿ O and M ಎನ್ನುವಂಥದ್ದು ಏನಿದೆ, ಆ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಸಮಾಲೋಚನೆ ಮಾಡುತ್ತೇನೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮೊನ್ನೆಯ ಬಜೆಟ್ ಭಾಷಣದಲ್ಲಿ ಅದರ ಬಗ್ಗೆ ಸೂಕ್ತವಾದ ನೀತಿಯೊಂದನ್ನು ನಿರೂಪಣೆ ಮಾಡಬೇಕು ಎನ್ನುವುದರ ಬಗ್ಗೆ ತಮ್ಮ ಸಲಹೆಯನ್ನು ಕೊಟ್ಟಿದ್ದಾರೆ. ಅಂದರೆ, ಇವತ್ತೇನು, ಇಡೀ ರಾಜ್ಯದ ನಗರ ಪ್ರದೇಶಗಳಿಗೆ ಏನೊಂದು water board ಇದೆಯೋ, ಅದೇ ರೀತಿ ಇಡೀ ರಾಜ್ಯದ ಗ್ರಾಮೀಣ ಪ್ರದೇಶಕ್ಕೆ ಸಂಬಂಧಪಟ್ಟಂತೆ ಬೋರ್ಡ್‌ವೊಂದನ್ನು ನಾವು ರಚನೆ ಮಾಡಿ, ಅದರ ಮುಖಾಂತರ ಇವತ್ತು ಆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದ್ದನ್ನು ಹೊರತುಪಡಿಸಿ, ಉಳಿದಿದ್ದನ್ನು maitenance ಮಾಡುವ ಕೆಲಸ ಮಾಡುತ್ತೇವೆ. ಆ ಬೋರ್ಡ್‌ಗೆ ಎಲ್ಲವನ್ನೂ ಸಹಿತ ನಾವು ಜವಾಬ್ದಾರಿ ಕೊಟ್ಟರೆ, ಬಹುಶಃ ಪದೇ ಪದೇ ಈಗೇನು ನಾನು ಅನುಭವಿಸುತ್ತಿದ್ದೇವೋ, ಆ ಗ್ರಾಮ ಪಂಚಾಯತಿಯಲ್ಲಿ ಹಣವಿಲ್ಲ, ವಿದ್ಯುಚ್ಛಕ್ತಿ ತುಂಬಲಿಕ್ಕೆ ಹಣವಿಲ್ಲ, ಬಿಲ್ ಕೊಡುತ್ತಿಲ್ಲ, ಬಿಲ್ ಅನ್ನು ನಾವು cut ಮಾಡುತ್ತಿದ್ದೇವೆ, ಅದರಿಂದ ಅನುದಾನ ಕಡಿಮೆ ಆಗುತ್ತದೆ ಎನ್ನುವಂಥದ್ದು ಏನಿದೆಯೋ, ಅದನ್ನೂ ಕಡಿಮೆ ಮಾಡಲಿಕ್ಕೆ ಸಾಧ್ಯವಿದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಅದರ ಬಗ್ಗೆ ಸುಳಿವು ಕೊಟ್ಟಿದ್ದಾರೆ. ಅದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಆಗುವಂಥದ್ದು ಇದೆ. ಆದಷ್ಟು ಬೇಗನೆ, ಇದಕ್ಕೊಂದು ನೀತಿ ನಿರೂಪಣೆ ಯನ್ನು ನಾವು ಮಾಡಿಕೊಂಡು ಈ O and M ಏನಿದೆ, ಇದನ್ನು ಇಡೀ ರಾಜ್ಯಕ್ಕೆ ಅನ್ವಯವಾಗುವ ರೀತಿಯಲ್ಲಿ ಆದಷ್ಟುಬೇಗನೆ ನಮ್ಮ ಸರ್ಕಾರ ಅದನ್ನು ಅನುಷ್ಠಾನ ಮಾಡುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಇದು ಜಾರಿಯಾಯಿತು ಎಂದರೆ ಬಹಳಷ್ಟು ಸಮಸ್ಯೆಗಳು ನಿವಾರಣೆಯಾಗುತ್ತವೆ. ಈಗ ರಾಜೀವ್‌ಗಾಂಧಿ Sub-mission ಯೋಜನೆ ಮುಖಾಂತರ, ಬೇರೆಬೇರೆ ಕುಡಿಯುವ ನೀರಿನ ಮುಖಾಂತರ ಸಮಸ್ಯೆ ಬಗೆಹರಿಸುತ್ತಿದ್ದೇವೆ. ಕೇಂದ್ರ ಸರ್ಕಾರ ಕುಡಿಯುವ ನೀರಿನ ಯೋಜನೆಗೆ ಹೆಚ್ಚಿಗೆ ಆದ್ಯತೆ ಕೊಡುತ್ತಿದೆ. ರಾಜ್ಯ ಸರ್ಕಾರ ಸಹಿತ ಕುಡಿಯುವ

ನೀರಿನ ಯೋಜನೆಗಳಿಗೆ ಆದ್ಯತೆ ಕೊಡುತ್ತಿದೆ. ಆ ಕುಡಿಯುವ ನೀರಿನ ಯೋಜನೆಗಳು ಆದಷ್ಟು ಬೇಗನೆ ಅನುಷ್ಠಾನ ಮಾಡುವಂಥದ್ದು ಆದರೆ, ಬಹುಶಃ ಬಹಳಷ್ಟು ಸಮಸ್ಯೆಗಳು ನಿವಾರಣೆಯಾಗುತ್ತದೆ. ಈ ರೀತಿ ಸಂದರ್ಭ ಬಂದಾಗ, ನಮ್ಮೆಲ್ಲರ ಒಂದೇ ಒಂದು ಗುರಿ ಏನೆಂದರೆ, ಎಷ್ಟು ಸಾಧ್ಯವಾಗುತ್ತದೋ ಅಷ್ಟು ಬೋರ್‌ವೆಲ್‌ಗಳನ್ನು ಕೊರೆಯಬೇಕು ಎನ್ನುವುದೇ ಆಗಿದೆ. ಎಷ್ಟು ಬೋರವೆಲ್‌ಗಳನ್ನು ಕೊರೆಯಬೇಕಾಗಿದೆ ಎಂಬುದನ್ನು ನಾವು ಇವತ್ತು ವಿಚಾರ ಮಾಡಬೇಕಾಗಿದೆ. ಆ ಬೋರ್‌ವೆಲ್‌ಗಳನ್ನು ಕೊರೆಯು ವುದರ ಮುಖಾಂತರ ಎಷ್ಟು disadvantage ಇದೆ ಎಂಬುದನ್ನೂ ಸಹ ನಾವು ವಿಚಾರ ಮಾಡಬೇಕಾಗಿದೆ. ಹೀಗಾಗಿ ಇಂತಹ emergency ಸಂದರ್ಭ ದಲ್ಲಿ ನಮ್ಮ public ಒತ್ತಡ ಇರುತ್ತದೆ, ನಮ್ಮ ಶಾಸಕರಿಗೂ ಆದಷ್ಟು ಬೇಗನೆ ಏನಾದರೊಂದು ಮಾಡಬೇಕು ಎನ್ನುವಂಥದ್ದು ಇರುತ್ತದೆ. ಹೀಗಾಗಿ ಬೋರ್‌ವೆಲ್‌ಗಳನ್ನು ಕೊರೆಯುತ್ತೇವೆ. ಎಷ್ಟೋ ಕಡೆಗಳಲ್ಲಿ ಬೋರ್‌ವೆಲ್ ಕೊರೆದಿದ್ದು failure ಆಗಿವೆ, ಬಹಳಷ್ಟು ಕಡೆ ಮತ್ತೆ ನಾವು ಅವುಗಳನ್ನು recharge ಮಾಡಲಿಕ್ಕೂ ಸಹ ಆಗಿಲ್ಲ. ಹೀಗಾಗಿ ಎಲ್ಲಿ recharge ಮಾಡಲಿಕ್ಕೆ ಸಾಧ್ಯವಿದೆಯೋ, ಅಲ್ಲಿ recharge ಮಾಡುವಂಥದ್ದು ಮತ್ತು ಎಲ್ಲಿ ಬೋರ್‌ವೆಲ್ ಅವಶ್ಯಕತೆ ಇದೆಯೋ, ಅಲ್ಲಿ ಬೋರ್‌ವೆಲ್‌ಗಳನ್ನು ಕೊಡುವಂಥದ್ದು ಮಾಡುತ್ತೇವೆ. ಬೋರ್‌ವೆಲ್‌ಗಳನ್ನು ಕೊರೆಯಲೇಬಾರದು ಎಂದು ನಾನು ಹೇಳುತ್ತಿಲ್ಲ. ಅದನ್ನು ಕೊರೆಯುವಂತಹ ಅವಶ್ಯಕತೆ ಇದೆ. ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಅದನ್ನು ಮಾಡೋಣ. ಅಂತರ್ಜಲ ಮಟ್ಟವನ್ನು ಹೆಚ್ಚಿಗೆ ಮಾಡುವಂಥದ್ದೂ ಸಹ ಬಹಳ ಮುಖ್ಯವಾದುದು. ಇವತ್ತು ಕೆಲವೊಂದು ಕಡೆಗಳಲ್ಲಿ ನೀರಾವರಿ ಇಲಾಖೆಯ ಮುಖಾಂತರ, ಅವರ ಸಹಯೋಗದೊಂದಿಗೆ ಕೆರೆಗಳನ್ನು ತುಂಬಿಸುವಂತಹ ಕೆಲಸ ನಡೆಯುತ್ತಿದೆ. ಅದಕ್ಕೆ ಹೆಚ್ಚು ಆದ್ಯತೆಯ್ನು ನಾವು ಕೊಟ್ಟರೆ, ಆಗ ಈ water level ಏನಿದೆ, ಈ ಅಂತರ್ಜಲ ಮಟ್ಟವನ್ನು ನಾವು ಹೆಚ್ಚಿಗೆ ಮಾಡಿದರೆ, ಬಹುಶಃ ನಾವು ಪದೇ ಪದೇ ಈಗೇನು ಅನುಭವಿಸುತ್ತಿದ್ದೇವೆ, ಆ ಸಮಸ್ಯೆ ಇರಲಾರದು. ಈಗ ಕೋಲಾರ ಜಿಲ್ಲೆಯಲ್ಲಿ ಇರಬಹುದು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇರಬಹುದು, 1000–1500 ಅಡಿಗಳವರೆಗೆ ಕೊರೆದರೂ ಸಹಿತ ನೀರು ಬರುವುದಿಲ್ಲ. ಅದೇ ರೀತಿ ಅಲ್ಲಿದ್ದಂತಹ ಕೆರೆಗಳನ್ನು recharge ಮಾಡುವುದಕ್ಕೆ ಮತ್ತು ಅಂತರ್ಜಲ ಮಟ್ಟವನ್ನು ಜಾಸ್ತಿ ಮಾಡುವುದಕ್ಕೆ ನಾವು

ಪ್ರಯತ್ನ ಮಾಡಿದರೆ, ಬಹುಶಃ ಪದೇ ಪದೇ ಬೋರ್ ವೆಲ್ ಕೊರೆಯುವಂಥದ್ದು ಏನು ಮಾಡುತ್ತಿದ್ದೇವೆ, ಅದನ್ನು ನಿಲ್ಲಿಸಲಿಕ್ಕೆ ಸಾಧ್ಯವಿದೆ. ಆ ದೃಷ್ಟಿಯಿಂದ ನಾವು ವಿಚಾರವನ್ನು ಮಾಡುತ್ತಿದ್ದೇವೆ. ಹೀಗಾಗಿ ಇವತ್ತು ಎಲ್ಲೆಲ್ಲಿ ಅವಶ್ಯಕತೆ ಇದೆಯೋ, ಅಂತಹ ಕಡೆಗಳಲ್ಲಿ ತಕ್ಷಣವೇ war-footing ನಲ್ಲಿ ಏನೇನು ಕೆಲಸಗಳನ್ನು ಮಾಡಬೇಕು, ಅದರ ಬಗ್ಗೆಯೂ ಸಹ ನಾವು ಹೆಚ್ಚು ಆದ್ಯತೆಗಳನ್ನು ಕೊಡುತ್ತೇವೆ. ಬೆಳಿಗ್ಗೆ ಮಾನ್ಯ ಶಿವಲಿಂಗೇಗೌಡರು, ಆ Task-force Committee ಏನಾಗಿದೆ, ಅದು ಅಸ್ತಿತ್ವದಲ್ಲಿ ಇದೆಯೋ, ಇಲ್ಲವೋ ಎಂಬ ಮಾತನ್ನು ಹೇಳಿದರು. ಅದು ಅಸ್ತಿತ್ವದಲ್ಲಿದೆ. ಹಿಂದೇನು ಶಾಸಕರ ಅಧ್ಯಕ್ಷತೆಯಲ್ಲಿ Constitute ಆಗಿದ್ದ Task-force Committee ಇನ್ನೂ ಅಸ್ತಿತ್ವದಲ್ಲಿದೆ. ಒಂದು ಸಲ ಕಳೆದ ವರ್ಷ ಏಪ್ರಿಲ್ 25ಕ್ಕೆ ತಲಾ 20 ಲಕ್ಷ ರೂ.ಗಳಂತೆ 35 ಕೋಟಿ ರೂ.ಗಳ ಹಣವನ್ನು ರಿಲೀಸ್ ಮಾಡಲಾಗಿತ್ತು. ಮುಂದೆ 8.9.2009ಕ್ಕೆ ಕೋಟಿ ರೂ.ಗಳ ಹಣ ರಿಲೀಸ್ ಆಗಿದೆ. 18.08.2009ರಂದು 12 ಕೋಟಿ ರೂ.ಗಳನ್ನು ರಿಲೀಸ್ ಮಾಡಲಾಗಿದೆ. ಎಷ್ಟು ಹಣ ಇವತ್ತು ರಿಲೀಸ್ ಆಗಿದೆ......

ಶ್ರೀ ಹೆಚ್.ಡಿ.ರೇವಣ್ಣ : ಒಂದು ತಾಲ್ಲೂಕಿಗೆ 20 ಲಕ್ಷ ರೂ.ಗಳಂತೆ 175 ತಾಲ್ಲೂಕುಗಳಿಗೆ ಒಟ್ಟಾರೆಯಾಗಿ 35 ಕೋಟಿ ರೂ.ಗಳು ರಿಲೀಸ್ ಆಗಿ ಬಂದಿದೆ. ಬಾಕಿ 14 ಕೋಟಿ ರೂ.ಗಳು ಎಲ್ಲಿ ಹೋಗಿದೆ? ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. 2009–10ರಲ್ಲಿ ನೀವು ಕೊಟ್ಟಿದ್ದೀರಿ. 2010–11 ರಲ್ಲಿ ಏನು ಕೊಟ್ಟಿದ್ದೀರಿ ಎಂಬುದನ್ನು ಮಾನ್ಯ ಸಚಿವರು ದಯಮಾಡಿ ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಏಪ್ರಿಲ್ 25ಕ್ಕೆ 35 ಕೋಟಿ ರೂ.ಗಳು ರಿಲೀಸ್ ಆಗಿದೆ. ಮುಂದೆ ಆಗಸ್ಟ್ 18ನೇ ತಾರೀಖಿಗೆ 12 ಕೋಟಿ ರೂ.ಗಳು ರಿಲೀಸ್ ಆಗಿದೆ. 8.9.2009ಕ್ಕೆ 2 ಕೋಟಿ ರೂ.ಗಳ ಹಣ ರಿಲೀಸ್ ಮಾಡಲಾಗಿದೆ. ಮಾನ್ಯ ಶರಣ ಪ್ರಕಾಶ್‌ರವರು ಹೇಳಿದಂತೆ CRF ಹಣ ಇರಬಹುದು, NCCF amount ಇರಬಹುದು, ಅದು ನಮ್ಮ Revenue ಇಲಾಖೆಗೆ ಬರುತ್ತದೆ. ಅದನ್ನು ಪ್ರತ್ಯೇಕವಾಗಿ ರೆವಿನ್ಯೂ ಇಲಾಖೆಯವರು ಸರ್ವೆ ಮಾಡಿ, ಎಲ್ಲೆಲ್ಲಿ ಅವಶ್ಯಕತೆ ಇದೆಯೋ, ಅಲ್ಲಿಗೆಲ್ಲಾ ಅವರೂ ಸಹ ಹಣವನ್ನು ರಿಲೀಸ್ ಮಾಡುತ್ತಾರೆ.

ನಮ್ಮ ಇಲಾಖೆಯಿಂದ ತಕ್ಷಣ ಏನು ಹಣವನ್ನು ಬಿಡುಗಡೆ ಮಾಡಬೇಕು, ಈ ಬೋರ್‌ವೆಲ್ ಕೊರೆಯಿಸುವುದು ಮತ್ತೊಂದಕ್ಕೂ ಮತ್ತು ವಿದ್ಯುತ್ ಸಂಪರ್ಕ, ಈಗಾಗಲೇ ಹಲವಾರು ಯೋಜನೆಗಳು ರೆಡಿ ಇದ್ದಾವೆ. ನಮ್ಮ ನಾಡಗೌಡರು ಹೇಳಿದಂತೆ ವಿದ್ಯುತ್ ಸಂಪರ್ಕವಿಲ್ಲದೆ, ಇವತ್ತು ಆ ಯೋಜನೆಗಳನ್ನು ಚಾಲನೆ ಮಾಡುವುದಕ್ಕಾಗಲಿಲ್ಲ, ಅಂಥದ್ದಕ್ಕೆಲ್ಲಾ ನಾವು ಗಮನಹರಿಸಿ, ಎಲ್ಲೆಲ್ಲಿ ಇವತ್ತು ಆ ರೀತಿಯ ಯೋಜನೆಗಳಿಗೆ 8 ಕೋಟಿ ರೂ. 10 ಕೋಟಿ ರೂ. ಖರ್ಚು ಮಾಡಿ ನಾವು ರೆಡಿ ಮಾಡಿರುತ್ತೇವೆ, ಆದರೆ ಆ ವಿದ್ಯುತ್ ಸಂಪರ್ಕವಿಲ್ಲದೆ, ಒಂದು 50 ಸಾವಿರ ರೂಪಾಯಿ ಹಣವನ್ನು ಡೆಪಾಸಿಟ್ ಮಾಡಲಾರದೆ ಅವು ಪೆಂಡಿಂಗ್ ಬಿದ್ದಿರುತ್ತವೆ ಅಂಥವಕ್ಕೆ ನಾವು ಗಮನಹರಿಸಿ ತಕ್ಷಣ ಸೂಚನೆ ಕೊಟ್ಟು, ಆ ಯೋಜನೆಗಳನ್ನು ಚಾಲನೆ ಮಾಡುವಂಥ ಕೆಲಸವನ್ನು ನಾವು ಮಾಡುತ್ತೇವೆ. ಮತ್ತೆ ಶಾಸಕರ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಕಮಿಟಿ ಏನಿದೆ, ಅದು ಈಗಾಲೇ ಮುಂದುವರೆದಿದೆ, ನಾವು ಅದನ್ನು dissolve ಮಾಡಿಲ್ಲ, ಅದು ಅಸ್ತಿತ್ವದಲ್ಲೆ ಇದೆ. ಇನ್ನು 2–3 ದಿವಸ, ಒಂದು ವಾರದಲ್ಲಿ ಮುಖ್ಯಮಂತ್ರಿಗಳೊಡನೆ ಸಮಾಲೋಚನೆ ಮಾಡಿಕೊಂಡು ತಕ್ಷಣವೇ ಹಣವನ್ನು ರಿಲಿಸ್ ಮಾಡಿಸುತ್ತೇನೆ. ಈಗ ಕ್ಷೇತ್ರವಾರು ಮಾಡಬೇಕೋ ತಾಲ್ಲೂಕುವಾರು ಮಾಡಬೇಕೋ ಎನ್ನುವುದನ್ನೆಲ್ಲಾ ಸಮಾಲೋಚನೆ ಮಾಡಿಕೊಂಡು...

(ಗೊಂದಲ)

ಮಾನ್ಯ ಸದಸ್ಯರೊಬ್ಬರು : ಕ್ಷೇತ್ರವಾರು ಮಾಡಬೇಕು.

ಡಾ: ಶರಣ ಪ್ರಕಾಶ್ ಪಾಟೀಲ್ : ಅದನ್ನು ತಾಲ್ಲೂಕುವಾರು ಮಾಡಬೇಕು..

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ವಿಚಾರ ಮಾಡಿಕೊಂಡು ತಕ್ಷಣ ಟಾಸ್ಕ್ ಫೋರ್ಸ್‌ಗೆ ಹಣ ರಿಲೀಸ್ ಮಾಡಲು ವ್ಯವಸ್ಥೆ ಮಾಡುತ್ತೇವೆ. ತಕ್ಷಣವೇ ಈ ಒಂದು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಯುದ್ಧೋಪಾದಿಯಲ್ಲಿ ಕೆಲಸ ಮಾಡುವ ಎಲ್ಲಾ ಕ್ರಮವನ್ನು ನಾವು ಕೈಗೊಳ್ಳುತ್ತೇವೆ, ಸರ್ಕಾರ ಇದಕ್ಕೆ ಬದ್ಧವಿದೆ ಎನ್ನುವ ಮಾತನ್ನು ಹೇಳುತ್ತೇನೆ. ಬರುವ ದಿವಗಳಲ್ಲಿ ಮತ್ತೆ ನಾವು ಜಿಲ್ಲೆಗಳಿಗೆ ಪ್ರವಾಸ ಮಾಡಿ, ಶಾಸಕರ ಪ್ರತ್ಯೇಕ ಸಭೆಯನ್ನು ಕರೆದು, ಕಾಯಂ ಆದ ಪರಿಹಾರ ಮತ್ತೊಂದು ತಾತ್ಕಾಲಿಕ ಪರಿಹಾರ ಈ ಎರಡೂ ಬಗ್ಗೆಯೂ

ಆಲೋಚನೆ ಮಾಡುವುದು, ಆಷಟ್ಟು ಆ ಟಾಸ್ಕ್‌ಫೋರ್ಸ್‌ಗೆ ಹಣ ಬಿಡುಗಡೆ ಮಾಡುವ ಕೆಲಸವನ್ನು ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ : ಶಿವಲಿಂಗೇಗೌಡರು ಹೇಳುವುದು, ಜಗದೀಶ್ ಶೆಟ್ಟರ್ ಬಂದ ಮೇಲೆ ಶಾಸಕರ ಕಾರ್ಯಪಡೆ ಸತ್ತು ಹೋಗಿದೆ, ಅದಕ್ಕೆ ಎಷ್ಟು ದಿವಸದಲ್ಲಿ ಕೊಡುತ್ತೀರಿ ಎಂದು ಹೇಳಿದರು.

ಶ್ರೀ ಜಗದೀಶ್ .ಶೆಟ್ಟರ್ : ಶಿವಲಿಂಗೇಗೌಡರು ಹೇಳಿದ್ದಲ್ಲ, ನೀವು ಹೇಳಿದ್ದು.

ಶ್ರೀ ಹೆಚ್.ಡಿ. ರೇವಣ್ಣ : 2009ರಲ್ಲಿ ನೀವು ಆಕ್ಷನ್-ಟೇಕನ್ ಬಿಟ್ಟಿರುವುದು, 2010ರಲ್ಲಿ ಒಂದು ರೂಪಾಯಿ ಕೊಟ್ಟಿದ್ದರೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಟಾಸ್ಕ್‌ಫೋರ್ಸ್ ರದ್ದಾಗಿಲ್ಲ, ಮುಂದುವರೆ ಯುತ್ತದೆ, ಅದಕ್ಕೆ ಹಣವನ್ನೂ ಬಿಡುಗಡೆ ಮಾಡುತ್ತೇವೆ, ಕುಡಿಯುವ ನೀರಿನ ಈ ಒಂದು ಯೋಜನೆಗೆ ಸರ್ಕಾರ ಸ್ಪಂದನೆ ಮಾಡುತ್ತದೆ, ಅದಕ್ಕೆ ಹಿಂದೇಟು ಹಾಕುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ.

ಡಾ: ಎಂ.ಸಿ. ಸುಧಾಕರ್ : ಚಿಕ್ಕಬಳ್ಳಾಪುರದಲ್ಲಿ ಯಾವುದೇ ಬೋರ್ ವೆಲ್ ಕೊರೆಯಬಾರದೆಂದು ಪತ್ರ ಕಳುಹಿಸಿದ್ದಾರೆ. ಈಗ ಬೋರ್‌ವೆಲ್ ಕೊರೆಯುವುದಕ್ಕೆ ತಕ್ಷಣ ನೀವು ಅವಕಾಶ ಮಾಡಿಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಟಾಸ್ಕ್‌ಫೋರ್ಸ್ ಮುಖಾಂತರ ಹಣ ರಿಲೀಸ್ ಆದಾಗ ನೀವೇ ಡಿಸಿಷನ್ ತೆಗೆದುಕೊಳ್ಳಿ.

ಡಾ: ಎಂ.ಸಿ. ಸುಧಾಕರ್ : ಜಿಲ್ಲಾಪಂಚಾಯಿತಿಯ ಇಂಜಿನಿಯರಿಂಗ್ ಡಿವಿಷನ್ ಅವರು ಅನುಮತಿ ಇಲ್ಲದೆ ಬೋರ್‌ವೆಲ್ ಕೊರೆಯಬಾರದೆಂದು ಹೇಳಿದ್ದಾರೆ, ಕನಿಷ್ಠ ಬೋರ್‌ವೆಲ್ ಕೊರೆದರೆ ಜನರಿಗೆ ನೀರು ಕಂಡರೆ ಸ್ವಲ್ಪ ನೆಮ್ಮದಿ ಇರುತ್ತದೆ, ದಯವಿಟ್ಟು, ಈ ಕೂಡಲೆ ಹೇಳಿ.

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೆ, ನಾನು ಮಂತ್ರಿಗಳಿಗೆ ಒಂದು ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈಗ ಗಾಳಿಯಿಂದ ನೀರನ್ನು ತೆಗೆಯತಕ್ಕಂಥ ಯಂತ್ರಗಳಿವೆ. ಎಲ್ಲೆಲ್ಲಿ hamlets ಇವೆ, ಸಿಕ್ಕಾಪಟ್ಟೆ ನೀರು deplete ಆಗಿದೆ, sparingly You have to use that. It has got a vast effect. Ecological imbalance create ಮಾಡುವುದರಲ್ಲಿ ಅದು ಕೂಡ ಕಾರಣವಾಗಬಹುದು. ಆದರೆ ಎಲ್ಲಿ ಸಾಧ್ಯವಿದೆ, ಅಂಥ equipments ಬಗ್ಗೆ ದಯವಿಟ್ಟು ಮಾಹಿತಿಯನ್ನು ತರಿಸಿಕೊಂಡು, ಅವರನ್ನು

ಕರೆದು ಅದನ್ನೇನಾದರು ಅಳವಡಿಸುವುದಕ್ಕೆ ಪ್ರಯತ್ನ ಮಾಡಿದರೆ, ಕೋಲಾರ ಜಿಲ್ಲೆಯಲ್ಲಿರುವ ಕೆಲವು ಹಳ್ಳಿಗಳಿಗೆ ಕುಡಿಯುವ ನೀರಿನ ಸಮಸ್ಯೆಯನ್ನು ಕೂಡ ನೀವು ಬಗೆಹರಿಸಬಹುದು. ಅಥವಾ ಎಲ್ಲಾದರೂ ಮರಳುಗಾಡಿರುವ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದು, ಕುಡಿಯುವುದಕ್ಕೆ ಮಾತ್ರ sparingly You have to use that.

ಡಾ: ಎಂ.ಸಿ.ಸುಧಾಕರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತ ಯಂತ್ರವನ್ನು ವಿಧಾನ ಸೌಧದಲ್ಲೆ ಹಾಕಿದ್ದಾರೆ, ಅದಕ್ಕೆ ವಿದ್ಯುತ್ ಇರಬೇಕಲ್ಲಾ? ಅದನ್ನೆಲ್ಲಾ ನಾವು ಚರ್ಚೆ ಮಾಡಿದ್ದೇವೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ : It is not a big equipment. ಬ್ಯಾಟರಿ ಅಪರೇಷನ್ ಕೂಡ ನೀವು ಮಾಡಬಹುದು.

ಶ್ರೀ ವಿ.ಮುನಿಯಪ್ಪ : ಹೈದರಾಬಾದಿನಿಂದ ನಾವೇ ಮುನಿಸಿಪಲ್ ಫಂಡಿನಿಂದ ಎಕ್ಯುಪ್‌ಮೆಂಟ್ ತಂದು ಈಗ ಎರೆಕ್ಟ್ ಮಾಡಿದ್ದೇವೆ. ಅದು ಗಾಳಿಯಲ್ಲಿರುವ ತೇವಾಂಶವನ್ನು ಹೀರಿ ಪ್ರತಿ ದಿವಸ 500–600 ಲೀಟರ್ ನೀರನ್ನು ಕೊಡುತ್ತಿದೆ, ಅದಕ್ಕೆ ಯಾವುದೇ ವಿದ್ಯುತ್ ಬೇಕಾಗಿಲ್ಲ, ನೇಚರ್ ನಲ್ಲಿರುವ ತೇವಾಂಶವನ್ನು ಎಳೆದುಕೊಂಡು ನೀರು ಕೊಡುತ್ತಿದೆ. ಎಲ್ಲೆಲ್ಲಿ ಸಣ್ಣ ಸಣ್ಣ ಹಳ್ಳಿಗಳಲ್ಲಿ ನೀರೇ ಇಲ್ಲ, ಸರ್ಫೇಸ್ ವಾಟರ್ ಇಲ್ಲ, ಬೇರೆ ಸೋರ್ಸು ಇಲ್ಲ, ಅಂಥ ಕಡೆ ನೀವು ಆ machines ತಂದು ಹಾಕಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ದಯಮಾಡಿ, ಸಬ್ಸಿಡಿ ಕೊಟ್ಟರೆ ವೈಯಕ್ತಿಕವಾಗಿ ರೈತರು ಕೂಡ ಬಹಳ ಜನ ಹಾಕಿಕೊಳ್ಳುವುದಕ್ಕೆ ಮುಂದಕ್ಕೆ ಬರುತ್ತಾರೆ. ನೀರಿನ ಸಮಸ್ಯೆ ಇದೆ, ಏಕೆಂದರೆ, 100–75% ಫ್ಲೋಲ್ಯೂಟೆಡ್‌ವಾಟರ್ ಇರುವುದು, ನಮ್ಮ ಕೊಳವೆ ಬಾವಿಯಲ್ಲಿರುವುದೆಲ್ಲಾ ಫ್ಲೋರೈಡ್‌ವಾಟರ್, ಅಂಥ ಕಡೆ ಶುದ್ಧವಾದ ನೀರು ಬೇಕೆಂದರೆ, ಇದಕ್ಕೆ ಅವಕಾಶ ಕೊಟ್ಟು ಸಬ್ಸಿಡಿ ಕೊಟ್ಟರೆ ಖಂಡಿತ ಅವಕಾಶವಾಗುತ್ತದೆ, ದಯಮಾಡಿ ಆ ಬಗ್ಗೆ ಯೋಚನೆ ಮಾಡಿ ಸ್ವಾಮಿ.

ಅಧ್ಯಕ್ಷರು : ಈಗ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚೆ ಮುಗಿಯಿತು.

ಡಾ: ಶರಣ ಪ್ರಕಾಶ್ ಪಾಟೀಲ್ : ಅಧ್ಯಕ್ಷರೆ, ಸರ್ಕಾರದ ಕಡೆಯಿಂದ ಒಂದು ರೆಸಲ್ಯೂಷನ್ ಇದೆ.

6. ಅಧಿಕೃತ ನಿರ್ಣಯ :

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "ಸಂವಿಧಾನದ 371 (ಡಿ) ಅನುಚ್ಛೇದದ ಅಡಿಯಲ್ಲಿ ಆಂಧ್ರ ಪ್ರದೇಶದ ಕೆಲವು ಭಾಗಗಳಿಗೆ ವಿಶೇಷ ಸ್ಥಾನಮಾನ ನೀಡಿರುವಂತೆಯೇ ಕರ್ನಾಟಕ ರಾಜ್ಯ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ಗಳನ್ನು ನೀಡುವುದಕ್ಕಾಗಿ ಭಾರತ ಸಂವಿಧಾನಕ್ಕೆ ತಿದ್ದುಪಡಿಯನ್ನು ತರುವಂತೆ ಕೇಂದ್ರ ಸರ್ಕಾರವನ್ನು ಈ ಸದನವು ಒಮ್ಮತದಿಂದ ಒತ್ತಾಯಪಡಿಸುತ್ತದೆ."

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಬರಿ ಹೈದರಾಬಾದ್ ಕರ್ನಾಟಕ ವಾಗುತ್ತಿದೆ. In fact, ಹಳೇ ಬಾಂಬೆ ಕರ್ನಾಟಕದಲ್ಲೂ ಕೂಡ ಬಿಜಾಪುರದ ಕೆಲವು ಭಾಗ ಬಹಳ ಹಿಂದುಳಿದಿವೆ ಅಂಥವನ್ನು ಸೇರಿಸಬೇಕೆನ್ನುವ ಒತ್ತಾಯ ಮೊದಲಿನಿಂದಲೂ ಇದೆ. ಇವತ್ತಿನವರೆವಿಗೂ ಆ ಬಗ್ಗೆ ಯಾರೂ ಮಾತನಾಡುತ್ತಿಲ್ಲ, ದಯವಿಟ್ಟು ಇದನ್ನೂ ಕೂಡ ಅದರಲ್ಲಿ ಸೇರಿಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಡಾ: ಎಂ.ಸಿ. ಸುಧಾಕರ್ : ಬರೀ ಉತ್ತರ ಕರ್ನಾಟಕ ಏಕೆ? ನಮ್ಮ ಕಡೆಯದನ್ನು ಸ್ವಲ್ಪ ನೋಡಿ, ನಮಗೆ ಶಾಶ್ವತ ನದಿ ಮೂಲ ಏನೂ ಇಲ್ಲ, ಹಾಗಾದರೂ ಸ್ವಲ್ಪ ಅನುಕೂಲವಾಗಲಿ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:

"ಸಂವಿಧಾನದ 371(ಡಿ) ಅನುಚ್ಛೇದದ ಅಡಿಯಲ್ಲಿ ಆಂಧ್ರಪ್ರದೇಶದ ಕೆಲವು ಭಾಗಗಳಿಗೆ ವಿಶೇಷ ಸ್ಥಾನಮಾನ ನೀಡಿರುವಂತೆಯೇ ಕರ್ನಾಟಕ ರಾಜ್ಯದ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನಗಳನ್ನು ನೀಡುವುದಕ್ಕಾಗಿ ಭಾರತ ಸಂವಿಧಾನಕ್ಕೆ ತಿದ್ದುಪಡಿಯನ್ನು ತರುವಂತೆ ಕೇಂದ್ರ ಸರ್ಕಾರವನ್ನು ಈ ಸದನವು ಒಮ್ಮತದಿಂದ ಒತ್ತಾಯ ಪಡಿಸುತ್ತದೆ."

ಪ್ರಸ್ತಾವಕ್ಕೆ ಅನುಮೋದನೆ ದೊರೆಯಿತು ಮತ್ತು ನಿರ್ಣಯವು
ಸರ್ವಾನುಮತದಿಂದ ಅಂಗೀಕಾರವಾಯಿತು.

7. ವಿತ್ತೀಯ ಕಾರ್ಯಕಲಾಪಗಳು :

2010–11 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ನಿನ್ನೆಯಷ್ಟೆ ನಾವು ಯುಗಾದಿ ಹಬ್ಬವನ್ನು ಮುಗಿಸಿ ಇವತ್ತು ಎರಡನೆ ದಿವಸಕ್ಕೆ ಕಾಲಿಟ್ಟಿದ್ದೇವೆ. ರಾಜ್ಯದ ಎಲ್ಲಾ ಜನ ಇನ್ನೂ ಹಬ್ಬದ ವಾತಾವರಣದಲ್ಲೇ ಇದ್ದಾರೆ, ಇವತ್ತು ಬಹಳ ಮುಖ್ಯವಾದ ಹಬ್ಬ, ವರ್ಷದ ತೊಡಕು ಎಂದು, ಅದು ಅವರಿಗೆ ಅರ್ಥವೇ ಆಗುವುದಿಲ್ಲ, ಆ ಹಬ್ಬನ್ನು ಬಹಳ ಸಂತೋಷದಿಂದ ರಾಜ್ಯಾದ್ಯಂತ ಬಹಳ ಸಂತೋಷದಿಂದ, ಸಂಭ್ರಮ ಸಡಗರದಿಂದ ಇವತ್ತು ಆಚರಿಸುತ್ತಿರುವ ದಿನ. ಈ ಸಂವತ್ಸರವನ್ನು ವಿಕೃತಿನಾಮ ಸಂವತ್ಸರವೆಂದು ಕರೆಯುತ್ತಾರೆ. ಈ ಸಂವತ್ಸರದ ಗೂಢಾರ್ಥ ವನ್ನು ನಾವು ನೋಡಿದರೆ, ಎಷ್ಟರ ಮಟ್ಟಿಗೆ ಮುಂದಿನ ದಿನಗಳಲ್ಲಿ ಅದು ಆಸದಾಯಕವಾಗಿರುತ್ತದೆ ಎಂಬುದನ್ನು ಹೇಳುವುದು ಸ್ವಲ್ಪ ಕಷ್ಟವಾಗುತ್ತದೆ. ಏನೇ ಆಗಲಿ, ಹಿಂದಿನ ವರ್ಷದ ಕಹಿ ಅನುಭವಗಳು ಮತ್ತೆ ರಾಜ್ಯಕ್ಕೆ ಆಗದೇ ಇರಲಿ ಎನ್ನುವ ಭಾವನೆಯನ್ನು ನಾನು ವ್ಯಕ್ತಪಡಿಸುವುದಕ್ಕೆ ನಾನು ಇಷ್ಟಪಡುತ್ತೇನೆ. 2009ನೇ ಕಳೆದ ವರ್ಷ ರಾಜ್ಯಕ್ಕೆ ಅತ್ಯಂತ ಸಂಕಷ್ಟವನ್ನು ತಂದುಕೊಟ್ಟ ವರ್ಷವಾಗಿತ್ತು. ಸರ್ಕಾರಕ್ಕೆ ಒಂದು ರೀತಿ ಸತ್ವಪರೀಕ್ಷೆಯ ವರ್ಷ ಕೂಡ ಆಗಿತ್ತು. ಅಂಥ ವಿಚಾರಗಳು ಮತ್ತೆ ಮರುಕಳಿಸುವುದಿಲ್ಲವೆನ್ನುವ ರೀತಿಯಲ್ಲಿ ನಾವಿದ್ದೇವೆಂದು ಭಾವಿಸುತ್ತೇವೆ. ಇವತ್ತು ಸರ್ಕಾರಕ್ಕೆ, ರಾಜ್ಯದ ಎಲ್ಲಾ ಜನರಿಗೂ ಕೂಡ ಯುಗಾದಿಯ ಶುಭಾಶಯಗಳನ್ನು ಹೇಳಬಯ ಸುತ್ತೇನೆ. ಈಗ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಈ ಆಯವ್ಯಯವನ್ನು ಮಂಡನೆ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಬಹಳ ಆಶೋತ್ತರಗಳನ್ನು ಇಟ್ಟುಕೊಂಡಿದ್ದಾರೆ.

ಈ ಆಯವ್ಯಯ 70,063 ಕೋಟಿ ರೂ.ಗಳನ್ನು ಹೊಂದಿದೆ. ಜೊತೆಗೆ 5,776 ಕೋಟಿ ರೂ.ಗಳನ್ನು ಸೆಸ್‌ಮುಖೇನ ಕಲೆಕ್ಟ್ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. 2010-11 ರ ಆಯವ್ಯಯ ರೆವಿನ್ಯೂ ಸರ್ಪ್ಲಸ್ ಆಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಹೇಳುವಾಗ "ಹೊಸತೊಂದು ನಾಡ ಕಟ್ಟುವೆವು, ತಾಯಿ ಬೆನ್ನಟ್ಟಿ ಮುಂದೆ ಕಳಿಸು, ಮುಂದಿಟ್ಟ ಹೆಜ್ಜೆ ಹಿಂದೆಗೆಯದಂತೆ ನಡೆಯುವುದ ನಮಗೆ ಕಲಿಸು." ಮಾನ್ಯ ಮುಖ್ಯಮಂತ್ರಿಗಳಿಗೆ ಯಾರೂ ಕೂಡ ತಡೆ ಮಾಡಿಲ್ಲ. ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಹೇಳಿರತಕ್ಕಂತಹ ಮಾತನ್ನು ಈಡೇರಿಸಬೇಕೆಂಬ ವಿಶ್ವಾಸವೇ ನಮ್ಮಲ್ಲಿರತಕ್ಕಂಥದ್ದು. ಬಹುಶಃ ಆ ತರಹ ಏನಾದರೂ ತೊಂದರೆ ಬಂದರೆ ನಮ್ಮ ಕಡೆಯಿಂದ ಬರಬೇಕೇ ವಿನಾ: ನಮ್ಮ ಕಡೆಯಿಂದ

ಬರುವುದಕ್ಕೆ ಸಾಧ್ಯವಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಡಳಿತ ಪಕ್ಷ ಬಹುಮತದಿಂದ ಕೂಡಿದೆ. ಬಹುಮತ ಇರತಕ್ಕಂತಹ ಸಂದರ್ಭದಲ್ಲಿ ಏನು ಆಶೋತ್ತರಗಳನ್ನು ಇಟ್ಟುಕೊಂಡು ಇವತ್ತು ನೀವು ಆಯವ್ಯಯವನ್ನು ಮಂಡನೆ ಮಾಡಿದ್ದೀರಿ, ಆ ಮಂಡನೆ ಮಾಡಿದ್ದನ್ನು ಸಾಬೀತು ಪಡಿಸತಕ್ಕಂತಹ ರೀತಿಯನ್ನು ಹೋಗಬೇಕು ಎನ್ನತಕ್ಕಂತಹ ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಾನು ಆಯವ್ಯಯದ ಮೇಲೆ ಮಾತನಾಡುವ ಸಂದರ್ಭದಲ್ಲಿ ಎಲ್ಲಾ ವಿಚಾರಗಳನ್ನು ಸರ್ಕಾರದ ಮುಂದೆ ಇರತಕ್ಕಂತಹ ಅಂಕಿಅಂಶಗಳನ್ನು ನಾನು ವಿಶೇಷವಾಗಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯನವರು ಕೂಡ ಅಂಕಿ ಅಂಶಗಳ ಸಮೇತ ಆಯವ್ಯದಲ್ಲಿ ಇರತಕ್ಕಂತಹ ಲೋಪದೋಷಗಳೇನು ಎನ್ನುವುದನ್ನು ವಿವರವಾಗಿ, ಸಮರ್ಥನೀಯವಾಗಿ ಮಂಡನೆ ಮಾಡತಕ್ಕಂತಹ ಕೆಲಸವನ್ನು ಮಾಡಿದ್ದಾರೆ. ನಮ್ಮ ಆಯವ್ಯಯಕ್ಕೆ Fiscal Responsibility Act ಇರಬಹುದು, ಅಥವಾ Gurantee Act ಇರಬಹುದು, ಇದರ ಪರಿಮಿತಿಯಲ್ಲಿ ಆಯವ್ಯಯ ಹೇಗೆ ಇರಬೇಕು ಎನ್ನತಕ್ಕಂಥದ್ದರ ಬಗ್ಗೆ ಸಾಕಷ್ಟು ವಿಚಾರಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ನನಗೆ ಒಂದು ಅಧ್ಯಕ್ಷರೆ, ಆಯವ್ಯದ ಬಗ್ಗೆ ಮಾತನಾಡಬೇಕಾದ ಸಂದರ್ಭದಲ್ಲಿ ಹಿಂದಿನ ವರ್ಷ ತಾವು ಆಯವ್ಯಯದಲ್ಲಿ ಹೇಳಿದಂತಹ ಮಾತುಗಳನ್ನು ಎಷ್ಟರ ಮಟ್ಟಿಗೆ ಅನುಷ್ಠಾನ ಮಾಡಿದ್ದೀರಿ ಎನ್ನುವಂತಹ ಅಂಕಿ ಅಂಶಗಳು ಇವತ್ತು ನಮಗೆ ಲಭ್ಯವಾಗುತ್ತಿಲ್ಲ. ಕಾರಣವೇನೆಂದರೆ, ಆಯವ್ಯಯವನ್ನು ಮಂಡನೆ ಮಾಡಿ ಇಷ್ಟು ದಿವಸಗಳಾದಾಗ್ಯೂ ಕೂಡ ನಮಗೆ ಹಣಕಾಸಿನ ಇಲಾಖೆಯಿಂದ ಸರ್ಕಾರದಿಂದ ಯಾವುದೇ ಹೆಚ್ಚಿನ ಮಾಹಿತಿ ಇಲ್ಲ. ಕಾರಣವೇನೆಂದರೆ, ಒಂದೇ ಒಂದು ನಮಗೆ ಕೊಟ್ಟಿರತಕ್ಕಂತಹ ದಾಖಲೆ ಏನೆಂದರೆ, ಇದು Action Taken Report on budget 2009-10 ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಅದರ ಒಳಗಿನ ಅಂಶವನ್ನು ನೀವು ನೋಡಬೇಕು. ಒಂದೇ ಒಂದು ಸೂಕ್ಷ್ಮವಾದ ಅಂಶವನ್ನು ನಾನು ಹೇಳುತ್ತೇನೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ 250 ಕೋಟಿ ಧನ ಸಹಾಯವನ್ನು ಆಯವ್ಯಯದಲ್ಲಿ ಒದಗಿಸುತ್ತಿದ್ದೇವೆಂದು ತಾವು ಹೇಳಿದಿರಿ. ಆದರೆ ತೆಗೆದು ಕೊಂಡಿರತಕ್ಕಂತಹ ಕ್ರಮ ಏನು ಎನ್ನತಕ್ಕಂಥದ್ದನ್ನು ನೀವು ಏನನ್ನೂ ಹೇಳುವುದಿಲ್ಲ. ಈ ಯೋಜನೆ ಕಾರ್ಯವನ್ನು ನೋಡಲ್ ಏಜೆನ್ಸಿ ಆದ

SLBCಯವರು ನಿರ್ವಹಿಸುತ್ತಿದ್ದು, 25 ಕೋಟಿ ರೂ.ಗಳನ್ನು ಮುಂಗಡವಾಗಿ ಬಿಡುಗಡೆ ಮಾಡಲು ಕೋರಿದ್ದಾರೆ. ಈ ರೀತಿ ಆಗಿರತಕ್ಕಂತಹ ಅಪೂರ್ಣವಾಗಿರತಕ್ಕಂತಹ ಮಾಹಿತಿಯನ್ನು ನೀವು ಕೊಟ್ಟರೆ ಎಷ್ಟು ಹಣವನ್ನು ನೀವು ಯೋಜನೆಗಳಿಗೆ ಬಿಡುಗಡೆ ಮಾಡಿದ್ದೀರಿ, ಎಷ್ಟು ಪರಿಣಾಮಕಾರಿಯಾಗಿ ಅದು ಅನುಷ್ಠಾನ ಆಗುವುದಕ್ಕೆ ಸಾಧ್ಯವಾಗಿದೆ ಎನ್ನತಕ್ಕಂಥದ್ದನ್ನು ನಾವು ಹೇಳುವುದಕ್ಕೆ ಸಾಧ್ಯವಾಗುತ್ತದೆ. Action Taken Report ನ ಪ್ರತಿ ಪೇಜ್‌ನಲ್ಲಿಯೂ ಕೂಡ ನಿಮ್ಮ ಯೋಜನೆಗಳು ಏನಿತ್ತು ಆ ಯೋಜನೆಗಳನ್ನೇ ಮತ್ತೆ ಮರುಕಳಿಸುವಂತಹ ರೀತಿಯಲ್ಲಿ ಪ್ರಿಂಟ್ ಮಾಡಿದ್ದಾರೆ ವಿನಾ ಯೋಜನೆಗಳಿಗೆ ಎಷ್ಟು ಹಣ ಬಿಡುಗಡೆ ಆಯಿತು, ಏನಾಯಿತು, ಎನ್ನತಕ್ಕಂಥದ್ದು ಇಲ್ಲ. ಅಧ್ಯಕ್ಷರೆ, ನಾನು ಒಂದು ಕೇಳುವುದಕ್ಕೆ ಇಷ್ಟ ಪಡುತ್ತೇನೆ. ಬಹುಶಃ ಯೋಜನೆಗಳಿಗೆ ಎಷ್ಟು ಹಣ ಬಿಡುಗಡೆ ಮಾಡಬೇಕೆಂದು ಕೇಳಿದಾಗ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ನಮಗೆ ಅಂಕಿ ಅಂಶ ಲಭ್ಯವಾಗತಕ್ಕಂಥದ್ದು ಎಂದರೆ ಡಿಸೆಂಬರ್ 30 ರೊಳಗೆ ಎಷ್ಟು ಹಣ ಖರ್ಚಾಗಿದೆ ಎನ್ನತಕ್ಕಂಥಹ ಮಾಹಿತಿ ಮಾತ್ರ ದೊರಕುತ್ತದೆ. ನಾನು ಒಂದು ಕೇಳುತ್ತೇನೆ. ಮಾಹಿತಿ ತಂತ್ರಜ್ಞಾನದಲ್ಲಿ ನಮ್ಮ ರಾಜ್ಯ ಮುಂದಿರುವಷ್ಟು ಯಾರೂ ಇಲ್ಲ. ನಮ್ಮ ಟ್ರೆಜರಿಗಳನ್ನೆಲ್ಲಾ computerize ಮಾಡಿದ್ದೇವೆ. ಇಷ್ಟೆಲ್ಲಾ ಮಾಡಿದ್ದಾಗ್ಯೂ ಕೂಡ ಅಂಕಿ ಅಂಶಗಳನ್ನು ಮಾತ್ರ ನಾವು ಡಿಸೆಂಬರ್ ತಿಂಗಳವರೆಗೆ ಹೋಲಿಕೆ ಮಾಡಬೇಕೆನ್ನುವುದಾದರೆ ನಾವು ಯೋಚನೆ ಮಾಡಬೇಕು. ಏಕೆ ಇ-ಗವರ್ನೆನ್ಸ್ ಬಗ್ಗೆ ಮಾತನಾಡಬೇಕು? ಇ-ಗವರ್ನೆನ್ಸ್ ಬಗ್ಗೆ ನೀವು ಮಾತನಾಡಿ ಮಾರ್ಚ್ 30 ರೊಳಗೆ ಎಷ್ಟಾಗುತ್ತದೆ ಎಂದು ಹೇಳದೆ, ನನಗೆ ಎಲ್ಲೋ ಒಂದು ಕಡೆ ಅನುಮಾನ ಇದೆ ಅಧ್ಯಕ್ಷರೆ, ಆ ಮಾಹಿತಿಗಳನ್ನು ಯಾರೇ ಕೇಳಿದಾಗ್ಯೂ ಕೂಡ ಎಲ್ಲೋ ಒಂದು ರೀತಿಯಲ್ಲಿ ಸರ್ಕಾರ ಅದನ್ನು ಗೌಪ್ಯವಾಗಿ ಜನಗಳಿಗೆ ಕೊಡದೆ ಇರತಕ್ಕಂತಹ ರೀತಿಯಲ್ಲಿ ಕೆಲಸ ಮಾಡುತ್ತಿದೆಯಾ ಎನ್ನತಕ್ಕಂತಹ ಅನುಮಾನ ಬರುತ್ತದೆ. ನಾವು ಯಾವುದೇ ಮಾಹಿತಿಯನ್ನು ಕೇಳಿದಾಗ ಹಣಕಾಸು ಇಲಾಖೆಯಿಂದ ಬರತಕ್ಕಂತಹ ವರ್ತಮಾನ ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಕಡತವನ್ನು ಸಲ್ಲಿಸಿದ್ದೇವೆ, ಅವರಿಂದ ಉತ್ತರ ಬಂದಾಗ ಮಾತ್ರ ನಾವು ಕೊಡುತ್ತೇವೆ ಎನ್ನತಕ್ಕಂತಹ ಮಾತನ್ನು ಸರ್ವೇ ಸಾಮಾನ್ಯವಾಗಿ ಹೇಳತಕ್ಕಂಥದ್ದನ್ನು ನಾವು

ನೋಡಿದಾಗ ಇ–ಗವರ್ನೆನ್ಸ್ ಎನ್ನತಕ್ಕಂಥದ್ದಕ್ಕೆ ಅರ್ಥ ಇದೆಯೇ ಎಂದು ನನಗನ್ನಿಸುತ್ತದೆ. ಅದನ್ನು ಸರ್ಕಾರ ಅರ್ಥ ಮಾಡಿಕೊಂಡಿದೆಯಾ ಎಂದು ನನಗನ್ನಿಸುತ್ತದೆ. ಯಾವುದೇ information ಲಭ್ಯವಾಗುವುದಕ್ಕೆ ಸಾಧ್ಯವಿಲ್ಲ. ಆ ರೀತಿಯಾಗಿ ಮಾಡಿದರೆ ಖಂಡಿತವಾಗಿ ಕೂಡ, ಇವತ್ತು ನಾವು ಮಾತನಾಡುವಾಗ ಕರಾರುವಾಕ್ಕಾಗಿ ಯೋಜನೆಗಳಿಗೆ ಏನು ಖರ್ಚು ಮಾಡಿದಿರಿ, ಏನು ತಂದಿರಿ ಎನ್ನತಕ್ಕಂಥದ್ದನ್ನು ನಾವು ಮಾತನಾಡುವುದು ಕಷ್ಟವಾಗುತ್ತದೆ. ಸದನ ಮುಗಿದ ಮೇಲೆ ನಮಗೆ ಜೂನ್ ಅಥವಾ ಜುಲೈ ತಿಂಗಳಲ್ಲಿ ಸದನ ಸೇರಿದಂತಹ ಸಂದರ್ಭದಲ್ಲಿ ಆದರೂ ನೀವು 31ನೇ ಮಾರ್ಚ್ ವೇಳೆಗೆ ಎಷ್ಟು ಹಣವನ್ನು ಖರ್ಚು ಮಾಡಿದಿರಿ, Programmes ಎಷ್ಟರ ಮಟ್ಟಿಗೆ ಅಚೀವ್‌ಮೆಂಟ್ ಆಗಿದೆ ಎನ್ನತಕ್ಕಂತಹ ಮಾಹಿತಿ ನಮಗೆ ಕೊಟ್ಟರೆ ಒಳ್ಳೆಯದು. ಈ ಬಜೆಟನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ Economic Survey Report ಆ ರೀತಿಯಾಗಿ ಮಾಡುತ್ತಾರೋ performance budget ಅನ್ನೂ ಕೂಡ ಇವತ್ತು ಮಂಡನೆ ಮಾಡಬೇಕಾದುದು, it is mandatory. ಇಷ್ಟು ಆದಾಗ್ಯೂ ಕೂಡ ನೀವು Action Taken Report ಕೊಡುತ್ತೀರೇ ವಿನಾ performance budget ನೀವು ಕೊಡುವುದಿಲ್ಲ. ಅದು ಏಕೆ? performance budget ಅನ್ನು ಕೊನೇ ಪಕ್ಷ 31ನೇ ಮಾರ್ಚ್ ನಂತರ ಕೊಡಬೇಕಾದುದನ್ನು ಮುಂದಿನ ಸದನ ಸೇರುವುದರೊಳಗಾಗಿ ಕೊಟ್ಟರೆ ಅಂಕಿ ಅಂಶಗಳನ್ನು ಹಾಗೂ ಅದರ ಲೋಪದೋಷಗಳನ್ನು ಎತ್ತಿ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ. ಮುಂದಿನ ಡಿಮಾಂಡ್ಸ್ ಮೇಲೆ ಮಾತನಾಡುವಾಗ ಅದು ಒಂದು ಮೂಲತಃ ಡಾಕ್ಯುಮೆಂಟ್ ಆಗುತ್ತದೆ ಎನ್ನತಕ್ಕಂಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಹಣಕಾಸಿನ ವಿಚಾರದ ಬಗ್ಗೆ ನಾನು ಹೆಚ್ಚು ವಿಚಾರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲಾ ವಿಚಾರಗಳೂ ಕೂಡ ಈಗಾಗಲೇ ಸಾಕಷ್ಟು ರೀತಿಯಲ್ಲಿ ಪ್ರಸ್ತಾಪವಾಗಿರುವುದರಿಂದ ಪದೇ ಪದೇ ಎಲ್ಲರೂ ಅದೇ ವಿಚಾರನ್ನು ಪ್ರಸ್ತಾಪ ಮಾಡುವುದರಲ್ಲಿ ಅರ್ಥವಿರುವುದಿಲ್ಲ ವೆಂದು ನಾನು ಭಾವಿಸುತ್ತೇನೆ. ಅರ್ಥವಿಲ್ಲವೆಂದರೆ ಮತ್ತೆ ನಾನು ಹೇಳುವಂತಹ ಅವಶ್ಯಕತೆ ಇಲ್ಲ. ಹಾಗಾಗಿ ನನಗೆ ಕೆಲವು ಅನುಮಾನಗಳಿವೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಈ ಅನುಮಾನಗಳನ್ನು Clarify ಮಾಡಬೇಕು. ಅದನ್ನು ನೀವು Clarify

ಮಾಡಿದಂತಹ ಸಂದರ್ಭದಲ್ಲಿ ಮುಂದಿನ ದಿನಗಳಲ್ಲಿ ನಾವು ಮಾತನಾಡುವುದಕ್ಕೆ ಅನುಕೂಲವಾಗುತ್ತದೆ. 2007–08 ಮತ್ತು 2008–09 ರಲ್ಲಿ ರೆವಿನ್ಯೂ ಸರ್ಪ್ಲಸ್ ಬಹಳಷ್ಟು ಕಡಿಮೆ ಆಗಿದೆ. Fiscal deficit ಮತ್ತು Primary deficit ಹೆಚ್ಚಾಗಿದೆ. ಇದರಿಂದ ರಾಜ್ಯದ ಹಣಕಾಸಿನ ಸ್ಥಿತಿ ಅತ್ಯಂತ ಗಣನೀಯ ಮಟ್ಟದಲ್ಲಿ ಇಳಿಮುಖವಾಗಿದೆ ಎನ್ನತಕ್ಕಂಥದ್ದಕ್ಕೆ ಇದಕ್ಕಿನ ನಿದರ್ಶನ ಬೇಕಾಗಿಲ್ಲ. Non-tax receipts ಕಳೆದ ಮೂರು ವರ್ಷಗಳಿಂದ ಕೂಡ ಬಹಳಷ್ಟು ಕಡಿಮೆ ಆಗುತ್ತಿರುವುದನ್ನು ಕೂಡ ನಾವು ನೋಡುತ್ತಿದ್ದೇವೆ. Non-tax revenues ನಲ್ಲಿ ಏಕೆ ಕಡಿಮೆ ಆಗುತ್ತಿದೆ ಎನ್ನತಕ್ಕಂಥದ್ದರ ಬಗ್ಗೆ ಸುಧಾರಣಾ ಕಾರ್ಯಕ್ರಮಗಳನ್ನು ನೀವು ಏಕೆ ಹಾಕಲಿಲ್ಲ? ಪ್ರತಿ ವರ್ಷ ಕೂಡ ಅದು ಕಡಿಮೆ ಆಗುತ್ತಿರುವಂತಹ ಸಂದರ್ಭದಲ್ಲಿ ಸುಧಾರಣಾ ಕಾರ್ಯಕ್ರಮಗಳು ಏಕೆ ಆಗಲಿಲ್ಲ, ಎನ್ನತಕ್ಕಂಥದ್ದು ಕೂಡ ನೀವು ವಿವರಣೆಯನ್ನು ಕೊಡಬೇಕಾಗುತ್ತದೆ. 2008–09 ರಲ್ಲಿ non-plan expenditure ಒಟ್ಟು ವೆಚ್ಚದ 75% ಇತ್ತು. 12ನೇ ಹಣಕಾಸಿನ ಆಯೋಗ ನಮೂದಿಸಿದ್ದಕ್ಕಿಂತ ಹೆಚ್ಚು ನೀವು non-plan expenditure ನೀವು ಮಾಡಿದ್ದೀರಿ, ಅದಕ್ಕೆ ಮುಖ್ಯ ಕಾರಣವೇನೆಂದರೆ, ನೀವು ಬಡ್ಡಿಯನ್ನು ಹೆಚ್ಚು ಪಾವತಿ ಮಾಡುತ್ತಿರುವುದೇ ಮುಖ್ಯವಾದ ಕಾರಣವಾಗಿದೆ. ಎಲ್ಲೋ ಒಂದು ಕಡೆಗೆ ನೀವು ಸಾಲವನ್ನು ನಿಯಂತ್ರಣ ಮಾಡಬೇಕಾಗಿದೆ. ಅದು ಮಾಡುವಂತಹ ಕೆಲಸವನ್ನು ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಮಾತನಾಡಬೇಕಾದಾಗ ಬೇರೆ ಬೇರೆ ರಾಜ್ಯಗಳವರು ಸಾಲದ ಪ್ರಮಾಣದಲ್ಲಿ ಎಷ್ಟರ ಮಟ್ಟಿಗೆ ಹೋಗಿದ್ದಾರೆ, ರಾಜಸ್ಥಾನದವರು ಎಷ್ಟು ತೆಗೆದುಕೊಂಡಿದ್ದಾರೆ, ಗುಜರಾತ್‌ನವರು ಎಷ್ಟು ತೆಗೆದುಕೊಂಡಿದ್ದಾರೆ, ಆಂಧ್ರದವರು ಎಷ್ಟು ತೆಗೆದು ಕೊಂಡಿದ್ದಾರೆ, ಎನ್ನತಕ್ಕಂಥದ್ದನ್ನು ಆಧರಿಸಿ ನಾವು ಆ ಮಟ್ಟಕ್ಕೆ ಹೋಗಿಲ್ಲ, ನಾವು ಇನ್ನೂ ಕೂಡ ಸಾಲ ತರಬಹುದು ಎನ್ನತಕ್ಕಂತಹ ರೀತಿಯಲ್ಲಿ ನೀವು ಸಮರ್ಥನೆ ಮಾಡಿಕೊಳ್ಳುವುದಾದರೆ ಅದು ಸರಿಯಾದುದು ಅಲ್ಲ ಎಂದು ನನ್ನ ಭಾವನೆ. ನಾವು ಸಾಲ ಮಾಡುವುದಕ್ಕೆ ಅವಕಾಶ ಇದೆ. ಸಾಲದಿಂದಲೇ ಎಲ್ಲವನ್ನೂ ಕೂಡ ಮಾಡುವುದಕ್ಕಾಗುವುದಿಲ್ಲ. ನಾವು ಹೆಚ್ಚು ಸಂಪನ್ಮೂಲ ಗಳನ್ನು ಕ್ರೋಢೀಕರಿಸತಕ್ಕಂಥ ದಿಸೆಯಲ್ಲಿ ನಾವು ಹೋಗಬೇಕಾಗಿದೆ. ಆ ದಿಸೆಯಲ್ಲಿ ಕೂಡ ಇವತ್ತು ನಾವು ಚಿಂತನೆ ಮಾಡಬೇಕಾಗಿದೆ.

(4-50 PM)

Non-plan expenditure ಆಗಿರತಕ್ಕಂಥದ್ದನ್ನು ಎಲ್ಲೋ ಒಂದು ರೀತಿಯಲ್ಲಿ ಕಡಿವಾಣ ಹಾಕತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ ನೀವು . . .

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಜಯಚಂದ್ರ ರವರೆ, ತಾವು ಇದರ ಬಗ್ಗೆ ಸಾಕಷ್ಟು ಚಿಂತನೆ ಮಾಡುವುದರಿಂದ ನಾನು ನಿಮಗೆ ಹೇಳುತ್ತಿದ್ದೇನೆ. ಮೊನ್ನೆ ನಾವು Planning Commission ಮುಂದೆ ಹೋದಾಗ ನಮ್ಮ ಆರ್ಥಿಕ ಸ್ಥಿತಿಗಳ ಬಗ್ಗೆ ಅನೇಕ ಚಿಂತನೆಗಳನ್ನು ಅವರ ಕಣ್ಣು ಮುಂದೆ ಇಟ್ಟಾಗ Planning Commission ನವರೇ ನಮಗೆ ಕೊಟ್ಟಂಥ ಸಲಹೆಯೆಂದರೆ, ಈಗಿರುವ ಚೌಕಟ್ಟಿನಡಿಯಲ್ಲಿಯೇ ನೀವು ಇನ್ನೂ ಸುಮಾರು 2 ಸಾವಿರ ಕೋಟಿಗೂ ಹೆಚ್ಚು ಸಾಲ ತೆಗೆದುಕೊಳ್ಳಲು ಅವಕಾಶವಿದೆ, Provison ಇದೆ. ಅದನ್ನು ತೆಗೆದುಕೊಂಡು ನೀವು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗ ಮಾಡಿ. ನಿಮ್ಮದೂ ಯಾವಾಗಲೂ Priority sector ನಲ್ಲಿದೆ ಎನ್ನುವ ಸಲಹೆಯನ್ನು ಅವರು ಕೊಟ್ಟರು ಎಂಬುದನ್ನು ನಾನು ನಿಮ್ಮ ಗಮನಕ್ಕೆ ಈ ಸಂದರ್ಭದಲ್ಲಿ ತರುತ್ತಿದ್ದೇನಷ್ಟೆ.

ಶ್ರೀ ಟಿ.ಬಿ. ಜಯಚಂದ್ರ : ನಾನು ಕೂಡ ಹಿಂದೆ ಹಲವಾರು ಬಾರಿ Planning Commission ಮುಂದೆ ಹೋಗಿದ್ದೇನೆ. ಕರ್ನಾಟಕದ ಹಣಕಾಸಿನ ಪರಿಸ್ಥಿತಿ ಬಗ್ಗೆ ಯಾವತ್ತೂ ಕೂಡ Planning Commission ನವರು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ಇನ್ನೂ ಕೂಡ ಹೆಚ್ಚು ಪ್ರೋತ್ಸಾಹವನ್ನು ಮಾಡುತ್ತಾರೆ, ಸಾಲ ಮಾಡಿ, ಕೆಲಸ ಮಾಡಿ, ಕಷ್ಟಪಡಿ ಎನ್ನತಕ್ಕಂಥ ರೀತಿಯಲ್ಲಿ ಹೇಳುತ್ತಾರೆ. ಆದರೆ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬಹಳ ಉತ್ಸಾಹದಾಯಕ ಮುಖ್ಯಮಂತ್ರಿಗಳು ಎನ್ನತಕ್ಕಂಥ ರೀತಿಯಲ್ಲಿ ತಾವೇ ಹೇಳುತ್ತೀರಿ. ಏಕೆಂದರೆ ಕೆಳ ಹಂತದಿಂದ ನೀವು ಇಂದು ರಾಜ್ಯದ ಆಡಳಿತದ ಚುಕ್ಕಾಣಿಯನ್ನು ಹಿಡಿದಿರುವಾಗ ನಿಮ್ಮ ಕಳಕಳಿ ಏನು ಇರಬೇಕೆಂದರೆ, ಇವತ್ತು ನಿಮ್ಮ ಆಸೆಗಳನ್ನು, ಆಕಾಂಕ್ಷೆಗಳನ್ನು ಈಡೇರಿಸಬೇಕಾದಾಗ ನೀವು ಅನೇಕ ಬಾರಿ ಹೇಳಿದ್ದೀರಿ, ಚುನಾವಣೆ ಪೂರ್ವದಲ್ಲಿ ಮತ್ತು ಅನೇಕ ಬಾರಿ ಹೇಳಿದ್ದೀರಿ. ಒಂದು ಲಕ್ಷ ಕೋಟಿ ರೂ.ಗಳ ಹಣವನ್ನು ತರತಕ್ಕಂಥ ಸಾಮರ್ಥ್ಯ, ಶಕ್ತಿ ನನಗಿದೆ ಎನತಕ್ಕಂಥ ಮಾತನ್ನು ಅನೇಕ ಬಾರಿ ಹೇಳಿದ್ದೀರಿ. ನಾವು ನಿಮ್ಮ ಮಾತನ್ನು ಮೆಚ್ಚಿದ್ದೇವೆ. ಆ ಮಟ್ಟಕ್ಕೆ ನೀವು ಸಂಪನ್ಮೂಲವನ್ನು

ಕ್ರೋಢೀಕರಿಸುವ ವಿಚಾರದಲ್ಲಿ ನಿಮ್ಮ ಚಿಂತನೆ ಇರಬೇಕು. ನಾನು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳತಕ್ಕಂಥದ್ದೇನೆಂದರೆ, ರಾಜ್ಯದ ಹಿತವನ್ನು, ರಾಜ್ಯದ ಅಭಿವೃದ್ಧಿಯ ಬಗ್ಗೆ ಹೆಚ್ಚು ಗಮನ ಕೊಡಬೇಕು. ನೀವು ಮಾತು ಮಾತಿಗೂ ಹೇಳುತ್ತಿರುತ್ತೀರಿ, 'ಅಭಿವೃದ್ಧಿಯೇ ನನ್ನ ಮಂತ್ರ ಮತ್ತು ಗುರಿ' ಎನ್ನುತ್ತಿರುತ್ತೀರಿ. ಈ ರೀತಿ ನೀವು ಹೇಳಬೇಕಾದಾಗ ಎಲ್ಲಿಯವರೆವಿಗೂ ಕೂಡ ಸಂಪನ್ಮೂಲಗಳು ಜಾಸ್ತಿಯಾಗುವುದಿಲ್ಲವೋ ಅಲ್ಲಿಯವರೆಗೂ ಅಭಿವೃದ್ಧಿಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ಎಲ್ಲೋ ಒಂದು ಕಡೆ ನೀವು ಚಾಣಾಕ್ಷ ರಾಜಕಾರಣಿ. ಆದರೆ ಎಲ್ಲೋ ಒಂದು ಕಡೆಗೆ ನಿಮ್ಮ statesmanship ಅನ್ನು ನೀವು ಬೆಳೆಸಿಕೊಳ್ಳಬೇಕಾಗುತ್ತದೆ. ನೀವು ರಾಜ್ಯದ ಹಿತವನ್ನು ಕಾಪಾಡಬೇಕಾದಾಗ ನೀವು ರಾಜ್ಯದ ಸಂಪನ್ಮೂಲವನ್ನು ಕ್ರೋಢೀಕರಿಸುವುದನ್ನು ಯಾವ ರೀತಿಯಾಗಿ ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಹೆಚ್ಚು ಚಿಂತನೆಯನ್ನು ಮಾಡಬೇಕಾಗುತ್ತದೆ. ಇವತ್ತು ನಾವು ರೂ.10 ಸಾವಿರ ಕೋಟಿಗೂ ಹೆಚ್ಚು ಹಣವನ್ನು Public Undertakings ನಲ್ಲಿ ಹಾಕಿದ್ದೇವೆ. ಹೆಚ್ಚು ಬಡ್ಡಿಯನ್ನು ತೆತ್ತಿ ಸಾಲವನ್ನು ತಂದು ಅದನ್ನು ಅನುಪಯುಕ್ತವಾಗಿರತಕ್ಕಂಥ ರೀತಿಯಲ್ಲಿ; ಹಾಕಿದ ಹಣ ವಾಪಸ್ ಬರೇ ಇರತಕ್ಕಂಥ ಯೋಜನೆಗಳಿಗೆ ಹಣವನ್ನು ತೊಡಗಿಸುತ್ತಿರತಕ್ಕಂಥದ್ದು ಒಂದು ದೊಡ್ಡ ಹೊಡೆತ ಎನ್ನತಕ್ಕಂಥ ಭಾವನೆಯಿಂದ ಹೇಳಬಯಸುತ್ತೇನೆ. ಇವತ್ತು ಒಂದು ಉದಾಹರಣೆಯನ್ನು ನಾನು ನಿಮಗೆ ಹೇಳಬಯಸುತ್ತೇನೆ. 2008-09 ರಲ್ಲಿ Cash balance ಜಾಸ್ತಿ ಇದೆ. ನೀವು ಮಾರುಕಟ್ಟೆಯಿಂದ ಸಾಲವನ್ನು ಪಡೆದಿದ್ದೀರಿ. ನೀವು ಮಾರುಕಟ್ಟೆಯಿಂದ 7 % ಗೆ ಸಾಲವನ್ನು ಪಡೆದು ಇವತ್ತು ನೀವು Reserve Bank ನಲ್ಲಿ ಇವತ್ತು ನೀವು ಆ ಷೇರ್‌ನಲ್ಲಿ invest ಮಾಡುತ್ತೀರೆಂದರೆ, ಅದು return ಬರತಕ್ಕಂಥದ್ದು only 5 %. ಈ 2% ಅನ್ನು ನೀವು ಲೆಕ್ಕ ಹಾಕಿಕೊಂಡರೆ ಸುಮಾರು ಒಂದು ತಿಂಗಳಿಗೆ 60 ರಿಂದ 70 ಕೋಟಿ ರೂಪಾಯಿ ರಾಜ್ಯಕ್ಕೆ, ಹೊರೆಯಾಗುತ್ತದೆ. ನನಗಂತೂ ಅರ್ಥವಾಗಲಿಲ್ಲ, ಸ್ವಾಮಿ. ನಾನು ಯೋಚನೆ ಮಾಡಿದೆ., ಆದರೂ ಇವರು ಏಕೆ ಹೀಗೆ ಮಾಡಿರಬಹುದು ಎಂದು ನನಗಂತೂ ಅರ್ಥವಾಗಲಿಲ್ಲ. ದಯಮಾಡಿ ಅದರ ಬಗ್ಗೆ ಯೋಚನೆ ಮಾಡಿ. ಯಾವ ಕಾರಣಕ್ಕೋಸ್ಕರ ಇವತ್ತು ಅದನ್ನು Treasury Bill ನಲ್ಲಿ invest ಮಾಡಿ ಹೆಚ್ಚು ಬಡ್ಡಿಯನ್ನು ತೆರತಕ್ಕಂಥ ರೀತಿಯಲ್ಲಿ ಇವತ್ತು ರಾಜ್ಯಕ್ಕೆ unnecessary ಆಗಿ 60 ರಿಂದ 70

ಕೋಟಿ ಒಂದು ತಿಂಗಳಿಗೆ ಹೊರೆಯಾಗತಕ್ಕಂಥ ರೀತಿಯಲ್ಲಿ ತೀರ್ಮಾನ ಮಾಡಿರುವ ಬಗ್ಗೆ ನನಗಂತೂ ಅರ್ಥವಾಗುತ್ತಿಲ್ಲ. ಇನ್ನೊಂದು ಬಹಳ ಮುಖ್ಯವಾದ ವಿಚಾರವೆಂದರೆ, ಇವತ್ತು economic recession ಆಗುತ್ತಿದೆ. Economic recession ಆಗುವಂಥ ಸಂದರ್ಭದಲ್ಲಿ stabilization ಗೆ ಎಂದು ಹೇಳಿ ಸುಮಾರು 3 ಸಾವಿರ ಕೋಟಿ ಹಣವನ್ನು ನಿಮಗೆ ಕೇಂದ್ರ ಸರ್ಕಾರ ಕೊಡುವುದಕ್ಕೆ ಒಪ್ಪಿದೆ. ಆದರೆ 3 ಸಾವಿರ ಕೋಟಿಯನ್ನು ಬಳಸಿಕೊಳ್ಳಲು ಬೇಕಾದಂಥ ಯಾವುದೇ ರೀತಿಯಾದಂಥ ಯೋಜನೆಗಳನ್ನು ಮಾಡದೆ, ಆ ಹಣ ಯಾವ ರೀತಿಯಾಗಿ ಖರ್ಚಾಗಬೇಕು ಎಂಬುದಕ್ಕೆ ನೀವು ಯೋಜನೆಗಳನ್ನು ಮಾಡದೆ ನಿಮ್ಮ Public accountನಲ್ಲಿ ಇಟ್ಟಾಗ ಅದೇನಾಗುತ್ತದೆಂದರೆ ನಿಮಗೆ ಹಣ ತುಂಬ ಇದೆ ಎನ್ನತಕ್ಕಂಥ ಭಾವನೆ ಬರುತ್ತದೆ. of course, ಇವತ್ತು ಹಣಕಾಸಿನ ಇಲಾಖೆಯವರು ಹಣವನ್ನು surplus ಎಂದು ತೋರಿಸಬೇಕಾದಾಗ deficit ಅನ್ನು ತೋರಿಸುವಂಥ ಸಂದರ್ಭದಲ್ಲಿ ಈ tactics ಮಾಡತಕ್ಕಂಥದ್ದುಂಟು. But, ಅವೆಲ್ಲದಕ್ಕಿಂತಲೂ ಹೆಚ್ಚಾಗಿ ಅವರು ಕೊಟ್ಟಂಥ ಹಣವನ್ನು ಯೋಜನೆಗಳಿಗೆ ತೊಡಗಿಸತಕ್ಕಂಥ ಕೆಲಸವನ್ನು ನೀವು ಮುಂದಿನ ದಿನಗಳಲ್ಲಿ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. 2008-09 ನೇ ಸಾಲಿನಲ್ಲಿ 16 ಸಾವಿರ ಕೋಟಿ ರೂ.ಗಳು ಬಳಕೆಯಾಗಿರಲಿಲ್ಲ. ಆಯವ್ಯಯದ ನಿಯಂತ್ರಣ, ನ್ಯೂನತೆ, ಮರುಹೊಂದಾಣಿಕೆ, surrender ಕಾರ್ಯಕ್ರಮಗಳು ಸಮಯೋಚಿತವಾಗಿ ಆಗದೇ ಈ ಅವಕಾಶ ಅನುಪಯುಕ್ತವಾಗಿರತಕ್ಕಂಥದ್ದು ಸರ್ವೇಸಾಮಾನ್ಯವಾಗಿ ಕಾಡುತ್ತಿರತಕ್ಕಂಥ ವಿಚಾರ. ಈ ಕೊರತೆ ಬಗ್ಗೆ ನೀವು ಯಾವ ರೀತಿಯಾದಂಥ ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎನ್ನತಕ್ಕಂಥದ್ದು ಮುಖ್ಯವಾಗಿದೆ. ಇನ್ನೊಂದು ಮುಖ್ಯವಾದ ವಿಚಾರವೆಂದರೆ Utilization Certificate ಕೊಡುತ್ತಿಲ್ಲದಿರುವ ಬಗ್ಗೆ. ನಾವು ಕೇಂದ್ರ ಸರ್ಕಾರ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ ಎನ್ನುವ ವಿಚಾರ ಪ್ರಸ್ತಾಪ ಮಾಡುವಾಗ ನಾನು ಹೇಳುತ್ತೇನೆ. Utilization Certificate ಅನ್ನು ಇವತ್ತು ಕೇಂದ್ರ ಸರ್ಕಾರಕ್ಕಾಗಲಿ ಅಥವಾ ರಾಜ್ಯ ಸರ್ಕಾರಕ್ಕಾಗಲಿ ಇಲಾಖೆಗಳಿಂದ ಬರದೇ ಇರತಕ್ಕಂಥದ್ದು ಒಂದು ಮುಖ್ಯವಾದಂಥ ಕಾರಣ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ

ಹೇಳುತ್ತೇನೆ. ಏಕೆ ಹೀಗೆ? ಎಷ್ಟು ಸಾರಿ ಇದು ವಿಧಾನಸಭೆಯಲ್ಲಿ ಚರ್ಚೆಯಾಗಬೇಕು? ಇದರ ಬಗ್ಗೆ ಸಮಿತಿಗಳಲ್ಲಿಯೂ ಕೂಡ ಚರ್ಚೆ ಮಾಡುವಂಥ ಸಂದರ್ಭದಲ್ಲಿ Utilization Certificate ಬರುವುದಿಲ್ಲ ಎನ್ನತಕ್ಕಂಥ ಮಾತನ್ನು ಪ್ರತಿ ಸಂದರ್ಭದಲ್ಲಿಯೂ ಹೇಳಬೇಕಾದಾಗ ಎಲ್ಲೋ ಒಂದು ಕಡೆಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಬೇಕಾದಂಥ ಹಣವೇನಿದೆಯಲ್ಲಾ ಅದು ತಡವಾಗುತ್ತದೆ. ಯಾವ ಯೋಜನೆಗಳಿಗೆ ಸಂಪೂರ್ಣವಾಗಿ ಕೇಂದ್ರ ಸರ್ಕಾರ ಹಣವನ್ನು ಏನು ತೊಡಗಿಸುತ್ತದೆಯೋ ಅದನ್ನು ಸಂಪೂರ್ಣವಾಗಿ ನೀವು ಬಳಕೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಕೇಂದ್ರ ಸರ್ಕಾರದಲ್ಲಿರತಕ್ಕಂಥ ವ್ಯವಸ್ಥೆಯೇನೆಂದರೆ ವರ್ಷಕ್ಕೆ ಎರಡು ಸಾರಿ ಅಂದರೆ ಮೇ, ಜೂನ್‌ಗೆ ಒಂದು instalment ನಲ್ಲಿ ಹಣವನ್ನು ಕೊಡುತ್ತಾರೆ, ನವೆಂಬರ್-ಡಿಸೆಂಬರ್‌ಗೆ ಒಂದು instalment ನಲ್ಲಿ ಹಣವನ್ನು ಕೊಡುತ್ತಾರೆ. ಎರಡು instalment ನಲ್ಲಿ ಹಣ ಕೊಟ್ಟರೂ ಕೂಡ ನಾವು ಆ ಹಣವನ್ನು utilize ಮಾಡುವುದರಲ್ಲಿ, ನಾವು ಕೇಂದ್ರ ಸರ್ಕಾರದಿಂದ ಆ ಹಣ ಬರುವವರೆವಿಗೂ ಕೂಡ, ನೀವು ಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸದೇ ಇರತಕ್ಕಂಥ ಸಂದರ್ಭ ಯೋಜನೆಗಳನ್ನು ಕಳುಹಿಸುವುದಿಲ್ಲ. ಯೋಜನೆಗಳಿಗೆ ಮಂಜೂರಾತಿ ಅಕ್ಟೋಬರ್-ನವೆಂಬರ್‌ನಲ್ಲಿ ಆಗುತ್ತದೆ. ಹೀಗಾಗಿ first instalment ನಲ್ಲಿ ಕೊಟ್ಟಂಥ ಹಣವನ್ನು ನಾವು ಪೂರ್ತಿ Utilize ಮಾಡುವುದಕ್ಕೆ ಆಗುವುದೇ ಇಲ್ಲ. ಇದರ ಬಗ್ಗೆ ನೀವು ಸರ್ವೇ ಸಾಮಾನ್ಯವಾಗಿ ಯಾವ ಇಲಾಖೆಯದ್ದನ್ನು ತೆಗೆದುಕೊಂಡರೂ ಕೂಡ ಇವತ್ತು ಅದರಲ್ಲಿ ಹಣ ಬಳಕೆಯಾಗದೇ ಇರತಕ್ಕಂಥದ್ದು ಇವತ್ತು ಬಹಳ ಮುಖ್ಯವಾಗಿ ಕಾಣುತ್ತಿದೆ ಎನ್ನತಕ್ಕಂಥ ಮಾತನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ಕೇಂದ್ರ ಸರ್ಕಾರ ಯಾವ ಯಾವ ರೀತಿಯಾಗಿ ಹಣವನ್ನು ಬಿಡುಗಡೆ ಮಾಡುತ್ತದೆ ಎಂಬುದನ್ನು ನಿಮಗೆ ನಾನು ಹೇಳಬೇಕಾಗಿಲ್ಲ. 'ಭಾರತ್ ನಿರ್ಮಾಣ್' ಎನ್ನತಕ್ಕಂಥ ಮಹತ್ತರವಾದ ಯೋಜನೆ ಕೇಂದ್ರ ಸರ್ಕಾರದ್ದು. ಅದರಲ್ಲಿ ಹೆಚ್ಚು ಹಣವನ್ನು ತೊಡಗಿಸತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಅದನ್ನು ಯಾವ ಯಾವ ರೀತಿಯಾಗಿ ಮಾಡುತ್ತಾರೆ ಎನ್ನತಕ್ಕಂಥದ್ದರ ಬಗ್ಗೆ ವಿವರವನ್ನು ಈಗ ಇಲ್ಲಿ ಹೇಳುವುದು ಬೇಕಾಗಿಲ್ಲ. Indira Awaz Scheme ಇರಬಹುದು, ಇವತ್ತು AIDP ಯೋಜನೆಗಳಿರಬಹುದು, Prime-Minister Sadak ಯೋಜನೆಗಳಿರ

ಬಹುದು, National-Rural Drinking Water Scheme ಇರಬಹುದು, Rajiv Gandhi Rural Electrification Scheme ಇರಬಹುದು, ಈ ಎಲ್ಲ ಸ್ಕೀಮ್‌ಗಳಲ್ಲಿಯೂ ಕೂಡ ಇವತ್ತು ಬಹುತೇಕ 75:25 ಮತ್ತು ಕೆಲವುದರಲ್ಲಿ ಇವತ್ತು 90:10 ಈ ರೀತಿಯಾಗಿರತಕ್ಕಂಥದ್ದಿದೆ. ಆರ್‌ಡಿಪಿಆರ್ ನಲ್ಲಿ ಮಾತ್ರ 50:50. ಈ ರೀತಿಯಾಗಿ ಹಣವನ್ನು ತೊಡಗಿಸಿ ನಿಮಗೆ ಮೊದಲನೆಯ ಕಂತಾಗಿ ಹಣವನ್ನು ಅವರು ಬಿಡುಗಡೆ ಮಾಡಿದರೂ ಕೂಡ ಎರಡನೆಯ ಹಂತದ ಹಣವನ್ನು ನೀವು ಬಿಡುಗಡೆ ಮಾಡಿಸಿಕೊಂಡು ತರುವುದರಲ್ಲಿ ಬಹುತೇಕ ಎಲ್ಲಾ ಇಲಾಖೆಗಳಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎನ್ನತಕ್ಕಂಥದ್ದನ್ನು ಹೇಳಬಯಸುತ್ತೇನೆ. ಇದಕ್ಕೆ ಕಾರಣವೇನೆಂದರೆ, ನಿಮ್ಮ Utilization Certificate ಹೋಗದೇ ಇರತಕ್ಕಂಥದ್ದೇ ಮುಖ್ಯವಾದಂಥ ಕಾರಣ. ಇನ್ನೊಂದು Flagship Programmes ಎನ್ನತಕಂಥದ್ದು ಇದೆ. ಅದರಲ್ಲಿ National Programme for Mid-day Meal Schemes, Jawaharalal National Urban Renewal Mission, NAREGA (Mahathma Gandhi Rural Employment Guarantee Programme), Total Sanitation, Intergrated Child Development, National Social Assistance Programme, National Rural Health Mission, National Horticulture Mission, ಸರ್ವ ಶಿಕ್ಷಾ ಅಭಿಯಾನ, ಈ ರೀತಿಯಾದಂಥ ಯೋಜನೆಗಳು ಇಲ್ಲಿಯೂ ಕೂಡ ಇವತ್ತು Flagship Programme ಗಳು ಆಗುತ್ತದೆ. ಇನ್ನೂ other Programmes ಏನಿದೆ, ಇವತ್ತು Backward Regions Development Fund, National Agricultural Vikasa Scheme, National Food Security Mission & Western Ghat Development Programmes, ಈ ಎಲ್ಲ ಯೋಜನೆಗಳಡಿಯಲ್ಲಿ ನಿಮಗೆ ಬರಬೇಕಾಗಿರತಕ್ಕಂಥ ಹಣ ಎಷ್ಟೆಂದರೆ, ನಾನು ಸುಮ್ಮನೆ ಕುಳಿತುಕೊಂಡು ಲೆಕ್ಕ ಹಾಕಿದ ಪ್ರಕಾರ 6370 ಕೋಟಿ ರೂಪಾಯಿಗಳು ಬರಬೇಕು. 6,370 ಕೋಟಿ ರೂಪಾಯಿಗಳನ್ನು ನೀವು ಲೆಕ್ಕ ಹಾಕುವುದಾದರೆ ಅಧರಲ್ಲಿ ಎಷ್ಟು ಹಣವನ್ನು ತರುವುದರಲ್ಲಿ ನೀವು ಸಾರ್ಥಕತನವನ್ನು ಎಷ್ಟು ತೋರಿಸಿದ್ದೀರಿ ಎನ್ನತಕ್ಕಂಥದ್ದು ಬಹಳ ಮುಖ್ಯವಾದಂಥ ವಿಚಾರ. ಇವತ್ತು 12ನೇ ಹಣಕಾಸಿನ ಯೋಜನೆ ಕೊನೆಯ ಹಂತದಲ್ಲಿದೆ. ಈಗ ಒಂದನೇ ತಾರೀಖಿನಿಂದ 13ನೇ ಹಣಕಾಸು ಯೋಜನೆ

ಜಾರಿಗೆ ಬರುತ್ತಿದೆ. 13 ನೇ ಹಣಕಾಸಿನ ಯೋಜನೆಯಲ್ಲಿ 5 ವರ್ಷಕ್ಕೆ ಬಿಡುಗಡೆಯಾಗುವ ಹಣವೆಷ್ಟಿದೆಯೆಂದರೆ ಸುಮಾರು 74,376 ಕೋಟಿ ರೂಪಾಯಿಗಳಷ್ಟು ಹಣ ನಮಗೆ ಬರುತ್ತದೆ. ಮೊದಲನೆಯ ವರ್ಷವೇ ಅಂದರೆ 2010–11ಕ್ಕೆ 10,005 ಕೋಟಿ ರೂಪಾಯಿಗಳು 13ನೇ ಹಣಕಾಸು ಯೋಜನೆಯಿಂದ ಬರುವುದ ರಲ್ಲಿದೆ. 12ನೇ ಹಣಕಾಸಿನ ಯೋಜನೆಯಲ್ಲಿ ಎಲ್ಲ ಹಣವನ್ನು ಇವತ್ತು ಬಿಡುಗಡೆ ಮಾಡಲೇಬೇಕು. ಬಹುಶಃ ನನಗನ್ನಿಸುತ್ತಿದೆ, 12ನೇ ಹಣಕಾಸು ಯೋಜನೆಯಲ್ಲಿ ಕೊನೆಯ ವರ್ಷವಾಗಿರುವುದರಿಂದ, ನಾನು ಅಂದಾಜು ಮಾಡುವುದಾದರೆ ಎಂಟು ಸಾವಿರ ಕೋಟಿಗೂ ಕಡಿಮೆ ಇಲ್ಲದಂಥ ರೀತಿಯಲ್ಲಿ ಹಣ ನಿಮಗೆ ಬರಬೇಕಿದೆ.

Union Government Schemes ಬಗ್ಗೆ ನಾನು ಈಗ ಏನು ಹೇಳಿದೆ ಅದರ ಮುಖೇನ State share and Union taxes and grant-in-aid scheme ಏನಿದೆ, ಅದು ಸುಮಾರು 12,000 ಕೋಟಿ ರೂಪಾಯಿ ಬರುತ್ತದೆ. ಈಗ ಹೆಚ್ಚು ಕಡಿಮೆ 40% Budget outlay is from Government of India. ನಿಮ್ಮ plan expenditure ಏನೇ ಕೊಡುವುದಾದರೂ ನಾವು Decemberಗೆ ಹೋಗಬೇಕಾಗುತ್ತದೆ. ನೀವು Decemberಗೆ ಕೊಡುವುದರ ಬದಲು ನಾನು ಆಗಲೇ ಹೇಳಿದ ಪ್ರಕಾರ ಮುಂದಿನ ಆಯವ್ಯಯದೊಳಗೆ ಅಂದರೆ ಮಾರ್ಚ್ 31 ರೊಳಗೆ ನೀವು ಎಷ್ಟರಮಟ್ಟಿಗೆ ಖರ್ಚು ಮಾಡಿದಿರಿ ಎನ್ನುವುದನ್ನು ಕೊಟ್ಟರೆ, ಅದರ ಮುಂದಿನ ದಿನಗಳಲ್ಲಿ ನಾವು ಮಾತನಾಡುವುದಕ್ಕೆ ಅನುಕೂಲವಾಗುತ್ತದೆ. ನಿಮಗೆ State revenue approximately 30,000 ಕೋಟಿ ರೂಪಾಯಿ, Union Share 13,000 ಕೋಟಿ ರೂಪಾಯಿ ಇರುತ್ತದೆ. ನಿಮಗೆ 43,000 ಕೋಟಿ ರೂಪಾಇ ಇದೆ ಎಂದರೆ ನಮ್ಮ ರಾಜ್ಯದ financial position ಇನ್ನೂ ಕೂಡ ಉತ್ತಮವಾಗಿದೆ, Surplus ಇದೆ ಎಂದು ನಾವು ಹೇಳಬೇಕಾಗುತ್ತದೆ. ಇದೆಲ್ಲಕ್ಕಿಂತ ಮುಖ್ಯವಾಗಿ ಒಂದು ceiling ಇದೆ, guaranty ಇದೆ. ನಾವು guaranty ಯನ್ನು ಕೊಡಬೇಕಾದಂತಹ ಸಂದರ್ಭದಲ್ಲಿ 2% commission ನ್ನು ತೆಗೆದುಕೊಳ್ಳಬೇಕೆಂದು ಇದೆ. ಆ Act ಬಂದು ಇಲ್ಲಿಯವರೆಗೂ ಕೂಡ 2% commission ಅನ್ನು collect ಮಾಡಬೇಕು ಮತ್ತು ಅದನ್ನು ಒಂದು

Corpus fund ಆಗಿ create ಮಾಡಬೇಕು. ಇವತ್ತು ಅನಿವಾರ್ಯ ಸಂದರ್ಭದಲ್ಲಿ ಅದರಿಂದ ಸಾಲವನ್ನು, ಬಡ್ಡಿಯನ್ನು ಭರಿಸಬೇಕೆನ್ನುವ ಉದ್ದೇಶವಿದೆ. ಆದರೆ ಇಲ್ಲಿಯವರೆಗೂ ಯಾವ ಇಲಾಖೆಯವರು ಕೂಡ ನಿಮಗೆ 2% commission ಕೊಟ್ಟು ಹಾಗೆ ನನಗೆ ಕಾಣಿಸುತ್ತಿಲ್ಲ. ಅದರ ಬಗ್ಗೆ ತಾವು ವತ್ತು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಬೇಕು. ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಹೇಳುತ್ತೇನೆ. ನೀವು ಎಲ್ಲೋ ಒಂದು ಕಡೆಗೆ resource ಅನ್ನು ಜಾಸ್ತಿ ಮಾಡುವಂತಹ ಕೆಲಸವನ್ನು ಮಾಡಬೇಕು. ನಾನು ನಿಮಗೆ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರದ ನೌಕರರುಗಳಿಗೆ, bank ನವರಿಗೂ ಸೇರಿದಂತೆ motor vehicle tax ಮಾಹೆಯಾನ 750 ರೂಪಾಯಿ collect ಮಾಡುತ್ತೀರಿ. ಆದರೆ life time tax ಕಟ್ಟುವವರಿಗೆ ಒಂದು vehicle ಗೆ ನೀವು proportionate ಆಗಿ ಹತ್ತು ಅಥವಾ ಹದಿನೈದು ವರ್ಷಕ್ಕೆ ಲೆಕ್ಕ ಹಾಕಿದಾಗ ಬರುವಂತಹ difference ನೀವು collect ಮಾಡಿದರೆ ಬಹುಶಃ ಇನ್ನೂ 1,500 ಕೋಟಿ ರೂಪಾಯಿ ಜಾಸ್ತಿಯಾಗುತ್ತದೆ. ಇದನ್ನು Finance Department ನವರು ಏಕೆ ಮಾಡಲಿಲ್ಲವೆಂದು ನನಗೆ ಅರ್ಥವಾಗುತ್ತಿಲ್ಲ. ನೀವು ಅದನ್ನು ಎಲ್ಲೋ ಒಂದು ಕಡೆಗೆ plug ಮಾಡುವ ರೀತಿಯಲ್ಲಿ ತೆರಿಗೆ ಹೆಚ್ಚು ಮಾಡುವಂತಹ ದಿಕ್ಕಿನಲ್ಲಿ ಯೋಚನೆ ಮಾಡಬೇಕೆನ್ನುವುದು ಒಂದು ಮುಖ್ಯವಾದಂತಹ ಸಲಹೆ. ಇನ್ನೊಂದು ವಿಚಾರ Transport Department ನಲ್ಲಿ ಏನಾಗುತ್ತದೆ ಎಂದರೆ daily permits ಕೊಡುತ್ತಾರೆ. State carriage ಗೆ daily permit ಕೊಟ್ಟಿದ್ದನ್ನೇ monthly permit ಆಗಿ use ಮಾಡುತ್ತಾರೆ. ಅದನ್ನು ಯಾರೋ ಪೋಲೀಸಿನವರು ಹಿಡಿದಾಗ ತೋರಿಸುತ್ತಾರೆ. ಆ ರೀತಿ misuse ಮಾಡುವುದರಿಂದ ನಿಮಗೆ regular ಆಗಿ ಬರಬೇಕಾದಂತಹ tax ಕಡಿತವಾಗುತ್ತದೆ. ಅದನ್ನು plug ಮಾಡುವುದಕ್ಕ ಸಾಧ್ಯವಿದೆ. ಏಕೆ ಮಾಡಬಾರದು? ಇವೆಲ್ಲಕ್ಕಿಂತ ಹೆಚ್ಚಾಗಿ VAT ಬಂದಮೇಲೆ ಏನು ಪರಿಸ್ಥಿತಿ ಇದೆ ಎಂದು ಹೇಳಬೇಕಾಗಿಲ್ಲ. ಒಬ್ಬ assessee ಆಗಿರತಕ್ಕಂಥವರು assessment ಅನ್ನು ಕೊಟ್ಟಾಗ ನಾವು VAT ನಲ್ಲಿ ಅದನ್ನು verify ಮಾಡುವುದಿಲ್ಲ. ಆದರೆ ಎಲ್ಲೋ ಒಂದು ಕಡೆ vigilance work ಜಾಸ್ತಿಯಾಗ

ಬೇಕಾಗುತ್ತದೆ. ಆ vigilance work ಜಾಸ್ತಿಯಾದಾಗ ಆ VAT ಅನ್ನು ನೀವು Cross Check ಮಾಡುವಂತಹ ಕೆಲಸ ಮಾಡಿದರೆ ಬಹುಶಃ ನನಗೆ ನೀವು ಹೆಚ್ಚು ಹಣವನ್ನು ನಿರೀಕ್ಷೆ ಮಾಡಬಹುದು ಎದು ಅನಿಸುತ್ತದೆ, ಇದನ್ನು ಮಾಡುವುದಕ್ಕೆ ಇರುವಂತಹ ತೊಂದರೆ ಏನೆಂದರೆ ಇವತ್ತು ಹೆಚ್ಚು vigilance activity ಯನ್ನು ಮಾಡಬೇಕಾದಂತಹ ಇಲಾಖೆ ಯಾವುದಿದೆ, ಆ ಇಲಾಖೆಯಲ್ಲಿ staff ನ ಕೊರತೆ ಇದೆ. ನೀವು ಎಲ್ಲಿಯೇ ಕೇಳಿ, ನಮ್ಮಲ್ಲಿ staff ಇಲ್ಲವೆಂದು ಹೇಳತ್ತಾರೆ. ನಮ್ಮಲ್ಲಿ vigilance activity ಮಾಡುವುದಕ್ಕೆ, ಸಾಕಷ್ಟು man-power ಇಲ್ಲವೆನ್ನುವಂತಹ ಮಾತನ್ನು ಹೇಳುತ್ತಾರೆ. ನಾನು ಒಂದು ಮಾತನ್ನು ನನಗೆ ಅನುಭವವಿರುವುದರಿಂದ ಹೇಳುತ್ತೇನೆ. ನೀವು Commercial Tax Department ನಲ್ಲಿ post ಗಳನ್ನು fill up ಮಾಡಿದರೆ, ಈಗ ನೀವು ತೀರ್ಮಾನ ಮಾಡಿದರೂ ಕೂಡ ನಿಮಗೆ ಮುಂದಿನ ವರ್ಷಕ್ಕೆ 2,000 ಕೋಟಿ ರೂಪಾಯಿ ಬರುತ್ತದೆ. ನೀವು ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚಾಗಿ ಎಂದರೆ 2,000 ಕೋಟಿ ರೂಪಾಯಿಗೂ ಜಾಸ್ತಿ ಬರುತ್ತದೆನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ದೂರದೃಷ್ಟಿ ಎನ್ನುವ ಪುಸ್ತಕದಲ್ಲಿ ಬಿಡುಗಡೆ ಮಾಡಿದ್ದಾರೆ. ಆ ದೂರದೃಷ್ಟಿ ಪುಸ್ತಕದಲ್ಲಿ ನಿಮ್ಮ ಸರ್ಕಾರದ ಯೋಜನೆಗಳು, ಚಿಂತನೆಗಳು ಆಸೆ–ಆಕಾಂಕ್ಷೆಗಳನ್ನು ಏನಿರಬೇಕು ಎನ್ನುವುದರ ಬಗ್ಗೆ ವಿವರಣೆಯನ್ನು ಕೊಟ್ಟಿದ್ದೀರಿ. ನೀವು ಅದನ್ನು ಕೊಡುವಂತಹ ಸಂದರ್ಭದಲ್ಲಿ 15 ಕಾರ್ಯಪಡೆಗಳನ್ನು ರಚನೆ ಮಾಡಿ, ಆ ಕಾರ್ಯಪಡೆ ಕೊಟ್ಟಿರುವುದನ್ನು ಅನುಷ್ಠಾನ ಮಾಡಬೇಕೆಂದು ನಿಮ್ಮ ಚಿಂತನೆ ಇದೆ. ಆದರೆ ನಿಜವಾಗಲೂ ಕೂಡ ರೈತರ ಪರವಾಗಿರುವಂತಹ ಮುಖ್ಯಮಂತ್ರಿ ಎಂದು ಘೋಷಣೆ ಮಾಡಿದ್ದೀರಿ. ರೈತರ ಬಗ್ಗೆ ಕಾಳಜಿಯನ್ನು ಇಟ್ಟಿರತಕ್ಕಂಥವರು. ಇವತ್ತು ರೈತರ ವಿಚಾರ ಏನಾಗಿದೆ? ಇವತ್ತು ಈ ರೀತಿಯಾಗಿ ಏಕೆ ಆಗುತ್ತಿದೆ? ನಾನು ಸೂಕ್ಷ್ಮವಾಗಿ ಹೇಳುವುದಾದರೆ ತಾವು ಅಧಿಕಾರದ ಚುಕ್ಕಾಣಿಯನ್ನು ಹಿಡಿದಂತಹ ಸಂದರ್ಭದಲ್ಲಿ ಕಳೆದ ಮೂರು ವರ್ಷದಲ್ಲಿ ನಮ್ಮ ರಾಜ್ಯದಲ್ಲಿ ಕೃಷಿ ಕ್ಷೇತ್ರದಲ್ಲಿ ಆಗಿರುವಂತಹ ಹೊಡೆತವೇನು ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. 2008–09ರಲ್ಲಿ ನಾವು 120 ಲಕ್ಷ ಟನ್ ಆಹಾರ ಉತ್ಪಾದನೆಯನ್ನು ನಿರೀಕ್ಷೆ ಮಾಡಿದ್ದೆವು. ತದನಂತರ ವರ್ಷದಲ್ಲಿ 109 ಲಕ್ಷ ಟನ್‌ಗೆ ಇಳಿಯಿತು. ಈ ವರ್ಷ ನಮ್ಮ ಉತ್ಪಾದನೆ 106 ಲಕ್ಷ ಟನ್ ಇದೆ. ಈ ಆಹಾರ ಉತ್ಪನ್ನದ ಜೊತೆಗೆ ದ್ವಿದಳ ಧಾನ್ಯಗಳು

ಮತ್ತು ಏಕದಳ ಧಾನ್ಯಗಳನ್ನು ಕೂಡ ನಾವು ಗಣನೀಯವಾಗಿ ಉತ್ಪಾದನೆಯನ್ನು ಮಾಡುವುದಕ್ಕೆ ನಮಗೆ ಸಾಧ್ಯವಾಗಿಲ್ಲ. ಇವತ್ತು ನೀವು ಅನೇಕ ಯೋಜನೆಗಳನ್ನು ಪ್ರಸ್ತಾಪ ಮಾಡಿದ್ದೀರಿ. 2008-09, 2009-10, 2010-11 ರಲ್ಲಿ ಯೋಜನೆಗಳನ್ನು ಗಣನೀಯವಾಗಿ ಘೋಷಣೆ ಮಾಡಿ ರೈತರ ಪರವಾಗಿರತಕ್ಕಂಥ ಬಜೆಟ್ ಎಂದು ಹೇಳುವಂತಹ ಸಂದರ್ಭದಲ್ಲಿ ಕೂಡ ಏಕೆ ನಮಗೆ ಫಲವನ್ನು ಕೊಡಲಿಲ್ಲ? ಆಹಾರದ ಉತ್ಪಾದನೆ ಏಕೆ ಕುಂಠಿತವಾಗುತ್ತಿದೆ? ನೀವು ಇದೇ ವೇಗದಲ್ಲಿ ಮುಂದುವರೆಯುವುದಕ್ಕೆ ಬಿಟ್ಟರೆ ಇನ್ನೂ ಐದು-ಹತ್ತು ವರ್ಷದಲ್ಲಿ ಅನ್ನಕ್ಕೋಸ್ಕರ ಹಾಹಾಕಾರ ಪಡತಕ್ಕಂಥ ಪರಿಸ್ಥಿತಿ ಬರಬಹುದು ಎನ್ನುವ ಮಾತು ಕೇವಲ ಕರ್ನಾಟಕಕ್ಕೆ ಸೀಮಿತವಾಗಿದೆ ಎಂದು ಅಲ್ಲ, ಇಡೀ ದೇಶದಲ್ಲಿ ಈ ರೀತಿಯಾಗಿರುವಂತಹ ಸಂದರ್ಭದಲ್ಲಿ ಎಲ್ಲಾ ವಿಚಾರವನ್ನು ಪ್ರಸ್ತಾಪ ಮಾಡದೇ ಒಂದು ಮುಖ್ಯವಾದ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತೇನೆ. ನಾನು ಕೃಷಿಯನ್ನು ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ಹೇಳುವುದಾರೆ ನೀವು ಎಲ್ಲಾ policy ಯನ್ನು ಮಾಡಿದ್ದೀರಿ. ಆದರೆ ನೀವು ಅರಣ್ಯಕ್ಕೆ ಏಕೆ policy ಯನ್ನು ಮಾಡಲಿಲ್ಲ? ನೀವು ಅರಣ್ಯದ policy ಯನ್ನು ಮಾಡಲೇಬೇಕು ಎನ್ನುವಂತಹ ರೀತಿಯಲ್ಲಿ ಕೇಂದ್ರ ಸರ್ಕಾರ ಕೂಡ ಅದನ್ನು ಕಡ್ಡಾಯ ಮಾಡಿದೆ. ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ ಮೂಲ ಸಮಸ್ಯೆ ಎಲ್ಲಿದೆ ಎನ್ನುವುದನ್ನು ಕಂಡುಹಿಡಿದು ಅದಕ್ಕೆ ಪರಿಹಾರ ಹೇಗೆ ಮಾಡಬಹುದು ಎಂದು ಅರ್ಥ ಮಾಡಿಕೊಳ್ಳದಿದ್ದರೆ, ಬಹುಶಃ ಅದು ಸರಿಯಾಗುವುದಿಲ್ಲ. ನಿಮ್ಮ ದೂರದೃಷ್ಟಿತ್ವಕ್ಕೆ ಎಲ್ಲೋ ಒಂದು ಕಡೆ ಮಂಕು ಬಂದಂತಾಗುತ್ತದೆ ಎನ್ನುವ ದೃಷ್ಟಿಯಲ್ಲಿ ಈ ಮಾತನ್ನು ಹೇಳುತ್ತೇನೆ. ಇವತ್ತು ಭಾರತ ಸರ್ಕಾರದ 1988 ರಲ್ಲಿ ಪ್ರಕಟಿಸಿ, ಅರಣ್ಯನೀತಿಯನ್ನು ನಿಗದಿಪಡಿಸಿದ ಪ್ರಕಾರ 2012ಕ್ಕೆ ಭೌಗೋಳಿಕ ಪ್ರದೇಶದ 33 ರಷ್ಟು ಭೂಮಿ ಅರಣ್ಯ ಪ್ರದೇಶವಾಗಬೇಕೆಂದು ಇದೆ. 1987 ರಲ್ಲಿ 32.2 ಲಕ್ಷ ಹೆಕ್ಟೇರ್ಸ್ ಅರಣ್ಯೀಕರಣಗೊಳಿಸಲಾಗಿದೆ, ಕೇಂದ್ರ ಸರ್ಕಾರದ ಅರಣ್ಯ ನೀತಿಯಲ್ಲಿ ಸೂಚಿಸಿದ್ದ ಭೌತಿಕ ಗುರಿಯನ್ನು ನಿಗದಿತ ಅವಧಿಯಲ್ಲಿ ಸಾಧಿಸಲು ಲಭ್ಯವಿದ್ದ 25 ವರ್ಷಗಳ ದೀರ್ಘ ಕಾಲದಲ್ಲಿ ನಿಮ್ಮ ಸಾಧನೆ ಎಲ್ಲಿ ಹೋಗಿದೆ ಎಂದರೆ 31.1 ಲಕ್ಷ ಹೆಕ್ಟೇರ್ಸ್ ಎಂದರೆ ಪ್ರತಿವರ್ಷ 1.25 ಲಕ್ಷ ಹೆಕ್ಟೇರ್ಸ್ ಪ್ರದೇಶ ಮಾತ್ರ ಇವತ್ತು ಅರಣ್ಯೀಕರಣಗೊಳಿಸುವಂತಹ ಕೆಲಸವನ್ನು ಮಾಡಿದ್ದೀರಿ. ಈ ಗುರಿಯನ್ನು

ಕೇಂದ್ರ ಸರ್ಕಾರ ನಿಗಧಿ ಮಾಡಿರುವಂಥದ್ದು. 33% ಅರಣ್ಯ ಇರಬೇಕೆಂದು ಏನು ನಿಗದಿ ಮಾಡಿದ್ದಾರೆ, ಆ ಪ್ರಕಾರ ನೀವು ಸಾಧಿಸಬೇಕಾದರೆ ನಿಮಗೆ ಇನ್ನೂ 21 ವರ್ಷಗಳು ಬೇಕು. ಇನ್ನೂ 21 ವರ್ಷಗಳು ಬೇಕೆಂದರೆ ನಾನು ಇದರ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ. ಕೇಂದ್ರ ಸರ್ಕಾರ ತಗಾದೆ ಮಾಡುತ್ತಿದೆ. Supreme Court interefere ಆಗುತ್ತಿದೆ. 33% maintain ಮಾಡಬೇಕೆಂದು ಹೇಳಿ ಇವತ್ತು ಸರ್ಕಾರಗಳಿಗೆ ಛಾಟಿ ಏಟಿನ ಮೂಲಕ ಹೇಳುತ್ತಿದ್ದಾರೆ. ಇಷ್ಟೆಲ್ಲವಾದರೂ ಕೂಡ ನಮ್ಮದು ಒಟ್ಟಾರೆ 63.3 ಹೆಕ್ಟೇರ್ಸ್ ಅರಣ್ಯೀಕರಣ ಮಾಡಬೇಕಾಗಿರುವಂಥಾದ್ದು ನಮ್ಮ ಮುಂದೆ ಇದೆ. ನಾವು ಅದರಲ್ಲಿ ಅರ್ಧದಷ್ಟು reach ಆಗಿಲ್ಲ. ಈ ಅರಣ್ಯಕ್ಕೆ ನೀವು ಏಕೆ ನೀತಿಯನ್ನು ತರಲಿಲ್ಲ ಎಂದು ನನಗೆ ಅರ್ಥವಾಗುತ್ತಿಲ್ಲ. ರೈತರ ವಿಚಾರವಾಗಿ ನಾವು ಮಾತನಾಡ ಬೇಕಾದರೆ ಮೂಲವಾಗಿ ಚರ್ಚೆ ಮಾಡಬೇಕಾಗಿರುವುದೆಂದರೆ ನಮ್ಮಲ್ಲಿ ಪ್ರಕೃತಿ ವಿಕೋಪ ಏಕೆ ಆಗುತ್ತಿದೆ?

ಆ ಪ್ರಕೃತಿ ವಿಕೋಪದಿಂದ ಕೃಷಿ ಮೇಲೆ, ತೋಟಗಾರಿಕೆ ಮೇಲೆ ಆಗುತ್ತಿರುವಂಥ ಹೊಡೆತ ಏನು ಇದೆಯೆಂಬುದನ್ನು ವಿಶ್ಲೇಷಣೆ ಮಾಡುವಾಗ ಇದ್ದು ಮೂಲವೆಂದು ನಾನು ಭಾವಿಸಿದ್ದೇನೆ. ಅನೇಕ ರೀತಿಯಾದಂಥ recommendation ಕೇಂದ್ರ ಸರ್ಕಾರ ಕೊಟ್ಟಾಗಲೂ ಕೂಡ, ಇದುವರೆಗೂ ಅರಣ್ಯದ ಪಾಲಿಸಿಯನ್ನು ತರುವಂಥ ಕೆಲಸವನ್ನು ಮಾಡಿಲ್ಲ. ಈ ಅರಣ್ಯದಲ್ಲಿ ಅದರ maintenance ಏನು ಇದೆ, ಅರಣ್ಯದಲ್ಲಿ ಕಳೆ ಎಂದು ಇರುತ್ತದೆ, ನಮ್ಮಲ್ಲಿ weed ಎಂದು ಹೇಳುತ್ತಾರೆ. ಆ weed ಅನ್ನು ತೆಗೆಯದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಇವತ್ತು ನಮ್ಮ ತುಮಕೂರು ಜಿಲ್ಲೆಗೆ ಕುಡಿಯಲು ನೀರು ಇಲ್ಲ. ಅಂಥ ಪರಿಸ್ಥಿತಿಯಲ್ಲಿ ಕಳೆದ ಆರು ತಿಂಗಳಿಂದಲೂ ನಾಲ್ಕೈದು ಬಾರಿ ಆನೆಗಳು ಕೆರೆಗಳಲ್ಲಿ ಬಂದು ಕುಳಿತಿರುತ್ತವೆ. ನಮಗೆ ಇದು ಏನು ವಿಶೇಷವೆಂದು ಅರ್ಥವಾಗಲಿಲ್ಲ. ಈ ಬಗ್ಗೆ ಕೇಳಿದರೆ ಆನೆಗಳಿಗೆ ಮೇವು ಇಲ್ಲ. ಇವತ್ತು ಅರಣ್ಯದ ವ್ಯಾಪ್ತಿ ಕಡಿಮೆಯಾಗುತ್ತಿದೆ. ಆನೆಗಳಿಗೆ ಮೇವು ಸಿಗದೆ ಎಲ್ಲಾ ಕಡೆಗಳಲ್ಲೂ ಬಂದು ಇವು ಲಗ್ಗೆ ಇಡುವಂಥ ಕೆಲಸವನ್ನು ಮಾಡುತ್ತಿವೆ. ಇದರ ಬಗ್ಗೆ ನಾವು ಎಲ್ಲೋ ಒಂದು ಕಡೆ ಯೋಚನೆಯನ್ನು ಮಾಡಬೇಕು. ಇವತ್ತು ಮಾನ್ಯ ಯಡಿಯೂರಪ್ಪನವರು ಯಾವ ಭಾಗದಿಂದ ಬಂದಿರುವವರು ಏನೆಂದರೆ ಅವರು ಶಿಕಾರಿಪುರ ಭಾಗದಿಂದ ಬಂದಿದ್ದಾರೆ. ಅವರಿಗೆ ಅರಣ್ಯವೆಂದರೆ ಏನೆಂದು ಗೊತ್ತಿದೆ. ನಾನು ಅವರಿಗೆ ಈ

ವಿಷಯವಾಗಿ ಹೆಚ್ಚಿಗೆ ಹೇಳಬೇಕಾಗಿಲ್ಲ. ಇವತ್ತು ಶಿಕಾರಿಪುರ ಮತ್ತು ಶಿವಮೊಗ್ಗದಲ್ಲಿರುವಂಥ ಆನೆಗಳು ನಮ್ಮಂಥ ಬರಗಾಲ ಪ್ರದೇಶಗಳಿಗೆ ಮೇವಿಗೋಸ್ಕರ ಬರುತ್ತಿವೆಂದರೆ, ಇವತ್ತು ಆ ಪ್ರಾಣಿ ಸಂಕುಲವನ್ನು ಉಳಿಸದೇ ಹೋದರೆ ಮುಂದೆ ಏನಾಗುತ್ತದೆಂಬ ಬಗ್ಗೆ ಯೋಚನೆ ಮಾಡಿ, ಅದಕ್ಕೆ ಒಂದು ಅರಣ್ಯ ನೀತಿಯನ್ನು ತರಬೇಕೆಂಬ ಒತ್ತಾಯವನ್ನು ಮಾಡುತ್ತೇನೆ. ಇದರ ಜೊತೆಗೆ ಏನಾಗಿದೆಯೆಂದರೆ ನಾವು Mining Policy ಯನ್ನು ತರುತ್ತೇವೆ. ಈ Mining Policy ಯಲ್ಲಿ ನಾವುಎಲ್ಲೋ ಒಂದು ಕಡೆ ಅರಣ್ಯವನ್ನು ರಕ್ಷಣೆ ಮಾಡುವುದಕ್ಕಿಂತ ಹೆಚ್ಚಾಗಿ ನಾವು de-reserve ಮಾಡುವುದಕ್ಕೆ ಹೊರಟಿದ್ದೇವೆ. ನೀವು de-reserve ಮಾಡುವುದಕ್ಕೆ ಹೊರಟಿರುವಾಗ ಅದನ್ನು ಹೇಗೆ ಸಮರ್ಥನೆ ಮಾಡಿಕೊಳ್ಳುತ್ತೀರಾ? ಸರ್ಕಾರದಲ್ಲಿ ಯಾವುದಾದರೂ ಉದ್ದೇಶ ಇದೆಯಾ? De-reserve ಮಾಡುವಂಥ ಸಂದರ್ಭ ಯಾವಾಗ ಬರುತ್ತದೆ? ಸರ್ಕಾರದ ಮುಂದೆ ವಿಶೇಷ ಸಂದರ್ಭ ಏನಿತ್ತು? ನೀವು de-reserve ಮಾಡಬೇಕಾದಂಥ ಸಂದರ್ಭ ಬರಬೇಕಾದಾಗ ನಿಮ್ಮಲ್ಲಿರುವಂಥ ಖನಿಜ ಸಂಪತ್ತನ್ನು ಇವತ್ತು ನಾವು ಯಾವುದೋ ಒಂದು ರೀತಿಯಲ್ಲಿ ಅದನ್ನು value added ಎಂದು ಹೇಳಿ, value added ಮಾಡುವಂಥ ಸಂದರ್ಭಗಳ ಬಗ್ಗೆ ನೀವು ನಿಮ್ಮ ಭಾಷಣದಲ್ಲಿ ಹೇಳಿದ್ದೀರಿ. ನಾವು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ನಮ್ಮ value added ಗೋಸ್ಕರ ಇವತ್ತು ನಾವು ಹೆಚ್ಚಿನ ಆಸಕ್ತಿಯನ್ನು ಕೊಡುತ್ತೇವೆಂಬ ಮಾತನ್ನು ಹೇಳಿದ್ದೀರಿ. ತಾವು ದಯಮಾಡಿ ಇದರ ಕಡೆಗೆ ಗಮನವನ್ನು ಕೊಡಿ. ಇವತ್ತು mining activities ನಿಂದಾಗಿ ನಮ್ಮ forest ಗಳೆಲ್ಲಾ ಬೋಳಾಗುತ್ತಿವೆ. ಆ ರೀತಿಯಾಗಿರುವಂಥದ್ದು ಪರಿಸರದ ಮೇಲೆ ಯಾವ ರೀತಿಯಾಗಿ ಹಾನಿಯಾಗುತ್ತಿದೆ, ಮಳೆಯ ಮೇಲೆ ಯಾವ ರೀತಿಯಾಗಿ ಪರಿಣಾಮವಾಗುತ್ತಿದೆ, ಮನುಷ್ಯನ ಆರೋಗ್ಯದ ಮೇಲೆ ಯಾವ ರೀತಿಯಾದ ಪರಿಣಾಮವಾಗುತ್ತಿದೆ, ಇದೆಲ್ಲವನ್ನು ಇವತ್ತು ನೀವು ಗಮನಿಸಬೇಕಾಗುತ್ತದೆ. ಒಂದು ಕಡೆ ನೀವು ಅರಣ್ಯೀಕರಣವನ್ನು ಮಾಡಬೇಕು, ಇನ್ನೊಂದು ಕಡೆಗೆ de-reserve ಮಾಡುವಂಥ ಸಂದರ್ಭದಲ್ಲಿ ಕೊನೇ ಪಕ್ಷ value added ಆಗಿ ಮಾಡದೇ ಇದ್ದರೆ ಏನು ಪ್ರಯೋಜವಾಗುತ್ತದೆ? ನೀವು ಹೇಳಿದ್ದೀರಿ. ನಾನು ಎಲ್ಲವನ್ನು ಓದಿ ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು

ನೀವು Arcelor Company ಬರಬಾರದೆಂದು ಹೇಳುವುದಿಲ್ಲ, ಅವರು ಬರಬೇಕು. ಆದರೆ ಅವರಿಗೆ ಬೇಕಾದಂಥ ಮೂಲಭೂತ ಸೌಕರ್ಯಗಳನ್ನು ಮಾಡಿಕೊಡಬೇಕು. ಎಲ್ಲೋ ಒಂದು ಕಡೆಗೆ ನೀವು lease ಕೊಡಬೇಕಾ ಗುತ್ತದೆ. ಆದರೆ ನಾನು ಒಂದು ಮಾತನ್ನು ಹೇಳುತ್ತೇನೆ. ಇವತ್ತು ಸ್ಥಳೀಯವಾಗಿ ಅನೇಕ ಕೈಗಾರಿಕೆಗಳನ್ನು ಮಾಡಿರುವಂಥದ್ದು ನಮ್ಮಲ್ಲಿ ಇವೆ. ಅದಕ್ಕೆ ಯಾವುದೇ ರೀತಿಯಾದಂಥ mining area ಕೊಡುವಂಥ ಕೆಲಸವಾಗಿಲ್ಲ. ನೀವು ಅನೇಕ ಸಾರಿ ಹೇಳಿದ್ದೀರಿ, ಲೋಕಾಯುಕ್ತದವರು ಕೂಡ ಅದೇ ಮಾತನ್ನು ಹೇಳುತ್ತಿದ್ದಾರೆ. ನಮ್ಮಲ್ಲಿರುವಂಥ ಖನಿಜ ಸಂಪತ್ತು ಇನ್ನು 20 ವರ್ಷ, 25 ವರ್ಷಗಳು ಇರಬಹುದೆಂದು ಹೇಳುತ್ತಾರೆ. ಅಂದಾಗ ಅದನ್ನು value added ಮಾಡಿದಾಗ ಮಾತ್ರ ಇವತ್ತು de-reserve ಮಾಡಿದಕ್ಕೆ ನೀವು ಸಮರ್ಥನೆ ಮಾಡಿಕೊಳ್ಳಬಹುದೇ ಹೊರತು ಇಲ್ಲವಾದರೆ ಇದು ಸಾಧ್ಯವಿಲ್ಲ. ದಯಮಾಡಿ ತಾವು value addition ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕು. ಈಗಾಗಲೇ ಸ್ಥಳಿಯವಾಗಿರುವಂಥ ಕೈಗಾರಿಕೆಗಳು suffer ಮಾಡುತ್ತಿವೆ. ಮೊನ್ನೆ ನಾನು ಪ್ರಸ್ತಾಪ ಮಾಡಿದ ಪ್ರಶ್ನೆಗೆ ಉತ್ತರವನ್ನು ಹೇಳಿದ್ದರು. ನನ್ನ ಕ್ಷೇತ್ರದಲ್ಲೇ ಆಗಿರುವಂಥದ್ದನ್ನು ಉದಾಹರಣೆಯಾಗಿ ಹೇಳಿದ್ದೆ, ಇವತ್ತು ಒಳ್ಳೆಯ factory ಯನ್ನು ಮಾಡಿದ್ದಾರೆ. ಇವತ್ತು lease area ಇಲ್ಲದೇ ಇವತ್ತು factory ಗಳು ಮುಚ್ಚಿ ಹೋಗಿವೆ. ದಯಮಾಡಿ ತಮ್ಮ ಗಮನ ಆ ಕಡೆಗೆ ಇರಬೇಕೆನ್ನುವ ಮಾತನ್ನು ನಾನು ಸೂಕ್ಷ್ಮವಾಗಿ ಹೇಳಲಿಚ್ಚಿಸುತ್ತೇನೆ. ಇದರಿಂದ ಏನೇನು ಆಗುತ್ತದೆಂಬ ಬಗ್ಗೆ ಇವತ್ತು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಒಂದು ಕಡೆ ಮುಖ್ಯವಾಗಿ ಅರಣ್ಯೀಕರಣವಾಗುತ್ತಿಲ್ಲ ಇದರ ದುಷ್ಪರಿಣಾಮ ಏನಾಗುತ್ತಿದೆಯೆಂಬುದರ ಬಗ್ಗೆ ಸೂಕ್ಷ್ಮವಾಗಿ ಹೇಳಲಿಚ್ಛಿಸುತ್ತೇನೆ. ಇವತ್ತು ಮಾನ್ಯ ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ climatic changes ಬಗ್ಗೆ ಒಂದು ಸಮಿತಿ ಕೂಡ ಇದೆ. climatic changes ಎಂದರೆ ಕೃಷಿಯ ಮೇಲೆ ಯಾವ ರೀತಿಯಾಗಿ ಹೊಡೆತ ಬೀಳುತ್ತದೆಂಬುದು ಬಹಳ ಮುಖ್ಯವಾಗಿರುವಂಥ ವಿಚಾರ. ಇವತ್ತು ಎಲ್ಲಿಂದ ಎಲ್ಲಿಯವರೆಗೆ ಹೋದರೂ ಕೂಡ ಅದು ಕಾಫಿ ಬೆಳೆಯಿಂದಲೇ ತೆಗೆದುಕೊಳ್ಳಿ, ನಮ್ಮ ಉತ್ಪಾದನೆಯಲ್ಲಿ ಇವತ್ತು ಕಡಿಮೆಯಾಗು ತ್ತಿರುವುದಕ್ಕೆ ಮೂಲ ಕಾರಣವೆಂದರೆ, climatic changes. ಇದು ಯಾವ

ಕಾರಣದಿಂದ ಆಗುತ್ತದೆ? ಒಂದು ಕಡೆ ಅರಣ್ಯಗಳ ನಾಶ, ಇನ್ನೊಂದು ಕಡೆ ನಮ್ಮ agriculture production ಜಾಸ್ತಿಯಾದಂಥ ಸಂದರ್ಭದಲ್ಲಿ, ಇವತ್ತು ಅದು ಬರತಕ್ಕಂಥ methane, carbon di-oxide, carbon monoxide ಇರಬಹುದು, ಇದು ವಿಪರೀತವಾಗಿ ಪ್ರಕೃತಿಯಲ್ಲಿರುವಂಥ ಸಂದರ್ಭದಲ್ಲಿ, ಮಾನ್ಯ ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯಲ್ಲಿ ತಾವು ಕೂಡ ಸದಸ್ಯರಾಗಿದ್ದೀರಿ. ಅವರು ಈಗಾಗಲೇ ಅಂದಾಜು ಮಾಡಿದ್ದಾರೆ. 2050ನೇ ಇಸವಿಗೆ ಕನಿಷ್ಟ 5 ಡಿಗ್ರಿ temperature ಜಾಸ್ತಿಯಾಗುತ್ತದೆಂಬ ಮಾತನ್ನು ಹೇಳಿದಾರೆ. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ ದೇಶದ ಮಟ್ಟಿಗೆ ಇನ್ನು 40 ವರ್ಷಗಳಿಗೆ 4 ಡಿಗ್ರಿಯಿಂದ 5 ಡಿಗ್ರಿ ವ್ಯತ್ಯಾಸವಾಯಿತೆಂದರೆ, ನಮ್ಮ ಸಂಶೋಧನೆ ಮಾಡಿರುವಂಥ ಬೆಳೆಗಳು ಏನು ಇದೆ, ಅದು ಯಾವುದೂ ಕೂಡ ಫಲ ಕೊಡುವುದಕ್ಕೆ ಸಾಧ್ಯವಿಲ್ಲ. ಅದೆಲ್ಲಕ್ಕಿಂತಲೂ ಹೆಚ್ಚಾಗಿ ನಾನು ಬೇರೆ ಒಂದು ಸಂದರ್ಭದಲ್ಲಿ ಹೇಳಿದ್ದೆ. ನಮ್ಮ ರಾಜ್ಯದಲ್ಲಿ ಏನಾಗಿದೆಯೆಂದರೆ, ಉತ್ತರ ಕರ್ನಾಟಕ ಭಾಗದಲ್ಲಿ ಈಗ temperature 4 ಡಿಗ್ರಿಯಿಂದ 5 ಡಿಗ್ರಿಯವರೆಗೂ ಈಗಾಗಲೇ ಜಾಸ್ತಿಯಾಗಿ ಹೋಗಿದೆ. ಇನ್ನು ಹತ್ತಾರು ವರ್ಷಗಳು ಕಳೆದ ಮೇಲೆ ಪರಿಸ್ಥಿತಿ ಏನು ಎಂಬುದು ಅರ್ಥವಾಗುವುದಿಲ್ಲ. ಇವತ್ತು ಏನಾಗುತ್ತಿದೆಯೆಂದರೆ ಯಾವುದೇ ಮರಗಿಡಗಳನ್ನು ನೋಡಿ, ಮರಗಿಡ ಗಳೆಂದರೆ ಅವುಗಳಿಗೆ ಜೀವವಿಲ್ಲವೆಂಬ ಭಾವನೆ ಇದೆ. ಆದರೆ ಅವು ನಮ್ಮ ಹಾಗೆ ಉಸಿರು ಆಡುತ್ತವೆ. ಇವತ್ತು global climate changes ನಿಂದಾಗಿ ಹೆಚ್ಚು ನೀರನ್ನು ಹೊರಗಡೆ ಚೆಲ್ಲುವಂಥ ಕೆಲಸವನ್ನು ಮಾಡುತ್ತವೆ. ಇವತ್ತು ಹೊರಗಡೆಗೆ ಹೆಚ್ಚು ನೀರು ಹೋಗುವುದರಿಂದ ಕುಡಿಯುವುದಕ್ಕೂ ನೀರಿಲ್ಲ. ಎಲ್ಲಾ ಕಡೆಗಳಲ್ಲೂ ತೊಂದರೆಯಾಗುತ್ತಿರುವಂಥದ್ದು, ಇವತ್ತು global warming ನಿಂದ, ಇವತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಡೆನ್ಮಾರ್ಕ್‌ನಲ್ಲಿ ಆಯಿತು. ಪ್ರಪಂಚದಲ್ಲಿ ಎಲ್ಲೋ ಒಂದು ಕಡೆ ಚಿಂತನೆ ಪ್ರಾರಂಭವಾಯಿತು. ನಾವು global warming ಬಗ್ಗೆ ಚಿಂತನೆಯನ್ನು ಹರಿಸಬೇಕು. ಆಯಾ ದೇಶಗಳಾಗಲಿ, ಆಯಾ ರಾಜ್ಯಗಳಾಗಲಿ, ತನ್ನದೇ ಆದಂಥ ಇತಿಮಿತಿಯಲ್ಲಿ ಅದನ್ನು ಸರಿಪಡಿಸುವಂಥ ರೀತಿಯಲ್ಲಿ ಹೋಗಬೇಕೆನ್ನುವ ರೀತಿಯಲ್ಲೂ ಇವತ್ತು ಆಗಿರುವಂಥದ್ದು. ಈಗ ಅದರ ಕಡೆಗೆ ಗಮನವನ್ನು ಕೊಡಬೇಕಾ ಗುತ್ತದೆ. ಬಹುಶಃ ನಾವು ಕೃಷಿಕರ ಬಗ್ಗೆ, ರೈತರ ಬಗ್ಗೆ ಮಾತನಾಡಬೇಕಾದಾಗ

ನಮ್ಮ global warming ಬಗ್ಗೆ ನಾವು ಯಾವುದಾದರೂ ಒಂದು step ಅನ್ನು ತೆಗೆದುಕೊಳ್ಳದೇ ಹೋದರೆ ತೊಂದರೆಯಾಗುತ್ತದೆ. ಇನ್ನೂ ನೂರು ಯೋಜನೆಗಳನ್ನು ಮಾಡಿ, ಅದನ್ನು ಕೇವಲ ಬಜೆಟ್‌ನಲ್ಲಿ ಓದುವುದಕ್ಕೆ ಚೆನ್ನಾಗಿರುತ್ತದೆ, ಬಜೆಟ್‌ನಲ್ಲಿ ಹಣವನ್ನು ಕೊಟ್ಟಿದ್ದೇವೆಂದು ಮೇಜು ತಟ್ಟಿ ಸ್ವಾಗತ ಮಾಡುವ ಕೆಲಸವಾಗುತ್ತದೆಯೇ ವಿನಾ ಅದು ಅನುಷ್ಠಾನವಾಗುವುದಿಲ್ಲ, ಪ್ರತಿಫಲವನ್ನು ಇವತ್ತು ಕೊಡುವುದಿಲ್ಲವೆಂಬ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು : ತಾವು ಮುಗಿಸಿ, 45 ನಿಮಿಷಗಳು ಆಯಿತು.

ಶ್ರೀ ಟಿ.ಬಿ. ಜಯಚಂದ್ರ : ನಾನು brief ಆಗಿ ಕೆಲವು ವಿಚಾರಗಳನ್ನು ಹೇಳುತ್ತೇನೆ. ನಾನು ರೈತರ ವಿಚಾರ ಬಿಟ್ಟರೆ ಬೇರೆ ವಿಚಾರಕ್ಕೆ ಹೆಚ್ಚು ಗಮನವನ್ನು ಕೊಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಸಾಕಷ್ಟು ಸದಸ್ಯರು ಮಾತನಾಡಿದ್ದಾರೆಂಬ ಕಾರಣಕ್ಕೋಸ್ಕರ ಮಾತನಾಡುವುದಿಲ್ಲ. ಇವತ್ತು global warming ಬಗ್ಗೆ ನೀವು ಹೆಚ್ಚಿನ ಗಮನವನ್ನು ಹರಿಸಬೇಕಾಗುತ್ತದೆ. ನಾವು ರೈತರಿಗೆ awareness ಅನ್ನು ಕೊಡುವಂಥ ರೀತಿಯಲ್ಲಿ ಆಗಬೇಕಾಗುತ್ತದೆ. ನಿಮ್ಮ agriculture investment ಏನಾಗುತ್ತಿದೆ? ಕಳೆದ ಮೂರು ವರ್ಷಗಳಲ್ಲೂ ಕೂಡ ಆಹಾರದ ಉತ್ಪಾದನೆ ಕಡಿಮೆಯಾಗುತ್ತಿದೆ. ನಿಮ್ಮ investment ಕೂಡ ಕಡಿಮೆಯಾಗುತ್ತಿದೆ. ಈ ವರ್ಷ ನೀವು ಕೃಷಿಗೆ 2,094 ಕೋಟಿ ರೂಪಾಯಿಗಳನ್ನು ಮಾತ್ರ ತೆಗೆದಿಟ್ಟಿದ್ದೀರಿ. ಅಂದರೆ ಇದು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಇದರಲ್ಲಿ ನೀವು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಇವತ್ತು ಕೃಷಿಕರಿಗೆ ಬ್ಯಾಂಕ್‌ಗಳು ಸಾಲ ನೀಡಿದ ಬಗ್ಗೆ ಇವತ್ತು 200 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂಬ ಮಾತನ್ನು ಹೇಳುತ್ತೀರಿ. ಈ ಸಂದರ್ಭದಲ್ಲಿ ಒಂದು ಮಾತನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಲಿಚ್ಛಿಸುತ್ತೇನೆ. ಇಲ್ಲಿಯವರೆಗೂ ಕಳೆದ ನಾಲ್ಕಾರು ವರ್ಷಗಳಲ್ಲಿ ರೈತರಿಗೆ ರಿಯಾಯಿತಿ ದರದಲ್ಲಿ ಬಡ್ಡಿ ಮನ್ನಾ ಮಾಡುವಂಥ ಯೋಚನೆಗಳು ಇವೆ. ಸಾಕಷ್ಟು ರೀತಿಯಲ್ಲಿ ನಮ್ಮ agency ಗಳು ಏನು ಇವೆ, ಬ್ಯಾಂಕ್‌ಗಳು ಏನು ಇವೆ ಅವುಗಳು ರೈತರಿಗೆ ಸೌಲಭ್ಯಗಳನ್ನು ಕೊಡುವುದರಲ್ಲಿ ವಂಚನೆ ಮಾಡಿದೆಯೆಂಬ ಮಾತನ್ನು ಹೇಳಬೇಕಾಗುತ್ತದೆ. ಆ ವಂಚನೆಯನ್ನು ಮಾಡಿರುವಂಥ ಪ್ರಕರಣಗಳು ಇವತ್ತು ಸರ್ಕಾರದ ಮುಂದೆ ಇದೆ, ಅದು

ಗೊತ್ತಿದೆ. ಅದು ಗೊತ್ತಾಗಿಯೂ ಇದನ್ನು ಇದುವರೆಗೂ ಸರಿಪಡಿಸುವಂಥ ಕೆಲಸವಾಗಿಲ್ಲವೆಂದು ಹೇಳುತ್ತೇನೆ.

(5 – 20 PM)

ಮತ್ತೊಂದು ವಿಷಯವೆಂದರೆ, ಈ ಸಾರಿ 3% ಬಡ್ಡಿದರದಲ್ಲಿ ಸಿಗುವ ಸಾಲದ ಸೌಲಭ್ಯವನ್ನು ಪಡೆಯಬೇಕಾದರೆ, ರೈತರು ದಿನಾಂಕ 30–4–2010 ರೊಳಗಾಗಿ ಸರ್ಕಾರ ಇಲಾಖೆಯವರ ಮುಂದೆ ಹೆಸರುಗಳನ್ನು ನೋಂದಾಯಿಸಿ ಕೊಳ್ಳಬೇಕು ಎನ್ನುವ ಮಾತನ್ನು ಹೇಳಿದ್ದೀರಿ. ಅದು ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಿ. ಈ ರೀತಿಯಾದಂಥ restriction ಅನ್ನು ತೆಗೆಯುವುದು ಬಹಳ ಒಳ್ಳೆಯದು ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು, ಬಹಳ ಮುಖ್ಯವಾದುದು ಅಂತರ್ಜಲದ ವಿಷಯ. ಈಗಾಗಲೇ ಕುಡಿಯುವ ನೀರಿನ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ನಾನು ವಿರೋಧ ಪಕ್ಷದಲ್ಲಿ ಕುಳಿತು ಎಲ್ಲವನ್ನೂ ಟೀಕೆ ಮಾಡುತ್ತೇನೆ ಎನ್ನುವುದಿಲ್ಲ. ಎಲ್ಲಿ ಲೋಪದೋಷಗಳಿರುತ್ತವೆ, loopholes ಏನಿದೆ, ಅವುಗಳನ್ನು ಹೇಗೆ Plug ಮಾಡಬೇಕು ಎನ್ನುವ ಬಗ್ಗೆ ನಾವು ಎಚ್ಚರಿಕೆ ಕೊಡುವುದು ಆಗುತ್ತದೆ. ಬಾಂದಾರಗಳನ್ನು, ನಾಲಾ ಒಡ್ಡುಗಳನ್ನು ಮಾಡಿಸುತ್ತೇವೆ ಎನ್ನುವ ವಿಚಾರವನ್ನು ಇದರಲ್ಲಿ ಪ್ರಸ್ತಾಪ ಮಾಡಿದ್ದೀರಿ. ಅದಕ್ಕೆ 500 ಕೋಟಿ ರೂಪಾಯಿಗಳಷ್ಟು ಹಣವನ್ನು ತೊಡಗಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಇದು ಬಹಳ ಸಂತೋಷಪಡುವಂಥ ಒಂದು ಕಾರ್ಯಕ್ರಮ. ಆದರೆ ಇದನ್ನು ಕೇವಲ ಉದ್ಯೋಗ ಖಾತರಿ ಯೋಜನೆಯಲ್ಲಿ ತೊಡಗಿಸುತ್ತೇವೆ ಎನ್ನುವ ಮಾತನ್ನು ನೀವು ಹೇಳಿದ್ದೀರಿ. ಉದ್ಯೋಗ ಖಾತರಿ ಯೋಜನೆಯಲ್ಲಿ ಎಷ್ಟರ ಮಟ್ಟಿಗೆ ಬಾಂದಾರಗಳನ್ನು ನಿರ್ಮಾಣ ಮಾಡುವುದಕ್ಕೆ ಆಗುತ್ತದೆ ಎನ್ನುವುದು ನನಗಂತೂ ಗೊತ್ತಿಲ್ಲ. ಕಾರಣ ಏನೆಂದರೆ, ಅಲ್ಲಿ labour component, material component ಪ್ರಶ್ನೆ ಬಂದಾಗ ನೀವು, ನಿಮ್ಮ state budget ನಿಂದ ಹೆಚ್ಚು ಹಣವನ್ನು ಕೊಟ್ಟು ಅವೆರಡನ್ನೂ club ಮಾಡಿದಂಥ ಸಂದರ್ಭದಲ್ಲಿ, ಆ ಯೋಜನೆಗಳನ್ನು ಸಂಕ್ರಮಣ ಮಾಡಿದಂಥ ಸಂದರ್ಭದಲ್ಲಿ ನೀವು ಆ ಬಾಂದಾರಗಳನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಒಂದು ಉದಾಹರಣೆಯನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ಮುಖ್ಯಮಂತ್ರಿ

ಗಳಿಗೆ ನಾನು ಅನೇಕ ಸಾರಿ ಕಾಗದಗಳನ್ನು ಬರೆದೆ; ತಮ್ಮ ಕಾರ್ಯದರ್ಶಿಗಳಿಗೂ ಕೂಡ ಹೇಳಿದೆ. ನಾನು ಈ ಸಾರಿ ಒಂದು ಹೊಸ ಪ್ರಯೋಗವನ್ನು ಮಾಡಿದೆ. ಹಳ್ಳದಿಂದ ನೀರು ಹರಿದು ವಾಪಸ್ಸು ರಾಜ್ಯವನ್ನು ಬಿಟ್ಟು ಆಚೆ ಹೋಗುತ್ತಿತ್ತು ಎಂದು ಇಟ್ಟುಕೊಳ್ಳಿ. ಮಳೆಗಾಲದಲ್ಲಿ ಏನಾದರೂ ಮಾಡಿ ಆ ನೀರನ್ನು ಶೇಖರಿಸಬೇಕಲ್ಲ ಎಂದು ಯೋಚನೆ ಮಾಡಿದೆ. ನೀವು last year budget ನಲ್ಲಿ ಒಂದು ಮಾತನ್ನು ಹೇಳಿದ್ದಿರಿ. ಅದು, tank improvement project. Agriculture ಮಾಡತಕ್ಕಂಥವರ್ಯಾರಿಗೂ ಅದರ ಬಗ್ಗೆ ಮಾಹಿತಿ ಇಲ್ಲ. Satellite ಮೂಲಕ ಲಭ್ಯವಿರುವ ಮಾಹಿತಿಯನ್ನು N.R.S.C. ಯಿಂದ ತರಿಸಿದೆವು. Tank improvement Project ಅನ್ನು ಮಾಡಿದ್ದಾರೆ. ಆ ಮಾಹಿತಿ ಇದೆ. ಆ ಮಾಹಿತಿ ಪ್ರಕಾರ, ನಾನು ಕುಳಿತು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಏನು ಮಾಡಬಹುದು ಎಂದು ಯೋಚನೆ ಮಾಡಿದೆ. ನನಗೆ ಅರ್ಥವಾಯಿತು, ಹಳ್ಳದಿಂದ ಹರಿದು ಹೋಗುತ್ತಿರುವ, waste ಆಗುತ್ತಿರುವ ನೀರನ್ನು divert ಮಾಡುವುದಕ್ಕೆ ಸಾಧ್ಯವಾಯಿತು. 30 ಕಿ.ಮೀ. ವ್ಯಾಪ್ತಿಯಲ್ಲಿ ಇದ್ದ ರಾಜಕಾಲುವೆಗಳನ್ನು merciless ಆಗಿ ರೈತರ ಹೊಲಗಳಲ್ಲಿ ಮುಚ್ಚಿಹಾಕಿದ್ದನ್ನು open ಮಾಡುವಂಥ ಕೆಲಸ ಮಾಡಿದ್ದರಿಂದ ಇವತ್ತು 11 ಕೆರೆಗಳು ನೀರಿನಿಂದ ತುಂಬಿದ್ದು, ನಮ್ಮಲ್ಲಿ ಒಂದು ಹೋಬಳಿಗೆ ನೀರಿನ ಕೊರತೆಯೇ ಇಲ್ಲ. ಅಲ್ಲಿ ಅಂತರ್ಜಲ ಅಭಿವೃದ್ಧಿಯಾಗಿದೆ. 900–1000 ಅಡಿಗಳಲ್ಲಿದ್ದ ಅಂತರ್ಜಲ ಈಗ 300 ಅಡಿಗೆ ಬಂದಿದೆ. ಕೇವಲ ಆರು ತಿಂಗಳಲ್ಲಿ ಆಗಿರತಕ್ಕಂಥ ವ್ಯತ್ಯಾಸವಿದು. ಈ ರೀತಿಯ ಕೆಲಸಗಳನ್ನು ಮಾಡಬೇಕಾಗುತ್ತದೆ. ಎಲ್ಲೆಲ್ಲಿ ರಾಜಕಾಲುವೆಗಳಿವೆ, ಅವುಗಳನ್ನು open ಮಾಡಿರುವುದನ್ನು ನೀವು ಉದ್ಯೋಗ ಖಾತರಿ ಯೋಜನೆಯಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇದಕ್ಕೆ machinery ಬೇಕಾಗುತ್ತದೆ. ಹಾಗಾಗಿ, ಇದನ್ನು ಉದ್ಯೋಗ ಖಾತರಿ ಯೋಜನೆಯಲ್ಲಿ ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ, ನೀವು ಬಾಂದಾರ ಹಾಗೂ ನಾಲಾ ಒಡ್ಡುಗಳನ್ನು ನಿರ್ಮಿಸಲು 500 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದೇನು ಹೇಳಿದ್ದೀರಿ, ಅದನ್ನು ಉದ್ಯೋಗ ಖಾತರಿ ಯೋಜನೆ + ಬಜೆಟ್‌ನಲ್ಲಿ ಪ್ರತ್ಯೇಕ ಹಣವನ್ನು ಕೊಡುವಂಥ ಕೆಲಸ ಮಾಡಿದರೆ ನೀವು ಅವುಗಳನ್ನು ನಿರ್ಮಾಣ ಮಾಡಬಹುದು. ಎರಡು ಲಕ್ಷ ಬಾಂದಾರಗಳನ್ನು ನಿರ್ಮಾಣ ಮಾಡುತ್ತೇವೆ

ಎಂದೇನು ನೀವು ಆಸೆ ಇಟ್ಟುಕೊಂಡಿದ್ದೀರಿ, ಅದನ್ನು ಮಾಡಿದರೆ ಜನ ನಿಮ್ಮನ್ನು ಮೆಚ್ಚುತ್ತಾರೆ, ರೈತರು ಮೆಚ್ಚುತ್ತಾರೆ, ನಿಮ್ಮ ಕೆಲಸ ನಿಮ್ಮ ಹೆಸರನ್ನು ಹೇಳುತ್ತದೆ. ಆ ಕೆಲಸವನ್ನು ಮೊದಲು ಮಾಡಿ. ನಮ್ಮ ಸಂಪೂರ್ಣವಾದ ಸಹಕಾರ ನಿಮಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು, ಭೂ ಚೇತನ ಕಾರ್ಯಕ್ರಮದ ಬಗ್ಗೆ ಮಾತನಾಡಿದ್ದೀರಿ. ಅದು ಒಳ್ಳೆಯ ಕಾರ್ಯಕ್ರಮವೇ. ಆದರೆ ಅದನ್ನು ಈಗ ನೀವು 15 ಜಿಲ್ಲೆಗಳಿಗೆ ಮಾತ್ರ ವಿಸ್ತಾರ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಅದನ್ನು ನೀವು ಇಡೀ ರಾಜ್ಯಕ್ಕೆ ವಿಸ್ತಾರ ಮಾಡಿ. Micro nutrient management ಅಂದರೆ ಲಘು ಪೋಷಕಾಂಶಗಳನ್ನು ಬೆಳೆಗಳಿಗೆ ಕೊಡುವಂಥಾದ್ದು ಆಗಬೇಕು. ಇವತ್ತು ನಮಗೆ ಬೇಕಾಗಿರುವುದು ಗೊಬ್ಬರ ಅಲ್ಲ, N.P.K. ಅಲ್ಲ, ಇದರಿಂದ ನಮ್ಮ ರೈತರು ಹಾಳಾಗಿ ಹೋಗುತ್ತಿದ್ದಾರೆ. ನಮಗೆ ಬೇಕಾಗಿರುವುದೆಂದರೆ, copper, zinc, phosphate, ಇಂಥ ಲಘು ಪೋಷಕಾಂಶಗಳನ್ನು ನಾವು ಗಿಡಗಳಿಗೆ ಕೊಡದೇ ಇರುವುದರಿಂದ ನಮ್ಮ ಉತ್ಪಾದನೆಯಲ್ಲಿ ಕೊರತೆಯಾಗಿದೆ. ಈ ಭೂ ಚೇತನ ಕಾರ್ಯಕ್ರಮದಲ್ಲಿ ಅದನ್ನು ಸರಿದೂಗಿಸುವುದಕ್ಕೆ, ರೈತರಿಗೆ ಮಾಹಿತಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಇಡೀ ರಾಜ್ಯಕ್ಕೆ ವಿಸ್ತಾರ ಮಾಡುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಅದರಲ್ಲೂ, ವಿಶೇಷವಾಗಿ, ಉತ್ತರ ಕರ್ನಾಟಕದ ಭಾಗದಲ್ಲಿ ಎಲ್ಲ ಹಳ್ಳಿಗಳಿಗೂ ಕೂಡ ಇದನ್ನು ವಿಸ್ತಾರ ಮಾಡುವಂಥ ಕೆಲಸವನ್ನು ದಯಮಾಡಿ ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮತ್ತೊಂದು ಸಂತೋಷದ ಸಂಗತಿಯೆಂದರೆ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ telemetric ಮಳೆ ಮಾಪನ ಯಂತ್ರಗಳನ್ನು ಸ್ಥಾಪನೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಆದರೆ insurance ನ್ನೂ ಹೋಬಳಿಯನ್ನು ಬಿಟ್ಟು ಪಂಚಾಯಿತಿ ಮಟ್ಟಕ್ಕೆ ಬಂದಿಲ್ಲ. ಆ ಯೋಜನೆ ಪ್ರಾರಂಭವಾಗಿದ್ದು ನಾನು ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ. ಪ್ರಾರಂಭವಾಗಿ 10 ವರ್ಷಗಳು ಕಳೆದರೂ ಕೂಡ ಇನ್ನೂ ಅದು ಪಂಚಾಯಿತಿ ಮಟ್ಟಕ್ಕೆ ಬರಲಿಲ್ಲವೆಂದರೆ ಖಂಡಿತವಾಗಿಯೂ ಪ್ರಯೋಜನ ಆಗುವುದಿಲ್ಲ. ಇವತ್ತು ನಮ್ಮ ಹತ್ತಿರ 10 ವರ್ಷದ statistics ಇದೆ, data ಇದೆ, ಆದಾಗ್ಯೂ ಕೂಡ ನಾವು ಏಕೆ ಇನ್ನೂ

ಗ್ರಾಮ ಪಂಚಾಯಿತಿ ಮಟ್ಟಕ್ಕೆ ಬರಲಿಲ್ಲ ಎನ್ನುವುದು ಮುಖ್ಯವಾಗುತ್ತದೆ. ಬೇರೆ ಬೇರೆ ರಾಜ್ಯಗಳಲ್ಲಿ ಇದು ಗ್ರಾಮ ಪಂಚಾಯಿತಿ ಮಟ್ಟಕ್ಕೆ ಇರುವುದರಿಂದ ಅವರಿಗೆ ಸೌಲಭ್ಯ ಸಿಗುತ್ತಿದೆ. ಇಲ್ಲಿ ನಮ್ಮವರು insurance ಮಾಡಿದ್ದರೂ ಕೂಡ ಸಿಗುವುದಿಲ್ಲ. ದಯಮಾಡಿ ಇದರ ಬಗ್ಗೆ ನೀವು ಯೋಚನೆ ಮಾಡಬೇಕು. Telemetric ಮಾಪನದ ಜೊತೆಗೆ ನೀವು insurance ಅನ್ನು assessment ಮಾಡಬೇಕಾದಾಗ ಪಂಚಾಯಿತಿ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಬಗ್ಗೆ ನೀವು ನಿರ್ಧಾರ ಮಾಡಿದರೆ ಅದೊಂದು ಮಹತ್ವವಾದ ನಿರ್ಧಾರವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ವಿಷಯವೆಂದರೆ, ಸಾವಯವ ಗೊಬ್ಬರದ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಚಾರವನ್ನು ತರುತ್ತೇನೆ. ಗೊಬ್ಬರ ಎಂದ ತಕ್ಷಣ ಅದೇನು ಕಥೆಯೋ ಗೊತ್ತಿಲ್ಲ, ನಿಮಗೂ ಗೊಬ್ಬರಕ್ಕೂ ಬಹಳ ನೆಂಟಿದೆ. ಅದರಲ್ಲೂ ವಿಶೇಷವಾಗಿ ರವೀಂದ್ರನಾಥ್ ರವರಿಗಂತೂ ಬಹಳ ನೆಂಟಿದೆ. ಗೊಬ್ಬರದ ಸಮಸ್ಯೆ ಎಂದು ಗೊತ್ತಾಗುವುದು ಎಲ್ಲಿಂದ ಎಂದರೆ, ಅದು ಗೊತ್ತಾಗುವುದು ದಾವಣಗೆರೆಯಿಂದಲೇ. ಈ ವಿಷಯದಲ್ಲಿ ಈ ಸಾರಿ ನೀವು ಏನು ಕಾರ್ಯಕ್ರಮ ಹಾಕಿದ್ದೀರೋ ನನಗಂತೂ ಗೊತ್ತಿಲ್ಲ. ಒಂದು ಮಾತನ್ನು ನಾನು ಹೇಳುತ್ತೇನೆ. ಏಪ್ರಿಲ್ 1ರ ನಂತರ ಕೇಂದ್ರ ಸರ್ಕಾರದವರು ಹೊಸ ನೀತಿಯನ್ನು ತರುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅದರಲ್ಲಿ ಕೇಂದ್ರ ಸರ್ಕಾರ subsidy ಮೂಲಕ ಕೊಡುತ್ತಿರುವ 1 ಲಕ್ಷದ 20 ಸಾವಿರ ಕೋಡಿ ರೂಪಾಯಿಗಳನ್ನು 50 ಸಾವಿರ ಕೋಟಿ ರೂಪಾಯಿಗಳಿಗೆ ಇಳಿಸುವುದಕ್ಕೆ ನಾವು liberalize ಮಾಡುತ್ತೇವೆ, policy ಏನು ಎನ್ನುವುದನ್ನು ಏಪ್ರಿಲ್ ತಿಂಗಳಲ್ಲಿ ನಾವು ಘೋಷಣೆ ಮಾಡುತ್ತೇವೆ ಏನ್ನುವ ಮಾತನ್ನು ಕೇಂದ್ರ ಸರ್ಕಾರದವರು ಹೇಳಿದ್ದಾರೆ. ನಾನು ಅರ್ಥ ಮಾಡಿಕೊಂಡಿರುವ ಪ್ರಕಾರ, ಆ ಪಾಲಿಸಿ ಬಂದಂಥ ಸಂದರ್ಭದಲ್ಲಿ ಬಹಳ ವ್ಯತ್ಯಾಸಗಳಾಗುತ್ತವೆ. ಜನರು ಮತ್ತೆ ಶಿಕಾರಿಪುರದಲ್ಲಿ, ದಾವಣಗೆರೆಯಲ್ಲಿ ಮೇಲೆ ಬೀಳುವಂಥ ಸಂದರ್ಭ ಬರುತ್ತದೆ. ನೀವು Marketing Federation ಗೆ last time ಕೊಟ್ಟ ಹಾಗೆ 400 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. policy ಏನಿದೆ, ಏನಾಗುತ್ತದೆ ಎನ್ನುವುದನ್ನು ನೋಡಿಕೊಂಡು ಮುನ್ನೆಚ್ಚರಿಕೆ ಕ್ರಮವನ್ನು ತೆಗೆದುಕೊಳ್ಳಬೇಕು. ದಯಮಾಡಿ

ಯಾವುದೇ ಕಾರಣಕ್ಕೂ ಕೂಡ ರೈತರು ಈ ಸಾರಿ ಗೊಬ್ಬರಕ್ಕೋಸ್ಕರ ಬೀದಿಗೆ ಬರುವುದಕ್ಕೆ ಅವಕಾಶ ಕೊಡಬೇಡಿ. ನಾನು ಮೊನ್ನೆ ದೆಹಲಿಗೆ ಹೋದಂಥ ಸಂದರ್ಭದಲ್ಲಿ ಮಾತನಾಡಿದೆ, ಶರದ್‌ಪವಾರ್ ರವರನ್ನು ಭೇಟಿ ಮಾಡಿದಂಥ ಸಂದರ್ಭದಲ್ಲಿ ಕೂಡ, ಏಪ್ರಿಲ್ 1 ರಿಂದ policy finalize ಆಗುತ್ತದೆ, 15–20 ದಿವಸಗಳಲ್ಲಿ policy ಕಳುಹಿಸುತ್ತೇವೆ, ನಾವು drastic ಆಗಿ liberalize ಮಾಡುತ್ತಿದ್ದೇವೆ' ಎನ್ನುವ ಮಾತನ್ನು ಹೇಳಿದರು. ಆ ರೀತಿ ಆಯಿತು ಎಂದರೆ ನಾವು ಬಹಳ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಏನಾಗುತ್ತದೆ, ಏನಾಗುವುದಿಲ್ಲ ಎನ್ನುವುದನ್ನು ಕೇಂದ್ರ ಸರ್ಕಾರವೇ ಇನ್ನೂ ಅಂತಿಮವಾಗಿ ನಿರ್ಧಾರ ಮಾಡಿಲ್ಲ. ನಿನ್ನೆಯಿಂದ ಮಳೆ ಪ್ರಾರಂಭವಾಗಿದೆ, ಹಾಸನದ ಕಡೆಗಳಲ್ಲಿ ನಿನ್ನೆಯಿಂದ ಮಳೆ ಪ್ರಾರಂಭವಾಯಿತು. ಈ ತಿಂಗಳ 20–21ರ ನಂತರ ರಾಜ್ಯದ ಎಲ್ಲ ಕಡೆಯೂ ವ್ಯಾಪಕವಾಗಿ ಮಳೆಯಾಗುತ್ತದೆ. Pre-monsoon ಮಳೆ ಪ್ರಾರಂಭವಾಗುತ್ತದೆ. Monsoon ಮೇ 25ಕ್ಕೆ ಪ್ರಾರಂಭವಾಗುತ್ತದೆ. ಅಷ್ಟರೊಳಗಾಗಿ ಗೊಬ್ಬರದ ಕೊರತೆ ನಿಮಗೆ ಕಾಣಬಹುದು. ಅದನ್ನು ಸಮರ್ಥವಾಗಿ ನಿರ್ವಹಿಸತಕ್ಕಂಥ ಕೆಲಸವನ್ನು ನೀವು ಮಾಡಬೇಕು ಎನ್ನುವ ಮಾತನ್ನು ಹೇಳುತತೇನೆ. ಎಷ್ಟು ಗೊಬ್ಬರ ಬೇಕಾಗುತ್ತದೆ ಎನ್ನುವುದನ್ನು ನೀವು ಅಂದಾಜು ಮಾಡಬೇಕಾಗುತ್ತದೆ. ಈಗಾಗಲೇ ಯೂರಿಯಾ ಗೊಬ್ಬರದ ರೇಟ್ ಜಾಸ್ತಿ ಮಾಡಿದ್ದಾರೆ. N.P.K. ಬಗ್ಗೆ ಇನ್ನೂ ಪ್ರಸ್ತಾಪ ಮಾಡಿಲ್ಲ. ಅದನ್ನು ಎಷ್ಟು import ಮಾಡುತ್ತಾರೋ, ಏನು ಮಾಡುತ್ತಾರೋ, ಎಲ್ಲಿಂದ ತರಿಸುತ್ತಾರೋ, ಯಾವುದಕ್ಕೆ subsidy cut ಮಾಡುತ್ತಾರೋ, ಹೀಗೆ ಏನೇನು ಗೊತ್ತಿಲ್ಲದೇ ಇರತಕ್ಕಂಥ ಈ ಸಂದರ್ಭದಲ್ಲಿ ನೀವು ಬಹಳ ಎಚ್ಚರಿಕೆಯಿಂದ ಇರಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು, ವಿದ್ಯುಚ್ಛಕ್ತಿ ಬಗ್ಗೆ ಪ್ರಸ್ತಾಪ ಮಾಡಿದರು. "ನಿರಂತರ ಜ್ಯೋತಿ" ಎನ್ನುವುದನ್ನು ತಾವು ಹೇಳಿದ್ದೀರಿ. ಇದು ನಿಮ್ಮ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಇದರಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ತೊಡಗಿಸಿ ಇದನ್ನು ಇಡೀ ರಾಜ್ಯದಲ್ಲಿ ವಿಸ್ತಾರ ಮಾಡಬೇಕು ಎಂದು ಇದ್ದೀರಿ. ನಾನು ಅರ್ಥಮಾಡಿಕೊಂಡಿರುವ ಪ್ರಕಾರ ಈ "ನಿರಂತರ ಜ್ಯೋತಿ" ಎನ್ನುವುದು system improvement. System improvement ಮಾಡುವುದಕ್ಕೆ ನೀವು "ನಿರಂತರ ಜ್ಯೋತಿ" ಎನ್ನುವ ಹೆಸರನ್ನು ಕೊಟ್ಟಿದ್ದೀರಿ.

ಈಗ ನಮ್ಮಲ್ಲಿರುವ existing systems overload ಆಗಿ ಬಹಳ ವರ್ಷಗಳಾಗಿವೆ. Conductors change ಮಾಡಬೇಕು, wires change ಮಾಡಬೇಕು, copper change ಮಾಡಬೇಕು. Higher gauge wire ಹಾಕಬೇಕಾಗುತ್ತದೆ. Transformers replace ಮಾಡಬೇಕಾಗುತ್ತದೆ. ಎಲ್ಲ ಕಡೆಯೂ ಏಕೆ overload ಆಯಿತು ಎಂದರೆ, unauthorized pumpsets. ಇವತ್ತು ರಾಜ್ಯದಲ್ಲಿ 2 ಲಕ್ಷದಿಂದ 3 ಲಕ್ಷಗಳಷ್ಟು unauthorized pumpsets. ಇವೆ. ಅಧಿಕೃತವಾಗಿ 17 ಲಕ್ಷ ಪಂಪುಸೆಟ್ಟುಗಳಿವೆ. unauthorized pumpsets ನಿಮ್ಮ ಲೆಕ್ಕಕ್ಕೆ ಬರುವುದಿಲ್ಲ, ಲೆಕ್ಕಕ್ಕೆ ಸಿಗುವುದಿಲ್ಲ. ನಿಮ್ಮ authorized load ಏನಿದೆ, authorized HP capacity ಏನಿದೆ ಅಷ್ಟಕ್ಕೆ ಮಾತ್ರ ನೀವು ಯೋಜನೆ ಮಾಡುತ್ತೀರಿ. ಆದರೆ unauthorize ಆಗಿ ವಿದ್ಯುತ್ತನ್ನು draw ಮಾಡುತ್ತಿರುವುದು ನಿಮಗೆ ಲೆಕ್ಕವಿಲ್ಲ. ಈಗಾಗಲೇ ನೀವು grey, black and white ಎಂದೇನು ವರ್ಗೀಕರಣ ಮಾಡಿದ್ದೀರಿ ಅದನ್ನು ಮರುಪರಿಶೀಲನೆ ಮಾಡಿ. unauthorized pumpset ಅನ್ನು regularize ಮಾಡುವಂಥ ದಿಟ್ಟ ತೀರ್ಮಾನವನ್ನು ನೀವು ಮಾಡಿದರೆ ಸರ್ಕಾರಕ್ಕೆ ಒಂದಲ್ಲ ಒಂದು ರೀತಿಯಲ್ಲಿ ದುಡ್ಡು ಬರುತ್ತದೆ. ಇವತ್ತು ನಿಮ್ಮ Escom ಗಳೆಲ್ಲ ಮುಚ್ಚುವಂಥ ಪರಿಸ್ಥಿತಿಗೆ ಬಂದಿವೆ. ಮೂಲ ಬಂಡವಾಳ ಇಲ್ಲದೇ ಅವುಗಳನ್ನು ನಡೆಸುವಂಥ ಪರಿಸ್ಥಿತಿಯಾಗಿದೆ. ಒಂದು ಕಡೆ ನೀವು ಅವುಗಳಿಗೆ ದುಡ್ಡು ಕೊಡುವುದಿಲ್ಲ, ಇನ್ನೊಂದು ಕಡೆ unauthorize ಆಗಿ ತೆಗೆದು ಕೊಂಡಿರುವವರನ್ನು ಹಿಡಿಯುವುದಕ್ಕೆ ಸಾಧ್ಯವಿಲ್ಲ ಎಂದಾಗ ಯಾವ ರೀತಿ ಆಗುತ್ತದೆ ಎನ್ನುವುದನ್ನು ನೀವು ಯೋಚನೆ ಮಾಡಬೇಕು.

ನಿರಂತರ ಜ್ಯೋತಿ ಯೋಜನೆ ಬಗ್ಗೆ ನಾನು ಹೇಳುವುದಾದರೆ, ಇದು ಮಾಲೂರಿನಿಂದ ಪ್ರಾರಂಭವಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇಡೀ ರಾಜ್ಯಕ್ಕೆ ವಿಸ್ತಾರ ಮಾಡುತ್ತಿದ್ದೇವೆಂದು ಹೇಳಿದಿರಿ. ಇದನ್ನು ದಿನಾಂಕ: 9.11.2008 ರಲ್ಲಿ open ಮಾಡಿದಿರಿ ಎಂಬುದಾಗಿ ಪತ್ರಿಕೆಯಲ್ಲಿ ಬಂದಿದೆ. ನಾನು ಮಾಲೂರಿಗೆ ಯಾವುದೋ ಒಂದು ಸಂದರ್ಭದಲ್ಲಿ ಹೋಗಿದ್ದೆ. ಆಗ ಅಲ್ಲಿ ಪರಿಸ್ಥಿತಿ ಏನಾಗಿದೆ ಎಂದು ನೋಡಿದಾಗ ಏನೂ improvement ಆಗಿಲ್ಲ. ಇದಕ್ಕೆ ಕಾರಣವೇನೆಂದರೆ,

ಇರತಕ್ಕಂಥ system overload ಆಗಿರುವುದರಿಂದ ನೀವು ಎಷ್ಟೇ ಮಾಡಿದರೂ ಕೂಡ ಅದು normal ಆಗಬಹುದೇ ವಿನಾ ಹೆಚ್ಚು ಲಾಭ ಆಗುವುದಿಲ್ಲ. ಆದರೆ, ಆ ಕೆಲಸವನ್ನು ಮಾಡಲೇಬೇಕಾಗುತ್ತದೆ. System improvement is a must. ಅವು ಯಾವ ಹೆಸರಿನಲ್ಲಿಯಾದರೂ ಮಾಡಿ ಆದರೆ ಆದಷ್ಟು ಬೇಗ ಮಾಡಬೇಕಾಗುತ್ತದೆ. ಅದರಿಂದ ರೈತರಿಗೆ rural feeder, urban feeder ಎಂದು ಮಾಡಿ 24 ಗಂಟೆ current ಕೊಡುತ್ತೇವೆಂದರೆ ಖಂಡಿತಾ ಸಾಧ್ಯವಿಲ್ಲ. ಬೇಕಾದರೆ, ಮಾಲೂರಿನಲ್ಲಿ ಆಗಿರುವ experience ಅನ್ನು ನಾನು ಓದಿ ಹೇಳುವ ಅವಶ್ಯಕತೆ ಇಲ್ಲ. ಅಲ್ಲೂ ಕೂಡ ಯಾವುದೇ ರೀತಿಯ ಒಳ್ಳೆಯ ಪರಿಣಾಮವನ್ನು ಬೀರುವುದಕ್ಕೆ ಸಾಧ್ಯವಾಗಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ನೀವು ರೈತರ ಬಗ್ಗೆ ಬಹಳ ಕಾಳಜಿಯನ್ನು ತೋರಿಸುತ್ತೀರಿ. ಇದರ ಬಗ್ಗೆ ವಿಧಾನ ಸಭೆಯಲ್ಲೂ ಸಾಕಷ್ಟು ಪ್ರಸ್ತಾಪವಾಗಿದೆ. ಡಿಸೆಂಬರ್ ತಿಂಗಳೊಳಗಾಗಿ ನಾವು ಹಾಲಿನ rate ಅನ್ನು ಜಾಸ್ತಿ ಮಾಡುತ್ತೇವೆಂದು ಶ್ರೀ ಸೋಮಶೇಖರರೆಡ್ಡಿ ಯವರು ಹೇಳಿದ್ದರು. ಹಾಗೆಯೇ ಮಾನ್ಯ ಮುಖ್ಯಮಂತ್ರಿಯವರ ಜೊತೆ consult ಮಾಡಿ ಹಾಲಿನ rate ಅನ್ನು ಜಾಸ್ತಿ ಮಾಡುತ್ತೇವೆಂದು ಇವತ್ತು ಮಾನ್ಯ ಸಹಕಾರ ಸಚಿವರು ಸಹ ಹೇಳಿದರು. ರೈತರಿಗೆ ಪೂರಕವಾಗಿ ಉಪಕಸುಬು ಏನಾದರೂ ಇದ್ದರೆ, ಆ ಉಪಕಸುಬಿಗೆ ಸರ್ಕಾರ ಶಕ್ತಿಯನ್ನು ಕೊಡದಿದ್ದರೆ ಖಂಡಿತವಾಗಿ ರೈತರಿಗೆ ಸಹಾಯ ಮಾಡುವುದಕ್ಕಾಗುವುದಿಲ್ಲ. ಇವತ್ತು ಹಾಲನ್ನು ನಂಬಿಕೊಂಡು ಬಹಳಷ್ಟು ಜನ ಜೀವನ ಮಾಡುತ್ತಿದ್ದಾರೆ. ಈಗ milk production ಕಡಿಮೆಯಾಗಿಲ್ಲ. ನೀವು ಹಾಲು ಉತ್ಪಾದಕರಿಗೆ 2 ರೂ. subsidy ಕೊಟ್ಟರೂ ಅದು ಕಣ್ಣಿಗೆ ಕಾಣಿಸು ವುದಿಲ್ಲ. ನೀವು ಕೊಡುತ್ತೇವೆಂದು ಹೇಳಿದ subsidy ಹಣ ಕಳೆದ ನವೆಂಬರ್ ತಿಂಗಳಿನಿಂದಲೂ ಬಿಡುಗಡೆಯಾಗಿಲ್ಲ. ನಾನು ಹೇಳುವುದೇನೆಂದರೆ, consumer interest ನೋಡುವುದಕ್ಕಿಂತ ಹೆಚ್ಚಾಗಿ ಚುನಾವಣೆ ಕಳೆದ ನಂತರವಾದರೂ ಏಪ್ರಿಲ್ ತಿಂಗಳ ನಂತರವಾದರೂ ಹಾಲಿನ rate ಅನ್ನು ಜಾಸ್ತಿ ಮಾಡಿ ರೈತರಿಗೆ ಆ ಹಣ ದೊರಕತಕ್ಕಂಥ ಕೆಲಸವನ್ನು ಮಾಡಬೇಕು. ನಾನು ಅಂಕಿಅಂಶ ಲೆಕ್ಕ ಹಾಕಿದ್ದೇನೆ. ನಾನೂ ಕೂಡ ಎರಡು ಹಸು ಸಾಕಿದ್ದೇನೆ. ಅದರಿಂದ ಯಾವತ್ತೂ ಕೂಡ ಲಾಭ ಬಂತು ಎನ್ನುವ ಪ್ರಶ್ನೆ

ಇಲ್ಲ. ಕಾಫಿ, ಹಾಲು ಕುಡಿಯಬಹುದೇ ಹೊರತು ಬೇರೆ ಏನೂ ಲಾಭವಾಗುವುದಿಲ್ಲ. ಇದನ್ನು ನಂಬಿಕೊಂಡಿರುವ ಜನ ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳು ಇದನ್ನು ನಂಬಿಕೊಂಡು ಜೀವನ ಮಾಡತಕ್ಕಂಥ ಜನ ಇದ್ದಾರಲ್ಲಾ, ಅವರು ಯಾವ ರೀತಿಯಾಗಿ ನಿಭಾಯಿಸುವುದಕ್ಕಾಗುತ್ತದೆ? ಗುಜರಾತಿನಲ್ಲಿ ಒಂದು ಲೀಟರ್ ಹಾಲಿಗೆ 24 ರೂಪಾಯಿಗಳು, ಆಂಧ್ರ ಪ್ರದೇಶದಲ್ಲಿ ಒಂದು ಲೀಟರ್ ಹಾಲಿಗೆ 24 ರೂಪಾಯಿಗಳು, ಮಹಾರಾಷ್ಟ್ರ ದಲ್ಲಿ ಒಂದು ಲೀಟರ್ ಹಾಲಿಗೆ 23 ರೂಪಾಯಿಗಳು, ದೆಹಲಿಯಲ್ಲಿ ಒಂದು ಲೀಟರ್ ಹಾಲಿಗೆ 22 ರೂಪಾಯಿಗಳು, ಗೋವಾದಲ್ಲಿ ಒಂದು ಲೀಟರ್ ಹಾಲಿಗೆ 22 ರೂಪಾಯಿಗಳು. ಆದರೆ, ಕರ್ನಾಟಕದಲ್ಲಿ ಮಾತ್ರ ಒಂದು ಲೀಟರ್ ಹಾಲಿಗೆ 16 ರೂಪಾಯಿಗಳು. ಅದರಲ್ಲಿ ರೂ. 11.37 ಅಥವಾ 12 ರೂಪಾಯಿ ಜೊತೆಗೆ ಸರ್ಕಾರದಿಂದ ಕೊಡುವ 2 ರೂಪಾಯಿ ರೈತರಿಗೆ ತಲುಪುತ್ತದೆ. ಆದ್ದರಿಂದ, rate ಮಾಡುವುದರಲ್ಲಿ ಹಿಂದೆ ಮುಂದೆ ನೋಡ ಬೇಡಿ. ನಮ್ಮ ರೈತರ interest ಮುಖ್ಯ. ನಮ್ಮಲ್ಲಿರತಕ್ಕಂಥ ಗೋವುಗಳ ಸಂಪತ್ತನ್ನು ಉಳಿಸುವುದು ಮುಖ್ಯ. ಆದರೆ, ಇವತ್ತು ಯಾರೂ ಆ ಸಂಫತ್ತನ್ನು ಉಳಿಸುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಆ rate ಅನ್ನು ಜಾಸ್ತಿ ಮಾಡಿ ಎಂದು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ನಾವು ಸಲಹೆ ಕೊಡುತ್ತಿದ್ದೇವೆ. ಕಾರಣವೇನೆಂದರೆ, ಇದರಲ್ಲಿ ರೈತರ ಹಿತದೃಷ್ಟಿ ಅಡಗಿದೆ. ನೀವು ಒಂದು ಪಕ್ಷ rate ಜಾಸ್ತಿ ಮಾಡಲಿಲ್ಲವೆಂದರೆ ಏನಾಗಬಹುದೆನ್ನುವ ಬಗ್ಗೆ ನಿಮಗೆ ಈಗಾಗಲೇ ಮಾಹಿತಿ ಬಂದಿರಬಹುದು. ಸದನದಲ್ಲಿ ಈಗ ಸಹಕಾರ ಸಚಿವರು ಇಲ್ಲ. ಬೇರೆ ಬೇರೆ ದೇಶದಲ್ಲಿ ಏನಾಗುತ್ತಿದೆ ಎಂದು ಈಗಾಗಲೇ ನಿಮ್ಮ experience ಗೆ ಬಂದಿರಬಹುದು ಮತ್ತು ಅಧಿಕಾರಿಗಳು ಹೇಳಿರಬಹುದು. ಚೈನಾದಲ್ಲಿ it was once, ಸಾಕಷ್ಟು ಹಾಲನ್ನು ಉತ್ಪಾದನೆ ಮಾಡುತ್ತಿದ್ದ ದೇಶದಲ್ಲಿ ಅಲ್ಲಿನ ಸರ್ಕಾರದ ತಪ್ಪು ನೀತಿಯಿಂದಾಗಿ ಅಥವಾ ಬೇರೆ ಕಾರಣದಿಂದ ಅಲ್ಲಿ ಈಗ spurious ಹಾಲು ಬರುವುದಕ್ಕೆ ಪ್ರಾರಂಭವಾಗಿದೆ. ಇವತ್ತು ನಮ್ಮ ಕೈಗಾರಿಕೋದ್ಯಮಗಳು ಏನು ತಿಳಿದುಕೊಂಡಿವೆ ಎಂದರೆ ನಾವು ಚಾಪೆ ಕೆಳಗೆ ತೂರಿದರೆ ಅವರು ರಂಗೋಲಿ ಕೆಳಗೆ ತೂರುತ್ತಾರೆ. ಈಗಾಗಲೆ melamine, refined oil, fevicol, urea mix ಮಾಡಿ ಹಾಲನ್ನು ತಯಾರು ಮಾಡುತ್ತಿದ್ದಾರೆ, ಇದು

ಬೇರೆ ಬೇರೆ ರಾಜ್ಯದಲ್ಲಿ ಆಗುತ್ತಿದೆ. ಹಾಲಿನ shortage ಅನ್ನು fulfil ಮಾಡುವುದಕ್ಕೋಸ್ಕರ ಈ ರೀತಿಯಾಗಿರತಕ್ಕಂಥ spurious ಹಾಲು ಬರುವುದಕ್ಕೆ ಪ್ರಾರಂಭವಾಗಿದೆ. ಈಗಾಗಲೇ ಅದು market ನಲ್ಲಿದೆ. ಈ ರೀತಿಯ ಹಾಲು ಬೇರೆ ಬೇರೆ ರಾಜ್ಯಗಳಲ್ಲಿದೆ ಎನ್ನುವ ಮಾಹಿತಿ ಕೂಡ ನನಗಿದೆ. ಅಂಥ ಸ್ಥಿತಿ ಕರ್ನಾಟಕಕ್ಕೆ ಇಲ್ಲವೆಂದು ಹೇಳುತ್ತಿಲ್ಲ. ಅಂಥ ಸ್ಥಿತಿ ಕರ್ನಾಟಕಕ್ಕೆ ಬರಬಾರದು. ನನಗೆ ಅನುಮಾನವಿದೆ. ಹಾಲನ್ನು ನಂಬಿರುವ ಲಕ್ಷಾಂತರ ಜನ ಇರುವಾಗ ನಾನು ವಿಧಾನಸಭೆಯಲ್ಲಿ ಅದರ ಪ್ರಸ್ತಾಪ ಮಾಡಬಾರದು ಎನ್ನುವ ಕಾರಣಕ್ಕೋಸ್ಕರ ನಾನು ಪ್ರಸ್ತಾಪ ಮಾಡುತ್ತಿಲ್ಲ. ಆ ರೀತಿಯಾಗಿರತಕ್ಕಂಥ spurious ಹಾಲು ಬರುವುದಕ್ಕಿಂತ ಮುಂಚೆ ನೀವು ಎಲ್ಲಾದರೂ ಒಂದು ಕಡೆಗೆ ಪ್ರೋತ್ಸಾಹ ಕೊಟ್ಟು ಇದಕ್ಕೆ rate ಜಾಸ್ತಿ ಮಾಡಿ ಹಾಲು ಉತ್ಪಾದಕರಗೆ ಲಾಭದಾಯವಾಗಿ ಮಾಡಬೇಕು ಮತ್ತು ಈಗ ಹಾಲಿನ ಕೊರತೆ ಏನು ಆಗುತ್ತಿದೆ ಆ ಕೊರತೆಯನ್ನು ನೀಗಿಸುವ ಕೆಲಸವಾಗಬೇಕು. ಹಾಲಿನ ಉತ್ಪಾದನೆ ಸಾಕಷ್ಟು ರೀತಿಯಲ್ಲಿ ಕಡಿಮೆಯಾಗಿದೆ. ನಾನು ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. PLD Bank ಮುಖೇನ, DCC Bank ಮುಖಾಂತರ ಯಾವುದೇ ವಿಚಾರದಲ್ಲಿ ನೀವು 3% ಬಡ್ಡಿ ದರದಲ್ಲಿ ವ್ಯವಸಾಯಕ್ಕೆ ಸಾಲ ಕೊಡುವುದರ ಜೊತೆಗೆ ಈ ಪಶುಸಂಗೋಪನೆಗೋಸ್ಕರ 3% ಬಡ್ಡಿಯಲ್ಲಿ ಸಾಲ ಕೊಡುವುದಾದರೆ ನಿಜವಾಗಿಯೂ ಕೂಡ ನಾನು ಮೆಚ್ಚುತ್ತೇನೆ. ಪಶುಸಂಗೋಪನೆ agriculture activity ಅಲ್ಲ; ಹಾಗಾಗಿ 14% ಬಡ್ಡಿ ಕೊಡಬೇಕೆಂದು ಬ್ಯಾಂಕ್‌ನವರು ಹೇಳುತ್ತಾರೆ. ಹಸು ಸಾಕುವುದು agriculture activity ಅಲ್ಲ, ಆ ಉಪಕಸುಬನ್ನು agriculture activity ಅಲ್ಲ ಎಂದು ಹಣಕಾಸು ಸಂಸ್ಥೆಯವರು ತೀರ್ಮಾನ ಮಾಡಿದರೆ ಬದುಕುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ದಯಮಡಿ 3% ಬಡ್ಡಿಗೆ ಹಣ ಕೊಡುವಂಥ ಕೆಲಸ ಮಾಡಿದರೆ ಇದೊಂದು ದೊಡ್ಡ ಕ್ರಾಂತಿಯಾಗುತ್ತದೆ ಎಂದು ಹೇಳಬಯಸುತ್ತೇನೆ. ಈ ರೀತಿ ಹಣ ಕೊಟ್ಟರೆ, ಬೇಕಾದರೆ ನೀವು ಕೊಡುವ 2 ರೂ. subsidy ಯನ್ನು ಕೊಡುವುದು ಬೇಡ. ಒಂದು ಕಡೆ ಹಾಲಿನ rate ಜಾಸ್ತಿ ಮಾಡಿ ಇನ್ನೊಂದು ಕಡೆ 3% ಬಡ್ಡಿಗೆ ಹಣ ಕೊಟ್ಟರೆ ನಿಮ್ಮ ಸಂಪತ್ತನ್ನು ಕೂಡ ಜಾಸ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಸಾವಯವ ಗೊಬ್ಬರ ಹೆಚ್ಚು ಬರುವುದಕ್ಕೆ ಸಾಧ್ಯವಾಗುತ್ತದೆ. ನಿಮ್ಮ ಆಸೆ ಆಕಾಂಕ್ಷೆಗಳೇನಿವೆ,

ಅವೆಲ್ಲವುಗಳನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು NAREGA ಎನ್ನುವುದು ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ. ಆ ಯೋಜನೆ, by an Act of Parliament it was passed in the Parliament. ಆ Parliament ನಲ್ಲಿ ಮಾಡಿದ Act ಏನಿದೆ ಅದರಿಂದ ನಾವು ಎಷ್ಟರ ಮಟ್ಟಿಗೆ ಪ್ರಯೋಜನ ಪಡೆದಿದ್ದೇವೆ ಎನ್ನುವುದು ಬಹಳ ಮುಖ್ಯ. ನಾನು ಬಹಳ ಹೆಮ್ಮೆಯಿಂದ ಹೇಳುವುದೇನೆಂದರೆ, ನನ್ನ ಕ್ಷೇತ್ರಕ್ಕೆ ಇವತ್ತಿನ ವರೆಗೆ ಸುಮಾರು 39 ಕೋಟಿ ರೂಪಾಯಿಗಳಷ್ಟು feed ಆಗಿದೆ. I think I Stand No.1 in the State. ಆದರೆ ಯಾರು ಏನು ಬೇಕಾದರೂ ವ್ಯಾಖ್ಯಾನ ಮಾಡಲಿ, ವ್ಯಾಖ್ಯಾನ ಮಾಡುವುದಕ್ಕಿಂತ ಹೆಚ್ಚಾಗಿ ಆ ಯೋಜನೆಯನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ನಾನು ಇಷ್ಟಪಡುತ್ತೇನೆ. ಆ ಉದ್ಯೋಗ ಖಾತರಿ ಯೋಜನೆ ಎನ್ನುವಂಥದ್ದು ಗ್ರಾಮ ಪಂಚಾಯತ್ ಲೆವೆಲ್‌ಗೆ ಕೇಂದ್ರ ಸರ್ಕಾರ ಕೊಟ್ಟಿರುವಂಥದ್ದು. ಯೋಜನೆಗಳನ್ನು ಮಾಡತಕ್ಕಂಥವರು ಅವರು. ಅದಕ್ಕೆ administrative approval ಕೊಡುವವರು ಅವರು. ಅದಕ್ಕೆ technical sanction ಕೊಡುವವರು ಅಲ್ಲಿಯ ಸ್ಥಳೀಯವಾದಂಥ Engineer. ಎಲ್ಲವೂ ಪಂಚಾಯಿತಿ ಮಟ್ಟದಲ್ಲಿದ್ದು ಹಣವೂ ಕೂಡ ಪಂಚಾಯಿತಿಯಲ್ಲಿದ್ದಾಗ ದುರುಪಯೋಗವಾಗುವುದಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಎಲ್ಲೋ ಒಂದು ಕಡೆ ದುರುಪಯೋಗವಾಗುತ್ತದೆ. ದುರುಪಯೋಗ ಮಾಡಬೇಕಾದಾಗ ನಮ್ಮ ಕೆಳಹಂತದಲ್ಲೇನಿದೆ ಎಂದರೆ, ನಿಮ್ಮ administrative setup ಏನಿದೆ, ಅದನ್ನು strengthen ಮಾಡಬೇಕಾಗುತ್ತದೆ. ನಾನು ಆಗಲೇ ಒಂದು ಮಾತನ್ನು ಹೇಳಿದೆ. ಮೊದಲನೇ ವರ್ಷ 236 ಕೋಟಿ ರೂ. ಕಳೆದ ವರ್ಷ 355 ಕೋಟಿ ರೂ. ಈ ವರ್ಷ 2,300 ಕೋಟಿ ರೂ. ಖರ್ಚಾಗುತ್ತಿದೆ. ನಾವು ಹೋದಂಥ ಸಂದರ್ಭದಲ್ಲಿ ಕೇಂದ್ರ ಸಚಿವರನ್ನು ನಾಲ್ಕಾರು ಬಾರಿ ಭೇಟಿ ಮಾಡಿದ್ದೇವೆ. ಅವರೂ ಕೂಡ ಇದಕ್ಕೆ ಸಹಾನುಭೂತಿ ವ್ಯಕ್ತಪಡಿಸಿ, ಇವತ್ತು ಉತ್ತರ ಕರ್ನಾಟಕದಲ್ಲಿ ಆಗಬಾರದ ಅನ್ಯಾಯವಾಗಿದೆ, ಈ ಯೋಜನೆಗಳಿಂದ ಪ್ರಯೋಜನಗಳನ್ನು ಪಡೆದುಕೊಳ್ಳಲಿ ಎನ್ನುವ ಮಾತನ್ನು ಹೇಳಿ, 2,300 ಕೋಟಿ ರೂಪಾಯಿಗಳಷ್ಟು ಖರ್ಚಾಗುವಂಥದ್ದು ಆಗಿದೆ. ನನಗನ್ನಿಸುವ ಪ್ರಕಾರ ಮಾರ್ಚ್ 31 ರೊಳಗಾಗಿ 2,500 ಕೋಟಿ ಖರ್ಚಾಗಬಹುದು.

ನಮಗೆ ಕೇಂದ್ರ ಸರ್ಕಾರ 2,864 ಕೋಟಿ ಕೊಟ್ಟಿದೆ. ನಾವು ಇವತ್ತು 2,500 ಕೋಟಿ ಯವರೆಗೆ ಹೋದೆವು ಅಂದರೆ ಅದೊಂದು ದೊಡ್ಡ step ಆಗುತ್ತದೆ. ಆ ವಿಚಾರದಲ್ಲಿ ನಾವುಹೆಚ್ಚು ಹಣ ತರುವುದಕ್ಕೆ ಮೂಲ ಕಾರಣವೇನೆಂದರೆ, ಇದಕ್ಕೆ ಅಧಿಕಾರಿಗಳು ಕಾರಣಕರ್ತರು. ಏಕೆಂದರೆ, ನಾನು ನಿರಂತರವಾಗಿ ಸಂಪರ್ಕದಲ್ಲಿರುತ್ತೇನೆ. ಇವತ್ತು ನಿಮ್ಮ Director ರವರು ಜಾಫರ್‌ರವರು ಇರಬಹುದು, ರವಿಕುಮಾರ್‌ರವರು ಇರಬಹುದು, ಇವರೆಲ್ಲರೂ ಕೂಡ ಇವತ್ತು ಹೆಚ್ಚು ಕಷ್ಟಪಟ್ಟಿದ್ದಾರೆ. ನಾನು ಏಕೆ ಈ ಮಾತು ಹೇಳುತ್ತೇನೆಂದರೆ, ಇಲ್ಲಿ ದುರುಪಯೋಗವಾಯಿತೆಂದು ಯಾರೋ Centre ಗೆ ವರ್ತಮಾನ ಕೊಟ್ಟರು. ಇದನ್ನು ಪರಿಶೀಲಿಸಲು ಕೇಂದ್ರ ಸರ್ಕಾರದಿಂದ ಒಂದು team ಬಂದು ಗುಲ್ಬರ್ಗಾಕ್ಕೆ ಮತ್ತು ತುಮಕೂರಿಗೆ ಹೋಯಿತು. ಆ team ತುಮಕೂರಿಗೆ ಬಂದಾಗ ನಾನು ಹರಸಾಹಸ ಮಾಡಿ convince ಮಾಡತಕ್ಕಂತ ಕೆಲಸವನ್ನು ಮಾಡಿದೆ. ಅವರು ಎಲ್ಲೋ ನಾಲ್ಕು ಪಂಚಾಯಿತಿ ಗಳಲ್ಲಿ ಬೆಳಗ್ಗೆ ಬಂದು ಮಧ್ಯಾಹ್ನದ ಹೊತ್ತಿಗೆ 'ಎರಡು ಪಂಚಾಯಿತಿಗಳನ್ನು ನೋಡಿ ಸಾರ್ವತ್ರಿಕವಾಗಿ ಎಲ್ಲಾ ಪಂಚಾಯಿತಿಗಳಲ್ಲಿ ಅನ್ಯಾಯವಾಗಿದೆ ಎಂದು ವರದಿ ಕೊಟ್ಟಾಗ ನಾನು ಆ ವರದಿ ವಿರುದ್ಧವಾಗಿ ಮಂತ್ರಿಗಳನ್ನು ಭೇಟಿ ಮಾಡಿದೆ. ಆ ವರದಿ ಕೊಟ್ಟಿರುವುದು ತಪ್ಪು, ಅದನ್ನು ನೀವು ನಂಬಕೂಡದು ಎನ್ನುವ ಮಾತನ್ನು ಹೇಳಿದೆವು. ದಯಮಾಡಿ ತಾವು ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ ಹೋದಂಥ ಸಂದರ್ಭದಲ್ಲಿ, ಅಲ್ಲಿಂದ ಬಂದಂಥ team ನವರು 8–10 ಪಂಚಾಯಿತಿಗಳನ್ನು ನೋಡಿರಬಹುದು. ನಮ್ಮ ಕರ್ನಾಟಕ ರಾಜ್ಯದಲ್ಲಿ 5,640 ಗ್ರಾಮ ಪಂಚಾಯಿತಿಗಳಿವೆ. ಅವುಗಳೆಲ್ಲದರಲ್ಲೂ ಅವ್ಯವಹಾರವಾಗಿದೆ ಎನ್ನುವ ವರದಿಯನ್ನು ಕೊಟ್ಟರೆ ಅದರಲ್ಲಿ ದುರುಪಯೋಗವಾಗಿದೆ ಎಂದು ಬಹುಶಃ ಅವರು ಅನುಮಾನ, apprehension ಅನ್ನು ವ್ಯಕ್ತ ಮಾಡುತ್ತಾರೆ. ದುರುಪಯೋಗ ಎಲ್ಲೋ ಒಂದು ಕಡೆ ಆಗಿರಬಹುದು. ಆದರೆ, ಮಳೆ ಬೆಳೆ ಇಲ್ಲದಂಥ ಸಮಯದಲ್ಲಿ ರೈತರು ಆ ಯೋಜನೆಯನ್ನು ಸಮರ್ಪಕವಾಗಿ ಹೆಚ್ಚಿಗೆ ಮಾಡತಕ್ಕಂಥ ಕೆಲಸವನ್ನು ಮಾಡಿದ್ದಾರೆ.

ಮುಂದಿನ ಸಲ ಈ ಯೋಜನೆಯಲ್ಲಿ 3,000 ಕೋಟಿಗಿಂತ ಜಾಸ್ತಿಗೆ ಹೋಗಬೇಕೆನ್ನುವುದಾದರೆ ಆ ಇಲಾಖೆಯಲ್ಲಿರುವ ಯಾವುದೇ ಅಧಿಕಾರಿ ಗಳನ್ನು ಇನ್ನು 5 ವರ್ಷ ಯಾರನ್ನೂ ಬದಲಾಣೆ ಮಾಡಬಾರದೆಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಬಹಳ ಒತ್ತಾಯಪೂರ್ವಕವಾಗಿ

ಹೇಳಬಯಸುತ್ತೇನೆ. ಈ PDOs ನ್ನು appoint ಮಾಡಿದ್ದೀರಿ. Appoint ಮಾಡಿ PDOs ಗೆ ಹೆಚ್ಚಿನ ಅಧಿಕಾರ ಕೊಟ್ಟು ನೀವು control ಕೊಟ್ಟರೆ ದುರುಪಯೋಗ ಕಡಿಮೆಯಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಪಂಚಾಯಿತಿ ಮಟ್ಟದಲ್ಲಿ infrastucture ಮಾಡದೆ, accountability ಜಾಸ್ತಿ ಮಾಡದೆ, ದುರುಪಯೋಗವಾಗುತ್ತದೆಂದು ನೀವು ಹೇಳಿದರೆ ಹೇಗೆ ಆಗುತ್ತದೆ. ದುರುಪಯೋಗ ಎಲ್ಲೋ ಒಂದು ಕಡೆ ಆಗಬಹುದು. ಅದನ್ನು plug ಮಾಡುವ ಅವಕಾಶವಿದೆ. PDOs ಅನ್ನು appoint ಮಾಡಿದ್ದರೆ ಸರ್ಕಾರಕ್ಕೆ, ನಮಗೆ ಎಷ್ಟು ಹೊರೆಯಾಗುತ್ತಿತ್ತು? ವರ್ಷಕ್ಕೆ ಸುಮಾರು 30 ರಿಂದ 40 ಕೋಟಿ ರೂ.ಗಳಷ್ಟು ಖರ್ಚಾಗುತ್ತಿತ್ತು. ನೀವು ಕಂಡ ಹಾಗೆ ಇವತ್ತು ಕೇಂದ್ರ ಸರ್ಕಾರದಿಂದ ಬರತಕ್ಕಂಥ 300–400 ಕೋಟಿ ರೂಪಾಯಿಗಳನ್ನು ಕಳೆದುಕೊಂಡರಲ್ಲಾ? It is by an Act of Parliament. It is bound to come to us. ಅದನ್ನು ಏಕೆ ಮಾಡಿಕೊಂಡಿರಿ? ಒಂದೊಂದು ಗ್ರಾಮ ಪಂಚಾಯಿತಿಗೆ ಒಬ್ಬೊಬ್ಬ Secretary ಯನ್ನು ನೇಮಕ ಮಾಡುವಂಥ ಕೆಲಸ ಮಾಡಿ. ಒಂದು ಪಂಚಾಯಿತಿಗೆ ಒಬ್ಬ ಗ್ರಾಮ ಪಂಚಾಯಿತಿ Secretary, ಅದರಲ್ಲೂ graduate ಆಗಿರತಕ್ಕಂಥವರನ್ನು recruitment ಮಾಡಿದರೆ ಖಂಡಿತವಾಗಿ ಈ ಯೋಜನೆ ಅತ್ಯಂತ ಪರಿಣಾಮಕಾರಿಯಾಗಿ ಯಶಸ್ವಿಯಾದ ಹಾಗೆ ಆಗುತ್ತದೆ ಮತ್ತು ರೈತರಿಗೆ ನೇರವಾಗಿ ಸಂಬಂಧಿಸಿದಂಥದ್ದು. ನೀವು ಬಾಂದಾರಗಳನ್ನು ನಿರ್ಮಾಣ ಮಾಡಬಹುದು, Pickup ಗಳನ್ನು ಮಾಡಬಹುದು, ನಾನು ಬಹಳ ಸಂತೋಷದಿಂದ ಹೇಳುತ್ತೇನೆ, ನನ್ನ ಕ್ಷೇತ್ರದಲ್ಲಿ 39 ಕೋಟಿ ರೂಪಾಯಿಗಳಷ್ಟು ಖರ್ಚಾಗಿದೆ. ಇವತ್ತು feed ಮಾಡುವುದರಲ್ಲಿ ಏನು Problem ಇದೆಯೆಂದರೆ ನಿಮ್ಮ computers ನ್ನು ಕೇಂದ್ರ ಸರ್ಕಾರಕ್ಕೆ ಹೋಗಿ ವರದಿ ಕೊಟ್ಟ ಮೇಲೆ ಎಲ್ಲವನ್ನೂ lock ಮಾಡಿಬಿಟ್ಟರು. ಆ interest system ಎಲ್ಲ lock ಆಗಿ BSNL ನಿಂದ problem ಜಾಸ್ತಿಯಾಗಿದೆ current ಇಲ್ಲದೆ feed ಮಾಡುವುದಕ್ಕಾಗುತ್ತಿಲ್ಲ. ಇವತ್ತು ನಾನು ನನ್ನ ಕ್ಷೇತ್ರದಲ್ಲಿ feed ಮಾಡದೆ ಇನ್ನೂ 30 ಕೋಟಿ ರೂ. ಇದೆ. 60 ರಿಂದ 70 ಕೋಟಿ ರೂ. ವರೆಗೆ Physical ಆಗಿ ಕೆಲಸ ಮಾಡಿದ್ದೇವೆ. ಆದರೆ, account ಅನ್ನು ಅವರು ಸರಿಯಾಗಿ maintain

O.30 F-73

ಮಾಡಿಲ್ಲವೆಂದರೆ ಅದಕ್ಕೆ ರೈತರು ಜವಾಬ್ದಾರರೆ? ಅದಕ್ಕೆ ಜವಾಬ್ದಾರಿ ಸರ್ಕಾರ ಆಗಬೇಕಾಗುತ್ತದೆ. ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ಆ System ಅನ್ನು improve ಮಾಡುವ ಕೆಲಸವನ್ನು ಮಾಡಬೇಕಾಗುತ್ತದೆ.

ಇದು Railway ವಿಚಾರ ಹೇಳಬಯಸುತ್ತೇನೆ. 50% ಹಣವನ್ನು ಕೊಡುತ್ತೇವೆಂದು ಹೇಳಿ ಕೇಂದ್ರ ಸರ್ಕಾರವನ್ನು ನೀವು ಪತ್ರ ಬರೆದಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಕೂಡ ಇದಕ್ಕೆ ಸ್ಪಂದಿಸಿ ಇವತ್ತು ಬಹುಳಷ್ಟು ಅಂದರೆ ಸುಮಾರು 10, 11 ಯೋಜನೆಗಳನ್ನು ಕೊಟ್ಟಿದೆ. ಅಂದರೆ ಬೇರೆ ಯಾವ ರಾಜ್ಯಗಳಿಗೂ ಸಿಗದಿರುವಷ್ಟು ಯೋಜನೆಗಳನ್ನು ನಮ್ಮ ರಾಜ್ಯಕ್ಕೆ ಮಂಜೂರಾತಿ ಮಾಡಿಕೊಟ್ಟಿದೆ. ಇವೆಲ್ಲವೂ ಕೂಡ DPR ಆಗುವುದಕ್ಕೆ ಪ್ರಾರಂಭವಾಗುತ್ತದೆ. DPR ಆಗಬೇಕಾದಾಗ ರಾಜ್ಯದ ಪಾಲು ಏನಿದೆ, ಅದನ್ನು ಆದಷ್ಟು ಹಂತಹಂತವಾಗಿ ಕೊಡತಕ್ಕಂಥ ಕೆಲಸವನ್ನು ನೀವು ಮಾಡಿದರೆ ಇದಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಇದೊಂದು ಒಳ್ಳೆಯ ನಿರ್ಧಾರವಾಗಿದೆ. ನೀವು ಕೇಂದ್ರಕ್ಕೆ ಕಾಗದ ಬರೆದಿರುವುದರಿಂದ ನೀವು ಘೋಷಣೆ ಮಾಡಿದ್ದರಿಂದ, ನೀವು ಹೋಗಿ ಅವರನ್ನು ಭೇಟಿ ಮಾಡಿದ್ದರಿಂದ, ಆ ಯೋಜನೆಗಳು ಇವತ್ತು include ಆಗಿವೆ. ನೀವು ತಾಳಿ ಕಟ್ಟಿದ್ದೀರಿ, ಆದರೆ ಸಂಸಾರ ಮಾಡಬೇಕಾದರೆ ಆ ಯೋಜನೆಗಳು ಅನುಷ್ಠಾನವಾಗಬೇಕು. ಅನುಷ್ಠಾನವಾಗಬೇಕಾದರೆ ನೀವು ಹಂತ ಹಂತವಾಗಿ ಆದ್ಯತೆ ಮೇಲೆ ಹಣ ಬಿಡುಗಡೆ ಮಾಡುವಂಥ ಕೆಲಸವನ್ನು ಮಾಡಬೇಕು. ಮಾನ್ಯ ರವೀಂದ್ರನಾಥ್‌ರವರೆ, ನಿಮಗೂ ನಮಗೂ ಸಂಬಂಧ ರೈಲಿನಿಂದ ಬರಬಹುದು. ತುಮಕೂರಿನಿಂದ ದಾವಣಗೆರೆವರೆಗೆ ರೈಲು ಜೋಡಣೆ ಕಾರ್ಯವನ್ನು ನಿಗದಿತ ಕಾಲದಲ್ಲಿ ಮುಗಿಯಬೇಕೆನ್ನುವಂಥ ಉದ್ದೇಶವನ್ನಿಟ್ಟುಕೊಂಡಿರಬೇಕು. ಮಾನ್ಯ ಯಡಿಯೂರಪ್ಪನವರೆ, ತಾವು ಯೋಚನೆ ಮಾಡಬೇಕು. ಕೇಂದ್ರ ಸರ್ಕಾರದಿಂದ ಬರತಕ್ಕಂಥ ಯೋಜನೆಗಳಲ್ಲಿ ನೀವು ಆಡಳಿತವನ್ನು ಸ್ವಲ್ಪ tight ಮಾಡಿದರೆ ನೀವು 500–600 ಕೋಟಿ ರೂಪಾಯಿಗಳಷ್ಟಲ್ಲ, 1 ಸಾವಿರ ಕೋಟಿ ರೂಪಾಯಿಗಳನ್ನು railwayಗೆ ಕೊಡುವುದಕ್ಕೆ ಕಷ್ಟವಾಗುವುದಿಲ್ಲ. ಹೆಚ್ಚು ಹಣವನ್ನು ತರುವುದಕ್ಕೆ ನೀವು ಇಲ್ಲಿ ಕೆಲಸವನ್ನು ಮಾಡಿಸಿ. ಉದ್ಯೋಗ ಖಾತರಿ ಯೋಜನೆಗಳಂಥವನ್ನು ಸಮರ್ಪಕವಾಗಿ ಬಳಸಿಕೊಳ್ಳಿ. ರಾಜ್ಯದ ಸಂಪನ್ಮೂಲಗಳನ್ನು ಇಂಥದ್ದೇ ಯೋಜನೆಗಳಿಗೆ ಮೂಲಭೂತ ಸೌಕರ್ಯಗಳನ್ನು Create

ಮಾಡಿದರೆ ಅದು ಬಹುಶಃ ಬಹಳಷ್ಟು ಸಹಾಯವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಇದನ್ನು ಎಲ್ಲೋ ಒಂದು ಕಡೆಗೆ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಮಾಡಬೇಕಾಗುತ್ತದೆ.

ಇನ್ನು ಕೃಷಿಯಲ್ಲಿ wine Policy ಬಗ್ಗೆ ನೀವು ಮಾತನಾಡಿದ್ದೀರಿ. ಕಳೆದ ನಾಲ್ಕು ವರ್ಷಗಳಿಂದ ನಿಮ್ಮ ಭಾಷಣದಲ್ಲಿ ಹೇಳುತ್ತಲೇ ಇದ್ದೀರಿ. Wine policy ಬಗ್ಗೆ 2007ರಲ್ಲಿ ನೀವು ಒಂದು ಆದೇಶವನ್ನು ಮಾಡಿದ್ದಿರಿ. ನೀವು ಭಾಷಣ ಮಾಡುತ್ತೀರಿ, ಸರ್ಕಾರಿ ಆದೇಶಗಳನ್ನು ಹೊರಡಿಸುತ್ತೀರಿ, ಆದರೆ, implement ಆಗುವುದಿಲ್ಲ. wine Policy ಯಲ್ಲಿ ಏನೇನು help ಮಾಡಬೇಕೆಂದಿದ್ದಿರೋ ಅದರಲ್ಲಿ ಒಂದೂ ಕೂಡ ಕಾರ್ಯಾಚರಣೆಯಾಗಿ ಬಂದಿಲ್ಲ. ನೀವು policy ಮಾಡಿ ಎಷ್ಟರ ಮಟ್ಟಿಗೆ ಸರ್ಕಾರಿ ಆದೇಶ ಮಾಡುತ್ತಿರುವುದರ ಜೊತೆಗೆ ಅದು ಅನುಷ್ಠಾನ ಆಗುತ್ತಿದೆಯೋ ಇಲ್ಲವೋ ಎಂದು ನೋಡುವ ಜವಾಬ್ದಾರಿ ಸಂಬಂಧಪಟ್ಟ ಮಂತ್ರಿ ಮೇಲೆ ಇರುತ್ತದೆ. ದಯಮಾಡಿ ಅದರ ಬಗ್ಗೆ ಪುನರ್ ವಿಮರ್ಶೆ ಮಾಡಿ ಎಷ್ಟು ಆಗಿದೆ, ಏನು ಆಗಿಲ್ಲವೆನ್ನುವುದರ ಕಡೆಗೆ ನೀವು ಗಮನಹರಿಸಬೇಕು. 50 ಲಕ್ಷ ರೂಪಾಯಿ ಗಳವರೆಗೂ ಕೂಡ ಮಿತಿಗೊಂಡಂತೆ 25ರಷ್ಟು ಧನಸಹಾಯವನ್ನು ನೀಡುತ್ತೇವೆಂದು ಹೇಳಿದ್ದೀರಿ. ಆದರೆ, ಯಾರಿಗೂ ಕೊಟ್ಟಿಲ್ಲ. ಹೊಸ ಕೈಗಾರಿಕಾ ನೀತಿಯನ್ನು ಪ್ರಸ್ತಾಪ ಮಾಡಿದ್ದೀರಿ. ದ್ರಾಕ್ಷಿ ಸಂಸ್ಕರಣೆಗೆ ಉತ್ತೇಜನ ಕೊಡುತ್ತೇವೆಂದು ಹೇಳಿದ್ದೀರಿ, ಅದೂ ಕೂಡ ಏನೂ ಆಗಿಲ್ಲ. 'ಚಾಲ್ತಿಯಲ್ಲಿರುವ ಹೆಚ್ಚುವರಿ ಅಬಕಾರಿ ಸುಂಕವನ್ನು ರಾಜ್ಯದಲ್ಲಿ ದ್ರಾಕ್ಷಾ ರಸ ಉತ್ಪಾದಿಸುವ ಘಟಕಗಳಿಗೆ ಪ್ರತಿ ಲೀಟರ್‌ಗೆ ರೂಪಾಯಿ 2 ಇಳಿಸಲಾಗಿದೆ'. ಆಗಿದೆ ಎಂದು ಹೇಳಿದ್ದೀರಿ. 'ಆದರೆ, ಇತರೆ ರಾಜ್ಯಗಳಿಂದ ಬರುವ ದ್ರಾಕ್ಷಾ ರಸಕ್ಕೆ ಅದರ 4 ಪಟ್ಟು ಅಬಕಾರಿ ಸುಂಕವನ್ನು ವಿಧಿಸಲಾಗುವುದು' ಎಂದು ಹೇಳಿದ್ದೀರಿ. ಆದರೆ, ಇದು ಇವತ್ತಿವರೆಗೂ ಕೂಡ ಜಾರಿಗೆ ಬಂದಿಲ್ಲ. ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ, ರೈತರಿಗೆ ಪೂರಕವಾಗಿರುವಂಥ ವಿಚಾರ ದಲ್ಲಿ ನೀವು ಇಂಥ ನಿರ್ಧಾರಗಳನ್ನು ತೆಗೆದುಕೊಂಡಾಗ ಅದು ಅನುಷ್ಠಾನ ವಾಗುವುದು ಬಹಳ ಮುಖ್ಯವಾಗಿರುತ್ತದೆ.

ಇನ್ನೊಂದು ಮುಖ್ಯವಾದ ಅಂಶವೆಂದರೆ, ಮಾನ್ಯ ಮುಖ್ಯಮಂತ್ರಿ ಯವರಿಗೆ ನಾನೊಂದು ಕಾಗದ ಬರೆದಿದ್ದೆ. ಗುಜರಾತ್ ಎಂದ ತಕ್ಷಣ it is a model state for Yeddyurappa. ಏಕೆಂದರೆ ಅಲ್ಲಿ ನಿಮ್ಮ ಪಕ್ಷದ ಮುಖ್ಯ

ಮಂತ್ರಿಯವರಿದ್ದಾರೆ. ಅಲ್ಲಿ ಪ್ರಗತಿಪರವಾದ ಚಿಂತನೆಗಳನ್ನು ಮಾಡುತ್ತಿದ್ದಾರೆ, ಅವರು ಮಾಡಿದಂಥ ಯೋಜನೆಗಳನ್ನು ನೀವು ಅನುಷ್ಠಾನ ಮಾಡುತ್ತೀರೆನ್ನುವ ನಂಬಿಕೆ. ಏಕೆಂದರೆ, ನಿರಂತರ ಜ್ಯೋತಿ ಯೋಜನೆ ಬಂತು ಅದು ಗುಜರಾತ್‌ನ ಮಾದರಿಯಾಗಿದೆ. ಯಾವುದೇ ಯೋಜನೆ ಬಂದರೂ ಗುಜರಾತಿನ ಮಾದರಿಯನ್ನೇ ಅನುಸರಿಸುತ್ತೀರಿ. ಆದರೆ, ಎಲ್ಲೋ ಒಂದು ಕಡೆ ಕರ್ನಾಟಕದ ಜನ malnutrition, under0weight, poor nutrition and adulteration ಇವೆಲ್ಲ ಆಗಿ ಜನ ಸಾಯುತ್ತಿರತಕ್ಕಂಥ ವಿಚಾರವನ್ನು ಹೇಳಬಯಸುತ್ತೇನೆ. ನಾವು ಇಲ್ಲಿಯವರೆಗೆ ಗಿಡಗಳಿಗೆ micro nutrient deficiency ಬಗ್ಗೆ ಮಾತನಾಡುತ್ತಿದೆವು. ಆದರೆ, ಇವತ್ತು ಜನಗಳ ಬಗ್ಗೆಯೂ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಇವತ್ತು micro nutrient deficiency ನಿಂದಾಗಿ ಲಕ್ಷಾಂತರ ಮಕ್ಕಳು ಸಾಯುತ್ತಿದ್ದಾರೆ. ಇವತ್ತು ತಾಯಂದಿರು ಸಾಯುತ್ತಿದ್ದಾರೆ. ಇದರಿಂದಾಗಿ ಆ productivity loss ಎನ್ನತಕ್ಕಂಥದ್ದು ಸುಮಾರು ಸಾವಿರಾರು ಕೋಟಿ ರೂಪಾಯಿಗಳಷ್ಟು loss ಆಗುತ್ತಿದೆ. ಅದಕ್ಕೆ ಸಂವಿಧಾನದಲ್ಲೂ ಕೂಡ ಅವರಿಗೆ ನ್ಯಾಯಬದ್ಧ ವಾದಂಥ nutrition ಅನ್ನು, ಆ standard of living ಅನ್ನು ಕೊಡಬೇಕೆಂದಿದ್ದು, ಆ ಸಂವಿಧಾನದ ಆಶಯದ ಪ್ರಕಾರ ಇವತ್ತು ನಾವು ಮಾಡುವುದಕ್ಕೆ ಸಾಧ್ಯವಾಗಿಲ್ಲವೆಂದು ಹೇಳಬಯಸುತ್ತೇನೆ. Fortfication in flour and in oil ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಕಾಗದವನ್ನು ಸಹ ಬರೆದೆ. Vitamin A and D ಕೊರತೆಯಿಂದಾಗಿ ಮಕ್ಕಳು ಇವತ್ತು ಕುರುಡರಾಗುತ್ತಿದ್ದಾರೆ, ಬಡತನದ ಹಿನ್ನೆಲೆಯಲ್ಲಿರುವ ಎಲ್ಲರಿಗೂ ಕೂಡ ಪೌಷ್ಠಿಕ ಆಹಾರ ಸಿಗುವುದಿಲ್ಲ. Vitamin A and D ಅದನ್ನು Supplement ಮಾಡಬೇಕಾದಾಗ ಅದರಿಂದ ಏನಾಗಿದೆ ಎನ್ನುವ ಬಗ್ಗೆ ನಾನು ಹಿಂದೆಯೂ ಸಹ ಕಾಗದ ಕೊಟ್ಟಿದ್ದೆ, ಈಗಲೂ ಸಹ ಕಾಗದ ಕಳುಹಿಸಿ ಕೊಡುತ್ತೇನೆ. ನೀವು ಬಜೆಟ್‌ನಲ್ಲಿ ಮಾತನಾಡುವ ಸಂದರ್ಭದಲ್ಲಿ ಈ fortified wheat and flour ನಾವು ಮಕ್ಕಳಿಗೆ PDS ನಲ್ಲಿ ಕೊಡುತ್ತೇವಲ್ಲ, ಅದಕ್ಕೆ ಕೆ.ಜಿ.ಗೆ ಕೇವಲ 10 ಪೈಸೆ ಸಹ ಖರ್ಚಾಗುವುದಿಲ್ಲ. ಅಲ್ಲಿ fortify ಮಾಡಿತು ಎಂದರೆ Vitamins ಅನ್ನು add ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಇದನ್ನು ಮುಖ್ಯಮಂತ್ರಿಯವರ ಗಮನಕ್ಕೆ ತನ್ನಿ, ಇದನ್ನು ತಂದಾಗ ಖಂಡಿತ ಅವರು ಒಪ್ಪುತ್ತಾರೆನ್ನುವ ಮಾತನ್ನು ಮಾನ್ಯ ಆಹಾರ ಸಚಿವರ ಹತ್ತಿರ ಬಹಳ ಸಲ ಹೇಳಿದ್ದೇನೆ. ನಿಮ್ಮ ಅಧಿಕಾರಿಗಳ ಹತ್ತಿರ ಸಹ ಕುಳಿತು ಈ ಬಗ್ಗೆ ಚರ್ಚೆ ಮಾಡಿದ್ದೇನೆ.

ಡಾ: ಎ.ಬಿ.ಮಾಲಕ ರೆಡ್ಡಿ : Vitamin A and D ಈ ರೀತಿ oil enrich ಮಾಡಿ ಕೊಟ್ಟರೆ ಅದು ದೊಡ್ಡವರಿಗೆ ಬಹಳ dangerous. ಅದು hyper vitamins ಆಗಿ, ಮುಂದೆ bone ಗಳಿಗೆ ತೊಂದರೆ ಆಗುತ್ತವೆ. ಆದರೆ, ಮಕ್ಕಳಿಗೆ ಏನಾಗುವುದಿಲ್ಲ. ಮಕ್ಕಳಿಗೆ cod-liver oil ಇಂಥವು ಏನಿರುತ್ತವೆ ಅವುಗಳನ್ನು special ಆಗಿ ತರಿಸಿಕೊಡಬೇಕು. General ಆಗಿ oil enrich ಮಾಡಿ ಕೊಡುವಂಥದ್ದು ಸರಿಯಲ್ಲ. ಅದರಿಂದ adult polulation ಗೆ ಬಹಳ ತೊಂದರೆಯಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಈಗ adult ಬಗ್ಗೆ ಯೋಚನೆ ಮಾಡುವುದು ಬೇಡ ಬಿಡಿ. ಮಕ್ಕಳ ಬಗ್ಗೆ ಯೋಚನೆ ಮಾಡೋಣ. ಮಕ್ಕಳಿಗೆ PDS ನಲ್ಲಿ ಕೊಡಬೇಕೆನ್ನುವ ಮಾತನ್ನು ಹೇಳುತ್ತೇನೆ. ನಮ್ಮ ಕ್ಷೇತ್ರದಲ್ಲಿ local camp ಮಾಡಿದ್ದರು. ಅಲ್ಲಿಗೆ ಸುಮಾರು ಆರೂವರೆ ಸಾವಿರ ಜನ patients ಬಂದಿದ್ದರು. ಸುಮಾರು 25 ಜನ ಡಾಕ್ಟರುಗಳು ಪರೀಕ್ಷೆ ಮಾಡಿದ್ದರು. ಡಾಕ್ಟರುಗಳನ್ನು ಏನಾಗಿದೆ ಎಂದು ನಾನು ಕೇಳಿದೆ. ಬಂದವರೆಲ್ಲರೂ anaemic ಆಗಿದ್ದರು.

(5-50 PM)

ಏನಾಗಿದೆ ಎಂದು ಕೇಳಿದ್ದಕ್ಕೆ ಒಂದೇ ಹೇಳಿದ್ದು ಏನೆಂದರೆ ಎಲ್ಲರೂ ರಕ್ತ ಹೀನತೆ (ಅನಿಮಿಕ್) ಆಗಿದೆ ಎಂದರು. ಅನಿಮಿಕ್ ಆಗಿದ್ದಾರೆ. ಕುಡಿಯುವ ನೀರು ಸರಿಯಿಲ್ಲದಿರುವುದರಿಂದ ಕೈ ಕಾಲು ನೋವು, ಮಂಡಿ ನೋವು, ಹಲ್ಲು ನೋವು ಈ ತರಹ ನೋವುಗಳು ಇವೆ. ಹೀಗಾಗಿ ಸರಿಯಾದ ಕುಡಿಯುವ ನೀರು ಕೊಡಿ, ಇವರಿಗೆಲ್ಲಾ ಎಲ್ಲೋ ಒಂದು ಕಡೆಗೆ Micro nutrients balance ಮಾಡಿದರೆ ನಿಮಗೆ ಕಾಯಿಲೆ ಬರುವುದಿಲ್ಲ ವೆಂದು ಹೇಳುತ್ತಾರೆ. ನಾನು ಇದನ್ನು ತಮಗೆ ಹೇಳಬೇಕೆಂದರೆ, Government Of India ಇವತ್ತು ಅತ್ಯಂತ ಯಶಸ್ವಿಯಾಗಿ ಗುಜರಾತ್, ತಮಿಳುನಾಡು, ಆಂಧ್ರ ಪ್ರದೇಶದವರು ಇಂಪ್ಲಿಮೆಂಟ್ ಮಾಡಿದ್ದಾರೆ. ನಾನು

ಇಷ್ಟೆ ಹೇಳುವುದು. ನಮ್ಮ ರಾಜ್ಯ ಭಾರತ ದೇಶದಲ್ಲಿ ನಾಲ್ಕನೇ ರಾಜ್ಯವಾಗಲಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಕೇನು ಹೆಚ್ಚಿಗೆ ಹಣ ಖರ್ಚಾಗುವುದಿಲ್ಲ. PDS flour ದಲ್ಲಿ ಹಿಟ್ಟು ಏನು ಇದೆ ಅದಕ್ಕೆ ಒಂದು component add ಮಾಡುವುದರಿಂದ Vitamin A ಬರುತ್ತದೆ. ಆಮೇಲೆ Vitamin D oil ಮುಖೇನ ನೀವು ಮಾಡಬಹುದು. Oil ಗೆ ಮಾಡಬಹುದು ಅಥವಾ flour ಗೆ ಮಾಡಬಹುದು, ಏನು ಮಾಡಬಹುದು ಯಾವ ರೀತಿ ಮಾಡಬೇಕೆನ್ನುವುದು, ನಿಮ್ಮ ಸರ್ಕಾರಕ್ಕೆ ಬಿಟ್ಟಂತ ವಿಚಾರ. ದಯಮಾಡಿ ಅದನ್ನು ನೀವು ಅನುಷ್ಠಾನ ಮಾಡಿದರೆ ನಿಜಕ್ಕೂ ಜನಕ್ಕೆ ಬಹಳ ಸಹಾಯ ಮಾಡಿದ ಹಾಗೆ ಆಗುತ್ತದೆ. ಕೊನೆಯದಾಗಿ ಒಂದು ವಿಚಾರ ಹೇಳುವುದಾದರೆ, ತಾವು ಪದೇ ಪದೇ ಎಲ್ಲಿ ನೋಡಿದರೂ ಕೂಡ ನೈಸ್ ಬಗ್ಗೆ ಹೇಳುತ್ತೀರಿ. ಈ ವಿಚಾರದ ಬಗ್ಗೆ ಸಾಕಷ್ಟು ಮಾತನಾಡಬೇಕು ನನ್ನ ಹತ್ತಿರ ಬೇಕಾದಷ್ಟು ಮಾಹಿತಿ ಇದೆ. ನೈಸ್ ಬಗ್ಗೆ ಇಲ್ಲಿ ಚರ್ಚೆ ಮಾಡುತ್ತೇವೆ, ಅವಕಾಶ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದರು. ದಯಮಾಡಿ ನೈಸ್ ಬಗ್ಗೆ ಎರಡು ತರಹ ವ್ಯಾಖ್ಯಾನಗಳಿವೆ. ಒಂದು ಕಡೆ ಕೈಗಾರಿಕೋದ್ಯಮಿಗಳು ಆ ನೈಸ್ ಇರಬೇಕು ಎಂದು ಹೇಳುತ್ತಾರೆ. ಆದರೆ ಎಲ್ಲೋ ಒಂದು ಕಡೆಗೆ ಬೇಡ ಎನ್ನುವ ವಾದವೂ ಇದೆ. ಅದಕ್ಕೆ ಸುಪ್ರೀಂ ಕೋರ್ಟಿಗೆ ನೀವು ನಿರ್ಣಯ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಬಹುಶಃ ಎಲ್ಲರನ್ನು ಕನ್‌ಸಲ್ಟ್ ಮಾಡಿ ಇದರ ಸಾಧಕ–ಬಾಧಕಗಳ ಬಗ್ಗೆ ಚರ್ಚೆ ಮಾಡುವುದು ಬಹಳ ಸೂಕ್ತವಿದೆ. ನೀವು ಈ ಅಲ್ಲದಿದ್ದರೂ, ಯಾವಾಗಲಾದರೂ ಒಂದು ಸಂದರ್ಭದಲ್ಲಿ ಆ ನೈಸ್ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಅದಕ್ಕೆ ನಾನು ಈಗ ಎಲ್ಲವನ್ನು ಹೇಳುವುದಕ್ಕೆ ಆಗುವುದಿಲ್ಲ. ನನದೇ ಆದಂಥ ಸ್ವತಂತ್ರವಾದ ಅಭಿಪ್ರಾಯಗಳು ಇದೆ. ಒಂದು ಕಡೆ ರಾಜ್ಯದ ಹಿತ ಆಗಬೇಕು. ಅದರ ಜೊತೆಗೆ ಅದೊಂದು ಹಗರಣಕ್ಕೆ ಕಾರಣವಾಗ ಬಾರದು. ಹಿಂದೆ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್‌ನ್ನೇ ನಾವು ದೊಡ್ಡದಾಗಿ ಹೇಳತಕ್ಕಂಥದ್ದು ಅಲ್ಲ. ನಿಜವಾಗಲೂ ಕೂಡ ಸುಪ್ರೀಂ ಕೋರ್ಟಿನವರು ಹೇಳಿರುವ ಪ್ರಕಾರ 20 ಸಾವಿರ ಎಕರೆ ಜಮೀನು ಬೇಕೆಂದು ಹೇಳುತ್ತಾರಲ್ಲ, ಬಹುಶಃ ನೀವು ಅಲೈನ್‌ಮೆಂಟ್ ಫಿಕ್ಸ್ ಮಾಡಿದರೆ ಎಷ್ಟು ಎಕರೆ ಬೇಕು ಎನ್ನುವುದನ್ನು ಯೋಚಿಸಬಹುದು ನೀವು ಎಷ್ಟು ಎಕರೆ ಬೇಕೆಂದು ಯೋಚಿಸಿದರೆ, ನನಗೆ ಅನಿಸುತ್ತದೆ; 17 ರಿಂದ 18 ಸಾವಿರ ಎಕರೆಯ ಮೇಲೆ

ಬೇಕಾಗಿಲ್ಲ. ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್‌ಗೆ ಅಂಟಿಕೊಳ್ಳುವ ಪ್ರಶ್ನೆಯಲ್ಲ. ನೀವು ಪದೇ ಪದೇ ನಾವು ಒಂದು ಇಂಚು ಜಾಗ ಕೊಡುವುದಿಲ್ಲ, ಒಂದು ಎಕರೆ ಜಾಗ ಜಾಸ್ತಿ ಕೊಡುವುದಿಲ್ಲವೆಂದು ಹೇಳುತ್ತಿರುತ್ತೀರಿ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ 20,193 ಎಕರೆ ನೀವು ಕೊಡಬೇಕು. ಅದರಲ್ಲಿ ಸರ್ಕಾರಿ ಜಮೀನು 6,956 ಎಕರೆ, ಖಾಸಗಿ ಜಮೀನು 13,237 ಎಕರೆ ನೀವು ಕೊಡಬೇಕು. ಆದರೆ ಇಲ್ಲಿಯವರೆಗೆ 5,000 ಎಕರೆ ಸರ್ಕಾರಿ ಜಮೀನು, Private land 2,140 ಎಕರೆ ನೀವು ವಶಪಡಿಸಿಕೊಂಡಿದ್ದೀರಿ. ಈಗ ಇಲ್ಲಿ ಮಾನ್ಯ ನಿರಾಣಿಯವರು ಇಲ್ಲ. KIADB ನವರು acquire ಮಾಡುವುದಕ್ಕೆ ಹೊರಟಿರುವುದು ಎಷ್ಟು ಎಕರೆ ಎಂದರೆ; 29,358 ಎಕರೆ. ಇದು ಯಾವ ಲೆಕ್ಕಸ್ವಾಮಿ? ಕೊಡಬೇಕಾಗಿರುವುದು 20,000 ಎಕರೆ. 29,358 ಎಕರೆಗೆ notification issue ಮಾಡಿದ್ದಾರೆ. ಅಲ್ಲಿ acquisition ಹೆಸರಿನಲ್ಲಿ ಆ ಭೂಮಿ ಬೇರೆಯವರಿಗೆ ಹಸ್ತಾಂತರ ಆಗತಕ್ಕಂಥದ್ದಕ್ಕೆ ಅವಕಾಶವಿದೆ. In the guise of this notifivation, they are threatening the farmers. ನಾನು ಅವರು ಇವರು ಎಂದು ಹೇಳುವುದಿಲ್ಲ. ಎಲ್ಲರೂ ಕೂಡ ಹೆದರಿಸುವ ಕೆಲಸ ಮಾಡಿದ್ದಾರೆ. 20,000 ಸಾವಿರ ಎಕರೆ ಬೇಕಾಗಿದ್ದರೆ ನೀವು ಅಧಿಸೂಚನೆ ಹೊರಡಿಸುವುದು ಎಷ್ಟು ಎಂದರೆ 25,343. ಇದು ಯಾವ ನ್ಯಾಯ? 5 town-ship ಗಳು ಎಲ್ಲೆಲ್ಲಿ ಮಾಡಬೇಕೆಂದು ಆಗಿದೆ. ನಿಮಗೆ ರೋಡ್‌ಗಾಗಿ ಬೇಕಾಗಿರುವ ಜಮೀನುಗಳಲ್ಲಿಯೂ 500 ಎಕರೆಗಿಂತಲೂ ಜಾಸ್ತಿಯೇ ಕೊಡುತ್ತಿದ್ದೀರಿ. ಅದನ್ನು ಏಕೆ ಕೊಡುತ್ತೀರಿ? ದಯಮಾಡಿ ನೀವು ಅದರ ಕಡೆಗೆ ಗಮನಹರಿಸಬೇಕು. ಏಕೆಂದರೆ, ತಾವು ವಿರೋಧ ಪಕ್ಷದ ನಾಯಕರಾಗಿದ್ದಾಗ ಏನು ಮಾತನಾಡಿದ್ದೀರಿ ಎಂಬುದು ನಿಮಗೆ ಗೊತ್ತಿರಬೇಕು. ನೀವು ಇಲ್ಲಿ ನಿಂತು ಭಾಷಣ ಮಾಡಿರುವುದು ಏನೆಂದರೆ, 'ಇದೊಂದು ಬೃಹತ್ ಗೋಲ್‌ಮಾಲ್ ವ್ಯವಹಾರ, ಭೂಮಿ ಕೊಳ್ಳೆ ಹೊಡೆಯುವ ವ್ಯಾಪಾರ, ಈ ದಂಧೆ ಇತಿಹಾಸದಲ್ಲಿ ಬಹುದೊಡ್ಡ ಭ್ರಷ್ಟಾಚಾರದ ವ್ಯವಹಾರವಾಗಿದ್ದು 30 ವರ್ಷಗಳ ನಂತರ ಮುಂದಿನ ನಮ್ಮ ಜನಾಂಗ ಮತ್ತು ಜನಪ್ರತಿನಿಧಿಗಳ ಶಾಪದಿಂದ ತಪ್ಪಿಸಿಕೊಳ್ಳಲು ನಾನು ಇಂದು ಈ ವಿಷಯ ಪ್ರಸ್ತಾಪಿಸುತ್ತಿದ್ದೇನೆ' ಎಂದು ಹೇಳಿದ್ದೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನೀವು ಕುಳಿತಿರುವ ಸ್ಥಳದಲ್ಲಿ ಕುಳಿತು, ಈ ಯೋಜನೆಯ

ಅಗತ್ಯವಿಲ್ಲ ಮೈಸೂರು-ಬೆಂಗಳೂರು ರೈಲ್ವೆ ವ್ಯವಸ್ಥೆ ಮತ್ತು ಡಬ್ಬಲ್ ಲೈನ್ ಮಾಡೋಣ ಈಗಿರುವ ರೋಡ್‌ನ್ನು ಇಂಪ್ರೂವ್ ಮಾಡೋಣ ಇದು ಮಾಡಕೂಡದು ಎಂದು ಧರಣಿ ಸತ್ಯಾಗ್ರಹ ಚಳುವಳಿ ಮಾಡಿದೆ ಅದು ನಿಮಗೆ ಗೊತ್ತಿದೆ. 30 ವರ್ಷಗಳ ನಂತರ ಏನಾಗಬಹುದು ಎಂದು ನಾನು ಆವತ್ತು ಹೇಳಿದ್ದೆ. ಆದರೆ, ನಾನು ನಿಮ್ಮನ್ನು ಕೇಳುತ್ತೇನೆ. ಜಯಚಂದ್ರರವರೆ, ಇಷ್ಟು ಮುಂದೆ ಹೋಗಿ 5 ಟೌನ್‌ಶಿಪ್‌ಗಳಿಗೆ ಜಮೀನು ಕೊಡುತ್ತೇವೆಂದು ಹೇಳಿ frame-work agreement ಮಾಡಿಕೊಂಡು ಎಲ್ಲಾ ಕೈ ಕಟ್ಟಿಸಿಕೊಂಡ ಮೇಲೆ ಸುಪ್ರೀಂ ಕೋರ್ಟಿನಿಂದ ನಮಗೆ ಛೀಮಾರಿ ಹಾಕುವ ಸ್ಥಿತಿ ಬಂದಿರುವ ಸಮಯದಲ್ಲಿ ನಾನು ನಿಮಗೆ ಹೇಳುವುದಕ್ಕೆ ಇಷ್ಟ ಪಡುವುದು, ಅದಕ್ಕೇ ನಾನು ಪ್ರಾರಂಭದಲ್ಲಿ ಮಾನ್ಯ ಅಧ್ಯಕ್ಷರಿಗೆ ವಿನಂತಿ ಮಾಡಿದೆ, ಇದರ ಬಗ್ಗೆ ಡಿಬೇಟ್ ಮಾಡೋಣ. ಒಂದು ನಿಷ್ಕರ್ಷಕ್ಕೆ ಬರೋಣ. ಆನರನ್ನು ಗೊಂದಲದಿಂದ ಹೊರಗೆ ಹಾಕೋಣ ಎಂದು ಹೇಳಿದೆ. ನಾನು ನಿಮಗೆ ಹೇಳುತ್ತಿದ್ದೇನೆ, ಯಾವ ಜಮೀನನ್ನು ಅನಗತ್ಯವಾಗಿ 25,353 ಎಕರೆ ಅಧಿಸೂಚನೆ ಹೊರಡಿಸಿದ್ದಾರೆಂದು ನೀವು ಹೇಳಿದ್ದೀರಾ, 21,000 ಸಾವಿರ ಚಿಲ್ಲರೆ ಎಕ್ಕರೆ ಜಮೀನು ಕೊಡಬೇಕೆಂದು ಹಿಂದೆ ಏನು ಒಪ್ಪಿಗೆ ಆಗಿದೆ, ಅದಕ್ಕಿಂತ ಒಂದು ಎಕರೆ ಜಮೀನು ನಾನು ಕೊಟ್ಟರೆ ಆ ನಿಮಿಷಕ್ಕೆ ಈ ಕುರ್ಚಿಯಲ್ಲಿ ಕುಳಿತು ಕೊಳ್ಳುವುದಿಲ್ಲ ಎನ್ನುವ ಭರವಸೆ ಈ ಮನೆಗೆ ನಾನು ಈ ಸಂದರ್ಭದಲ್ಲಿ ಕೊಡುತ್ತೇನೆ. ಎರಡನೆಯದಾಗಿ, ಈಗಾಗಲೇ ವರ್ಕ್ಸ್ ಪ್ರಾರಂಭವಾಗಿ ಅರ್ಧಂಬರ್ಧವಾಗಿದೆ. ಅವನಿಗೇನು ಆಗಬೇಕು? ಅವನ ಜಾಗದಲ್ಲಿ ಕುಳಿತುಕೊಂಡು ಯೋಚಿಸಿ. ಜಮೀನು ಕೊಟ್ಟಿದ್ದಾರೆ ಕೈ ಕೊಟ್ಟು ಸಿಕ್ಕಿಕೊಂಡಿದ್ದಾರೆ, ಸುಪ್ರೀಂಕೋರ್ಟ್ ಅವರ ಪರವಾಗಿದೆ. ಈ ಟೈಮ್‌ನಲ್ಲಿ ಮೈಸೂರು – ಬೆಂಗಳೂರು ಕಾರಿಡಾರ್ ರೋಡ್ ಇಲ್ಲ. ಅವನು ಜಮೀನು ಕೊಡುವುದು ನಿಶ್ಚಿತ. ಆ ಭೂಮಿಯ ಬೆಲೆ ದಿನೇ ದಿನೇ ಜಾಸ್ತಿಯಾಗುತ್ತಾ ಹೋಗುತ್ತಿದೆ. ಕೊಟ್ಟ ರೈತ ಬೀದಿ ಪಾಲಾಗುತ್ತಾನೆ. ಅದಕ್ಕೋಸ್ಕರ ಈಗ ನಾವೇನು ನಿಶ್ಚಯ ಮಾಡಿದ್ದೇವೆ ಎಂದರೆ ಒಂದು ಎಕರೆ ಜಮೀನು ಜಾಸ್ತಿ ಕೊಡದೇ ಮೈಸೂರು ಬೆಂಗಳೂರು ಕಾರಿಡಾರ್ ರೋಡ್ ಆಗುವ ಹಾಗೆ ಮಾಡಿಕೊಂಡು, ಯಾವ ಜಮೀನು ನೋಟಿಫೈ ಮಾಡಿದ್ದೇವೆ ಆ ಜಮೀನು ರೈತರಿಗೆ ವಾಪಸ್ ಕೊಡೋಣ. ಆ ಜಮೀನಿನಲ್ಲಿ ಒಂದು ಗುಂಟೆ ಬೇಡ. ಪಾಪ ರೈತ ನೆಮ್ಮದಿಯಿಂದ ಎರಡು ಹೊತ್ತು ಊಟ ಮಾಡಲಿ, ನಾನು ರೆಡಿ ಇದ್ದೇನೆ. ಎಷ್ಟು ಬೇಗ ಸಾಧ್ಯನೋ ಅಷ್ಟು ಬೇಗ ಆ ರೋಡ್ ಆಗುವುದಕ್ಕೆ

ಅವಕಾಶ ಮಾಡಿಕೊಟ್ಟು ಹೆಚ್ಚುವರಿ ಭೂಮಿ ವಾಪಸ್ ತೆಗೆದುಕೊಂಡರೆ ರೈತ ಉಳಿಯುತ್ತಾನೆ. ಜಯಚಂದ್ರರವರೆ, ಇಲ್ಲದೇ ಹೋದರೆ ಜಗತ್ತಿನ ಮುಂದೆ ನಾವು ನಗೆಪಾಟಲಿಗೆ ಗುರಿಯಾಗುತ್ತೇವೆ. ಒಂದೊಂದು ಸರ್ಕಾರ ಬಂದಾಗ ಒಪ್ಪಂದ ಮಾಡಿಕೊಳ್ಳುತ್ತಾರೆ, ಇವರು ಏನು ಬೇಕಾದರೂ ಮಾಡುವುದಕ್ಕೆ ಸಿದ್ಧರಿದ್ದಾರೆ ಎನ್ನುವ ಮಾತನ್ನು ಕೇಳುವುದಕ್ಕೆ ನೀವು ರೆಡಿ ಇದ್ದೀರಾ? ಸಮ್ಮಿಶ್ರ ಸರಕಾರದಲ್ಲಿ ನಾವು ಇದ್ದಾಗ ನಾವು ಕುಮಾರಸ್ವಾಮಿಯವರು ಒಟ್ಟಿಗೆ ಇದ್ದಾಗ ಆ ಟೈಂನಲ್ಲಿ ಸಹ ಇದೊಂದು policy decision. ನಾವು ಎಲಾ ಕೈ ಕೊಟ್ಟು ಸಿಕ್ಕಿಕೊಂಡು ಒಪ್ಪಿಕೊಂಡ ಮೇಲೆ ಹಿಂದೆ ಸರಿಯುವುದು ಬೇಡ, ಹಾಗಾದರೆ ನಿಮ್ಮ ಸರ್ಕಾರವೇ ಬೇಡ ಎಂದು ನಾವು ಹೊರಗಡೆ ಬರುತ್ತೇವೆಂದು ಕುಳಿತಿದ್ದು ನಿಮಗೆ ಗೊತ್ತಿದೆ. ಇವತ್ತೊಂದು ಮಾತು ಅವತ್ತೊಂದು ಮಾತು ಯಡಿಯೂರಪ್ಪ ಎಂದೂ ಮಾತನಾಡಿಲ್ಲ. ಇವತ್ತು ಈ ತೀರ್ಮಾನ ತೆಗೆದುಕೊಳ್ಳಿ. ಕಾಂಗ್ರೆಸ್‌ನವರಾದರೂ ಕುಳಿತುಕೊಳ್ಳಿ, ನಾನು ಬೇಕಾದರೆ ಬರುತ್ತೇನೆ, ಒಟ್ಟಿಗೆ ಸೇರೋಣ. ಇದನ್ನು ಮಾಡಬೇಕೆಂದು ಒಂದು ಸಾರಿ ತೀರ್ಮಾನವಾದರೆ, ಈಗೇನು ಹೆಚ್ಚುವರಿ ಭೂಮಿ ತೆಗೆದುಕೊಂಡಿದ್ದೇವೆ ಅಷ್ಟು ಭೂಮಿಯನ್ನು ರೈತರಿಗೆ ವಾಪಸ್ ಕೊಟ್ಟು ಆ ರೋಡ್ ಅನ್ನು ಆಡಿ ಒಂದು ಪುಣ್ಯದ ಕೆಲಸ ಮಾಡಿದ್ದೇವೆಂದು ಅದೊಂದು ಕೊನೆ ಮಾಡಿ. ಎಲ್ಲಾ ಕಡೆ ಸಾಮಾನ್ಯ ಜನತೆಯ ಎದುರಿಗೆ ನಗೆಪಾಟಲಿಗೆ ಈಡಾಗಿದ್ದೇವೆ. ಅದನ್ನು ಕೊನೆ ಮಾಡುವುದಕ್ಕೆ ನೀವಾದರೂ ಮುಂದೆ ನಿಂತುಕೊಳ್ಳಿ ನಾನು ರೆಡಿ ಇದ್ದೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಲಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರು ಎಲ್ಲಾ ವಿಚಾರ ಹೇಳಿದರು. ಇವತ್ತು ವಸತಿಗಾಗಿ ರೈತರ ಜಮೀನು ತೆಗೆದುಕೊಳ್ಳಬೇಕಾಗುತ್ತದೆ. ಬೇರೆ ರಾಜ್ಯಗಳಲ್ಲಿ, ಗುಜರಾತ್ ಆಗಬಹುದು, ಮಹಾರಾಷ್ಟ್ರವಾಗಬಹುದು, ತಮಿಳುನಾಡು ಆಗಬಹುದು, ಕೈಗಾರಿಕೆಗಳಿಗೆ, ಇಂಡ್‌ಸ್ಟ್ರೀಸ್‌ಗಳಿಗೆ ನಿಮಗೆ ಜಮೀನು ಕೊಡುತ್ತೇವೆ ಬನ್ನಿ ಎಂದು ಹೇಳುವಂಥ ಸನ್ನಿವೇಶವಿದೆ. ನಾವು ಬಂಡವಾಳ ಹೂಡಿಕೆದಾರರನ್ನು ಕರೆದುಕೊಂಡು ಬಂದು ಬಳಡವಾಳ ಹೂಡಿಕೆ ಮಾಡಿ ಜಮೀನು ತೆಗೆದುಕೊಳ್ಳುವುದು ಅವಶ್ಯಕತೆಯಿದೆ. ಇದರಲ್ಲಿ ಮಾನ್ಯ ನಿರಾಣಿ ಯವರು ಜಮೀನು ತೆಗೆದುಕೊಂಡರು ಎಂದು ಹೇಳಿದರು. ಅನಿವಾರ್ಯವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಅನೇಕ ಅಣೆಕಟ್ಟುಗಳನ್ನು ಹಿಂದೆ ಕಟ್ಟಿದ್ದೇವೆ,

O.30 F-74

ಗ್ರಾಮಗಳೆಲ್ಲ ಮುಳುಗಡೆ ಆಯಿತು, ಅವತ್ತು ಎಷ್ಟು 30 ಸಾವಿರ, 40 ಸಾವಿರ, 20 ಸಾವಿರ, 15 ಸಾವಿರ ಎಕರೆಗಳಷ್ಟು ಅಕ್ವೈರ್, ಮಾಡಿದೆವು. ಅವತ್ತು ಮಾಡದಿದ್ದರೆ ಇಷ್ಟು ಎಕರೆ ಪ್ರದೇಶಗಳಿಗೆ ಇವತ್ತು ನೀರಾವರಿಯಾಗುತ್ತಿರಲಿಲ್ಲ. ಅದೇ ರೀತಿ ಕೈಗಾರಿಕೆಗಳು ಕೂಡ, ಈಗ ತಮ್ಮ ಜಿಲ್ಲೆ ಇರಬಹುದು, ಬೇರೆ ಜಿಲ್ಲೆ ಇರಬಹುದು, ಕೈಗಾರಿಗಳಿಗೆ ಜಮೀನು ತೆಗೆದುಕೊಳ್ಳಲೇಬಾರದು ಎಂದು ಒಂದೇ ಹಠ ಮಾಡಿ ಕುಳಿತರೆ, ಪ್ರತಿ ವರ್ಷ ಸುಮಾರು ಹತ್ತು ಲಕ್ಷ ವಿದ್ಯಾವಂತ ಮಕ್ಕಳು ತಮ್ಮ ವಿಧ್ಯಾಭ್ಯಾಸ ಮುಗಿಸಿಕೊಂಡು ಹೊರಗೆ ಬರುತ್ತಾರಲ್ಲ ಅವರ ಬಗ್ಗೆ ಯೋಚನೆ ಮಾಡಿ, ನಮಗೆ ಅದರಲ್ಲಿ ಅವ್ಯವಾರ ನಡೆಯಬೇಕೆನ್ನುವ ಆಕಾಂಕ್ಷೆಯಿಲ್ಲ. ಆದರೆ, ಜಮೀನುಗಳನ್ನು ಅನಿವಾರ್ಯವಾಗಿ ರೈತರನ್ನು ಸಮಾಧಾನಪಡಿಸಿ ಅವರಿಂದ ತೆಗೆದುಕೊಳ್ಳುವುದು ಅಗತ್ಯವಿದೆ ಎನ್ನುವ ವಿನಂತಿಯನ್ನು ತಮ್ಮಲ್ಲಿ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದೇ ಒಂದು ವಿಚಾರ ಹೇಳುವುದಾದರೆ, ನಾವು 20 ಸಾವಿರ ಎಕರೆಯಲ್ಲಿ express highway ಗೆ 111 ಕಿ.ಮೀ.ಗೆ 4,528 ಎಕರೆ ಕೊಡಬೇಕು. Peripheral roads ಗೆ 40 ಕಿ.ಮೀ.ಗೆ 2,193 ಎಕರೆ ಕೊಡಬೇಕು. Link road ಗೆ 278 ಎಕರೆ ಕೊಡಬೇಕು. ಒಟ್ಟಾರೆಯಾಗಿ 6,999 ಎಕರೆ. ಇದು ರಸ್ತೆಗೆ ಕೊಡಬೇಕಾಗಿರುವುದು. ನೀವು infrastructure with town-ship ಮಾಡುವದಕ್ಕೆ 7,300 ಎಕರೆ ಕೊಡಬೇಕು. Town-ship development ಗೆ 5,894 ಎಕರೆ, this has been agreed. 20,193 ಎಕರೆಗೆ ಎಷ್ಟೆಷ್ಟು town-ship ಕೊಡಬೇಕು ಎಂದು ಇದೆ. ನಿಮ್ಮಲ್ಲಿ ಏನಾಗಿದೆ ಎಂದರೆ, 6,900 ಎಕರೆಗಿಂತ ಜಾಸ್ತಿ ಅಂದರೆ 500 ಎಕರೆ ಜಮೀನನ್ನು ಜಾಸ್ತಿ ಕೊಟ್ಟಿದ್ದಾರೆಂದು ನಿಮ್ಮ ಮೇಲೆ ಆರೋಪ ಇದೆ. Town-Ship development ಗೆ ಆದ್ಯತೆ ಕೊಟ್ಟು ಅಲ್ಲಿಗೆ ಲ್ಯಾಂಡ್ ಕೊಡಿ. Express High way and peripheral Road, Link Road ಗೆ ಇಷ್ಟಿಷ್ಟೇ ಕೊಡಬೇಕೆಂದು ರಿಸ್ಟ್ರಿಕ್ಷನ್ ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಪದೇಪದೇ ಹೇಳುವುದೇನೆಂದರೆ, alignment ಪ್ರಕಾರ ಆ ರಸ್ತೆ ಮಾಡುವುದಕ್ಕೆ ಎಷ್ಟು ಅಗತ್ಯತೆ ಇದೆಯೋ ಅಷ್ಟನ್ನು ಬಿಟ್ಟು ಒಂದು ಅಡಿ ಹೆಚ್ಚಿಗೆ ಭೂಮಿಯನ್ನು ಕೊಡುವುದು ಬೇಡ. ನೀವು ಯಾವ ಸಮಯದಲ್ಲಿ ಕೇಳಿದರೂ ಕೂಡ ಇದರ

ಬಗ್ಗೆ ಚರ್ಚೆ ಮಾಡಲು ನಾನು ಸಭೆ ಕರೆಯುತ್ತೇನೆ. Alignment ಬಿಟ್ಟು ಬೇರೆ ಕಡೆ ಹೋಗುವುದಿಲ್ಲ. ಮತ್ತೆ Town-ship ಗೂ ಸಹ ಹೊಸದಾಗಿ ಒಂದು ಎಕರೆ ಜಮೀನು ಕೊಡುವ ಪ್ರಶ್ನೆ ಇಲ್ಲ. ಹೆಚ್ಚುವರಿಯಾಗಿ ನೋಟಿಫೈ ಮಾಡಿರುವ ಭೂಮಿಯನ್ನು ತತಕ್ಷಣ ವಾಪಸ್ಸು ಕೊಡೋಣ. ನಮ್ಮ ಪರಿಸ್ಥಿತಿ ಎಷ್ಟು ವಿಚಿತ್ರವಾಗಿದೆ ಎಂದರೆ, ಬೆಂಗಳೂರಿನಿಂದ ಮೈಸೂರಿಗೆ ರಸ್ತೆ ಆಗಬೇಕೆಂದು ಆಯಿತು. ಆದರೆ, ಎಲ್ಲಿಂದ ಹೋಗಬೇಕೆಂಬುದರ ಬಗ್ಗೆ ಒಂದು ಅಲೈನ್‌ಮೆಂಟ್ ಇಲ್ಲದೆ ಕಣ್ಣುಮುಚ್ಚಿಕೊಂಡು ಜಮೀನು ಕೊಡುತ್ತಾ ಹೋದರು. ಈ ರೀತಿಯಾಗಿ ಸುಮಾರು 25 ಸಾವಿರ ಎಕರೆ ಜಮೀನು ನೋಟಿಫೈ ಆಗಿದೆ. ಈಗ ಅಲೈನ್‌ಮೆಂಟ್ ಆದ ತಕ್ಷಣ within 24 hours ಈ ಜಮೀನು ಬಿಟ್ಟು ಇನ್ನೊಂದು ಗುಂಟೆ ಕೂಡ ಬೇಡವೆಂದು ಅವರ ಜಮೀನನ್ನು ವಾಪಸ್ಸು ಕೊಟ್ಟು ಆ ಪುಣ್ಯದ ಕೆಲಸವನ್ನು ನಾವು ಕಟ್ಟಿಕೊಳ್ಳೋಣವೆಂದು ಮಾನ್ಯ ಜಯಚಂದ್ರರವರಿಗೆ ಹೇಳುವುದಕ್ಕೆ ಬಯಸುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ನಾನೊಂದು ಸಭೆಯನ್ನು ಕರೆಯುತ್ತೇನೆ. ತಾವುಗಳೆಲ್ಲರೂ ಆ ಸಭೆಗೆ ಬನ್ನಿ. ಬೇಕಾದರೆ ಇಲ್ಲಿಯಾದರೂ ಚರ್ಚೆ ಮಡಿ ಒಂದು ತೀರ್ಮಾನ ತೆಗೆದುಕೊಳ್ಳೋಣ. ಇಲ್ಲಿ ಪಕ್ಷ ಪಂಗಡ ಬಿಟ್ಟು ಕಾಂಗ್ರೆಸ್, ಜೆಡಿ(ಎಸ್), ಬಿಜೆಪಿ ಪಕ್ಷದವರು ಒಟ್ಟಿಗೆ ಕುಳಿತು ಕೊಳ್ಳೋಣ. ಎಲ್ಲಾ ಪ್ರತಿಪಕ್ಷದ ನಾಯಕರು ಬಂದು ಕುಳಿತು ಚರ್ಚೆ ಮಾಡಿ ಅಲೈನ್‌ಮೆಂಟ್ ಪ್ರಕಾರ ರಸ್ತೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು ಹೆಚ್ಚುವರಿಯಾಗಿ ಒಂದು ಎಕರೆ ಜಮೀನು ಕೊಡುವುದು ಬೇಡ ನಮ್ಮ ಒಪ್ಪಂದ ಪ್ರಕಾರ ಏನಾಗಬೇಕಾಗಿದೆಯೋ ಅಂದರೆ town-ship ಮಾಡಿಸಿ ಸ್ವಲ್ಪವಾದರೂ ಅಭಿವೃದ್ಧಿ ಕೆಲಸವನ್ನು ಮಾಡೋಣ. ಏಕೆ ಕೈ ಕಟ್ಟಿಕೊಂಡು ಕುಳಿತುಕೊಂಡು ಪರಸ್ಪರ ಕೋರ್ಟ್, ಕಛೇರಿಗೆ ಅಲೆದುಕೊಂಡು ರಸ್ತೆಯನ್ನು ಏಕೆ ಹರಾಜು ಹಾಕಬೇಕು? ನಮ್ಮನ್ನು ನೋಡಿದರೆ ಜನ ನಗುವುದಿಲ್ಲವೆ? ಈ ರೀತಿಯಾಗಿ ನಡೆದುಕೊಂಡರೆ ಮುಂದಿನ ದಿನಗಳಲ್ಲಿ ಯಾವ ಕೈಗಾರಿಕೋದ್ಯಮಿ ನಮ್ಮನ್ನು ನಂಬುತ್ತಾರೆ ಹೇಳಿ?

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯನ್ನು ಸ್ವಾಗತ ಮಾಡುತ್ತೇನೆ. ನಾವುಗಳು ಸ್ವತಂತ್ರವಾದಂಥ ಮತ್ತು ನಮ್ಮದೇ ಆದಂಥ ಸಲಹೆಗಳನ್ನು ಕೊಡುವುದಕ್ಕೆ ತಯಾರಿದ್ದೇವೆ. ಮಾನ್ಯ ಕಟ್ಟಾಸುಬ್ರಹ್ಮಣ್ಯನಾಯ್ಡು ರವರು ಭೂ ಸ್ವಾಧೀನಕ್ಕೆ ಸಂಬಂಧಪಟ್ಟಂತೆ ಒಂದು

ಮಾತನ್ನು ಹೇಳಿದರು. ಭೂ ಸ್ವಾಧೀನ ಕೆಲಸವನ್ನೂ ನೀವು ಎಲ್ಲಿಯೋ ಒಂದು ಕಡೆ ಕುಳಿತುಕೊಂಡು ಮಾಡಿದರೆ ಹೇಗೆ? ಇದರ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕು ನೈಸ್ ಅಥವಾ ಭೂ ಸ್ವಾಧೀನ ವಿಚಾರಗಳು ಇಲ್ಲಿ ಮುಖ್ಯವಾಗಿ ಚರ್ಚೆಯಾಗಬೇಕಾಗಿತ್ತು. ಆದರೆ, ನಮ್ಮ ದುರಾದೃಷ್ಟವೆಂದರೆ, ಈಗ ಚುನಾವಣೆ ಬಂದ ಕಾರಣಕ್ಕೋಸ್ಕರ ಸದನವನ್ನು ಮುಂದಕ್ಕೆ ಹಾಕುವಂಥ ಪ್ರಶ್ನೆ ಬಂದಿದೆ. ಇಲ್ಲದಿದ್ದರೆ ಇಂಥ ಎಲ್ಲಾ ವಿಚಾರಗಳ ಬಗ್ಗೆ ಚರ್ಚೆ ಮಾಡಬಹುದಾಗಿತ್ತು. ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ರಾಜ್ಯ ಅಭಿವೃದ್ಧಿಯಾಗಬೇಕಾದರೆ, ಕೃಷಿಯೇತರ ಚಟುವಟಿಕೆಗಳು ಆಗಲೇ ಬೇಕಾಗುತ್ತದೆ. ಅಂದರೆ, ಕೈಗಾರಿಕೆಗಳು ಆಗಲೇಬೇಕಾಗುತ್ತದೆ. ಕೈಗಾರಿಕೆಗಳು ಆಗಲೇಬೇಕಾದಾಗ ಅವುಗಳನ್ನು ಆಕಾಶದಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಲೇ ಬೇಕಾಗುತ್ತದೆ. ಆದರೆ, ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವಾಗ ಎಂಥ ಭೂಮಿಯನ್ನು ಮಾಡಿಕೊಳ್ಳಬೇಕೆಂಬುದು ಮುಖ್ಯವಾಗಿರಕ್ಕಂಥ ಪ್ರಶ್ನೆಯಾಗಿದೆ. ಇವತ್ತಿನದಿವಸ ವ್ಯವಸಾಯಕ್ಕೆ ಯೋಗ್ಯವಾಗಿಲ್ಲದಂಥ ಜಮೀನನ್ನು ಸ್ವಾಧೀನ ಮಾಡಿಕೊಳ್ಳುವುದಾದರೆ ಅದಕ್ಕೆ ಖಂಡಿತವಾಗಿ ಅಬ್ಜಕ್ಷನ್ ಮಾಡಬಾರದು. ನೀವು ಸ್ವಾಧೀನ ಮಾಡಿಕೊಳ್ಳಬಾರದೆಂದು ಸಾರಾಸಗಟಾಗಿ ಹೇಳುವುದು ಕೂಡ ತಪ್ಪಾಗುತ್ತದೆ. ನಮ್ಮಲ್ಲಿ 58% ನಷ್ಟು ಜನ ಕೃಷಿಯನ್ನು ನಂಬಿದ್ದಾರೆ. ಅಂದರೆ, ಕೃಷಿ ಅವರಿಗೆ ಒಂದು ಉದ್ಯೋಗವನ್ನು ಕೊಡತಕ್ಕಂಥದ್ದು ಆಗಿದೆ. ಆದರೆ, ನಮ್ಮ ಕೃಷಿಯೇತರ ಚಟುವಟಿಕೆಗೆ ಸಂಬಂಧಪಟ್ಟಂತೆ GDP growth ಏನಿದೆ ಎಂಬುದನ್ನು ದಯಮಾಡಿ ಎಲ್ಲಿಯೋ ಒಂದು ಕಡೆ ನೋಡಬೇಕಾಗುತ್ತದೆ. ಭೂಮಿಯನ್ನು ಸ್ವಾಧೀನ ಮಾಡಬೇಡಿ, ಆದರೆ ಕೈಗಾರಿಕೆಗಳು ಬರಬೇಕೆಂದು ಹೇಳತಕ್ಕಂಥವರು ನಾವಲ್ಲ. ಆದರೆ, ಇವತ್ತಿನ ದಿವಸ ಭೂಸ್ವಾಧೀನ ಆಗಲೇಬೇಕು ಮತ್ತು ಕೈಗಾರಿಕೆಗಳು ಕೂಡ ಸ್ಥಾಪನೆ ಆಗಬೇಕಾಗುತ್ತದೆ. ಹಾಗೆಯೇ ರೈತರ agriculture production ಗೆ ಯಾವುದೇ ರೀತಿಯಲ್ಲಿ ತೊಂದರೆಯಾಗುವ ರೋತಿಯಲ್ಲಿ ಅನುಪಯುಕ್ತವಾದಂಥ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಬಹುಶಃ ಇದಕ್ಕೆ ಬೇರೊಂದು ಸಂದರ್ಭದಲ್ಲಿ ಚರ್ಚೆಗೆ ಅವಕಾಶ ಬಂದಾಗ ಅವೆಲ್ಲದರ ಬಗ್ಗೆ ಚರ್ಚೆ ಮಾಡೋಣವೆಂದು ಈ ಸಂದರ್ಭದಲ್ಲಿ ಹೇಳುತ್ತಾ ನಾನು

ಮಾತನಾಡುವುದಕ್ಕೆ ಇನ್ನು ಸಾಕಷ್ಟು ಮಾಹಿತಿ ಇದ್ದರೂ ಕೂಡ ಕಾಲದ ಕೊರೆಯಿಂದ ಮತ್ತು ಮಾನ್ಯ ಅಧ್ಯಕ್ಷರು ಯಾವಾಗಲೂ ನನ್ನ ಕಡೆ ನೋಡ ಬಾರದೆಂಬ ಕಾರಣಕ್ಕೋಸ್ಕರ ನನ್ನ ಮಾತನ್ನು ಮುಗಿಸುವುದಕ್ಕಿಂತ ಮುಂಚೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

8. ಪ್ರಕಟಣೆ :

ಅಧ್ಯಕ್ಷರು : ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ: 17–03–2010 ರಂದು ಈ ಕೆಳಕಂಡ ವಿಧೇಯಕವನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆ ಎಂದು ಸನ್ಮಾನ್ಯ ಸಭಾಪತಿಯವರು ತಿಳಿಸಿರುತ್ತಾರೆ.

1) ಕರ್ನಾಟಕ ಧನವಿನಿಯೋಗ ವಿಧೇಯಕ 2010
2) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ 2009
3) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ 2009

9. ವಿತ್ತೀಯ ಕಾರ್ಯಕಲಾಪಗಳು :

2010–11 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು ನಗರ (ದಕ್ಷಿಣ)) : ಮಾನ್ಯ ಅಧ್ಯಕ್ಷರೆ, ಉಪನಿಷತ್ತಿನ ಒಂದು ವಾಕ್ಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಸುಖಸ್ಯ ಮೂಲಂ ಧರ್ಮ:
ಧರ್ಮಸ್ಯ ಮೂಲಂ ಅರ್ಥ:
ಅರ್ಥಸ್ಯ ಮೂಲಂ ರಾಜ್ಯಂ:

ಪ್ರಜಾಹಿತಂಹೀ ರಾಜಧರ್ಮ:

ಜೀವನದಲ್ಲಿ ಪ್ರತಿಯೊಬ್ಬರೂ ಸುಖ, ಶಾಂತಿ, ನೆಮ್ಮದಿ ಜೀವನವನ್ನು ಬಯಸುತ್ತಿದ್ದಾರೆ. ಇದು ಧರ್ಮದಿಂದ ಸಾಧ್ಯವೆಂದು ಹೇಳುತ್ತಾರೆ. ಇಲ್ಲಿ ಧರ್ಮ ಎಂದರೆ ಕರ್ತವ್ಯ ಒಬ್ಬ ವ್ಯಕ್ತಿ ಕೌಟುಂಬಿಕ ಅವಶ್ಯಕತೆಗಳನ್ನು ಅಲ್ಲಿಯ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಸಾಧ್ಯವಾದಾಗ ಬಹುಶಃ ಮನೆಯಲ್ಲಿ ಆತ ಸುಖವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಅಥವಾ ತನ್ನ ಕಾರ್ಯರಂಗದ ಎಲ್ಲಾ ಪರಿಸ್ಥಿತಿಗಳಲ್ಲಿ ತನ್ನ ಕರ್ತವ್ಯವನ್ನು ಮಾಡುವುದಕ್ಕೆ ಆಗದೆ ಇರುವಂತೆ ವಾತಾವರಣ ಉಂಟಾದಾಗ ಧರ್ಮ ನಿಭಾಯಿಸುವುದಕ್ಕೆ ಸಾಧ್ಯವಾಗುತ್ತದೆ. ಮತ್ತೆ ಅದರಿಂದ ಆತ ಸುಖ ಪಡುವುದಕ್ಕೆ ಸಾಧ್ಯವಾಗುತ್ತದೆ. ಧರ್ಮ ಅಥವಾ ಕರ್ತವ್ಯವನ್ನು ಮಾಡುವುದಕ್ಕೆ ಏನು ಮಾಡಿದರೆ ಸಾಧ್ಯವಾಗುತ್ತದೆಂಬುದರ ಅರ್ಥದ ಬಗ್ಗೆ ಹೇಳುತ್ತೇನೆ. ಯಾರು ತಿಳಿಯದ ಜೀವನದ ವ್ಯವಸ್ಥೆಗಳು, ತನ್ನ ಸುತ್ತಮುತ್ತಲಿರುವಂಥ ವೈಯಕ್ತಿಕವಾದಂಥ ಮತ್ತು ವ್ಯವಹಾರಿಕವಾದಂಥ, ಕೌಟುಂಬಿಕವಾದಂಥ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಸುತ್ತಮುತ್ತಲಿನ ವಾತಾವರಣ ಯಾವುದಿದೆಯೋ ಅವುಗಳು ಪೂರಕವಾಗಿರುವಂಥ ವ್ಯವಸ್ಥೆಗಳೇ ಈ ಅರ್ಥ ವ್ಯವಸ್ಥೆಗೆ ಸಹಾಯ ಮಾಡುತ್ತದೆ. ಆದರೆ, ಈ ಅರ್ತಕ್ಕೆ ಮೂಲ ಯಾರೆಂದರೆ ರಾಜ, ರಾಜ ಎಂದರೆ ಆಡಳಿತ ವ್ಯವಸ್ಥೆ. ಈ ಆಡಳಿತ ವ್ಯವಸ್ಥೆ ಹೇಗಿದ್ದರೆ ಒಳ್ಳೆಯದು ಎಂದು ಹೇಳತಕ್ಕಂಥ ಒಂದು ಕಲ್ಪನೆಗೆ ಆಹಾರ ಭದ್ರತೆ, ಆರೋಗ್ಯ ಭದ್ರತೆ, ಆಶ್ರಯ ಭದ್ರತೆ, ಉದ್ಯೋಗ ಭದ್ರತೆ, ಶಿಕ್ಷಣ ಭದ್ರತೆ ಮತ್ತು ಧಾರ್ಮಿಕ ಸಾಂಸ್ಕೃತಿಕ ನಂಬಿಕೆಗಳ ಬಗ್ಗೆ ಪರಸ್ಪರ ಗೌರವ ಸಾಮಾಜಿಕವಾಗಿ, ಶಾಂತಿ, ನೆಮ್ಮದಿಗಳಿಂದ ಬಾಳುವಂಥ ಸಾಮರಸ್ಯದಿಂದ ಬದುಕಲು ನೆರವಾಗುವಂಥ ಒಂದು ಆಡಳಿತ ನಡೆಸುವುದೇ ರಾಜ ಧರ್ಮ. ಕೌಶಲ್ಯ ಇನ್ನೊಂದು ಮಾತನ್ನು ಹೇಳುತ್ತಾನೆ. ಅರ್ಥ ವ್ಯವಸ್ಥೆಯ ನಾಲ್ಕು ಆಧಾರ ಸ್ತಂಭಗಳು ಯಾವುದೆಂದು ಹೇಳುತ್ತಾನೆ. ಈ ನಾಲ್ಕು ಆಧಾರ ಸ್ತಂಭಗಳು ಏನೆಂದರೆ ಪ್ರಜೆಗಳಿಗೆ ಏನು ಕೊರತೆ ಉಂಟಾಗಿದೆಯೋ ಅದನ್ನು ರಾಜ್ಯಕ್ಕೆ ಪಡೆಯುವುದರಲ್ಲಿ ರಾಜನ ಮಹತ್ವತೆ ಇರುತ್ತದೆ. ಪಡೆದುದನ್ನು ಸಂರಕ್ಷಿಸುವುದು, ಸಂರಕ್ಷಣೆ ಮಾಡಿ ಉಳಿಸಿಕೊಂಡು ಅದನ್ನು ಬೆಳೆಸುವುದು ಮತ್ತೆ ಬೆಳೆಸಿದ್ದನ್ನು ಸತ್ಪಾತ್ರರಿಗೆ ಹಂಚುವುದು. ಈ ನಾಲ್ಕು ಆಧಾರ ಸ್ತಂಭಗಳ ಮೂಲಕ ಅರ್ಥಶಾಸ್ತ್ರ ನಿರ್ವಹಿಸುತ್ತದೆಂಬ ಮಾತನ್ನು ಕೌಟಿಲ್ಯ ಹೇಳುತ್ತಾನೆ. 7 ನೇ ಶತಮಾನದಲ್ಲಿ ಕ್ರಿ.ಶ. 606–642

ರಲ್ಲಿ ಬೌದ್ಧ ಅನುಯಾಯಿ 17ನೇ ವಯಸ್ಸಿನಲ್ಲಿ ಸಮಗ್ರವಾದಮಥ ಸಂಪತ್ತನ್ನು ದಾನ ಮಾಡುವ ಕಲ್ಪನೆಯನ್ನು ತಂದು ಅದನ್ನು ತನ್ನ ಜೀವನದಲ್ಲಿ ಅನುಷ್ಠಾನಕ್ಕೆ ತಂದಿದ್ದ. ಈ ವಿಚಾರವನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, 2010-11ನೇ ಸಾಲಿನ ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಆರಂಭ ಮಾಡಿರುವಂಥದ್ದು ಏನೆಂದರೆ, 'ಕನ್ನಡಿಗರ ತಾಯಿ ಭುವನೇಶ್ವರಿಯ ಕೃಪೆಯಿಂದ ಹಾಗೂ ಕರ್ನಾಟಕ ಜನತೆಯ ಆಶೀರ್ವಾದದಿಂದ' ಇಂದು ಬಜೆಟ್ ಭಾಷಣವನ್ನು ಆರಂಭ ಮಾಡಿ 'ಜೈ ಹಿಂದ್, ಜೈ ಕರ್ನಾಟಕ' ಎಂದು ಅಂತ್ಯ ಮಾಡಿ ಬಜೆಟ್‌ನಲ್ಲಿ ಬರುವ 341 ಪ್ಯಾರಾಗಳನ್ನು ನಾನು ಒಂದೊಂದಾಗಿ ಅಧ್ಯಯನ ಮಾಡಿದಾಗ ನಿಜವಾದ ಅರ್ಥದಲ್ಲಿ ಪ್ರಜಾ, ರಾಜ್ಯ ಹಿತ ಕಾಪಾಡುವ ಎಲ್ಲಾ ಪ್ರಯತ್ನಗಳು ಅದರಲ್ಲಿ ಅಡಕವಾಗಿದೆ. ಅತಿವೃಷ್ಟಿ, ಅನಾವೃಷ್ಟಿಗಳ ತೀವ್ರವಾದಂಥ ತೊಂದರೆಗಳ ಮಧ್ಯದಲ್ಲಿಯೂ ಕೂಡ ಹೊಸತೊಂದು ನಾಡ ಕಟ್ಟುವೆವು ಎಂಬ ಸಂಕಲ್ಪದಿಂದ ಆಯವ್ಯಯದಲ್ಲಿ ಒದಗಿಸಿರುವಂಥ 70, 063 ಕೋಟಿ ರೂಪಾಯಿಗಳ ಜೊತೆ ಸೆಸ್ ಹಾಗೂ ಸರ್ಕಾರದ ವಿವಿಧ ಸಂಸ್ಥೆಗಳು ಅವರ ಆಂತರಿಕ ಮತ್ತು ಬಾಹ್ಯ ಮೂಲಗಳಿಂದ 5,776 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ನಿರ್ಧರಿಸುವಂಥದ್ದು ಮತ್ತು ಇಂಧನ ಕ್ಷೇತ್ರದಲ್ಲಿ 2,700 ಕೋಟಿ, ನಗರಾಭಿವೃದ್ಧಿ ಕ್ಷೇತ್ರಕ್ಕೆ 1450 ಕೋಟಿ ಮತ್ತು ವಾಣಿಜ್ಯ ಕೈಗಾರಿಕೆಗೆ 500 ಕೋಟಿ, ಸಾರಿಗೆ ಸಂಸ್ಥೆಗೆ 701 ಕೋಟಿ ರೂಪಾಯಿಗಳನ್ನು ಕಾಯ್ದಿರಿಸು ವಂಥದ್ದನ್ನು ನಾನು ಸ್ವಾಗತ ಮಾಡುತ್ತೇನೆ.

2010-11ರ ಸಾಲಿನಲ್ಲಿ Revenue surplus ರೂ. 500.49 ಕೋಟಿ fiscal deficit ರೂ. 9708.46 ಕೋಟಿ ಒಟ್ಟು ರಾಜ್ಯದ ಆದಾಯದ 0.15% ಹಾಗೂ 2.96%. ವಿತ್ತೀಯ ಹೊಣೆಗಾರಿಕೆಯನ್ನು ಕಾಪಾಡುವಂತಹ ನಿಟ್ಟಿನಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಂಡಿರುವುದನ್ನು ನಾವು ಈ ಸಂದರ್ಭದಲ್ಲಿ ವಿಶೇಷವಾಗಿ ಶ್ಲಾಘಿಸಬೇಕಾಗಿದೆ. ಈ ಬಜೆಟ್ ಮಂಡನೆಯಾಗಿರುವುದು ಎಂತಹ ಸನ್ನಿವೇಶದಲ್ಲಿ ಎಂಬುದರ ಬಗ್ಗೆ ತಾವು ಅರ್ಥವನ್ನು ಮಾಡಿ ಕೊಳ್ಳಬೇಕು. ಪ್ರಕೃತಿ ವಿಕೋಪದಿಂದಾಗಿ 15 ಜಿಲ್ಲೆಗಳಲ್ಲಿ ಸುಮಾರು 4,300 ಗ್ರಾಮಗಳಲ್ಲಿ ಆರುವರೆ ಲಕ್ಷ ಮನೆಗಳು ಕುಸಿದಿರುವಂತಹ ಸಂದರ್ಭದಲ್ಲಿ, ಅದು ಕೂಡ 180 ಲಕ್ಷ ನಿರ್ವಸತಿಗರು ಇರುವಂತಹ ಸಂದರ್ಭದಲ್ಲಿ,

ಬಹಳಷ್ಟು ಸಂಕಷ್ಟಗಳನ್ನು ಎದುರಿಸುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಒಂದು ಬಜೆಟ್‌ನ್ನು ಕೊಡುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ರಾಷ್ಟ್ರೀಯ ವಿಪತ್ತು ನಿಧಿಯಂದ 1,457 ಕೋಟಿ ರೂಪಾಯಿಗಳು, ರಾಜ್ಯ ಸರ್ಕಾರದಿಂದ 1879 ಕೋಟಿ ರೂಪಾಯಿಗಳು, ದಾನಿಗಳ ನೆರವಿನಿಂದ 317.9 ಕೋಟಿ ರೂಪಾಯಿಗಳು ಬಂದಿದೆ, ಈ ಎಲ್ಲಾ ಹಣವನ್ನು ಕ್ರೋಢೀಕರಿಸಿ ಸಮಯ ನಿಗಧಿತ ಆಧಾರದಲ್ಲಿ ನೆರೆ ಪೀಡಿತರಿಗೆ ಪ್ರಕೃತಿ ವಿಕೋಪದಿಂದ ತುತ್ತಾದವರಿಗೆ ಎಲ್ಲಾ ತರಹದ ನೆರವನ್ನು ಕೊಡುವಂತಹ ಪ್ರಯತ್ನ ಬಹುಶಃ ಇದು ಖಂಡಿತವಾಗಿ ಮುಂದಿನ ದಿವಸಗಳಲ್ಲಿ ಚಾರಿತ್ರಿಕವಾಗಿರುವಂತಹ ಪ್ರಯತ್ನ ಮತ್ತು ಜನರು ಇದನ್ನು ಖಂಡಿತವಾಗಿ ಸ್ಮರಿಸುತ್ತಾರೆ ಮತ್ತು ಅಭಿನಂದಿಸು ತ್ತಾರೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಸಂಪತ್ತು ರಾಜ್ಯದ ಕೆಲವೇ ವ್ಯಕ್ತಿಗಳಲ್ಲಿ ಕೇಂದ್ರೀಕೃತವಾ ಗಿರುವುದು ಅಪಾಯದ ಸಂಕೇತ, ರಾಜನಿಗೂ ಸಹ ಅಪಾಯದ ಸಂಕೇತವಾ ಗಿರುತ್ತದೆ, ಇದರಿಂದ ರಾಜ್ಯ ಜನರಿಗೂ ಸಹ ತೊಂದರೆಯಾಗುತ್ತದೆ. ಬಹುಶಃ ಇದರ ಬಗ್ಗೆ ಸಾಕಷ್ಟು ವಿಶ್ಲೇಷಣೆಗಳು ಆಗಿವೆ. ಆರ್ಥಿಕ ತಜ್ಞರು ಅದರ ಬಗ್ಗೆ ಸಾಕಷ್ಟು ಮಾಹಿತಿಯನ್ನು ನೀಡಿದ್ದಾರೆ. ಆದರೆ ಇದರ ಜೊತೆಜೊತೆಯಲ್ಲಿ ಎಲ್ಲಾ ಪಕ್ಷಗಳು ಭಾರತೀಯ ಜನತಾ ಪಾರ್ಟಿ ಇರಬಹುದು, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಇರಬಹುದು, ಎಲ್ಲೋ ಒಂದು ಕಡೆ ಘಂಟಾ ಘೋಷವಾಗಿ ತಾವು ಅಧಿಕಾರಕ್ಕೆ ಬಂದರೆ ಕೇವಲ 100 ದಿವಸದೊಳಗೆ ರಾಷ್ಟ್ರೀಯ ಮಟ್ಟದಲ್ಲಿ ಬಂದಿರುವಂತಹ ಚಿಂತನೆಗಳು ಸುಮಾರು 15,000 ಬಿಲಿಯನ್ಸ್ ಡಾಲರ್ಸ್ 72 ಲಕ್ಷ ಕೋಟಿ ರೂಪಾಯಿಗಳಷ್ಟು ಭಾರತದ ವಿದೇಶಿ ಸಾಲದ 13 ಪಟ್ಟು ಇರುವಂತಹ 72 ಲಕ್ಷ ಕೋಟಿ ರೂಪಾಯಿಗಳನ್ನು ಭಾರತಕ್ಕೆ ಪುನಃ ಬರುವಂತಹ ನಿಟ್ಟಿನಲ್ಲಿ ನಾವು ಕ್ರಮವನ್ನು ಕೈಗೊಳ್ಳು ತ್ತೇವೆಂದು ಹೇಳಿರುವುದು. ಇದು ರಾಷ್ಟ್ರೀಯ ಮಟ್ಟದಲ್ಲಿ ಬಂದಿರುವ ಚಿಂತನೆ. ಬಹುಶಃ ಈ ಬಗ್ಗೆ ವಿಫಲವಾಗಿದೆ. ಬಹುಶಃ ಎಲ್ಲಿಯಾದರೂ ಇದರಲ್ಲಿ ಕೆಲವು ವಿಷಯಗಳನ್ನಾದರೂ ತರುವುದಕ್ಕೆ ಸಾಧ್ಯವಾದಲ್ಲಿ ಬಹುಶಃ ನಮ್ಮದೇಶದ ಚಿತ್ರಣ ಬದಲಾವಣೆಯಾಗುತ್ತಿತ್ತು. ಈ ಬಗ್ಗೆ ಈ ಸದನದ ಮೂಲಕ ಕೇಂದ್ರ ಸರ್ಕಾರವನ್ನು ವಿಶೇಷವಾಗಿ ಒತ್ತಾಯವನ್ನು ನಾನು ಮಾಡುತತಿದ್ದೆನೆ. ಖಂಡಿತವಾಗಿ ಇದನ್ನು ತರುವುದರ ಬಗ್ಗೆ ವ್ಯವಸ್ಥೆಯನ್ನು ಮಾಡಬೇಕಾಗಿದೆ. ವ್ಯಕ್ತಿಗಳಲ್ಲಿ ಕೇಂದ್ರೀಕೃತವಾಗಿರುವಂತಹ ಸಂಪತ್ತನ್ನು ರಾಜ

ಅಥವಾ ಆಡಳಿತ ವ್ಯವಸ್ಥೆ ವಶೀಕರಿಸಬೇಕು ಇಲ್ಲಾ ಸದ್ವಿನಿಯೋಗವಾಗು ವಂತಹ ರೀತಿಯಲ್ಲಿ ಪ್ರಚೋದಿಸಬೇಕು. ಸದ್ವಿನಿಯೋಗವಾಗುವ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆಯೂ ಕೂಡ ಚಿಂತನೆಯನ್ನು ಮಾಡಬೇಕು. ಧಾನ್ಯಗಳ ಬೆಲೆ ಏರಿಕೆಯಿಂದ ಬಹುಶಃ ಇದಕ್ಕೆ natural ಅಲ್ಲ ಅಪ್ರಾಕೃತಿ ಕವಾಗಿ future trading ಎಂದು ಹೇಳುವಂತಹ ಹಿನ್ನೆಲೆಯಲ್ಲಿ ಸಟ್ಟಾ business ನ ಆಧಾರದಲ್ಲಿ ಬೆಲೆ ಏರಿಕೆಯಾಗುತ್ತಿದೆ ಎಂದು ಹೇಳುವುದರ ಬಗ್ಗೆ ಇವತ್ತು ಜನಸಾಮಾನ್ಯರು ಅರ್ಥವನ್ನು ಮಾಡಿಕೊಂಡಿದ್ದಾರೆ. ಸಿಗುವಂತಹ ಸಂಬಳ ನಿಗದಿತವಾಗಿರುವಂತಹ ಸಂಬಳವಾಗಿದೆ. ಜೀವನವನ್ನು ನಡೆಸುವಂತಹ ದುಸ್ತರವಾದಂತಹ ಸನ್ನಿವೇಶದಲ್ಲಿ ಬಹುಶಃ ಇದರ ಬಗ್ಗೆ ಖಂಡಿತವಾಗಿ ಕೇಂದ್ರ ಸರ್ಕಾರವು ತಮ್ಮ ಯೋಚನೆಯನ್ನು ಮಾಡಬೇಕಾಗಿದೆ. ಇದಕ್ಕೆ ಪರಿಹಾರವನ್ನು ಕಾಣುವಂತಹ ನಿಟ್ಟಿನಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ರಾಜ್ಯದ ಆದಾಯದಲ್ಲಿ ಕೃಷಿ ಕ್ಷೇತ್ರದಿಂದ 18% ಆದಾಯ ಇದೆ. ದುಡಿಯುತ್ತಿರುವಂತಹ ಕಾರ್ಮಿಕರ ಸಂಖ್ಯೆ 58% ಇದೆ. ಕೈಗಾರಿಕಾ ಕ್ಷೇತ್ರಗಳಿಂದ ರಾಜ್ಯಕ್ಕೆ ಬರುವಂತಹ ಆದಾಯ 29% ಇದೆ. ದುಡಿಯುತ್ತಿರುವಂತಹ ಕಾರ್ಮಿಕರ ಸೇವಾಕ್ಷೇತ್ರ ಮತ್ತು ಕೈಗಾರಿಕಾ ಕ್ಷೇತ್ರವನ್ನು ಸೇರಿಸಿದರೆ 41% ಇದೆ. ಸೇವಾಕ್ಷೇತ್ರಗಳಿಂದ 53% ಆದಾಯ ಬರುತ್ತಿದೆ.

ಕೃಷಿ ಕಾರ್ಮಿಕರ average ಆಗಿರುವಂತಹ ಒಂದು ಆದಾಯ ರೂ.14,690 ವಾರ್ಷಿಕ ಆದಾಯವಾಗಿರುತ್ತದೆ. ಕೈಗಾರಿಕಾ ಕ್ಷೇತ್ರದಲ್ಲಿರು ವಂತಹವರು ರೂ.34,500, ಸೇವಾಕ್ಷೇತ್ರದಲ್ಲಿರುವಂತಹವರ ಆದಾಯ ರೂ.75,000 ಆರ್ವಿಕ ಆದಾಯ. ಈ ಹಿನ್ನೆಲೆಯಲ್ಲಿ ಕೃಷಿ ಕ್ಷೇತ್ರದ ಬಗ್ಗೆ ವಿಶೇಷ ಅಧಿವೇಶನವು ನಡೆಯಿತು. ಇದು ನಡೆದಂತಹ ಸಂದರ್ಭದಲ್ಲಿ ಅನೇಕ ವಿಶ್ಲೇಷಣೆಗಳು ಆಯಿತು. "ಮರಳಿ ಗ್ರಾಮಕ್ಕೆ" ಎಂದು ಹೇಳುವಂತಹ ನಿಟ್ಟಿನಲ್ಲಿ ಅನೇಕ ಚಿಂತನೆಗಳು ಬಂತು. ಆದರೆ ಗ್ರಾಮಕ್ಕೆ ಹೋಗಬೇ ಕೆಂಬುದನ್ನು ಇದ್ದರೆ ಅವನ ಆರ್ಥಿಕ ಶಕ್ತಿಯನ್ನು ಹೆಚ್ಚಿಸುವಂತಹ ಕ್ರಮಗಳನ್ನು ನಾವು ತೆಗೆದುಕೊಂಡರೆ ಮಾತ್ರ ಅವನು ಖಂಡಿತವಾಗಿ ಗ್ರಾಮದಲ್ಲಿ ಉಳಿಯಬಲ್ಲ ಅಥವಾ ಹಳ್ಳಿಯಲ್ಲಿ ಉಳಿಯಬಲ್ಲ. ಈ ಹಿನ್ನೆಲೆಯಲ್ಲಿ ಯಾವ ಚಿಂತನೆಯನ್ನು ಅಳವಡಿಸಬೇಕೆಂಬುದರ ಬಗ್ಗೆಯೂ ಕೂಡ ಸರ್ಕಾರವು ಸ್ಪಷ್ಟವಾದಂತಹ ಯೋಜನೆಯನ್ನು ಹಾಕಿಕೊಂಡಿದೆ. ಈ ಸಂದರ್ಭದಲ್ಲಿ ಅರ್ಥ ನೀತಿಯ ಪಂಚಸೂತ್ರಗಳಿಗೆ ಸಂಬಂಧಪಟ್ಟಂತೆ

ಸರ್ಕಾರವು ಘೋಷಣೆ ಮಾಡಿದೆ. 1) ಕೃಷಿಯ ಪೋಷಣೆ, 2) ಕೈಗಾರಿಕೆಯ ಬೆಳವಣಿಗೆ 3) ಮಾನವ ಸಂಪನ್ಮೂಲಗಳ ಅಭಿವೃದ್ಧಿ, 4) ದುರ್ಬಲ ವರ್ಗಗಳ ಸಬಲೀಕರಣ 5) ಹಿಂದುಳಿದ ಪ್ರದೇಶಗಳ ಪ್ರಗತಿ. ಈ ಐದು ಪಂಚಸೂತ್ರಗಳನ್ನು ಇಟ್ಟುಕೊಂಡು ಆರ್ಥಿಕ ವ್ಯವಸ್ಥೆಯಲ್ಲಿ ಸಮಗ್ರವಾಗಿ ಬದಲಾವಣೆಯನ್ನು ತರುಬೇಕೆಂಬುದರ ಬಗ್ಗೆ ಚಿಂತನೆಯನ್ನು ಸರ್ಕಾರವು ಮಾಡಿದೆ. ಬಹುಶಃ ಒಂದೊಂದೇ ಸಂಗತಿಯನ್ನು ನಾವು ತೆಗೆದುಕೊಂಡರೂ ಕೂಡ ಒಣಭೂಮಿಯಲ್ಲಿ ಜಲ ಪೂರಣ, ಬಹುಶಃ 2 ಲಕ್ಷ ಡ್ಯಾಂ, ಬಾಂದರಾಗಳ ಮೂಲಕ ಜಲಪೂರಣ ವ್ಯವಸ್ಥೆಯ ಬಗ್ಗೆ ಯೋಚನೆಯನ್ನು ಮಾಡಿದೆ. ಇದು ಕಾರ್ಯ ರೂಪಕ್ಕೆ ಬಂದರೆ ಅದ್ಭುತವಾಗಿರುವಂತಹ ಒಂದು ಬದಲಾವಣೆ ಕೃಷಿ ಕ್ಷೇತ್ರದಲ್ಲಿ ಆಗುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಯಲ್ಲಿ ಒಣಭೂಮಿ ಬೇಸಾಯಕ್ಕೆ ಸಂಬಂಧಪಟ್ಟಂತೆ ಇಸ್ರೇಲ್ ಮಾದರಿಯಲ್ಲಿ ಕೃಷಿ ಪದ್ಧತಿಯ ಬಗ್ಗೆಯೂ ಕೂಡ, ಮಡಗಾಸ್ಕರ್ ತಳಿಯ ಭತ್ತದ ಬಗ್ಗೆಯೂ ಕೂಡ ತಾವು ಯೋಚನೆಯನ್ನು ಮಾಡಬಹುದು. ನೀರಿನ ಆಸರೆಯಿಲ್ಲದೆ ಈ ಭತ್ತವನ್ನು ಕೃಷಿ ಮಾಡುವುದಕ್ಕೆ ಸಾಧ್ಯವೆಂಬ ಚಿಂತನೆಯ ಬಗ್ಗೆಯೂ ಕೂಡ ಯೋಚನೆಯನ್ನುಮಾಡಬಹುದು. ಇತ್ತೀಚೆಗೆ ಒಂದು company ಯ ಮಾಲುಗಳ ಬಗ್ಗೆ ಒಂದು ಚಿಂತನೆಯನ್ನು ಮಾಡುವಂತಹ ಒಂದು ಅವಕಾಶವಿತ್ತು ಮತ್ತು ಸಾಕಷ್ಟು ಚರ್ಚೆಯನ್ನು ಮಾಡುವಂತಹ ಅವಕಾಶ ಇದೆ. ಅವರು ಉತ್ತರಪ್ರದೇಶದವರ ಜೊತೆಯಲ್ಲಿ ಮಾಡಿರುವ ಒಪ್ಪಂದದ ಬಗ್ಗೆ ತಮ್ಮ ಗಮನಕ್ಕೆ ನೀಡುವುದಕ್ಕೆ. ಇಚ್ಛಿಸುತ್ತೇನೆ. ಜತ್ರೋಪ ಬೆಳೆಯನ್ನು ಒಂದು ಮಿಲಿಯನ್ ಎಕರೆ ಜಾಗದಲ್ಲಿ ಒಂದು ಮಿಲಿಯನ್ ಟನ್ ಬಯೋಡಿಸೆಲ್ ಉತ್ಪಾದನೆಯ ಗುರಿಯನ್ನು ಇಟ್ಟುಕೊಂಡು ಒಂದು ಮಿಲಿಯನ್ ಜನರಿಗೆ ಉದ್ಯೋಗವನ್ನು ಕೊಡುವಂತಹ ವಿಶೇಷ ಯೋಜನೆಯನ್ನು ಒಂದು Oil Company ಉತ್ತರ ಪ್ರದೇಶದ ಸರ್ಕಾರ ಜೊತೆಯಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡಿದೆ. ಬಹುಶಃ ನಾನು ಹೇಳುತ್ತಿರುವುದು ಜತ್ರೋಪ ಮಾತ್ರವಲ್ಲ, ನಮ್ಮಲ್ಲಿರುವಂತಹ ಇನ್ನೊಂದು ಫಲವತ್ತಾಗಿರುವಂತಹ ಇದಕ್ಕೆ ಹೊಂಗೆ ಇರಬಹುದು, ಅಥವಾ ಹರಳೆಣ್ಣೆ castor ಬಗ್ಗೆಯೂ , ನಾವು ಯೋಚಿಸಬಹುದು. ಇದನ್ನು ಕೂಡ ನಾನು ಮಾನ್ಯ ಮುಖ್ಯಮಂತ್ರಿಗಳ ಮನಕ್ಕೆ ತಂದಿದ್ದೇನೆ. ಈ ತರಹ ಒಂದು tie up ಮಾಡಿಕೊಂಡು ಏನು ಮಾಡಬಹುದು, buy back ಪಾಲಿಸಿಯನ್ನು ಕೂಡ

ಅವರು ಮಾಡುವುದಕ್ಕೆ ಸಿದ್ಧರಿದ್ದಾರೆ. ಅವರು ಪರ್ಚೇಸ್ ಮಾಡುವುದಕ್ಕೂ ಸಹ ತಯಾರಿದ್ದಾರೆ. ಇಂತಹ ಒಂದು ಯೋಜನೆಯ ಮೂಲಕ ಬಹುಶಃ ಬರಡು ಭೂಮಿಗಳು, ಒಣಭೂಮಿಗಳ ಕ್ಷೇತ್ರದಲ್ಲಿಯೂ ಕೂಡ ನಾವು ಯಾವ ರೀತಿಯದಂತಹ ಒಂದು ವ್ಯವಸ್ಥೆಯನ್ನು ನಾವು ಜೋಡಿಸಬಹುದೆಂದು ಎಂದು ಹೇಳುವಂತಹದ್ದರ ಬಗ್ಗೆ ನಾವು ಯೋಚನೆಯನ್ನು ಮಾಡಬಹುದು. ಪುಂಡಿಕಾ ಇರಬಹುದು, ಜಾಯಿಕಾಯಿ ಇರಬಹುದು, ನಾಕೇಸು, ಬೇವು, ಹೆಬ್ಬೇವು ಇದರ ಬಗ್ಗೆಯೂ ಕೂಡ ಈ ಬೆಳೆಯ ಬಗ್ಗೆಯೂ ಕೂಡ ಯೋಚಿಸುವುದಕ್ಕೆ ಸಾಧ್ಯವಿದೆ. ಇತ್ತೀಚೆಗೆ ಕೊಚ್ಚಿನ್‌ನಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಒಂದು ಚಿಂತನೆ ಆಯಿತು. ವಿಶೇಷವಾಗಿ ಕಡಲ ಕೊರೆತದ ಬಗ್ಗೆ, ಭೂ ಕುಸಿತದ ಬಗ್ಗೆ, Rain water harvest ಬಗ್ಗೆ ಮತ್ತು ಓಜೋನ್ ಸಮಸ್ಯೆಗೆ, ಈ ಕಾರ್ಬನ್ ಅನನು ಸಿಂಕ್ ಮಡುವ ವ್ಯವಸ್ಥೆಯನ್ನು ಜೋಡಿಸುವ ಬಗ್ಗೆ ಬಹುಶಃ ಎಲ್ಲಕ್ಕೂ ಸಂಬಂಧಪಟ್ಟ ಹಾಗೆ ಚಿಂತನೆ ಆಯಿತು. ಅನೇಕ ಕಡೆಗಳಲ್ಲಿ ಬಹುಶಃ ಕೋಲಾರದಂತಹ ಪ್ರದೇಶಗಳಲ್ಲಿ ಫ್ಲೋರೈಡ್ ಎನ್ನುವಂತಹ water contentನಲ್ಲಿ heavy metals ಇದೆ. ಆ heavy metalsನ್ನು absorb ಮಾಡುವಂತಹ ಒಂದು ವ್ಯವಸ್ಥೆಗೆ ಏನು ಮಾಡಬಹುದು ಎನ್ನುವುದರ ಬಗ್ಗೆ ಚಿಂತನೆಯನ್ನು ಮಾಡಿದಾಗ ಬಹುಶಃ ಅದಕ್ಕೆ ಇವತ್ತು ಅದರಲ್ಲಿ ಸಮಗ್ರವಾಗಿ ಅಧ್ಯಯನ ಮಾಡುವಂತಹ ಸಂದರ್ಭದಲ್ಲಿ ವೆಟಿಕುರಾ ಕಲ್ಟಿವೇಷನ್ ಬಗ್ಗೆ ಸಾಕಷ್ಟು ಪ್ರೋತ್ಸಾಹ ಸಿಕ್ಕಿದೆ. ಈ ಎಲ್ಲಾ ಗುಣಗಳು ಅದರಲ್ಲಿ ಇದೆ. 15 ಅಡಿಯಷ್ಟು ಆಳಕ್ಕೆ ಹೋಗಿ ಒಂದು ರೀತಿಯಲ್ಲಿ leaving Nile ಎಂದು ಹೇಲುವಂತಹ ವ್ಯವಸ್ಥೆ ಇದೆ. ಇದು ಚೈನಾ ದೇಶದಲ್ಲಿ, ನೂರು ದೇಶಗಳಲ್ಲಿ ಇದು ಬಹಳಷ್ಟು ಪಸರಿಸುತ್ತಿದೆ. ಇದರ ಬಗ್ಗೆ ಯೋಜನೆಗಳನ್ನು ಹಾಕಿಕೊಳ್ಳುತ್ತಿವೆ. ನಮ್ಮ ಕಡಲತೀರದಲ್ಲಿ ಕಡಲಕೊರೆತವಾಗುವಂತಹ ಪ್ರದೇಶಕ್ಕೆ ಇದನ್ನು ಉಪಯೋಗ ಮಾಡಿದಲ್ಲಿ ನಾವು ಕೋಟ್ಯಾಂತರ ರೂಪಾಯಿಗಳ ಕಲ್ಲುಗಳನ್ನು ಹಾಕುವುದರ ಬದಲು ಇದರ ಬಗ್ಗೆಯೂ ಸರ್ಕಾರವು ಯೋಚನೆಯನ್ನು ಮಾಡಬೇಕು. ಬಹುಶಃ ಈ ನಿಟ್ಟಿನಲ್ಲಿಯೂ ಕೂಡ ಖಂಡಿತವಾಗಿ ಒಂದು ಪರಿಹಾರವನ್ನು ಕಾಣುವುದಕ್ಕೆ ಸಾಧ್ಯವಾಗುತ್ತದೆ. ನೈಸರ್ಗಿಕವಾಗಿ ಅನೇಕ ವಿಕೋಪಗಳಿಗೆ ಪರಿಹಾರವನ್ನು ಈ ಮೂಲಕವಾಗಿ ನಾವು ಮಾಡುವುದಕ್ಕಾಗುತ್ತದೆ ಎಂಬ ಬಗ್ಗೆ ಚಿಂತನೆಯನ್ನು ಕೂಡ ತಮ್ಮ ನಡುವೆ ಹಂಚುವುದಕ್ಕೆ ಇಚ್ಛಿಸುತ್ತೇನೆ. ಕೆಲವು ವರ್ಷಗಳ ಹಿಂದೆ

ನಮ್ಮ ರಾಜ್ಯದಲ್ಲಿರುವಂತಹ ಕಾಡನ್ನು ತ್ವರಿತವಾಗಿ ಬೆಳೆಸುವುದಕ್ಕೆ 33% ಕಾಡು ಇರಬೇಕೆಂಬ ಒಂದು ನಿಯಮಾವಳಿ ಇದೆ. ನಮ್ಮಲ್ಲಿ 20% ಕೂಡ ಕಾಡು ಇಲ್ಲ. ಈ ಹಿನ್ನೆಲೆಯಲ್ಲಿ ಏನು ಮಾಡಬಹುದು ಎಂಬುದರ ಬಗ್ಗೆ ಆಸ್ಟ್ರೇಲಿಯಾ ಪ್ರದೇಶಲ್ಲಿರುವಂತಹ ಅಕೇಶಿಯಾ ಗಿಡವನ್ನು ನೆಡುವ ಮೂಲಕ ಮಾಡಬಹುದು ಎಂಬ ಯೋಚನೆಯನ್ನು ಮಾಡಿದ್ದರು. ಅದರ ಫಲಶ್ರುತಿ ಏನಾಗುತ್ತಿದೆ ಎಂಬುದು ನಮಗೆ ಗೊತ್ತಿದೆ. ಒಂದು ಕಿಲೋಗೆ 5 ಪೈಸೆ ಬೆಳೆ ಬಾಳದಂತಹ ಅಕೇಶಿಯಾ ಗಿಡವನ್ನು ನೆಟ್ಟು ಯಾವ ಪುಣ್ಯಾತ್ಮ ಇದನ್ನು introduce ಮಾಡಿದ್ದಾರೋ ಗೊತ್ತಿಲ್ಲ ಇಡೀ ಪರಿಸರವನ್ನು ಹಾಳು ಮಾಡಿದಂತಹ ಒಂದು ದುಸ್ಥಿತಿ ಉಂಟಾಗಿದೆ. ಅದರ ಬದಲಿಯಾಗಿ ಕರ್ನಾಟಕದ ಒಬ್ಬ Bio-technologist ರನ್ನು ಉತ್ತರ ಆಸ್ಟ್ರೇಲಿಯಾಕ್ಕೆ ಕರೆದುಕೊಂಡು ಹೋಗಿ ಅವರು ಯೋಚನೆಯನ್ನು ಮಾಡುತ್ತಿದ್ದಾರೆ. ಈ ಒಂದು ವೀಡ್ ಇದಕ್ಕೆ ಸಂಬಂಧಪಟ್ಟಂತೆ ಬದಲಿ ವ್ಯವಸ್ಥೆಗಾಗಿ ಚಂದನವನ್ನು ರಕ್ತಚಂದನ, ಚಂದನವನ್ನು ಅಲ್ಲಿ ಬೆಳೆಸುವಂತಹ ನಿಟ್ಟಿನಲ್ಲಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇದು ಬಹುಶಃ ಮುಂದೆ ಕರ್ನಾಟಕಕ್ಕೆ ಮಾತ್ರವಲ್ಲ ಭಾರತಕ್ಕೆ ಗಂಧ ಎಲ್ಲಿಯಾದರೂ ಬರಬೇಕಿದ್ದರೆ ಉತ್ತರ ಆಸ್ಟ್ರೇಲಿಯಾದಿಂದ ಬರಬೇಕಾಗುತ್ತದೆ. ನಮ್ಮಲ್ಲಿ ಚಂದನದ ನಾಡು ಗಂಧದ ನಾಡು ಎಂದು ಹೇಳುವಂತಹದ್ದನ್ನು ವ್ಯಾಪಕವಾಗಿ ನಾವು ಚಳುವಳಿಯನ್ನು ಮಾಡುವುದರ ಮೂಲಕ ಪುನರಪಿ ಅದಕ್ಕೆ ಜೀವ ಕೊಡುವುದಕ್ಕೆ ಸಾಧ್ಯವಾದಾಗ ಮಾತ್ರ ಒಂದು ರೀತಿಯಲ್ಲಿ ಆರ್ಥಿಕವಾಗಿ ಶಕ್ತಿಯನ್ನು ಸಂಪಾದಿಸಬಹುದು. ಅದೇ ರೀತಿಯಲ್ಲಿ ಬೇಕಾಗುವಂತಹ ರೈತರಿಗೆ additional ಆಗಿ value added crop ನ್ನು ಮಾಡುವುದಕ್ಕಾಗಿ ಅನುಕೂಲವಾಗಬಹುದು. ಈ ಬಗ್ಗೆ ಸಮಗ್ರ ವಾದಂತಹ ಪ್ರೋತ್ಸಾಹವನ್ನು ಸರ್ಕಾರದ ಕಡೆಯಿಂದ ನಿಶ್ಚಿತವಾಗಿ ನಾವು ಮಾಡಬೇಕಾಗಿದೆ. ನೀರಾವರಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿರುವುದು 2.11 ಲಕ್ಷ ಹೆಕ್ಟೇರ್‌ನಲ್ಲಿ ನೀರಾವರಿ ಪ್ರದೇಶವನ್ನು ವಿಸ್ತರಿಸುವುದಕ್ಕೆ ಸರ್ಕಾರದ ಸಂಕಲ್ಪವಾಗಿದೆ. ಕೃಷ್ಣ ಕೊಳ್ಳ ಮತ್ತು ಭದ್ರಾ ಮೇಲ್ದಂಡೆ ಯೋಜನೆ, ಸಣ್ಣ ಕೆರೆ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವಂತಹ ಒಂದು ಯೋಜನೆ ಯನ್ನು ಕೂಡ ನಿಗಧಿತ ಅವಧಿಯಲ್ಲಿ ಆಗುವಂತಹ ನಿಟ್ಟಿನಲ್ಲಿ ಸರ್ಕಾರವು ಕ್ರಮವನ್ನು ಕೈಗೊಳ್ಳಬೇಕು. ಕರಾವಳಿ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಪಕ್ಕದ ಜಿಲ್ಲೆಗಳಿಗೂ ಕೂಡ ನೆರವಾಗುವಂತಹ ನಿಟ್ಟಿನಲ್ಲಿ ಪಶ್ಚಿಮವಾಹಿನಿ ಯೋಜನೆ

ಯನ್ನು ಕೂಡ ಅನುಷ್ಠಾನಕ್ಕೆ ತರಬೇಕೆಂಬ ನಿಟ್ಟಿನ ಬಗ್ಗೆ ನಾನು ಒತ್ತಾಯ ವನ್ನು ಮಾಡುತ್ತಿದ್ದೇನೆ. 13 ದಿನಗಳು ಕರಾವಳಿ ಪ್ರದೇಶಗಳಲ್ಲಿ ಹರಿಯುತ್ತಿದೆ. ಅದರಿಂದ 2000 ಟಿಎಂಸಿ ನೀರು ಇವತ್ತು ಸಮುದ್ರವನ್ನು ಸೇರುತ್ತಿದೆ. ನಾವು ಇವತ್ತು ಇದನ್ನು ಸ್ವಲ್ಪ ಹೋಲಿಕೆ ಮಾಡಿದರೆ ಕೃಷ್ಣಾದಲ್ಲಿ ಹರಿಯುವಂತಹ ನೀರು ಕರ್ನಾಟಕ ರಾಜ್ಯದಲ್ಲಿ 1200 ಟಿಎಂಸಿ. ಕಾವೇರಿಯಲ್ಲಿ ಹರಿಯುವಂತಹ ನೀರು 800 ಟಿಎಸಿ. ಈ 2000 ಟಿಎಂಸಿಯಷ್ಟು ನೀರನ್ನು ಬಹುಶಃ ಕರಾವಳಿ ಜಿಲ್ಲೆಗಳಲ್ಲಿ ಹರಿಯುವಂತಹ ನೀರಿಗೆ ಪಶ್ಚಿಮವಾಹಿನಿಗೆ ಒಂದು ಪರಿಹಾರವಿದ್ದರೆ ಎರಡನೆಯ ಸೌಭಾಗ್ಯ ಸಂಜೀವಿನಿ ಎಂದು ಹೇಳುವಂತಹ ನಿಟ್ಟಿನಲ್ಲಿ ಯಾವ ರೀತಿಯಾಗಿ ಮಾಡಬಹುದು ಎಂದು ಸಮಗ್ರವಾದಂತಹ ರೂಪುರೇಷೆ ಕೂಡ ಸರ್ಕಾರದ ಮುಂದೆ ಇದೆ. ಇದರ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿದಲ್ಲಿ ಕೇವಲ ನಮ್ಮ ಕರಾವಳಿ ಜಿಲ್ಲೆಗೆ ಮಾತ್ರವಲ್ಲ ಪಕ್ಕದಲ್ಲಿರುವಂತಹ ಅನೇಕ ಜಿಲ್ಲೆಗಳಿಗೆ ನೀರನ್ನು ಉಣಿಸುವಂತಹ ನೀರಾವರಿ ಇರಬಹುದು, ಕುಡಿಯುವ ನೀರಿಗೆ ವಿತರಣೆಯನ್ನು ಮಾಡುವಂತಹ ಶಕ್ತಿ ನಮ್ಮ ಕ್ಷೇತ್ರಗಳಿಗೆ ಇದೆ. ಬಹುಶಃ ಈ ನಿಟ್ಟಿನಲ್ಲಿ ಇಷ್ಟು ವರ್ಷಗಳಲ್ಲಿ ಯಾವುದೇ ಸರ್ಕಾರವು ಯೋಚನೆಯನ್ನು ಮಾಡಿಲ್ಲ. ನಮ್ಮ ಸರ್ಕಾರವು ಈ ಬಗ್ಗೆ ಯೋಚನೆಯನ್ನು ಮಾಡಬೇಕೆಂಬ ಮಾತನ್ನು ಹೇಳುತ್ತಿದ್ದೇನೆ. ಇದನ್ನು ಕಾರ್ಯರೂಪಕ್ಕೆ ತರುವಂತಹ ವ್ಯವಸ್ಥೆಯನ್ನು ನಾವು ಮಾಡಬಹುದು.

(6-20 PM)

ನಮ್ಮಲ್ಲಿರುವಂತಹ Water inflow ಹೇಗಿದೆ ಎಂದರೆ, ಸಾಧಾರಣ ವಾಗಿ ಜೂನ್‌ನಿಂದ ಅಕ್ಟೋಬರ್ ತನಕ 87% Water inflow ಇದೆ. ನೆರೆ ರೂಪದಲ್ಲಿ ಹೊರಗಡೆಗೆ ಹರಿದುಹೋಗುತ್ತದೆ. ಬೇರೆ ಸಂದರ್ಭದಲ್ಲಿ ಡಿಸೆಂಬರ್ ನಿಂದ ಫೆಬ್ರವರಿಯ ತನಕ 12% ಇದೆ. ಮಾರ್ಚ್‌ನಿಂದ ಮೇ ತನಕ ಕೇವಲ 1%. ಈ ಒಂದು ಪರ್ಸೆಂಟ್ ಇರುವುದರಿಂದ ನದಿಗಳು ಬತ್ತಿ ಹೋಗುತ್ತವೆ. 87% ಇರುವ ಸಂದರ್ಭದಲ್ಲಿ ನೆರೆ ನೀರನ್ನು ಉಪಯೋಗ ಮಾಡುವುದು ಹೇಗೆ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ.

ಬೇರೆ ಸಂದರ್ಭದಲ್ಲಿ ಸಿಹಿ ನೀರನ್ನು Preserve ಮಾಡುವಂತಹ ನಿಟ್ಟಿನಲ್ಲಿ ಯಾವ ರೀತಿ ಕಾರ್ಯತಂತ್ರ ಮಾಡಿಕೊಳ್ಳಬೇಕು ಎನ್ನುವ ಬಗ್ಗೆ ಸಮಗ್ರವಾಗಿ ಯೋಚನೆ ಮಾಡಿದರೆ, ಆ ಕರಾವಳಿ ಜಿಲ್ಲೆಗಳನ್ನು ಸಹ ಸಮೃದ್ಧವಾಗಿ ಮಾಡಬಹುದು. ಪಕ್ಕದ ಜಿಲ್ಲೆಗಳಿಗೆ ಬೇಕಾಗುವಂತಹ ನೀರನ್ನು ಉಳಿಸುವುದಕ್ಕೆ ಸಾಧ್ಯವಾಗುತ್ತದೆ.

ಗೋಸಂಪತ್ತಿನ ಬಗ್ಗೆ ಕೂಡ ಸಾಕಷ್ಟು ಚರ್ಚೆಗಳಾಗಿವೆ. ನನ್ನ ಸರ್ಕಾರವನ್ನು ನಾನು ಅಭಿನಂದಿಸುತಿದ್ದೇನೆ. ವಿಶೇಷವಾಗಿ ಎರಡು ಗೋವು ಗಳಿದ್ದರೂ ಸಾಕು ಒಂದು ಎಕರೆ ಜಾಗದಲ್ಲಿ ಸಾವಯವ ಗೊಬ್ಬರದ ಮೂಲಕ ಸ್ವಾವಲಂಬಿಯಾಗಿರುವಂತಹ ಜೀವನವನ್ನು, ಸ್ವಾವಲಂಬಿಯಾಗಿರು ವಂತಹ ಕೃಷಿಯನ್ನು ಒಬ್ಬರೈತ ಮಾಡಬಲ್ಲ. ಅಷ್ಟು ಮಾತ್ರವೇ ಅಲ್ಲ. ಅನೇಕ ರೀತಿಯಲ್ಲಿ ಅದರ by Product ನ ಮೂಲಕ ತನ್ನ ಜೀವನವನ್ನು enrich ಮಾಡಿಕೊಳ್ಳಬಲ್ಲ. ಇಂತಹ ನಿಟ್ಟಿನಲ್ಲಿ ಕೇವಲ ಧಾರ್ಮಿಕ ಭಾವನೆಗಳಿಗೆ ಮಾತ್ರವಲ್ಲ, ರೈತನ ಆರ್ಥಿಕ ಅಂಪನ್ಮೂಲಗಳನ್ನು ಹೆಚ್ಚಿಸುವಂತಹ ಶಕ್ತಿ ಇರುವಂತಹ ಈ ಒಂದು ಗೋಸಂಪತ್ತನ್ನು ಉಳಿಸುವಂತಹ ನಿಟ್ಟಿನಲ್ಲಿ ರಾಜ್ಯಸರ್ಕಾರ ದಿಟ್ಟ ನಿರ್ಧಾರ ತೆಗೆದುಕೊಳ್ಳಬೇಕು ಹಾಗೂ ಗೋ ಹತ್ಯೆ ನಿಷೇಧಕ್ಕೆ ಸಂಬಂಧಪಟ್ಟಂತಹ ಕಾನೂನನ್ನು ಈ ಅಧಿವೇಶನದಲ್ಲೇ ಜಾರಿ ಮಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಆಹಾರ ಭದ್ರತೆಗೆ ಸಂಬಂಧಪಟ್ಟಂತೆ ಇರುವ ಅನೇಕ ಯೋಜನೆ ಗಳಿಗೆ ಸಂಬಂಧಪಟ್ಟ ಹಾಗೆ ಒಂದು ಸೂತ್ರವನ್ನು ನಮ್ಮ ಪಕ್ಷದ ದೆಹಲಿ ಸರ್ಕಾರ ಮಾಡಿರುವ ಒಂದು ಯೋಜನೆಯನ್ನು ಹೇಳುವುದಕ್ಕೆ ಇಚ್ಚಿಸುತ್ತೇನೆ. ಕೇಂದ್ರೀಯ ಭಂಡಾರ ಎನ್ನುವ ಒಂದು ಯೋಜನೆಯನ್ನು ಮಾಡಿದ್ದಾರೆ. ಅಲ್ಲಿರುವ ಅನೇಕ multistoreyed ಗೆ ಸಂಬಂಧಪಟ್ಟಂತೆ State co-operative unitಗಳ ಮೂಲಕ ಯಾವ ರೀತಿಯ ಯೋಜನೆಗಳನ್ನು ಅವರು ಮಾಡಿಕೊಂಡಿದ್ದಾರೆ ಎಂದರೆ Food Corporation of India ಯಿಂದ ನೇರವಾಗಿ foodgrains ನ್ನು ಮತ್ತು ಬೇರೆ ವಸ್ತುಗಳನ್ನು ಖರೀದ ಮಾಡಿಕೊಂಡು 10 ಕಿಲೋ ಪ್ಯಾಕೇಜ್ ಮಾಡಿಕೊಂಡು ಅದರಲ್ಲಿ ಕಾರ್ಡಿಗೊಂಡು ರೀತಿಯಲ್ಲಿ ಕೊಡುವಂತಹ ನಿಟ್ಟಿನಲ್ಲಿ ಒಂದು ಯೋಜನೆ ಯನ್ನು ಹಾಕಿಕೊಂಡಿದ್ದಾರೆ. ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಮಾನ್ಯ ಅಧ್ಯಕ್ಷರ ಮೂಲಕ ಇದನ್ನು ನಾನು ಮಾನ್ಯ ಆಹಾರ ಸಚಿವರಿಗೆ ಇದನ್ನು

ಕಳುಹಿಸಿಕೊಡುತ್ತೇನೆ. ತಾವು ಅದನ್ನು ದಯವಿಟ್ಟು ಗಮನಿಸಿ. ಬಹಳ ಉಪಯುಕ್ತವಾದಂತಹ ಯೋಜನೆಯನ್ನು ನಾವು ಅನುಷ್ಠಾನಕ್ಕೆ ತಂದರೆ ಹೆಚ್ಚಿನ ಲಾಭ ಇದರಿಂದ ಖಂಡಿತ ಆಗುತ್ತದೆ.

ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಸರ್ಕಾರ ಯೋಜನೆಯನ್ನು ಮಾಡಿದೆ. ತದಡಿ ಬಂದರು ನಿರ್ಮಾಣ ಸುಮಾರು ಮೂರು ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ, ಹೊನ್ನಾವರ ಬಂದರು, ಅವಿ ರೀತಿಯ ಅನೇಕ ಯೋಜನೆಗಳ ಬಗ್ಗೆ ಯೋಜನೆಯನ್ನು ಮಾಡಿದೆ. ನಾನು ಮಾನ್ಯ ಅಧ್ಯಕ್ಷರ ಮೂಲಕ ವಿನಂತಿ ಮಾಡುವುದು ಏನೆಂದರೆ, ಬಹುಶಃ ನಮ್ಮ ಈ ಒಂದು ವ್ಯವಸ್ಥೆಯಲ್ಲಿ ನಾವು ಸಮಗ್ರವಾಗಿ ಯೋಚನೆ ಮಾಡಬೇಕಾಗಿದೆ. ಇದರಲ್ಲಿ Transparency Act ಗೆ ಸಂಬಂಧಪಟ್ಟ ಹಾಗೆ ಬಂದಿರುವ ತೊಡಕುಗಳು ಯಾವುದು?

ಅಧ್ಯಕ್ಷರು : ಬೇಗ ಮುಗಿಸಿ.

ಶ್ರೀ ಎನ್. ಯೋಗೀಶ್ ಭಟ್ : Transparency Act ನಿಂದ ಬಂದಿರುವಂತಹ ತೊಡಕುಗಳು ಯಾವುದು? ಖಾಸಗಿ ಸಹಭಾಗಿತ್ವದ ಬಂಡವಾಳ ಹೂಡಿಕೆಗೆ ಇರುವಂತಹ ತೊಂದರೆಗಳೇನು? ಯಾವ ರೀತಿ ನಾವು ಅನುಕರಣೆ ಮಾಡಿದರೆ ಆಗುತ್ತದೆ. ಪಕ್ಕದ ಗುಜರಾತ್ ರಾಜ್ಯದಲ್ಲಿ ಯಶಸ್ಸನ್ನು ಹೇಗೆ ಪಡೆದರು? ಪಕ್ಕದ ಬೇರೆ ರಾಜ್ಯಗಳು ಹೇಗೆ ಯಶಸ್ಸು ಪಡೆದರು? ಚೀನಾ ದೇಶ ಇವತ್ತು ಸಂಪದ್ಭರಿತವಾಗಿರುವುದಕ್ಕೆ ಈ ಬಂಡವಾಳ ಊಡಿಕೆಯನ್ನು ಹೇಗೆ ಯಶಸ್ವಿಯಾಗಿ ಮಾಡಿದರು? ಈ ಬಗ್ಗೆ ಸಮಗ್ರವಾದ ಚಿಂತನೆಯನ್ನು ಮಾಡಿಕೊಂಡು, ನಾವು ಅದನ್ನು ಯೋಚನೆ ಮಾಡಿ, ಇಂಧನ ಕ್ಷೇತ್ರದಲ್ಲಿ, ಆರೋಗ್ಯ ಕ್ಷೇತ್ರದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ, ನೀರಾವರಿ ಕ್ಷೇತ್ರದಲ್ಲಿ ಹಾಗೂ ಪ್ರಮುಖವಾಗಿರುವಂತಹ ಈ ಕ್ಷೇತ್ರದಲ್ಲಿ ಖಾಸಗಿ ಸಹಭಾಗಿತ್ವ ಸಾಧ್ಯವೇ ಎನ್ನುವ ಬಗ್ಗೆ ಚಿಂತನೆಯನ್ನು ಮಾಡಬೇಕಾಗುತ್ತದೆ.

Tourism ಗೆ ಈ ಸಲ ಸುಮಾರು ರೂ.200 ಕೋಟಿಗಿಂತ ಹೆಚ್ಚಳವಾಗಿ ಅಂದರೆ ಸುಮಾರು 240 ಕೋಟಿ ರೂಪಾಯಿಗಳನ್ನು ಕೊಟ್ಟಿರುವಂತಹದ್ದು. ಅನೇಕ tourism destination ಗಳನ್ನು ರಾಜ್ಯಾದ್ಯಂತ ಬೆಳೆಸುವತಹ ನಿಟ್ಟಿನಲ್ಲಿ, ಕರಾವಳಿ ಪ್ರದೇಶದಲ್ಲಿ cruise tourism ಇರಬಹುದು, Marine aquarium Park ಇರಬಹುದು, Golf Course

ಇರಬಹುದು ಇನ್ನಿತರ ಅನೇಕ ಯೋಜನೆಗಳನ್ನು ಸರ್ಕಾರ ಹಮ್ಮಿಕೊಂಡಿರುವಂತಹದ್ದು ಇರಬಹುದು ಅದು ಕೂಡ ಖಾಸಗಿ ಸಹಭಾಗಿತ್ವದಲ್ಲಿ ಯೋಜನೆಯನ್ನು ಹಾಕಿಕೊಡಿರುವಂತಹದ್ದು. ಮುಂದಿನ ದಿವಸಗಳಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ಪ್ರಮುಖವಾದಂತಹ ಕೇಂದ್ರವಾಗುವಂತಹ ನಿಟ್ಟಿನಲ್ಲಿ ಖಂಡಿತವಾಗಿ ನಾವು ಕೆಲಸವನ್ನು ಮಾಡಬೇಕಾಗಿದೆ.

ಅಧ್ಯಕ್ಷರು : ಮುಗಿಸಿ.

ಶ್ರೀ ಎನ್.ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಬೇಗ ಮುಗಿಸುತ್ತೇನೆ. ವಿದ್ಯುತ್ ಸಮಸ್ಯೆಗಳಿಗೆ ಪರಿಹಾರಕ್ಕೆ ಸಂಬಂಧಪಟ್ಟ ಹಾಗೆ ಇವತ್ತು 8 ಸಾವಿರ ಮೆಗಾವ್ಯಾಟ್‌ನಿಂದ 18 ಸಾವಿರ ಮೆಗಾವ್ಯಾಟ್ ತನಕ ಯೋಜನೆಯನ್ನು ಸರ್ಕಾರ ಮಾಡಿದೆ. ಊರು ವರ್ಷಗಳಲ್ಲಿ ಅದನ್ನು ಸಾಧಿಸುತ್ತದೆ ಎನ್ನುವ ಛಲ ಕೂಡ ಇಟ್ಟಿದೆ. ಆದರೆ, ಅದರ ಜೊತೆಯಲ್ಲಿ ವಿದ್ಯುತ್ ಕ್ಷೇತ್ರದಲ್ಲಿ ಹೂಡಿಕೆಯನ್ನು ಮಾಡುವಂತಹ ನಿಟ್ಟಿನಲ್ಲಿ CFL ಮತ್ತು LED ಗೆ ಸಂಬಂಧಪಟ್ಟ ಹಾಗೆ ವಿಶೇಷವಾದ ಪ್ರೋತ್ಸಾಹ ಹಾಗೂ ಯಾವ ರೀತಿ ಸೋಲಾರ್‌ನಲ್ಲಿ ನಾವು ಬಿಲ್‌ನಲ್ಲಿ discount ಕೊಡುತ್ತೇವೆ ಆ ರೀತಿಯಲ್ಲಿ ಇದರಲ್ಲಿ discount ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. Sprinkle Irrigation ಮತ್ತು Drip Irrigation ಗೆ ಸಂಬಂಧಪಟ್ಟ ಹಾಗೆ, Drip Irrigation ನಲ್ಲಿ 7% ಮಾತ್ರ Water consume ಆಗುವಂತಹದ್ದು. ಅದೇ ರೀತಿ ಇದರಲ್ಲಿ 20% ಮಾತ್ರ Water consume ಆಗುವಂತಹದ್ದು. ನೀರಿನ ಉಳಿತಾಯ ಹಾಗೂ ವಿದ್ಯುತ್ತಿನ ಉಳಿತಾಯ ಆಗುವಂತಹ ನಿಟ್ಟಿನಲ್ಲಿ ಅಂತರ್ಜಲಕ್ಕೆ ಸಂಬಂಧಪಟ್ಟಂತೆ ವಿಶೇಷವಾದ ಒಂದು ನಿಗಮ ಕೂಡ ಆರಂಭ ಮಾಡುವಂತಹದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಬಹುಶಃ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವಂತಹ ಕ್ರಮ ಶ್ಲಾಘನೀಯ. ಸಬ್ಸಿಡಿಗೂ ಮತ್ತು Drip Irrigation, sprinkle Irrigation ಗೂ ಲಿಂಕ್ ಮಾಡಿಕೊಂಡು ವಿದ್ಯುತ್ ಕಡಿತ ಅಥವಾ ಉಳಿತಾಯ ಮಾಡುವ ದೃಷ್ಟಿಯಿಂದ ಯೋಚನೆ ಮಾಡಿರುವಂತಹದ್ದು ಸ್ವಾಗತಾರ್ಹ.

ಇನ್ನೊಂದು ಪ್ರಮುಖವಾಗಿರುವಂತಹದ್ದು ಏನೆಂದರೆ, ಇಷ್ಟೆಲ್ಲಾ ಯೋಜನೆಗಳನ್ನು ಮಾಡಿರುವಂತಹ ಸಂದರ್ಭದಲ್ಲಿ 2010-11ರಲ್ಲಿ ಗ್ರಾಮೀಣ

ಹಾಗೂ ನಗರ ಪ್ರದೇಶಗಳಲ್ಲಿ ವಸತಿ ಸೌಕರ್ಯ ಒದಗಿಸಲು 920 ಕೋಟಿ ರೂಪಾಯಿಗಳನ್ನು ವಿನಿಯೋಗಿಸಿ, ಅದರಲ್ಲಿ ನಗರ ಪ್ರದೇಶದ ವಸತಿಹೀನರಿಗೆ 50 ಸಾವಿರ ಮನೆಗಳನ್ನು ನಿರ್ಮಿಸುವ ಟಾರ್ಗೆಟ್ ಇಟ್ಟುಕೊಂಡಿರುವುದನ್ನು ನಾನು ಈ ಸಂದರ್ಭದಲ್ಲಿ ಸ್ವಾಗತ ಮಾಡುತ್ತೇನೆ. ವಿಶೇಷವಾಗಿ 1 ಲಕ್ಷ 25 ಸಾವಿರ ರೂ. ವೆಚ್ಚದಲ್ಲಿ ಮನೆಗಳ ನಿರ್ಮಾಣದ ಬಗ್ಗೆ ಹಾಕಿಕೊಂಡಿರುವಂತಹ ಯೋಜನೆ. ಇದರ ಜೊತೆಯಲ್ಲಿ ನಾವು ಇವತ್ತು waste ನಿಂದ ಪವರ್ ತಯಾರಿಸುವ ಬಗ್ಗೆ, Nano Technology ಉಪಯೋಗ ಮಾಡುವುದರ ಬಗ್ಗೆ, ಬೇರೆ ಬೇರೆ latest ಆಗಿರುವ Solar Technology ಉಪಯೋಗ ಮಾಡುವುದರ ಬಗ್ಗೆ, Tidal waves, Wind energy ಉಪಯೋಗ ಮಾಡುವುದರ ಬಗ್ಗೆ ಕೂಡ ಯೋಚನೆ ಮಾಡಬೇಕು. ಇದಕ್ಕೆ ಹಣವನ್ನು ಎಲ್ಲಿಂದ ಕ್ರೋಡೀಕರಿಸಬಹುದು, ಸಂಪನ್ಮೂಲಗಳನ್ನು ಹೇಗೆ ಜೋಡಿಸಬಹುದು ಎಂಬ ಯೋಚನೆಯನ್ನು ಕೂಡ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ತುಂಬಾ ಸಂತೋಷದಿಂದ ಹೇಳುವುದಕ್ಕೆ ಇಚ್ಛಿಸುವುದೇನೆಂದರೆ, ನಾನು Sub-ordinate Legislation Committee ಯ ಛೇರ್ಮನ್ ಆಗಿರುವ ಹಿನ್ನೆಲೆಯಲ್ಲಿ ಹೇಳುವುದಾದರೆ ನಮ್ಮ ಎಲ್ಲಾ ಸದಸ್ಯರ ಸಹಕಾರ ದಿಂದ ಒಂದು ಒಳ್ಳೆಯ ವರದಿಯನ್ನು ವಿಧಾನಸಭೆಯಲ್ಲಿ ಮಂಡನೆ ಮಾಡಿದ್ದೇನೆ. ಇವತ್ತು ಅದಕ್ಕೆ Multinational company ಯವರು ಹೈಕೋರ್ಟ್‌ನಲ್ಲಿ Case ಹಾಕಿದರು. ಹೈಕೋರ್ಟ್‌ನಲ್ಲಿ Artificially created light energy ಯಾವುದಿದೆ, ಅದನ್ನು optic fiber cable ಮೂಲಕ ಹೋಗುವಾಗ it attracts all the equity Properties ಎಂದು ಹೇಳುವಂತಹದ್ದು. ಈ ಆಧಾರದಲ್ಲಿ ಅದನ್ನು taxable commodity VAT ವ್ಯಾಪ್ತಿಯಲ್ಲಿ ಬರುವಂತಹದ್ದು ಎಂದು ಹೇಳುವುದನ್ನು ಅದನ್ನು ಮಂಡಿಸಿ, ಅದರ ಆಧಾರದಲ್ಲಿ ಇವತ್ತು 25 ಕೋಟಿ ರೂಪಾಯಿಗಳು ಒಂದು ಕಂಪನಿಯಿಂದ ಸರ್ಕಾರಕ್ಕೆ ಬರುವುದಕ್ಕೆ ಸಾಧ್ಯವಾಗಿದೆ. ಅಷ್ಟು ಮಾತ್ರವಲ್ಲ. frequency ಆಧಾರದ ಕೂಡ ಮಾಡಬಹುದು ಎನ್ನುವುದನ್ನು ಎರಡನೇ ವರದಿ ಆಧಾರದಲ್ಲಿ ಇವತ್ತು 50 ಕೋಟಿ ರೂಪಾಯಿಗಳು ಸರ್ಕಾರಕ್ಕೆ ಬಂದಿದೆ. ಇದನ್ನು ನಾನು ಏತಕ್ಕೆ ಹೇಳುವುದಕ್ಕೆ ಇಚ್ಛಿಸುತ್ತೇನೆಂದರೆ, ಹೈಕೋರ್ಟ್‌ನಿಂದ ಮಾತ್ರವಲ್ಲ. ಇವತ್ತು ಸುಪ್ರೀಂ ಕೋರ್ಟ್‌ನಲ್ಲಿ ನನಗೆ

O.30 F-76

ಸಿಕ್ಕಿರುವಂತಹ ಮಾಹಿತಿ ಆಧಾರದ ಮೇಲೆ Supreme Court ನಿಂದ latest ವರದಿ ಏನೆಂದರೆ, Interim order ಬಂದಿದೆ. ನಾವು ಕೊಟ್ಟಿರುವಂತಹ ವರದಿಯನ್ನು upheld ಮಾಡಿಕೊಂಡು, ಹೈಕೋರ್ಟ್ upheld ಮಾಡಿರುವಂತಹದ್ದನ್ನೇ ಸುಪ್ರೀಕೊರ್ಟ್‌ನಲ್ಲಿ interim ತೀರ್ಪಿನಲ್ಲಿ ಅದನ್ನು upheld ಮಾಡಿದೆ. ಈ ಅನುಭವದಲ್ಲಿ ಬರುವಂತಹ ಸಂಪನ್ಮೂಲಗಳನ್ನು ಕ್ರೋಢೀಕರಿಸುವಂತಹ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಯೋಚನೆ ಮಾಡಬಹುದು.

ಅಧ್ಯಕ್ಷರು : ಬೇಗ ಮುಗಿಸಿ.

ಶ್ರೀ ಎನ್. ಯೋಗೀಶ್ ಭಟ್ : ತಾವು ಲೆಕ್ಕ ಹಾಕಿದರೆ 10 ಸಹಸ್ರ ಕೋಟಿ ರೂಪಾಯಿಗಳನ್ನು ರಾಜ್ಯದ ಬೊಕ್ಕಸಕ್ಕೆ ತುಂಬಿಸುವುದಕ್ಕೆ ಸಾಧ್ಯತೆಯಿದೆ. ಇಂತಹ ಅನೇಕ ಯೋಜನೆಗಳೊಂದಿಗೆ, ಕೊನೆಯದಾಗಿ ಹೇಳುವುದಾದರೆ, Gross State Domestic Product ಗೆ ಸಂಬಂಧಪಟ್ಟಂತೆ 2 ಲಕ್ಷದ 71 ಸಾವಿರ ಕೋಟಿ ರೂಪಾಯಿಗಳು ಇದೆ. ಸುಮಾರು ರೂ.85 ಸಾವಿರ ಕೋಟಿಯ ತನಕ ನಾವು ಸಾಲವನ್ನು ತೆಗೆದುಕೊಳ್ಳಬಹುದು. 50% ತನಕ ಸಾಲವನ್ನು ತೆಗೆದುಕೊಳ್ಳಬಹುದು ಎನ್ನುವುದು ತಜ್ಞರ ಅಭಿಪ್ರಾಯವಾಗಿದೆ. ಈ ಹಿನ್ನೆಲೆಯಲ್ಲಿ ಮೂರು ವರ್ಷಗಳ ಟಾರ್ಗೆಟ್ ಇಟ್ಟುಕೊಂಡು irrigationನ ಎಲ್ಲಾ ಪ್ರಾಜೆಕ್ಟ್‌ಗಳನ್ನು ವಿಶೇಷವಾಗಿ ವಿದ್ಯುತ್ ಕ್ಷೇತ್ರದಲ್ಲಿರುವಂತಹ ಎಲ್ಲಾ ಪ್ರಾಜೆಕ್ಟ್‌ಗಳನ್ನು, Infrastructure ಕ್ಷೇತ್ರದಲ್ಲಿರುವಂತಹ ಪ್ರಾಜೆಕ್ಟ್‌ಗಳನ್ನು ಗುರಿಯಿಟ್ಟುಕೊಂಡು ನಾವು ಮಾಡುವುದಕ್ಕೆ ಸಾಧ್ಯತೆಯಿದೆ. ಇದರಿಂದ ಅದ್ಭುತವಾದ ಬದಲಾವಣೆಯನ್ನು ನಾವು ರಾಜ್ಯದಲ್ಲಿ ಕಾಣುವುದಕ್ಕೆ ಸಾಧ್ಯವಾಗುತ್ತದೆ. ಈ ಸಂದರ್ಭದಲ್ಲಿ ಸಾಮಾಜಿಕ ನ್ಯಾಯದಿಂದ ಹಿಡಿದು ಮೂಲಭೂತ ಸೌಲಭ್ಯದ ತನಕ ಸಮಗ್ರವಾಗಿರುವಂತಹ ಯೋಚನೆ, ಚಿಂತನೆ ಮಾಡಿರುವಂತಹ ನಮ್ಮ ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತಿದ್ದೇನೆ. ಮಾತ್ರವಲ್ಲ, ಈ ಎಲ್ಲವನ್ನೂ ಕಾರ್ಯರೂಪಕ್ಕೆ ತರುವಂತಹ ಶಕ್ತಿಯನ್ನು ತಾಯಿ ಭುವನೇಶ್ವರಿಯು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇಡೀ ನಮ್ಮ ಸರ್ಕಾರದ ಸದಸ್ಯರಿಗೆ ಕೊಡಲಿ ಎನ್ನುವ ಹಾರೈಕೆಯೊಂದಿಗೆ, ಮಾತನಾಡಲು ಕೊಟ್ಟ ಅವಕಾಶಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ 2010-11ನೇ ಸಾಲಿನ ಆಯವ್ಯಯವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಸುಮಾರು 70,063 ಕೋಟಿ ರೂಪಾಯಿಗಳ

ಅಂದಾಜನ್ನು ಮಂಡನೆ ಮಾಡಿದ್ದಾರೆ. ಮಂಡನೆಯನ್ನು ಮಾಡಿ ಯಾವ್ಯಾವ ಮೂಲದಿಂದ ಸಂಪನ್ಮೂಲವನ್ನು ಕ್ರೋಡೀಕರಿಸುತ್ತೇವೆ ಎನ್ನುವ ವಿಚಾರವನ್ನು ಕೂಡ ಸ್ಪಷ್ಟನೆ ಮಾಡಿದ್ದಾರೆ. ಅದರಲ್ಲಿ ಸ್ವತಂತ್ರವಾಗಿ ನಮ್ಮ ಸರ್ಕಾರದ, ನಮ್ಮ ರಾಜ್ಯದ ತೆರಿಗೆ ಬಾಬ್ತಿನಿಂದ 36, 228 ಕೋಟಿ ರೂಪಾಯಿಗಳನ್ನು, ಕೇಂದ್ರ ಸರ್ಕಾರದ ತೆರಿಗೆ ಬಾಬ್ತಿನಿಂದ 7,645 ಕೋಟಿ ರೂಪಾಯಿಗಳನ್ನು, ಕೇಂದ್ರ ಸರ್ಕಾರದ ಧನ ಸಹಾಯಕದ ಮುಖಾಂತರ 5,530 ಕೋಟಿ ರೂಪಾಯಿಗಳನ್ನು ಮತ್ತು ಸರ್ಕಾರದ ತೆರಿಗೆಯೇತರ ರಾಜಸ್ವದಿಂದ 2,819 ಕೋಟಿ ರೂಪಾಯಿಗಳನ್ನು, ಒಟ್ಟು ರಾಜಸ್ವ ಜಮೆಯನ್ನು 53,638 ಕೋಟಿ ರೂಪಾಯಿಗಳನ್ನು ಅಂದಾಜು ಮಾಡಿದ್ದಾರೆ. ಬಂಡವಾಳದ ಲೆಕ್ಕದಲ್ಲಿ 11,354 ಕೋಟಿ ರೂಪಾಯಿಗಳನ್ನು ಮತ್ತು ಸರ್ಕಾರಿ ಸ್ವಾಮ್ಯದ ಸಂಘಸಂಸ್ಥೆಗಳ ಮುಖಾಂತರ 5,776 ಕೋಟಿ ರೂಪಾಯಿಗಳ ಸಂಪನ್ಮೂಲವನ್ನು ಕ್ರೋಢೀಕರಿಸುವಂತಹ ದೃಷ್ಟಿಯಲ್ಲಿ ಪ್ರಸ್ತಾಪವನ್ನು ಮಾಡಿದ್ದಾರೆ.

(ಈ ಹಂತದಲ್ಲಿ ಮಾನ್ಯ ಎನ್. ಯೋಗೀಶ್ ಭಟ್ ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಆದರೆ, ನಾವು ಈ ಅಂಕಿ-ಅಂಶಗಳನ್ನು ಮತ್ತು ಅವರು ಮಂಡಿಸಿರುವಂತಹ ಆಯವ್ಯಯವನ್ನು ಹಿಂದಿನ ವರ್ಷಗಳಿಗೆ ಅವಲೋಕನೆಯನ್ನು ಮಾಡಿ ಈ ರೀತಿ ಈ ವರ್ಷ ಇದನ್ನು ಸಾಧನೆ ಮಾಡುವುದಕ್ಕೆ, ಈ ಸಂಪನ್ಮೂಲವನ್ನು ಕ್ರೋಢೀಕರಿಸಿ ಕರ್ನಾಟಕ ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ಮಾಡುವುದಕ್ಕೆ ಸಾಧ್ಯವೇ ಎನ್ನತಕ್ಕಂತಹ ಪ್ರಶ್ನೆಯನ್ನು ಹಿಂದಿನ ಕೆಲವು ವರ್ಷಗಳ ಅಂಕಿ-ಅಂಶಗಳನ್ನು ತೆಗೆದುಕೊಳ್ಳುವುದರ ಮುಖಾಂತರ ಸಮರ್ಥನೆಯನ್ನು ಮಾಡಬಹುದು.

ಆದರೆ, ಈಗಾಗಲೇ ಆರೂವರೆ ಗಂಟೆ ಆಗಿದೆ. ಅಂಕಿ-ಸಂಖ್ಯೆಗಳ ಸಮರ್ಥನೆಯನ್ನು ಮಾಡಲಿಕ್ಕೆ ಬಹುಶಃ 2-3 ಗಂಟೆಗಳ ಕಾಲವಾದರೂ ಸಾಕಾಗುವುದಿಲ್ಲ. ಸುಮಾರು 2004-05 ನೇ ವರ್ಷದಿಂದ ತೆಗೆದುಕೊಂಡು, ಕರ್ನಾಟಕ ರಾಜ್ಯದಲ್ಲಿ ಯಾವ್ಯಾವ ವರ್ಷದಲ್ಲಿ ಎಷ್ಟೆಷ್ಟು ರಾಜಸ್ವ ಜಮೆಯನ್ನು ಪಡೆಯಲಿಕ್ಕೆ, ಸಂಪನ್ಮೂಲ ಕ್ರೋಢೀಕರಣ ಮಾಡಲಿಕ್ಕೆ ಪ್ರಯತ್ನಪಟ್ಟಿತ್ತು? ಯಾವ್ಯಾವ ಹಂತದಲ್ಲಿ revenue surplus ಆಗಿದೆ? ಯಾವ್ಯಾವ ವರ್ಷದಲ್ಲಿ ಅದನ್ನು ಕಳೆದುಕೊಂಡಿದೆ? ಯಾವ ಮಟ್ಟದಲ್ಲಿದೆ? ಎನ್ನುವ ಅಂಕಿ

ಸಂಖ್ಯೆಗಳನ್ನು ಕೊಡಲಿಕ್ಕೆ ಬಹಳ ಸಮಯ ಬೇಕಾಗುತ್ತದೆ. ಅದಕ್ಕೋಸ್ಕರ ಈ ಸಂದರ್ಭದಲ್ಲಿ ಎರಡು ವರ್ಷಗಳಿಗೆ ಸೀಮಿತವಾಗಿ ಹೇಳುವುದಾದರೆ, ಕಳೆದ 2008–09ನೇ ಸಾಲಿನಲ್ಲಿ ನಮ್ಮ ರಾಜಸ್ವ ಜಮೆ 47,240 ಕೋಟಿ ರೂಪಾಯಿಗಳ ಅಂದಾಜು ಮಾಡಲಾಗಿದೆ. ಅಂದಾಜು ಮಾಡಿದ್ದಕ್ಕೆ ಪ್ರತಿಯಾಗಿ 43,291 ಕೋಟಿ ರೂಪಾಯಿಗಳನ್ನು ಇವತ್ತು ವೆಚ್ಚ ಮಾಡಲಾಗಿದೆ. ಹಣ ಸಂಪನ್ಮೂಲ ಕ್ರೋಢೀಕರಣವಾಗಿದೆ. ಅದೇ ರೀತಿ 2009–10ರಲ್ಲಿ ಪರಿಷ್ಕೃತ ಅಂದಾಜಿನ ಪ್ರಕಾರ, 46,406 ಕೋಟಿ ರೂಪಾಯಿ ಸಂಪನ್ಮೂಲದ ಕ್ರೋಢೀಕರಣ ಮಾಡಿತ್ತು. ಅದರಲ್ಲಿ ಈವರೆಗೆ ಎಷ್ಟು ಕ್ರೋಢೀಕರಣವಾಗಿದೆ ಎನ್ನುವ ಮಾಹಿತಿ, ಬಹುಶಃ ನಾವೆಲ್ಲಾ ನೋಡಿದ್ದೇವೆ, ಎಲ್ಲಾ ಇಲಾಖೆಗಳನ್ನು ಸುತ್ತಿಕೊಂಡು ಬರುತ್ತಿದ್ದೇವೆ. ಸಂಪನ್ಮೂಲ ಕ್ರೋಡೀಕರಣವಾಗಿದ್ದರೆ, ಎಲ್ಲಾ ಇಲಾಖೆಗಳಲ್ಲಿ ಯಾವುದೇ ಕಾರ್ಯಕ್ರಮ ಗಳನ್ನು ಕೇಳುವುದಕ್ಕೆ ಹೋದರೆ, ಇಲ್ಲಾ 40% ಹಣ ಮಾತ್ರ release ಆಗಿದೆ, 20% ಆಗಿದೆ, ಏನು ಮಾಡುವುದು? ಬಂದಿಲ್ಲ ನೋಡೋಣವೆಂದು ಭರವಸೆಗಳು ಬರುತ್ತಿವೆ. ಆದ್ದರಿಂದ ಪೂರ್ಣ ಪ್ರಮಾಣದಲ್ಲಿ ನಾವು ಇವತ್ತು ನಿರೀಕ್ಷಣೆಯನ್ನು ಮಾಡಲಿಕ್ಕೆ ಆಗಿಲ್ಲ. 40% 50–55% ಎಂದು ಹೇಳುತ್ತಾರೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಇಡೀ ಯೋಜನಾ ವೆಚ್ಚದಲ್ಲಿ 25 ಸಾವಿರ ಕೋಟಿ ರೂಪಾಯಿಗಳ ಮೇಲೆ ದಾಟುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಇಂತಹ ಅನೇಕ ಸಮಸ್ಯೆಗಳನ್ನು ನಾವು ಎದುರುಗಾಣುತ್ತಿದ್ದೇವೆ. ಅದರ ಜೊತೆಯಲ್ಲಿ ಒಂದು ಸಮಸ್ಯೆ ನಮಗೆ ಕಾಡುತ್ತಿರುವುದೇನೆಂದರೆ, ತೆರಿಗೆ ಯೇತರ ರಾಜಸ್ವದ ಬಗ್ಗೆ ನಾಲ್ಕಾರು ಬಜೆಟ್‌ಗಳಿಂದ ಪ್ರಸ್ತಾಪ ಮಾಡಿಕೊಂಡು ಬಂದಿದ್ದಾರೆ. ಆದರೆ ಅದರಲ್ಲಿ ಯಾವತ್ತೂ ತಮ್ಮ ಗುರಿಯನ್ನು ಸಾಧನೆ ಮಾಡಲಿಕ್ಕೆ, ಅದರ ಹತ್ತಿರ ಹೋಗುವುದಕ್ಕೂ ಸಾಧ್ಯತೆ ಆಗಲಿಲ್ಲ. ಕಾರಣವೇನು ಎನ್ನುವುದೂ ಗೊತ್ತಾಗಲಿಲ್ಲ. ನಮ್ಮ ದೇಶದಲ್ಲಿಯೇ ತೆರಿಗೆ ಯೇತರ ರಾಜಸ್ವವನ್ನು ಕ್ರೋಡೀಕರಣ ಮಾಡತಕ್ಕಂಥ ನಿಟ್ಟಿನಲ್ಲಿ ಪ್ರಾಮಾಣಿಕ ವಾದಂಥ ಪ್ರಯತ್ನ ನಡೆದಿದೆ ಅಥವಾ ಅದರಲ್ಲಿ ಏನು ನ್ಯೂನತೆಗಳು ಇವೆ ಎನ್ನುವುದು ನನಗೆ ಗೊತ್ತಿಲ್ಲ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಸರ್ವೇ ಪ್ರಕಾರ ಇಡೀ ದೇಶದಲ್ಲಿ ನಮ್ಮ ರಾಜ್ಯ ಬಹಳ ಹಿಂದೆ ಉಳಿದಿದೆ. ಒಟ್ಟಾರೆ ಈ ರಾಜ್ಯದ ಆಂತರಿಕ ಉತ್ಪನ್ನದಲ್ಲಿ ಅದನ್ನು ವಿಶ್ಲೇಷಣೆ ಮಾಡತಕ್ಕಂಥ ಸಂದರ್ಭದಲ್ಲಿ ಆರ್ಥಿಕ ತಜ್ಞರು ಹೇಳುತ್ತಾ ಬಂದಿದ್ದಾರೆ. ಇದರಲ್ಲಿ ಏನಾಗುತ್ತದೆ ಎನ್ನುವುದಕ್ಕೆ ನಾನು ಹೇಳುತ್ತೇನೆ. ಮೊನ್ನೆ ಮಾನ್ಯ

ಮುಖ್ಯಮಂತ್ರಿಗಳು ಈ ರಾಜ್ಯದ ರಸ್ತೆಗಳೆಲ್ಲವೂ ಹಾಳಾಗಿವೆ, ಅದಕ್ಕೋಸ್ಕರ 500 ರೂಪಾಯಿಯ ಶುಲ್ಕವನ್ನು ಅದರ ಮೇಲೆ ಹಾಕುತ್ತೇನೆಂದು ಪ್ರಸ್ತಾಪ ಮಾಡಿದರು. ಶುಲ್ಕವನ್ನು ಹೇಗೆ ಹಾಕುತ್ತಾರೆಂದರೆ, 16 ಟನ್ ಅದಿರು ತುಂಬಿಕೊಂಡು ಬರುವಂಥ ಲಾರಿಗಳಿಗೆ 500 ರೂಪಾಯಿ, ಅಂದರೆ 15$^{1/2}$ ಟನ್ ಹಾಕಿಕೊಂಡು ಬರುತ್ತಾರೆ, ಆಗ ಏನು ಮಾಡುತ್ತೀರಿ ನೀವು 500 ಹಾಕುವುದಿಲ್ಲವೇ? ಅವರು Weighment sheet ಕೊಡುತ್ತಾರೆ. ಅವನು easily ತಪ್ಪಿಸಿಕೊಂಡು ಹೋಗುತ್ತಾನೆ. 16 ಟನ್ ಹಾಕುವುದೇ ಇಲ್ಲ. ಮಾನ್ಯ ಮುಖ್ಯಮಂತ್ರಿಗಳ ಬಜೆಟ್ ಭಾಷಣದಲ್ಲಿ ನೋಡಿದಾಗ, ತೆರಿಗೆಯೇತರ ರಾಜಸ್ವ ಬರುತ್ತದೆ ಎನ್ನುವ ಒಂದು ವಿಚಾರವನ್ನು ಹೇಳಿದೆ. ಇದು ತಪ್ಪಿದ್ದರೆ ಮಾನ್ಯ ಮುಖ್ಯಮಂತ್ರಿಗಳು ತಿಳಿವಳಿಕೆ ಹೇಳಬೇಕು. ಇದನ್ನು ನಾನು ಆ ರೀತಿ ಓದಿಕೊಂಡಿದ್ದೇನೆ. ಬೇರೆ ಅಭಿಪ್ರಾಯ ಇದ್ದರೆ ಹೇಳಬೇಕು. ಇದು ಆ ರೀತಿ ಇದೆ. ಶುಲ್ಕ (tax) ಬನ್ನು ಕದಿಯುವವನು 16 ಟನ್ ಎಂದು ಇದ್ದರೆ 15$^{1/2}$ ಟನ್ ಹಾಕಿಕೊಂಡು ಬರುತ್ತಾನೆ. ಆಗ ನೀವು ಹೇಗೆ ಹಿಡಿಯುತ್ತೀರಿ? ಆ tax ಬರುವುದೇ ಇಲ್ಲ. ಈ ರೀತಿ 40 ಟನ್, 50 ಟನ್ ಹಾಕಿಕೊಂಡು ಹೋಗುವಂಥದ್ದು ಅಲ್ಲ. ಯಾವುದೇ ಲಾರಿ ಆಗಲಿ, ಅದಿರನ್ನು ತುಂಬಿಕೊಂಡು ಬಂದು, ಇವತ್ತು ಈ ರಾಜ್ಯದಲ್ಲಿ ಅದಿರು ತುಂಬಿಕೊಂಡು ಬರುವ ಲಾರಿಗಳಿಂದಲೇ ಎಲ್ಲಾ ರಸ್ತೆಗಳು ಹಾಳಾಗಿ, ಈ ದೇಶದಲ್ಲಿ ಎಲ್ಲಾ ಆತಂರಿಕವಾದ ವ್ಯವಸ್ಥೆ, ಅವ್ಯವಸ್ಥೆ ಆಗಿರುವಂಥದ್ದೇ ಅದಿರು ತುಂಬಿಕೊಂಡು ಹೋಗುವಂಥ ಲಾರಿಗಳಿಂದ. ಅದರಿಂದ ನಿಜವಾಗಿಯೂ environment ಹಾಳಾಗಿದೆ, ರಸ್ತೆಗಳು ಹಾಳಾಗಿದೆ, ಮಾನಸಿಕ ನೆಮ್ಮದಿ ಹಾಳಾಗಿದೆ, ಇವೆಲ್ಲಾ ಹೋಗಿದೆ, ಆದರೆ ಸರ್ಕಾರದ ಬೊಕ್ಕಸಕ್ಕೆ ಮಾತ್ರ ಹಣವಿಲ್ಲ. ಅದರಲ್ಲಿ ಏನೋ ದೊಡ್ಡ ಮನಸ್ಸು ಮಾಡಿ 500 ರೂಪಾಯಿ ಎಂದು announce ಮಾಡಿದ್ದಾರೆ. ಆದರೆ ಆ 500 ರೂಪಾಯಿಯೂ ಈ ತರಹ ತಪ್ಪಿಹೋಗುವುದ್ಕೆ ದಾರಿ ಮಾಡಿದ್ದೀರಿ, ಆದ್ದರಿಂದ ದಯವಿಟ್ಟು ಇದರ ಬಗ್ಗೆ ಬೇರೆ ಏನಾದರೂ ಅರ್ಥ ಇದ್ದರೆ ತಿಳಿಸಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಅದರ ಜೊತೆಗೆ ಋಣಭಾರ; ನಾವು ಈಗಾಗಲೇ 82,510 ಕೋಟಿಯನ್ನು ದಾಟಿದ್ದೇವೆ. ಆ ಋಣಭಾರವನ್ನು ಇಳಿಸಿಕೊಳ್ಳುವುದಕ್ಕೆ ಪ್ರತಿ ವರ್ಷ ಅಸಲು ಮತ್ತು ಬಡ್ಡಿ ಸೇರಿ 10,028 ಕೋಟಿಗೂ ಅಧಿಕವಾದಂತಹ

ಹಣವನ್ನು ನಾವು ಸಂದಾಯ ಮಾಡುವುದಕ್ಕೆ ಹೋಗುತ್ತೇವೆ. ಆ ಸಂದಾಯ ಮಾಡುವಂತಹ ಕಾಲದಲ್ಲಿ, ರೂ.60 ಸಾವಿರ ಕೋಟಿ ರೂ.70 ಸಾವಿರ ಕೋಟಿ ಬಜೆಟ್ ನಲ್ಲಿ ನಾವು 10 ಸಾವಿರ ಕೋಟಿ ಚಿಲ್ಲರೆಯನ್ನು ಮರುಪಾವತಿಯನ್ನೇ ಮಾಡಿಕೊಂಡು ಬಂದರೆ ನಮ್ಮ ಅಭಿವೃದ್ಧಿ ಎತ್ತ ಕಡೆ ಹೋಗುತ್ತದೆ, ಎನ್ನುವುದನ್ನೂ ಸಹಾ ತಿಳಿದುಕೊಳ್ಳಬೇಕಾಗುತ್ತದೆ. ನೀವು ಬೇರೆ ರಾಜ್ಯಗಳಿಗೆ ಹೋಲಿಸಿದರೆ, ನಮ್ಮ ರಾಜ್ಯದ ಋಣಭಾರ ಬಹಳ ಕಡಿಮೆ ಇದೆ ಎಂದು ಶ್ಲಾಘನೆಯನ್ನು ತಾವು ಮಾಡುತ್ತೀರಿ. ಆದರೆ ನಮ್ಮ ಅಭಿವೃದ್ಧಿ ಬಹಳ ಕುಂಠಿತವಾಗಿದೆ. ಯಾವುದೇ ಒಂದು ಇಲಾಖೆಗೆ ಹೋದರೂ 40 ಭಾಗ, 50 ಭಾಗ ಹಣ ಖರ್ಚಾಗಿಲ್ಲ. ನಾವು ಏನು ತೆರಿಗೆ, ರಾಜಸ್ವವನ್ನು ನಿರೀಕ್ಷಣೆ, ಮಾಡುತ್ತೇವೆ, ಒಳ್ಳೆಯ ಪ್ರಮಾಣದಲ್ಲಿ ಆ ತೆರಿಗೆಯನ್ನು ವಸೂಲಿ ಮಾಡದೇ ಹೋದರೆ ಈ ಆರ್ಥಿಕ ಪರಿಸ್ಥಿತಿ ಉದ್ಭವವಾಗುತ್ತದೆ, ಆರ್ಥಿಕ ಮುಗ್ಗಟ್ಟು ಉದ್ಭವವಾಗುತ್ತದೆ. ಅದಕ್ಕೋಸ್ಕರ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಯೋಜನಾ ಗಾತ್ರವನ್ನೇನೋ ಬಹಳ ದೊಡ್ಡದು ಮಾಡಿದ್ದೀರಿ. ರಾಜ್ಯದ ಆರ್ಥಿಕ ಪ್ರಗತಿಯ ಉನ್ನತಿಗೋಸ್ಕರ 31 ಸಾವಿರ ಕೋಟಿ ರೂಪಾಯಿಗಳ ಯೋಜನಾ ಗಾತ್ರವನ್ನು ಹೆಚ್ಚಿಸಿದ್ದೇವೆ ಎಂದು ತಾವು ಹೇಳುವುದಾದರೆ, ಬಹುಶಃ ಯೋಜನಾ ಗಾತ್ರಗಳನ್ನು ಹೆಚ್ಚಿಸಿಕೊಂಡು ಹೋದಂತೆಲ್ಲಾ ಅದರ ಹಿಂದೆ ಅಭಿವೃದ್ಧಿ ಕಾರ್ಯಗಳ ಕುಂಠಿತವೂ ಆಗುತ್ತದೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸಂಪನ್ಮೂಲಗಳನ್ನು ಕ್ರೋಡೀಕರಿಸಿ ಯೋಜನೆಗೆ ನಾವು ಒದಗಿಸದೇ ಹೋದ ಕಾಲದಲ್ಲಿ ನಿಜವಾಗಿಯೂ ಯೋಜನೆಯ ಗಾತ್ರ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಿದೆ ಎನ್ನುವ ಮಾತನ್ನು ಸಹಾ ನಾವು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಕಳೆದ ಸಾರಿ ಯೋಜನೆಗೆ, $29^{1/2}$ ಸಾವಿರ ಕೋಟಿ ರೂಪಾಯಿಗಳನ್ನು ಪರಿಷ್ಕೃತ ಅಂದಾಜಿನಲ್ಲಿ ನಾವು ಪ್ರಕಟಣೆ ಮಾಡಿದ್ದೀರಿ. ಆದರೆ ಸಿಕ್ಕಿದ್ದು ಎಷ್ಟು? ಇನ್ನೂ 25 ಸಾವಿರ ಕೋಟಿ ರೂಪಾಯಿಯನ್ನು reach ಮಾಡಲಿಕ್ಕೆ ಆಗಿಲ್ಲ. ಈ ರೀತಿ ಯೋಜನೆಗೆ ಯಾವ ಹಣವನ್ನು ನಾವು ವಿನಿಯೋಗ ಮಾಡುತ್ತೇವೆಯೋ ಅದನ್ನು ಪೂರ್ಣ ಪ್ರಮಾಣದಲ್ಲಿ ಎಲ್ಲಿಯವರೆಗೆ ಈ ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ನಾವು ಪೂರ್ಣ ಪ್ರಮಾಣದ ಅಭಿವೃದ್ಧಿಯನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ನಾವು ನಮಗೆ ಬರತಕ್ಕಂಥ ಸಂಪನ್ಮೂಲದಲ್ಲಿ ಸಾಲ, ಬಡ್ಡಿ ಮತ್ತು ಯೋಜನೇತರ

ವೆಚ್ಚಗಳನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲ. ನಾವೇನಿದ್ದರೂ ಯೋಜನಾ ವೆಚ್ಚದಲ್ಲಿಯೇ ಕಡಿಮೆ ಮಾಡಬೇಕು. ಯೋಜನಾ ಗಾತ್ರವನ್ನು ಕಡಿಮೆ ಮಾಡಬೇಕು. ಇಲ್ಲದಿದ್ದರೆ ನೇರವಾಗಿ ಸಾಲಕ್ಕೆ ಹೋಗಬೇಕು. ಬಂಡವಾಳಕ್ಕೆ ಹೋಗಬೇಕು. ಈ ರೀತಿ ಒಂದು ವ್ಯವಸ್ಥೆ ಇರುವುದರಿಂದ ನಾವು ಆದಷ್ಟು ಪ್ರಮಾಣದಲ್ಲಿ ನಮ್ಮ ರಾಜಸ್ವ ಜಮೆಯನ್ನು ಹೆಚ್ಚಿನ ಮಟ್ಟದಲ್ಲಿ ಉತ್ಪತ್ತಿ ಮಾಡತಕ್ಕಂಥ ರೀತಿಯಲ್ಲಿ ಪ್ರಾಮಾಣಿಕವಾದಂಥ ಪ್ರಯತ್ನ ಮಾಡಿ ಆಡಳಿತ ಯಂತ್ರವನ್ನು ಚುರುಕುಗೊಳಿಸುವಂಥದ್ದು ಸರ್ಕಾರದ ಆದ್ಯ ಕರ್ತವ್ಯವಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಇನ್ನೂ ಅಂಕಿ–ಸಂಖ್ಯೆಗಳ ಪ್ರಕಾರ ಹೋಗುವುದು ಬೇಡ. ಆದರೆ ಕೆಲವೊಂದು ವಿಚಾರಗಳನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟನೆ ಮಾಡುವುದಕ್ಕೆ ಬಯಸುತ್ತೇನೆ. ಇವತ್ತು ತೆರಿಗೆಯಲ್ಲಿ ಏಳೂವರೆ ಸಾವಿರ ಕೋಟಿ ರೂಪಾಯಿಗಳನ್ನು ಅಬಕಾರಿಯಿಂದ reach ಮಾಡುತ್ತೇವೆ ಎಂದು ಭುಜ ತಟ್ಟಿಕೊಂಡು ಹೇಳುತ್ತೀರಿ ಬಹಳ ಸಂತೋಷ. ಆದರೆ ಆ ಏಳೂವರೆ ಸಾವಿರ ಕೋಟಿ ರೂಪಾಯಿಗಳ ತೆರಿಗೆಯನ್ನು ನೀವು ಸಂಪಾದನೆ ಮಾಡಬೇಕಾದರೆ ಯಾರ್‍ಯಾರ ಕಣ್ಣೀರು ಬೀಳುತ್ತಿವೆ ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. ಇವತ್ತು ಅಬಕಾರಿಯಲ್ಲಿ ಏನಾಗಿದೆ? ನನ್ನ ತಾಲ್ಲೂಕಾದ ಅರಸೀಕೆರೆಯಲ್ಲಿ, ನಿನ್ನೆ ದಿವಸ ಯುಗಾದಿ ಹಬ್ಬ.

ಸುಮಾರು 200 ರಿಂದ 300, 500 ಸಂಖ್ಯೆಯಲ್ಲಿ ಸ್ತ್ರೀಶಕ್ತಿ ಸಂಘದ ಮಹಿಳೆಯರು ಬಂದು ಅಬಕಾರಿ ಕಚೇರಿ ಹತ್ತಿರ ಠಿಕಾಣಿ ಹೂಡಿ ಧರಣಿ, ಸತ್ಯಾಗ್ರಹ ಪ್ರಾರಂಭ ಮಾಡಿದರು. ಅಲ್ಲಿಗೆ ಹೋದರೆ ಅವರು ಹೇಳುತ್ತಾರೆ: ಅವರೆಲ್ಲರೂ ಮುದುಡಿ(ಬಿ) ತಾಂಡಾದ ಮಹಿಳೆಯರು. ನಿನ್ನೆ C.I, Dy.SP ಎಲ್ಲರೂ ಇದ್ದರು. ಅವರು ಹೇಳುವ ಪ್ರಕಾರ ಸುಮಾರು 17 ಬ್ರಾಂದಿ ಶಾಪ್‌ಗಳು ಊರಿನಲ್ಲಿವೆ, 15 ಜನರು ಮಾರಾಟ ಮಾಡುತ್ತಾರೆ. ಒಂದೊಂದು ಕೇರಿಯಲ್ಲಿ ಒಬ್ಬೊಬ್ಬರು ಅಂಗಡಿ ಇಟ್ಟುಕೊಂಡಿದ್ದಾರೆ! ನಾವು ಇನ್ಸ್‌ಪೆಕ್ಟರ್ ಅವರನ್ನು ಕೇಳಿದರೆ, ಸುಮಾರು 22,000 ಕೇಸ್‌ಗಳನ್ನು ನಾನು ಮಾರಾಟ ಮಾಡಬೇಕು. ಆದರೆ, ಯಾವ ರೀತಿ ಮಾರಾಟ ಮಾಡಬೇಕು? ಈ ರೀತಿ ಊರಲ್ಲೆಲ್ಲಾ ವ್ಯಾನ್‌ಗಳ ಮೂಲಕ ಸಪ್ಲೈ ಮಾಡದೇ ಹೋದರೆ, ಮತ್ತು ಸಪ್ಲೈ ಮಾಡಿ ಕಡ ಕಟ್ಟದೇ ಹೋದರೆ 15,000, 15,500 ಕೇಸ್‌ಗಳನ್ನು ಮಾರಾಟ ಮಾಡುವ ಹೊತ್ತಿಗೆ ಸುಸ್ತಾಗುತ್ತದೆ. ಇನ್ನು 22,000 ಕೇಸ್‌ಗಳನ್ನು

ನಾನೇನಾದರೂ ಹಾಕಬೇಕೆಂದಿದ್ದರೆ ಈ ಕೆಲಸವನ್ನೂ ನಾವು ಮಾಡಬೇಕಾಗುತ್ತದೆ! ಏನು ಮಾಡುವುದು? ಇಲ್ಲದಿದ್ದರೆ, 22,000 ಕೇಸ್‌ಗಳು ಹೋಗುವುದಿಲ್ಲ ಮತ್ತು ಟಾರ್ಗೆಟ್ ಸಹ ರೀಚ್ ಆಗುವುದಿಲ್ಲ ಎಂಬ ಮಾತನ್ನು ಅವರು ಹೇಳುತ್ತಾರೆ!

ಆದರೆ, ನೀವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಬಲವಂತವಾಗಿ ಈ ರಾಜ್ಯದ ರೈತರಿಗೆ ಸಾರಾಯಿ, ಬ್ರಾಂದಿ ಕುಡಿಸಿ ರಾಜ್ಯದ ವರಮಾನವನ್ನು ಹೆಚ್ಚಿಸಿಕೊಳ್ಳಬೇಕೆ? ಈ ರಾಜ್ಯದ ತೆರಿಗೆಯನ್ನು ಹೆಚ್ಚಿಸಿಕೊಳ್ಳಬೇಕೆ? ಈ ರಾಜ್ಯದ ತೆರಿಗೆ ಹೆಚ್ಚಿಸಿಕೊಂಡು, ಬಡವರು ಕೊಟ್ಟ ತೆರಿಗೆಯನ್ನೇ ಪುನಃ ಅವರಿಗೇ ನೀವು ಕೊಡುತ್ತೀರಿ. ಯಾವ್ಯಾವ ರೂಪದಲ್ಲಿ ಕೊಡುತ್ತೀರಿ ಎಂದರೆ, ಒಂದು ಕೆ.ಜಿ.ಗೆ 2–3 ರೂ. ಅಕ್ಕಿಯನ್ನು ಸಬ್ಸಿಡಿ ಮೂಲಕ ಕೊಡುತ್ತೀರಿ. ಅದರ ಜೊತೆಗೆ, ಮತ್ತೆ ಫಲಾನುಭವಿಗಳಿಗೆ ಧನ ಸಹಾಯ ಕೊಡುವುದು, ಸಾಲ–ಸೌಲಭ್ಯಗಳ ಮೂಲಕ ಕೊಡುತ್ತೀರಿ. 'ಸಂಧ್ಯಾ ಸುರಕ್ಷಾ' ಯೋಜನೆ ಮೂಲಕ 400 ರೂ.ಗಳನ್ನು ಕೊಡುತ್ತೀರಿ. ಈ ರೂಪದಲ್ಲಿ ಕೊಡುವುದು ಮತ್ತು ಪುನಃ ಆತನ ರಕ್ತವನ್ನೇ ಇಂಜೆಕ್ಷನ್ ರೂಪದಲ್ಲಿ ಹೀರಿಕೊಂಡಂತೆ ಆಗುತ್ತದೆ. ಇವತ್ತು ಅವರ ಬಾಳು ಯಾವ ರೀತಿ ನಡೆಯುತ್ತಿದೆಯೆಂದರೆ, '3–3 ದಿವಸಗಳಾದವೋ ಏನೋ, ಮನೆ ಸೇರಿಕೊಂಡು....' ಎಂದು ಅವರ ಹೆಂಡತಿಯರು ಹೇಳುತ್ತಾರೆ. ಅವರು ಬರುತ್ತಾನೆ, ಮೊದಲು ಒಂದು ಕ್ವಾರ್ಟರ್ ಅನ್ನು ಈ ಮನೆಯಲ್ಲಿ ಕುಡೀತಾನೆ. ಇಲ್ಲಿ ಕುಡಿದು ಮೇಲುಗಡೆ ಇರುವ ಮನೆಗೆ ಹೋಗುತ್ತಾನೆ, ಅಲ್ಲಿಯೂ ಒಂದು ಕ್ವಾರ್ಟರ್ ಕುಡೀತಾನೆ. ಅಲ್ಲಿ ಸಾಲ ಹೆಚ್ಚಾಯಿತೆಂದರೆ, ಇತ್ತ ಕಡೆ ಇರುವ ಮನೆಗೆ ಬಂದು ಒಂದು ಕ್ವಾರ್ಟರ್ ಕುಡೀತಾನೆ. ಒಟ್ಟು ನಾಲ್ಕು ಕ್ವಾರ್ಟರ್ ಕುಡಿದು, ಹೆಂಡತಿ–ಮಕ್ಕಳನ್ನು ಆಚೆ ತಳ್ಳಿ ಆತ ಒಬ್ಬನೇ ಒಳಗೆ ಮಲಗಿಕೊಳ್ಳುತ್ತಾನೆ. ಹೆಂಡತಿ–ಮಕ್ಕಳು ಬೀದಿಯಲ್ಲಿ ಸಾಯುತ್ತಾರೆ. ಇಂತಹ ಪರಿಸ್ಥಿತಿ ಇದೆ.

ಇವತ್ತು ಎಲ್ಲಿಯೇ ನೋಡಿ, ರಾತ್ರಿ ಹೋದರೂ ಪಾನ್ ಬೀಡಾ ಅಂಗಡಿಯಲ್ಲೂ ಬ್ರಾಂದಿ ಸಿಗುತ್ತಿದೆ! ಯಾವುದೇ ನೈಟ್ ಹೋಟೆಲ್, ಡಾಬಾದಲ್ಲೂ ನೋಡಿ, ಎಲ್ಲಿಯೇ ನೋಡಿ, ಬ್ರಾಂದಿ ಸಿಗುತ್ತಿದೆ. ಬ್ರಾಂದಿಯನ್ನು ಮಾರುವುದಾದರೆ, ಇದರಿಂದ ಆದಾಯ ಗಳಿಸಿ ಈ ರಾಜ್ಯದ ಕನಸು ಕಟ್ಟಬೇಕೆ? ಭವ್ಯ ರಾಜ್ಯದ 'ಕರ್ನಾಟಕ ಭುವನೇಶ್ವರಿ ಜಯವಾಗಲಿ' ಎಂದು ಹೇಳಬೇಕೆ? ಇಂತಹ ಹೀನಾಯ ಪರಿಸ್ಥಿತಿ ಇರುವುದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಬಹುಶಃ ಇದನ್ನೇನಾದರೂ ನೀವು

ಉದಾಸೀನತೆಯಿಂದ ತೆಗೆದುಕೊಂಡರೆ, ಹಳ್ಳಿ-ಹಳ್ಳಿಗಳಲ್ಲೂ ಈ ಸರ್ಕಾರದ ಮೇಲೆ ಕೆಟ್ಟ ಭಾವನೆ ಮೂಡುತ್ತದೆ. ಇದು ನಿಜವಾಗಿಯೂ ಒಂದು ದಿವಸ ದೊಡ್ಡ ರೂಪ ತಾಳಿ ಸ್ತ್ರೀಶಕ್ತಿ ಸಂಘದವರು ಬಂದು ಏನು ಅವ್ಯವಹಾರ ವಾಗುತ್ತಿದೆಯೋ, ಇದರ ವಿರುದ್ಧ ನಿಜವಾಗಿಯೂ ಒಂದು ಓರಾಟ ನಡೆಸಿ ನಿಮ್ಮ ಸರ್ಕಾರಕ್ಕೆ ಒಂದು ರೀತಿಯ ಕೆಟ್ಟ ಹೆಸರು ಬರುವ ರೀತಿಯಲ್ಲಿ ಪರಿಸ್ಥಿತಿ ಎತ್ತ ಕಡೆ ತಿರುಗುತ್ತದೋ? ನೀವೇನಾದರೂ ನಾವು ಹೇಳುವುದನ್ನು ಉದಾಸೀನತೆ ಯಿಂದ ತೆಗೆದುಕೊಂಡರೆ, ಅದು ನಿಮಗೆ ಬಿಟ್ಟದ್ದು. ನಾನು ಹೇಳುತ್ತಿದ್ದೇನೆ. ನಾವು ಗ್ರಾಮಾಂತರ ಪ್ರದೇಶದಲ್ಲಿರುವವರು. ಇದರ ಬಗ್ಗೆ ನಿಮಗೂ ಗೊತ್ತಿದೆ, ಎಲ್ಲರಿಗೂ ಗೊತ್ತಿದೆ, ಎಲ್ಲಾ ಮಾನ್ಯ ಶಾಸಕರುಗಳಿಗೂ ಗೊತ್ತಿದೆ. ಅವುಗಳನ್ನು ನೋಡಬೇಕು. ಆದುದರಿಂದ, ಇವತ್ತಿನ ದಿವಸ ದಯಮಾಡಿ ಆದಷ್ಟು ಬೇಗ ಅವುಗಳನ್ನು ನಿಲ್ಲಿಸಬೇಕು.

ಶ್ರೀವೈ.ಎನ್. ರುದ್ರೇಶ್ ಗೌಡ : ಅಧ್ಯಕ್ಷರೆ, ಮಾನ್ಯ ಶಿವಲಿಂಗೇಗೌಡರು ಹೇಳುತ್ತಿರುವ ವಿಚಾರ ನಿಜ. ಮದ್ಯದ ಅಂಗಡಿಗಳನ್ನು ತೆರೆಯಲು ಮುಕ್ತವಾಗಿ ಲೈಸೆನ್ಸ್ ನೀಡಿದ್ದರ ಪರಿಣಾಮ ಎಲ್ಲಾ ಹಳ್ಳಿ-ಹಳ್ಳಿಗಳಲ್ಲೂ, ಮನೆ-ಮನೆ ಗಳಲ್ಲೂ, ರಸ್ತೆಗಳಲ್ಲೂ ಮದ್ಯದ ಅಂಗಡಿಗಳನ್ನು ತೆರೆದು ಮದ್ಯ ಮಾರಾಟ ಮಾಡುವ ವ್ಯವಸ್ಥೆ ಬಂದಿದೆ. ಇದರಿಂದ ಮಹಿಳೆಯರ ಮನಸ್ಸಿಗೆ ಭಾರೀ ನೋವುಂಟಾಗಿದೆ. ಅವರಿಗೆ ಶಾಂತಿ-ಸಮಾಧಾನ ಸಿಗುತ್ತಿಲ್ಲ. ಮಾನ್ಯ ಸದಸ್ಯರು ಹೇಳುತ್ತಿರುವ ವಿಚಾರ ನಿಜವಾಗಿಯೂ ವಾಸ್ತವಾಂಶಗಳಿಂದ ಕೂಡಿದೆ. ಸರ್ಕಾರ ಈ ವಿಚಾರದಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕಾಗುತ್ತದೆ.

ಶ್ರೀ ಬಿ.ರಮಾನಾಥ ರೈ : ಮಾನ್ಯ ಸಭಾಧ್ಯಕ್ಷರೆ, ಮದ್ಯದ ಅಂಗಡಿ ಮಾತ್ರ ಬಂದ್. ಆದರೆ, ಈ ಕಡೆ, ಈ ಕಡೆ ಸಿಗುತ್ತದೆ!

ಶ್ರೀ ಕೆ.ಎಂ.ಶೀವಲಿಂಗೇಗೌಡ : ಕಿರಾಣಿ ಅಂಗಡಿಗಳಲ್ಲೂ ಸಿಗುತ್ತದೆ. ಅದರ ಜೊತೆಗೆ, ಇದು ನಮ್ಮ ಸಲಹೆ ಅಷ್ಟೇ. ನಾನು ಯಾರನ್ನೂ ಟೀಕಿಸುವುದಿಲ್ಲ. ಇದರಿಂದ 7,500 ಕೋಟಿ ರೂ.ಗಳನ್ನು ಗಳಿಸಿದ್ದೇವೆಂದು ನೀವು ಭುಜ ತಟ್ಟಿಕೊಳ್ಳುವುದು ಬೇಡ. ಅಲ್ಲಿ ಬಡವ ನಿಜವಾಗಿಯೂ ನಿರ್ಗತಿಕನಾಗಿದ್ದಾನೆ. ಹಳ್ಳಿಗಳಲ್ಲಿ ಹೆಂಗಸರು ಕೂಲಿ ಮಾಡಿಕೊಂಡು ದುಡ್ಡು ತಂದರೆ, ಗಂಡನಾದವನು ಆ ದುಡ್ಡು ಕಸಿದುಕೊಂಡು ಹೋಗಿ ಬ್ರಾಂದಿ ಕುಡಿಯುತ್ತಾನೆ. ಹಿಂದೆ ಸಾರಾಯಿ ಮಾರಾಟ ಮಾಡುತ್ತಿದ್ದಾಗ 10 ರೂ., 20 ರೂ., 30 ರೂ.ಗಳಿಗೆ ತನ್ನ ತೆವಲು ತೀರಿಸಿಕೊಂಡು ಮನೆಗೆ ಬಂದು ಮಲಗುತ್ತಿದ್ದ. ಆದರೆ, ಇವತ್ತು ಕುಡಿತಕ್ಕಾಗಿ ದಿನವೊಂದಕ್ಕೆ 160 ರಿಂದ 170

ರೂ. ಹೋಗುತ್ತಿದೆ! ಒಂದು ಕ್ವಾರ್ಟರ್‌ಗೆ 45 ರೂ. 3–4 ಕ್ವಾರ್ಟರ್ ತೆಗೆದುಕೊಳ್ಳದೇ ಆತನಿಗೆ ನಿಶೆ ಹತ್ತುವುದಿಲ್ಲ. ಆತ ಕುಡಿಯದೇ ಮನೆಗೆ ಹೋಗುವುದಿಲ್ಲ. ನಿಶೆ ಬರಬೇಕೆಂದರೆ, ಮೂರು ಕ್ವಾರ್ಟರ್ ಕುಡಿಯಲೇ ಬೇಕು. ಆತನಿಗೆ ಸಾಲ ಹುಟ್ಟಲಿಲ್ಲವೋ, ಬ್ರಾಂದಿ ಶಾಪಿನದು ಆತನಿಗೆ ಸಾಲ ಕೊಡದೇ ಇದ್ದಾಗ, ಆತನಿಗೆ ಸಾಲ ಹುಟ್ಟದಿದ್ದರೆ, ಆತ ನಿಜವಾಗಿಯೂ ಯಾವ ಊರು, ಹೋಬಳಿ, ಹೆಡ್‌ಕ್ವಾರ್ಟರ್ಸ್‌ನಲ್ಲಿ ಮದ್ಯದ ಅಂಗಡಿ ಇರುತ್ತದೋ, ಅಲ್ಲಿಗೆ ಹೋಗಿ ಒಂದು ಕ್ವಾರ್ಟರ್ ಕುಡಿದು, ಮನೆಗೆ ಹೊತ್ತಿಗೆ ನಿಶೆ ಇಳಿಯುತ್ತಿತ್ತು. ಹೆಂಡತಿ–ಮಕ್ಕಳೊಂದಿಗೆ ಮನೆಯಲ್ಲಿ ಊಟ ಮಾಡಿ ಅಚ್ಚುಕಟ್ಟಾಗಿ ಇರುತ್ತಿದ್ದ. ಆದರೆ, ಇವತ್ತು....

ಶ್ರೀ ಡಿ.ಎನ್. ಜೀವರಾಜ್ : ಶಿವಲಿಂಗೇಗೌಡರೆ, ನೀವು ಕುಡಿಯುವುದಿಲ್ಲ, ಕುಡಿಯದೆ ಏರುವುದು, ಇಳಿಯುವುದು ಗೊತ್ತಾಗುವುದಾದರೂ ಹೇಗೆ?

ಶ್ರೀ ಕೆ.ಎಂ.ಶಿವಲಿಂಗೇಗೌಡ : ನಾವು ಕುಡಿಯದಿದ್ದರೂ, ದಿನನಿತ್ಯವೂ ಇಂತಹ ನೂರಾರು ಸಮಸ್ಯೆ, ವ್ಯಾಜ್ಯಗಳನ್ನು ಬಗೆಹರಿಸುತ್ತಿದ್ದೇವೆ. ನಿನ್ನೆ ಯುಗಾದಿ ಹಬ್ಬ......

ಶ್ರೀ ವೈ.ಎನ್.ರುದ್ರೇಶ್ ಗೌಡ : ಅವರು ಕುಡಿಯುವುದಿಲ್ಲ, ಖರೆ. ಆದರೆ, ವಾಸ್ತವಾಂಶ ಹೇಳುತ್ತಿದ್ದಾರೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಜೀವರಾಜ್‌ರವರೆ, ನಿಮ್ಮ ಕ್ಷೇತ್ರದಲ್ಲಿ ಈ ಸಮಸ್ಯೆ ಇಲ್ಲದಿದ್ದರೆ ನಿಮಗೆ ಕೈ ಮುಗಿಯುತ್ತೇನೆ. ನೀವು ಸುಮ್ಮನಿರಿ. ಆದರೆ, ನಮ್ಮ ಕ್ಷೇತ್ರದಲ್ಲಿ ಈ ಸಮಸ್ಯೆ ಇದೆ. ನಾವು ಹೇಳಿಕೊಳ್ಳುತ್ತಿದ್ದೇವೆ. ನಿಮ್ಮ ಕ್ಷೇತ್ರದಲ್ಲಿ ಈ ಸಮಸ್ಯೆ ಇಲ್ಲದಿದ್ದರೆ ಜನರು ನಿಮಗೆ ಶಹಭಾಷ್‌ಗಿರಿ ಕೊಡಲಿ. ಮಾಧ್ಯಮದವರೆಲ್ಲರೂ ನೋಡುತ್ತಿದ್ದಾರೆ. ನಿಮ್ಮ ಕ್ಷೇತ್ರದಲ್ಲಿ ನಾಳೆ ನೀವು ವೋಟು ಕೇಳುವುದಕ್ಕೆಂದು ಹೋದಾಗ ಸ್ತ್ರೀಶಕ್ತಿ ಸಂಘದವರು ನಿಮ್ಮನ್ನು ತರಾಟೆಗೆ ತೆಗೆದುಕೊಳ್ಳಲು ಸಿದ್ಧರಾಗಿದ್ದಾರೆ. ಅವರು ಮಾರಿಯರು! ಒಲಿದರೆ ಮಾರಿ ಮುನಿದರೆ ಮಾರಿ ಎಂದೇನೋ ಹೇಳುತ್ತಾರಲ್ಲ, ಅದು ಸತ್ಯ. ಮುಂದೆ ಒಂದು ದಿವಸ ಆಗುವ ಆಘಾತವನ್ನು ನೋಡಿ.

ಶ್ರೀ ಸಿ.ಸಿ.ಪಾಟೀಲ್ : ಗೌಡರೆ, ತಾವು ಹೇಳಿದ್ದು ರೆಕಾರ್ಡ್‌ಗೆ ಹೋಗುತ್ತದೆ. ಅದನ್ನು ಕರೆಕ್ಷನ್ ಮಾಡಿ. ಅದು 'ಒಲಿದರೆ ನಾರಿ ಮುನಿದರೆ ಮಾರಿ' ಎಂದಾಗಬೇಕು.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಹೌದೌದು. ಅದನ್ನೂ ಏನಾದರೂ ಮಾಡಿಕೊಳ್ಳಿ, ಮುಂದೆ ಅವರ ಪರಿಣಾಮ ನೋಡಿ.

ಶ್ರೀ ಬಿ.ಸಿ.ಪಾಟೀಲ್ : ಕುಡಿದವರಿಗೆ ಮಾತ್ರ ಅದರ ಅನುಭವ ಇರುತ್ತದೆಂದು ಜೀವರಾಜ್ ರವರು ಹೇಳಿದರು. ಆದರೆ, ಸಿಗರೇಟು ಸೇದುವವರ ಪಕ್ಕದಲ್ಲಿ ಕುಳಿತುಕೊಂಡವರಿಗೂ ಅದರ ಪರಿಣಾಮ ಜಾಸ್ತಿ ಇರುತ್ತದೆ. ಹಾಗೆಯೇ, ಕುಡಿದವರನ್ನು ನೋಡಿದರೆ ಎಲ್ಲವೂ ಗೊತ್ತಾಗುತ್ತದೆ.

ಶ್ರೀ ಕೆ.ಎಂ.ಶೀವಲಿಂಗೇಗೌಡ : ಮಾನ್ಯ ಛೇರ್ಮನ್‌ರವರೆ, ಬಜೆಟ್ ಪುಸ್ತಕದಲ್ಲಿ ತೆರಿಗೆ ರೂಪದಲ್ಲಿ ಇಷ್ಟು ಹಣ ಬಂದಿದೆಯೆಂದು ತೋರಿಸಿದ್ದಾರೆ. ಅದರ ಹೆಗ್ಗಳಿಕೆ ಬೇಡ. ದಯಮಾಡಿ ಆ ಹಣದಿಂದ ಬಡವರನ್ನು ಹಾಳು ಮಾಡಿ, ಅವರಿಗೆ ಕುಡಿಸಿ ಈ ದೇಶದಲ್ಲಿ ನಾವು ಶಹಭಾಷ್‌ಗಿರಿ ತೆಗೆದು ಕೊಳ್ಳುವುದು ಬೇಡ. ದಯಮಾಡಿ ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಿ, ಎಷ್ಟು ಹೋಗುತ್ತದೋ. ಹೋಗಲಿ, ಎಷ್ಟು ಆದಾಯ ಬರುತ್ತದೋ ಬರಲಿ. ಬೇರೆ ಯಾವುದಾದರೂ ರೂಪದಲ್ಲಿ ಹಣ ಸಂಗ್ರಹಿಸೋಣ. ಆದರೆ, ಈ ರೂಪದಲ್ಲಿ ತೆರಿಗೆ ಸಂಗ್ರಹಿಸುವುದು ಬೇಡವೆಂದು ಸರ್ಕಾರಕ್ಕೆ ಒಂದು ಸಲಹೆ ಕೊಟ್ಟೆ ಅಷ್ಟೆ. ಅವರು ಭಾಷಣ ಮಾಡುತ್ತಾ, 'ನಾನು ಒತ್ತಿ ಹೇಳುತ್ತೇನೆ, ಒತ್ತಿ ಹೇಳುತ್ತೇನೆ, ಅಬಕಾರಿಯಿಂದ 7,500 ಕೋಟಿ ರೂ.' ಎಂದು ಹೇಳಿದರು. ಅದಲ್ಲ. ಅಬಕಾರಿಯಿಂದ ಬಡವರನ್ನು, ಅವರ ಮಕ್ಕಳನ್ನು, ರೈತರನ್ನು ಹಾಳು ಮಾಡಿ ಅದರಿಂದ ಹಣ ತರುವುದು ಬೇಡ. ಬೇರೆ ರೂಪದಲ್ಲಿ ಎಷ್ಟು ಬರುತ್ತದೋ ಬರಲಿ ಎಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಸಲಹೆ ಕೊಡಬಯಸುತ್ತೇನೆ.

ಇನ್ನು ಕೆರೆಗಳಿಗೆ ನೀರು ತುಂಬುವುದು. ಇದೊಂದು ಪವಿತ್ರವಾದ ಯೋಜನೆ. ಏಕೆಂದರೆ, ನಾವು ಬಯಲು ಸೀಮೆಯಲ್ಲಿದ್ದೇವೆ. ನಾವು ಈಗ ಎಷ್ಟು ಬಡಿದುಕೊಂಡರೂ ನೀರಿಲ್ಲ. ಸುಮಾರು 600 ಅಡಿಗಳವರೆಗೂ ಕೊರೆದರೂ ನೀರು ಬರುತ್ತಿಲ್ಲ. ಕಾರಣ, ಅಂತರ್ಜಲದ ಮಟ್ಟ ತೀರಾ ಕುಸಿದಿದೆ. ಅಂತರ್ಜಲ ಮಟ್ಟವನ್ನು ಮೇಲೆತ್ತಬೇಕಾದರೆ ನಾವು ಮಳೆ ನೀರನ್ನು ಶೇಖರಿಸಬೇಕಾಗುತ್ತದೆ. ಮಳೆಯೂ ಕಡಿಮೆಯಾಗುತ್ತಿದೆ. ಮಳೆಯ ಪ್ರಮಾಣ ಕಡಿಮೆಯಾದಾಗಲೂ ಅಂತರ್ಜಲ ಮಟ್ಟ ಸುಧಾರಣೆಯಾಗು ವುದಿಲ್ಲ. ನಾವುಬಹಳಷ್ಟು ವರ್ಷಗಳಿಂದ ನೋಡಿದ್ದೇವೆ. ಅದಕ್ಕೋಸ್ಕರ, ಅಂತರ್ಜಲ ಮಟ್ಟವನ್ನು ಸುಧಾರಿಸುವುದಕ್ಕೆ ಕೆರೆ-ಕೆರೆಗಳಿಗೆ ನೀರು ತುಂಬಿಸುವ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲಾಗಿದೆ. ಯಾವುದೋ

ಸಂದರ್ಭದಲ್ಲಿ, ಹೋದ ಸಲ ಬಂದಂತೆ ಒಂದು ಪ್ರವಾಹ ಬರುತ್ತದೆ. ಪ್ರವಾಹದ ನೀರು ಹರಿದು, ಅಣೆಕಟ್ಟು ತುಂಬಿ ಸಮುದ್ರ ಸೇರುವ ಸಂದರ್ಭದಲ್ಲಿ ಪ್ರವಾಹದ ಆ ನೀರನ್ನು ನಮ್ಮ ಬಯಲು ಸೀಮೆಯ ಕೆರೆಗಳಿಗೆ ತುಂಬಿಸಬೇಕು. ಇವತ್ತು ಅಜ್ಜಂಪುರ, ಅಪ್ಪರ್ ಭದ್ರಾ ಯೋಜನೆಯಲ್ಲಿ ಮಾಡುತ್ತಿದ್ದೀರಿ. ಅದೊಂದು ಉತ್ತಮ ಕಾರ್ಯವಾಗಿದೆ. ಪ್ರವಾಹದ ನೀರು ಸಮುದ್ರ ಸೇರುವ ಮುನ್ನ ಅಣೆಕಟ್ಟುಗಳಿಗೆ ತುಂಬಿಸಿ ತನ್ಮೂಲಕ ನಮ್ಮ ಬಯಲು ಸೀಮೆಗೆ ಅಂದರೆ, ಹೇಮಾವತಿ ನದಿ ಮುಖಾಂತರವೋ, ಯಗಚಿ ನದಿ ಮುಖಾಂತರವೋ ನೀರನ್ನು ಕೆರೆ–ಕೆರೆಗಳಿಗೆ ತುಂಬಿಸಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದರಿಂದ ಕುಡಿಯುವ ನೀರಿನ ಬವಣೆಯನ್ನು ನೀಗಿಸಿದಂತಾಗುತ್ತದೆ.

(6-50 PM)

ನಮ್ಮ ಬಯಲು ಸೀಮೆ ಪ್ರತಿ ವರ್ಷ ಆತಂಕಕ್ಕೆ ಗುರಿಯಾಗುತ್ತಿದೆ, ಬರಗಾಲಕ್ಕೆ ತುತ್ತಾಗುತ್ತಿದೆ. ಅದನ್ನು ತಪ್ಪಿಸಿ ನಮ್ಮ ಕೆರೆಯಲ್ಲಿ ನೀರು ಇದ್ದರೆ ನೀರನ್ನು ಬಿಟ್ಟುಬಿಡಬಾರದು. ಅಂತರ್ಜಲ ಮಟ್ಟವನ್ನು ಹೆಚ್ಚು ಮಾಡುವುದಕ್ಕೋಸ್ಕರ ಪ್ರಾಮಾಣಿಕ ಪ್ರಯತ್ನ ಆಗದಿದ್ದರೆ, ಇದರ ಬಗ್ಗೆ ಉದಾಸೀನ ಮಾಡಿಕೊಂಡು ಹೀಗೇ ಬಿಟ್ಟುಕೊಂಡು ಬಂದರೆ, ನಿಜವಾಗಿಯೂ ಒಂದು ದಿನ ಕೋಲಾರದವರು ಹೇಳುತ್ತಾರಲ್ಲಾ ಅದರಂತೆ ಒಂದೂವರೆ ಸಾವಿರ, ಎರಡು ಸಾವಿರ ಅಡಿಯವರೆಗೆ ಕೊರೆದರೂ ನೀರು ಸಿಗುವುದಿಲ್ಲ. ನೇತ್ರಾವತಿ ನದಿ ತಿರುವಿನ ಮೂಲಕ ನಮ್ಮ ಹೊಲಗಳಿಗೆ, ತೋಟಗಳಿಗೆ, ಗದ್ದೆಗಳಿಗೆ ನೀರು ಕೊಡಬೇಡಿ. ಕೆರೆ ಕೆರೆಗಳನ್ನು ತುಂಬಿಸಿ. ಅದರಿಂದ ಅಂತರ್ಜಲ ಮಟ್ಟವನ್ನು ಹೆಚ್ಚು ಮಾಡತಕ್ಕ ಪ್ರಾಮಾಣಿಕ ಕೆಲಸ ಆಗಬೇಕು. ಆ ರೀತಿ ನೀರು ಬಂದು ನಾವು ಚೆಕ್ ಡ್ಯಾಂಗೆ, ಕೆರೆಗೆ, ಸಣ್ಣ ನೀರಾವರಿಗೆ ಹೆಚ್ಚು ಒತ್ತು ಕೊಟ್ಟಾಗ ಅಂತರ್ಜಲ ಮಟ್ಟ ಹೆಚ್ಚಾಗುತ್ತದೆ. ಮಳೆಯೇ ಬೀಳುವುದಿಲ್ಲ ಆ ನೀರು ಇಲ್ಲದೆಯೇ ತಡೆಹಿಡಿಯಿರಿ ಎಂದರೆ ಹೇಗೆ? ಈ ಹೊಲದಿಂದ ಮುಂದಿನ ಹೊಲಕ್ಕೆ ಹರಿದು ಹೋಗುವಷ್ಟು ಮಳೆಯೇ ಈಗ ಬರುತ್ತಿಲ್ಲ. ಆ ನೀರನ್ನು ಎಲ್ಲಿ ತಡೆಹಿಡಿಯುವುದು? ಮೊದಲು ನೀರನ್ನು ತರತಕ್ಕ ಕಾರ್ಯ ಆಗಬೇಕು. ಆ ಕೆರೆಗಳಿಗೆ, ಚೆಕ್‌ಡ್ಯಾಂಗಳಿಗೆ ನೀರನ್ನು ತುಂಬುವ ವ್ಯವಸ್ಥೆ ಆದರೆ ನಿಜವಾಗಿಯೂ ಅಂತರ್ಜಲ ಮಟ್ಟ ಹೆಚ್ಚಾಗಿ ರೈತರ ಬವಣೆ ನಿಜವಾಗಿಯೂ ಸುಧಾರಣೆಯಾಗುತ್ತದೆ. ಅದರ ಜೊತೆಗೆ ಮತ್ತೆ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಆದರೆ, ತಾವು ಸಹಾಯ

ಆಯಿತು ಎಂದು ಹೇಳುತ್ತಿದ್ದೀರಿ. ಸಮಾಜ ಕಲ್ಯಾಣ ಇಲಾಖೆಯ ಮೂಲಕ ಸಾಮಾಜಿಕವಾಗಿ ನೊಂದಿರುವ ಜನಾಂಗದವರಿಗೆ ನಿಜವಾಗಿಯೂ ಬಹಳ ಒಳ್ಳೆಯ ಕಾರ್ಯಕ್ರಮ ಇದೆ. ಇವತ್ತು ಗೊಲ್ಲರಹಟ್ಟಿ, ಯಾದವರ ಹಟ್ಟಿಗಳನ್ನು ಸ್ವಚ್ಛಗೊಳಿಸತಕ್ಕದ್ದು ನಿಜವಾಗಿಯೂ ಒಳ್ಳೆಯ ಕಾರ್ಯಕ್ರಮ. ಆ ಹಟ್ಟಿಗಳಿಗೆ ಹೋದರೆ ನಿಜವಾಗಿಯೂ ಹೊಟ್ಟೆ ಉರಿಯುತ್ತದೆ. ಆ ಗೊಲ್ಲರಹಟ್ಟಿಗಳು ಮೂಲಭೂತ ಸೌಲಭ್ಯಗಳಿಲ್ಲದೆ ವಂಚಿತವಾಗಿರುವುದನ್ನು ನಾವು ನೋಡುತ್ತಿದ್ದೇವೆ. ಅವರಿಂದ ನಿಜವಾಗಿಯೂ ರಸ್ತೆ, ಸ್ವಚ್ಛತೆ ಏನನ್ನೂ ನಾವು ಕಾಣುವುದಕ್ಕೆ ಸಾಧ್ಯತೆ ಇಲ್ಲ. ತಾವು ಅದರ ಬಗ್ಗೆ ದೊಡ್ಡ ಭಾಷಣ ಮಾಡಿದಿರಿ. ಹೋದ ವರ್ಷದ ಬಜೆಟ್‌ನಲ್ಲಿ ಹೇಳಿದ್ದೀರ. ಆದರೆ ಇದುವರೆಗೆ ಇದಕ್ಕಾಗಿ ಕೇವಲ 5 ಕೋಟಿ ರೂ. ಖರ್ಚು ಮಾಡಿದ್ದೀರಿ. ಎಲ್ಲಾ ಎಂ.ಎಲ್.ಎ.ಗಳ ಹತ್ತಿರ, ದೇವರಾಜ ಅರಸುರವರ ಹುಟ್ಟು ಹಬ್ಬದ ಆಚರಣೆ ಮಾಡತಕ್ಕ ಸಂದರ್ಭದಲ್ಲಿ ದೊಡ್ಡದಾಗಿ ಭಾಷಣ ಮಾಡಿ ಪುಸ್ತಕಗಳನ್ನು ಬೇರೆ ಪ್ರಿಂಟ್ ಮಾಡಿಕೊಟ್ಟು ಬಿಡುತ್ತೀರಿ. ಹಳ್ಳಿ ಹಳ್ಳಿಗಳಲ್ಲಿ ಕೆಲವು ಜನ ವಿದ್ಯಾವಂತರಿದ್ದಾರೆ. ಅವರು ಹಿಂದುಳಿದ ವರ್ಗದ ನಾಯಕರ ದಿನಾಚರಣೆ ಇದ್ದ ದಿವಸ ಆ ಪುಸ್ತಕವನ್ನು ತಂದು ನೋಡಿ "ಗೊಲ್ಲರ ಹಟ್ಟಿಗೆ ಇಷ್ಟು ಕೋಟಿ ರೂಪಾಯಿ ಕೊಟ್ಟಿದ್ದಾರೆ. ನೀವೇನು ಶಾಸಕರು ನಿದ್ರೆ ಮಾಡುತ್ತಿದ್ದೀರಾ, ಏನು ಮಾಡುತ್ತಿದ್ದೀರಿ?" ಎಂದು ನಮ್ಮ ಹತ್ತಿರ ಆ ಪುಸ್ತಕವನ್ನು ಹಿಡಿದುಕೊಂಡು ಬರುತ್ತಾರೆ. ಅದನ್ನು ಹಿಡಿದುಕೊಂಡು ಬೆಂಗಳೂರಿಗೆ ಬಂದು ಆ ದೇವರಾಜ ಅರಸು ನಿಗಮದ ಕಛೇರಿಗೆ ಅಲೆದಾಡಿದರೂ ಒಂದೇ ಒಂದು ಗೊಲ್ಲರ ಹಟ್ಟಿಗೆ ಕೊಟ್ಟಿಲ್ಲ. ಯಾರೋ ಉಳ್ಳವರಿಗೆ ಹತ್ತು ಜನರಿಗೆ ಕೊಟ್ಟಿದ್ದಾರೆ. ಇಡೀ ಕರ್ನಾಟಕ ರಾಜ್ಯದಲ್ಲಿ ಮೂರು ನಾಲ್ಕು ಸಾವಿರ ಗೊಲ್ಲರ ಹಟ್ಟಿ ಇದ್ದಾವೆ. ನೀವು ಒಂದು 20 ಗೊಲ್ಲರ ಹಟ್ಟಿಗಳನ್ನು ಉದ್ಧಾರ ಮಾಡಿದರೆ, ಆ ಗೊಲ್ಲರ ಹಟ್ಟಿಗಳ ಮೂಲಭೂತ ಸೌಕರ್ಯವಾಗಿಬಿಟ್ಟರೆ ಇಡೀ ಗೊಲ್ಲರಹಟ್ಟಿಗಳು ಉದ್ಧಾರವಾದಂತೆ ಆಗುತ್ತದೆಯೇ? ಇದನ್ನು ಏಕೆ ಘೋಷಣೆ ಮಾಡುತ್ತೀರಿ? ಘೋಷಣೆ ಮಾಡಿ ಶಾಸಕರಿಗೇಕೆ ಬೈಯಿಸುತ್ತೀರಿ? ಬಂಜಾರ ನಿಗಮ ಮಾಡುವುದಾಗಿ ಹೇಳಿದ್ದೀರಿ. ಅದಕ್ಕಾಗಿ ಬಜೆಟ್‌ನಲ್ಲಿ 80 ಕೋಟಿ ಘೋಷಣೆ ಮಾಡಿದಿರಿ. ಕೊಟ್ಟಿರುವುದು ಎಷ್ಟು ಸ್ವಾಮಿ? ಕೇವಲ 24 ಕೋಟಿ ರೂಪಾಯಿ 24 ಕೋಟಿ ಬಿಡುಗಡೆ ಮಾಡಿದರೆ ಏನು ಕಾರ್ಯ ಸಾಧನೆಯಾಗುತ್ತದೆ? ಅದನ್ನು ಕೇಳಿದರೆ ನಾವು ಅದನ್ನು ಮಾಡಿಯೇ ಇಲ್ಲವೆ ಎಂದು ಹೇಳುತ್ತೀರಿ. ನೀವು ಮಾಡಿಲ್ಲವೆಂದು ಹೇಳುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಆ 24 ಕೋಟಿಯಲ್ಲಿ ಒಂದು ಪೈಸೆಯೂ ಖರ್ಚಾಗಿಲ್ಲ. ಕೇವಲ ಬಿಡುಗಡೆಯಾಗಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಹಿಂದಿನ ಮುಖ್ಯ ಮಂತ್ರಿಗಳಾಗಿದ್ದ ಕುಮಾರಸ್ವಾಮಿಯವರು ಬಂಜಾರ ನಿಗಮವನ್ನು ಮಾಡಿದರು. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ 24 ಕೋಟಿಯ ರೂಪಾಯಿ ಕೊಟ್ಟಿದ್ದು ಅದನ್ನು ಜಾರಿಗೆ ತಂದಿದ್ದಾರೆ. ಹೋದ ವರ್ಷ ಅದಕ್ಕಾಗಿ 80 ಕೋಟಿಯೆಂದು ಬಜೆಟ್‌ನಲ್ಲಿ ಹೇಳಿದ್ದೀರಿ. ಅದರಲ್ಲಿ ಎಷ್ಟು ಕೋಟಿ ಬಿಡುಗಡೆ ಮಾಡಿದ್ದೀರಿ? ಸಾಮಾಜಿಕ ನ್ಯಾಯ ಒದಗಿಸತಕ್ಕ ಹಿಂದುಳಿದ ವರ್ಗದ, ಪರಿಶಿಷ್ಟ ಜಾತಿ ಮತ್ತು ಪಂಗಡದವರ ಬಗ್ಗೆ ಹೇಳುತ್ತೀರಿ. ಇದುವರೆಗೆ ಆ ಜನಾಂಗದವರಿಗೆ ಎಷ್ಟು ಬೋರ್‌ವೆಲ್‌ಗಳನ್ನು ಮಾಡುವುದಕ್ಕೆ ಆದೇಶ ಕೊಟ್ಟಿದ್ದೀರಿ? ಶಾಸಕರಿಗೆ ಇಷ್ಟಿಷ್ಟು ಬೋರ್‌ವೆಲ್ ಮಾಡುತ್ತೇವೆಂದು ಹೇಳಿದಿರಿ. ನಾವು ಪಟ್ಟಿ ಕೊಟ್ಟೆವು. ಅವರು ದಿನಾ ಬಂದು ನಮ್ಮ ಮನೆಯ ಹತ್ತಿರ ಕುಳಿತುಕೊಳ್ಳುತ್ತಾರೆ. ನಿಮ್ಮ ಬೋರ್‌ವೆಲ್‌ಗಳು ಎಲ್ಲಿ? ಏಕೆ ಕೊರೆಯಲು ಆಗುತ್ತಿಲ್ಲ? ಮಾರ್ಚ್ ಮುಗಿದು ಹೋಯಿತು, ಎರಡನೆಯ ಬಜೆಟ್ ಬಂದು ಹೋಯಿತು. ಎಲ್ಲಿದೆ ಹಣ? ಏಕೆ ಹೇಳುತ್ತೀರಿ? ಇದುವರೆಗೂ ಆಗಿಲ್ಲ. ಪರಿಶಿಷ್ಟ ಜಾತಿ ಜನಾಂಗದವರಿಗೆ ಒಂದು ಬೋರ್‌ವೆಲ್ ನಾನು ಮಾಡುವುದಕ್ಕೆ ಆಗಿಲ್ಲ. ಬಿಸಿ.ಎಂ. ಇಲಾಖೆಯಿಂದ ಒಂದು ಬೋರ್‌ವೆಲ್‌ನ್ನು ಮಾಡುವುದಕ್ಕೆ ಆಗಿಲ್ಲ. ಆದರೆ, ಇಲ್ಲಿ ಹಿಂದುಳಿದ ವರ್ಗದ ಬಗ್ಗೆ ಕಾಳಜಿ ಇದೆಯೆಂದು ಹೇಳುತ್ತೀರಲ್ಲಾ, ಅದು ಎಲ್ಲಿ? ಅಲ್ಪಸಂಖ್ಯಾತರ ಬಗ್ಗೆ ದೊಡ್ಡ ಭಾಷಣವನ್ನು ಮಾಡುತ್ತೀರಿ. ಅವರಿಗೆ ಒಂದು ಶಾದಿಮಹಲ್‌ನ್ನು ಮಂಜೂರು ಮಾಡಿದರೆ ಇನ್ನೂ ಹಣ ಬಂದಿಲ್ಲ ತಡೆಯಿರಿ, ಹಣ ಬಂದ ಮೇಲೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡುತ್ತೇವೆಂದು ಅವರು ಹೇಳುತ್ತಾರೆ. ಕನ್ನಡ ಸಂಸ್ಕೃತಿ ಇಲಾಖೆಯಿಂದ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸಮುದಾಯ ಭವನಗಳಿಗೆ ಐದ್ಯೆದು ಸಾವಿರ ಹಣ ಕೊಡುತ್ತೇವೆಂದು ದಾಖಲೆಗಳನ್ನು ತರಸಿಕೊಂಡಿರಿ. ಜಿಲ್ಲಾ ಕಛೇರಿಗೆ ದೊಡ್ಡದಾಗಿ ಒಂದು ಪತ್ರವನ್ನು ಬರೆದಿರಿ.. ಅವರು ಅದನ್ನು ಎಲ್ಲರಿಗೂ ಕೊಟ್ಟರು. ನಮಗೂ ಕೊಟ್ಟರು. ನಾವೇನೋ ಕೊಡುತ್ತಾರೆಂದು ಆ ಸಂಘ ಇಲ್ಲದಿದ್ದರೂ ಅವರ ಸಂಘವನ್ನು ರಿಜಿಸ್ಟ್ರರ್ ಮಾಡಿಸಿ ಅವರಿಗೆಲ್ಲಾ ಖರ್ಚು ವೆಚ್ಚ ಮಾಡಿಸಿ, ಆಡಿಟಿಂಗ್ ಮಾಡಿಸಿ ಎಲ್ಲವನ್ನು ಅಲ್ಲಿ ತಂದು ಕೊಟ್ಟರೆ, ಎಲ್ಲಿದೆ ದುಡ್ಡು? ದುಡ್ಡೇ ಇಲ್ಲ ಎಂದು ಹೇಳುತ್ತಾರೆ. ಅವರಿಗೆ ಬೇಕು

ಎಂದರೆ ಯಾರ್ಯಾರೋ ಡೂಪ್ಲಿಕೇಟ್ ಸಂಘಗಳಿಗೆ ಕೊಟ್ಟು ದುಡ್ಡು ಹೊಡೆಯುತ್ತಾರೆ. ಇಂಥ ಅವ್ಯವಸ್ಥೆ ಕಾಡುತ್ತಿದೆ. ಇಂಥ ಸಂದರ್ಭದಲ್ಲಿ ಸಾಮಾಜಿಕ ನ್ಯಾಯವನ್ನು ದೊರಕಿಸಿ ಕೊಡುತ್ತೇವೆಂಬ ಬದ್ಧತೆ ಸರ್ಕಾರಕ್ಕೆ ಇದೆಯೇ? ಎಲ್ಲಿದೆ ಸರ್ಕಾರಕ್ಕೆ ಬದ್ಧತೆ? ಇವತ್ತು ಹಣವನ್ನು ಎಷ್ಟು ಪ್ರಮಾಣದಲ್ಲಿ ಖರ್ಚು ಮಾಡಿದ್ದೀರಿ? 2–3 ಸಾವಿರ ಕೋಟಿ ರೂ. ಗಳನ್ನು ಬಜೆಟ್‌ನಲ್ಲಿ ಘೋಷಣೆ ಮಾಡುವುದಲ್ಲ. ನೀವು ಯಾವ ಪ್ರಮಾಣದಲ್ಲಿ ಹಣವನ್ನು ವಿತರಣೆ ಮಾಡಿದ್ದೀರಿ, ಖರ್ಚು ಮಾಡಿದ್ದೀರಿ ಎಂಬುದು ಬಹಳ ಮುಖ್ಯ. ಬೇಡಿಕೆಗಳ ಬಗ್ಗೆ ಚರ್ಚೆಗೆ ಬಂದಾಗ ಅದರ ಬಗ್ಗೆ ಅಂಕಿ ಸಂಖ್ಯೆಗಳು ಸಿಗುತ್ತವೆ. ಅಲ್ಲಿ ಅದರ ಬಗ್ಗೆ ಮಾತನಾಡುತ್ತೇವೆ. ಏಕೆಂದರೆ ಇನ್ನೂ 15 ದಿವಸ ಸಮಯ ಇದೆ, ಮಾಡುತ್ತೇವೆ, ಬರುತ್ತದೆ ಎಂದು ಹೇಳುತ್ತೀರಿ. ಪೂರಕ ಅಂದಾಜನ್ನೂ ಯಾವುದೇ ಚರ್ಚೆ ಇಲ್ಲದೆಯೇ ಮಂಜೂರು ಮಾಡಿಕೊಟ್ಟೆವು. ನೀವು ಏನು ಹೇಳುತ್ತೀರೋ ಅದರಂತೆಯೇ ಮಂಜೂರು ಮಾಡಿಕೊಟ್ಟೆವು. ನಿಮಗೆ ಎಲ್ಲಿಗೆ ಬೇಕೋ ಅಲ್ಲಿಗೆ ಮಂಜೂರು ಮಾಡಿಕೊಂಡಿರಿ. ಆದರೂ, ಯಾವುದೂ ಬಗೆಹರಿಯಲಿಲ್ಲ. ಇಂಥ ಅವ್ಯವಸ್ಥೆ ಸಾಮಾಜಿಕ ನ್ಯಾಯವನ್ನು ಕೊಡುವ ವ್ಯವಸ್ಥೆಯೇ ಎಂಬುದನ್ನು ತಾವು ತಿಳಿದು ಕೊಳ್ಳಬೇಕಾಗುತ್ತದೆ. ವಿದ್ಯುಚ್ಛಕ್ತಿ ಸಮಸ್ಯೆ. ಹಿಂದೆ ಬಹಳ ಚರ್ಚೆಯಾಯಿತು, ಮುಖ್ಯ ಮಂತ್ರಿಯವರು ಉತ್ತರವನ್ನೂ ಕೊಟ್ಟರು. ಏನೋ ಮುಖ್ಯಮಂತ್ರಿಯವರು ಹೇಳಿದ್ದಾರೆ, ಪೇಪರ್‌ನಲ್ಲೂ ಬಂದಿದೆ ಯೆಂದು ಆ ಪೇಪರ್ ಕಟಿಂಗ್ಸ್‌ನ್ನು ಇಟ್ಟುಕೊಂಡು ನಾವೆಲ್ಲಾ ತೃಪ್ತಿಯಾಗಿ, ನೆಮ್ಮದಿಯಿಂದ ನಮ್ಮ ಕ್ಷೇತ್ರಗಳಿಗೂ ಹೋದೆವು. ಎಲ್ಲರಿಗೂ ಆ ಪೇಪರ್ ಕಟಿಂಗ್ಸ್‌ನ್ನು ಕೊಟ್ಟು ನೋಡಿ ನಾವೆಲ್ಲಾ ನಿಮ್ಮ ಪರವಾಗಿ ಹೋರಾಟ ಮಾಡಿದ್ದೇವೆ, ವಿದ್ಯುಚ್ಛಕ್ತಿಯದ್ದು ಒಂದು ಹಂತಕ್ಕೆ ಬಂದಿದೆ, 6 ಗಂಟೆಗಳ ಕಾಲ 3 ಫೇಸ್ ಕೊಡುತ್ತಾರೆ, 7 ರಿಂದ 11 ಗಂಟೆಯವರೆಗೆ ಮಕ್ಕಳಿಗೆ ಯಾವುದೇ ಕಾರಣದಿಂದ ತೊಂದರೆಯಾಗದಂತೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಕೆಂಗಲ್ ಹನುಮಂತಯ್ಯನವರು ಕಟ್ಟಿಸಿರುವ ವಿಧಾನ ಸೌಧದಲ್ಲಿ ನಿಂತುಕೊಂಡು ಹೇಳಿದ್ದಾರಪ್ಪಾ, ಅದರ ಮೇಲಾದರೂ ನಾವು ನಂಬಿಕೆ ಇಡಬೇಕೆಂದು ಹೇಳಿ ನಾವು ನಿಜವಾಗಿಯೂ ಆಸೆ ಇಟ್ಟುಕೊಂಡು ಊರಿಗೆ ಹೋದೆವು. ಆದರೆ ನೀವು ಎಷ್ಟು ಗಂಟೆ ವಿದ್ಯುತ್‌ನ್ನು ಕೊಡುತ್ತಿದ್ದೀರಿ? ನೀವು ಭಾಷಣ ಮಾಡುವುದಕ್ಕೂ ಮೊದಲೇ ಭಾರಿ ಚೆನ್ನಾಗಿ ವಿದ್ಯುತ್‌ನ್ನು ಕೊಡುತ್ತಿದ್ದರು. ನಿನ್ನೆ ದಿವಸ ನಾವು ನಿಶ್ಚಿಂತೆಯಾಗಿ ಯುಗಾದಿ

ಹಬ್ಬವನ್ನು ಮಾಡಲು ಆಗಲಿಲ್ಲ. ನೀವು ಹೇಗೋ ಸ್ನಾನ ಮಾಡುತ್ತೀರಿ, ನಮಗೆ ನೀರು ಎಲ್ಲಿ ಎಂದು ಜನರು ಬಂದು ಕೇಳುತ್ತಾರೆ. ಅದಕ್ಕೆ ನಾವು ಏನು ಉತ್ತರವನ್ನು ಹೇಳಬೇಕು? ಇಂಥ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇಂದು ಇದೆ.

ಶ್ರೀ ಹೆಚ್.ಡಿ.ರೇವಣ್ಣ : ಸ್ನಾನ ಮಾಡುವುದು ಆಮೇಲೆ ಇರಲಿ, ಮೊದಲು ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಪಿ.ಯು.ಸಿ., ಎಸ್.ಎಸ್.ಎಲ್.ಸಿ. ಪರೀಕ್ಷೆ ಇದೆ, ಅದನ್ನು ಗಮನದಲ್ಲಿಟ್ಟುಕೊಂಡು ಮುಖ್ಯಮಂತ್ರಿಗಳು ಸ್ವಲ್ಪ ಕಟ್ಟುನಿಟ್ಟಾಗಿ ಸೂಚನೆ ಕೊಡಲು ಹೇಳಿ. ಸ್ನಾನವನ್ನು 15 ದಿವಸ ಮಾಡದಿದ್ದರೂ ಪರವಾಗಿಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕಾದರೂ ಅವಕಾಶ ಮಾಡಲು ದಯಮಾಡಿ ಹೇಳಿ.

ಛೇರ್ಮನ್ : ಶಿವಲಿಂಗೇಗೌಡರೆ, ತಮ್ಮ ಸಮಯ ಆಯಿತು. 25 ಜನ ಪಟ್ಟಿಯಲ್ಲಿ ಇದ್ದಾರೆ. ತಾವು ಮುಗಿಸಿ. ಅಧ್ಯಕ್ಷರು ಹೇಳಿದ್ದು 10 ನಿಮಿಷ. ಆದರೆ, ನಿಮಗೆ 30 ನಿಮಿಷ ಕೊಟ್ಟಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ : ಅದರೂ ಪರವಾಗಿಲ್ಲ. ಅವರು ಒಳ್ಳೆಯ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಅವರಿಗೆ ಹೆಚ್ಚು ಅವಕಾಶ ಕೊಡಿ.

ಛೇರ್ಮನ್ : ಇನ್ನೂ ಮಾತನಾಡುವವರ 25 ಜನರ ಪಟ್ಟಿ ಇದೆ. ಎಲ್ಲರಿಗೂ ಅವಕಾಶ ಕೊಡಬೇಕು. ದಯಮಾಡಿ ಇನ್ನು ಎರಡು ನಿಮಿಷದಲ್ಲಿ ಮುಗಿಸಿ.

ಶ್ರೀ ಉಮೇಶ್ ಕತ್ತಿ : ಮಾನ್ಯ ಶಿವಲಿಂಗೇಗೌಡರು ಕುಡಿಯುವುದಿಲ್ಲ, ಆದರೂ ಅದರ ಬಗ್ಗೆಯೇ ಅರ್ಧಗಂಟೆ ಭಾಷಣ ಮಾಡಿದ್ದಾರೆ. ಕರೆಂಟ್ ಬಗ್ಗೆ ಮಾತನಾಡುತ್ತಿದ್ದಾರೆ. ಕರೆಂಟ್ ತೆಗೆದುಕೊಂಡು ಇವರು ಅಭ್ಯಾಸ ಮಾಡುವವರಲ್ಲ. ಈ ಯಾವುದೂ ಸಂಬಂಧ ಇಲ್ಲದಿರುವ ವಿಚಾರದ ಬಗ್ಗೆಯೇ ಎರಡು ಗಂಟೆ ಚರ್ಚೆ ಮಾಡುತ್ತಾರೆ!

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಉಮೇಶ್ ಕತ್ತಿಯವರು ನಮ್ಮನ್ನಾಗಲಿ, ಶಿವಲಿಂಗೇಗೌಡರನ್ನಾಗಲಿ ಅದಕ್ಕೆ ಕರೆಯುವುದು ಇಲ್ಲ. ಅವರು ಕರೆಯುವುದೇ ಬೇರೆಯವರನ್ನು! ಆದ್ದರಿಂದ ನಾವೇನು ಕುಡಿಯಲು ಆಗುವುದಿಲ್ಲ! ಆ ಪರಿಸ್ಥಿತಿಯೇ ಬೇರೆ!

ಶ್ರೀ ಕೆ.ಎಂ. ಶಿವಲಿಂಗೇಗೌಡ : ವಿದ್ಯುಚ್ಛಕ್ತಿಯ ಬಗ್ಗೆ ಬಜೆಟ್‌ನಲ್ಲಿ ಭಾರಿ ಪ್ರಮಾಣದಲ್ಲಿ ಹಣವನ್ನು ಕೆ.ಪಿ.ಸಿ.ಎಲ್. ಗೆ ತೊಡಗಿಸುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಇದು ನಿರಂತರವಾಗಿ ನಡೆದುಕೊಂಡು ಬಂದಿದೆ.

ಬಹುಶಃ ವಿದ್ಯುಚ್ಛಕ್ತಿಯ ಬಗ್ಗೆ ಇಷ್ಟೊಂದು ಕ್ಷಾಮ ಬಂದ ಮೇಲೆ ಈಗಿನ ಸರ್ಕಾರ ನಿಜವಾಗಿಯೂ ಕಾಳಜಿಯನ್ನು ವಹಿಸಬೇಕಾಗಿತ್ತು. 500 ಕೋಟಿ ರೂ. share ಅಮೌಂಟ್ ನ್ನು ಕೆ.ಪಿ.ಸಿ.ಎಲ್. ಗೆ ಕೊಟ್ಟಿದ್ದೇವೆದು ಹೇಳಿಬಿಟ್ಟರೆ ಹೇಗೆ? ಕೆ.ಪಿ.ಸಿ.ಎಲ್. ಒಂದು ಸಮುದ್ರ, ಸಮುದ್ರಕ್ಕೆ 500 ಕೋಟಿ ರೂ. ಯಾವ ಮೂಲೆಗೆ ಸಾಕಾಗುತ್ತದೆ? ಏನಾದರು ಮಾಡಿ 3–4 ಸಾವಿರ ಕೋಟಿ ರೂ. ಕೊಟ್ಟು 3–4 ವರ್ಷದಲ್ಲಾದರೂ ಆ ಸಮಸ್ಯೆಯನ್ನು ಬಗೆಹರಿಸತಕ್ಕ ನಿಟ್ಟಿನಲ್ಲಿ ಪ್ರಾಮಾಣಿಕವಾದ ಪ್ರಯತ್ನ ನಡೆಯಬೇಕಾಗಿತ್ತು. ಅದು ನಡೆದಿಲ್ಲ.

ಅವರು "ನಾಳೆ ನೋಡಿ, ನನ್ನ ಬಜೆಟ್‌ನಲ್ಲಿ ನಾನು ಪೂರ್ಣ ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ' ಎಂದು ಹೇಳಿದರು. ಅದನ್ನೂ ಮಾಡಿಲ್ಲ. ಹೋಗಲಿ, ತಾತ್ಕಾಲಿಕವಾಗಿ 1000 ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಕೊಂಡು, ನಿಮ್ಮೆಲ್ಲರ ಸಮಸ್ಯೆಯನ್ನು ಬಗೆಹರಿಸುತ್ತೇನೆ, ನಿಮ್ಮನ್ನು ಜನ ಬಯ್ಯದ ರೀತಿಯಲ್ಲಿ ನಾನು ನೋಡಿಕೊಳ್ಳುತ್ತೇನೆ ಎಂದು ಹೇಳಿದರು. ಅದನ್ನೂ ಕೂಡ ಮಾಡಿಲ್ಲ. ಈ ರೀತಿ ಇನ್ನೂ ಅನೇಕ.........

ಶ್ರೀ ಸಾ.ರಾ.ಮಹೇಶ್ : ಮಾನ್ಯ ಅಧ್ಯಕ್ಷರೆ, ದಯಮಾಡಿ ನೀವು ನಿಯಮವೊಂದನ್ನು ಮಾಡಬೇಕಾಗಿದೆ. ಈ ಕರೆಂಟ್ ಪರಿಸ್ಥಿತಿ ನಮಗೂ ಗೊತ್ತಾಗಬೇಕಾದರೆ, ಯಾವ್ಯಾವಾಗ ಎಲ್ಲೆಲ್ಲಿ ವಿದ್ಯುಚ್ಛಕ್ತಿ ಹೋಗುತ್ತದೋ, ಅಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಮನೆ, ಮಾನ್ಯ ಮಂತ್ರಿಗಳು ಮತ್ತು ಮಾನ್ಯ ಶಾಸಕರ ಮನೆ ಮತ್ತು Chief Secretary ಸೇರಿದಂತೆ ಯಾರ್‍ಯಾರು ಐ.ಎ.ಎಸ್. ಅಧಿಕಾರಿಗಳಿದ್ದಾರೋ, ಕಡ್ಡಾಯವಾಗಿ ಅವರ ಮನೆಗಳಲ್ಲಿರುವ UPS ಅನ್ನು ತೆಗೆಸಿ. ಆ ತರಹ ನಿಯಮವೊಂದನ್ನು ಮಾಡಿ. ಆಗ correct ಆಗಿ ಯಾವ್ಯಾವಾಗ ಕರೆಂಟ್ ಹೋಗುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಆಗ ನಿಜವಾಗಿ ಯಾರ್‍ಯಾರಿಗೆ ಕರೆಂಟ್ ಕೊಡುವುದರಲ್ಲಿ ವ್ಯತ್ಯಾಸವಾಗುತ್ತಿದೆ ಎನ್ನುವುದು ಅರ್ಥವಾಗುತ್ತದೆ ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ ಆರೋಗ್ಯ ಇಲಾಖೆ ಬಗ್ಗೆ ಮಾತನಾಡುವುದಾದರೆ.......

O.30 F-78

ಛೇರ್ಮನ್ : ದಯವಿಟ್ಟು, ಸಮಯವಾಯಿತು. ನಾನು ಬೇರೆಯವರನ್ನು ಮಾತನಾಡಲಿಕ್ಕೆ ಕರೆಯುತ್ತೇನೆ. ನಿಮಗೆ ಈಗಾಗಲೇ ಸಾಕಷ್ಟು ಸಮಯ ಕೊಟ್ಟಿದ್ದೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಎರಡೇ ನಿಮಿಷ, ನಾನು ಬೇಗ ಮುಗಿಸುತ್ತೇನೆ.

ಛೇರ್ಮನ್ : ಮಾನ್ಯ ಅಧ್ಯಕ್ಷರು ನಿಮಗಾಗಿ ನಿಗದಿಪಡಿಸಿದ್ದ ಕಾಲಾವಕಾಶ ಮುಗಿದು ಹೋಗಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಾವು ಹದಿನೈದು ದಿವಸ ಬುಕ್ ಓದಿಕೊಂಡು, important ಆಗಿರುವುದನ್ನೇ ಮಾತನಾಡಬೇಕೆಂದು ಬಂದಿದ್ದೆವು. ಆದರೆ ನಾವು ಹೆಚ್ಚಿಗೆ ಮಾತನಾಡಲಿಕ್ಕೆ ಆಗುವುದಿಲ್ಲ ಎಂಬುದು ನೀವು ಕೊಟ್ಟ ಟೈಮ್‌ಗೇ ನಮಗೆ ಗೊತ್ತಾಗಿ ಹೋಯಿತು. ನಾನು ಇನ್ನೇನೂ ಹೆಚ್ಚಿಗೆ ಮಾತನಾಡುವುದಿಲ್ಲ. ಆರೋಗ್ಯ ಇಲಾಖೆ ಬಗ್ಗೆ ಹೇಳುವುದಾದರೆ, ಜನಪರವಾದಂಥಹ ಕಾರ್ಯಕ್ರಮಗಳನ್ನು ಇಲಾಖೆ ಹಮ್ಮಿಕೊಂಡಿದೆ. '108' ಆಯಿತು, '104' ಆಯಿತು, ವಾಜಪೇಯಿ ಹೆಸರಿನಲ್ಲೊಂದು ಕಾರ್ಯಕ್ರಮ ಮಾಡಿದ್ದೀರಿ, ಇನ್ನೂ ಬಹಳಷ್ಟು ಕಾರ್ಯಕ್ರಮಗಳನ್ನು ಇಲಾಖೆಯವರು ಮಾಡಿದ್ದಾರೆ. ಅದೆಲ್ಲಕ್ಕಿಂತ ಮೊದಲು, ನಾವು ಮರ್ಯಾದೆಯಿಂದ ಕ್ಷೇತ್ರದಲ್ಲಿ ತಿರುಗಬೇಕಾದರೆ, ನಮ್ಮ ಕ್ಷೇತ್ರಗಳಲ್ಲಿ 2–3 ವರ್ಷಗಳಿಂದ ಖಾಲಿಯಿರುವ ಡಾಕ್ಟರ್ಸ್ ಹುದ್ದೆಗಳನ್ನು ತುಂಬಬೇಕೆಂದು ನಿಮಗೆ ಕೈ ಮುಗಿದು ಕೇಳುತ್ತೇನೆ. ಇಲಾಖೆಯ ಇನ್ನಿತರ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ನಂತರ ಗಮನಹರಿಸಿ. ಮೊದಲು ಆ ಕಾರ್ಯಕ್ರಮದ ಅಡಿಯಲ್ಲಿ ನಿಮ್ಮ patients ಆಸ್ಪತ್ರೆಗೆ ಹೋಗಬೇಕಾದರೆ, ಅಲ್ಲಿ ಡಾಕ್ಟರ್‌ಗಳಿರಬೇಕಲ್ಲವೇ? ಆಸ್ಪತ್ರೆಗೆ ಯಾವ patients ಬರಲಿ, 'ಇಲ್ಲ, ಬೆಂಗಳೂರಿಗೆ refer ಮಾಡಿದ್ದೇವೆ,' 'ಇಲ್ಲ, ನಮ್ಮಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ಡಾಕ್ಟರ್ಸ್ ಇಲ್ಲ, ಖಾಸಗಿಗೆ ಹೋಗಿ' ಎಂದು ಹೇಳುವಂತಹ ಪರಿಸ್ಥಿತಿ ಇದೆ. ಯಾರು ಬೇಕಾದರೂ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಾರೆ. ಆದರೆ ಮೂಲಭೂತವಾಗಿ ಇರತಕ್ಕಂಥ ಪ್ರಶ್ನೆ, ಇವತ್ತು ಡಾಕ್ಟರ್‌ಗಳನ್ನು ನೇಮಕ ಮಾಡತಕ್ಕಂಥ ವ್ಯವಸ್ಥೆಯನ್ನು ಮೊದಲು ಮಾಡಿ. ಡಾಕ್ಟರ್‌ಗಳಿದ್ದರೆ ಆಮೇಲೆ patients ಏನಾದರೂ ಮಾಡಿ ಕಷ್ಟಪಟ್ಟು ಬರುತ್ತಾರೆ. ಆಮೇಲೆ, ನೀವು ಕೊಡುವಂತಹ ಜನಪರವಾದಂತಹ ಸವಲತ್ತುಗಳನ್ನು ಕೊಡುವಿರಂತೆ. ದಯಮಾಡಿ ಡಾಕ್ಟರ್ಸ್‌ನ್ನು ನೇಮಿಸುವಂತಹ

ಜವಾಬ್ದಾರಿಯನ್ನು ಈ ಸರ್ಕಾರ ಮೊದಲು ಮಾಡಬೇಕು. ಕೊನೆಯದಾಗಿ, ಶಿಕ್ಷಣ ಇಲಾಖೆಯಲ್ಲಿಯೂ ಸಹ ಅಷ್ಟೇ. ಬಹಳಷ್ಟು ಜನ ಲೆಕ್ಚರರ್ಸ್ ಇಲ್ಲ. ದಯವಿಟ್ಟು ಬರಿ First Grade Collegeಗಳು ಕೊಟ್ಟೆವುಎನ್ನುವಂತಹ ಹೆಗ್ಗಳಿಕೆ ಬೇಡ. ಮೂಲಭೂತ ಸೌಕರ್ಯಗಳು ಅಷ್ಟೇ ಪ್ರಾಮುಖ್ಯತೆಯನ್ನು ಪಡೆದಿರುತ್ತದೆ. ದಯವಿಟ್ಟು ಆ ಕಾಲೇಜಿಗೆ ಬೇಕಾದಂತಹ ಲೆಕ್ಚರರ್ಸ್, ಮೂಲಭೂತ ಸೌಕರ್ಯಗಳನ್ನು, buildings ಅನ್ನು ಕೊಡಿ. ಈಗಾಗಲೇ ಅವರು ಶೆಡ್‌ಗಳಲ್ಲಿ ನಡೆಸುತ್ತಿದ್ದಾರೆ. ಎಲ್ಲೋ ಒಂದು ಕಡೆ ಮೂಲೆಯಲ್ಲಿ ಮಾಡುತ್ತಿದ್ದಾರೆ. ಅದನ್ನೆಲ್ಲಾ ತಪ್ಪಿಸಬೇಕೆಂದರೆ, ಮೂಲಭೂತ ಸೌಕರ್ಯಗಳ ಕಡೆಗೆ ಆದ್ಯ ಗಮನವನ್ನು ಹರಿಸಬೇಕು. ಕೊನೆಯದಾಗಿ ಒಂದು ಮಾತು. ಕಿತ್ತೂರು ರಾಣಿ ಚೆನ್ನಮ್ಮ ಶಾಲೆ, ಮೊರಾರ್ಜಿ ದೇಸಾಯಿ ಶಾಲೆ, ಇದೆಲ್ಲವನ್ನೂ ನಾವು ತೆರೆದಿದ್ದೇವೆ, ಶೈಕ್ಷಣಿಕ ಮಟ್ಟವನ್ನು ಸುಧಾರಣೆ ಮಾಡುತ್ತೇವೆ ಎಂಬ ಮಾತನ್ನು ಹೇಳುತ್ತಾರೆ. ಇವತ್ತು ಕಿತ್ತೂರು ರಾಣಿ ಚೆನ್ನಮ್ಮ ಶಾಲೆ ಆಗಿರಬಹುದು, ಇಲ್ಲವೇ ಮೊರಾರ್ಜಿ ದೇಸಾಯಿ ಶಾಲೆಗಳು ಆಗಿರಬಹುದು, ಯಾವುದೇ ವಸತಿ ಶಾಲೆಗಳಿಗೆ ಆಗಿರಬಹುದು, ಹೊರ ಸಂಪನ್ಮೂಲದಿಂದ ಮಾಸ್ಟರ್‌ಗಳನ್ನು ಅಲ್ಲಿಗೆ ನೇಮಕ ಮಾಡುತ್ತೀರಲ್ಲಾ, ಅದು ಸರಿಯಲ್ಲ ಎಷ್ಟರಮಟ್ಟಿಗಿನ standard ವಿಧ್ಯಾಭ್ಯಾಸ ಅಲ್ಲಿ ನಡೆಯಬಹದು ಎನ್ನುವುದನ್ನು ನೀವು ಯೋಚನೆ ಮಾಡಿ. ಇವತ್ತು 5 ಸಾವಿರ ರೂ., 3 ಸಾವಿರ ರೂ., ಗಳಿಗೆ ಮಾಸ್ಟರ್‌ಗಳನ್ನು ತಂದು ನೀವು ಆ ವಸತಿ ಶಾಲೆಗೆ ಹಾಕುತ್ತೀರಲ್ಲಾ, ಅದರ ಬದಲು recruitment ಮಾಡಿಕೊಂಡು ಒಳ್ಳೊಳ್ಳೆಯ ರ್‍ಯಾಂಕ್ ಉಪಾಧ್ಯಾಯರನ್ನು ಆ ವಸತಿ ಶಾಲೆಗಳಿಗೆ ನೇಮಿಸಿದರೆ, ನವೋದಯ ಶಾಲೆಯಂತಹ ರಾಷ್ಟ್ರೀಯ ಶಾಲೆಗಳ ಮಟ್ಟವನ್ನು ನಾವು ತಲುಪುವುದಿಲ್ಲವೇ? ಅದನ್ನು ಬಿಟ್ಟು, ಯಾವುದು ಶೆಡ್‌ಗಳಲ್ಲಿ ಇನ್ನೂ ಮಾಡುತ್ತಿದ್ದೀರಿ. ಎಲ್ಲೋ ಒಂದು ಕಡೆ ಆ ಶಾಲೆಗಳು ಮೂಲಭೂತ ಸೌಕರ್ಯಗಳ ವಂಚಿತವಾಗಿವೆ. ಸುಮ್ಮನೆ ಶಾಲೆ ತೆರೆದು, ನಾವು ಏನೋ ಸಾಧನೆ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳತಕ್ಕದ್ದಲ್ಲ. ನಾವು ಶಾಲೆ ತೆರೆದಿರುವುದನ್ನು ಸ್ವಾಗತ ಮಾಡುತ್ತೇವೆ. ಒಳ್ಳೆಯ ಕೆಲಸ ಮಾಡಿದ್ದನ್ನು ನಾವು 'ಇಲ್ಲ'ವೆಂದು ಹೇಳುವುದಿಲ್ಲ. ಆದರೆ ಸ್ವಾಗತ ಮಾಡುವುದರ ಜೊತೆಗೆ, ಅಲ್ಲಿರತಕ್ಕಂಥ ಮೂಲಭೂತ ಸೌಕರ್ಯಗಳನ್ನು ಮತ್ತು ಆ ಹೊರ ಸಂಪನ್ಮೂಲದಿಂದ ಅಲ್ಲಿ teachers ನೇಮಿಸತಕ್ಕದನ್ನು ದಯಮಾಡಿ

ನಿಲ್ಲಿಸಬೇಕು. ವಿದ್ಯಾರ್ಹತೆಗೆ ತಕ್ಕ ಒಳ್ಳೆಯ ಉಪಾಧ್ಯಾಯರನ್ನು, ಒಳ್ಳೆಯ staff ಅನ್ನು ಅಲ್ಲಿಗೆ ಕೊಡತಕ್ಕಂಥ level ಗೆ ನೀವು ಹೋಗಲಿಲ್ಲ ಎಂದರೆ, ನೀವು ಯಾವುದೇ ವಸತಿ ಶಾಲೆಯನ್ನು ತೆರೆದರೂ, ಅದರಿಂದ ಯಾವುದೇ ಸಾಧನೆ ಆಗುವುದಿಲ್ಲ. ಕೇವಲ ವಸತಿ ಶಾಲೆಗಳನ್ನು ನಾವು ತೆರೆದೆವು, ಮಾಡಿದೆವು ಎಂದರೆ ಅದರಲ್ಲಿ ಹೆಚ್ಚಿನ ಉನ್ನತ ಮಟ್ಟದ ಶಿಕ್ಷಣವನ್ನು ಕೊಡಲಿಕ್ಕೆ ಸಾಧ್ಯತೆ ಇಲ್ಲ. ಇದನ್ನು ಮಾನ್ಯ ಸಚಿವರು ಮತ್ತು ಸರ್ಕಾರ ಮನಗಾಣಬೇಕು. ಅವರಿಗೂ 5–6 ಸಾವಿರ ರೂ.ಗಳ ಸಂಬಳ ಕೊಡುತ್ತೀರಿ. ನೇರ ನೇಮಕಾತಿ ಮಾಡಿಕೊಂಡರೆ ಇನ್ನೊಂದು 2–3 ಸಾವಿರ ರೂ.ಗಳು ಹೆಚ್ಚಿಗೆ ಕೊಡಬೇಕಾಗಿ ಬರಬಹುದು. 5–6 ಅಥವಾ 3–4 ಸಾವಿರ ರೂ.ಗಳಿಗೆ ಬಂದು teaching ಮಾಡುತ್ತಿ ರುವವರ ತಾಪತ್ರಯ ಏನಿರುತ್ತದೆ? ಅದು ಯಾವ ಮಟ್ಟದಲ್ಲಿರುತ್ತದೆ? ಅಲ್ಲಿ ಕಡಿಮೆ ದುಡ್ಡಿಗೆ ಯಾರು ಬರುತ್ತಾರೋ, ಹೊರ ಸಂಪನ್ಮೂಲದಿಂದ ಅವರನ್ನು ನೇಮಿಸುತ್ತಾರೆ. ಆ ರೀತಿ ನೇಮಿಸಿದವರಿಗೆ ಬೋಧಿಸಲು ನಿಗದಿತ ಅರ್ಹತೆ ಇರಬೇಕಲ್ಲವೇ? ಅವರಿಗೆ ಪಾಠ ಮಾಡತಕ್ಕ capacity ಇರಬೇಕಲ್ಲವೇ? ಇದನ್ನು ನೀವು ಯೋಚನೆ ಮಾಡಿದ್ದೀರಾ? ಸುಮ್ಮನೆ ಶಾಲೆಗಳನ್ನು ತೆರೆದುಕೊಂಡು ಹೋಗಿಬಿಟ್ಟರೆ ಆಯಿತೇ? ಇದನ್ನು ಮೊದಲು ಯೋಚನೆ ಮಾಡಬೇಕೆಂದು ಈ ಮೂಲಕ ಸರ್ಕಾರಕ್ಕೆ ಸಲಹೆ/ಮನವಿಯನ್ನು ಮಾಡುತ್ತೇನೆ. ಇನ್ನೂ ಅನೇಕ ವಿಚಾರಗಳನ್ನು ಮಾತನಾಡಬೇಕಾಗಿತ್ತು, ನೀವು ಟೈಮ್ ಕೊಡುತ್ತಿಲ್ಲ ನಾವು ಬಹಳ ದಿವಸಗಳಿಂದ ಮಾತನಾಡಬೇಕೆಂದು ಇಲ್ಲಿಗೆ ಬಂದು, ಕೇವಲ ಪುಸ್ತಕ ಹೊತ್ತಿಕೊಂಡು ಹೋಗುತ್ತಿದ್ದೆವು. ಇವತ್ತಾದರೂ ಇಷ್ಟೊತ್ತಾದರೂ ಮಾತನಾಡಲು ಸಮಯ ದಯಪಾಲಿಸಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗನ್ನು ಮುಗಿಸುತ್ತೇನೆ.

ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಬಹಳ ಸಮಯವಾಗಿದೆ. ಆದರೂ ಬಹಳಷ್ಟು ಪ್ರಾಮುಖ್ಯವಾದಂತಹ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾದಂತಹ ಅವಶ್ಯಕತೆ ಇರುವುದರಿಂದ, ಈಗಾಗಲೇ ಬೇರೆಯವರು ಮಾತನಾಡಿದ ಎಲ್ಲಾ ವಿಚಾರಗಳ ಬಗ್ಗೆ ನಾನು ಚರ್ಚೆಗೆ ಹೋಗದೆ, ನನ್ನ ಮಾತನ್ನು ಪ್ರಾರಂಭಿಸುತ್ತೇನೆ. ನಮ್ಮ ಮುಖಂಡರು ಗಳು ಈಗಾಗಲೇ ಆಯವ್ಯಯದ ಬಗ್ಗೆ, ಸಂಪನ್ಮೂಲದ ಬಗ್ಗೆ ಮತ್ತು ಈ ರಾಜ್ಯದ ಸಮಗ್ರ ಅಭಿವೃದ್ಧಿ ಬಗ್ಗೆ

ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸನ್ಮಾನ್ಯ ರಾಜೀವ್ ಗಾಂಧಿಯವರು ಬಹಳ ದೂರದೃಷ್ಟಿಯ ನ್ನಿಟ್ಟುಕೊಂಡು, ಈ ರಾಷ್ಟ್ರದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ತನ್ನದೇ ಆದಂತಹ ಶಕ್ತಿಯನ್ನು ಕೊಡಬೇಕು, ಅದಕ್ಕೆ ಆಡಳಿತದ ಶಕ್ತಿಯನ್ನು ಕೊಡಬೇಕು, ಹಣಕಾಸಿನ ಶಕ್ತಿಯನ್ನು ಕೊಡಬೇಕು, ಅದರ ಮುಖಾಂತರ ಜನರಿಗೆ ಬೇಕಾದಂತಹ ಬದುಕನ್ನು, ಅಭಿವೃದ್ಧಿಯನ್ನು ಅವರೇ ಮಾಡಿಕೊಳ್ಳಬೇಕು ಎನ್ನತಕ್ಕಂಥ ದೂರದ ಚಿಂತನೆಯನ್ನು ಇಟ್ಟುಕೊಂಡು, 72 ಮತ್ತು 73ನೇ ಸಂವಿಧಾನದ ತಿದ್ದುಪಡಿಯನ್ನು ಮಾಡಿ, ವಿಶೇಷವಾದಂತಹ ಹಕ್ಕುಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟರು. ಅವರು ಕೊಟ್ಟ ಹಕ್ಕುಗಳು ಸ್ಥಳಿಯ ಸಂಸ್ಥೆಗಳಿಗೆ ಬರುವುದರ ಮುಖಾಂತರ ಬಹುಶಃ ಪ್ರಪ್ರಥಮವಾಗಿ ನಮ್ಮ ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ ಮುಖಾಂತರ ಈ ಸ್ಥಳಿಯ ಸಂಸ್ಥೆಗಳನ್ನು ಜಾರಿಗೆ ತರತಕ್ಕಂಥ ಕೆಲಸವಾಯಿತು. ಹೊಸ ಒಂದು ತಿದ್ದುಪಡಿಯ ಮುಖಾಂತರ ತಂದಂತಹ ವ್ಯವಸ್ಥೆಯಿಂದ ಅನುಕೂಲ ವಾಯಿತು. ಇವತ್ತು ಜಿಲ್ಲಾ ಪಂಚಾಯಿತಿಳು, ಬಹುಶಃ ತಾಲ್ಲೂಕು ಪಂಚಾಯಿ ತಿಗಳು, ಅವುಗಳಷ್ಟು ನಿಷ್ಕ್ರೀಯವಾಗಿರತಕ್ಕಂಥ ಸಂಸ್ಥೆಗಳು, ಅವುಗಳಷ್ಟು ಆಡಳಿತಕ್ಕೆ ಭಾರವಾಗಿರತಕ್ಕಂಥ ಸಂಸ್ಥೆಗಳು ಬೇರೆ ಯಾವುವು ಇಲ್ಲ. ಅವುಗಳು ಇವತ್ತು ಅಷ್ಟು ನಿಷ್ಕ್ರೀಯವಾಗಿವೆ. ಯಾವುದೇ ಕಾರಣಕ್ಕೆ ಯಾವುದೇ ಕೆಲಸಕ್ಕೆ ಹೋದರೆ, ಅಲ್ಲಿ ಹಣವಿಲ್ಲ, ಯಾವುದೇ ಹಣ ಬರುತ್ತಿಲ್ಲ, ಯಾವುದೇ ಅನುದಾನಗಳು ಬರುತ್ತಿಲ್ಲ ಅಥವಾ ಕನಿಷ್ಠ routine ಆಗಿ ಏನೊಂದು ಅನುದಾನಗಳು ಅಭಿವೃದ್ಧಿಗೋಸ್ಕರ ಬರುತ್ತಿತ್ತೋ, ಆ ಅನುದಾನಗಳು 100ಕ್ಕೆ 90 ಭಾಗ ಇವತ್ತು ನಿಂತಿವೆ. ಒಂದು example ಕೊಡುತ್ತೇನೆ. Chief Minister Grama Sadak ಯೋಜನೆ ಎಂದು 5054 ರಲ್ಲಿ ಬರುತ್ತಿತ್ತು. ಅದು ಸಂಪೂರ್ಣವಾಗಿ ನಿಂತು ಹೋಗಿದೆ. 'ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ಯೋಜನೆ' ಎಂಬ ಹೊಸ ಕಾರ್ಯಕ್ರಮ ಬಂದಾಗ, ಅದರ ಜೊತೆ ಜೊತೆಯಲ್ಲೇ 'ಚೀಫ್ ಮಿನಿಸ್ಟರ್ ಗ್ರಾಮ ಸಡಕ್ ಯೋಜನೆ' ಜಾರಿಗೆ ಬಂತು. ಸಣ್ಣ ಸಣ್ಣ ಹಳ್ಳಿಗಳ 2 ಕಿ.ಮೀ., 3 ಕಿ.ಮೀ., 5 ಕಿ.ಮೀ., ರಸ್ತೆಗಳ ಅಭಿವೃದ್ಧಿಗೆ ಒಳ್ಳೆಯ ಹಣ ಅದರಲ್ಲಿ ಬರುತ್ತಿತ್ತು. ಇವತ್ತು ದುರಾದೃಷ್ಟ, ಆ ಕಾರ್ಯಕ್ರಮ ಪೂರ್ಣವಾಗಿ ನಿಂತು ಹೋಗಿದೆ. ಬೇರೆ ಅನುದಾನಗಳೂ ಸಹ development ಯಾವುದೂ ಬರುತ್ತಿಲ್ಲ. ಬೇರೆ ಬೇರೆ ಇಲಾಖೆಗಳಲ್ಲಿ ಅವರು ನಿರೀಕ್ಷೆ ಮಾಡಿದಷ್ಟು, ಅವರ ಗುರಿಗೆ ನಿಗದಿ ಮಾಡಿದಷ್ಟು ಹಣವೂ ಸಹ

ಬಿಡುಗಡೆಯಾಗುತ್ತಿಲ್ಲ. ಎಲ್ಲಾ ಇಲಾಖೆಗಳು, ಯಾವುವು ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುತ್ತವೋ, ಅವು ಇವತ್ತು ನಿಷ್ಕ್ರೀಯವಾಗಿವೆ. ಕಾರಣವೇನು ಎಂದು ಕೇಳಿದರೆ, ಅವುಗಳಿಗೆ ಸರ್ಕಾರದಿಂದ ಬರಬೇಕಾದಂತಹ ಅನುದಾನ ಸಕ್ರಮವಾಗಿ ಬರುತ್ತಿಲ್ಲ ಎನ್ನತಕ್ಕಂಥ ಉತ್ತರವನ್ನು ಅಧಿಕಾರಿಗಳು ಕೊಡುತ್ತಾರೆ. ಇದು ವಾಸ್ತವವಾಗಿ ಇರತಕ್ಕಂಥ ವಿಚಾರವೂ ಹೌದು. ಯಾವೊಂದು concept ಇಟ್ಟುಕೊಂಡು, ಆ ಒಂದು ಸ್ಥಳಿಯ ಸಂಸ್ಥೆಗಳಿಗೆ ಶಕ್ತಿ ಕೊಡಬೇಕೋ, ಅದರ ಮುಖಾಂತರ ಸ್ಥಳಿಯವಾಗಿರತಕ್ಕಂಥ ಸಂಪೂರ್ಣ ಅಭಿವೃದ್ಧಿಗಳನ್ನು ಮಾಡಿಕೊಳ್ಳಬೇಕು ಎನ್ನತಕ್ಕಂಥ ಚಿಂತನೆ ಇತ್ತೋ, ಬಹುಶಃ ಆ ಚಿಂತನೆ ಇವತ್ತು ವಿಫಲವಾಗುತ್ತಿದೆ ಎನನ್ನತಕ್ಕಂಥ ಮಾತನ್ನು ಅನಿವಾರ್ಯವಾಗಿ ನಾನು ತಮ್ಮ ಮುಖಾಂತರ ಸರ್ಕಾರ ಗಮನಕ್ಕೆ ತರಬೇಕಾಗುತ್ತದೆ. Chief Minister Grama Sadak ಯೋಜನೆಯನ್ನು ಮತ್ತೆ ಜಾರಿಗೆ ತರತಕ್ಕಂಥದ್ದು ಆಗಬೇಕು. ಈ ಬಜೆಟ್‌ನಲ್ಲಿ Chief Minister Grama Sadak ಯೋಜನೆ ಬಗ್ಗೆ ಒಂದು ಮಾತನ್ನೂ ಕೂಡ ಆಡಿಲ್ಲ. ಅದು ಪೂರ್ಣವಾಗಿ ನಿಂತು ಹೋಗಿರತಕ್ಕಂಥ ಕಾರ್ಯಕ್ರಮವಾಗಿ ಉಳಿದು ಕೊಂಡಿದೆ ಅನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕುಡಿಯುವ ನೀರಿನ ಯೋಜನೆ ಬಗ್ಗೆ ಹೇಳುವುದಾದರೆ, ಕುಡಿಯುವ ನೀರಿನ ಯೋಜನೆ ಬಗ್ಗೆ ಇಂದು ಮಧ್ಯಾಹ್ನ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರು. ಬಹುಶಃ ಆಗ ಮಾನ್ಯ ಮುಖ್ಯಮಂತ್ರಿಗಳೂ ಸಹ ಇದ್ದರು. ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತವಾಗಿರತಕ್ಕಂಥ ಕಾರ್ಯಕ್ರಮವನ್ನು ಮಾಡಬೇಕಾಗಿ ರುವುದು ಪ್ರಜಾಪ್ರಭುತ್ವದ ಅಡಿಯಲ್ಲಿ ಬಂದಂತಹ ಚುನಾಯಿತ ಸರ್ಕಾರಗಳ ಜವಾಬ್ದಾರಿಯಾಗಿದೆ. ಯಾವುದೇ ಸರ್ಕಾರ ಬರಲಿ. ಸಮಗ್ರವಾಗಿ ಕರ್ನಾಟಕದ ಅಭಿವೃದ್ಧಿ ಬಗ್ಗೆ ಯೋಚನೆ ಮಾಡಬೇಕು, ಚಿಂತನೆ ಮಾಡಬೇಕು. ಎಲ್ಲೆಲ್ಲಿ ಏನೇನು ಸಮಸ್ಯೆಗಳಿವೆ, ಆ ಸಮಸ್ಯೆಗಳಿಗೆ ಸರಿಯಾದ ರೀತಿಯಲ್ಲಿ ಯೋಜನೆಗಳನ್ನು ಯಾವ ರೀತಿ ರೂಪಿಸಬೇಕು ಎಂಬ ಬಗ್ಗೆ ಚಿಂತನೆ ಮಾಡಬೇಕಾಗಿರುವುದು Planning Department ನ ಕರ್ತವ್ಯವಾಗಿದೆ.

Planning Department ಬಯಲು ಸೀಮೆ ಪ್ರದೇಶವನ್ನು ಕಟ್ಟಕಡೆಯದಾಗಿ ಪರಿಗಣಿಸಿದೆ. ಎಲ್ಲಿ ನೀರಿದೆಯೋ ಅಲ್ಲಿಗೆ ನೀರನ್ನು ಕೊಡುವ ಕೆಲಸವನ್ನು ಮಾಡುತ್ತಿದೆ, ಎಲ್ಲಿ ಸಮೃದ್ಧವಾಗಿದೆಯೋ ಅಲ್ಲಿ ಉಪ

ಕಾಲುವೆಗಳನ್ನು ಮಾಡುವ ಕೆಲಸವನ್ನು ಮಾಡುತ್ತಿದೆ, ಎಲ್ಲಿ ಜನರ ಸಮೃದ್ಧರಾಗಿದ್ದಾರೋ ಅಲ್ಲಿ ಮತ್ತಷ್ಟು ಸಮೃದ್ಧಿ ಮಾಡತಕ್ಕಂಥ ಕೆಲಸವಾಗುತ್ತಿದೆ. ದುರಾದೃಷ್ಟ, ಕುಡಿಯುವ ನೀರು ಸಿಗುವಂಥ ಅಂತರ್ಜಲ ಪಾತಾಳಕ್ಕೆ ಹೋಗಿದೆ. ಅಲ್ಲಿ ಸಿಗತಕ್ಕಂಥ ನೀರು ವಿಷವಾಗಿದೆ. 100ಕ್ಕೆ 75% ನಮ್ಮ ಜನ ವಿಷವನ್ನು ಕುಡಿಯುತ್ತಿದ್ದಾರೆ, ಆದರೆ ಅನಿವಾರ್ಯ, ಏಕೆಂದರೆ, ನಮಗೆ ಬೇರೆ ಅವಕಾಶ ಇಲ್ಲವೇ ಇಲ್ಲ. ಆ ನೀರನ್ನೇ ಕುಡಿಯಬೇಕು. ನಾವು ಜನರಷ್ಟೇ ಅಲ್ಲ, ಪಶು, ಪಕ್ಷಿ ಎಲ್ಲಾ ಆ ನೀರನ್ನು ಕುಡಿಯುವಂಥ ಪರಿಸ್ಥಿತಿ ಬಂದಿದೆ. ನಾನು ಇವತ್ತು ಸರ್ಕಾರವನ್ನು ಪ್ರಶ್ನೆ ಮಾಡುತ್ತೇನೆ. ಆ 78 ತಾಲ್ಲೂಕಿನವರು ತೆರಿಗೆಯನ್ನು ಕೊಡುತ್ತಿಲ್ಲವೇ? ಅವರಿಗೆ ತೆರಿಗೆ ಏನಾದರೂ ಮನ್ನಾ ಮಾಡಿದ್ದೀರಾ? ಆಯವ್ಯಯದಲ್ಲಿ ಆ ಭಾಗದ ಅಭಿವೃದ್ಧಿಗೇನಾದರೂ ಚಿಂತನೆ ಮಾಡಿದ್ದೀರಾ?

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ಅವರು ಕುಡಿಯುವ ನೀರಿನ flouride ಬಗ್ಗೆ ಬಹಳ ಒಳ್ಳೆಯ ವಿಷಯವನ್ನು ಅವರು ಮಾತನಾಡುತ್ತಿದ್ದಾರೆ. ಸರ್ಕಾರ, ಕೋಲಾರ, ತುಮಕೂರು, ಚಿತ್ರದುರ್ಗಕ್ಕೆ ನೀರು ಕೊಡಬೇಕೆನ್ನುವ ಕಾರಣಕ್ಕಾಗಿಯೇ ಭದ್ರಾ ಮೇಲ್ದಂಡೆ ಚಾನೆಲ್‌ಗೆ ಏರ್ಪಾಡು ಮಾಡಿದ್ದಾರೆ. ನನ್ನ ಕ್ಷೇತ್ರದ ಒಳಗಡೆ ಚಾನೆಲ್‌ನ ಮೂಲ ಪ್ರಾರಂಭವಾಗುತ್ತದೆ. Jck-well point ಪ್ರಾರಂಭವಾಗುವುದು, ತುಂಗಾದಿಂದ ಭದ್ರಾಕ್ಕೆ ನೀರು ಬರುವುದು ನನ್ನ ಕ್ಷೇತ್ರದಲ್ಲಿ ಬರುತ್ತದೆ. ನನ್ನ ಕ್ಷೇತ್ರದಲ್ಲಿ SCW ಎನ್ನುವ ಕಂಪನಿಗೆ ಕೆಲಸವನ್ನು ವಹಿಸಿದ್ದಾರೆ, work order ಆಗಿದೆ. ಆ ಕೆಲಸ ಚಾಲುವಾಗುವಷ್ಟು ಹೊತ್ತಿಗೆ ನಿಮ್ಮ ಪಕ್ಷ (ಕಾಂಗ್ರೆಸ್) ಮತ್ತು ಜೆಡಿ(ಎಸ್) ಪಕ್ಷದ ನಾಯಕರು ಅಲ್ಲಿ ಹೋಗಿ ನಿಂತುಕೊಂಡು, ಈ channel ಮಾಡಿ ಶಾಸಕರು ಅನ್ಯಾಯ ಮಾಡುತ್ತಿದ್ದಾರೆ, ನಿಮಗೆ ಅನ್ಯಾಯ ಮಾಡಿರುವ ಶೃಂಗೇರಿ ಶಾಸಕರು ರೈತರ ಬಗ್ಗೆ ಕಾಳಜಿ ಇಲ್ಲದಿರುವವರು ಎಂದು ಪ್ರತಿಭಟನೆ ಮಾಡುತ್ತಾ ರಸ್ತೆ ಮೇಲೆ ನಿಂತುಕೊಂಡಿದ್ದಾರೆ. ತಾವು , ತೆರಿಗೆ ಕಟ್ಟುತ್ತಿಲ್ಲವೆ, ಸರ್ಕಾರಕ್ಕೆ ಕಾಳಜಿ ಇಲ್ಲವೆ ಎಂದು ಹೇಳುವವರು, ನಿಮ್ಮ ಪಕ್ಷದ ನಾಯಕರುಗಳಿಗೂ ಕೂಡ, ನಾವು ಕುಡಿಯುವ ನೀರಿಗಾಗಿ ಕೇಳುತ್ತಿದ್ದೇವೆ, ಅಲ್ಲೊಂದು ಚಾನೆಲ್ ಮಾಡುವುದಕ್ಕೆ ಒಂದು ಪ್ರತಿಭಟನೆ ಇಟ್ಟುಕೊಂಡು ರಸ್ತೆ ಮೇಲೆ ನೀವು ನಿಂತುಕೊಳ್ಳುವುದು, ರಸ್ತೆ ಮೇಲೆ ನಾವು ಸರ್ಕಾರ ವಿರುದ್ಧ ಮಾತನಾಡುವುದು ಹಿಂಸೆಯಾಗುತ್ತದೆ ಎಂದು

ದಯಮಾಡಿ ಹೇಳಬೇಕೆಂದು, ಅಧ್ಯಕ್ಷರೆ, ನಿಮ್ಮ ಮುಖಾಂತರ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಮಾನ್ಯ ಸಭಾಧ್ಯಕ್ಷರು, ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಎ. ಮುನಿಯಪ್ಪ : ಇವತ್ತು ಏನಾಗಿದೆ ಎಂದರೆ, ಎಲ್ಲಾ ಭಾಗದ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಬೇಕಾದ ಸರ್ಕಾರಗಳು, ಆ ಭಾಗದಲ್ಲಿ ಅತ್ಯಂತ ಕನಿಷ್ಠ ಅವಶ್ಯಕತೆ ಇರುವ ಕುಡಿಯುವ ನೀರನ್ನು ಕೊಡಬೇಕಲ್ಲ? ಪ್ರತಿವರ್ಷ ನೂರಾರು ಕೋಟಿ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡುತ್ತಿದೆ, ಎಲ್ಲರಿಗೂ ಬಹಿರಂಗವಾಗಿ ಗೊತ್ತಿದೆ. ಕಳೆದ 20 ವರ್ಷದಿಂದ ಸತತವಾಗಿ ಕುಡಿಯುವ ನೀರಿಗಾಗಿ ಕೊಡುತ್ತಿದ್ದೇವೆ. ಒಂದೊಂದು ಗ್ರಾಮದ್ದು ಉದಾಹರಣೆಯನ್ನು ಕೊಡುತ್ತೇನೆ, 15–20 ಬೋರ್‌ವೆಲ್‌ಗಳನ್ನು ನಾವು ಕೊರೆಯಿಸಿದ್ದೇವೆ, ಆದರೂ ಇವತ್ತು ನೀರು ಕೊಡುವುದಕ್ಕಾಗುತ್ತಿಲ್ಲ, ಅಂಥ ದುಸ್ಥಿತಿಗೆ ಇವತ್ತು ನಾವು ಮುಟ್ಟಿದ್ದೇವೆ. ಒಂದೊಂದು ಗ್ರಾಮಗಳಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆದರೂ ನೀರು ಸಿಗುತ್ತಿಲ್ಲ. ಆ ಪರಿಸ್ಥಿತಿಗೆ ಇವತ್ತು ನಾವು ಬಂದು ಮುಟ್ಟಿದ್ದೇವೆ. ಇಂಥ ಪರಿಸ್ಥಿತಿಯಲ್ಲಾದರೂ ಬಹುಶಃ ಎಲ್ಲಾ ನದಿಗಳನ್ನು interlink ಮಾಡತಕ್ಕಂಥ ಒಂದು ಯೋಚನೆ ಇದೆ. ಅದನ್ನು ಮಾಡುವ ಚಿಂತನೆ ನಮ್ಮ ಸರ್ಕಾರದಲ್ಲಿ ನಡೆಯಬೇಕಾಗಿತ್ತು. ಅದರ ಜೊತೆಗೆ ಕಳೆದ ಸರ್ಕಾರದಲ್ಲಿ ಮತ್ತು ಶ್ರೀ ಎಸ್.ಎಂ.ಕೃಷ್ಣರವರ ಸರ್ಕಾರದಲ್ಲಿ ಡಾ: ಪರಮಶಿವಯ್ಯನವರು ಕೊಟ್ಟಿರುವ ವರದಿಯನ್ನು ಆಧರಿಸಿ, ಅದನ್ನು ಸಮೀಕ್ಷೆ ಮಾಡಬೇಕು, ಆ ಸಮೀಕ್ಷೆಗೆ ಅನುಸಾರವಾಗಿ ಬಯಲುಸೀಮೆ ಪ್ರದೇಶಕ್ಕೆ ನೀರು ಬರುತ್ತದೆಂದು ಅವರು ಏನೊಂದು ಚಿಂತನೆಯನ್ನು ಮಾಡಿದ್ದಾರೆ ಅದಕ್ಕೆ ಚಾಲನೆ ಕೊಡಬೇಕೆಂದು ಸರ್ಕಾರ, NRSC ಎನ್ನುವ ಹೈದರಾಬಾದ್ ಸಂಸ್ಥೆಯವರಿಗೆ ಸಮೀಕ್ಷೆ ಮಾಡುವುದಕ್ಕೆ ವಹಿಸಿಕೊಟ್ಟರು. 2002–03ರಲ್ಲಿ ಎರಡೂವರೆ ಕೋಟಿಯನ್ನು ಈ ಕೆಲಸಕ್ಕೆ ಕಟ್ಟಿದ್ದಾರೆ, ಮತ್ತೆ 2009 ನವೆಂಬರ್‌ನಲ್ಲಿ 4 ಕೋಟಿ ರೂಪಾಯಿಗಳನ್ನು ಕಟ್ಟುತ್ತಾರೆ. ಸಮೀಕ್ಷೆ ಮಾಡಿ ವರದಿ ತರಿಸಿಕೊಳ್ಳುವುದಕ್ಕೆ ಅವರು ಕೇಳಿರುವುದು 15 ಕೋಟಿ ರೂಪಾಯಿಗಳು. ಆದರೆ ಈ ಸರ್ಕಾರ ಮೂರು ವರ್ಷವಾದ ಮೇಲೆ ಬರೀ ನಾಲ್ಕು ಕೋಟಿ ರೂ. ಕಟ್ಟುತ್ತಿದ್ದಾರೆ, 15 ಕೋಟಿ ರೂ. ಕಟ್ಟುವುದಕ್ಕಾಗಲಿಲ್ಲ.

ನನಗೆ ಇದೊಂದು ನೋವು, ಹೌದು, ಸರ್ಕಾರದಲ್ಲಿ ನಿಜವಾಗಿಯೂ ಹಣವಿಲ್ಲ, ಸಮಸ್ಯೆ ಇದೆ ಎನ್ನುವುದಾದರೆ, ನಿಧಾನವಾಗಿ ಕಟ್ಟಲಿ. ಆದರೆ ಮಠಮಾನ್ಯಗಳಿಗೆ ಬೇಕಾದಂತೆ ಸ್ವೇಚ್ಛಾನುಸಾರ non-plan ನಲ್ಲಿ ಅನುತ್ಪಾದಕ ಯೋಜನೆಗಳಿಗೆ, ಕೆಲಸಕ್ಕೆ ಬಾರದವಂಥದ್ದಕ್ಕೆ ಇವತ್ತು ಸಾರ್ವಜನಿಕ ತೆರಿಗೆಯ ಹಣವನ್ನು ಕೊಟ್ಟು ದುರುಪಯೋಗ ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಆದರೆ 78 ತಾಲ್ಲೂಕುಗಳ ಜನರ ಭವಿಷ್ಯವನ್ನು ರೂಪಿಸತಕ್ಕಂಥ ಸಮೀಕ್ಷೆ ಯೋಜನೆಗೆ ಕೇವಲ 15 ಕೋಟಿ ರೂ. ಕಟ್ಟಿ ಎಂದರೆ, ಬಹುಶಃ ಇವರು ಕಟ್ಟುವುದಕ್ಕಾಗಲಿಲ್ಲವೆಂದರೆ ಹೇಗೆ? ಕಳೆದ ಅಧಿವೇಶನದಲ್ಲೂ ಈ ಬಗ್ಗೆ ಸರ್ಕಾರಕ್ಕೆ ನಾನು ಒತ್ತಾಯ ಮಾಡಿದ್ದೇನೆ. ಈವಾಗಲೂ ಒತ್ತಾಯ ಮಾಡುತ್ತೇನೆ. ಆದರೆ ದುರಾದೃಷ್ಟವಶಾತ್ ಅದಕ್ಕೆ ಎಷ್ಟು ಆದ್ಯತೆ, ಗಮನ ಕೊಡಬೇಕೋ ಅಷ್ಟನ್ನು ಇವತ್ತು ಕೊಡುತ್ತಿಲ್ಲ. ಒಂದು ಮಾತನ್ನು ಹೇಳುತ್ತೇನೆ. ಇವತ್ತು ಡಾ: ರಾಜಶೇಖರ ರೆಡ್ಡಿಯವರಿಲ್ಲ, ಅವರು ತಂದಿರುವ ಜಲಯಜ್ಞವೆಂಬ ಯೋಜನೆಗೆ ರೂ.1,49,900 ಕೋಟಿಯನ್ನು 5 ವರ್ಷದಲ್ಲಿ ಖರ್ಚು ಮಾಡಿ ಬಯಲು ಸೀಮೆ ಪ್ರದೇಶವಾದ ರಾಯಲ ಸೀಮಾ ಪ್ರದೇಶಕ್ಕೆ ನೀರು ತರತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಈಗಾಗಲೇ ಎಲ್ಲಾ ಕಾಲುವೆಗಳನ್ನು ತೆಗೆದಿದ್ದಾರೆ. 100 ಕ್ಕೆ 60–70% ಕೆಲಸ ಮುಗಿದಿದೆ. ನದಿಗಳನ್ನು interlink ಮಾಡತ್ತಕಂಥ, ಬಹುಶಃ ಪ್ರವಾಹ ಬಂದಾಗ ನೀರು ಎಲ್ಲಾ ಕಡೆ ಹರಿದು ಅಂತರ್ಜಲ ತಾನಾಗಿ ಹೆಚ್ಚಾಗಿ ಆ ಭಾಗದ ನೀರಿನ ಸಮಸ್ಯೆ ನಿವಾರಣೆಯಾಗುವ ವ್ಯವಸ್ಥೆಯ ಯೋಜನೆಗಳನ್ನು ಇವತ್ತು ಅಲ್ಲಿ ಮಾಡಿದ್ದಾರೆ. ಅದರ ಬಗ್ಗೆ ಇವತ್ತು ನಮ್ಮ ರಾಜ್ಯ ಸರ್ಕಾರ, Planning Department ಚಿಂತನೆ ಮಾಡುತ್ತಿಲ್ಲ. ಈ ರಾಜ್ಯದ ದುರಾದೃಷ್ಟ, ಯಾವುದರ ಬಗ್ಗೆ ಚಿಂತನೆ ಮಾಡುತ್ತಾರೋ ನಮಗೆ ಗೊತ್ತಾಗುತ್ತಿಲ್ಲ. ಇವತ್ತು ಇಂಥ ಪರಿಸ್ಥಿತಿ ನಮ್ಮ ರಾಜ್ಯದಲ್ಲಿದೆ. ಸಮಯದ ಮಹತ್ವ ನನಗೆ ಗೊತ್ತಿದೆ. ತಮ್ಮಲ್ಲಿ ನಾನು ಇಷ್ಟೇ ರಾಜ್ಯ ಸರ್ಕಾರವನ್ನು ಕೇಳುವುದು, NRSC, ಅಂತರಿಕ್ಷಾ ಸ್ಯಾಟಲೈಟ್ ಸಮೀಕ್ಷೆ ಮಾಡುವ ಸಂಸ್ಥೆಗೆ 15 ಕೋಟಿ ರೂ. ಕೊಡುವಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ ಮತ್ತು ಬೇಗ ಆ ವರದಿಯನ್ನು ತರಿಸಿ ಒಂದು global tender ಮಾಡಿ ಅದರ ಮುಖಾಂತರ detail despatch ಮಾಡತಕ್ಕಂಥ ಕೆಲಸ ಮಾಡಿ, ಆ ಕೆಲಸ ತೆಗೆದುಕೊಳ್ಳುವುದಾಗಬೇಕು. ಡಾ॥ ಪರಮಶಿವಯ್ಯನವರು ತಮ್ಮ ವರದಿಯಲ್ಲಿ

O.30 F-79

ಒಂದು ಮಾತನ್ನು ಹೇಳಿದ್ದಾರೆ, ಗುರುತ್ವಾಕರ್ಷಣೆ ಎಂದು ಒಂದು ಹೊಸ ಟೆಕ್ನಾಲಜಿ ಬಂದಿದೆ, ಆ ಟೆಕ್ನಾಲಜಿ ಮುಖಾಂತರ ಪಶ್ಚಿಮದಿಂದ ಪೂರ್ವಕ್ಕೆ ನೀರು ತರುವುದಕ್ಕೆ ಅವಕಾಶವಿದೆ ಎನ್ನುವ ವಾದವನ್ನು ಎಲ್ಲಾ ತಜ್ಞರೊಡನೆ ಚರ್ಚೆ ಮಾಡಿ ಹೇಳಿದ್ದಾರೆ, ವಾದ ಮಾಡುತ್ತಾರೆ, ಅವರು ತಯಾರಿದ್ದಾರೆ. ಆದರೆ ನಮ್ಮ ಇಂಜಿನಿಯರಿಂಗ್ ಇಲಾಖೆ ಅವರಿಗೆ ಅವಕಾಶ ಕೊಡುವುದರಲ್ಲಿ ವಿಫಲರಾಗಿದ್ದಾರೆ. ಇದು ವಾಸ್ತವವಾಗಿ ನಡೆಯುತ್ತಿರುವಂಥ ವಿಚಾರ. ಆದುದರಿಂದ ಇದರಲ್ಲಿ 78 ತಾಲ್ಲೂಕಿನ ಜನರ ಭವಿಷ್ಯವಿದೆ. ಇನ್ನು 10 ವರ್ಷ ಇದೇ ರೀತಿ ಮಳೆ ಮುಂದುವರೆದರೆ ನಮ್ಮ ಮಕ್ಕಳು ಯಾರು, ನಮ್ಮ ಜನರು ಯಾರೂ ಅಲ್ಲಿ ಇರುವುದಕ್ಕೆ ಸಾಧ್ಯವಿಲ್ಲ, ನೀರು ಸಿಗುವುದಿಲ್ಲ ಆ 78 ತಾಲ್ಲೂಕಿನಿಂದ ಹೊರಗೆ ಹೋಗಲೇ ಬೇಕಾಗುತ್ತದೆ. ಈ ಪರಿಸ್ಥಿತಿಗೆ ಬರುತ್ತದೆ. ಬಹುಶಃ ನಾವ್ಯಾರೂ ಬೇಗ ಈ ವಾತಾವರಣ ಬರುತ್ತದೆಂದು ನಿರೀಕ್ಷೆ ಮಾಡಿರಲಿಲ್ಲ. ಅಂಥ ಒಂದು ಪರಿಸ್ಥಿತಿಯನ್ನು ಇವತ್ತು ನಾವು ಎದುರಿಸುತ್ತಿದ್ದೇವೆ. ದಯಮಾಡಿ, ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು, ಆ 78 ತಾಲ್ಲೂಕಿನಲ್ಲಿರುವ ಬಯಲು ಸೀಮೆ ಪ್ರದೇಶದ ಜನರ ಭವಿಷ್ಯಕ್ಕೆ ಕಾರ್ಯಕ್ರಮ ರೂಪಿಸುವ ಯೋಜನೆಯ ಕೆಲಸವಾಗವೇಕು. ಶಾಶ್ವತವಾಗಿ ಕುಡಿಯುವ ನೀರನ್ನು ಒದಗಿಸುವ ಕೆಲಸವಾಗಬೇಕು ಎನ್ನುವ ಒಂದು ಒತ್ತಾಯವನ್ನು ನಾನು ಮಾಡುತ್ತೇನೆ.

ಇನ್ನು ರೇಷ್ಮೆ ಇಲಾಖೆಯ ಬಗ್ಗೆ ಸ್ವಲ್ಪ ಮಾತನಾಡುತ್ತೇನೆ. ರಾಜ್ಯದಲ್ಲಿ ಮೈಸೂರು ರೇಷ್ಮೆ ಎಂದರೆ ಬಹುಶಃ ಅಂತರರಾಷ್ಟ್ರೀಯವಾಗಿ ಪ್ರಸಿದ್ಧವಾಗಿರುವ ವಿಚಾರ. 1991–92 ರಲ್ಲಿ ಎರಡು ವರ್ಷಗಳ ಕಾಲ ನಾನು ರೇಷ್ಮೆ ಮಂತ್ರಿಯಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿತ್ತು. ನಮ್ಮ ರಾಜ್ಯದಲ್ಲಿ ರೇಷ್ಮೆ ಇಲಾಖೆ ಬಹಳ ಪುರಾತನವಾದುದು. ಇಡೀ ರಾಷ್ಟ್ರದಲ್ಲಿ ಮೂರನೆಯ ಎರಡು ಭಾಗದಷ್ಟು ರೇಷ್ಮೆ ಉತ್ಪಾದನೆ ನಮ್ಮ ರಾಜ್ಯದಲ್ಲಾಗುತ್ತಿದೆ. ಬಹುಶಃ ಪ್ರಪಂಚದಲ್ಲಿ ಚೈನಾ ರಾಷ್ಟ್ರವನ್ನು ಬಿಟ್ಟರೆ ರೇಷ್ಮೆ ಉತ್ಪಾದನೆಯನ್ನು ನಮ್ಮದೇ ಎರಡನೆಯ ಸ್ಥಾನದಲ್ಲಿರುವುದು. ಇವತ್ತು ಅಂಥ ರೇಷ್ಮೆ ಉತ್ಪಾದನೆ ನಾನಾ ತರಹದ ಸಮಸ್ಯೆಗಳನ್ನು ಎದುರಿಸುವಂಥ ಪರಿಸ್ಥಿತಿ ಬಂದಿದೆ. ಮಾನ್ಯ ಮಂತ್ರಿಗಳ ಜೊತೆಯಲ್ಲೂ ನಾನು ಚರ್ಚೆ ಮಾಡಿದೆ. Central Silk Board Chairman ಕರೆಯಿಸಿ ಮಂತ್ರಿಗಳ chamber ನಲ್ಲೆ ಚರ್ಚೆ ಮಾಡಿದೆವು. ಇತ್ತೀಚೆಗೆ ಕೇಂದ್ರ ಸರ್ಕಾರ ತಂದಿರುವ ಕೆಲವು ತಿದ್ದುಪಡಿಗಳ ನ್ಯೂನತೆಗಳನ್ನು

ಕೂಡ ಎಲ್ಲಾ ಮಂತ್ರಿಗಳಿಗೆ ನಾವು ಮನವರಿಕೆ ಮಾಡಿಕೊಟ್ಟಿದ್ದೇವೆ. ರೈತರ ಒಂದು ದೊಡ್ಡ ಹೋರಾಟವನ್ನು ಮಾಡಿ ಅದರ ಮುಖಾಂತರ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತಂದಿದ್ದೇವೆ. ಆ ತಿದ್ದುಪಡಿಗಳಲ್ಲಿ ಕೆಲವು ತಿದ್ದುಪಡಿಗಳು ನಮ್ಮ ರೇಷ್ಮೆ ಉತ್ಪಾದನೆಗೆ ಬಹಳ ಮಾರಕವಾಗಿವೆ. ಮುಂದಿನ ದಿವಸಗಳಲ್ಲಿ ನಮ್ಮ ರೇಷ್ಮೆ ಉತ್ಪಾದನೆಗೆ ಧಕ್ಕೆ ಬರುತ್ತದೆ. ಇವತ್ತು ರೇಷ್ಮೆ ಮಂತ್ರಿಗಳಿಲ್ಲ, ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ. ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಅದರ ಸಮಸ್ಯೆ ಅವರಿಗೆ ಗೊತ್ತಿದೆ. ರೇಷ್ಮೆ ಉತ್ಪಾದನೆಗೆ ಮಾರಕವಾಗಿರುವ ಆ ತಿದ್ದುಪಡಿಗಳನ್ನು ತತಕ್ಷಣ ರದ್ದು ಮಾಡುವ ಕೆಲಸಕ್ಕೆ ನಮ್ಮ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರುವಂಥ ಕೆಲಸವಾಗಬೇಕು. ಕೇಂದ್ರ ಸರ್ಕಾರ ಬೇರೆ ಬೇರೆ ರಾಜ್ಯದಲ್ಲಿರುವ weavers ಗಳಿಗೆ ರೇಷ್ಮೆ ಒದಗಿಸಿಕೊಡಬೇಕೆಂದು ಹೆಚ್ಚು ಗಮನ ಕೊಡುತ್ತಿದೆ. ಅದು ತಾತ್ಕಾಲಿಕವಾದಂಥ ಒಂದು ವ್ಯವಸ್ಥೆಯಾಗಬಹುದು. ಶಾಶ್ವತವಾದ ವ್ಯವಸ್ಥೆಯಾಗುವುದಕ್ಕೆ ಖಂಡಿತಾ ಸಾಧ್ಯವಾಗುವುದಿಲ್ಲ. ಕಾರಣ ನೂಲು ಉತ್ಪಾದನೆಗೆ ಧಕ್ಕೆಯಾದರೆ ಮತೆ ಚೈನಾ ರಾಷ್ಟ್ರದವರು ನಮಗೆ ಒದಗಿಸುವುದಕ್ಕೆ ಸಾಧ್ಯವಿಲ್ಲ. ತಾತ್ಕಾಲಿಕವಾಗಿ ಕಡಿಮೆ ಬೆಲೆಗೆ ಕೊಡುತ್ತಾರಷ್ಟೆ, ಇಲ್ಲಿ ನಮ್ಮ ಉತ್ಪಾದನೆ ಕುಸಿದ ಮೇಲೆ ಅವರು ರೇಟ್ ಜಾಸ್ತಿ ಮಾಡುತ್ತಾರೆ, ವಾಸ್ತವವಾಗಿರುವ trade trick ಅದು. ಕೇಂದ್ರ ಸರ್ಕಾರ ತಿದ್ದುಪಡಿ ತರುವುದಾಗಲಿ, ಚೈನಾದಿಂದ ನೂಲು ಆಮದು ಮಾಡಿಕೊಳ್ಳುವುದಾಗಲಿ ಮತ್ತು ಮಾರ್ಕೆಟ್ ಬಿಟ್ಟು ಪ್ರೈವೇಟ್ ಮಾರ್ಕೆಟ್‌ಗೆ ಹೋಗುವುದಾಗಲಿ ಈ ಮೂರು ವಿಚಾರಗಳ ಬಗ್ಗೆ ರಾಜ್ಯ ಸರ್ಕಾರ ಗಮನಹರಿಸಿ ತತಕ್ಷಣ ಮೊದಲು ಯಾವ ರೀತಿ ವ್ಯವಸ್ಥೆ ಇತ್ತು,

(7-20 PM)

ಆ ವ್ಯವಸ್ಥೆಯನ್ನು ಮತ್ತಷ್ಟು ಬಲಿಷ್ಠಗೊಳಿಸತಕ್ಕಂತಹ ಕೆಲಸ ಮಾಡಬೇಕೇ ಹೊರತು, ಅದನ್ನು ರದ್ದು ಮಾಡತಕ್ಕಂತಹ, ಅದನ್ನು ದುರ್ಬಲಗೊಳಿಸತಕ್ಕಂತಹ ಕೆಲಸ ಆಗಬಾರದು ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ತಲಘಟ್ಟಪುರದಲ್ಲಿ ಏನು ರೇಷ್ಮೆ research institute ಎಂದು ಇದೆ, ಅದು ರೇಷ್ಮೆ ಬೆಳೆಗೆ ಒಂದು heart ಇದ್ದ ಹಾಗೆ ಇತ್ತು. ಅದಕ್ಕೆ ಶಕ್ತಿ ಕೊಟ್ಟು ರಿಸರ್ಚ್ ಮಾಡತಕ್ಕಂತಹ ಮತ್ತು ಡೆವಲಪ್‌ಮೆಂಟ್ ಮಾಡತಕ್ಕಂತಹ

ಜವಾಬ್ದಾರಿ ಇತ್ತೋ, ಅದನ್ನು ಸಂಪೂರ್ಣವಾಗಿ ಇವತ್ತು ನಿರ್ಲಕ್ಷ್ಯ ಮಾಡಿದ್ದಾರೆ. ಇವತ್ತು research ಇಲ್ಲ, development ಇಲ್ಲ.. ಹೊಸ ತಳಿ ಮೊದಲೇ ಇಲ್ಲ. ಈ ತರಹ ಹೊಸ ತಳಿಗಳು ಬರದೆ ರೇಷ್ಮೆ ಉತ್ಪಾದನೆ ಕುಸಿತವಾಗುವುದಕ್ಕೆ ಮಾರಕವಾಗುವಂತಹ ಕೆಲಸ ಆಗುತ್ತಿದೆ. Research centre ಅನ್ನು ತಕ್ಷಣ re-organize ಮಾಡತಕ್ಕಂಥದ್ದು ಮತ್ತು ಅದನ್ನು strengthen ಮಾಡತಕ್ಕಂಥದ್ದು, ಅಲ್ಲಿರತ್ಕಕಂತಹ scientist ಗಳಿಗೆ ಜವಾಬ್ದಾರಿ ವಹಿಸತಕ್ಕಂತಹ ಕೆಲಸ ಮಾಡಿದರೆ ಮಾತ್ರ research centre ಮುಖಾಂತರ ಒಳ್ಳೆಯ ರೋಗರಹಿತವಾದ ತಳಿಗಳು ಬರಲಿಕ್ಕೆ ಸಾಧ್ಯವಿದೆ. ಅದರ ಮುಖಾಂತರ ರೇಷ್ಮೆ ಬಿತ್ತನೆ, ರೋಗರಹಿತವಾದ ಒಳ್ಳೆಯ ಗುಣಮಟ್ಟದ ರೇಷ್ಮೆ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ರೇಷ್ಮೆ ಇಲಾಖೆ ಬಗ್ಗೆ ಅವರು ತಂದಿರತಕ್ಕಂತಹ ತಿದ್ದುಪಡಿ ಗಳನ್ನು ರದ್ದು ಮಾಡತ್ಕಕಂತಹ ಕೆಲಸ ನಮ್ಮ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಡಬೇಕು. ಕೇಂದ್ರ ಸರ್ಕಾರದ textile ಮಂತ್ರಿಗಳಿಗೆ ಕೇಳಿದರೆ ಅವರು 'ಇಲ್ಲ ನಿಮ್ಮ ರಾಜ್ಯ ಸರ್ಕಾರದಿಂದ ಯಾವುದೇ ಆ ತರಹದ ತಿದ್ದುಪಡಿ ರದ್ದು ಮಾಡಬೇಕು; ಇಲ್ಲದಿದ್ದರೆ ನಮಗೆ ರೇಷ್ಮೆ ಉತ್ಪಾದನೆ ಮೇಲೆ ತೊಂದರೆಯಾಗುತ್ತದೆ ಎನ್ನತಕ್ಕಂತಹ ಒಂದು ಪ್ರಸ್ತಾವನೆ ಬಂದಿಲ್ಲ' ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಆದ್ದರಿಂದ ನಾನು ಸರ್ಕಾರವನ್ನು ತೀವ್ರವಾಗಿ ಒತ್ತಾಯ ಮಾಡುತ್ತೇನೆ. ಆ ತಿದ್ದುಪಡಿಗಳನ್ನು ರದ್ದು ಮಾಡತಕ್ಕಂತಹ ಕೆಲಸ ಸರ್ಕಾರ ತಕ್ಷಣ ಮಾಡಬೇಕು ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇನ್ನು ಆಹಾರದ ವಿತರಣೆ ಬಗ್ಗೆ ತಮಗೆಲ್ಲಾ ಗೊತ್ತಿದೆ. ನೀವು ನಾವು ಎಲ್ಲಾ ಅನುಭವಿಸುತ್ತಿದ್ದೇವೆ. ಯಾವ ಕಾಲದಲ್ಲಿ ತಂದರೋ, ಆ 'ನೆಮ್ಮದಿ' ಎನ್ನತಕ್ಕಂತಹ ಹೆಸರು, ನೆಮ್ಮದಿ ಕೇಂದ್ರಗಳಿಂದ ಆ ಭಾಗದಲ್ಲಿರತಕ್ಕಂತಹ ಎಲ್ಲಾ ಜನರ ನೆಮ್ಮದಿ ಹಾಳಾಗಿ ಹೋಗಿದೆ. ಇವತ್ತು ಏನಾಗಿದೆ ಎಂದರೆ, ಆ ನೆಮ್ಮದಿ ಕೇಂದ್ರಗಳನ್ನು ಹೋಬಳಿ ಹೆಡ್ ಕ್ವಾರ್ಟರ್ಸ್‌ನಲ್ಲಿ ಇಟ್ಟು ಬಿಟ್ಟರು. ಅಲ್ಲಿ ಎಲ್ಲಾ ಓದಿದವರು ತಿಳಿವಳಿಕೆ ಇರತಕ್ಕಂತಹವರು ಅನುಕೂಲಸ್ಥರೇ ಒಂದೊಂದು ಮನೆಯಲ್ಲಿ ಮೂರು ಮೂರು ಕಾರ್ಡುಗಳನ್ನು ಪಡೆದುಕೊಂಡಿದ್ದಾರೆ. ರಿಮೋಟ್ ಪ್ರದೇಶಗಳಲ್ಲಿರತಕ್ಕಂತಹ ನಮ್ಮ ಹಳ್ಳಿಯ ರೈತರು ಕೂಲಿ ಕಾರ್ಮಿಕರು ಹಾಗೂ ಕೃಷಿ ಕಾರ್ಮಿಕರು ಯರೂ ಅದನ್ನು ಸರಿಯಾದ ರೀತಿಯಲ್ಲಿ ಬಳಕೆ

ಮಾಡಿಕೊಂಡಿಲ್ಲ. ಬಡತನದ ರೇಖೆಯಿಂದ ಮೇಲಿರುವ ಅನುಕೂಲಸ್ಥರೇ APL ನವರೇ ಜಾಸ್ತಿ BPL ಕಾರ್ಡುಗಳನ್ನು ಪಡೆದುಕೊಂಡಿದ್ದಾರೆ. ಇದರ ಬಗ್ಗೆ ಸರಿಯಾದ ಸಮೀಕ್ಷೆ ಆಗಬೇಕು. ಶಿಸ್ತು ಬದ್ಧವಾಗಿ ಆಗಬೇಕು. ಅದಕ್ಕೆ ಜವಾಬ್ದಾರರಾದ ಅಧಿಕಾರಿಗಳು ಯಾರಿದ್ದಾರೆ ಆ ಎಲ್ಲಾ ಅಧಿಕಾರಿಗಳ ಮೇಲೆ ಜಾಯಿಂಟ್ ಆಗಿ responsibility fix ಮಾಡಬೇಕು. ಕೊಮೋಟೋ ಎಂದು ರಾಜ್ಯ ಮಟ್ಟದ ಏಜೆನ್ಸಿಗೆ ಫೋಟೋಗಳನ್ನು ತೆಗೆಯುವುದಕ್ಕೆ ಕೊಟ್ಟಿದ್ದಾರೆ. ಒಂದು ಮನೆಯಲ್ಲಿ ನಾಲ್ಕು ಜನ ಇದ್ದರೆ ಒಬ್ಬರ ಫೋಟೋ ಮಾತ್ರ ಹಾಕಿದ್ದಾರೆ. ಒಬ್ಬರಿಗೆ ಮಾತ್ರ ಆಹಾರಧಾನ್ಯಗಳನ್ನು ಕೊಡುತ್ತಾರೆ. ಇನ್ನು ಮೂರು ಜನ ಅವನ ಹೆಂಡತಿ ಮಕ್ಕಳಿಗೆ ಆಹಾರಧಾನ್ಯ ಇಲ್ಲ. ಎಂತಹ ವಿಚಿತ್ರ ನೋಡಿ ಇದು. ಇದು ಕಳೆದ ನಾಲ್ಕು ತಿಂಗಳುಗಳಿಂದ ನಡೆಯುತ್ತಿದೆ. ಕೊಮೋಟೋ ಮಾಡಿರುವಂತಹ ದುರ್ವ್ಯವಸ್ಥೆಯಿಂದ ನಿಜವಾದ ಬಡವರಾಗಿರುವಂತಹ ಆ ಕುಟುಂಬಗಳು ಹಾಳಾಗುತ್ತಿದೆ. ಅದನ್ನು ಸರಿಪಡಿಸತಕ್ಕಂತಹ ಕೆಲಸ ತತಕ್ಷಣ ಆಗಬೇಕು. ತಕ್ಷಣ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡಬೇಕು. ಇದರ ಬಗ್ಗೆ ಹೊಸ ಸಮೀಕ್ಷೆ ಆಗಬೇಕು. ಏನು BPL ಕಾರ್ಡುಗಳ ಗೈಡ್ ಲೈನ್ಸ್ ಏನಿದೆ ಆ ಗೈಡ್‌ಲೈನ್ಸ್ ಪ್ರಕಾರ ಪ್ರಾಪರ್ ಆಗಿ ಸರ್ವೇ ಮಾಡಿ ಅರ್ಹರಿಗೆ ಕಾರ್ಡುಗಳನ್ನು ಕೊಡತಕ್ಕಂತಹ ಕೆಲಸ ಮಾಡಬೇಕು. ಒಂದು ಊರಿನಲ್ಲಿ 75% ಬಡವರು ಇದ್ದಾರೆ. ಇವರು 40% ಎಂದು ಫಿಕ್ಸ್ ಮಾಡುತ್ತಾರೆ. ಅದು ಹಾಗಲ್ಲ. ಹಳ್ಳಿಗಳಲ್ಲಿ ಬಡವರು ಎಷ್ಟು ಜನ ಇದ್ದಾರೆ, BPL ವ್ಯಾಪ್ತಿಗೆ ಯಾರು ಬರುತ್ತಾರೆ ಅವರೆಲ್ಲರಿಗೂ ಕಡ್ಡಾಯವಾಗಿ ಕಾರ್ಡು ಕೊಡತಕ್ಕಂತಹ ಕೆಲಸ ಆಗಬೇಕು ಎನ್ನತಕ್ಕಂತಹ ಒತ್ತಾಯವನ್ನು ನಾನು ತಮ್ಮ ಮುಖಾಂತರ ಮಾಡಿ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಅಧ್ಯಕ್ಷರೆ, ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವುದಕ್ಕಾಗಿ ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಹೇಳುತ್ತಾ, 2010–11 ರ ಬಜೆಟ್ ಒಟ್ಟಾರೆಯಾಗಿ ರಾಜ್ಯದ ಅಭಿವೃದ್ಧಿ ಪರವಾಗಿರತಕ್ಕಂತಹ ಬಜೆಟ್ ಎಂದು ಹೇಳಬಯಸುತ್ತೇನೆ. ಈ ಬಜೆಟ್ ಈ ರಾಜ್ಯದ ಕೃಷಿಕರ, ನೇಕಾರರ, ಬಡವರ, ದೀನದಲಿತರ, ಅಲ್ಪಸಂಖ್ಯಾತರ, ಒಟ್ಟಾರೆಯಾಗಿ ಹಿಂದುಳಿದವರ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತವಾಗಿರತಕ್ಕಂತಹ ಬಜೆಟ್ ಎಂದು ತಿಳಿದುಕೊಂಡು

ಇಂತಹ ಒಂದು ಅದ್ಭುತ ಕಲ್ಪನೆಯಿಂದ ಕೊಟ್ಟಿರತಕ್ಕಂತಹ ಬಜೆಟ್ ಆಗಿರುವುದರಂದ ಇದನ್ನು ಸ್ವಾಗತ ಮಾಡುತ್ತೇನೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ವಿರೋಧ ಪಕ್ಷದ ಅನೇಕ ಮುಖಂಡರುಗಳು ಈ ಬಜೆಟ್ ಅನ್ನು ವಿರೋಧ ಮಾಡಿ ಮಾತನಾಡಿದರು. ನಾನು ಈ ಮುಖಾಂತರ ಒಂದು ವಿಷಯವನ್ನು ಗಮನ ಸೆಳೆಯಬಯ ಸುತ್ತೇನೆ. ಮಾನ್ಯ ಯಡಿಯೂರಪ್ಪನವರಿಗಿಂತ ಪೂರ್ವದಲ್ಲಿ ಅಧಿಕಾರಕ್ಕೆ ಬಂದವರು ಸುಮಾರು 2004–05ರ ಬಜೆಟ್ ತೆಗೆದುಕೊಂಡರೆ ರಾಜ್ಯದ ಒಟ್ಟಾರೆ ಬಜೆಟ್ ಘೋಷಣೆ ಮಾಡಿರುವುದು 25,000 ಕೋಟಿ ರೂ. ಇಂದ 30,000 ಕೋಟಿ ರೂ. ಮಾತ್ರ, ಆದರೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರಕ್ಕೆ ಬಂದ ವರ್ಷದಿಂದ ಈವರೆಗೆ ಸುಮಾರು ಐದು ಬಜೆಟ್‌ಗಳನ್ನು ಮಂಡನೆ ಮಾಡಿದ್ದಾರೆ. ಅವರು ಅಧಿಕಾರಕ್ಕೆ ಬಂದು ನಾಲ್ಕು ವರ್ಷಗಳಾಗಿವೆ. ಅವರು ಅಧಿಕಾರಕ್ಕೆ ಬಂದ ನಾಲ್ಕೇ ವರ್ಷಗಳಲ್ಲಿ ಸುಮಾರು 70,000 ಕೋಟಿ ರೂ.ಗಳ ಬಜೆಟ್ ಮಂಡನೆ ಮಾಡಿದ್ದಾರೆಂದರೆ, ಅವರು ಎಂತಹ ಸಾಮರ್ಥ್ಯ ಹೊಂದಿರತಕ್ಕಂತಹ ಮುಖ್ಯಮಂತ್ರಿಗಳು ಮತ್ತು ಇದು ಯಾವ ರೀತಿ ಆಡಳಿತ ನಡೆಸುವಂತಹ ಪಕ್ಷ ಎನ್ನುವಂಥದ್ದನ್ನು ನಾವು ಅಭಿನಂದಿಸ ಬೇಕಾಗಿದೆ. ಈ ರೀತಿ ಕೇವಲ ನಾಲ್ಕು ವರ್ಷಗಳಲ್ಲಿ ಈ ರಾಜ್ಯಕ್ಕೆ ಎರಡು ಪಟ್ಟು ಆದಾಯ ಬರಬೇಕಾದರೆ, ಯಾವ ರೀತಿ ಅವರು ಈ ರಾಜ್ಯವನ್ನು ಸಮರ್ಪಕವಾಗಿ ಮುಂದುವರೆಸುತ್ತಿದ್ದಾರೆ ಎನ್ನುವುದಕ್ಕೆ ಇದು ಒಂದು ಉದಾಹರಣೆ. ಇದು ಶ್ಲಾಘನೀಯ ಎಂದು ನಾನು ಹೇಳಬಯಸುತ್ತೇನೆ. ಇಷ್ಟೊಂದು ದುಡ್ಡು ಮೊದಲು ಎಲ್ಲಿ ಹೋಗುತ್ತಿತ್ತು ಎನ್ನುವುದೂ ಸಹಿತ ರಾಜ್ಯದ ಜನ ಆಶ್ಚರ್ಯಚಕಿತರಾಗಿ ನೋಡುವಂತಾಗಿದೆ. ಇಷ್ಟೊಂದು ಭಾರಿ ಪ್ರಮಾಣದಲ್ಲಿ ಸುಮಾರು 60 ವರ್ಷಗಳಲ್ಲಿ ಆಗದೇ ಇರತಕ್ಕಂತಹ ಸಾಧನೆ ಇದು. ನಾಲ್ಕು ವರ್ಷಗಳಲ್ಲಿ 60 ವರ್ಷಗಳ ಸಾಧನೆ ಮೀರಿರತಕ್ಕಂತಹ ಬಜೆಟನ್ನು ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದ ಅಭಿವೃದ್ಧಿಗೆ ಕೊಟ್ಟಿರ ತಕ್ಕಂಥದ್ದು ಬಹಳ ಶ್ಲಾಘನೀಯ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಆ ಬಜೆಟ್ ಮುಖಾಂತರ ಯಾವ ಯಾವ ರೀತಿ ಯೋಜನೆಗಳನ್ನು ಈ ರಾಜ್ಯದಲ್ಲಿ ಹಮ್ಮಿಕೊಂಡಿದ್ದಾರೆ ಎಂಬ ಬಗ್ಗೆ ನಾನು ಒಂದೆರಡು–ಮೂರು ಉದಾಹರಣೆಗಳನ್ನು ಹೇಳಬಯಸುತ್ತೇನೆ. ಉದಾಹರಣೆಗೆ ಶಿಕ್ಷಣ ಕ್ಷೇತ್ರವನ್ನು ನಾವು ತೆಗೆದುಕೊಳ್ಳಬಹುದು. ಮಾನ್ಯ ಯಡಿಯೂರಪ್ಪನವರು ಹಿಂದಿನ ಸಮ್ಮಿಶ್ರ ಸರ್ಕಾರದಿಂದ ಹಿಡಿದು ಇಲ್ಲಿಯವರೆಗೆ, ಅವರು ಹಣಕಾಸಿನ

ಸಚಿವರಾಗಿ ಅಧಿಕಾರ ವಹಿಸಿಕೊಂಡ ತಕ್ಷಣ ರಾಜ್ಯದಲ್ಲಿ ಸುಮಾರು 1,200 ಪ್ರೌಢಶಾಲೆಗಳನ್ನು ಮಂಜೂರು ಮಾಡತಕ್ಕಂತಹ ಕೆಲಸವನ್ನು ಮಾಡಿದರು. ಅದೂ ಅಲ್ಲದೆ 500 ಜೂನಿಯರ್ ಕಾಲೇಜುಗಳನ್ನು ಮಂಜೂರು ಮಾಡಿದರು. ಅದರ ಜೊತೆಗೆ ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜುಗಳು, ಯೂನಿವರ್ಸಿಟಿಗಳು, ಮತ್ತು ಶಿಕ್ಷಣ ಕ್ಷೇತ್ರಕ್ಕೆ ಸಾಕಷ್ಟು ಒತ್ತು ಕೊಟ್ಟು ಕೇವಲ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪ್ರೌಢಶಾಲೆ, ಜೂನಿಯರ್ ಕಾಲೇಜು ಹಾಗೂ ಪದವಿ ಕಾಲೇಜುಗಳನ್ನು ಪ್ರಾರಂಭ ಮಾಡುವುದು ಅಷ್ಟೇ ಅಲ್ಲ, ಆ ಎಲ್ಲಾ ಸಂಸ್ಥೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತಹ ವ್ಯವಸ್ಥೆಯೂ ಸಹಿತ ಮಾಡಿದ್ದಾರೆ. ಈ ಎಲ್ಲಾ ಸಂಸ್ಥೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಕೊಟ್ಟಿರುವುದನ್ನು ತಾವು ನೋಡಬಹುದು. ವಿರೋಧ ಪಕ್ಷದ ಕೆಲವೊಂದು ಸದಸ್ಯರು ಮಾತನಾಡಿದರು. ನೀವು ಪದವಿ ಕಾಲೇಜುಗಳನ್ನು ಕೊಟ್ಟಿರಿ, ಆದರೆ ಸಿಬ್ಬಂದಿಗಳನ್ನು ಕೊಡಲಿಲ್ಲ. ನಮ್ಮ ಸರ್ಕಾರ ಬಂದ ನಂತರ ಸುಮಾರು 25,000 ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯನ್ನು ತುಂಬಿರತಕ್ಕಂತಹ ಸಾಧನೆಯನ್ನು ಅಂಕಿ ಸಂಖ್ಯೆಗಳ ಪ್ರಕಾರ ತಾವು ನೋಡಬಹುದು. ಸ್ವಾತಂತ್ರ್ಯ ಸಿಕ್ಕ ಸುಮಾರು 62 ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಪ್ರಥಮ ದರ್ಜೆ ಪದವಿ ಕಾಲೇಜುಗಳು ಎಷ್ಟು ಇದ್ದವು? ಸುಮಾರು 100–175 ಕಾಲೇಜುಗಳು ಇದ್ದವು. ಆದರೆ ಮಾನ್ಯ ಯಡಿಯೂರಪ್ಪನವರು ಬಂದ ತಕ್ಷಣ ಎರಡೇ ವರ್ಷಗಳಲ್ಲಿ ಆ ಸಾಧನೆಯನ್ನು ಮೀರಿ 182 ಪ್ರಥಮ ದರ್ಜೆ ಪದವಿ ಕಾಲೇಜುಗಳನ್ನು ಪ್ರಾರಂಭ ಮಾಡಿರುವುದು ಸಾಧನೆ ಅಲ್ಲವಾ? ಆ ರೀತಿ ವಿರೋಧ ಮಾಡುವ ವಿರೋಧ ಪಕ್ಷದವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಇಷ್ಟೊಂದು ದೊಡ್ಡ ಪ್ರಮಾಣದ ಸಾಧನೆ ಮಾಡಿರುವಂತಹ ಕೀರ್ತಿ ಮಾನ್ಯ ಯಡಿಯೂರಪ್ಪನವರಿಗೆ ಸಲ್ಲುತ್ತದೆ ಎನ್ನುವಂತಹ ಮಾತನ್ನು ನಾನು ಹೇಳಬಯಸುತ್ತೇನೆ. ಇನ್ನು ವಿದ್ಯುತ್ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆ ಆಯಿತು. ಈ ರಾಜ್ಯವನ್ನು ಕತ್ತಲೆ ಕೂಪಕ್ಕೆ ತಳ್ಳುತ್ತಿದ್ದಾರೆ, ಸಾಲದ ಬಲೆಗೆ ತಳ್ಳುತ್ತಿದ್ದಾರೆ ಎನ್ನತಕ್ಕಂತಹ ಮಾತನ್ನು ವಿರೋಧ ಪಕ್ಷದವರು ಆಪಾದನೆ ಮಾಡಿರುವ ಸಂಗತಿಯನ್ನು ನಾವು ಕೇಳಿದ್ದೇವೆ. ಇದಕ್ಕೆಲ್ಲಾ ಕಾರಣ ಯಾರು? ರಾಜ್ಯವನ್ನು ಕತ್ತಲೆ ಕಡೆ ತಳ್ಳುವಂತೆ ಮಾಡುವುದಕ್ಕೆ ಕಾರಣ ಯಾರು? ಸ್ವಾತಂತ್ರ್ಯ ಸಿಕ್ಕು 62 ವರ್ಷಗಳಿಂದ ಈ ರಾಜ್ಯವನ್ನು ಆಳಿರತಕ್ಕಂತಹ ಕಾಂಗ್ರೆಸ್‌ನ ಸಂಸ್ಕೃತಿ ಆಗಲಿ, ಈ ಹಿಂದೆ ಆಳಿರತಕ್ಕಂತಹ ಯಾರೇ ಆಗಲಿ, ಈ ರಾಜ್ಯದ

ಅಭಿವೃದ್ಧಿಯ ಮುಂದಾಲೋಚನೆ ಇಲ್ಲದೆ, ಯಾವ ರೀತಿ ಮುಂದಿನ ಭವಿಷ್ಯದಲ್ಲಿ ನಾವು ಇಂಧನದ ಉತ್ಪಾದನೆಗೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು, ಆ ರೀತಿಯ ಯಾವುದೇ ಯೋಜನೆ ಮಾಡಲಾರದೆ, ಕೇವಲ ಕುರ್ಚಿ ಆಸೆಗಾಗಿ ಅಧಿಕಾರ ನಡೆಸುವುದು ಅಷ್ಟೇ ಮಾಡಿದರೇ ವಿನಾ ಭವಿಷ್ಯದ ಬಗ್ಗೆ ಚಿಂತನೆ ಮಾಡಲಿಲ್ಲ.

ಈ ರೀತಿ ಭವಿಷ್ಯದ ಬಗ್ಗೆ ಚಿಂತನೆ ಮಾಡದೇ ಇರತಕ್ಕಂಥ ಕಾರಣದಿಂದ ಇವತ್ತು ರಾಜ್ಯದಲ್ಲಿ ಆಗಿರುವ ವಿದ್ಯುತ್ ಸಮಸ್ಯೆ ಬಗ್ಗೆ ರಾಜ್ಯದ ಜನರು ಯಾರಿಗಾದರೂ ಶಾಪ ಹಾಕಿದರೆ ಅದು ಕೇವಲ ಹಿಂದೆ ಸರ್ಕಾರದಲ್ಲಿ ಆಡಳಿತ ನಡೆಸಿದವರಿಗೆ ಹಾಕುತ್ತಿದ್ದಾರೆಯೆ ವಿನಾ ಈ ಸರ್ಕಾರಕ್ಕಲ್ಲ, ಮಾನ್ಯ ಯಡಿಯೂರಪ್ಪನವರ ಸರ್ಕಾರಕ್ಕಲ್ಲ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಕ್ಕೂ ಕಾರಣವೇನೆಂದರೆ, ಮಾನ್ಯ ಯಡಿಯೂರಪ್ಪನವರು ಬರುವುದಕ್ಕಿಂತ ಪೂರ್ವದಲ್ಲಿ ಈ ರಾಜ್ಯದಲ್ಲಿ ಸರಿಸುಮಾರು ವಿದ್ಯುತ್ ಉತ್ಪಾದನೆ ಎಂದರೆ ಕೇವಲ 6 ಸಾವಿರ ಮೆಗಾವ್ಯಾಟ್, ಮಾನ್ಯ ಯಡಿಯೂರಪ್ಪನವರು ಬಂದ ನಂತರವೂ ಕೂಡ ಒಟ್ಟಾರೆಯಾಗಿ ಇಲ್ಲಿಯವರೆವಿಗೆ 8 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿದ್ದುದನ್ನು ನಾವು ಕಾಣುತ್ತಿದ್ದೆವು. ಆದರೆ ಮಾನ್ಯ ಯಡಿಯೂರಪ್ಪ ನವರು ಬಂದು ಕೇವಲ ನಾಲ್ಕೇ ವರ್ಷದಲ್ಲಿ, ಅದರಲ್ಲಿಯೂ ಈ ಎರಡೇ ವರ್ಷದಲ್ಲಿ ನಮ್ಮ ಬಿ.ಜೆ.ಪಿ. ಸರ್ಕಾರ ಬಂದನಂತರ ಭವಿಷ್ಯದಲ್ಲಿ ಈ ರಾಜ್ಯದ ಅಭಿವೃಧ್ಧಿಯ ಚಿಂತನೆಯ್ನು ಮಾಡಿ ಸುಮಾರು 12 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಯೋಜನೆಯನ್ನು ಹಾಕಿಕೊಂಡು ಯದ್ಧೋಪಾದಿಯಲ್ಲಿ ಕಾರ್ಯಪ್ರವೃತ್ತರಾಗಿರತಕ್ಕಂಥ ಸಂಗತಿಯನ್ನು ನಾವು ನೋಡುತ್ತಿದ್ದೇವೆ. ಇಷ್ಟೇ ಅಲ್ಲದೇ ಹಿಂದೆ ಯಾವ ಸರ್ಕಾರ ಕೂಡ, ಯಾವ ಮುಖಂಡರೂ ಕೂಡ ಈ ರಾಜ್ಯದಲ್ಲಿ ಒಂದು ರೂಪಾಯಿ ವಿದ್ಯುತ್‌ನ್ನು ಖರೀದಿ ಮಾಡಿ ಈ ರಾಜ್ಯಕ್ಕೆ ತಂದಿರತಕ್ಕಂಥ ಉದಾಹರಣೆ ಇಲ್ಲ. ಆದರೆ ಹೋದ ಸಲ ವಿದ್ಯುತ್ತಿನ ಸಮಸ್ಯೆಯಾದಾಗ ಸುಮಾರು 2 ಸಾವಿರ ಕೋಟಿ ರೂಪಾಯಿ ವಿದ್ಯುತ್‌ನ್ನು ಖರೀದಿ ಮಾಡಿ ರೈತರ ಪಂಪ್‌ಸೆಟ್‌ಗಳಿಗೆ, ಈ ರಾಜ್ಯದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಓದುವುದಕ್ಕೆ ತೊಂದರೆಯಾಗದಂತೆ ವಿದ್ಯುತ್ ಪೂರೈಕೆ ಮಾಡಿರುವುದನ್ನು ನಾವು ಕಂಡಿದ್ದೇವೆ. ಇದು ಸಾಧನೆ ಯಿಲ್ಲವೆ ಎನ್ನುವಂಥ ಮಾತನ್ನು ನಾನು ವಿರೋಧ ಪಕ್ಷದವರಲ್ಲಿ ನಿಮ್ಮ ವಿರೋಧ ಪಕ್ಷದವರಲ್ಲಿ ನಿಮ್ಮ ಮುಖಾಂತರ ಕೇಳಬಯಸುತ್ತೇನೆ. ಇನ್ನು

ಒಂದು ಪ್ರಶ್ನೆಯನ್ನು ನಾನು ವಿರೋಧ ಪಕ್ಷದವರಿಗೆ ಕೇಳಬಯಸುತ್ತೇನೆ. ಈ ರಾಜ್ಯದಲ್ಲಿರುವ ಪಟ್ಟಣಗಳು ಹಾಗೂ ನಗರ ಪ್ರದೇಶಗಳಿಗೆ, ಅವರು ಆಡಳಿತದಲ್ಲಿದ್ದಾಗ ಯಾವುದೇ ರೀತಿಯಲ್ಲಿಯೂ ಒಂದು ಲಕ್ಷ, ಎರಡು ಲಕ್ಷ, ಐದು ಲಕ್ಷ ರೂ.ಗಳನ್ನು ಪಟ್ಟಣಗಳಿಗೆ, ನಗರ ಪ್ರದೇಶಗಳಿಗೆ ಕೊಟ್ಟಿರತಕ್ಕಂಥ ಉದಾಹರಣೆಯನ್ನು ನಾನು ಎಂದೂ ಕಂಡಿಲ್ಲ. ನಾನು ಪ್ರಥಮವಾಗಿ ಶಾಸಕನಾದಾಗ ನಗರಸಭೆಗಳಿಗೆ ಯಾವುದೇ ರೀತಿಯ ಅನುದಾನವನ್ನು ಕೊಟ್ಟಿರಲಿಲ್ಲ. ಆದರೆ ಎಸ್.ಎಫ್.ಸಿ. ಮುಖಾಂತರ ಸಿ.ಎಂ. ಫಂಡ್ ಮುಖಾಂತರ ಈಗ ನಮ್ಮ ಎಲ್ಲಾ ನಗರಗಳಿಗೆ ನಾಲ್ಕು ಕೋಟಿ, ಐದು ಕೋಟಿ, ಹತ್ತು ಕೋಟಿ, ಐವತ್ತು ಕೋಟಿ ಮತ್ತು ಮಹಾನಗರ ಪಾಲಿಕೆಗಳಿಗೆ ನೂರು ಕೋಟಿ ಎರಡು ವರ್ಷದಲ್ಲಿ, ಜಿಲ್ಲಾ Place ಗಳಿಗೆ ಹದಿನೈದರಿಂದ ಮೂವತ್ತು ಕೋಟಿ, ಸಿ.ಎಂ. ಫಂಡ್ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೋಟಿ ಕೋಟಿ ಹಣವನ್ನು ಕೊಟ್ಟು ಆ ನಗರಗಳಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಮಾಡುವುದನ್ನು ನಾವು ಕಂಡಿದ್ದೇವೆ. ಈ ರೀತಿಯ ಅಭಿವೃದ್ಧಿ ಹಿಂದೆಂದೂ ಕಂಡಿಲ್ಲ ಎನ್ನುವುದನ್ನು ಆ ನಗರ ಪ್ರದೇಶದ ಜನರು ಮಾನ್ಯ ಯಡಿಯೂರಪ್ಪನವರನ್ನು ಹೊಗಳುವಂಥ ಸಂದರ್ಭವನ್ನು ನಾವು ಸಾಕಷ್ಟು ಕಡೆ ನೋಡಿದ್ದೇವೆ. ಆದರೆ ಕೇವಲ ವಿರೋಧಪಕ್ಷದವರು ಆತ್ಮವಂಚನೆ ಮಾಡಿಕೊಂಡು, ಅವರೆಲ್ಲೋ ಬಹುಶಃ ನನಗನ್ನಿಸುತ್ತದೆ, ಅವರು ಗಾಬರಿಯಾಗಿದ್ದಾರೆ. ಅವರು ಪ್ರತಿಯೊಂದಕ್ಕೂ ಕೂಡ ಅಡ್ಡಗಾಲು ಹಾಕುವಂಥ ಪ್ರಯತ್ನವನ್ನು ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದಕ್ಕೆ ಕಾರಣವೇನೆಂದರೆ, ಮಾನ್ಯ ಯಡಿಯೂರಪ್ಪನವರು ಇಷ್ಟು ವೇಗದ ಗತಿಯಲ್ಲಿ, ಯುದ್ಧೋಪಾದಿಯಲ್ಲಿ ಈ ರಾಜ್ಯದಲ್ಲಿ ಆಯವ್ಯಯದಲ್ಲಿ ಹೊಸ ಯೋಜನೆಗಳನ್ನು ತರುವುದರ ಮುಕಾಂತರ ಈ ರಾಜ್ಯದ ಅಭಿವೃದ್ಧಿಯ ಕೆಲಸವನ್ನು ಮಾಡುತ್ತಿರುವುದೇ ಆಗಿರಬೇಕು. ಬಹುಶಃ ಅವರ ನೋವು ಹೀಗಿರಬೇಕು, ಮಾನ್ಯ ಯಡಿಯೂರಪ್ಪನವರು ಕೇವಲ ವಿರೋಧ ಪಕ್ಷದಲ್ಲಿ ಕುಳಿತು ಬಂದವರು, ಆಡಳಿತದ ಅನುಭವ ಬಹುಶಃ ಅವರಿಗೆ ಇಲ್ಲ. ಅವರಿಗೆ ಆಡಳಿತದ ಅನುಭವ ಇಲ್ಲದಿದ್ದರೂ ಕೂಡ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಈ ರಾಜ್ಯದ ಪ್ರತಿಯೊಂದು ಇಲಾಖೆಯಲ್ಲಿಯೂ ಕೂಡ ಕೋಟಿ ಕೋಟಿ ಹಣವನ್ನು ಕೊಡುವುದರ ಮುಖಾಂತರ ಅಭಿವೃದ್ಧಿ ಕೆಲಸವನ್ನು ಮಾಡುತ್ತಿದ್ದಾರಲ್ಲ, ಬಹುಶಃ ಮುಂದಿನ ಭವಿಷ್ಯದಲ್ಲಿ ಈ ರಾಜ್ಯದಲ್ಲಿ ನಾಲ್ಕೈದು ಸಲ ಬಿ.ಜೆ.ಪಿ. ಸರ್ಕಾರವೇ ಬರಬಹುದು, ನಾವು

ಮುಳುಗಿ ಹೋಗಬಹುದು ಎನ್ನುವಂಥ ದೃಷ್ಟಿಯೊಳಗೆ ಈ ಆಪಾದನೆಯನ್ನು ವಿರೋಧ ಪಕ್ಷದವರು ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇನ್ನು ರೈಲ್ವೆ ಯೋಜನೆಗಳನ್ನು ತೆಗೆದುಕೊಂಡರೆ ರೈಲ್ವೆ ಯೋಜನೆಗಳಿಗೂ ಕೂಡ ಹಿಂದಿನ ಸರ್ಕಾರದವರು ಯಾವುದೇ ರೀತಿಯಲ್ಲಿ ಅನುದಾನವನ್ನು ಕೊಡದೆ ಈ ರಾಜ್ಯಕ್ಕೆ ರೈಲ್ವೆ ಲೈನ್‌ಗಳು ಬಂದಿಲ್ಲ. ಬೇರೆ ರಾಜ್ಯಗಳಲ್ಲಿ ಆಗ ಹೆಚ್ಚು ಹೆಚ್ಚು ರೈಲ್ವೆ ಲೈನ್‌ಗಳು ಬಂದಾಗ, ರೈಲ್ವೆ ಯೋಜನೆಗಳು ಬಂದಾಗ ನಮ್ಮ ರಾಜ್ಯದಲ್ಲಿ ಮಾತ್ರ ಬರಲಿಲ್ಲ. ಆದರೆ ಮಾನ್ಯ ಯಡಿಯೂರಪ್ಪನವರು ಪ್ರಥಮ ಬಾರಿಗೆ ಬಜೆಟ್‌ನಲ್ಲಿ ಸುಮಾರು 600 ಕೋಟಿ ರೂಪಾಯಿಗಳನ್ನು ತೆಗೆದಿಡುವ ಮುಖಾಂತರ ಸಾಕಷ್ಟು ಹಿಂದಿನ ಕನಸುಗಳೇನಿತ್ತೋ ಅವನ್ನೆಲ್ಲಾ ನನಸಾಗುವಂತೆ ಮಾಡಿರುವಂಥ ಸಂಗತಿ ಬಹಳಷ್ಟು ಶ್ಲಾಘನೀಯ ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ವೈದ್ಯಕೀಯ ಕ್ಷೇತ್ರದಲ್ಲಿಯೂ ಕೂಡ ಬಹಳಷ್ಟು ಸಾಧನೆಗಳು ನಮ್ಮ ನಮ್ಮ ಕ್ಷೇತ್ರದಲ್ಲಿ ಆಗಿವೆ. ಆದರೆ ವಿರೋಧ ಪಕ್ಷದವರು ಬಹುಶಃ ಅದನ್ನು ಹೇಳುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಆದರೆ ನಾವು ಹಿಂದೆ ಆಸ್ಪತ್ರೆಗಳನ್ನು ನೋಡಿದಂತೆ ಹೇಳುವುದಾದರೆ ಆ ಸರ್ಕಾರಿ ಆಸ್ಪತ್ರೆಯಲ್ಲಿ ಹತ್ತು ರೂಪಾಯಿಗಳನ್ನು ಕೂಡ ಔಷಧಿಗಳನ್ನು ಉಚಿತವಾಗಿ ಕೊಡುತ್ತಿರಲಿಲ್ಲ. ಔಷಧಿಗಳನ್ನು ಆಸ್ಪತ್ರೆಗಳಲ್ಲಿಯೇ ಕೊಡುವ ಸೌಲಭ್ಯ ಆಗ ಇರಲಿಲ್ಲ. ಯಾವುದೇ ಬಡವ, ರೈತ, ಮಹಿಳೆ ಸರ್ಕಾರಿ ಆಸ್ಪತ್ರೆಗೆ ಬಂದರೆ ಎಲ್ಲಾ ಔಷಧಿಗಳನ್ನು ಕೂಡ ಒಂದು ಟಿಪ್ಪಣಿಯಲ್ಲಿ ಬರೆದು ಹೊರಗಡೆಯಿಂದ ತರಲು ಹೇಳುವಂಥ ವ್ಯವಸ್ಥೆ ಇತ್ತು. ಈ ಕಾರಣಕ್ಕಾಗಿ ಹಿಂದೆ ಮಾನ್ಯ ಯಡಿಯೂರಪ್ಪನವರು ಅಧಿಕಾರಕ್ಕೆ ಬರುವ ಪೂರ್ವದಲ್ಲಿ ಖಾಸಗಿ ಮೆಡಿಕಲ್ ಶಾಪ್‌ಗಳು ಸರ್ಕಾರಿ ಆಸ್ಪತ್ರೆಗಳು ಎಲ್ಲಿರುತ್ತಿದ್ದವೋ ಅಲ್ಲಿ ಹೆಚ್ಚು ಮೆಡಿಕಲ್ ಶಾಪ್‌ಗಳು ಇರುತ್ತಿದ್ದವು. ಸುಮಾರು ಹತ್ತರಿಂದ ಹದಿನೈದು ಮೆಡಿಕಲ್ ಶಾಪ್‌ಗಳು ಅಲ್ಲಿರುತ್ತಿದ್ದವು. ಏಕೆಂದರೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳವರು ಕೂಡ ಲಖಿತ ಮೂಲಕ ಔಷಧಿಗಳನ್ನು ಹೊರಗಡೆ ತರಬೇಕೆಂದು ಬರೆದು ಕೊಡುತ್ತಿದ್ದರು. ಆದರೆ ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಖಾತೆಯನ್ನು ವಹಿಸಿಕೊಂಡು ಮುಖ್ಯಮಂತ್ರಿಯಾದ ನಂತರ ಸಾಕಷ್ಟು ಔಷಧಿಗಳ ದಾಸ್ತಾನು ಸರ್ಕಾರಿ ಆಸ್ಪತ್ರೆಗಳಲ್ಲಿದೆ. ಅದೂ ಅಲ್ಲದೇ ಸಾಕಷ್ಟು ಹೊಸ ಯೋಜನೆಗಳನ್ನು ತಂದಿರತಕ್ಕಂಥದ್ದನ್ನು ನಾವು ಕಂಡಿದ್ದೇವೆ. 108

Ambulance ಗಳಿರಬಹುದು, ಹಿಂದೆ ಕೇವಲ ಶ್ರೀಮಂತರು ಮಾತ್ರ Ambulance ಮುಖಾಂತರ ವೈದ್ಯಕೀಯ ಸೌಲಭ್ಯವನ್ನು ಪಡೆಯುತ್ತಿದ್ದರು. ಮಾನ್ಯ ಯಡಿಯೂರಪ್ಪನವರು ಬಂದ ನಂತರ ಜನನಿ, ಸುರಕ್ಷಾ ಯೋಜನೆ, ಮಡಿಲು ಯೋಜನೆ ಮತ್ತು ಸುವರ್ಣ ಆರೋಗ್ಯ ಯೋಜನೆ, ಆರೋಗ್ಯ ಕವಚ, ಪ್ರಸೂತಿ ಆರೈಕೆ, ಹೀಗೆ ಹತ್ತಾರು ಯೋಜನೆಗಳನ್ನು ತರುವುದರ ಮುಖಾಂತರ ಆರೋಗ್ಯ ಭಾಗ್ಯವನ್ನು ಈ ರಾಜ್ಯದ ಜನರಿಗೆ ಕೊಡುವಂಥ ವ್ಯವಸ್ಥೆಯನ್ನು ಯಡಿಯೂರಪ್ಪನವರ ಕಾಲದಲ್ಲಿ ಆಗಿದೆ. ಈ ರೀತಿ ಅನೇಕ ಯೋಜನೆಗಳನ್ನು ತರುವುದರ ಮೂಲಕ ಉತ್ತಮ ಕೆಲಸಗಳನ್ನು ಮಾಡುತ್ತಿದ್ದಾರೆ. ಉದಾಹರಣೆಗೆ ರೇಷನ್ ಕಾರ್ಡ್ ವಿಚಾರವನ್ನೇ ತೆಗೆದು ಕೊಳ್ಳುವುದಾದರೆ, ನಾವು ಮೊದಲು ಬಂದಿದ್ದಾಗ, ಅಂದರೆ ಮಾನ್ಯ ಧರ್ಮಸಿಂಗ್ ಆಡಳಿತದ ಕಾಲದಲ್ಲಿ ಅಥವಾ ಅದಕ್ಕೂ ಹಿಂದಿನ ಆಡಳಿತದಲ್ಲಿ ಈ ರೇಷನ್ ಕಾರ್ಡ್ ಸಮಸ್ಯೆ ಬಗ್ಗೆ ಯಾರೂ ಪರಿಹಾರವನ್ನು ಈಗಿನ ನಮ್ಮ ಮಾನ್ಯ ಯಡಿಯೂರಪ್ಪನವರು ಮಾಡಿದ ರೀತಿಯಲ್ಲಿ ಮಾಡಿರಲಿಲ್ಲ. ಮಾನ್ಯ ಯಡಿಯೂರಪ್ಪನವರು ನೆಮ್ಮದಿ ಕೇಂದ್ರಗಳ ಮುಖಾಂತರ ರೇಷನ್ ಕಾರ್ಡ್‌ಗಳನ್ನು ಕೊಡುವ ಮುಖಾಂತರ ಸುಮಾರು 27 ಲಕ್ಷ ಕಾರ್ಡ್‌ಗಳನ್ನು ಹೊಸದಾಗಿ ಕೊಡುವುದರ ಮುಖಾಂತರ ಯಾರು ಬಡವರು ರೇಷನ್ ಕಾರ್ಡ್ ಇಲ್ಲದೇ ವಂಚಿತರಾಗಿದ್ದರೋ ಅವರೆಲ್ಲರಿಗೂ ಕೂಡ ನೆಮ್ಮದಿ ಕೇಂದ್ರದ ಮೂಲಕ ಅರ್ಜಿಯನ್ನು ತೆಗೆದುಕೊಂಡು ರೇಷನ್ ಕಾರ್ಡ್ ಕೊಟ್ಟಿರತಕ್ಕಂಥ ಸಂಗತಿ ಮತ್ತು ಬಿ.ಪಿ.ಎಲ್. ಕಾರ್ಡ್ ಮತ್ತು ಅಕ್ಷಯ ಕಾರ್ಡ್ ಕೊಡುವಂಥ ಕಾರ್ಯವನ್ನು ಮಾನ್ಯ ಯಡಿಯೂರಪ್ಪನವರು ಮಾಡಿದ್ದಾರೆ. ಇದಲ್ಲದೇ ನೆಮ್ಮದಿ ಕೇಂದ್ರದಿಂದ ರೇಷನ್ ಕಾರ್ಡ್ ಪಡೆದಂಥ ಬಡವರಿಗೆ 19 ರೂಪಾಯಿ ಕೊಟ್ಟು ಅಕ್ಕಿಯನ್ನು ಬೇರೆ ಕಡೆಯಿಂದ ಖರೀದಿ ಮಾಡಿ ಅದನ್ನು ಒಂದು ಕೆ.ಜಿ.ಗೆ 3 ರೂಪಾಐಇಯಂತೆ ಕೊಟ್ಟಿರುವ ಸಾಧನೆ ಯನ್ನು ಮಾನ್ಯ ಯಡಿಯೂರಪ್ಪನವರು ಮಾಡಿರುವಂಥದ್ದನ್ನು ನಾವು ಕಂಡಿದ್ದೇವೆ. ಬಡವರ ಪರವಾಗಿ ಕಾಳಜಿ ಇರತಕ್ಕಂಥ ಕಾರ್ಯವನ್ನು ಇವರು ಮಾಡಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ವಿರೋಧ ಪಕ್ಷದವರು ಕೇವಲ ಆಪಾದನೆಯನ್ನು ಮಾಡತಕ್ಕಂಥ ಕೆಲಸವನ್ನು ಮಾಡು ತ್ತಿದ್ದಾರೆ. ಅದಕ್ಕಾಗಿ ನಾನು ಈ ರಾಜ್ಯದ ಮುಖ್ಯಮಂತ್ರಿಗಳಿಗೆ ಹೇಳಬಯ ಸುವುದೇನೆಂದರೆ, ಮಾನ್ಯ ಯಡಿಯೂರಪ್ಪನವರೆ, ನೀವು ಇಟ್ಟಿರತಕ್ಕಂಥ

ಒಂದು ಹೆಜ್ಜೆಯೇನಿದೆ ಅದು ಈ ರಾಜ್ಯದ ಅಭಿವೃದ್ಧಿ ಪರವಾಗಿದೆ, ವಿರೋಧ ಪಕ್ಷದವರ ತೆಗಳಿಕೆಗೆ ನೀವು ಕಿವಿಗೊಡದೆ ನೀವು ಮುಂದುವರೆಯಿರಿ. ನೀವು ಆ ರೀತಿಯಲ್ಲಿ ಮುಂದುವರೆಯುವುದಕ್ಕೆ ಈ ರಾಜ್ಯದ ಜನರು ನಿಮ್ಮ ಜೊತೆಯಲ್ಲಿದ್ದಾರೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ನಾನು ಈ ಸಂದರ್ಭದಲ್ಲಿ ದಾಸರ ಒಂದು ಪದವನ್ನು ನೆನಪಿಸಬಯಸುತ್ತೇನೆ. ತೆಗಳಿಕೆಗೆ ಹೆದರದೆ ನೀವು ಇಟ್ಟಿರತಕ್ಕಂಥ ಹೆಜ್ಜೆ ಬಹಳಷ್ಟು ಉತ್ತಮವಾಗಿದೆ ಮತ್ತು ಈ ರಾಜ್ಯದ ಅಭಿವೃದ್ಧಿ ಪರವಾಗಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳಬಯಸುತ್ತೇನೆ. ದಾಸರ ಪದದಲ್ಲಿ ಹೇಳಿರುವಂತೆ

"ನಿಂದಕರಿರಬೇಕು ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೋ
ಹಾಗೆ ನಿಂದಕರಿರಬೇಕು,
ಅಂದಂದು ಮಾಡಿದ ಪಾಪವೆಂಬ ಮಲ ತಿಂದು
ಹೋಗುವರಯ್ಯ ನಿಂದಕರು, ವಂದಿಸಿ ಸ್ತುತಿಸುವ
ಜನರೆಲ್ಲರು ನಮ್ಮ ಪೊಂದಿದ ಪುಣ್ಯವನ್ನೊಯ್ಯುವರಯ್ಯ,
ದುಷ್ಟ ಜನರು ಈ ಸೃಷ್ಟಿಯೊಳಿದ್ದರೆ
ಶಿಷ್ಟ ಜನರಿಗೆಲ್ಲ ಕೀರ್ತಿಗಳು", ಆ ರೀತಿ ಮಾನ್ಯ
ಯಡಿಯೂರಪ್ಪನವರು ಇದ್ದಾರೆ. ಅದಕ್ಕಾಗಿ
"ಇಷ್ಟಪ್ರದ ಶ್ರೀಕೃಷ್ಣ ನಿನ್ನೊಳು ಇಷ್ಟೇ ವರವನು
ಬೇಡುವೆನಯ್ಯ, ದುರುಳ ಜನಂಗಳು ಚಿರಕಾಲ ಇರುವಂತೆ
ಕರವ ಮುಗಿದು ವರ ಬೇಡುವೆನು ಪರಿಪರಿತ ಮಸಿಗೆ
ಗುರಿಯಹರಲ್ಲದೆ
ಪರಮದಯಾನಿಧೆ ಪುರಂದರ ವಿಠಲ."

ಈ ರೀತಿ ನಿಂದಕರಿರಬೇಕು ಎಂದು ಪುರಂದರದಾಸರು ಏನು ಹೇಳಿದ್ದಾರೋ, ಅದರಂತೆ ಈ ರೀತಿ ನಿಂದಕರು ಇರಬೇಕು. ನಿಂದಕರಿದ್ದರೆ ಮಾತ್ರ ತಪ್ಪು ಮಾಡುವುದನ್ನು ಅವರು ಸರಿಪಡಿಸುತ್ತಾರೆ ಎನ್ನುವ ಅರ್ಥ ಈ ದಾಸರ ಪದದಲ್ಲಿದೆ. ಇನ್ನು ಬಸವಣ್ಣನವರು ಏನು ಹೇಳಿದ್ದಾರೆಂದರೆ, "ವಂದಿಸುವನೊಬ್ಬ ನಮ್ಮ ಪುಣ್ಯವ ಕೊಂಡೊಯ್ಯುವನು, ಶಪಿಸುವನೊಬ್ಬ ಎನ್ನ ಪಾಪವ ಕೊಂಡೊಯ್ಯುವನು, ಇವರಿಬ್ಬರು ನಮ್ಮ ಪರಮ ಶಿವಯೋಗಿಗಳ ಬಂಧುಗಳಯ್ಯ ಕೂಡಲ ಸಂಗಮದೇವ" ಎನ್ನುವ ಹಾಗೆ, ಈ ರೀತಿಯಲ್ಲಿಯೂ ಸಹಿತ ನಿಂದಕರು ಇರಬೇಕಾಗುತ್ತದೆ. ಆದರೆ ನೀವು

ನಿಂದಕರಿಗೆ ಹೆದರದೆ ನಮ್ಮ ಮುಖ್ಯಮಂತ್ರಿಗಳು ಈ ರಾಜ್ಯವನ್ನು ಮುನ್ನಡೆಸಬೇಕು ಎನ್ನುವಂಥ ಒಂದು ಬೇಡಿಕೆಯನ್ನು ನಾನು ಇಡಬಯಸುತ್ತೇನೆ. ವಿರೋಧ ಪಕ್ಷದವರು ಹೇಗೆ ಭಾವನೆಯನ್ನು ವ್ಯಕ್ತಮಾಡುತ್ತಾರೆಂದರೆ, ಈ ರಾಜ್ಯ, ಈ ದೇಶ ನಮ್ಮ ಬಳುವಳಿ, ನಾವೇ ಆಳಬೇಕು, ನಾವು ಆಳಿದ್ದೇ ಸರಿ, ಮತ್ಯಾರು ಈ ರಾಜ್ಯವನ್ನು ಆಳುವುದಕ್ಕೆ ಯೋಗ್ಯರಲ್ಲ, ಅವರು ಮಾಡುವುದೆಲ್ಲವೂ ತಪ್ಪು ಅವರು ಆಳಿದರೆಂದರೆ ಈ ರಾಜ್ಯ ಮುಳುಗಿ ಹೋಗುತ್ತದೆ, ಸಾಲದ ಶೂಲದಲ್ಲಿಯೇ ಹೋಗುತ್ತದೆ, ಕಾರ್ಗತ್ತಲೆಯಲ್ಲಿಯೇ ಮುಳುಗಿ ಹೋಗುತ್ತದೆ ಎನ್ನುವಂಥ ಮಾತನ್ನು ಅವರು ಆಡುವುದನ್ನು ನಾನು ಪದೇ ಪದೇ ಕೇಳಿದ್ದೇನೆ. ಅದಕ್ಕಾಗಿ ಒಂದು ಉದಾಹರಣೆ ಹೇಳುತ್ತೇನೆ, ಒಂದು ಪ್ರವಾಹದಲ್ಲಿ ಒಂದು ನರಿ ನೀರಿನಲ್ಲಿ ಹೋಗುತ್ತಿತ್ತಂತೆ, ಅದು ಕೇವಲ ಒಂದು ಕಟ್ಟಿಗೆಯ ತುಂಡೊಂದನ್ನು ಆಧಾರವಾಗಿಟ್ಟುಕೊಂಡು ನೀರಿನಲ್ಲಿ ಹೊರಟಿತ್ತಂತೆ, ಅದು ಆ ರೀತಿ ಹೋಗುವ ಮುಂದೆ ಆ ದಡದಲ್ಲಿದ್ದ ಜನರಿಗೆ ಹೇಳುತ್ತಿತ್ತಂತೆ, ಜಗತ್ತು ಮುಳುಗುತ್ತದೆ, ಜಗತ್ತು ಮುಳುಗುತ್ತದೆ ಎಂದು ಹೇಳುತ್ತಿತ್ತಂತೆ. ಆ ದಡದಲ್ಲಿ ಜನರು ಗಾಬರಿಯಾಗಿ ಪ್ರಯತ್ನ ಪಟ್ಟು ಆ ನರಿಯನ್ನು ಹೊರಗೆ ಎಳೆದುಕೊಂಡು ಬಂದರು. ಏನಪ್ಪಾ ನರಿ ಜಗತ್ತು ಮುಳುಗುತ್ತದೆ ಎಂದು ಹೇಳುತ್ತಿಯಲ್ಲಾ, ಯಾವಾಗ ಮುಳುಗುತ್ತದೆ? ಹೇಗೆ ಮುಳುಗುತ್ತದೆ? ಎಂದು ಕೇಳಿದರಂತೆ. ಆಗ ನರಿ ಹೇಳಿತಂತೆ, 'ನಾನು ಆ ಕಟ್ಟಿಗೆಯೊಡನೆ ನೀರಿನಲ್ಲಿ ಮುಳುಗಿದ ಮೇಲೆ ನಾನು ಸತ್ತ ನಂತರ ನನ್ನ ಪಾಲಿಗೆ ಜಗತ್ತು ಮುಳುಗಿದಂತೆ.' ಎಂದು ಹೇಳಿತ್ತಂತೆ. ಆ ಪ್ರಕಾರ ವಿರೋಧ ಪಕ್ಷದವರು ರಾಜ್ಯ ಮುಳುಗುತ್ತದೆ, ರಾಜ್ಯ ಮುಳುಗುತ್ತದೆ, ರಾಜ್ಯ ಕತ್ತಲಿಗೆ ಹೋಗುತ್ತದೆ, ರಾಜ್ಯ ಸಾಲದ ಶೂಲಕ್ಕೆ ಹೋಗುತ್ತದೆ ಎನ್ನುವಂಥ ಮಾತುಗಳನ್ನು ಹೇಳುತ್ತಿದ್ದಾರೆ. ಆದರೆ ಅವರು ಹೋಗುತ್ತಿದ್ದಾರೆ. ಅವರು ಮುಳುಗುತ್ತಿದ್ದಾರೆ, ಕಾಂಗ್ರೆಸ್ ಪಾರ್ಟಿ ಈ ರಾಜ್ಯದಲ್ಲಿ ಮುಳುಗಿ ಹೋಗುತ್ತಿದೆ. ಅದಕ್ಕಾಗಿ ಆಪಾದನೆ ಮಾಡುತ್ತಾರೆಯೇ ವಿನಾ ರಾಜ್ಯಕ್ಕೇನೂ ಮುಳುಗುವಂಥ ಸಂದರ್ಭ ಬಂದಿಲ್ಲ.

ಮಾನ್ಯ ಅಧ್ಯಕ್ಷರೆ, ನಾವು ನೋಡಬಹುದು. ಕೇವಲ 4 ವರ್ಷದೊಳಗೆ 70,000 ಕೋಟಿ ರೂ.ಗಳ ಬಜೆಟ್ ಕೊಟ್ಟಿದ್ದೇವೆ ಇದು ಸಾಧನೆ ಅಲ್ಲವೇ? ಅವರು ಆತ್ಮಸಾಕ್ಷಿಯಾಗಿ ಮಾತನಾಡಬೇಕು. ಮಾನ್ಯ ಯಡಿಯೂರಪ್ಪನವರ ಕಾಲದ 4 ವರ್ಷದಲ್ಲಿ ಎರಡು ಪಟ್ಟು ಹೆಚ್ಚಾಯಿತು. ನಿಮ್ಮ ಕಾಲಕ್ಕೆ ಆ ದುಡ್ಡು ಎಲ್ಲಿಗೆ ಹೋಗುತ್ತಿತ್ತು? ಎಲ್ಲಿ ಸೋರಿ

ಹೋಗುತ್ತಿತ್ತು? ಯಾರ ಕಿಸೆಗೆ ಹೋಗುತ್ತಿತ್ತು? ಅದನ್ನು ಹೇಳಿ. ಅದರ ಅಂಕಿ ಸಂಖ್ಯೆಗಳನ್ನು ಹಿಡಿದು ಮಾತನಾಡಿದರೆ ನಾವು ಒಪ್ಪಿಕೊಳ್ಳುವಂಥ ಸಂಗತಿ. ಆ ಕಾರಣಕ್ಕಾಗಿ ಮಾನ್ಯ ಯಡಿಯೂರಪ್ಪನವರು ನಾನು ಮೊದಲೇ ಹೇಳಿದ ಪ್ರಕಾರ ಹಳ್ಳಿ ಹಳ್ಳಿಯಲ್ಲಿ, ಗಲ್ಲಿ ಗಲ್ಲಿಯಲ್ಲಿ ಅಲ್ಪಸಂಖ್ಯಾತರು, ದಲಿತರು ಇವರ ಫೋಟೋ ಇಟ್ಟುಕೊಂಡು ಪೂಜೆ ಮಾಡುವಂಥ ಒಂದು ಸಂದರ್ಭದಲ್ಲಿ ಬಂದಿದೆ. ಸುಮಾರು ಈ ರಾಜ್ಯದ ಒಂದೂವರೆ ಕೋಟಿ ಹಣ ಈ ರಾಜ್ಯದ ಜನರಿಗೆ ಖಜಾನೆಯಿಂದ ನೇರವಾಗಿ ಹಣ ಹೋಗುತ್ತದೆ. ಮಾನ್ಯ ಯಡಿಯೂರಪ್ಪನವರ ಯೋಜನೆಗಳ ಮುಖಾಂತರ ಅದು ಭಾಗ್ಯಲಕ್ಷ್ಮಿ ಇರಬಹುದು, ಸಂಧ್ಯಾ ಸುರಕ್ಷಾ ಯೋಜನೆ ಇರಬಹುದು ಮತ್ತು ಸೈಕಲ್ ಕೊಡುವುದು ಇರಬಹುದು. ಹಾಲಿನ ಸಬ್ಸಿಡಿ ಇರಬಹುದು, ಅಂಗವಿಕಲರಿಗೆ ಕೊಡುವ ಮಾಸಾಶನ ಇರಬಹುದು.

ಶ್ರೀ ಅಮರೇಗೌಡ ಬಯ್ಯಾಪುರ : ಸಂಧ್ಯಾ ಸುರಕ್ಷಾ ಯೋಜನೆ ಹಣ 6 ತಿಂಗಳಿಂದ ಬರುವುದು ನಿಂತಿದೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರು ಈ ರೀತಿ ಅಸತ್ಯ ಹೇಳುತ್ತಾರೆಂದರೆ. ಹೇಗೆ? 6 ತಿಂಗಳಿಂದ ಬಂದಾಗಿದೆ ಎಂದರೆ ಹೇಗೆ? ಒಂದೆರಡು ತಿಂಗಳು ನಿಂತಿದೆ ಎಂದರೆ ನಾವು ಒಪ್ಪಬಹುದು.

ಶ್ರೀ ಅಮರೇಗೌಡ ಬಯ್ಯಾಪುರ : ನಿಮ್ಮಿಂದ ಮಾಹಿತಿ ಕಲೆಕ್ಟ್ ಮಾಡುವುದಕ್ಕೆ ಆಗಿಲ್ಲವೆಂದರೆ ಹೇಗೆ? ಬೇಕಾದರೆ ನಿಮಗೆ ತೋರಿಸುತ್ತೇನೆ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ : ನಾನು ಮೂರು ತಿಂಗಳಿಗೊಂದು ಸಲ ಕೆ.ಡಿ.ಪಿ. ಸಭೆಯಲ್ಲಿ ರಿವ್ಯೂ ಮಾಡುತ್ತೇನೆ. ಆದರೆ ಅವರು ಹೇಳಿದ್ದು ಸತ್ಯವಿಲ್ಲ. ಅದು ಅಸತ್ಯವಿದೆ.

(ಗೊಂದಲ)

ಶ್ರೀ ಅಮರೇಗೌಡ ಬಯ್ಯಾಪುರ : ಅವರಿಗೆ ಅವರ ಉತ್ತರವನ್ನು ಕಳುಹಿಸಿ ಕೊಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : 6 ತಿಂಗಳಿಂದ ಇಡೀ ರಾಜ್ಯದಲ್ಲಿ ಬಂದಾಗಿದೆ ಎಂದರೆ ನೀವು ಹೇಳಿದ್ದು ನಾನು ಕೇಳುತ್ತೇನೆ, ಕಳುಹಿಸಿ ಕೊಡಿ. ಈಗಾಗಲೇ ಹಣ ಬಿಡುಗಡೆ ಆಗಿದೆ.

ಅಧ್ಯಕ್ಷರು : ಸಿದ್ದು ಸವದಿಯವರೆ, ನೀವು ಬೇಗ ಮುಗಿಸಿ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ನಾನು ವಿರೋಧ ಪಕ್ಷದವರಿಗೆ ಇಷ್ಟೇ ಹೇಳುವುದಕ್ಕೆ ಬಯಸುತ್ತೇನೆ. ನಿಮ್ಮ ಶಾಸಕರು ಕೂಡ ವೈಯಕ್ತಿಕವಾಗಿ ಭೇಟಿ ಆದಾಗ ಯಡಿಯೂರಪ್ಪನವರು ಒಳ್ಳೆಯ ಆಡಳಿತ ವನ್ನು ಕೊಡುತ್ತಿದ್ದಾರೆ, ರಾಜ್ಯ ಅಭಿವೃದ್ಧಿ ಕಡೆ ನಾಗಾಲೋಟದಿಂದ ಓಡುತ್ತಿದೆ, ಇದು ಒಳ್ಳೆಯ ಆಡಳಿತ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಅವರು ಇಲ್ಲಿ ಬಂದು ತಮ್ಮ ನಾಯಕರಿಗೆ ಹೆದರಿ ಇಲ್ಲಿ ಬಂದು oppose ಮಾಡುತ್ತಿದ್ದಾರೆ. ಆ ಕಾರಣಕ್ಕಾಗಿ ಒಳ್ಳೆಯ ಆಡಳಿತ ಮಾಡುವುದು ಮಾನ್ಯ ಯಡಿಯೂರಪ್ಪ ನವರ ಇಚ್ಛೆ ಆಗಿದೆ. ಅವರ ಅಧಿಕಾರ ಮುಗಿಯುವುದರೊಳಗೆ 1,00,000 ಕೋಟಿ ರೂ.ಗಳ ಬಜೆಟ್‌ನ್ನು ಈ ರಾಜ್ಯಕ್ಕೆ ಕೊಡಬೇಕೆನನುವ ಮಹದಾಶೆಯನ್ನು ಹೊಂದಿದ್ದಾರೆ, ಅದಕ್ಕೆ ಅವರಿಗೆ ಶುಭವಾಗಲಿ. ದಯವಿಟ್ಟು ನಾನು ವಿರೋಧ ಪಕ್ಷದ ನಾಯಕರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಿಮಗೆ ಅನುಭವ ಜಾಸ್ತಿ ಇದೆ. ಪ್ರತಿಯೊಂದಕ್ಕೂ ವಿರೋಧ ಮಾಡುವುದು ಒಳ್ಳೆಯದು ಅಲ್ಲ. ಈ ರೀತಿ ಅಭಿವೃದ್ಧಿ ನಡೆದಾಗಲೂ ಸಹಿತ "ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು" ಎನ್ನುವ ಹಾಗೆ ಪ್ರತಿಯೊಂದರಲ್ಲೂ ಸಹ ನೀವು ತಪ್ಪು ಕಂಡು ಹಿಡಿಯುವ ಕಾರ್ಯಕ್ಕೆ ಕೈ ಹಾಕದೆ ಈ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ, ಈ ರಾಜ್ಯದ ಜನ ನಿಮ್ಮ ಜೊತೆ ಸ್ವಲ್ಪವಾದರೂ ಇರುವ ಹಾಗೆ ನೀವು ನಡೆದು ಕೊಳ್ಳಬೇಕು. ರಾಜ್ಯದಲ್ಲಿ ಭವಿಷ್ಯದಲ್ಲಿ ವಿರೋಧ ಪಕ್ಷ ಇರಬೇಕು. ಅಂದಾಗ ಆಡಳಿತ ಪಕ್ಷಕ್ಕೆ ಒಂದು value ಬರುತ್ತದೆ. ನೀವು ಉಳಿಯಬೇಕಾದರೆ ಒಳ್ಳೆಯ ಕೆಲಸಕ್ಕೆ ನಿಮ್ಮ ಅನುಭವದ ಮಾರ್ಗದರ್ಶನ ಈ ಸರ್ಕಾರಕ್ಕೆ ಕೊಡುವುದು ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಹುಕ್ಕೇರಿಯವರೆ, ಅವರು ಯೀಲ್ಡ್ ಆಗಿಲ್ಲ, ನೀವು ಬೇಗ ಮುಗಿಸಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರ ಯಾವ್ಯಾವ ಯೋಜನೆಗಳನ್ನು ತಂದಿದ್ದೇವೆಂದು ಹೇಳಿದರು. ಯಾವ್ಯಾವ ಯೋಜನೆಗಳು ಬಂದಾಗಿವೆ ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಸಿದ್ದು ಸವದಿ : ಒಳ್ಳೆಯ ಕೆಲಸಕ್ಕೆ ನೀವು ವಿರೋಧ ಮಾಡುತ್ತಿದ್ದೀರಲ್ಲಾ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಯಾವ್ಯಾವ ಯೋಜನೆಗಳನ್ನು ಬಂದ್ ಮಾಡಿದ್ದೀರಿ ನೀವೇ ಹೇಳಿಬಿಡಿ.

ಅಧ್ಯಕ್ಷರು : ನೀವು ಯೀಲ್ಡ್ ಆದರೆ ನಾನು ಬೇರೆಯವರನ್ನು ಕರೆಯಬೇಕಾಗುತ್ತದೆ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ 35 ಲಕ್ಷ ಜನರಿಗೆ ಈ ಪೆನ್‌ಷನ್ ಕೊಡತಕ್ಕಂಥ ಕಾರ್ಯಕ್ರಮ ಜಾರಿಯಲ್ಲಿದೆ. ಅದರಲ್ಲಿ ನಿಮಗೆ ಜಿಲ್ಲಾವಾರು ಮಾಹಿತಿಯನ್ನು ಒದಗಿಸಿದ್ದಾರೆ. ಯಾವ್ಯಾವ ಜಿಲ್ಲೆಯಲ್ಲಿ ಎನ್ನುವುದನ್ನು ಕೊಟ್ಟಿದ್ದಾರೆ. 95 ಸಾವಿರ ಮಾತ್ರ ಉಳಿದಿದೆ. 35 ಲಕ್ಷ ಜನರಿಗೆ ಕೊಡುವಾಗ 95 ಸಾವಿರ ಮಂದಿಗೆ ಕೊಡುವುದು ಆಡಳಿತಾತ್ಮಕ ತೊಂದರೆಯಿಂದ ಉಳಿದಿರಬಹುದು.

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡುವುದನ್ನು ಮುಗಿಸಲಿ.

ಶ್ರೀ ಬಿ. ರಮಾನಾಥ್ ರೈ : ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ ಕೊಡುವ ದುಡ್ಡು ರಾಜ್ಯ ಸರ್ಕಾರದ ದುಡ್ಡೆ? ಅದು ಕೇಂದ್ರ ಸರ್ಕಾರದ ದುಡ್ಡು.

ಶ್ರೀ ಸಿದ್ದು ಸವದಿ : ಬಹುಶಃ ಇಷ್ಟೆಲ್ಲಾ ಗೊತ್ತಿದ್ದರೂ ಸಹಿತ ಸತ್ಯ ಇರುವುದನ್ನು ಅಸತ್ಯ ಮಾಡುವಂಥ ಕೆಲಸವನ್ನು ವಿರೋಧ ಪಕ್ಷದವರು ಮಾಡುವಂಥದ್ದು ಖಂಡನೀಯವೆಂದು ನಾನು ಹೇಳುತ್ತೇನೆ. ಅದಕ್ಕಾಗಿ ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ರಮಾನಾಥ್ ರೈ ಅವರೆ, ಸಿದ್ದು ಸವದಿಯವರು ಯೀಲ್ಡ್ ಆಗಿರುವುದಿಲ್ಲ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಹಿರಿಯ ಸದಸ್ಯರು ಮತ್ತು ಮಾಜಿ ಸಚಿವರೆ, ಮಾನ್ಯ ಹೆಗಡೆಯವರು 100 ರೂ.ಗಳಿಂದ ಪ್ರಾರಂಭ ಮಾಡಿದಂಥ ಕಾರ್ಯಕ್ರಮ ಇದು. ಇವರು ಅಧಿಕಾರದಲ್ಲಿ ಬೇಕಾದಷ್ಟು ವರ್ಷವಿದ್ದರು. 400 ರೂ.ಗಳನ್ನು ಮಾಡಬಹುದಾಗಿತ್ತು, ಏಕೆ

ಮಾಡಲಿಲ್ಲ. ಕೇಂದ್ರ ಸರ್ಕಾರದವರು ಕೊಡುತ್ತಿದ್ದರೆ ಮಾಡಬಹುದಾಗಿತ್ತು. ಕೇಂದ್ರ ಸರ್ಕಾರದವರು ದುಡ್ಡು ಕೊಡುತ್ತಿದ್ದರೆ 1,000 ರೂ.ಗಳನ್ನು ಮಾಡಬಹುದಾಗಿತ್ತು ಏಕೆ ಮಾಡಲಿಲ್ಲ? ಮಾಡಿದ್ದನ್ನು ಮೆಚ್ಚುವಂಥ ಕೆಲಸವನ್ನು ಮಾಡಿ. ಯಾವುದಕ್ಕೆ ಟೀಕೆ ಟಿಪ್ಪಣಿ ಮಾಡಬೇಕು ಅದನ್ನು ಮಾಡಿ.

(ಗೊಂದಲ)

ಶ್ರೀ ಬಿ. ರಮಾನಾಥ್ ರೈ : ಕೇಂದ್ರ ಸರ್ಕಾರವದರು ಮಾಡಿರುವ ಯೋಜನೆ ಬಗ್ಗೆ ಆರೋಗ್ಯ ಸಚಿವರು ಕೊಟ್ಟಿರುವ ದೊಡ್ಡ ಪಟ್ಟಿ ಇದೆ ನೋಡಿ.

ಅಧ್ಯಕ್ಷರು : ಆಯಿತು, Please ಅವರು ಮುಗಿಸಲಿ.

ಶ್ರೀ ಸಿದ್ದು ಸವದಿ : ವಿರೋಧ ಪಕ್ಷದವರು ಪ್ರತಿಯೊಂದಕ್ಕೂ ಕೇಂದ್ರ ಸರ್ಕಾರವೆಂದು ಹೇಳುತ್ತಾರೆ, ಅವರಿಗೆ ರೊಕ್ಕ ಮೇಲಿನಿಂದ ಬೀಳುತ್ತವೆಯೆ? ನಮ್ಮ ರಾಜ್ಯದ ಟ್ಯಾಕ್ಸ್ ಮೂಲಕ ದೇಶಕ್ಕೆ ಹೋಗುತ್ತದೆ. ಇದು ಒಕ್ಕೂಟದ ವ್ಯವಸ್ಥೆ. ನಾವೇ ಕಲೆಕ್ಟ್ ಮಾಡಿ ಕೊಡುತ್ತೇವೆ. ನಿಮ್ಮ ಕಾಲಕ್ಕೂ ಇತ್ತಲ್ಲ? ನಿಮ್ಮ ಕಾಲಕ್ಕೆ ಏಕೆ ಮಾಡಲಿಲ್ಲ? ಆ ಯೋಜನೆ ನಿಮಗೆ ಗೊತ್ತಿರಲಿಲ್ಲವೆ?

(ಗೊಂದಲ)

ಅಧ್ಯಕ್ಷರು : ನೀವು ಅವರಿಗೆ ಏಕೆ ಉತ್ತರವನ್ನು ಕೊಡುತ್ತೀರಿ?

ಶ್ರೀ ಸಿದ್ದು ಸವದಿ : ನೀವು ಈ ರಾಜ್ಯಕ್ಕೆ ದ್ರೋಹವನ್ನು ಮಾಡಿದ್ದೀರಿ. ರಾಜು ನಿಮಿಂದ ಸಾಕಷ್ಟು ಅಧೋಗತಿಗೆ ಹೋಗಿದೆ.

(ಗೊಂದಲ)

ಅಧ್ಯಕ್ಷರು : ಈ ರೀತಿ ಮಾತನಾಡಿದರೆ ದ್ಾಖಲೆಗೆ ಹೋಗಬಾರದು ಎಂದು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ನೀವು ಈ ರೀತಿ ಮಧ್ಯದಲ್ಲಿ ಮಾತನಾಡಿದರೆ ದಾಖಲೆಗೆ ಹೋಗಬಾರದೆಂದು ಹೇಳುತ್ತೇನೆ. ಅವರು ಮಾತು ಮುಗಿಸಲಿ. ನೀವು ಹಿರಿಯ ಸದಸ್ಯರು. Please, ನಾನು ದಾಖಲೆಗೆ ಹೋಗಬಾರದು ಎಂದು ಹೇಳಬೇಕಾಗುತ್ತದೆ.

ಶ್ರೀ ಬಿ. ರಮಾನಾಥ್ ರೈ : ಕೇಂದ್ರ ಸರ್ಕಾರ.....

ಶ್ರೀ ಸಿದ್ದು ಸವದಿ : ನೀವು ಆ ಮೇಲೆ ಮಾತನಾಡಿ.

ಅಧ್ಯಕ್ಷರು : ನೀವು ಮಾತನಾಡುವಾಗ ಮಾತನಾಡಿ. ಸಿದ್ದು ಸವದಿ ಯವರೆ ನೀವು ಮುಗಿಸಿ, Please, ರಮಾನಾಥ್ ರೈರವರೆ, ಅವರು ಯೀಲ್ಡ್ ಆಗಿಲ್ಲ. ನೀವು ಕುಳಿತುಕೊಳ್ಳಿ. ನೀವು ಯೀಲ್ಡ್ ಆಗಬೇಡಿ. ಇಲ್ಲದಿದ್ದರೆ ನಾನು ಮುಗಿಸುತ್ತೇನೆ. ತಾವು ಹಿರಿಯ ಸದಸ್ಯರು ಇದ್ದೀರಿ.

ಶ್ರೀ ಸಿದ್ದು ಸವದಿ : ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಬಿ. ರಮಾನಾಥ್ ರೈ : ಎಸ್.ಆರ್. ಬೊಮ್ಮಾಯಿ ಯವರು ಏನೂ ಮಾಡಿಲ್ಲವೆ? ವಿರೇಂಧ್ರ ಪಾಟೀಲ್‌ರು ಏನೂ ಮಾಡಿಲ್ಲವೆ? ಎಸ್.ಆರ್. ಕಂಠಿಯವರು ಏನೂ ಮಾಡಿಲ್ಲವೆ? ಕೆಂಗಲ್ ಹನುಮಂತಯ್ಯ ನವರು ಏನೂ ಮಾಡಿಲ್ಲವೆ?

(ಗೊಂದಲ)

ಅಧ್ಯಕ್ಷರು : ಅದೆಲ್ಲಾ ಈಗ ಏಕೆ?

(ಗೊಂದಲ)

ಶ್ರೀ ಬಿ.ರಮಾನಾಥ್ ರೈ : ಕೆ.ಸಿ.ರೆಡ್ಡಿಯವರು ಏನೂ ಮಾಡಿಲ್ಲವೆ?

ಅಧ್ಯಕ್ಷರು : ನೀವು ಮಾತನಾಡುವಾಗ ಮಾತನಾಡಿ.

(ಗೊಂದಲ)

ಅಧ್ಯಕ್ಷರು : ಅದು ಅವರ view. ಅವರಿಗೆ ಹೇಳುವುದಕ್ಕೆ ಹಕ್ಕಿಲ್ಲವೆ? ನೀವು ಮಾತನಾಡುವಾಗ ಏನು ಹೇಳುವುದು ಇದೆ ಹೇಳಿ.

(ಗೊಂದಲ)

ಅಧ್ಯಕ್ಷರು : ಈಗ ನೀವು ಮಾತು ನಿಲ್ಲಿಸದಿದ್ದರೆ ದಾಖಲೆಗೆ ಹೋಗಬಾರದೆಂದು ಹೇಳುತ್ತೇನೆ. ಯಾವುದನ್ನೂ ದಾಖಲೆಗೆ ತೆಗೆದು ಕೊಳ್ಳಬೇಡಿ. ಅವರು ಮಾತನಾಡಲಿ. ಯಾವುದೂ ದಾಖಲೆಗೆ ಹೋಗುವುದಿಲ್ಲ. ನೀವು ಬೇಗ ಮುಗಿಸಿ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ಹಿಂದಿನವರು ಏನೂ ಮಾಡಿಲ್ಲವೆಂದು ನಾನು ಹೇಳುವುದಿಲ್ಲ. ದಯವಿಟ್ಟು ಒಂದು ನಿಮಿಷ ತಡೆಯಿರಿ. ಅವರ ಅಭಿವೃದ್ಧಿ ರೇಷಿಯೋ ಎಷ್ಟಿತ್ತು? ಮಾನ್ಯ ಯಡಿಯೂರಪ್ಪ ನವರು ಬಂದ ಮೇಲೆ ರೇಷಿಯೋ ಎಷ್ಟು ಪ್ರಮಾಣವಾಗಿದೆ?

(ಗೊಂದಲ)

(7-50 PM)

ಶ್ರೀ ಬಿ. ರಮಾನಾಥ್ ರೈ : ಅವರ ಕಾಲದಲ್ಲಿ ಒಳ್ಳೆಯ ಕೆಲಸವಾಗಿದೆ. ಅವರಿಗೆ ಅವಮಾನ ಮಾಡಬೇಡಿ. ಮಾನ್ಯ ಕೆ.ಸಿ.ರೆಡ್ಡಿಯವರ ಕಾಲದಲ್ಲಿ, ಮಾನ್ಯ ವೀರೇಂದ್ರ ಪಾಟೀಲ್‌ರವರ ಕಾಲದಲ್ಲಿ, ಮಾನ್ಯ ಎಸ್. ಆರ್. ಬೊಮ್ಮಾಯಿ, ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಒಳ್ಳೆಯ ಕೆಲಸವಾಗಿಲ್ಲವೇ? ಅವರ ಆರ್ಥಿಕ ಮೌಲ್ಯಮಾಪನ ಜಾಸ್ತಿ ಇತ್ತು.

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡಿದ್ದು ಯಾವುದೂ ದಾಖಲೆಗೆ ತೆಗೆದುಕೊಳ್ಳಬೇಡಿ.

ಶ್ರೀ ಸಿದ್ದು ಸವದಿ : ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ನಾನು ಹಿಂದಿನ ಸರ್ಕಾರಗಳು ಏನೂ ಮಾಡಲ್ಲವೆಂದು ಹೇಳಿಲಿಲ್ಲ. ಆದರೆ ನಿಮ್ಮ ಅಭಿವೃದ್ಧಿ ಗತಿ 10% ರಷ್ಟು ಇತ್ತು, ಮಾನ್ಯ ಯಡಿಯೂರಪ್ಪನವರು ಬಂದ ಮೇಲೆ 90% ರಷ್ಟು ಈ ರಾಜ್ಯದ ಅಭಿವೃದ್ಧಿಯನ್ನು ಮಾಡಿದ್ದಾರೆಂಬ ಮಾತನ್ನು ಹೇಳಿದ್ದೇನೆ.

(ಗೊಂದಲ)

ಶ್ರೀ ಅಮರೇಗೌಡ ಬಯ್ಯಾಪುರ : ಮಾನ್ಯ ಅಧ್ಯಕ್ಷರೆ, ಇದು ತಪ್ಪು ಮಾಹಿತಿ, ನಾವು ಈ ಮಾತನ್ನು ಒಪ್ಪುವುದಿಲ್ಲ. ಯಾರ್ಯಾರ ಅಭಿವೃದ್ಧಿ ಸೂಚ್ಯಂಕ ಎಷ್ಟೆಷ್ಟು ಆಗಿದೆಯೆಂಬುದನ್ನು ಪ್ರಕಟ ಮಾಡಲಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಿದ್ಧು ಸವದಿಯವರೆ, ತಾವು ಮುಗಿಸಿ. ಮತ್ತೆ ಮತ್ತೆ ಅದನ್ನೇ ಮಾತನಾಡುತ್ತೀರಲ್ಲಾ? ನೀವು ಮಾತನಾಡಿ ಮುಗಿಸದಿದ್ದರೆ, ನಾನು ಬೇರೆಯವರನ್ನು ಕರೆಯುತ್ತೇನೆ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರು ಸತ್ಯವನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು : ಆಯಿತು, ನೀವು ಮಾತನಾಡಿ ಮುಗಿಸಿ. ನೀವು ಮಾತನಾಡಲು ಪ್ರಾರಂಭ ಮಾಡಿ 20 ನಿಮಿಷಗಳಾಯಿತು. ನಾನು ಬೇರೆಯವರನ್ನು ಮಾತನಾಡುವುದಕ್ಕೆ ಕರೆಯುತ್ತೇನೆ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ನಾನು ಇನ್ನೂ ಮಾತನಾಡಿಲ್ಲ. ಇದು ಯಾವ ರೀತಿಯಾಗಿದೆಯೆಂದರೆ, ನಾನು ಒಂದು ದೃಷ್ಟಾಂತವನ್ನು ಹೇಳಬಯಸುತ್ತೇನೆ. ಲುಂಗಿ ಹೇಗೆ ಉಟ್ಟುಕೊಳ್ಳಬೇಕೆಂದು ಮಾನ್ಯ ದೇವೇಗೌಡರು ಕೇಳಿ ಉಟ್ಟುಕೊಳ್ಳಬೇಕಂತೆ, ರಥ ಯಾತ್ರೆಯನ್ನು ಹೇಗೆ

ಮಾಡಬೇಕೆಂದು ಮಾನ್ಯ ಅಡ್ವಾನಿಯವರನ್ನು ಕೇಳಿಮಾಡಬೇಕಂತೆ, ಭಾಷಣವನ್ನು ಹೇಗೆ ಮಾಡಬೇಕೆಂಬುದನ್ನು ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರನ್ನು ನೋಡಿ ಕಲಿಯಬೇಕಂತೆ, xxx ಆ ರೀತಿ ಸತ್ಯಕ್ಕೆ ದೂರವಾದ ಆಪಾದನೆ ಸರ್ಕಾರದ ಮೇಲೆ ಮಾಡುತ್ತಿದ್ದಾರೆ. ಆ ರೀತಿ ಅಸತ್ಯ ಹೇಳುವಂಥ ಪ್ರವೃತ್ತಿಯನ್ನು ಈ ಸದನದಲ್ಲಿ ಮಾಡುತ್ತಿರುವಂಥದ್ದು ಬಹಳ ಖಂಡನೀಯವೆನ್ನುವಂಥ ಮಾತನ್ನು ಹೇಳುತ್ತೇನೆ. ಅವರು ಯಾವುದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇದು ಏನು? ಇದರಲ್ಲಿ ಏನಾದರೂ ಅರ್ಥವಿದೆಯಾ? ಮಾತನಾಡುವುದಕ್ಕೆ ಲಂಗು ಲಗಾಮು ಇಲ್ಲವಾ?

(ಗೊಂದಲ)

ಶ್ರೀ ಕೆ. ಅಭಯಚಂದ್ರ ಜೈನ್ : xxx

ಅಧ್ಯಕ್ಷರು : ಮಾನ್ಯ ಸಿದ್ದು ಸವದಿಯವರೆ, ನೀವು ಮುಗಿಸುತ್ತೀರೋ, ಇಲ್ಲ ನಾನು ಬೇರೆಯವರನ್ನು ಕರೆಯಲಾ?

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್ : ಸ್ವಲ್ಪ ತಾಳ್ಮೆ ತೆಗೆದುಕೊಳ್ಳಿ. ಅವರನ್ನು ಮಾತನಾಡುವುದಕ್ಕೆ ಬಿಟ್ಟರೆ, ಅವರು ಮಾತನಾಡಿ ಮುಗಿಸುತ್ತಾರೆ. ಮಾನ್ಯ ಅಮರೇಗೌಡ ಬಯ್ಯಾಪುರರವರೆ, ನೀವು ಬಹಳ senior ಇದ್ದೀರಿ, ಅವರಿಗೆ ಭಾಷಣ ಮಾಡುವುದಕ್ಕೆ ಅವಕಾಶ ಕೊಡಿ, ನೀವು ಬಿಟ್ಟರೆ ಅವರು ಭಾಷಣವನ್ನು ಮುಗಿಸುತ್ತಾರೆ.

---

xxx ಮಾನ್ಯ ಸಭಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ.

ಅಧ್ಯಕ್ಷರು : ಮಾನ್ಯ ಸಿದ್ದು ಸವದಿಯವರೆ, ನೀವು ಮತ್ತೆ ಅವರಿಗೆ ಉತ್ತರವನ್ನು ಕೊಡುವುದಕ್ಕೆ ಹೋಗಬೇಡಿ. ನೀವು ಏನು ಸರ್ಕಾರವಲ್ಲ, ನೀವು ನಿಮ್ಮ view ಹೇಳಿ ಅಷ್ಟೆ.

ಶ್ರೀ ಸಿದ್ದು ಸವದಿ : ಆಯಿತು, ಅವರು ಬಿಡು ಎಂದರೆ ಬಿಟ್ಟು ಬಿಡುತ್ತೇನೆ.

ಅಧ್ಯಕ್ಷರು : ಮತ್ತೆ ಅದನ್ನೇ ಹೇಳುತ್ತೀರಿ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ನಾನು ವಿದ್ಯುತ್ ಬಗ್ಗೆ ಹೇಳುತ್ತೇನೆ. ನಮ್ಮ ಸರ್ಕಾರ ಇದಕ್ಕೆ ಸಾಕಷ್ಟು ಪ್ರಯತ್ನ ಮಾಡಿದೆ, ವಿದ್ಯುತ್ ಅನನು ಖರೀದಿ ಮಾಡಿ ಕೊಟ್ಟರೂ ಸಹಿತ, "ದೇವರು ವರ ಕೊಟ್ಟರೂ, ಪೂಜಾರಿ ಕೊಡಲಿಲ್ಲ" ಎನ್ನುವ ಹಾಗೆ ನಮ್ಮಲ್ಲಿ ವಿದ್ಯುತ್ ವಿತರಣೆಯಲ್ಲಿ ಬಹಳ ತಾರತಮ್ಯವಾಗುತ್ತಿದೆ. ಈ ವಿತರಣೆಯನ್ನು ಸರಿಪಡಿಸುವ ಕೆಲಸವನ್ನು ಆಯಾ ಕಂಪೆನಿಗಳು ಮಾಡಬೇಕು. ಏಕೆಂದರೆ ಒಂದು ಜಿಲ್ಲೆಗೆ 22 ತಾಸು ಕೊಡುವುದು, ಒಂದು ಜಿಲ್ಲೆಗೆ 18 ತಾಸು ಕೊಡುವುದು, ಒಂದು ಜಿಲ್ಲೆಗೆ 4 ತಾಸು ಕೊಡುವ ತಾರತಮ್ಯ ಮಾಡುವಂಥದ್ದು ಕಂಪೆನಿಗಳ level ನಲ್ಲಿ ನಡೆಯುತ್ತಿದೆ. ಈ ಬಗ್ಗೆ ಸರ್ಕಾರ ಅಂಕಿ ಅಂಶಗಳನ್ನು ತರಿಸಿಕೊಂಡು study ಮಾಡಿ, ಅದನ್ನು ಸರಿಪಡಿಸುವಂಥ ಕೆಲಸವನ್ನು ಮಾಡಬೇಕು, ಏಕೆಂದರೆ ನಮ್ಮ ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರ್ ಸ್ಟೇಷನ್‌ಗೆ ಬಹಳಷ್ಟು ಕಡಿಮೆ ಪ್ರಮಾಣದಲ್ಲಿ ಸುಮಾರು 15 ದಿವಗಳಿಂದ 3 phase ಇದ್ದಂಥದ್ದನ್ನು ಕೇವಲ 2 ಗಂಟೆಗಳು ಮಾತ್ರ ಕೊಟ್ಟಿದ್ದಾರೆ. ನಮಗೆ single phase ಇದ್ದದ್ದನ್ನು 2 ಗಂಟೆಗಳು ಮಾತ್ರ ಕೊಟ್ಟಿದ್ದಾರೆ. ಇದರಲ್ಲಿ ಬಹಳ ತಾರತಮ್ಯ ವಾಗಿದೆ. ಈ ರೀತಿಮುಂದೆ ಆಗಬಾರದೆಂದು ಸರ್ಕಾರಕ್ಕೆ ಹೇಳಬಯಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಯಡಿಯೂರಪ್ಪನವರ ಸಾಧನೆ ಇಲ್ಲೇ ಗೊತ್ತಾಯಿತಲ್ಲ?

(ಗೊಂದಲ)

ಶ್ರೀ ಅಮರೇಗೌಡ ಬಯ್ಯಾಪುರ : ಮಾನ್ಯ ಅಧ್ಯಕ್ಷರೆ, ಅವರ ಕ್ಷೇತ್ರದಲ್ಲಿ ಅಷ್ಟೇ ಅಲ್ಲ, ಇಡೀ ರಾಜ್ಯದಲ್ಲೆ ಆ ರೀತಿ ಇದೆ.

ಅಧ್ಯಕ್ಷರು : ನೀವು ಏಕೆ ಮಧ್ಯದಲ್ಲಿ ಏಳುತ್ತೀರಿ? ಇಲ್ಲಿ ವಿದ್ಯುತ್ ಬಗ್ಗೆ ಸಾಕಷ್ಟು ಮಂತ್ರಿಯವರ ಎದುರು ಹೇಳದೆ ಮತ್ತೆ ನಾವು ಎಲ್ಲಿ ಹೇಳಬೇಕು?

(ಗೊಂದಲ)

ಅಧ್ಯಕ್ಷರು : ಮಾನ್ಯ ಸಿದ್ದು ಸವದಿಯವರೆ, ತಾವು ಭಾಷಣ ಮುಗಿಸುತ್ತೀರಾ, ಇಲ್ಲ ಬೇರೆಯವರನ್ನು ಮಾತನಾಡಲು ಕರೆಯಲಾ?

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ಇನ್ನು ಎರಡನೆಯದಾಗಿ, ನಮ್ಮ ಭಾಗದಲ್ಲಿ ಕೈಮಗ್ಗ ನೇಕಾರರಿಗೆ ಸರ್ಕಾರ ಕೊಟ್ಟಿರುವಂಥ ಸಾಲವನ್ನು, ವಿದ್ಯುತ್ ರಿಯಾಯಿತಿ, ಬಡ್ಡಿ ರಿಯಾಯಿತಿ ಯಾವುದೇ ರೀತಿಯಲ್ಲೂ

ಅವರಿಗೆ ತಲುಪಿಲ್ಲ. ಕೈ ಮಗ್ಗ ನೇಕಾರರು ಬಹಳಷ್ಟು ಕೆಳ ಮಟ್ಟದಲ್ಲಿ ಇದ್ದಾರೆ. ಆ ಕಾರಣಕ್ಕಾಗಿ ಅವರಿಗೆ ವಿಶೇಷ ಸೌಲಭ್ಯವನ್ನು ಕೊಡುವುದರ ಮುಖಾಂತರ ಅವರೂ ಸಹಿತ ಸ್ವಾಭಿಮಾನದಿಂದ ಈ ರಾಜ್ಯದಲ್ಲಿ ಬದುಕು ವಂಥ ವ್ಯವಸ್ಥೆಯಾಗಬೇಕೆಂಬ ಅಭಿಪ್ರಾಯವನ್ನು ನಾನು ವ್ಯಕ್ತಪಡಿಸುತ್ತೇನೆ. ಇನ್ನು ಸಾರಿಗೆ ವ್ಯವಸ್ಥೆಯಲ್ಲಿ ವಿಶೇಷವಾಗಿ ನಮ್ಮ ವಾಯುವ್ಯ ಸಾರಿಗೆಯಲ್ಲಿ ಬಹಳಷ್ಟು ಅವಧಿ ಮೀರಿರುವ ಬಸ್‌ಗಳನ್ನು ಕೊಟ್ಟಿದ್ದಾರೆ. ಆ ಕಾರಣಕ್ಕಾಗಿ ಅವೆಲ್ಲವನ್ನು ಬದಲಾವಣೆ ಮಾಡಿ, ನಮ್ಮ ಉತ್ತರ ಕರ್ನಾಟಕದ ಜನರಿಗೂ ಸಹಿತ ಅವರ ಸುರಕ್ಷಿತ ಪ್ರಯಾಣಕ್ಕೆ ಹೊಸ ಬಸ್ಸುಗಳನ್ನು ಕೊಡಬೇಕು. ಎಲ್ಲೆಲ್ಲಿ ಬಸ್‌ಸ್ಟ್ಯಾಂಡ್‌ಗಳು ದುರಸ್ತಿ ಇವೆ, ಅವುಗಳನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಬಹಳ ಮಹತ್ವಪೂರ್ಣವಾದ ಕೊನೆಯ ವಿಚಾರವೇನೆಂದರೆ, ಇಲ್ಲಿ reservation ಸಲುವಾಗಿ ಜಾತೀಯ ವರ್ಗೀಕರಣ ವನ್ನು ಮಾಡಿದ್ದಾರೆ. SC, ST, 2A, 2B, General ಈ ರೀತಿ ಎಲ್ಲಾ ಮಾಡಿದ್ದಾರೆ. ಆದರೆ ಇದರಲ್ಲಿ ಅತ್ಯಂತ ಹಿಂದುಳಿದ ಸಮೂದಾಯಗಳು ಉಳಿದು ಹೋಗಿವೆ. ಉದಾಹರಣೆಗೆ ಹೇಳುವುದಾದರೆ ನಮ್ಮಲ್ಲಿ ಚಿಕ್ಕಲಗಾರರು ಎಂಬ ಸಮಾಜವಿದೆ.

ಅಧ್ಯಕ್ಷರು : ನೀವು ಅರ್ಧಗಂಟೆಯ ಮೇಲೆ ಮಾತನಾಡಿದ್ದೀರಿ, ನಿಮಗೆ ಅವಕಾಶವಿಲ್ಲ. ನಾನು ಬೇರೆಯವರನ್ನು ಕರೆಯಬೇಕಾಗುತ್ತದೆ, ನೀವು ಸಮಯ ಪಾಲನೆ ಮಾಡಿ.

ಶ್ರೀ ಸಿದ್ದು ಸವದಿ : ಚಿಕ್ಕಲಗಾರ ಸಮಾಜದವರು ಅತ್ಯಂತ ಕೆಳಮಟ್ಟದಲ್ಲಿ ಬದುಕುತ್ತಿದ್ದಾರೆ. ಅವರು ಭಿಕ್ಷೆ ಬೇಡಿ ಬದುಕುತ್ತಿದ್ದಾರೆ. ಅವರನ್ನು 2A ನಲ್ಲಿ ಹಾಕಿದ್ದಾರೆ, ಅವರಿಗೆ ಪ್ರಭಾವಿ ಸಮುದಾಯಗಳು ಏನಾದರೂ ಸೌಲಭ್ಯಗಳನ್ನು ಕೊಡುವುದಕ್ಕೆ ಸಾಧ್ಯವಿದೆಯೇ ಎನ್ನುವ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು : ನಾನು ಬೇರೆಯವರನ್ನು ಕರೆಯಬೇಕಾಗುತ್ತದೆ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ಇದು ಒಂದು ವಿಚಾರವನ್ನು ಹೇಳಿ ಬಿಡುತ್ತೇನೆ.

ಶ್ರೀ ಅಮರೇಗೌಡ ಬಯ್ಯಾಪುರ : ಅವರು ಚೆನ್ನಾಗಿ ಮಾತನಾಡು ತ್ತಾರೆ, ಅವರಿಗೆ ಅವಕಾಶ ಇರಲಿ, ಇನ್ನೂ ಅರ್ಧ ಗಂಟೆ ಇರಲಿ.

ಶ್ರೀ ಸಿದ್ದು ಸವದಿ : ಚಿಕ್ಕಲಗಾರ ಸಮಾಜದವರು ಅತ್ಯಂತ ಕಟ್ಟ ಕಡೆಯ ಜೀವನವನ್ನು ನಡೆಸುತ್ತಿದ್ದಾರೆ. ಇವರು ಪ್ರತಿ ದಿವಸ ಚಿಂದಿ ಆರಿಸಿ, ಭಿಕ್ಷೆ ಬೇಡಿ ಜೀವನ ನಡೆಸುವ ಜನರಾಗಿದ್ದಾರೆ. ಇವರನ್ನು 2A ನಲ್ಲಿ ಸೇರಿಸಿದ್ದಾರೆ. ಇವರಿಗೆ ಸರ್ಕಾರದ ಯಾವ ಸವಲತ್ತುಗಳು ಸಿಗುವುದಿಲ್ಲ. ಅದಕ್ಕಾಗಿ ಇದನ್ನು ಪುನರ್ ಪರಿಶೀಲನೆ ಆಗಬೇಕು. ಇಂಥ ಸಮಾಜಗಳನ್ನು ಕನಿಷ್ಠ ST ಗೆ ಸೇರಿಸಿದರೆ ಅವರಿಗೆ ಸಾಮಾಜಿಕ ನ್ಯಾಯ ಸಿಗುತ್ತದೆ. ಇನ್ನೊಂದು ಕಟೋರ ಸಮಾಜ ಎಂದು ಇದೆ. ಇವರ ಉದ್ಯೋಗವಾದ ದರೋಡೆ ಮಾಡಿ ಬದುಕುತ್ತಿದ್ದಾರೆ. ಇವರನ್ನು 2A ವರ್ಗಕ್ಕೆ ಸೇರಿಸಿದ್ದಾರೆ. ಈ ತಾರತಮ್ಯವನ್ನು ಸರಿಪಡಿಸುವಂಥ ಕೆಲಸವನ್ನು ಸರ್ಕಾರ ತೀವ್ರಗತಿಯಲ್ಲಿ ಮಾಡಬೇಕು. ಅವರಿಗೆ ಸಾಮಾಜಿಕ ನ್ಯಾಯವನ್ನು ಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನೂ ಅನೇಕ ವಿಷಯಗಳು ಮಾತನಾಡಲು ಇದ್ದರೂ ಸಹಿತ ಸಮಯದ ಅಭಾವದಿಂದ ಅಧ್ಯಕ್ಷರ ಕೋರಿಕೆಯ ಮೇರೆ ಒಂದೇ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ನಮ್ಮಲ್ಲಿ ಅತಿವೃಷ್ಟಿ ಸುಮಾರು......

ಅಧ್ಯಕ್ಷರು : ಈ ವಿಷಯವಾಗಿ ಸಾಕಷ್ಟು ಚರ್ಚೆಯಾಗಿದೆ, ನೀವೇ ಮಾತನಾಡಿದ್ದೀರಿ. ನೀವು ಮತ್ತೆ ಏಕೆ ಪ್ರಸ್ತಾಪ ಮಾಡುತ್ತೀರಿ?

ಶ್ರೀ ಸಿದ್ದು ಸವದಿ : ಕುಂದು ಕೊರತೆಗಳ ಬಗ್ಗೆ ಹೇಳುತ್ತೇನೆ.

ಅಧ್ಯಕ್ಷರು : ಸಾಕಷ್ಟು ಮಾತನಾಡಿದ್ದೀರಿ.

ಶ್ರೀ ಸಿದ್ದು ಸವದಿ : ಆಯಿತು, Thank you, Sir.

ಶ್ರೀ ಪಿ.ಎಂ.ಅಶೋಕ್ (ರಾಮದುರ್ಗ) : ಮಾನ್ಯ ಅಧ್ಯಕ್ಷರೆ, ನಮ್ಮ ನೆರೆ ಪೀಡಿತ ಗ್ರಾಮಗಳ ಪೈಕಿ, ಕಳೆದ ಬಾರಿ ಎಷ್ಟು ನೀರು ನುಗ್ಗಿದೆಯೆಂಬ ವಿಚಾರ ತಮಗೆಲ್ಲಾ ಗೊತ್ತಿದೆ. ಬೆಳಗಾಂ ಜಿಲ್ಲೆಯ ರಾಮದುರ್ಗ ತಾಲ್ಲೂಕಿನಲ್ಲಿ ಒಟ್ಟು 14 ಹಳ್ಳಿಗಳಿಗೆ ಬಹಳ affect ಆಗಿದೆ. ಅದು ನಮ್ಮ ಉಸ್ತುವಾರಿ ಸಚಿವರಾದ ಮಾನ್ಯ ಬಸವರಾಜ ಬೊಮ್ಮಾಯಿಯವರಿಗೆ ಎಲ್ಲಾ ಗೊತ್ತಿದೆ. ಇದು 15–20 ವರ್ಷಗಳ ಹಿಂದೆ ಒಂದು ಸರ್ವೇ ಮಾಡಿದ್ದರು. ಅದು ಏನೆಂದರೆ 14 ಹಳ್ಳಿಗಳ ಪೈಕಿ ಬರೀ 4 ಹಳ್ಳಿಗಳು ಮಾತ್ರ ಪೂರ್ಣ ಸ್ಥಳಾಂತರ ಮಾಡುವ ಬಗ್ಗೆ ಮಾತನಾಡಿದ್ದರು. ಅವು ಮಾರ್ಡಿ, ರಂಕನ ಕೊಪ್ಪ, ಸುನಾಳ ಮತ್ತು ಚಿಕ್ಕ ಅಂಪಿವಳಿಗಳಿಗೆ ಮಾತ್ರ ಈ 14 ಹಳ್ಳಿಗಳಲ್ಲಿ 4 ಹಳ್ಳಿಗಳಿಗೆ ಮಾತ್ರ ಬಹಳ affect ಆಗಿದೆಯೆಂದು, ಈ 4 ಹಳ್ಳಿಗಳನ್ನು ಮಾತ್ರ shift ಮಾಡಬೇಕೆಂಬ

ಪ್ರಸ್ತಾವನೆ ಇತ್ತು, ಅದು 15–20 ವರ್ಷಗಳ ಹಿಂದೆ ಪ್ರಸ್ತಾವನೆ ಆಗಿರುವುದ ರಿಂದ ಈಗ ಬಹಳ ನೀರು ನುಗ್ಗುತ್ತಿರುವುದರಿಂದ, ಈ 14 ಹಳ್ಳಿಗಳನ್ನು ಪೂರ್ಣ ಸ್ಥಳಾಂತರಗೊಳಿಸಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಈಗ ಸರ್ಕಾರದ ಮಟ್ಟದಲ್ಲಿ 4 ಹಳ್ಳಿಗಳನ್ನು ಮಾತ್ರ ಪೂರ್ಣ ಸ್ಥಳಾಂತರಗೊಳಿಸುವ ಕಾರ್ಯ ನಡೆಯುತ್ತಿದೆ. 3 ಹಳ್ಳಿಗಳನ್ನು ಭಾಗಶಃ ಮಾಡಿದ್ದಾರೆ, 7 ಹಳ್ಳಿಗಳ ಬಗ್ಗೆ ಗ್ರಾಮ ಸಭೆಯನ್ನು ಕರೆದು ಪೂರ್ಣ shift ಮಾಡಿದರೆ ಮಾತ್ರ ನಾವು ಹೋಗುತ್ತೇವೆ, ಇಲ್ಲವೆಂದರೆ ಹೋಗುವುದಿಲ್ಲವೆಂದು ಅವರು ವಾದ ಮಾಡಿದ್ದಾರೆ. ಸರ್ಕಾರದಲ್ಲಿ ಇನ್ನೂ ಮೂರು ಇದೆ. 14 ಹಳ್ಳಿಗಳಲ್ಲಿ ಹಿರೇತಡಚಿ, ಚಿಕ್ಕತಡಚಿ, ದೊಡ್ಡಂದಿವಳಿ ಈ ಮೂರೂ ಕೂಡ ಬಹಳ affect ಆಗುತ್ತಾ ಇದೆ ಎಂದು ತಹಶೀಲ್ದಾರ್ ಮತ್ತು Assistant Commissioner ಮತ್ತು D.C. ಸಹ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಸದರಿ ಪ್ರಸ್ತಾವನೆಯು ಕಂದಾಯ ಇಲಾಖೆಯ ಕಾರ್ಯದರ್ಶಿ ಯವರ ಹತ್ತಿರ ಇದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು 4 ಹಳ್ಳಿಗಳ ಬದಲು 14 ಹಳ್ಳಿಗಳನ್ನು ಕೂಡ ಶಿಫ್ಟ್ ಮಾಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿಯನ್ನು ಮಾಡಿಕೊಳ್ಳುತ್ತೇನೆ, ಸ್ವಾಮಿ. ರಾಮದುರ್ಗ ಟೌನ್ ಒಳಗಡೆ ಕಿಲಬನೂರು ಎಂಬ ಒಂದು ಊರು ಇದೆ. ಆ ಹಳ್ಳಿಗೆ ಅದು ಸಿಟಿ ಒಳಗಿರುವುದರಿಂದ ಅವರು ಯಾರೂ ಕೂಡ ಹೊರಗಡೆ ಹೋಗುವುದಿಲ್ಲವೆಂದು ಹೇಳಿದ್ದಾರೆ. Last time KDP Meeting ಗೆ ಮಾನ್ಯ Revenue Minister ರವರು ಬಂದಿದ್ದರು, ಮಾನ್ಯ ಜಲಸಂಪನ್ಮೂಲ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿಯವರ ಎದುರುಗಡೆಯೇ ಒಂದು ಮಾತುಕತೆಯಾಯಿತು. ಸುಮಾರು 5 ಕಿ.ಮೀ. ಸಿಲ್ಟ್ ತೆಗೆಸಿದರೆ ಯಾವ ನೀರೂ ನುಗ್ಗುವುದಿಲ್ಲ, ಅಲ್ಲಿ retaining wall ಕಟ್ಟಿದರೆ ನೀರು ನುಗ್ಗುವುದಿಲ್ಲವೆಂದು ತಜ್ಞರು suggest ಮಾಡಿದ್ದಾರೆ. ಆದರೂ ಕೂಡ ಅಲ್ಲಿ ಕೆಲಸವನ್ನು ಪ್ರಾರಂಭ ಮಾಡಿರುವುದಿಲ್ಲ. ತಾವು ದಯಮಾಡಿ 5 ಕಿ.ಮೀ. ಸಿಲ್ಟ್ ತೆಗೆಸಿ ಅಲ್ಲಿ retaining wall ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ ಸ್ವಾಮಿ. ತಾವುಗಳು ತಮ್ಮ ಸರ್ಕಾರದ ವತಿಯಿಂದ ಸೈಕಲ್ ವಿತರಣೆಯನ್ನು ಮಾಡುವಂತಹ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. 8 ನೇ ತರಗತಿಯನ್ನು ಓದುವಂತಹ ಮಕ್ಕಳಿಗೆ ಎಲ್ಲರಿಗೂ ಸೈಕಲ್‌ನ್ನು ಕೊಟ್ಟಿದ್ದೀರಿ.

ಈ ವರ್ಷ ಏನಾಗಿದೆ ಎಂದರೆ ಹಾಸ್ಟೆಲ್‌ನಲ್ಲಿ ಇದ್ದವರಿಗೆ ಹಾಗೂ ಬಸ್‌ಪಾಸ್ ಇದ್ದವರಿಗೂ ಕೂಡ ನೀವು ಸೈಕಲ್‌ನ್ನು ಕೊಡುತ್ತಿಲ್ಲ, ಸ್ವಾಮಿ. ಹುಡುಗರು ಬಸ್‌ಪಾಸ್‌ನ್ನು ಏತಕ್ಕಾಗಿ ತೆಗೆದುಕೊಂಡಿದ್ದಾರೆಂದರೆ, ಅವರುಗಳೆಲ್ಲರೂ ಸೈಕಲ್ ಇಲ್ಲದೇ ಇರುವುದರಿಂದ ತೆಗೆದುಕೊಂಡಿದ್ದಾರೆ. ಆದಕಾರಣ ಇದನ್ನು ವಿಶೇಷ ಪ್ರಕರಣವೆಂದು ಅವರುಗಳಿಗೆ ತಾರತಮ್ಯವನ್ನು ಮಾಡದೆ ಸೈಕಲ್‌ನ್ನು ವಿತರಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಕರಡಿ ಸಂಗಣ್ಣನವರೆ ತಾವು ಮಾತನಾಡಿ. ಅದಕ್ಕಿಂತ ಮುಂಚೆ ಒಂದು ನಿಮಿಷ ತಾಳಿ, ಶ್ರೀ ಸಿದ್ದು ಸವದಿಯವರು ಕಾಂಗ್ರೆಸ್ಸಿನ ಬಗ್ಗೆ ಬಳಸಿದ ಪದಗಳನ್ನು ಹಾಗೆಯೇ ವಿರೋಧ ಪಕ್ಷದ ಮುಖ್ಯ ಸಚೇತಕರು, ಬಿಜೆಪಿಯ ಬಗ್ಗೆ ಬಳಸಿದ ಪದಗಳನ್ನು ಕಡತದಿಂದ ತೆಗೆದುಹಾಕಿದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಅಧ್ಯಕ್ಷರೆ,ಬಜೆಟ್ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ತಮಗೆ ವಂದನೆಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಬಜೆಟ್‌ನ್ನು ಮಂಡಿಸುವಂತಹ ಸಂದರ್ಭದಲ್ಲಿ ನಮ್ಮ ನಾಡಿನ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಬಹಳ ಒಂದು ದೊಡ್ಡ ಸಂಕಲ್ಪವನ್ನು ಮಾಡಿ "ನೇಗಿಲಯೋಗಿ" ಯ ಹೆಸರಿನಲ್ಲಿ ಅಧಿಕಾರವನ್ನು ತೆಗೆದುಕೊಂಡರು. ಹಾಗೆಯೇ ಆ ಸಂಕಲ್ಪದ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳನ್ನು ಕೂಡ ಕೊಡುತ್ತಿದ್ದಾರೆಂಬ ಭಾವನೆಯಿಂದ ಆಲೋಚನೆಯನ್ನು ಇಟ್ಟುಕೊಂಡಿದ್ದೆವು. ಆದರೆ ಅವರು ಅಂತಹ ಪ್ರಮುಖ ವಲಯಗಳಿಗೆ ಆದ್ಯತೆಯನ್ನು ಕೊಡಲಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸುಮಾರು plan amount ನ್ನು 31,000 ಕೋಟಿ ರೂಪಾಯಿಗಳಿಗೆ ಏರಿಸುವಂತಹ ಕೆಲಸವನ್ನು ಮಾಡಿದ್ದಾರೆ. ಇಲ್ಲಿ ಬಹಳ ಪ್ರಾಮುಖ್ಯವಾದುದನ್ನು ನಾವು ಗಮನಿಸಿದಾಗ ಇವತ್ತು ನಮ್ಮ ಸರ್ಕಾರವು ಆಹಾರ ಉತ್ಪಾದನೆಯ ವಿಚಾರದಲ್ಲಿ ಅವರು 2009-10ನೆ ಸಾಲಿನಲ್ಲಿ ಸುಮಾರು 118.35 ಲಕ್ಷ ಟನ್‌ಗಳಷ್ಟು ಉತ್ಪಾದನೆಯನ್ನು ಮಾಡುತ್ತೇವೆಂದು ಹೇಳಿದ್ದರು. ಆದರೆ ಆಗಿರುವಂತಹದ್ದು 106.53 ಲಕ್ಷ ಟನ್‌ಗಳಷ್ಟು ಉತ್ಪಾದನೆ ಮಾಡಿದ್ದಾರೆ. ಇದರಲ್ಲಿ ಸುಮಾರು 12 ಲಕ್ಷ ಟನ್ ಉತ್ಪಾದನೆ ಕುಂಠಿತ

ವಾಗಿದೆ. ಇದಕ್ಕೆ ಇವತ್ತು ಅವರು ರಾಜ್ಯಪಾಲರ ಭಾಷಣದಲ್ಲಿ ಕೂಡ ಒಂದು ಮಾತನ್ನು ಹೇಳಿದ್ದಾರೆ. ಇದಕ್ಕೆ ಹವಾಮಾನದ ವೈಪರಿತ್ಯದಿಂದ ನಾವು ಅಷ್ಟೊಂದು ಆಹಾರದ ಉತ್ಪಾದನೆಯನ್ನು ಮಾಡುವುದಕ್ಕಾಗಲಿಲ್ಲವೆನ್ನುವಂತಹ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದೊಂದೇ ಅದಕ್ಕೆ ಪ್ರಮುಖವಾದಂತಹ ಕಾರಣವಲ್ಲ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ತಾವು ಜವಾಬ್ದಾರಿಯುತವಾದಂತಹ ಸರ್ಕಾರವನ್ನು ನಡೆಸು ತ್ತಿದ್ದೀರಿ. ಮುಖ್ಯಮಂತ್ರಿಗಳು ಮತ್ತು ಸರ್ಕಾರ ತಾವು ನಿಗದಿತವಾದಂತಹ ಸಮಯದಲ್ಲಿ ಮಾನ್‌ಸೂನ್ ಪ್ರಾರಂಭವಾದಾಗ ಮಳೆಯು ಭೂಮಿಯ ಮೇಲೆ ಬಿದ್ದ ನಂತರ ಮಾನಸೂನ್ ಇರತಕ್ಕಂತಹ ಸಂದರ್ಭದಲ್ಲಿ ನೀವುಗಳು ಸಕಾಲದಲ್ಲಿ ಬೀಜವನ್ನು ವಿತರಣೆಯನ್ನು ಮಾಡಬೇಕಾಗುತ್ತದೆ. ಅದೂ ಅಲ್ಲದೆ ರಾಸಾಯನಿಕ ಗೊಬ್ಬರವನ್ನು ಸಹ ತಾವು ವಿತರಣೆಯನ್ನು ಮಾಡ ಬೇಕಾಗುತ್ತದೆ. ಕಳೆದ ಸಾಲಿನಲ್ಲಿ ನಾವು ಅನೇಕ ಘಟನೆಗಳನ್ನು ನೋಡಿದ್ದೇವೆ. ಇವತ್ತು ನಮ್ಮ ಉದಾಸಿ ಸಾಹೇಬರ ಕ್ಷೇತ್ರದಲ್ಲಿ ಗೋಲಿಬಾರ್ ನಡೆದಿರು ವಂತಹ ಪ್ರಸಂಗ ಇರಬಹುದು, ನಮ್ಮ ಕೃಷಿ ಮಂತ್ರಿಗಳ ಕ್ಷೇತ್ರದಲ್ಲಿ ಅನೇಕ ರೈತರು ನಿರಂತರ ಧರಣಿ ಹಾಗೂ ಹೋರಾಟವನ್ನು ಮಾಡಿರುವುದನ್ನು ಸಹ ನಾವು ನೋಡಿದ್ದೇವೆ. ಇದಕ್ಕೆ ಕಾರಣವೇನೆಂದರೆ ಅವರಿಗೆ ಒಂದು ಆತಂಕ, ಆ ಸಂದರ್ಭದಲ್ಲಿ ನಮ್ಮ ಭೂಮಿಯ ತೇವಾಂಶ ಕಡಿಮೆಯಾಗುತ್ತದೆ ನಾವು ಬೀಜವನ್ನು ಹಾಕಿದರೆ ಅದು ಮೊಳಕೆಯಾಗುವುದಿಲ್ಲ. ಅದು ಪ್ರಾರಂಭ ಹಂತದಲ್ಲಿ ನಮಗೆ ಏನು ಒಂದು ಆ ಸೀಜನ್ ನಲ್ಲಿ ಬಿತ್ತನೆಯನ್ನು ಮಾಡದಿದ್ದರೆ ನಮ್ಮ ಮುಂದಿನ ವರ್ಷದ ಆರ್ಥಿಕ ಭದ್ರತೆಗೆ ತೊಂದರೆ ಯಾಗುತ್ತದೆ ಎಂದು ರೈತರು ಆ ಸಂದರ್ಭದಲ್ಲಿ ಹೋರಾಟವನ್ನು ಮಾಡಿದರು. ಆ ಒಂದು ವೈಪಲ್ಯದಿಂದ ಇವತ್ತು ನಮಗೆ 12 ಲಕ್ಷ ಟನ್ ಉತ್ಪಾದನೆಯು ಈ ರಾಜ್ಯದಲ್ಲಿ ಕುಂಟಿತವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಎಣ್ಣೆಕಾಳುಗಳ ಉತ್ಪಾದನೆ ಯಲ್ಲಿಯೂ ಕೂಡ 16 ಲಕ್ಷ ಟನ್ ಎಂದು ಒಂದು ಅಂದಾಜು ಮಾಡಿದ್ದರು. ಅಲ್ಲಿಯೂ ಕೂಡ ಏನಾಯಿತು ಎಂದರೆ, ಸುಮಾರಿ 11.03 ಲಕ್ಷ ಟನ್ ಮಾತ್ರ ಇವತ್ತು ಉತ್ಪಾದನೆಯಾಯಿತು. ಅದೆರಡು ಕೂಡ ಆಹಾರ ಉತ್ಪಾದನೆ, ಎಣ್ಣೆಕಾಳು ಉತ್ಪಾದನೆ ಇರಬಹುದು, ಇದರ ಬಗ್ಗೆ ಸರ್ಕಾರದ ಮುಂಜಾಗ್ರತೆಯ ಕ್ರಮ, ಸರ್ಕಾರವು ಈ ಬಗ್ಗೆ ದೂರದ ಆಲೋಚನೆ ಇಲ್ಲದಂತಹ ಸಂದರ್ಭದಲ್ಲಿ ಆ ವೈಪಲ್ಯದಿಂದ ನಾವು ಇವತ್ತು ಆಹಾರದ

ಅಭಾವವನ್ನು ಎದುರಿಸುವಂತಹ ಒಂದು ವಾತಾವರಣವು ನಿರ್ಮಾಣವಾಗಿದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇದು ಅಲ್ಲದೆ ಇವತ್ತು ಪ್ರಮುಖ ವಲಯಗಳೆಂದು ಕರೆಯುತ್ತೇವೆ. ಪ್ರಮುಖ ವಲಯಗಳು ಎಂದರೆ ಯಾವುದು? ಕೃಷಿ ಮತ್ತು ತೋಟಗಾರಿಕೆ, ನೀರಾವರಿ ಮತ್ತು ಇಂದನ ಇಲಾಖೆ ಈ ವಲಯಗಳನ್ನು ನಾವು ನೋಡಿದಾಗ ಇವತ್ತು 2008-09ನೇ ಸಾಲಿನಲ್ಲಿ ಇವತ್ತು ಆಯವ್ಯಯದಲ್ಲಿ ನೀರಾವರಿಗೆ ಕೊಟ್ಟಿರುವುದನ್ನು ನೋಡಿದಾಗ ಸುಮಾರು ಶೇಕಡ 17.69 ಇಷ್ಟೊಂದು ಹಣವನ್ನು ಆ ಸಂದರ್ಭದಲ್ಲಿ ಕೊಟ್ಟಿದ್ದರು. ಈಗಿನ ಬಜೆಟ್‌ನಲ್ಲಿ ಕೊಟ್ಟಿರುವುದನ್ನು ನೋಡಿದರೆ, 2010-11ನೇ ಸಾಲಿನಲ್ಲಿ ಇವತ್ತು ನೀರಾವರಿಗೆ ಸುಮಾರು 14.29 ಶೇಕಡಾವಾರು ಹಣವನ್ನು ನಿಗಧಿ ಮಾಡಿದ್ದಾರೆ. ಮಾನ್ಯ ಬೊಮ್ಮಾಯಿ ಯವರು ಒಬ್ಬ ಬಹಳ ದಕ್ಷ ಮಂತ್ರಿ ಎಂದು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಅವರಿಗೆ ಮಾನ್ಯ ಮುಖ್ಯಮಂತ್ರಿಗಳು ಹಣವನ್ನು ಕೊಟ್ಟಿರುವುದಿಲ್ಲ. ಅವರ ಇಲಾಖೆಗೆ ಹಣವನ್ನು ಕೊಡದೇ ಇದ್ದಾಗ ಮಾನ್ಯ ಬೊಮ್ಮಾಯಿಯವರು ಏನು ಕೆಲಸವನ್ನು ಮಾಡ್ಡುವುದಕ್ಕೆ ಸಾಧ್ಯ? 2008-09ನೇ ಸಾಲಿನ ಅನುದಾನವನ್ನು 2010-11ನೇ ಸಾಲಿನ ಅನುದಾನವನ್ನು ನೋಡಿದರೆ ನಮಗೆ ಗೊತ್ತಾಗುತ್ತದೆ. ಇವತ್ತು ನಾವು ಒಂದು ಕಡೆ ಏನು ಹೇಳುತ್ತೇವೆಂದರೆ ಆಂದ್ರದವರು ಇವತ್ತು ನಮ್ಮ ಪಾಲಿನ ನೀರನ್ನು ಬಳಕೆ ಮಾಡಿಕೊಳ್ಳುತ್ತಾರೆ ತಮಿಳುನಾಡಿನವರು ಸಹ ಬಳಕೆಯನ್ನು ಮಾಡಿಕೊಳ್ಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ದೊಡ್ಡ ಸಂಕಲ್ಪವನ್ನು ಮಾಡಿದ್ದಾರೆ. ಆದರೆ ಅವರು ಬಹಳ ಕೆಳಮಟ್ಟದಿಂದ ಹೋರಾಟವನ್ನು ಮಾಡಿ ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಅವರು ಬಹಳ ದೊಡ್ಡದಾದ ಕನಸನ್ನು ಸಹ ಇಟ್ಟುಕೊಂಡಿದ್ದಾರೆ. ಅದನ್ನು ನಾವೂ ಸಹ ಇಟ್ಟುಕೊಂಡಿದ್ದೇವೆ. ಆದರೆ ಪ್ರಮುಖ ವಲಯಗಳಿಗೆ ನೀವು ಸರಿಯಾಗಿ ಆದ್ಯತೆಯನ್ನು ಕೊಡದೇ ಇದ್ದರೆ ನೀವು ಹೇಗೆ ಈ ರಾಜ್ಯವನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆ? ಒಂದು ಕಡೆ ನಮಗೆ ಬರ ಇದೆ. ಖಂಡಿತವಾಗಿ ನಮಗೆ ಭರ ಬೀಳುತ್ತದೆ ಎಂದು ಆ ಒಂದು ಹಿನ್ನೆಲೆಯಲಿದ್ದೇವೆ. ಒಂದು ಕಡೆ ನೆರೆಹಾವಳಿ, ಮತ್ತೊಂದು ಕಡೆಯಿಂದ ಉತ್ಪಾದನೆಯ ಬಗ್ಗೆ ಇವತ್ತು ಚಿಂತನೆಯು ನಡೆಯದಿದ್ದರೆ ಅದಕ್ಕೆ ಕಾರಣ ಯಾರು? ಜನಪರ ಆಡಳಿತವನ್ನು ಕೊಡುವಂತಹ ಸರ್ಕಾರವು ಕೂಡ ಅದನ್ನು ಗಮನಿಸಬೇಕಾಗುತ್ತದೆ. ಇನ್ನು ಇಂಧನ ಇಲಾಖೆಯಲ್ಲಿಯೂ ಕೂಡ ಅದೇ ಆಗಿದೆ. ಅಲ್ಲಿಯೂ ಕೂಡ ನಾವು ಶೇಕಡಾವಾರು ನೋಡಿದಾಗ

ಹಣ ಕಡಿಮೆಯಾಗಿದೆ. ಕೃಷಿ ಮತ್ತು ತೋಟಗಾರಿಕೆಯ ವಿಚಾರದಲ್ಲಿ ಅವರು ಹೇಳಿದ್ದಾರೆ. 2009–10ನೇ ಸಾಲಿನ Action taken report ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತಹ ಸಂದರ್ಭದಲ್ಲಿ ಶೇಕಡ 3 ರಷ್ಟು ಬಡ್ಡಿ ದರದಲ್ಲಿ ರೈತರಿಗೆ ಸಾಲವನ್ನು ಕೊಡುತ್ತೇವೆಂಬ ಬಗ್ಗೆ ಒಂದು ನಿರ್ಣಯ ವನ್ನು ಮಾಡಿದರು. ಈ ರಾಜ್ಯದ ಜನರು ಮತ್ತು ರೈತರು ನಾವೆಲ್ಲರೂ ಕೂಡ ಬಹಳ ಹರ್ಷ ಮತ್ತು ಸಂತೋಷವನ್ನು ವ್ಯಕ್ತಪಡಿಸಿದ್ದೇವೆ. ಅದರೆ ಇವರು ಸುಮಾರು 250 ಕೋಟಿ ರೂಪಾಯಿಗಳ ಹಣವನ್ನು ಇಡತಕ್ಕಂತಹ ಕೆಲಸವನ್ನು ಮಾಡಿದ್ದಾರೆ. ಅವರು ಈ ಸಾರಿ ವಾಣಿಜ್ಯ ಬ್ಯಾಂಕುಗಳಿಗೂ ಕೂಡ ಅದನ್ನು ಮುಂದುವರಿಸುತ್ತಾರೆ ಎನ್ನುವುದು ಕೂಡ ಒಂದು ಹೆಮ್ಮೆಯ ವಿಚಾರವಾಗಿದೆ. 3% ಬಡ್ಡಿ ದರದಲ್ಲಿ ಸಾಲ ಸಿಗುವಂತಹದ್ದು, ಇವತ್ತು Co-operative Bank ನಲ್ಲಿ ಏನು ವಹಿವಾಟನ್ನು ಮಾಡತಕ್ಕಂತಹ ರೈತರಿಗೆ ಮಾತ್ರ ಅವರಿಗೆ ಇವತ್ತು ಅನುಕೂಲವಾಗುತ್ತದೆ. ಇವತ್ತು ತಾವೆಲ್ಲರೂ ನೋಡಿದ್ದೀರಿ, ಸೊಸೈಟಿಯಲ್ಲಿ ಇವತ್ತು book adjustment ಆಗುತ್ತದೆ. ಇವತ್ತು ಕೊನೆಯ ದಿನಾಂಕ. ಸಾಲವನ್ನು ತುಂಬುವಂತಹದ್ದದ್ದು ಮತ್ತು book adjustment ಮಾಡಿ ದುಡ್ಡನ್ನು ತಂದು ಅಲ್ಲಿ ಜಮಾವನ್ನು ಮಾಡುತ್ತಾರೆ. ಆದರೆ ಹೊಸ ರೈತರಿಗೆ ಸಾಲವನ್ನು ಕೊಡುವಂತಹ ಚಿಂತನೆಯು ಆಗಬೇಕಾಗಿದೆ. ಮಾನ್ಯ ಕಾರಜೋಳ ಸಾಹೇಬರು ಕೂಡ ಆ ದಿಕ್ಕಿನಲ್ಲಿ ಕೆಲಸವನ್ನು ಮಾಡುವವರಿದ್ದೀರಿ. ಹೊಸ ರೈತರಿಗೆ ನೀವು ಕೊಡಬೇಕಾದರೆ ಆಯವ್ಯಯದಲ್ಲಿ ಹೆಚ್ಚು ಅನುದಾನವನ್ನು ಇಡಬೇಕಾಗುತ್ತದೆ. ಆ ಅನುದಾನವನ್ನು ಇವತ್ತು ನೋಡಿದಾಗ ಇಲ್ಲಿ 250 ಕೋಟಿ ರೂಪಾಯಿ ಗಳನ್ನು ಮಂಜೂರು ಮಾಡಿದ್ದೀರೆಂದು ಹೇಳುತ್ತೀರಿ. ಈ ವರ್ಷ 25 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿರುತ್ತೀರಿ. ಒಂದು ಕಡೆಯಲ್ಲಿ ನಾವು ಅನುದಾನವನ್ನು ಒದಗಿಸುತ್ತೇವೆ, ಇದಕ್ಕೆ ಏನು ಇವತ್ತು ಹಣವನ್ನು ಇಡುವಂತಹದ್ದು ದೊಡ್ಡ ಪ್ರಮಾಣದಲ್ಲಿ ಇಟ್ಟಿದ್ದೇವೆಂದು ಹೇಳುತ್ತೀರಿ, ಆದರೆ ಇಲ್ಲಿ ಬಿಡುಗಡೆಯಾಗಿರುವುದು ಮತ್ತು ಏನು ಒಂದು ಕಾರ್ಯಕ್ರಮವನ್ನು ಕೊಟ್ಟಿರುವುದನ್ನು ನೋಡಿದರೆ, ಅದು ಬಹಳ ಹಿಂದೆ ಇದೆ ಎನ್ನುವಂತಹ ಮಾತನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ರಾಯಚೂರು ಕೃಷಿ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿದರು. ಅದಕ್ಕೆ ಬಹಳ ಒತ್ತನ್ನು ಕೊಡುತ್ತೇವೆಂದು ಕಳೆದ ಸಾರಿಯೇ ಸುಮಾರು 10 ಕೋಟಿ ರೂಪಾಯಿ

ಗಳನ್ನು ನಿಗದಿಪಡಿಸಿದ್ದೀರಿ. ಆದರೆ ಅಲ್ಲಿ ಏನು ಕೆಲಸವೂ ಕೂಡ ಪ್ರಾರಂಭವಾಗಿರುವುದಿಲ್ಲ. ಅದಕ್ಕಾಗಿ ಮತ್ತೆ ಹಣಕಾಸನ್ನು ಕೊಡುವಂತಹ ಪ್ರಯತ್ನವನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದಲ್ಲದೆ, ತಾವು ಪೂರಕ ಬಜೆಟ್ ಮಂಡಿಸಿದ್ದೀರಿ. ಅದರಲ್ಲಿ ವಲಯವಾರು ನಾವು ನೋಡಿದಾಗ, ನೀರಾವರಿ, ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಿಗೆ, ಇಂಧನ ಇಲಾಖೆಗೆ ತಾವು ಒತ್ತು ಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ. ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವು ದಾದರೆ, ತೋಟಗಾರಿಕೆಯನ್ನು 18 ಲಕ್ಷ ಹೆಕ್ಟೇರ್ ನಿಂದ 25 ಲಕ್ಷ ಹೆಕ್ಟೇರ್‌ಗೆ ಏರಿಸುತ್ತೇವೆಂದು ಹೇಳಿದ್ದೀರಿ. ಒಂದು ವಾರದ ಹಿಂದೆ ಒಂದು ಪತ್ರಿಕೆಯಲ್ಲಿ ಬೆಂಗಳೂರಿನ ಸುತ್ತಮುತ್ತ ಕರಿ ದ್ರಾಕ್ಷಿ ಬೆಳೆದಂಥ ರೈತ ಅದನ್ನು ಬೀದಿಗೆ ಚೆಲ್ಲತಕ್ಕಂಥ ವಾತಾವರಣವನ್ನು ನೋಡಿದ್ದೇವೆ. ಮಾನ್ಯ ಮುಖ್ಯಮಂತ್ರಿಯವ ರಾಗಲಿ, ತೋಟಗಾರಿಕೆ ಇಲಾಖಾ ಮಂತ್ರಿಯವರಾಗಲಿ ಅವರ ನೆರವಿಗೆ ಬರಬೇಕಾಗಿತ್ತು. ಏಕೆಂದರೆ, ತೋಟಗಾರಿಕೆ ಬೆಳೆಯನ್ನು ಸಂರಕ್ಷಣೆ ಮಾಡುತ್ತೇವೆ, ರೈತರ ನೆರವಿಗೆ ಬರುತ್ತೇವೆ ಎಂದು ನಾವು ಹೇಳುತ್ತೇವೆ. ಆದರೆ, ಯಾರೂ ಕೂಡ ಅದರ ಬಗ್ಗೆ ಚಕಾರವೆತ್ತಲಿಲ್ಲ. ಹಿಂದೆ ಕೂಡ ನಮ್ಮ ಜಿಲ್ಲೆಯವರಾದ ಅಮರೇಗೌಡರೂ ಸೇರಿದಂತೆ ನಾನು ದಾಳಿಂಬೆ ಬೆಳೆಗೆ ಬಂದಿರುವ ದುಂಡಾಣು ರೋಗದ ಬಗ್ಗೆ ಮಾತನಾಡಿ ಕೇಂದ್ರ ಸರ್ಕಾರದ package ಗೆ ರಾಜ್ಯ ಸರ್ಕಾರದ ಪಾಲನ್ನು ಕೂಡ ಕೊಡಬೇಕೆಂದು ಒತ್ತಾಯ ಮಾಡಿದ್ದೆವು. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರೂ ಸಹ ಸದನದಲ್ಲಿ ಹಾಜರಿದ್ದರು. ತೋಟಗಾರಿಕೆ ಇಲಾಖೆ ಮಂತ್ರಿಯವರು ಸದನದಲ್ಲಿ ಅದಕ್ಕೆ ಒಪ್ಪಿಕೊಂಡಿದ್ದರು. ಮುಂದಿನ ತಿಂಗಳು 12 ಕೋಟಿ ರೂಪಾಯಿಗಳನ್ನು ದಾಳಿಂಬೆ ಬೆಳೆಗಾರರಿಗೆ ಬರುವ package ಗೆ ಸೇರಿಸಿ ಕೊಡುತ್ತೇವೆಂದು commitment ಮಾಡಿಕೊಂಡಿದ್ದರು. House ಎಂದರೆ Supreme ಎಂದು ನಾವು ಕರೆಯುತ್ತೇವೆ. ಆದರೆ, ಇನ್ನೂ ಕೂಡ ದಾಳಿಂಬೆ ಬೆಳೆಗೆ ಬರಬೇಕಾದ 12 ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲ. ಇಡೀ ರಾಜ್ಯದ ರೈತರು ನಿರಾಶರಾಗುತ್ತಿದ್ದಾರೆ. ಸರ್ಕಾರ ವಿಧಾನಸಭೆಯಲ್ಲಿ ಒಪ್ಪಿಕೊಂಡಿರು ವಂಥದ್ದು ಜಾರಿಯಾಗುತ್ತಿಲ್ಲವೆಂದರೆ ಇದು ಬಹಳ ದುರ್ದೈವದ ಸಂಗತಿ. ನಾನು ವಿನಂತಿ ಮಾಡುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಯವರು ಇನ್ನಾದರೂ ರೈತರ ನೆರವಿಗೆ ಬರದಿದ್ದರೆ ತೋಟಗಾರಿಕೆ ಬೆಳೆಯನ್ನು

ಯಾರೂ ಸಹ ಬೆಳೆಯುವುದಕ್ಕೆ ಸಾಧ್ಯವಿಲ್ಲ. ನಮಗೆ ಮಳೆ ಪ್ರಮಾಣ ಬಹಳ ಕಡಿಮೆಯಾಗುತ್ತಿದೆ. ಕಡಿಮೆ ನೀರಿನಲ್ಲಿ ಬೆಳೆಯುವ ತೋಟಗಾರಿಕೆ ಬೆಳೆಗೆ ನೀವು ಒತ್ತುಕೊಡುವಂಥದ್ದಾಗಬೇಕೆಂದು ನಾನು ಒತ್ತಾಯಿಸುತ್ತೇನೆ. ಇನ್ನು, ನಾವು ನಂಜುಂಡಪ್ಪ ವರದಿಯ ಬಗ್ಗೆ ಬಹಳಷ್ಟು ಹೇಳಿಕೊಂಡು ಬರುತ್ತಿದ್ದೇವೆ. ಇವತ್ತು ರಾಜ್ಯದಲ್ಲಿ imbalance ಆಗಿದೆ. ರಾಜ್ಯದಲ್ಲಿ ಸಮತೋಲನ ಮಾಡಬೇಕೆಂದು ಒಂದು ಸಂಕಲ್ಪವನ್ನು ಮಾಡಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಯೋಜನಾ ಮಂತ್ರಿಯವರಾದ ಕಾರಜೋಳ ರವರೂ ಕೂಡ, "ಇಲ್ಲ, ನಾವು ಬಹಳಷ್ಟು ಹಣ ಕೊಟ್ಟಿದ್ದೇವೆ" ಎಂದು ಹೇಳುತ್ತಿದ್ದಾರೆ. ಕಳೆದ ಸಾಲಿನ ಯೋಜನೆಯಲ್ಲಿ 2,500 ಕೋಟಿ ರೂಪಾಯಿಗಳಷ್ಟು ಇಟ್ಟಿರತಕ್ಕಂಥ ಹಣದಲ್ಲಿ ಬಿಡುಗಡೆ ಮಾಡಿದ್ದು 1,200 ಕೋಟಿ ರೂಪಾಯಿಗಳು ಮಾತ್ರ, ಇನ್ನುಳಿದ ಹಣ ಬಿಡುಗಡೆಯಾಗಲಿಲ್ಲ ವೆಂದರೆ ಅಭಿವೃದ್ಧಿ ಮಾಡುವುದಕ್ಕೆ ಹೇಗೆ ಸಾಧ್ಯ? ಕಳೆದ ಆಯವ್ಯಯದಲ್ಲಿ ನಿಗದಿಪಡಿಸಿದ ಹಣವನ್ನು ಮುಂದಿನ ವರ್ಷದ ಆಯವ್ಯಯವನ್ನು ಮಂಡನೆ ಮಾಡುವ ಅವಧಿಯೊಳಗೆ ನೀವು ಹಣ ಬಿಡುಗಡೆ ಮಾಡಿದರೆ ಅನುಕೂಲ ವಾಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ : 1,200 ಕೋಟಿ ರೂ. ಅಲ್ಲ, 1,400 ಕೋಟಿ ರೂ. ಬಿಡುಗಡೆಯಾಗಿದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : 1,400 ಕೋಟಿ ರೂಪಾಯಿ ಬಿಡುಗಡೆಯಾಗಿದ್ದರೆ, 1,200 ಕೋಟಿ ರೂಪಾಯಿಗಳಷ್ಟು ಇನ್ನೂ balance ಇದೆ. ನಿಗದಿತ ಅವಧಿಯಲ್ಲಿ ನೀವು ಹಣವನ್ನು ಬಿಡುಗಡೆ ಮಾಡಿದರೆ ಆ ಭಾಗದ ಸಮತೋಲನವನ್ನು ಕಾಪಾಡಲಿಕ್ಕೆ ಸಾಧ್ಯವಾಗುತ್ತದೆ. ಆ ಕಾರಣಕ್ಕಾಗಿ ಕೇವಲ ಘೋಷಣೆಗಳಾಗಬಾರದು. ಅದು ಕಾರ್ಯರೂಪಕ್ಕೆ ಬರಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಇನ್ನು, ಗಣಿ ನೀತಿ ಬಗ್ಗೆ ಮಾತನಾಡು ವುದಾದರೆ, ಬಳ್ಳಾರಿ, ಹೊಸಪೇಟೆ upto ಅಂಕೋಲ, ರಾಷ್ಟ್ರೀಯ ಹೆದ್ದಾರಿ ಸಂ: 63 ರಲ್ಲಿ 270 ಕಿ.ಮೀ. ರಸ್ತೆ ಮೇಲೆ ಯಾರೂ ಕೂಡ ಅಡ್ಡಾಡುವು ದಕ್ಕಾಗದ ಪ್ರಸಂಗ ನಮ್ಮಲ್ಲಿ ನಿರ್ಮಾಣವಾಗಿದೆ. ರಾಜ್ಯ ದ ಗಣಿ ಸಂಪತ್ತಾದ ಅದಿರು ಏನಿದೆ ಅದನ್ನು ಸರ್ಕಾರ by-product ಮಾಡುವಂಥದ್ದಕ್ಕೆ ಕಾರ್ಯ ಕ್ರಮವನ್ನು ಹಾಕಿಕೊಳ್ಳಬೇಕು. ಕಚ್ಚಾ ಅದಿರನ್ನು ಬೇರೆ ರಾಷ್ಟ್ರಕ್ಕೆ ಕಳುಹಿಸುವುದರಿಂದ ಸರ್ಕಾರಕ್ಕೂ ಕೂಡ ಹೆಚ್ಚು ಲಾಭವಿಲ್ಲ. ಆದರೆ,

ಬೆರಳೆಣಿಕೆಯಷ್ಟು ಜನರಿಗೆ ಮಾತ್ರ ಲಾಭ ಬರುತ್ತದೆ. ಮಾನ್ಯ ಮುಖ್ಯಮಂತ್ರಿಯವರೆ, ತಾವು ಹಿರಿಯರಿದ್ದೀರಿ, ಅನುಭವಿಗಳಿದ್ದೀರಿ, ಅದನ್ನು ಸ್ಥಳೀಯವಾಗಿ by-product ಮಾಡಿ, ನಮ್ಮ model product ಗಳನ್ನು ಮಾಡಿದರೆ ಸರ್ಕಾರಕ್ಕೂ ಕೂಡ ಆದಾಯ ಬರುತ್ತದೆ ಮತ್ತು ನಮ್ಮ ಸ್ಥಳೀಯರಿಗೂ ಉದ್ಯೋಗ ಸಿಗುತ್ತದೆ. ಸುಮಾರು 270 ಕಿ.ಮೀ. ರಸ್ತೆಯಲ್ಲಿ ರಾತ್ರಿ 9–00 ಗಂಟೆಯಿಂದ ಮುಂಜಾನೆ 4–00 ಗಂಟೆಯವರೆಗೆ ಯಾವ Vehicles ಅಲ್ಲಿ ಅಡ್ಡಾಡಲಿಕ್ಕೆ ಸಾಧ್ಯವೇ ಇಲ್ಲ. ಕೇವಲ ಲಾರಿಗಳು 4–5 ಲೈನ್‌ಗಳಲ್ಲಿ ಓಡಾಡುತ್ತಿರುತ್ತವೆ. ಯಮ ಎದುರಿಗೆ ಬರುತ್ತಾನೆ ಎನ್ನುವ ಭಾವನೆ ನಮಗೆ ಬರುತ್ತಿದೆ. ಕನಿಷ್ಠ ಪಕ್ಷ ಗದಗ ಇರಬಹುದು, ಹುಬ್ಬಳ್ಳಿ ಧಾರವಾಡ ಇರಬಹುದು, ಕೊಪ್ಪಳ ಇರಬಹುದು ಅದಕ್ಕೆ ನೀವು by-pass road or parallel road ನಿರ್ಮಿಸುತ್ತೀರೋ, ಹೇಗೆ?. ಆ ಬಗ್ಗೆ ಒಂದು ಕಾರ್ಯಕ್ರಮವನ್ನು ರೂಪಿಸಬೇಕು. ನಾನು ಮೊನ್ನೆ ಮಾತನಾಡುವ ಸಂದರ್ಭದಲ್ಲಿ accident death rate ಬಗ್ಗೆ ಹೇಳಿದ್ದೆ. ಅದನ್ನು ನೋಡಿದರೆ ಆಘಾತವಾಗುತ್ತದೆ. ಮರಣದ ಬಗ್ಗೆ, ಸಾವಿನ ಬಗ್ಗೆ ಏನೂ ಕಳಕಳಿ ಯಿಲ್ಲವೆಂದು ಕಂಡು ಬರುತ್ತದೆ. ನಾಗರಿಕರು ನಮ್ಮನ್ನು ಸುಮ್ಮನೆ ಬಿಡುವ ಹಾಗಿಲ್ಲ. ನಮ್ಮನ್ನೂ ಕೂಡ ಶಪಿಸುತ್ತಾರೆ. ಆ ಕಾರಣಕ್ಕಾಗಿ, ಬಳ್ಳಾರಿ ಮತ್ತು ಕೊಪ್ಪಳದಲ್ಲಿ corridor ಯೋಜನೆಯನ್ನು ಪ್ರಾರಂಭ ಮಾಡಬೇಕೆಂದಿತ್ತು, ಅದರ ಬಗ್ಗೆಯೂ ಕೂಡ ಬಜೆಟ್‌ನಲ್ಲಿ ಹೇಳಿಲ್ಲ. ಕಳೆದ ಮೂರು ವರ್ಷಗಳಿಂದ ಬಜೆಟ್‌ನಲ್ಲಿ ಹೇಳುತ್ತಾ ಬಂದಿರಿ. ಆದರೆ, ಅಲ್ಲಿಗೆ ಯಾವ corridor ಯೋಜನೆಯೂ ಕಾಣುತ್ತಿಲ್ಲ. ಇವತ್ತು ಒಂದು ಕಡೆ ಸಿಕ್ಕಾಪಟ್ಟೆ ಜಮೀನುಗಳನ್ನು ಕೊಂಡುಕೊಳ್ಳುತ್ತೇವೆ. ಉದ್ದಿಮೆಗಳು ಬೇಕು. ಆದರೆ, ಅದನ್ನು ನಿಯಮಿತ ಸಂದರ್ಭದಲ್ಲಿ ಅದಕ್ಕೆಷ್ಟು ಎಕರೆ ಜಾಗ ಬೇಕು, ಅದಕ್ಕೆ ಯಾವ ಕಾರ್ಯಕ್ರಮಗಳನ್ನು ಕೊಡಬೇಕೆನ್ನುವುದರ ಬಗ್ಗೆ ಕೂಡ ತಾವು ಸಂಕಲ್ಪವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದಲ್ಲದೆ, ಇನ್ನೂ ಹಲವಾರು ಕಾರ್ಯಕ್ರಮಗಳನ್ನು ನೋಡಿದಾಗ ವಿದ್ಯುತ್ ಸಮಸ್ಯೆ ಬಗ್ಗೆ ತಾವೆಲ್ಲ ಚಿಂತನೆ ಮಾಡಬೇಕು. ಏಕೆಂದರೆ, ತಾವು ಕಳೆದ ಅಧಿವೇಶನದಲ್ಲಿ ಹೇಳಿದ ಪ್ರಕಾರ ವಿದ್ಯುತ್ Supply ಆಗುತ್ತಿಲ್ಲ. ತಾವು, 7 ಗಂಟೆಯಿಂದ 11 ಗಂಟೆಯವರೆಗೆ Single Phase ವಿದ್ಯುತ್ ಕೊಡುತ್ತೇವೆಂದು ಏನು ಘೋಷಣೆ ಮಾಡಿದ್ದೀರಿ ಅದು ಎಲ್ಲಿಯೂ ಕಾರ್ಯರೂಪಕ್ಕೆ ಬರುತ್ತಿಲ್ಲ.

ಮತ್ತೆ, ಜನರು ಶಪಿಸುತ್ತಿದ್ದಾರೆ. ನೀವು ಕನಿಷ್ಠ ಪಕ್ಷ 4 ತಾಸಾದೂ ವಿದ್ಯುತ್ ಕೊಟ್ಟರೆ ಕಡೇ ಪಕ್ಷ ಕುಡಿಯುವ ನೀರನ್ನಾದರೂ ಜನರಿಗೆ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಆ ವ್ಯವಸ್ಥೆ ಬಗ್ಗೆ ಸಂಪೂರ್ಣವಾದ ಗಮನವನ್ನು ತಾವು ಹರಿಸಬೇಕೆಂದು ಹೇಳುತ್ತೇನೆ. ವಸತಿ ಕಾರ್ಯರೂಪಕ್ಕೆ ಇವರು ಕಳೆದ ಬಾರಿ 900 ಕೋಟಿ ರೂಪಾಯಿಗಳನ್ನಿಟ್ಟಿದ್ದರು. ಆದರೆ, ಇವರು ವಸತಿ complete zero ಆಗಿದೆ. ಇವತ್ತು ಬಡವರಿಗೆ ಆಶ್ರಯ ಮನೆಗಳನ್ನು ಕೊಡುವ ಸಂಕಲ್ಪ, ಬಡವರಿಗೆ ನೆರವಿಗೆ ಬರುವ ಕಾರ್ಯಕ್ರಮಗಳ ಕಡೆಗೆ ಹಣ ಕೊಡದಿದ್ದರೆ ಹೇಗೆ? ಈ ಕಾರ್ಯಕ್ರಮಗಳನ್ನು ಏಕೆ ರೂಪಿಸಬೇಕು? ಯೋಜನೆಗಳೆಂದು ಹೇಗೆ ಕರೆಯಬೇಕು? ಇದನ್ನೆಲ್ಲ ತಾವು ಸರಿಪಡಿಸಬೇಕಾಗುತ್ತದೆ. ಇಲ್ಲದಿದ್ದರೆ, ಬಡವರು ನಮ್ಮನ್ನು ಬಿಡುವುದಿಲ್ಲ. ಅದು ಚುನಾಯಿತ ಸರ್ಕಾರದ ಮತ್ತು ಚುನಾಯಿತ ಪ್ರತಿನಿಧಿಗಳ ಜವಾಬ್ದಾರಿ ಇದೆ. ಅವರು ಪ್ರಶ್ನೆ ಮಾಡುತ್ತಾರೆ. ಅದು ನಮ್ಮ ಹಕ್ಕು ಕೂಡ ಇದೆ. ನಮ್ಮ ಮಾನವೀಯತೆ ಆಧಾರದ ಮೇಲೆ ಕಾರ್ಯಕ್ರಮಗಳನ್ನು ಕೊಡದಿದ್ದರೆ ಮುಂದಿನ ಪೀಳಿಗೆಗೆ ಏನೂ ಭವಿಷ್ಯವನ್ನು ನಿರ್ಮಾಣ ಮಾಡುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭ ದಲ್ಲಿ ಹೇಳುತ್ತೇನೆ. ಇನ್ನು, ನೀರಾವರಿ ಬಗ್ಗೆ ಮತ್ತೊಮ್ಮೆ ಮಾನ್ಯ ಜಲಸಂಪನ್ಮೂಲ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ, ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ಕೊಡದಿದ್ದರೆ, ಆಹಾರದ ಅಭಾವ ಉಂಟಾಗುತ್ತದೆ. ಸುಮಾರು 12 ಲಕ್ಷ ಟನ್‌ನಷ್ಟು ಆಹಾರೋತ್ಪಾದನೆ ಕಡಿಮೆಯಾಗುತ್ತಿದೆ. ನೀವು ಒಂದು ಕಡೆ 54 ಸಾವಿರ ಹೆಕ್ಟೇರ್ ಜಮೀನುಗಳಿಗೆ ನೀರು ಕೊಡುತ್ತೇವೆಂದು ಹೇಳುತ್ತೀರಿ. ಆದರೆ, Action Taken Report ನಲ್ಲಿ ಕಾರ್ಯವೈಖರಿ ಬಗ್ಗೆ ಏನೂ ನಿಗದಿತ ಅಂಕಿಅಂಶಗಳ್ನು ಕೊಟ್ಟಿಲ್ಲ. ಅಂದರೆ, ಅದಕ್ಕೆ ಸರಿಯಾದ ಕಾರ್ಯಕ್ರಮವನ್ನು ಹಾಕಿಲ್ಲವೆನ್ನುವುದು ಕಂಡು ಬರುತ್ತದೆ. ಇತ್ತೀಚೆಗೆ ನಮ್ಮ ಭಾಗದ 15 ಜಿಲ್ಲೆಗಳಲ್ಲಾಗಿರತಕ್ಕಂಥ ಅನಾಹುತದ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರನ್ನು ನಾನು ಅಭಿನಂದಿಸುತ್ತೇನೆ. ಅವರು ಬಹಳ ಕಡೆ ಹಗಲು ರಾತ್ರಿ ಓಡಾಡಿದರು. ಈ ರಾಜ್ಯದ ಮುಖ್ಯಮಂತ್ರಿಯವರು ಆಪಾಯದ ಸಂದರ್ಭದಲ್ಲಿ ತಮ್ಮ ಜೊತೆಗಿದ್ದಾರೆಂದು ಜನರಿಗೆ ತೋರಿಸಿಕೊಟ್ಟಿದ್ದಾರೆ. ಈಗ ಪುನಃ monsoon ಪ್ರಾರಂಭವಾಗುತ್ತಿದೆ. ತಾವು ಸುಮಾರು 73 ಸಾವಿರ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದಿರಿ. Donors ಎಷ್ಟು ಜನರು ಮನೆಗಳನ್ನು ಕಟ್ಟಿಸಿಕೊಡುತ್ತಾರೆಯೋ

ಕಟ್ಟಿಸಲಿ. ನೀವು ಸರ್ಕಾರದವರೇ ಮನೆಗಳನ್ನು ಕಟ್ಟಿಸಿಕೊಡಲಿಕ್ಕೆ ಕಾರ್ಯಕ್ರಮ ಗಳನ್ನು ಹಾಕಿಕೊಳ್ಳಬೇಕಾಗುತ್ತದೆ. Donors ಇವತ್ತು ಬರುತ್ತಾರೆಯೋ, ನಾಳೆ ಬರುತ್ತಾರೆಯೋ ಅವರನ್ನು ಕಾಯುತ್ತಾ ಕುಳಿತುಕೊಳ್ಳಬಾರದು. ಹೇಗಿದ್ದರೂ, ಸರ್ಕಾರದವರು, ಮುಖ್ಯಮಂತ್ರಿಯವರು ಹೇಳಿದ್ದಾರೆಂಬ ನಂಬಿಕೆಯ ಮೇಲೆ, ಅವರು ತಮ್ಮ ವಸತಿಗೋಸ್ಕರ ಏನೂ ಕಾರ್ಯಕ್ರಮ ಹಾಕಿಕೊಂಡಿಲ್ಲ. ಹಾಗಾಗಿ, ಇವತ್ತು donors ಅವರ ಪಾಡಿಗೆ ಅವರು ಮನೆ ಕಟ್ಟಿಸಲಿ. ಸರ್ಕಾರದವರಾದ ನೀವು ನೇರವಾಗಿ ಮನೆ ಕಟ್ಟಿಸಿಕೊಡುವುದರಲ್ಲಿ ಭಾಗಿಯಾಗಬೇಕು. ಕನಿಷ್ಠ ಇನ್ನು 2–3 ತಿಂಗಳಲ್ಲಿ ಸಂತ್ರಸ್ತರ ನೆರವಿಗೆ ಬರದಿದ್ದರೆ, ಅವರ ಜೀವನ ಬಹಳ ದುಸ್ತರವಾಗುತ್ತದೆ ಎಂದು ಹೇಳುತ್ತೇನೆ. ಇನ್ನು, ನಮ್ಮ ಜಿಲ್ಲೆಯ traffic ಸಮಸ್ಯೆ ಬಗ್ಗೆ ಹೇಳಿದ್ದೇನೆ. ಇವತ್ತು ಅಲ್ಲಿ ಜನಸಾಮಾನ್ಯರು ಅಡ್ಡಾಡಲಿಕ್ಕಾಗುತ್ತಿಲ್ಲ. ಜನರು ನಮಗೆ ಶಾಪ ಹಾಕುತಿದ್ದಾರೆ. ನೀವೇನಾದರೂ ಮಾಡಿ upto ಬನ್ನಾಪುರ ಕ್ರಾಸ್, ಅಲ್ಲಿಂದ ಹೊಸಪೇಟೆ, ಕಣವಿ ವೀರಭದ್ರ ದೇವಸ್ಥಾನದವರೆಗೆ parallel ವ್ಯವಸ್ಥೆಯನ್ನು ನೀವು ಮಾಡದಿದ್ದರೆ ಬಹಳ ಕಷ್ಟವಾಗುತ್ತದೆ. ಅಲ್ಲಿ ಸುಮಾರು 15 ದಿವಸಗಳಲ್ಲಿ ಲಾರಿಗಳು ಓಡಾಡುವುದ್ನು ನಿಲ್ಲಿಸಬೇಕೆಂದು ಜನತೆಯ ಚಿಂತನೆ ನಡೆದಿದೆ. ಆ ಕಾರಣಕ್ಕಾಗಿ ನಿಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ಈ ಕೆಲಸವನ್ನು ಮಾಡಿಸಲಿಕ್ಕೆ ಸರ್ಕಾರಕ್ಕೆ 60–70 ಕೋಟಿ ರೂ.ಗಳಷ್ಟು ಖರ್ಚಾಗಬಹುದು. ಒಂದು ಕಾರ್ಯಕ್ರಮವನ್ನು ರೂಪಿಸಬೇಕೆಂದು ಮಾನ್ಯ ಮುಖ್ಯಮಂತ್ರಿ ಯವರಲ್ಲಿ ವಿನಂತಿ ಮಾಡಿಕೊಂಡು, ಕಾರ್ಯಕ್ರಮವನ್ನು ರೂಪಿಸುವುದಕ್ಕೆ ಹಣಕಾಸನ್ನು ಹಂಚಿರುವ ಬಗ್ಗೆ ಇಲಾಖಾವಾರು ನೋಡಿದಾಗ ಪ್ರಮುಖ ವಲಯಗಳನ್ನು ಅಲಕ್ಷ್ಯ ಮಾಡಿದ್ದಾರೆ, ಆದ್ಯತೆ ಕೊಟ್ಟಿಲ್ಲ, ಆ ಕಾರಣಕ್ಕಾಗಿ ಈ ಬಜೆಟ್ ಅನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

(8-10 PM)

ಶ್ರೀ ಕಾಕಾಸಾಹೇಬ ಪಾಟೀಲ್ (ನಿಪ್ಪಾಣಿ) : ಮಾನ್ಯ ಅಧ್ಯಕ್ಷರೆ, 2010–11ನೇ ಸಾಲಿನ ಮುಂಗಡ ಪತ್ರದ ಮೇಲೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಮೊದಲು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬಜೆಟ್‌ನ್ನು ಮಂಡನೆ ಮಾಡಿದಂಥ ಮಾನ್ಯ ಮುಖ್ಯಮಂತ್ರಿಗಳೂ ಈಗ ಸದನದಲ್ಲಿ ರುವುದು ವಿಶೇಷ. ಆ ಸಮಯದಲ್ಲಿ ನನಗೆ ತಾವು ಮಾತನಾಡಲು ಅವಕಾಶ

ಕೊಟ್ಟಿದ್ದಕ್ಕೆ ಧನ್ಯವಾದಗಳು. ಇದು ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರುವ 5ನೇ ಬಜೆಟ್. ಶ್ರೀ ಎಸ್.ಎಂ. ಕೃಷ್ಣರವರು ತಮ್ಮ 5ನೇ ಬಜೆಟ್ ಮಂಡನೆ ಮಾಡುವ ಸಮಯದಲ್ಲಿ ನಾನು ಈ ಸದನದಲ್ಲಿದ್ದೆ. ಅದೇ ರೀತಿ ಇಂದು ವಿರೋಧ ಪಕ್ಷದ ನಾಯಕರಾಗಿರುವ ಮಾನ್ಯ ಸಿದ್ದರಾಮಯ್ಯನವರು ಹಣಕಾಸು ಸಚಿವರಾಗಿ, ಉಪ ಮುಖ್ಯಮಂತ್ರಿಯಾಗಿ 5 ಬಜೆಟ್‌ನ್ನು ಮಂಡನೆ ಮಾಡಿದಾಗಲೂ ನಾನು ಈ ಸದನದಲ್ಲಿದ್ದೆ. ಇದನ್ನು ಹೋಲಿಕೆ ಮಾಡಿದಾಗ ನಾವು ಯಾವುದಕ್ಕೆ ಅಭಿವೃದ್ಧಿ ಮಾಡಬೇಕು, ಯಾವುದು ಅಭಿವೃದ್ಧಿಯಲ್ಲ ಎನ್ನುವ ಪ್ರಶ್ನೆ ಬರುತ್ತದೆ ಏಕೆಂದರೆ, 2004–05ನೇ ಇಸವಿಯಲ್ಲಿ ನಮ್ಮ ರಾಜ್ಯದ ಟೋಟಲ್ ಬಜೆಟ್ 8,610 ಕೋಟಿ ರೂ. 2005–06 ರಲ್ಲಿ 13,855 ಕೋಟಿ ರೂ. ಈ ಸಲ 31 ಸಾವಿರ ಕೋಟಿ ರೂ. ಈ ರೀತಿ ಬಜೆಟ್‌ನ ಸೈಜ್ ದೊಡ್ಡದಾಗಿದೆಯೇ ವಿನಾ ಬೇರೆ ಏನೂ ಆಗಿಲ್ಲ. ಈಗಾಗಲೇ ಹಿರಿಯ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. 2004–05 ರಲ್ಲಿ ನೀರಾವರಿಗೆ 32% amount was reserved in the budget. ವಿಶೇಷವಾಗಿ ನಮ್ಮ ಬೆಳಗಾಂನ ಚಿಕ್ಕೋಡಿ ತಾಲ್ಲೂಕಿನಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ joint project ಆದಂಥ ಕಳಮವಾಡಿ ಪ್ರಕರಣದಿಂದ 35 ಕೋಟಿ ರೂಪಾಯಿ ಒಂದೇ ಅಮೌಂಟ್‌ನಲ್ಲಿ ಮಹಾರಾಷ್ಟ್ರ ಸರ್ಕಾರ ಹಣವನ್ನು ಪಾವತಿ ಮಾಡಿ 4 ಟಿ.ಎಂ.ಸಿ. ನೀರು ಬಳಕೆ ಮಾಡುವಂಥ ವ್ಯವಸ್ಥೆಯನ್ನು ಆಗಿನ ಕಾಲದಲ್ಲಿ ಮಾಡಿದೆ. ಆದರೂ ಕೂಡ ಬಹಳ ನೋವಿನಿಂದ ಹೇಳಬೇಕಾಗುತ್ತದೆ. Part 'ಬಿ' ಯಲ್ಲಿ ಆಗಲಿ ಅಥವಾ ಬೇರೆ ಯಾವುದರಲ್ಲೇ ಆಗಲಿ, ನಮಗೆ same amount ಕೊಟ್ಟು ಆ ನೀರನ್ನು ತೆಗೆದುಕೊಳ್ಳುವಂಥ ವ್ಯವಸ್ಥೆ ಇದುವರೆಗೆ ಆಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ನೀರಾವರಿ ಸಚಿವರು, ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಈ ಬಗ್ಗೆ ವಿಶೇಷ ಗಮನಹರಿಸಬೇಕು. ಅದೇ ಪ್ರಕಾರ ಸಣ್ಣ ನೀರಾವರಿ ವಿಷಯದಲ್ಲಿ ಮಾನ್ಯ ಗೋವಿಂದ ಕಾರಜೋಳರವರು ಹಿರಿಯ ಮಂತ್ರಿಯಾಗಿದ್ದಾರೆ, ಅವರು ವಿಶೇಷ ಕಾಳಜಿ ವಹಿಸಬೇಕು. ಆದರೆ, ನಮ್ಮ ತಾಲ್ಲೂಕಿನಲ್ಲಿ ದೂಧ್‌ಗಂಗಾ ಅಣೆಕಟ್ಟೆಯಿಂದ, ಕಳಮವಾಡಿ ಅಣೆಕಟ್ಟೆಯಿಂದ ನೀರು ಬರುವ ಅಥವಾ ಅದು open ಆಗಿದ್ದು Major Irrigation Department ನಿಂದ, barrage ಮುಖಾಂತರ ನೀರು ಸಂಗ್ರಹಿಸುವುದೆಲ್ಲ Major Irrigation Department ನವರು ಮಾಡುತ್ತಾರೆ. ಸಿದ್ನಾಳ್

ಬ್ಯಾರೇಜ್ ಇರಲಿ, ಸದಲಗಾ ಬ್ಯಾರೇಜ್ ಇರಲಿ ಅಥವಾ ಮಲ್ಲಿಕವಾಡ ಬ್ಯಾರೇಜ್, ಇರಲಿ, ಈಗ barrage ಗಳು ತಮಗೆ ಬರುತ್ತವೆ. Indent ಕಳುಹಿಸುವುದು, ನೀರು ಯಾವಾಗ ಬಿಡುತ್ತಾರೆ ಎನ್ನುವುದು Major Irrigation Department ಗೆ ಬರುತ್ತದೆ. ನನ್ನ ಕನ್ನಡ ಅಷ್ಟು ಪ್ರಭಾವಶಾಲಿ ಇಲ್ಲ. ನಮ್ಮ Seniors ತರಹ ಇಂಗ್ಲೀಷ್ ಮಾತನಾಡುವಷ್ಟು Capacity ಇಲ್ಲ. ನನ್ನ ಮಾತು ತಪ್ಪಿದ್ದರೂ ಕೂಡ ನನ್ನ intention ತಿಳಿದುಕೊಳ್ಳಿ. ನನ್ನ ಮನವಿ ಏನೆಂದರೆ, ಬೆಳಗಾಂ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಹಿಡಕಲ್ ಜಲಾಶಯ ಇರಲಿ, ಮಲಪ್ರಭಾ ಜಲಾಶಯ ಇರಲಿ, 2001ರಲ್ಲಿ ನಿರ್ಮಿಸಿದ ಮಾರ್ಕಂಡೇಯ ಜಲಾಶಯವಾಗಲಿ, ಹಿಪ್ಪರಗಿ ಬ್ಯಾರೇಜ್ ಮುಖಾಂತರ ನೀರಾವರಿಯಾಗಿದೆ. ನಮ್ಮಲ್ಲಿ 11 Sugar factory ಗಳು ಕಾರ್ಯನಿರ್ವಹಿಸುತ್ತಿವೆ. ಅದರಿಂದಾಗಿ ನಮ್ಮ ಜಿಲ್ಲೆಗೆ ಒಳ್ಳೆಯ ಕಾರ್ಯಕ್ರಮ ಕೊಡಬೇಕು. ಬೆಂಗಳೂರು, ಹೈದರಾಬಾದ್-ಕರ್ನಾಟಕ, ಗುಲಬರ್ಗಾ, ದಾವಣಗೆರೆ, ಶೀವಮೊಗ್ಗಕ್ಕೆ ಒಳ್ಳೆಯ ಕಾರ್ಯಕ್ರಮಗಳು ಬಂದು ನಿಲ್ಲುತ್ತವೆ. ಒಳ್ಳೆಯ ಕಂಪನಿಗಳು ಬೆಳಗಾಂಗೆ ಬರುವುದಿಲ್ಲ. ಉತ್ತರ ಕರ್ನಾಟಕವೆಂದರೆ ಹುಬ್ಬಳ್ಳಿ-ಧಾರವಾಡ ಎಂದು ತಿಳಿದುಕೊಂಡಿದ್ದಾರೆ. ಅದರಲ್ಲಿ ಎರಡನೇ ಪ್ರಶ್ನೆ ಇಲ್ಲ. ವಿಶೇಷವಾಗಿ ಬೆಳಗಾಂ ಜಿಲ್ಲೆಯಲ್ಲಿ ನಿರ್ಮಿತವಾದಂಥ ಸಕ್ಕರೆ technology ಎಂದು ನಾಮಕರಣ ಮಾಡಿರುವುದು ಬಿಟ್ಟರೆ ಪ್ರಸ್ತುತ ಸಾಲಿನಲ್ಲಿ ಬೆಳಗಾಂ ಜಿಲ್ಲೆಗೆ ವಿಶೇಷವಾದ ಯಾವುದೇ ಯೋಜನೆ ಹಾಕಿಕೊಂಡಿಲ್ಲ. ಇದು ಬಹಳ ದುಃಖದ ಸಂಗತಿ. ತಾವು ಮುಖ್ಯಮಂತ್ರಿಯಾದ ನಂತರ ಬೆಳಗಾಂ ಜಿಲ್ಲೆಯಲ್ಲಿ ಅಧಿವೇಶನ ನಡೆಸಿದ ಕಾಲದಲ್ಲಿ ವಿಶೇಷವಾಗಿ ಕಿತ್ತೂರು ಮತ್ತು ನಿಪ್ಪಾಣಿ ತಾಲ್ಲೂಕುಗಳ ಬಗ್ಗೆ ಪ್ರಸ್ತಾಪವಾಗಿತ್ತು. ಅಲ್ಲಿ ಮಿನಿ ವಿಧಾನಸೌಧ ಕಟ್ಟಿಸುವ ಒಂದು ವ್ಯವಸ್ಥೆ ಮಾಡಿ ಅದಕ್ಕೊಂದು amount ನಿಗದಿ ಮಾಡಿದರೂ ಕೂಡ ನಮ್ಮ ಜನರಿಗೆ ಅನುಕೂಲವಾಗುತ್ತದೆ. ನಮ್ಮ ಭಾಗದ ಜನರು ಮುಖ್ಯವಾಹಿನಿಯಲ್ಲಿ ಬಂದಿದ್ದಾರೆಯೇ ಎಂದು ನಾವು ನೋಡಬೇಕಾಗಿದೆ. ಯಾವುದೇ ವಿಷಯದಲ್ಲಿ ನಾವು ಪ್ರಗತಿ ಸಾಧಿಸಬೇಕಾದರೆ, ನಾವು ಮುಖ್ಯವಾಹಿನಿಯಲ್ಲಿ ಹೋಗಬೇಕು ಮತ್ತು ಪ್ರಗತಿ ಸಾಧಿಸುವ ವ್ಯವಸ್ಥೆ ಆಗಬೇಕೆನ್ನುವುದು ನಮ್ಮ ಎಲ್ಲಾ ಯುವಕರ ಕಲ್ಪನೆಯಾಗಿದೆ. ತಾವು ಈ ಬಜೆಟ್‌ನಲ್ಲಿ ಏನಾದರೂ ನಮ್ಮ ಭಾಗಕ್ಕೆ ಘೋಷಿಸುವ ಮುಖಾಂತರ ನಮ್ಮ ನೆರವಿಗೆ ಬರಬೇಕು. 1975ನೇ

ಇಸವಿಯಲ್ಲಿ ಗದ್ದಿಗೌಡರ ಅಧ್ಯಕ್ಷತೆಯಲ್ಲಿ ಹೊಸ ತಾಲ್ಲೂಕುಗಳ ರಚನೆಗೆ ಸಂಬಂಧಿಸಿದಂತೆ ರಚಿತವಾದ ಕಮಿಟಿಯಾಗಲಿ ಅಥವಾ ಹುಂಡೇಕರ್ commission ಆಗಲಿ ಅಥವಾ ಇತ್ತೀಚೆಗೆ ರಚಿತವಾಗಿದ್ದ ಎಂ.ಬಿ. ಪ್ರಕಾಶ್‌ರವರ ಕಮಿಟಿಯಾಗಲಿ, ಮಾನ್ಯ ಮುಖ್ಯಮಂತ್ರಿಯವರು ಆ ಕಮಿಟಿಗಳ ವರದಿಯ ಆಧಾರದ ಮೇಲೆ ಕಿತ್ತೂರು ಮತ್ತು ನಿಪ್ಪಾಣಿಯಲ್ಲಿ ಮಾಡಬೇಕು. ಕಿತ್ತೂರಿಗಾಗಿ ಹೋರಾಟ ಮಾಡಿದ ಕಿತ್ತೂರು ರಾಣಿ ಚೆನ್ನಮ್ಮರವರ ಹೆಸರಿನಲ್ಲಿ ಕಿತ್ತೂರು ತಾಲ್ಲೂಕು ಮತ್ತು ವಿಶೇಷವಾಗಿ ಗಡಿ ಭಾಗದಲ್ಲಿರುವ ನಿಪ್ಪಾಣಿ ತಾಲ್ಲೂಕು ರಚನೆ ಮಾಡಬೇಕು. ತಾವು Border Areas Development Bill ತರುತ್ತಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಸುವುದೇನೆಂದರೆ ನಮ್ಮದು border area ಅಲ್ಲ. It is the entrance city ಅಥವಾ entrance area of Karnataka. ಉಳಿದ ಭಾಗಗಳಿಂದ ಕರ್ನಾಟಕಕ್ಕೆ entry ಆಗುವ ಜನ ನಮ್ಮ ಭಾಗದಿಂದಲೇ ಬರುತ್ತಾರೆ. ಯಾರೋ ಅಧಿಕಾರಿ ಹೇಳುತ್ತಿರಬೇಕು ಅಥವಾ ಬೆಂಗಳೂರಿನಲ್ಲಿ ಕುಳಿತು ಗಡಿನಾಡು ಭಾಗದಲ್ಲಿ ಎಂದು ಹೇಳುತ್ತಿರಬಹುದು. ಆದರೆ, ನಮ್ಮದು ಗಡಿಭಾಗ ಅಲ್ಲ. ಅದು ನಮ್ಮ ರಾಜ್ಯದ ಪ್ರವೇಶ ದಾರಿಯಾಗಿರಬೇಕು. ರಾಜ್ಯದ ಪ್ರವೇಶ ದಾರಿ ಹೇಗಿರಬೇಕೆನ್ನುವುದನ್ನು ಲೆಕ್ಕಾಚಾರ ಮಾಡಬೇಕಾದರೆ ಪಕ್ಕದ ಮಹಾರಾಷ್ಟ್ರದ ಪ್ರಗತಿಯನ್ನು ನೋಡಿದ್ದೇವೆ, ಕೊಲ್ಹಾಪುರ, ಸಾಂಗ್ಲಿಯಲ್ಲಿ ಯಾವ ರೀತಿ ಅಭಿವೃದ್ಧಿಯಾಗಿದೆ ಎಂದು ನೋಡಿದಾಗ ಆ ಪ್ರಕಾರ ಇಲ್ಲಿ ಅಭಿವೃದ್ಧಿಯಾಗುತ್ತಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ನಮ್ಮ ಉಪನಾಯಕರಲ್ಲಿ ಅವರಿಗೂ ಕೂಡ ವಿನಂತಿ ಮಾಡುವುದೇನೆಂದರೆ, ಪಕ್ಷಾತೀತವಾಗಿ ಬೆಳಗಾಂ ಜಿಲ್ಲೆಯ ಬಗ್ಗೆ ವಿಶೇಷ ಗಮನ ಹರಿಸಬೇಕು. ವಿಶೇಷವಾಗಿ ಗಡಿನಾಡು ಭಾಗದಲ್ಲಿ Border areas development Authority ಎಂದು ಮಾಡಿದ್ದೀರಿ, 54 ತಾಲ್ಲೂಕುಗಳಿಗೆ 75 MLA ಗಳಿದ್ದಾರೆ. ಅಂಥದ್ದಕ್ಕೆ 10-20 ಕೋಟಿ ರೂಪಾಯಿಗಳನ್ನು ಕೊಟ್ಟರೆ ಒಂದೊಂದು ಕ್ಷೇತ್ರಕ್ಕೆ 50 ಲಕ್ಷ ರೂ. ಸಹ ಬರುವುದಿಲ್ಲ. ಕನಿಷ್ಠ ಅದಕ್ಕೆ 100 ಕೋಟಿ ರೂ.ಗಳನ್ನಾದರೂ Provision ಮಾಡಬೇಕು. ಪ್ರತಿಯೊಂದು entrance ನಲ್ಲಿ ಪ್ರತಿಯೊಂದು ತಾಲ್ಲೂಕು ಅಥವಾ Assembly serment ಎಲ್ಲಿದೆ ಅಲ್ಲಿ ವಿಶೇಷವಾದ ಕರ್ನಾಟಕದ

ಚೈತನ್ಯಧಾಮ ಎನ್ನುವ ವ್ಯವಸ್ಥೆ ಮಾಡಬೇಕು. ಹಂಪಿಯಲ್ಲಿ ಶ್ರೀಕೃಷ್ಣದೇವರಾಯನ 500ನೇ ವರ್ಷದ ಪಟ್ಟಾಭಿಷೇಕ ಮಹೋತ್ಸವ ಮಾಡಿದ್ದೀರಿ ಬಹಳ ಸಂತೋಷ. ಗಡಿನಾಡು ಭಾಗದಲ್ಲಿ entrance area ಏನಿದೆ, ಅಲ್ಲಿಯೂ ಕೂಡ ಇದೇ ರೀತಿ ಮಾಡಬೇಕು. ಅದೇ ಪ್ರಕಾರ 2005-06ನೇ ಇಸವಿಯಲ್ಲಿ ಗ್ರಾಮ ಪಂಚಾಯಿತಿಗೆ 5 ಲಕ್ಷ ರೂ.ಗಳ ಅನುದಾನ ಕೊಟ್ಟಿದ್ದರು. ನಾನು ಮುಖ್ಯ ಮಂತ್ರಿಯವರಿಗೆ ಒತ್ತಾಯ ಮಾಡುವುದೇನೆಂದರೆ, ಪ್ರತಿ ಗ್ರಾಮ ಪಂಚಾಯಿತಿಗೆ ಕನಿಷ್ಠ ಪಕ್ಷ 10 ಲಕ್ಷ ರೂಪಾಯಿಗಳನ್ನು ಕೊಡಬೇಕು. ಪ್ರತಿ ಸದಸ್ಯರಿಗನುಗುಣವಾಗಿ ತಲಾ 50 ಸಾವಿರ ರೂ.ನಂತೆ ಹೆಚ್ಚು ಮಾಡಬೇಕು. ಉದಾಹರಣೆಗೆ, ನಮ್ಮ ತಾಲ್ಲೂಕಿನಲ್ಲಿ 6 ಸದಸ್ಯರಿರುವಂಥ ಒಂದು ಗ್ರಾಮ ಪಂಚಾಯಿತಿ ಕೂಡ ಇದೆ. ಅದೇ ಪ್ರಕಾರ 52 ಸದಸ್ಯರಿರುವಂಥ ಗ್ರಾಮ ಪಂಚಾಯಿತಿ ನಮ್ಮ ಜಿಲ್ಲೆಯಲ್ಲಿದೆ. ಅದಕ್ಕೂ ಕೂಡ 7 ಲಕ್ಷ ರೂ. ಅನುದಾನ ಸಾಲುವುದಿಲ್ಲ. ಉದಾಹರಣೆಗೆ, ಹೇಳುವುದಾದರೆ ನನ್ನ ಊರು ಚಿಕ್ಕೋಡಿ ಸದಲಗಾ ಮತಕ್ಷೇತ್ರಕ್ಕೆ ಬರುತ್ತದೆ ಅಲ್ಲಿ ಬರುವ ಗ್ರಾಮಪಂಚಾಯಿತಿಯಲ್ಲಿ 10 ಜನ ಸದಸ್ಯರಿದ್ದಾರೆ. ಆ ಎಲ್ಲಾ ಸದಸ್ಯರಿಗೂ 7 ಲಕ್ಷ ರೂ. ಅನುದಾನ ಬಂದರೆ ಒಬ್ಬೊಬ್ಬರಿಗೆ 50 ಸಾವಿರ ರೂ.ನಂತೆ ಅಭಿವೃದ್ಧಿ ಮಾಡುವುದಕ್ಕೆ ಸಿಗುತ್ತದೆ. ಮಾನ್ಯ ಪ್ರಕಾಶ್ ಹುಕ್ಕೇರಿಯವರ ಸ್ವಂತ ಊರಿನಲ್ಲಿ 47 ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ಅಲ್ಲಿಗೂ 7 ಲಕ್ಷ ರೂ. ಅನುದಾನ ಬರುತ್ತದೆ. ಆ ಅನುಪಾತದಲ್ಲಿ ಅವರಿಗೆ ಹಣ ಕೊಡುವುದಕ್ಕಾಗುವುದಿಲ್ಲ. ಅದಕ್ಕಾಗಿ population ಆಧಾರದ ಮೇಲೆ after completion of the 10th five year plan ಅಥವಾ ಹುಂಡೇಕರ್‌ರವರ ವರದಿ ಬಂದ ನಂತರ, ತಾವು ಬಜೆಟ್‌ನಲ್ಲಿ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂದು ಹೇಳಿದಂತೆ ಆ ಪ್ರಕಾರ population and need-baseನಲ್ಲಿ finance ಮಾಡಬೇಕು ಮತ್ತು amount release ಮಾಡಬೇಕು. ಅದೇ ಪ್ರಕಾರ ಗ್ರಾಮೀಣ ನೈರ್ಮಲೀಕರಣ-vision-2020 ಅನ್ನು ನೋಡಿದ್ದೇವೆ. ಇದರಲ್ಲಿ ವಿಶೇಷವಾಗಿ ಹಳ್ಳಿಗಾಡು Population ನಲ್ಲಿ ವಿಶೇಷವಾಗಿ ಗ್ರಾಮೀಣ ನೈರ್ಮಲೀಕರಣದಲ್ಲಿ ರಾಷ್ಟ್ರ ಮಟ್ಟದಲ್ಲಿ ನಾವು 18ನೇ ಸ್ಥಾನದಲ್ಲಿದ್ದೇವೆ. ಅದಕ್ಕಿಂತ ಮುಂದೆ ಹೋಗಬೇಕಾದರೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ನೆರವಿನಿಂದ RLEGPನಿಂದ ನಾವು 3000 ರೂ. ಕೊಡುವುದಕ್ಕೆ ಸಾಧ್ಯ, ಶಾಸಕರ ನಿಧಿಯಿಂದ 1000 ಸಾವಿರ

ಕೊಡುವುದಕ್ಕೆ ಸಾಧ್ಯ. State sector fund ನಲ್ಲಿ 4000 ಸಾವಿರ ರೂ. ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಒಂದೆರಡು ವರ್ಷಗಳಲ್ಲಿ ನಿರ್ದಿಷ್ಟವಾದ ಒಂದು Programme ಮಾಡಿ ಸಂಪೂರ್ಣವಾಗಿ ಕರ್ನಾಟಕದಾದ್ಯಂತ ನೈರ್ಮಲೀ ಕರಣ ಮಾಡುವಂಥ ಒಂದು ದೃಢ ವಿಶ್ವಾಸವಿರಬೇಕು. Vision 2020 ಯಲ್ಲಿ ಮಾನ್ಯ ಅಬ್ದುಲ್ ಕಲಾಂ ರವರು ಇಲ್ಲಿ ಏನು ಭಾಷಣ ಮಾಡಿದ್ದಾರೆ ಅದರ ಬಗ್ಗೆ ಯೋಜನೆಗಳ ವಿವರದ paragraph ಅನ್ನು ಕೊಟ್ಟಿದ್ದೀರಿ. ಅದನ್ನು ನಾವು ಸ್ವಾಗತಿಸುತ್ತೇವೆ. ಅವರ ಹೇಳಿಕೆಯಲ್ಲಿ ಕರ್ನಾಟಕದಲ್ಲಿ 2025ನೇ ಇಸವಿಯಲ್ಲಿ ಹೇಗಿರಬೇಕು ಎಂದು ಯೋಚನೆ ಮಾಡಿ ಆ ಪ್ರಕಾರ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸುವಂಥ ಸುವರ್ಣ ಗ್ರಾಮ ಅಥವಾ ವಿಶೇಷ ಗ್ರಾಮವನ್ನು ಆಯ್ಕೆ ಮಾಡಿ ಆ ಪ್ರಕಾರ ಮಾಡಿ ಎಂದರು. ಆ ಪ್ರಕಾರ 1 ಸಾವಿರ ಗ್ರಾಮ ಪಂಚಾಯಿತಿಗಳು ಆಯ್ಕೆ ಆದವು. ಈಗ ಮೂರನೇ ಹಂತದ ಕೆಲಸ ನಡೆಯುತ್ತಿದೆ. ಅದರಲ್ಲಿಯೂ ಕೂಡ ವಿಶೇಷ ನೈರ್ಮಲೀಕರಣಕ್ಕೆ ಆದ್ಯತೆ ಕೊಡಬೇಕು. ಗ್ರಾಮ ಪಂಚಾಯಿತಿಯಲ್ಲಿ ಅಥವಾ local authority ಯಲ್ಲಿ ಮಹಿಳೆಯರಿಗೆ 50% ಮೀಸಲಾತಿ ಕೊಟ್ಟಿದ್ದೇವೆ. ಆ ಪ್ರಕಾರ Parliament and Assembly ಯಲ್ಲೂ ಕೂಡ ಎಲ್ಲರೂ ಸೇರಿ 33% ಮೀಸಲಾತಿ ತರುತ್ತಿದ್ದೇವೆ. ಅದೇ ಪ್ರಕಾರ ಗ್ರಾಮೀಣ ಮಹಿಳೆಯರಿಗೆ ಮಹಾರಾಷ್ಟ್ರದಲ್ಲಿ ಒಬ್ಬ ಬಾಬಾರವರು ಸ್ವಚ್ಛತೆಯ ಬಗ್ಗೆ ಒಂದು ಅಭಿಯಾನವನ್ನೇ ಉಂಟು ಮಾಡಿದ್ದಾರೆ.

ಅದೇ ಪ್ರಕಾರ ಅಣ್ಣಾ ಹಜಾರೆಯವರ ಬಗ್ಗೆನೂ ಹೇಳಿದಿರಿ. ರಾಳೆಗನ್ ಸಿದ್ದಿಗೆ ನಾನು ಹೋಗಿ ಬಂದಿದ್ದೇನೆ. ವಾಟರ್ ಶೆಡ್‌ನಲ್ಲಿ ನಾವು ಅಮೌಂಟ್ ಹೆಚ್ಚಿಗೆ ತೆಗೆದುಕೊಳ್ಳಬೇಕಾಗಿದೆ. ಏಕೆಂದರೆ, ಕೇಂದ್ರ ಸರ್ಕಾರದಿಂದ ನಾವು ನೆರವು ತೆಗೆದುಕೊಳ್ಳುವಾಗ ಸ್ಟೇಟ್‌ಫಂಡ್ ಕೂಡ ಕೊಡಬೇಕು ಎನ್ನುವ ವ್ಯವಸ್ಥೆಯನ್ನು ನಾವು ಎಲ್ಲರೂ ಕೂಡಿ ಮಾಡಬೇಕು. ಈ ಕರ್ನಾಟಕ ನಮ್ಮ ರಾಜ್ಯ, ನಾವೆಲ್ಲರೂ ಕನ್ನಡಿಗರು, ನಮ್ಮ ರಾಜ್ಯ ಭಾಷೆ ಕನ್ನಡ. ಅದರೂ ಕೂಡ ಈ ಭಾಷಾ ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡುವುದು ಸರ್ಕಾರದ ಕೆಲಸ. ಏಕೆಂದರೆ, ತಾವು ಕೌಟಿಲ್ಯನ ನೀತಿ ಹೇಳಿದಿರಿ. ಅದರಲ್ಲಿ ಅವನೇನು ಹೇಳಿದ್ದಾನೆ. ರಾಜಾ ಕಾಲೇಸಿ ಕಾರಣಂ. ರಾಜ ಯಾವುದೋ ಒಂದು ಇತಿಮಿತಿಯಲ್ಲಿ ಯಾವುದೋ ಒಂದು ವೈರತ್ವ ಇದ್ದರೂ, ಜಿದ್ದು ಇದ್ದರೂ ಅದರ ನೇರ ಹೊಣೆಗಾರಿಕೆ ರಾಜನಿಗೆ ಇರುತ್ತದೆ. ಅದಕ್ಕಾಗಿ

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಆರೋಗ್ಯ ನಮ್ಮ ರಾಜ್ಯದಲ್ಲಿ ಕೆಡುತ್ತಿದೆ. ಅದಕ್ಕೆ ತಾವು ವಿಶೇಷವಾದ ಕಾಳಜಿ ವಹಿಸಬೇಕು. ಒಂದು ಸ್ಟೇಟ್ ಸೆಕ್ಟರ್‌ನಲ್ಲಿ ರಾಜ ಹೇಗೆ ಇರಬೇಕೆಂದು ಉದಾಹರಣೆ ಕೊಡುವುದಾದರೆ, ಮಹಾರಾಣ ಪ್ರತಾಪ್, ಟಿಪ್ಪು ಸುಲ್ತಾನ್, ಛತ್ರಪತಿ ಶಿವಾಜಿ ಮಹಾರಾಜ್, ಕಿತ್ತೂರು ರಾಣಿ ಚೆನ್ನಮ್ಮ, ಇವರ ಉದಾಹರಣೆ ಕೊಡುತ್ತಿದ್ದರು. Social ಆಗಿ ಹೇಳುವುದಾದರೆ, ಕೃಷ್ಣದೇವರಾಯ, ಔರಂಗಜೇಬ್‌ರವರು, ಅಕ್ಬರ್ ಬಾದಷಃ, ಇಂಥವರ ಉದಾಹರಣೆ ಕೊಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ನಾವು after freedom ನಂತರ, ಪಂಡಿತ್ ನೆಹರೂರವರು, five-year plan ಮಾಡಿದರು. ದೇಶವು ಸ್ವಯಂ ಪೂರ್ಣವಾಗಬೇಕಾದರೆ ಮುಖ್ಯ ಕಾರಣ ಏನೆಂದರೆ ಈ five-year plan ಮಾಡಿದ್ದು. five-year plan ಮಾಡಿದಾಗ 10 Plan complete ಆದಾಗ ವಿ.ಎಮ್. ದಾಂಡೇಕರ್‌ರವರು ಒಂದು ರಿಪೋರ್ಟ್ ಕೊಟ್ಟರು. Public sector ನಲ್ಲಿ 85 to 100%, ವಿದ್ಯುತ್ ಉತ್ಪಾದನೆ ಮಾಡುವ ಘಟಕ ಬಿಟ್ಟರೆ, ಉಳಿದ ಎಲ್ಲಾ ಭಾಗಗಳಲ್ಲಿ ರಾಜ್ಯಗಳು ಪ್ರಗತಿ ಸಾಧಿಸಿವೆ, ಅದಕ್ಕೆ ಇನ್ನು ಮುಂದೆ ಸಾಮಾಜಿಕ ನ್ಯಾಯದಿಂದ ಯಾರು ವಂಚಿತರಾಗಿದ್ದಾರೋ ಅವರನ್ನು individual identify ಮಾಡಿ ಅಂಥ beneficiaries ಗೆ ಸಾಮಾಜಿಕ ನ್ಯಾಯದಿಂದ ಯಾರೋ ವಂಚಿತರಿದ್ದರೋ ಅವರಿಗೆ ಅವಕಾಶ ಕೊಡಿ ಎಂದು ಹೇಳಿದ್ದ ಹಿನ್ನೆಲೆಯಲ್ಲಿ ಈ ಸಾಮಾಜಿಕ ಭದ್ರತೆಯ ಯೋಜನೆಯಡಿಯಲ್ಲಿ ಈ ಸ್ಕೀಂಗಳು ಬಂದಿವೆ. Widow pension ಆಗಲಿ, old-age pension ಆಗಲಿ, ಅಂಗವಿಕಲರ ವೇತನವಾಗಲಿ ಆಗಬಹುದು. ಈ ಹಿಡಕಲ್ ಜಲಾಶಯಕ್ಕೆ ಮೊನ್ನೆ ಹೋಂ ಮಿನಿಸ್ಟ್ರು ಇದ್ದಾಗ ಕೇಳಿದೆ. ಈಗಿನ ಪ್ಲಾನ್ ಪ್ರಕಾರ ಎಷ್ಟು ಅಮೌಂಟ್ ಬೇಕು? ಅಷ್ಟು ಅಮೌಂಟ್‌ನಲ್ಲಿ ಎಷ್ಟು ಕೋಟಿ ಜನರಿಗೆ ನಾವು Widow pension, old-age pension ಕೊಡಬಹುದು. ಅಂಥ ಯಾವುದೇ ಕೆಲಸ ಶಿಲ್ಕು ಉಳಿದಿಲ್ಲ. ಅದಕ್ಕೆ ಎಲ್ಲಾ ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಅಥವಾ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ, ಅಥವಾ ಕಮ್ಯುನಿಸ್ಟ್ ಆಡಳಿತವಿರುವ ರಾಜ್ಯಗಳಲ್ಲಿ, ಅಲ್ಲಿ ಈಗ individual beneficiaries identify ಮಾಡಿ below poverty line ಇರುವ ಜನರನ್ನು ಗುರುತಿಸಿ, ಅವರಿಗೆ ಒಳ್ಳೆಯ ಅವಕಾಶ ಕೊಡಬೇಕು ಎಂದು ಹೇಳುತ್ತಾ, ನಾವು ನಮ್ಮ ಭಾಗದ

ಸಮಸ್ಯೆಯನ್ನು ತಮ್ಮ ಎದುರಿಗೆ ಮಂಡಿಸಲಿಕ್ಕೆ ನನಗೆ ತಾವು ಅವಕಾಶ ಕೊಟ್ಟಿದ್ದಕ್ಕೆ ಮತ್ತೊಮ್ಮೆ ತಮಗೆ ವಂದಿಸಿ, ಈ ಬಜೆಟ್ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಇಲ್ಲ ಎಂದು ಇದನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಬಹಳ ದಿವಸಗಳ ನಂತರ ನನಗೆ ಮಾತನಾಡಲಿಕ್ಕೆ ಅವಕಾಶ ಸಿಕ್ಕಿದೆ. ನಮ್ಮ ಜಿಲ್ಲೆಯವರೆ ಮುಖ್ಯಮಂತ್ರಿಯಾಗಿರತಕ್ಕಂಥ ಸಂದರ್ಭದಲ್ಲಿ, ನನಗೆ ಬಜೆಟ್ ಮಂಡಣೆಯ ಕೆಲವು ಎರಡು–ಮೂರು ಸಂಗತಿಗಳನ್ನು ಪ್ರಥಮದಲ್ಲಿ ಹೇಳಬೇಕೆಂದು ನನ್ನ ಅಪೇಕ್ಷೆ ಇದೆ. ಒಂದನೆಯದಾಗಿ ಮಾನ್ಯ ಸಭಾಧ್ಯಕ್ಷರಲ್ಲಿ ಹೇಳುತ್ತೇನೆ. ಹಿಂದೆ ಇದೇ ಸದನದಲ್ಲಿ ಶಾಂತವೇರಿ ಗೋಪಾಲಗೌಡರವರು ಬಜೆಟ್ ಅಧಿವೇಶನಕ್ಕಿಂತ ಮುಂಚೆ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಮಾಡಿರುವ ಭಾಷಣದ ಮೇಲೆ ಮಾತನಾಡಲು ಅವಕಾಶ ಕೊಡಲಿಲ್ಲವೆಂದು ಅವರ ತಮ್ಮ ಶೂನಲ್ಲಿ ರಾಜ್ಯಪಾಲರ ಭಾಷಣವನ್ನು ತುಳಿದು ಹದಿನೈದು ದಿನ ಸಸ್‌ಪೆಂಡ್ ಆಗಿದ್ದರು. ಅದು ನನಗೆ ನೆನಪು ಬರುತ್ತಿದೆ. ಕಾರಣ ಏನೆಂದರೆ, ನಾನು ಅದೇ ಕ್ಷೇತ್ರದಿಂದ ಎಲೆಕ್ಟ್ ಆದವನು. ನಮಗೆ ಹೆಚ್ಚು ಕಡಿಮೆ ಮಾತನಾಡಲಿಕ್ಕೆ ಅವಕಾಶ ಸಿಗುವುದಿಲ್ಲ. ಏಕೆ ಇಂಥ ಅವ್ಯವಸ್ಥೆ? ನಾವು ಏಕೆ ಇಲ್ಲಿಗೆ ಬಂದಿದ್ದೇವೆ? ಏಕೆ ರೆಸಿಗ್ನೇಷನ್ ಎಸೆದು ಹೋಗಬಾರದು ಎನ್ನತಕ್ಕಂಥ ಮನಸ್ಸು ನೋವಾಗುತ್ತಿದೆ. ನಾವು ಅಧ್ಯಯನ ಮಾಡಿಕೊಂಡು ಬರುತ್ತೇವೆ. ಕಾರಣ ಏನು? ಈಗ ಶಾಸನ ಸಭೆಯ ಅವಧಿಯನ್ನು ನೀವು 1952ನೇ ಇಸವಿಯಿಂದ ಇಲ್ಲಿಯವರೆಗೆ ತೆಗೆದು ನೋಡಿದರೆ, ನಾನು ನೋಡಿದೆ. 1983 ನೇ ಇಸವಿಯಿಂದ ಇಲ್ಲಿಯವರೆಗೆ 60 ದಿನದ ನಂತರ ಒಂದು ದಿನ ಶಾಸನ ಸಭೆ ನಡೆದಿಲ್ಲ. ಆದರೆ ಆಗ ಒಂದೂವರೆ ಕೋಟಿ ಎರಡು ಕೋಟಿ ಜನಸಂಖ್ಯೆ ಇತ್ತು. ಇವತ್ತು ಆರು ಕೋಟಿ ಜನಸಂಖ್ಯೆ ಇದೆ. ಎಲ್ಲೋ ಒಂದು ಕಡೆಗೆ ಈ ವ್ಯವಸ್ಥೆಯಲ್ಲಿ ಲೋಪದೋಷವಿದೆ. ಇದು ನಾವೆಲ್ಲರೂ ಮಾಡಿರತಕ್ಕಂಥ ತಪ್ಪು. ನನಗೆ ಅನ್ನಿಸುತ್ತದೆ ಇವತ್ತು ನಾವೇನಾದರೂ ಅಧಿವೇಶನದ ಸಮಯ ಜಾಸ್ತಿ ಮಾಡದೇ ಇದ್ದರೆ it is a burden on the elected members, not on the people. ಇದು ನಮಗೆ ನೋವಾಗುವುದಿಲ್ಲವೆ? ನಾವು ಏಕೆ ಇಲ್ಲಿಗೆ ಬರಬೇಕು? ಬೆಳಗ್ಗೆ ಸದನ ಆರಂಭವಾದ ತಕ್ಷಣ ಬಂದು ಕುಳಿತು ಕೊನೆಯವರೆಗೆ ಇಲ್ಲಿ ಕುಳಿತು

ಕೊಳ್ಳುತ್ತೇವೆ, ಆದರೂ ನಮಗೆ ಅವಕಾಶ ಸಿಗುವುದಿಲ್ಲ. ಎರಡು ನಿಮಿಷದಲ್ಲಿ ಮಾತನಾಡಿ ಎಂದು ಹೇಳುತ್ತೀರಿ, ಎರಡು ನಿಮಿಷದಲ್ಲಿ ಏನು ಮಾತನಾಡು ವುದಕ್ಕೆ ಸಾಧ್ಯವಿದೆ? ನಮ್ಮ ಕ್ಷೇತ್ರದ ಸಮಸ್ಯೆ ಮಾತನಾಡುವುದಕ್ಕೆ ಸಾಧ್ಯವಾಗು ತ್ತದೆಯೆ? ನಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಆಗುತ್ತದೆಯೆ? ಮಾನ್ಯ ಅಧ್ಯಕ್ಷರೆ, ತಮ್ಮ ಹತ್ತಿರ ದಾಖಲೆ ಇದೆ ತಾವು ಬೇಕಾದರೆ ನೋಡಬಹುದು. ನಾನು ದಾಖಲೆ ತೆಗೆದು ನೋಡಿದೆ. 1952 ನೇ ಇಸವಿಯಲ್ಲಿ ಶಾಸನ ಸಭೆ 98 ದಿನ ಅಧಿವೇಶನ ನಡೆದಿದೆ. ಆಗಿನ ಜನಸಂಖ್ಯೆ ಒಂದೂವರೆ ಕೋಟಿಯಿಂದ ಎರಡು ಕೋಟಿ ಮಾತ್ರ. ಅವತ್ತು 214 ಜನ ಸದಸ್ಯರು. ಮತ್ತೊಂದು ಸಾರಿ 78 ದಿನ ಅಧಿವೇಶನ ನಡೆದಿದೆ. 1983 ನೇ ಇಸವಿಯಿಂದ ಇಲ್ಲಿಯತನಕ ಒಂದು ಸಾರಿಯೂ 60 ದಿನ ದಾಟಿಲ್ಲ. ಎಲ್ಲಾ ಸರ್ಕಾರಗಳು. ಎಲ್ಲೋ ಒಂದು ಕಡೆಗೆ ಚರ್ಚೆಯೇ ನಡೆದಿಲ್ಲ. ಮೆಜಾರಿಟಿ ಇದ್ದ ಪಕ್ಷಕ್ಕೆ ಖಂಡಿತವಾಗಿ ಅವಕಾಶವಿರುತ್ತದೆ. ಅವರು ಏನು ಹೇಳುತ್ತಾರೆ ಅದು ಕಾನೂನು ಆಗುತ್ತದೆ. But an opportunity should be given to the Opposition. They should express their opinion. ಎಲ್ಲಿ ಪ್ರಜಾಪ್ರಭುತ್ವದಲ್ಲಿ ಅಭಿಪ್ರಾಯಕ್ಕೆ ಮನ್ನಣೆ ಇಲ್ಲವೋ ಅಲ್ಲಿ ಪ್ರಜಾಪ್ರಭುತ್ವಕ್ಕೆ ಅರ್ಥವೇ ಇಲ್ಲ.

ಅಧ್ಯಕ್ಷರು : ಆಯಿತು. ನೀವು ಬಜೆಟ್ ಮೇಲೆ ಮಾತನಾಡಿ.

ಶ್ರೀ ಕಿಮ್ಮನೆ ರತ್ನಾಕರ : ಆಯಿತು ಸ್ವಾಮಿ, ಬಜೆಟ್ ಮೇಲೆ ಮಾತನಾಡುತ್ತೇನೆ. ಬಜೆಟ್‌ನಲ್ಲಿ ನನ್ನ ಪ್ರಥಮ ಅನಿಸಿಕೆ ಏನೆಂದರೆ, ಬಜೆಟ್ ನಲ್ಲಿ ಎರಡು ಅಂಶಗಳು ಬಹಳ ಪ್ರಮುಖವಾಗಿರುವಂತಹವುಗಳು. ಒಂದು ಜನಪ್ರಿಯ ಬಜೆಟ್. ಅದು ಮುಂದಿನ ಚುನಾವಣೆ ಆಧರಿಸಿ ಆದರ್ಶ ಇಟ್ಟುಕೊಂಡು ಮಾಡಿರುವುದು. ಇನ್ನೊಂದು ಜನಪರ ಬಜೆಟ್. ಜನಪ್ರಿಯ ಬಜೆಟ್ ಮಂಡನೆ ಮಾಡುವಾಗ ಹಿಂದಿನ ಎಲ್ಲಾ ಸರ್ಕಾರಗಳು ಅಂಥ ತಪ್ಪುಗಳನ್ನು ಮಾಡಿಕೊಂಡು ಬಂದಿವೆ. ಇವತ್ತು ನಮ್ಮ ರಾಜ್ಯದಲ್ಲಿ, ದೇಶದಲ್ಲಿ ಬಡತನದಲ್ಲಿ ಜನ ಏನಾದರೂ ಬದುಕುತ್ತಿದ್ದರೆ ಅದಕ್ಕೆ ಜನಪ್ರಿಯ ಯೋಜನಗಳೇ ಕಾರಣ. ಜನಪ್ರಿಯ ಯೋಜನೆಗಳಿಗೆ ಅತ್ಯಂತ ಕಡಿಮೆ ಒತ್ತನ್ನು ಕೊಟ್ಟು ಜನಪರವಾದ ಯೋಜನೆಗಳಿಗೆ ಜಾಸ್ತಿ ಒತ್ತನ್ನು ಕೊಟ್ಟರೆ ಹಣ ಅಭಿವೃದ್ಧಿ ಕಡೆಗೆ ಹೋಗುತ್ತದೆ. ಮಹಾತ್ಮ ಗಾಂಧೀಜಿಯವರ ಒಂದು ವಾಕ್ಯವನ್ನು ಹೇಳುವುದಕ್ಕೆ ಬಯಸುತ್ತೇನೆ. England ನಲ್ಲಿ round table

O.30 F-84

conference ನಲ್ಲಿ ಭಾರತದ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿದಾಗ ಗಾಂಧೀಜಿಯವರು ಒಂದೇ ಒಂದು ಮಾತನ್ನು ಹೇಳುತ್ತಾರೆ. "ಈ ಬಜೆಟ್ ಬಗ್ಗೆ ನೀವು ನನಗೆ ಅರ್ಥ ಮಾಡಿ ಹೇಳುವ ಅಗತ್ಯವಿಲ್ಲ. ನಮ್ಮ ಸಾಮಾನ್ಯ ಜನ ಕೂಡ ನೀವು ಹೇಳತಕ್ಕಂಥ ಆರ್ಥಿಕ ಪರಿಸ್ಥಿತಿಯನ್ನು ಭಾರತದಲ್ಲಿರತಕ್ಕಂಥ ಅನಕ್ಷರಸ್ಥ ಕೂಡ ಅರ್ಥ ಮಾಡಿಕೊಳ್ಳಬೇಕು" ಎಂದು ಹೇಳಿದರು. ನಾನು ಈ ಮೊದಲು ಅಡ್ವೊಕೇಟ್ ಆಗಿದ್ದೆ. 30 ವರ್ಷ ಪ್ರಾಕ್ಟೀಸ್ ಮಾಡಿದ್ದೇನೆ. Bar Association President ಆಗಿದ್ದೆ. ಬಜೆಟ್ ಪುಸ್ತಕ ತೆಗೆದು ನೋಡಿದರೆ ನಾವು economist ಕರೆದುಕೊಂಡು ಬಂದೇ ನೋಡಬೇಕು. ಅಂದರೆ, ನಾನು ಇವತ್ತಿನ ಬಜೆಟ್ ಬಗ್ಗೆ ಮಾತ್ರ ಹೇಳುತ್ತಿಲ್ಲ. ಂದು ಸಾರಿ ಬಜೆಟ್ ಅನೌನ್ಸ್ ಆದರೆ ಮಾರನೇ ದಿನ even a commonman should understand that. ನಮ್ಮ ಆದಾಯ ಎಷ್ಟು? ಅದರ ಒಂದು ಸ್ಲಿಪ್ ನೋಡಿದ ತಕ್ಷಣ ಗೊತ್ತಾಗಬೇಕು. ನಾವು ಇಡೀ investigation ಹೋಗುವುದು ಬೇಡ. ಕಾಮನ್‌ಮ್ಯಾನ್‌ಗೆ ಅರ್ಥವಾಗುವ ಹಾಗೆ, ಜನ ಸಾಮಾನ್ಯರಿಗೆ ಅರ್ಥವಾಗುವ ಹಾಗೆ, ಕರ್ನಾಟಕ ರಾಜ್ಯದ ಆದಾಯ ಎಷ್ಟು? ನಾನು ಮಾಹಿತಿ ಸಂಗ್ರಹಿಸಿದ ಹಾಗೆ, revenue tax ನಿಂದ ಬರತಕ್ಕಂಥದ್ದು ರೂ.27,000 ಕೋಟಿ. ಇದನ್ನು ಒಂದು ವಾಕ್ಯದಲ್ಲಿ ಹೇಳಬಹುದು. Non-taxes ನಿಂದ ಬರುವುದು ರೂ. 3,000 ಕೋಟಿ. Totally ಒಂದು ರೂ. 30,000 ಕೋಟಿ. Totally ನಮ್ಮ revenue tax ಎಲ್ಲಾ ಸೇರಿ ಕರ್ನಾಟಕ ರಾಜ್ಯದ ಆದಾಯ ಎಷ್ಟು 38,000 ಕೋಟಿ ರೂಪಾಯಿ. 1ನೇ ಆಗಸ್ಟ್ 2008 ರಿಂದ 31 ನೇ ಮಾರ್ಚ್ 2009 ರವರೆಗೆ. ಇದನ್ನು ಸಿಂಪಲ್ ಆಗಿ ಹೇಳಬಹುದು. ಕರ್ನಾಟಕ ರಾಜ್ಯ ಪಡೆದಂಥ ಸಾಲ ಎಷ್ಟು? 42,000 ಕೋಟಿ ರೂಪಾಯಿನಲ್ಲಿ, ಕರ್ನಾಟಕ ರಾಜ್ಯದಲ್ಲಿ ಕಳೆದ ವರ್ಷದಲ್ಲಿ ರೂ. 8,500 ಕೋಟಿ ಸಾಲ ತೆಗೆದಿದ್ದೇವೆ. It is a very simple. That can be exhibited. ನಾನು ಆಡಳಿತದಲ್ಲಿ ಇಲ್ಲಿ revenue surveyor ಇಲ್ಲ. ಇಲ್ಲಿ ಕಂದಾಯ ಇಲ್ಲ, ಇಲ್ಲಿ ಡಾಕ್ಟರ್ಸ್ ಇಲ್ಲ, ಇದು ಏಕೆ? Burden ಎಷ್ಟು? ಕರ್ನಾಟಕದಲ್ಲಿ 1 ಲಕ್ಷದ 35 ಸಾವಿರ ಖಾಲಿ ಹುದ್ದೆಗಳಿವೆ. ಅದಕ್ಕಾಗುವ ವರ್ಷದ ಖರ್ಚು ಎಷ್ಟು? 400 ಕೋಟಿ ರೂಪಾಯಿ. You have allotted it. ಅದನ್ನು ಬಜೆಟ್‌ನಲ್ಲಿ ಎತ್ತಿಡುತ್ತೀರಿ. Let us appoint

them. ನಮ್ಮ ತಾಲ್ಲೂಕು ಆಫೀಸ್‌ನಲ್ಲಿ 29 ಜನ ಇಲ್ಲ. ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇದು ಎಲ್ಲಾ ಕಾಮನ್‌ಸೆನ್ಸ್. ಇಡೀ ತೀರ್ಥಹಳ್ಳಿಯ ವಿಧಾನ ಸಭಾ ಕ್ಷೇತ್ರದಲ್ಲಿ ನಾನು ಮಾಹಿತಿಯನ್ನು ಸಂಗ್ರಹಿಸಿದಾಗ ಸಾವಿರ vacancy is there. We cannot execute the work. We cannot tahe up the work. ಡಾಕ್ಟರ್ಸ್ ಇಲ್ಲ. Health department ನಲ್ಲಿ 14 ಸಾವಿರ ಜನ ಇಲ್ಲ. ತೀರ್ಥಹಳ್ಳಿಯಲ್ಲಿ 100 ಬೆಡ್ ಆಸ್ಪತ್ರೆ ಇದೆ, 8 ಜನ ನರ್ಸ್‌ಗಳು ಇದ್ದಾರೆ. ನಾನು ಹೇಳುವುದು ಇದು ಒಂದಲ್ಲ. ನಾನು ಶಿವಮೊಗ್ಗ ಜಿಲ್ಲೆಯಿಂದ ಬಂದಿದ್ದು ಮಾನ್ಯ ಮುಖ್ಯಮಂತ್ರಿಗಳು ಅದೇ ಕ್ಷೇತ್ರದವರಾಗಿದ್ದರಿಂದ, ಸ್ವಾಮಿ ಎಷ್ಟು ದುರಂತ ಎಂದರೆ, ಬದ್ರಾ ಡ್ಯಾಮಿನ ಬ್ಯಾಕ್‌ವಾಟರ್ ನನಗೆ ಬರುತ್ತದೆ, ಆ ಕಡೆ ಕೊಡಚಾದ್ರಿಯಿಂದ ಈ ಕಡೆಯವರೆಗೆ ನನಗೆ ಬರುತ್ತದೆ. ನಾನು ಅಲ್ಲಿಗೆ ಮೊನ್ನೆ ಹೋಗಿದ್ದೆ. 11 ಮನೆಗೆ 1953 ನೇ ಇಸವಿಯಿಂದ ಈ ದಿನದವರೆಗೆ ಒಂದು ರೂಪಾಯಿ ಪರಿಹಾರ ಸಿಕ್ಕಿಲ್ಲ. ತುಂಗಾ ಅಣೆಕಟ್ಟಿನಲ್ಲಿ ಮುಳಗಿರತ್ತಕಂಥ 11 ಮನೆಗಳು 19 ಕುಟುಂಬಗಳಿವೆ ಒಂದು ರೂಪಾಯಿ ಸಿಕ್ಕಿಲ್ಲ. ಇಲ್ಲಿಯವರೆಗೆ ದೇವರ ದಯೆಯಿಂದ ಒಂದು ಹೆಂಚಿನ ಮನೆ ಇಲ್ಲ. ಅಲ್ಲಿಗೆ ಹೋದರೆ ಕಾಲಿಗೆ ನಮಸ್ಕಾರ ಮಾಡುತ್ತಾರೆ. ಅವರಿಗೆ ಶಿಕ್ಷಣ ಇಲ್ಲ, ಸ್ಕೂಲ್ ಇಲ್ಲ, ಲೈಟ್ ಇಲ್ಲ, ರೋಡ್ ಇಲ್ಲ, ಹಾಗಾದರೆ ಸರ್ಕಾರಕ್ಕೆ ಇವು ಯಾವುದೂ ಗೊತ್ತಾಗುವುದಿಲ್ಲವೇ?

ಅವರಿಗೆ ಇಲ್ಲಿಯವರೆಗೂ ಪರಿಹಾರ ಸಿಕ್ಕಿಲ್ಲ. There is no rehabilitation. ಆಗ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಇರಲಿಲ್ಲ. ಇವರೆಲ್ಲ ಟೆನಂಟ್ಸ್ ಆಗಿದ್ದರು. ಲ್ಯಾಂಡ್ ಲಾರ್ಡ್ ಪರಿಹಾರವನ್ನು ತೆಗೆದುಕೊಂಡು ಮನೆಗೆ ಹೋದರು. ಇವರೆಲ್ಲಾ ಹಾಗೆಯೇ ಉಳಿದುಕೊಂಡರು. ನೀರು ಕೆಳಗೆ ಹೋದಾಗ ಉಳುಮೆ ಮಾಡುತ್ತಿದ್ದರು ಮತ್ತೆ ಮೇಲಕ್ಕೆ ಬರುತ್ತಿದ್ದರು. ಆದರೆ, ಈಗ ಅಪ್ಪರ್ ತುಂಗಾ ಆದ ಮೇಲೆ, the water table has been raised. ಅಲ್ಲಿರತಕ್ಕಂಥವರಿಗೆ ಇನ್ನು ಸರ್ವೇ ನಂಬರ್ ಇಲ್ಲ. ಇಂಥವುಗಳು ಸಾವಿರ ಉದಾಹರಣೆಗಳಿವೆ: ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರ ಇಲಾಖೆ ಯಾದ ಶಿಕ್ಷಣದ ಭಗ್ಗೆ ಹೇಳುವುದಾದರೆ, there should be a change in basic education system. ಮಾಡಬೇಕೆಂದು ನನಗೆ ಅನಿಸುತ್ತದೆ. ನಮ್ಮ ಊರಿನಲ್ಲಿ 1ನೇ ತರಗತಿಯಿಂದ 7ನೇ ತರಗತಿಯವರೆಗೆ ಇರುವ ಶಾಲೆಯಲ್ಲಿ ಕೇವಲ ಇಬ್ಬರು ಶಿಕ್ಷಕರಿದ್ದಾರೆ. ಈ ಶಿಕ್ಷಕರು 1 ಅಥವಾ 2 ಅಥವಾ 3ನೇ

ತರಗತಿಗೆ ಪಾಠ ಮಾಡಬೇಕೆ? ನಮ್ಮಲ್ಲಿ ಒಬ್ಬ ಶಿಕ್ಷಕರು ಒಂದು ತರಗತಿ ಮಕ್ಕಳಿಗೆ ಮಾಡಿದ ಪಾಠ ಮಕ್ಕಳಿಗೆ 10 ಸಾರಿ confusion ಆಗುತ್ತದೆ. ಈ ಒಂದು ಕಾರಣದಿಂದ 1 ರಿಂದ 7ನೇ ತರಗತಿಯವರೆಗೆ ಮಕ್ಕಳು ಖಾಸಗಿ ಶಾಲೆಗೆ ಹೋಗುತ್ತಾರೆ ಎಂದರೆ this is the reason. ಎಲ್ಲಿಯೋ ಒಂದು ಕಡೆ ಇದಕ್ಕೆಲ್ಲಾ ವ್ಯವಸ್ಥೆ ಮಾಡಬೇಕು. ಸರ್ಕಾರ ಆಸಕ್ತಿ ವಹಿಸಿಲ್ಲವೆಂದು ನಾನು ಹೇಳುತ್ತಿಲ್ಲ. ಖಂಡಿತ ಆಸಕ್ತಿ ವಹಿಸಿದೆ. ಆದರೆ, ಪ್ಲಾನಿಂಗ್ ಅನ್ನು ಬದಲಾವಣೆ ಮಾಡಬೇಕು. ಏತಕ್ಕೆಂದರೆ, ನಮ್ಮಲ್ಲಿ ಬಾಳುಗೋಡು ಎಂದು ಊರಿದೆ. ತಾವು ಅರಗ ಹತ್ತಿರ ಬಂದಿದ್ದೀರಿ. ಈ ಊರು ಅಲ್ಲಿದೆ. ಸರ್ಕಾರದಿಂದ 10–15 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಆದರೆ, ಅಲ್ಲಿರುವ ಶಾಲೆ ಮುಚ್ಚಲಾಗಿದೆ. ಅಲ್ಲಿ ಕಟ್ಟಡ, ಬಾವಿ, ಶೌಚಾಲಯ ವ್ಯವಸ್ಥೆ ಇದೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಕನಿಷ್ಠ 30 ರಿಂದ 40 ಜನರಿಗೆ ಆಗುವ ರೀತಿಯಲ್ಲಿ ಅಲ್ಲಿ ಹಾಸ್ಟೆಲ್ ವ್ಯವಸ್ಥೆ ಮಾಡಿ. ಮತ್ತೆ ಅಲ್ಲಿಗೆ ಹೋಗುವುದಕ್ಕೆ ಒಂದು ವಾಹನಕ್ಕೆ ಟೆಂಡರ್ ಕರೆದು ಅಲ್ಲಿ ಹಾಸ್ಟೆಲ್ ವ್ಯವಸ್ಥೆ ಮಾಡಿ. ಒಂದು ಕಡೆ ಇರುವ ಸಿಸ್ಟಮ್ ಅನ್ನು ಬದಲಾವಣೆ ಮಾಡದಿದ್ದರೆ ಮಕ್ಕಳು ಏಕೆ ಅಲ್ಲಿಗೆ ಹೋಗುತ್ತಾರೆ? 1ನೇ ತರಗತಿಯಿಂದ 7ನೇ ತರಗತಿ ಯವರೆಗೆ ಮೂರು ಜನ ಶಿಕ್ಷಕರನ್ನು ಇಟ್ಟುಕೊಂಡಾಗ ಖಾಸಗಿ ಶಾಲೆಗೆ ಅವರು ಹೋಗುವುದು ಅನಿವಾರ್ಯವಾಗಿದೆ. ನನ್ನ ಮಗನನ್ನು ಸಹ ನಾನು ದೇವರಾಣೆ ಕಳುಹಿಸುವುದಿಲ್ಲ. ಏಕೆ ಕಳುಹಿಸಬೇಕು? 1ನೇ ತರಗತಿಯಿಂದ 7ನೇ ತರಗತಿಯವರೆಗೆ ಆತ ಏನು ಪಾಠ ಹೇಳಿ ಕೊಡಬಹುದು? ಅದ್ದರಿಂದ, ನಾವು ಎಲ್ಲೋ ಒಂದು ಕಡೆ we should change the system ಗ್ರಾಮ ಪಂಚಾಯತ್‌ನ ಕೇಂದ್ರಸ್ಥಾನದಲ್ಲಿ ಬೇಕಾದರೆ ಒಂದು ಹಾಸ್ಟೆಲ್ ಮಾಡಿ. ಅಥವಾ you hire a vehicle ಅಥವಾ ನಿಮ್ಮ ಆರ್ಥಿಕ ತಜ್ಞರನ್ನು ಕರೆಸಿ ಮಾತನಾಡಿ, We should change the system. ಮತ್ತೆ ಕಾಲೇಜು ಬಗ್ಗೆ ಹೇಳುವುದಾದರೆ, ಅಲ್ಲಿ mathematics subject ಇಲ್ಲದಿದ್ದರೂ ಕೂಡ ಅಲ್ಲಿಗೆ ಶಿಕ್ಷಕರನ್ನು ಪೋಸ್ಟಿಂಗ್ ಮಾಡುತ್ತಾರೆ. ಎಲ್ಲಿಗೆ ಅಗತ್ಯವಾಗಿ ಪೋಸ್ಟಿಂಗ್ ಬೇಕಾಗುತ್ತದೆಯೋ ಅಂಥ ಕಡೆ ಶಿಕ್ಷಕರನ್ನು ಹಾಕುವುದಿಲ್ಲ. ಏತಕ್ಕೆ ಈ ರೀತಿ ಆಗುತ್ತದೆಂದು I do not know. ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಕೂಡ ನನ್ನ ಮನಸ್ಸಿಗೆ ನೋವಾಗುತ್ತದೆ. ಯಾವುದೇ ಮಠ, ಮಂದಿರಗಳಿಗೆ ಹಣ ಕೊಡುವುದಕ್ಕೆ ಖಂಡಿತವಾಗಿ ನನ್ನ ವಿರೋಧ ಇಲ್ಲ. I don't have any

objection. ಆದರೆ, ಆದ್ಯತೆ ಯಾವುದಕ್ಕೆ ಇರಬೇಕು? ನನಗೆ ತಿಳಿದ ಮಟ್ಟಿಗೆ ಹೆಚ್ಚು ಕಡಿಮೆ ಸುಮಾರು 165 rural assembly segments ಇವೆ. ಈ 165 ಸೆಗ್‌ಮೆಂಟ್ಸ್‌ನಲ್ಲಿಯೂ ಕೂಡ ಕುಡಿಯುವ ನೀರಿನ ಸಮಸ್ಯೆ ಇದೆ. ಅಂದರೆ, ಕುಡಿಯುವ ನೀರಿನ ಸಮಸ್ಯೆ ಜನವರಿಯಿಂದ ಪ್ರಾರಂಭವಾಗಿ ಜೂನ್ ತಿಂಗಳವರೆಗೆ ಇರುತ್ತದೆ. ನಾನು ಈ ಸಂದರ್ಭದಲ್ಲಿ ಹೇಳುವುದೇನೆದರೆ, ಮೂರು ಅವಧಿಯಲ್ಲಿ ಅಂದರೆ ಮೂರು ವರ್ಷಗಳವರೆಗೆ ಒಂದೊಂದು ಅಥವಾ ಎರಡೆರಡು ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿನ ಯೋಜನೆಗೋಸ್ಕರ ಕೊಡಿ. It is a permanent Problem. ಕುಡಿಯುವ ನೀರಿನ ಸಮಸ್ಯೆಯನ್ನು ಒಂದು ವರ್ಷ ಬಗೆಹರಿಸಿದರೆ, ಮುಂದಿನ ವರ್ಷಕ್ಕೆ ಅದು ಕಡಿಮೆಯಾಗುತ್ತದೆ. ಮತ್ತೆ ಅದರ ಮುಂದಿನ ವರ್ಷಕ್ಕೆ ಇನ್ನೂ ಕೂಡ ಕಡಿಮೆಯಾಗುತ್ತದೆ. Why cannot we invest on this instead of on these bicycles? ಸೈಕಲ್ ಕೊಟ್ಟಿರುವ ಬಗ್ಗೆ ನಾನು ವಿರೋಧ ಮಾಡುತ್ತಿಲ್ಲ. ಆದರೆ, whether it is necessary? ಅನ ಇದಕ್ಕೆ ಡಿಮ್ಯಾಂಡ್ ಮಾಡಿದ್ದಾರೆಯೇ? ಮಾಡಿಲ್ಲ. ಜನಪ್ರಿಯ ಯೋಜನೆಗಳ ಬಗ್ಗೆ ಹೇಳುವುದಾದರೆ, ಹಿಂದಿನವರು ಅನೇಕ ತಪ್ಪುಗಳನ್ನು ಮಾಡಿದ್ದಾರೆ. But we should not do it. ಆದರೆ, ನೀವು ಒಳ್ಳೆಯರಾಗಬೇಕೆಂಬುದು ನನ್ನ ಆಸೆ. But long run ನಲ್ಲಿ it should yield. ಮಾನವ ಅಭಿವೃದ್ಧಿ ಬಗ್ಗೆ ಎಲ್ಲೋ ಒಂದು ಕಡೆ ತಪ್ಪು ಅರ್ಥ ಮಾಡಿಕೊಂಡಿದ್ದೇವೆ. ಮಾನವ ಸಂಪನ್ಮೂಲಗಳನ್ನು ಕ್ರೋಡೀಕರಿಸುವುದು. ಜನರಿಗೆ ಹಣ ಕೊಟ್ಟು ನೀನು ಕುಳಿತುಕೊಂಡು ಊಟ ಮಾಡು ಎಂದರೆ ನಿಮ್ಮ ಹತ್ತಿರ ಕೊಪ್ಪರಿಗೆ ಹಣ ಇದ್ದರೂ ಸಹ ಸಾಕಾಗುವುದಿಲ್ಲ. ಆದರೆ where there is a necessity, ದುಡಿಮೆಗೆ ಬೇಕಾದಂಥ ಸೌಕರ್ಯಗಳನ್ನು ಅವರಿಗೆ ಒದಗಿಸತಕ್ಕಂಥ ಕೆಲಸ ಆಗಬೇಕು. ಕೃಷಿ ಬಗ್ಗೆ ನಿಮ್ಮಷ್ಟು ನನಗೆ ಅನುಭವ ಇಲ್ಲ. ಆದರೆ, ನಾನು ಇದರ ಬಗ್ಗೆ ಅಧ್ಯಯನ ಮಾಡಿದ್ದೇನೆ. ಕಳೆದ 15 ವರ್ಷಗಳ ಹಿಂದಿನ ಎಲ್ಲಾ ಬಜೆಟ್ ಪುಸ್ತಕವನ್ನು ತೆಗೆದು ನೋಡಿದಾಗ ಈ ವರ್ಷದ ಬಜೆಟ್‌ನಲ್ಲಿ 14% ನಷ್ಟು ಮಾತ್ರ ಇರಿಗೇಷನ್‌ಗೆ ಕೊಡಲಾಗಿದೆ. 15 ವರ್ಷದಲ್ಲಿ that is lowest. ಕಳೆದ ನಾಲ್ಕು ವರ್ಷದಲ್ಲಿ ಇರಿಗೇಷನ್ ಬಗ್ಗೆ ಹೇಳುವುದಾದರೆ, ಕಳೆದ ವರ್ಷ ಸುಮಾರು 13%, ಅದರ ಹಿಂದಿನ ವರ್ಷ 14% ಈಗ ಮತ್ತೆ 14%

ನೀಡಲಾಗಿದೆ. ಕಳೆದ 10 ವರ್ಷಕ್ಕೆ ಹೋಲಿಕೆ ಮಾಡಿದರೆ this is the lowest. ಅವತ್ತಿನ ಕಬ್ಬಿಣ, ಸಿಮೆಂಟ್, ಜೆಲ್ಲಿ ರೇಟ್ ಎಷ್ಟು ಇತ್ತು, ಮತ್ತೆ ಇವತ್ತಿನ ರೇಟ್ ಎಷ್ಟಿದೆ ಎಂಬುದನ್ನು ನೋಡಬೇಕು. Agriculture is the main source. It is 67% in Karnataka. We are dependent on that. ಕೃಷಿ ಚಟುವಟಿಕೆ ಕಡಿಮೆಯಾಗುತ್ತಿದೆ ಎಂಬ ವಿಷಯ ತಾವು ನೀಡಿರುವ ವಿಷನ್ 2020 ಯ ವರದಿಯಲ್ಲಿದೆ. ಇವತ್ತಿನ ದಿವಸ ಇಡೀ ಭಾರತ ದೇಶದಲ್ಲಿರುವ ನಗರ ಪ್ರದೇಶದಲ್ಲಿರುವ ಬಡತನದ ಅಂಕಿ-ಅಂಶಗಳನ್ನು ಇದೇ ಪುಸ್ತಕದಲ್ಲಿ ಹೇಳಿರುವ ಪ್ರಕಾರ ರಾಷ್ಟ್ರದಲ್ಲಿ ಇರತಕ್ಕಂಥ ಆದಾಯದಲ್ಲಿ ಅತ್ಯಂತ ಕಡಿಮೆ ಆದಾಯ ಕರ್ನಾಟಕ ರಾಜ್ಯದಲ್ಲಿದೆ. ಅಂದರೆ ಇಲ್ಲಿ ಬಡತನ ಜಾಸ್ತಿ ಇದೆ. 19 ರೂಪಾಯಿ ಒಂದು ದಿನದ ಕೂಲಿ. ರೂರಲ್‌ನಲ್ಲಿ 12 ರೂಪಾಯಿ ಕೂಲಿ ಇದೆ. ತಾವು ಚೈನಾ ದೇಶಕ್ಕೆ ಹೋಗಿ ಬಂದಾಗ ನಿಮ್ಮ ಅಭಿಪ್ರಾಯಗಳನ್ನು ಹೇಳಿರುವಂಥದ್ದನ್ನು ನಾನು ಟಿ.ವಿ.ಯಲ್ಲಿ ನೋಡಿದ್ದೇನೆ. ನಿಮ್ಮ ಕಾಳಜಿ ನಿಜವಾಗಿಯೂ ಕೂಡ excellent. ಆದರೆ, ನಾನು ಹೇಳುವುದೇನೆಂದರೆ, ಇವತ್ತಿನ ದಿವಸ ತೀರ್ಥಹಳ್ಳಿಯಿಂದ ಅಥವಾ ರೂರಲ್ ಸೈಡ್‌ನಿಂದ ಬೆಂಗಳೂರಿಗೆ ಜನರು ಏಕೆ ಬರುತ್ತಾರೆಂದರೆ, ಅಲ್ಲಿ ಯಾವುದೇ ಸೌಲಭ್ಯ ಇಲ್ಲ. ಅಂದರೆ, ಶಿಕ್ಷಣ, ವಿದ್ಯುತ್, ರಸ್ತೆ, ಸೇತುವೆ, ಚರಂಡಿ, ಬಸ್ ವ್ಯವಸ್ಥೆ ಇಲ್ಲ. ಆದ್ದರಿಂದ, ಏತಕ್ಕೋಸ್ಕರ ಜನರು ಅಲ್ಲಿರಬೇಕು? Unless you create basic facilities, basic amenities ಹಳ್ಳಿಯಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ಮತ್ತೆ ಅವರು ಅಲ್ಲಿರುವುದಿಲ್ಲ. Basic facilities, amenities ಅನ್ನು rural areas ಗೆ concentrate ಮಾಡದೇ ಇದ್ದರೆ, ನೀವು ಏಕೆ ಇಲ್ಲಿಗೆ ಬರುತ್ತೀರಿ ಎಂದು ಕೇಳಿದರೆ ಹೇಗೆ? ಅಲ್ಲಿ ಯಾವುದೇ ಸೌಲಭ್ಯ ಇಲ್ಲದೆ ಇರುವಾಗ ಅವರು ಇಲ್ಲಿಗೆ ಬರತಕ್ಕಂಥದ್ದು ಅನಿವಾರ್ಯವಾಗುತ್ತದೆ. ಈ ಸಂದರ್ಭದಲ್ಲಿ ನಿಮಗೊಂದು ಉದಾಹರಣೆ ಕೊಡುವುದಕ್ಕೆ ಬಯಸುತ್ತೇನೆ. ಇದು ನಿಜವಾಗಿಯೂ ಕೂಡ ದುರಂತ ಎಂದು ಹೇಳುವುದಕ್ಕೆ ಬಯಸುತ್ತೇನೆ. ಪೇಜಾವರ ಮಠದ ಸ್ವಾಮಿಗಳು ಬಂದು ಆಗುಂಬೆ ಹತ್ತಿರ ಇರುವ 42 ಮನೆಗಳಿಗೆ ಕರೆಂಟ್ ಕೊಡಿಸುತ್ತಾರೆ. ಒಂದು ಮನೆಗೆ ಕರೆಂಟ್ ಕೊಡಿಸುವುದಕ್ಕೆ 5 ಸಾವಿರ ರೂಪಾಯಿ ಖರ್ಚಾಗಿದೆ. 42 ಮನೆಗಳಿಗೆ ಕರೆಂಟ್ ಕೊಡಿಸುವುದಕ್ಕೆ ಸುಮಾರು 3 ಲಕ್ಷ ರೂಪಾಯಿ ಖರ್ಚಾಗಿದೆ. ನಾನು ಈ ಕಾರ್ಯಕ್ರಮಕ್ಕೆ ಹೋಗಿದ್ದೆ. We are having money. ಈ ಮೂರು ಲಕ್ಷ

ರೂಪಾಯಿ ನಕ್ಸಲ್ ಪ್ಯಾಕೇಜ್‌ನಲ್ಲಿ ಸರ್ಕಾರ ಖರ್ಚು ಮಾಡುವುದಕ್ಕೆ ಆಗುವುದಿಲ್ಲವೆ? ನಕ್ಸಲ್ ಪ್ಯಾಕೇಜ್ ಮೇಲೆ ಚರ್ಚೆ ಮಾಡುತ್ತೇವೆ. ಆದರೆ, ನಕ್ಸಲ್ ಪ್ಯಾಕೇಜ್‌ನಿಂದ ಎಲ್ಲಿಯೂ ಕೂಡ ಹಣ ಬಂದಿರುವುದನ್ನೇ ನಾನು ನೋಡಿಲ್ಲ. ಮತ್ತೆ ಇದರ ಬಗ್ಗೆ ಬಜೆಟ್‌ನಲ್ಲಿಯೂ ಕೂಡ ನೋಡಿಲ್ಲ. ಅಲ್ಲಿ ಉಳುಮಡಿ ಎಂಬ ಪ್ರದೇಶ ಇದೆ. ಅಲ್ಲಿಗೆ ಹೋಗುವುದಕ್ಕೆ ಇವತ್ತಿಗೂ ಕೂಡ ಆಗುವುದಿಲ್ಲ. ಅಂದರೆ, ಅಲ್ಲಿಗೆ ಹೋಗುವುದಕ್ಕೆ ರಸ್ತೆ, ಸೇತುವೆ ಇಲ್ಲ. ಇದನ್ನು ನಾನು ಯಾರ ಹತ್ತಿರ ಹೇಳಬೇಕು? ಇಡೀ ಕರ್ನಾಟಕ ರಾಜ್ಯದ geographical ಏರಿಯಾ ಪ್ರಕಾರ ನನ್ನ ಕ್ಷೇತ್ರ ಅತಿ ದೊಡ್ಡ ಏರಿಯಾ ಆಗಿದೆ. ಅಂದರೆ, ನಮ್ಮಲ್ಲಿ ಸುಮಾರು 3,400 ಕಿ.ಮೀ. ರಸ್ತೆ ಇದೆ. ಮತ್ತೆ ಲಿಂಗನಮಕ್ಕಿ ಡ್ಯಾಂ ಸೇರಿ ಒಟ್ಟು 6 ಡ್ಯಾಂಗಳು ನಮ್ಮಲ್ಲಿ ಬರುತ್ತವೆ. ಕೊರ್ನುಕೋಟೆ ಎಂಬ ಗ್ರಾಮ ಪಂಚಾಯಿತಿಯಲ್ಲಿರುವ ಒಬ್ಬ ಮತದಾರ ಆತನ ಗ್ರಾಮ ಪಂಚಾಯಿತಿಯ headquarters ಗೆ ಹೋಗುವುದಕ್ಕೆ 25 ಕಿ.ಮೀ. ಸುತ್ತುಕೊಂಡು ಹೋಗಬೇಕು. ಈ ರೀತಿ ಇರುವಾಗ ನಾವು ಅವರಿಗೆ ಏನು ಉತ್ತರ ಹೇಳಬೇಕು? ಇಲ್ಲಿರುವ 2 ಗ್ರಾಮದವರು ಗ್ರಾಮ ಪಂಚಾಯಿತಿಗೆ ಹೋಗುವುದಕ್ಕೆ 25 ಕಿ.ಮೀ. ಆಗುತ್ತದೆ. ಅರಳ ಸುರಳಿ ಅಂತ ಇದೆ. ಅಲ್ಲಿ ಒಂದು ಹೊಳೆ ಇದೆ. ಹೊಳೆ ಆಚೆಗೆ ಆತನ ಮನೆ ಇದೆ. ಹೊಳೆ ಈಚೆಗೆ ಗ್ರಾಮ ಪಂಚಾಯಿತಿ ಇದೆ. ಮಳೆಗಾಲದಲ್ಲಿ ಗ್ರಾಮ ಪಂಚಾಯಿತಿಗೆ ಬರಬೇಕಾದರೆ, 14 ಕಿ.ಮೀ. ಸುತ್ತುಕೊಂಡು ಬರಬೇಕು. ಅಲ್ಲಿ ಸೇತುವೆ ಆಗಬೇಕೆಂದು ನಾವು ಎಷ್ಟು ಸಾರಿ ಹೇಳುವುದಕ್ಕೆ ಆಗುತ್ತದೆ? ಈ ಮಾತನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಎಲ್ಲೋ ಒಂದು ಕಡೆ ಸೇತುವೆ, ರಸ್ತೆ, ಕುಡಿಯುವ ನೀರು, ಆರೋಗ್ಯ ಇದಕ್ಕೆ we should give importance. ಇದಕ್ಕೆ ನಾವು ಬಹಳ ಪ್ರಾಮುಖ್ಯತೆಯನ್ನು ಕೊಡದಿದ್ದರೆ ಖಂಡಿತವಾಗಿ ಎಲ್ಲಿಯೋ ಒಂದು ಕಡೆ ವಿಫಲರಾಗುತ್ತೇವೆ ಎಂಬುದು ನನ್ನ ಭಾವನೆ ಯಾಗಿದೆ. ಇದರ ಬಗ್ಗೆ ತಾವು ಯೋಚನೆ ಮಾಡಿ, ಜನರಿಗೆ ನಾವು ಏನು ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ? ನನಗೆ 60 ಗ್ರಾಮ ಪಂಚಾಯಿತಿಗಳು ಬರುತ್ತವೆ. ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗಬೇಕಾದರೆ ಸುಮಾರು 200 ಕಿ.ಮೀ. ನಾನು ಪ್ರಯಾಣ ಮಾಡಬೇಕು. ಕುಡಿಯುವ ನೀರಿನ ಬಗ್ಗೆ ಒಂದೊಂದು ಗ್ರಾಮ ಪಂಚಾಯಿತಿಗೂ ನಾನು ಕಾಗದ ಬರೆದು ಕೇಳಿದ್ದೇನೆ. ಕುಡಿಯುವ ನೀರಿನ ಯೋಜನೆಗೋಸ್ಕರ ಒಂದು

ಗ್ರಾಮ ಪಂಚಾಯಿತಿಗೆ ಕನಿಷ್ಠ 20 ರಿಂದ 25 ಲಕ್ಷ ರೂಪಾಯಿ ಬೇಕು. ಆದ್ದರಿಂದ, ನಾನು ಏನೆಂದು ಉತ್ತರ ಹೇಳಿ? ನಾವು ವೈಕುಂಠ ಸಮಾರಾಧನೆ ಅಥವಾ ಮುದುವೆ ಮನೆಗೆ ಹೋಗಬಹುದು. ಆದರೆ, ಜನರಿಗೆ ಕೆಲಸ ಮಾಡಿಕೊಡುವುದಕ್ಕೋಸ್ಕರ ಎಲ್ಲಿಯೋ ಒಂದು ಕಡೆ ಇರುವ dead investment ಅನ್ನು curtail ಮಾಡುತ್ತಾ ಬರಬೇಕೆಂಬುದು ನನ್ನ ಕಾಳಜಿ. ಇದರಲ್ಲಿ ಹಿಂದಿನ ಸರ್ಕಾರಗಳೆಲ್ಲವೂ ಸಹ ತಪ್ಪು ಮಾಡಿದೆ. ನಾನು ಕುಳಿತುಕೊಂಡು ಓದುತ್ತಿರುವಾಗ ಒಂದು ವಿಷಯ ನನಗೆ ಅರಿವಿಗೆ ಬಂತು. ಅದೇನೆಂದರೆ, ನಮ್ಮಲ್ಲಿ ವಿಧಾನ ಪರಿಷತ್ತು ಇದೆ. ಅದಕ್ಕೆ ಸುಮ್ಮನೆ ನೂರಾರು ಕೋಟಿ ರೂಪಾಯಿ ಖರ್ಚಾಗುತ್ತದೆ. ಆದ್ದರಿಂದ, ಇದನ್ನು ರದ್ದು ಮಾಡತಕ್ಕಂಥದ್ದು ಒಳ್ಳೆಯದೆಂದು ನಾನು ಯೋಚನೆ ಮಾಡಿದೆ. ಇದಕ್ಕೆ ಸಂಬಂಧಪಟ್ಟಂತೆ ಆರ್ಥಿಕ ಇಲಾಖೆಯಿಂದ ಮಾಹಿತಿ ಕಲೆಕ್ಟ್ ಮಾಡಿದೆ. ಈ ಮಾಹಿತಿಯನ್ನು ಕಲೆಕ್ಟ್ ಮಾಡಿ ನೋಡಿದಾಗ ಇದು ಇರುವುದೇ ಸರಿ ಎಂದು ನನಗೆ ಅನಿಸಿತು. ಕಾರಣ ಏನೆಂದರೆ, ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಿಂದ ಕೇವಲ 61 ಕೋಟಿ ರೂಪಾಯಿ ಮಾತ್ರ ಖರ್ಚಾಗುತ್ತಿದೆ. 20 ಕೋಟಿ ರೂಪಾಯಿ ಮಾತ್ರ ವಿಧಾನ ಪರಿಷತ್‌ಗೆ ಖರ್ಚಾಗುತ್ತಿದೆ. ಅಲ್ಲಿ 301 ಜನ ನೌಕರರಿದ್ದಾರೆ, 75 ಜನ ಶಾಸಕರು ಇದ್ದಾರೆ. ಪೆನ್ಷನ್ ಎಲ್ಲಾ ಸೇರಿ 16 ರಿಂದ 17 ಕೋಟಿ ರೂಪಾಯಿ ಮಾತ್ರ ಖರ್ಚಾಗುತ್ತಿದೆ. ಆನಂತರ ಯೋಚನೆ ಮಾಡಿದಾಗ ಈ watchdog ಇರುವುದು ಬಹಳ ಅಗತ್ಯ ಇದೆ. ಆದ್ದರಿಂದ, ಇದನ್ನು ರದ್ದು ಮಾಡುವಂಥ ನನ್ನ ಪ್ರಸ್ತಾವನೆ ಸರಿಯಲ್ಲವೆಂದು ನನಗೆ ಅನಿಸಿತು. ಏಕೆಂದರೆ, 60 ಸಾವಿರ ಕೋಟಿ ರೂಪಾಯಿ ನಮ್ಮ ಬಜೆಟ್ ಇದೆ. ಎರಡು ಸದನಗಳ ಒಟ್ಟು ಖರ್ಚು 61 ಕೋಟಿ ರೂಪಾಯಿ ಆಗುತ್ತದೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳುವುದೇನೆಂದರೆ, ಮೇಲ್ಮನೆ ಮತ್ತು ಕೆಳಮನೆಯ 300 ಜನ ಬಹಳ ದೊಡ್ಡ ಆಸೆಗಳನ್ನು ಇಟ್ಟುಕೊಂಡು ಇಲ್ಲಿಗೆ ಬಂದಿದ್ದೇವೆ. ನಾವು 300 ಜನ ಭ್ರಷ್ಟರಹಿತವಾಗಿರುವಂಥ ವ್ಯವಸ್ಥೆಗೆ ಸರಿ ಹೊಂದುವುದಾದರೆ, ಅಧಿಕಾರಿಗಳು ಭ್ರಷ್ಟರಾಗುವುದಕ್ಕೆ ಖಂಡಿತ ಸಾಧ್ಯವಾಗುವುದಿಲ್ಲ. ಆದರೆ, ನಾವೂ ಕೂಡ ಜನರಿಗೆ ಹೇಳಿ ನಮ್ಮ ಸವಲತ್ತುಗಳನ್ನು ಪಡೆದುಕೊಳ್ಳಬೇಕು ಅಥವಾ ಜಾಸ್ತಿ ಮಾಡಿಕೊಳ್ಳಬೇಕು. ನಮಗೆ ಬರತಕ್ಕಂಥ ಅನಾವಶ್ಯಕವಾದ ವೆಚ್ಚಗಳನ್ನು ನಾವು ಬೇರೆ ರೀತಿಯಲ್ಲಿ ಪಡೆದುಕೊಳ್ಳುವುದಕ್ಕೆ ಕೈ ಹಾಕುವುದಕ್ಕೆ ಹೋಗಬಾರದು. We should

rectify our act. ನೀವುಗಳು ಈ ರೀತಿಯಾಗಿರಬೇಕು, ಆ ರೀತಿಯಾಗಿರಬೇಕು ಮತ್ತು ಆದರ್ಶವಾಗಿರಬೇಕೆಂದು ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅಥವಾ ಮಹಾತ್ಮ ಗಾಂಧಿ ರೀತಿಯಲ್ಲಿರಬೇಕೆಂದು ನಾವುಗಳು ಕಾಲೇಜಿಗೆ ಹೋಗಿ ಮಕ್ಕಳ ಮುಂದೆ ಭಾಷಣ ಮಾಡುತ್ತೇವೆ. ಆದರೆ, When we are not correct, who are we to advise them? We don't have moral right. ಕ್ರಮಬದ್ಧ ಮತ್ತು ಕಾನೂನು ಬದ್ಧವಾದಂಥ ಹಕ್ಕುಗಳು ನಮಗಿವೆ.

(8-50 PM)

ಮುನ್ನೂರು ಜನ ಸದಸ್ಯರು ಬದಲಾವಣೆಯಾದರೆ, entire thing ನ್ನು ಖಂಡಿತವಾಗಿ ನಾವು ಸಂಪೂರ್ಣವಾಗಿ ಬದಲಾವಣೆ ಮಾಡಬಹುದು. ಇಲ್ಲದಿದ್ದರೆ . ಏನೇ ಹೇಳಿದರೂ ಕೂಡ ಖಂಡಿತವಾಗಿ ಸುಮ್ಮನೆ ವೇಸ್ಟ್ ಆಗುತ್ತದೆ. ಇಲ್ಲಿ ನನ್ನ ವಿನಂತಿ ಅಷ್ಟೆ. ಹಿಂದಿನ ಬಾರಿ ಮಾನ್ಯ ಸುರೇಶ್ ಕುಮಾರ್‌ರವರು ಇಲ್ಲಿ ಮಾತನಾಡುವಾಗ ಒಂದು ಸಲ ಹೇಳಿದ್ದರು. ನಾವು ವಿಧೇಯಕಗಳನ್ನು ಮಂಡನೆ ಮಾಡುವುದು ಇದರಲ್ಲಿ ನಾನು ಚರ್ಚೆಯಲ್ಲಿ ಭಾಗವಹಿಸುವುದು ಎರಡೂ ಕೂಡ ನನಗೆ ಮನಸ್ಸಿಗೆ ನೋವಾಗಿರತಕ್ಕಂಥದ್ದು. ನಾನು ಯಾವಾಗ resignation ಕೊಟ್ಟು ಹೊರಗೆ ಹೋಗಬೇಕೆಂದು ಯೋಚನೆ ಮಾಡತಕ್ಕಂಥವನು. ಎಲ್ಲವೂ ಕೂಡ mockery of the democracy ಆಗಬಾರದು. 15 ದಿವಸ ಮುಂಚೆ submit ಮಾಡಿ. ಚರ್ಚೆ ಮಾಡೋಣ, ಅಧ್ಯಯನ ಮಾಡಿಕೊಂಡು ಬರುತ್ತೇವೆ. ಆಡಳಿತ ಪಕ್ಷದವರು ಯಾರೇ ಇರಲಿ, ಅವರಿಗೇನು ಆಗಬೇಕು ಅದೇ ಆಗಲಿ. Let an opportunity be given to the Public at large, to all the members. ನಮ್ಮ views ನ್ನು ನಾವು ಹೇಳುತ್ತೇವೆ. ಬೆಳಗ್ಗೆ ಕೊಟ್ಟು ಮಧ್ಯಾಹ್ನ ಹೇಳಿ ಗಡಿಬಿಡಿಯಲ್ಲಿ ಪಾಸ್ ಮಾಡಿಕೊಂಡು ಹೋಗಿ ಅವು ಕಾನೂನು ಆಗಿ ಅವು ನಮ್ಮನ್ನು 50 ವರ್ಷ ಆಡಳಿತ ಮಾಡುತ್ತವೆ. ಅಗತ್ಯ ಇದೆಯೋ ಇಲ್ಲವೋ ಎಲ್ಲೋ ಒಂದು ಕಡೆ ಇದು ಸರಿ ಇದೆ ಎಂದು ನನಗೆ ಅನಿಸಿಲ್ಲ. ಇದೆಲ್ಲವನ್ನು ಸರಿ ಮಾಡಬೇಕು ಎನ್ನುವುದು ನನ್ನ ಅಪೇಕ್ಷೆ. ಈ ನಿಯಮಗಳೂ ಅಷ್ಟೇ. ಅಲ್ಲಿ ನಿಯಮ ಇದೆ. ಅದರೊಳಗೆ 15 ದಿವಸ ಮುಂಚೆ ವಿಧೇಯಕಗಳನ್ನು ಮಂಡಿಸಬೇಕೆಂದು ಇದೆ. ಮತ್ತೆ ಕೊನೆಗೆ ನಮ್ಮ constitution ನಲ್ಲಿ ಇದ್ದಂತೆ 'Not-withstanding anything contained in that..' ಅಂದಂತೆ ಸಭಾಧ್ಯಕ್ಷರು ಅನುಮತಿ ಕೊಟ್ಟರೆ ಯಾವಾಗ ಬೇಕಾದರೂ ಮಂಡನೆ

ಮಾಡಬಹುದೆಂದು ಒಂದು clause ಇದೆ. ನಾನು ಹೇಳತಕ್ಕಂಥದ್ದು ಏನೆಂದರೆ, these things should be set right. ಎಲ್ಲೋ ಒಂದು ಕಡೆ ನಾವು ಸಾರ್ವಜನಿಕರಿಗೂ ಕೂಡ ಅವಕಾಶವನ್ನು ಕೊಡಬೇಕು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ, ನಂತರ ಇಲ್ಲಿ ಮಾಡಬಹುದು ಎನ್ನತಕ್ಕಂಥದ್ದು ಒಂದು. ವ್ಯಕ್ತಿಗತವಾಗಿ ಅವರ ಉತ್ಸಾಹಕ್ಕೆ ನನಗೆ ಬಹಳ ಸಂತೋಷವಿದೆ. ಅವರ ಪ್ರಯತ್ನ, ಅವರ ಹೋರಾಟಕ್ಕೆ ನನಗೆ ಬಹಳ ಅಭಿನಂದನೆ ಇದೆ. ಆದರೆ ಎಲ್ಲೋ ಒಂದು ಕಡೆ ಹಿಂದಿನವರು ಮಾಡಿದ ತಪ್ಪನ್ನು ನೀವು ಮಾಡಬಾರದು ಎನ್ನುವ ಒಂದು ಅಪೇಕ್ಷೆ ನನಗೆ ಇದೆ. ಖಂಡಿತವಾಗಿ ಜನಪ್ರಿಯ ಬಜೆಟ್ ಬಗ್ಗೆ ತೆಗೆದು ಹಾಕಿಬಿಡಬೇಕು. ಮುಂದೆ ಆಗತಕ್ಕಂಥ ಏನು ಜನಪರವಾಗಿರತಕ್ಕಂಥವರ ಬಗ್ಗೆ ಆಗಬೇಕು. ಹಿಂದೆ ಪಾರ್ಲಿಮೆಂಟಿನಲ್ಲಿ ಆಡಿರತಕ್ಕಂಥ ಮಾತು ಇದೆ. 'A statesman will think about the future generation, a politician will think about the next election.' ಅಂತ. That should not be the reason. That should not be the goal. ಆ ನಿಟ್ಟಿನಲ್ಲಿ ಈ ಬಜೆಟ್ ಇರಬೇಕು. ಆದರೆ ನೀರಾವರಿಗೆ ಕಡಿಮೆ ಆಗಿರುವುದರಿಂದ ನಾನು ಈ ಬಜೆಟ್‌ನ್ನು ವಿರೋಧ ಮಾಡುತ್ತೇನೆ. ಎರಡೇ ಎರಡು ಮಾತುಗಳನ್ನು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಈಗಾಗಲೇ ಹತ್ತಾರು ಪತ್ರಗಳನ್ನು ಬರೆದಿರುತ್ತೇನೆ. ನಮ್ಮ ಮುಳುಗಡೆ ರೈತರ ಸಮಸ್ಯೆಗಳು ಇನ್ನು ಜೀವಂತವಾಗಿವೆ. ಅಲ್ಲಿ 400–500 ಜನ ನಿರುದ್ಯೋಗಿಗಳಾಗಿ ಸಾಯುತ್ತಿದ್ದಾರೆ. 5–6 ಕೋಟಿ ರೂ.ಗಳನ್ನು ಕೊಟ್ಟರೆ ಆ 600 ಜನ ವಾರಾಹಿ ಮುಳುಗಡೆಯವರು ಒಂದು ದಡ ಸೇರುತ್ತಾರೆ. 5 ಕೋಟಿ ರೂ.ಗಳನ್ನು ಕೊಟ್ಟರೆ ಸಾಕು 300 ಕುಟುಂಬಗಳು ಉಳಿದುಕೊಂಡು ಹೋಗುತ್ತದೆ. ಹಣ ಬಿಡುಗಡೆ ಮಾಡಿ ಎಂದು ನಾನು ಅನೇಕ ಸಲ ವಿನಂತಿಯನ್ನು ಮಾಡಿಕೊಂಡಿದ್ದೇನೆ. ಅವರೆಲ್ಲರೂ ದಿನಾಲು ಬರುತ್ತಾರೆ. ಅದಕ್ಕಾಗಿ "ನಾವು hunger strike ಮಾಡುತ್ತೇವೆ." ಎಂದು ಹೇಳಿದ್ದಾರೆ. ಯಾವುದೋ ಒಂದು ಸಮಾರಂಭಕ್ಕೆ, ಇನ್ನಾವುದೋ ಒಂದು ಕಿರೀಟ ಇಡುವುದಕ್ಕೆ ಮಾಡುವ ಬದಲಿಗೆ, ಹೇಮಮಾಲಿನಿ ಡ್ಯಾನ್ಸಿಗಿಂತ ಈ 600 ಕುಟುಂಬಕ್ಕೆ ಒಳ್ಳೆಯದಾದರೆ ಬಹಳ ಒಳ್ಳೆಯದೆಂದು ನನ್ನ ಭಾವನೆ. ಅದಕ್ಕೆ ನನ್ನ ವಿರೋಧವಿಲ್ಲ. ಅದು ನನ್ನ ಭಾವನೆ. ಈ ರೀತಿಯಾದ ಅಭಿವೃದ್ಧಿ ಕಾರ್ಯಕ್ರಮಗಳು ಆಗಬೇಕು. ನಮ್ಮ

ಮಾನ್ಯ ಮುಖ್ಯಮಂತ್ರಿಗಳು ತೀರ್ಥಹಳ್ಳಿಗೆ ಬಂದಾಗ ಎರಡು ಆಶ್ವಾಸನೆಗಳನ್ನು ಕೊಟ್ಟಿದ್ದರು, ಅವರು ಉಪ ಮುಖ್ಯಮಂತ್ರಿಗಳಾಗಿದ್ದಾಗ ರಾಮೇಶ್ವರ ದೇವಸ್ಥಾನಕ್ಕೆ 2.20 ಕೋಟಿ ರೂ.ಗಳನ್ನು ಕೊಟ್ಟು ಅದನ್ನು ಪುನರುಜ್ಜೀವನ ಮಾಡಿಸುತ್ತೇನೆಂದು ಹೇಳಿದ್ದರು. ಖಂಡಿತವಾಗಿ ಆ ಹಣವನ್ನು ತಾವು ಯಾವುದಾದರೊಂದು ರೂಪದಲ್ಲಿ ಕೊಡಲಿ ಎನ್ನುವಂಥದ್ದು ಮತ್ತು ಕಡಿದಾಳರ ಹುಟ್ಟೂರಿಗೆ ಅಲ್ಲಿ ಒಂದು ಕುಡಿಯುವ ನೀರಿನ ಯೋಜನೆಗೆ ಒಂದು ಕೋಟಿ ರೂ.ಗಳಷ್ಟು ಹಣವನ್ನು ಕೊಡುತ್ತೇನೆಂದು ಹೇಳಿದ್ದರು. ಅದನ್ನು ಯಾವುದಾದರೊಂದು ರೂಪದಲ್ಲಿ ಕೊಡಬೇಕೆಂದು ಹೇಳಿ ನಾನು ಅವರಿಗೆ ಶುಭ ಹಾರೈಸಿ ಬಜೆಟ್‌ನ್ನು ವಿರೋಧ ಮಾಡಿ, ನನಗೆ ಕಾಲಾವಕಾಶ ಕೊಟ್ಟಿರುವ ತಮಗೆಲ್ಲರಿಗೂ ಮತ್ತು ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಸೈಯದ್ ಯಾಸಿನ್‌ರವರೆ ನೀವು ಇವತ್ತು ಮಾತನಾಡಿ ಮುಗಿಸಿಬಿಡಿ. ನಾಳೆ ಬೆಳಗ್ಗೆ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ.

ಶ್ರೀ ಸೈಯದ್ ಯಾಸಿನ್ (ರಾಯಚೂರು) : ಮಾನ್ಯ ಅಧ್ಯಕ್ಷರೆ, ಚಾಣಕ್ಯನೀತಿಯ ಸೂತ್ರವಾಕ್ಯವು ಆರ್ಥಿಕ ಅಭಿವೃದ್ಧಿಯ ಸಾಧನೆಗೆ ಆದ್ಯತೆ ನೀಡುವ ಅಗತ್ಯತೆಯನ್ನು ಸೂಚಿಸುತ್ತದೆ ಎಂದು ನಮ್ಮ ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಡಾ: ಬಿ.ಎಸ್. ಯಡಿಯೂರಪ್ಪನವರು ಈ ಬಜೆಟ್‌ನಲ್ಲಿ ಹೇಳಿದ್ದಾರೆ. ಬಹಳ ಸಂತೋಷ. ನಮ್ಮ ಮುಖ್ಯಮಂತ್ರಿಗಳಿಗೆ we can say he is the luckiest person and he got frequent opportunities to reveal his budget. ಏಕೆಂದರೆ ಅವರಿಗೆ ಅಭಿವೃದ್ಧಿಯೇ ಆಡಳಿತದ ಮೂಲತಂತ್ರ ಎಂಬ ತತ್ವವನ್ನು ಆಧರಿಸಿ continuously ಸುಮಾರು ಐದು ಮುಂಗಡ ಪತ್ರದಲ್ಲಿ ರಾಜ್ಯದ ಅಭಿವೃದ್ಧಿಯ ಸಾಧನೆಗೆ ಹಲವು ಕಾರ್ಯಕ್ರಮ ಗಳನ್ನು ಮಾಡುವುದಕ್ಕೆ ಅವಕಾಶ ಸಿಕ್ಕಿದೆ. Our Chief Minister has managed the budget very intelligently. ಈ ಬಜೆಟ್‌ನಲ್ಲಿ ಬಹಳಷ್ಟು ಹೊಸ ಹೊಸ formulae, concepts, ideas, programmes and special focus on certain particular areas and especially five principles for idea of Social justice, "equal share and equal opportunity" ಎಲ್ಲಾ ಹೇಳಿದರು. ಏಕೆಂದರೆ, very budget commits certain priorities

in the budget speech and of course he has taken very good issues, very good ideas, I must congratulate our Hon'ble Chief Minister Sri Dr. B.S. Yeddyurappaji. And at the same time he spoke about the programmes that our government has given regarding social, economic, education, health, housing, food, nutrition, rural infrastructure and SC/ST, Backward classes and Minority, weaker sections ಹಾಗೂ ರೈತರಿಗೆ ಮತ್ತು ಮಹಿಳೆಯರಿಗೆ Social justice ಎಂದು ಅವರು ಹೇಳಿರುತ್ತಾರೆ. We have been talking about the poverty alleviation, social justice since very long time. But poverty not only in our state, poverty in the country remains same. So we have to make up our mind and make the final action plan to fulfil this draem. Now our CM has given very good five principles, ideas and formulae in his budget, but we have to give the positive results. Especially it is quite impressed, (1) Agricultural promotion i.e. ಕೃಷಿ ಪೋಷಣೆ, ಹಾಗೂ ರೈತರ ಅಭಿವೃದ್ಧಿ, (2) Industrial growth, (3) Human Resources Development, (4) Empowerment of weaker sections; and (5) Development of backward areas. That is very important. ಅಧ್ಯಕ್ಷರೆ, The calamity, financial crisis, natural disaster, global recession, drought situation and flood situation – these are not new things to our state, county and it is not a new thing to the world. Since inception of mankind it has been articulating with us. ಮಾನ್ಯ ಅಧ್ಯಕ್ಷರೆ, ನಮ್ಮ ಬಜೆಟ್ ಪ್ರಕಾರ We have mentioned the global and financial crisis as well as the economic slow down. ಬರ ಮತ್ತು ನೆರೆ ಹಾನಿಯಿಂದ ರಾಜ್ಯದಲ್ಲಿ ರೈತರಿಗೆ ಮುಂಗಾರಿನ ಬೆಳೆಯಲ್ಲಿ ಗಣನೀಯವಾದ ಸಂಕಷ್ಟ ಇರುತ್ತದೆ. ಅಕ್ಟೋಬರ್ ತಿಂಗಳಿನಲ್ಲಿ ನಮ್ಮ ರಾಜ್ಯದಲ್ಲಿ 15 ಜಿಲ್ಲೆಗಳು flood affected ಆಗಿವೆ. It is very difficult to tackle the budget and somehow our Hon'bel Chief Minister has been trying his level best to project in his budget and he has iven the dimension to his budget. But only thing is we have to implement it properly. For the

implementation we need the support of all the Oposition Leaders from all the political parties. All the MLA's and MLC's in the state and our talented bureaucrafts can do well in the larger interest of the general public. It is very good gesture that our Hon'ble Chief Minister Dr. B.S. Yeddyurappaji has paid a hearty congratulation to our Hon'ble Prime Minister Sri Dr. Manmohan Singh along with our Hon'ble Central Ministers, those who are reperesenting from out state and at the same time, during the flood situation I have been witnessing. I have accompanied CM to so many places. especially in our district. ಅವರು ಬಹಳಷ್ಟು ಹೋರಾಟ ಮಾಡಿದ್ದಾರೆ. And at the same ime there may be some small lapses here on the part of our bureaucracy. But he has done a good job. And we have also accompanied him, all the MLAs, irrespective of party or creed. Our Opposition Leaders Sri Siddaramaiahji, Sri Jayachandraji and other leaders, have all visited our area and we all cooperated with the Government. We should thank all the NGOs, Multi-Nationals, general public, Government servants and pensioners, those who supported our CM and our Government to meet the demand of the public in flood situation. We have visited the Tunga Bhadra Bridge which has broken on Mantralayam side. It is a link between Karnataka and Andra Pradesh. This is the only way to our district;s economic and trade activities. Hatti Gold mine, RTPS are there and agricultural Productivity, the biggest cotton market in Raichur, all economic transportations are going through that bridge. Our Hon'ble CM and the Central team also visited that bridge. I request our Hon'ble CM to redo and retain our bridge very fast because the economic growth is depending on the Tunga Bhadra bridge at Mantralayam. We have faced lot of problems. To meet the demand, the Central Government has given Rs. 1,457 crore and at the same time, more than this, our Hon'ble CM also has released Rs. 1,879 crore to meet the demand of the flood situation. There are two things. We have to

develop the short term asset as well as the long term development and assets. We have faced global recession and at the same time drought situation came. After six months we faced the flood situation in Northern Karnataka. In spite of that we have managed a budgetary system. But we have to we very careful. We have to manage, we have to control through our methodology of Fiscal Responsibility Act. For example. We have to watch very carefully the State Sales Tax, Tax Revenue, share of Central Tax, Budget Estimation, Public Accounts, Financial deficit, Governement intake as well as Revenue Surplus and Revenue Acoounts, Capital Receipts, recovery of loans and advances, and Non-Plan Expenditure. We have to utilize the Economic Reforms Commission. That methodology will also help us to manage this and the Fiscal Management Act is also going to support. At the Same time we have to take maximum support to Karnataka from the 13th Finance Commission 2010-15 for a long-run development of the state and our revenue system. It has got the priority because half of the state is affected by flood. Our Government has projected Revenue Reforms Projection system, Fiscal plan Projection for 2010-14. I think it is going to help us.

Regarding our agricultural positsion; it is very important ti note that our agriculture related acvtivity is employing 58% of work force. But we are contributing only 18% from this area. This is a serious subject to be taken care of. At the same time the industrial growth has contributed to the GSDP 29% and service sector. is 59%. We are getting 41% gain and contribution. I am sorry to say that the per capita productivity of our agricultural worker is only Rs. 14,690 per annum. It is very very low compared to the work force they utilize in other fields. Therefore, we should give more concentration to second phase of green revolution irrigation and land conservation are very important for green revolution. Thanks to our CM. He has given the Agriculture University which covers mostly the flood

affected areas. Like Bidar, Gulbarga, Raichur, Yadgir, Koppal and Bellary. Our Irrigation Minister may be here. This second phase of NRBC extension is very important for agricultural development in the Raichur taluka. Since 10 tears it is pending. These are all backward areas. The tender has to come to cover the backward areas. Another thing is, our balancing Ganikal reservoir (Devadurg taluka) is always empty in the months of April, May and June. Drinking Problem will ne more in the months of April, May and June. We need to have the direction to the Irrigation Ministry and Irrigation Department to fill up reservoir before closing the canal in the month of April. I will reveal certain things regarding power. It is very important before our Hon'ble CM has taken very good power projects, one is long term projects and the other is short term projects. The short term projects in Raichur 250 MW 8th unit, Bellary and other 2-3 places are already there. We are having in our hand the total 1,422 MW from Udupi, Raichur, Bellary and many Hydel and non-conventional projects. I am trying to reveal to our Hon'ble Power Minister. Sir, we are having 20% leakage which amounts to 250 MW. 120 MWS from hydro projects are there. It amounts to approximately 350 MW. The hydro projects are not working. It should be handed over to KPCL to handle them so that we can retain 350 MW without investment.

Mr. SPEAKER : We have discussed in elaboration regarding power. ನಾವು ವಿದ್ಯುತ್ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ಮತ್ತೆ ಮತ್ತೆ ಚರ್ಚೆ ಮಾಡುವುದು ಬೇಡ.

SRI SYED YASIN : The last point is, we are spending crores of rupees for all power projects, grid system, transmission system, everything. But we are giving meager amount for the repair of transformers in all the ESCOMs. In summer season there is frequent damage of transformers. We need to have more funds for the immediate repair of transformers to be done in the repair centres. Thank you very

much. There is shortage of time. ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಬಹಳ ಸಂತೋಷ. Thank yiu very much.

ಅಧ್ಯಕ್ಷರು : ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

(ಸದನವು ರಾತ್ರಿ 9 ಗಂಟೆ 08 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 18.03.2010ನೇ ಗುರುವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು.)

ಅನುಬಂಧ – I

ಗ್ರಂಥಾಲಯಗಳ ಕಟ್ಟಡದ ಬಗ್ಗೆ

712 (335) ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ (ಕುಷ್ಟಗಿ) : ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಗ್ರಾಮ ಪಂಚಾಯಿತಿ ಮಟ್ಟದ ಗ್ರಂಥಾಲಯಗಳು ಕಾರ್ಯ ನಿರ್ವಹಿಸುತ್ತಿವೆ. (ವಿವರ ನೀಡುವುದು);

ಆ) ಸದರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಹಿರೆಗೋಣ್ಣಗರ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯ ಇಲ್ಲದಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಸದರಿ ಗ್ರಾಮಕ್ಕೆ ಎಂದು ಮಂಜೂರು ಮಾಡಲಾಗುವುದು;

ಈ) ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಎಂದು ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗುವುದು;

ಶ್ರೀ ಕೆ. ಶಿವನಗೌಡ ನಾಯಕ್ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು) :

ಅ) ಕುಷ್ಠಗಿ ತಾಲ್ಲೂಕಿನಲ್ಲಿ ಒಟ್ಟು 26 ಗ್ರಾಮ ಪಂಚಾಯತ್ ಗ್ರಂಥಾಲಯಗಳಿವೆ. ವಿವರ ಈ ಕೆಳಗಿನಂತಿವೆ..

1.	ಎರಗೇಲಾ
2.	ನೀಲೋಗಲ್
3.	ತಾವರಗೆರ
4.	ಕಾಟಾಪುರ್
5.	ಹೊಲಿಗೇರ
6.	ಚೆಳಗೇರ
7.	ಮಾಲ್ಗತ್ತಿ
8.	ದೋತಿಹಾಳ್
9.	ಜಾಗೀರ್ ಗುಡುದೂರ್
10.	ಸಂಗನಾಳ್
11.	ಮೆನದಾಳ್
12.	ಕಂದಕೂರು
13.	ಕಬ್ಬರಗಿ
14.	ಅಡವಿಬಾವಿ
15.	ತುಗ್ಗಲ ದೋಣಿ
16.	ಕ್ಯಾದಿಗುಪ್ಪ
17.	ಜುಮ್ಲಾಪುರ್
18.	ಬಿಜಕಲ್
19.	ಕಿಲ್ಲಾರಹಟ್ಟಿ
20.	ಹಿರೇಬನ್ನಿಗೋಳ
21.	ಬೆನಕುನಾಳ್
22.	ಮುದೇನೂರು
23.	ಹನುಮಸಾಗರ
24.	ಕೊರಡಕೆರ
25.	ಹಿರೇಮನ್ನಾಪುರ
26.	ತಾಳವಗೇರ

ಆ) ಬಂದಿದೆ.

ಇ) 2010–11ನೇ ಸಾಲಿಗೆ ಮಂಜೂರು ಮಾಡಲಾಗುವುದು.

ಈ) ಈ ಕುರಿತು ಪ್ರಸ್ತಾವನೆ ಇರುವುದಿಲ್ಲ.

ನಕಲಿ ಮದ್ಯ ತಯಾರಿಕೆ

714 (1040) ಶ್ರೀ ಅಶ್ವಥ್ ಎಂ.ಸಿ. (ಚನ್ನಪಟ್ಟಣ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಕಲಿ ಮದ್ಯ ತಯಾರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಇ) ಇದುವರೆವಿಗೂ ನಕಲಿ ಮದ್ಯ ತಯಾರಿಸುವ ಎಷ್ಟು ಪ್ರಕರಣಗಳು ದಾಖಲಾಗಿವೆ;

ಈ) ಇಂತಹ ಪ್ರಕರಣಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) :

ಅ) ಬಂದಿದೆ.

ಆ) ಮದ್ಯವನ್ನು ತಯಾರಿಸಲು ಅಗತ್ಯವಿರುವ ಪ್ರಮುಖ ಕಚ್ಚಾ ಸಾಮಗ್ರಿಯಾದ ಮದ್ಯಸಾರದ ಉತ್ಪಾದನೆ, ಸಾಗಾಣಿಕೆ ಮತ್ತು ಬಳಕೆ ಬಗ್ಗೆ ನಿಯಂತ್ರಣ ಮಾಡಲಾಗಿದೆ. ಡಿಸ್ಟಿಲರಿಯಿಂದ ಮದ್ಯಸಾರ ಸಾಗಾಣಿಕೆಯನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಕರ್ನಾಟಕ ರಾಜ್ಯ ಪಾನೀಯ ನಿಗಮದ ಮೂಲಕವೇ ಮಾಡಲಾಗುತ್ತಿದೆ. ಮದ್ಯಸಾರ ಸಾಗಾಣಿಕೆಗೆ ಎಕ್ಸ್‌ಕಾರ್ಟ್ ಕಳುಹಿಸಲಾಗುತ್ತಿದೆ.

ಡಿಸ್ಟಿಲರಿಯಲ್ಲಿ ಉತ್ಪಾದನೆಯಾಗುವ ಮದ್ಯದ ಬಾಟಲಿಗಳ ಮೇಲೆ Intagalio ಹಾಗೂ Hologram ಇರುವ ಭದ್ರತಾ ಚೀಟಿಗಳನ್ನು ಬಳಸಲಾಗುತ್ತಿದೆ. ಭದ್ರತಾ ಚೀಟಿಗಳನ್ನು ಅಂಟಿಸದೇ ಇರುವ ಮದ್ಯವನ್ನು ಮಾರಾಟ ಮಾಡಲು ಅವಕಾಶವಿರುವುದಿಲ್ಲ.

ರಾಜ್ಯದಲ್ಲಿ ಉತ್ಪಾದನೆಯಾಗುವ ಮದ್ಯಹಾಗೂ ರಾಜ್ಯಕ್ಕೆ ಆಮದು ಮಾಡಿಕೊಳ್ಳುವ ಮದ್ಯವನ್ನು ಸರ್ಕಾರಿ ಸ್ವಾಮ್ಯದ ಕರ್ನಾಟಕ ರಾಜ್ಯ ಪಾನೀಯ ನಿಗಮದ ಮೂಲಕವೇ ಮಾರಾಟ ಮಾಡಬೇಕೆಂಬ ನಿರ್ಬಂಧ ವಿಧಿಸಲಾಗಿದೆ.

ನಕಲಿ ಮದ್ಯದ ಮಾರಾಟವನ್ನು ತಡೆಗಟ್ಟಲು ಸನ್ನದು ಮಳಿಗೆಗಳನ್ನು ಕಾಲಕಾಲಕ್ಕೆ ತಪಾಸಣೆ ಮಾಡಲು ಕ್ರಮಕೈಗೊಳ್ಳಲಾಗಿದೆ.

ಸಿಬ್ಬಂದಿಗೆ ಮದ್ಯದ ಬಾಟೆಲ್‌ಗಳ ಮೇಲೆ ಇರುವ ಭದ್ರತಾ ಚೀಟಿಗಳು ಅಸಲಿಯಾಗಿರುವ ಬಗ್ಗೆ ಪರಿಶೀಲಿಸಲು ಅಗತ್ಯ ಇರುವ ಉಪಕರಣವನ್ನು ನೀಡಲಾಗಿದೆ. ಹಾಗೂ ಅನುಮಾನಾಸ್ಪದವಾಗಿ ಕಂಡು ಬಂದ ಬಾಟೆಲ್‌ಗಳನ್ನು ರಾಸಾಯನಿಕ ಪ್ರಯೋಗಾಲಕ್ಕೆ ವಿಶ್ಲೇಷಣೆಗಾಗಿ ಕಳುಹಿಸಲಾಗುವುದು. ಮತ್ತು ಸದರಿ ಬಾಟೆಲ್ ಯಾವ ಡಿಸ್ಟಿಲರಿಗೆ ಸಂಬಂಧಿಸಿದೆಯೊ ಆ ಡಿಸ್ಟಿಲರಿಯಿಂದ ಸದರಿ ಮದ್ಯ ಉತ್ಪಾದನೆಯಾಗಿರುವ ಬಗ್ಗೆ ಉತ್ಪಾದನಾ ದಿನಾಂಕ ಮತ್ತು ಬ್ಯಾಚ್ ಸಂಖ್ಯೆ ವಿವರಗಳನ್ನು ಪರಿಶೀಲಿಸಲಾಗುವುದು.

ಸನ್ನದು ಮಳಿಗೆಗಳಲ್ಲಿ ನಕಲಿ ಮದ್ಯ ಹೊಂದಿರುವುದು ಕಂಡು ಬಂದಲ್ಲಿ, ಆ ಸನ್ನದನ್ನು ರದ್ದುಪಡಿಸಲು ಅಬಕಾರಿ ಕಾಯ್ದೆ ಕಲಂ 29 ರನ್ವಯ ಕ್ರಮ ಕೈಗೊಳ್ಳಲಾಗುತ್ತದೆ.

ಸನ್ನದುದಾರರಲ್ಲದ ವ್ಯಕ್ತಿಗಳು ನಕಲಿ ಮದ್ಯವನ್ನು ಹೊಂದಿರುವ ಪ್ರಕರಣಗಳಲ್ಲಿ ಅವರನ್ನು ದಸ್ತಗಿರಿ ಮಾಡಿ, ಪೊಲೀಸ್ ಕಸ್ಟಡಿಗೆ ನೀಡಿ ಮುಂದಿನ ತನಿಖಾ ಕ್ರಮ ಕೈಗೊಳಲಾಗುತ್ತದೆ.

ಇ) 2009–ಜುಲೈನಿಂದ 2010–ಜನವರಿವರೆಗೆ ರಾಜ್ಯಾದ್ಯಂತ ಒಟ್ಟು –174 ಪ್ರಕರಣಗಳನ್ನು ದಾಖಲು ಮಾಡಲಾಗಿದೆ.

ಈ) ದಾಖಲಿಸಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ, ಅಬಕಾರಿ ಕಾಯ್ದೆ ಮತ್ತು ನಿಯಮಗಳನ್ವಯ ತನಿಖೆ ಮಾಡಿ ಕ್ರಮ ಕೈಗೊಳ್ಳಲಾಗುತ್ತಿದೆ.

ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮೂಲಭೂತ ಸೌಕರ್ಯ

715 (331) ಶ್ರೀ ಅಪ್ಪಾಸಾಹೇಬ ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ ನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು;

ಆ) ಯಾವ ಯಾವ ಶಾಲೆಗಳು ಸ್ವಂತ ಕಟ್ಟಡ ಹಾಗೂ ಮೂಲಭೂತ ಸಮಸ್ಯೆಗಳನ್ನು ಎದುರಿಸುತ್ತಿದೆ. (ವಿವರ ನೀಡುವುದು);

ಇ) ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸದಿರಲು ಕಾರಣವೇನು;

ಈ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸರಕಾರಿ ಶಾಲೆಗಳಿಗೆ ಕಟ್ಟಡ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈ ಗೊಂಡಿರುವ ಕ್ರಮಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ವಿಜಾಪುರ ನಗರದಲ್ಲಿ 122 ಸರ್ಕಾರಿ ಪ್ರಾಥಮಿಕ ಶಾಲೆಗಳು, 05 ಸರ್ಕಾರಿ ಪ್ರೌಢ ಶಾಲೆಗಳಿರುತ್ತದೆ.

ಆ) 21 ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಒಂದು ಸರ್ಕಾರಿ ಪ್ರೌಢಶಾಲೆ (ಜಮನಗರ) ಇವುಗಳಿಗೆ ಸ್ವಂತ ಕಟ್ಟಡವಿರುವುದಿಲ್ಲ.

ಪ್ರಾಥಮಿಕ ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು, ಪ್ರೌಢಶಾಲೆಯು ಸರ್ಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ನಡೆಯುತ್ತಿರುತ್ತದೆ. ಮೇಲ್ಕಂಡ ಶಾಲೆಗಳು ಮೂಲಭೂತ ಸಮಸ್ಯೆಗಳನ್ನು ಎದುರಿಸುತ್ತಿದೆ. (ವಿವರವನ್ನು ಲಗತ್ತಿಸಿದೆ)

ಇ) ನಿವೇಶನ ಸೌಲಭ್ಯತೆಯ ಕಾರಣದಿಂದಾಗಿ ಈ ಶಾಲೆಗಳಿಗೆ ಸ್ವಂತ ಕಟ್ಟಡ ಒದಗಿಸಲು ಸಾಧ್ಯವಾಗಿರುವುದಿಲ್ಲ.

ಈ) ಸರ್ವ ಶಿಕ್ಷಾ ಅಭಿಯಾನ, ರಾಜ್ಯವಲಯ, ಯೋಜನೆ, ನಬಾರ್ಡ್ ಸಹಾಯಧನ ಆರ್.ಐ.ಡಿ.ಎಫ್ ಯೋಜನೆ ಮತ್ತು ಯೋಜನೇ ತರದಡಿ ಅನುದಾನ ಒದಗಿಸಿ, ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸರಕಾರಿ ಶಾಲೆಗಳಿಗೆ ಕಟ್ಟಡ ಸೇರಿದಂತೆ ಮೂಲಭೂತ ಸೌಲಭ್ಯಗಳು ಕಲ್ಪಿಸಲು ಕ್ರಮ ವಹಿಸಲಾಗುತ್ತಿದೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 33 ಕ್ಕೆ ಅನುಬಂಧ
ಬಿಜಾಪುರ ನಗರದಲ್ಲಿ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ
ಸರ್ಕಾರಿ ಪ್ರಾಥಮಿಕ ಶಾಲೆಗಳ ಯಾದಿ

ಅ.ನಂ	ಸರ್ಕಾರಿ ಪ್ರಾಥಮಿಕ ಶಾಲೆಗಳ ಹೆಸರು	ಬಾಡಿಗೆ ಮೊತ್ತ
1	ಕೆ.ಬಿ.ಎಸ್. ನಂ.12	686

2	ಕೆ.ಬಿ.ಎಸ್. ನಂ.13	302
3	ಕೆ.ಬಿ.ಎಸ್. ನಂ.15	1154
4	ಯು.ಬಿ.ಎಸ್. ನಂ.04	705
5	ಯು.ಬಿ.ಎಸ್. ನಂ.06	90
6	ಯು.ಬಿ.ಎಸ್. ನಂ.13	3921
7	ಯು.ಬಿ.ಎಸ್. ನಂ.09	1070
8	ಯು.ಬಿ.ಎಸ್. ನಂ.10	4000
9	ಯು.ಬಿ.ಎಸ್. ನಂ.08	1720
10	ಯು.ಜಿ.ಎಸ್. ನಂ.07	9645
11	ಯು.ಜಿ.ಎಸ್. ನಂ.06	75
12	ಯು.ಜಿ.ಎಸ್. ನಂ.03	48
13	ಯು.ಜಿ.ಎಸ್. ನಂ.11	2866
14	ಯು.ಜಿ.ಎಸ್. ನಂ.02	2004
15	ಕೆ.ಬಿ.ಎಸ್. ನಂ.34	1995
16	ಕೆ.ಬಿ.ಎಸ್. ನಂ.11	5200
17	ಯು.ಬಿ.ಎಸ್. ನಂ.27	1900
18	ಯು.ಬಿ.ಎಸ್. ನಂ.21	2685
19	ಕೆ.ಬಿ.ಎಲ್. ಪಿ.ಎಸ್. ವಿಶ್ವೇಶ್ವರ ನಗರ	3365
20	ಕೆ.ಬಿ.ಎಸ್. ನಂ.57	1990
21	ಯು.ಬಿ.ಎಸ್. ರಾಜಾಜಿ ನಗರ	1935
	ಒಟ್ಟು	**47356**

ಅಬ್ಕಾರಿ ರಕ್ಷಣಾ ಮತ್ತು ಇನ್‌ಸ್ಪೆಕ್ಟರ್‌ಗಳ ಬಡ್ತಿ

720 (1404) ಶ್ರೀ ಅಶ್ವಥ್ ಎಂ.ಸಿ. (ಸನ್ನಪಟ್ಟಣ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಬಕಾರಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಕ್ಸೈಜ್ ರಕ್ಷಕ ಮತ್ತು ಸಬ್‌ಇನ್‌ಸ್ಪೆಕ್ಟರ್‌ಗಳಿಗೆ ಬಡ್ತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಸದರಿ ಇಲಾಖೆಯ ಎಕ್ಸೈಜ್ ರಕ್ಷಕ ಮತ್ತು ಸಬ್‌ಇನ್‌ಸ್ಪೆಕ್ಟರ್‌ಗಳಿಗೆ ಬಡ್ತಿ ನೀಡಲು ಸರ್ಕಾರ ಯಾವ ಮಾನದಂಡಗಳನ್ನು ವಿಧಿಸಲಾಗಿದೆ (ಮಾಹಿತಿ ನೀಡುವುದು)?

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) :

ಅ) ಈ ವರ್ಗಗಳಿಗೆ ನಿಯಮನುಸಾರ ಅಬಕಾರಿ ಆಯುಕ್ತರ ಹಂತದಲ್ಲಿ ಬಡ್ತಿ ನೀಡಲಾಗುತ್ತಿದೆ.

ಆ) ಅಬಕಾರಿ ರಕ್ಷಕರ ಹುದ್ದೆಯಲ್ಲಿ ನಿರಂತರವಾಗಿ 5 ವರ್ಷಕ್ಕೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ ನೌಕರರನ್ನು ಅಬಕಾರಿ ಹಿರಿಯ ರಕ್ಷಕರ ಹುದ್ದೆಯ ಪದೋನ್ನತಿಗೆ ಪರಿಗಣಿಸಲಾಗುತ್ತದೆ.

ಅಬಕಾರಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಡಿಯಲ್ಲಿ ಅಬಕಾರಿ ರಕ್ಷಕರ / ಹಿರಿಯ ರಕ್ಷಕ ವೃಂದದಿಂದ ಅಬಕಾರಿ ಉಪ ನಿರೀಕ್ಷಕರ ವೃಂದಕ್ಕೆ ಬಡ್ತಿ ನೀಡಲು ಶೇಕಡಾ 25 ರಷ್ಟು ಪದೋನ್ನತಿ ಕೋಟಾ ನಿಗಧಿಪಡಿಸಲಾಗಿರುತ್ತದೆ.

ಕನಿಷ್ಠ 3 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ ಅಬಕಾರಿ ಹಿರಿಯ ರಕ್ಷಕರುಗಳನ್ನು ಅಥವಾ ನಿರಂತರವಾಗಿ 10 ವರ್ಷಗಳ ಸೇವೆ ಸಲ್ಲಿಸಿದ ಅಬಕಾರಿ ರಕ್ಷಕರನ್ನು ಅಬಕಾರಿ ಉಪ ನಿರೀಕ್ಷಕರ ಹುದ್ದೆಯ ಪದೋನ್ನತಿಗೆ ಪರಿಗಣಿಸಲಾಗುತ್ತದೆ.

ಅಬಕಾರಿ ಉಪ ನಿರೀಕ್ಷಕರ ವೃಂದದಿಂದ ಅಬಕಾರಿ ನಿರೀಕ್ಷಕರ ವೃಂದಕ್ಕೆ ಪದೋನ್ನತಿ ನೀಡಲು ಶೇಕಡ 80 ರಷ್ಟು ಕೋಟಾ ಇರುತ್ತದೆ.

ಪದವಿ ಕಾಲೇಜು ಪ್ರಾರಂಭಿಸುವ ಬಗ್ಗೆ

722 (565) ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ತಾಲ್ಲೂಕಿನ ಪೆರೇಸಂದ್ರ ಮತ್ತು ಸುತ್ತಮುತ್ತಲ ಗ್ರಾಮಗಳ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ವ್ಯಾಸಂಗಕ್ಕಾಗಿ ಸುಮಾರು 22

ಕಿ.ಮೀ. ದೂರದಲ್ಲಿರುವ ಚಿಕ್ಕಬಳ್ಳಾಪುರಕ್ಕೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪೆರೇಸಂದ್ರದ ಪದವಿ ಪೂರ್ವ ಕಾಲೇಜಿನ ಕಲಾ ಮತ್ತು ವಿಜ್ಞಾನ ವಿಭಾಗದಲ್ಲಿ ಸುಮಾರು 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಆ ಭಾಗದ ವಿದ್ಯಾರ್ಥಿನಿಯರು ಉನ್ನತ ಶಿಕ್ಷಣ ಪಡೆಯಲು ದೂರದ ಚಿಕ್ಕಬಳ್ಳಾಪುರಕ್ಕೆ ಹೋಗಿ ಬರಲು ತೊಂದರೆಯಾಗಿ ಕಾಲೇಜು ವ್ಯಾಸಂಗವನ್ನೇ ಮೊಟಕುಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಪೆರೇಸಂದ್ರದಲ್ಲಿ ಪದವಿ ಕಾಲೇಜನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಉ) ಹಾಗಿದ್ದಲ್ಲಿ, ಈ ಕಾಲೇಜನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಬಂದಿದೆ.

ಇ) ಬಂದಿದೆ.

ಈ) ಮುಂದಿದೆ.

ಉ) ಈಗಾಗಲೇ ಪ್ರಾರಂಭಿಸಲಾದ ಪದವಿ ಕಾಲೇಜುಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿದ ನಂತರ ಮುಂದಿನ ವರ್ಷಗಳಲ್ಲಿ ಇದನ್ನು ಪರಿಗಣಿಸಲಾಗುವುದು.

ಸುವರ್ಣ ಗ್ರಾಮೋದಯ ಯೋಜನೆ

725 (1093) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವ ಕಲ್ಯಾಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಒಂದು, ಎರಡು ಮತ್ತು ಮೂರನೇ ಹಂತಗಳಲ್ಲಿ ಯಾವ್ಯಾವ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಆ) ಈ ಗ್ರಾಮಗಳಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ;

ಇ) ಇದಕ್ಕಾಗಿ ವೆಚ್ಚ ಮಾಡಲಿರುವ ಹಣವೆಷ್ಟು; ಗ್ರಾಮವಾರು ವಿವರಗಳನ್ನು ಒದಗಿಸುವುದು;

ಈ) ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ವಿಶೇಷವಾಗಿ ಬಸವಕಲ್ಯಾಣ ಮತಕ್ಷೇತ್ರದಲ್ಲಿ ಯಾವ್ಯಾವ ಗ್ರಾಮಗಳಲ್ಲಿ ಮೇಲ್ಕಂಡ ಯೋಜನೆಯಡಿಯಲ್ಲಿ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :

ಅ) ಅನುಬಂಧದಲ್ಲಿ ವಿವರ ನೀಡಲಾಗಿದೆ.

ಆ) ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಅಂಗನವಾಡಿ ಮತ್ತು ಸಮುದಾಯ ಭವನದ ಕಟ್ಟಡ, ತ್ಯಾಜ್ಯ ವಸ್ತು ವಿಲೇವಾರಿಗೆ ಭೂ ಖರೀದಿ ಮತ್ತು ತರಬೇತಿ ಕಾರ್ಯಕ್ರಮ.

ಇ) ಅನುಬಂಧದಲ್ಲಿ ವಿವರ ನೀಡಲಾಗಿದೆ.

ಇ) ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಅಂಗನವಾಡಿ ಮತ್ತು ಸಮುದಾಯ ಭವನ ಕಟ್ಟಡ, ತ್ಯಾಜ್ಯ ವಸ್ತು ವಿಲೇವಾರಿಗೆ ಭೂಖರೀದಿ ಮತ್ತು ತರಬೇತಿ ಕಾರ್ಯಕ್ರಮ.

ಕರ್ನಾಟಕ ವಿಧಾನಸಭೆ ಸದಸ್ಯರಾದ ಶ್ರೀ.ಬಸವರಾಜ ಪಾಟೀಲ್ ಅಟ್ಟೂರು ಇವರ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1093ರ ಅನುಬಂಧ
ಸುವರ್ಣ ಗ್ರಾಮೋದಯ ಯೋಜನೆಯಡಿ ಬೀದರ್ ಜಿಲ್ಲೆಯಲ್ಲಿ ಆಯ್ಕೆಯಾದ ಗ್ರಾಮಗಳ ವಿವರ

1ನೇ ಹಂತ:

ತಾ: ಬಸವಕಲ್ಯಾಣ (ರೂ.7.40ಕೋಟಿ)	ತಾ: ಭಾಲ್ಕಿ (ರೂ.6.80ಕೋಟಿ)	ತಾ: ಬಸವಕಲ್ಯಾಣ (ರೂ.7.40ಕೋಟಿ)	ತಾ: ಹುಮನಾಬಾದ್ (ರೂ.7.10ಕೋಟಿ)	ತಾ: ಬೀದರ್ (ರೂ.7.00ಕೋಟಿ)
1.[illegible]	1.[illegible]	1.[illegible]	1.[illegible]	1.[illegible]
2.[illegible]	2.[illegible]	2.[illegible]	2.[illegible]	2.[illegible]
3.[illegible]	3.[illegible]	3.[illegible]	3.[illegible]	3.[illegible]
4.[illegible](ಬಿ)	4.[illegible]	4.[illegible]	4.[illegible]	4.[illegible]
5.[illegible]	5.[illegible](ಬಿ)	5.[illegible](ಬಿ)	5.[illegible]	5.[illegible]
6.[illegible]	6.[illegible]	6.[illegible]	6.[illegible]	6.[illegible]
7.[illegible]	7.[illegible]	7.[illegible]	7.[illegible]	7.[illegible]
8.[illegible]	8.[illegible](ಬಿ)	8.[illegible]	8.[illegible]	8.[illegible] (ಬಿ)
9.[illegible]	9.[illegible]	9.[illegible]	9.[illegible]	9.[illegible]
		10.[illegible]	10.[illegible]	10.[illegible] (ಬಿ)
				11.[illegible]

2ನೇ ಹಂತ:

ತಾ: ಬೀದರ್ (ರೂ.7.00ಕೋಟಿ)	ತಾ: ಭಾಲ್ಕಿ (ರೂ.6.80ಕೋಟಿ)	ತಾ: ಬಸವಕಲ್ಯಾಣ (ರೂ.7.40ಕೋಟಿ)	ತಾ: ಔರಾದ್ (ರೂ.7.10ಕೋಟಿ)	ತಾ: ಹುಮನಾಬಾದ್ (ರೂ.7.10ಕೋಟಿ)
1.[illegible]	1.[illegible]	1.[illegible]	1.[illegible]	1.[illegible]
2.[illegible]	2.[illegible]	2.[illegible]	2.[illegible]	2.[illegible]
3.[illegible]	3.[illegible]	3.[illegible]	3.[illegible]	3.[illegible]
4.[illegible]	4.[illegible]	4.[illegible]	4.[illegible]	4.[illegible]
5.[illegible]	5.[illegible]		5.[illegible]	5.[illegible]
6.[illegible]	6.[illegible]		6.[illegible]	6.[illegible]
7.[illegible]			7.[illegible]	7.[illegible]
			8.[illegible]	8.[illegible]
			9.[illegible]	9.[illegible]

3ನೇ ಹಂತ:

ತಾ: ಬೀದರ್ (ರೂ.7.00ಕೋಟಿ)	ತಾ: ಭಾಲ್ಕಿ (ರೂ.6.80ಕೋಟಿ)	ತಾ: ಬಸವಕಲ್ಯಾಣ (ರೂ.7.40ಕೋಟಿ)	ತಾ: ಔರಾದ್ (ರೂ.7.10ಕೋಟಿ)	ತಾ: ಹುಮನಾಬಾದ್ (ರೂ.7.10ಕೋಟಿ)
1.[illegible]	1.[illegible]	1.[illegible]	1.[illegible]	1.[illegible]
2.[illegible]	2.[illegible]	2.[illegible]	2.[illegible]	2.[illegible]
3.[illegible]	3.[illegible]	3.[illegible]	3.[illegible]	3.[illegible]
4.[illegible]	4.[illegible]	4.[illegible]	4.[illegible]	4.[illegible]
5.[illegible]	5.[illegible]	5.[illegible]	5.[illegible]	5.[illegible]
6.[illegible]	6.[illegible]	6.[illegible]	6.[illegible]	6.[illegible]
7.[illegible]	7.[illegible]	7.[illegible]	7.[illegible]	7.[illegible]
8.[illegible]		8.[illegible]	8.[illegible]	8.[illegible]
9.[illegible]			9.[illegible]	9.[illegible]
10.[illegible]			10.[illegible]	
11.[illegible]			11.[illegible]	

ಪಶು ಸಂಗೋಪನಾ ಇಲಾಖೆ ನೇಮಕಾತಿ

727 (1036) ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಪಶುಸಂಗೋಪನಾ ಇಲಾಖೆಗಳಲ್ಲಿ ಮಂಜೂರಾದ ಎಲ್ಲಾ ಶ್ರೇಣಿಯ ಹುದ್ದೆಗಳೆಷ್ಟು;

ಆ) ಅದರಲ್ಲಿ ಸಧ್ಯ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳೆಷ್ಟು;

ಇ) ಮಂಜೂರಾತಿ ಇದ್ದರೂ ಖಾಲಿಯಿರುವ ಹುದ್ದೆಗಳ ಸಂಖ್ಯೆ ಹಾಗೂ ಎಷ್ಟು ವರ್ಷಗಳಿಂದ ಖಾಲಿಯಿರುವುದು;

ಈ) ಕುಂದಗೋಳ ಮತಕ್ಷೇತ್ರದ ವ್ಯಾಪ್ತಿಯಲ್ಲಿನ ಎಲ್ಲಾ ಖಾಲಿ ಹುದ್ದೆಗಳನ್ನು ಈ ಸಾಲಿನಲ್ಲಿಯೇ ಭರ್ತಿ ಮಾಡಲು ಸರ್ಕಾರಕ್ಕೆ ಸಾಧ್ಯವಿದೆಯೇ;

ಉ) ಸಾಧ್ಯವಿದಲ್ಲಿ, ಎಂದು ಭರ್ತಿ ಮಾಡಲಾಗುವುದು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) 411.

ಆ) 310.

ಇ) 101.

ಸುಮಾರು 2 ರಿಂದ 3 ವರ್ಷಗಳಿಂದ ಖಾಲಿ ಇದೆ.

ಈ) ಖಾಲಿ ಇರುವ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲು ಕ್ರಮವಹಿಸಲಾಗುವುದು.

ಉ) ಉದ್ಭವಿಸುವುದಿಲ್ಲ.

ಹೊಸದಾಗಿ ಪ್ರೌಢಶಾಲೆ ಪ್ರಥಮ ದರ್ಜೆ ಕಾಲೇಜು ಮಂಜೂರಾತಿ

729 (1038) ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಹೊಸದಾಗಿ ಎಷ್ಟು ಸರ್ಕಾರಿ ಪ್ರೌಢಶಾಲೆ ಹಾಗೂ ಪ್ರಥಮ ದರ್ಜೆ ಕಾಲೇಜುಗಳಿಗೆ ಮಂಜೂರಾತಿ ನೀಡಿದೆ;

ಆ) ಹೊಸದಾಗಿ ಮಂಜೂರಾತಿ ನೀಡುವ ವಿಷಯ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಕುಂದಗೋಳ ಮತ ಕ್ಷೇತ್ರಕ್ಕೆ ಅವಶ್ಯಕವಾಗಿ ಬೇಕಾಗಿರುವ ಸರ್ಕಾರಿ ಪ್ರೌಢಶಾಲೆ ಹಾಗೂ ಪ್ರಥಮ ದರ್ಜೆ ಕಾಲೇಜುಗಳಿಗೆ ಮಂಜೂರಾತಿಯನ್ನು ಎಂದು ನೀಡಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಹೊಸದಾಗಿ ಮಂಜೂರಾತಿ ನೀಡಿದ ಸರ್ಕಾರಿ ಪ್ರೌಢ ಶಾಲೆ ಹಾಗೂ ಪ್ರಥಮ ದರ್ಜೆ ಕಾಲೇಜುಗಳ ವಿವರ ಈ ಕೆಳಕಂಡಂತಿದೆ.

ಕ್ರ ಸಂ.	ವರ್ಷ	ಮಂಜೂರಾದ	
		ಪ್ರೌಢ ಶಾಲೆಗಳು	ಪ್ರಥಮ ದರ್ಜೆ ಕಾಲೇಜುಗಳು
1	2007–08	609	163
2	2008–09	–	–
3	2009–10	–	–

ಆ) ಅನುದಾನ ಹಾಗೂ ಅವಶ್ಯಕತೆಯನ್ನು ಆಧರಿಸಿ ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈಗಾಗಲೇ ಮಂಜೂರಾತಿ ನೀಡಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವವರೆಗೆ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಇ) ಕುಂದಗೋಳ ಮತಕ್ಷೇತ್ರದಲ್ಲಿ ದೇವನೂರು, ಶಿರೂರು ಚಾಕಲಬ್ಬಿ ಪಶುಪತಿಹಾಳ, ಮತ್ತು ಯರಿನಾರಾಯಣಪುರ ಗ್ರಾಮಗಳಿಗೆ ಪ್ರೌಢಶಾಲೆ ಮಂಜೂರಾತಿಗಾಗಿ ಬೇಡಿಕೆ ಇದ್ದು, ಅನುದಾನ ಹಾಗೂ ಅವಶ್ಯಕತೆಯನ್ನು ಆಧರಿಸಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಗ್ರಂಥಾಲಯಗಳ ಕಟ್ಟಡಗಳಿಗೆ ಅನುದಾನ

730 (1039) ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ) : ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಗೋಳ ಮತಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರ್ವಜನಿಕ ಗ್ರಂಥಾಲಯಗಳು ಬಾಡಿಗೆ ಕಟ್ಟಡ ಅಥವಾ ಇನ್ನಾವುದೇ ಇಲಾಖೆಯ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಲಾಖೆಗೆ ಸ್ವಂತ ಕಟ್ಟಡ ನಿರ್ಮಿಸಲು ಸಾಧ್ಯವಿಲ್ಲವೇ;

ಇ) ಸಾಧ್ಯವಿದ್ದಲ್ಲಿ, ಕುಂದಗೋಳ ಪಟ್ಟಣದ ಸಾರ್ವಜನಿಕ ಗ್ರಂಥಾಲಯಕ್ಕೆ ವಿಶೇಷ ಅನುದಾನ ನೀಡಿ, ಸ್ವಂತ ಕಟ್ಟಡ ನಿರ್ಮಿಸುವ ಯೋಚನೆ ಸರ್ಕಾರಕ್ಕೆ ಇದೆಯೇ;

ಈ) ಹಾಗಿದ್ದಲ್ಲಿ, ಎಂದಿನಿಂದ ಈ ಕಟ್ಟಡ ನಿರ್ಮಾಣ ಕೆಲಸವನ್ನು ಪ್ರಾರಂಭಿಸಲಾಗುವುದು;

ಶ್ರೀ ಕೆ. ಶಿವನಗೌಡ ನಾಯಕ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು) :

ಅ) ಹೌದು.

ಆ) ಸಾಧ್ಯವಿದೆ.

ಇ) ಇದೆ.

ಈ) 2010–11ನೇ ಸಾಲಿಗೆ ಯೋಜನಾ ವೆಚ್ಚದ ಮುಂದುವರಿಕೆ ಕಾರ್ಯಕ್ರಮದಡಿ ಪ್ರಾರಂಭಿಸಲಾಗುವುದು.

ಬೈಸಿಕಲ್ ವಿತರಿಸುವ ಬಗ್ಗೆ

731 (566) ಶ್ರೀ ದಿನಕರ ಕೇಶವ ಶೆಟ್ಟಿ (ಕುಮುಟ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸೈಕಲ್‌ನ ಗುಣಮಟ್ಟ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸೈಕಲ್ ನೀಡುವ ಬದಲು ಅದೇ ಹಣವನ್ನು ಶಾಲೆಯ ಖಾತೆಗೆ ಜಮಾ ಮಾಡಿ ಪಾಲಕರಿಂದಲೆ ಗುಣಮಟ್ಟದ ಸೈಕಲ್ ಖರೀದಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಇ) ಈ ರೀತಿ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಅನುಕೂಲ ವಾಗುವುದಿಲ್ಲವೇ;

ಈ) ಬಸ್ ಪಾಸ್ ಹೊಂದಿರುವ ಮತ್ತು ಸರ್ಕಾರಿ ಹಾಸ್ಟೆಲ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೂ ಉಚಿತ ಸೈಕಲ್ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹಾಗಿಲ್ಲದಿದ್ದಲ್ಲಿ, ಉಚಿತವಾಗಿ ಸೈಕಲ್ ವಿತರಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) – ಇಲ್ಲ –

ಆ) ಸೈಕಲ್ ನೀಡುವ ಬದಲು ಅದೇ ಹಣವನ್ನು ಶಾಲೆಯ ಖಾತೆಗೆ ಜಮಾ ಮಾಡಿ ಪಾಲಕರಿಂದಲೆ ಗುಣಮಟ್ಟದ ಸೈಕಲ್ ಖರೀದಿಸಲು ಅನುವು ಮಾಡಿಕೊಟ್ಟಲ್ಲಿ, ಪಾಲಕರು ಸೈಕಲ್‌ಗಳನ್ನು ಖರೀದಿ ಮಾಡದೇ ಹೋಗುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ.

ಇ) ಇಲ್ಲ.

ಈ) ಇಲ್ಲ.

ಉ) ಸರ್ಕಾರಿ ಮತ್ತು ಅನುದಾನಿರ ಶಾಲೆಗಳಲ್ಲಿನ 8ನೇ ತರಗತಿಯಲ್ಲಿನ ಮಕ್ಕಳು ಬಸ್‌ಪಾಸ್ ಅಥವಾ ಬೈಸಿಕಲ್ ಈ ಎರಡರಲ್ಲಿ ಯಾವುದಾದರು ಒಂದನ್ನು ಆಯ್ಕೆಮಾಡಿಕೊಳ್ಳಲು ಸರ್ಕಾರದ ಅದೇಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಹಾಸ್ಟೆಲ್ ಸೌಲಭ್ಯ ಹೊಂದಿರುವ ಬಹುತೇಕ ಮಕ್ಕಳು ಹತ್ತಿರದ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವುದರಿಂದ ಈ ಮಕ್ಕಳಿಗೆ ಬೈಸಿಕಲ್ ವಿತರಣೆ ಮಾಡಿರುವುದಿಲ್ಲ.

ಶಿಕ್ಷಣ ಅಭಿವೃದ್ಧಿ ಸೂಚ್ಯಾಂಕ

733 (1325) ಡಾ|| ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎನ್.ಯು.ಇ.ಪಿ.ಎ. ಅಭಿವೃದ್ಧಿ ಪಡಿಸಿದ (ಶಿಕ್ಷಣ ಅಭಿವೃದ್ಧಿ ಸೂಚ್ಯಾಂಕ) ಇ.ಡಿ.ಐ. 22 ಶಿಕ್ಷಣ ಅಭಿವೃದ್ಧಿ ಸೂಚ್ಯಾಂಕ (ಪ್ರಾಥಮಿಕ ಶಿಕ್ಷಣ)ಗಳು ಯಾವುವು; ಈ ಸೂಚ್ಯಾಂಕಗಳ ಪ್ರಕಾರ ರಾಜ್ಯವು ದೇಶದಲ್ಲಿ ಎಷ್ಟನೇ ಸ್ಥಾನದಲ್ಲಿ ಇದೆ;

ಆ) ರಾಜ್ಯದಲ್ಲಿ ಈ ಸೂಚ್ಯಾಂಕಗಳ ಪ್ರಮಾಣವು ಪ್ರತಿಯೊಂದು ಜಿಲ್ಲೆಯಲ್ಲಿ ಎಷ್ಟಿವೆ ಮತ್ತು ಈ ಪ್ರತಿಯೊಂದು ಜಿಲ್ಲೆಗೆ ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಇಲ್ಲಿಯವರೆಗೆ ನೀಡಿದ ಅನುದಾನವೆಷ್ಟು;

ಇ) ಈ ಸೂಚ್ಯಾಂಕಗಳು ಇಂಡಿ ತಾಲ್ಲೂಕಿನಲ್ಲಿ ಅತೀ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ತಾಲ್ಲೂಕಿಗೆ ಹೆಚ್ಚಿನ ಅನುದಾನವನ್ನು ಎಸ್.ಎಸ್.ಎ ಕಾರ್ಯಕ್ರಮದಲ್ಲಿ ನೀಡಲು ಸರ್ಕಾರ ಚಿಂತನೆ ನಡೆಸಿದೆಯೇ;

ಈ) ಹಾಗಿದ್ದಲ್ಲಿ, ಬರುವ ವರ್ಷಗಳಲ್ಲಿ ಇಂಡಿ ತಾಲ್ಲೂಕಿಗೆ ಎಸ್.ಎಸ್.ಎ. ಅಡಿಯಲ್ಲಿ ಎಷ್ಟು ಅನುದಾನ ನೀಡಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಎನ್.ಯು.ಇ.ಪಿ.ಎ. ಅಭಿವೃದ್ಧಿ ಪಡಿಸಿದ (ಶಿಕ್ಷಣ ಅಭಿವೃದ್ಧಿ ಸೂಚ್ಯಾಂಕ) ಗಳು ಈ ಕೆಳಗಿನಂತಿದೆ:

ಶಾಲಾ ಲಭ್ಯತೆ, ಭೌತಿಕ ಸೌಲಭ್ಯ, ಶಿಕ್ಷಕರು, ಕಲಿಕೆಯ ಪರಿಣಾಮ, ಕರ್ನಾಟಕ ರಾಜ್ಯವು ಈ ಸೂಚ್ಯಾಂಕಗಳ ಪ್ರಕಾರ 2009–10ರಲ್ಲಿ 12ನೇ ಸ್ಥಾನದಲ್ಲಿರುತ್ತದೆ.

ಆ) ರಾಜ್ಯದ ಜಿಲ್ಲಾವಾರು ಸೂಚ್ಯಂಕವನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ ಹಾಗೂ ಪ್ರತಿ ಜಿಲ್ಲೆಗೆ 2009–10ನೇ ಸಾಲಿನಲ್ಲಿ ಅನುಮೋದನೆ ಯಾದ ಅನುದಾನದ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ಬಂದಿದೆ. ಇ.ಡಿ.ಐ. ಪ್ರಕಾರದಲ್ಲಿಯೇ ಯೋಜನೆಯನ್ನು ತಯಾರಿಸಲಾಗುತ್ತಿದೆ.

ಈ) 2010–11ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ತಯಾರಿಕೆಯ ಕಾರ್ಯ ಪ್ರಗತಿಯಲ್ಲಿರುತ್ತದೆ. ಅನುದಾನ ಮಂಜೂರಾತಿಯ ಬಳಿಕ ಇ.ಡಿ.ಐ ಪ್ರಕಾರ ಇಂಡಿ ತಾಲ್ಲೂಕಿನ ಅನುದಾನ ಒದಗಿಸಲಾಗುವುದು.

ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ
ವಿಧಾನ ಸಭೆಯ ಸದಸ್ಯರಾದ ಮಾನ್ಯಶ್ರೀ ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1325 ಕ್ಕೆ ಅನುಬಂಧ – 1

Over All Education Index of 2009-10 for 2010-11

Sl. No.	Block Name	EDI Rank		Reverse Value of the index	Approved Amount for 2009-10
		Index	Rank		
Weightage		3.48629			
1	Hassan	0.71502	1	0.38880	2252.7762
2	Kodagu	0.70761	2	0.43667	1082.2177
3	Tumkur	0.70441	3	0.46254	4000.10352
4	Chikka magalore	0.69742	4	0.46913	2364.8169
5	Bangalore Rural	0.68821	5	0.48832	1172.0942
6	Ramana gara	0.68798	6	0.51045	1579.67342
7	Udupi	0.67573	7	0.51800	1312.9739
8	Kolar	0.67085	8	0.52049	2027.15279
9	Chitra durga	0.66202	9	0.52280	2789.77783
10	Uttara kannada	0.65584	10	0.53932	4087.2916
11	Mysore	0.64706	11	0.56549	3559.80341
12	Mandya	0.64267	12	0.57342	1659.8812
13	Dakshina kannada	0.63886	13	0.58977	2231.1996

14	Bangalore North	0.63881	14	0.59845	4281.4129
15	Davana gere	0.63775	15	0.60338	2594.39551
16	Shimoga	0.60338	16	0.63775	2905.6317
17	Chikka ballapur	0.59845	17	0.63881	2151.57636
18	Dharwad	0.58977	18	0.63886	2101.42813
19	Chamaraja Nagar	0.57342	19	0.64267	157.5465
20	Haveri	0.56549	20	0.64706	2695.2649
21	Belgaum	0.53932	21	0.65584	6717.26389
22	Bijapur	0.52280	22	0.66202	5213.3264
23	Gadag	0.52049	23	0.67085	1901.54796
24	Bellary	0.51800	24	0.67573	5277.22679
25	Bagalkot	0.51045	25	0.68798	4590.99723
26	Raichur	0.48832	26	0.68821	6420.22271
27	Bidar	0.46913	27	0.69742	3702.15354
28	Koppal	0.46254	28	0.70441	3401.3559
29	Gulbarga	0.43667	29	0.70761	6703.60715
30	Yadgiri	0.38880	30	0.71502	3250.361
		17.85728		**17.85728**	**96104.0807**

Source: DISE 2009-10

Statewise E.D.I. Ranking as per DISE published by NUEPA

Sl.No.	States	2008-09
1	Andaman & Nicobar	7
2	Andhra Pradesh	14
3	Arunachala Pradesh	30
4	Assam	33
5	Bihar	34
6	Chandigarh	10
7	Chattisgarh	26

8	Dadra & Nagar Haveri	22
9	Daman & Diu	9
10	Delhi	8
11	Goa	17
12	Gujarath	13
13	Haryana	4
14	Himachal Pradesh	16
15	Jammu & Kashmir	21
16	Jarkhand	35
17	Karnataka	12
18	Kerala	3
19	Lakshadweep	2
20	Madhyapradesh	25
21	Maharastra	15
22	Manipur	27
23	Meghalaya	31
24	Mizoram	11
25	Nagaland	20
26	Orissa	28
27	Pandichry	1
28	Punjab	6
29	Rajasthan	24
30	Sikkim	18
31	Tamilnadu	5
32	Tripura	29
33	Uttara Pradesh	23
34	Uttarakhand	19
35	West Bengal	32

ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ

ವಿಧಾನ ಸಭೆಯ ಸದಸ್ಯರಾದ ಮಾನ್ಯಶ್ರೀ ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1325 ಕ್ಕೆ ಅನುಬಂಧ – 2

Block wise EDI and Rank is given below.

Over All Index 2009-10

Sl.No.	Block Name	Primary		Upper Primary		EDI Rank	
		Index	Rank	Index	Rank	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]	[illegible]
1	MOODABIDRE	0.69713	8	0.72052	1	[illegible]	[illegible]
2	MAGADI	0.71644	4	0.66278	28	[illegible]	[illegible]
3	TURUVEKERE	0.73467	1	0.64352	65	[illegible]	[illegible]
4	CHIKKANAYAKANAHALLI	0.72031	3	0.64988	52	[illegible]	[illegible]
5	TARIKERE	0.65528	39	0.70820	2	[illegible]	[illegible]
6	KORATAGERE	0.70519	7	0.65420	42	[illegible]	[illegible]
7	TIPTUR	0.71074	5	0.64551	64	[illegible]	[illegible]
8	ALUR	0.69402	10	0.65658	35	[illegible]	[illegible]
9	HASSAN	0.67976	16	0.66719	19	[illegible]	[illegible]
10	CHIKMAGALUR	0.66242	29	0.68148	9	[illegible]	[illegible]
11	BRAHAMAVARA	0.67044	23	0.67226	15	[illegible]	[illegible]
12	MADIKERI	0.65423	41	0.68739	6	[illegible]	[illegible]
13	HOSADURGA	0.68973	11	0.65090	50	[illegible]	[illegible]
14	SULLIA	0.67429	19	0.66476	24	[illegible]	[illegible]
15	SOMAVARPET	0.65522	40	0.68362	7	[illegible]	[illegible]
16	MADHUGIRI	0.68391	13	0.65371	44	[illegible]	[illegible]
17	BHATKAL	0.67278	21	0.66228	29	[illegible]	[illegible]
18	CHANNARAYAPATNA	0.68053	15	0.65442	40	[illegible]	[illegible]
19	KARKALA	0.65991	34	0.67281	13	[illegible]	[illegible]
20	SIRSI	0.68438	12	0.64751	58	[illegible]	[illegible]
21	VIRAJPET	0.62193	80	0.70795	3	[illegible]	[illegible]
22	ARAKALAGUDU	0.66645	26	0.66306	27	[illegible]	[illegible]
23	KOPPA	0.64411	51	0.68279	8	[illegible]	[illegible]
24	RAMANAGARA	0.67330	20	0.65326	45	[illegible]	[illegible]
25	ARASIKERE	0.65231	43	0.67416	12	[illegible]	[illegible]
26	NELAMANGALA	0.69577	9	0.62800	91	[illegible]	[illegible]
27	SIRA	0.66347	27	0.65508	39	[illegible]	[illegible]
28	KOLAR	0.65228	44	0.66561	23	[illegible]	[illegible]
29	SIDDAPUR	0.70736	6	0.60994	109	[illegible]	[illegible]
30	T.N.PURA	0.66150	31	0.65556	37	[illegible]	[illegible]
31	HONNALI	0.64337	53	0.67113	16	[illegible]	[illegible]
32	SRINGERI	0.67747	17	0.63357	79	[illegible]	[illegible]
33	KUMTA	0.65189	46	0.65798	32	[illegible]	[illegible]
34	HIRIYUR	0.65942	35	0.64839	55	[illegible]	[illegible]
35	HOLENARASIPURA	0.63600	62	0.67088	17	[illegible]	[illegible]
36	GUBBI	0.66864	25	0.63326	80	[illegible]	[illegible]
37	KUNDAPURA	0.62116	81	0.68024	10	[illegible]	[illegible]
38	JOIDA	0.72898	2	0.57131	154	[illegible]	[illegible]
39	MYSORE RURAL	0.63540	65	0.66360	26	[illegible]	[illegible]
40	KADUR	0.64111	56	0.65599	36	[illegible]	[illegible]
41	BELUR	0.65583	38	0.63941	72	[illegible]	[illegible]
42	DEVANAHALLI	0.64249	54	0.65269	46	[illegible]	[illegible]
43	DODDABALLAPURA	0.65906	36	0.63586	77	[illegible]	[illegible]

44	ANEKAL	0.65612	37	0.63836	73	[redacted]
45	MULBAGAL	0.67617	18	0.61731	102	[redacted]
46	NORTH3	0.60267	105	0.69055	4	[redacted]
47	MADDUR	0.63414	66	0.65760	34	[redacted]
48	KUNIGAL	0.66167	30	0.62882	90	[redacted]
49	HOSAKOTE	0.65087	47	0.63943	71	[redacted]
50	NARASIMHARAJAPURA	0.63557	63	0.65376	43	[redacted]
51	NANJANAGUD	0.63841	59	0.64973	53	[redacted]
52	BIRURU	0.65195	45	0.63810	76	[redacted]
53	NORTH1	0.61200	90	0.67482	11	[redacted]
54	PUTTUR	0.59622	116	0.68948	5	[redacted]
55	HUBLI	0.62981	72	0.65510	38	[redacted]
56	K.R.NAGARA	0.62351	78	0.65672	31	[redacted]
57	BYNDOOR	0.62672	75	0.65423	41	[redacted]
58	RON	0.64032	57	0.63949	70	[redacted]
59	PAVAGADA	0.62789	74	0.65101	49	[redacted]
60	MALUR	0.66960	24	0.60517	116	[redacted]
61	HUNSUR	0.64454	50	0.62900	89	[redacted]
62	KANAKAPURA	0.65359	42	0.61903	100	[redacted]
63	SAKALESHAPURA	0.62641	76	0.64608	61	[redacted]
64	BANTWAL	0.59[illegible]20	113	0.67256	14	[redacted]
65	NORTH4	0.62070	82	0.64885	64	[redacted]
66	KHANAPUR	0.64340	62	0.62547	95	[redacted]
67	CHANNAPATNA	0.63730	60	0.63129	85	[redacted]
68	HONNAVAR	0.61695	86	0.65065	51	[redacted]
69	YELLAPUR	0.67191	22	0.59519	131	[redacted]
70	HOLALKERE	0.63969	58	0.62455	96	[redacted]
71	UDUPI	0.60219	106	0.66195	30	[redacted]
72	BELTHANGADY	0.60646	99	0.65762	33	[redacted]
73	DHARWAD	0.61774	85	0.64557	63	[redacted]
74	DAVANAGERE(S)	0.60998	95	0.65205	47	[redacted]
75	MUNDAGOD	0.66116	32	0.59768	127	[redacted]
76	TUMKUR	0.61953	83	0.63764	74	[redacted]
77	PERIYA PATNA	0.61949	84	0.63557	78	[redacted]
78	MOODIGERE	0.63086	70	0.62272	98	[redacted]
79	THIRTHAHALLI	0.66007	33	0.59321	135	[redacted]
80	MANDYA NORTH	0.63382	67	0.61890	101	[redacted]
81	SOUTH1	0.61040	93	0.64161	69	[redacted]
82	SOUTH4	0.58214	126	0.66969	18	[redacted]
83	PANDAVAPURA	0.60523	101	0.64618	60	[redacted]
84	BANGARAPETE	0.66265	28	0.58862	140	[redacted]
85	SRINIVASAPUR	0.64115	55	0.60777	113	[redacted]
86	DAVANAGERE(N)	0.61458	88	0.63223	83	[redacted]
87	SAGAR	0.64546	49	0.60074	123	[redacted]
88	CHALLAKERE	0.63254	68	0.61343	104	[redacted]
89	GUDIBANDA	0.68070	14	0.56517	161	[redacted]
90	MANDYA SOUTH	0.64934	48	0.59615	129	[redacted]
91	NAGAMANGALA	0.60848	96	0.63627	75	[redacted]
92	SRIRANGA PATNA	0.63174	69	0.61153	105	[redacted]
93	GUNDULPET	0.62265	79	0.62009	99	[redacted]
94	CHANNAGIRI	0.59473	117	0.64726	59	[redacted]
95	SOUTH3	0.57562	135	0.66626	22	[redacted]
96	KRISHNARAJA PET	0.63549	64	0.60606	114	[redacted]
97	HOSANAGAR	0.63691	61	0.60274	122	[redacted]
98	MYSORE NORTH	0.59130	120	0.64787	56	[redacted]

99	HARIHARA	0.61122	92	0.62772	92	0.61947	99
100	CHITRADURGA	0.60313	103	0.63279	81	0.61790	100
101	KALGHATAGI	0.60008	108	0.63248	82	[illegible]	[illegible]
102	MANGALORE TALUK	0.56495	145	0.66698	21	[illegible]	[illegible]
103	YELANDUR	0.62485	77	0.60583	115	[illegible]	[illegible]
104	MALAVALLY	0.58450	122	0.64562	62	[illegible]	[illegible]
105	H.D.KOTE	0.63053	71	0.59911	126	[illegible]	[illegible]
106	KARWAR	0.57841	130	0.65105	48	[illegible]	[illegible]
107	ANKOLA	0.60296	104	0.62637	93	[illegible]	[illegible]
108	BYADAGI	0.59724	112	0.63076	86	[illegible]	[illegible]
109	K G F	0.59731	111	0.62919	87	[illegible]	[illegible]
110	BAGALKOT	0.59339	118	0.62917	88	[illegible]	[illegible]
111	NAVALGUND	0.55464	148	0.66699	20	[illegible]	[illegible]
112	JAGALUR	0.60639	100	0.61113	108	[illegible]	[illegible]
113	BILAGI	0.60773	97	0.60849	111	[illegible]	[illegible]
114	NORTH2	0.57331	136	0.64190	68	[illegible]	[illegible]
115	HARAPANAHALLI	0.61023	94	0.60301	121	[illegible]	[illegible]
116	RANNEBENNUR	0.58819	121	0.62423	97	[illegible]	[illegible]
117	GOWRIBIDANUR	0.60720	98	0.60506	118	[illegible]	[illegible]
118	HIREKERUR	0.59622	115	0.61456	103	[illegible]	[illegible]
119	CHINTAMANI	0.61437	89	0.59509	132	[illegible]	[illegible]
120	SHIMOGA	0.60395	102	0.60511	117	[illegible]	[illegible]
121	KUNDAGOL	0.57634	134	0.63145	84	[illegible]	[illegible]
122	KOLLEGAL	0.59821	110	0.60467	119	[illegible]	[illegible]
123	KUDLIGI	0.59705	114	0.59569	130	[illegible]	[illegible]
124	CHIKODI	0.57635	133	0.60811	112	[illegible]	[illegible]
125	SIDLAGHATTA	0.60013	107	0.58398	143	[illegible]	[illegible]
126	SOUTH2	0.53525	162	0.64762	57	[illegible]	[illegible]
127	GADAG RURAL	0.58128	128	0.59921	125	[illegible]	[illegible]
128	HANAGAL	0.56921	142	0.61119	107	[illegible]	[illegible]
129	HUNAGUND	0.58238	124	0.59395	134	[illegible]	[illegible]
130	CHAMARAJA NAGAR.	0.54793	154	0.62613	94	[illegible]	[illegible]
131	HBHALLI	0.57636	132	0.59627	128	[illegible]	[illegible]
132	MYSORE SOUTH	0.56706	144	0.60336	120	[illegible]	[illegible]
133	MOLAKALMUR	0.59925	109	0.57107	155	[illegible]	[illegible]
134	SEDAM	0.62869	73	0.54130	176	[illegible]	[illegible]
135	BIJAPUR RURAL	0.56930	141	0.60003	124	[illegible]	[illegible]
136	BAGEPALLY	0.61592	87	0.55338	174	[illegible]	[illegible]
137	CHIKKABALLAPUR	0.61171	91	0.55380	172	[illegible]	[illegible]
138	HDMC	0.52289	176	0.64233	67	[illegible]	[illegible]
139	RAMDURG	0.58227	125	0.57785	146	[illegible]	[illegible]
140	NIPPANI	0.55099	152	0.60886	110	[illegible]	[illegible]
141	MANGALORE CITY	0.49519	191	0.66414	25	[illegible]	[illegible]
142	BELGAUM CITY	0.51504	182	0.64236	66	[illegible]	[illegible]
143	BIJAPUR CITY	0.57796	131	0.57764	147	[illegible]	[illegible]
144	BADAMI	0.54091	160	0.61120	106	[illegible]	[illegible]
145	SHIRHATTI	0.56975	140	0.58202	144	[illegible]	[illegible]
146	HALIYAL	0.58294	123	0.56798	158	[illegible]	[illegible]
147	SORAB	0.59185	119	0.55621	169	[illegible]	[illegible]
148	CHADACHAN	0.58090	129	0.56239	164	[illegible]	[illegible]
149	KAGWAD	0.55379	149	0.58692	141	[illegible]	[illegible]
150	HADAGALI	0.56447	146	0.57590	151	[illegible]	[illegible]
151	BASAVAN BAGEWADI	0.54810	153	0.59158	137	[illegible]	[illegible]
152	SHIGGOAN	0.56900	143	0.56833	157	[illegible]	[illegible]
153	SOUNDATTI	0.54235	159	0.58872	139	[illegible]	[illegible]

154	JAMAKHANDI	0.53682	161	0.59185	136	[redacted]
155	BELLARY WEST	0.57282	137	0.55466	171	[redacted]
156	INDI	0.57181	138	0.55508	170	[redacted]
157	HOSPET	0.54417	156	0.58135	145	[redacted]
158	BAILHONGAL	0.52678	172	0.59448	133	[redacted]
159	HANUR	0.55209	151	0.56170	165	[redacted]
160	MANVI	0.58200	127	0.53170	182	[redacted]
161	RAIBAG	0.54342	157	0.56421	162	[redacted]
162	HAVERI	0.53039	168	0.57719	149	[redacted]
163	MUNDARAGI	0.52892	170	0.57728	148	[redacted]
164	BELGAUM RURAL	0.53410	164	0.57082	156	[redacted]
165	LINGASUGUR	0.56114	147	0.53522	179	[redacted]
166	GOKAK	0.52306	175	0.57183	153	[redacted]
167	ATHANI	0.53402	165	0.56037	167	[redacted]
168	NARAGUND	0.52783	171	0.56599	160	[redacted]
169	RAICHUR	0.53111	167	0.56125	166	[redacted]
170	HUKKERI	0.50489	188	0.58670	142	[redacted]
171	SAVANUR	0.51367	183	0.5766[illegible]	150	[redacted]
172	KOPPAL	0.51621	180	0.57412	152	[redacted]
173	GADAG CITY	0.52136	177	0.56743	159	[redacted]
174	BELLARY EAST	0.54327	158	0.53849	177	[redacted]
175	SANDUR	0.55312	150	0.52823	183	[redacted]
176	MUDHOL	0.52408	173	0.55340	173	[redacted]
177	BIDAR	0.50972	185	0.56287	163	[redacted]
178	GANGAVATHI	0.53125	166	0.53584	178	[redacted]
179	MUDDEBIHAL	0.47523	196	0.59119	138	[redacted]
180	SINDHANUR	0.54557	155	0.51494	189	[redacted]
181	SINDAGI	0.50036	189	0.55663	168	[redacted]
182	DEVADURGA	0.56996	139	0.47775	200	[redacted]
183	BHALKI	0.52360	174	0.52251	186	[redacted]
184	BHADRAVATI	0.51995	178	0.51685	188	[redacted]
185	SIRUGUPPA	0.52989	169	0.50666	193	[redacted]
186	SHORAPUR	0.53484	163	0.49944	196	[redacted]
187	GULBARGA NORTH	0.47703	195	0.55164	175	[redacted]
188	KUSTAGI	0.49914	190	0.52202	187	[redacted]
189	SHIKARIPUR	0.51265	184	0.50676	192	[redacted]
190	BASAVAKALYAN	0.50518	187	0.50887	191	[redacted]
191	YELBURGA	0.47880	194	0.53259	181	[redacted]
192	AURAD	0.51522	181	0.46819	197	[redacted]
193	HUMNABAD	0.45892	199	0.53474	180	[redacted]
194	JEWARGI	0.51652	179	0.47452	201	[redacted]
195	MUDALGI	0.48575	193	0.50354	194	[redacted]
196	ALAND	0.45967	198	0.52[illegible]23	184	[redacted]
197	CHINCHOLI	0.50529	186	0.47823	198	[redacted]
198	CHITTAPUR	0.46444	197	0.51115	190	[redacted]
199	GULBARGA SOUTH	0.44034	202	0.52403	185	[redacted]
200	AFZALPUR	0.44604	201	0.50133	195	[redacted]
201	SHAHPUR	0.49042	192	0.45411	202	[redacted]
202	YADGIR	0.44757	200	0.47808	199	[redacted]

ಸರ್ಕಾರಿ ಪ್ರೌಢ ಶಾಲೆಯ ಕೊರತೆ

736 (1328) ಡಾ.ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀ ಎಸ್.ಆರ್.ಪಾಟೀಲ ಸರ್ಕಾರಿ ಪ್ರೌಢಶಾಲೆ, ಇಂಡಿಯಲ್ಲಿ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿರುವ ಸಂಖ್ಯೆ ಎಷ್ಟು; ಪ್ರತಿ ತರಗತಿಯ ಪ್ರತಿ ವಿಭಾಗದಲ್ಲಿ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿರುವ ಸಂಖ್ಯೆ ಎಷ್ಟು;

ಆ) ಶಾಲೆಯಲ್ಲಿ ಎಷ್ಟು ಕೋಣೆಗಳಿವೆ; ಅವುಗಳಲ್ಲಿ ಎಷ್ಟು ಕೋಣೆಗಳನ್ನು ಮುಖ್ಯ ಗುರುಗಳು, ಕಛೇರಿ ಮತ್ತು ಗಣಕ ಯಂತ್ರಕ್ಕಾಗಿ ಉಪಯೋಗಿಸಲಾಗುತ್ತಿದೆ; ಎಷ್ಟು ಕೋಣೆಗಳನ್ನು ವರ್ಗದ ಕೊಠಡಿಗಳನ್ನಾಗಿ ಉಪಯೋಗಿಸಲಾಗುತ್ತಿದೆ;

ಇ) ಶಾಲೆಗೆ ಮಂಜೂರಾದ ಬೋಧಕ ಸಿಬ್ಬಂದಿ ಎಷ್ಟು; ಇದರಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು ಮತ್ತು ಎಷ್ಟು ಹೆಚ್ಚುವರಿ ಶಿಕ್ಷಕರ ಅವಶ್ಯಕತೆ ಇದೆ;

ಈ) ಈ ಶಾಲೆಗೆ ಹೆಚ್ಚುವರಿಯಾಗಿ ಡಿವಿಜನ್‌ಗಳನ್ನು ಕೋಣೆಗಳನ್ನು, ಬೋಧಕ ಸಿಬ್ಬಂದಿಯನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದರೆ, ಈ ಮಂಜೂರಾತಿಗಳನ್ನು ಎಂದು ಮಾಡಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಶ್ರೀ ಎಸ್.ಆರ್.ಪಾಟೀಲ ಸರ್ಕಾರಿ ಪ್ರೌಢಶಾಲೆ, ಇಂಡಿಯಲ್ಲಿ
8ನೇ ತರಗತಿಯಲ್ಲಿ 332 ವಿದ್ಯಾರ್ಥಿಗಳು,
9ನೇ ತರಗತಿಯಲ್ಲಿ 302 ವಿದ್ಯಾರ್ಥಿಗಳು,
10ನೇ ವರ್ಗದಲ್ಲಿ 264 ವಿದ್ಯಾರ್ಥಿಗಳು,

ಹೀಗೆ ಒಟ್ಟು 898 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುತ್ತಾರೆ.

ಆ) ಈ ಶಾಲೆಯಲ್ಲಿ 8 ಆರ್.ಸಿ.ಸಿ.ಕೋಣೆಗಳಿವೆ. 4 ತಾತ್ಕಾಲಿಕ ಷೆಡ್ಡುಗಳು ಇರುತ್ತವೆ. ಅದರಲ್ಲಿ ಮುಖ್ಯೋಪಾದ್ಯಾಯರ ಕೋಣೆ–1, ಗಣಕಯಂತ್ರ ಕೋಣೆ–1 ವರ್ಗ ಕೋಣೆಗಳು–10 ಇರುತ್ತವೆ.

ಇ) ಶಾಲೆಗೆ ಒಟ್ಟು 22 ಬೋಧಕ ಸಿಬ್ಬಂದಿಗಳನ್ನು ಮಂಜೂರು ಮಾಡಲಾಗಿದೆ. ಯಾವುದೇ ಹುದ್ದೆಗಳು ಖಾಲಿ ಇರುವುದಿಲ್ಲ. ಹೆಚ್ಚುವರಿ ಶಿಕ್ಷಕರ ಅವಶ್ಯಕತೆ ಇರುವುದಿಲ್ಲ.

ಈ) ರಾಜ್ಯಯ ವಲಯ ಯೋಜನೆಯಡಿ 3 ಹೆಚ್ಚುವರಿ ಕೋಣೆಯನ್ನು ಒದಗಿಸಿದ್ದು, ಇದಕ್ಕಾಗಿ 2009–10ನೇ ಸಾಲಿಗೆ 9.89 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಹೆಚ್ಚುವರಿ ಬೋಧಕ ಸಿಬ್ಬಂದಿಯನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಮೈಸೂರು ವಿಶ್ವವಿದ್ಯಾನಿಲಯದ ಅವ್ಯವಹಾರ

737 (1331) ಡಾ: ಮಹದೇವಪ್ಪ ಹೆಚ್.ಸಿ. (ಟಿ.ನರಸೀಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊ. ಜೆ. ಶಶಿಧರ್ ಪ್ರಸಾದ್‌ರವರು ಕುಲಪತಿಯಾಗಿದ್ದ ಅವಧಿಯಲ್ಲಿ (2006–07) ನಡೆದಿರುವ ಭ್ರಷ್ಟಾಚಾರ ಹಾಗೂ ಹಗರಣಗಳ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಏಕ ಸದಸ್ಯ ಆಯೋಗ ಅಕ್ಟೋಬರ್ 2009ರಲ್ಲಿ ಘನವೆತ್ತ ರಾಜ್ಯಪಾಲರಿಗೆ ಹಾಗೂ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದ್ದು, ಸದರಿ ವರದಿಯ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು;

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಮೈಸೂರು ವಿಶ್ವವಿದ್ಯಾಲಯದಲ್ಲಿ ಕುಲಪತಿಯಾಗಿದ್ದ ಪ್ರೊ. ಜೆ. ಶಶಿಧರ ಪ್ರಸಾದ್ ಇವರ ಆಧಿಕಾರಾವಧಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಹಾಗೂ ಹಗರಣಗಳ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಶ್ರೀ ಹೆಚ್. ರಂಗವಿಠ್ಠಲಾಚಾರ್‌ರವರ ಏಕ ಸದಸ್ಯ ವಿಚಾರಣಾ ಆಯೋಗವನ್ನು ನೇಮಿಸಲಾಗಿತ್ತು, ಸದರಿ ಆಯೋಗವು

ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ನೀಡಿದ್ದು, ಸದರಿ ವಿಚಾರಣಾ ವರದಿ ಮೇಲೆ ಕ್ರಮಕೈಗೊಳ್ಳುವ ಕುರಿತು ಸರ್ಕಾರದ ಹಂತದಲ್ಲಿ ಗಂಭೀರವಾಗಿ ಪರಿಶೀಲಿಸಲಾಗುತ್ತಿದೆ.

ಪಶು ಕಲ್ಯಾಣಿಗಳಿಗೆ ಅನುದಾನ ಬಿಡುಗಡೆ

738 (1332) ಡಾ: ಮಹದೇವಪ್ಪ. ಹೆಚ್.ಸಿ. (ಟಿ.ನರಸೀಪುರ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009-10ನೇ ಸಾಲಿನ ಆಯವ್ಯಯದಲ್ಲಿ ಪಶುಸಂಗೋಪನೆ ಇಲಾಖೆಯ Goshalas at Taluk Levels with Private Partnership Fodder Development, Buffalo Breeding & Research Centre, Mudhol Dog Breeding & Research Center Cattle Buffalo Developent AI Centre, Chilling Plant in Belgaum & Gulbarga Division, Amruth Mahalkaval Assistance for Purchase of Fish Seed, Supply of Fishery Requisite Kits, Fishing Harbour at Mangalore. Ornamental pisciculture establishing aqua paks, Identity Card for Fisherman, Animal Insurance, Tribal Sub Plan, Special Component Plan for SC's (SSS) ಈ ಯೋಜನೆಗಳಿಗೆ ಎಷ್ಟು ಅನುದಾನ ಒದಗಿಸಲಾಗಿದೆ;

ಆ) ಈ ಯೋಜನೆಗೆಗಳಿಗೆ ಬಿಡುಗಡೆಯಾದ ಮೊತ್ತ ಮತ್ತು ವೆಚ್ಚದ ವಿವರ ನೀಡುವುದು;

ಇ) ವೆಚ್ಚ ಮಾಡದೆ ಉಳಿದಿರುವ ಮೊತ್ತವೆಷ್ಟು (ವಿವರ ನೀಡುವುದು);

ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) **ಪಶುಸಂಗೋಪನೆ :** 2009-10 ನೇ ಸಾಲಿನ ಆಯವ್ಯಯದಲ್ಲಿ ಪಶುಸಂಗೋಪನೆ ಇಲಾಖೆಯ ವಿವಿಧ ಕಾರ್ಯಕ್ರಮಗಳಿಗೆ ರೂ. 8185 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.

ಮೀನುಗಾರಿಕೆ :

2009–10ನೇ ಸಾಲಿನ ಆಯವ್ಯಯದಲ್ಲಿ ಮೀನುಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಕೋರಿದ ಯೋಜನೆಗಳಿಗೆ ಒದಗಿಸಿರುವ ಅನುದಾನದ ವಿವರಗಳು ಈ ಕೆಳಗಿನಂತಿವೆ.

ಯೋಜನೆ	ಅನುದಾನ (ರೂ.ಲಕ್ಷಗಳಲ್ಲಿ)
ಮೀನುಮರಿ ಖರೀದಿಗೆ ಸಹಾಯಧನ	50.00
ಮೀನುಗಾರಿಕೆ ಸಲಕರಣೆ ಕಿಟ್‌ಗಳ ವಿತರಣೆ	50.00
ಮಂಗಳೂರು ಮೀನುಗಾರಿಕೆ ಬಂದರು	500.00
ಅಲಂಕಾರಿಕ ಮೀನು ಕೃಷಿ–ಅಕ್ವಾಪಾರ್ಕ್ ಸ್ಥಾಪನೆ	100.00
ಮೀನುಗಾರರಿಗೆ ಗುರುತಿನ ಚೀಟಿ ವಿತರಣೆ	50.00
ವಿಶೇಷ ಘಟಕ ಯೋಜನೆ	100.00
ಗಿರಿಜನ ಉಪಯೋಜನೆ	125.00

ಆ) **ಪಶುಸಂಗೋಪನೆ:** ರೂ.4941.75 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ. ಇದರಲ್ಲಿ ರೂ.4282.97 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ವಿವರಗಳನ್ನು **ಅನುಬಂಧ**–1 ರಲ್ಲಿ ನೀಡಿದೆ.

ಮೀನುಗಾರಿಕೆ :

ಈ ಯೋಜನೆಗಳಿಗೆ ಬಿಡುಗಡೆಯಾದ ಮೊತ್ತ ಮತ್ತು ಫೆಬ್ರವರಿ 2010ರ ಅಂತ್ಯದವರೆಗೆ ಆದ ವೆಚ್ಚದ ವಿವರ ಕೆಳಕಂಡಂತೆ ನೀಡಲಾಗಿದೆ.

O.30 F-89

(ರೂ. ಲಕ್ಷಗಳಲ್ಲಿ)

ಯೋಜನೆ	ಬಿಡುಗಡೆಯಾದ ಮೊತ್ತ	ವೆಚ್ಚ
ಮೀನುಮರಿ ಖರೀದಿಗೆ ಸಹಾಯಧನ	25.00	25.00
ಮೀನುಗಾರಿಕೆ ಸಲಕರಣೆ ಕಿಟ್‌ಗಳ ವಿತರಣೆ	25.00	25.00
ಮಂಗಳೂರು ಮೀನುಗರಿಕೆ ಬಂದರು	500.00	–
ಅಲಂಕಾರಿಕ ಮೀನು ಕೃಷಿ– ಅಲ್ವಾಪಾರ್ಕ್ ಸ್ಥಾಪನೆ	50.00	36.27
ಮೀನುಗಾರರಿಗೆ ಗುರುತಿನ ಚೀಟಿ ವಿತರಣೆ	50.00	–
ವಿಶೇಷ ಘಟಕ ಯೋಜನೆ	100.00	43.30
ಗಿರಿಜನ ಉಪಯೋಜನೆ	125.00	34.60

ಇ) **ಪಶುಸಂಗೋಪನೆ :** ರೂ.671.53 ಲಕ್ಷಗಳ ಅನುದಾನ ಖರ್ಚಾಗದೆ ಉಳಿದಿದೆ. ವಿವರಗಳನ್ನು **ಅನುಬಂಧ–1** ರಲ್ಲಿ ನೀಡಿದೆ.

ಮೀನುಗಾರಿಕೆ :

ಈ ಯೋಜನೆಯಡಿ ಫೆಬ್ರವರಿ 2010ರ ಅಂತ್ಯದವರೆಗೆ ವೆಚ್ಚ ಮಾಡದೆ ಉಳಿದಿರುವ ಮೊತ್ತದ ವಿವರಗಳನ್ನು ಕೆಳಗಿನಂತೆ ನೀಡಲಾಗಿದೆ.

ಯೋಜನೆ	ಉಳಿದಿರುವ ಅನುದಾನ
ಮೀನುಮರಿ ಖರೀದಿಗೆ ಸಹಾಯಧನ	–
ಮೀನುಗಾರಿಕೆ ಸಲಕರಣೆ ಕಿಟ್‌ಗಳ ವಿತರಣೆ	–
ಮಂಗಳೂರು ಮೀನುಗಾರಿಕೆ ಬಂದರು	500.00
ಅಲಂಕಾರಿಕ ಮೀನು ಕೃಷಿ–ಅಕ್ವಾಪಾರ್ಕ್ ಸ್ಥಾಪನೆ	13.73
ಮೀನುಗಾರರಿಗೆ ಗುರುತಿನ ಚೀಟಿ ವಿತರಣೆ	50.00
ವಿಶೇಷ ಘಟಕ ಯೋಜನೆ	56.70
ಗಿರಿಜನ ಉಪಯೋಜನೆ	90.40

ಅನುಬಂಧ - 1

ಪ್ರಶ್ನೆ ಸಂಖ್ಯೆ: 1332

ವಿಷಯ: ಪಶು ಕಲ್ಯಾಣ ಕಾರ್ಯಕ್ರಮಗಳಿಗೆ ಅನುದಾನ ಬಿಡುಗಡೆ (ಜನವರಿ'2010 ಅಂತ್ಯಕ್ಕೆ)

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕಾರ್ಯಕ್ರಮಗಳು	2009-10 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಉಳಿದಿರುವ ಅನುದಾನ	ವಿವರ
1	2	3	4	5	6	7
1.	Goshalas at Taluk levels with private partnership ಖಾಸಗಿ ಸಹ ಭಾಗಿತ್ವದೊಂದಿಗೆ ತಾಲ್ಲೂಕುಗಳಲ್ಲಿ ಗೋಶಾಲೆ	500.00	-	-	-	ಸರ್ಕಾರಿ ಆದೇಶ ಸಂಖ್ಯೆ. ಪಸಂಮೀ/20/ ಅಮುಭೂ/ 2009, ಬೆಂಗಳೂರು, ದಿ: 1-3-2009 ರಂತೆ ಕಾರ್ಯಕ್ರಮವನ್ನು ಹಿಂದಕ್ಕೆ ಪಡೆಯಲಾಗಿದೆ.
2.	Fodder Development ಮೇವು ಅಭಿವೃದ್ಧಿ	114.00	114.00	15.00	99.00	ಉಳಿದ ಎರಡು ತಿಂಗಳಲ್ಲಿ ಅನುಷ್ಠಾನಗೊಳಿಸಲಾಗುವುದು
3.	Cattle and Buffalloe Development- AI centre ಜಾನುವಾರು ಮತ್ತು ಎಮ್ಮೆಗಳ ಅಭಿವೃದ್ಧಿ ಕೃತಕ ಗರ್ಭಧಾರಣಾ ಕೇಂದ್ರ	200.00	-	-	-	ಸದರಿ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೇ ಅಂತಿಮ ಹಂತದಲ್ಲಿ ಇರುತ್ತದೆ.
4.	Chilling Plant in Belgaum & Gulbarga ಬೆಳಗಾಂ ಮತ್ತು ಗುಲ್ಬರ್ಗಾ ವಿಭಾಗದಲ್ಲಿ ಶೀತಲೀಕರಣ ಘಟಕ	500.00	500.00	500.00	-	ಕೆ.ಎಂ.ಎಫ್. ಬೆಂಗಳೂರು ರವರಿಗೆ ಬೆಳಗಾಂ ಮತ್ತು ಗುಲ್ಬರ್ಗಾದಲ್ಲಿ ಶೀತಲೀಕರಣ ಘಟಕ ಸ್ಥಾಪನೆಗೆ ಒದಗಿಸಿದೆ.
5.	Amruth mahal Kaval ಅಮೃತ್ ಮಹಲ್ ಕಾವಲ್	500.00				ಪಶುವೈದ್ಯಕೀಯ ವಿಶ್ವ. ವಿದ್ಯಾಲಯದಿಂದ ಪರಿಷ್ಕೃತ ಕ್ರಿಯಾ ಯೋಜನೆ ಸಲ್ಲಿಸಿದೆ.

1	2	3	4	5	6	7
6.	Animal Insurance ಪ್ರಾಣಿ ವಿಮೆ	300.00	-	-	-	ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಿದೆ
7.	Tribal Sub Plan ಗಿರಿಜನ ಉಪ ಯೋಜನೆ	1847.00	1338.25	1277.72	60.53	-
8.	Special Component Plan ವಿಶೇಷ ಘಟಕ ಯೋಜನೆ	4174.00	2952.25	2452.75	499.50	-
9.	Mudhol Dog Breeding ಮುಧೋಳ್ ನಾಯಿ ತಳಿ ಸಂವರ್ಧನೆ	50.00	37.50	37.50	12.50	ಪಶುವೈದ್ಯಕೀಯ ವಿಶ್ವ ವಿದ್ಯಾನಿಲಯಕ್ಕೆ ಅನುದಾನ.
	Total ಒಟ್ಟು	8185.00	4941.75	4282.97	671.53	

ವಿಶ್ವವಿದ್ಯಾಲಯಕ್ಕೆ ಅನುದಾನ

740 (1334) ಡಾ. ಹೆಚ್.ಸಿ. ಮಹಾದೇವಪ್ಪ, (ಟಿ.ನರಸೀಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ಶಿಕ್ಷಣ (ಉನ್ನತ ಶಿಕ್ಷಣ) ಇಲಾಖೆಯು ದಾವಣಗೆರೆ ವಿಶ್ವವಿದ್ಯಾಲಯ, ಲಲಿತಕಲಾ ವಿಶ್ವವಿದ್ಯಾನಿಲಯ ಯೋಜನೆಗಳಿಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ?

ಆ) ಈ ಯೋಜನೆಗಳಿಗೆ ಬಿಡುಗಡೆಯಾದ ಮೊತ್ತ ಹಾಗೂ ವೆಚ್ಚದ ವಿವರಗಳನ್ನು ಒದಗಿಸುವುದು;

ಇ) ವೆಚ್ಚ ಮಾಡದೆ ಉಳಿದಿರುವ ಮೊತ್ತವೆಷ್ಟು? (ವಿವರ ನೀಡುವುದು);

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) 2009–10ನೇ ಸಾಲಿನಲ್ಲಿ ಶಿಕ್ಷಣ (ಉನ್ನತ ಶಿಕ್ಷಣ) ಇಲಾಖೆಯು ದಾವಣಗೆರೆ ವಿಶ್ವವಿದ್ಯಾಲಯಕ್ಕೆ ರೂ.10.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ. ಲಲಿತಕಲಾ ಮಹಾವಿದ್ಯಾಲಯವು (University College of Fine Arts) ದಾವಣಗೆರೆ ವಿಶ್ವವಿದ್ಯಾಲಯದ ಒಂದು ಘಟಕ ಕಾಲೇಜು ಆಗಿರುತ್ತದೆ.

ಆ) ರೂ.6.50 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

1) ಇದರಲ್ಲಿ ಭೂಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ರೂ.5.00 ಕೋಟಿಗಳನ್ನು ಕಂದಾಯ ಇಲಾಖೆಗೆ ಠೇವಣಿ ಇಡಲಾಗಿದೆ.
2) ವಿದ್ಯುಚ್ಛಕ್ತಿ ಸಂಪರ್ಕಕ್ಕಾಗಿ ರೂ. 7.50 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.
3) ಉಳಿದ ಹಣವನ್ನು ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕಾರ್ಯಗಳಿಗೆ, ಆಡಳಿತಾತ್ಮಕ ವೆಚ್ಚಗಳಿಗೆ ಹಾಗೂ ಸಿಬ್ಬಂದಿ ವೇತನಗಳಿಗೆ ಖರ್ಚು ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಶಾಲೆ ಅಭಿವೃದ್ಧಿಗೆ ಅನುದಾನ ಬಿಡುಗಡೆ

741 (1335) ಶ್ರೀ ಡಾ. ಮಹದೇವಪ್ಪ ಹೆಚ್.ಸಿ. (ಟಿ.ನರಸೀಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಯ GIA High Schools & Junior Colleges for providing Computer Education, Model High school-SDP, Opening of schools for girls (KGBV Model SDP), Water and Toilet facilities for needy schools SDP ಈ ಯೋಜನೆಗಳಿಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ;

ಆ) ಈ ಯೋಜನೆಗಳಿಗೆ ಬಿಡುಗಡೆಯಾದ ಮೊತ್ತ ಹಾಗೂ ವೆಚ್ಚದ ವಿವರ ಒದಗಿಸುವುದು;

ಇ) ವೆಚ್ಚ ಮಾಡದೇ ಉಳಿದಿರುವ ಮೊತ್ತವೆಷ್ಟು (ವಿವರ ನೀಡುವುದು)?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ)

ಕ್ರಮ ಸಂ.	ಕಾರ್ಯಕ್ರಮ	ಆಯವ್ಯಯದಲ್ಲಿ ನಿಗಧಿಪಡಿಸಿದ ಅನುದಾನ (ರೂ.ಲಕ್ಷಗಳಲ್ಲಿ)
01 SDP-1	ಮಾದರಿ ಪ್ರೌಢಶಾಲೆ ಪ್ರಾರಂಭಿಸುವುದು	2178.98
02 SDP-2	ಹೆಣ್ಣುಮಕ್ಕಳಿಗಾಗಿ ಕೆ.ಜಿ.ಬಿ.ವಿ. ಮಾದರಿ ಶಾಲೆ ಪ್ರಾರಂಭಿಸುವುದು.	2915.24
03 SDP-3	ಅವಶ್ಯಕತೆಯಿರುವ ಶಾಲೆಗಳಿಗೆ ನೀರು ಮತ್ತು ಶೌಚಾಲಯ ವ್ಯವಸ್ಥೆ ಮಾಡಲು	1664.74

04	ಖಾಸಗಿ ಅನುದಾನಿತ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಗಣಕ ಶಿಕ್ಷಣ ನೀಡಲು	2500.00

ಆ)

ಕ್ರಮ ಸಂ.	ಕಾರ್ಯಕ್ರಮ ಮತ್ತು ಲೆಕ್ಕ ಶೀರ್ಷಿಕೆ	ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನ	ಬಿಡುಗಡೆ ಗೊಳಿಸಿರುವ ಅನುದಾನ	ಆಗಿರುವ ವೆಚ್ಚ
01 SDP-1	ಮಾದರಿ ಪ್ರೌಢಶಾಲೆ ಪ್ರಾರಂಭಿಸುವುದು	21718.98	1718.98	1718.98
02 SDP-2	ಹೆಣ್ಣುಮಕ್ಕಳಿಗಾಗಿ ಕೆ.ಜಿ.ಬಿ.ಬಿ. ಮಾದರಿ ಶಾಲೆ ಪ್ರಾರಂಭಿಸುವುದು	2915.24	1794.00	1794.00
03 SDP-3	ಅವಶ್ಯಕತೆಯಿರುವ ಶಾಲೆಗಳಿಗೆ ನೀರು ಮತ್ತು ಶೌಚಾಲಯ ವ್ಯವಸ್ಥೆ ಮಾಡಲು	1664.74	1040.41	1040.41
04	ಖಾಸಗಿ ಅನುದಾನಿತ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಗಣಕ ಶಿಕ್ಷಣ	2500.00	2500.00	0.00

	ನೀಡಲು	-		

ಇ)

1) ಮೇಲಿನ ಕಾರ್ಯಕ್ರಮಗಳಡಿಯಲ್ಲಿ ಆರ್ಥಿಕ ಇಲಾಖೆಯಿಂದ ಬಿಡುಗಡೆಯಾಗಿರುವಷ್ಟೆ ಹಣವನ್ನು ವೆಚ್ಚ ಮಾಡಲಾಗಿದೆ. ಉಳಿದ ಹಣವನ್ನು ಪರಿಷ್ಕೃತ ಆಯವ್ಯಯದಲ್ಲಿ ಕಡಿತಗೊಳಿಸಲಾಗಿದೆ.

2) ಖಾಸಗಿ ಅನುದಾನಿತ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಗಣಕ ಶಿಕ್ಷಣ ನೀಡಲು ರಾಜ್ಯ ಆಯವ್ಯಯದಲ್ಲಿ ರೂ.25 ಕೋಟಿ ಒದಗಿಸಲಾಗಿತ್ತು. ಆದರೆ, ಕೇಂದ್ರ ಪುರಸ್ಕೃತ ಯೋಜನೆಯಾದ ಐಸಿಟಿ–3ನೇ ಫೇಸ್‌ನಲ್ಲಿ ಅನುದಾನಿತ ಪ್ರೌಢಶಾಲೆಗಳಿಗೂ ಕೇಂದ್ರ ಸರ್ಕಾರದ ಅನುದಾನ ವಿಸ್ತರಿಸಿರುವುದರಿಂದ ನಿಗದಿಯಾದ ಹಣವನ್ನು ವೆಚ್ಚ ಮಾಡಿರುವುದಿಲ್ಲ.

ಗ್ರಂಥಾಲಯಗಳ ನಿರ್ವಹಣೆ

743 (1045) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಬಾಲ್ಕಿ) : ಮಾನ್ಯ ಲೋಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸ ಗ್ರಂಥಾಲಯಗಳನ್ನು ಸ್ಥಾಪಿಸಲು ಅನುಸರಿಸುವ ಮಾನದಂಡಗಳೇನು; ಎಷ್ಟು ಜನಸಂಖ್ಯೆಗೆ ಒಂದರಂತೆ ಗ್ರಂಥಾಲಯಗಳನ್ನು ಸ್ಥಾಪಿಸಲಾಗುವುದು; ಇದರ ಅನ್ವಯ ಬೀದರ್ ಜಿಲ್ಲೆಯಲ್ಲಿರುವ ಗ್ರಂಥಾಲಯಗಳ ಸಂಖ್ಯೆ ಎಷ್ಟು; ಜಿಲ್ಲೆಯ ಜನಸಂಖ್ಯೆಗೆ ಅನುಗುಣವಾಗಿ ಇನ್ನು ಎಷ್ಟು ಗ್ರಂಥಾಲಯಗಳ ಅವಶ್ಯಕತೆ ಇದೆ;

ಆ) ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಹೊಸ ಗ್ರಂಥಾಲಯಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ;

ಇ) ಜಿಲ್ಲೆಯಲ್ಲಿ ಈಗ ಇರುವ ಗ್ರಂಥಾಲಯಗಳ ಪೈಕಿ ಎಷ್ಟು ಗ್ರಂಥಾಲಯಗಳು ಸ್ವಂತ ಕಟ್ಟಡದಲ್ಲಿವೆ ಮತ್ತು ಯಾವ ಯಾವ ಗ್ರಂಥಾಲಯಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ;

ಈ) ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬಹುತೇಕ ಗ್ರಂಥಾಲಯಗಳ ಕಟ್ಟಡಗಳ ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ

ಬಂದಿದೆಯೇ (ಇಂತಹ ಗ್ರಂಥಾಲಯಗಳ ವಿವರ ಒದಗಿಸುವುದು); ಹಾಗಿದ್ದಲ್ಲಿ, ಈ ಕಟ್ಟಡಗಳನ್ನು ದುರಸ್ಥಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿ ಗ್ರಂಥಾಲಯದ ನಿರ್ವಹಣೆಗಾಗಿ ಕಳೆದ ಮೂರು ವರ್ಷದ ಅವಧಿಯಲ್ಲಿ ಯಾವ ಯಾವ ಬಾಬ್ತಿಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ?

ಶ್ರೀ ಕೆ. ಶಿವನಗೌಡ ನಾಯಕ್ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು) :

ಅ) ಸಾರ್ವಜನಿಕ ಗ್ರಂಥಾಲಯ ಅಧಿನಿಯಮ 1965ರ ನಿಯಮ-16, 17 ಹಾಗೂ 18ರನ್ವಯ ಹೊಸ ಗ್ರಂಥಾಲಯಗಳನ್ನು ಸ್ಥಾಪಿಸಲಾಗುತ್ತಿದೆ. ಜನಸಂಖ್ಯೆಯನ್ನು ಆಧರಿಸಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗುವುದಿಲ್ಲ ಹಾಗಿದ್ದಾಗ್ಯೂ ಪುರಸಭೆ, ಪಟ್ಟಣ ಪಂಚಾಯಿತಿ, ತಾಲ್ಲೂಕು ಕೇಂದ್ರ ಸ್ಥಾನ, ನಗರ ಸಭೆ, ಮಹಾನಗರ ಪಾಲಿಕೆ ಮತ್ತು ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸಲಾಗುತ್ತಿದೆ. ಅಲ್ಲದೇ, ನಗರ ಸಭೆ ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾರ್ಡಿಗೊಂದರಂತೆ ಗ್ರಂಥಾಲಯಗಳನ್ನು ಸ್ಥಾಪಿಸಲಾಗುತ್ತಿದೆ. ಬೀದರ್ ಜಿಲ್ಲೆಯಲ್ಲಿ 196 ಗ್ರಂಥಾಲಯಗಳಿವೆ. ಜಿಲ್ಲೆಯ ಜನಸಂಖ್ಯೆಗೆ ಅನುಗುಣವಾಗಿ ಹೊಸ ಗ್ರಂಥಾಲಯಗಳ ಅವಶ್ಯಕತೆ ಇರುವುದಿಲ್ಲ.

ಆ) ಪ್ರಸ್ತಾವನೆ ಇರುವುದಿಲ್ಲ.

ಇ) 03 ಗ್ರಂಥಾಲಯಗಳು ಸ್ವಂತ ಕಟ್ಟಡದಲ್ಲಿವೆ. 1 ಶಾಖಾ ಗ್ರಂಥಾಲಯವು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಇನ್ನುಳಿದ 192 ಗ್ರಂಥಾಲಯಗಳು ಗ್ರಾಮ ಪಂಚಾಯತ್ ವ್ಯಾಪ್ತಿಯ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಈ) ಗಮನಕ್ಕೆ ಬಂದಿರುವುದಿಲ್ಲ.

ಉ) ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳ ವೆಚ್ಚದ ವಿವರ ಕೆಳಗಿನಂತಿವೆ: (ರೂಪಾಯಿಗಳಲ್ಲಿ)

	ಸಿಬ್ಬಂದಿ ವೇತನ	ಕಟ್ಟಡ ಬಾಡಿಗೆ	ಶಿಷ್ಯ ವೇತನ	ಅನುದಾನ	ಇತರ	ಗೌರವ ಧನ	ನಿಯತ-ಕಾಲಿಕಗಳು	ಕಟ್ಟಡ ನಿರ್ಮಾಣ
2006-07	11,81,698	---	---	---	10,000	---	---	3,85,961
2007-08	16,48,067	1,87,872	26,751	7,05,049	4,46,950	---	---	---
2008-09	10,78,866	60,000	16,993	1,394	---	15,500	5,402	---

ಜೈವಿಕ ತಂತ್ರಜ್ಞಾನ ಪಾರ್ಕ್ ಸ್ಥಾಪನೆ

745 (1047) ಶ್ರೀ ಈಶ್ವರ್ ಭಿಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಜೈವಿಕ ತಂತ್ರಜ್ಞಾನ ಪಾರ್ಕ್‌ಗಳನ್ನು ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆ;

ಆ) ಈ ಪಾರ್ಕ್‌ಗಳಿಂದ ಯಾರು ಯಾರಿಗೆ ಯಾವ ರೀತಿಯ ಅನುಕೂಲಗಳು ದೊರೆಯಲಿವೆ;

ಇ) ಬೀದರ್‌ನಲ್ಲಿಯೂ ಸಹ ಜೈವಿಕ ತಂತ್ರಜ್ಞಾನ ಪಾರ್ಕ್‌ನ್ನು ಸ್ಥಾಪಿಸಲು ನಿರ್ಧರಿಸಿರುವುದು ನಿಜವಲ್ಲವೇ;

ಈ) ಹಾಗಿದ್ದಲ್ಲಿ, ಬೀದರ್‌ನಲ್ಲಿ ಇದಕ್ಕಾಗಿ ಎಲ್ಲಿ ಸ್ಥಳಗಳನ್ನು ಗುರುತಿಸಲಾಗಿದೆ;

ಉ) ಈ ಪಾರ್ಕ್‌ಗಳನ್ನು ಸ್ಥಾಪಿಸಲು ಅಗತ್ಯವಿರುವ ಅಂದಾಜು ಮೊತ್ತವೆಷ್ಟು, ಇಲ್ಲಿಯವರೆವಿಗೆ ಸರ್ಕಾರ ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಿದೆ;

ಊ) ಇಂತಹ ಪಾರ್ಕ್‌ಗಳ ಸ್ಥಾಪನೆಗೆ ಕೇಂದ್ರ ಸರ್ಕಾರದಿಂದ ಹಣಕಾಸಿನ ನೆರವನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿದೆಯೇ; ಹಾಗಿದ್ದಲ್ಲಿ, ಇದರ ವಿವರಗಳೇನು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಬೆಂಗಳೂರು, ಬೀದರ್, ಮಂಗಳೂರು, ಧಾರವಾಡ ಹಾಗೂ ಮೈಸೂರು ನಗರಗಳಲ್ಲಿ ಜೈವಿಕ ತಂತ್ರಜ್ಞಾನ ಪಾರ್ಕ್‌ಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ.

ಆ) ಈ ಪಾರ್ಕ್‌ಗಳಲ್ಲಿ ಜೈವಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿವಿಧ ಕ್ಷೇತ್ರಗಳಲ್ಲಿ (ಜೈವಿಕ ತಂತ್ರಜ್ಞಾನ, ಪ್ರಾಣಿ ತಳಿ ಶಾಸ್ತ್ರ, ಮೀನುಗಾರಿಕೆ, ಕೃಷಿ

ಹಾಗೂ ಪೌಷ್ಟಿಕ / ಔಷಧ ಮೂಲಿಕೆಗಳು) ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು ನಡೆಯಲಿವೆ.

ಇದರಿಂದ, ಈ ಭಾಗದಲ್ಲಿರುವ ಜೈವಿಕ ತಂತ್ರಜ್ಞಾನ ಉದ್ದಿಮೆಗಳಿಗೆ ಪ್ರೋತ್ಸಾಹ / ಉತ್ತೇಜನ ದೊರೆಯಲಿದ್ದು, ಸ್ಥಳೀಯ ಯುವಕ ಯುವತಿಯರಿಗೆ ಉದ್ಯೋಗಾವಕಾಶಗಳು ಲಭ್ಯವಾಗಲಿವೆ.

ಇ) ಬೀದರ್‌ನಲ್ಲಿ ವೈವೇರಿಯಂ – Animal House (ಪ್ರಾಣಿ ಗೃಹ) ಸ್ಥಾಪಿಸಲು ನಿರ್ಧರಿಸಲಾಗಿದೆ.

ಈ) ವೈವೇರಿಯಂ – Animal House (ಪ್ರಾಣಿ ಗೃಹ) ವನ್ನು ಬೀದರ್‌ನಲ್ಲಿರುವ ಕರ್ನಾಟಕ ಪಶು ಸಂಗೋಪನೆ ಹಾಗೂ ಮೀನುಗಾರಿಕೆ ವಿಶ್ವವಿದ್ಯಲಯದ ಆವರಣದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಉ) ಈ ಪಾರ್ಕ್‌ಗಳನ್ನು ಸ್ಥಾಪಿಸಲು ಒಟ್ಟು ವೆಚ್ಚ ಸುಮಾರು ರೂ. 150 ಕೋಟಿಗಳೆಂದು ಅಂದಾಜಿಸಲಾಗಿದ್ದು, ಇದನ್ನು ಸಾರ್ವಜನಿಕ/ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಸರ್ಕಾರವು ಶೇಕಡ 20 ರಷ್ಟು ಮೊತ್ತವನ್ನು ಭರಿಸಲು ಯೋಜಿಸಲಾಗಿದೆ. ಇಲ್ಲಿಯವರೆಗೆ ಇದಕ್ಕಾಗಿ ಯಾವುದೇ ಹಣ ವೆಚ್ಚ ಮಾಡಿರುವುದಿಲ್ಲ.

ಈ ಪಾರ್ಕುಗಳ ಸ್ಥಾಪನೆಗಾಗಿ 2010–11ನೇ ಸಾಲಿನಲ್ಲಿ ಸುಮಾರು 15 ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ನೀಡಲು ಯೋಜಿಸಲಾಗಿದೆ.

ಊ) ಯಾವುದೇ ಪ್ರಸ್ತಾವನೆಯನ್ನು ಇದುವರೆವಿಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ.

ಶಿಕ್ಷಣ ಸಂಸ್ಥೆಗಳ ವಿವರ

747 (1087) ಶ್ರೀ ಕೆ.ಜೆ.ಜಾರ್ಜ್ (ಸರ್ವಜ್ಞನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ವಜ್ಞನಗರ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ/ಅನುದಾನಿತ/ಅನುದಾನ ರಹಿತವಾದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ/ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ/ ಸರ್ಕಾರಿ ಪ್ರೌಢಶಾಲೆಗಳಲ್ಲಿ ಎಷ್ಟು ಜನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ (ಖಾಲಿಯಿರುವ ಹುದ್ದೆಗಳ ವಿವರ ನೀಡುವುದು);

ಆ) ಸರ್ವಜ್ಞ ನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರೌಢಶಾಲೆ/ ಸರ್ಕಾರಿ ಪದವಿಪೂರ್ವ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) 2010-11ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆ/ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಬಗ್ಗೆ ಶಿಕ್ಷಣ ಇಲಾಖೆ ಮುಂದೆ ಪ್ರಸ್ತಾವನೆ ಇದೆಯೇ (ಮಾಹಿತಿ ನೀಡುವುದು)?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ವಜ್ಞನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ/ ಅನುದಾನಿತ/ಅನುದಾನರಹಿತವಾದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ/ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ/ಸರ್ಕಾರಿ ಪ್ರೌಢಶಾಲೆಗಳ ವಿವರ.

	ಕಿರಿಯ ಪ್ರಾಥಮಿಕ	ಹಿರಿಯ ಪ್ರಾಥಮಿಕ	ಪ್ರೌಢಶಾಲೆ
ಸರ್ಕಾರಿ	08	14	—
ಅನುದಾನಿತ	03	10	43
ಅನುದಾನ ರಹಿತ	08	25	43
ಒಟ್ಟು	**19**	**49**	**51**

ಸರ್ವಜ್ಞನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ/ ಅನುದಾನಿತ ಅನುದಾನರಹಿತವಾದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ/ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳ ವಿವರ.

	ಕಿರಿಯ ಪ್ರಾಥಮಿಕ ಶಾಲಾ ಶಿಕ್ಷಕರು	ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರು	ಪ್ರೌಢಶಾಲೆ ಶಿಕ್ಷಕರು
ಸರ್ಕಾರಿ	24	91	—
ಅನುದಾನಿತ	09	84	73

ಅನುದಾನ ರಹಿತ	81	64	452
ಒಟ್ಟು	**114**	**239**	**525**

ಸರ್ವಜ್ಞನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ/ಅನುದಾನಿತ/ಅನುದಾನರಹಿತವಾದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ/ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಹುದ್ದೆಗಳ ವಿವರ.

	ಕಿರಿಯ ಪ್ರಾಥಮಿಕ ಶಾಲೆಯಲ್ಲಿನ ಖಾಲಿ ಹುದ್ದೆಗಳು	**ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಖಾಲಿ ಹುದ್ದೆಗಳು**	**ಪ್ರೌಢಶಾಲೆಯಲ್ಲಿನ ಖಾಲಿ ಹುದ್ದೆಗಳು**
ಸರ್ಕಾರಿ	01	06	--
ಅನುದಾನಿತ	12	05	00
ಅನುದಾನ ರಹಿತ	00	00	00
ಒಟ್ಟು	**13**	**11**	**00**

ಆ) ಹೌದು.

ಇ) ಸರ್ವಜ್ಞನಗರ ವ್ಯಾಪ್ತಿಯ ಮತಕ್ಷೇತ್ರದಲ್ಲಿ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಾಣಸವಾಡಿ ಹಾಗೂ ಉನ್ನತೀಕರಿಸಿದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಕೆ.ಜಿ.ಹಳ್ಳಿ, ಇಲ್ಲಿ ಆರ್.ಎಂ.ಎಸ್.ಎ. ಯೋಜನೆಯಡಿಯಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಪದವಿ ಕಾಲೇಜು ವಿದ್ಯಾರ್ಥಿ ಮತ್ತು ಬೋಧಕ ವರ್ಗ ವಿವರ.

750 (914) ಶ್ರೀ ಹ್ಯಾರೀಸ್ ಎನ್.ಎ (ಶಾಂತಿನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಪದವಿ ಕಾಲೇಜುಗಳು ಮತ್ತು ಅವುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯಾ ವಿವರಗಳು ಮತ್ತು ಬೋಧಕ ಸಿಬ್ಬಂದಿ ವರ್ಗಗಳ ವಿವರ ನೀಡುವುದು;

ಆ) ಎಷ್ಟು ಪದವಿ ಕಾಲೇಜುಗಳಲ್ಲಿ ನಿಗದಿತ ಪ್ರಮಾಣಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಾರೆ; ಕಡಿಮೆ ವಿದ್ಯಾರ್ಥಿಗಳು ಇರುವ ಕಾಲೇಜುಗಳ ಮುಂದಿನ ನಿರ್ವಹಣೆಯ ಕುರಿತ ಸರ್ಕಾರದ ನಿಲುವುಗಳೇನು?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) : ರಾಜ್ಯದಲ್ಲಿ 356 ಸರ್ಕಾರಿ ಪದವಿ ಕಾಲೇಜುಗಳಿದ್ದು ಅವುಗಳನ್ನು 1,52,440 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಸದರಿ ಕಾಲೇಜುಗಳಲ್ಲಿ ಒಟ್ಟು 5065 ಬೋಧಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕಾಲೇಜುವಾರು ವಿವರವನ್ನು ಲಗತ್ತಿಸಿದೆ.

ವಿದ್ಯಾರ್ಥಿಗಳ ವಿವರ – ಅನುಬಂಧ–1
ಬೋಧಕರ ವಿವರ – ಅನುಬಂಧ–2

ಆ) : ಒಟ್ಟು 19 ಸರ್ಕಾರಿ ಪದವಿ ಕಾಲೇಜುಗಳಲ್ಲಿ ನಿಗದಿತ ಪ್ರಮಾಣಕ್ಕಿಂತ ಕಡಿಮೆ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ವಿವರವನ್ನು ಅನುಬಂಧ–3 ರಲ್ಲಿ ನೀಡಲಾಗಿದೆ.

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟು ಪರಿಶೀಲಿಸಲಾಗುವುದು.

ANNEXURE to Q. NO. 914

-ಅನುಬಂಧ - 1

ಕರ್ನಾಟಕ ಸರ್ಕಾರ

2009-10 ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯಾ ವಿವರ

ಕ್ರ. ಸಂ	ಕಾಲೇಜುಗಳ ಹೆಸರು ಮತ್ತು ವಿಳಾಸ	ಪ್ರಾರಂಭವಾದ ವರ್ಷ	ವಿದ್ಯಾರ್ಥಿಗಳ ಸಂಖ್ಯಾ ವಿವರ		
			ಗಂಡು	ಹೆಣ್ಣು	ಒಟ್ಟು
	ಬೆಂಗಳೂರು ನಗರ ಜಿಲ್ಲೆ				
1	ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಬೆಂಗಳೂರು- 560 001.	1881-82	0	3050	3050
2	ಸರ್ಕಾರಿ ಕಲಾ ಕಾಲೇಜು, ಡಾ|| ಅಂಬೇಡ್ಕರ್ ವೀದಿ, ಬೆಂಗಳೂರು- 56001	1928-29	1370	156	1526
3	ಸರ್ಕಾರಿ ಆರ್.ಸಿ ವಾಣಿಜ್ಯ ಕಾಲೇಜು, ಬಸವೇಶ್ವರ ಸರ್ಕಲ್, ಬೆಂಗಳೂರು- 560 001.	1948-49	1170	623	1793
4	ಶ್ರೀಮತಿ ವಿ.ಹೆಚ್.ಡಿ ಕೇಂದ್ರೀಯ ಗೃಹ ವಿಜ್ಞಾನ ಕಾಲೇಜು, ಶೇಷಾದ್ರಿ ರಸ್ತೆ, ಬೆಂಗಳೂರು - 560 001.	1961-62	0	357	357
5	ಸರ್ಕಾರಿ ವಿಜ್ಞಾನ ಕಾಲೇಜು, ನೃಪತುಂಗ ರಸ್ತೆ, ಬೆಂಗಳೂರು - 560 001.	1971-72	695	195	890
6	ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಅರಮನೆ ರಸ್ತೆ, ಬೆಂಗಳೂರು- 560 001.	1975-76	0	810	810
7	ಡಾ|| ಎಸ್ ಗೋಪಾಲರಾಜು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆನೇಕಲ್ - 562106.	1980-81	156	278	434
8	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, 3ನೇ ಮುಖ್ಯ ರಸ್ತೆ, 8ನೇ ಅಡ್ಡ ರಸ್ತೆ, ಬೆಂಗಳೂರು	1985-86	872	833	1705
9	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ ಆರ್ ಪುರಂ, ಬೆಂಗಳೂರು- 560 036.	1991-92	861	802	1663
10	ಲಾಲ್‌ಬಹದ್ದೂರ್ ಶಾಸ್ತ್ರಿ ಸರ್ಕಾರಿ ಕಲಾ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಆರ್.ಟಿ ನಗರ,ಬೆಂಗಳೂರು	1993-94	339	304	643
11	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಸರಘಟ್ಟ, ಬೆಂಗಳೂರು- 560 089	1996-97	43	28	71
12	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಜಾಜಿನಗರ - 560 010.	2007-08	246	191	437
13	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಯನಗರ	2007-08	170	190	360
14	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಲ್ಲೇಶ್ವರಂ - 560 003	2007-08	353	312	665
15	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪೀಣ್ಯ - 560 058	2007-08	282	197	479
16	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಫ್ರೇಜರ್ ಟೌನ್ - 560 005	2007-08	55	88	143
17	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲಹಂಕ - 560 064	2007-08	430	382	812
18	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸೂರು ಸರ್ಜಾಪುರ - 560 030	2007-08	300	185	485
19	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆಂಗೇರಿ, ಬೆಂಗಳೂರು - 560 060	2007-08	71	69	140

ಕ್ರ ಸಂ	ಕಾಲೇಜುಗಳ ಹೆಸರು ಮತ್ತು ವಿಳಾಸ	ಪ್ರಾರಂಭವಾದ ವರ್ಷ	ವಿದ್ಯಾರ್ಥಿಗಳ ಸಂಖ್ಯಾ ವಿವರ		
			ಗಂಡು	ಹೆಣ್ಣು	ಒಟ್ಟು
20	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವರ್ತೂರು – 560 087, ಬೆಂಗಳೂರು ಪೂರ್ವ	2009-10	101	98	199
21	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಡುಗೋಡಿ – 560 067, ಬೆಂಗಳೂರು ಪೂರ್ವ	2009-10	101	47	148
	ಬೆಂಗಳೂರು ನಗರ ಜಿಲ್ಲೆ – ಒಟ್ಟು		7615	9195	16810
	ಬೆಂಗಳೂರು ಗ್ರಾಮಾಂತರ ಜಿಲ್ಲೆ				
22	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೊಡ್ಡಬಳ್ಳಾಪುರ – 561 203.	1984-85	205	103	308
23	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೇವನಹಳ್ಳಿ – 562 110.	1984-85	489	251	740
24	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಕೋಟೆ – 562 110.	1985-86	506	368	874
25	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೂಲಿಬೆಲೆ – 562 129, ಹೊಸಕೋಟೆ	2007-08	79	79	158
26	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನೆಲಮಂಗಲ – 562 123	2007-08	249	206	455
27	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತ್ಯಾಮಗೊಂಡ್ಲು – 562 132 ನೆಲಮಂಗಲ ತಾ॥	2007-08	84	86	170
	ಬೆಂಗಳೂರು ಗ್ರಾಮಾಂತರ ಜಿಲ್ಲೆ – ಒಟ್ಟು		1612	1093	2705
	ರಾಮನಗರ ಜಿಲ್ಲೆ				0
28	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ – 571 511.	1982-83	753	517	1270
29	ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ರಾಮನಗರ – 571 511	2007-08	0	369	369
30	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಡದಿ – 562 109, ರಾಮನಗರ ತಾ॥	2007-08	46	44	90
31	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಪಟ್ಟಣ – 571 501	1984-85	826	1130	1956
32	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಗಡಿ – 562 120.	1984-85	317	331	648
33	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುದೂರು – 561 101. (ಮಾಗಡಿ ತಾಲ್ಲೂಕು)	1992-93	138	123	261
34	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕನಕಪುರ – 562 117	2006-07	116	98	214
35	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾರೋಹಳ್ಳಿ – 562 112, ಕನಕಪುರ ತಾ॥	2007-08	58	66	124
36	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಡಿಹಳ್ಳಿ – 562 119, ಕನಕಪುರ ತಾ॥	2007-08	21	23	44
37	ಸರ್ಕಾರಿ ಕಾನೂನು ಕಾಲೇಜು, ರಾಮನಗರ – 571 511	2007-08	35	18	53
	ರಾಮನಗರ ಜಿಲ್ಲೆ – ಒಟ್ಟು		2310	2719	5029

ಕ್ರ. ಸಂ.	ಕಾಲೇಜುಗಳ ಹೆಸರು ಮತ್ತು ವಿಳಾಸ	ಪ್ರಾರಂಭವಾದ ವರ್ಷ	ವಿದ್ಯಾರ್ಥಿಗಳ ಸಂಖ್ಯಾ ವಿವರ		
			ಗಂಡು	ಹೆಣ್ಣು	ಒಟ್ಟು
	ತುಮಕೂರು ಜಿಲ್ಲೆ				
38	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾ – 572 137	1968-69	963	696	1659
39	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್ – 572 130	1982-83	410	520	930
40	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ – 572 216	1983-84	462	536	998
41	ಶ್ರೀಮತಿ ಮತ್ತು ಶ್ರೀ ವೈ.ಇ. ರಂಗಯ್ಯಶೆಟ್ಟಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ – 561 202	1984-85	970	409	1379
42	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ – 572 129	1985-86	468	384	852
43	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುರುವೇಕೆರೆ – 572 227	1987-88	310	249	559
44	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕನಾಯಕನ ಹಳ್ಳಿ – 572 214	1988-89	122	139	261
45	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಳಿಯಾರ್–572 218 (ಚಿಕ್ಕನಾಯಕನಹಳ್ಳಿ ತಾಲ್ಲೂಕು)	1992-93	218	166	384
46	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ – 572 132	2001-02	594	391	985
47	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಬ್ಬೂರು – 572 120, ಕುಣಿಗಲ್ ತಾಲ್ಲೂಕು.	2003-04	50	60	110
48	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು – 572 201	2007-08	507	728	1235
49	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಂಡಿನಶಿವರ – 572 215, ತುರುವೇಕೆರೆ ತಾ:	2007-08	126	141	267
50	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬುಕ್ಕಾಪಟ್ಟಣ – 572 115, ಶಿರಾ ತಾ:	2007-08	26	26	52
51	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನೊಣವಿನಕೆರೆ – 572 224, ತಿಪಟೂರು ತಾ:	2007-08	47	63	110
52	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಡವನಹಳ್ಳಿ – 572 112, ಮಧುಗಿರಿ ತಾ:	2007-08	83	75	158
	ತುಮಕೂರು ಜಿಲ್ಲೆ – ಒಟ್ಟು		5356	4583	9939
	ಚಿಕ್ಕಬಳ್ಳಾಪುರ ಜಿಲ್ಲೆ				
53	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಬಳ್ಳಾಪುರ – 562 101	1968-69	753	465	1218
54	ಸರ್ಕಾರಿ ಬಾಲಕರ ಪ್ರಥಮ ದರ್ಜೆ ಕಾಲೇಜು, ಚಿಂತಾಮಣಿ – 563 125	1965-66	1271	0	1271
55	ಸರ್ಕಾರಿ ಬಾಲಕಿಯರ ಪ್ರಥಮ ದರ್ಜೆ ಕಾಲೇಜು, ಚಿಂತಾಮಣಿ – 563 125	1999-2000	0	1191	1191
56	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಡ್ಲಘಟ್ಟ – 562 106	1991-92	262	111	373
57	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಡಿಬಂಡೆ – 561 209	1996-97	94	59	153

O. 30 F-91

ಕ್ರ. ಸಂ	ಕಾಲೇಜುಗಳ ಹೆಸರು ಮತ್ತು ವಿಳಾಸ	ಪ್ರಾರಂಭವಾದ ವರ್ಷ	ವಿದ್ಯಾರ್ಥಿಗಳ ಸಂಖ್ಯೆ ವಿವರ		
			ಗಂಡು	ಹೆಣ್ಣು	ಒಟ್ಟು
58	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗೌರಿಬಿದನೂರು – 561 208	2007-08	466	249	715
59	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಗೇಪಲ್ಲಿ – 561 207	2007-08	191	61	252
60	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವೇಮಗಲ್ – 563 157, ಚಿಂತಾಮಣಿ ತಾ:	2007-08	181	106	287
	ಚಿಕ್ಕಬಳ್ಳಾಪುರ ಜಿಲ್ಲೆ – ಒಟ್ಟು		3218	2242	5460
	ಕೋಲಾರ ಜಿಲ್ಲೆ				
61	ಸರ್ಕಾರಿ ಬಾಲಕರ ಪ್ರಥಮ ದರ್ಜೆ ಕಾಲೇಜು, ಕೋಲಾರ – 563 101	1948-49	1693	0	1693
62	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಳಬಾಗಿಲು – 563 131	1970-71	911	335	1246
63	ಸರ್ಕಾರಿ ಬಾಲಕಿಯರ ಪ್ರಥಮ ದರ್ಜೆ ಕಾಲೇಜು, ಕೋಲಾರ – 563 101	1984-85	0	2027	2027
64	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಗಾರಪೇಟೆ – 563 114	1985-86	423	301	724
65	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀನಿವಾಸಪುರ – 563 135	1985-86	621	340	961
66	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಲೂರು – 563 130	1988-89	890	535	1425
67	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಜಿ.ಎಫ್ –	2007-08	209	316	525
68	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಗಾರು ತಿರುಪತಿ, ಬಂಗಾರುಪೇಟೆ	2007-08	61	26	87
69	ಸರ್ಕಾರಿ ಕಾನೂನು ಕಾಲೇಜು, ಕೋಲಾರ – 563 101	1986	145	79	224
	ಕೋಲಾರ ಜಿಲ್ಲೆ – ಒಟ್ಟು		4963	3959	8912
	ಬೆಂಗಳೂರು ಪ್ರಾದೇಶಿಕ ವಲಯ – ಒಟ್ಟು		25064	23791	48855
	ಮೈಸೂರು ಜಿಲ್ಲೆ				
70	ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು–570 005	1919-20	0	1167	1167
71	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜನಗರ – 571 602	1971-72	1021	713	1734
72	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು – 571 105	1971-72	1029	336	1365
73	ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು – 570 005	1979-80	0	3270	3270
74	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಗ್ಗಡದೇವನಕೋಟೆ – 571 114	1985-86	261	68	329
75	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಿರಿಯಾಪಟ್ಟಣ – 571 107	1991-92	291	157	448

ಕ್ರ. ಸಂ	ಕಾಲೇಜುಗಳ ಹೆಸರು ಮತ್ತು ವಿಳಾಸ	ಪ್ರಾರಂಭವಾದ ವರ್ಷ	ವಿದ್ಯಾರ್ಥಿಗಳ ಸಂಖ್ಯೆ ವಿವರ		
			ಗಂಡು	ಹೆಣ್ಣು	ಒಟ್ಟು
76	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ – 570 023, ಮೈಸೂರು ನಗರ	1996-97	475	111	586
77	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನೂರು – 571 101 (ಟಿ. ನರಸೀಪುರ ತಾಲ್ಲೂಕು)	1996-97	162	130	292
78	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೂಟಗಳ್ಳಿ, ಮೈಸೂರು	2005-06	0	366	366
79	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಲಿಗ್ರಾಮ – 571 604	2006-07	158	165	323
80	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಳಿಕೆರೆ – 571 103, ಹುಣಸೂರು ತಾ:	2007-08	94	44	138
81	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು – 571 301	2007-08	395	316	711
82	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಟಿ.ನರಸೀಪುರ – 571 124	2007-08	294	162	456
83	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನಗೋಡು – 571 105, ಹುಣಸೂರು ತಾ:	2007-08	61	34	95
84	ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು – 571 105, ಹುಣಸೂರು	2007-08	0	325	325
85	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ದಾರ್ಥ ಲೇಔಟ್ – 570 011, ಮೈಸೂರು	2007-08	181	74	255
86	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉಲ್ಲಹಳ್ಳಿ – 571 314, ನಂಜನಗೂಡು	2007-08	29	52	81
87	ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಕೆ.ಆರ್.ನಗರ – 571 602	2009-10	0	109	109
	ಮೈಸೂರು ಜಿಲ್ಲೆ – ಒಟ್ಟು		4451	7599	12050
	ಚಾಮರಾಜನಗರ ಜಿಲ್ಲೆ				
88	ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ – 571 440	1966-67	619	104	723
89	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನೂರು – 571 439 (ಕೊಳ್ಳೇಗಾಲ ತಾಲ್ಲೂಕು)	1992-93	103	33	136
90	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ – 571 313	1992-93	486	80	566
91	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಳಂದೂರು – 571 441	2007-08	51	29	80
92	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಂಡ್ಲುಪೇಟೆ – 571 111	2007-08	358	267	625
93	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುದೇರು – 571 316, ಚಾಮರಾಜನಗರ ತಾ:	2007-08	17	32	49
94	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಬ್ಬಹಳ್ಳಿ – 571 319, ಗುಂಡ್ಲುಪೇಟೆ ತಾ:	2007-08	65	30	95
	ಚಾಮರಾಜನಗರ ಜಿಲ್ಲೆ – ಒಟ್ಟು		1699	575	2274

ಕ್ರ. ಸಂ	ಕಾಲೇಜುಗಳ ಹೆಸರು ಮತ್ತು ವಿಳಾಸ	ಪ್ರಾರಂಭವಾದ ವರ್ಷ	ವಿದ್ಯಾರ್ಥಿಗಳ ಸಂಖ್ಯಾ ವಿವರ		
			ಗಂಡು	ಹೆಣ್ಣು	ಒಟ್ಟು
	ಮಂಡ್ಯ ಜಿಲ್ಲೆ				
95	ಸರ್ಕಾರಿ ಬಾಲಕರ ಕಾಲೇಜು, ಮಂಡ್ಯ – 571 401	1948-49	1034	399	1433
96	ಸರ್ಕಾರಿ ಬಾಲಕಿಯರ ಕಾಲೇಜು, ಮಂಡ್ಯ – 571 401	1973-74	0	1923	1923
97	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀರಂಗಪಟ್ಟಣ – 571 438	1985-86	144	197	341
98	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜಪೇಟೆ – 571 426	1987-88	568	431	999
99	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಳವಳ್ಳಿ – 571 430	1996-97	123	71	194
100	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮದ್ದೂರು – 571 428	2000-01	0	320	320
101	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ – 571 425(ಮದ್ದೂರು ತಾಲ್ಲೂಕು)	2003-04	41	104	145
102	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕ್ಯಾತನಹಳ್ಳಿ – 571 427, ಪಾಂಡವಪುರ ತಾ:	2007-08	39	48	87
103	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಾಗಮಂಗಲ – 571 432	2007-08	178	198	376
104	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾಂಡವಪುರ –571 434	2007-08	170	176	346
105	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭಾರತೀನಗರ – 571 422, ಮದ್ದೂರು ತಾ:	2007-08	61	73	134
106	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಸಾಗರ – 571 607, ಶ್ರೀರಂಗಪಟ್ಟಣ ತಾ:	2007-08	69	43	112
107	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಲಗೂರು – 571 421, ಮಳವಳ್ಳಿ ತಾ:	2007-08	61	91	152
108	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೇಲುಕೋಟೆ – 571 431, ಪಾಂಡವಪುರ ತಾ	2007-08	19	36	55
109	ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಕೆ.ಆರ್.ಪೇಟೆ – 571 426	2007-08	0	178	178
	ಮಂಡ್ಯ ಜಿಲ್ಲೆ – ಒಟ್ಟು		2507	4288	6795
	ಹಾಸನ ಜಿಲ್ಲೆ				
110	ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ – 573 201	1946-47	418	407	825
111	ಸರ್ಕಾರಿ ಕಲಾ ಕಾಲೇಜು, ಹಾಸನ – 573 201	1984-85	1053	648	1701
112	ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹಾಸನ – 573 201	2006-07	0	1034	1034
113	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಣನೂರು–572 130 (ಅರಕಲಗೂಡು ತಾಲ್ಲೂಕು)	1954-55	233	200	433

ಕ್ರ. ಸಂ	ಕಾಲೇಜುಗಳ ಹೆಸರು ಮತ್ತು ವಿಳಾಸ	ಪ್ರಾರಂಭವಾದ ವರ್ಷ	ವಿದ್ಯಾರ್ಥಿಗಳ ಸಂಖ್ಯಾ ವಿವರ		
			ಗಂಡು	ಹೆಣ್ಣು	ಒಟ್ಟು
114	ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹೊಳೆನರಸೀಪುರ – 573 211	1980-81	272	154	426
115	ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ – 573 211	2006-07	0	422	422
116	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಡುವಲಹಿಪ್ಪೆ – 573 215	2006-07	96	61	157
117	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಕಲೇಶಪುರ – 573 134	1983-84	92	106	198
118	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಕಲಗೂಡು – 573 102	1984-85	253	190	443
119	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೇಲೂರು – 573 115	1984-85	397	171	568
120	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಾವಗಲ್ – 573 125 (ಅರಸೀಕೆರೆ ತಾಲ್ಲೂಕು)	1991-92	74	98	172
121	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಂಡಸಿ. (ಅರಸೀಕೆರೆ ತಾಲ್ಲೂಕು)	1992-93	38	54	92
122	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ – 573 116	1996-97	264	493	757
123	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆಲೂರು – 573 213(ಹಾಸನ ಜಿಲ್ಲೆ)	2002-03	146	161	307
124	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಸೀಕೆರೆ – 573 103	2006-07	260	175	435
125	ಸರ್ಕಾರಿ ಗೃಹ ವಿಜ್ಞಾನ ಕಾಲೇಜು, ಹಾಸನ – 573 201	2007-08	5	8	13
126	ಸರ್ಕಾರಿ ಗೃಹ ವಿಜ್ಞಾನ ಕಾಲೇಜು, ಹೊಳೆನರಸೀಪುರ – 573 211	2007-08	12	10	22
127	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಸಾವೆ – 573 124, ಚನ್ನರಾಯಪಟ್ಟಣ ತಾ:	2007-08	10	67	77
128	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉದಯಪುರ, ಚನ್ನರಾಯಪಟ್ಟಣ ತಾ:	2007-08	32	39	71
129	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಣಾವರ – 573 112, ಅರಸೀಕೆರೆ ತಾ:	2007-08	50	74	124
130	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳ್ಳಿ ಮೈಸೂರು – 573 210, ಹೊಳೆನರಸೀಪುರ ತಾ:	2007-08	34	38	72
131	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಸಳೆ ಹೊಸಹಳ್ಳಿ – 573 212, ಹಾಸನ ತಾ:	2007-08	39	29	68
132	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳೇಬೀಡು – 573 121, ಬೇಲೂರು ತಾ:	2007-08	53	57	110
133	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆತ್ತೂರು – 573 123, ಸಕಲೇಶಪುರ ತಾ:	2007-08	37	33	70
134	ಸರ್ಕಾರಿ ಕಾನೂನು ಕಾಲೇಜು, ಹಾಸನ ನಗರ – 573 201	2007-08	47	34	81

ಕ್ರ ಸಂ	ಕಾಲೇಜುಗಳ ಹೆಸರು ಮತ್ತು ವಿಳಾಸ	ಪ್ರಾರಂಭವಾದ ವರ್ಷ	ವಿದ್ಯಾರ್ಥಿಗಳ ಸಂಖ್ಯಾ ವಿವರ		
			ಗಂಡು	ಹೆಣ್ಣು	ಒಟ್ಟು
135	ಸರ್ಕಾರಿ ಕಾನೂನು ಕಾಲೇಜು, ಹೊಳೆನರಸೀಪುರ - 573 211	2007-08	22	22	44
136	ಸರ್ಕಾರಿ ಕಾನೂನು ಕಾಲೇಜು, ಹಡವನಹಳ್ಳಿ - 573 215, ಹೊಳೆನರಸೀಪುರ ತಾ:	2007-08	0	0	0
	ಹಾಸನ ಜಿಲ್ಲೆ		3937	4785	8722
	ಮೈಸೂರು ಪ್ರಾದೇಶಿಕ ವಲಯ - ಒಟ್ಟು		12594	17247	29841
	ಶಿವಮೊಗ್ಗ ಜಿಲ್ಲೆ				
137	ಸರ್.ಎಂ.ವಿ.ಸರ್ಕಾರಿ ವಿಜ್ಞಾನ ಕಾಲೇಜು, ಬೊಮ್ಮನಕಟ್ಟೆ, ಭದ್ರಾವತಿ - 577 302	1968-69	106	170	276
138	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ - 577 427	1980-81	380	353	733
139	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸನಗರ - 577 418	1985-86	209	220	429
140	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೊರಬ - 577 429	1985-86	245	265	510
141	ಸರ್.ಎಂ.ವಿ.ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ನ್ಯೂಟೌನ್ - ಭದ್ರಾವತಿ - 577 301	1987-88	499	514	1013
142	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆನವಟ್ಟಿ - 577 413 (ಸೊರಬ ತಾಲ್ಲೂಕು)	1991-92	72	83	155
143	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆಹೊನ್ನೂರು-577 227 (ಭದ್ರಾವತಿ ತಾಲ್ಲೂಕು)	1991-92	182	155	337
144	ಶ್ರೀಮತಿ ಇಂದಿರಾಗಾಂಧಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಸಾಗರ - 577 401	1991-92	0	1213	1213
145	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭದ್ರಾವತಿ - 577 301	1993-94	218	348	566
146	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿವಮೊಗ್ಗ - 577 201	2006-07	390	327	717
147	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೀರ್ಥಹಳ್ಳಿ - 577 432	2007-08	295	514	809
148	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಿಪ್ಪನ್ ಪೇಟೆ - 577 426, ಹೊಸನಗರ ತಾ:	2007-08	182	146	328
149	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾಳಕೊಪ್ಪ - 577 428, ಶಿಕಾರಿಪುರ ತಾ:	2007-08	69	70	139
	ಶಿವಮೊಗ್ಗ ಜಿಲ್ಲೆ - ಒಟ್ಟು		2847	4378	7225
	ಚಿತ್ರದುರ್ಗ ಜಿಲ್ಲೆ				
150	ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ - 577 501	1948-49	1226	366	1592
151	ಹೆಚ್.ಪಿ.ಪಿ.ಸಿ.ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ - 577 522	1969-70	852	576	1428
152	ಸರ್ಕಾರಿ ವಿಜ್ಞಾನ ಕಾಲೇಜು, ಚಿತ್ರದುರ್ಗ - 577 501	1973-74	421	435	856
153	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ - 577 527	1983-84	1007	655	1662

ಕ್ರ. ಸಂ.	ಕಾಲೇಜುಗಳ ಹೆಸರು ಮತ್ತು ವಿಳಾಸ	ಪ್ರಾರಂಭವಾದ ವರ್ಷ	ವಿದ್ಯಾರ್ಥಿಗಳ ಸಂಖ್ಯಾ ವಿವರ		
			ಗಂಡು	ಹೆಣ್ಣು	ಒಟ್ಟು
154	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮುರು – 577 535	1985-86	227	94	321
155	ವೇದಾವತಿ ಸರ್ಕಾರಿ ಪ್ರಥಮ ದರ್ಜೆ ವಿಜ್ಞಾನ ಕಾಲೇಜು ಹಿರಿಯೂರು – 572 143	1993-94	142	132	274
156	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪರಶುರಾಮಪುರ – 577 539(ಚಳ್ಳಕೆರೆ ತಾಲ್ಲೂಕು)	1996-97	38	28	66
157	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭರಮಸಾಗರ – 577 519, ಚಿತ್ರದುರ್ಗ ತಾ:	2007-08	64	36	100
158	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳಲ್ಕೆರೆ – 577 526	2007-08	44	30	74
159	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜವನಗೊಂಡನಹಳ್ಳಿ, ಹಿರಿಯೂರು ತಾ:	2007-08	63	46	109
160	ವಾಣಿ ವಿಲಾಸ್ ಸಕ್ಕರೆ ಕಾರ್ಖಾನೆ ವಿದ್ಯಾ ಸಂಸ್ಥೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಯೂರು – 572 144	1980-81 (2009-10)	292	277	569
	ಚಿತ್ರದುರ್ಗ ಜಿಲ್ಲೆ – ಒಟ್ಟು		4376	2675	7051
	ದಾವಣಗೆರೆ ಜಿಲ್ಲೆ				
161	ಶ್ರೀ ಶಿವಲಿಂಗೇಶ್ವರಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ – 577 213	1960-61	596	601	1197
162	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಯಕೊಂಡ – 577 534	1988-89	112	79	191
163	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನ್ಯಾಮತಿ – 577 223 (ಹೊನ್ನಾಳಿ ತಾಲ್ಲೂಕು)	1991-92	94	183	277
164	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ – 577 002	1992-93	1559	548	2107
165	ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ – 577 002	2007-08	0	572	572
166	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊನ್ನಾಳಿ	2007-08	166	165	331
167	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹರಿಹರ – 577 601	2007-08	216	117	333
168	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹರಪನಹಳ್ಳಿ – 583 121	2007-08	140	108	248
169	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಗಳೂರು – 577 528	2007-08	67	88	155
170	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಂತೆಬೆನ್ನೂರು – 577 552, ಚನ್ನಗಿರಿ ತಾ:	2007-08	68	118	186
171	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವಪಟ್ಟಣ – 577 551, ಚನ್ನಗಿರಿ ತಾ:	2007-08	26	12	38
	ದಾವಣಗೆರೆ ಜಿಲ್ಲೆ – ಒಟ್ಟು		3044	2591	5635
	ಚಿಕ್ಕಮಗಳೂರು ಜಿಲ್ಲೆ				
172	ಐ.ಡಿ.ಎಸ್.ಜಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಮಗಳೂರು – 577 102	1948-49	1171	296	1467

ಕ್ರ. ಸಂ	ಕಾಲೇಜುಗಳ ಹೆಸರು ಮತ್ತು ವಿಳಾಸ	ಪ್ರಾರಂಭವಾದ	ವಿದ್ಯಾರ್ಥಿಗಳ ಸಂಖ್ಯಾ ವಿವರ		
		ವರ್ಷ	ಗಂಡು	ಹೆಣ್ಣು	ಒಟ್ಟು
173	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ - 577 126	1982-83	329	453	782
174	ಶ್ರೀ ಬಾಳೆಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೂಡಿಗೆರೆ - 577 132	1983-84	335	321	656
175	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನರಸಿಂಹರಾಜಪುರ - 577 134	1985-86	123	110	233
176	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಜ್ಜಂಪುರ - 577 547 (ತರೀಕೆರೆ ತಾಲ್ಲೂಕು)	1988-89	226	246	472
177	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಂಚನಹಳ್ಳಿ - 573 132 (ಕಡೂರು ತಾಲ್ಲೂಕು)	1989-90	70	95	165
178	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಡೂರು - 577 548	1992-93	879	821	1700
179	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶೃಂಗೇರಿ - 577 139	2007-08	167	257	424
180	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತರೀಕೆರೆ - 577 228	2007-08	95	157	252
181	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಳಸ - 577 124, ಶೃಂಗೇರಿ ತಾ:	2007-08	109	140	249
182	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀರೂರು - 577 116, ಕಡೂರು ತಾ:	2007-08	126	120	246
183	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಗಟಿ - 577 140, ಕಡೂರು ತಾ:	2007-08	50	55	105
184	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಖರಾಯಪಟ್ಟಣ - 577 135, ಕಡೂರು ತಾ:	2007-08	28	26	54
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ. ಅ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಸರ್ಕಾರಿ ಕಛೇರಿಗಳು ಹಾಗೂ ಸರ್ಕಾರದ ಅಂಗ ಸಂಸ್ಥೆಗಳು ಖಾಸಗಿ ಕಟ್ಟಡಗಳಲ್ಲಿ ದುಬಾರಿ ಬಾಡಿಗೆ ನೀಡುವ ಬಗ್ಗೆ

576 (275) ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರವು ಜಿಲ್ಲಾ ಕೇಂದ್ರವಾಗಿದ್ದು, ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಕಛೇರಿಗಳು ಹಾಗೂ ಸರ್ಕಾರದ ಅಂಗ ಸಂಸ್ಥೆಗಳು ಖಾಸಗಿ ಕಟ್ಟಡಗಳಲ್ಲಿ ದುಬಾರಿ ಬಾಡಿಗೆ ನೀಡಿ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರಿ ಮತ್ತು ಸರ್ಕಾರದ ಅಂಗ ಸಂಸ್ಥೆಗಳ ಕಛೇರಿಗಳಿಗೆ ಸ್ವಂತ ಕಟ್ಟಡಗಳನ್ನು ಹೊಂದಲು ಸರ್ಕಾರಕ್ಕಿರುವ ತೊಂದರೆಗಳೇನು;

ಇ) ಖಾಸಗಿ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಮತ್ತು ಅಂಗ ಸಂಸ್ಥೆಗಳ ಕಛೇರಿಗಳಿಗೆ ಪ್ರತಿ ತಿಂಗಳು ನೀಡುತ್ತಿರುವ ಬಾಡಿಗೆಯ ಮೊತ್ತವೆಷ್ಟು (ಕಛೇರಿಗಳವಾರು ಪೂರ್ಣ ಮಾಹಿತಿಯನ್ನು ನೀಡುವುದು);

ಈ) ಸರ್ಕಾರಿ ಮತ್ತು ಸರ್ಕಾರದ ಅಂಗ್ಲ ಸಂಸ್ಥೆಗಳ ಕಛೇರಿಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ, ಕಛೇರಿಗಳ ಕಟ್ಟಡಕ್ಕೆ ಸ್ಥಳ ಗುರುತಿಸಲಾಗಿದೆಯೇ;

ಊ) ಸ್ವಂತ ಕಟ್ಟಡ ನಿರ್ಮಿಸಲು ನಗರದ ಯಾವ ಭಾಗದಲ್ಲಿ ಮತ್ತು ಎಷ್ಟು ಪ್ರಮಾಣದ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ;

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಹೌದು.

ಆ) ಈ ಜಿಲ್ಲಾ ಕಛೇರಿ ಕಟ್ಟಡ ಕಾಮಗಾರಿಯ ಅಂದಾಜು ಮೊತ್ತ ರೂ.20.00 ಕೋಟಿಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ಈಗಾಗಲೇ ನೀಡಲಾಗಿದ್ದು, ಈ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿದೆ.

ಇ) ಖಾಸಗೀ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಛೇರಿಗಳಿಗೆ ಪ್ರತೀ ತಿಂಗಳು ನೀಡಿತ್ತಿರುವ ಬಾಡಿಗೆಯ ಮೊತ್ತ ಒಟ್ಟು ರೂ.4,01,151.00 ಗಳು.

ಕಛೇರಿವಾರು ಬಾಡಿಗೆ ನೀಡುತ್ತಿರುವ ಪೂರ್ಣ ವಿವರಗಳ ಮಾಹಿತಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಹೌದು.

ಉ) ಮಿನಿ ವಿಧಾನ ಸೌಧ ಮತ್ತು ಜಿಲ್ಲಾಮಟ್ಟದ ಕಛೇರಿಗಳ ಕಟ್ಟಡಕ್ಕೆ ಸ್ಥಳ ಗುರುತಿಸಲಾಗಿದೆ.

ಊ) ತೋಟಗಾರಿಕೆ ಇಲಾಖೆಗೆ ಸೇರಿದ ನಗರದ ಪಟ್ರೇನಹಳ್ಳಿ ಗ್ರಾಮದ ಸರ್ವೆ ನಂ.158ರ ವಿಸ್ತೀರ್ಣ 10 ಎಕರೆ 21 ಗುಂಟೆ ಭೂಮಿಯನ್ನು ಜಿಲ್ಲಾ ಕಛೇರಿಗಳ ಸಂಕೀರ್ಣ ಕಟ್ಟಡ ನಿರ್ಮಿಸಲು ಪಡೆಯಲಾಗಿದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 275ಕ್ಕೆ ಸಂಬಂಧಿಸಿದಂತೆ, ಖಾಸಗಿ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಛೇರಿಗಳಿಗೆ ನಿಗಧಿಪಡಿಸಿರುವ ಬಾಡಿಗೆ ವಿವರಗಳು.

ಕ್ರಮ ಸಂಖ್ಯೆ	ಇಲಾಖೆಯ ಹೆಸರು	ಮಾಸಿಕ ಬಾಡಿಗೆ ಮೊತ್ತ
1.	ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ	ರೂ. 6280.00
2.	ಡಾ|| ಬಿ.ಆರ್.ಅಬೇಡ್ಕರ್ ಅಭಿವೃದ್ಧಿ ನಿಗಮ	ರೂ. 8150.00
3.	ಹಿರಿಯ ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಚಿಕ್ಕಬಳ್ಳಾಪುರ	ರೂ. 3570.00
4.	ಜಿಲ್ಲಾ ನೋಂದಣಾಧಿಕಾರಿಗಳು, ಚಿಕ್ಕಬಳ್ಳಾಪುರ	ರೂ. 15700.00
5.	ಹಿರಿಯ ಭೂ ವಿಜ್ಞಾನ, ಖನಿಜ ವಿಭಾಗ ಗಣಿ ಮತ್ತು ಭೂ ವಿಜ್ಞಾನ, ಇಲಾಖೆ ಚಿಕ್ಕಬಳ್ಳಾಪುರ	ರೂ. 8900.00
6.	ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ, ಚಿಕ್ಕಬಳ್ಳಾಪುರ	ರೂ. 9750.00

7.	ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಬಳ್ಳಾಪುರ	ರೂ. 7700.00
8.	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಚಿಕ್ಕಬಳ್ಳಾಪುರ	ರೂ. 16000.00
9.	ಅಬಕಾರಿ ಉಪ ಆಯುಕ್ತರು, ಅಬಕಾರಿ ಅಧೀಕ್ಷಕರ ಕಛೇರಿ, ಚಿಕ್ಕಬಳ್ಳಾಪುರ	ರೂ. 11000.00
10.	ಸಹಾಯಕ ನಿರ್ದೇಶಕರು, ಬಂಡವಾಳ ಹೂಡಿಕೆ ಮಾಹಿತಿ ನಿರ್ವಾಹಣಾ ಮತ್ತು ವಸೂಲಾತಿ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಇಲಾಖೆ, ಚಿಕ್ಕಬಳ್ಳಾಪುರ	ರೂ. 1900.00
11.	ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಚಿಕ್ಕಬಳ್ಳಾಪುರ	ರೂ. 4200.00
12.	ಜಂಟಿ ಕೃಷಿ ನಿರ್ದೇಶಕರು, ಚಿಕ್ಕಬಳ್ಳಾಪುರ	ರೂ. 7000.00
13.	ಜಿಲ್ಲಾ ಸಶಸ್ತ್ರ ಮೀಸಲು ಪಡೆ, ಪೊಲೀಸ್ ಇಲಾಖೆ, ಚಿಕ್ಕಬಳ್ಳಾಪುರ	ರೂ. 7900.00
14.	ಜಿಲ್ಲಾ ಮಲೇರಿಯಾ ಅಧಿಕಾರಿಗಳು, ಚಿಕ್ಕಬಳ್ಳಾಪುರ	ರೂ. 11400.00
15.	ತಾಲ್ಲೂಕು ಆರೋಗ್ಯಾಧಿಕಾರಿಗಳು, ಚಿಕ್ಕಬಳ್ಳಾಪುರ	ರೂ. 12000.00
16.	ಆರ್.ಸಿ.ಹೆಚ್. ಅಧಿಕಾರಿಗಳು, ಚಿಕ್ಕಬಳ್ಳಾಪುರ	ರೂ. 13250.00
17.	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ	ರೂ. 10850.00
18.	ಜಿಲ್ಲಾ ಕ್ಷಯ ರೋಗ ನಿಯಂತ್ರಣಾಧಿ ಕಾರಿಗಳು, ಚಿಕ್ಕಬಳ್ಳಾಪುರ	ರೂ. 11000.00
19.	ಜಿಲ್ಲಾ ಕುಷ್ಠ ರೋಗ ನಿಯಂತ್ರಣಾಧಿ ಕಾರಗಳು, ಚಿಕ್ಕಬಳ್ಳಾಪುರ	ರೂ. 10900.00

20.	ನಗರ ಯೋಜನೆ ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ	ರೂ. 4090.00
21.	ಉದ್ಯೋಗಾಧಿಕಾರಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಚಿಕ್ಕಬಳ್ಳಾಪುರ	ರೂ. 6770.00
22.	ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಛೇರಿ, ಚಿಕ್ಕಬಳ್ಳಾಪುರ	ರೂ. 11200.00
23.	ಹಿರಿಯ ಭೂವಿಜ್ಞಾನಿಗಳು ಅಂತರ್ಜಲ ವಿಭಾಗ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಚಿಕ್ಕಬಳ್ಳಾಪುರ	ರೂ. 8300.00
24.	ಸಹಾಯಕ ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಚಿಕ್ಕಬಳ್ಳಾಪುರ	ರೂ. 6700.00
25.	ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ಚಿಕ್ಕಬಳ್ಳಾಪುರ	ರೂ. 7900.00
26.	ಪ್ರಾಶುಂಪಾಲರು, ಜಿಲ್ಲಾ ತರಬೇತಿ ಸಂಸ್ಥೆ, ಚಿಕ್ಕಬಳ್ಳಾಪುರ	ರೂ. 12200.00
27.	ಕಮಾಡಂಟ್, ಗೃಹ ರಕ್ಷಕ ದಳ, ಚಿಕ್ಕಬಳ್ಳಾಪುರ	ರೂ. 9300.00
28.	ಕಿರಿಯ ಮಹಿಳಾ ಆರೋಗ್ಯ ಸಹಾಯಕರ ತರಬೇತಿ ಕೇಂದ್ರ, ಹಾಗೂ ವಸತಿ ಶಾಲೆ, ಚಿಕ್ಕಬಳ್ಳಾಪುರ	ರೂ. 25200.00
29.	ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನಾ ಉಪ ವಿಭಾಗ, ಚಿಕ್ಕಬಳ್ಳಾಪುರ	ರೂ. 6100.00
30.	ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಆಹಾರ ಮತ್ತು ನಾಗರೀಕ, ಸರಬರಾಜು ನಿಗಮ ನಿಯಮಿತ, ಚಿಕ್ಕಬಳ್ಳಾಪುರ	ರೂ. 6800.00

31.	ಕಾರ್ಮಿಕ ಅಧಿಕಾರಿ, ಚಿಕ್ಕಬಳ್ಳಾಪುರ	ರೂ. 6600.00
32.	ಉಪ ವಿದ್ಯುತ್ ಪರಿವೀಕ್ಷಕರು, ಚಿಕ್ಕಬಳ್ಳಾಪುರ	ರೂ. 4130.00
33.	ಅಬಕಾರಿ, ನಿರೀಕ್ಷಕರು ಹಾಗೂ ಉಪ ನಿರೀಕ್ಷಕರ ಕಛೇರಿ, ಚಾಮರಾಜಪೇಟೆ, ಚಿಕ್ಕಬಳ್ಳಾಪುರ	ರೂ. 7100.00
34.	ಜಿಲ್ಲಾ ವಿಮಾಧಿಕಾರಿಗಳು, ಜಿಲ್ಲಾ ವಿಮಾ ಕಛೇರಿ, ಚಿಕ್ಕಬಳ್ಳಾಪುರ	ರೂ. 5750.00
35.	ವಾಣಿಜ್ಯ ತೆರಿಗೆ ಅಧಿಕಾರಿ, ವಿ.ಎಸ್.ಓ 183, ಚಿಕ್ಕಬಳ್ಳಾಪುರ	ರೂ. 16000.00
36.	ಅಧ್ಯಕ್ಷರು, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಚಿಕ್ಕಬಳ್ಳಾಪುರ	ರೂ. 4800.00
37.	ಜಿಲ್ಲಾ ಯೋಜನಾ ಸಮನ್ವಯಾಧಿ ಕಾರಿಗಳು, ಜನ ಸಂವರ್ಧನಾ ಯೋಜನಾ ಸಂಘ, ಚಿಕ್ಕಬಳ್ಳಾಪುರ	ರೂ. 5000.00
38.	ಜಿಲ್ಲಾ ಆಯುಷ್ ಅಧಿಕಾರಿಗಳು, ಆಯುಷ್ ಇಲಾಖೆ, ಚಿಕ್ಕಬಳ್ಳಾಪುರ	ರೂ. 5970.00
39.	ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಚಿಕ್ಕಬಳ್ಳಾಪುರ	ರೂ. 4400.00
40.	ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ	ರೂ. 7690.00
41.	ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿ, ಚಿಕ್ಕಬಳ್ಳಾಪುರ	ರೂ. 5935.00
42.	ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಚಿಕ್ಕಬಳ್ಳಾಪುರ	ರೂ. 3400.00
43.	ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣಾಧಿಕಾರಿ ಕಛೇರಿ, ಚಿಕ್ಕಬಳ್ಳಾಪುರ	ರೂ. 5400.00

44.	ಕಾರ್ಯಪಾಲಕ ಇಂಜಿನೀಯರ್, ಯೋಜನಾ ವಿಭಾಗ, ಚಿಕ್ಕಬಳ್ಳಾಪುರ	ರೂ. 4360.00
45.	ಪೋಲೀಸ್ ಇನ್ಸ್‌ಪೆಕ್ಟರ್, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಚಿಕ್ಕಬಳ್ಳಾಪುರ	ರೂ. 9750.00
46.	ಜಿಲ್ಲಾ ಖಜಾನಾಧಿಕಾರಿಗಳು, ಚಿಕ್ಕಬಳ್ಳಾಪುರ	ರೂ. 14800.00
47.	ಉಪ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನೆ, ಚಿಕ್ಕಬಳ್ಳಾಪುರ	ರೂ. 8200.00
	ಒಟ್ಟು	ರೂ. **401151.00**

ಬೈರಮಂಗಲ ಕೆರೆ

581 (835) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಜಿಲ್ಲೆ, ಮಾಗಡಿಯ ಬಿಡದಿ, ಹೋಬಳಿಯ ಬೈರಮಂಗಲ ಕೆರೆಯು ಬೆಂಗಳೂರಿನಿದ ಹರಿಯುವ ಕೊಚ್ಚೆ ನೀರಿನಿಂದ ತುಂಬಿಕೊಂಡು ಕಲುಷಿತಗೊಂಡಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಯಾವಾಗಿನಿಂದ ಈ ಸಮಸ್ಯೆ ಇದೆ, ಕೆರೆಯ ಎಡ ಮತ್ತು ಬಲ ನಾಲೆಗಳಲ್ಲಿ ಹೂಳಿನಿಂದ ತುಂಬಿಕೊಂಡಿದ್ದು, ನೈರ್ಮಲ್ಯ ಹದಗೆಟ್ಟಿದ್ದು, ಇದರಿಂದ ಸಾಂಕ್ರಾಮಿಕ ರೋಗಕ್ಕೆ ಕಾರಣವಾಗುತ್ತಿದ್ದು, ಇದನ್ನು ತಡೆಗಟ್ಟಲು ಯಾವ ಯಾವ ಅವಧಿಯಲ್ಲಿ ಯಾವ ಯಾವ ಕ್ರಮ ತೆಗೆದು ಕೊಳ್ಳಲಾಗಿದೆ (ವಿವರ ನೀಡುವುದು);

ಇ) ಸುಮಾರು ವರ್ಷಗಳಿಂದ ಈ ಸಮಸ್ಯೆ ಉಲ್ಬಣಗೊಂಡು ಪರಿಸರ ನಾಶವಾಗುತ್ತಿರುವ ಬಗ್ಗೆ ಯಾವ ಯಾವ ಕ್ರಮಗಳ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಲಾಗುವುದು (ವಿವರ ನೀಡುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಬಂದಿದೆ.

ಆ) ಸುಮಾರು 10–15 ವರ್ಷಗಳಿಂದ ಕೆರೆಯು ಕಲುಷಿತ ಗೊಂಡಿರುವುದು ಕಂಡುಬಂದಿದೆ. ಎಡ ಮತ್ತು ಬಲದಂಡೆ ನಾಲೆಗಳಲ್ಲಿ ಭಾಗಶಃ ಹೂಳು ತುಂಬಿದ್ದು, ಅನುದಾನದ ಲಭ್ಯತೆಗನುಗುಣವಾಗಿ ಪ್ರತಿ ವರ್ಷ ಹೂಳನ್ನು ತೆಗೆಯಲಾಗುತ್ತಿದೆ. ಬೆಂಗಳೂರು ನಗರದ ಭಾಗಶಃ ಕೊಳಚೆ ನೀರು ಮತ್ತು ವೃಷಭಾವತಿ ದಡದಲ್ಲಿರುವ ಕಾರ್ಖಾನೆಗಳಿಂದಲೂ ತ್ಯಾಜ್ಯಗಳು ದ್ರವರೂಪದಲ್ಲಿ ನದಿ ನೀರಿಗೆ ಸೇರ್ಪಡೆಯಾಗಿ ಬೈರಮಂಗಲ ಕೆರೆಗೆ ಬರುತ್ತಿರುವುದರಿಂದ ಕೆರೆಯ ನೀರು ಕಲುಷಿತಗೊಂಡು ನೈರ್ಮಲ್ಯ ಹದಗೆಟ್ಟಿದೆ. ಇದನ್ನು ತಡೆಗಟ್ಟಲು ಕೆರೆ ಅಭಿವೃದ್ಧಿ ಪ್ರಾಧಿಕಾರವು ಮೆಗಾ ಸಿಟಿ ಪ್ರಾಜೆಕ್ಟ್ ಅಥವಾ ಎನ್.ಎಲ್.ಸಿ.ಪಿ. ಯೋಜನೆಯಡಿ ಖಾಸಗಿ ಸಹಭಾಗಿತ್ವ ದೊಂದಿಗೆ ಬಯೋರೇಮಿಡಿಯಲ್ ಪ್ರೊಸೆಸ್ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಿದೆ.

ಇ) ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.

ಅನುಬಂಧ – 1

ವಿಧಾನ ಸಭಾ ಸದಸ್ಯರಾದ ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ: 835 ಕ್ಕೆ ಟಿಪ್ಪಣಿ

ಬೈರಮಂಗಲ ಜಲಾಶಯಕ್ಕೆ ಬೆಂಗಳೂರು ಮಹಾನಗರ ಪಾಲಿಕೆಯ ಭಾಗಶಃ ಹರಿದು ಬರುವ, ಕೊಳಚೆ ನೀರು ಹಾಗೂ ವೃಷಭಾವತಿ ನದಿ ದಡಗಳಲ್ಲಿರುವ ಕಾರ್ಖಾನೆಯ ತ್ಯಾಜ್ಯವು ದ್ರವ ರೂಪದಲ್ಲಿ ಶೇಖರಣೆಯಾಗಿ ನೀರು ಕಲುಷಿತಗೊಂಡಿರುತ್ತದೆ. ನೀರಿನ ಕಲುಷಿತ ಅಂಶಗಳನ್ನು ತಡೆಗಟ್ಟಿ ಶುದ್ಧೀಕರಿಸಲು ಈ ಜಲಾಶಯವನ್ನು ಕೆರೆ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಹಸ್ತಾಂತರಿಸಲಾಗಿದೆ.

ಸದರಿ ಜಲಾಶಯವು ಕಲುಷಿತಗೊಂಡಿರುವುದನ್ನು ಬಯೋ ರೆಮಿಡಿಯಲ್ ಪ್ರೊಸೆಸ್ ಯೋಜನೆ ಅಡಿಯಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರವು ಕೈಗೊಂಳ್ಳುತ್ತಿದೆ. ಈ ಯೋಜನೆಯಡಿ ಕೊಳಚೆ ನೀರನ್ನು ಎಸ್.ಟಿ.ಪಿ. ಘಟಕಗಳಲ್ಲಿ Pollution Control Board normsಗೆ ಅನುಗುಣವಾಗಿ

ಶುದ್ಧೀಕರಿಸಿ, ಕೆರೆಗೆ ನೀರನ್ನು ಬಿಡಲು BWSS & DB ಯವರು ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುವುದಾಗಿ ತಿಳಿದು ಬಂದಿದೆ. ಕೆರೆಗ ಹರಿದು ಬರುವ ಕಳಚೆ ನೀರನ್ನು ಶುದ್ಧೀಕರಿಸಿ ಬೈಪಾಸ್ ಕಾಲುವೆ ಮೂಲಕ ಕೆರೆಯ down strean sideಗೆ ಹರಿಸುವುದರ ಮೂಲಕ ಕೆರೆಯ ನೈರ್ಮಲ್ಯವನ್ನು ಕಾಪಾಡಬಹುದಾಗಿದೆ.

ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಬೈರಮಂಗಲ ಜಲಾಶಯದ ವ್ಯಾಪ್ತಿಯಲ್ಲಿ ವಿವಿಧ ಹಂತಗಳಲ್ಲಿ ನೀರಿನ ಗುಣ ಮಟ್ಟವನ್ನು ಪರೀಕ್ಷಿಸುತ್ತಿದ್ದು, ಸದರಿ ಜಲಾಶಯದಿಂದ ನೀರನ್ನು ವನ್ಯ ಮೃಗಗಳು, ಪಶುಪಕ್ಷಿಗಳು ಹಾಗೂ ನೀರಾವರಿಗೆ ಉಪಯೋಗಿಸುವ ಮೊದಲು, ನೀರನ್ನು ಶುದ್ಧೀಕರಿಸುವುದು ಅಗತ್ಯವಿದೆಯೆಂದು ತಿಳಿಸಿರುತ್ತಾರೆ. (ಗುಣ ಪರೀಕ್ಷೆ ವರದಿ ಆದಾರದಂತೆ) ಸದರಿ ನೀರನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ಸಂಸ್ಕರಿಸಿ ಬಿಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.

ಮುಂದುವರಿದಂತೆ ವೃಷಭಾವತಿ ಕಣಿವೆ ಮೂಲಕ ಬೈರಮಂಗಲ ಕೆರೆಯು ಕಲುಷಿತವಾಗಿರುವ ಬಗ್ಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ರಾಷ್ಟ್ರೀಯ ವಿದ್ಯಾಲಯ-ತಾಂತ್ರಿಕ ಕಾಲೇಜಿನಿಂದ ಅಧ್ಯಯನ ನಡೆಸಿ ವರದಿಯನ್ನು ಪಡೆಯಲಾಗಿದೆ. ಈ ವರದಿಯ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ ಹಾಗೂ ಹೊರವಲಯದಲ್ಲಿ ಉತ್ಪತ್ತಿಯಾಗುವ ಒಳಚರಂಡಿ ತ್ಯಾಜ್ಯ ನೀರು ವೃಷಭಾವತಿ ಕಣಿವೆಯ ಎಡ ಹಾಗೂ ಬಲಭಾಗಗಳಿಂದ ನೇರವಾಗಿ ಸೇರಿ ಬೈರಮಂಗಲ ಕೆರೆ ಕಲುಷಿತವಾಗಿರುವುದು ಗಮನಿಸಿ ಈ ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಟ್ಟ ರಾಜರಾಜೇಶ್ವರಿ ನಗರ ಮತ್ತು ಕೆಂಗೇರಿಗಳಿಂದ ಉತ್ಪತ್ತಿಯಾಗುವ ಒಳಚರಂಡಿ ತ್ಯಾಜ್ಯ ನೀರನ್ನು ಕ್ರೋಢೀಕರಿಸುವ ಸಲುವಾಗಿ ಕೆ.ಎಂ.ಆರ್.ಪಿ. ಯೋಜನೆಯಡಿಯಲ್ಲಿ ಜೆ.ಎನ್.ಎನ್.ಯು.ಆರ್.ಎಂ. ಮತ್ತು ವಿಶ್ವ ಬ್ಯಾಂಕ್ ಸಹಭಾಗಿತ್ವದ ಆರ್ಥಿಕ ನೆರವಿನೊಂದಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗುವುದು ಈ ಪ್ರದೇಶಗಳಿಂದ ಹೊರಹೊಮ್ಮುವ ತ್ಯಾಜ್ಯ ನೀರನ್ನು ಸಂಸ್ಕರಣಾ ಘಟಕಗಳಿಗೆ ಸಾಗಿಸಿ ಸಂಸ್ಕರಿಸಲಾಗುವುದು. ಹಾಗೂ ಈ ಸಂಸ್ಕರಣಾ

ಘಟಕಗಳನ್ನು ಕಾವೇರಿ 4ನೇ ಹಂತ, 2ನೇ ಘಟ್ಟದ ಯೋಜನೆಯಲ್ಲಿ ತೆಗೆದು ಕೊಳ್ಳಲಾಗಿದೆ. ಇದರ ಜೊತೆ ಪರಿಸರ ಕ್ರಿಯಾ ಯೋಜನೆ-ಬಿ ಯೋಜನೆ ಅಡಿಯಲ್ಲಿ ನಗರದ ವೃಷಭಾವತಿ ಕಣಿವೆಯ ಹಾಲಿ ಒಳಚರಂಡಿ ವ್ಯವಸ್ಥೆಯ ಪುನರುಜ್ಜೀವನ ಕೆಲಸಗಳನ್ನು ರೂ.50.00 ಕೋಟಿ ಮೊತ್ತದಲ್ಲಿ ಸಹ ತೆಗೆದುಕೊಳ್ಳಲಾಗುತ್ತಿದೆ.

ಮೇಲೆ ತಿಳಿಸಿರುವ ಎಲ್ಲಾ ಯೋಜನೆಗಳನ್ನು 3 ವರ್ಷ ಅವಧಿಯಲ್ಲಿ ಅಂದರೆ 2013ರೊಳಗೆ ಅನುಷ್ಠಾನಗೊಳಿಸಲು ಯೋಜಿಸಲಾಗಿದ್ದು, ತದನಂತರ ಭೈರಮಂಗಲ ಕೆರೆಗೆ ತ್ಯಾಜ್ಯ ನೀರನ್ನು ಸೇರುವುದನ್ನು ತಡೆಗಟ್ಟಬಹುದು.

ಕ್ರೀಡಾ ಚಟುವಟಿಕೆಗೆ ಪ್ರೋತ್ಸಾಹ

583 (1063) ಶ್ರೀ ಬಸವರಾಜ್ ಪಾಟೀಲ ಅಟ್ಟೂರ (ಬಸವ ಕಲ್ಯಾಣ) : ಮಾನ್ಯ ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕ್ರೀಡೆಗಳನ್ನು ಉತ್ತೇಜಿಸಲು ಮತ್ತು ಪ್ರೋತ್ಸಾಹಿಸಲು ಸರ್ಕಾರದ ಮುಂದಿರುವ ಕ್ರಮಗಳೇನು; ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಭಾಗದ ಕ್ರೀಡಾಪಟುಗಳಿಗೆ ಸರ್ಕಾರ ಯಾವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿದೆ ಹಾಗೂ ಖರ್ಚು ಮಾಡಿದ ಹಣವೆಷ್ಟು;

ಆ) ಜಿಲ್ಲೆಯಲ್ಲಿ ಈಗ ಇರುವ ಸ್ಟೇಡಿಯಂಗಳ ಸಂಖ್ಯೆ ಎಷ್ಟು? ಜಿಲ್ಲೆಯಲ್ಲಿ ಹೊಸದಾಗಿ ಯಾವ ಸ್ಥಳಗಳಲ್ಲಿ ಸ್ಟೇಡಿಯಂಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದು;

ಇ) ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯ ಎಷ್ಟು ಕ್ರೀಡಾ ಪಟುಗಳನ್ನು ಗುರುತಿಸಿ ಅವರುಗಳಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗಿದೆ (ಹೆಸರು ವಿವರಗಳನ್ನು ಒದಗಿಸುವುದು)?

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಕ್ರೀಡೆಗಳನ್ನು ಉತ್ತೇಜಿಸಲು ಮತ್ತು ಪ್ರೋತ್ಸಾಹಿಸಲು ಸುಸಜ್ಜಿತ ಜಿಲ್ಲಾ ಹೆಸರು ಕ್ರೀಡಾಂಗಣವಿದ್ದು, 12ನೇ ಹಣಕಾಸು ಯೋಜನೆಯಡಿ ರೂ. 188.21 ಲಕ್ಷಗಳ ಅಂದಾಜು ವೆಚ್ಚದಲ್ಲಿ ಈಜುಕೊಳ ಹಾಗೂ ರೂ. 175.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸುವ ಯೋಜನೆ ಹೊಂದಿದೆ. ಜಿಲ್ಲೆಯಲ್ಲಿ ಔರಾದ್ ಮತ್ತು ಹುಮ್ನಾಬಾದ್ ತಾಲ್ಲೂಕು ಕ್ರೀಡಾಂಗಣಗಳು ಪೂರ್ಣ ಗೊಂಡಿದ್ದು, ಕ್ರೀಡಾಪಟುಗಳ ತರಬೇತಿ ಹಾಗೂ ಕ್ರೀಡಾ ಸ್ಪರ್ಧೆಗಳಿಗೆ ಉಪಯೋಗಿಸಲಾಗುತ್ತಿದೆ. ಹುಮ್ನಾಬಾದ್ ತಾಲ್ಲೂಕಿನ ಮಾಣಿಕ್ ನಗರದಲ್ಲಿ ಈಜುಕೊಳ ನಿರ್ಮಿಸಿದ್ದು, ಇದಕ್ಕಾಗಿ ಕೇಂದ್ರ ಪುರಸ್ಕೃತ ಯೋಜನೆಯಡಿ ರೂ. 25.00 ಲಕ್ಷವನ್ನು ನೀಡಲಾಗಿದ್ದು, ಈ ಈಜುಕೊಳವನ್ನು ಕ್ರೀಡಾ ಪಟುಗಳು ಉಪಯೋಗಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ್ ಯೋಜನೆಯಡಿ 2009–10ನೇ ಸಾಲಿನಲ್ಲಿ ಶೇಕಡ 10 ರಷ್ಟು ಗ್ರಾಮ ಪಂಚಾಯಿತಿಗಳಿಗೆ ಅಂದರೆ 15 ಗ್ರಾಮ ಪಂಚಾಯಿತಿಗಳಿಗೆ ತಲಾ ರೂ. 1.00 ಲಕ್ಷದಂತೆ ಹಾಗೂ 1 ಬ್ಲಾಕ್ ಪಂಚಾಯಿತಿಗೆ ರೂ. 5.00 ಲಕ್ಷದ ಅನುದಾನದಲ್ಲಿ ಸೇರಿ ಸೇಕಡ 50 ರಷ್ಟು ಅನುದಾನ ಒದಗಿಸಿದ್ದು, ಈ ಯೋಜನೆಯಡಿ ಕ್ರೀಡಾ ಮೂಲಭೂತ ಸೌಲಭ್ಯ ಹಾಗೂ ಆಟದ ಮೈದಾನ ಅಭಿವೃದ್ಧಿ ಪಡಿಸುವ ಯೋಜನೆ ಹೊಂದಲಾಗಿದೆ. 2007ರಲ್ಲಿ ಸ್ಥಾಪಿಸಿರುವ ಜಿಲ್ಲಾ ಕ್ರೀಡಾ ಶಾಲೆಯಲ್ಲಿ 25 ಬಾಲಕ ಹಾಗೂ 25 ಬಾಲಕಿಯರಿಗೆ 5ನೇ ತರಗತಿಯಿಂದ 7ನೇ ತರಗತಿಯವರೆಗೆ ಪ್ರವೇಶ ಕಲ್ಪಿಸಿದ್ದು, ಅಥ್ಲೆಟಿಕ್ಸ್ ಮತ್ತು ವಾಲಿಬಾಲ್ ಕ್ರೀಡೆಗಳಲ್ಲಿ ಪ್ರತಿನಿತ್ಯ ತರಬೇತಿ ನೀಡಲಾಗುತ್ತಿದೆ. ಈ ಕ್ರೀಡಾಪಡುಗಳಿಗೆ ಊಟೋಪಚಾರದ ಹಾಗೂ ವಸತಿ ಸೌಲಭ್ಯವನ್ನು ಉಚಿತವಾಗಿ ಕಲ್ಪಿಸಲಾಗಿದ್ದು ಅಂದಾಜು ರೂ. 130.00 ಲಕ್ಷದ ವೆಚ್ಚದಲ್ಲಿ ಕ್ರೀಡಾ ಶಾಲೆಯ ನೂತನ ಕಟ್ಟಡ ನಿರ್ಮಿಸಲು ಯೋಜಿಸಲಾಗಿದೆ.

ಕಳೆದ 3 ವರ್ಷಗಳ ಅವಧಿಯಲ್ಲಿ ಈ ಭಾಗದ ಕ್ರೀಡಾಪಟುಗಳಿಗೆ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿದ್ದು, ಅವುಗಳಿಗೆ ಖರ್ಚು ಮಾಡಿದ ಹಣದ ವಿವರ ಈ ಕೆಳಕಂಡಂತಿದೆ:

1. ಜಿಲ್ಲಾ ನೆಹರು ಕ್ರೀಡಾಂಗಣ: ರೂ. 15.10 ಲಕ್ಷ
2. ಔರಾದ್ ತಾಲ್ಲೂಕು ಕ್ರೀಡಾಂಗಣ ರೂ. 33.00 ಲಕ್ಷ
3. ಹುಮ್ನಾಬಾದ್ ತಾಲ್ಲೂಕು ಕ್ರೀಡಾಂಗಣ ರೂ. 35.00 ಲಕ್ಷ
4. ಹುಮ್ನಾಬಾದ್ ತಾ: ಮಾಣಿಕ್ ನಗರದಲ್ಲಿ ರೂ. 25.00 ಲಕ್ಷ ಈಜುಕೊಳ:

ಆ) ಜಿಲ್ಲೆಯಲ್ಲಿ ಹೊಸದಾಗಿ ನಿರ್ಮಿಸಲಾಗುತ್ತಿರುವ ಕ್ರೀಡಾಂಗಣಗಳು:

1) ಜಿಲ್ಲಾ ಒಳಾಂಗಣ ಕ್ರೀಡಾಂಗಣ, ಬೀದರ್
2) ಜಿಲ್ಲಾ ಮಟ್ಟದ ಈಜುಕೊಳ, ಬೀದರ್
3) ತಾಲ್ಲೂಕು ಕ್ರೀಡಾಂಗಣ, ಬಸವಕಲ್ಯಾಣ

ಇ) ಗ್ರಾಮೀಣ ಕ್ರೀಡೆ ಹಾಗೂ ಪಂದ್ಯಗಳಡಿಯಲ್ಲಿ 2006-07ನೇ ಸಾಲಿನಲ್ಲಿ 10 ಕ್ರೀಡಾಪಟುಗಳನ್ನು ಗುರುತಿಸಿ ತಲಾ ರೂ. 5,000 ದಂತೆ ಒಟ್ಟು ರೂ. 50,000ಗಳ ವೆಚ್ಚದಲ್ಲಿ ಜಿಲ್ಲಾ ಕ್ರೀಡಾ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಗಿದೆ. ವಿವರಗಳು ಕೆಳಕಂಡಂತಿದೆ.

ಹೆಸರು	ತಾಲ್ಲೂಕು	ಕ್ರೀಡೆ	ಮೊತ್ತ
ಸಂಪತ್ ಕಲ್ಯಾಣ ಶೆಟ್ಟಿ	ಬೀದರ್	ಸ್ಕೈಕ್ಲಿಂಗ್	5,000
ಕು. ನೀಲಮ್ಮ ಮಲ್ಲಿಗೆವಾಡ	ಬೀದರ್	ಸ್ಕೈಕ್ಲಿಂಗ್	5,000
ವಿಶಾಲ ಮಾಳಗಿ	ಬೀದರ್	ಸ್ಕೈಕ್ಲಿಂಗ್	5,000
ಅಂಬಿಕಾ ರಾಜಕುಮಾರ್	ಬೀದರ್	ಸ್ಕೈಕ್ಲಿಂಗ್	5,000
ಕು.ರೇಣುಕ ರಾಜಕುಮಾರ್	ಬೀದರ್	ಸ್ಕೈಕ್ಲಿಂಗ್	5,000
ಸುನಿಲ್ ಸಾಕಳೆ	ಬೀದರ್	ಸ್ಕೈಕ್ಲಿಂಗ್	5,000
ಸಂದೀಪ ಬೀರಾದರ್	ಬೀದರ್	ಸ್ಕೈಕ್ಲಿಂಗ್	5,000
ರೇಣುಕ ಮಾದವರಾವ್	ಬೀದರ್	ಅಟೋಟ್	5,000
ವಿಲಾಸ ಅರ್ಜುನ	ಹುಮ್ನಾಬಾದ್	ಅಟೋಟ್	5,000
ಆಕಾಶ್ ರಾಜಪ್ಪ	ಬೀದರ್	ಅಟೋಟ್	5,000

2007-08 ಮತ್ತು 2008-09ನೇ ಸಾಲಿನ ಗ್ರಾಮೀಣ ಕ್ರೀಡೆ ಹಾಗೂ ಪಂದ್ಯಗಳಡಿಯಲ್ಲಿ ಪ್ರತಿ ವರ್ಷಕ್ಕೆ 10 ಕ್ರೀಡಾಪಟುಗಳನ್ನು ಗುರುತಿಸಿ ಕ್ರೀಡಾ ಪ್ರಶಸ್ತಿಗಳನ್ನು ನೀಡಲು ಕ್ರಮವಹಿಸಲಾಗುತ್ತಿದೆ.

ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನು

590 (1050) ಶ್ರೀ ಚಿಕ್ಕನಗೌಡ್ರ ಸಿದ್ಧನಗೌಡ ಈಶ್ವರಗೌಡ : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ತಾಲ್ಲೂಕಿನ ಗರಗ, ಮಮ್ಮಿಗಟ್ಟಿ ಹಾಗೂ ಅಕ್ಕ ಪಕ್ಕದ ಗ್ರಾಮದಲ್ಲಿ ಈ ಹಿಂದೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರು ಭೂಸ್ವಾಧೀನಪಡಿಸಿ ಕೊಂಡಿರುವ ಜಮೀನಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಎಷ್ಟು;

ಆ) ಅದರಲ್ಲಿ ಉದ್ದಿಮೆ ಸ್ಥಾಪನೆಗಾಗಿ ಮಂಜೂರು ಮಾಡಿರುವ ಹಾಗೂ ವಸತಿ ಸೌಲಭ್ಯಕ್ಕಾಗಿ ಕಾಯ್ದಿರಿಸಿ ಗ್ರಾಮ, ಸರ್ವೆ ನಂಬರ್ ಮತ್ತು ವಿಸ್ತೀರ್ಣ ಮತ್ತು ವಸತಿ ಉಪಯೋಗಕ್ಕಾಗಿ ಕಾಯ್ದಿರಿಸಿದ ಜಮೀನಿನಲ್ಲಿ ಇಲ್ಲಿಯವರೆಗೆ ಮಂಜೂರಾತಿ ಮಾಡಿರತಕ್ಕಂತಹ (ವೈಯಕ್ತಿಕ ಸಂಘ ಸಂಸ್ಥೆಗಳು) ಹಾಗೂ ಮಂಜೂರಾದ ಜಮೀನಿನ ಗ್ರಾಮ, ಸರ್ವೆ ನಂಬರ್, ವಿಸ್ತೀರ್ಣವೆಷ್ಟು;

ಇ) ಉಳಿಕೆಯಾಗಿದ್ದಲ್ಲಿ, ಗ್ರಾಮ, ಸರ್ವೆ ನಂಬರ್, ವಿಸ್ತೀರ್ಣ ಎಷ್ಟು, ಮಂಜೂರುದಾರರಿಗೆ ಯಾವ ಮಾನದಂಡ, ಅರ್ಹತೆ ಆಧಾರದಲ್ಲಿ ನೀಡಲಾಗಿದೆ (ವಿವರಗಳನ್ನು ನೀಡುವುದು);

ಈ) ಇನ್ನೂ ಜಮೀನು ಮಂಜೂರಾತಿಗೆ ಲಭ್ಯವಿದೆಯೇ;

ಉ) ಲಭ್ಯವಿದ್ದಲ್ಲಿ ಮಂಜೂರಾತಿಗೆ ಕೋರಿ ಬಂದ ವಿನಾಯಕ್ ಗೃಹ ನಿರ್ಮಾಣ ಸಹಕಾರಿ ಸಂಘ (ನಿಯಮಿತ), ಧಾರವಾಡ ಇವರಿಗೆ ಜಮೀನು ಮಂಜೂರಾತಿ ನೀಡಲು ಅವಕಾಶ ಇದೆಯೇ;

ಊ) ಅವಕಾಶ ಇದ್ದಲ್ಲಿ ಯಾವಾಗ ಮಂಜೂರಾತಿ ನೀಡಲಾಗುವುದು, ಸದರಿ ಅರ್ಜಿಯನ್ನು ತಿರಸ್ಕರಿಸಿದ್ದಲ್ಲಿ ಯಾವ ಕಾರಣಕ್ಕಾಗಿ ತಿರಸ್ಕರಿಸಲಾಗಿದೆ. ತಿರಸ್ಕರಿಸಿದ ಬಗ್ಗೆ ಹಿಂಬರವನ್ನು ನೀಡಲಾಗಿದೆಯೇ;

ಋ) ಮಂಜೂರಾತಿಯನ್ನು ದಿನಾಂಕ ಹಾಗೂ ಕ್ರಮಾಂಕವಾರು ನೀಡಲಾಗಿದೆಯೇ ಅಥವಾ ವಿವೇಚನಾತ್ಮಕವಾಗಿ ನೀಡಲಾಗಿದೆಯೇ (ವಿವರ ನೀಡುವುದು);

ಶ್ರೀ ಮುರುಗೇಶ್ ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಧಾರವಾಡ ತಾಲ್ಲೂಕಿನ ಗರಗ, ಮಮ್ಮಿಗಟ್ಟಿ ಹಾಗೂ ಅಕ್ಕಪಕ್ಕದ ಗ್ರಾಮಗಳಾದ ಬೇಲೂರು, ಮಮ್ಮಿಗಟ್ಟಿ, ನೀರಲಕಟ್ಟೆ, ಗುಂಗುರಗಟ್ಟಿ ನರೇಂದ್ರ ಗ್ರಾಮಗಳಲ್ಲಿನ ಜಮೀನುಗಳನ್ನು ಬೇಲೂರು ಕೈಗಾರಿಕಾ ಪ್ರದೇಶದ 1ನೇ ಹಂತ, 2ನೇ ಹಂತ, 3ನೇ ಹಂತ ಹಾಗೂ ವಸತಿ ಸೌಲಭ್ಯಕ್ಕಾಗಿ 2884 ಎಕ್ಕರೆ 13 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಲಾಗಿದೆ. ಸ್ವಾಧೀನಪಡಿಸಿದ ಜಮೀನಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣವನ್ನು ತೋರಿಸುವ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಸದರಿ ಸ್ವಾಧೀನಪಡಿಸಿಕೊಂಡಿರುವ 2884 ಎಕರೆ 13 ಗುಂಟೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಅಭಿವೃದ್ಧಿ ಪಡಿಸಿ ವಿವಿಧ ಕೈಗಾರಿಕೋದ್ಯಮಿಗಳಿಗೆ ಹಂಚಿಕೆ ಮಾಡಲಾಗಿದೆ. ಸ್ವಾಧೀನಪಡಿಸಿದ ಜಮೀನಿನ ಪೈಕಿ 242 ಎಕರೆ ಜಮೀನನ್ನು ವಸತಿ ಉಪಯೋಗಕ್ಕಾಗಿ ಕಾಯ್ದಿರಿಸಿರುವುದರಲ್ಲಿ ಇಲ್ಲಿಯವರೆಗೆ 11 ಸಂಘ ಸಂಸ್ಥೆ ಹಾಗೂ ಇತರೆ ಉದ್ಯಮಿಗಳಿಗೆ ಹಂಚಿಕೆ ಮಾಡಲಾಗಿದೆ. ವಿವರಗಳಿಗೆ ಅನುಬಂಧ–2 ಲಗತ್ತಿಸಿದೆ.

ಇ) ಸ್ವಾಧೀನಪಡಿಸಿರುವ ಜಮೀನಿನಲ್ಲಿ ಪ್ರಸ್ತುತ ಹಂಚಿಕೆಗೆ ಜಮೀನು ಲಭ್ಯವಿರುವುದಿಲ್ಲ.

ಕೈಗಾರಿಕೆಗಳಿಗೆ ಜಮೀನನ್ನು ಹಂಚಿಕೆ ಮಾಡುವಾಗ ರಾಜ್ಯ ಉನ್ನತ ಮಟ್ಟದ ಸಮಿತಿ, ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ, ಜಿಲ್ಲಾಮಟ್ಟದ ಏಕಗವಾಕ್ಷಿ ಸಮಿತಿ ಹಾಗೂ ಕೈಗಾರಿಕಾ ಪ್ರಾದೇಶಾಭಿವೃದ್ಧಿ ಮಂಡಳಿ ಸಭೆಯಲ್ಲಿ ಮತ್ತು ಮಂಡಳಿಯ ಹಂಚಿಕೆ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡ ಮೇರೆಗೆ ಜಮೀನು ಹಂಚಿಕೆ ಮಾಡಲಾಗಿದೆ. ಹಂಚಿಕೆ ಮಾಡಲು ಅನುಸರಿಸಲಾಗುತ್ತಿರುವ ಮಾನದಂಡದ ಬಗ್ಗೆ ಅನುಬಂದ–3 ರಲ್ಲಿ ವಿವರಿಸಲಾಗಿದೆ.

ಈ) ಮಂಜೂರಾತಿಗೆ ಹಾಲಿ ಸ್ಥಿತಿಯಲ್ಲಿ ಯಾವುದೇ ಜಮೀನು ಲಭ್ಯವಿರುವುದಿಲ್ಲ.

ಉ) ಜಮೀನು ಹಂಚಿಕೆಗೆ ಲಭ್ಯವಿಲ್ಲದೆ ಇರುವುದರಿಂದ ಮೆ: ವಿನಾಯಕ ಗೃಹ ನಿರ್ಮಾಣ ಸಹಕಾರ ಸಂಘ (ನಿಯಮಿತ) ಧಾರವಾಡ ಇವರಿಗೆ ಮಂಜೂರಾತಿಗೆ ಹಾಲಿ ಸ್ಥಿತಿಯಂತೆ ಅವಕಾಶವಿರುವುದಿಲ್ಲ.

ಊ) ಹಂಚಿಕೆ ಮಾಡಲು ಹಾಲಿ ಸ್ಥಿತಿ ಯಾವುದೇ ಜಮೀನು ಲಭ್ಯವಿರುವುದಿಲ್ಲ. ಮಂಡಳಿಯು ಸ್ವತಃ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ತೀರ್ಮಾನ ತೆಗೆದುಕೊಂಡ ಕಾರಣ ಸದರಿ ಮೆ: ವಿನಾಯಕ ಗ್ರಹ ನಿರ್ಮಾಣ ಸಹಕಾರ ಸಂಘ (ನಿಯಮಿತ) ಧಾರವಾಡ ಇವರ ಅರ್ಜಿಯ ಬಗ್ಗೆ ಕ್ರಮ ಕೈಗೊಳ್ಳಲು ಬರುವುದಿಲ್ಲವೆಂದು ದಿನಾಂಕ: 01.04.2009 ರಂದು ಸದರಿಯವರಿಗೆ ಹಿಂಬರಹ ನೀಡಲಾಗಿದೆ.

ಋ) ಮಂಜೂರಾತಿಯನ್ನು ಕ್ರಮಾಂಕವಾರು ಅರ್ಹತೆ ಮೇರೆಗೆ ನೀಡಲಾಗಿದೆ. (ಇ) ರಲ್ಲಿ ವಿವರಿಸಿರುವಂತೆ ವಿವಿಧ ಸಭೆ ನಡವಳಿಗಳಲ್ಲಿ ಅನುಮೋದಿಸಿರುವಂತೆ ಮಂಜೂರಾತಿ ನೀಡಲಾಗಿದೆ. (ಅನುಬಂಧ-2 ರಂತೆ).

ಅನುಬಂಧ-1

ಮುಮ್ಮಿಗಟ್ಟಿ ಹಾಗೂ ಅದರ ಸುತ್ತಮುತ್ತಲಿನ ಗ್ರಾಮಗಳಲ್ಲಿ ಭೂಸ್ವಾಧೀನಕ್ಕೆ ಅಳವಡಿಸಿದ ಜಮೀನುಗಳ ವಿವರ ಪತ್ರಿಕೆ

ಅ. ನಂ	ಅಧಿಸೂಚನೆ ಕ್ರ ಮತ್ತು ದಿನಾಂಕ	ಗ್ರಾಮದ ಹೆಸರು	ಭೂಸ್ವಾಧೀನಕ್ಕೆ ಅಳವಡಿಸಿದ ಜಮೀನುಗಳ ಸ.ನಂ.	ಭೂಸ್ವಾಧೀನದ ಒಟ್ಟು ಕ್ಷೇತ್ರ ಎ-ಗುಂ.	ಶರಾ
1	2	3	4	5	6
1	ಕ್ರಸಿಐ:318: ಎಸ್‌ಪಿಕ್ಯೂ: 1982	ಬೇಲೂರು	236 ರಿಂದ 239, 241 ರಿಂದ 350	389–22	
	1–3–85 ರಾಜ್ಯಪತ್ರದಲ್ಲಿ ಪ್ರಕಟಿತ ದಿ. 8–8–1985	ಮುಮ್ಮಿಗಟ್ಟಿ	72 ರಿಂದ 75, 81 ರಿಂದ 83, 88, 89.	98–13	
			ಒಟ್ಟು	487–35	
2	ಕ್ರಸಿಐ:220:	ಬೇಲೂರು	70 ರಿಂದ 80,	185–31	

	ಎಸ್‌ಪಿಕ್ಯೂ: 1982 11–3–85 ರಾಜ್ಯಪತ್ರದಲ್ಲಿ ಪ್ರಕಟಿತ ದಿ. 8–8–1985		153 ರಿಂದ 158. 209 ರಿಂದ 223		
		ಮುಮ್ಮಿಗಟ್ಟಿ	163 ರಿಂದ 174	162–14	
		ನೀರಲಕಟ್ಟಿ	167 ರಿಂದ 214	118–14	
		ಗುಂಗರ ಗಟ್ಟಿ	253 ರಿಂದ 256	118–00	
			ಒಟ್ಟು	**884–19**	
3	ಕ್ರ.ಸಿಐ:6: ಎಸ್‌ಪಿಕ್ಯೂ:91 1–8–92	ಮುಮ್ಮಿಗಟ್ಟಿ	212 ರಿಂದ 218, ಮತ್ತು 232 ರಿಂದ 235	116–04	
4	ಕ್ರ.ಸಿಐ:141: ಎಸ್‌ಪಿಕ್ಯೂ:91 1–2–93 ರಾ.ಪ್ರ. ದಿನಾಂಕ: 1–4–93	ಬೇಲೂರ	224 ರಿಂದ 231, 233 ರಿಂದ 235. 240 ರಿಂದ 246, 329 ರಿಂದ 353	336–21	
5	ಕ್ರ.ಸಿಐ:141: ಎಸ್‌ಪಿಕ್ಯೂ:91 1–2–93 ರಾಜ್ಯಪತ್ರದಲ್ಲಿ ಪ್ರಕಟಿತ ದಿ. 1–4–1993	ಮುಮ್ಮಿಗಟ್ಟಿ	60,65,66, 72,76,77, 89,84	284–17	
6	ಕ್ರ.ಸಿಐ:141: ಎಸ್‌ಪಿಕ್ಯೂ:91 20–12–94 ರಾಜ್ಯಪತ್ರದಲ್ಲಿ ಪ್ರಕಟಿತ ದಿ. 6–4–1995	ನರೇಂದ್ರ	335 ರಿಂದ 341, 343 ರಿಂದ 352,361 ರಿಂದ 366	161–06	
7	ಕ್ರ.ಸಿಐ:141:				

	ಎಸ್‌ಪಿಕ್ಯೂ:91 20-12-94 ರಾಜ್ಯಪತ್ರದಲ್ಲಿ ಪ್ರಕಟಿತ ದಿ. 6-4-1995	ಮುಮ್ಮಿಗಟ್ಟಿ	201 ರಿಂದ 211	81-06	
8	ಕ್ರಸಿಐ:94: ಎಸ್‌ಪಿಕ್ಯೂ:98 3-3-99 ರಾಜ್ಯಪತ್ರದಲ್ಲಿ ಪ್ರಕಟಿತ ದಿನಾಂಕ: 11-3-99	ನೀರಲಕಟ್ಟಿ	158	2-21	
9	ಕ್ರಸಿಐ:300: ಎಸ್‌ಪಿಕ್ಯೂ:98 16-5-99 ರಾಜ್ಯಪತ್ರದಲ್ಲಿ ಪ್ರಕಟಿತ ದಿ.21-5-1999	ಮುಮ್ಮಿಗಟ್ಟಿ	111.112	15.05	
10	ಕ್ರಸಿಐ:225: ಎಸ್‌ಪಿಕ್ಯೂ:99 31-12-99 ರಾಜ್ಯಪತ್ರದಲ್ಲಿ ಪ್ರಕಟಿತ ದಿ.31-12-1999	ಮುಮ್ಮಿಗಟ್ಟಿ	23 ರಿಂದ 24	149-22	
11	ಕ್ರಸಿಐ:225: ಎಸ್‌ಪಿಕ್ಯೂ:99 22-6-2000 ರಾಜ್ಯಪ ದಿ.22-6-2000	ಮುಮ್ಮಿಗಟ್ಟಿ	32,33,38, 48,49,56 ರಿಂದ 59,114,115, 117,118,125 ರಿಂದ 240, 248 ರಿಂದ 263	365-17	
			ಒಟ್ಟು	**2884-13**	

ಅನ್ನೆಕ್ಷರ್ – II

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

ನರೇಂದ್ರ – ಮಮ್ಮಿಗಟ್ಟಿ ಜಮೀನಿನಲ್ಲಿ ಜಮೀನು ಹಂಚಿಕೆ ಮಾಡಿದ ಘಟಕಗಳ ವಿವರಗಳು

ಕ್ರಮ ಸಂಖ್ಯೆ	ಘಟಕದ ಹೆಸರು	ಹಂಚಿಕೆ ಮಾಡಿದ		ಮಂಜೂರಾತಿ ನೀಡಿದ ಪ್ರಾಧಿಕಾರ
		ಕ್ಷೇತ್ರ ಎ–ಗು.	ಸರ್ವೆ ನಂ.	
1	2	3	4	5
1.	ಮೆ: ಕರ್ನಾಟಕ ಸರಕಾರದ ಐ.ಟಿ.ಐ. ಕಾಲೇಜ್.	4–20	221(ಪಿ) 237	ಮಂಡಳಿ ಸಭೆಯ ದಿನಾಂಕ: 18–09–1997
2.	ಮೆ: ಇಂಡಿಯನ್ ಆಯಿಲ್ ಕಾರ್ಪೋರೇಷನ್.	3–00	210(ಪಿ) & 121	ಮಂಡಳಿ ಸಭೆಯ ದಿನಾಂಕ: 25–03–2000
3.	ಮೆ: ಸಂತೋಷ ಲಾರಿ ಸರ್ವಿಸ್.	0–10	208	ಡಿ.ಎಲ್.ಇ.ಸಿ, ಧಾರವಾಡ ದಿನಾಂಕ: 23–02–2002
4.	ಮೆ: ನವೋದಯ ಹೌಸಿಂಗ್ ಸೊಸೈಟಿ.	50–00	–	ಮಂಡಳಿ ಸಭೆಯ ದಿನಾಂಕ: 17–07–2003
5.	ಮೆ: ಹೋಟೆಲ್ ವಿಶ್ವಾ, ಧಾರವಾಡ.	5–00	208	ಮಂಡಳಿಯ ಕೇಂದ್ರ ಕಛೇರಿ ದಿನಾಂಕ: 7–06–2005

6.	ಮೆ: ಕೆ.ಎಸ್.ಎಸ್. ಐ.ಡಿ.ಸಿ. ಹುಬ್ಬಳ್ಳಿ (ಕಾಯಕನಗರ).	35–24	225	ಕರ್ನಾಟಕ ಸರ್ಕಾರ ದಿನಾಂಕ: 25–07–2005
7.	ಮೆ: ಕೆ.ಪಿ.ಟಿ.ಸಿ.ಎಲ್.	28–30	201(ಪಿ); 211(ಪಿ)	ದಿನಾಂಕ: 21–10–2005
8.	ಮೆ: ವಿಶ್ವ ಭಾರತಿ ಎಜ್ಯೂಕೇಶನ್.	81–00	ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ಜಮೀನಿನ ಹಂಚಿಕೆ ಪತ್ರ ಮತ್ತು ಸ್ವಾಧೀನ ಪತ್ರ ನೀಡಿರುವುದಿಲ್ಲ.	ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆ ದಿನಾಂಕ: 28–01–2009.
9.	ಮೆ: ಎಸ್.ಡಿ.ಎಮ್.	25–00	-do-	ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆ ದಿನಾಂಕ: 28–01–2009.
10.	ಮೆ: ರಾಷ್ಟ್ರೋತ್ಥಾನ ಪರಿಷತ್ ವಿದ್ಯಾ ಕೇಂದ್ರ.	5–00	-do-	ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆ ದಿನಾಂಕ: 28–01–2009.

ಅನುಬಂಧ – 3

KARNATAKA INDUSTRIES FACILITATION ACT 2002

Chapter – II

3. State High Level Clearance Committee.-

(1) The State Government may by notification constitute a single point clearance committee called on State High Level Clearance Committee consisting of such members as may be specified therein.

(2) The Committee shall examine and consider the proposals received from any entrepreneur relating to any industrial and other projects to be set up in the State, with an investment of rupees fifty crores and above in each case.

(3) Member of the Committee shall personally attend the meeting and in case he is unable to attend the meeting he may depute a senior level officer to attend the meeting with a written authorization to take apporiate decision in the meeting.

4. Functions of the Committee.-

(1) The Committee shall meet at such times and in such places and shall adopt such procedure to transact its business as may be prescribed.

(2) The Committee shall examine the proposals for setting up any industrial undertakings referred to in sub-section (2) of section 3 and shall take a decision and communicate its decision to the entrepreneur and the concerned departments or aurhorities within such time as may be prescribed.

5. Powers of the Committee.- The Committee shall be the final authority in approvels for the projects placed before it. The approvals given by the Committee shall be binding o all

the concerned departments or authorities and such departments or authorities, shall issue the required clearances within the stipulated time and subject to compliances by the entrepreneur understaking of the provisions of the applicable Central or State Acts and the rules made there under.

6. State Level Single Window Clearance Committee.-

(1) The State Government may by notification constitute a single window Clearance Committee' cinsisting of such members as may be specified therein.

(2) The State Level Single Window Clearance Committee shall examine and consider proposal received from the entrepreneurs relating to industrial and other projecta to be set up in the State with an investment of more than three crores rupees and less than rupees fifty crores each.

(3) A member of the Committee shall personally attend the meetimgs and in case he is unable to attend the meetng he may depute a senior level officer with a written authorization to take appropriate decision in the meeting.

7. Functions of the Committee.- (1) The State Level Single Window Clearance Committee shall meet at such times and such places and shall adopt such procedures to transact its business as may be prescribed.

(2) The State Level Single window Clearance Committee shall examine the proposals for setting up industrial undertakings referred to in sub-sectin (2) of section 6 and shall take a decision and communicate its decision to the entrepreneur and the department or authorities concerned within one week of the meeting.

8. Powers of the Committee.- The State Level Single Window Clearance Committee shall be the final authority in granting approvals for the projects pleaced before it. The approvals given by the Committee shall be binding on the departments or authorities concerned and such departments or authorities shall issue the required clearance within the stipulated time subject to compliances by the entrepreneurs with the provisions of the applicable Central or State Acts or rules made thereunder.

9. District level Single Windoe Clearance Committee.-

(1) The State Government, may, by notification constitute a single point clearance committee at the district level called the 'District Level Single Window Clearance Committee' consisting of such members, as may be prescribed. The District Level Single Window Clearance.

Committee shall examine and consider proposal received from entrepreneurs relating to industrial projects with the investment of upto rupees three crores each to be up in the respective districts.

(2) A member of the Committee shall attend the meetings personally and in case he is unable to attend the meeting ne may depute a senior level officer with the written authorization to take appropriate decision in the meeting.

10. Function of the Committee.-

(1) The District Level Single Window Clearance Committee shal meet at such times and such places and shall adopt such procedures to transact its business as may be prescribed.

(2) The District Level Single Window Clearance Committee shall examine the proposals for setting up industrial

understakings referred to in sub-section (1) of section 9 and shall take a decision and communicate its decision to the entrepreneurs and the departments or authorities concerned within such time as may be prescribed.

11. Powers of the Committee.-

The District Level Single window Clearance Committee shall be the final authority in granting of approvals for the projects placed before it. The approvals given by the Committee at the district level shall be binding on the departments or authorities concerned and such department or authorities shall issue the required clearance within the stipulated time subject to compliances by the entrepreneur of provisions of the applicable Central or State Acts and the rules made thereunder.

12. Appointment of Nodal Agency.- (1) The State Government may, by notification, appoint the Karnataka Udyoga Mitra as a 'Nodal Agency' at the State level and the 'District Industries Centres' as the 'District Nodal Agency' at the district level to undertake investment promotional activities and - to render necessary guidance and assistance to entrepreneurs to set up industrial undertaking in the State.

13. Functions of the Nodal Agency.-

(1) The functions of Nodal Ageneсy at the district level shall among others includes the following:

(a) to carryout investment promotional activities,

(b) to tender necessary assistance in policy formulation for industrial progress,

(c) to guide and assist entrepreneurs to set up industries in the State,

(d) to issue combined application from to the entrepreneurs and also to receive the forms from them and to arrange required clearances from departments and authorities within the stipulated time.

(e) to aprovide secretarial support to the High level Clearance Committee, State level Single Window Clearance Committee and the District level Single Window Clearence Committee.

(f) to promote environment friendly and clearer technology and production practices,

(g) to perform any other function as may be entrusted to it by the State Governments.

(2) The State level Nodal agency shall also perform function referred to in sub-section (1) and in addition prepare and regularly update an entrepreneurs guide providing complete particulars relating to,-

(i) State and Central ndustrial policies,

(ii) Procedure to obtain the required clearances from the department and authorities

(iii) information on industrial status and advantages existing in the State.

(iv) salient features of Acts and the rules made thereunder applicable to an industrial undertaking, and

(v) any other information useful to the entrepreneurs.

Extract of the Proceedings

ANY OTHER SUB. NO.1 **290th meeting dt.6-10-08**

Re-constitution of land Allotment Committee in KIADB.

On enquiry by the Chairman, it was informed that the Board in its meeting held on 24-7-1999 has constituted a Land Allotment Committee under the Chairmanship of CEO&EM, KIADB and comprising of the following Officers, for the purpose of allotment of land to SSI units in Bangalore Urban and Rural Districts:

1. Controller of Finance, KIADB
2. Chief Development Officer, KIADB
3. Jt. Director, DIC of concerned District.
4. Representative of KSFC
5. Concerned Dev. Officer, KIADB
6. Concerned Asst. Secretary, KIADB (Convener)

It was further informed that the Board in its meeting held on 6-12-2005 has specified the norms to be followed while recommending allotment of lands to SSI units in Bangalore Rural and Urban Districts.

After detailed discussions, it was resolved and reiterated to continue to follow the norms specified by the Board in its meeting held on 6-12-2005 for allotment of lands to SSI units in Banfalore Rural and Urban Districts. It was further resolved to re-constitute the Allotment Committee under the Chairmanship of the CEO&EM, KIADB and with the following Officers:

1. Spl. Dy. Commissioner, KIADB
2. Controller of Finance, KIADB
3. Chief Development Officer, KIADB
4. Jt. Director, DIC of concerned District.
5. Project Officer, KIADB
6. Concerned Development Officer, KIADB.
7. Secretary, KIADB (Convener)

The Committee to examine and consider proposals as per the approved guidelines.

ನೆರೆ ಪ್ರವಾಹದ ಸಂತ್ರಸ್ಥರ ನೆರವಿನ ವಿವರದ ಬಗ್ಗೆ

593 (1233) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2009ರ ಅಕ್ಟೋಬರ್ ಮಾಹೆಯಲ್ಲಿ ಉಂಟಾದ ಬಾರಿ ಪ್ರವಾಹದ ಸಂಬಂಧ ಸಂತ್ರಸ್ಥರ ನೆರವಿಗಾಗಿ ವಿವಿಧ ಮೂಲಗಳಿಂದ ಹರಿದು ಬಂದಿರುವ ನೆರವಿನ ಪ್ರಮಾಣವೆಷ್ಟು; (ದವಸ ಧಾನ್ಯ, ವಸ್ತ್ರ, ಹಣ, ಮನೆಗಳ ನಿರ್ಮಾಣದ ಘೋಷಣೆ, ಇತ್ಯಾದಿಗಳ ಪೂರ್ಣ ವಿವರ ಒದಗಿಸುವುದು);

ಆ) ಸಾರ್ವಜನಿಕರಿಂದ ಸ್ವೀಕರಿಸಲಾದ ವಂತಿಗೆಗಳ ನಿರ್ವಹಣೆಯ ಹೊಣೆಯನ್ನು ಸರ್ಕಾರವು ಯಾರಿಗೆ ವಹಿಸಿದೆ, ಹಾಗೂ ದುರುಪಯೋಗವಾಗದಂತೆ ತಡೆ ಹಿಡಿಯಲು ತೆಗೆದುಕೊಂಡ ಕ್ರಮಗಳೇನು;

ಇ) ಈವರೆಗೆ ಸಂಗ್ರಹಿಸಲಾದ ವಂತಿಗೆಯಲ್ಲಿ ಆದ ವೆಚ್ಚವೆಷ್ಟು, ಯಾವುದಕ್ಕಾಗಿ ಇದನ್ನು ವಿನಿಯೋಗಿಸಲಾಗಿದೆ (ಪೂರ್ಣ ವಿವರ ಒದಗಿಸುವುದು)?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ವಿವಿಧ ಮೂಲಗಳಿಂದ ಅನೇಕ ರೀತಿಯ ದಿನಸಿಗಳಾದ ಅಕ್ಕಿ, ಬೇಳೆ, ಗೋದಿಹಿಟ್ಟು, ಪ್ಲಾಸ್ಟಿಕ್ ಸಾಮಾನು, ಅಡುಗೆಗೆ ಉಪಯೋಗಿಸುವ ವಸ್ತುಗಳಾದ, ತೆಂಗಿನ ಕಾಯಿ, ಟೀ ಪುಡಿ, ಅಡುಗೆ ಎಣ್ಣೆ ಬಿಸ್ಕತ್ ಪೆಟ್ಟಿಗೆಗಳು

ಹಾಗೂ ಬಟ್ಟೆಗಳು ಬಂದಿರುತ್ತವೆ. ಸೋಪು, ಟೂತ್ ಪೇಸ್ಟ್‌ಗಳು, ಔಷಧಗಳು, ಸೋಪಿನ ಪುಡಿ, ಪಾತ್ರೆಗಳು, ಇತ್ಯಾದಿಗಳು ಬಂದಿದ್ದು ಸದರಿ ವಸ್ತುಗಳನ್ನು ಪ್ರವಾಹ ಪೀಡಿತ ಜಿಲ್ಲೆಗಳಾದ ಬಾಗಲಕೋಟೆ, ರಾಯಚೂರು, ಬಿಜಾಪುರ, ಕೊಪ್ಪಳ ಗದಗ್ ಜಿಲ್ಲಾಧಿಕಾರಿಗಳ ಮೂಲ ಸಂತ್ರಸ್ತರಿಗೆ ವಿತರಿಸಲಾಗಿದೆ. ಕೆಲವರು ನೇರವಾಗಿ ಗ್ರಾಮಗಳಿಗೆ ಭೇಟಿ ನೀಡಿ ತಾವೇ ವಸ್ತುಗಳನ್ನು ಸಂತ್ರಸ್ತರಿಗೆ ಹಂಚಿಕೆ ಮಾಡಿರುತ್ತಾರೆ. ಕೆಳಕಂಡಂತೆ ವಿವಿಧ ಮೂಲಗಳಿಂದ ವಂತಿಗೆ ಬಂದಿರುತ್ತದೆ.

ಕ್ರ ಸಂ.	ಸಂಸ್ಥೆಗಳು	ಒಟ್ಟು ಹಣ (ಕೋಟಿ ರೂ.ಗಳಲ್ಲಿ)
1	ಸರ್ಕಾರಿ ಸಂಸ್ಥೆಗಳು	217.26
2	ಸರ್ಕಾರಿ ಹಾಗೂ ನಿಗಮ ಮಂಡಳಿಯಗಳ ನೌಕರರ ವೇತನ ಹಾಗೂ ತುಟ್ಟಿ ಭತ್ಯೆ ಬಾಕಿ	3.00
3	ವಿವಿಧ ಸಂಘ-ಸಂಸ್ಥೆಗಳು ಕೈಗಾರಿಕೋದ್ಯಮಗಳು ಹಾಗೂ ಇತರೆ ಗಣ್ಯ ವ್ಯಕ್ತಿಗಳು.	42.83
4	ಮಾನ್ಯ ಮುಖ್ಯಮಂತ್ರಿಯವರ ಕಛೇರಿಯಲ್ಲಿ ಸ್ವೀಕರಿಸಿರುವ ಮೊತ್ತ	56.69
5	ಬೆಂಗಳೂರು ಒನ್‌ನಲ್ಲಿ ಸಾರ್ವಜನಿಕರಿಂದ ಸಂಗ್ರಹಿಸಿದ ಮೊತ್ತ	2.51
6	ಸರ್ಕಾರಿ ನೌಕರರ 4 ತಿಂಗಳ ತುಟ್ಟಿ ಭತ್ಯೆ ಬಾಕಿ	32.16
	ಒಟ್ಟು	354.45

ಆ) ಮುಖ್ಯಮಂತ್ರಿಗಳ ಕಾರ್ಯಾಲಯ ಹಾಗೂ ಕಂದಾಯ ಇಲಾಖೆಗೆ ವಹಿಸಲಾಗಿದೆ. ಹಣ ದುರುಪಯೋಗ ತಡೆಗಟ್ಟಲು ಖಜಾನೆ ಮೂಲಕ ವ್ಯವಹರಿಸಲಾಗುತ್ತಿದೆ.

ಇ) ವಂತಿಗೆ ಹಣವನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ಜಮಾ ಮಾಡಲಾಗಿದೆ. ಇದರಲ್ಲಿ ರೂ. 5.00 ಕೋಟಿಯನ್ನು ಬಾಗಲಕೋಟೆಯಲ್ಲಿ ಸ್ಥಳಾಂತರಗೊಳ್ಳಲಿರುವ ಹೊಸ ಗ್ರಾಮಗಳಲ್ಲಿ ಮನೆ ಕಟ್ಟಿಸಲು ಉಪಯೋಗಿಸಲಾಗುತ್ತಿದೆ. ರೂ.1,72,17,760–00 ಗಳನ್ನು ಬಾಗಲಕೋಟೆ ಬಿಜಾಪುರ, ಗದಗ್ ಜಿಲ್ಲೆಗಳಲ್ಲಿ ಮನೆ ಕಟ್ಟಿಸಲು ಉಪಯೋಗಿಸಲಾಗುತ್ತಿದೆ.

ದಿನಗೂಲಿ ನೌಕರರು

595 (1057) ಶ್ರೀ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್ ನಾರಿಬೋಳ್ : ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಇಲಾಖೆಯಲ್ಲಿ ದಿನಾಂಕ: 1–07–1984 ರ ನಂತರ ಕೆಲಸಕ್ಕೆ ಸೇರಿರುವ ದಿನಗೂಲಿ ನೌಕರಿಗೆ ದಿನಾಂಕ: 1–04–1998 ರಿಂದ 31–03–2007 ರವರೆಗೆ ಮತ್ತು 1–04–2008 ರಿಂದ 31–10–2009 ರವರೆಗೆ ಹೆಚ್ಚಿಗೆಯಾಗಿರುವ ದಿನಗೂಲಿ ವೇತನ ಬಾಕಿ ಪಾವತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಬಂದಿದ್ದಲ್ಲಿ, ಯಾವಾಗ ಪಾವತಿ ಮಾಡಲಾಗುವುದು;

ಇ) ದಿನಾಂಕ: 1–10–2009 ರಿಂದ ಇಲ್ಲಿಯವರೆಗೆ ದಿನಗೂಲಿ ನೌಕರರ ಸಂಬಳ ಕೂಡ ಪಾವತಿಯಾಗದಿದ್ದು, ಸಂಬಳ ಪಾವತಿಗೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) :

ಅ) ರೇಷ್ಮೆ ಇಲಾಖೆಯ ರಾಜ್ಯ ವಲಯದಲ್ಲಿ ದಿನಾಂಕ: 01/07/1984ರ ನಂತರ ಕೆಲಸಕ್ಕೆ ಸೇರಿರುವ ದಿನಗೂಲಿ ನೌಕರರಿಗೆ ದಿನಾಂಕ: 01/04/1998 ರಿಂದ 31/03/2007 ರವರೆಗೆ ಮತ್ತು 01/04/2008 ರಿಂದ 31/10/2009ರವರೆಗೆ ಹೆಚ್ಚಿಗೆಯಾಗಿರುವ ದಿನಗೂಲಿ ವೇತನದ ಬಾಕಿ ಪಾವತಿಸಲು ರೂ. 169.37 ಲಕ್ಷಗಳ ಅನುದಾನ ಅಗತ್ಯವಿದೆ. ರೂ. 169.37 ಲಕ್ಷಗಳ ಹೆಚ್ಚುವರಿ ಅನುದಾನ ಬಿಡುಗಡೆಯ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ರೂ. 169.37 ಲಕ್ಷಗಳ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ. ಅದು ಬಿಡುಗಡೆಯಾದ ನಂತರ ಬಾಕಿ ಪಾವತಿಸಲು ಕ್ರಮಕೈಗೊಳ್ಳ ಲಾಗುವುದು.

ಇ) ದಿನಾಂಕ: 01/04/2008 ರಿಂದ ಅನ್ವಯವಾಗುವಂತೆ ರೂ. 881/–ಗಳ ಜೀವನ ನಿರ್ವಹಣಾ ಭತ್ಯೆ ಹೆಚ್ಚಾಗಿದ್ದು, ಇದನ್ನು ನವೆಂಬರ್ 2009ರ ಮಾಹೆಯಿಂದ ಪಾವತಿಸಲಾಗುತ್ತಿದೆ. ಫೆಬ್ರವರಿ–2010 ಮಾಹೆಯ ವೇತನವನ್ನು ಕೆಲವು ಕಚೇರಿಗಳಲ್ಲಿ ಪಾವತಿಸಬೇಕಾಗಿರುತ್ತದೆ. ಹೆಚ್ಚುವರಿ ಅನುದಾನ ಬಿಡುಗಡೆಯಾದ ಕೂಡಲೇ ಪಾವತಿಸಲು ಕ್ರಮಕೈಗೊಳ್ಳ ಲಾಗುವುದು.

ಬಿಜಾಪುರ ಜಿಲ್ಲಾ ಜಲಾನಯನ ಅಭಿವೃದ್ಧಿ

596 (908) ಡಾ: ಬಗಲಿ ಸಾರ್ವಭೌಮ ಸಾತಗೌಡ : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ ಯವರನ್ನು ಅವಧಿಗೆ ಮುನ್ನಾ ವರ್ಗಾವಣೆ (Pre mature) ಮಾಡಿರುವುದ ಸರ್ಕಾರದ ಗಮನಕ್ಕೆ ಬಂದಿರುವುದೆ;

ಆ) ಬಂದಿದಲ್ಲಿ, ಈ ಅಧಿಕಾರಿ ವರ್ಗಾವಣೆಗೆ ಕಾರಣಗಳೇನು (ವಿವರ ನೀಡುವುದು)

ಇ) ಈ ಅಧಿಕಾರಿಯ ಮೇಲೆ ಗುರುತರವಾದ ಆಪಾದನೆಗೆ ಅಥವಾ ಸಾರ್ವಜನಿಕ ದೂರುಗಳು ಇರುವುದೇ (ವಿವರ ಒದಗಿಸುವುದು);

ಈ) ಸದರಿ ಅಧಿಕಾರಿಯ ವರ್ಗಾವಣೆಯಲ್ಲಿ ಮಾರ್ಗಸೂಚಿ ಅನುಸರಿಸಲಾಗಿದೆಯೇ;

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) :

ಅ) ಹೌದು.

ಆ) ಆಡಳಿತಾತ್ಮಕ ಕಾರಣ

ಇ) ಇಲ್ಲ.

ಈ) ಹೌದು.

ಭೂ ನ್ಯಾಯ ಮಂಡಳಿ

599 (1206) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ತಾಲ್ಲೂಕಿನಲ್ಲಿ (Land Tribunal) ಭೂ ನ್ಯಾಯ ಮಂಡಳಿ ರಚನೆಯಾಗಿರುವುದೇ?

ಆ) ಹಾಗಿದ್ದಲ್ಲಿ, ಈ ಭೂ ನ್ಯಾಯ ಮಂಡಳಿ ಎಷ್ಟು ಸಲ ಸಭೆ ಸೇರಿ ಎಷ್ಟು ಪ್ರಕರಣಗಳಲ್ಲಿ ತೀರ್ಮಾನವನ್ನು ನೀಡಲಾಗಿರುತ್ತದೆ.

ಇ) ಈ ಭೂ ನ್ಯಾಯ ಮಂಡಳಿ ನಡೆಸದಿದ್ದಲ್ಲಿ ಅದಕ್ಕೆ ಕಾರಣಗಳೇನು? ಮತ್ತು ಭೂ ನ್ಯಾಯ ಮಂಡಳಿ ಸಭೆಯನ್ನು ಎಂದು ಕರೆಯಲಾಗುವುದು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ದಿನಾಂಕ: 01-10-2008 ರಂದು ರಚನೆಯಾಗಿದೆ.

ಆ) ಸಭೆ ನಡೆದಿರುವುದಿಲ್ಲ.

ಇ) ಭೂ ನ್ಯಾಯ ಮಂಡಳಿ ದಿನಾಂಕ: 19-3-2010 ರಂದು ಸಭೆ ಕರೆಯಲಾಗಿದೆ.

ಸಣ್ಣ ಕೈಗಾರಿಕೆಗಳು

600 (1207) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ಕ್ಷೇತ್ರದಲ್ಲಿ ಯಾವ ಯಾವ ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದಿರುವುದು?

ಆ) ಮುಂದಿದ್ದಲ್ಲಿ, ಯಾವ ಯಾವ ಸಣ್ಣ ಕೈಗಾರಿಕಾ ಘಟಕ ಸ್ಥಾಪಿಸಬಹುದಾಗಿದೆ?

ಇ) ಹೊಸ ಹೊಸ ಉದ್ದಿಮೆದಾರರನ್ನು ವಿಜಾಪುರದಲ್ಲಿ ಕೈಗಾರಿಕಾ ಬಂಡವಾಳ ಹೂಡಲು ಪ್ರೇರೇಪಿಸಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) :

ಅ) ಸರ್ಕಾರದ ವತಿಯಿಂದ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಿಲ್ಲ.

ಆ) ಇಂಡಿ ತಾಲ್ಲೂಕಿನಲ್ಲಿ ಕೆಳಕಂಡ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶಗಳಿವೆ.

ಬೆಲ್ಲ ತಯಾರಿಕೆ, ಜನರಲ್ ಇಂಜಿನಿಯರಿಂಗ್, ಆಹಾರ ಸಂಸ್ಕರಣೆ, ಫ್ಯಾಬ್ರಿಕೇಶನ್ ಘಟಕಗಳು ಮತ್ತು ಇಟ್ಟಿಗೆ ತಯಾರಿಕಾ ಘಟಕಗಳು ಮತ್ತು ದ್ರಾಕ್ಷಿ ಸಂಸ್ಕರಣೆ.

ಇ) ಡಾ: ನಂಜುಂಡಪ್ಪ ವರದಿಯನ್ವಯ ಬಿಜಾಪುರವನ್ನು ಹಿಂದುಳಿದ ತಾಲ್ಲೂಕು ಮತ್ತು ಉಳಿದ 4 ತಾಲ್ಲೂಕುಗಳನ್ನು ಅತ್ಯಂತ ಹಿಂದುಳಿದ ತಾಲ್ಲೂಕುಗಳು ಎಂದು ಗುರುತಿಸಲ್ಪಟ್ಟಿರುತ್ತವೆ. ಕೈಗಾರಿಕಾ ನೀತಿ 2009–14ರ ಪ್ರಕಾರ ಹೊಸದಾಗಿ ಸ್ಥಾಪಿಸಲ್ಪಡುವ ಕೈಗಾರಿಕೆಗಳಿಗೆ ಈ ಕೆಳಗಿನ ಉತ್ತೇಜನ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತದೆ.

1) ಸ್ಥಿರಾಸ್ತಿ ಮೇಲಿನ ಸಹಾಯಧನ ಶೇ. 15 ರಿಂದ ಶೇ. 25
2) ಭೂ ಪರಿವರ್ತನಾ ಶುಲ್ಕ ಮಾಫಿ
3) ನೊಂದಣಿ ಶುಲ್ಕ ರಿಯಾಯಿತಿ
4) ಮುದ್ರಾಂಕ ಶುಲ್ಕ ವಿನಾಯಿತಿ
5) ಪ್ರವೇಶ ತೆರಿಗೆ ವಿನಾಯಿತಿ
6) ಎಂಪಿ.ಎಂ.ಸಿ. ಸೆಸ್ ವಿನಾಯಿತಿ
7) ವಿದ್ಯುಚ್ಛಕ್ತಿ ಕರ ವಿನಾಯಿತಿ

ಸಣ್ಣ ನೀರಾವರಿ ಇಲಾಖೆಯ ಯೋಜನೆಗಳಿಗೆ ಅನುದಾನ

602 (1236) ಡಾ: ಮಹದೇವಪ್ಪ, ಹೆಚ್.ಸಿ. (ಟಿ.ನರಸೀಪುರ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನ ಆಯವ್ಯಯದಲ್ಲಿ ಸಣ್ಣ ನೀರಾವರಿ ಇಲಾಖೆಯ Tank Developments; in District Head quarters ಯೋಜನೆಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ.

ಆ) ಸದರಿ ಯೋಜನೆಗೆ ಬಿಡುಗಡೆಯಾದ ಅನುದಾನವೆಷ್ಟು ಹಾಗೂ ವೆಚ್ಚ ಮಾಡಿದ ಹಣವೆಷ್ಟು;

ಇ) ವೆಚ್ಚ ಮಾಡದೇ ಬಾಕಿ ಉಳಿದಿರುವ ಮೊತ್ತವೆಷ್ಟು (ವಿವರ ನೀಡುವುದು);

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಸಣ್ಣ ನೀರಾವರಿ ಇಲಾಖೆಯ 2009–10ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆಯು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕಂದಾಯ ಇಲಾಖೆಯ ಯೋಜನೆಗಳಿಗೆ ಅನುದಾನ

603 (1237) ಶ್ರೀ ಡಾ: ಮಹದೇವಪ್ಪ ಹೆಚ್.ಸಿ. (ಟಿ. ನರಸೀಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10 ನೇ ಸಾಲಿನಲ್ಲಿ ಕಂದಾಯ ಇಲಾಖೆಯ Creation of New Districts, Creation of New Taluks ನ ಯೋಜನೆಗಳಿಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ;

ಆ) ಸದರಿ ಯೋಜನೆಗಳಿಗೆ ಬಿಡುಗಡೆಯಾದ ಮೊತ್ತ ಎಷ್ಟು; ವೆಚ್ಚ ಮತ್ತು ಖರ್ಚು ಮಾಡಿದ ಮೊತ್ತವೆಷ್ಟು?

ಇ) ವೆಚ್ಚ ಮಾಡದೇ ಬಾಕಿ ಉಳಿದಿರುವ ಮೊತ್ತವೆಷ್ಟು (ವಿವರ ನೀಡುವುದು);

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ನೂತನ ಯಾದಗಿರಿ ಜಿಲ್ಲೆಯ ಪೂರ್ವಸಿದ್ಧತೆಗಾಗಿ 2009–10 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2053–00–800–0–01–059(ಯೋಜನೆ) ಅಡಿಯಲ್ಲಿ ರೂ.10.00 ಕೋಟಿ ಅನುದಾನ ಒದಗಿಸಲಾಗಿದೆ.

ಆ) ಯಾದಗಿರಿ ಜಿಲ್ಲೆಗೆ ರೂ. 5.00 ಕೋಟಿ ಬಿಡುಗಡೆ ಮಾಡಲಾಗಿದೆ. ಫೆಬ್ರವರಿ 2010ರ ಅಂತ್ಯಕ್ಕೆ 3,20,45, 000/– ಖರ್ಚಾಗಿದೆ.

ಇ) ರೂ.1,79,55,000/- ಬಾಕಿ ಉಳಿದಿರುತ್ತದೆ ಹಾಗೂ ಇದನ್ನು ಮಾರ್ಚ್ 2010 ರಲ್ಲಿ ಬರುವ ಬಿಲ್ಲುಗಳ ಪಾವತಿಗಾಗಿ ವೆಚ್ಚ ಮಾಡಲಾಗುವುದು.

ಚಿಂಚೋಳಿ ತಾಲ್ಲೂಕಿನಲ್ಲಿ I.C.L. ಕಂಪನಿ ನೌಕರರಿಂದ ಭೂ ಸುಧಾರಣೆ ಕಾಯ್ದೆ ಉಲ್ಲಂಘನೆ ಮಾಡಿ ಭೂ ಖರೀದಿ

604 (271) ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಗಣಾಪೂರ ಮತ್ತು ಬುರಗಪಳ್ಳಿ ಗ್ರಾಮಗಳಲ್ಲಿ ಐ.ಸಿ.ಎಲ್. ಸಿಮೆಂಟ್ ಕಂಪನಿಯವರು ಭೂ ಸುಧಾರಣೆ ಕಾಯ್ದೆ 79ಎ, ಮತ್ತು 79ಬಿ, ಹಾಗೂ 80 ಉಲ್ಲಂಘಿಸಿ ಕಂಪನಿಯ ನೌಕರರ ಹೆಸರಿನ ಮೇಲೆ ಸುಮಾರು 80 ಎಕರೆ ಜಮೀನು ನೋಂದಣಿ ಮಾಡಿಕೊಂಡಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಚಿಂಚೋಳಿ ತಾಲ್ಲೂಕು, ಬುರಗಪಳ್ಳಿ ಗ್ರಾಮದ ಸ.ನಂ.66/ಬಿ, 70,45,65,59,60,41,64,38/2,109,104,62,67,85,88,72,166,23,140,40, 101,117,36 ಮತ್ತು 87ರಲ್ಲಿ ಒಟ್ಟು ಸುಮಾರು 90 ಎಕರೆ ಜಮೀನುಗಳು.

1) J.V.V.S.N ಪ್ರಸಾದ ತಂದೆ: ಮಿರಾರಾಜು ಸಾ: ಚಂದಪೂರ ಹಾಗೂ 2) ಜೆ. ಬಾನು ಪ್ರಕಾಶ ತಂದೆ ಜೇ ಸೋಮಶೇಖರ ಸಾ: ಚಂದಾಪುರ ಇವರು ತಮ್ಮ ಸ್ವಂತ ಹೆಸರಿನಿಂದ ಖರೀದಿ ಮಾಡಿರುತ್ತಾರೆ. ಇವರು ಐ.ಸಿ.ಎಲ್. ಕಂಪನಿಯ ಅರೆ ಸಿಬ್ಬಂದಿಗಳು ಆಗಿರುತ್ತಾರೆ ಎಂದು ತನಿಖೆಯಿಂದ ತಿಳಿದು ಬಂದಿರುತ್ತದೆ. ತಹಶೀಲ್ದಾರರು ಚಿಂಚೋಳಿ ಇವರ ಕಾರ್ಯಾಲಯದಲ್ಲಿ ಕರ್ನಾಟಕ ಭೂ ಸಉಧಾರಣೆ ಕಾಯ್ದೆ 79ಎ ಮತ್ತು 79ಬಿ ಹಾಗೂ 80 ರ ಉಲ್ಲಂಘನೆ ವಿಷಯ ವಿಚಾರಣೆ ಹಂತದಲ್ಲಿ ಇರುತ್ತದೆ.

ಆ) ವಿಚಾರಣೆ ಮುಕ್ತಾಯ ಆದ ನಂತರ ನಿಯಮಾನುಸಾರ ಮುಂದಿನ ಕ್ರಮ ತೆಗೆದುಕೊಳ್ಳಲು ಜಿಲ್ಲಾಧಿಕಾರಿಯವರಿಗೆ ಸೂಚಿಸಲಾಗುವುದು.

ಲೋವರ ಮುಲ್ಲಾಮಾರಿ ನದಿಗೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ

605 (272) ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕಿನ ಜಟ್ಟೂರ ಗ್ರಾಮದ ಹತ್ತಿರ ಲೋವರ ಮುಲ್ಲಾಮರಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಬಂದಿದೆ.

ಆ) ಗುಲ್ಬರ್ಗ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಜಟ್ಟೂರ ಗ್ರಾಮದ ಹತ್ತಿರ ಲೋವರ್ ಮುಲ್ಲಾಮಾರಿ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ ಕಾಮಗಾರಿಗೆ ರೂ.461.50 ಲಕ್ಷಗಳ ನಬಾರ್ಡ್ (ಆರ್ ಐ.ಡಿ.ಎಫ್–10) ಸಹಾಯ ಧನ ದೊರೆತಿದ್ದು, ಅದರಂತೆ ಅಂದಾಜು ಪಟ್ಟಿಯನ್ನು ದರಪಟ್ಟಿ 2004–05 ರಂತೆ ರೂ. 650.00 ಲಕ್ಷಗಳಿಗೆ ತಯಾರಿಸಿ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಗೆ ಸಲ್ಲಿಸಿದಾಗ, ಸಮಿತಿಯು ಪರಿಶೀಲಿಸಿ ಕಾಮಗಾರಿಯನ್ನು ತೆಗೆದುಕೊಂಡಲ್ಲಿ ಒಟ್ಟು ಬ್ಯಾಕ್ ವಾಟರ್ ನಿಲ್ಲುವ ಸಾಮರ್ಥ್ಯ 3.30 ಕಿ.ಮೀ. ಇದ್ದು, ಅದರಲ್ಲಿ ಆಂಧ್ರ ಪ್ರದೇಶಕ್ಕೆ 2.00 ಕಿ.ಮಿ. ಬ್ಯಾಕ್ ವಾಟರ್ ನಿಲ್ಲಲಿದ್ದು, ಕರ್ನಾಟಕಕ್ಕೆ ಕೇವಲ 1.30 ಕಿ.ಮಿ. ಬ್ಯಾಕ್ ವಾಟರ್ ನಿಲ್ಲುವುದಾಗಿ ಇದು ಅಂತರ ರಾಜ್ಯ ಬ್ಯಾರೇಜ್ ಎಂದು ಪರಿಗಣಿಸಿ ಸರ್ಕಾರದಿಂದ ಅನುಮೋದನೆ ಪಡೆಯಲು ಅಭಿಪ್ರಾಯ ಪಟ್ಟಿರುತ್ತಾರೆ. ಇಂತಹ ಸಮಸ್ಯೆಯಿಂದ ನಬಾರ್ಡ್ ಸಹಾಯ ಧನ. ರೂ.461.50 ಲಕ್ಷ ಹಿಂಪಡೆದ ಕಾರಣ ಸದರಿ ಬಿ.ಸಿ.ಬಿ. ಕೈಬಿಡಲಾಗಿತ್ತು. ಸದರಿ ಬ್ಯಾರೇಜನ್ನು ಎ.ಐ.ಬಿ.ಪಿ. ಯೋಜನೆಯಡಿ ತೆಗೆದುಕೊಳ್ಳುವ ಸಾಧ್ಯತೆ ಬಗ್ಗೆ ಪರಿಶೀಲಿಸಲಾಗುವುದು.

ಹೊಸ ಕೈಗಾರಿಕಾ ನೀತಿ

606 (1053) ಶ್ರೀ ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರವು ಹೊಸ ಕೈಗಾರಿಕಾ ನೀತಿ 2009ನ್ನು ಜಾರಿಗೆ ತಂದಿರುವುದೇ? ಬಂದಿದ್ದಲ್ಲಿ, ಅದರ ಪ್ರತಿಯನ್ನು ಒದಗಿಸುವುದು;

ಆ) 2008-09ನೇ ಸಾಲಿನಲ್ಲಿ ಎಷ್ಟು ದೊಡ್ಡ ಮತ್ತು ಅತಿ ದೊಡ್ಡ ಕೈಗಾರಿಕೆಗಳ ಸ್ಥಾಪನೆಗೆ ಬಂದಂತಹ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದೆ ಹಾಗೂ ಎಷ್ಟು ಬಂಡವಾಳ ಹೂಡಿಕೆಯನ್ನು ನಿರೀಕ್ಷಿಸಲಾಗಿತ್ತು?

ಇ) ಗ್ರಾಮೀಣ ಪ್ರದೇಶಗಳಲ್ಲಿ ಬಿ.ಪಿ.ಓ.ಗಳನ್ನು ಸ್ಥಾಪಿಸಲು ಎಷ್ಟು ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಇವುಗಳನ್ನು ಎಲ್ಲೆಲ್ಲಿ ಸ್ಥಾಪಿಸಲಾಗಿದೆ.?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಹೌದು, ಪ್ರತಿ ಲಗತ್ತಿಸಿದೆ. ಇದು ಇಲಾಖಾ ವೆಬ್‌ಸೈಟ್‌ನಲ್ಲಿ ಸಹ ಲಭ್ಯವಿರುತ್ತದೆ.

ಆ) 2008-2009ನೇ ಸಾಲಿನಲ್ಲಿ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆಯಲ್ಲಿ (ರೂ. 50.00 ಕೋಟಿಗಿಂತ ಹೆಚ್ಚಿನ ಬಂಡವಾಳ ಹೂಡಿಕೆಯ) 50 ಯೋಜನೆಗಳನ್ನು ಅನುಮೋದಿಸಲಾಗಿದೆ. ಈ ಅನುಮೋದಿತ ಯೋಜನೆಗಳಿಂದ ರೂ. 1,05,266.20 ಕೋಟಿ ಬಂಡವಾಳ ಹೂಡಿಕೆ ನಿರೀಕ್ಷೆ ಇದ್ದು, 4,10,842 ಜನರಿಗೆ ಉದ್ಯೋಗಾವಕಶ ಲಭ್ಯವಾಗಲಿದೆ.

ಇದೇ ಅವಧಿಯಲ್ಲಿ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಯಲ್ಲಿ (ರೂ.3.00 ಕೋಟಿಯಿಂದ ರೂ. 50.00 ಕೋಟಿ ಒಳಗಿನ ಬಂಡವಾಳ ಹೂಡಿಕೆಯ) 310 ಯೋಜನೆಗಳನ್ನು ಅನುಮೋದಿಸಲಾಗಿದೆ. ಈ ಅನುಮೋದಿತ ಯೋಜನೆಗಳಿಂದ ರೂ. 5,181.62 ಕೋಟಿ ಬಂಡವಾಳ ಹೂಡಿಕೆ ನಿರೀಕ್ಷೆ ಇದ್ದು 1,35,623 ಜನರಿಗೆ ಉದ್ಯೋಗಾವಕಾಶ ಲಭ್ಯವಾಗಲಿದೆ.

ಇ) ಗ್ರಾಮೀಣ ಪ್ರದೇಶಗಳಲ್ಲಿ ಬಿ.ಪಿ.ಓ ಗಳನ್ನು ಸ್ಥಾಪಿಸಲು ರೂ. 90–00 ಲಕ್ಷಗಳ ಸಹಾಯಧನವನ್ನು ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ) ಸಾಲಿಗ್ರಾಮ (ಹಾಸನ ಜಿಲ್ಲೆ) ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ), ಶಿಗ್ಗಾಂವ (ಹಾವೇರಿ ಜಿಲ್ಲೆ) ಘಟಕಗಳಿಗೆ ಬಿಡುಗಡೆ ಮಾಡಲಾಗಿದೆ (ದಿನಾಂಕ: 10.03.2010 ರ ವರೆಗೆ).

ಇದಲ್ಲದೆ ಈ ಕೆಳಕಂಡ ಪ್ರದೇಶಗಳಲ್ಲಿ 15 ಬಿಪಿಓ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

1. ನಂಜನಗೂಡು (ಮೈಸೂರು ಜಿಲ್ಲೆ)
2. ದೇವದುರ್ಗ (ರಾಯಚೂರು ಜಿಲ್ಲೆ)
3. ಪಾವಗಡ (ತುಮಕೂರು ಜಿಲ್ಲೆ)
4. ಮುಂಡರಗಿ (ಗದಗ ಜಿಲ್ಲೆ)
5. ಚಿಕ್ಕಬಳ್ಳಾಪುರ (ಚಿಕ್ಕಬಳ್ಳಾಪುರ ಜಿಲ್ಲೆ)
6. ಶಿರಸಿ (ಉತ್ತರ ಕನ್ನಡ ಜಿಲ್ಲೆ)
7. ಹೊಸದುರ್ಗ (ಚಿತ್ರದುರ್ಗ ಜಿಲ್ಲೆ)
8. ಹುಳಿಯಾರ್ (ತುಮಕೂರು ಜಿಲ್ಲೆ)
9. ಜಗಳೂರು (ದಾವಣಗೆರೆ ಜಿಲ್ಲೆ)
10. ಮುದ್ದೇನಹಳ್ಳಿ (ಚಿಕ್ಕಬಳ್ಳಾಪುರ ಜಿಲ್ಲೆ)
11. ಲಕ್ಷ್ಮೇಶ್ವರ (ಗದಗ ಜಿಲ್ಲೆ)
12. ಹುಣಸೂರು (ಮೈಸೂರು ಜಿಲ್ಲೆ)
13. ತೀರ್ಥಹಳ್ಳಿ (ಶಿವಮೊಗ್ಗ ಜಿಲ್ಲೆ)
14. ಇಲಕಲ್ (ಬಾಗಲಕೋಟೆ ಜಿಲ್ಲೆ)
15. ಶಂಕರಘಟ್ಟ (ಚಿಕ್ಕಮಗಳೂರು ಜಿಲ್ಲೆ)

ಎ.ಪಿ.ಎಂ.ಸಿ. ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಟ್ಟಡಗಳು

608 (822) ಡಾ: ಸುಧಾಕರ್ ಎಂ.ಸಿ. (ಚಿಂತಾಮಣಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕು, ಕಸಬಾ ಹೋಬಳಿ ನೆಕ್ಕುಂದಿ ಗ್ರಾಮದ ಸರ್ವೆ ನಂ.196 ರಲ್ಲಿ 1.31 ಎಕರೆ ಸರ್ಕಾರಿ ಭೂಮಿ ಇದ್ದು, 1 ಎಕರೆ ಎ.ಪಿ.ಎಂ.ಸಿ ಮಾರ್ಕೆಟ್ ಸಂತೆ ಮೈದಾನಕ್ಕಾಗಿ ಹಾಗೂ 0.31 ಗುಂಟೆ

ಜಮೀನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಕಟ್ಟಡಕ್ಕೆ ಮಂಜೂರು ಮಾಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಬಂದಿದ್ದಲ್ಲಿ, ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ;

ಇ) ಸಲ್ಲಿಸಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಸಲ್ಲಿಸಿರುವುದಿಲ್ಲ.

ಇ) ಪ್ರಸ್ತಾಪಿತ ಜಮೀನಿನಲ್ಲಿ ಅನಧಿಕೃತವಾದ 7 ಕಟ್ಟಡಗಳಿದ್ದು, ಅದನ್ನು ತೆರವುಗೊಳಿಸಲು ದಿ: 29.09.2009 ರಂದು ಖಿಲ್ಲಾ ನೋಟೀಸು ನೀಡಲಾಗಿರುತ್ತದೆ. ನಿಯಮಾನುಸಾರ ಖಿಲ್ಲಾ ಪಡಿಸಿ ಸಂಬಂಧಿಸಿದ ಇಲಾಖೆಗಳು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದಲ್ಲಿ ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗುವುದು.

ಹೊಸ ತಾಲ್ಲೂಕುಗಳ ರಚನೆ

610 (1066) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ತಾಲ್ಲೂಕುಗಳ ರಚನೆಯ ಸಂಬಂಧಾಗಿ ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ನೀಡಲು ಇಲ್ಲಿಯವರೆಗೆ ಎಷ್ಟು ಸಮಿತಿಗಳನ್ನು ರಚಿಸಲಾಗಿದೆ ಮತ್ತು ಈ ಸಮಿತಿಗಳು ನೀಡಿರುವ ವರದಿಯ ಶಿಫಾರಸ್ಸಿನಲ್ಲಿ ಯಾವ ಯಾವ ಸ್ಥಳಗಳನ್ನು ತಾಲ್ಲೂಕು ಕೇಂದ್ರಗಳನ್ನಾಗಿ ಮಾಡಲಾಗುವುದು, ಹೊಸ ತಾಲ್ಲೂಕುಗಳ ರಚನೆಗೆ ಇರುವ ಮಾನ ದಂಡಗಳೇನು?

ಆ) ಹೊಸ ತಾಲ್ಲೂಕುಗಳ ರಚನೆಯ ವಿಷಯದಲ್ಲಿ ಸರ್ಕಾರ ಯಾವ ತುರ್ತು ಕ್ರಮಗಳನ್ನು ಕೈಗೊಳ್ಳಲಿದೆ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ತಾಲ್ಲೂಕುಗಳನ್ನು ಪುನರ್ ರಚನೆ ಮಾಡುವ ಸಂಬಂಧ ಇದುವರೆಗೆ ಒಟ್ಟು ನಾಲ್ಕು ಸಮಿತಿಗಳು ಅಂದರೆ ಶ್ರೀ ಎಂ. ವಾಸುದೇವರಾವ್ ಆಯೋಗ, ಶ್ರೀ ಟಿ.ಎಂ. ಹುಂಡೇಕರ್ ಸಮಿತಿ, ಶ್ರೀ ಪಿ.ಸಿ. ಗದ್ದೀಗೌಡರ್ ಸಮಿತಿ ಮತ್ತು ಶ್ರೀ ಎಂ.ಬಿ.ಪ್ರಕಾಶ್ ಅಧ್ಯಕ್ಷತೆಯ ಸಮಿತಿಗಳನ್ನು ನೇಮಿಸಲಾಗಿತ್ತು.

ಶ್ರೀ ಎಂ.ಬಿ. ಪ್ರಕಾಶ್ ನೇತೃತ್ವದ ಸಮಿತಿಯು ಶಿಫಾರಸ್ಸುಗಳನ್ನು ದಿನಾಂಕ: 30.5.2009 ರಂದು ಸರ್ಕಾರಕ್ಕೆ ಸಲ್ಲಿಸಿದ್ದು, ವರದಿಯು ಪರಿಶೀಲನೆಯಲ್ಲಿದ್ದು ಅಂತಿಮ ನಿರ್ಣಯ ತೆಗೆದುಕೊಳ್ಳಬೇಕಿದೆ.

ಆ) ಅನ್ವಯಿಸುವುದಿಲ್ಲ.

ಆಸರೆ ಯೋಜನೆ

611 (1067) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ, (ಭಾಲ್ಕಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕರ್ನಾಟಕದಲ್ಲಿ ಕಳೆದ ವರ್ಷ ನೆರೆ ಹಾವಳಿಗೆ ತುತ್ತಾದ ಪ್ರದೇಶಗಳ ಜನರಿಗೆ ಪುನರ್ ವಸತಿ ಕಲ್ಪಿಸುವ ಸಲುವಾಗಿ ಆಸರೆ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಎಷ್ಟು ಮನೆಗಳನ್ನು ಯಾರು ಯಾರು ನಿರ್ಮಿಸಿಕೊಟ್ಟಿದ್ದಾರೆ (ಮನೆ ನಿರ್ಮಿಸಿ ಕೊಟ್ಟಿರುವವರ ಹೆಸರು, ವಿವರಗಳನ್ನು ಒದಗಿಸುವುದು);

ಆ) ಹಾಗಿದ್ದಲ್ಲಿ, ಇಲ್ಲಿಯವರೆವಿಗೆ ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು, ಸಂಘ-ಸಂಸ್ಥೆಗಳು/ದಾನಿಗಳು ನೀಡಿರುವ ಹಣದ ಮೊತ್ತವೆಷ್ಟು ಹಾಗೂ ಇನ್ನೂ ಎಷ್ಟು ಮನೆಗಳನ್ನು ನಿರ್ಮಿಸಿಕೊಡುವ ಗುರಿ ಹೊಂದಲಾಗಿದೆ;

ಇ) ನೆರೆ ಹಾವಳಿಗೆ ತುತ್ತಾಗಿರುವ ಜನರ ಪುನರ್ ವಸತಿ ಯೋಜನೆಯ ಅನುಷ್ಠಾನದ ಹೊಣೆಯನ್ನು ಯಾವ ಯಾವ ಅಧಿಕಾರಿಗಳಿಗೆ ವಹಿಸಿಕೊಡಲಾಗಿದೆ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು);

ಈ) ಕಳೆದ ಒಂದು ವರ್ಷದ ಅವಧಿಯಲ್ಲಿ ಈ ಸ್ಥಳಗಳಿಗೆ ಅಧಿಕಾರಿಗಳು ಎಷ್ಟು ಭಾರಿ ಭೇಟಿ ನೀಡಿದ್ದಾರೆ ಮತ್ತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಯಾವ ವರದಿಗಳನ್ನು ನೀಡಿದ್ದಾರೆ, ಅಧಿಕಾರಿಗಳ ಹೆಸರು, ವಿವರಗಳನ್ನು ಒದಗಿಸುವುದು;

ಉ) ಅಧಿಕಾರಿಗಳು ಕೆಲವು ಕಡೆಗಳಲ್ಲಿ ಈ ಬಗ್ಗೆ ನಿರ್ಲಕ್ಷ್ಯ ತೋರುತ್ತಿರುವುದಾಗಿ ದೂರುಗಳು ಬಂದಿರುವುದು ನಿಜವೇ, ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ದಾನಿಗಳಾದ ಅಮೃತಾನಂದ ಮಯಿ ಇವರು ರಾಯಚೂರು ಜಿಲ್ಲೆಯ ಕೊರವಾಕಲು ಮತ್ತು ಮಾಂಗಿಕಡ್ಡಿ ಗ್ರಾಮಗಳಲ್ಲಿ ಒಟ್ಟು 103 ಮನೆಗಳನ್ನು ಕಟ್ಟಿಸಿ ಸರ್ಕಾರಕ್ಕೆ ಹಸ್ತಾಂತರಿಸಿರುತ್ತಾರೆ.

ಆ) ಗ್ರಾಮಗಳ ಸ್ಥಳಾಂತರಕ್ಕೆ ಭೂಮಿ ಖರೀದಿಗಾಗಿ ಒಟ್ಟು ರೂ. 155.00 ಕೋಟಿ ವೆಚ್ಚ ಮಾಡಲಾಗಿದೆ. ಸಂಘ–ಸಂಸ್ಥೆಗಳು/ದಾನಿಗಳಿಂದ ಒಟ್ಟು ರೂ. 101.64 ಕೋಟಿ ಬಂದಿರುತ್ತದೆ. ಒಟ್ಟು 63213 ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ.

ಇ) ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ.

ಈ) ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಸ್ಥಳಗಳಿಗೆ ಭೇಟಿ ನೀಡಿ ನಡೆಯುತ್ತಿರುವ ಪುನರ್ವಸತಿ ಕಾರ್ಯಗಳ ಬಗ್ಗೆ ವರದಿ ನೀಡಿರುತ್ತಾರೆ.

ಉ) ಯಾವುದೇ ನಿರ್ಲಕ್ಷ್ಯ ತೋರುವುದಿಲ್ಲ ಬೃಹತ್ ಪ್ರಮಾಣದಲ್ಲಿ ಪುನರ್ವಸತಿ ಕಾರ್ಯಕೈಕೊಳ್ಳಲಾಗುತ್ತಿದೆ. ದೂರುಗಳ ಬಗ್ಗೆ ಪರಿಶೀಲನೆ ನಡೆಸಿ ತುರ್ತು ಪರಿಹಾರ ನೀಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ

613 (1069) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಕಳೆದ ವರ್ಷದ ಆಯವ್ಯಯದಲ್ಲಿ ಎಷ್ಟು ಹಣವನ್ನು ಮೀಸಲಿಡಲಾಗಿತ್ತು;

ಆ) ಮೀಸಲಿರಿಸಿದ್ದಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಇಲ್ಲಿಯವರೆವಿಗೆ ಬಿಡುಗಡೆಯಾಗಿ ವೆಚ್ಚವಾದ ಹಣವೆಷ್ಟು;

ಇ) ಈ ಹಣದಲ್ಲಿ ಕೈಗೆತ್ತಿಕೊಂಡಿರುವ ಜಿಲ್ಲಾವಾರು ಅಭಿವೃದ್ಧಿ ಕೆಲಸಗಳ ವಿವರಗಳೇನು;

ಈ) ಯೋಜನೆಯಲ್ಲಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಯಾವ ಯಾವ ಅಭಿವೃದ್ಧಿ ಕಾರ್ಯಗಳು ಚಾಲ್ತಿಯಲ್ಲಿವೆ;

ಉ) ಪ್ರಸಕ್ತ ಸಾಲಿನಲ್ಲಿ ತೆಗೆದುಕೊಳ್ಳಬೇಕಾದ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸಲಾಗಿದೆಯೇ; ಹಾಗಿದ್ದಲ್ಲಿ, ಬೀದರ್ ಜಿಲ್ಲೆಯಲ್ಲಿ ಯಾವ ಯಾವ ಕಾಮಗಾರಿಗಳನ್ನು ಹೆಚ್.ಕೆ.ಡಿ.ಬಿ ಯೋಜನೆಯಲ್ಲಿ ಪ್ರಸಕ್ತ ಸಾಲಿನಲ್ಲಿ ತೆಗೆದುಕೊಳ್ಳಲಾಗುವುದು (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಮಂಡಳಿಗೆ ಕಳೆದ ವರ್ಷ 2008–09 ರಲ್ಲಿ ಆಯವ್ಯಯದಲ್ಲಿ ರೂ. 35.20 ಕೋಟಿ ಹಣ ಮೀಸಲಿಡಲಾಗಿತ್ತು.

ಆ) 2008–09 ಮತ್ತು 2009–10 ನೇ ಸಾಲಿನಲ್ಲಿ ಬಿಡುಗಡೆಯಾದ ಹಾಗೂ ವೆಚ್ಚ (ಆಯಾ ವರ್ಷಗಳಲ್ಲಿ ಲಭ್ಯವಿದ್ದ ಆರಂಭ ಶಿಲ್ಕು ಸೇರಿದಂತೆ) ದ ವಿವರಗಳು ಈ ಕೆಳಗಿನಂತೆ ನೀಡಲಾಗಿದೆ:

(ರೂ. ಕೋಟಿಗಳಲ್ಲಿ)

	2008–09	2009–10	ಒಟ್ಟು
ಆರಂಭಿಕ ಶಿಲ್ಕು	49.60	30.21	79.81
ಬಿಡುಗಡೆ	16.05	16.00	32.05
ವೆಚ್ಚ	35.62	30.52	66.14

ಇ) 2008–09 ನೇ ಸಾಲಿನಲ್ಲಿ ಮೀಸಲಿಟ್ಟ ಹಣದಲ್ಲಿ ಕೈಗೊಂಡಿರುವ ರಸ್ತೆ ಮತ್ತು ಸೇತುವೆ, ಸಾಮಾಜಿಕ ವಲಯದ ಕಾಮಗಾರಿಗಳು ಹಾಗೂ ಭೂ ಅಂತರ್ಜಲ ಕಾಮಗಾರಿವಾರು ಸೇರಿ ಜಿಲ್ಲಾವಾರು ಅಭಿವೃದ್ಧಿ ಕಾಮಗಾರಿಗಳ ವಿವರ **ಅನುಬಂಧ–1** ರಲ್ಲಿ ನಮೂದಿಸಲಾಗಿದೆ.

ಈ) ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಚಾಲ್ತಿಯಲ್ಲಿರುವ ಅಭಿವೃದ್ಧಿ ಕಾಮಗಾರಿ ಜಿಲ್ಲಾವಾರು ವಿವರಗಳು ಅನುಬಂಧ–2 ರಲ್ಲಿ ನೀಡಲಾಗಿದೆ.

ಉ) ಪ್ರಸಕ್ತ ಸಾಲಿನಲ್ಲಿ (2009–10) ರಲ್ಲಿ ತೆಗೆದುಕೊಳ್ಳಬೇಕಾದ ಕಾಮಗಾರಿಗಳ ಕ್ರಿಯಾ ಯೋಜನೆ ಈಗಾಗಲೇ ತಯಾರಿಸಲಾಗಿದೆ. ಈ ಕ್ರಿಯಾ ಯೋಜನೆಯಲ್ಲಿ ಬೀದರ್ ಜಿಲೆಯಲ್ಲಿ ಕೈಗೊಳ್ಳುವ ಕಾಮಗಾರಿಗಳ ವಿಧಾನಸಭಾ ಕ್ಷೇತ್ರವಾರು ವಿವರಗಗಳನ್ನು **ಅನುಬಂಧ–3** ರಲ್ಲಿ ನೀಡಲಾಗಿದೆ.

ಅನುಬಂಧ – 1

ಹೈ. ಕ. ಪ್ರ. ಮಂಡಳಿಯ 2008-09ನೇ ಸಾಲಿನ (ಒಟ್ಟು / ಪೂರ್ಣಗೊಂಡ) ಕಾಮಗಾರಿಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆಯ ಹೆಸರು	ಒಟ್ಟು			ಪೂರ್ಣಗೊಂಡ		
		ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಬಿಡುಗಡೆ ಮೊತ್ತ	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಬಿಡುಗಡೆ ಮೊತ್ತ
1	ಗುಲಬರ್ಗಾ	222	943.09	563.90	161	608.94	539.59
2	ರಾಯಚೂರು	114	428.50	233.46	70	250.75	233.46
3	ಬಳ್ಳಾರಿ	116	548.40	264.51	67	270.91	237.39
4	ಬೀದರ	103	418.67	243.73	61	237.40	235.05
5	ಕೊಪ್ಪಳ	108	428.50	414.81	68	255.50	251.11
6	ಹರಪನಹಳ್ಳಿ	24	90.50	61.23	13	46.50	46.09
ಒಟ್ಟು		687	* 3540.67	1781.64	440	1670.00	1543.40

* [illegible] ರೂ. 310.00 ಲಕ್ಷ [illegible] ರೂ. 100.00 ಲಕ್ಷ ಹಾಗೂ ರೂ. 269.00 ಲಕ್ಷ [illegible] ಮೊತ್ತ (ಒಟ್ಟು ರೂ. 679.00ಲಕ್ಷ) ಸೇರಿರುತ್ತದೆ.

ಅನುಬಂಧ – 2

ಹೈ. ಕ. ಪ್ರ. ಮಂಡಳಿಯ 2008-09ನೇ ಸಾಲಿನ ಮುಂದುವರೆದ ಕಾಮಗಾರಿಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆಯ ಹೆಸರು	ಪ್ರಗತಿ ಹಂತದ		
		ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಬಿಡುಗಡೆ ಮೊತ್ತ
1	ಗುಲಬರ್ಗಾ	61	334.15	24.31
2	ರಾಯಚೂರು	44	178.75	0.00
3	ಬಳ್ಳಾರಿ	49	277.50	27.12
4	ಬೀದರ	42	173.27	8.58
5	ಕೊಪ್ಪಳ	40	163.00	30.93
6	ಹರಪನಹಳ್ಳಿ	11	44.00	15.23
ಒಟ್ಟು		247	1170.67	106.17

ಸೂಚನೆ: ಕಾಮಗಾರಿಗಳ ವಿವರಗಳನ್ನು ಮಂಡಳಿಯ ವೆಬ್‌ಸೈಟ್ http://ssg1.kar.nic.in/hkdb ರಲ್ಲಿ ಲಭ್ಯವಿದೆ.

ಅನುಬಂಧ – 3

ಹೈ. ಕ. ಪ್ರ. ಮಂಡಳಿಯ 2009-10ನೇ ಸಾಲಿನ ಮಂಜೂರಾದ ಕಾಮಗಾರಿಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ವಿಧಾನ ಸಭಾ ಕ್ಷೇತ್ರ	ಮಂಡಳಿ		ವಿಶೇಷ ಘಟಕ ಯೋಜನೆ		ಗಿರಿಜನ ಉಪ ಯೋಜನೆ		ಮೈಕ್ರೋ		ಒಟ್ಟು	
		ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ
1	ಬೀದರ	3	11.90	2	10.00	1	2.69	1	7.40	7	31.99
2	ಬೀದರ (ದ)	5	11.90	5	10.41	1	2.69	2	7.40	13	32.40
3	ಭಾಲ್ಕಿ	5	11.90	4	10.41	1	2.69	2	7.40	12	32.40
4	ಹುಮನಾಬಾದ	2	11.90	3	10.41	1	2.69	2	7.40	8	32.40
5	ಔರಾದ	4	11.90	1	10.41	1	2.69	1	7.40	7	32.40
6	ಬಸವ ಕಲ್ಯಾಣ	4	11.90	2	10.41	1	2.69	1	7.40	8	32.40
ಒಟ್ಟು		23	71.40	17	62.05	6	16.14	9	44.40	55	193.99

ಸೂಚನೆ : ಸದರಿ ಯೋಜನೆಗಳಲ್ಲಿ ಕೇವಲ ಮೈಕ್ರೋ ಯೋಜನೆಯ ಕಾಮಗಾರಿಗಳು ಮಂಜೂರಾಗಿರುತ್ತವೆ.

ನಂಜುಂಡಪ್ಪ ವರದಿ

614 (1070) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಬಗ್ಗೆ ನಂಜುಂಡಪ್ಪ ನೇತೃತ್ವದ ಸಮಿತಿಯು ನೀಡಿರುವ ವರದಿಯ ಅನುಷ್ಠಾನಕ್ಕಾಗಿ 2009–10ನೇ ಸಾಲಿನ ಆಯವ್ಯಯದಲ್ಲಿ ಎಷ್ಟು ಹಣವನ್ನು ಮೀಸಲಾಗಿಡಲಾಗಿತ್ತು. ಮೀಸಲಿರಿಸಿದ್ದಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಯಿತು ಹಾಗೂ ಇಲ್ಲಿಯವರೆವಿಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ;

ಆ) ಈ ಹಣದಲ್ಲಿ ಬೀದರ್ ಜಿಲ್ಲೆಯ ವಿವಿಧ ಮತಕ್ಷೇತ್ರದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ;

ಇ) ಪ್ರಸಕ್ತ ವರ್ಷದಲ್ಲಿ ಮೇಲ್ಕಂಡ ಸಮಿತಿಯ ಶಿಫಾರಸ್ಸಿನ ಅನ್ವಯ ಬೀದರ್ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳುವ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗಿದೆ.

ಈ) ಸಿದ್ಧಪಡಿಸಿದ್ದಲ್ಲಿ, ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗದುಕೊಳ್ಳಲಾಗುವುದು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯ ಬಗ್ಗೆ ನಂಜುಂಡಪ್ಪ ನೇತೃತ್ವದ ಸಮಿತಿಯು ನೀಡುವ ವರದಿಯ ಅನುಷ್ಠಾನಕ್ಕಾಗಿ 2009–10ನೇ ಸಾಲಿನ ಆಯವ್ಯಯದಲ್ಲಿ 2578.83 ಕೋಟಿ ರೂ.ಗಳನ್ನು ಮೀಸಲಿಡಲಾಗಿತ್ತು. ಈವರೆಗೆ 1396.08 ಕೋಟಿ ರೂ.ಗಳು ಬಿಡುಗಡೆಯಾಗಿದ್ದು 1248.23 ಕೋಟಿ ರೂ.ಗಳು ವೆಚ್ಚ ಮಾಡಲಾಗಿರುತ್ತದೆ.

ಆ) ಈ ಹಣದಲ್ಲಿ ಬೀದರ್ ಜಿಲ್ಲೆಯಲ್ಲಿ ಕೈಗೊಂಡ ಯೋಜನೆಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಪ್ರಸಕ್ತ ವರ್ಷದಲ್ಲಿ ಮೇಲ್ಕಂಡ ಸಮಿತಿಯ ಶಿಫಾರಸ್ಸಿನ ಅನ್ವಯ ಬೀದರ್ ಜಿಲ್ಲೆಯಲ್ಲಿ ಹಿಂದುಳಿದ ತಾಲ್ಲೂಕುಗಳಾದ ಭಾಲ್ಕಿ, ಹುಮನಾಬಾದ್, ಬಸವಕಲ್ಯಾಣ, ಮತ್ತು ಔರಾದ್ ತಾಲ್ಲೂಕುಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಂಡ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಲಾಗಿದ್ದು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಭಾಲ್ಕಿ ತಾಲ್ಲೂಕಿನಲ್ಲಿ ತೆಗೆದುಕೊಂಡಿರುವ ಯೋಜನೆಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

[illegible]

[illegible]

(ರೂ. ಕೋಟಿಗಳಲ್ಲಿ)

[illegible]	[illegible] (Schemes) / [illegible]	[illegible]	[illegible]	[illegible]	[illegible]	[illegible]
[illegible]	[illegible]	38.40	39.85	45.85	51.80	
	[illegible]	49.93	51.83	59.83	67.73	
[illegible]	[illegible]	38.70	40.20	46.20	52.10	
	[illegible]	23.65	26.64	30.51	34.47	
[illegible]	[illegible]	7.50	7.60	41.50	7.60	
	[illegible]					400.00
[illegible]	[illegible]	8.00	6.50	4.50	3.00	
	[illegible]					192.50
	[illegible]	1.00	1.00	1.00	1.00	
	[illegible]	1.45	1.45	4.35	2.90	
[illegible]	[illegible]	25.81	26.80	30.77	34.74	
[illegible]	[illegible]	206.13	207.95	220.01	233.56	
	[illegible]	20.51	20.80	22.00	23.36	
	[illegible]	64.80	65.69	69.50	73.78	
	[illegible]	272.14	286.84	306.62	301.79	
	[illegible]	169.37	167.21	148.60	139.99	
[illegible]	[illegible]	233.00	224.40	230.40	243.20	
	[illegible]	35.00	36.00	42.00	47.00	
[illegible]	[illegible]	1600.00			1600.00	
	[illegible]	264.00	16.00	20.00		
[illegible]	[illegible]	41.45				
	[illegible]				45.46	
[illegible]	[illegible]	294.46			233.92	
[illegible]	[illegible]	60.00	180.00	85.00	145.00	
[illegible]	[illegible]					5000.00
[illegible]	[illegible]	20.01	20.32	20.77	19.45	
	[illegible]	27.06	24.64	22.96	28.18	
[illegible]	[illegible]	69.72	69.72	69.72	69.72	
	[illegible]	65.79	60.72	30.36	30.36	
	[illegible]	22.02	59.16	65.35	65.35	
	[illegible]	74.75	74.75	74.75	74.75	
[illegible]	[illegible]	69.49	98.91	94.20	103.62	
[illegible]	[illegible]	43.00	43.00	43.00	43.00	
	[illegible]	36.12	36.12	36.12	36.12	
	[illegible]		22.18	22.18	22.18	
	[illegible]	2.00	2.00	4.00	40.00	
	[illegible]		155.00			
	[illegible]	5.15	9.35	8.66	4.77	
	[illegible]	32.40	33.60	38.40	43.60	
[illegible]	[illegible]	9.61	19.96	16.56	9.24	
	[illegible]	9.61	19.96	16.56	9.24	
	[illegible]				100.00	
	[illegible]	25.00				
	[illegible]	12.60	13.20	15.20	17.20	
[illegible]	[illegible]	13.00	13.50	15.60	16.00	
	[illegible]	2.50	3.00	3.00	3.50	
	[illegible]	60.00	60.00	60.00	60.00	
[illegible]	[illegible]	64.52	67.00	76.93	86.85	
	[illegible]	129.03	133.99	153.65	173.70	
	[illegible]	103.23	107.20	123.07	133.96	

ಕಾರ್ಕಳ ಆನೆಕೆರೆ ಮತ್ತು ಇತರ ಕಾಮಗಾರಿಗಳು

617 (1214) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರ್ಕಳ ತಾಲ್ಲೂಕಿನ ಆನೆಕೆರೆಯನ್ನು ಅಭಿವೃದ್ಧಿಪಡಿಸಲು ಇಲಾಖೆಯ ಪ್ರಸಕ್ತ ಸಾಲಿನ ವರ್ಷದಲ್ಲಿ ಯಾವ ಮೂಲದಿಂದ ಎಷ್ಟು ಹಣವನ್ನು ಒದಗಿಸಲಾಗಿದೆ?

ಆ) ಒದಗಿಸಿದ್ದಲ್ಲಿ, ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ, ಇಲ್ಲದಿದ್ದಲ್ಲಿ ಕಾರಣಗಳೇನು? ಹಾಗೂ ಎಂದು ಪ್ರಾರಂಭ ಮಾಡಲಾಗುವುದು?

ಇ) ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಯಾವ ಯಾವ ಕಾಮಗಾರಿಗಳಿಗಾಗಿ ಎಷ್ಟು ಹಣ ಒದಗಿಸಲಾಗಿದೆ? ಖರ್ಚಾದ ಹಣವೆಷ್ಟು? ಹಾಗೂ ಪ್ರಾರಂಭಿಸದೆ ಇದ್ದ ಕಾಮಗಾರಿಗಳು ಯಾವುವು (ಕ್ಷೇತ್ರವಾರು ಕಾಮಗಾರಿವಾರು ವಿವರ ಒದಗಿಸುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಕಾರ್ಕಳ ತಾಲ್ಲೂಕಿನ ಆನೆಕೆರೆಯನ್ನು ಅಭಿವೃದ್ಧಿಪಡಿಸಲು ನಬಾರ್ಡ್ ಆರ್.ಐ.ಡಿ.ಎಫ್.14 ರಡಿ ರೂ. 65.00 ಲಕ್ಷ ಮೊತ್ತದ ಅಂದಾಜಿಗೆ ಮಂಜೂರಾತಿ ನೀಡಲಾಗಿದೆ. ಅದರಲ್ಲಿ ನಬಾರ್ಡ್ ಸಾಲದಿಂದ ರೂ. 61.75 ಲಕ್ಷಗಳನ್ನು ಹಾಗೂ ರೂ. 3.25 ಲಕ್ಷಗಳನ್ನು ರಾಜ್ಯ ಸರ್ಕಾರ ಭರಿಸುತ್ತದೆ.

ಆ) ಕೆರೆಯಲ್ಲಿ ಹೆಚ್ಚಿನ ಪ್ರಮಾಣದ ನೀರು ತುಂಬಿರುವ ಕಾರಣ ಕಾಮಗಾರಿಯನ್ನು ಇದುವರೆಗೂ ಪ್ರಾರಂಭಿಸಿರುವುದಿಲ್ಲ. ನೀರಿನ ಪ್ರಮಾಣ ಕಡಿಮೆಯಾದ ನಂತರ ಅಂದರೆ, ಏಪ್ರಿಲ್ 2010ನೇ ತಿಂಗಳಿನಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

[illegible]

[illegible]

[illegible]	[illegible]	[illegible]	[illegible]	[illegible]	[illegible]	[illegible]
1	2	3	3	4	5	6
			4711-01- [illegible]			
1	[illegible]	[illegible]	[illegible]	[illegible]		[illegible]
2	[illegible]	[illegible]	[illegible]	[illegible]		[illegible]
3	[illegible]	[illegible]	[illegible]	25.00		[illegible]
4	[illegible]	[illegible]	[illegible]	25.00		[illegible]
5	[illegible]	[illegible]	[illegible]	[illegible]		[illegible]
6	[illegible]	[illegible]	[illegible]	[illegible]		[illegible]
7	[illegible]	[illegible]	[illegible]	10.00		[illegible]
8	[illegible]	[illegible]	[illegible]	20.00		[illegible]
9	[illegible]	[illegible]	[illegible]	15.00		[illegible]
10	[illegible]	[illegible]	[illegible]	20.00		[illegible]
11	[illegible]	[illegible]	[illegible]	10.00		[illegible]
12	[illegible]	[illegible]	[illegible]	20.00		[illegible]
13	[illegible]	[illegible]	[illegible]	30.00		[illegible]
14	[illegible]	[illegible]	[illegible]	10.00		[illegible]
15	[illegible]	[illegible]	[illegible]	10.00		[illegible]
16	[illegible]	[illegible]	[illegible]	10.00		[illegible]
17	[illegible]	[illegible]	[illegible]	15.00		[illegible]
18	[illegible]	[illegible]	[illegible]	12.00		[illegible]
19	[illegible]	[illegible]	[illegible]	20.00		[illegible]
20	[illegible]	[illegible]	[illegible]	20.00		[illegible]
21	[illegible]	[illegible]	[illegible]	25.00		[illegible]
22	[illegible]	[illegible]	[illegible]	20.00		[illegible]
23	[illegible]	[illegible]	[illegible]	20.00		[illegible]
			[illegible]	[illegible]		

[illegible]

[illegible]

[illegible]	[illegible]	[illegible]	[illegible]	[illegible]	[illegible]	[illegible]
1	2	3	4	5	6	7
			[illegible]			
1	[illegible]	[illegible]	[illegible]	[illegible]		[illegible]
2	[illegible]	[illegible]	[illegible]	[illegible]		[illegible]
3	[illegible]	[illegible]	[illegible]	[illegible]		[illegible]
4	[illegible]	[illegible]	[illegible]	[illegible]		[illegible]
5	[illegible]	[illegible]	[illegible]	[illegible]		[illegible]
6	[illegible]	[illegible]	[illegible]	[illegible]		[illegible]
7	[illegible]	[illegible]	[illegible]	[illegible]		[illegible]
8	[illegible]	[illegible]	[illegible]	[illegible]		[illegible]
9	[illegible]	[illegible]	[illegible]	[illegible]		[illegible]
10	[illegible]	[illegible]	[illegible]	[illegible]		[illegible]
11	[illegible]	[illegible]	[illegible]	[illegible]		[illegible]
12	[illegible]	[illegible]	[illegible]	[illegible]		[illegible]
13	[illegible]	[illegible]	[illegible]	[illegible]		[illegible]
14	[illegible]	[illegible]	[illegible]	[illegible]		[illegible]
15	[illegible]	[illegible]	[illegible]	[illegible]		[illegible]
16	[illegible]	[illegible]	[illegible]	[illegible]		[illegible]
17	[illegible]	[illegible]	[illegible]	[illegible]		[illegible]
18	[illegible]	[illegible]	[illegible]	[illegible]		[illegible]
19	[illegible]	[illegible]	[illegible]	[illegible]		[illegible]
20	[illegible]	[illegible]	[illegible]	[illegible]		[illegible]
21	[illegible]	[illegible]	[illegible]	[illegible]		[illegible]

೧	೨	೩	೪	೫	೬	೭
	[illegible]	[illegible]	[illegible]	50.00		[illegible]
			[illegible]	[illegible]		
			[illegible]			
೧	[illegible]	[illegible]	[illegible]	104.00		[illegible]
೧	[illegible]	[illegible]	[illegible]	58.00		[illegible]
೨	[illegible]	[illegible]	[illegible]	40.00		[illegible]
			೨	98.00		
೧	[illegible]	[illegible]	[illegible]	80.00		[illegible]
೨	[illegible]	[illegible]	[illegible]	06.00		[illegible]
೩	[illegible]	[illegible]	[illegible]	[illegible]		[illegible]
೪	[illegible]	[illegible]	[illegible]	8.00		[illegible]
೫	[illegible]	[illegible]	[illegible]	18.00		[illegible]
			೫	106.00		
೧	[illegible]	[illegible]	[illegible]	40.00		[illegible]
೨	[illegible]	[illegible]	[illegible]	32.00		[illegible]
೩	[illegible]	[illegible]	[illegible]	25.00		[illegible]
			೩	97.00		
೧	[illegible]	[illegible]	[illegible]	50.00		[illegible]
			[illegible]			
			[illegible]			
೧	[illegible]	[illegible]	[illegible]	10.00		[illegible]
೨	[illegible]	[illegible]	[illegible]	10.00		[illegible]
೩	[illegible]	[illegible]	[illegible]	10.00		[illegible]
			[illegible]	30.00		
			[illegible]			
೧	[illegible]	[illegible]	[illegible]	10.00		[illegible]
೨	[illegible]	[illegible]	[illegible]	10.00		[illegible]
			[illegible]	20.00		

O.30 F-123

ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು

628 (1230) ಶ್ರೀ ಖಾದರ್ ಯು.ಟಿ. (ವಿಧಾನ ಸಭಾ ಸದಸ್ಯರು) (ಮಂಗಳೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ಅನುಮತಿ ನೀಡಿದೆಯೇ? ಅನುಮತಿ ಪಡೆದು ಕಾರ್ಯಾರಂಭ ಮಾಡದೇ ಇರುವ ಕೈಗಾರಿಕೆಗಳ ಸಂಖ್ಯೆ ಎಷ್ಟು (ವಿವರ ನೀಡುವುದು);

ಆ) ಕಾರ್ಯಾರಂಭಗೊಂಡಿದ್ದಲ್ಲಿ, ಈ ಕೈಗಾರಿಕೆಗಳಿಗೆ ಹೂಡಿರುವ ಬಂಡವಾಳ ಎಷ್ಟು; ಇದರಿಂದ ಎಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗಿವೆ;

ಇ) ಇದರಿಂದ ಸರ್ಕಾರದ ಬೊಕ್ಕಸಕ್ಕೆ ಬಂದ ಹಣ ಎಷ್ಟು (ವರ್ಷವಾರು ವಿವರ ನೀಡುವುದು)?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಕಳೆದ 2 ವರ್ಷಗಳಲ್ಲಿ (ಅಂದರೆ 2008–09 ಹಾಗೂ 2009–10ನೇ ಸಾಲು) ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆಯಲ್ಲಿ ರೂ.50 ಕೋಟಿಗಿಂತ ಹೆಚ್ಚಿನ ಬಂಡವಾಳ ಹೂಡಿಕೆಯ 126 ಯೋಜನೆಗಳನ್ನು ಅನುಮೋದಿಸಲಾಗಿದೆ. ಇವುಗಳಲ್ಲಿ 2 ಯೋಜನೆಗಳು ಕಾರ್ಯಾರಂಭ ಮಾಡಿರುತ್ತವೆ.

ಇದೇ ಅವಧಿಯಲ್ಲಿ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ (ರೂ. 3.00 ಕೋಟಿಯಿಂದ ರೂ.50.00 ಕೋಟಿ ವರೆಗಿನ ಬಂಡವಾಳ ಹೂಡಿಕೆಯ) 574 ಯೋಜನೆಗಳನ್ನು ಅನುಮೋದಿಸಲಾಗಿದೆ.

ಸದರಿ ಯೋಜನೆಗಳು ಅನುಷ್ಠಾನದ ವಿವಿಧ ಹಂತದಲ್ಲಿವೆ. ಹೆಚ್ಚಿನ ಬಂಡವಾಳ ಹೂಡಿಕೆಯ ಯೋಜನೆಗಳಾಗಿದ್ದು, ಕಾರ್ಯಾರಂಭ ಮಾಡಲು ಎರಡು ವರ್ಷ ಅವಧಿ ನೀಡಲಾಗುತ್ತದೆ.

ಅನುಮೋದಿತ ಯೋಜನೆಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ–ಅ ದಲ್ಲಿ ಲಗತ್ತಿಸಲಾಗಿದೆ.

ಆ) ರೂ.50.00 ಕೋಟಿಗಿಂತ ಹೆಚ್ಚು ಬಂಡವಾಳ ಹೂಡಿಕೆಯ ಅನುಮೋದಿತ ಯೋಜನೆಗಳಲ್ಲಿ 2 ಯೋಜನೆಗಳು ಅನುಷ್ಠಾನಗೊಂಡಿದ್ದು, ಇದರಿಂದ ರೂ. 484.21 ಕೋಟಿ ಬಂಡವಾಳ ಹೂಡಿಕೆಯಾಗಿದ್ದು, ಇದರಿಂದ 927 ಜನರಿಗೆ ಉದ್ಯೋಗವಕಾಶ ಲಭ್ಯವಾಗಿರುತ್ತದೆ.

ಇ) ಸರ್ಕಾರದ ಬೊಕ್ಕಸಕ್ಕೆ ಮೌಲ್ಯವರ್ಧಿತ ತೆರಿಗೆ, ಕೇಂದ್ರೀಯ ಮಾರಾಟ ತೆರಿಗೆ, ಆಸ್ತಿ ತೆರಿಗೆ ಮತ್ತು ಇತರೆ ಅನ್ವಯಿಸುವ ತೆರಿಗೆಗಳು ಆದಾಯದ ರೂಪದಲ್ಲಿ ಬರುತ್ತದೆ.

ANNEXURE – A TO LAQ-1230
Districtwise projects approved in SHLCC
From 2008-09 to 2009-10

District	No. of projects	Investment in Rs. Crores	Employment
Bagalkot	6	42260	21582
Bangalore (Rural)	15	14320.75	189162
Bangalore(Urban)	14	6226.48	230432
Belgaum	9	7240.86	3064
Bellary	15	109225.5	51716
Bidar	1	300	350
Bijapur	4	52634.01	9892
Chamarajanagar	1	99	100
Chitradurga	1	258	270
Dakshina Kannada	8	8957	12100
Dharwad	2	270	7200
Gadag	1	68.5	28
Gulbarga	10	9279.45	3165
Hassan	2	2096.21	1205
Haveri	2	2005	1077
Kolar	2	288.01	3830
Koppal	5	1292.68	1901

Mandya	1	92.42	1025
Many Districts	2	11340	2770
Mysore	7	1794.76	34030
Raichur	3	12126.4	9524
Ramanagara	6	1203.68	5371
Shimoga	2	1003.94	1205
Tumkur	3	1990	3500
Udupi	2	1530	239
Uttara Kannada	2	7600	715
Total	**126**	**295502.6**	**595453**

ಭೂಮಾಪನ ವಿವರಗಳು

619 (1225) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಭೂಮಾಪನ ಕಾರ್ಯಕ್ರಮ ಕುರಿತ ಪ್ರಗತಿಯ ವಿವರಗಳೇನು?

ಆ) ಭೂಮಾಪನ ಕೆಲಸ ಕಾರ್ಯಗಳನ್ನು ಯಾವ ರೀತಿಯಲ್ಲಿ ಕೈಗೊಳ್ಳಲಾಗಿದೆ; ಮಾಪನ ಕಾರ್ಯಕ್ಕೆ ಬೇಕಾಗುವ ಭೂಮಾಪಕರುಗಳನ್ನು ನೇಮಕ ಮಾಡಿಕೊಳ್ಳಲಾಗಿದೆಯೇ?

ಇ) ಖಾಸಗಿ ಸಹಭಾಗಿತ್ವದಲ್ಲಿ ಕೈಗೊಂಡ ಭೂಮಾಪನ ಕಾರ್ಯದ ವಿವರಗಳೇನು?

ಈ) ಭೂಮಾಪನ ಇಲಾಖೆಯಲ್ಲಿ ಖಾಲಿ ಇರುವ ಭೂಮಾಪಕರ ಹುದ್ದೆಗಳೆಷ್ಟು ಹಾಗೂ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಕ್ರಮಗಳೇನು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಭೂಮಾಪನ ಕಾರ್ಯಕ್ರಮ ಕುರಿತ ಪ್ರಗತಿ ಈ ಕೆಳಗಿನಂತಿದೆ:-

1. ನಗರಮಾಪನ ಕೆಲಸ :- ರಾಜ್ಯದ 48 ನಗರ / ಪಟ್ಟಣಗಳಲ್ಲಿ ನಗರಮಾಪನ ನಿರ್ವಹಣೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಏಪ್ರಿಲ್-2009 ರಿಂದ ಜನವರಿ-2010 ರವರೆಗೆ

ನಗರಮಾಪನ ಕಛೇರಿಗಳಲ್ಲಿ ವಿವಿಧ ಪ್ರಕರಣಗಳ ವಿಲೇವಾರಿ ಒಟ್ಟು 101192 ಆಗಿರುತ್ತದೆ.

2. ಮೇಲಿನ ಅವಧಿಯಲ್ಲಿ ಮ್ಯುಟೇಶನ್ ಹಾಗೂ ಅಳತೆ ಪ್ರಕರಣಗಳು ಒಟ್ಟು 161593 ವಿಲೇವಾರಿ ಆಗಿರುತ್ತದೆ.

3. 27 (ಗ್ರಾಮ / ಪಟ್ಟಣಗಳ ಪೈಕಿ 15 ಪ್ರದೇಶಗಳಲ್ಲಿ ನಗರ ಮಾಪನ ಕಾರ್ಯವು ಪೂರ್ಣಗೊಂಡಿದ್ದು, ಉಳಿದೆಡೆ ಗಳಲ್ಲಿ ಪ್ರಗತಿಯಲ್ಲಿರುತ್ತದೆ.

4. ಖಾಸಗಿ ಸಹಭಾಗಿತ್ವದೊಂದಿಗೆ (ಪಿ.ಪಿ.ಪಿ.) ಮಾದರಿ ಯೋಜನೆಯಡಿ 5 ನಗರಗಳಾದ ಮಂಗಳೂರು, ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ-ಧಾರವಾಡ, ಬಳ್ಳಾರಿ ನಗರ ಮಾಪನ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ.

5. **ಪರವಾನಗಿ ಭೂಮಾಪಕರ ಯೋಜನೆ:-**

ಪರವಾನಗಿ ಭೂಮಾಪಕರ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿದೆ. ಜನವರಿ 2010ರ ಅಂತ್ಯಕ್ಕೆ 106338 ಪ್ರಕರಣಗಳಲ್ಲಿ 11ಇ ನಕ್ಷೆಗಳನ್ನು ತಯಾರಿಸಿ ಸಾರ್ವಜನಿಕರಿಗೆ ನೀಡಲಾಗಿದೆ.

6. **ತತ್ಕಾಲ್ ಪೋಡಿ ಯೋಜನೆ:-**

ತತ್ಕಾಲ್ ಪೋಡಿ ಯೋಜನೆಯನ್ನು ಜಾರಿಗೊಳಿಸ ಲಾಗಿದ್ದು, ಜನವರಿ 2010ರ ಅಂತ್ಯಕ್ಕೆ ಒಟ್ಟು 21759 ಅರ್ಜಿಗಳನ್ನು ವಿಲೇಗೊಳಿಸಲಾಗಿದೆ.

ಆ) ಭೂಮಾಪನ ಕೆಲಸ ಕಾರ್ಯವನ್ನು ಶಂಕು ಸರಪಳಿ, ಸಮತಲ ಮೇಜು ಮೋಜಣಿ (P.T) ಟೋಟಲ್ ಸ್ಟೇಷನ್, ಡಿ.ಜಿ.ಪಿ.ಎಸ್., ಉಪಕರಣಗಳ ಮುಖಾಂತರ ಅಳತೆ ಕೆಲಸವನ್ನು ಕೈಗೊಳ್ಳಲಾಗುತ್ತಿದೆ. ಹಮ್ಮಿಕೊಂಡಿರುವ ಯೋಜನೆಗಳಿಗೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಭೂಮಾಪಕರನ್ನೇ ನಿಯೋಜಿಸಿದೆ. ಭೂಮಾಪಕರನ್ನು ನೇಮಕ ಮಾಡುವ ಬಗ್ಗೆ ಕಂಡಿಕೆ (ಈ)ನಲ್ಲಿ ಉತ್ತರಿಸಲಾಗಿದೆ.

ಇ) ಖಾಸಗಿ ಸಹಭಾಗಿತ್ವದಲ್ಲಿ 12ನೇ ಹಣಕಾಸು ಯೋಜನೆ ಯಡಿಯಲ್ಲಿ ಮಂಜೂರಾದ ಹಣವನ್ನು ಬಳಸಿಕೊಂಡು ಮಂಗಳೂರು, ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ, ಧಾರವಾಡ, ಬಳ್ಳಾರಿ ಸೇರಿದಂತೆ ಒಟ್ಟು ರಾಜ್ಯದ 5 ನಗರಗಳಲ್ಲಿ ಪಿ.ಪಿ.ಪಿ. (ಖಾಸಗಿ ಸಹಭಾಗಿತ್ವ) ಆಧಾರಿತ ನಗರಮಾಪನ ದಾಖಲೆಗಳನ್ನು ಸಿದ್ಧಪಡಿಸುವ ಕಾರ್ಯ ಪ್ರಾರಂಭಿಸಲಾಗಿದೆ.

ಈ) ಭೂಮಾಪನ ಇಲಾಖೆಗೆ ಇತ್ತೀಚೆಗೆ ಹೊಸದಾಗಿ ಸೃಜನೆಗೊಂಡ 400 ಭೂಮಾಪಕರ ಹುದ್ದೆಗಳು ಸೇರಿದಂತೆ ಒಟ್ಟು 735 ಹುದ್ದೆಗಳು ಖಾಲಿ ಇರುತ್ತವೆ. ಆ ಪೈಕಿ 108 ಹುದ್ದೆಗಳಿಗೆ ಅಭ್ಯರ್ಥಿಗಳ ತರಬೇತಿ ಮುಗಿದಿದ್ದು, ತಕ್ಷಣವೇ ನೇಮಕಾತಿ ಮಾಡಲಾಗುತ್ತದೆ. ಉಳಿದ 627 ಹುದ್ದೆಗಳ ಪೈಕಿ 550 ಹುದ್ದೆಗಳನ್ನು ಭರ್ತಿ ಮಾಡಲು ಅನುಮೋದಿಸಿದೆ.

Objectives and guidelines of the KDP Meeting

622 (870) Sri J.D. Naik (Bhatkala) : Hon'ble Minister for Minor Irrigation, Planning, Programme Monitoring and Statistics.

a) What are the aims, objectives and guidelines of the KDP meeting at the taluk level under the Chairmanship of Hon'ble Member of Legislative Assembly? (Furnish Details)

b) Which are the officers of different departments have to attend this meeting and what action will be taken against the absentees?

Sri Govindh M. Karjol (Hon'ble Minister for Minor Irrigation, Planning, Programme Monitoring and Statistics) :

a) In the GO No.: PD 309 PTP 94, dated: 7th August 1995, taluk level KDP quarterly progress review committee under the chairmanship of Hon'ble Member of Legislative Assembly has been constituted. This committee has to meet once in a quarter and review the progress achieved under the Karnataka Development Programme. The aims and objectives

of this meeting is to review the Progress and suggest improvement in the implementation of various development programmes and discuss the inter-departmental issues/problems in order to sort out the same. For this, the Planning Departent is issuing Circular instructions from time to time. Copy of the Government Order dated: 07.08.1995 is enclosed.

b) According to the said Government Order the following taluk level Officers have to attend the taluk level quarterly review committee meeting.

1. Tahsildar
2. Executve Officer of taluk panchayat (Member Secretary)
3. All the taluk level officers of departments / public sector undertakings / Co-operative institutions/ Statutory Boards and Corporations concerned

According to the detailed Circular instructions issued vide circular No. PDSIMM 2002 dated: 15.02.2002, based on the report of the Executive Officer of taluk Panchayat, the Chief Executive Officer of Zilla Panchayat has to take disciplinary action against the absentee officers coming under the control of Chief Executive Officer For the absentee officers who do not come under the control of the CEO., the respective Controlling Officers have to take disciplinary action against such officers, based on the report submitted by the Executive Officer of the taluk panchayat.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯಮಟ್ಟದ ಜಿಲ್ಲಾಮಟ್ಟದ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳನ್ನು ಪುನರ್ ರಚಿಸುವ ಬಗ್ಗೆ.

* * *

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ:ಪಿಡಿ 212 ಪಿಎಂಎಂ 87, ದಿನಾಂಕ: 12.10.1987.
2. ಸರ್ಕಾರಿ ಆದೇಶ ಸಂಖ್ಯೆ:ಪಿಡಿ 37 ಸಿಇಪಿ 89 ದಿನಾಂಕ: 3.1.1990.
3. ಸರ್ಕಾರಿ ಆದೇಶ ಸಂಖ್ಯೆ: ಪಿಡಿ 34 ಸಿಇಪಿ 89, ದಿನಾಂಕ: 26.4.1990.
4. ಸರ್ಕಾರಿ ಆದೇಶ ಸಂಖ್ಯೆ: ಪಿಡಿ 235 ಸಿಓಪಿ 93, ದಿನಾಂಕ: 21.2.1994.
5. ಸರ್ಕಾರಿ ಆದೇಶ ಸಂಖ್ಯೆ: ಪಿಡಿ 309 ಪಿಟಿಪಿ 94, ದಿನಾಂಕ: 19.12.1994.

ಪ್ರಸ್ತಾವನೆ :

ಮೇಲೆ ಕ್ರಮಸಂಖ್ಯೆ (1) ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿ ಅನುಷ್ಠಾನದ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳನ್ನು ಪುನರ್ ರಚಿಸುವ ಬಗ್ಗೆ ಆದೇಶವನ್ನು ಹೊರಡಿಸಿತ್ತು. ಮೇಲೆ ಕ್ರಮಸಂಖ್ಯೆ (2) ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮಗಳನ್ನೊಳಗೊಂಡಂತೆ) ಕರ್ನಾಟಕ 20 ಅಂಶ ಕಾರ್ಯಕ್ರಮವೆಂದು ಪುನರ್ ನಾಮಾಂಕಿತಗೊಳಿಸಿತ್ತು. ಮೇಲೆ ಕ್ರಮಸಂಖ್ಯೆ (3) ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಕರ್ನಾಟಕ 20

ಅಂಶ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಜಿಲ್ಲಾಮಟ್ಟದ ಮತ್ತು ತಾಲ್ಲೂಕುಮಟ್ಟದ ಸಮಿತಿಗಳನ್ನು ಪರಿಷ್ಕರಿಸಿ ರಚಿಸುವ ಬಗ್ಗೆ ಮತ್ತು ರಾಜ್ಯಮಟ್ಟದ ಉನ್ನತಾಧಿಕಾರ ಸಮಿತಿಯನ್ನು ರಚಿಸುವ ಬಗ್ಗೆ ಆದೇಶವನ್ನು ಹೊರಡಿಸಿತ್ತು. ಮೇಲೆ ಕ್ರಮಸಂಖ್ಯೆ (4) ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಕರ್ನಾಟಕ 20 ಅಂಶ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳಲ್ಲಿ ಸದಸ್ಯತ್ವವನ್ನು ವಿಸ್ತರಿಸುವ ಬಗ್ಗೆ ಆದೇಶವನ್ನು ಹೊರಡಿಸಿತ್ತು. ಮೇಲೆ ಕ್ರಮಸಂಖ್ಯೆ (5) ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಶಾಸಕರುಗಳು ಮತ್ತು ಅಧಿಕಾರೇತರ ಸದಸ್ಯರುಗಳಿರುವ ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷರಾಗಿರುವ ಕರ್ನಾಟಕ 20 ಅಂಶ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಎಲ್ಲಾ ಜಿಲ್ಲಾಮಟ್ಟದ ಸಮಿತಿಗಳ ಮತ್ತು ತಾಲ್ಲೂಕು ಕೇಂದ್ರ ಕಾರ್ಯಸ್ಥಾನದ ವಿಧಾನ ಸಭಾ ಚುನಾವಣೆ ಕ್ಷೇತ್ರದ ವಿಧಾನ ಸಭಾ ಸದಸ್ಯರು ಅಧ್ಯಕ್ಷರಾಗಿರುವ ಕರ್ನಾಟಕ 20 ಅಂಶ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಎಲ್ಲಾ ತಾಲ್ಲೂಕು ಮಟ್ಟದ ಸಮಿತಿಗಳ ಕಾರ್ಯನಿರ್ವಹಣೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶವರೆಗೆ ಸ್ಥಗಿತಗೊಳಿಸಿತ್ತು.

2. ಸರ್ಕಾರವು ಈ ವಿಷವನ್ನು ಪರಿಗಣಿಸಿ ವಿವಿಧ ಹಂತದ ಪರಿಶೀಲನೆಯಲ್ಲಿ 20 ಅಂಶ ಕಾರ್ಯಕ್ರಮ ಮಾತ್ರವಲ್ಲದೆ ಇತರೆ ಮುಖ್ಯವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಳವಡಿಸಲು ತೀರ್ಮಾನಿಸಿದೆ.

3. ಆದ್ದರಿಂದ ಸರ್ಕಾರವು ಮೇಲಿನ ಕ್ರಮಸಂಖ್ಯೆ 1 ರಿಂದ 5 ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶಗಳನ್ನು ರದ್ದುಗೊಳಿಸಿ ಕೆಳಕಂಡ ಆದೇಶವನ್ನು ಹೊರಡಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಪಿಡಿ 309 ಪಿಟಿಪಿ 94,

ಬೆಂಗಳೂರು : ದಿನಾಂಕ: : 7ನೇ ಆಗಸ್ಟ್, 1995.

ಕರ್ನಾಟಕ 20 ಅಂಶ ಕಾರ್ಯಕ್ರಮವನ್ನು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (20 ಅಂಶ ಕಾರ್ಯಕ್ರಮವು ಸೇರಿದಂತೆ) ಎಂದು ಮನರ್ ನಾಮಾಂಕಿತಗೊಳಿಸಲಾಗಿದೆ.

2. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು

O. 30 F-124

ರಾಜ್ಯಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಅನುಕ್ರಮವಾಗಿ ಕೆಳಕಂಡಂತೆ ರಚಿಸಿರುವ ಸಮಿತಿಗಳು ವಿವಿಧ ಹಂತಗಳಲ್ಲಿ ಕನಿಷ್ಟ ಪಕ್ಷ ಮೂರು ತಿಂಗಳಿಗೊಮ್ಮೆ ಪರಿಶೀಲನೆ ನಡೆಸತಕ್ಕದ್ದು ಈ ಸಮಿತಿಗಳ ಸ್ವರೂಪವು ಅವುಗಳು ಮುಂದೆ ತೋರಿಸಿರುವಂತೆ ಇರುತ್ತದೆ:

ಅ. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯಮಟ್ಟದ ಉನ್ನತ ಅಧಿಕಾರ ಸಮಿತಿ.

i)	ಮುಖ್ಯಮಂತ್ರಿಗಳು	ಅಧ್ಯಕ್ಷರು.
ii)	ಹಣಕಾಸು ಮತ್ತು ಯೋಜನಾ ಸಚಿವರು	ಉಪಾಧ್ಯಕ್ಷರು.
iii)	ಮುಖ್ಯಮಂತ್ರಿಗಳು ನಾಮನಿರ್ದೇಶನ ಮಾಡುವ ಸಚಿವರುಗಳು	ಸದಸ್ಯರುಗಳು
iv)	ಸರ್ಕಾರದ ಮುಖ್ಯ ಕಾರ್ಯದರ್ಶಿ	ಸದಸ್ಯರು.
v)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ	ಸದಸ್ಯರು.
vi)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು	ಸದಸ್ಯರು.
vii)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ	ಸದಸ್ಯರು.
viii)	ಸರ್ಕಾರದ ಕಾರ್ಯದರ್ಶಿ, ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ	ಸದಸ್ಯ ಕಾರ್ಯದರ್ಶಿ
ix)	ಸಂಬಂಧಪಟ್ಟ ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು : ಕಾರ್ಯದರ್ಶಿಗಳು, ಇಲಾಖಾ ಮುಖ್ಯಸ್ಥರುಗಳು ಮತ್ತು ಸಾರ್ವಜನಿಕ ವಲಯದ ಉದ್ಯಮಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು	ಆಹ್ವಾನಿತರು.

ಆ. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿ.

i) ಜಿಲ್ಲಾ ಉಸ್ತುವಾರಿ ಸಚಿವರು	ಅಧ್ಯಕ್ಷರು.
ii) ಅಧ್ಯಕ್ಷರು, ಜಿಲ್ಲಾ ಪಂಚಾಯತ್	ಉಪಾಧ್ಯಕ್ಷರು
iii) ಜಿಲ್ಲೆಯನ್ನು : ಜಿಲ್ಲೆಯ ಭಾಗಗಳನ್ನು ಪ್ರತಿನಿಧಿಸುವ: ಜಿಲ್ಲೆಯಲ್ಲಿ ವಾಸವಾಗಿರುವ ಸಂಸತ್ ಸದಸ್ಯರುಗಳು (ರಾಜ್ಯ ಸಭೆ ಮತ್ತು ಲೋಕ ಸಭೆ)	ಸದಸ್ಯರುಗಳು
iv) ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್	ಸದಸ್ಯರು.
v) ಜಿಲ್ಲೆಯಲ್ಲಿನ ತಾಲ್ಲೂಕುಗಳನ್ನು : ತಾಲ್ಲೂಕಿನ ಭಾಗಗಳನ್ನು ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರುಗಳು	ಸದಸ್ಯರುಗಳು
vi) ಜಿಲ್ಲೆಯಲ್ಲಿ ವಾಸವಾಗಿರುವ : ಜಿಲ್ಲೆಯನ್ನು : ಜಿಲ್ಲೆಯ ಭಾಗಗಳನ್ನು ಪ್ರತಿನಿಧಿಸುವ ವಿಧಾನ ಪರಿಷತ್ ಸದಸ್ಯರುಗಳು	ಸದಸ್ಯರುಗಳು
vii) ಜಿಲ್ಲಾ ಪಂಚಾಯತಿಗಳ ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳು.	ಸದಸ್ಯರುಗಳು
viii) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಒಬ್ಬ ಪ್ರತಿನಿಧಿ	ಸದಸ್ಯರು.
ix) ಹಿಂದುಳಿದ ವರ್ಗದ ಕೋಮಿನ ಒಬ್ಬ ಪ್ರತಿನಿಧಿ	ಸದಸ್ಯರು.
x) ಧಾರ್ಮಿಕ ಅಲ್ಪಸಂಖ್ಯಾತ ಕೋಮಿನ ಒಬ್ಬ ಪ್ರತಿನಿಧಿ	ಸದಸ್ಯರು.
xi) ಸಾಮಾನ್ಯ ವರ್ಗಕ್ಕೆ ಸೇರಿದ ಸಮಾಜ ಸೇವಾಕರ್ತರ ಒಬ್ಬ ಪ್ರತಿನಿಧಿ.	ಸದಸ್ಯರು.
xii) ಒಬ್ಬ ಮಹಿಳಾ ಪ್ರತಿನಿಧಿ	ಸದಸ್ಯರು.
xiii) ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತದ	

	ವ್ಯವಸ್ಥಾಪಕ ನಿರ್ದೇಶಕರ ಪ್ರತಿನಿಧಿ (ಪ್ರತಿನಿಧಿಯನ್ನು ವ್ಯವಸ್ಥಾಪಕ ನಾಮನಿರ್ದೇಶನ ಮಾಡುವುದು)	ಸದಸ್ಯರು.
xiv)	ಡಿ.ಸಿ.ಸಿ.ಬ್ಯಾಂಕ್ ಅಧ್ಯಕ್ಷರು	ಸದಸ್ಯರು.
xv)	ಜಿಲ್ಲಾಧಿಕಾರಿ	ಸದಸ್ಯರು.
xvi)	ಜಿಲ್ಲೆಯ ಎಲ್ಲಾ ಉಪ ವಿಭಾಗಾಧಿಕಾರಿಗಳು	ಸದಸ್ಯರುಗಳು
xvii)	ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್	ಸದಸ್ಯ ಕಾರ್ಯದರ್ಶಿ.
xviii)	ಎಲ್ಲಾ ಸಂಬಂಧಪಟ್ಟ ಇಲಾಖೆಗಳ ಜಿಲ್ಲಾ ಮಟ್ಟದ ಮುಖ್ಯಸ್ಥರುಗಳು	ಆಹ್ವಾನಿತರು.
xix)	ಎಲ್ಲಾ ಸಂಬಂಧಪಟ್ಟ ಸಹಕಾರಿ ಸಂಸ್ಥೆಗಳ, ಸಾರ್ವಜನಿಕ ವಲಯ ಉದ್ಯಮಗಳ ಮತ್ತು ಶಾಸನಬದ್ಧ ನಿಕಾಯಗಳ ಜಿಲ್ಲಾ ಮಟ್ಟದ ಅಧಿಕಾರಿಗಳು	ಆಹ್ವಾನಿತರು.
xx)	ಲೀಡ್ ಬ್ಯಾಂಕ್ ಅಧಿಕಾರಿ.	ಆಹ್ವಾನಿತರು.

ಇ. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿ ಅನುಷ್ಠಾನಗೊಳಿಸಲು ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿ.

i)	ತಾಲ್ಲೂಕಿನಲ್ಲಿ ಅತಿ ಹೆಚ್ಚು ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರು	ಅಧ್ಯಕ್ಷರು.
ii)	ತಾಲ್ಲೂಕಿನ ಉಳಿದ ಭಾಗಗಳನ್ನು ಪ್ರತಿನಿಧಿಸುವ ವಿಧಾನಸಭಾ ಸದಸ್ಯರುಗಳು.	ಸಹ–ಅಧ್ಯಕ್ಷರುಗಳು.
iii)	ತಾಲ್ಲೂಕನ್ನು : ತಾಲ್ಲೂಕಿನ ಭಾಗಗಳನ್ನು ಪ್ರತಿನಿಧಿಸುವ: ತಾಲ್ಲೂಕಿನಲ್ಲಿ ವಾಸವಾಗಿರುವ ವಿಧಾನ ಪರಿಷತ್ತಿನ ಸದಸ್ಯರುಗಳು	ಸದಸ್ಯರುಗಳು

iv) ತಾಲ್ಲೂಕನ್ನು : ತಾಲ್ಲೂಕಿನ ಭಾಗಗಳನ್ನು ಪ್ರತಿನಿಧಿಸುವ : ತಾಲ್ಲೂಕಿನಲ್ಲಿ ವಾಸವಾಗಿರುವ ಸಂಸತ್ ಸದಸ್ಯರುಗಳು (ರಾಜ್ಯಸಭೆ ಮತ್ತು ಲೋಕಸಭೆ)	ಸದಸ್ಯರುಗಳು
v) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಒಬ್ಬ ಪ್ರತಿನಿಧಿ	ಸದಸ್ಯರು
vi) ಹಿಂದುಳಿದ ವರ್ಗದ ಕೋಮಿನ ಒಬ್ಬ ಪ್ರತಿನಿಧಿ	ಸದಸ್ಯರು
vii) ಧಾರ್ಮಿಕ ಅಲ್ಪಸಂಖ್ಯಾತ ಕೋಮಿನ ಒಬ್ಬ ಪ್ರತಿನಿಧಿ	ಸದಸ್ಯರು
viii) ಸಾಮಾನ್ಯ ವರ್ಗಕ್ಕೆ ಸೇರಿದ ಸಮಾಜ ಸೇವಾಕರ್ತರ ಇಬ್ಬರು ಪ್ರತಿನಿಧಿಗಳು	ಸದಸ್ಯರುಗಳು
ix) ಒಬ್ಬ ಮಹಿಳಾ ಪ್ರತಿನಿಧಿ	ಸದಸ್ಯರು
x) ಪಿಸಿಎಆರ್‌ಡಿ ಬ್ಯಾಂಕ್ ಅಧ್ಯಕ್ಷರು	ಸದಸ್ಯರು
xi) ಉಪ ವಿಭಾಗಾಧಿಕಾರಿ (ತಮ್ಮ ಅಧಿಕಾರ ವ್ಯಾಪ್ತಿಯಲ್ಲಿನ ತಾಲ್ಲೂಕುಗಳಲ್ಲಿ ಒಂದೇ ದಿನ ಒಂದಕ್ಕಿಂತ ಹೆಚ್ಚು ಸಮಿತಿ ಸಭೆಗಳನ್ನು ಕರೆಯಲಾಗಿದ್ದರೆ ಯಾವುದೇ ತಾಲ್ಲೂಕು ಸಮಿತಿಯ ಸಭೆಯಲ್ಲಿ ಭಾಗವಹಿಸುವ ಆಯ್ಕೆಯ ಸಮಿತಿಯ ಸಭೆಯಲ್ಲಿ ಭಾಗವಹಿಸುವ ಆಯ್ಕೆಯ ಅವಕಾಶ ಉಪ ವಿಭಾಗಾಧಿಕಾರಿಯವರಿಗೆ ಇರುತ್ತದೆ)	ಸದಸ್ಯರು
xii) ಟಿ.ಎ.ಪಿ.ಸಿ.ಎಂ.ಎಸ್. ಅಧ್ಯಕ್ಷರು	ಸದಸ್ಯರು
xiii) ಡಿಸಿಸಿ ಬ್ಯಾಂಕಿನ ತಾಲ್ಲೂಕು ಮಟ್ಟದ ಪ್ರತಿನಿಧಿ	ಸದಸ್ಯರು
xiv) ತಹಶೀಲ್ದಾರ್	ಸದಸ್ಯರು
xv) ಕ್ಷೇತ್ರಾಭಿವೃದ್ಧಿ ಅಧಿಕಾರಿ	ಸದಸ್ಯರು
xvi) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್	ಸದಸ್ಯ ಕಾರ್ಯದರ್ಶಿ

xvii) ಎಲ್ಲಾ ಸಂಬಂಧಪಟ್ಟ ಇಲಾಖೆಗಳ : ಸಾರ್ವಜನಿಕ ಉದ್ಯಮಗಳ: ಸಹಕಾರಿ ಸಂಸ್ಥೆಗಳ ಮತ್ತು ಶಾಸನಬದ್ಧ ನಿಕಾಯಗಳ: ತಾಲ್ಲೂಕು ಮಟ್ಟದ ಅಧಿಕಾರಿಗಳು — ಆಹ್ವಾನಿತರು

3. ಇದಲ್ಲದೆ, ಕೆಳಕಂಡಂತೆ ರಚಿಸಿರುವ ಸಮಿತಿಗಳು ಅನುಕ್ರಮವಾಗಿ ರಾಜ್ಯಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ವಿವಿಧ ಹಂತದ ಪರಿಶೀಲನೆಯನ್ನು ಪ್ರತಿ ತಿಂಗಳೂ ನಡೆಸತಕ್ಕದ್ದು, ಈ ಸಮಿತಿಗಳ ಸ್ವರೂಪವು ಅವುಗಳ ಮುಂದೆ ತೋರಿಸಿರುವಂತೆ ಇರುತ್ತದೆ.

ಅ. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿ ಅನುಷ್ಠಾನಗೊಳಿಸಲು ರಾಜ್ಯಮಟ್ಟದ ಆಸಿಕ ಪರಿಶೀಲನಾ ಸಮಿತಿ.

i)	ಸರ್ಕಾರದ ಮುಖ್ಯ ಕಾರ್ಯದರ್ಶಿ	ಅಧ್ಯಕ್ಷರು
ii)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ	ಸದಸ್ಯರು
iii)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು	ಸದಸ್ಯರು
iv)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ	ಸದಸ್ಯರು
v)	ಸಂಬಂಧಪಟ್ಟ ಸರ್ಕಾರದ ಪ್ರದಾನ ಕಾರ್ಯದರ್ಶಿಗಳು: ಕಾರ್ಯದರ್ಶಿಗಳು	ಸದಸ್ಯರುಗಳು
vi)	ನಿರ್ದೇಶಕರು, ಪಿಎಂಐ ವಿಭಾಗ, ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ	ಸದಸ್ಯ ಕಾರ್ಯದರ್ಶಿ
vii)	ಎಲ್ಲಾ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳು: ಸಾರ್ವಜನಿಕ ವಲಯದ ಉದ್ಯಮಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು	ಆಹ್ವಾನಿತರು

ಆ. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ ಮಾಸಿಕ ಪರಿಶೀಲನಾ ಸಮಿತಿ.

i) ಅಧ್ಯಕ್ಷರು, ಜಿಲ್ಲಾ ಪಂಚಾಯತ್	ಅಧ್ಯಕ್ಷರು
ii) ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್	ಉಪಾಧ್ಯಕ್ಷರು
iii) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್	ಸದಸ್ಯರು
iv) ಜಿಲ್ಲಾಧಿಕಾರಿ	ಸದಸ್ಯರು
v) ಜಿಲ್ಲಾ ಪಂಚಾಯತಿಯ ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳು	ಸದಸ್ಯರುಗಳು
vi) ಮುಖ್ಯ ಯೋಜನಾ ಅಧಿಕಾರಿ, ಜಿಲ್ಲಾ ಪಂಚಾಯತ್	ಸದಸ್ಯ ಕಾರ್ಯದರ್ಶಿ
vii) ಎಲ್ಲಾ ಸಂಬಂಧಪಟ್ಟ ಇಲಾಖೆಗಳ ಜಿಲ್ಲಾ ಮಟ್ಟದ ಮುಖ್ಯಸ್ಥರುಗಳು	ಆಹ್ವಾನಿತರು
viii) ಎಲ್ಲಾ ಸಂಬಂಧಪಟ್ಟ ಸಾರ್ವಜನಿಕ ವಲಯ ಉದ್ಯಮಗಳ: ಸಹಕಾರಿ ಸಂಸ್ಥೆಗಳ ಮತ್ತು ಶಾಸನಬದ್ಧ ನಿಕಾಯಗಳು: ಜಿಲ್ಲಾ ಮಟ್ಟದ ಮುಖ್ಯಸ್ಥರುಗಳು	ಆಹ್ವಾನಿತರು
ix) ಲೀಡ್ ಬ್ಯಾಂಕ್ ಅಧಿಕಾರಿ	ಆಹ್ವಾನಿತರು

ಇ. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ ಪರಿಣಾಮಕಾರಿ ಅನುಷ್ಠಾನಗೊಳಿಸಲು ತಾಲ್ಲೂಕು ಮಟ್ಟದ ಮಾಸಿಕ ಪರಿಶೀಲನಾ ಸಮಿತಿ.

i) ಅಧ್ಯಕ್ಷರು, ತಾಲ್ಲೂಕು ಪಂಚಾಯತ್	ಅಧ್ಯಕ್ಷರು
ii) ಉಪಾಧ್ಯಕ್ಷರು, ತಾಲ್ಲೂಕು ಪಂಚಾಯತ್	ಉಪಾಧ್ಯಕ್ಷರು
iii) ತಹಶೀಲ್ದಾರ್	ಸದಸ್ಯರು
iv) ತಾಲ್ಲೂಕು ಪಂಚಾಯತಿಯ ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳು	ಸದಸ್ಯರುಗಳು

v) ಕ್ಷೇತ್ರಾಭಿವೃದ್ಧಿ ಅಧಿಕಾರಿ — ಸದಸ್ಯರು

vi) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್ — ಸದಸ್ಯ ಕಾರ್ಯದರ್ಶಿ

vii) ಎಲ್ಲಾ ಸಂಬಂಧಪಟ್ಟ ಅಭಿವೃದ್ಧಿ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು — ಆಹ್ವಾನಿತರು

viii) ಎಲ್ಲಾ ಸಂಬಂಧಪಟ್ಟ ಸಾರ್ವಜನಿಕ ವಲಯ ಉದ್ಯಮಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು: ಶಾಸನಬದ್ಧ ನಿಕಾಯಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು — ಆಹ್ವಾನಿತರು

4. ಕಂಡಿಕೆ 3(ಇ) ನಲ್ಲಿ ರಚಿಸಿರುವ ತಾಲ್ಲೂಕು ಮಟ್ಟದ ಮಾಸಿಕ ಪರಿಶಿಲನಾ ಸಮಿತಿಯು ಪ್ರತಿ ತಿಂಗಳು 5ನೇ ತಾರೀಖು ಸಭೆ ಸೇರತಕ್ಕದ್ದು. ಒಂದು ವೇಳೆ 5ನೇ ತಾರೀಖು ರಜೆಯ ದಿನವಾಗಿದ್ದಲ್ಲಿ ಮುಂದಿನ ಕೆಲಸದ ದಿನದಂದು ಸಭೆ ಸೇರತಕ್ಕದ್ದು. ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರ ಗೈರು ಹಾಜರಿಯಲ್ಲಿ ತಾಲ್ಲೂಕು ಪಂಚಾಯಿತಿಯ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿಯು ಸಭೆ ನಡೆಸತಕ್ಕದ್ದು. ಈ ಇಬ್ಬರ ಗೈರು ಹಾಜರಿಯಲ್ಲಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸತಕ್ಕದ್ದು.

5. ಕಂಡಿಕೆ 3(ಆ)ನಲ್ಲಿ ರಚಿಸಿರುವ ಜಿಲ್ಲಾ ಮಟ್ಟದ ಮಾಸಿಕ ಪರಿಶೀಲನಾ ಸಮಿತಿಯು ಪ್ರತಿ ತಿಂಗಳೂ 11ನೇ ತಾರೀಖು ಸಭೆ ಸೇರತಕ್ಕದ್ದು. ಒಂದು ವೇಳೆ 11ನೇ ತಾರೀಖು ರಜಾ ದಿನವಾಗಿದ್ದಲ್ಲಿ ಮುಂದಿನ ಕೆಲಸದ ದಿನದಂದು ಸಭೆ ಸೇರತಕ್ಕದ್ದು. ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರ ಗೈರು ಹಾಜರಿಯಲ್ಲಿ, ಜಿಲ್ಲಾ ಪಂಚಾಯಿತಿಯ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆ ಸೇರತಕ್ಕದ್ದು. ಈ ಇಬ್ಬರ ಗೈರು ಹಾಜರಿಯಲ್ಲಿ ಜಿಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಮಿತಿಯ ಸಭೆ ನಡೆಸತಕ್ಕದ್ದು.

6. ಅಧಿಕಾರೇತರ ಸದಸ್ಯರುಗಳ ಪ್ರಮಾಣ ಭತ್ಯೆಗಳನ್ನು ಆರ್ಥಿಕ ಇಲಾಖೆಯು ಹೊರಡಿಸಿರುವ ಸರ್ಕಾರಿ ಆದೇಶ ಸಂ: ಎಫ್‌ಡಿ 18 ಎಸ್‌ಆರ್‌ಎಸ್ 94, ದಿನಾಂಕ: 30.12.94ರ ಅನುಸಾರವಾಗಿ ನಿರ್ಧರಿಸುವುದು. ಈಗಿನಂತೆಯೇ ಪ್ರಯಾಣ ಭತ್ಯೆಗಳನ್ನು ಎಲ್ಲಾ ಜಿಲ್ಲಾ ಪಂಚಾಯಿತಿಗಳು, ಜಿಲ್ಲಾ ಪಂಚಾಯತ್ ನಿಧಿಯಿಂದ ಭರಿಸುವುದು ಮುಂದುವರಿಯುತ್ತದೆ.
7. ಕರ್ನಾಟಕ 20 ಅಂಶಗಳ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳಿಗೆ ಸಕಾರಿ ಆದೇಶ ಸಂ: ಪಿಡಿ 34 ಸಿಇಪಿ 89, ದಿನಾಂಕ: 25.4.90 ಮತ್ತು ಸರ್ಕಾರಿ ಆದೇಶ ಸಂ: ಪಿಡಿ 235 ಸಿಓಪಿ 93, ದಿನಾಂಕ: 21.2.94 ರಲ್ಲಿ 19.12.94 ರವರೆಗೆ ಹೊರಡಿಸಿದ ಆದೇಶಗಳಲ್ಲಿ ಮಾಡಿದ ಅಧಿಕಾರೇತರ ಸದಸ್ಯರುಗಳ ನಾಮ ನಿರ್ದೇಶನವನ್ನು ರದ್ದುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಸರ್ಕಾರದ ಅಧೀನ ಕಾರ್ಯದರ್ಶಿ – 2
ಯೋಜನೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ
ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಪಿಡಿ 5 ಐಎಂಎಂ 2002 ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ
ಬೆಂಗಳೂರು, ದಿನಾಂಕ: 15.02.2002

ಸುತ್ತೋಲೆ

ವಿಷಯ : ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಕೆ.ಡಿ.ಪಿ ಸಭೆಗಳಲ್ಲಿ ಅಧಿಕಾರಿಗಳ ಗೈರು ಹಾಜರಿ, ಪ್ರಗತಿಯ ವರದಿಯನ್ನು ಸಲ್ಲಿಸದಿರುವುದು ಹಾಗೂ ಅನುಸರಣಾ ವರದಿಯನ್ನು ಸಲ್ಲಿಸದಿರುವ ಬಗ್ಗೆ.

ಉಲ್ಲೇಖ : ಮುಖ್ಯ ಕಾರ್ಯದರ್ಶಿಯವರ ಸುತ್ತೋಲೆ ಸಂಖ್ಯೆ: ಯೋಇ 606 ಯೋವಿ 97, ದಿನಾಂಕ: 03.11.1997

ಜಿಲ್ಲಾ ಉಸ್ತುವಾರಿ ಸಚಿವರುಗಳ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲಾ ಮಟ್ಟದ ಕೆ.ಡಿ.ಪಿ ಸಭೆಗಳಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಾಗದೇ ತಮ್ಮ ಅಧೀನದಲ್ಲಿ ಬರುವ ಅಧಿಕಾರಿಗಳನ್ನು ನಿಯೋಜಿಸುತ್ತಿದ್ದಾರೆ ಎಂದು ಹಲವಾರು ಸಚಿವರುಗಳು ಮಾನ್ಯ ಮುಖ್ಯ ಮಂತ್ರಿಯವರಿಗೆ ದೂರನ್ನಿತ್ತಿದ್ದಾರೆ. ಇದಲ್ಲದೆ ಜಿಲ್ಲಾ ಮಟ್ಟದ ಅಧಿಕಾರಿಗಳು ಈ ಸಭೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರುಗಳು ನೀಡುವ ಸೂಚನೆಗಳನ್ನು ಪಾಲಿಸುತ್ತಿಲ್ಲವೆಂದೂ ಸಹ ಅವರುಗಳು ದೂರನಿತ್ತಿದ್ದಾರೆ. ಸಂಬಂಧಪಟ್ಟ ಎಲ್ಲಾ ಜಿಲ್ಲಾ ಇಲಾಖೆಗಳ: ಸಂಸ್ಥೆಗಳ ಮುಖ್ಯಸ್ಥರುಗಳು ಜಿಲ್ಲಾ ಮಟ್ಟದ ಕೆ.ಡಿ.ಪಿ ಸಭೆಗಳಿಗೆ ತಮ್ಮ ಅಧೀನದಲ್ಲಿ ಬರುವ ಅಧಿಕಾರಿಗಳನ್ನು ನಿಯೋಜಿಸದೆ ತಾವೇ ಖುದ್ದಾಗಿ ಹಾಜರಗಬೇಕೆಂದು ಹಾಗೂ ಈ ಸಭೆಗಳಲ್ಲಿ ತೆಗೆದುಕೊಂಡ ನಿರ್ಣಯಗಳ ಮೇಲೆ ಕ್ರಮ ಕೈಗೊಂಡ ವರದಿಗಳನ್ನು ಸಲ್ಲಿಸಬೇಕೆಂದು ಈಗಾಗಲೇ ಸರ್ಕಾರವು ಹಿಂದೆ ಅದರಲ್ಲೂ ನಿರ್ದಿಷ್ಟವಾಗಿ ಉಲ್ಲೇಖದಲ್ಲಿನ ಸುತ್ತೋಲೆ ಯಲ್ಲಿ ಕಟ್ಟುನಿಟ್ಟಾದ ಸೂಚನೆಗಳನ್ನು ನೀಡಿದ್ದರೂ ಸಹ, ಜಿಲ್ಲಾ ಮಟ್ಟದ

ಇಲಾಖೆಗಳ: ಸಂಸ್ಥೆಗಳ ಮುಖ್ಯಸ್ಥರುಗಳು ಈ ಸೂಚನೆಗಳನ್ನು ಪಾಲಿಸದಿರುವುದು ಒಂದು ಗಂಭಿರವಾದ ಲೋಪದೋಷವೆಂದು ಪರಿಗಣಿಸಲಾಗಿದೆ. ಉಲ್ಲೇಖದಲ್ಲಿನ ಸುತ್ತೋಲೆಯಲ್ಲಿನ ಸೂಚನೆಗಳನ್ವಯ (i) ಸದಸ್ಯ ಕಾರ್ಯದರ್ಶಿಗಳಾಗಿ ಈ ಸಭೆಗಳನ್ನು ಕರೆಯುವ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಆಡಳಿತ ನಿಯಂತ್ರಣದಲ್ಲಿ ಬರುವ ಮೇಲೆ ತಿಳಿಸಿರುವ ಲೋಪದೋಷಗಳನ್ನು ಎಸಗಿದ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಂಡಿದ್ದ ಪಕ್ಷದಲ್ಲಿ ಅಂತಹ ಅಧಿಕಾರಿಗಳಿಂದ ಮೇಲೆ ತಿಳಿಸಿರುವ ಲೋಪದೋಷಗಳು ಮರುಕಳಿಸುತ್ತಿರಲಿಲ್ಲ. (ii) ಮುಂದುವರೆಯುತ್ತಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಆಡಳಿತ ನಿಯಂತ್ರಣಕ್ಕೆ ಬರೆದಿರುವ ಮೇಲೆ ತಿಳಿಸಿರುವ ಲೋಪದೋಷಗಳನ್ನು ಎಸಗಿದ ಇತರೆ ಜಿಲ್ಲಾ ಮಟ್ಟದ ಅಧಿಕಾರಿಗ ಬಗ್ಗೆ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವಿಭಾಗಾಧಿಕಾರಿಗಳ ನೆರವನ್ನು ಪಡೆದು ಅಂತಹ ಜಿಲ್ಲಾ ಮಟ್ಟದ ಅಧಿಕಾರಿಗಳ ಸೇವೆಯನ್ನು ನಿಯಂತ್ರಿಸುವ ನಿಯಂತ್ರಣಾಧಿಕಾರಿಗಳನ್ನು ಒತ್ತಾಯಿಸಿ, ನಿಯಂತ್ರಣಾಧಿಕಾರಿಗಳು ಅಂತಹ ಜಿಲ್ಲಾ ಮಟ್ಟದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಂಡಿದ್ದರೆ, ಅಂತಹ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಮೇಲೆ ತಿಳಿಸಿದ ಲೋಪದೋಷಗಳು ಮರುಕಳಿಸುತ್ತಿರಲಿಲ್ಲ.

2. ಆದ್ದರಿಂದ ಎಲ್ಲಾ ಜಿಲ್ಲಾ ಮಟ್ಟದ ಸಬಂದಪಟ್ಟ ಇಲಾಖೆಗಳ : ಸಂಸ್ಥೆಗಳ ಮುಖ್ಯಸ್ಥರಗಳು ಇನ್ನು ಮುಂದೆ ಜಿಲ್ಲಾ ಉಸ್ತುವಾರಿ ಸಚಿವರುಗಳ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲಾ ಮಟ್ಟದ ಕೆ.ಡಿ.ಪಿ ಸಭೆಗಳಿಗೆ ತಮ್ಮ ಅಧೀನದಲ್ಲಿರುವ ಅಧಿಕಾರಿಗಳನ್ನು ನಿಯೋಜಿಸದೇ ತಾವೇ ಖುದ್ದಾಗಿ ಹಾಜರಾಗಬೇಕೆಂದು ಸರ್ಕಾರವು ಈ ಮೂಲಕ ನಿರ್ದೇಶಿಸಿದೆ. ಒಂದು ವೇಳೆ ಅನಿವಾರ್ಯ ಕಾರಣಗಳಂದ ಅವರುಗಳು ಸಭೆಗೆ ಖುದ್ದಾಗಿ ಹಾಜರಾಗಲು ಸಾಧ್ಯವಿಲ್ಲದ ಪಕ್ಷದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಗಮನಕ್ಕೆ ತಂದು, ಜಿಲ್ಲಾ ಉಸ್ತುವಾರಿ ಸಚಿವರುಗಳ ಪೂರ್ವಾನುಮತಿಯನ್ನು ಪಡೆದು ತಮ್ಮ ಹಿರಿಯ ಅಧಿಕಾರಿಗಳನ್ನು ಈ ಸಭೆಗಳಿಗೆ ಹಾಜರಾಗಲು ನಿಯೋಜಿಸತಕ್ಕದ್ದು. ಇದಲ್ಲದೆ, ಅವರುಗಳು ಈ ಸಭೆಗಳಲ್ಲಿ ಜಿಲ್ಲಾ ಉಸ್ತವಾರಿ ಸಚಿವರುಗಳು ನೀಡುವ ಸೂಚನೆಗಳನ್ನು ಸಕಾಲದಲ್ಲಿ ಪಾಲಿಸುವುದು. ಒಂದು ವೇಳೆ ಜಿಲ್ಲಾ ಉಸ್ತುವಾರಿ ಸಚಿವರುಗಳು

ನೀಡುವ ಸೂಚನೆಗಳನ್ನು ಪಾಲಿಸಲು ನೈಜವಾದ ತೊಂದರೆಗಳಿದ್ದ ಪಕ್ಷದಲ್ಲಿ ಅಂತಹ ಸೂಚನೆಗಳನ್ನು ಕೂಡಲೇ ಅವರುಗಳು ತಮ್ಮ ಹಿರಿಯ ಅಧಿಕಾರಿಗಳ ಗಮನಕ್ಕೆ ತರುವುದು ಹಾಗೂ ಅವರುಗಳು ಅಂತಹ ಸೂಚನೆಗಳ ಮೇಲೆ ತಮ್ಮ ಹಿರಿಯ ಅಧಿಕಾರಿಗಳಿಂದ ಕ್ರಮ ಕೈಗೊಂಡ ವರದಿಗಳನ್ನು ಬೇಗನೆ ಪಡೆದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮುಂದಿನ ಸಭೆಗೆ ಮಂಡಿಸಲು ಅನುವು ಆಗುವಂತೆ ನೋಡಿಕೊಳ್ಳಬೇಕು. ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಆಡಳಿತ ನಿಯಂತ್ರಣದಲ್ಲಿ ಬರುವ ಮೇಲಿನ ಸೂಚನೆಗಳನ್ನು ಪಾಲಿಸಲು ವಿಫಲರಾದ ಜಿಲ್ಲಾ ಮಟ್ಟದ ಅಧಿಕಾರಿಗಳ ಮೇಲೆ ಕೂಡಲೇ ಶಿಸ್ತಿನ ಕ್ರಮ ಕೈಗೊಳ್ಳಬೇಕು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಆಡಳಿತಾತ್ಮಕ ನಿಯಂತ್ರಣಕ್ಕೆ ಬರದೆ ಮೇಲಿನ ಸೂಚನೆಗಳನ್ನು ಪಾಲಿಸದೇ ಇರುವ ಜಿಲ್ಲಾ ಮಟ್ಟದ ಅಧಿಕಾರಿಗಳ ಮೇಲೆ ಅವರಗಳು ಎಸಗಿದ ಲೋಪದೋಷಗಳನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧೀಕಾರಿಗಳು ಅವರುಗಳ ಸೇವೆಯನ್ನು ನಿಯಂತ್ರಿಸುವ ಮೇಲಾಧಿಕಾರಿಗಳಿಗೆ ಅವರುಗಳ ಮೇಲೆ ಶಿಸ್ತಿನ ಕ್ರಮ ಜರುಗಿಸುವ ಬಗ್ಗೆ ವರದಿ ಮಾಡಿ ಪ್ರತಿಯನ್ನು ಸಂಬಧಪಟ್ಟ ವಿಭಾಗಾಧಿಕಾರಿಗಳಿಗೆ ಕಳುಹಿಸಿಕೊಡಬೇಕು ಹಾಗೂ ನಿಯಂತ್ರಣಾಧಿಕಾರಿಗಳು ಕೂಡಲೆ ಶಿಸ್ತಿನ ಕ್ರಮ ಕೈಗೊಂಡ ಬಗ್ಗೆ ಖಚಿತಪಡಿಸಿ ಕೊಳ್ಳಬೇಕು. ನಿಯಂತ್ರಣಾಧಿಕಾರಿಗಳು ಶಿಸ್ತಿನ ಕ್ರಮ ಕೈಗೊಂಡ ಬಗ್ಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ವಿಭಾಗಾಧಿಕಾರಿಗಳು ಸತತವಾಗಿ ಒತ್ತಾಯಿಸುವುದು.

3. ಹಲವಾರು ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಕೆ.ಡಿ.ಪಿ ತ್ರೈಮಾಸಿಕ ಪರಿಶೀಲನಾ ಸಮಿತಿಗಳ ಸಭೆಗಳು ಕಾಲಕಾಲಕ್ಕೆ ನಡೆಯುತ್ತಿಲ್ಲವೆಂದು, ಅನೇಕ ತಾಲ್ಲೂಕು ಮಟ್ಟದ ಇಲಾಖೆಗಳ: ಸಂಸ್ಥೆಗಳ ಮುಖ್ಯಸ್ಥರುಗಳ ಈ ಸಭೆಗಳಿಗೆ ಹಾಜರಾಗುತ್ತಿಲ್ಲವೆಂದು ಹಾಗೂ ಸಭೆಗಳಿಗೆ ಬೇಕಾದ ಮಾಹಿತಿಯನ್ನು ಒದಗಿಸುತ್ತಿಲ್ಲವೆಂದೂ ಸಹ ದೂರುಗಳು ಬಂದಿವೆ. ಈ ಸಮಿತಿಗಳ ಸದಸ್ಯ ಕಾರ್ಯದರ್ಶಿಗಳಾಗಿರುವ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಸಭೆಗಳನ್ನು ಕಾಲಕಾಲಕ್ಕೆ ಸತತವಾಗಿ ನಡೆಸಬೇಕು, ಒಂದು ವೇಳೆ ಈ ಸಭೆಗಳನ್ನು ನಿಯತಕಾಲಿಕವಾಗಿ ನಡೆಸದೇ ಇದ್ದ ಪಕ್ಷದಲ್ಲಿ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅವರುಗಳ ಮೇಲೆ ಕೂಡಲೇ ಶಿಸ್ತಿನ

ಕ್ರಮವನ್ನು ಕೈಗೊಳ್ಳಬೇಕು. ಎಲ್ಲಾ ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಗಳು ಈ ಸಭೆಗಳಿಗೆ ಹಾಜರಾಗಿ ಸಭೆಗೆ ಬೇಕಾದ ಮಾಹಿತಿಯನ್ನು ತಪ್ಪದೇ ಒದಗಿಸಬೇಕು. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ತಮ್ಮ ನಿಯಂತ್ರಣದಲ್ಲಿ ಬರುವ ಮೇಲಿನ ಸೂಚನೆಗಳನ್ನು ಪಾಲಿಸದೇ ಇರುವ ತಾಲ್ಲೂಕು ಮಟ್ಟದ ಅಧಿಕಾರಿಗಳ ಮೇಲೆ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಸಲ್ಲಿಸುವ ವರದಿಗಳ ಆಧಾರದ ಮೇಲೆ ಶಿಸ್ತಿನ ಕ್ರಮವನ್ನು ಜರೂಗಿಸಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅವರುಗಳ ಸೇವೆಯನ್ನು ನಿಯಂತ್ರಿಸುವ ಮೇಲಾಧಿಕಾರಿಗಳಿಗೆ ವರದಿ ಮಾಡಿ ಪ್ರತಿಯನ್ನು ವಿಭಾಗಾಧಿಕಾರಿಗಳಿಗೆ ಕಳುಹಿಸಿಕೊಡಬೇಕು. ನಿಯಂತ್ರಣಾಧಿಕಾರಿಗಳು ಶಿಸ್ತಿನ ಕ್ರಮ ತೆಗೆದುಕೊಳ್ಳುವ ಬಗ್ಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ವಿಭಾಗಾಧಿಕಾರಿಗಳು ನಿಯಂತ್ರಣಾಧಿಕಾರಿಗಳನ್ನು ಸತತವಾಗಿ ಒತ್ತಾಯಿಸಬೇಕು.

4. ಮೇಲಿನ ಸೂಚನೆಗಳನ್ನು ಪಾಲಿಸುವುದರಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ವಿಭಾಗಾಧಿಕಾರಿಗಳು ಲೋಪವೆಸಗಿದ್ದೇ ಆದರೆ ಅದನ್ನು ಸರ್ಕಾರವು ಅತ್ಯಂತ ಗಂಭೀರವಾಗಿ ಪರಿಗಣಿಸುತ್ತದೆ.

(ತೆರೆಸಾ ಭಟ್ಟಾಚಾರ್ಯ)
ಮುಖ್ಯ ಕಾರ್ಯದರ್ಶಿ
ಕರ್ನಾಟಕ ಸರ್ಕಾರ

ನೆರೆಹಾವಳಿಗೆ ತುತ್ತಾದ ಗ್ರಾಮಗಳು

625 (825) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚೆಗೆ ನೆರೆಹಾವಳಿಗೆ ತುತ್ತಾದ ಗ್ರಾಮಗಳ ಸಂಖ್ಯೆ ಎಷ್ಟು? (ಜಿಲ್ಲಾ ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಕೊಪ್ಪಳ ಜಿಲ್ಲೆಯಲ್ಲಿ ನೆರೆಹಾವಳಿಗೆ ತುತ್ತಾದ ಗ್ರಾಮಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಇ) ನೆರೆಹಾವಳಿಗೆ ತುತ್ತಾದ ಗ್ರಾಮಗಳನ್ನು ಅಭಿವೃದ್ಧಿ ಪಡಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ನೆರೆಹಾವಳಿಗೆ ತುತ್ತಾದ ಗ್ರಾಮಗಳಿಗೆ ಸರ್ಕಾರ ಮೂಲಭೂತ ಸೌಲಭ್ಯಗಳನ್ನು ಒದಗಿಸಿದೆಯೇ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) 4292 ಗ್ರಾಮಗಳು.

ಆ) ಕೊಪ್ಪಳ ಜಿಲ್ಲೆಯಲ್ಲಿ ನೆರೆಹಾವಳಿಗೆ ತುತ್ತಾದ ಗ್ರಾಮ ಸಂಖ್ಯೆ ಕೆಳಕಂಡಂತಿರುತ್ತದೆ.

ತಾಲ್ಲೂಕು	ಗ್ರಾಮಗಳು
ಕೊಪ್ಪಳ	144
ಗಂಗಾವತಿ	150
ಕುಷ್ಟಗಿ	164
ಯಲಬುರ್ಗಾ	138
ಒಟ್ಟು	**596**

ಇ) ಗ್ರಾಮಗಳಲ್ಲಿ ನೆರೆಯಿಂದ ಹಾಳಾಗಿರುವ ಮೂಲಭೂತ ಸೌಕರ್ಯಗಳನ್ನು ದುರಸ್ತಿಗೊಳಿಸಲಾಗಿದೆ.

ಈ) ಹೌದು.

ಶಾಸಕರ ಪ್ರದೇಶಾಭಿವೃದ್ಧಿ ನಿಧಿ

626 (1228) ಶ್ರೀ ಖಾದರ್.ಯು.ಟಿ. (ಮಂಗಳೂರು) : ಮಾನ್ಯ ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಸಕರ ಪ್ರದೇಶಾಭಿವೃದ್ಧಿ ನಿಧಿಗಾಗಿ ಪ್ರಸಕ್ತ ಸಾಲಿನಲ್ಲಿ ಕಾಯ್ದಿರಿಸಿರುವ ಹಣ ಎಷ್ಟು; ಬಿಡುಗಡೆಯಾಗಿರುವ ಹಣ ಎಷ್ಟು; (ಕ್ಷೇತ್ರಾವಾರು ವಿವರ ನೀಡುವುದು);

ಆ) ಇಲ್ಲವಾದಲ್ಲಿ, ಹಣ ಬಿಡುಗಡೆಯಾಗದೇ ಇರಲು ಕಾರಣಗಳೇನು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು) :

ಅ) ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿ 2009–10ನೇ ಸಾಲಿನ ಆಯವ್ಯಯದಲ್ಲಿ ರೂ. 200.00 ಕೋಟಿ, ಮೊದಲನೇ ಪೂರಕ ಅಂದಾಜಿನಲ್ಲಿ ರೂ.150.00 ಕೋಟಿ ಹಾಗೂ ಎರಡನೇ ಪೂರಕ ಅಂದಾಜಿನಲ್ಲಿ ರೂ.110.50 ಕೋಟಿಗಳಂತೆ ಒಟ್ಟು ರೂ.460.50 ಕೋಟಿಗಳನ್ನು ಒದಗಿಸಲಾಗಿದೆ.

ಎಲ್ಲಾ 225 ವಿಧಾನಸಭಾ ಸದಸ್ಯರುಗಳು ಹಾಗೂ 75 ವಿಧಾನ ಪರಿಷತ್ ಸದಸ್ಯರುಗಳ ಕ್ಷೇತ್ರಗಳಿಗೆ ತಲಾ ರೂ.1.50 ಕೋಟಿಗಳಂತೆ ಒಟ್ಟು ರೂ.460.50 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಆ) ಅನ್ವಯಿಸುವುದಿಲ್ಲ.

ಸಣ್ಣ ನೀರಾವರಿ ಯೋಜನೆಗಳು

632 (828) ಶ್ರೀ ಕಿಮ್ಮನೆ ರತ್ನಾಕರ (ತೀರ್ಥಹಳ್ಳಿ) : ಮಾನ್ಯ ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಪ್ರಾರಂಭಿಸಲಾಗಿರುವ ಸಣ್ಣ ನೀರಾವರಿ ಯೋಜನೆಗಳು ಹಾಗೂ ಏತ ನೀರಾವರಿ ಯೋಜನೆಗಳು ಯಾವ ಹಂತದಲ್ಲಿವೆ (ಸಂಖ್ಯಾವಾರು ಮಾಹಿತಿ ನೀಡುವುದು);

ಆ) ಹಣದ ಅಭಾವದಿಂದ ಸದರಿ ಯೋಜನೆಗಳನ್ನು ತಡೆಹಿಡಿಯಲಾಗಿರುವುದೇ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು) :

ಅ) ಒಂದು ಬ್ಯಾರೇಜ್ ನಿರ್ಮಾಣ ಹಾಗೂ 13 ಏತ ನೀರಾವರಿ ಯೋಜನೆಗಳು. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ.

ವಿಧಾನ ಸಭಾ ಸದಸ್ಯರಾದ ಶ್ರೀ ಕಿಮ್ಮನೆ ರತ್ನಾಕರ್ ಇವರ ಚುಕ್ಕೆ ಗುರುತಿಲ್ಲದ ಪ್ರಸಂ. 828ಕ್ಕೆ ಅನುಬಂಧ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅನುಮೋದಿತ ವಾದ ಅಂದಾಜು ಮೊತ್ತ	ಪರಿಷ್ಕೃತ ಅಂದಾಜು ಮೊತ್ತ	ಕಾಮಗಾರಿಯ ಹಂತ
1	ಹುಂಚ ಹೋಬಳಿ ಹೆದ್ದಾರಿಪುರ ಹತ್ತಿರ ಬ್ಯಾರೇಜ್ ನಿರ್ಮಾಣ	20.00	–	ಪ್ರಗತಿಯಲ್ಲಿದೆ
2	ತುಂಗಾ ನದಿಗೆ ಹೊಸ ಹಳ್ಳಿಯ ಹತ್ತಿರ ತುಂಗಾ ನದಿಯಿಂದ ಏತ ನೀರಾವರಿ ಯೋಜನೆ	106.00	152.00	ಯೋಜನೆ ಚಾಲ್ತಿಯಲ್ಲಿದೆ
3	ಮೀನುಗುಂದ ಏತ ನೀರಾವರಿ ಯೋಜನೆ	30.00	54.00	ಯೋಜನೆ ಚಾಲ್ತಿಯಲ್ಲಿದೆ

4	ತುಂಗಾ ನದಿಯಿಂದ ದಬ್ಬಣಗದ್ದೆ ಏತ ನೀರಾವರಿ ಯೋಜನೆ	58.00	–	ಪ್ರಗತಿಯಲ್ಲಿದೆ
5	ಮಹಿಷಿ ಹತ್ತಿರ ಏತ ನೀರಾವರಿ ಯೋಜನೆ	81.00	–	ಪ್ರಗತಿಯಲ್ಲಿದೆ
6	ಹೆದ್ದೂರು ಹತ್ತಿರ ಏತ ನೀರಾವರಿ ಯೋಜನೆ	81.50	–	ಪ್ರಗತಿಯಲ್ಲಿದೆ
7	ಕೋಮನೆ ಹತ್ತಿರ ಏತ ನೀರಾವರಿ ಯೋಜನೆ	76.00	–	ಪ್ರಗತಿಯಲ್ಲಿದೆ
8	ಕುಂದಾ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ	61.50	–	ಪ್ರಗತಿಯಲ್ಲಿದೆ
9	ಕೈಮರದ ಉಂಟೂರುಕಟ್ಟೆ ಹತ್ತಿರ ಏತ ನೀರಾವರಿ ಯೋಜನೆ	102.00	112.50	ಪರಿಷ್ಕೃತ ಅಂದಾಜು ಮೊತ್ತಕ್ಕೆ ಅನುಮೋದನೆಗಾಗಿ ನಬಾರ್ಡ್ ಕಛೇರಿಗೆ ಸಲ್ಲಿಸಲಾಗಿದೆ.
10	ಬೇಗವಳ್ಳಿ ಗ್ರಾಮದ ದೇವಿಕೆರೆ ಮತ್ತು ಕಾನಕೆರೆಗೆ	105.00	163.00	ಪರಿಷ್ಕೃತ ಅಂದಾಜು ಮೊತ್ತಕ್ಕೆ ಅನುಮೋದನೆಗಾಗಿ

O. 30 F-126

	ಏತ ನೀರಾವರಿ ಯೋಜನೆ			ನಬಾರ್ಡ್ ಕಛೇರಿಗೆ ಸಲ್ಲಿಸಲಾಗಿದೆ.
11	ಮಾಲತಿ ನದಿಯಿಂದ ಹೆಗ್ಗೋಡು ಗ್ರಾಮಕ್ಕೆ ಏತ ನೀರಾವರಿ ಯೋಜನೆ	131.00	147.00	ಪರಿಷ್ಕೃತ ಅಂದಾಜು ಮೊತ್ತಕ್ಕೆ ಅನುಮೋದನೆಗಾಗಿ ನಬಾರ್ಡ್ ಕಛೇರಿಗೆ ಸಲ್ಲಿಸಲಾಗಿದೆ.
12	ಕಾಸರವಳ್ಳಿ ಗ್ರಾಮದ ಹತ್ತಿರ ತುಂಗಾ ನದಿಯಿಂದ ಏತ ನೀರಾವರಿ ಯೋಜನೆ	103.00	149.00	ಪರಿಷ್ಕೃತ ಅಂದಾಜು ಮೊತ್ತಕ್ಕೆ ಅನುಮೋದನೆಗಾಗಿ ನಬಾರ್ಡ್ ಕಛೇರಿಗೆ ಸಲ್ಲಿಸಲಾಗಿದೆ.
13	ಮಾಳಿಗೆ ಗ್ರಾಮ ಪಂಚಾಯತಿ ಗೋಪಾಲಪುರ ಗ್ರಾಮಕ್ಕೆ ಏತ ನೀರಾವರಿ ಯೋಜನೆ	15.00	–	ಪ್ರಗತಿಯಲ್ಲಿದೆ.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನ

630 (1232) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಕಳೆದ ಎರಡು ವರ್ಷಗಳಿಂದ ಬಿಡುಗಡೆ ಮಾಡಲಾದ ಅನುದಾನವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)?

ಆ) ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಹಣ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ತಾರತಮ್ಯವನ್ನು ಯಾವಾಗ ಸರಿಪಡಿಸಲಾಗುವುದು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು) :

ಅ) ಸರ್ಕಾರದಿಂದ ಮಂಡಳಿಗೆ 2007–08ರಲ್ಲಿ ರೂ.2825.00 ಲಕ್ಷಗಳನ್ನು ಹಾಗೂ 2008–09ರಲ್ಲಿ ರೂ. 1057.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮಂಡಳಿಯಿಂದ ಜಿಲ್ಲಾವಾರು ಸಾಧಿಸಿದ ಪ್ರಗತಿಗೆ ಅನುಸಾರವಾಗಿ ವೆಚ್ಚ ಭರಿಸಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಪ್ರತಿ ವರ್ಷ ಸರ್ಕಾರವು ಬಿಡುಗಡೆಗೊಳಿಸುವ ಅನುದಾನದಲ್ಲಿ ಸರ್ಕಾರದ ಮತ್ತು ಅಧ್ಯಕ್ಷರ ವಿವೇಚನಾ ನಿಧಿ ಹಾಗೂ ಆಡಳಿತ ವೆಚ್ಚಕ್ಕೆ ಅವಕಾಶ ಮಾಡಿಕೊಂಡು ಉಳಿದ ಅನುದಾನವನ್ನು ವಿಧಾನ ಸಭಾ ಕ್ಷೇತ್ರವಾರು ಸಮನಾಗಿ ಹಂಚಿಕೆ ಮಾಡಿ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಯಾವುದೇ ತಾರತಮ್ಯ ಎಸಗಿರುವುದಿಲ್ಲ.

ಅನುಬಂಧ

2007-08ರಿಂದ 2009-10ವರೆಗೆ ಮಂಡಳಿಯಿಂದ ಜಿಲ್ಲಾವಾರು ಬಿಡುಗಡೆ ಅನುದಾನದ ವಿವರಗಳು

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆ	2007-08	2008-09	2009-10
1	ಬೆಳಗಾಂ	334.79	252.52	117.79
2	ಚಾಮರಾಜನಗರ	121.65	200.11	82.22
3	ಚಿಕ್ಕಮಗಳೂರು	243.12	222.44	99.39
4	ದಾವಣಗೆರೆ	73.38	140.64	75.58
5	ಧಾರವಾಡ	111.50	69.92	35.51
6	ಹಾಸನ	151.81	179.80	81.53
7	ಹಾವೇರಿ	221.29	172.31	87.24
8	ಕೊಡಗು	152.69	112.41	84.90
9	ಮಂಗಳೂರು	214.72	362.34	242.07
10	ಮೈಸೂರು	98.32	149.88	50.87
11	ಶಿವಮೊಗ್ಗ	426.30	435.59	225.83
12	ಉಡುಪಿ	220.02	247.20	68.62
13	ಉತ್ತರಕನ್ನಡ	192.25	240.74	98.63
	ಒಟ್ಟು	**2561.84**	**2785.60**	**1350.18**

ತುಂಗಾ ಮೇಲ್ದಂಡೆ ಯೋಜನೆ

633 (829) ಶ್ರೀ ಕಿಮ್ಮನೆ ರತ್ನಾಕರ (ತೀರ್ಥಹಳ್ಳಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾದ ಬಗರ್ ಹುಕುಂ ರೈತರಿಗೆ ಪರಿಹಾರ ಹಾಗೂ ಪುನರ್ ವಸತಿ ನೀಡಲಾಗುವುದೇ?

ಶ್ರೀ ಬಸವರಾಜ್ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) :

ಅ) ತುಂಗಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾದ ಬಗರ್ ಹುಕುಂ ರೈತರಿಗೆ ನಿಯಮಾವಳಿಗಳ ಪ್ರಕಾರ ಹಾಗೂ ಸರ್ಕಾರದಿಂದ ಅನುಮೋದನೆಗೊಂಡ ಪುನರ್ ವಸತಿ ಪ್ಯಾಕೇಜ್ ಅನ್ವಯ ಅನುಗ್ರಹ ಅನುದಾನವನ್ನು ಮಾತ್ರ ಪರಿಹಾರದ ರೂಪದಲ್ಲಿ ನೀಡಲು ಕ್ರಮಕೈಗೊಳ್ಳಲಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ವಶಪಡಿಸಿಕೊಂಡಿರುವ ಜಮೀನು

636 (1051) ಶ್ರೀ ಕೃಷ್ಣ ಭೈರೇಗೌಡ ಸಿ.ಬಿ. (ಬ್ಯಾಟರಾಯನಪುರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬ್ಯಾಟರಾಯನಪುರ ಕ್ಷೇತ್ರದ ಜಾಲ ಹೋಬಳಿಯಲ್ಲಿ ಏಪ್ರಿಲ್ 2008 ರ ನಂತರ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಯಿಂದ ಎಷ್ಟು ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ ಅಥವಾ ವಶಪಡಿಸಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದೆ;

ಆ) ಸದರಿ ಜಮೀನುಗಳಿಗೆ ನಿಗದಿಪಡಿಸಲಾದ ಪರಿಹಾರಧನ ಎಷ್ಟು (ಗ್ರಾಮವಾರು/ ಹಳ್ಳಿವಾರು ವಿವರಗಳನ್ನು ಒದಗಿಸುವುದು);

ಇ) ಬಂಡಿಕೊಡಿಗೆಹಳ್ಳಿಯ ವ್ಯಾಪ್ತಿಯಲ್ಲಿ ಹಾಗೂ ಸುತ್ತಮುತ್ತಲ ಹಳ್ಳಿಗಳ ಜಮೀನನ್ನು ಯಾವ ಯಾವ ಕಾರಣಕ್ಕಾಗಿ ವಶಪಡಿಸಿಕೊಳ್ಳಲಾಗಿದೆ;

ಈ) ಜಾಲ ಹೋಬಳಿಯ ಕೆಲವು ಗ್ರಾಮಗಳ ಜಮೀನುಗಳಿಗೆ ಎಕರೆಗೆ 60 ಲಕ್ಷಕ್ಕೂ ಮೇಲ್ಪಟ್ಟು ಪರಿಹಾರ ನೀಡುತ್ತಿದ್ದು ಬಂಡಿಕೊಡಿಗೆ

ಹಳ್ಳಿಯ ಕೆಲವು ಜಮೀನುಗಳಿಗೆ ಪ್ರತಿ ಎಕರೆಗೆ ರೂ.30 ಲಕ್ಷಗಳ ಪರಿಹಾರ ನಿಗದಿ ಮಾಡಿರುವುದು ಅನ್ಯಾಯವಲ್ಲವೇ;

ಉ) ಬಂಡಿಕೊಡಿಗೆಹಳ್ಳಿಯ ವ್ಯಾಪ್ತಿಯಲ್ಲಿ ಯಾವ ಉದ್ದೇಶಗಳಿಗಾಗಿ ಹಾಗೂ ಯಾವ ಯಾವ ಕಂಪನಿಗಳಿಗೆ ಜಮೀನನ್ನು ನೀಡಲಾಗುತ್ತಿದೆ. ಆ ಕಂಪನಿಗಳ ಉದ್ದೇಶಗಳೇನು ಹಾಗೂ ಈ ಕಂಪನಿಗಳ ಆಡಳಿತ ಮಂಡಳಿಯವರ ಸಂಪೂರ್ಣ ವಿವರ ನೀಡುವುದು;

ಊ) ಜಾಲ ಹೋಬಳಿಯಲ್ಲಿ ವಶಪಡಿಸಿಕೊಂಡಿರುವ ಉದ್ದೇಶಿಸಿರುವ ಜಮೀನುಗಳಿಗೆ ಪ್ರತಿ ಎಕರೆಗೆ ಸರ್ಕಾರ ನಿಗದಿಪಡಿಸಿರುವ ಮೊತ್ತ ಎಷ್ಟು (ಗ್ರಾಮವಾರು ವಿವರ ನೀಡುವುದು)?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಬ್ಯಾಟರಾಯನಪುರ ಕ್ಷೇತ್ರದ ಜಾಲ ಹೋಬಳಿಯಲ್ಲಿ ಏಪ್ರಿಲ್ 2008 ರ ನಂತರ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಹಾರ್ಡ್‌ವೇರ್ ಪಾರ್ಕ್ ಹಾಗೂ ಐ.ಟಿ.ಪಾರ್ಕ್ ಸ್ಥಾಪನೆಗಾಗಿ ಈ ಕೆಳಕಂಡಂತೆ ಜಮೀನನ್ನು ಸ್ವಾಧೀನಪಡಿಸಲು ಕಲಂ 28(4) ರ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಹಾರ್ಡ್ ವೇರ್ ಪಾರ್ಕ್

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 649 ಎಸ್‌ಪಿಕ್ಯೂ 2007 ದಿನಾಂಕ: 09.04.2008

ಕ್ರ ಸಂ.	ಗ್ರಾಮ	ವಿಸ್ತೀರ್ಣ ಎ ಗು
1	ಬಾಗಲೂರು	231–03
2	ಹೂವಿನಾಯಕನಹಳ್ಳಿ	336–14
3	ಮಹದೇವಕೊಡಿಗೆಹಳ್ಳಿ	301–32
	ಒಟ್ಟು	**869–09**

2. ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 422 ಎಸ್‌ಪಿಕ್ಯೂ 2005 ದಿನಾಂಕ: 03.11.2006

ಕ್ರ ಸಂ.	ಗ್ರಾಮ	ವಿಸ್ತೀರ್ಣ ಎ ಗು
1	ಬಂಡಿಕೊಡಿಗೆಹಳ್ಳಿ	450–24

ಐ ಟಿ ಪಾರ್ಕ್

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 397 ಎಸ್‌ಪಿಕ್ಯೂ 2007 ದಿನಾಂಕ: 25.09.2008

ಕ್ರ ಸಂ.	ಗ್ರಾಮ	ವಿಸ್ತೀರ್ಣ ಎ ಗು
1	ಬಿ.ಕೆ.ಪಾಳ್ಯ	232–31
2	ಸಿಂಗಹಳ್ಳಿ	331–18
3	ಅರೆಭಿನ್ನಮಂಗಲ	398–33
4	ಗೊಲ್ಲಹಳ್ಳಿ	65–17
	ಒಟ್ಟು	**1028–191/2**

ಆ) ಹಾರ್ಡ್‌ವೇರ್ ಪಾರ್ಕ್

ಕ್ರ ಸಂ.	ಗ್ರಾಮ	ನಿಗದಿಪಡಿಸಿದ ದರ ಲಕ್ಷ ರೂ.ಗಳಲ್ಲಿ (ಪ್ರತಿ ಎಕರೆಗೆ)	ದರ ನಿಗದಿ ಪಡಿಸಿದ ದಿನಾಂಕ
1	ಬಂಡಿಕೊಡಿಗೆಹಳ್ಳಿ	31.00 40.00	21.11.2007
2	ಬಾಗಲೂರು ಹೂವಿನಾಯಕನಹಳ್ಳಿ ಮಹದೇವಕೊಡಿಹಳ್ಳಿ	70.00 60.00 60.00	18.12.2008

ಐ ಟಿ ಪಾರ್ಕ್

ಕ್ರ ಸಂ:	ಗ್ರಾಮ	ನಿಗದಿಪಡಿಸಿದ ದರ ಲಕ್ಷ ರೂ.ಗಳಲ್ಲಿ (ಪ್ರತಿ ಎಕರೆಗೆ)	ದರ ನಿಗದಿ ಪಡಿಸಿದ ದಿನಾಂಕ
1	ಸಿಂಗಹಳ್ಳಿ	62.00	24.12.2008
	ಗೊಲ್ಲಹಳ್ಳಿ	62.00	
	ಅರೆಭಿನ್ನಮಂಗಲ	62.00	
	ಬಿ.ಕೆ.ಪಾಳ್ಯ	62.00	

ಇ) ಬಂಡಿಕೊಡಿಗೆಹಳ್ಳಿಯ ವ್ಯಾಪ್ತಿಯಲ್ಲಿ ಹಾಗೂ ಸುತ್ತಮುತ್ತಲ ಹಳ್ಳಿಗಳ ಜಮೀನನ್ನು ಹಾರ್ಡ್‌ವೇರ್ ಪಾರ್ಕ್, ಐಟಿ ಪಾರ್ಕ್ ಹಾಗೂ ಏರೋಸ್ಪೇಸ್ ಕಾಂಪೋನೆಂಟ್ಸ್ ಸ್ಥಾಪನೆಗಾಗಿ ಸ್ವಾಧೀನಪಡಿಸಲಾಗಿದೆ.

ಈ) ಬಂಡಿಕೊಡಿಗೆಹಳ್ಳಿ ಗ್ರಾಮದಲ್ಲಿ 450 ಎಕರೆ 05 ಗುಂಟೆ ಜಮೀನನ್ನು ಸ್ವಾಧೀನಪಡಿಸಲು ದಿನಾಂಕ: 07.05.2007 ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು ಸದರಿ ಜಮೀನುಗಳಿಗೆ ದಿನಾಂಕ: 21.11.2007 ರಂದು ಭೂದರ ಸಲಹಾ ಸಮಿತಿ ಸಭೆಯು ನಡೆದು ಬಾಗಲೂರು ಮುಖ್ಯರಸ್ತೆಗೆ ಹೊಂದಿಕೊಂಡಿರುವ ಜಮೀನಿಗೆ ರೂ.40.00 ಲಕ್ಷದಂತೆಯೂ, ಉಳಿದ ಜಮೀನಿಗೆ ಎಕರೆಯೊಂದಕ್ಕೆ ರೂ.31.00 ಲಕ್ಷದಂತೆಯೂ ಹಾಗೂ ಭೂಪರಿವರ್ತನೆ ಜಮೀನಿಗೆ ಹೆಚ್ಚುವರಿಯಾಗಿ ರೂ.2.00 ಲಕ್ಷದಂತೆ ಪರಿಹಾರ ನೀಡಲು ನಿಗದಿಯಾಗಿರುತ್ತದೆ. ಈ ದರಕ್ಕೆ ಬಹುತೇಕ ಭೂಮಾಲೀಕರು ಒಪ್ಪಿಗೆ ಸೂಚಿಸಿದ್ದು ಅದರಂತೆ ಭೂ ಪರಿಹಾರವನ್ನು ಪಾವತಿಸಲಾಗಿದೆ.

ಉ) ಬಂಡಿಕೊಡಿಗೆಹಳ್ಳಿ ಗ್ರಾಮದಲ್ಲಿ ಹಾರ್ಡ್‌ವೇರ್ ಪಾರ್ಕ್ ಸಲುವಾಗಿ ಮಂಡಳಿಯಿಂದ ಒಟ್ಟು 450–05 ಎಕರೆ ಜಮೀನನ್ನು ಕಲಂ 28(4) ರಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಈ ಜಮೀನಿನ ಪೈಕಿ ಸರ್ಕಾರದ ಆದೇಶ ಸಂಖ್ಯೆ: ಐಟಿಡಿ/ 42/ ಎಂಡಿಎ/ 2006(1) ದಿನಾಂಕ: 16.01.2007 ರಂತೆ ದಿನಾಂಕ: 28.08.2006 ರಂದು ನಡೆದ 7ನೇ ರಾಜ್ಯ ಉನ್ನತಮಟ್ಟದ ಸಮಿತಿ ಸಭೆಯಲ್ಲಿ ಮೆ: ಇಟಾಸ್ಕ ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಪ್ರೈ ಲಿ. ರವರಿಗೆ 325–00 ಎಕರೆ ಜಮೀನನ್ನು

ಭೂಸ್ವಾಧೀನಪಡಿಸಿ ಹಂಚಿಕೆ ಮಾಡಲು ನಿರ್ಣಯವಾಗಿರುತ್ತದೆ. ಉಳಿದ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಉಪಯೋಗಿಸಲಾಗುವುದು.

ಊ) ಜಾಲ ಹೋಬಳಿಯಲ್ಲಿ ವಶಪಡಿಸಿಕೊಂಡಿರುವ ಜಮೀನುಗಳಿಗೆ ಈ ಕೆಳಕಂಡಂತೆ ಪರಿಹಾರ ಧನ ನಿಗದಿಪಡಿಸಲಾಗಿದೆ.

ಕ್ರ ಸಂ.	ಗ್ರಾಮ	ನಿಗದಿಪಡಿಸಿದ ದರ ಲಕ್ಷ ರೂ.ಗಳಲ್ಲಿ (ಪ್ರತಿ ಎಕರೆಗೆ)	ದರ ನಿಗದಿ ಪಡಿಸಿದ ದಿನಾಂಕ
1	ಬಂಡಿಕೊಡಿಗೆಹಳ್ಳಿ	31.00 40.00	21.11.2007
2	ಬಾಗಲೂರು	70.00	18.12.2008
	ಹೂವಿನಾಯಕನಹಳ್ಳಿ	60.00	
	ಮಹದೇವಕೊಡಿಗೆಹಳ್ಳಿ	60.00	
3	ಸಿಂಗಹಳ್ಳಿ	62.00	24.12.2008
	ಗೊಲ್ಲಹಳ್ಳಿ	62.00	
	ಅರೆಭಿನ್ನಮಂಗಲ	62.00	
	ಬಿ.ಕೆ.ಪಾಳ್ಯ	62.00	
4	ಜೊನ್ನಹಳ್ಳಿ	55.00	25.03.2008
	ಕವಡದಾಸನಹಳ್ಳಿ	55.00	
	ಬಾಲದಿಮ್ಮನಹಳ್ಳಿ	55.00	
	ಬಟ್ರಮಾರನಹಳ್ಳಿ	55.00	
5	ಸಿಂಗಹಳ್ಳಿ	57.00	

O.30 F-127

ಕಂದಾಯ ಸಚಿವಾಲಯದಲ್ಲಿ ಕಡತ ವಿಲೇವಾರಿಯಲ್ಲಿ ವಿಳಂಬ

640 (43) ಶ್ರೀ ಕುಮಾರಸ್ವಾಮಿ ಕೆ.ಜಿ (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂದಾಯ ಸಚಿವಾಲಯದ "ಸೇವೆಗಳು" ವಿಭಾಗದಲ್ಲಿ ದಿನಾಂಕ: 01.01.2008 ರಿಂದ ಪ್ರಾರಂಭವಾದ ಕಡತಗಳ ಪೈಕಿ ದಿನಾಂಕ: 30.11.2009ರ ಅಂತ್ಯದಲ್ಲಿ ಬಾಕಿ ಉಳಿದಿರುವ ಪ್ರಕರಣಗಳು ಎಷ್ಟು (ವಿವರ ನೀಡುವುದು);

ಆ) ಹಾಗಿದ್ದಲ್ಲಿ, ಒಂದು ವರ್ಷ ಹತ್ತು ತಿಂಗಳು ವಿಳಂಬವಾದ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಲು ಸಚಿವಾಲಯ ಕೈಪಿಡಿ ರೀತ್ಯಾ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ ಅಥವಾ ವಿಶೇಷ ಆಂದೋಲನ ಕೈಗೊಳ್ಳಲಾಗಿದೆಯೇ (ತಿಳಿಸುವುದು)?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಕಂದಾಯ ಇಲಾಖೆಯ ಸೇವೆಗಳು ವಿಭಾಗದಲ್ಲಿ 1.1.2008 ರಿಂದ 30.11.2009 ರವರೆಗೆ

ತೆರೆದ ಒಟ್ಟು ಕಡತಗಳು	::	3929
ಈ ಅವಧಿಯಲ್ಲಿ ಮುಕ್ತಾಯಗೊಂಡ ಕಡತಗಳ ಸಂಖ್ಯೆ	::	3302
30.11.2009ರ ಅಂತ್ಯದಲ್ಲಿ ಬಾಕಿ ಉಳಿದಿರುವ ಒಟ್ಟು ಕಡತಗಳು	::	627

(ನ್ಯಾಯಾಲಯ ಪ್ರಕರಣಗಳು ಒಟ್ಟು: 238 ಮತ್ತು ಇತರೆ ಕಡತಗಳು ಒಟ್ಟು 389)

ಆ) ಪ್ರತಿ ತಿಂಗಳು ಕಡತ ವಿಲೇವಾರಿ ಬಗ್ಗೆ ಕಂದಾಯ ಕಾರ್ಯದರ್ಶಿಗಳ ಹಂತದಲ್ಲಿ ಸಭೆ ನಡೆಸಿ, ಬಾಕಿ ಇರುವ ಕಡತಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅತಿವೃಷ್ಟಿ ಹಾನಿ

641 (269) ಶ್ರೀ ಕುಮಾರಸ್ವಾಮಿ ಕೆ.ಜಿ (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಉಂಟಾದ ಅತಿವೃಷ್ಟಿಯಿಂದ ನೆಲಕಚ್ಚಿದ ಮನೆಗಳೆಷ್ಟು (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು);

ಆ) ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಆದ ನಷ್ಟದ ಪ್ರಮಾಣ ಎಷ್ಟು;

ಇ) ಈ ಹಾನಿಗೆ ತುತ್ತಾದವರಿಗೆ ಏನೇನು ಪರಿಹಾರ ನೀಡಲಾಗಿದೆ. (ಫಲಾನುಭವಿಗಳ ವಿವರ ನೀಡುವುದು);

ಈ) ಅತಿವೃಷ್ಟಿಯಿಂದ ಒಡೆದು ಹೋದ ಕೆರೆಗಳೆಷ್ಟು, ಬಿದ್ದು ಹೋದ ಮೋರಿ ಮತ್ತು ಸೇತುವೆಗಳೆಷ್ಟು, ಒಡೆದು ಹೋದ ಎಲ್ಲಾ ಕೆರೆಗಳನ್ನು ದುರಸ್ತಿ ಮಾಡಲಾಗಿದೆಯೇ (ವಿವರ ನೀಡುವುದು);

ಉ) ಪ್ರತಿ ಕಾಮಗಾರಿಗಾಗಿ / ದುರಸ್ತಿಗಾಗಿ ಬಿಡುಗಡೆ ಮಾಡಿದ ಅನುದಾನವೆಷ್ಟು, ಕಾಮಗಾರಿ ಯಾವ ಹಂತದಲ್ಲಿದೆ (ವಿವರ ನೀಡುವುದು)?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ)

ಕ್ರ ಸಂ.	ತಾಲ್ಲೂಕು	ನೆಲಕಚ್ಚಿದ ಮನೆಗಳು			
		ಪಕ್ಕಾ ಮನೆಗಳು		ಕಚ್ಚಾಮನೆ	
		ಸಂಖ್ಯೆ	ಮೊಬಲಗ ು	ಸಂಖ್ಯೆ	ಮೊಬಲಗು
1	ಶಿವಮೊಗ್ಗ	7	2.230	11	1.630
2	ಭದ್ರಾವತಿ			4	0.480
3	ತೀರ್ಥಹಳ್ಳಿ			4	0.300
4	ಸಾಗರ			3	1.500
5	ಶಿಕಾರಿಪುರ				
6	ಸೊರಬ				
7	ಹೊಸನಗರ	2	0.500	1	0.100
	ಒಟ್ಟು	**9**	**2.730**	**23**	**4.010**

ಆ) ವಿವರವನ್ನು ಅನುಬಂಧ–1 ರಲ್ಲಿ ನೀಡಿದೆ.

ಇ) ವಿವರವನ್ನು ಅನುಬಂಧ–2 ರಲ್ಲಿ ನೀಡಿದೆ.

ಈ)

ಕ್ರ ಸಂ.	ತಾಲ್ಲೂಕು	ಕೆರೆಗಳು		ಮೋರಿಗಳು ಮತ್ತು ಸೇತುವೆಗಳು	
		ಸಂಖ್ಯೆ	ಅಂದಾಜು ನಷ್ಟ	ಸಂಖ್ಯೆ	ಅಂದಾಜು ನಷ್ಟ
1	ಶಿವಮೊಗ್ಗ	23	37.250	10	25.500
2	ಭದ್ರಾವತಿ	2	2.000	49	126.000
3	ತೀರ್ಥಹಳ್ಳಿ	3	59.000	13	39.000
4	ಸಾಗರ	15	29.250	28	356.650
5	ಶಿಕಾರಿಪುರ	11	11.000	14	38.000
6	ಸೊರಬ	27	95.500	18	77.500
7	ಹೊಸನಗರ	4	5.250	32	77.700
	ಒಟ್ಟು	**90**	**239.250**	**164**	**740.350**

ಒಡೆದು ಹೋದ ಎಲ್ಲಾ ಕೆರೆಗಳ ದುರಸ್ತಿ ಕಾಮಗಾರಿ ತೆಗೆದು ಕೊಂಡಿರುವುದಿಲ್ಲ. ಸಿಆರ್‌ಎಫ್ ನಿಧಿಯಲ್ಲಿ ಲಭ್ಯವಿರುವ ಹಣಕ್ಕೆ ಅನುಗುಣವಾಗಿ ತೀರಾ ಹಾನಿಯಾಗಿ ತೆಗೆದುಕೊಳ್ಳಲೇಬೇಕಾದ ಕೆರೆಗಳ ದುರಸ್ತಿ ಕಾಮಗಾರಿ ಮಾತ್ರ ಕೈಗೊಂಡಿದೆ.

ಉ)

ಕ್ರ ಸಂ.	ತಾಲ್ಲೂಕು	ಕೆರೆಗಳು			ಮೋರಿಗಳು ಮತ್ತು ಸೇತುವೆಗಳು		
		ಸಂ.	ಅಂದಾಜು ಮೊತ್ತ	ಬಿಡುಗಡೆ ಮಾಡಿದ ಹಣ	ಸಂ.	ಅಂದಾಜು ಮೊತ್ತ	ಬಿಡುಗಡೆ ಮಾಡಿದ ಹಣ
1	ಶಿವಮೊಗ್ಗ	32	59.30	24.65	12	44.00	22.00
2	ಭದ್ರಾವತಿ	–	–	–	32	59.70	34.85
3	ತೀರ್ಥಹಳ್ಳಿ	–	–	–	29	64.00	32.00
4	ಸಾಗರ	11	13.65	6.825	09	23.00	11.50
5	ಶಿಕಾರಿಪುರ	24	22.12	11.06	04	13.56	6.78
6	ಸೊರಬ	14	21.87	10.935	12	37.40	18.70
7	ಹೊಸನಗರ	02	5.00	2.500	24	51.75	25.875
	ಒಟ್ಟು	**83**	**121.94**	**60.97**	**122**	**303.41**	**151.705**

25 ಕೆರೆ ಕಾಮಗಾರಿಗಳು ಪ್ರಗತಿಯಲ್ಲಿವೆ.
58 ಕೆರೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.
36 ಮೋರಿ ಸೇತುವೆ ಕಾಮಗಾರಿಗಳು ಪ್ರಗತಿಯಲ್ಲಿವೆ.
86 ಮೋರಿ ಸೇತುವೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ನಷ್ಟದ ಬಗ್ಗೆ ವಿವರವಾದ ಮಾಹಿತಿ

ಕ್ರ ಸಂ.	ತಾಲ್ಲೂಕು	ಮನೆಗಳ ಹಾನಿ		ಕೃಷಿ ಬೆಳೆಗಳ ಹಾನಿ			ತೋಟಗಾರಿಕೆ ಬೆಳೆಗಳ ಹಾನಿ			ಮಾನವ ಜೀವ ಹಾನಿ		ಜಾನುವಾರು ಜೀವ ಹಾನಿ		ಒಟ್ಟು ನಷ್ಟ
		ಸಂಖ್ಯೆ	ಅಂದಾಜು ನಷ್ಟ	ಸಂಖ್ಯೆ	ವಿಸ್ತೀರ್ಣ	ಮೊಬಲಗು	ಸಂಖ್ಯೆ	ವಿಸ್ತೀರ್ಣ	ಮೊಬಲಗು	ಸಂಖ್ಯೆ	ಅಂದಾಜು ನಷ್ಟ	ಸಂಖ್ಯೆ	ಅಂದಾಜು ನಷ್ಟ	
1	ಶಿವಮೊಗ್ಗ	690	25.889	3934	4578.67	49.071	75	78.03	2.804	3	3.000	7	0.695	81.460
2	ಭದ್ರಾವತಿ	882	12.140	50	43.00	1.100	44	16.38	23.600	4	4.000	1	0.100	40.940
3	ತೀರ್ಥಹಳ್ಳಿ	54	1.240	583	1821.00	6.568		1.30	1.203	1	1.000	9	0.400	10.411
4	ಸಾಗರ	68	7.491	2190	2810.08	110.482	9	0.06	1.000	1	1.000	16	1.973	121.946
5	ಶಿಕಾರಿಪುರ	152	12.250	3348	6641.00	321.200	25	60.00	3.000	2	2.000	4	0.430	338.880
6	ಸೊರಬ	261	11.100	17240	18517.00	266.320	2	5.15	0.043			2	0.200	267.663
7	ಹೊಸನಗರ	37	1.860	530	316.00	3.750		1125.00	31.500	1	1.000	4	0.260	38.370
	ಒಟ್ಟು	2142	71.970	27876	33826.75	748.491	155	1285.92	63.150	12	12.000	43	4.058	899.670

ಅನುಬಂಧ-೨

ಕ್ರ ಸಂ.	ತಾಲ್ಲೂಕು	ಮನೆಗಳಿಗೆ ಪರಿಹಾರ ನೀಡಿರುವುದು		ಕೃಷಿ ಬೆಳೆಗಳಿಗೆ ಪರಿಹಾರ ನೀಡಿರುವುದು			ತೋಟದ ಬೆಳೆಗಳಿಗೆ ಪರಿಹಾರ ನೀಡಿರುವುದು			ಮಾನವ ಹಾನಿ ಪರಿಹಾರ ನೀಡಿರುವುದು		ಪ್ರಾಣಿಗಳ ಜೀವಹಾನಿ ಪರಿಹಾರ ನೀಡಿರುವುದು		ಒಟ್ಟು ಪರಿಹಾರ
		ಸಂಖ್ಯೆ	ಮೊಬಲಗು	ಸಂಖ್ಯೆ	ವಿಸ್ತೀರ್ಣ	ಮೊಬಲಗು	ಸಂಖ್ಯೆ	ವಿಸ್ತೀರ್ಣ	ಮೊಬಲಗು	ಸಂಖ್ಯೆ	ಮೊಬಲಗು	ಸಂಖ್ಯೆ	ಮೊಬಲಗು	ಮೊಬಲಗು
1	ಶಿವಮೊಗ್ಗ	680	10.470	3934	4565.16	48.918	75	77.32	2.804	3	3.00	7	0.290	65.482
2	ಭದ್ರಾವತಿ	589	7.880	30	32.00	0.250	7	14.10	0.150	4	4.00	1	0.100	12.380
3	ತೀರ್ಥಹಳ್ಳಿ	39	0.800	1	0.20	0.004				1	1.00	2	0.060	1.864
4	ಸಾಗರ	53	1.170	2212	2618.23	21.187				1	1.00	16	1.265	24,622
5	ಶಿಕಾರಿಪುರ	130	2.610	3166	4594.26	50.530	11	18.20	0.148	2	2.00	1	0.080	55,368
6	ಸೊರಬ	239	5.515	12652	16791.09	134.345	2	5.15	0.043			1	0.100	140.003
7	ಹೊಸನಗರ	37	1.524	447	250.25	2.562				1	1.00	4	0.260	5.346
	ಒಟ್ಟು	1767	29.969	22442	28851.19	257.796	95	110.22	3.145	12	12.00	32	2.155	305,065

ಇದಲ್ಲದೆ ೧ ಶಿವಮೊಗ್ಗ ನಗರದಲ್ಲಿ ಪ್ರವಾಹ ಸಂತ್ರಸ್ತರಿಗೆ ಗಂಜಿ ಕೇಂದ್ರವನ್ನು ತೆರೆದು ಈ ಉದ್ದೇಶಕ್ಕೆ ರೂ.44.350-00ಗಳನ್ನು ವೆಚ್ಚ ಮಾಡಲಾಗಿದೆ.

ಶಿವಮೊಗ್ಗ ಮತ್ತು ಭದ್ರಾವತಿ ನಗರಗಳಲ್ಲಿ 10–12 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಕಂದಾಯ ಇಲಾಖೆ 'ಸಿ' ವೃಂದದ ನೌಕರರ ಬಗ್ಗೆ ಮಾಹಿತಿ

642 (270) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಮತ್ತು ಭದ್ರಾವತಿ ನಗರಗಳಲ್ಲಿ ಕಂದಾಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 'ಸಿ' ದರ್ಜೆ ವೃಂದಕ್ಕೆ ಸೇರಿದ ನೌಕರರು ಕಳೆದ 10–12 ವರ್ಷಗಳಿಗಿಂತ ಹೆಚ್ಚು ಅವಧಿಯಲ್ಲಿ ಒಂದೇ ಕೇಂದ್ರ ಸ್ಥಾನದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಒಂದೇ ಕೇಂದ್ರ ಸ್ಥಾನದಲ್ಲಿರುವ ನೌಕರರ ವಿವರ ನೀಡುವುದು;

ಆ) ಒಂದೇ ಕೇಂದ್ರ ಸ್ಥಾನ/ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ವಿರುದ್ಧ ಸಾರ್ವಜನಿಕ ದೂರುಗಳು ದಾಖಲಾಗಿರುವುದೇ? ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇ) ಶಿವಮೊಗ್ಗ ಮತ್ತು ಭದ್ರಾವತಿ ನಗರಗಳ ಕೇಂದ್ರಸ್ಥಾನದಲ್ಲಿ ಮಾತ್ರ ಕಾರ್ಯನಿರ್ವಹಿಸುವ ಪ್ರವೃತ್ತಿ ಹೊಂದಿದ ಈ ನೌಕರರಿಂದ ಸೊರಬ, ಹೊಸನಗರ ತಾಲ್ಲೂಕು ಕೇಂದ್ರಗಳಲ್ಲಿ ನೌಕರರ ಕೊರತೆಯಿಂದ ತೆರವಾದ ಸ್ಥಾನಗಳನ್ನು ಯಾವ ಪರ್ಯಾಯ ಮಾರ್ಗದಿಂದ ಭರ್ತಿ ಮಾಡಲಾಗುವುದು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಗಮನಕ್ಕೆ ಬಂದಿದೆ.

ಕಳೆದ 10–12 ವರ್ಷಗಳಿಗಿಂತ ಹೆಚ್ಚು ಅವಧಿಯಿಂದ ಶಿವಮೊಗ್ಗ ಮತ್ತು ಭದ್ರಾವತಿ ನಗರಗಳ ಒಂದೇ ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಇಲಾಖೆಯ 'ಸಿ' ವೃಂದಕ್ಕೆ ಸೇರಿದ ನೌಕರರ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) 15 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಕಾರ್ಯನಿರ್ವಹಿಸುತ್ತಿರುವ 'ಸಿ' ವೃಂದಕ್ಕೆ ಸೇರಿದ ನೌಕರರ ವಿರುದ್ಧ ಬಂದ ಅನಾಮದೇಯ ದೂರಿನಲ್ಲಿ ವಾಸ್ತವಾಂಶವಿಲ್ಲವಾದ್ದರಿಂದ ಹಾಗೂ ನೌಕರರ ವಿರುದ್ಧ ಕರ್ತವ್ಯಲೋಪಕ್ಕೆ

ಸಂಬಂಧಿಸಿದಂತೆ ಯಾವುದೇ ಅಂಶಗಳು ಅದರಲ್ಲಿ ಇಲ್ಲದಿರುವುದರಿಂದ ಸದರಿ ದೂರಿನ ಮೇಲೆ ಕ್ರಮವಹಿಸುವ ಅವಶ್ಯಕತೆ ಕಂಡುಬಂದಿಲ್ಲವೆಂದು ಜಿಲ್ಲಾಧಿಕಾರಿಗಳು ವರದಿ ಮಾಡಿದ್ದಾರೆ.

ಇ) ಸಾಮಾನ್ಯ ವರ್ಗಾವಣೆಯ ಸಮಯದಲ್ಲಿ ಈ ನ್ಯೂನ್ಯತೆಯನ್ನು ಸರಿಪಡಿಸಿ ಉಳಿದ ತಾಲ್ಲೂಕುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ನಿಯಮಾನುಸಾರ ಕ್ರಮವಹಿಸಲಾಗುವುದು.

ಕೆರೆಗಳ ಅಭಿವೃದ್ಧಿ

644 (536) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ಕೆರೆಗಳ ಅಭಿವೃದ್ಧಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ;

ಆ) ಉಡುಪಿ ಜಿಲ್ಲೆಯ ಕಾಪು ಕ್ಷೇತ್ರದಲ್ಲಿ ಕೆರೆಗಳ ಅಭಿವೃದ್ಧಿಗೆ ವಿನಿಯೋಗಿಸಿರುವ ಒಟ್ಟು ಹಣವೆಷ್ಟು; (ವಿವರ ನೀಡುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿನ 1328 ಕೆರೆಗಳನ್ನು ಪ್ರಸ್ತುತ ಸಾಲಿನಲ್ಲಿ ಅಭಿವೃದ್ಧಿಪಡಿಸಲಾಗಿದೆ. ಇವುಗಳಿಗಾಗಿ ಫೆಬ್ರವರಿ 2010ರ ಅಂತ್ಯದವರೆಗೆ ರೂ.7402.40 ಲಕ್ಷ ವೆಚ್ಚ ಮಾಡಲಾಗಿದೆ.

ವಿಶ್ವ ಬ್ಯಾಂಕಿನ ನೆರವಿನೊಂದಿಗೆ ಜಲಸಂವರ್ಧನೆ ಯೋಜನಾ ಸಂಘದ ಮೂಲಕ 2724 ಕೆರೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಪ್ರಸ್ತುತ ಸಾಲಿಗೆ ರೂ.620.26 ಲಕ್ಷ ಖರ್ಚು ಮಾಡಲಾಗಿದೆ.

ಆ) ಉಡುಪಿ ಜಿಲ್ಲೆಯ ಕಾಪು ಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಎಲ್ಲೂರು ಗ್ರಾಮದ ದಾಳಂತರ ಕೆರೆ ಮಾತ್ರ ಬರುತ್ತದೆ. ಜಿಲ್ಲಾ ಪಂಚಾಯತ್ ಕೆರೆಯಾದ ಸಾಂತೂರು ಗ್ರಾಮದ ಸಾಂತೂರು ಕೊಪ್ಪಳ ಕೆರೆ ಅಭಿವೃದ್ಧಿ ಕಾಮಗಾರಿಯ ಅಂದಾಜು ಪಟ್ಟಿಯು ರೂ.26.60 ಲಕ್ಷ ಮೊತ್ತಕ್ಕೆ ಮಂಜೂರಾತಿಗೊಂಡಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, ಹೂಳೆತ್ತುವ ಕೆಲಸವು ಪೂರ್ಣ

O.30 F-128

ಗೊಂಡಿರುತ್ತದೆ. ಕೋಡಿ ದುರಸ್ತಿ ಮತ್ತು ಏರಿ ಅಭಿವೃದ್ಧಿ ಕೆಲಸವು ಬಾಕಿ ಇರುತ್ತದೆ. ಈ ಕೆರೆಯ ಅಭಿವೃದ್ಧಿಗಾಗಿ ಮಾರ್ಚ್ 2009 ರ ವರೆಗೆ ರೂ.10.51 ಲಕ್ಷ ವೆಚ್ಚವಾಗಿರುತ್ತದೆ.

ಭೂ ನ್ಯಾಯ ಮಂಡಳಿ

645 (537) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಭೂ ನ್ಯಾಯ ಮಂಡಳಿಯ ಪ್ರಕರಣಗಳ ಬಾಕಿ ಉಳಿದಿವೆ;

ಆ) ಇವುಗಳ ಇತ್ಯರ್ಥಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿರುವುದು;

ಇ) ಬಾಕಿ ಪ್ರಕರಣಗಳ ಇತ್ಯರ್ಥಕ್ಕೆ ಸಹಾಯಕ ದಂಡಾಧಿಕಾರಿಯನ್ನು (ಎ.ಸಿ.) ನೇಮಕ ಮಾಡಲಾಗುವುದೆ;

ಈ) ಉಡುಪಿ ತಾಲ್ಲೂಕಿನಲ್ಲಿ ಎಷ್ಟು ಪ್ರಕರಣ ಬಾಕಿ ಉಳಿದಿದೆ ಹಾಗೂ ಕಾಪು ಕ್ಷೇತ್ರದಲ್ಲಿ ಎಷ್ಟು ಪ್ರಕರಣ ಬಾಕಿ ಇವೆ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) 10,514 ಪ್ರಕರಣಗಳು ಬಾಕಿ ಇರುತ್ತವೆ.

ಆ) ಇವುಗಳ ಇತ್ಯರ್ಥಕ್ಕೆ ಪ್ರಸ್ತುತ 137 ಭೂ ನ್ಯಾಯ ಮಂಡಳಿಗಳನ್ನು ರಚಿಸಲಾಗಿದೆ.

ಇ) ಈಗಾಗಲೇ ನೇಮಕ ಮಾಡಲಾಗಿದೆ.

ಈ) ಉಡುಪಿ ತಾಲ್ಲೂಕಿನಲ್ಲಿ 695 ಪ್ರಕರಣಗಳು ಬಾಕಿ ಇರುತ್ತವೆ.

ಕಾಪು ಕ್ಷೇತ್ರದಲ್ಲಿ 291 ಪ್ರಕರಣಗಳು ಬಾಕಿ ಇರುತ್ತವೆ.

ಯುವಜನ ಸೇವೆ ಇಲಾಖೆಗೆ ಹಸ್ತಾಂತರಗೊಂಡ ಕ್ರೀಡಾಂಗಣಗಳು

646 (557) ಶ್ರೀ ಎಂ. ಕೃಷ್ಣಪ್ಪ : ಮಾನ್ಯ ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯುವಜನ ಸೇವಾ ಇಲಾಖೆ ವ್ಯಾಪ್ತಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಹಸ್ತಾಂತರಿಸಲ್ಪಟ್ಟ ಕ್ರೀಡಾಂಗಣಗಳೆಷ್ಟು (ವಿವರ ನೀಡುವುದು);

